# ಶಿಖರಸೂರ್ಯ

## ಲೇಖಕರ ಮಾತು

'ಶಿಖರಸೂರ್ಯ' ಕೃತಿಯನ್ನು ಸ್ವತಂತ್ರ ಕಾದಂಬರಿಯೆಂದಾದರೂ ನೋಡಬಹುದು, 'ಚಕೋರಿ'ಯ ಎರಡನೆಯ ಭಾಗವೆಂದಾದರೂ ನೋಡಬಹುದು. 'ಚಕೋರಿ' ಒಬ್ಬ ಕಲಾವಿದನ ಪರಿಪೂರ್ಣತೆಯ ಅನ್ವೇಷಣೆಯನ್ನ ಹೇಳುವ ಕೃತಿಯಾದರೆ 'ಶಿಖರಸೂರ್ಯ' ವಿದ್ಯೆಯ ಮೂಲಕ ಅಧಿಕಾರದ ಅನ್ವೇಷಣೆ ಮಾಡುವಾತನ ಕಥೆ. ಅಂದರೆ ಇಲ್ಲಿಗೆ ಚಕೋರಿಯಲ್ಲಿ ಬರುವ ಕಲೆ ಮತ್ತು ವಿದ್ಯೆಗಳಿಗೆ ಸಂಬಂಧಪಟ್ಟ ಪುರಾಣದ ವಿವರಣೆ ಸಂಪೂರ್ಣವಾಗುತ್ತದೆ.

ಕಾದಂಬರಿ ಎಂಬುದು ಇತಿಹಾಸದ ಅಗತ್ಯಗಳನ್ನು ಪೂರೈಸಲು ಮಹಾಕಾವ್ಯದ ಬದಲು ಹುಟ್ಟಿಕೊಂಡಿರುವ ಸಾಹಿತ್ಯಪ್ರಕಾರ. ಆದ್ದರಿಂದ 'ಚಕೋರಿ'ಗೂ ಇದಕ್ಕೂ ರಚನಾ ವಿಧಾನದಲ್ಲಿ ವ್ಯತ್ಯಾಸವಿದೆ. 'ಚಕೋರಿ'ಯು 'ವಚನ ಕಥಾನಕ'ವೆನ್ನುವುದಾದರೆ (ಹಿಂದೆ ಇದನ್ನು ಮಹಾಕಾವ್ಯವೆಂದಿದ್ದೆ) 'ಶಿಖರಸೂರ್ಯ' ಕಾದಂಬರಿ; 'ಚಕೋರಿ'ಯನ್ನು ಕನಸುಗಳು ಹೇಳಿದರೆ 'ಶಿಖರಸೂರ್ಯ' ಕಾದಂಬರಿಯನ್ನು ಇತಿಹಾಸಕಾರರು ನಿರೂಪಿಸುತ್ತಾರೆ. ಹೇಳುವವರು ಇತಿಹಾಸಕಾರರಾದ್ದರಿಂದ ನಿರೂಪಣೆಯ ಭಾಷೆಯನ್ನು ನಿರ್ಭಾವುಕ ಹಾಗೂ ನಿರ್ಲಿಪ್ತವಾಗಿಸುವ ಕಡೆಗೆ ಗಮನ ಕೊಟ್ಟಿದ್ದೇನೆ.

ಈ ಕಾದಂಬರಿಯಲ್ಲಿ ವಾಸ್ತವಿಕದಲ್ಲಿರುವ ಕೆಲವು ಹಟ್ಟಿ, ಊರುಗಳ ಹೆಸರುಗಳನ್ನು ಹಾಗೆ ಹಾಗೇ ಬಳಸಿರುವೆನಾದರೂ ಅವೆಲ್ಲ ಕಾಲ್ಪನಿಕ ಸ್ಥಳಗಳು, ಅವುಗಳ 'ಭೂಗೋಳ' ಕೂಡಾ ವಾಸ್ತವವಾಗಿಲ್ಲ. ಕಾದಂಬರಿಯ ಜೀವಜಗತ್ತು ಸಂಚರಿಸುವ ಸ್ಥೂಲವಾದ 'ಭೂಗೋಳ' ಹೀಗಿದೆ:

ಶಿವಾಪುರ ಸೀಮೆಯೆಂದರೆ ಒಂದು ಕಡಿಮೆ ನಲವತ್ತು ಹಟ್ಟಿಗಳ ಕಾಡುಪ್ರದೇಶ, ಅವುಗಳಲ್ಲಿ ಶಿವಾಪುರವೇ ಮುಖ್ಯವಾದುದು. ಅಮ್ಮನ ಬೆಟ್ಟವಿರೋದು ಇಲ್ಲಿಯೇ, ಇಲ್ಲಿಂದ ದಕ್ಷಿಣಕ್ಕೆ ಸುಮಾರು ಇನ್ನೂರು ಕಿಲೋಮೀಟರ್ ಅಂತರದಲ್ಲಿ ಕನಕಪುರಿ ಇದೆ.

ಕನಕಪುರಿ 'ಛಪ್ಪನ್ನೈವತ್ತಾರು' ದೇಶಗಳ ಪೈಕಿ ಒಂದು ರಾಜ್ಯ. ಅದರ ರಾಜಧಾನಿ ಕನಕಪುರಿ. ಅಂದಿನ ರಾಜಧಾನಿಗಳಲ್ಲೆಲ್ಲ ಶ್ರೀಮಂತಿಕೆಯ ವೈಭವದಿಂದ ಮೆರೆದ, ಸರೀಕ ರಾಜರ ಅಸೂಯೆಗೆ ಪಾತ್ರವಾದ ಪುರ. ಕನಕಪುರಿಯ ಆಗ್ನೇಯ ದಿಕ್ಕಿಗೆ ತಿಗಳರ ದೇಶವಿದೆ. ಅದರ ರಾಜಧಾನಿ ಕಂಚಿ. ಕನಕಪುರಿಯಿಂದ ಕಂಚಿಗೆ ಕುದುರೆಗಾಡಿಯಲ್ಲಿ ನಾಲ್ಕು ದಿನಗಳ ದಾರಿ.

ಕನಕಪುರಿಯ ಪಶ್ಚಿಮಕ್ಕೆ ಮೂರು ದಿನಗಳ ದಾರಿಯ ಅಂತರದಲ್ಲಿ ಘಟ್ಟ, ಮತ್ತು ಘಟ್ಟದ ಮೇಲೆ ಬಿಳಿಗಿರಿ ಇದೆ. ಬಿಳಿಗಿರಿಯ ಉತ್ತರಕ್ಕೆ ಎರಡು ದಿನಗಳ ದಾರಿಯಾದ ಮೇಲೆ ಹದ್ದಿನ ಕೊಳ್ಳ ಸಿಗುತ್ತದೆ. ಅದರ ಪಶ್ಚಿಮದಂಚಿನಲ್ಲಿ ಅನೇಕ ದಿನ ಕಾಲ್ನಡಿಗೆಯ ನಂತರ ಗರುಡನ ಬೆಟ್ಟ ಸಿಕ್ಕುತ್ತದೆ. ಇದು ಸ್ಥೂಲವಾಗಿ ಈ ಕಾದಂಬರಿಯ ಪಾತ್ರಗಳು ಚಲಿಸುವ, ಘಟಾನುಘಟನೆಗಳು ಘಟಿಸುವ ಕರ್ಮಭೂಮಿ.

ಮಹರ್ಷಿ ಟಾಲ್‌ಸ್ಟಾಯ್ ಬೆಪ್ಪುತಕ್ಕಡಿ ಬೋಳೇಶಂಕರ ಎಂಬೊಂದು ಕತೆ ಬರೆದಿದ್ದಾರೆ. ಈ ಹಿಂದೆ ಅದನ್ನಾಧರಿಸಿ ನಾಟಕವೊಂದನ್ನು ಬರೆದಿದ್ದೆ. ಆಮೇಲೆ ನಮ್ಮ ಭಾಷೆಯಲ್ಲಿ ಸಿಕ್ಕ ಅದರ ಮೂರು ಪಾಠಾಂತರಗಳನ್ನು ನೋಡಿ ಆಶ್ಚರ್ಯವಾಯಿತು. ಆ ಮೂರೂ ಕಥೆಗಳು ಹಾವೇರಿ ಬಳಿಯ ನಾಗಾವಿಯಲ್ಲಿದ್ದನೆಂದು ಭಾವಿಸಲಾದ ನಾಗಾರ್ಜುನನೊಂದಿಗೆ ಬೆಸೆದುಕೊಂಡಿವೆ. ಅವುಗಳಲ್ಲಿ ಒಂದು ಕಥೆ ಕನ್ನಡದ ಬ್ರಹ್ಮಶಿವನಲ್ಲೂ, ಇನ್ನೊಂದು ತುಂಡು ಸಂಸ್ಕೃತದ ದಂಡಿಯಲ್ಲೂ ಸಿಕ್ಕುತ್ತದೆ. ನಾಗಾರ್ಜುನ ಹುಚ್ಚುಹತ್ತಿದಾಗ

ಗಿಡಮೂಲಿಕೆಗಳಿಂದ ಮಾಡಿದ ಚಿನ್ನ ಗದಗಿನ ಬಳಿಯ ಕಪ್ಪತಗುಡ್ಡದಲ್ಲಿ ಬಿದ್ದಿತ್ತೆಂದು ಜನ ಹೇಳುವುದಿದೆ. 'ಕಪ್ಪತಗುಡ್ಡ ಕಣ್ಣಿಗೆ ಛಾಯಾ ಹೋದೇನಂತಿಯೋ ನೀನಾ...' ಎಂದು 'ಸಂಗ್ಯಾಬಾಳ್ಯಾ'ದ ಒಂದು ಹಾಡಿನಲ್ಲಿದೆ. ವಿದ್ಯೆಯ ಬೆನ್ನುಹತ್ತಿ ಆತ್ಮನಾಶ ಮಾಡಿಕೊಂಡವನ ಕಥೆಯಾಗಿ ಹಾವೇರಿಯ ಕಥೆಯನ್ನೇ ಆಧಾರವಾಗಿಟ್ಟುಕೊಂಡಿದ್ದೇನೆ. ಅದರ ಸುಮಾರು ಎರಡು ಪುಟಗಳ ಕಥೆ ಕಾದಂಬರಿಯಾಗಿ ನಿಮ್ಮ ಕೈಯಲ್ಲಿದೆ.

ಈ ಕಾದಂಬರಿಯ ಕಾಲವನ್ನು ಆಧುನಿಕವಲ್ಲದ ಹಿಂದಿನ ಯಾವುದಾದರೂ ಕಾಲಮಾನದಲ್ಲಿ ನಡೆದದ್ದೆಂದು ಭಾವಿಸಬೇಕು.

* * *

ಒಪ್ಪವಾದ ಮುನ್ನಡಿಯೊಂದನ್ನು ಬರೆದು ಈ ಕೃತಿಯ ಬೆಲೆಯನ್ನು ಹೆಚ್ಚಿಸಿದ ಕನ್ನಡದ ಮಹತ್ವದ ಕವಿ ಎಚ್.ಎಸ್. ಶಿವಪ್ರಕಾಶ್ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲಬೇಕು. ಹಾಗೆಯೇ, ಈ ಕೃತಿಯಲ್ಲಿ ಬರುವ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಿಕೊಟ್ಟ ರಾಜಾ ಶೈಲೇಶಚಂದ್ರ ಗುಪ್ತ ಅವರಿಗೂ ನನ್ನ ವಂದನೆ. ಎಂದಿನ ಪ್ರೀತಿಯಿಂದ ಪ್ರಕಾಶಪಡಿಸಿದ 'ಅಂಕಿತ ಪುಸ್ತಕ'ದ ಮಿತ್ರ ಪ್ರಕಾಶ ಕಂಬತ್ತಳ್ಳಿ ಅವಿಗೂ ನಾನು ಋಣಿ.

**ಚಂದ್ರಶೇಖರ ಕಂಬಾರ**

# ಶಿವಾಪುರ

## ಪ್ರಸ್ತಾವನೆ

ನಾವು ಕನಕಪುರಿಯ ಇತಿಹಾಸಕಾರರು.

ಇತಿಹಾಸವೆಂದರೆ ಹೀಗಿತ್ತು, ಹೀಗಾಯಿತೆಂದು; ಘಟಾನುಘಟನೆಗಳ, ಪರಿಣಾಮಕಾರಿಯಾದ ಬದಲಾವಣೆಗಳ ದಾಖಲೆ ಮಾಡುವುದೇ ಇತಿಹಾಸ. ನಡೆದಿರುವಂಥ ಘಟನೆಯ ವಾಸ್ತವಿಕ ನಿರೂಪಣೆಯೇ ಇತಿಹಾಸ.

ಐಲೀಕಡೆ ಶಿವಾಪುರದ ಹೆಳವರು ತಾವೂ ಇತಿಹಾಸಕಾರರೆಂದು ಹೇಳಿಕೊಳ್ಳುವುದನ್ನು ಕೇಳಿದ್ದೇವೆ. ಆದರೆ ಅವರಿಗೂ ನಮಗೂ ವ್ಯತ್ಯಾಸಗಳಿವೆ.

ಹೆಳವರು ನಡೆದ ಘಟನೆಯನ್ನು ಕಥೆ ಮಾಡಿ ಹೇಳಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಅದನ್ನು ಮತ್ತೆ ಮತ್ತೆ ಹೇಳಿ ನಾಲಗೆಯಿಂದ ನಾಲಗೆಗೆ ತಲೆಮಾರಿನಿಂದ ತಲೆಮಾರಿಗೆ ತೋಂಡಿಯಾಗಿ ದಾಟಿಸುತ್ತಾರೆ. ಒಬ್ಬ ಕಥೆಗಾರ ಇನ್ನೊಬ್ಬರಿಗೆ ಹೇಳುವಾಗ ಆ ಘಟನೆಗೆ ಸ್ಥಳೀಯ ವಿವರಗಳನ್ನು ಸೇರಿಸಿ ಸದರಿ ಘಟನೆಯನ್ನ ಪ್ರಸ್ತುತವಾಗಿಸುತ್ತಾನೆ. ಒಬ್ಬನೇ ಕಥೆಗಾರ ಒಂದು ಕಥೆಯನ್ನು ಎರಡು ಸಲ ಹೇಳುವುದು ಸಾಧ್ಯವಿಲ್ಲವೆಂದೂ ಪಂಡಿತರು ಹೇಳುತ್ತಾರೆ. ಯಾಕೆನೆ ಅದೇ ಕಥೆಯನ್ನ ಇನ್ನೊಮ್ಮೆ ಹೇಳುವಾಗ ಕೇಳುವವರು ಬೇರೆಯಾಗುವುದರಿಂದ ಅವರಿಗೆ ಪ್ರಸ್ತುತವಾಗಿಸಲು ನಡೆದ ಘಟನೆಗೆ ಹೊಸ ಹೊಸ ಸಂಗತಿಗಳನ್ನು ಸೇರಿಸುತ್ತಾನೆ. ಮೂಲದ ಕೆಲವು ವಿವರಗಳನ್ನು ಬಿಡುತ್ತಾನೆ. ಅಂದರೆ ಮೂಲಘಟನೆಯನ್ನ ಪ್ರತಿಯೊಬ್ಬ ಕಥೆಗಾರ ಪ್ರತಿಯೊಂದು ಸಾರಿ ಹೇಳುವಾಗ ಪುನಃ ಸೃಷ್ಟಿ ಮಾಡುತ್ತಾನೆ! ಒಬ್ಬ ಕಥೆಗಾರ ಕಥನವೇ ಹಿಂಗಾದರೆ ಇನ್ನು 'ತಲೆಮಾರಿನಿಂದ ತಲೆಮಾರಿಗೆ' ಪಡೆಯುತ್ತ ಬಂದವರ ಕಥೆಯೇನಾಗಬೇಕು?

ಹೆಳವರು ಹೇಳುವುದು ಕಥೆಯನ್ನ! ಅದರಲ್ಲಿ ಮನುಷ್ಯರು, ದೇವರು, ದಿಂಡರು, ಭೂತಪ್ರೇತಾದಿಗಳು, ಪ್ರಾಣಿಗಳು ಕೂಡ ಪ್ರವೇಶಿಸಿ ವಾಸ್ತವ ಘಟನೆಗಳಿಗೆ ಕಲ್ಪನೆ, ಪವಾಡ, ಮೂಢನಂಬಿಕೆಗಳನ್ನ ಬೆರೆಸಿ, ಕಥೆಮಾಡಿ ಹೇಳುತ್ತಾರೆ; ಅದನ್ನವರು ಇತಿಹಾಸವೆನ್ನುತ್ತಾರೆ! ಮಹಾಭಾರತ ಅವರ ಮಾದರಿ ಇತಿಹಾಸ!

ಅದಕ್ಕೇ ಅವರ ಕಥೆಗಳನ್ನ ನಂಬಲಾಗುವುದಿಲ್ಲ. ನ್ಯಾಯ ನಿರ್ಣಯಗಳಲ್ಲಿ ಪ್ರಮಾಣವಾಗಿ ಪರಿಗಣಿಸಲಾಗುವುದಿಲ್ಲ. ಇನ್ನೇನಪ್ಪಾ ಅಂದರೆ ಆ ಕಥೆಯ ಪ್ರೇರಣೆಗಳು ಅವರ ನೆನಪಿನಲ್ಲಿ ಭದ್ರವಾಗಿರುತ್ತವೆ. ಇಂಥ ನೆನಪುಗಳಿಂದ ಅವರು ಆಗಾಗ ಮಾರ್ಗದರ್ಶನ ಪಡೆಯುತ್ತಾರೆ.

ಇತಿಹಾಸ ನಿರ್ಮಿಸುವ ರಾಜ ಮಹಾರಾಜರಿಗೆ ತಮ್ಮ ಇತಿಹಾಸದ ನೆನಪು ಇರುವುದಿಲ್ಲ. ದಾಖಲೆಯಲ್ಲಿದ್ದರೂ ಅದರ ಮಾರ್ಗದರ್ಶನ ಪಡೆಯುವುದಿಲ್ಲ. ಅದಕ್ಕೇ ಅವರ ಇತಿಹಾಸ ಮತ್ತೆ ಮತ್ತೆ ಅವೇ ಯುದ್ಧಗಳನ್ನು ಮಾಡಿ ತನ್ನನ್ನು ತಾನು ಪುನರಾವರ್ತಿಸುತ್ತದೆ.

ಕಾಲದ ಕಲ್ಪನೆಯ ಬಗ್ಗೆಯೇ ನಮ್ಮಿಬ್ಬರಲ್ಲಿ ಮೂಲಭೂತ ವ್ಯತ್ಯಾಸವಿದೆ. ಕಾಲವನ್ನ ಭೂತ, ಭವಿಷ್ಯತ್ ಎಂದು ನಾವು ವಿಭಾಗಿಸಿದರೆ ಅವರು ಅದನ್ನ ಅಖಂಡ, ಅವಿಚ್ಛಿನ್ನ ಎನ್ನುತ್ತಾರೆ. ರಾಮಾಯಣದ ಹನುಮಂತ ಮಹಾಭಾರತದಲ್ಲೂ ಬರುತ್ತಾನೆ. ಸ್ಥಳೀಯ ಸಾಮಗ್ರಿಯಲ್ಲಿ ಪ್ರತ್ಯಕ್ಷನಾಗಿ ಈಗಲೂ ಇಂದಿನ ಜನರೊಂದಿಗೆ ವ್ಯವಹರಿಸುತ್ತಾನೆ. ಹೆಳವರ ಪ್ರಕಾರ ಪುರಾಣ ಇತಿಹಾಸಗಳಲ್ಲಿ ವ್ಯತ್ಯಾಸವೇ ಇಲ್ಲ. ಪುರಾಣ ಕಾಲದ ದೇವರೊಂದಿಗೆ ಇತಿಹಾಸದಲ್ಲಿರುವ ಇಂದಿನವರು ಬೇಕಾದಷ್ಟು ಲೇನಾದೇನಾ ವ್ಯವಹಾರ ಇಟ್ಟುಕೊಂಡಿದ್ದಾರೆ! ಪುರಾಣ ಕಾಲದ ತಿರುಪತಿ ತಿಮ್ಮಪ್ಪನೆಂಬ ದೇವರು ಪದ್ಮಾವತಿಯೆಂಬ ದೇವತೆಯೊಂದಿಗೆ ಮದುವೆಯಾಗುವ ಕಾಲಕ್ಕೆ ಮಾಡಿದ ಏಳು ಕೋಟಿ ಸಾಲವನ್ನ ಈಗಿನವರು ಈಗಲೂ ಹುಂಡಿಯಲ್ಲಿ ಹಣ ಹಾಕಿ ತೀರಿಸುತ್ತಿದ್ದಾರಂತೆ! ಇನ್ನು ಇಂದಿನ ದಿನಪತ್ರಿಕೆ ನಿನ್ನೆಯ ಇತಿಹಾಸವೆನ್ನುವ ನಾವು ಇಂಥವರ ಜೊತೆ ಹ್ಯಾಗೆ ವ್ಯವಹರಿಸೋಣ?

ಇತ್ತೀಚೆಗೆ ಶ್ರೀಸಾಮಾನ್ಯನನ್ನೇ ಮುಂದಿಟ್ಟುಕೊಂಡು ಇತಿಹಾಸವನ್ನು ಅರ್ಥೈಸುವ ಪ್ರಯತ್ನಗಳು ನಡೆದಿವೆ. ಅವರು ಎಲ್ಲಿಯ ತನಕ ಹೋಗುವರೋ ಗೊತ್ತಿಲ್ಲ. ನಮ್ಮ ಪ್ರಕಾರ ಶ್ರೀಸಾಮಾನ್ಯ ಘಟನೆಗೆ ಕಾರಣಕರ್ತನಾಗುವುದೇ ಇಲ್ಲ. ಆಯಾ ಪ್ರದೇಶದ ರಾಜ ಮಹಾರಾಜರೇ ಅಥವಾ ತತ್ಸಮಾನ ಅಧಿಕಾರಿಗಳೇ, ಅಥವಾ ಬದಲಾವಣೆಗೆ ಕಾರಣನಾಗುವ ಯಾರೇ ಆಗಲಿ, - ಅಂಥವರೇ ಇತಿಹಾಸ ಮಾಡುವವರು. ಶ್ರೀಸಾಮಾನ್ಯನೇನಿದ್ದರೂ ಘಟನೆಗಳ ಫಲಾಫಲಗಳನ್ನು ಅನುಭವಿಸುವಾತ; ಅಷ್ಟೆ.

ಇತಿಹಾಸವೂ ಕಥಾನಕವೇ ಎಂದು ಹೇಳುವವರಿದ್ದಾರೆ. ಅವರ ತರ್ಕದಲ್ಲೂ ಅರ್ಥ ಇದೆ! ಅದೇನಂತೀರೋ? ನಡೆದ ಎಲ್ಲವನ್ನು ಇತಿಹಾಸ ಸಾಕ್ಷಿಯಾಗಿ ನೋಡುತ್ತದೆ ನಿಜ. ಆದರೆ ಸತ್ಯಕ್ಕೆ ಒಂದೆರಡೇ ಮಗ್ಗಲುಗಳಿಲ್ಲವಲ್ಲ. ಶಿವಾಪುರದ ಶಿವಪಾದ ಹೇಳುವಂತೆ ಎಷ್ಟು ಕಣ್ಣುಗಳೋ ಅಷ್ಟು ಸತ್ಯಗಳು ! ಅಷ್ಟಲ್ಲದಿದ್ದರೂ ಸತ್ಯವನ್ನು ಸಮಗ್ರವಾಗಿ ಒಂದು ಶಾಸ್ತ್ರದಿಂದ ಕಾಣಲಾಗುವುದಿಲ್ಲ. ಇಷ್ಟನ್ನು ಮಾತ್ರ ನಿಮಗೆ ಭರವಸೆ ಕೊಡುತ್ತೇವೆ: ಫೋಡಗೇರಿಯ ಕಂಬಾರ ಬಸವಣ್ಣಪ್ಪ, ಭೂಸನೂರು ಮಠದ ಸಂಗಯ್ಯಸ್ವಾಮಿ ಹಾಗೂ ಸಾವಳಗಿ ಶಿವಲಿಂಗೇಶ್ವರ ಮಠದ ಶಿವಯೋಗಿ ಸಿದ್ಧರಾಮ ಸ್ವಾಮಿಗಳ ಶ್ರೀಪಾದ ಸಾಕ್ಷಿಯಾಗಿ ನಡೆದದ್ದನ್ನ ನಡೆದ ಹಾಗೆ, ಕಂಡದ್ದನ್ನ ಕಂಡ ಹಾಗೆ ವಸ್ತುನಿಷ್ಠವಾಗಿ ಹೇಳುತ್ತೇವೆ. ಅಂದರೆ ಸದರಿ ಇತಿಹಾಸ ಸಂಪುಟಗಳನ್ನ ನಿಮ್ಮೆದುರು ತೆರೆದಿಡುತ್ತ ಅರ್ಥಶೋಧನೆ ಮಾಡುವುದು ನಮ್ಮ ಗುರಿ. ಮುಂದೆ ಬರುವವರಿಗೆ ತಂತಮ್ಮ ಶಕ್ತ್ಯಾನುಸಾರ ಅರ್ಥೈಸುವ ಅಧಿಕಾರ ಇದ್ದೇ ಇದೆ.

ಕನಕಪುರಿಯನ್ನಾಳಿದ ಹಿಂದಿನ ರಾಜರ ಇತಿಹಾಸದ ಸಂಪುಟಗಳು ಅರಮನೆಯಲ್ಲಿವೆ. ಆಸಕ್ತರು ಹೋಗಿ ನೋಡಬಹುದು. ನಾವೀಗ ಶೋಧಿಸುತ್ತಿರೋದು ಕನಕಪುರಿಯ ಕೊನೆಯ ದೊರೆ ಶಿಖರಸೂರ್ಯನ ಇತಿಹಾಸವನ್ನ.

ಶಿಖರಸೂರ್ಯ ಮಹಾರಾಜನ ಇತಿಹಾಸ ಶಿವಾಪುರದಿಂದ ಸುರುವಾಗೋದು ಯಾರಿಂದಲಾದರೂ ಊಹಿಸಲು ಸಾಧ್ಯವೇ? ಅವನ ಕುಲಮೂಲಗಳೂ ನಮಗೆ ಲಭ್ಯವಿಲ್ಲ. ಅವೆಲ್ಲ ಚಂದಮುತ್ತನ ಕಥೆಯಲ್ಲಿ ಮುಳುಗಿಹೋಗಿವೆ. ಬದುಕಿದ್ದಾಗಲೇ ಕಥೆಯಾಗಿ,

ಲಾವಣಿಯಾಗಿ, ದೇವತೆಯಾಗಿ ಪವಾಡಗಳ ಮೆರೆದ ಚಂದಮುತ್ತನ ಭಾಗಾದಿ ನಮ್ಮ ನಾಯಕ ಶಿಖರಸೂರ್ಯ! ಇವನೂ ಕಲಾವಿದನಾಗಲು ಖಟಪಟಿ ಮಾಡಿ, ಸಾಧ್ಯವಾಗದೆ ಮಲೆಯಾಳ ಮಂತ್ರತಂತ್ರಾದಿ ವಾಮಾಚಾರ ಅನುಸರಿಸಿ, ಆಗಲೂ ಸಾಧ್ಯವಾಗದೆ, ಗುರುಶಾಪಕ್ಕೆ ಗುರಿಯಾಗಿ ಎರಡು ಮೂರು ವರ್ಷ ಅಲ್ಲಲ್ಲಿ ಅಲೆದಾಡಿ, ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳಲೆಂದು ಕಾಡಿನ ಕಮರಿಗೆ ಜಿಗಿದು ಸ್ಮೃತಿ ತಪ್ಪಿ ಬಿದ್ದವನು. ಅಂಥವನನ್ನ ಶಿವಾಪುರದ ಜಟ್ಟಿಗ ಎತ್ತಿ ತಂದು ಉಪಚರಿಸಿ ಕನಕಪುರಿಯ ಇತಿಹಾಸಕ್ಕೆ ಕಾಣಿಕೆಯಾಗಿ ಕೊಟ್ಟ. ಕಾಡಿನ ಕಮರಿಯಲ್ಲಿ ಬೇಹುಷಾರಾಗಿ ಬಿದ್ದಿದ್ದ ಚೆನ್ನಮುತ್ತನನ್ನು ಜಟ್ಟಿಗ ದಯಮಾಡಿ ಶಿವಾಪುರಕ್ಕೆ ಎತ್ತಿಕೊಂಬಂದನಲ್ಲ, ಅಲ್ಲಿಂದ ಮುಂದಿನ ಅವನ ಇತಿಹಾಸವನ್ನು ನೋಡಿರಿ:

## ಮುನ್ನುಡಿ: ಈ ಮಾಗಿಯ ಮುಖದಲ್ಲಿ ...

ಕಂಬಾರರು ಕೆಲವು ದಶಕಗಳ ಹಿಂದೆ ಒಂದು ರೇಡಿಯೋ ಸಂದರ್ಶನದಲ್ಲಿ ಹೇಳಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ: “ನಾನು ಕವಿಯಾದರೆ ಸಿಲಪ್ಪದಿಗಾರಂನ ಕವಿಯ ಹಾಗಾಗಬೇಕು.”

ಅವರ ಈ ಹೊಚ್ಚಹೊಸ ಕೃತಿ ಆ ಹೆಬ್ಬಯಕೆಯ ಮಾನಾಡಿ ಫಸಲು. ವಿಚಿತ್ರವೆಂದರೆ ಕಂಬಾರರು ವ್ಯಾಸ, ವಾಲ್ಮೀಕಿ, ಪಂಪ-ರನ್ನಾದಿಗಳ ಮೇರುಕೃತಿಗಳ ಬದಲಿಗೆ ದ್ರಾವಿಡ ಸಂಸ್ಕೃತಿಯ ಮೂಲಮಾತೃಕೆಯಂತಿರುವ ಇಳಂಗೊ ಅಡಿಗಳ ಕೃತಿಯನ್ನು ತಮ್ಮ ಮಾದರಿಯನ್ನಾಗಿ ಹೆಸರಿಸಿದ್ದು. ಅವರ ಸ್ಫೂರ್ತಿಯ ಜಲಕಣ್ಣಿರುವುದು ಬಹುಪಾಲು ಮಂದಿ ಯಾವುದನ್ನು ಭಾರತೀಯ ಅಥವಾ ಕನ್ನಡ ಸಂಸ್ಕೃತಿಯ ಪ್ರಧಾನ ಧಾರೆಯೆಂದು ತಿಳಿದಿದ್ದಾರೋ ಅದರಲ್ಲಲ್ಲ. ರಾಷ್ಟ್ರೀಯವಾದಿ ಸಾಂಸ್ಕೃತಿಕ ಚೌಕಟ್ಟಿನ ಹೊರಗೆ ದೂಡಲ್ಪಟ್ಟಿರುವ ಮಹಾನ್‌ಆರ್ಯೇತರ ಪರಂಪರೆಗಳ ಸ್ಮೃತಿಕೋಶಗಳಿಂದ ಅವರು ತಮ್ಮ ಸ್ಫೂರ್ತಿ ಮತ್ತು ದ್ರವ್ಯಗಳನ್ನು ಪಡೆದುಕೊಳ್ಳುತ್ತಾರೆಂಬುದು ಇದರಿಂದ ಸೂಚಿತವಾಗುತ್ತೆ.

“ಸಾಗರಕ್ಕೆ ಮೇರೆಯುಂಟಲ್ಲದೆ ನದಿಗೆ ಮೇರೆಯುಂಟೆ?” - ಇದು ಬಸವಣ್ಣನವರ ವಚನವೊಂದರ ಮಾತು. ದಕ್ಷಿಣದ ಜೀವನದಿಯಾದ ಕಾವೇರಿಗೂ ಸಿಲಪ್ಪದಿಕಾರಂಗೂ ಅವಿನಾ ನಂಟು. ಕಾವೇರಿ ಆ ಮಹಾಕಾವ್ಯದ ಬಹುಮುಖ್ಯ ಭಾಗಗಳಲ್ಲಿ ಜುಳುಜುಳು ಹರಿಯುತ್ತಿರುತ್ತೆ. ಜೊತೆಗೆ ಅದರ ಒಟ್ಟಂದವೇ ಕಾವೇರಿಯ ಹಾಗೆ: ಹಲಬಗೆಯ ಕತೆಗಳನ್ನು, ಸ್ಮೃತಿಗಳನ್ನು, ಶ್ರುತಿಗಳನ್ನು, ಕವಿತೆಗಳನ್ನು, ಗಾದೆ-ನಾಣ್ನುಡಿಗಳನ್ನು, ಕುಣಿತ-ಭಣಿತಗಳನ್ನು, ಕಲೆಗಳನ್ನು, ಹೊತ್ತು-ಗೊತ್ತುಗಳನ್ನು ತನ್ನ ಫಲವತ್ತಾದ ಬಸಿರಿನೊಳಕ್ಕೆ ಸೆಳೆದುಕೊಳ್ಳುತ್ತಾ ಅದು ಮುಂಬರಿಯುತ್ತೆ.

ಅಂದಮಾತ್ರಕ್ಕೆ ಈ ಎರಡು ಕೃತಿಗಳ ನಡುವಿನ ಮಹದಂತರಗಳನ್ನು ಮರೆಯುವಂತಿಲ್ಲ. ಯಾಕಂದರೆ ಅವುಗಳ ಸೆಳವುಗಳು ಬೇರೆಬೇರೆಯೇ. ಎನಿತಪಾಯ ಕೋಟಿಗಳಿವೆಯೋ ಅನಿತಕ್ಕೂ ಗೇಹವಾದ ದೇಹ, ದೇಶ, ಕಾಲಗಳಾಚೆಗಿನ ಲೋಕಪರಾಙ್ಮುಖವಾದ ಜೈನ ದೃಷ್ಟಿ ಸಿಲಪ್ಪದಿಗಾರಂನ ಹೃದಯದಲ್ಲಿದೆ. ‘ಶಿಖರಸೂರ್ಯ’ದಲ್ಲಿ ಹಾಸುಹೊಕ್ಕಾಗಿ, ಅಲ್ಲಿನ ಎಲ್ಲವನ್ನೂ ಈಕ್ಷಿಸುವ ತಾಯಿಧರ್ಮದ ನೋಟ ಲೋಕಮುಖಿಯಾಗಿ ಇಹ-ಪರ, ಕೇಡು-ಒಳಿತು, ಕತ್ತಲು-ಬೆಳಕು ಇವೇ ಮುಂತಾದ ಎಲ್ಲ ದಂದುಗಳನ್ನೂ, ದ್ವಂದ್ವಗಳನ್ನೂ ಹೆತ್ತು ಹೊತ್ತು ಪೊರೆಯುವಂಥದು.

ಕಂಬಾರರ ಹಾಗೆ ಕೃತಿಯಿಂದ ಕೃತಿಗೆ ಬೆರಗುಗೊಳಿಸುವ ಬೆಳವಣಿಗೆ ತೋರುತ್ತಾ ಹೋದ ಕವಿಗಳು ಕನ್ನಡದಲ್ಲಿ ಬೆರಳೆಣಿಕೆಗೆ ಸಿಗುವಷ್ಟು ವಿರಳ. ಅವರ ಹಾಗೆ ತಮ್ಮ ಕೃತಿಗಳ ಮೂಲಕ ಒಂದು ಸುಸಂಬದ್ಧವಾದ ಮಿಥಿಕ ಸಂಕೇತಗಳ ಏರ್ಪಾಡನ್ನು ಕಟ್ಟಿಕೊಂಡವರು ಇನ್ನೂ ಅಪರೂಪ. ಅವರ ಕೃತಿಗಳಲ್ಲಿ ಚಿತ್ರಿತವಾಗುವ ನೋವು-ನಲಿವುಗಳು ಅವರ ಪ್ರತಿಭೆ ಕಟ್ಟಿದ ಒಂದು ಮಿಥಿಕ ಮಾಯಾಲೋಕದ ಗಾಳಿಯಲ್ಲಿ ಉಸಿರಾಡುತ್ತವೆ. ಆ ಲೋಕದ ಕೇಂದ್ರವಾದ ಶಿವಾಪುರವೆಂಬುದು ಕೇವಲ ಗತದ ಹಳವಂಡವಲ್ಲ, ಅನಾಗತದ, ಕಾಲಾತೀತದ ಒಂದು ಶಿವಾಂಡ ಕೂಡ. ಅಲ್ಲಿನ ಫಲವಂತಿಕೆಯ ಮಣ್ಣಲ್ಲಿ ಬೇರೂರಿದ ಕರ್ತಾರಶಕ್ತಿಯ ರುದ್ರವಿಲಾಸ,

ಶಿವಕರುಣೆಗಳು ಇತರ ಕಾಲದೇಶಗಳನ್ನು, ವರ್ತಮಾನದ, ತರ್ತ್ಕ್ಷಣದ ತುಮುಲಗಳನ್ನು ಕೆಲವು ಸಲ ಪ್ರತಿಮೆಗಳ ಮೂಲಕ, ಕೆಲವು ಸಲ ಸತ್ವಾತಿಶಯಗಳ ಮೂಲಕ ಆವರಿಸಿಕೊಳ್ಳುವದರಿಂದ ವಿಶಿಷ್ಟವಾದ ಸಾಧಾರಣೀಕರಣವನ್ನು ಅವರ ಕೃತಿಗಳು ಪಡೆದುಕೊಳ್ಳುತ್ತವೆ. ಈ ಚಮತ್ಕಾರದ ಒಂದು ಮುಖ್ಯ ಪರಿಣಾಮ: ವ್ಯಕ್ತಿಗತ ಸಾಂಕೇತಿಕ ಭಾಷೆಯ ಮೂಲಕ ಮಾತಾಡುವ ಪಡುವಣ ನಾಡುಗಳ ಯೇಟ್ಸ್, ರಿಲ್ಕೆ ಇತ್ಯಾದಿ ಆಧುನಿಕ ಕವಿಗಳಲ್ಲಾಗುವಂಥ ಗೋಜಲು ಕಂಬಾರರ ಕೃತಿಗಳಲ್ಲಿ ಉಂಟಾಗುವುದಿಲ್ಲ. ಕೆಳಗೇಳು ಮಂಜಿನ ನಗರಗಳಿದ್ದರು ಮೇಲಿನ ಆವಿಯ ಹಗುರ ಅವರ ಕೃತಿಗಳಿಗೆ ಸರಳತೆಯ ಲೀಲಾಜಾಲದ ಲೇಪವನ್ನು ಕೊಡುತ್ತದೆ. ಅವರ ಕೃತಿಗಳನ್ನು ಸವಿಯುವುದಕ್ಕೆ ಘನಘೋರ ಪಾಂಡಿತ್ಯದ ಆಶ್ರಯ ಬೇಕಿಲ್ಲ. ಅದರ ಸವಿ ಸುಲಿದ ಬಾಳೆಯ ಹಣ್ಣಿನಂತೆ.

ಕಂಬಾರರ ಕೃತಿಗಳಲ್ಲಿ ಇನ್ನೂ ಒಂದು ವಿಶೇಷವಿದೆ: ಅವರ ಕಾವ್ಯ, ನಾಟಕ, ಕಾದಂಬರಿಗಳ ನಡುವಣ ಕಾಳಜಿ ಮತ್ತು ವಿವರಗಳ ಒಳನಂಟಿನಿಂದುಂಟಾಗುವ ಅಖಂಡತೆ; ಪರಸ್ಪರಾವಲಂಬಿಯಾಗುವ ಚಿತ್ರಗಳ, ಬಿಂಬಗಳ, ದನಿಗಳ, ಮಾರ್ದನಿಗಳ ಅನುರಣನಗಳ ಮೇಳ. ಎಲ್ಲಿ ಸವಿದರೂ ಕಬ್ಬಿನ ರುಚಿ ಅದೇ ಆಗಿರುವಂತೆ ಕಂಬಾರರ ಎಲ್ಲ ಕೃತಿಗಳ ಬಿಡಿಭಾಗಗಳ ವಿವಿಧ ರುಚಿಗಳ ನಡುವೆ ಒಂದು ತೆರನ ಏಕರಸಾತ್ಮಕತೆಯಿದೆ.

ಸಾವಯವ ಸಂಬಂಧವುಳ್ಳ ಸಂಸ್ಕೃತಿಯೊಂದು ಹೊರಗಿನ ಹಲ್ಲೆಗಳಿಂದ ದಿಕ್ಕಾಪಾಲಾಗುವುದರ ದುರಂತ ಕಂಬಾರರ ಕೃತಿಗಳಲ್ಲಿ ಮೊದಲಿನಿಂದ ಚಿತ್ರಿತವಾದಂತೆ ಮೇಲುನೋಟಕ್ಕೆ ತೋರುತ್ತದೆಯಾದರೂ, ಅದರಲ್ಲಿ ನಿಜವಾಗಿಯೂ ಇರುವುದು ಸಂಸ್ಕೃತಿಯೊಂದು ತನ್ನೊಳಗಿನ ಹುಳುಕುಗಳಿಂದ ಪತನವಾಗುವುದರ ಚಿತ್ರಣ. ನಾಶವಾದ ಜನಾಂಗಗಳ ಸ್ವತಂತ್ರ ಇಚ್ಛಾಶಕ್ತಿಯನ್ನು ಇಲ್ಲವೆನ್ನುವ ಇಂದಿನ ಬಹುತೇಕ ಪ್ರಗತಿವಾದೀ ಸಿದ್ಧಾಂತಗಳಿಗಿದು ಹೊರಗು. ಕಂಬಾರರ 'ಬೆಳ್ಳಿಮೀನು'ವರೆಗಿನ ಕೃತಿಗಳು ಈ ಅನುಭವದ ದುರಂತವನ್ನು ಉದ್ವಿಗ್ನತೆಯ ಭಾಷೆಯಲ್ಲಿ ಪ್ರಧಾನವಾಗಿ ಬಿಡಿಸಿವೆ. ಆದರೆ ಆನಂತರದ ಕೃತಿಗಳ ಭಾಷೆ ಹೆಚ್ಚು ಹೆಚ್ಚು ನಿರುದ್ವಿಗ್ನವೂ, ಶಾಂತವೂ ಆಗತೊಡಗಿತು. ಹಾಗೆಯೇ ದುರಂತದ ಅಂಶವೂ ಕಮ್ಮಿಯಾಯಿತು. ಈ ಬೆಳವಣಿಗೆಗಳ ಪರಿಣಾಮ ಗೋಚರವಾಗುವುದು 'ಮಹಾಮಾಯಿ' ಮತ್ತು 'ಚಕೋರಿ'ಗಳಲ್ಲಿ. ಅವರ ಇತ್ತೀಚಿನ ಅಪ್ರಕಟಿತ ಕವಿತೆಗಳಲ್ಲೂ ಇದನ್ನು ನಾನು ಕಂಡಿದ್ದೇನೆ. ಇದೇ ಸಮಯದಲ್ಲಿ ಅನೇಕಾಂತವಾದಿಯಾದ, ಬಹುಮುಖಿಯಾದ, ಹಲರಂಗಿನ ಎಪಿಕ್ ವ್ಯಾಪಕತೆಯ ರಚನೆ ಅವರ ಕೃತಿಗಳಿಗೆ ಒದಗಿ ಬಂತು. ಈ ವಿಸ್ಮಯಕಾರೀ ಬೆಳವಣಿಗೆಯ ಒಂದು ದೊಡ್ಡ ಸಾಧನೆಯಾಗಿ 'ಶಿಖರಸೂರ್ಯ' ಕಾಣುತ್ತಿದೆ.

'ಚಕೋರಿ' ಅಪಾರ ನಾಟ್ಯಶಕ್ತಿಯುಳ್ಳ ಮೋಹಕ ಕೃತಿ. ಚಂದಮುತ್ತನೆಂಬ ಕಲಾಕಾರನ ಉತ್ಕಟ ಹೋರಾಟವನ್ನು, ಆಖೈರಿನ ದುರಂತವನ್ನು ಅದು ಬೆಳದಿಂಗಳ ಕನ್ನಡದಲ್ಲಿ ರೇಖಿಸಿದೆ. ಅಲ್ಲಿನ ದುರಂತ ಈಸ್ಕಲಸ್‌ನ ನಾಟಕಗಳ ದುರಂತದ ಹಾಗೆ ಕ್ರಿಯೆಯ ಒಳತರ್ಕದಿಂದಾಗಲೀ, ಇಳಂಗೋ ಅಡಿಗಳ ಕೃತಿಯ ಅಡಿಪಾಯವಾಗಿರುವ ಜೈನಶಾಸನದ ಕರ್ಮಸಿದ್ಧಾಂತದ ಹೊರತರ್ಕದಿಂದಾಗಲೀ ಬಾರದೆ ಕೃತಿಕಾರರ ಸ್ವಾತಂತ್ರ್ಯದಿಂದ ಬಂದಂತೆ ತೋರುತ್ತೆ. ಚಕೋರಿಯ ಕತೆ ಅಲ್ಲಿಗೇ ಮುಗಿದಿದ್ದರೆ ಅದೊಂದು ಸೂಕ್ಷ್ಮ ಕೊರತೆಯಾಗುತ್ತಿತ್ತೇನೊ. ಆದರೆ ಅ ಕತೆ ಅಲ್ಲಿಗೆ ಮುಗಿಯದೇ 'ಶಿಖರಸೂರ್ಯ'ದಲ್ಲಿ ಮುಂದುವರಿದು ಇನ್ನೊಂದು ವಿನ್ಯಾಸ ಪಡೆದುಕೊಂಡಿದೆ. 'ಚಕೋರಿ' ಈಗ 'ಶಿಖರಸೂರ್ಯ'ದ ಪೂರ್ವಪೀಠಿಕೆಯಾಗಿದೆ. ಹೀಗಾಗಿ ಈ ಎರಡೂ ಕೃತಿಗಳು ಕಂಬಾರರ ಒಟ್ಟು ಕೃತಿಗಳ ಹಿನ್ನೆಲೆಯಲ್ಲಿ ಎರಡೂ ಕೃತಿಗಳಲ್ಲಿ ಅಂತರ್ಗತವಾಗಿದ್ದು, ಎರಡನ್ನೂ ದಾಟಿದ ಮೂರನೆಯ ಅರ್ಥವನ್ನು ಹೊರಡಿಸುತ್ತವೆ.

'ಚಕೋರಿ'ಯ ರಚನೆ ದುರಂತಪ್ರಧಾನ. "ಶಿಖರಸೂರ್ಯ"ನದು ಎಪಿಕ್‌ತರಹದ್ದು. ದುರಂತ ನಿಜದ ಬಿಡಿನೋಟ. ಆದರೆ ಮಹಾಕಾವ್ಯಕ್ಕೆ ಎಲ್ಲವನ್ನೂ ಹೇಳಬೇಕೆಂಬ ಛಲ. ದುರಂತದ್ದು ಏಕಾಂತವಾದವಾದರೆ ಮಹಾಕಾವ್ಯದ್ದು ಅನೇಕಾಂತವಾದ. ಆದ್ದರಿಂದಲೇ ಮಹಾಕಾವ್ಯಗಳು ನಾಗರೀಕತೆಗಳ ನಡೆ-ನುಡಿಗಳು ಹದಕ್ಕೆ ಬರುವ ತನಕ ಜನ್ಮತಾಳಲಾರವೆಂದು ಟಿ.ಎಸ್. ಎಲಿಯಟ್ ತನ್ನೊಂದು ಬರಹದಲ್ಲಿ ವಾದಿಸಿದ್ದು. ಇನ್ನೊಂದು ವ್ಯತ್ಯಾಸ: ತುಮುಲಗಳು ದುರಂತದೃಷ್ಟಿಯ ಹುರುಳು; ತುಮುಲಗಳನ್ನು

ಹೊಟ್ಟೆಯಲ್ಲಿ ಹಾಕಿಕೊಂಡ ಒಳಗೊಳ್ಳುವಿಕೆ ಮಹಾಕಾವ್ಯದ ತಿರುಳು. ಹಾಗಿರದ ಮಹಾಕಾವ್ಯಗಳು ಗಾತ್ರದಲ್ಲಿ ಮಾತ್ರ ಮಹಾ ಆಗುತ್ತವೆ.

ಮಹಾಕಾವ್ಯದ ಮಹದಾಶೆಯನ್ನು 'ಶಿಖರಸೂರ್ಯ' ಸಾಧಿಸುವ ಬಗೆಯೂ ವಿಶೇಷ. ಮಹಾಕಾವ್ಯದ ರಚನೆಯುಳ್ಳ ಕೃತಿಗಳು ಕಾಲದೇಶಬದ್ಧ ವಿವರಗಳನ್ನು ತಮ್ಮ ವರ್ಣನೆ-ಕಥನಗಳ ಮೂಸೆಯಲ್ಲಿ ತರಲೆಳೆಸುತ್ತವೆ. ಭಾವಗೀತೆಯ ಹಾಗೆ ದುರಂತ ಕೃತಿ ವಿವರಗಳನ್ನು ಕರಗಿಸಿ, ಕುದಿಸಿ ಸಾಂಕೇತಿಕತೆಯ ಪಾಕವನ್ನು ತಯಾರಿಸುತ್ತದೆ. ಒಂದು ವಿಕಾಸದ ಹಾದಿ, ಇನ್ನೊಂದು ಸಂಕೋಚದ ಹಾದಿ.

ಇಳಂಗೋ ಅಡಿಗಳ ಕೃತಿ ತಮಿಳಿನ ಮೂರು ಮಹಾನ್ ನಗರಕೇಂದ್ರಿತ ಸಾಮ್ರಾಜ್ಯಗಳ ಕತೆ. ಬೆಟ್ಟ, ಬಯಲು, ಕಾಡು-ಮೇಡು, ನದಿ ಮತ್ತು ಕಡಲದಂಡೆಗಳು, ಬಂಜರು ಮತ್ತು ಹೊತ್ತು-ಬಿತ್ತ ನೆಲ ಇತ್ಯಾದಿ ಗೊತ್ತಿನ ಬಗೆಗಳಲ್ಲಿ; ಅಲೆಮಾರಿ ಗೋವಳಿಗರ, ನೆಲೆನಿಂತ ಬೇಸಾಯಗಾರರ, ಕಾಡಿನ ಜನರ, ಊರು ಪಟ್ಟಣಗಳ ಹಲಬಗೆಯ ನಡೆಗಟ್ಟುಗಳ ಹಲವು ಹೊತ್ತುಗಳ ಚೌಕಟ್ಟುಗಳಲ್ಲಿ ಅಲ್ಲಿನ ಪಾತ್ರಗಳು, ಘಟನೆಗಳು ಹಬ್ಬಿ ಬೆಳೆಯುತ್ತವೆ. ಇದೇ ರೀತಿಯಲ್ಲಿ ತೊಲ್ಸ್ತೋಯ್‌ನ 'ಕದನ ಮತ್ತು ಶಾಂತಿ' ಕಾದಂಬರಿಯ ಕಥನದ ಹರಹು ಹೊತ್ತು-ಗೊತ್ತುಗಳೆರಡರಲ್ಲೂ ಹಬ್ಬಿಕೊಳ್ಳುವ ಬೆರಗನ್ನು ಇ.ಎಂ. ಫಾರ್ಸ್ಟರ್‌ತನ್ನ ವಿಶ್ಲೇಷಣೆಯಲ್ಲಿ ತೋರಿಸಿದ್ದಾನೆ. ಒಟ್ಟಿನಲ್ಲಿ ಕಾಲ-ದೇಶಗಳ ಆಯಾಮಗಳೆರಡರಲ್ಲೂ ಘಟನೆಗಳನ್ನು ಗ್ರಹಿಸುವುದು ಮಹಾಕಾವ್ಯದ ಪಾರಂಪರಿಕ ಜವಾಬುದಾರಿ. 'ಶಿಖರಸೂರ್ಯ' ಕ್ರಮಿಸುವ ಹಾದಿ ಇಂತಹದಲ್ಲ. ಈ ಕೃತಿಯ ಹಾದಿ ಹೆಚ್ಚು ಮಿಥೋಪೋಯಿಕ್‌ಆಗಿದ್ದು ಓವಿದ್‌ನ 'ಮೆಟಮಾರ್ಫಸಿಸ್' ಅನ್ನು ಅಥವಾ ಷೇಖಾ ಸಾದಿಯ 'ಗುಲಿಸ್ಥಾನ್' ಅನ್ನು ಹೋಲುವಂಥದ್ದು. ಇಲ್ಲಿ ಹಲಬಗೆಯ ಪಾತ್ರ-ಘಟನೆಗಳನ್ನು ಹಿಡಿದಿರುವುದು ಸತ್ವಾತಿಶಯಗಳ ರೂಪದಲ್ಲಿ.

ಈ ತೆರನ ಹಿಡಿತವನ್ನು ಸಾಧಿಸಲು ಕಂಬಾರರು ತಮ್ಮ ಕಥನದ ಅಗತ್ಯದಂತೆ ವಾಸ್ತವತಾವಾದಿಯಲ್ಲದ ಒಂದು ಸಾಂಕೇತಿಕ ಚರಿತ್ರೆ-ಭೂಗೋಳವನ್ನು ತಮ್ಮ ಈ ಹಿಂದಿನ ಕೃತಿಗಳ ಭಿತ್ತಿಯಲ್ಲಿ ಚಲ್ಲುವರಿದಿರುವ ಬಿಡಿವಿವರಗಳನ್ನು ಒಟ್ಟುಗೂಡಿಸಿ ಕಟ್ಟಿದ್ದಾರೆ. ಈ ಕೆಲಸವನ್ನು ಎಷ್ಟು ಅಚ್ಚುಕಟ್ಟಾಗಿ ಮಾಡಿದ್ದಾರೆಂದರೆ ಈ ಕೃತಿಯನ್ನು ಓದಿ ಸವಿಯಲು ಇಂದಿನ ಕೃತಿಗಳ ಪರಿಚಯವಿಲ್ಲದಿದ್ದರೂ ನಡೆಯುತ್ತದೆ. ಈ ಜಗತ್ತಿನ ಒಂದು ತುದಿ ಎಲ್ಲ ನಡೆಗಟ್ಟುಗಳ, ನಾಗರಿಕತೆಗಳ ತಾಯಿ ಬಸಿರಿನಂತಿರುವ ಶಿವಾಪುರದ ಗುಡ್ಡ; ಇನ್ನೊಂದು ತುದಿ ಎಲ್ಲವನ್ನೂ ತಿಂದು ತೇಗುವ ಕನಕಪುರಿ. ಇವೆರಡರ ನಡುವೆ ಘಟನೆಗಳ ಕಾರ್ಯಕಾರಣದೊಂದಪೂರ್ವ ನಟನೆ. ಇಲ್ಲಿನ ಹೆಸರುಗಳನ್ನು ಗಮನಿಸಿ. ಎಲ್ಲ ಹೆಸರುಗಳೂ ಸಾಂಕೇತಿಕ. ಇಷ್ಟಾಗಿಯೂ ಈ ಸಾಂಕೇತಿಕ ಲೋಕದ ಜೀವಿಗಳಿಗೆ ಜೀವಂತಪಾತ್ರಗಳ ಕಾವಿರುವುದರಿಂದ ಅವು ಪೂರ್ತಿ ಅಲೆಗಾರಿಕಲ್ ಆಗುವುದಿಲ್ಲ, ಸಪಾಟಾಗುವದಿಲ್ಲ. ಘಟನೆಗಳೂ ಅಷ್ಟೆ: ದಟ್ಟವಾಗಿ ಕಟ್ಟಿಕೊಳ್ಳುತ್ತಾ ಹೋಗುತ್ತವೆ, ಜೀವದಾಳುತ್ತವೆ.

'ಶಿಖರಸೂರ್ಯ' ಶ್ರೇಷ್ಠ ಮಹಾಕಾವ್ಯಗಳ ಹಾಗೆ ವಿಶ್ವಕೋಶಾತ್ಮಕ ಗುಣಗಳನ್ನು ಹೊಂದಿದೆ. ದಿಗ್ಭ್ರಮೆಗೊಳಿಸುವ ವಯವಿಧ್ಯಮಯ ಅನುಭವಸಾಧ್ಯತೆಗಳು, ನಡೆಗಟ್ಟುಗಳ ಹಂತಗಳು, ನುಡಿಗಟ್ಟಿನ ಬಗೆಗಳು, ಹಿಡಿಗಟ್ಟಿನ ತರಹಗಳು, ಘಟನಾ ಮಾದರಿಗಳು ಇಲ್ಲಿ ಒಂದಾಗಿ ಹಲರಂಗಿನ ಚಿತ್ರವಾಗಿದೆ; ಹಲವು ಸ್ವರಗಳ ಮೇಳವಾಗಿದೆ; ಹಲವು ನದಿಗಳ ಕಡಲಾಗಿದೆ. ಇಲ್ಲಿ ಒಂದು ಕಲಾಪ್ರಕಾರದೊಳಗೆ ಹಲಬಗೆಯ ಕಲಾಪ್ರಕಾರಗಳನ್ನೊಳಗೊಳ್ಳುವ ಬಗೆಯೂ ಬೆರಗುಂಟುಮಾಡುತ್ತದೆ. ವಿಶೇಷವಾಗಿ ಈ ಗುಣದಲ್ಲಿ 'ಶಿಖರಸೂರ್ಯ', 'ಗುಲಿಸ್ತಾನ್', 'ಮಸ್ನವಿ' ಮುಂತಾದ ಸೂಫೀ ಮಹಾಕಾವ್ಯಗಳನ್ನು ಹೋಲುತ್ತದೆ. ಕತೆ, ಪುರಾಣ, ಹಾಡು, ಕುಣಿತ, ಸಂಗೀತ, ಕವಿತೆ, ಗದೆ, ಒಗಟು, ಯುದ್ಧಕಲೆ ಎಲ್ಲಕ್ಕೂ ಇಲ್ಲಿ ಜಾಗವುಂಟು. ಕಾಲ್ಪನಿಕ ಭೂಗೋಳದಲ್ಲಿ ಆ ತುದಿಯಿಂದ ಈ ತುದಿಗೆ, ಈ ತುದಿಯಿಂದ ಆ ತುದಿಗೆ ನಡೆಯುವ ಯಾತ್ರೆಗಳ ಪುನರ್ನಟನೆ ಮಹಾಕಾವ್ಯಗಳಲ್ಲಿ ಹಾಸುಹೊಕ್ಕಾಗಿರುವ ಯಾತ್ರೆಗಳ ಮೋಟಿಫ್ ಅನ್ನು ನೆನಪಿಸುತ್ತದೆ. ಕಥಾನಾಯಕಿ ಕತೆಯ ಉತ್ತರಾರ್ಧದಲ್ಲಿ ಗುಂಪಿನ ಜೊತೆ ಶಿವಾಪುರಗುಡ್ಡಕ್ಕೆ ಯಾತ್ರೆ ಹೋಗುವಾಗ ಅವಳ ಕಿವಿಗೆ ಬೀಳುವ ಪುಣ್ಯಕೋಟಿ ಮೊದಲಾದ ಕತೆಗಳನ್ನು ಸಂಕಲಿಸಿದರೆ ಅದೇ ಒಂದು ಅದ್ಭುತ ಕಿರುಗತೆಗಳ ಕಟ್ಟಾದೀತು.

ಆದಿಮ ಕತೆಗಳ ಬ್ರಹ್ಮಾಂಡಕಲ್ಪನೆಯ ರಚನೆಯೊಳಗಡೆ ಇಂದಿನ ದಂದುಗಗಳನ್ನು ಕವಿ ಕಂಬಾರರು ಹೊಂದಿಸಿರುವ ರೀತಿಯೂ ನಮ್ಮನ್ನು ಅಚ್ಚರಿಗೊಳಿಸುತ್ತದೆ. ಇಡೀ ಕೃತಿಯಲ್ಲಿ ಆದಿಮಕತೆಯ ಪೂರ್ಣತ್ವದ ದರ್ಶನ ಜೊತೆಗೆ ನಮ್ಮ ಕಾಲದ 'ಮಾನವ ಮೂರ್ಖತನಗಳ ಪುನರಾವರ್ತನೆ'ಯ ತೀವ್ರ ಪರಿವೆಯೂ ಕಾಳುಗಟ್ಟಿದೆ.

'ಚಕೋರಿ'ಯಲ್ಲಿ ನಾಯಕ ಚಂದ್ರಮುತ್ತ ಅಹಂ ನಿರಸನದ ಕಲೆಯ ಮಾರ್ಗ ಹಿಡಿದು ದುರಂತಕ್ಕೆ ಪಕ್ಕಾಗುತ್ತಾನೆ. ಇಲ್ಲಿಯಾದರೋ ಚೆನ್ನಮುತ್ತ-ಜಯಸೂರ್ಯ-ಶಿಖರಸೂರ್ಯ ತಂತ್ರಜ್ಞಾನದ ಅಹಂಕಾರ ಸ್ವಾರ್ಥಗಳ ಹಾದಿ ಹಿಡಿದು ಇನ್ನೂ ದಾರುಣ ದುರಂತದ ದವಡೆ ಸೇರುತ್ತಾನೆ. ಇವರಿಬ್ಬರಿಗೂ ಶಿವಾಪುರಗುಡ್ಡದ ಸೃಷ್ಟಿ ರಹಸ್ಯಗಳ ಗರ್ಭದಲ್ಲಿ ಕಳ್ಳು-ಬಳ್ಳಿಯ ನಂಟು. ಈ ಎರಡು ಪಾತ್ರಗಳು ತಮ್ಮೆಲ್ಲ ಮೌಲ್ಯಗಳೊಂದಿಗೆ ಎದುರುಬದುರಾಗುತ್ತವೆ. ಇಲ್ಲಿ ತಾಯಿ ಮೌಲ್ಯವೆಂದರೆ ಕಾಳನ್ನು ಹೊನ್ನಾಗಿಸಬಲ್ಲ ಮತ್ತು ವಾಪಸ್ಸು ಹೊನ್ನನ್ನು ಕಾಳಾಗಿಸಬಲ್ಲ ಚಮತ್ಕಾರ; ಇದಕ್ಕೆ ವ್ಯತಿರಿಕ್ತವಾದದ್ದು ಕಾಳನ್ನು ಹೊನ್ನಾಗಿಸಬಲ್ಲುದೇ ಹೊರತು ಮತ್ತೆ ಹೊನ್ನನ್ನು ಕಾಳಾಗಿಸಲರಿಯದು.

ಒಂದು 'ಸರ್ವಂ ಸರ್ವಾಂತರ್ಗತಂ' ಎಂದು ನಂಬುವ ಚಕ್ರೀಯ ಮೌಲ್ಯಗಳ ಅಭಿವ್ಯಕ್ತಿ; ಇನ್ನೊಂದು ಸರ್ವಭಕ್ಷಕವಾದ ಸರಳರೇಖಾತ್ಮಕ ಪ್ರಗತಿಯ ಮೌಲ್ಯ. ಈ ಎರಡನೆಯದೇ ಪ್ರಸ್ತುತ ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳ ಹಾಗೇ ಜಗದ್ವ್ಯಾಪಿಯಾದ ಗೋಳೀಕರಣದ (ಗ್ಲೋಬಲೈಸೇಷನ್) ಮೂಲಮಂತ್ರ. ಇದರ ತರ್ಕವೇ ಶಿಖರಸೂರ್ಯನ ಬದುಕು: ಗಳಿಸಿದಷ್ಟೂ ಗೋಳು; ಉಂಡಷ್ಟೂ ಹಸಿವು; ಕುಡಿದಷ್ಟೂ ದಾವರ; ಪಡೆದಷ್ಟೂ ಬಡತನ. ಗ್ರೀಕ್ ನಾಟಕದ ದುರಂತನಾಯಕನ ಹಾಗೆ ದುರಹಂಕಾರದಿಂದ, ಹ್ಯೂಬ್ರಿಸ್‌ನಿಂದ ಮೇರೆವರಿಯದೆ ಮೆರೆಯುವ ಅವನ ಗೆಲುವಿನಲ್ಲೇ ಅವನ ಸೋಲೂ ಇದೆ. ಆದರವನಿಗೆ ಅದು ಗೊತ್ತಿಲ್ಲ. ನಮ್ರತೆಯ ಸಾಕಾರ ಮೂರ್ತಿಯಾದ ನಿನ್ನಡಿಗೆ ಅದು ಗೊತ್ತಿದೆ. ಆದ್ದರಿಂದ ಅವನು ಹೀರೋ ಆಗಲು ಹೋಗುವುದೇ ಇಲ್ಲ; ಗುರು ಶಿವಪಾದನು ಅವನನ್ನು ಹಗೆಯಿಂದ ಬಿಡುಗಡೆಗೊಳಿಸಿದ್ದಾನೆ. ಆದರೆ ಜವಾಬುದಾರಿಗಳಿಂದ ಅಲ್ಲ. ಕನಕಪುರಿಯ ಹೆಣಗಳನ್ನು ಸಾಗಿಸುವುದರಲ್ಲಿ ಅವನಿಗೆ ಚೂರು ಬೇಸರವಿಲ್ಲ. 'ಮಹಾಮಾಯಿ'ಯ ಕಥಾನಾಯಕ ಗುಣಪಡಿಸುವುದು ಕೇವಲ ರಾಜಕುಮಾರಿಯನ್ನು. ನಿನ್ನಡಿಯಾದರೋ ಇಡೀ ಸೃಷ್ಟಿಗೇ ವೈದ್ಯ.... 'ಬಂದುದೆಲ್ಲವ ನುಂಗಿ, ಬಾರದುದೆಲ್ಲವ ಹಿಂಗಿದ' ಸ್ಥಿತಿ ಅವನಿಗಾಗಿದೆ.

ಈ ಕೃತಿಯ ಹೆಣ್ಣು ಪಾತ್ರಗಳ ವೈವಿಧ್ಯವೂ ಗಮನಾರ್ಹ. ಇಲ್ಲಿ ಗೌರಿಯಾಗಿರುವ ಯಕ್ಷಿ ಒಂದು ತುದಿಯಾದರೆ 'ರಾಜಸೂಳೆ'ಯಾಗಿರುವ ಮಹಾರಾಣಿ ಷೇಕ್ಸ್‌ಪಿಯರ್‌ನ ಕ್ಲಿಯೋಪಾತ್ರಳಂಥ ತೀವ್ರತೆಯುಳ್ಳ ಪಾತ್ರ. ಶಿಖರಸೂರ್ಯನ ಖಳನಾಯಕತ್ವ ಷೇಕ್ಸ್‌ಪಿಯರನ ಆಯಾಗೋನನ್ನು ಹೋಲುವಂಥದು.

'ಇಲ್ಲಿದೆ ದೈವಸೃಷ್ಟಿಯ ವಿಪುಲತೆ' ಷೇಕ್ಸ್‌ಪಿಯರನ್ನು ಕುರಿತು ಡ್ರೈಡನ್ ಹೇಳಿದ ಮಾತು ಕಂಬಾರರ ಈ ವಿಪುಲ ಕೃತಿಗೂ ಅನ್ವಯಿಸುತ್ತದೆ. ಇಂದಿನ ಗೋಳೀಕೃತ (ಗ್ಲೋಬಲೈಸ್ಡ್) ಜಗತ್ತಿನ ಒಣಗತ್ತುಗಳನ್ನು, ತಂತ್ರಜ್ಞಾನದ ಠೇಂಕಾರಗಳನ್ನು, ಈ ಮೃತ್ಯುವಿನ ಸ್ಥಿತಿಯಲ್ಲಡಗಿರುವ ಮರುಹುಟ್ಟಿನ ಅಸೀಮ ಸಾಧ್ಯತೆಗಳನ್ನು ಇಷ್ಟು ಸಮಗ್ರವಾಗಿ ಹಿಡಿದಿಡುವ ಕೃತಿಗಳು ನನಗೆ ಗೊತ್ತಿದ್ದ ಮಟ್ಟಿಗೆ ಇವತ್ತಿನ ಸಾಹಿತ್ಯದಲ್ಲಿ ವಿರಳ. ಕ್ಷಣಭಂಗುರವಾದ ಉಪಭೋಗೀಕ್ರಿಯೆಯ ಪ್ರತಿಬಿಂಬವಾಗಿ, ತನ್ನೆಲ್ಲ ಇಚ್ಛಾಶಕ್ತಿಯನ್ನೂ ಬಿಟ್ಟುಕೊಟ್ಟಿರುವ ಇಂದಿನ ಕನ್ನಡ ಸಾಹಿತ್ಯದಲ್ಲಂತೂ ಇಂತಹ ಮಿಥೋಪೋಯಿಕ್ ಮಹತ್ವಾಕಾಂಕ್ಷೆ ಮಟಾಮಾಯವಾಗಿದೆ. ನವೋದಯದ ಉತ್ಪ್ರೇಕ್ಷಾ ದೃಷ್ಟಿ, ನವ್ಯದ ದಿಸ್ತೋಪಿಯನ್ ದೃಷ್ಟಿ, ಬಂಡಾಯದ ಸರಳೀಕೃತ ಯತೋಪಿಯನ್ ದೃಷ್ಟಿಗಳನ್ನು ದಾಟಿದ ಅಂದಿಂಗೆ ಹಳೆಯ, ಇಂದಿಂಗೆ ಎಳೆಯ ಸೃಷ್ಟಿ 'ಶಿಖರಸೂರ್ಯ'ದಲ್ಲಿದೆ.

ಕಂಬಾರರ ಕಾವ್ಯತಪಸ್ಸಿನ ಪಕ್ವಫಲವಾದ ಈ ಕೃತಿ ಜಾನ್ ಡನ್‌ನ ಸಾಲನ್ನು ನೆನಪಿಸುತ್ತದೆ:

ಈ ಮಾಗಿಯ ಮುಖದಲ್ಲಿ
ನಾ ಕಂಡ ಚೆಲವು
ಯಾವ ವಸಂತದಲ್ಲೂ ಇಲ್ಲ!

ಇಂಥ ಚೆಲುವಿನ ಆಗರವಾದರೂ ಹ್ಯಾಗೆ ಮಾಗಿ ಮತ್ತೆ ವಸಂತಕ್ಕೆ ದಾರಿ ಮಾಡಿಕೊಡುತ್ತದೋ ಹಾಗೆಯೇ ಶಿಖರಸೂರ್ಯನ ಸೋಲಾಗಲೀ, ನಿನ್ನಡಿಯ ಗೆಲುವಾಗಲಿ ಆಖೈರಾದುವಲ್ಲ. ಯಾಕೆಂದರೆ ಇವರಿಬ್ಬರೂ ಶಿವಾಪುರದ ಪಿಂಡದಲ್ಲಿ ಭ್ರೂಣರೂಪಿಯಾಗಿ ಸದಾ ನೆಲೆಸಿದ್ದು ಮರ ಕಾಲವಶದಲ್ಲಿ ಪತ್ರಫಲಗಳನ್ನು ತೋರುವ ಹಾಗೆ ಅಮ್ಮನ ಲೀಲಾನುಸಾರವಾಗಿ ಬೇರೆ ಬೇರೆ ಕಥನ ವಿನ್ಯಾಸಗಳಲ್ಲಿ ಪ್ರಕಟವಾಗುತ್ತಾ ಇರುತ್ತಾರೆ. ಆದ್ದರಿಂದ ಕಥೆಗಳಿಗೆ ಕೊನೆಯೇ ಇಲ್ಲ. ಎಲ್ಲ ಕೊನೆಯೂ ಮತ್ತೊಂದರ ಮೊದಲು; ಎಲ್ಲ ಮೊದಲೂ ಮತ್ತೊಂದರ ಕೊನೆ. ತಕ್ಷಣವನ್ನೇ ಕೊಟ್ಟಕೊನೆಯೆಂದು ನಂಬಿಸುವ ಜೂಡೋಕ್ರಿಶ್ಚಿಯನ್ ಪರಂಪರಾನುಗತ ಸರಳ ರೇಖಾತ್ಮಕವಾದ ತತ್ವ ಇಂದಿನ ಗೋಳೀಕರಣ (ಗ್ಲೋಬಲೈಸೇಷನ್)ದಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿರುವಾಗ, ಅದಕ್ಕನುಸಾರವಾದ ಲೋಕದೃಷ್ಟಿಗಳನ್ನು, ತನ್ನರಿವುಗಳನ್ನು ಬಿತ್ತರಸುತ್ತಿರುವಾಗ ಆ ಇಡೀ ತರ್ಕವನ್ನು ಇಲ್ಲಿರುವ ಕಾಲಕಲ್ಪನೆ ತಿರುಗುಮುರುಗಾಗಿಸುತ್ತದೆ. ಆದ್ದರಿಂದ 'ಶಿಖರಸೂರ್ಯ' ಕೇವಲ ಉತ್ಕೃಷ್ಟ ಕಾವ್ಯ ಮಾತ್ರವಲ್ಲ; ಅದು ಸಾಂಸ್ಕೃತಿಕ ಮತ್ತು ದಾರ್ಶನಿಕ ಸ್ವಾಯತ್ತತೆಯನ್ನು ಸಾಧಿಸುವ ಕೃತಿಯೂ ಆಗಿದೆ.

**ಎಚ್.ಎಸ್. ಶಿವಪ್ರಕಾಶ್**
ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ,
ನವದೆಹಲಿ
೧೮-೧೦-೨೦೦೬

## ಶಿವಾಪುರ

## ಒಂದು

ಎಚ್ಚರವಾದಾಗ ತಾನೆಲ್ಲಿದ್ದೇನೆಂದು ಚೆನ್ನಮುತ್ತನಿಗೆ ತಿಳಿಯಲಿಲ್ಲ. ಮನಸ್ಸಿನಲ್ಲಿ ಒಂದು ಸಣ್ಣ ಭಾವನೆ ಕೂಡ ಇರಲಿಲ್ಲ. 'ಇದೇನಿದು ಮರೆವಿನ ಸ್ಥಿತಿ?' ಎಂದು ಕಣ್ಣಗಲಿಸಿ ನೋಡಿದ. ಈಗಲೂ ಬೆಳಕು ಮಂದವಾಗಿ ಹಾಗೇ ಇತ್ತು. ಸ್ವಲ್ಪ ಹೊತ್ತು ಹಾಗೇ ಇದ್ದ.

ಬಂಗಾರ ಬಣ್ಣದ ಬೆಳಕಿನ ಕೋಲೊಂದು ಮ್ಯಾಲಿನಿಂದಿಳಿದು ತನ್ನ ಕಾಲಡಿ ನೆಲದ ಮ್ಯಾಲೆ ಚಿತ್ತಾರ ಬರೆದದ್ದು ಕಂಡಿತು. ಹಗಲು ಹೊತ್ತೆಂದು ಖಾತ್ರಿಯಾಗಿ ಸುತ್ತ ನೋಡಿದ. ಅದೊಂದು ಸುಮಾರು ನೂರು ಜನ ಕೂರುವಷ್ಟು ವಿಶಾಲವಾದ ಮಂಟಪ. ಗೋಡೆಗಳಿಗೆ ಮದ್ದಳೆ, ಡೊಳ್ಳು, ದುಡಿಗಳನ್ನು ತೂಗುಹಾಕಿದ್ದರು. ಗೋಡೆಯ ಮೇಲೆ ತರುಮರ, ಪ್ರಾಣಿ ಪಕ್ಷಿ, ಸೂರ್ಯ ಚಂದ್ರ, ಬೇಟೆಗಾರರು; ಹುಡುಗ ಹುಡಿಗಿಯರು ಕುಣಿಯುವ ರೇಖಾ ಚಿತ್ರಗಳಿದ್ದವು. ಹೊರಗೆ ಗಾಳಿ ಮರಗಳಲ್ಲಿ ಮಾಡುವ ಮರ್ಮರ ಕೂಡ ಕೇಳಿಸುತ್ತಿತ್ತು. ತನ್ನ ತಲೆಯ ಕಡೆಗೊಂದು ಬೆಂಕಿಯ ಕೊಂಡವಿತ್ತು. ಕೊಂಡದಲ್ಲಿನ್ನೂ ಬೆಂಕಿಯಿದ್ದು ಮೆಲ್ಲಗೆ ಏಳುತ್ತಿದ್ದ ತೆಳುವಾದ ಹೊಗೆಯೊಂದಿಗೆ ಸೂರ್ಯನ ಕೋಲುಕಿರಣಗಳು ಆಟ ಆಡುತ್ತಿದ್ದವು. ಅದರಾಚೆ ಕಟ್ಟಡದ ಬೆನ್ನು ಹುರಿಯಂತೆ ಏಣಿಯಿದ್ದು ಅದರ ತುದಿಗೊಂದು ಅಟ್ಟವಿತ್ತು. ಅಟ್ಟದ ಮ್ಯಾಲೆ ದೇವಾನುದೇವತೆಗಳ ಮರದ ಮುಖವಾಡಗಳು. ಇನ್ನಷ್ಟು ಚರ್ಮವಾದ್ಯಗಳನ್ನು ನೇತು ಹಾಕಿದ್ದರು. ಎಡಬಲ ಬೆಳಕಿಂಡಿಗಳಿಂದಲೇ ಗಾಳಿ ಬರಬೇಕು. ಮಂಟಪದ ತುದಿಯ ಛಾವಣಿ ಆಕಾಶವನ್ನಿರಿಯುವಂತೆ ಉದ್ದಕ್ಕೆ ಮ್ಯಾಲೆ ಹೋಗಿ ಕೊನೆಯಲ್ಲಿ ಮೊನೆಯಾಗಿತ್ತು. ಇಂಥ ಮಂಟಪಗಳ ಪರಿಚಯ ಚೆನ್ನಮುತ್ತನಿಗೆ ಹೊಸದಲ್ಲ. ತಮ್ಮ ಹಟ್ಟಿಯಲ್ಲೂ ಇಂಥದೊಂದು ಮಂಟಪವಿತ್ತು. ಆದರಿದನ್ನು ಹೆಚ್ಚು ಭದ್ರವಾದ, ಹೆಚ್ಚು ಅಚ್ಚುಕಟ್ಟಾದ ಭಾರೀ ತೊಲೆಗಳಿಂದ ಮಾಡಿದ್ದರು. ಬಹಳ ಹಳೆಯ

ಮಂಟಪವೆಂದು ಅದಕ್ಕುಪಯೋಗಿಸಿದ ತೊಲೆ ಮತ್ತು ಜಂತಿಗಳಿಂದ ತಿಳಿಯುತ್ತಿತ್ತು. ಬೇರೇನೂ ಕಾಣಲಿಲ್ಲ. ತಾನು ಇಲ್ಲಿಗೆ ಹ್ಯಾಗೆ ಬಂದೆನೆಂದು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ.

ಬರೀ ಹಳವಂಡಗಳೇ ಕಂಡವು. ದರೋಡೆಗೊಳಗಾದವನ, ಸೋತವನ ಅವಮಾನಗಳ ನೆನಪಾಗಿ ಮುಖ ಬಿಳಿಚಿ ತುಟಿ ನಡುಗಿದವು. ಕಳೆಗುಂದಿದ ಕಣ್ಣುಗಳ ಮ್ಯಾಲೆ ಹುಬ್ಬು ಗಂಟಿಕ್ಕಿಕೊಂಡವು. ಗಟ್ಟಿಯಾಗಿ ಎರಡು ಸಾರಿ ನಿಟ್ಟುಸಿರು ಬಿಟ್ಟ. ಹಳವಂಡಗಳು ಬಿಡಲಿಲ್ಲ; ಬಿಸಿ ಉಸಿರಿನಲ್ಲಿ ಹುರಿದ ಅರಳಿನಂತೆ ಸಿಡಿಯತೊಡಗಿದವು : ಮಹಾನುಭಾವನನ್ನ ತಾನು ಅಮಾನುಷವಾಗಿ ಹೊಡೆದದ್ದು, ಕಣ್ಣು ಕಳಚಿಬಿದ್ದು ಆತ ದೆವ್ವಿನ ಹಾಗೆ ವಿಕಾರವಾಗಿ ಕಿರುಚುತ್ತ ಹಾರಾಡಿದ್ದು, ಅದಾಗಿ ದಿಕ್ಕಿಲ್ಲದೆ ಎಲ್ಲೆಲ್ಲೊ ಮೂರು ವರ್ಷ ಅಲೆದಾಡಿದ್ದು, ಆತ್ಮಹತ್ಯೆಗಾಗಿ ತಾನು ಕಮರಿಗೆ ಹಾರಿದ್ದು ನೆನಪಾಗಿ ಉಳಿದದ್ದನ್ನು ಊಹಿಸಿ ತಿಳಿದುಕೊಂಡು 'ಅಯ್ಯೋ' ಎಂದು ಸಣ್ಣದಾಗಿ ನರಳಿದ. ಅಷ್ಟರಲ್ಲಿ ಯಾರೋ ಬರುವ ಸದ್ದಾಗಿ, ನರಳಿದ್ದಕ್ಕೆ ನಾಚಿಕೆಯಾಗಿ ಗಪ್ಪನೆ ಕಣ್ಣು ಮುಚ್ಚಿದ.

ಬಹಳ ಹೊತ್ತು ಹಾಗೇ ಇದ್ದ, ಒಳಕ್ಕೆ ಯಾರೂ ಬಂದಿಲ್ಲವೆಂದು ಮೆಲ್ಲನೆ ಕಣ್ತೆರೆದ. ಕಾಲ್ದೆಸೆಗೊಬ್ಬ ಹುಡುಗಿ ಕುಂತಿದ್ದಳು. ಕೂಡಲೇ ಏಳಲಿಕ್ಕೆ ನೋಡಿದ. ಬೆನ್ನುಹುರಿ ಹರಿದಂತೆ ನೋವಾಗಿ ಏಳುವುದು ಅಸಾಧ್ಯವೆನ್ನಿಸಿ ಮತ್ತೆ ಹಾಗೇ ಒರಗಿದ.

ಹುಡುಗಿ ತನ್ನನ್ನೇ ನೋಡುತ್ತ ಕುಂತಿದ್ದಳು. ಇವನ ಮುಖದಲ್ಲಿಯ ನೋವು ನೋಡಿ ನೆಲುವಿನ ಮ್ಯಾಲಿದ್ದ ಮಡಕೆಯಿಂದ ಹಸಿರು ರಸ ತಂದು ಮೊಳಕಾಲಿನ ಗಾಯಕ್ಕೆ ಮೆಲ್ಲಗೆ ಸವರುತ್ತ ಕುಂತಳು. ಕೆಂಪಗೆ ತೊಳೆದ ತಾಮ್ರದ ಪಾತ್ರೆಯ ಹಾಗೆ ಮುಖವುಳ್ಳ ಆ ಹುಡುಗಿಯ ಇಡೀ ಚಹರೆ ಕಾಂತಿಯುತವಾಗಿತ್ತು. ಹಸಿರಿಗೆ ಜೋತುಬಿದ್ದ ಹಣ್ಣು ಎಳೆ ಬಿಸಿಲಿನಲ್ಲಿ ಹೊಳೆಯುವಂತೆ ಅವಳ ಮುಖದ ಕಾಂತಿ ಸ್ವಚ್ಛವಾಗಿತ್ತು. ಈತ ಎಚ್ಚರಗೊಂಡುದರಿಂದ ಅವಳಿಗೆ ಸಂತೋಷವಾಗಿತ್ತೆಂದು ಅವಳ ಮುಖದಿಂದಲೇ ತಿಳಿಯುತ್ತಿತ್ತು. ಕಣ್ಣುಗಳಲ್ಲಿ ಮುಗ್ಧ ಆನಂದದ ಬೆಳಕಾಡುತ್ತಿತ್ತು. ಚಿಕ್ಕ ಗಿಣಿಮೂಗು, ಪುಟ್ಟ ಬಾಯಿ, ಕತ್ತಿನ ತುಂಬ ಹಿಡಿ ಹಿಡಿ ಕರಿಮಣಿ ಸರದ, ಎದೆಯಿಂದ ಕೆಳಗುಟ್ಟ ದಟ್ಟಿಯ ಹುಡುಗಿ ಎಲಡಿಕೆ ಹಾಕಿದ್ದಳಾಗಿ ಒಂದು ಕಡೆ ಗಲ್ಲ ಉಬ್ಬಿ ಕೆಂಪು ಜೊಲ್ಲು ಬಾಯಿ ತುಂಬಿ ತುಟಿಗಳ ಅಂಚಿನಲ್ಲಿ ತುಳುಕಿ ಸೋರುತ್ತಿತ್ತು.

"ಯಾವ ಹಟ್ಟಿಯಾಯ್ತು ನಿಂದು?"

ಮಾತಾಡಲಿಕ್ಕೆ ನೋಡಿದ, ಬೆನ್ನು ನೋಯುವಂತೆನಿಸಿ ಸುಮ್ಮನಾದ.

"ಕಾಡಿಗೆ ಹೊಸಬನ?"

ಹಾಗೇ ಹೌದೆಂದು ಕತ್ತು ಹಾಕಿದ.

"ಕಮರಿಗೆ ಬಿದ್ದುಕೊಂಡೆಯಲ್ಲಾ, ಕಣ್ಣು ಕಾಣಿಸಲಿಲ್ಲವೇನಪ್ಪಾ?"

ಎನ್ನುತ್ತ ಈತನ ದಡ್ಡತನಕ್ಕೆ ಕಿಲಕಿಲ ನಕ್ಕುಬಿಟ್ಟಳು. ಹುಡುಗಿಯ ಹಲ್ಲು, ತಿಂದ ವೀಳ್ಯದಿಂದಾಗಿ ದಾಳಿಂಬೆ ಬೀಜದಂತೆ ಚಂದಾಗಿ ಹೊಳೆದವು.

"ಕಾಡು ಅಂದರೆ ಹಂಗೇನೇ! ಹೊಸಬರನ್ನ ಕಂಡರೆ ಭಾರೀ ಕುಸಿ ಅದಕ್ಕೆ. ಥರಾವರಿ ಹಸಿರು ತೋರಿಸಿ ಕೈಮಾಡಿ ಕರೀತೈತಿ, ಬೇಕಾದರೆ ಹಾಂಗೆ ಹೀಂಗೆ ಒನೆದಾಡಿ ಪರುಮಳ ಬರೋಹಂಗೆ ಹೂಸತೈತಿ. ನೀ ಏನಾರ ಎಲಾ ಶಿವನೆ, ಎಂಥಾ ಪರುಮಳದ ಹೂವಿದು! ಅಂತ ಹೋದೆ ಅನ್ನು, ಬಾ ಅಂತ ಪಾತಾಳಕ್ಕೇ ಸೆಳೀತೈತಿ! ಬಲು ಮೋಸಗಾರ್ತಿ ಈ ಕಾಡು!"

ಅವಳು ಬಳಸಿದ ಕೆಲವು ಶಬ್ದಗಳ ಬಗ್ಗೆ ಇವನಿಗೆ ಅಸಮಾಧಾನವಾದರೂ ಅವಳ ಮಾತಿಗೆ ಒಟ್ಟಾರೆಯಾಗಿ ಮನಸ್ಸು ಅರಳಿತು. ಕಂಚು ಬಾರಿಸಿದಂಥ ಅವಳ ದನಿ, ಪ್ರತಿಯೊಂದು ಶಬ್ದ ತನ್ನ ಆಕಾರಕ್ಕೆ ತಕ್ಕಂತೆ ಅವಳ ತುಟಿ ಮತ್ತು ಕಣ್ಣುಗಳನ್ನು ಹಿರಿದು ಕಿರಿದುಗೊಳಿಸಿ ಬೆಳಕನ್ನು ಪ್ರತಿಫಲಿಸುವ ರೀತಿ, ಎದುರಿಗೆ ಕಮರಿ ಇದೆಯೆಂದೂ ತಿಳಿಯದ ದಡ್ಡನೆಂದು ತನ್ನ ಬಗೆಗಿನ ಮರುಕದಿಂದ ಮೋಜು ತಗಂಬ ಪರಿ - ಇವೆಲ್ಲಕ್ಕಿಂತ ಹೆಚ್ಚಾಗಿ ತಾನು ಈತನಕ ಕೇಳಿಲ್ಲದ ಮಾತಿನ ಧಾಟಿಗಳಿಂದ ಚೆನ್ನಮುತ್ತ ಮುದಗೊಂಡ. ಎಳೆಮನದ ಸರಳೆಯೆಂದು ಅವಳ ಕೆಂಪು ನಗೆಯನ್ನೇ ನೆನೆಯುತ್ತ ಕೂತ. ಅವಳು ಯಾವಾಗಲೋ ಹೋಗಿದ್ದಳು.

ಆಮೇಲೆ ಕತ್ತಲಾಗಿ ಮಂಟಪದ ಒಳಗೊಂದು ಉರಿವ ಸೊಡರು ತಂದಿಟ್ಟಳು. ಎಷ್ಟು ಸಮಯ ಕಳೆದರೂ ತಿರುಗಾಮುರುಗಾ ಆ ಹುಡುಗಿಯೊಂದೇ ಒಳಗೆ ಹೊರಗೆ ಸುಳಿದಳೇ ವಿನಾ ಇನ್ನಾರೂ ಅಲ್ಲಿಗೆ ಬರಲಿಲ್ಲ. ಬಹಳ ಸಮಯ ಕಳೆದ ಮೇಲೆ ಅವಳೇ ಒಂದು ಪರಿಯಾಣದಲ್ಲಿ ಗಂಜಿ ತಂದು ಚೆನ್ನಮುತ್ತನನ್ನು ಎಬ್ಬಿಸಿ, ಕುಡಿಸಿ ಮಲಗಿಸಿದಳು.

ನಿದ್ದೆಯಲ್ಲಿದ್ದಷ್ಟು ಹೊತ್ತು ತನಗಾಗದ ಯಾರಿಗೋ ಹಿಂಸೆ ಮಾಡಿದ ಹಾಗೆ, ಅವರು ತನಗೆ ಪ್ರತಿಹಿಂಸೆ ಮಾಡಿದ ಹಾಗೆ ಕನಸು ಕಾಣುತ್ತಿದ್ದ. ತಮ್ಮಿಬ್ಬರಲ್ಲಿ ಯಾರು ಹೆಚ್ಚು ನೊಂದರೆಂದು ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದಾಗ ಹುಡುಗಿಯ ದನಿ ಕೇಳಿ ಎಚ್ಚರವಾಯಿತು.

“ಹೋಗಪ್ಪಾ ಹೋಗು, ಅವನೇ ಬೆನ್ನುಮೂಳೆ ಮುರಿದುಕೊಂಡು ಬಿದ್ದಾನ. ಸಾಲದು ಅಂತ ಇವಯ್ಯ ಬಂದ ದೊಡ್ಡ ಮನುಷ್ಯ! ಹೋಗೋ ಮೂಳಾ!”

ಎಂದು ಯಾರಿಗೋ ಗದರುತ್ತಾ ಒಳಗೆ ಬಂದಳು. ಚೆನ್ನಮುತ್ತ ಮಲಗಿರುವುದನ್ನು ನೋಡಿ ಮತ್ತೆ ಹೊರಗೆ ಹೋದಳು.

ಈಗ ಮತ್ತೆ ಹಳೆಯ ಹಳವಂಡಗಳು ಕಾಡತೊಡಗಿದವು. ಮಹಾನುಭಾವ ಸತ್ತು ಹೋದದ್ದು, ಹಟ್ಟಿಯಲ್ಲಿ ತನ್ನ ತಂದೆ ಅಧಿಕಾರ ದಂಡವ ಅಬ್ಬೆಯ ಕೈಗಿತ್ತು ಸತ್ತಿದ್ದು, ಚಂದಮುತ್ತ ಕಲ್ಲಾದದ್ದು-ಎಲ್ಲ ನೆನಪಾದವು. ತಾನು ಸತ್ತೆನೆಂದು ತಂದೆ ನಂಬಿದ್ದೇ ಒಳ್ಳೆಯದಾಯಿತು. ಇಲ್ಲದಿದ್ದರೆ ಇಷ್ಟಕ್ಕೆಲ್ಲ ಕಾರಣನಾಗಿ ಯಾವ ಮುಖ ಹೊತ್ತು ಹಟ್ಟಿಗೆ ಹೋಗುವುದು? ಸೋಲಿನ ನೆನಪುಗಳಿಂದ ಮುಕ್ತವಾದ ಹೊಸತೊಂದು ಪ್ರಾರಂಭ ತನ್ನ ಬದುಕಿಗೆ ಬೇಕೆನಿಸಿತು. ಗತಿಸಿದ ತನ್ನ ಬದುಕಿನ ಬಗ್ಗೆ ಹೇಸಿಕೆಯಾಯಿತು. ಈ ಹಟ್ಟಿಯಲ್ಲಿ ಆಳಾಗಿ ದುಡಿದರೂ ಸೈ; ತನ್ನ ಹಟ್ಟಿಗಂತೂ ವಾಪಾಸಾಗುವುದು ಬೇಡವೆಂದು ಜೀವ ಗಟ್ಟಿ ಮಾಡಿದ. ಹಾಗಿದ್ದರೆ ಇಲ್ಲಿದ್ದೇನು ಮಾಡುವುದು?

ಮುಂಜಾನೆ ಸೂರ್ಯೋದಯವಾದ ಮೇಲೆಯೇ ಅವಳ ದರ್ಶನವಾಯಿತು. ಬಿಸಿಗಂಜಿ ತಂದಿದ್ದಳು. ಕುಡಿಸಿ ಮದ್ದರೆದು ಬೆನ್ನಿಗೂ ಮೊಳಕಾಲಿಗೂ ಸವರಿದಳು. ಈಗ ಚೆನ್ನಮುತ್ತ ಕೂರುವಂತಾಗಿದ್ದ. ಮೆಲ್ಲಗೆ “ಹುಡುಗೀ” ಅಂದ. ಆಕೆ ತಕ್ಷಣವೇ ತಿರುಗಿ ಯಾರು ಕರೆದರೆಂದು ನೋಡಿದಳು.

“ನಿನ್ನ ಹೆಸರೇನು”

“ಬೆಳ್ಳಿ ಅನ್ನು”

“ಬೆಳ್ಳಿ, ರಾತ್ರಿ ನೀನು ಯಾರೊಂದಿಗೋ ಮಾತಾಡಿದೆಯಲ್ಲ, ಇವನೇ ಬೆನ್ನುಮೂಳೆ ಮುರಿದು ಬಿದ್ದಿದ್ದಾನೆ, ಇವನು ಬೇರೆ ಬಂದ ದೊಡ್ಡ ಮನುಷ್ಯ! ಅಂತ. ಯಾರದು?”

“ಓ ಅದಾ? ಹುಳಾ ಬಂದಿತ್ತು ಕಣಪ್ಪ. ಹೊಸಬರ್ನ ಕಂಡರೆ ಭಾರೀ ಕುಸಿ ಅದಕ್ಕೆ. ಮೂಗು ಬಲೆ ಚುರುಕು. ವಾಸನೆಯಿಂದಲೇ ನೀನಿಲ್ಲಿರೋದು ಗೊತ್ತಾಗಿ, ನೋಡೋವಾ ಒಂದಪ ಹೊಸನಾತ! ಅಂತ ಬಂದಿತ್ತು. ಹೇಗೋ ಮೂಳಾ ಅಂತ ಬೈದೆ ನೋಡು, ಹೊಂಟೋಯ್ತು!”

“ನಿನ್ನ ಮಾತು ಕೇಳಿ ಹೊಂಟೋಯ್ತು?”

“ಹೊಂಟೋಗದಿದ್ದರ ಬಿಡ್ತೀನ ನಾನು?”

ರಾತ್ರಿ ಹುಳಾ (ಹಾವು) ಬಂದದ್ದು, ಇವಳಿಗೆ ತಿಳಿದದ್ದು, ಅದರೊಂದಿಗೆ ಇವಳು ಮನುಷ್ಯನೆಂಬಂತೆ ಮಾತಾಡಿದ್ದು, ಇವಳ ಮಾತು ಕೇಳಿ ಅದು ಹೊರಟು ಹೋದದ್ದು ಕೇಳಿ ಆಶ್ಚರ್ಯವಾಯಿತು. “ಅದು ಯಾವ ಜಾತಿ ಹಾವು?” ಅಂತ ಕೇಳಬೇಕೆಂದಾಗ ಜಟ್ಟಿಗ ಬಂದ.

ಮೊಳಕಾಲಿನ ಚಿಪ್ಪು ತಾನು ಅಂದಾಜು ಮಾಡಿದ್ದಕ್ಕಿಂತ ಹೆಚ್ಚು ಬೇಗ ಕೂಡಿಕೊಂಡದ್ದನ್ನು ನೋಡಿ ಜಟ್ಟಿಗನಿಗೆ ಸಂತೋಷ ಮತ್ತು ಆಶ್ಚರ್ಯವಾಯಿತು. ಸಮಾಧಾನದಿಂದ ಬೆನ್ನುತಟ್ಟುತ್ತ, “ಯಾವ ಹಟ್ಟಿಯಾಯ್ತು?” ಅಂದ. ಬಾಯ್ಗೆ ಬಂದ ಮಾತನ್ನು ತುಟಿಯಿಂದ ತಡೆಹಿಡಿದು ಚೆನ್ನಮುತ್ತ ಗೊತ್ತಿಲ್ಲವೆಂಬಂತೆ ಕತ್ತಲುಗಿದ.

“ಜನ ಕೂಗುವ ಹೆಸರೇನು?”

ಒಂದು ಕ್ಷಣ ತಬ್ಬಿಬ್ಬಾಗಿ ತಕ್ಷಣ ಸುಧಾರಿಸಿಕೊಂಡು,

“ಜಯಸೂರ್ಯ”

ಅಂದ! ಬದಲಿ ಹೆಸರು ಹೇಳಿದ್ದಕ್ಕೆ ತನ್ನ ಬಗ್ಗೆ ತನಗೇ ಆಶ್ಚರ್ಯವಾಯ್ತು. ತಾನು ಹೇಳಿದ್ದನ್ನು ಇವರು ನಂಬಲಿಲ್ಲವೆಂದು ಭಯ ಮತ್ತು ನಾಚಿಕೆಯಾಗಿ ಮಳ ಮಳ ಅವರ ಮುಖಗಳನ್ನೇ ನೋಡಿದ. ಈಯಪ್ಪ ನಾಡಿನವನೇ ಇರಬೇಕು. ಇಲ್ಲದಿದ್ದರೆ ಈಟೊಂದು ಚಂದ ಹೆಸರು ಇರುತ್ತಿತ್ತೇ ಅಂದುಕೊಂಡು “ಜಯಸೂರ್ಯ!” ಎಂದು ರಾಗವಾಗಿ ಎಳೆದು ಉರುಹೊಡೆದಳು ಬೆಳ್ಳಿ!

ಅವರು ಹೋದಮೇಲೆ ಚೆನ್ನಮುತ್ತನಿಗೆ ತನ್ನ ಹೊಸ ಹೆಸರು ಜಯಸೂರ್ಯ ಎಂದು ಹೊಳೆದುದಕ್ಕೆ ಸಮಾಧಾನವೇ ಆಯಿತು. ಮುಖಮರೆಸಿಕೊಂಡಿರಲಿಕ್ಕೆ ಸಧ್ಯ ಒಳ್ಳೆಯ ಹೆಸರೇ ಸಿಕ್ಕಿತೆಂದು ಮೋಜುಗೊಂಡ. ಜಟ್ಟಿಗ ಮತ್ತು ಬೆಳ್ಳಿ ತನ್ನ ಸುಳ್ಳನ್ನು ನಂಬಿದರೆಂದೂ ನಂಬಿದ. ಆ ರಾತ್ರಿ ಕನಸಾಯಿತು:

ಕಾಡಿನ ಒಂದು ಬಂಡೆಯ ಮೇಲೆ ಕೂತಿದ್ದಾಗ ಒಬ್ಬ ಪುಟ್ಟ ಬಾಲಕ, ಕಂಟಿಯ ಮರೆಯಲ್ಲಿ ಅಡಗಿದ್ದವ ಇವನ ಕಂಡೊಡನೆ ನಗುತ್ತ ಹೊರಬಂದ. ಇವನ ಕೈ ಹಿಡಿದು ಎಳೆದುಕೊಂಡು ಮುಂದೆ ಓಡತೊಡಗಿದ. ‘ಎಲ್ಲಿಗೆ?’ ಅಂದ. ಹುಡುಗ ಈಗಲೂ ನಗುತ್ತ ಓಡುತ್ತಿದ್ದ. ಬರಬರುತ್ತ ಹುಡುಗನ ತಲೆಯ ಮೇಲೆ ಹೊಳಪುಳ್ಳ ಕಿರೀಟವಾಯಿತು. ಹುಡುಗ ಮಾತ್ರ ಕಪ್ಪು ಬಣ್ಣಕ್ಕೆ ತಿರುಗಿದ್ದ. ನಕ್ಕಾಗ ಕರಿಯ ಮುಖದಲ್ಲಿ ಬಿಳಿಯ ಹಲ್ಲಿನ ಸಾಲು ಫಳ್ಳನೆ ಹೊಳೆದವು. “ನಿನ್ನ ಹೆಸರೇನು ಬಾಲಕಾ?” ಅಂದ. ಹುಡುಗ ಹಾಗೇ ನಗುತ್ತ, “ಚೆನ್ನಮುತ್ತ!” ಅಂದ!.

ತಕ್ಷಣ ಎಚ್ಚರವಾಯಿತು. ಚೆನ್ನಮುತ್ತ ಬೆವರಿದ್ದ. ಕನಸಿನ ಭಾಷೆ ತನ್ನದಲ್ಲವೆಂದು ಆ ಯೋಚನೆಯನ್ನೇ ಬಿಡಬೇಕೆಂದ. ಸಾಧ್ಯವಾಗಲಿಲ್ಲ. ಅವನು ಹಾಗೇ ಇರಲಿ. ಓದುಗರಿಗೆ ಗೊಂದಲವಾಗದಿರಲೆಂದು ಎರಡರ ಬದಲು ಒಂದೇ ಹೆಸರಿಟ್ಟುಕೊಂಡು ಚೆನ್ನಮುತ್ತನನ್ನು ಇನ್ನುಮುಂದೆ ನಾವೂ ಜಯಸೂರ್ಯನೆಂದೇ ಕರೆಯುತ್ತೇವೆ; ಗಮನಿಸಿರಿ.

ಹಟ್ಟಿಗೆ ಹೊಸಬರನ್ನು ಕರೆತಂದ ಮೇಲೆ ಅಮ್ಮನಿಗೆ ಈ ಸುದ್ದಿ ಹೇಳಬೇಕಲ್ಲ. ಮೂರನೇ ಬೆಳಗ್ಗೆಯೇ ಜಟ್ಟಿಗ ಬೆಟ್ಟ ಹತ್ತಿ ಅಮ್ಮನ ಗವಿ ಹೊಕ್ಕು, ಮಧ್ಯದ ಕೊಂಡದ ಮುಂದೆ ಬೆಂಕಿ ಕಾಯಿಸುತ್ತ ಕೂತಿದ್ದ ಶಿವಪಾದನ ಪಾದವ ಪಡಕೊಂಡು ಹೇಳಿದ:

“ನಮ್ಮ ಸೀಮೆಯಾಚೆಯ ಕಮರಿಯಲ್ಲಿ ಒಬ್ಬ ಹುಡುಗ ನರಳುತ್ತ ಬಿದ್ದಿದ್ದ, ಇನ್ನೂ ಬದುಕುವ ಆಸೆ ಇದ್ದುದರಿಂದ ಹೊತ್ತುಕೊಂಬಂದು ಮಂಟಪದಲ್ಲಿ ಇಟ್ಟಿದೀನಿ. ಮುಂದಿನದು ಅಮ್ಮನ ಚಿತ್ತ”

ನಿರೀಕ್ಷೆಯಂತೆ ಶಿವಪಾದ ‘ಯಾರು? ಏನು ? ಏತ್ತ?’ ಕೇಳಲಿಲ್ಲ. ಸುದ್ದಿ ಆಗಲೇ ಗೊತ್ತಾಗಿದ್ದಂತೆ ಮ್ಯಾಲೆ ಕೆಳಗೆ ಕತ್ತು ಹಾಕುತ್ತಾ, ಎರಡೂ ಕೈಗಳನ್ನ ಬೆಂಕಿಯ ಮುಂದೆ ಊರಿ, ಹುಬ್ಬು ಮುರಿದು, ಹರಿತವಾದ ನೋಟವನ್ನ ಗವಿಯ ಕಿಂಡಿಯ ಕಡೆಗೆ ನೆಟ್ಟ. ಕಿಂಡಿಯಲ್ಲಿ ಕಣ್ಣಿದ್ದರೂ ನೋಟ ಅದರಾಚೆಯದೇನನ್ನೋ ನೋಡುತ್ತಿರುವುದು ಸ್ಪಷ್ಟವಿತ್ತು. ಕಾಣುತ್ತಿರುವುದು ಸುಖಮಯವಾಗಿರಲಿಲ್ಲವೆಂದು ತೋರುತ್ತದೆ, ಮುಖ ಗಂಭೀರವಾಗಿತ್ತು. ತುಸು ಹೊತ್ತು ಹಾಗೇ ಇದ್ದ. ಆಮೇಲೆ ಸಂಚಾರದಲ್ಲಿದ್ದ ಮನಸ್ಸು ಹಿಂದಿರುಗಿ ಬಂದುದನ್ನು ಸೂಚಿಸುವಂತೆ ಮುಖದ ಮ್ಯಾಲೆ ಸಮಾಧಾನ ನೆಲೆಯೂರಿತು. ಈ ತನಕ ಹೊಗೆಯಾಡುತ್ತಿದ್ದ ಕೊರಡಿಗೆ ಉರಿ ಹತ್ತಿ ಜ್ವಾಲೆಗಳು ಮ್ಯಾಲೆದ್ದು ಒಲೆದಾಡಿದವು. ಅವುಗಳಾಚೆ ಇದ್ದ ಜಟ್ಟಿಗ ಜ್ವಾಲೆಯ ಒಲೆದಾಟಕ್ಕೆ ಗಡಗಡ ನಡುಗಿದ ಹಾಗೆ ಕಂಡ.

ಬಹಳ ಹೊತ್ತು ಶಿವಪಾದ ಕತ್ತು ಹಾಕಿದನೇ ವಿನಾ ಮಾತಾಡಲಿಲ್ಲ. ಜಟ್ಟಿಗನೂ ಟಕಮಕ ಶಿವಪಾದನ ಮುಖವನ್ನೇ ನೋಡುತ್ತ, ಏನಪ್ಪಣೆ ಕಾದಿದೆಯೋ ಎಂದು ಆತಂಕದಿಂದ ಕೂತ. ಕೊನೆಗೂ ಹಿತಮಿತವಾಗಿ ನಕ್ಕು ನುಡಿದ:

“ಲಲಾಟ ಲಿಖಿತವ ಪಲ್ಲಟ ಮಾಡಲುಂಟೆ ಮಗನೆ? ಒಳ್ಳೆಯ ಕೆಲಸ ಮಾಡಿದ್ದೀಯ, ನೆನೆಯಬೇಕಾದವನು ಅವನು. ನೆನೆಯದಿದ್ದರೆ ಅದು ಅವನ ಕರ್ಮ. ಗುಣಪಡಿಸಿ ಅಟ್ಟು. ಮುಂದಿನದು ಅಮ್ಮನಿಚ್ಚೆ”

ಬದುಕಿದೆ ಅಂದುಕೊಂಡು ಜಟ್ಟಿಗ ಶಿವಪಾದನಿಗೂ ಅಮ್ಮನಿಗೂ ಅಡ್ಡಬಿದ್ದು ಹಿಂದುರುಗಿದ.

ಆದರೆ ಶಿವಪಾದನ ವಾಕ್ಯಗಳಲ್ಲಿ ಅನಿಷ್ಟ ಸೂಚನೆಯಿರುವುದನ್ನು ಸ್ಪಷ್ಟವಾಗಿಯೇ ಗುರುತಿಸಿದ ಜಟ್ಟಿಗನಿಗೆ ಸಂತೋಷವಾಗಲಿಲ್ಲ. ಗೂಡಿಗೆ ಬಂದು ಬೆಳ್ಳಿಯ ಕರೆದು ಅಮ್ಮನ ವಾಕ್ಯ ಹೇಳಿದ. ಇಬ್ಬರೂ ಬಹಳ ಹೊತ್ತು ಚಿಂತೆ ಮಾಡಿದರು. ಮಾಡುವಷ್ಟು ಚಿಂತೆಮಾಡಿ, ಅಮ್ಮನ ನೆನೆದು ಕಾಪಾಡಬೇಕಾದ ಜವಾಬ್ದಾರಿಯನ್ನೂ ಅವಳ ಮ್ಯಾಲೇ ಹೊರಿಸಿ ಕೆಲಸಕ್ಕೆ ತೊಡಗಿದರು.

## ಎರಡು

ಈಗ ಶಿವಾಪುರದ ಭೂಗೋಳದ ವಿವರಗಳನ್ನು ಹೇಳದಿದ್ದಲ್ಲಿ ನಿಮಗೆ ಗೊಂದಲವಾಗಬಹುದಾದ್ದರಿಂದ ಮೊದಲು ಅದನ್ನೇ ಹೇಳುತ್ತೇವೆ; ಕೇಳಿರಿ:

ಅಮ್ಮನ ಬೆಟ್ಟದ ತಳಕ್ಕಂಟಿ ಕರಿಕೆಯಂತೆ ಹಬ್ಬಿರುವ ಎರಡು ಸಾಲು ಮನೆ ಗುಡಿಸಲುಗಳ ಪುಟ್ಟ ಹಳ್ಳಿ ಶಿವಾಪುರ. ಒಂದು ಕಡಿಮೆ ನಲವತ್ತು ಮನೆ-ಗುಡಿಸಲುಗಳು ಒಂದು ಸಾಲಾಗಿ, ಸುಮಾರು ಅಷ್ಟೇ ಮನೆ-ಗುಡಿಸಲುಗಳಿಗಿರುವ ಇನ್ನೊಂದು ಸಾಲು ಮುಗಿಯುವಲ್ಲಿ ಒಂದು ಮಂಟಪವಿದೆ. ಎಲ್ಲ ಮನೆ ಗುಡಿಸಲುಗಳಿಗಿಂತ ಎತ್ತರ ಮತ್ತು ವಿಶಾಲವಾದ ಕಟ್ಟಡವೆಂದರೆ ಆ ಹಟ್ಟಿಗೆಲ್ಲ ಅದೊಂದೇ. ಜನ ಸಭೆ ಸೇರುವುದೂ ನ್ಯಾಯ ನಿರ್ಣಯ ಮಾಡುವುದೂ, ಕುಣಿತ, ಬಯಲಾಟ, ಸೋಗುಗಳ ತಾಲೀಮು ಮಾಡುವುದೂ ಅಲ್ಲಿಯೇ. ಹುಡುಗ ಹುಡುಗಿಯರು ಕೂಡುವ ಮುನ್ನ ಪಿಸುನುಡಿಯಲಿಕ್ಕೆ, ಹೊಳಪುಳ್ಳ ಕೆನ್ನೆಯ ಮಕ್ಕಳು ಹಾಡು ಕುಣಿತ ಕಲಿಯುತ್ತ ತಮ್ಮ ಹಸನಾದ ನಗೆಗಳನ್ನು ತುಂಬಲಿಕ್ಕೆ ಕಟ್ಟಿಸಿದ ಮಂಟಪ ಅದು. ಬೇರೆ ಹಟ್ಟಿಯವರು ಬಂದರೆ ತಂಗುವುದು, ವ್ಯವಹರಿಸುವುದು ಕೂಡ ಆ ಮಂಟಪದಲ್ಲಿಯೇ.

ಊರಿಂದ ಹೊರಕ್ಕೆ ಹೋಗುವುದಕ್ಕೂ, ಹೊರಗಿನಿಂದ ಬರುವುದಕ್ಕೂ ಇರುವುದು ಮಂಟಪದಿಂದ ಸುರುವಾಗಿ ಮೂಡುದಿಕ್ಕಿಗೆ ಹೋಗುವ, ಎಡಬಲ ಸಾಲು ಮನೆಗಳ ಮಧ್ಯೆ ಇರುವ ಈ ದಾರಿಯೊಂದೇ. ಪ್ರತಿ ನಿವಾಸಕ್ಕೊಂದು ಅಂಗಳ, ಹಿತ್ತಲವಿದ್ದು ಹಿತ್ತಲಲ್ಲಿ ತಮಗೆ ಅಗತ್ಯವಾದ ತರಕಾರಿ ಬೆಳೆಯುತ್ತಾರೆ. ಅದರ ಪಕ್ಕದಲ್ಲಿ ಒಂದು ಕೊಟ್ಟಿಗೆಯೂ ಇರುತ್ತದೆ. ಮುಂಜಾನೆ ದನಗಳನ್ನು

ಕಾಡಿಗಟ್ಟುವಾಗ, ಸಂಜೆ ಕಾಡಿನಿಂದ ದನ ಬರುವಾಗ ಸಣ್ಣದಾಗಿ ಗೋಧೂಳಿ ಎದ್ದು ಮತ್ತೆ ನೆಲ ಹಿಡಿದರೆ ಉಳಿದಂತೆ ಹಟ್ಟಿ ತಂಪಾಗಿ ನಿಸ್ತರಂಗ ಮಡುವಿನಂತಿರುತ್ತದೆ. ಆಗೀಗ ದೊಡ್ಡ ಗಾಳಿ ಬೀಸುವುದೂ ಇದೆ. ತುಸು ಧೂಳು ಬಿಳುವುದೂ ಇದೆ. ಆಗ ಒಂದೆರಡು ಹನಿ ಮಳೆ ಉದುರಿ ಹಸಿರನ್ನೂ ಮನಸ್ಸುಗಳನ್ನೂ ತೊಳೆದುಬಿಡುತ್ತದೆ.

ಶಿವಾಪುರದ ಜನ ಮಣ್ಣಿನಲ್ಲಿ ಹುಟ್ಟಿ ಮರಗಳ ಜೊತೆ ಬೆಳೆದವರು. ಬೇಸಾಯ, ಜೇನು ಮತ್ತು ಬೇಟೆಯಿಂದಲೇ ಬದುಕುವ, ಸಣ್ಣ ದೊಡ್ಡವರು ಸೇರಿ ಸುಮಾರು ಮುನ್ನೂರು ಜನರಿರುವ ಹಟ್ಟಿಯಿದು. ಇದರಂಥ ಇನ್ನೂ ಮೂವತ್ತೆಂಟು ಹಟ್ಟಿಗಳು ಸೇರಿ ಶಿವಾಪುರದ ಸೀಮೆಯಾಗುತ್ತದೆ. ಈ ಸೀಮೆಯ ಜನ ಸಪೂರ ನಿಲುವಿನ, ನೀಳ ಕೈಕಾಲುಳ್ಳ, ಗೋಧಿ ಬಣ್ಣದ ಮೈಕಾಂತಿಯುಳ್ಳವರು. ಗಂಡಸರಾದರೆ ಸೊಂಟಕ್ಕೊಂದು ಲಂಗೋಟಿ, ಬಗಲಿಗೊಂದು ಕಂಬಳಿ ಹೊದ್ದರಾಯ್ತು. ತಲೆಗೊಂದು ಅರಿವೆ ಸುತ್ತಿದ್ದರೆ ಹೆಚ್ಚಾಯಿತು. ಪರವೂರಿಗೆ ಹೊರಟಾಗ ಲಂಗೋಟಿಯ ಮ್ಯಾಲೊಂದು ಧೋತ್ರ ಉಡುತ್ತಾರೆ. ಹೆಂಗಸರಾದರೆ ಕಾಡಿನ ಗಿಡಮರಗಳು ಚಿತ್ರವತ್ತಾಗಿ ಮೈಪರಚಿದಂತಿರುವ ಹಚ್ಚೆಯ, ಬಿಗಿಯಾಗಿ ತಲೆಬಾಚಿ ಕಟ್ಟಿದ ತುರುಬಿನ, ಹಣೆ ತುಂಬ ಕುಂಕುಮದ ಕಾಡಿನ ಮರಗಳಂಥವರು. ಎದೆ ಮತ್ತು ಮೊಳಕಾಲು ಮುಚ್ಚುವಂತೆ ಸೀರೆ ಸುತ್ತಿಕೊಂಡು ಕತ್ತಿನ ತುಂಬ ಕರಿಮಣಿ ಸರಗಳನ್ನು ಹಾಕಿಕೊಂಡರೆ ಅವರಂಥ ಚೆಲುವೆಯರಿನ್ನಿಲ್ಲ. ತಮ್ಮ ಸ್ತ್ರೀಯರನ್ನು ನೋಡಿ ಬಳ್ಳಿಗಳೂ, ನವಿಲುಗಳೂ ನಾಚುತ್ತವೆಂದು ಹೇಳುವ ಹಾಡೊಂದು ಅವರಲ್ಲಿದೆ.

ಈ ಜನ ವಯಸ್ಸಾದವರಿಗೆ ಹೆಚ್ಚು ಗೌರವ ಕೊಡುವವರು. ಕೆಲಸದ ಬಗ್ಗೆ ಆದಮ್ಯ ಪ್ರೀತಿ ಇದ್ದವರು. ತಮ್ಮ ಕೆಲಸ ಮುಗಿದು ಖಾಲಿ ಕೂರುವಂತಾದರೆ ಇನ್ನೊಬ್ಬರಿಗೆ ಸಹಾಯ ಮಾಡಿಯಾದರೂ ಕೆಲಸದಲ್ಲಿ ತೊಡಗಿಸಿಕೊಂಬವರು. ಈ ಜನಗಳ ಹೃದಯದ ಮರ್ಮಸ್ಥಳವೆಂದರೆ ಅಮ್ಮ!

ಶಿವಾಪುರಕ್ಕಂಟಿ ಎತ್ತರವಾದ, ಬಂಡೆಯನ್ನೇ ಕೊರೆದಿಟ್ಟಂತೆ ಬೆಟ್ಟವಿದೆ. ಹಳ್ಳಿಯಲ್ಲಿ ನಿಂತು ಬೆಟ್ಟದ ತುದಿಯನ್ನು ನೋಡುವುದು ಸಾಧ್ಯವಿಲ್ಲ. ಮ್ಯಾಲೆ ನೋಡಿದರೆ ಹಿಂದೆ ಬಾಗಿದ ತಲೆ ನೆಲ ಮುಟ್ಟುತ್ತದೆ. ಮ್ಯಾಲಿಂದ ಕೆಳಕ್ಕೆ ನೋಡಿದರೆ ಭಯವಾಗುತ್ತದೆ. ಬೆಟ್ಟದಲ್ಲಿ ತರುಮರಗಳ ಜೊತೆಗೆ ದಟ್ಟವಾದ ಹುಲ್ಲು ಬೆಳೆದ ಕಾಡಿದೆ. ಪರಿಚಿತರು ಕೂಡ ದಾರಿ ತಪ್ಪುವಷ್ಟು ದಟ್ಟವಾಗಿ ಕಾಡುಹುಲ್ಲು ಬೆಳೆದಿರೋದರಿಂದ ಮೊದಮೊದಲು ಶಿವಪಾದ ಕೂಡ ಕೆಳಗಿನ ಹಟ್ಟಿಗೆ ಬರಬೇಕಾದರೆ ವಾಪಸಾಗುವಾಗ ದಾರಿಯ ಗುರುತಿರಲೆಂದು ಹುಲ್ಲುಹುಲ್ಲಿಗೆ ಗಂಟು ಹಾಕುತ್ತ ಇಳಿದು ಬರುತ್ತಿದ್ದ, ಹೋಗುವಾಗ ಗಂಟು ಬಿಚ್ಚುತ್ತ ಹೋಗುತ್ತಿದ್ದನಂತೆ!

ಬೆಟ್ಟದ ಎಡಗಡೆಯಿಂದ ಕೆಳಕ್ಕೆ ಧುಮುಕೋದೇ ನವಿಲುತೊರೆ. ಅದು ಧುಮುಕುವಲ್ಲಿ ಸುಂದರವಾದ ಮಡುವಿದೆ. ಮಡುವಿನಿಂದ ಹಳ್ಳವಾಗಿ, ಮುಂದೆ ಹೊಳೆಯಾಗಿ ಹರಿಯುವುದೇ ಘಟಪ್ರಭೆ. ಬೆಟ್ಟದ ಹಿನ್ನೆಲೆಯಿಂದಾಗಿ ಮಡುವು ಮಣ್ಣಿನ ಕೊಡದಂತೆ ಕಾಣುವುದರಿಂದ ನದಿಗೆ "ಘಟಪ್ರಭೆ" ಎಂದು ಹೆಸರು. ನೀರು ಧುಮುಕುವ ಪ್ರಾರಂಭದ ಎತ್ತರದಲ್ಲಿ ಒಂದು ಬಂಡೆ ಇದೆ. ಅದಕ್ಕೆ ಹೊಲೆಬಂಡೆ ಎನ್ನುತ್ತಾರೆ. ಮಳೆಗಾಲದಲ್ಲಿ ಬೆಟ್ಟದ ಮೇಲಿನ ನೆಲ ಕೊಚ್ಚಿ ಕೊರೆದು ರಭಸದಿಂದ ಹರಿದು ಹೊಲೆಬಂಡೆಯಿಂದ ಸುರಿದುಬಂದು ಮುಖ್ಯ ತೊರೆಗೆ ಸೇರುವುದರಿಂದ ಆ ಬಂಡೆಯಿರುವ ಸ್ಥಳದಿಂದ ನೀರು ಕೆಂಪಾಗಿರುತ್ತದೆ. ಅದಕ್ಕೆ ಈ ಜನ "ಹೊಳೆ ಮುಟ್ಟಾಗಿದೆ" ಎನ್ನುತ್ತಾರೆ. ಆ ಮೂರೂ ದಿನ ಜನ ಏನೂ ಕೆಲಸ ಮಾಡುವುದಿಲ್ಲ!

ಬೆಟ್ಟದ ಮ್ಯಾಲೊಂದು ಅಖಂಡ ಕಲ್ಲಿನಲ್ಲಾದ ಗವಿಯಿದೆ. ಅದನ್ನೇ ಜನ ಅಮ್ಮನ ಬೀಡು, ಗುಡಿಯೆಂದು ಹೇಳುತ್ತಾರೆ. ಹೊರಭಾಗದಲ್ಲಿ ಗವಿ ದೊಡ್ಡದು. ಗವಿಯೊಳಕ್ಕೆ ಹೆಜ್ಜೆ ಇಟ್ಟರೆ ಒಳಗಿನ ಕತ್ತಲೆ, ತಂಪು ಮತ್ತು ಘನವಾದ ಮೌನ ಒಮ್ಮೆಲೆ ಕಣ್ಣು, ಮೈ ಮನಸ್ಸಿಗೆ ಮೆತ್ತಿಕೊಂಡು ಬಿಡುತ್ತವೆ. ಹಾಗೇ ತುಸು ಹೊತ್ತು ನಿಂತರೆ ಅದರಾಳದ ಸ್ಥೂಲ ಪರಿಚಯವಾಗುತ್ತದೆ. ಮೆಲ್ಲಗೆ ಒಳಒಳಕ್ಕೆ ಆಳ ಆಳಕ್ಕೆ ಹೋದರೆ ಗವಿ ಚಿಕ್ಕದಾಗುತ್ತಿರುವುದು ಗೊತ್ತಾಗುತ್ತದೆ. ಗವಿ ಮುಗಿಯುವಲ್ಲಿ ಒಂದು ಕೆಂಪು ಕಲ್ಲಿದೆ. ಮಧ್ಯಾಹ್ನ ಹೋದರೆ ಗವಿಯ ನೆತ್ತಿಯ ಕಿಂಡಿಯಿಂದ ಬೆಳಕಿನ ಶಲಾಕೆಯಂತೆ ಬಿಸಿಲುಕೋಲು ನೇರ ಆ ಕಲ್ಲಿನ ಮೇಲೆ ಬೀಳುತ್ತದೆ. ಅದರ ಮೈತುಂಬ ದಟ್ಟವಾದ ಅರಿಷಿಣ ಕುಂಕುಮದ ಲೇಪವಿದೆ. ಅದರ ನೆತ್ತಿಯಡಿ ಕೆಂಪು ಮತ್ತು ಕಪ್ಪು ಬಣ್ಣದಲ್ಲಿ ಬರೆದ, ನೋಡಿದರೆ ಹೆದರಿಕೆಯಾಗುವ ಎರಡು

ಕಣ್ಣಿವೆ, ಸ್ವಲ್ಪ ಹೊತ್ತು ಹಾಗೇ ನೋಡಿದರೆ: ಮೊಳಕಾಲುಗಳ ಕೊಂಚ ಬಗ್ಗಿಸಿ ತೊಡೆ ಅಗಲಿಸಿ ನಿಂತು ಕೂಸಿಗೆ ಜನನ ನೀಡುತ್ತಿರುವ ಹೆಣ್ಣಿನ ಶಿಲ್ಪವಿದೆಂದು ತಿಳಿಯುತ್ತದೆ. ಇದೇ ಬೆಟ್ಟದ ಅಮ್ಮ !

ಆದರೆ ಗವಿಯೊಳಗೆ ಹಬ್ಬದ ದಿನವಲ್ಲದೆ ಬೇರೆ ದಿನಗಳಲ್ಲಿ ಹೆಂಗಸರಿಗೆ ಪ್ರವೇಶವಿಲ್ಲ. ಇದು ತಾಂತ್ರಿಕರ ದೇವತೆ. ಉಪಾಸಕರೆಲ್ಲ ತಾಂತ್ರಿಕರು. ಅವರು ಯಂತ್ರಮಂತ್ರಾದಿ ತಪಸ್ಸಾಧನೆಗಳಿಂದ ಎಷ್ಟೆಷ್ಟೋ ಸಿದ್ಧಿಗಳನ್ನ ಪಡೆದವರು. ಕೆಲವು ಸಿದ್ಧಿಗಳಂತೂ ಇಲ್ಲಿ ಸಾಧನೆ ಮಾಡಿದವರಿಗೆ ಮಾತ್ರ ಸಿದ್ಧಿಸುತ್ತವೆಂದೂ, ಇಲ್ಲಿಯ ಶಿವಪಾದನಿಗೆ ತಾಂತ್ರಿಕರ ಮೇಲೆ ವಿಶೇಷ ಅಧಿಕಾರವಿದೆಯೆಂದೂ, ಇವನ ಆಶೀರ್ವಾದ, ಸಮ್ಮತಿ ಇಲ್ಲದೆ ಕೆಲವು ಸಿದ್ಧಿಗಳ ಪ್ರಯೋಗ ಮಾಡುವಂತಿಲ್ಲವೆಂದೂ ತಾಂತ್ರಿಕರಲ್ಲಿ ಗುಪ್ತ ನಂಬಿಕೆಗಳಿವೆ. ಇವರ್ಯಾರೂ ದಾಂಧಲೆಯವರಲ್ಲ, ಎಲ್ಲಿಂದಲೋ ಯಾವಾಗಲೋ ಬಂದು ಶಿವಪಾದನ ಪಾದವ ಪಡೆದುಕೊಂಡು ಅವನು ಕೊಡುವ ಉಪದೇಶ, ಸಲಹೆ ಸೂಚನೆಯಿತ್ಯಾದಿ ಮಾರ್ಗದರ್ಶನ ಪಡೆದು ಮರೆಯಾದರಾಯ್ತು, ಅವರೆಂದೂ ಹಳ್ಳಿಯ ಗೋಜಿಗೆ ಬಂದವರಲ್ಲ.

ಶಿವಪಾದನ ದೇಹದಲ್ಲಿ ಸಾಕ್ಷಾತ್ ಶಿವನು ವಾಸ ಮಾಡುವನೆಂದೂ, ಆದ್ದರಿಂದಲೇ ಶಿವಪಾದ ನಡೆದರೆ ಒಂದು ಹೆಜ್ಜೆ ಮಾತ್ರ ಮೂಡಿ ಇನ್ನೊಂದು ಅದೃಶ್ಯವಾಗಿರುವುದೆಂದೂ ಆ ಅದೃಶ್ಯ ಹೆಜ್ಜೆ ಶಿವನದೆಂದೂ ಜನ ಹೇಳುತ್ತಾರೆ; ಅಂತೇ ನಂಬುತ್ತಾರೆ. ಶಿವಪಾದರು ಸಾಮಾನ್ಯವಾಗಿ ದೀರ್ಘಾಯುಷಿಗಳು, ಇಚ್ಛಾಮರಣಿಗಳು, ತಪಸ್ಸಿನಲ್ಲೆಂತೋ ಅಂತೆ ವೈದ್ಯದಲ್ಲೂ ಪರಿಣತರು. ಮನುಷ್ಯನನ್ನು ಚಿರಂಜೀವಿಯಾಗಿಸುವಷ್ಟು ವೈದ್ಯ ಗೊತ್ತಿದ್ದರೂ ಅವರ್ಯಾರೂ ಚಿರಂಜೀವಿಗಳಾಗಿಲ್ಲ. ತನ್ನ ಕಾಲ ಮುಗಿಯಿತೆಂದು ಶಿವಪಾದನಿಗೆ ಅನ್ನಿಸಿದಾಗ ಅಮ್ಮನಿಂದ ಸೂಚನೆ ಬರುತ್ತದೆ. ಆಗ ಅರ್ಹನನ್ನು ಶಿವಪಾದನೆಂದೂ ಕೂಗಿ ಅಧಿಕಾರ ಕೊಟ್ಟು ಎಡಗೈಯಲ್ಲಿ ಸೊಡರು ಹಿಡಿದುಕೊಂಡು ಗವಿಯೊಳಗೇ ಅಟ್ಟದಂತಿರುವ 'ಅಂತರಂಗ'ಕ್ಕೆ ಹೋಗುತ್ತಾನೆ. ಅಲ್ಲಿ ಒಂದು ಮಾಡದಲ್ಲಿ ಅವನಿಗಿಂತ ಹಿಂದಿನ ಶಿವಪಾದನ ಆಸ್ಥಿಪಂಜರವನ್ನು ಒಳಕ್ಕೆ ತಳ್ಳಿ ಅದೇ ಸ್ಥಳದಲ್ಲಿ ಕಣ್ಣು ಮುಚ್ಚಿ ಸಮಾಧಿಸ್ಥನಾದರೆ ಮುಗಿಯಿತು. ಮುಂದೆ ಹೊಸ ಶಿವಪಾದನಿಗೆ ಇವನೇ ಪೀಠವಾಗುತ್ತಾನೆ. ಹೀಗೆ ಒಳಕ್ಕೆ ತಳ್ಳಿದ ಶಿವಪಾದರ ಆಸ್ಥಿಪಂಜರಗಳೇ ನೂರಕ್ಕೂ ಹೆಚ್ಚಿಗಿವೆಯಂತೆ! ಎಷ್ಟು ಶಿವಪಾದರನ್ನು ತಳ್ಳಿದರೂ ಆ ಮಾಡದ ಆಳ ಮುಗಿಯದೆಂದೂ, ಅದರ ಇನ್ನೊಂದು ತುದಿ ಕೈಲಾಸದಲ್ಲಿ ತೆರೆದಿದೆಯೆಂದೂ ಅವರ ನಂಬಿಕೆ.

ಮುಂದಿನ ಶಿವಪಾದ ಯಾರಾಗಬೇಕೆಂದು ನಿರ್ಧರಿಸಿಯೇ ಇಂದಿನ ಶಿವಪಾದ ಸಮಾಧಿಸ್ಥನಾಗಬೇಕು. ಶಿವಪಾದರು ಮದುವೆಯಾಗಿ ಸಂಸಾರಸ್ಥರೂ ಆಗಬಹುದು. ಬ್ರಹ್ಮಚಾರಿಗಳೂ ಆಗಿರಬಹುದು. ಅದು ಅವರವರ ಇಚ್ಛೆಗೆ ಬಿಟ್ಟ ವಿಚಾರ. ಆ ಕ್ಷೇತ್ರದ ಎಲ್ಲ ಜ್ಞಾನಕ್ಕೆ ಅವರೇ ಅಧಿಕಾರಿಗಳು. ಒಮ್ಮೊಮ್ಮೆ ಅರ್ಹನಾದವನು ಸಿಕ್ಕದಿದ್ದಲ್ಲಿ ಯೋಗ್ಯ ದಂಪತಿಗಳನ್ನು ಗುರುತಿಸಿ ನಿಮ್ಮಲ್ಲಿ ಜನಿಸುವ ಮಗುವೇ ಮುಂದಿನ ಶಿವಪಾದನೆಂದು ಹೇಳಿ ಅವರು ಕೂಡುವುದಕ್ಕೆ ಸಮಯ ಮುಹೂರ್ತಗಳನ್ನು ತಿಳಿಸುವುದಿದೆ. ಆತ ಹೇಳಿದ ಸಮಯದಲ್ಲಿ ಅವರು ಕೂಡಿ ಮುಂದಿನ ಶಿವಪಾದನ ಜನನವಾಗಬೇಕು. ಶಿವಪಾದನಾದವನು ಊರಲ್ಲಿದ್ದಾಗ ಅಮ್ಮನ ಬೆಳಗಿನ ಹನಿಪೂಜೆ, ಮಧ್ಯಾಹ್ನದ ಮಹಾಪೂಜೆ, ರಾತ್ರಿಯ ಶಾಂತಿ ಪೂಜೆಗಳನ್ನು ಅವನೇ ಮಾಡಬೇಕು. ಪಯಣವಾದಲ್ಲಿ ಅಮ್ಮನ ಪೂಜೆಯ ವ್ಯವಸ್ಥೆ ಶಿಷ್ಯನೊಬ್ಬನ ಕೈಗಿಟ್ಟು ಹೋಗಿರಬೇಕು. ಶಿವಪಾದನಿಗೆ ಅಗತ್ಯವಾದ ಅಕ್ಕಿ ಮುಂತಾದ ಸೀಮೆಯ ಒಂದು ಕಡಿಮೆ ನಲವತ್ತು ಹಟ್ಟಿಗಳ ಮ್ಯಾಲೆ ಹಕ್ಕಿನ ಒಡೆತನವಿದೆ. ಆತ ಅಮ್ಮನಿಗಲ್ಲದೆ ಯಾವುದೇ ರಾಜನಿಗೆ ಮಾಂಡಳಿಕನಲ್ಲ.

ಶಿವಪಾದ ಮತ್ತು ಅಮ್ಮನ ಬಗ್ಗೆ ಜನ ಹೀಗೆ ಹೇಳುತ್ತಾರೆ:

"ಅಮ್ಮ ಆಕಾಶದೊಂದಿಗೆ ಜಗಳಾಡಿ ಮಳೆಗಾಳಿ ಮೋಡಗಳ ಉಡಿತುಂಬ ತಂದಾಕೆ! ಕ್ಷಿತಿಜದ ಜೊತೆ ಜಗಳಾಡಿ ನಮ್ಮ ಕಣ್ಣುಗಳಲ್ಲಿ ಬೆಳಕಾಡಿಸಿದಾಕೆ! ಅಮ್ಮನ ಸೇವೆಗೆ ಒಂದಾಯುಷ್ಯ ಸವೆಯಬೇಕು. ಹೇಳಿ ಕೇಳಿ ಬೆಂಕಿಯಂಥ ದೇವತೆ. ಅವಳ ಸೇವೆ ಅಂದರೆ ಸೆರಗಿನಲ್ಲಿ ಬೆಂಕಿ ಕಟ್ಟಿಕೊಂಡ ಹಾಗೆ. ಮಲಮೂತ್ರ ಜಳಕ ಜಪಾತಿ-ಅಷ್ಟೇ ಅಲ್ಲದೆ ಹಸಿವು ಬಾಯಾರಿಕೆಗೂ ಒಂದು ಸಮಯ, ಒಂದು ನೇಮ ಅಂತಿರಬೇಕು. ಕೂದಲೆಳೆಯಷ್ಟೂ ಕ್ರಮ ತಪ್ಪಬಾರದು. ಇದೆಲ್ಲಾ ಶರೀರ ಧರ್ಮಕ್ಕಾಯ್ತು. ಇದರ ಜೊತೆಗೆ ಮನಸ್ಸು ಕೂಡ ಹಸನಾಗಿ ಬೆಳ್ಳಂಬೆಳ್ಳಗಿರಬೇಕು. ಅಂದರೆ ಮಾತ್ರ 'ಆಹಾ! ನನ್ನ ಕಂದ ಎಷ್ಟು ಹಸನಾಗಿದ್ದಾನಲ್ಲಾ!' ಅಂತ ಅಮ್ಮ ಬಂದು ಶಿವಪಾದನ

ಮೈ ತುಂಬಿ ಆವೇಶವಾಗುತ್ತಾಳೆ. ಕಷ್ಟ ಹೇಳು-ಎತ್ತಿ ಒಗೆಯುತ್ತಾಳೆ! ಸುಖ ಕೇಳು-ಉಡಿ ತುಂಬುತ್ತಾಳೆ! ನಿಂತ ನೆಲ, ಬೆಳಗೋ ಸೂರ್ಯ ಚಂದ್ರ, ಸುರಿಯೋ ಮಳೆ, ಬೀಸೋಗಾಳಿ ಇರೋತನಕ ತಾಯಿ ಇದನ್ನ ನಡೆಸಿಕೊಡುತ್ತೇನೆ ಅಂತ ಶಿವಾಪುರಕ್ಕೆ ಮಾತು ಕೊಟ್ಟಿದ್ದಾಳೆ"... ಇತ್ಯಾದಿ.

ವರ್ಷಕ್ಕೊಮ್ಮೆ ಯುಗಾದಿಯ ಮುನ್ನ ಬರುವ ಹುಣ್ಣಿಮೆಯಂದು ಅಮ್ಮನ ಪರ್ವ ನಡೆಯುತ್ತದೆ. ಗವಿಯ ಮುಂದುಗಡೆ ಒಂದು ಕಡಿಮೆ ಹೆಜ್ಜೆ ದೂರದಲ್ಲಿ ಬೆಟ್ಟವನ್ನೇ ವ್ಯಾಪಿಸಿರುವಂತೆ ಪ್ರಾಚೀನ ಕಾಲದಿಂದಿರುವ ಹೊನ್ನೆ ಮರವಿದೆ. ಅಡ್ಡಾದಿಡ್ಡಿ ದೈತ್ಯಾಕಾರವಾಗಿ ಬೆಳೆದ ಅದರ ಬೊಡ್ಡಿಯ ಸುತ್ತಳತೆ ಹತ್ತಾಳು ಕೈ ಕೈ ಮಿಲಾಯಿಸಿ ತುಂಬುವಷ್ಟಿದೆ. ಉಳಿದೆಲ್ಲ ಮರಗಳಿಗಿಂತ ಹತ್ತುಪಟ್ಟು ಎತ್ತರ ಮತ್ತು ವಿಶಾಲವಾದ ಮರ ಅದು. ಬೊಡ್ಡಿಯ ತೊಗಟೆಯ ಮೇಲೆ ಜನ ಪರಚಿದ ಎಷ್ಟೋ ಹಳೆ ಹೊಸ ಗೀರುಗಳಿವೆ. ಹಾಗೆಯೇ ಭಕ್ತಾದಿಗಳು ಬುಡದಲ್ಲಿ ಎಣ್ಣೆ ಸುರಿದು ಕುಂಕುಮ ಸವರಿದ ಜಿಡ್ಡಿದೆ. ಬೇಕಾಬಿಟ್ಟಿ ಚಾಚಿಕೊಂಡ, ಗಂಟು ಗಂಟಾದ ಟೊಂಗೆ ಟಿಸಿಲುಗಳಿಂದ ಕೂಡಿದ ಮರ ಬೆಟ್ಟದ ಕಾವಲಿಗೆ ನಿಂತ ದೈತ್ಯನಂತಿವೆ. ಆದರೆ ಹಕ್ಕಿಗಳು ಹಾಡುತ್ತ, ಹಾರುತ್ತ ಬಂದು ಕುಣಿಯುತ್ತ ಚಿಲಿಪಿಲಿ ಗುಟ್ಟತೊಡಗಿದರೆ ಈ ಮರದ ಸಡಗರ ಹೇಳತೀರದು.

ಅಮ್ಮನ ಪರ್ವ ನಡೆಯುವುದು ಈ ಮರದ ಅಡಿಯಲ್ಲಿ. ಶಿವಾಪುರ ಸೀಮೆಯ ಗುಡ್ಡರೆಲ್ಲ ಆ ದಿನ ಬಂದು ಸೇರುತ್ತಾರೆ. ಆಗ ಈ ಮರದ ಬಯಲಿನಲ್ಲಿ ಪ್ರಾಣಿಬಲಿಯ ನೆತ್ತರು ಹರಿದಾಡುವುದಿದೆ. ಬಲಿಯ ಬಾಡು ಮತ್ತು ಆ ವರ್ಷದ ಧಾನ್ಯಗಳನ್ನು ಕುದಿಯಲಿಡುತ್ತಾರೆ. ಹಾಗೆಯೇ ವರ್ಷದ ಅಕ್ಕಿ ಮತ್ತು ಬೆಲ್ಲದಿಂದ 'ಗೊಳಬಾರಸ'ವೆಂಬ ಮದ್ಯವನ್ನು ತಯಾರಿಸುತ್ತಾರೆ. ಅಡಿಗೆ ಅಟ್ಟಮೇಲೆ ಶಿವಪಾದ ಬಂದು ಕುದಿಯುತ್ತಿರುವ ಕಡಾಯಿಗೇ ಕೈಹಾಕಿ ಮೂರು ಬೊಗಸೆ ಅನ್ನ, ಮೂರು ಬೊಗಸೆ ರಸ ತೆಗೆದು ಅಮ್ಮನಿಗೆ ನೈವೇದ್ಯವಾಗಿ ನೀಡುತ್ತಾನೆ. ತಿರುಗಿ ನೋಡಿದರೆ ಅಮ್ಮನ ಮುಂದೆ ಎರಡೇ ಬೊಗಸೆ ಅನ್ನ, ಎರಡೇ ಬೊಗಸೆ ರಸ ಇರುತ್ತದೆ! ಯಾಕೆಂದರೆ ಅಮ್ಮ ಬಂದು ಒಂದು ಬೊಗಸೆ ರಸ ಕುಡಿದು ಒಂದು ಬೊಗಸೆ ಅನ್ನ ಉಂಡಿರುತ್ತಾಳಂತೆ! ಉಳಿದೆರಡು ಬೊಗಸೆ ಅನ್ನ ಮತ್ತು ರಸವನ್ನ ಮೂಲ ಕಡಾಯಿಗೆ ಸೇರಿಸಿ ಪ್ರಸಾದವಾಗಿ ಎಲ್ಲರಿಗೂ ಹಂಚುತ್ತಾರೆ. ರಸ ಸೇವಿಸಿ ಪ್ರಸಾದ ತಿಂದು ಗಂಡು ಹೆಣ್ಣೆನ್ನದೆ ಎಲ್ಲರೂ ಕೂಡಿ ಬೆಳ್ಳಂಬೆಳಗು ಕುಣಿಯುತ್ತಾರೆ. ಇದೇ ಸಂದರ್ಭದಲ್ಲಿ ಪರಸ್ಪರ ಇಷ್ಟಪಡುವ ಹುಡುಗ ಹುಡುಗಿಯರು ಜೋಡಿಯಾಗಿ ಕುಣಿಯುವಾಗ ಹುಡುಗ "ಕಾಡಿಗೆ ಬರ್ತೀಯಾ?" ಅಂತ ಕೇಳಿ ಹುಡುಗಿ ಒಪ್ಪಿದರೆ ಇಬ್ಬರೂ ಕಾಡಿನಲ್ಲಿ ಕಣ್ಮರೆಯಾಗಬಹುದು. ಬೆಳಿಗ್ಗೆ ಬರುವ ಅವರನ್ನು ಗಂಡ ಹೆಂಡತಿ ಎಂದು ಊರವರು ಒಪ್ಪಿಬಿಡುತ್ತಾರೆ. ಇದೆಲ್ಲವೂ ನಡೆಯುವುದು ಶಿವಪಾದನ ನೇತೃತ್ವದಲ್ಲಿ.

* * *

ಒಂದೆರಡು ದಿನಗಳಲ್ಲಿ ಜಯಸೂರ್ಯ ನಡೆದಾಡುವಂತಾದ. ಜಟ್ಟಿಗ ಮತ್ತು ಬೆಳ್ಳಿ ಇಬ್ಬರ ಶಿವಾಯಿ ಜಯಸೂರ್ಯನಿಗೆ ಬೇರೆಯವರ ಸಂಪರ್ಕ ಬರಲಿಲ್ಲ. ಇವನು ಬಯಸಲೂ ಇಲ್ಲ. ಮೆಲ್ಲಗೆ ಹೆಜ್ಜೆ ಊರುತ್ತಾ ಮಂಟಪದ ಹೊರಗಡೆ ಬಂದು ಕೂತರೆ ಜನ ದೂರದಿಂದಲೇ ಇವನೊಬ್ಬ ವಿಚಿತ್ರ ಪ್ರಾಣಿಯೆಂಬಂತೆ ನೋಡುತ್ತ ಹೋಗುತ್ತಿದ್ದರು. ಕಣ್ಣಿಗೆ ಕಣ್ಣು ಕೂಡಿದರೆ ಹೆದರಿ, ಪೀಡೆಯ ಪರಿಹಾರಕ್ಕೆಂಬಂತೆ ಎರಡೂ ಕೈಗಳಿಂದ ನೆಲ ಬಡಿದು, ಅಮ್ಮನ ಹೆಸರುಗೊಂಡು ಮುಂದೆ ಹೋಗುತ್ತಿದ್ದರು; ಹಾಗಿತ್ತು ಅವನ ಆಕಾರ!

ಸುಮಾರು ಜಟ್ಟಿನಗಷ್ಟೇ ಎತ್ತರವಾದ ದೇಹಕ್ಕೆ ಅಗಲವಾದ ಭುಜಗಳು, ದೇಹದ ಪ್ರಮಾಣಕ್ಕಿಂತ ತುಸು ದೊಡ್ಡದಾದ ತಲೆ, ಕಪ್ಪಗೂ ಅಲ್ಲದ ನರೆತದ್ದೂ ಅಲ್ಲದ ತೆಳುಕೂದಲಿನಿಂದಾಗಿ ಜಯಸೂರ್ಯನ ವಯಸ್ಸನ್ನು ಅಂದಾಜು ಮಾಡುವುದಿರಲಿ, ಯಾರೂ ಜಯಿಸಲಾರದಂಥ ಒಂದು ಸಾಮರ್ಥ್ಯ ಅವನಲ್ಲಿದೆಯೆಂದು ಅನಿಸುತ್ತಿತ್ತು. ಸದಾ ಕೆಂಪಾದ ಮೂಗಿನ ತುದಿ ಬಾಗಿ ತುಟಿಯ ಮೇಲೊರಗಿದ್ದು ದೊಡ್ಡ ಹಕ್ಕಿಯ ಚುಂಚಿನಂತೆ ಕಾಣುತ್ತಿದ್ದಿತಲ್ಲದೆ ಹೊಳೆಯುವ ಕಣ್ಣಗಳೂ ಸೇರಿ ಅವನ ಮುಖಕ್ಕೆ ರಣಹದ್ದಿನ ಕಳೆ ಕೊಟ್ಟಿದ್ದವು. ನೆಟ್ಟ ನೋಟದಿಂದ ಇರಿವಂತಿದ್ದ ಆ ಕಣ್ಣುಗಳು ನೋಡಿದವರನ್ನು ಬಹುಬೇಗ ಆಕರ್ಷಿಸುತ್ತಿದ್ದವು; ಹಾಗೆಯೇ ಅವನ ಬಗ್ಗೆ ಭಯ ಮೂಡುವಂತೆಯೂ ಮಾಡುತ್ತಿದ್ದವು. ಆತ ಮುಗುಳು ನಕ್ಕಾಗ ಕೂಡ ಎಡಬಲಗಳಲ್ಲಿ ತುಟಿಗಳು ಹಿಗ್ಗುತ್ತಿದ್ದುವೇ ಹೊರತು ಕಣ್ಣಲ್ಲಿ

ಆ ನಗೆ ಪ್ರತಿಬಿಂಬಿಸುತ್ತಿರಲಿಲ್ಲ. ಅಲ್ಲದೆ ಅವನ ನಗುವಿನಲ್ಲಿ ಚಲನೆ ಎಂಬುದಿರಲಿಲ್ಲ. ನಕ್ಕಾಗ ಅವನು ಇನ್ನಷ್ಟು ಕ್ರೂರವಾಗಿ ಕಾಣುವುದಕ್ಕೆ ಅವನ ಅಗಲವಾದ ಕಿವಿಗಳಲ್ಲಿ ಪೊದೆಯಾಗಿ ಬೆಳೆದ ಕೂದಲೂ ಕಾರಣವಾಗಿರಬಹುದು.

ಬೆಳ್ಳಿ, ಜಟ್ಟಿಗರ ಬಿಟ್ಟು ಉಳಿದವರ್ಯಾರೂ-ಶಿವಾಪುರ ಕೂಡ-ಜಯಸೂರ್ಯನ ಆಸಕ್ತಿಯನ್ನು ಕೆರಳಿಸಲೇ ಇಲ್ಲ. 'ಏನಿದೆ ಇಲ್ಲಿ? ಮೇದು, ತೇಲುಗಣ್ಣಿನಲ್ಲಿ ಮೆಲುಕಾಡಿಸುತ್ತ ಮಲಗಿರುವ ದನಗಳಂತೆ ಕಾಣುವ ಮನೆ-ಗುಸಿಸಲುಗಳು; ತೃಪ್ತರಾಗಿ, ಆನಂದ ತುಂದಿಲರಾಗಿ, ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುವ ಜನಗಳು, ಪ್ರಾಣಿಗಳೊಂದಿಗೆ ಪಂಥ ಕಟ್ಟುವ ಮಕ್ಕಳು... ಒಬ್ಬರಿಗೂ ಮಹತ್ವಾಕಾಂಕ್ಷೆಯಿಲ್ಲ, ದೊಡ್ಡ ಹಸಿವಿಲ್ಲ, ಅಸಾಧ್ಯದ ಹಂಬಲವಿಲ್ಲ, ಬೇರೆ ಮನುಷ್ಯರ ಬಗ್ಗೆ ಕುತೂಹಲವಿಲ್ಲ, ಸಾಹಸದ ಮನಸ್ಸುಗಳಿಲ್ಲ... ದೇವರ ಬಗ್ಗೆಯಂತೂ ಭಾರೀ ನಂಬಿಕೆ ಇದ್ದವರು. ದೇವರು ಅನ್ಯಾಯವನ್ನು ಕೂಡ ಮಾಡಬಲ್ಲ-ಎಂಬಂಥ ವಿಚಾರಗಳಂತೂ ಇವರ ತಲೆಯಲ್ಲಿ ಸುಳಿಯುವುದಿರಲಿ, ಹೊರಗಿನಿಂದ ಸೇರುವುದೂ ಸಾಧ್ಯವಿರಲಿಲ್ಲ. ಇಂತಿರಲು ಇವರ ಊರಿಗೆ ತೊಂದರೆ ತಾನೇ ಎಲ್ಲಿಂದ, ಹ್ಯಾಗೆ ಬರುವುದು ಸಾಧ್ಯ? 'ಏನು ಜನಗಳೋ! ಮಾನವಾಕಾರದ ನೆರಳುಗಳು!' ಎಂದು ತೀರ್ಮಾನಿಸಿಬಿಟ್ಟಿದ್ದ.

ಸ್ವಭಾವತಃ ಜಯಸೂರ್ಯ ಯಾರನ್ನೂ ನಂಬಿದವನಲ್ಲ. ಯಾರೇ ಇರಲಿ, ತನಗೆ ಒದಗುವವರಾದರೆ ಮಾತ್ರ ಆಸೆಯಿಂದ ಅವರ ಕಡೆಗೆ ನೋಡುವಾತ ಮತ್ತು ಅದಕ್ಕಾಗಿ ಹೊಂಚಿ ಕೊನೆಗೂ ಪ್ರಯೋಜನ ಪಡೆವಾತ. ತನಗೆ ಬೇಕಾದ್ದನ್ನು ಆತ ಎಂದೂ ಮರೆತವನಲ್ಲ. ಅಡ್ಡಿಪಡಿಸಿದವರನ್ನು ಕ್ಷಮಿಸಿದವನಲ್ಲ. ಅದು ಸಿಕ್ಕುವತನಕ ಹಿಂದಿರುಗಿದವನಲ್ಲ. ಪರಂತು ತನ್ನ ಆಸೆಯನ್ನ ಇನ್ನೊಬ್ಬರಿಗೆ ಹೇಳಿದವನಲ್ಲ. ಅದನ್ನ ಗೌಪ್ಯವಾಗಿ ಹೃದಯದ ಕತ್ತಲಲ್ಲಿ ಯಾರಿಗೂ ಕಾಣದಂತೆ ಅಡಗಿಸಿಟ್ಟು, ಯಾರಿಲ್ಲದಾಗ ಅದರ ಮ್ಯಾಲೆ ಬೆರಳಾಡಿಸಿ ಆನಂದ ಪಡುವಾತ. ಅದೂ ಒಂದೆರಡು ಕ್ಷಣ ಮಾತ್ರ ಅದಿನ್ನೂ ಸಿಕ್ಕಲ್ಲವೆಂದೂ ನೆನಪಾದ ತಕ್ಷಣವೆ ಕೋಪದಿಂದ ಕುದಿವಾತ. ಅವನಾಸೆ ಈಡೇರದೆ ಅವಮಾನವಾದ ಒಂದೇ ಒಂದು ಸಂದರ್ಭವೆಂದರೆ ಚಂದಮುತ್ತನಂತೆ ಆತ ಸಂಗೀತಗಾರನಾಗಲಿಲ್ಲ. ಅದನ್ನು ನೆನೆದರೆ ಅನೇಕ ಸಲ ಅವನ ಮನಸ್ಸು ವಿಷಮಯವಾಗುತ್ತಿತ್ತು. ವಿಷ ಹೆಚ್ಚಾದಾಗ ಅದನ್ನ ಹೊರಗೆ ಹಾಕಬೇಕೆಂದು ಹಾವು ನೆಪ ಹುಡುಕುವಂತೆ ಇವನೂ ಚಡಪಡಿಸುತ್ತಿದ್ದ. ಆವಾಗ ಸೇಡನ್ನ ಮೇಲುಕುತ್ತ, ದುಃಖವ ಬಿಕ್ಕುತ್ತ, ವೈರಿಯ ಒಕ್ಕಲಿಕ್ಕುವ ಕನಸು ಕಾಣುತ್ತಿದ್ದ. ಚಂದಮುತ್ತ ಮುಕ್ತನಾದುದರಿಂದ ಆ ಕನಸಿಗೂ ಈಗ ಕೊನೆ ಹಾಡಿ ಹಳಹಳಿಸಿದ್ದ. ಇದೆಲ್ಲ ಗೊತ್ತಿಲ್ಲದಿದ್ದರೂ ಇಂಥ ವಿಲಕ್ಷಣ ಲಕ್ಷಣಗಳ ವ್ಯಕ್ತಿಯ ಸ್ನೇಹ ಮಾಡುವುದಕ್ಕೆ ಯಾರಾದರೂ ಯಾಕೆ ಮುಂದೆ ಬರುತ್ತಾರೆ?

ಜಟ್ಟಿಗ ಬೆಳ್ಳಿಯೊಂದಿಗೆ ದಿನಾ ಬಂದು ಮೊಳಕಾಲು ಬೆನ್ನುಗಳನ್ನು ಮುಟ್ಟಿ ನೋಡಿ, ಮದ್ದನರೆದು, ಉಪಚರಿಸಬೇಕಾದ ಸೂಚನೆಗಳನ್ನು ಬೆಳ್ಳಿಗೆ ಹೇಳುತ್ತಿದ್ದ. ಉಪಚರಿಸಿ ಇಬ್ಬರೂ ಹೋದ ಮೇಲೆ ಈತ ಮುಂದೇನೆಂದು ಯೋಚಿಸುತ್ತ ಕೂರುತ್ತಿದ್ದ. ಅದೂ ಬೋರಾದರೆ ಕಾಡು ಹೂವಿನಂತೆ ನಾರುವ ಬೆಳ್ಳಿಯ ಅನಾಗರಿಕ ಸೌಂದರ್ಯವನ್ನ ನೆನೆಯುತ್ತ ಕೂರುತ್ತಿದ್ದ.

## ಮೂರು

ಇನ್ನೂ ಒಂದು ವಾರ ಕಳೆದ ಮೇಲೆ ಇನ್ನಷ್ಟು ನಡೆದಾಡುವಂತಾದ. ಜಟ್ಟಿಗನಿಗೆ ಅಮ್ಮನಡಿಯ ಅಂದರೆ ಶಿವಪಾದನ ವಾಕ್ಯ ನೆನಪಿತ್ತು. ಈಗ ಜಯಸೂರ್ಯನ ಕಾಲು ಮತ್ತು ಬೆನ್ನುಮೂಳೆ ಸರಿಹೋಗಿರುವುದರಿಂದ ಅವನ್ನು ಸಾಗಹಾಕಲು ಯೋಚಿಸಿ ಶಿವಪಾದನ ಸಮಯಕ್ಕಾಗಿ ಕಾಯುತ್ತಿದ್ದ.

ಜಯಸೂರ್ಯ ದಿನೇ ದಿನೇ ಹೆಚ್ಚು ಹೆಚ್ಚು ಆಸಕ್ತಿಯಿಂದ ಬೆಳ್ಳಿಯನ್ನು ಗಮನಿಸುತ್ತಿದ್ದ. ಕಾಡಿಗೂ ಬೆಳ್ಳಿಗೂ-ಬೇರೆಯವರಿಗಿಂತ ಹೆಚ್ಚಾಗಿ-ಒಂದು ಆತ್ಮೀಯವಾದ ಸಂಬಂಧವಿತ್ತು. ತನಗೆ ಗೊತ್ತೇ ಇಲ್ಲದ ಅನೇಕ ಗಿಡ ಮರ ಮೂಲಿಕೆಗಳ ಅವಳಿಗೆ ಗೊತ್ತಿದ್ದವು. ಕೆಲವು ಸಸ್ಯಗಳನ್ನಂತೂ ಆಕೆ ದೂರದಿಂದ ವಾಸನೆಯಿಂದಲೇ ಗುರುತಿಸಿ ಅವು ತನ್ನ ಹೆಸರುಗಳು, ಅವು ಹುಟ್ಟುವು, ಹೊಂದುವ, ಬೆಳೆವ, ಅರಳುವ, ಕೊನೆಗೆ ಭೂಮಿಗುದುರುವ ಕಾಲ ಮತ್ತು ಹಂಗಾಮಳು ಅವಳಿಗೆ ವಿವರವಾಗಿ ಗೊತ್ತಿದ್ದವು. ಯಾವ ತರುಮರ ಯಾವ

ನಾರುಬೇಕು ಏನಕ್ಕುಪಯೋಗವೆಂದು ಹೇಳುತ್ತಿದ್ದಳು. ಜಯಸೂರ್ಯ ತನ್ನ ಹೊಸ ಜೀವನದ ಮೊದಲ ಹೆಜ್ಜೆ ಇದೇ ಎಂದು ತೀರ್ಮಾನಿಸಿ ಬೆಳ್ಳಿ ಇದ್ದಲ್ಲಿಗೆ ಹೋಗಿ,

"ಬೆಳ್ಳಿ, ಎಲ್ಲೋ ಸತ್ತು ಬಿದ್ದವನನ್ನು ಎತ್ತಿ ತಂದು ಮದ್ದು ಕೊಟ್ಟು ಬದುಕಿಸಿದಿರಿ. ನಿನಗೂ ಜಟ್ಟಿಗನಿಗೂ ನಮಸ್ಕಾರ."

ಎಂದು ಹೇಳಿ ಕೈಮುಗಿದ. ಬೆಳ್ಳಿ 'ಹೋ' ಅಂತ ಎಲೆ ತಿಂದ ಜೊಲ್ಲು ಸುತ್ತ ಸಿಡಿಸಿ ಕಿಲ ಕಿಲ ನಕ್ಕಳು. ಯಾಕೆಂದರೆ ಹೀಗೆ ಕೃತಜ್ಞತೆ ಹೇಳುವ ಪರಿಪಾಠ ಅವಳಿಗೆ ಹೊಸದು. ಇನ್ನೂ ಕೈ ಮುಗಿದೇ ಮತ್ತೆ ಹೇಳಿದ:

"ಬೆಳ್ಳಿ, ಇಂದಿನಿಂದ ನಿನ್ನ ವೈದ್ಯವಿದ್ಯೆ ಕಲಿಯಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದೇನೆ. ನನಗೆ ಕಲಿಸಿಕೊಡು."

"ನನಗಷ್ಟೆಲ್ಲಾ ಎಲ್ಲಿ ಗೊತ್ತಾದೀತು? ಜಟ್ಟಿಗ ಹೇಳ್ತಾನೆ ಬೇಕಾದರೆ."

"ನಿನಗೆ ಗೊತ್ತಿರುವಷ್ಟು ಹೇಳು. ಜಟ್ಟಿಗನನ್ನು ಆಮೇಲೆ ಕೇಳುತ್ತೇನೆ."

"ಏನೇಳ್ಲಿ?"

"ನನ್ನ ಮೊಳಕಾಲು ಮುರಿಯಿತಲ್ಲ, ನೀನಿದಕ್ಕೆ ದಿನಾಲು ಸವರುತ್ತಿದ್ದ ಮದ್ದು ಯಾವುದು?-ಇಲ್ಲಿಂದಲೇ ಸುರುಮಾಡೋಣ".

"ಅದಾ? ಹೇಳ್ತಿನಿರು."

-ಅಂದು ಅವನನ್ನು ಅಲ್ಲೇ ಕಟ್ಟೇಮೇಲೆ ಕೂರಿಸಿ, ತಾನು ಮಾಡುತ್ತಿದ್ದ ಕೆಲಸವನ್ನ ಮುಗಿಸಲೆತ್ನಿಸಿದಳು. ಆ ಕೆಲಸಗಳು ಜಯಸೂರ್ಯನಿಗೆ ಅಪರಿಚಿತವಾದ್ದರಿಂದ ಅವುಗಳ ಅಗತ್ಯ ಮತ್ತು ಉಪಯೋಗದ ಮಹತ್ವ ಇವನಿಗೆ ಗೊತ್ತಾಗಲಿಲ್ಲ. ಆಮೇಲೆ ಇವನಂತೆಯೇ ಬೀಸುದೇಹದ, ಮೈ ಚರ್ಮಕ್ಕಂಟಿ ಸಪೂರ ದೇಹಾಕೃತಿಯ ಜಟ್ಟಿಗ ಬಂದು ಆಕೆಗೆ ಸಹಾಯ ಮಾಡಿದ. ಆಮೇಲೆ ಜಟ್ಟಿಗ ಮತ್ತು ಬೆಳ್ಳಿ ಎಲಡಿಕೆ ವಿನಿಮಯ ಮಾಡಿಕೊಂಡು ತಿಂದರು. ಬೆಳ್ಳಿ ಒಂದು ಸಾರಿ ಕೆಂಪಾದ ಜೊಲ್ಲನ್ನು ಇಷ್ಟು ದೂರ ಚಿಮ್ಮುವ ಹಾಗೆ ಉಗಿದು "ನಡಿ ತೋರಿಸುವಾ" ಅಂತ ಹೇಳಿ ಎದ್ದು ಬಾಕಿ ಕೆಲಸ ಮುಂದುವರಿಸಲು ಜಟ್ಟಿಗನಿಗೆ ಹೇಳಿ ಹೊರಟಳು. 'ಇನ್ನೇನು ಪರ್ವ ಬಂತಲ್ಲ. ಅದು ಮುಗಿದ ಮೇಲೆ ಇವಯ್ಯನನ್ನು ಊರು ಬಿಡಿಸಿದರಾಯ್ತೆಂದು' ಬೆಳ್ಳಿ ಅಂದುಕೊಂಡಳು. ಜಟ್ಟಿಗನೂ ಹಾಗೇ ಅಂದುಕೊಂಡ.

ಒಂದು ದಿನ ಜಟ್ಟಿಗ ಮನೆಮುಂದಿನ ಎತ್ತರ ಕಟ್ಟೆಯ ಮೇಲೆ ನಿಂತು ಕಂಬಳಿಗಾಗಿ ಉಣ್ಣೆಯ ನೂಲು ಹೊಸೆಯುತ್ತಿದ್ದ. ಉಣ್ಣೆಯ ಹೊಸೆದು ಕುಕ್ಕಡಿಯನ್ನ ತಿರುಗಿಸಲು ಜಯಸೂರ್ಯ ಬಂದ. ಇವನನ್ನು ನೋಡಿದ್ದೇ "ಬೆಳ್ಳಿ ಕಾಡಿಗೆ ಓಗವ್ಳೆ" ಅಂದ. ಆದರೂ ಈತ ಪಕ್ಕದ ಕಟ್ಟೆಯ ಮೇಲೆ ಕೂತ. ನೆರೆಗುಡಿಸಲಿನ ಒಂದೆರಡು ಮಕ್ಕಳು ಇವನನ್ನು ಕಂಡು ಹೆದರಿ ದೂರ ಹೋದವು. ಪಡಸಾಲೆಯಲ್ಲಿ ನೇತುಹಾಕಿದ್ದ ಚಿರತೆಯ ಚರ್ಮ ಇವನ ಕಣ್ಣಿಗೆ ಬಿತ್ತು. ಅದನ್ನೇ ನೋಡುತ್ತಿದ್ದಾಗ ಜಟ್ಟಿಗನೇ ಹೆಮ್ಮೆಯಿಂದ ಹೇಳಿದ: "ಬೆಳ್ಳಿ ಬೇಟೆಯಾಡಿ ಕೊಂದದ್ದು!" ಆಮೇಲೆ ಯಾಕೋ ಚರ್ಮವನ್ನು ನೋಡಲಾಗದೆ ಮತ್ಸರದಿಂದ ಜಟ್ಟಿಗನನ್ನೇ ನೋಡುತ್ತ ಕೇಳಿದ:

"ಬೆಳ್ಳಿ ನಿನಗೇನಾಗಬೇಕು ಜಟ್ಟಿಗ?"

"ಮಡದಿ"

ಆಘಾತವಾಯ್ತು ಜಯಸೂರ್ಯನಿಗೆ. ಅವನ ಮಾತಿನಲ್ಲಿ ನಂಬಿಕೆ ಬಾರದೆ

“ಅಂದ್ರೆ?” ಅಂದ.

ಜಟ್ಟಿಗ ತಿಳಿಸಿ ಹೇಳುವಂತೆ “ಹೆಂಡತಿ” ಅಂದ.

ಜಯಸೂರ್ಯ ಜಲ ಜಲ ಬೆವರಿದ. ಕೂತ ಕಟ್ಟೆ ಒದ್ದೆಯಾದ ಮೇಲೆ ಮಾತಿಲ್ಲದೆ ಜಟ್ಟಿಗನ ನೋಡಿದ. ಮಾಂಸಖಂಡಗಳು ತುಂಬಿ ದೇವಸ್ಥಾನದ ಕಲ್ಲಿನ ದ್ವಾರಪಾಲಕನಂಥ ಮೈಕಟ್ಟಿನ, ಎತ್ತರ ನಿಲುವಿನ ಆಜಾನುಬಾಹು ಆಳು! ಸೊಂಟಕ್ಕೆ ಕಟ್ಟಿಕೊಂಡ ಗೊಂಡೇದ ಲಂಗೋಟಿ ವಿನಾ ಮೈಮೇಲೆ ಬಟ್ಟೆಯಿರಲಿಲ್ಲ. ಚೆನ್ನದ ಬಿಸಿಲಿನಲ್ಲಿ ಮೈ ಮಿರಿ ಮಿರಿ ಹೊಳೆಯುತ್ತಿತ್ತು. ತೊಡೆಯ ಮ್ಯಾಲೆ ಉಣ್ಣೆಯ ಹೊಸೆದು ಕುಕ್ಕಡಿಯನ್ನು ಕೆಳಕ್ಕೆಸೆದು ತಿರುಗಿಸುವಾಗಲಂತೂ ಸ್ನಾಯುಗಳು ಬಿಗಿದು ಸಡಿಲಾಗಿ ಮೈಯಲ್ಲಿ ಒಂದು ಬಗೆಯ ಲಯಬದ್ಧ ಚಲನೆ ಉಂಟಾಗಿ ಯಾವನೋ ಬಲಾಢ್ಯ ದೇವರು ಕುಕ್ಕಡಿ ಹೊಸೆಯುವುದನ್ನ ಮಾನವರಿಗೆ ತೋರಿಸಲಿಕ್ಕೆ ನಿಂತ ಹಾಗೆ ಕಾಣುತ್ತಿದ್ದ. ಮಾತಿಲ್ಲದೆ ಜಯಸೂರ್ಯ ಎದ್ದು ನಡೆದ. ಆತ ಹೇಳದೆ ಕೇಳದೆ ಹೋಗುತ್ತಿದ್ದುದಕ್ಕೆ ಜಟ್ಟಿಗನಿಗೂ ಆಶ್ಚರ್ಯವಾಯಿತು.

ಜಟ್ಟಿಗ ಮಾತಿಗೊಮ್ಮೆ ಬೆಳ್ಳಿ ಅನ್ನುತ್ತಿದ್ದುದು ಯಾಕೆಂದು ಈಗ ತಿಳಿಯಿತು. ಅವಳಿಲ್ಲದೆ ತಾನಿಲ್ಲವೆಂಬುದನ್ನು, ಅವಳಿಲ್ಲದೆ ಶಿವಾಪುರವಿಲ್ಲ ಎನ್ನುವುದನ್ನಾತ ಸೂಚಿಸಿದ್ದ. ಮಾತ್ರವಲ್ಲ ಇಹಪರ, ಕಾಡು ಮತ್ತು ಹಸಿರು, ಹೊಳೆ ಮತ್ತು ಹೆಣ್ಣು ಗಂಡು ಮತ್ತು ಮಳೆ ಬೆಳೆ ಮತ್ತು ಅಮ್ಮ ಮತ್ತು ಇವೆಲ್ಲವೂ ಬೆಳ್ಳಿ ಎಂಬಂತೆ ಮಾತಾಡಿದ್ದ. ಜಯಸೂರ್ಯ ಬೆಪ್ಪನಂತೆ ಕೇಳಿದ್ದ. ತಮ್ಮಿಬ್ಬರ ಮಧ್ಯದ ಉನ್ಮಾದ ಒಂದೇ, ಆದರೆ ಆತ ಹೆಚ್ಚು ಅರ್ಹ ! ತಕ್ಷಣ ಜಟ್ಟಿಗ ಸಾಯಬೇಕಲ್ಲ - ಎನಿಸಿತು. ಹೆಣದ ಭಂಗಿಯಲ್ಲಿ ಅವನನ್ನು, ವಿಧವೆಯ ರೂಪದಲ್ಲಿ ಬೆಳ್ಳಿಯನ್ನು ಕಲ್ಪಿಸಿಕೊಂಡು ಸಮಾಧಾನ ಮಾಡಿಕೊಡಲು ಪ್ರಯತ್ನಿಸಿದ, ಆಗಲಿಲ್ಲ.

ನಿರಾಸೆ ಮತ್ತು ಆಶ್ಚರ್ಯಗಳಿಂದ ಜಯಸೂರ್ಯ ಜರ್ಜರಿತನಾದ. ನಿರಾಸೆ ಯಾಕೆಂದರೆ ಬೆಳ್ಳಿಗಿನ್ನೂ ಮದುವೆಯಾಗಿಲ್ಲವೆಂದುಕೊಂಡಿದ್ದ; ಆಗಿದ್ದುದಕ್ಕೆ! ಮದುವೆಯಾಗಿದೆ ಮಾತ್ರವಲ್ಲ, ಎಲ್ಲ ವಿಧದಲ್ಲಿ ತನಗಿಂತ ಉತ್ತಮನಾದ ಗಂಡ ಜಟ್ಟಿಗ ಇದ್ದಾನೆ! ಆಶ್ಚರ್ಯ ಯಾಕೆಂದರೆ ಬೆಳ್ಳಿಯನ್ನು ಈಗಷ್ಟೆ ಪ್ರಾಯಕ್ಕೆ ಬಂದ ಹುಡುಗಿ ಅಂದುಕೊಂಡಿದ್ದ.

ಮೂರನೇ ಬೆಳಗ್ಗೆ ಝುಮು ಝುಮು ಚಳಿಯಲ್ಲಿ ಬಾಗಿಲು ಬಡಿದ ಸದ್ದು ಕೇಳಿ ಇನ್ನೂ ಮಲಗಿದ್ದ ಜಯಸೂರ್ಯನಿಗೆ ಭಯವಾಯಿತು. ಗಡಬಡಿಸಿ ಎದ್ದು ಬಂದು ಬಾಗಿಲು ತೆರೆದರೆ “ಏನಯ್ಯಾ ನಿನಗಿನ್ನೂ ಬೆಳಗಾಗಿಲ್ಲವೇ?” ಎನ್ನುತ್ತ ಬಾಗಿಲಲ್ಲಿ ಬೆಳ್ಳಿ ನಿಂತಿದ್ದಾಳೆ! ‘ಬಾ’ ಎನ್ನುವುದಕ್ಕೂ ಅವಕಾಶ ಕೊಡದೆ ಒಳಬಂದು ‘ಕೂರು’ ಎನ್ನುವ ಮುನ್ನವೇ ನೆಲದ ಮೇಲೆ ಕೂತೂ ಬಿಟ್ಟಳು! ಮಾತು ಸುರುಮಾಡುವ ಮುನ್ನ ಅವಳೇ “ಬಂದಿದ್ದೆಯಂತಲ್ಲ, ಯಾಕೆ?” ಅಂದಳು. ಮಾತಿನ ಭರಾಟೆಯಲ್ಲಿ ಅವಳ ಪ್ರಶ್ನೆ ಯಾವುದು, ಸಾದಾ ಮಾತು ಯಾವುದೆಂದು ಪ್ರತ್ಯೇಕಿಸಲಾಗದೆ ಜಯಸೂರ್ಯ ಸುಮ್ಮನೆ ನಿಂತ. ಪುನಃ ಅದೇ ಪ್ರಶ್ನೆ ಕೇಳಿದ ಮೇಲೆ “ನನಗೆ ಒಂದೆರಡು ಬೇರುಗಳು ಬೇಕಾಗಿದ್ದವು” ಅಂದ.

“ಹೆಸರು ಹೇಳಿ ಬರಬಾರದಿತ್ತೇ? ತರ್ತಿದ್ದೆ, ಹೋಗಲಿ ಯಾ ಬೇರು ಹೇಳು” ಅಂದಳು. ಯಾವುದೋ ಒಂದೆರಡು ಬೇರಿನ ಹೆಸರು ಹೇಳಿದೊಡನೆ,-

“ನಿನಗದು ನಾಳೆ ಸಿಕ್ಕೀತು.”

ಎಂದುಸುರಿ ಮತ್ತೆ ಅದೇ ಉಸುರಿನಲ್ಲಿ “ಮರ್ತೆ” ಎಂದೂ ಹೇಳಿ ತನ್ನ ಉಡಿಯಲ್ಲಿಂದ ಹಸಿರು ಕಾಯಿ ತೆಗೆದು,

“ಇದನ್ನ ಜೇನುತುಪ್ಪದಲ್ಲಿ ಅದ್ದಿ ತಿಂದರೆ ಸಾಕು, ನಾಕು ತಾಸು ಹೊಟ್ಟೆ ಗಟ್ಟಿಯಾಗಿರ್ತದೆ. ತಗೋ”

ಎಂದು ಕಾಯಿಕೊಟ್ಟು ಅಲ್ಲೇ ನೆಲಿವಿನ ಮ್ಯಾಲಿದ್ದ ಜೇನು ತುಪ್ಪದ ಮಡಕೆಯನ್ನೂ ತೆಗೆದಿಟ್ಟು “ತಿನ್ನು” ಎಂದಳು. ಅವನು ತಿನ್ನಲಿಲ್ಲ. “ಇನ್ನೂ ಜಳಕ ಆಗಿಲ್ಲ.” ಅಂದ

“ಆಮ್ಯಾಕೆ ತಿನ್ನು” ಎಂದು ಹೇಳಿ ಹೊರಟೇ ಬಿಟ್ಟಳು. ಇಷ್ಟು ಅವಸರದಲ್ಲಿ ಅವಳು ಹೋಗುವುದು ಬೇಕಿರಲಿಲ್ಲ, – “ಬೆಳ್ಳೀ” ಅಂದ.

“ನಾಳೆ ನಿನಗೆ ಆ ಬೇರು ಮುಟ್ಟಿಸ್ತೇನೆ ಮಾರಾಯಾ”

ಅಂದಾಗ ಅನಿವಾರ್ಯವಾಗಿ “ಆಯ್ತು” ಅಂದ. ಕನಸಿನಲ್ಲಿ ಬಂದು ಹೋದಂತೆ ಬೆಳ್ಳಿ ಕಣ್ಮರೆಯಾದಳು.

ಅಂದೇ ಇಳಿಹೊತ್ತಿನಲ್ಲಿ ನೇರಳೆ ಮೆಳೆಯ ದೊಡ್ಡ ಹುಲುಗಲ ಮರದ ಹತ್ತಿರ ತಾನು ಬೆಳಿಗ್ಗೆ ಬೆಳ್ಳಿಗೆ ಹೇಳಿದ್ದ ಬೇರಿನ ಗಿಡ ಕಂಡು ಜಯಸೂರ್ಯ ಹುರುಪಾದ. ಅದರ ಜೊತೆಯಲ್ಲಿ ಇನ್ನೊಂದು ಗಿಡ ಇತ್ತು. ಬೆಸೆದುಕೊಂಡಂತೆ ಉಜ್ಜುಜ್ಜಿಕೊಳ್ಳುತ್ತ ಬೆಳೆದ ಎರಡನ್ನೂ ಪ್ರತ್ಯೇಕಿಸಿ ತನಗೆ ಬೇಕಾದ್ದನ್ನು ಕಿತ್ತುಕೊಂಡು ಹಟ್ಟಿಯ ಕಡೆಗೆ ನಡೆದ. ಇನ್ನೊಂದು ಮಳೆಯಲ್ಲಿ ಬೆಳ್ಳಿ ಈಗ ಹೇಳಿದ ಇನ್ನೊಂದು ಬೇರನ್ನು ಬಿಡಿಸಿಕೊಳ್ಳುತ್ತಿದ್ದಳು. ಇವನನ್ನು ನೋಡಿ “ನೀನೂ ಬಂದೆಯ ಅಯ್ಯ?” ಅಂದಳು.

ಇವನು ತನಗೆ ಸಿಕ್ಕ ಬೇರಿನ ಸಮೇತ ಕಿತ್ತುತಂದ ಗಿಡವನ್ನು ಹೆಮ್ಮೆಯಿಂದ ತೋರಿಸಿದ. ಬೆಳ್ಳಿ ನಾಚಿ ನಕ್ಕಳು.

“ಇದರ ಜೊತೆ ಇನ್ನೊಂದು ಗಿಡ ಇತ್ತಲ್ಲವ?”

“ಇದೆ.”

“ಜೊತೆಗೂಡಿದ ಗಿಡ ಕೀಳಬಾರದು ಅಂತ ಗೊತ್ತಿಲ್ಲವೇನಯ್ಯಾ?”

“ಯಾಕೆ?”

“ಯಾಕೆಂದರೆ ಮದುವೆ ಮಾಡಿದ ಜೋಡಿ ಅವು! ನಾನು ಮತ್ತು ಜಟ್ಟಿಗ ಸೇರಿ ಮದುವೆ ಮಾಡಿದ್ದು. ಬಾ ಇದನ್ನ ಅಲ್ಲೇ ನೆಟ್ಟು ಬರುವಾ.”

-ಎಂದು ಹೇಳಿ ಅವನನ್ನ ಪುನಃ ಹುಲುಗಲ ಮರದ ಬಳಿಗೇ ಕರೆತಂದಳು. ಪುನಃ ನೀರು ತಂದು ಆ ನೆಲವನ್ನು ಒದ್ದೆ ಮಾಡಿ ಸದರಿ ಗಿಡವನ್ನು ನೆಟ್ಟು ಸುತ್ತ ಮಣ್ಣು ಹಾಕಿ ನಮಸ್ಕರಿಸಿದಳು. ಜಯಸೂರ್ಯನಿಗೆ ಮೋಜೆನಿಸಿತು. “ಗಿಡಗಳಿಗೆ ಮದುವೆ!” ಎಂದು ತಂತಾನೇ ನಕ್ಕ.

“ನಗಬೇಡಯ್ಯಾ, ಎರಡು ಗಿಡಗಳಿಗೆ ಮದುವೆ ಮಾಡಿದರೆ ಪುಣ್ಯ ಬರತ್ತೈತಿ! ನೋಡ್ತಾ ಇರು. ಒಂದು ವಾರದಲ್ಲಿ ಎರಡೂ ಹೆಂಗೆ ತಬ್ಬಿಕೊಂಡಿರ್ತಾವಂತ! ಇಕಾ ಇಲ್ಲಿದೆಯಲ್ಲ ಇದು ನಾನು ನೆಟ್ಟದ್ದು. ನೀನು ಕಿತ್ತಿದ್ದೆಯಲ್ಲ? ಇದು ಜಟ್ಟಿಗನದು”

-ಎಂದು ಹೇಳುತ್ತ ಹುಲುಗಲದ ನೆರಳಲ್ಲಿ ಕೂತಳು. ಮಾಗಿದ ಬಿಸಿಲಿನ್ನೂ ಹರಿತವಾಗಿದ್ದರಿಂದ ತಂಪು ನೆರಳು ಹಿತವಾಗಿತ್ತು. ಬೆಳ್ಳಿ ಎಲಡಿಕೆಯ ಸಂಚಿಯ ಬಿಚ್ಚಿದಳು. ಈಗೀಗ ಬೆಳ್ಳಿಯ ಜೊತೆಗೆ ತುಸು ಸಲಿಗೆಯೂ ಬೆಳೆದುದರಿಂದ ಮೈ ಬಿಸಿಯೇರಿತು. ಸುತ್ತ ಯಾರೂ ಇರಲಿಲ್ಲ. ‘ಇವಳನ್ನ ಗಪ್ಪನೆ ಹಿಡಿದುಕೊಂಡು ಯಾಕೆ ಮುದ್ದಿಸಬಾರದು?’ ಅಂದುಕೊಂಡ.

“ಅಕಾ ಅಲ್ಲೊಂದು ಕಾರೀ ಕಂಟಿಯಿದೆ ಕಂಡೆಯಾ?” ಅಂದಳು ಬೆಳ್ಳಿ.

“ಹೌದು ಗೊಂಜಾಳ ಕಾಳಿನಷ್ಟೇ ಚಿಕ್ಕದಾದರೂ ಅದರ ಹಣ್ಣು ಬಹಳ ರುಚಿ. ತರ್ತೀನಿರು.”

ಎಂದು ಹೇಳಿ ಜಯಸೂರ್ಯ ಹೋಗಿ ಕಾರೀ ಕಂಟಿಗೆ ಕೈ ಹಾಕಿದ. ಚಕ್ಕಂತ ಕೈ ಹಿಂತೆಗೆದು ನೋಡಿಕೊಂಡ. ಮುಳ್ಳು ತರಿದು ನಾಲ್ಕೈದು ಕಡೆ ಹಿಂಗೈಗೆ ರಕ್ತ ಬಂದಿತ್ತು, ಚೇಳು ಕಡಿದಂತೆ ಭಾರೀ ಉರಿ ಇತ್ತು. ಬೆಳ್ಳಿ ಬಹಳ ಹರ್ಷದಿಂದ ಸದ್ದು ಮಾಡುತ್ತ ಕಿಲ ಕಿಲ ನಕ್ಕಳು,

"ನೋಡಿದೆಯೇನಯ್ಯಾ ಕಾರಿಯ ಕಂಟಿಯನ್ನ? ನೋಡಿದರೆ ಗಿಡವಲ್ಲ, ಮರವಲ್ಲ, ಚೋಟುದ್ದ ಕಂಟಿ! ಗೊಂಜಾಳದ ಕಾಳಿನ ಗಾತ್ರದ ಹಣ್ಣು. ತಿನ್ನಲಿಕ್ಕೆ ಚಂದ! ಸಣ್ಣ ಕಂಟಿ ತನ್ನ ಹಣ್ಣುಗಳನ್ನ ಕಾಪಾಡಿಕೊಳ್ಳೋದಕ್ಕ ಒಳಗ ಕಾಣದ ಜಾಗದಲ್ಲಿ ಮುಳ್ಳಿಟ್ಟುಕೊಂಡು ಹೆಂಗೆ ಹೊಂಚಿತ್ತು, ನೋಡಿದೆಯಾ? ದೊಡ್ಡ ಮನುಷ್ಯ ಹರೀಬೇಕಂತ ಕೈ ಹಾಕಿದರೆ- ಹಣ್ಣಿಗೂ ಮುಂಚೆ ಮುಳ್ಳು ಮುಂಬಂದು ಸಿಕ್ಕಷ್ಟು ಚರ್ಮ ಕಿತ್ತುಕೊಂಡೇ ಹಿಂದ ಸರಿಯಿತಲ್ಲಪ್ಪ! ಕಂಟಿಯಂಥ ಕಂಟಿಗೂ ತನ್ನನ್ನ ತಾನು ಕಾಪಾಡಿಕೊಳ್ಳೋದು ಗೊತ್ತು ಕಣಣ್ಣಾ!

'ಈ ಮಾತನ್ನವಳು ತನ್ನನ್ನ ಕುರಿತೇ ಆಡಿರಬಹುದು?' ಅಂದುಕೊಂಡ. ಹಾಗಿದ್ದರೆ ಈಗ ತಾನು ಹುಷಾರಾಗಿ ಅದನ್ನು ನಿವಾರಿಸಬೇಕೆಂದು,

"ಬೆಳ್ಳಿ, ನೀರು ಮಾಡೋ ವೈದ್ಯದಲ್ಲಿ ನಿನಗೆ ನಂಬಿಕೆ ಇದೆಯ?" ಅಂದ.

"ತಗಳಪ್ಪ! ಇದೇನಯ್ಯಾ ಹಿಂಕೇಳ್ತಿಯಾ? ನಾ ವೈದ್ಯ ಮಾಡಿದ್ದರಿಂದಲ್ಲೇನು ನಿನ್ನ ಮುರಿದ ಕಾಲು ಸಮ ಆಯ್ತು?"

"ಹೌದು."

"ಮತ್ಯಾಕೆ ಅನುಮಾನ ಬಂತು?"

"ಅದಲ್ಲ ನಾ ಕೇಳಿದ್ದು, ವೈದ್ಯದಿಂದ ಮನುಷ್ಯ ಚಿರಂಜೀವಿ ಆಗ್ತಾನಂತೆ, ಅಂಥ ವೈದ್ಯದಲ್ಲಿ ನಿನಗೆ ನಂಬಿಕೆ ಇದೆಯ? ಅಂದೆ"

"ಚಿರಂಜೀವಿ ಅಂದರ ಸಾಯೋದಿಲ್ಲ-ಅದೇ ಅಲ್ಲವ? ನೀ ಕೇಳೋದು?"

"ಹೌದು"

"ಈ ವಿಸ್ಯ ನಿಂಗೇಳಬೇಕಾದರೆ ಶಿವಪಾದನೇ ಸೈ."

"ಶಿವಪಾದನಿಗೆ ವೈದ್ಯವೂ ಗೊತ್ತ?"

"ಗೊತ್ತ ಅಂದರ? ವೈದ್ಯರ ಗುರು ಅವನು! ಅವನು ಕಲಿಸಿದ್ದೇ ಆಟು ಈಟು ನಾರುಬೇರು ನಾವು ಮಾಡೋದು. ಅವನಿಗೆ ಎಷ್ಟು ವಯಸ್ಸು ಅಂದುಕೊಂಡೆ?"

ಎಂದು ಹೇಳುತ್ತ ಎರಡೂ ಹಸ್ತ ಅಗಲಿಸಿ, ಹತ್ತೂ ಬೆರಳು ತೋರಿಸಿ,-

"ಅವನಿಗೆ ಇಷ್ಟು ಇಪ್ಪತ್ತು ವರ್ಷ ವಯಸ್ಸು! ನಾನು ಈಟಿದ್ದಾಗ ಹೆಂಗಿದ್ನೋ ಈಗಲೂ ಹಂಗೇ ಇದ್ದಾನೆ ಪುಣ್ಯಾತ್ಮ! ಅವನು ಇಚ್ಛಾಮರಣಿ! ಲೋಕದಾಟ ಬೇಡ ಅಂದಾಗ ಗವೀ ಒಳಗಿನ ಅಂತರಂಗ ಸೇರಿ ನಿರ್ವಾಣವಾಗ್ತಾನ. ಶಿವನ ಜೊತೆ ಮಾತಾಡ್ತಾನಪ್ಪ! ನೀ ಅವನ್ನ ಕೇಳಿದರ ಹೇಳಿಯಾನು ನೋಡು."

"ಅಷ್ಟು ವರ್ಷ ಬದುಕಬೇಕಂತ ನಿನಗನ್ನಿಸೋದಿಲ್ಲವ?"

“ನಮಗ್ಯಾಕಯ್ಯ ಅಷ್ಟೊಂದು ಆಯುಷ್ಯ? ನಾವೇನು ಮನುಷ್ಯರನ್ನ ಉದ್ಧಾರ ಮಾಡಬೇಕ? ಅವನಾದರೆ ನಮ್ಮ ಸೀಮಿ ಕಾಪಾಡಬೇಕು. ಗುಡ್ಡರು ಮಕ್ಕಳು ಮರಿಗಳಿಗೆ ರೋಗ ರುಜಿನ ಬರದಾಂಗ ನೋಡಿಕೋಬೇಕು. ತಮ್ಮ ತಮ್ಮಲ್ಲಿ ಜಗಳವಾಡಧಾಂಗ ನೋಡಿಕೋ ಬೇಕು. ಅದಕ್ಕೇ ಅವನು ಸಾವಿರ ವರ್ಷ ಬದುಕೋದು!”

“ಶಿವಪಾದನ್ನ ಯಾವಾಗ ಭೇಟಿ ಮಾಡಿಸ್ತಿ?”

“ನಾನಲ್ಲಪ್ಪೋ - ಜಟ್ಟಿಗ ಕರಕೊಂಡೋಗ್ತಾನ. ಮೊದಲು ಶಿವಪಾದನ ಅಪ್ಪಣೆ ಕೇಳಿಕೋಬೇಕು. ಆಮ್ಯಾಲೆ ಅವನತ್ರ ಹೋಗಬೇಕು. ಜಟ್ಟಿಗ ಎಲ್ಲಾ ಮಾಡ್ತಾನೇಳು.”

ಎಂದೆದ್ದು “ಶಿವಪಾದನಲ್ಲಿ ಇವಯ್ಯನ್ನ ಬಿಟ್ಟರಾಯ್ತು “ಗುರುಬಲ, ಇವಗೆ ಬಲ” ಎಂದು ಅಂದುಕೊಳ್ಳುತ್ತ ನಡೆದಳು. ಜಯಸೂರ್ಯ ಅವಳ ಹಿಂದಿನಿಂದ ನಡೆದ.

## ನಾಲ್ಕು

ಶಿವಪಾದ ಗವಿಯಾಳದ ಅಮ್ಮನ ಮುಂಭಾಗದ ಬೆಂಕಿಯ ಬಳಿ ಕಂಬಳಿಯ ಮ್ಯಾಲೆ ಕುಂತಿದ್ದ. ಎರಡೂ ಕೈಗಳನ್ನು ಮುಂದೆ ಊರಿ ಬಿಸಿಲಕೋಲನ್ನೇ ನೋಡುತ್ತ ಏನೋ ಧ್ಯಾನಿಸುತ್ತಿದ್ದ. ಅಷ್ಟರಲ್ಲಿ ಜಟ್ಟಿಗ “ಶಿವಪಾದವೇ ಶರಣು ಶರಣಾರ್ಥಿ” ಎನ್ನುತ್ತ ಮುಗಿದ ಕೈಗಳ ನೆತ್ತಿಯ ಮ್ಯಾಲಿಟ್ಟುಕೊಂಡು ಬಂದು ದಿಂಡುರುಳಿ ನಮಸ್ಕಾರವ ಆಚರಿಸಿ ಕೂತ. ಜಯಸೂರ್ಯನೂ ಅವನ ಹಿಂದಯೇ ಬಂದು ಬಿಲ್ಲಿನಂತೆ ಬಾಗಿ ನಮಸ್ಕರಿಸಿ ಕೂತ.

ಶಿವಪಾದನ ಬೃಹದಾಕಾರದ ವ್ಯಕ್ತಿತ್ವ ನೋಡಿ ಜಯಸೂರ್ಯನಿಗೆ ಭಯವಾಯಿತು. ತಾನು ಹಿಂದೆಂದೂ ಕಂಡಿರದಷ್ಟು ಎತ್ತರದ ಭವ್ಯ ಆಸಾಮಿ! ಜೋತು ಬಿದ್ದ ಕೆನ್ನೆ, ಸುಕ್ಕುಗಟ್ಟಿದ ಮುಖ, ಬಿಳಿಯ ಉದ್ದನೆಯ ಗಡ್ಡ ಮತ್ತು ಅಲಂಕಾರಿಕವಾಗಿ ಎಂಬಂತೆ ಮೇಲ್ತುಟಿಯ ಎರಡೂ ಬದಿಗಳಿಂದ ಗದ್ದ ದಾಟಿ ಇಳಿಬಿದ್ದ ಮೀಸೆ, ಹಿಮದಂತೆ ಸ್ವಚ್ಛಂದವಾಗಿ ಹರಡಿದ್ದ ಜಡೆಗಳು... ನೇರವಾದ ಮೂಗು ಪ್ರಾಯಾಧಿಕ್ಯದಿಂದ ತುದಿಯಲ್ಲಿ ಕೆಳಗಿಳಿದು ಮೀಸೆಗಳಲ್ಲಿ ಹುದುಗಿತ್ತು. ಗವಿಯ ನೆತ್ತಿಯ ಕಿಂಡಿಯಿಂದಿಳಿದ ಬಿಸಿಲಕೋಲು ನೆಲದ ಮ್ಯಾಲೆ ರಂಗೋಲಿ ಬರೆದಿತ್ತು. ಅದು ಅವನ ಕಣ್ಣುಗಳಲ್ಲಿ ಪ್ರತಿಫಲಿಸಿ ಕಣ್ಣು ತುಪ್ಪದ ಸೊಡರುಗಳಂತೆ ಕಾಣುತ್ತಿದ್ದವು. ಸುದೀರ್ಘವಾದ, ಮುಂಚಾಚಿರುವ ಮೂಳೆಗಳೇ ಕಾಣುತ್ತಿದ್ದ ಬಾಹುಗಳು, ಮೊರದಗಲ ಅಂಗೈ ಮತ್ತು ಪಾದಗಳು... ಮೈ ಮತ್ತು ಮೊಳಕೈಗಳಲ್ಲಿ ಇಳಿಬಿದ್ದ ಚರ್ಮವಂತೂ ಜೋತುಬಿದ್ದು ತೋಳಿನ ಸಡಿಲು ಅಂಗಿ ತೊಟ್ಟುಕೊಂಡ ಹಾಗೆ ಕಾಣುತ್ತಿತ್ತು. ಆ ಚರ್ಮ ನೋಡಿ ಹೌದಂಬೋ ಹಂಗಾಮದಲ್ಲೀತ ಕೊನೇಪಕ್ಷ ಆನೆಗಾತ್ರದವನಾಗಿರಬೇಕೆಂದು ಸಹಜವಾಗಿ ಊಹಿಸಬಹುದಾಗಿತ್ತು. ಸೊಂಟದ ಮ್ಯಾಗಿನ ಕಂದು ಬಟ್ಟೆಯ ವಿನಾ ಮೈಮೇಲೆ ಬಟ್ಟೆಯಿರಲಿಲ್ಲ. ಬಿಸಿಲ ಬೇಗೆಯ ತಾಳದೆ ಮರದ ನೆರಳಲ್ಲಿ ಮಲಗಿದ್ದ ಮುದಿಸಿಂಹದ ಹಾಗಿದ್ದ ಮುದುಕ!

ಇವನನ್ನು ಎಲ್ಲೋ ಕಂಡಿರುವೆನಲ್ಲಾ ಎನಿಸಿತು ಜಯಸೂರ್ಯನಿಗೆ! ಎಲ್ಲಿ? ನಿನ್ನೆ ಕನಸಿನಲ್ಲಿ ತಾನು ಕಾಡಿನೊಂದಿಗೆ ಮಾತಾಡಿದಂತಿತ್ತು; ಅಲ್ಲವೆ? ಕಾಡು ಹ್ಯಾಗೆ ಮಾತಾಡಿತು? ಏನಂತ ಮಾತಾಡಿತು? ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ. ತಲೆ ಕೆದರಿಕೊಂಡು ಬೆಟ್ಟದೆತ್ತರದ ಹೊನ್ನೆಮರವೇ ಈ ಮುದಿಕನಾದಂತಿತ್ತು! ರೆಂಬೆ ಕೊಂಬೆ ಅಲುಗಿ ಮಾತಾಡಿತು! ಏನನ್ನು ಹೇಳಿತು? ನೆನಪಿಲ್ಲ. ಹೋಗಲಿ ತಾನಾದರೂ ಏನು ಮಾತಾಡಿದೆ ? ಅದೂ ನೆನಪಿರಲಿಲ್ಲ. ಈಗ ಮಾತ್ರ ಉದ್ವೇಗಗೊಂಡ. ಆದರೆ ಇವನನ್ನು ನೋಡಿದಾಗಲೇ ಶಿವಪಾದ ಹುಬ್ಬು ಗಂಟು ಹಾಕಿದ್ದ. ಜಟ್ಟಿಗ ಹೇಳಿದ-

“ಕಾಲ್ಮುರಿದುಕೊಂಡು ಕಮರೀ ಒಳಗ ಬಿದ್ದುಕೊಂಡಿದ್ದ ಅಂತ ಹೇಳಿದ್ದೆನಲ್ಲ, ಈವಯ್ಯನೇ, ನಾರು ಬೇರು ಸವರಿ ಕಾಲುಸಮ ಆಗಿದೆ. ಏನೋ ಕೇಳಬೇಕಂತೆ, ಕೇಳಿಕೊಳ್ಳಯ್ಯಾ”

ಎಂದು ಜಯಸೂರ್ಯನ ಕಡೆ ತಿರುಗಿ ಹೇಳಿದ. ಶಿವಪಾದ ಹುಬ್ಬು ಗಂಟುಹಾಕಿ ನೋಡುವಾಗೆಲ್ಲ ಹಣೆಯ ಮೇಲೆ ಹಾಗೂ ಕಣ್ಣಿನ ಸುತ್ತ ಹೆಚ್ಚು ಸುಕ್ಕುಗಳು ರಚನೆಯಾಗುತ್ತಿದ್ದವು. ಬಹಳ ಹೊತ್ತು ಹಾಗೇ ಇದ್ದಾಗ ಸುಕ್ಕುಗಳು ನಿರಿನಿರಿಯಾಗಿ ಕಣ್ಣು ಮಿನುಗುತ್ತಿದ್ದವು. ಆಗ ಅವನು ಯಾರನ್ನು ನೋಡಿದರೂ ದೃಷ್ಟಿ ನಾಟುತ್ತಿತ್ತು. ಅದರ ಅನುಭವವಾಗಿ ಜಯಸೂರ್ಯನ ಗಂಟಲೊಣಗಿ ತುಟಿ ನಡುಗಿದವು. ಆತ ಅದ್ಯಾಕೆ ನನ್ನನ್ನ ಹಾಗೆ ನೋಡುತ್ತಿದ್ದಾನೆ? ನನ್ನಲ್ಲಿ ಅದೇನನ್ನೋ ಹುಡುಕುವ ಹಾಗೆ, ನನ್ನನ್ನ ಸೀಳಿ ವಿವರಗಳನ್ನ ಬಗಿಯುವ ಹಾಗೆ ನೋಡುತ್ತಾನಲ್ಲ! ನನ್ನ ಭೂತಕಾಲ ಇವನಿಗೆ ಗೊತ್ತೆ?

"ನಾಡಿನವನೊ?" ಶಿವಪಾದ ಕೇಳಿದ.

"ಹೌದು"

ಎಂದು ಕತ್ತು ಹಾಕಿದ ಜಯಸೂರ್ಯ. ಮುಖ ಬಿಳಿಚಿಕೊಂಡಿತ್ತು. ಅವನು ತನ್ನ ಗುಟ್ಟನ್ನು ಕೇಳುವ ಮೊದಲು ತಾನೇ ಅವನನ್ನು ಮೈಮರೆಸಬೇಕೆಂದು,

"ಪ್ರಶ್ನೆಗಳಿದ್ದವು, ಕೇಳೋಣ ಅಂತ ಬಂದೆ" ಅಂದ.

"ಆಯ್ತು"

"ನಿಮ್ಮ ವೈದ್ಯವಿದ್ಯೆಯಿಂದ ಚಿರಂಜೀವಿತ್ವ ಸಾಧ್ಯವೆ?"

"ಸಾಧ್ಯ, ಸಸ್ಯ ಹೃದಯ ತಿಳಿದರೆ."

"ಸಸ್ಯ ಹೃದಯ ಅಂದರೆ?"

"ಜಗತ್ತು ಅಸ್ತಿತ್ವಕ್ಕೆ ಬಂದಿರೋದು ಶಿವನಿಂದಾದರೂ ಜಗತ್ತಿನ ವ್ಯವಹಾರ ನಡೆಯುವುದು ಓಂಕಾರದಿಂದ. ಓಂಕಾರವೆಂಬುದು ಒಂದು ಲಯ. ಇರಿವೆಂಭತ್ತು ಲಕ್ಷ ಜೀವರಾಶಿ ಪರಸ್ಪರ ವ್ಯವಹರಿಸುವುದು ಈ ಲಯದಿಂದ. ನಿನ್ನ ಲಯವನ್ನು ವೈದ್ಯ ನಾಡಿಯಿಂದ ತಿಳಿಯುತ್ತಾನೆ. ಹಾಗೆಯೇ ಸಸ್ಯಗಳಿಗೂ ಲಯ ಇದೆ. ನೆಲ ಜಲದೊಂದಿಗೆ ವಾಯು ತಿರ್ಯಕ್ ಜಂತುಗಳಿಗೆ ಅವು ವ್ಯವಹಿಸುವ ಭಾಷೆ ಈ ಲಯ, ಅದೇ ಸಸ್ಯ ಹೃದಯ. ಅದನ್ನರಿತು ಉಪಯೋಗಿಸಿದರೆ ದೇಹ ವಜ್ರದೇಹವಾಗುತ್ತದೆ. ಅದರಾಚೆಯದೇ ವಿದೇಹತ್ವ. ಚಿರಂಜೀವಿತ್ವ ಅಂದರೆ ಇದೇ. ದೇಹವನ್ನು ವಿದೇಹ ಮಾಡಿಕೊಳ್ಳಬೇಕಾದರೆ ದೇಹದ ಕರ್ಮ ಕಳೆದುಕೊಳ್ಳಬೇಕು. ದೇಹದ ಕರ್ಮ ಕಳೆದುಕೊಳ್ಳಬೇಕಾದರೆ ತಪಸ್ಸು ಮಾಡಬೇಕು, ಸಾಧನೆ ಮಾಡಬೇಕು. ಎರಡೂ ಸೇರಿ ಚಿರಂಜೀವಿತ್ವ."

"ನೀವು ಚಿರಂಜೀವಿಗಳ?"

"ಅಲ್ಲ, ನಾನಗಲೇ ದೀರ್ಘಕಾಲ ಬದುಕಿ ಈಗ ಅಮ್ಮನ ಅಪ್ಪಣೆಗಾಗಿ ಕಾಯುತ್ತಿದ್ದೇನೆ."

"ಜ್ಞಾನದಿಂದ ಕರ್ಮ ಸವೆಯುವುದಿಲ್ಲವೆ?"

"ಇಲ್ಲ. ಬೇರೆ ಹೆಸರಿಟ್ಟುಕೊಂಡರೆ ಹಳೆಯ ಹೆಸರು ಹ್ಯಾಗೆ ನೆನಪಿಗೆ ಅಂಟಿಕೊಂಡಿರುತ್ತದೆಯೋ ಹಾಗೆಯೇ ಸಂಚಿತ ಕರ್ಮ ಆತ್ಮ ದೇಹಗಳಿಗೆ ಅಂಟಿಕೊಂಡೇ ಇರುತ್ತದೆ. ಅದರ ಕ್ಷೇಮಕ್ಕಾಗಿ ತಪಸ್ಸು ಬೇಕು."

ಒಂದು ಕ್ಷಣ ಜಯಸೂರ್ಯ ಅಪ್ರತಿಭನಾದ. ತಾನು ಹೆಸರು ಬದಲಿಸಿಕೊಂಡಿದ್ದನ್ನು ಹೀಗೆ ವ್ಯಂಗ್ಯವಾಗಿ ಸೂಚಿಸಿರಬಹುದೆ? ತನ್ನ ರಕ್ಷಣೆ ಮಾಡಿಕೊಳ್ಳಬೇಕು ಎಂದುಕೊಂಡು ಭಂಡತನದಿಂದ ಕೇಳಿದ:

"ಉಗ್ರ ತಪಸ್ಸು ನನ್ನಿಂದ ಸಾಧ್ಯವೆಂದು ಅನ್ನಿಸುತ್ತದೆಯಾ?"

"ಅದು ನಿನಗೇ ಗೊತ್ತು."

"ನೀವು ಅನುಗ್ರಹಿಸಿದಲ್ಲಿ ವೈದ್ಯ ವಿದ್ಯೆ ಕಲಿಯಲು ನನಗೆ ಆಸಕ್ತಿ ಇದೆ. ಒಪ್ಪಿಕೊಳ್ಳಬೇಕು."

ಶಿವಪಾದ ಬಾಯಿ ಕಟ್ಟಿದವರಂತೆ ಸುಮ್ಮನಾದ. ಇಂಥವನಿಗೆ ವಿದ್ಯೆಯ ಧಾರೆಯೆರೆದು ದುರುಪಯೋಗವಾದರೆ.... ತಮ್ಮ ಪ್ರಸ್ಥಾನದ ಪರಂಪರೆಯ ನೆನಪಾಗಿ ಚಿಂತಿತನಾದ. ಹಣೆ ಮತ್ತು ಕಣ್ಣ ಸುತ್ತಿನ ಸುಕ್ಕುಗಳು ಬಿಗಿದುಕೊಂಡವು. ಜಟ್ಟಿಗನಿಗೂ ಶಿವಪಾದನ ಮುಖ ನೋಡಿ ಹಿತವೆನಿಸಲಿಲ್ಲ. ಟಕಮಕ ಇಬ್ಬರ ಮುಖ ನೋಡುತ್ತ ಕೂತ. ಕೊನೆಗೆ ಶಿವಪಾದನೇ ದೊಡ್ಡ ಮನಸ್ಸು ಮಾಡಿ ಹೇಳಿದ:

"ನೋಡಯ್ಯ, ಅಮ್ಮನ ಮುಂದೆ ವಿದ್ಯೆ ಕೇಳಿದಾಗ ಇಲ್ಲ ಅನ್ನುವಂತಿಲ್ಲ. ವಿದ್ಯೆಯ ದುರುಪಯೋಗವಾದರೆ ಆ ಕರ್ಮ ನಿನ್ನದೇ. ಇಲ್ಲಿಗೆ ಬಂದಮೇಲೆ ಗವಿಯ ನಿಯಮಗಳ ರೀತ್ಯಾ ಇರಬೇಕು. ಶಿವಸಂಕಲ್ಪವನ್ನು ಮುರಿಯುವುದು ಯಾರಿಂದಲೂ ಸಾಧ್ಯವಿಲ್ಲ. ನಾಳೆ ಗೋಧೂಳಿ ಲಗ್ನಕ್ಕೆ ಬಾ. ಈಗ ಇಬ್ಬರೂ ಹೊರಡಿರಿ."

ಜಟ್ಟಿಗ ಮತ್ತು ಜಯಸೂರ್ಯ ಗವಿಯ ಹೊರಗೆ ಬಂದಾಗ ಕಾಡಿನ ಕಡೆಯಿಂದ ಮಳೆಯಗಾಳಿ ಬೀಸತೊಡಗಿತ್ತು. ದೊಡ್ಡ ಗಿಡಮರಗಳು ಕೂಡ ಹೊಯ್ದಾಡುತ್ತಿದ್ದವು. ಒಣ ಎಲೆಗಳು ಹಾರಿ ಬಂದು ಜಯಸೂರ್ಯನ ಕಣ್ಣಿಗೆ ರಾಚಿದವು. ಒಂದೆರಡು ಮಳೆ ಹನಿಗಳು ರಪ್ಪೆಂದು ಅವನ ಕೆನ್ನೆಗೆ, ಹಣೆಗೆ ಹೊಡೆದವು. ತುಟಿಯ ಮ್ಯಾಲೊಂದು ಹನಿ ಬಿತ್ತು, ನೆಕ್ಕಿದ. ಕಾಡಿನ ಯಾವುದೋ ಹೂವಿನ ರುಚಿಯಿದ್ದಂತಿತ್ತು.

ಮೂರನೇ ದಿನ ಶಿವಪಾದ ಹೇಳಿದ ಸಮಯಕ್ಕೆ ಸರಿಯಾಗಿ ಗವಿಗೆ ಹೋದ.

## ಐದು

ಮೊದಮೊದಲು ಗವಿಯ ಜೀವನಕ್ಕೆ ಹೊಂದಿಕೊಳ್ಳುವುದು ಜಯಸೂರ್ಯನಿಗೆ ಕಷ್ಟವಾಯಿತು. ಮೊದಲನೆಯ ಕಷ್ಟ ದೇವರಿಂದಲೇ ಸುರುವಾಯಿತು. "ನೀನು ನಾಸ್ತಿಕನೋ?" ಎಂದು ಕೇಳಿದ ಶಿವಪಾದ.

"ಹೌದು"

"ನಾಸ್ತಿಕನೋ, ಆಸ್ತಿಕನೋ-ಯಾರಾದರು ಆಗಿರು. ಇಲ್ಲಿರುವತನಕ ನೀನು ಅಮ್ಮನಲ್ಲಿ ನಂಬಿಕೆ ಇಡಲೇಬೇಕು. ನಿನ್ನ ಧ್ಯಾನ ಜಪತಪಗಳ ಗುರಿ ಅಮ್ಮನೇ ಆಗಬೇಕು. ಅಂದರೇ ನಿನಗೆ ಸಸ್ಯಹೃದಯ ದಕ್ಕೋದು. ಅಮ್ಮನೇ ಆಗಬೇಕಂತಲೂ ಹೇಳಲಾರೆ, ನೀನು ನಂಬುವ ದೇವರೊಂದಾದರೆ ಸಾಕು."

-ಎಂದು ತಾಕೀತು ಮಾಡಿಯೇ ಜಯಸೂರ್ಯನನ್ನು ಒಪ್ಪಿಸಿದ. ಜಯಸೂರ್ಯ ಮಾಡಿಕೊಂಡ ಒಂದು ಬದಲಾವಣೆಯೆಂದರೆ ಅಮ್ಮನ ಬದಲು ಸೂರ್ಯನನ್ನು ಅಂದರೆ ತನ್ನ ಕುಲದೇವರನ್ನು ನಂಬಿದ. ತನ್ನ ಜಪತಪಾದಿಗಳಿಗೆ ಅವನನ್ನೇ ಗುರಿಯಾಗಿಟ್ಟುಕೊಂಡ. ಆದರಿದನ್ನು ಶಿವಪಾದನಿಗೆ ತಿಳಿಸಲಿಲ್ಲ, ತಿಳಿಸುವ ಅಗತ್ಯವೂ ಕಾಣಲಿಲ್ಲ.

ಪ್ರಾರಂಭದ ದಿನಗಳಲ್ಲಿ ರೂಢಿಯಾಗುವತನಕ ಇರಲೆಂದು ಜಯಸೂರ್ಯನೊಂದಿಗೆ ಕುರುಮಿನಿಯೆಂಬ ಇನ್ನೊಬ್ಬ ಸಾಧಕನನ್ನು ಜೋಡಿಸಲಾಯಿತು. ಕುರುಮುನಿ ಸುಮಾರು ಮಧ್ಯವಯಸ್ಸಿನ ಕುಳ್ಳ. ದಟ್ಟವಾದ ಉದ್ದ ಕೂದಲು, ದೊಡ್ಡ ಮೂಗು, ಬೆಕ್ಕಿನ ಕಣ್ಣಿನ ದಢೂತಿ ಕುಳ. ಅವನ ಮೂಗು ಸದಾ ಮುಗಿಲು ನೋಡುವಂತೆ ಮುಖ ಮ್ಯಾಲೆತ್ತಿಕೊಂಡೇ ಇರುತ್ತಿದ್ದ. ಮಲೆಯಾಳದ ಮಂತ್ರತಂತ್ರಾದಿಗಳನ್ನ ಆಗಲೇ ರೂಢಿಸಿಕೊಂಡಿದ್ದ ವಾಮಾಚಾರಿ. ಮರದ ತುಂಡಿನಂತೆ ಕೈ ಕಾಲುಗಳಿಗೆ ಬೆಂಕಿ ಹಚ್ಚಿಕೊಳ್ಳುವುದು, ತಂಬಾಕು ಸೇದುವ ಸಾಧಕರಿಗೆ ಚಿಟಿಕೆ ಹಾರಿಸಿ ತೋರುಬೆರಳಲ್ಲಿ ಉರಿ ಮಾಡಿ ಚಿಲುಮೆ ಹೊತ್ತಿಸುವುದು ಇತ್ಯಾದಿ ಮಾಡಿ ಎಲ್ಲರನ್ನು ನಗಿಸುತ್ತಿದ್ದ. ನೋಡಿದೊಡನೆ ಶಿವಪಾದ ಅವನನ್ನು ಕುರುಮುನಿ ಎಂದು ಕರೆದ. ಮುಂದೆ ಅವನೆಂದೂ ತನ್ನ ಮೂಲಹೆಸರನ್ನು ಯಾರಿಗೂ ಹೇಳಲಿಲ್ಲ. ಶಿವಪಾದನ ಬಗ್ಗೆ ಮಾತ್ರ ಪ್ರಾಣ ಕೊಡುವಷ್ಟು ಭಕ್ತಿಯಿದ್ದವ. ಶಿವಪಾದನಿಗೂ ಇವನ್ನು ಕಂಡರೆ ಬಲು ಪ್ರೀತಿ. ಆದರೆ ಈತ ವಿದ್ಯೆಗಳ ಬಗ್ಗೆ ಆಸೆಬುರುಕ, ತನಗೆ ಬೇಡವೆಂದು ಶಿಷ್ಯರು ಬಿಟ್ಟ ವಿದ್ಯೆಗಳನ್ನೆಲ್ಲ ನನಗವು ಬೇಕು ಎಂದು ಪಡೆಯುತ್ತಿದ್ದ.

ಆ ಮೊದಲು ರಾತ್ರಿ ಮಲಗಿ ಇನ್ನೂ ನಿದ್ದೆ ಕೂಡ ಹತ್ತಿರಲಿಲ್ಲ. 'ಏಳು ಶಿವಾ' ಎಂದು ಕುರುಮುನಿ ಅವನನ್ನು ಎಬ್ಬಿಸಿ ಮಿಂದು ಬರಲು ಮಡುವಿಗೆ ಕರೆದೊಯ್ದು. ಗವಿಯಿಂದ ಮಡು ದೂರವಿತ್ತು. ಕಾಡಿನಲ್ಲಿ ನಡೆಯಬೇಕು. ಒಂದು ಸಲ "ಹೆಜ್ಜೆ ಇಡಬೇಡ ಹುಳ ಇದೆ" ಅಂದ. ಅಲ್ಲಿ ಹೆಜ್ಜೆ ಇಡಲಿಲ್ಲ. ಆದರೆ ಹುಳವೂ ಕಾಣಲಿಲ್ಲ. ಕಾಲೋಚಿತ ಕರ್ಮಂಗಳ ಮುಗಿಸಿ, ಮಡುವಿನಲ್ಲಿ ಇನ್ನೇನು ಕಾಲಿಡಬೇಕು-ಆಚೆ ದಡದಲ್ಲಿ ಹುಲಿಯೊಂದು ತನ್ನೆರಡು ಮರಿಗಳೊಂದಿಗೆ ದಂಡೆಯಲ್ಲಿ ನಿಂತಿತ್ತು. ನೋಡಿ ಗಾಬರಿಯಾದ. ಕುರುಮುನಿ ತನ್ನ ಪಾಡಿಗೆ ತಾನು ಮುಳುಗಿದ. ಹೆದರುತ್ತಲೇ ಇವನೂ ಅವನನ್ನು ಅನುಸರಿಸಿದ. ಒದ್ದೆಯಲ್ಲೇ ಗವಿಗೆ ಬಂದ ಮೇಲೆ ಕುರುಮುನಿಯ ವ್ರತಬೋಧನೆ ಸುರುವಾಯಿತು. ಮೊದಲು ಯೋಗ, ಧ್ಯಾನ ಅನಂತರ ಅಧ್ಯಯನ ಮೊದಲಾಗಿ ಮೂರು ತಾಸು ಹೊತ್ತೇರುವತನಕ ಸಾಗಿತು.

ಆಹಾರಕ್ಕೆ ಶಿಷ್ಯರೇ ಕಾಡಿಗೆ ಹೋಗಬೇಕು. ಸಿಗುವ ಹಣ್ಣು ಹಂಪಲ ತಿಂದು ಬರಬೇಕು. ಬೇಕಾದರೆ ಅಕ್ಕಿಯ ತಮ್ಮ ಗಂಜಿ ತಾವೇ ಕುದಿಸಿಕೊಳ್ಳಬೇಕು. ಹಾಸಿ ಹೊದೆಯಲಿಕ್ಕೆ ಸಿಕ್ಕೋದು ಒಂದು ಕಂಬಳಿ, ಎರಡು ಲಂಗೋಟಿ, ಮಾರುದ್ದದ ಎರಡು ದಟ್ಟಿ ಬಿಟ್ಟರೆ ಬೇರೆ ಬಟ್ಟೆಗಳೇ ಇಲ್ಲ.

ಹೀಗೆ ಮೂರು ತಿಂಗಳು ಕಳೆದ ಮೇಲೆ ಕುರುಮುನಿ ಮೊದಲನೆ ಮಂತ್ರ ಹೇಳಿದ. ಎಷ್ಟು ಸಲ ಪ್ರಯತ್ನಿಸಿದರೂ ಕುರುಮುನಿಯಂತೆ ಹೇಳಲು ಸಾಧ್ಯವಾಗಲಿಲ್ಲ. 'ಮನಸ್ಸಿನ ಏಕಾಗ್ರತೆ ಸಾಧ್ಯವಾಗುತ್ತಿಲ್ಲ. ನಿನ್ನ ಮಾತು ತಿಳೀವಲ್ದು, ಏನು ಮಾಡಲಿ?' ಅಂದ.

"ನೋಡಪಾ"-ಕುರುಮುನಿ ಹೇಳಿದ-"ಮನಿಶ್ಯಾನ ಮನಸು ಮಂಗ್ಯಾನ್ಹಾಂಗ ಭಾಳ ಚಂಚಲ. ಕುಂತಲ್ಲಿ ಕುಂದ್ರಾಣೆಲ್ಲ, ನಿಂತಿಲ್ಲಿ ನಿಂದ್ರಾಣೆಲ್ಲ. ಅದು ಅದರ ವೃತ್ತಿ, ಅದಕ್ಕ ನೀ ಏನ ಮಾಡಬೇಕು? ಅದನ್ನ ಕೈಯಾಗಿಟಕೋಬೇಕು. ಅಂದರ ಅದರ ವೃತ್ತಿ ಮ್ಯಾಗ ನಿನ್ನ ಹಿಡಿತ ಇಡಬೇಕು. ಈಗ ನೋಡಪಾ ನಾ ಹೇಳಿದ್ದು ನಿನ್ನ ತಲ್ಯಾಗ ಇಳೀತೈತಿ."

ಹಲ್ಲು ಕಚ್ಚಿ ಚಿತ್ತಕ್ಕೆ ಸಹಜವಾದ ವ್ಯಭಿಚಾರ ವೃತ್ತಿಯನ್ನು ನಿಯಂತ್ರಿಸಿಕೊಂಡು ಛಲದಿಂದ ಸಾಧನೆ ಸುರು ಮಾಡಿದ.

ಪ್ರಾರ್ಥನೆ ಮತ್ತು ಪ್ರಸ್ತಾವನೆಯ ಮಂತ್ರ ಹೇಳಿ ಇನ್ನೆರಡು ತಿಂಗಳು ಕಳೆದೂ ಕುರುಮುನಿ ಮುಂದಿನ ಮಂತ್ರ ಹೇಳಲೇ ಇಲ್ಲ. ಜಯಸೂರ್ಯನ ಮನಸ್ಸಿನಲ್ಲಿ ಅನುಮಾನ ಸುರುವಾಯಿತು. ಮುದುಕ ತನ್ನನ್ನು ನಂಬಿಲ್ಲವೆಂದು, ಇಲ್ಲಿಯ ಕಠಿಣ ಜೀವನಶೈಲಿಗೆ ಬೆದರಿ ಮಧ್ಯದಲ್ಲೇ ಬಿಟ್ಟು ಓಡಿಹೋಗುವನೆಂದುಕೊಂಡನೋ? ಅಥವಾ ಅದೇ ಅದೇ ಮಂತ್ರವನ್ನು ಮತ್ತೆ ಮತ್ತೆ ಹೇಳಿ ಬೋರಾಗಿ ಜಾಗ ಕಾಲಿ ಮಾಡುವನೆಂದುಕೊಂಡನೋ? ಮಧ್ಯಾಹ್ನ ಶಿವಪಾದನ್ನು ಕೇಳಿಯೇ ಬಿಟ್ಟ. ಶಿವಪಾದ ಹೇಳಿದ:

"ನೋಡಯ್ಯಾ ವಿದ್ಯೆ ದಕ್ಕಬೇಕೆಂದರೆ ವಿದ್ಯಾರ್ಥಿಯಾದಾತ ಆತುರಕ್ಕೆ ವಶನಾಗಬಾರದು. ಹಾಗಂತ ಆತುರವನ್ನೂ ಬಿಡಬಾರದು. ಮನಸ್ಸನ್ನ ನಿಯಂತ್ರಣದಲ್ಲಿಟ್ಟುಕೊಂಡವನೇ ವಿದ್ಯೆಯನ್ನು ವಶಮಾಡಿಕೊಳ್ಳಬಲ್ಲ. ನೀನು ಮಂತ್ರ ಹೇಳಿದರೆ ಅದು ಮನುಷ್ಯ, ಪ್ರಾಣಿ ಸಸ್ಯಾದಿ ತಿರ್ಯಕ್ ಜಗತ್ತಿಗೆ ತಲುಪುವಂತಿರಬೇಕು. ಈಗ ನಿನ್ನ ಮಂತ್ರ ತಲುಪುತ್ತಿರುವುದು ಆ ಮಂತ್ರವನ್ನ ಮೊದಲೇ ಬಲ್ಲ ಮನುಷ್ಯರಿಗೆ ಮಾತ್ರ. ಆದ್ದರಿಂದ ನಿನ್ನ ಮಂತ್ರಪಠಣ ಹೆಂಗಿರಬೇಕು ಮೊದಲು ತಿಳಿದುಕೊ. ಹೋಗಲಿ, ನಿನ್ನ ಮಂತ್ರಪಠಣಕ್ಕೂ

ಕುರುಮುನಿಯ ಮಂತ್ರಪಠಣಕ್ಕೂ ವ್ಯತ್ಯಾಸ ತಿಳಿಯುವುದೇನಯ್ಯ? ಸಸ್ಯಹೃದಯದಲ್ಲಿರೋದು ಬರೀ ವರ್ಣಗಳು. ಅವುಗಳನ್ನು ಅವುಗಳ ಸಹಜ ಲಯದಲ್ಲಿ ಹೇಳಿದರೇ ಅವು ಮಂತ್ರವಾಗೋದು; ಮಂತ್ರ ಕೇಳಿದರೆ ಮಾತ್ರ ಅಭಿಮಾನಿ ದೇವತೆ ಪ್ರಸನ್ನವಾಗೋದು."

ಜಯಸೂರ್ಯನಿಗೆ ತನ್ನ ತಪ್ಪಿನ ಅರಿವಾಯಿತು. ಒಂದು ಮಂತ್ರವನ್ನ ಅದರ ನೈಜ ಲಯದಲ್ಲಿ ಉಚ್ಚರಿಸುತ್ತ ಹೋದಂತೆ ಅದರ ಪರಿಣಾಮ ದೇಹದ ನರಮಂಡಲದಲ್ಲಿ ಕಂಪನ ಹುಟ್ಟಿಸುತ್ತ, ಚಿತ್ತದ ವ್ಯಭಿಚಾರಿ ವೃತ್ತಿಯನ್ನು ನಿಯಂತ್ರಿಸುವುದನ್ನು ಅನುಭವಿಸಿದ. ಅದೊಮ್ಮೆ ಏಕಾಗ್ರಗೊಂಡಾದ ಮೇಲೆ ಮಂತ್ರದ ಅಭಿಮಾನಿ ದೇವತೆಯನ್ನು ಧ್ಯಾನಿಸುತ್ತ ಮಂತ್ರ ಪಠಿಸಿದಾಗ ಬಹಳ ಹೊತ್ತಾದ ಬಳಿಕ ತನಗೇ ತಿಳಿಯದಂತೆ ತನ್ನೊಳಗೆ ಲಯದ ಕಂಪನಗಳು ಹುಟ್ಟಿ ವ್ಯಾಪಿಸುತ್ತಿರುವ ಅನುಭವವಾಯಿತು.

ಇನ್ನೊಂದು ದಿನ ಶಿವಪಾದನೇ ಮಂತ್ರೋಚ್ಚಾರಣೆ ಮಾಡಿ ಜಯಸೂರ್ಯನಿಗೆ ತನ್ನೊಂದಿಗೆ ಉಚ್ಚರಿಸಲು ಹೇಳಿದ. ಹಾಗೆ ಉಚ್ಚರಿಸುತ್ತಿದ್ದಂತೆ ಒಮ್ಮೆಲೆ ತನ್ನ ಚಿತ್ರ ಸ್ವರೂಪದಲ್ಲಿ ಬದಲಾವಣೆಯಾಗಿ ಶಿವಪಾದನ ಕಡೆಗೆ ನೋಡಿದ. ಅವನು ಮುಗುಳು ನಗುತ್ತ ಮಂತ್ರ ಪಠಿಸುತ್ತಲೇ ಇದ್ದ. ಬರುಬರುತ್ತ ತನ್ನ ಹೆಸರು ಮತ್ತು ವೃತ್ತಿ ಮರೆತು ಹೋದಂತೆ ಮಂತ್ರ ಪಠಿಸುತ್ತಲೇ ಇದ್ದ. ಬರಬರುತ್ತ ತನ್ನ ಹೆಸರು ಮತ್ತು ವೃತ್ತಿ ಮರೆತು ಹೋದಂತೆ ಭಾಸವಾಯಿತು. ಮಂತ್ರ ದೇಹದಾದ್ಯಂತ ವ್ಯಾಪಿಸಿ ಅದರ ಕಂಪನಗಳಿಗೆ ನರಮಂಡಳದ ಹುರಿ ಬಿಗಿದಂತೆನಿಸಿತು. ಮಂತ್ರವನ್ನು ತಾನು ಅಥವಾ ತನ್ನ ದೇಹ ಉಸಿರುತ್ತಿದೆಯೋ ಅಥವಾ ಮಂತ್ರವೇ ತನ್ನನ್ನು ಮೀಟಿ ಮಂತ್ರದ ನಾದ ಹೊಮ್ಮುವಂತೆ ಮಾಡುತ್ತಿದೆಯೋ? ತಿಳಿಯದಾಯಿತು. ಅದೇ ಅದೇ ಮಂತ್ರವನ್ನು ಮತ್ತೆ ಮತ್ತೆ ನುಡಿಯುತ್ತಿದ್ದಂತೆ ಅದರ ಕಂಪನಗಳಿಂದ ತನ್ನ ಸುತ್ತ ಉಗುರು ಬೆಚ್ಚಗಿನ ಒಂದು ಶಾಖದ ವಲಯ ನಿರ್ಮಾಣವಾದಂತಾಯಿತು. ಮೆಲ್ಲಗೆ ಈಗ ಅಮ್ಮನ ಕಲ್ಲಿನ ಕಡೆಗೆ ನೋಡಿದ. ಆದರೆ ಅಲ್ಲಿ ದೊಡ್ಡಕಣ್ಣುಗಳುಳ್ಳ ಅಮ್ಮನ ಒರಟು ಮೂರ್ತಿ ಇರಲಿಲ್ಲ. ಒಂದು ದೊಡ್ಡ ಗರುಡ ಪ್ರತ್ಯಕ್ಷವಾಗಿತ್ತು! ಇರಿವ ಕಣ್ಣಿನ ಆ ಪಕ್ಷಿಯ ನೋಟ ಭಯಾನಕವಾಗಿತ್ತು. ಚೂಪಾದ ಕೆಂಪು ತುದಿ ಮುಂದೆ ಬಾಗಿತ್ತು. ಈಗಷ್ಟೆ ಹಾರಿ ಬಂದು ಕೂತಂತಿದ್ದ ಅಥವಾ ಇನ್ನೇನು ಹಾರಲಿರುವಂತಿದ್ದ ಹಕ್ಕಿ ಬಲಾಢ್ಯವಾದ ರೆಕ್ಕೆಗಳನ್ನು ಪೂರ್ತಿ ಮುಚ್ಚಿಕೊಂಡಿರಲಿಲ್ಲ. ಪಕ್ಷಿಯನ್ನು ನೋಡುತ್ತಿದ್ದಂತೆ ಆಸ್ಮಿತಾವೃತ್ತಿ ಹುಟ್ಟಿ ಮನೋಬುದ್ಧಿಗಳು ಜಾಗೃತವಾಗಿ ದೇಹಭಾವ ಮೂಡಿತು. ಮೆಲ್ಲನೆ ಶಿವಪಾದನ ಕಡೆಗೆ ನೋಡಿದ. ಸಮಾಧಿಯಲ್ಲಿದ್ದ ಆತನ ಹುಬ್ಬು ಗಂಟು ಬಿದ್ದಿದ್ದವು. ಮುಚ್ಚಿದ ಕಣ್ಣುಗಳಲ್ಲಿ ಆತ ತಾನು ಕಂಡ ಹಕ್ಕಿಯನ್ನು ಕಂಡಂತಿತ್ತು!

## ಆರು

ಅದಾಗಿ ಒಂದು ತಿಂಗಳಾದ ಮೇಲೆ ಕುರುಮುನಿಯು ಜಯಸೂರ್ಯನಿಗೆ ಸಸ್ಯಹೃದಯವನ್ನು ಕೊಟ್ಟ. ಗ್ರಂಥ ಕೈಗೆ ಬಂದುದೇ ತಡ ಏಕಾಂತಕ್ಕೆ ಹೋಗಿ ಅದು ನಿಜವಾದ ಸಸ್ಯಹೃದಯವೇ? ಅಲ್ಲವೆ?-ಅಂತ ಪರೀಕ್ಷೆ ಮಾಡಿದ. ಬಹಳ ಹಿಂದೆ ಬರೆದ ಗ್ರಂಥವಾದುದರಿಂದ ತಾಡೋಲೆಯ ಕೆಲವು ಪುಟಗಳ ತುದಿಗಳ ಅತಿಬಳಕೆಯಿಂದ ಹರಿದಿದ್ದವು. ಗ್ರಂಥವು ಶಿಥಿಲವಾಗಿತ್ತು. ಓದುತ್ತ ಹೋದ ಹಾಗೆ ವಿಶ್ವಾಸ ಮೂಡಿತು. ಬಹಳ ಹಿಂದೆ ಆ ಗವಿಯಲ್ಲಿದ್ದ ಒಬ್ಬ ಶಿವಪಾದನೇ ಬರೆದಿದ್ದ ಗ್ರಂಥವದು. ಪ್ರಸ್ತಾವನೆಯಲ್ಲಿ ಅಮ್ಮನ ವರ್ಣನೆ, ಆಮೇಲೆ ಸುಂದರವಾದ ಕಾಡಿನ ವರ್ಣನೆ ಬರುತ್ತದೆ.

"ಸ್ವಚ್ಛಂದವಾಗಿ ಬೆಳೆದ ಈ ಕಾಡಿನಲ್ಲಿರುವ ತರುಮರಾದಿಗಳು ತಾಯಿ ಆಕಾಶದಲ್ಲಿರುವಳೋ ಎಂದು ಭಾವಿಸಿ ಅವಳ ಪಾದಸ್ಪರ್ಶಕ್ಕಾಗಿ ಎತ್ತರ ಎತ್ತರವಾಗಿ ಬೆಳೆದಿವೆ. ಈ ಮರಗಳು ಹೂ ಹಸಿರುಗಳಿಂದ ಬೀಗುತ್ತ ಬಳಕುತ್ತ ಚೇಷ್ಟೆ ಮಾಡುವ ಗಾಳಿಗೆ ನಲಗುತ್ತವೆ. ಇಲ್ಲಿಯ ಒಂದೊಂದು ಮರದಲ್ಲೂ ಅದು ಇವತ್ತೇ ಹುಟ್ಟಿದಷ್ಟು ತಾಜಾತನ ಇರುತ್ತದೆ. ಮತ್ತು ಅದು ಅಲೌಕಿಕವಾದ ಪರಿಮಳವನ್ನು ಪಸರಿಸುತ್ತದೆ. ತಾಯಿಯ ಒಡೆತನವಿರುವ ಈ ಕಾಡಿನಲ್ಲಿ ಒಟ್ಟು ಸಾವಿರದಾ ಒಂಬೈನೂರು ಜಾತಿಯ ಮರಗಳು, ಸಾವಿರದಾ ಮುನ್ನೂರು ಜಾತಿಯ ಬಳ್ಳಿಗಳು, ನಾಲ್ಕುಸಾವಿರದಾ ಎಂಟನೂರು ಮೂಲಿಕೆಗಳ ಇವೆ. ಅಲ್ಲದೆ ಕೈಲಾಸದ ಶಿವನಿಗೆ

ಪ್ರಿಯವಾದ ಒಂದುಜಾತಿಯ ಪತ್ರಿಯ ಮರ ಇಲ್ಲಿದ್ದು ಅದು ಹಿಮಾಲಯದಲ್ಲೂ ಇಲ್ಲ! ಇಲ್ಲಿಯ ತರುಮರ ನಾರು ಬೇರು ಮೂಲಿಕೆಗಳನ್ನು ಕೀಳುವವರು ಮೊದಲು ಅಮ್ಮನಿಗೂ ಆಮೇಲೆ ಕಾಡಿಗೂ ಪ್ರಾರ್ಥನೆ ಮಾಡಿ ಆಮೇಲೆ ಸದರಿ ಸಸ್ಯಕ್ಕೂ ಪ್ರಾರ್ಥಿಸಿ, - ಅನಿವಾರ್ಯವಾದುದರಿಂದ ಮತ್ತು ಒಂದು ಜೀವವ ಉಳಿಸಬೇಕಾಗಿರುವುದರಿಂದ ಕೇಳುತ್ತಿದ್ದೇನೆ; ದಯಪಾಲಿಸಬೇಕು - ಎಂದು ಕೇಳಿ ಅದರ ಸಮ್ಮತಿಯೊಂದಿಗೆ ಅದನ್ನು ಪಡೆಯಬೇಕು."

ಎಂದು ಬರೆದದ್ದನ್ನು ಓದಿ ಜಯಸೂರ್ಯ ಚಕಿತನಾದ.

ಈ ಕಾಡಿನಲ್ಲಿ ಹರಿದು ಬೆಟ್ಟದಿಂದ ಜಿಗಿದು, ಕೆಳಗೆ ಮಡುವಾಗಿ, ಆಮೇಲೆ ತೊರೆಯಾಗಿ ಹೊಳೆಯಾಗಿ ಹರಿವ ಘಟಪ್ರಭೆಯ ಮತ್ತು ತಾಯಿಯ ಬಗ್ಗೆ ಮೂರು ಪದ್ಯಗಳಿವೆ:

"ಘಟಪ್ರಭೆಯ ಸ್ವಚ್ಛವಾದ ನೀರು ಹೃದಯಕ್ಕೆ ಆಹ್ಲಾದಕಾರಿ ಹಾಗೂ ಇಂದ್ರಿಯಗಳಿಗೆ ಚೈತನ್ಯದಾಯಕವಾಗಿರುತ್ತದೆ. ಚಿಕಿತ್ಸೆಗೆ ಸಹಾಯಕಾರಿಯಾಗಿರುವ, ಶಕ್ತಿಭರಿತ ಖನಿಜಾಂಶಗಳನ್ನೂ, ರಾಸಾಯನಿಕ ಸಂಯುಕ್ತಗಳನ್ನೂ ಒಳಗೊಂಡ ಶುಭ್ರವಾದ ಈ ನೀರು ಜಲತರಂಗಗಳಲ್ಲಿ ಸಂಗೀತವನ್ನುಂಟು ಮಾಡುತ್ತ ಹರಿಯುತ್ತದೆ. ಈ ನೀರು ಕುಡಿದವರಿಗೆ ಮುಪ್ಪು ಆವರಿಸುವುದಿಲ್ಲ. ಅವರ ಇಂದ್ರಿಯಗಳು ಕ್ಷೀಣಿಸುವುದಿಲ್ಲ. ನಿತ್ಯವೂ ತಾಯಿಯ ಪೂಜ್ಯಪಾದಗಳನ್ನು ತೊಳೆವ ಘಟಪ್ರಭೆಗೆ ನಮಸ್ಕಾರ.

ತಾನೇ ಬೆಟ್ಟದ ತರುಮರಗಳಾಗಿ, ಹೂ ಹಸಿರಾಗಿ ಹೂವಿನ ಪರಿಮಳವಾಗಿ ತನ್ನ ಪರಿಮಳವನ್ನ ತಾನೆ ಆಘ್ರಾಣಿಸಿ ಆನಂದಿಸುವ ತಾಯಿಗೆ ನಮಸ್ಕಾರ.

ದೇವಾನುದೇವತೆಗಳನ್ನು, ದೇವತೆಗಳಂಥ ಶಿವಾಪುರದ ಮಾನವರನ್ನು ತಾಮಸ ರಜೋಗುಣ ರಹಿತರಾದ ಬೆಟ್ಟದ ಸಿದ್ಧರನ್ನು ಕಾಪಾಡುವ ತಾಯಿಗೆ ನಮಸ್ಕಾರ."

* * *

ಇಂತಪ್ಪ ಸಸ್ಯಹೃದಯ ಓದಿದ ಮೇಲೆ ಜಯಸೂರ್ಯ ಕಾಡನ್ನು ನೋಡತೊಡಗಿದ. ಈ ತನಕ ಕಾಡಿನಲ್ಲಿ ಒಂದೇ ಹಸಿರು ಕಾಣಿಸುತ್ತಿದ್ದದ್ದು ಈಗ ಗಿಣಿಹಸಿರು, ಕಡುಹಸಿರು, ಬಂಗಾರ ಹಸಿರು, ತೆಳು ಹಸಿರು ಇತ್ಯಾದಿ ಅನೇಕ ವಿಧಗಳಿರುವುದನ್ನು ಕಂಡುಕೊಂಡ. ಜೀವರಸದಿಂದ ತುಂಬಿದ ಲಾವಣ್ಯಗಳನ್ನು ಸುತ್ತ ರಚಿಸಿಕೊಂಡು ಆನಂದಪರವಶ ಹಸಿರನ್ನ ಕಂಡಾಗ ಅದರ ಉಪಯುಕ್ತತೆಯ ಅರಿವಾಗಿ ಹೊಸ ಉತ್ಸಾಹ ಮತ್ತು ಸಡಗರ ಅವನೊಳಗೆ ತುಂಬಿದಂತಾಗುತ್ತಿತ್ತು.

ಈಗ ಜಯಸೂರ್ಯನ ದಾಹಕ್ಕೆ ಕುರುಮುನಿಯ ತಿಳುವಳಿಕೆ ಸಾಲದಾಯಿತು. ಶಿವಪಾದ ಸಿಕ್ಕುವುದು ಕಡಿಮೆ, ಸಿಕ್ಕರೂ ಮಾತಾಡುವುದು ಕಡಿಮೆ. ಬೆಳಗಿನ ಸಮಯ ಸುಮಾರು ಒಂದು ತಾಸು ಗವಿಯಿಂದ ಹೊರಗೆ ಸ್ವಲ್ಪ ಹೊತ್ತು ಅಡ್ಡಾಡುವುದಿತ್ತು. ಅದು ಮುಗಿದು ಒಳಹೊಕ್ಕರೆ ಪುನಃ ಮೂರನೇ ದಿನವೇ ಅವನ ಭೇಟಿ. ಅದೂ ಗವಿಯ ಹೊರಗೆ ಬಂದರೆ ಮಾತ್ರ. ಬೇರೆ ಸಮಯದಲ್ಲಿ ಅನೇಕ ಬಾರಿ ಗವಿಯಲ್ಲಿ ಹುಡುಕಿದ್ದಾನೆ. ಆತ ಸಿಕ್ಕಿಲ್ಲ. ಒಮ್ಮೊಮ್ಮೆ ಬೆಟ್ಟದ ಮೇಲೆ ಸುತ್ತಾಡುವುದಿದೆ. ಇನ್ನು ಕೆಲವು ಸಲ ತಿಂಗಳಾದರೂ ಕಾಣಿಸಿಕೊಂಬುದೇ ಇಲ್ಲ. ಸಸ್ಯಹೃದಯದ ಬಗ್ಗೆಯೇ ಅನುಮಾನಗಳು ಮೂಡಿ ಕುರುಮುನಿಯಿಂದ ಸಮಾಧಾನಕರ ಉತ್ತರ ಸಿಕ್ಕದಿದ್ದಾಗ ಜಯಸೂರ್ಯ ಚಡಪಡಿಸಿದ. ಒಮ್ಮೆ ಕುರುಮುನಿ ಹೇಳಿದ:

"ಹಂಗ್ಯಾಕೆ ಅವಸರ ಮಾಡ್ತಿಯೋ ತಮ್ಮಾ ? ನಿನ್ನಲ್ಲಿ ಖರೇನಃ!' ಅನ್ನು, ಅವ ಹ್ಯಾಂಗೋ ಹಾದೀ ತೋರಸ್ತಾನ!"

"ಹೆಂಗೋ ಅಂದರ?"

“ಕನಸಿನಾಗꞌ ಬಂದಾನು”

ಜಯಸೂರ್ಯನಿಗೆ ಸಮಾಧಾನವಾಗಲಿಲ್ಲ. ಕುರುಮುನಿಯ ಮಾತಿನಲ್ಲಿ ನಂಬಿಕೆಯೂ ಬರಲಿಲ್ಲ. ಅವನ ಮಾತಿಗೆ, ಕುರುಮುನಿ ಅವಮಾನಿತನಾಗುವ ಹಾಗೆ ದೊಡ್ಡದಾಗಿ ನಕ್ಕುಬಿಟ್ಟ.

ಆ ದಿನ ರಾತ್ರಿ ಅವನಿಗೆ ಆಶ್ಚರ್ಯ ಕಾದಿತ್ತು. ಒಬ್ಬನೇ ಮರಡಿ ಪ್ರದೇಶದಲ್ಲಿ ಹೊರಟ ಹಾಗೆ ಕನಸಾಯ್ತು. ಮರಡಿಯಲ್ಲಿ ಸುಂದರವಾದ, ಚಿನ್ನದ ಬಣ್ಣದ ಒಂಟಿ ಹೂ ಅರಳಿತ್ತು. ‘ಒಂಟಿ ಹೂ ಅರಳಿದೆಯಲ್ಲಾ!’ ಎಂದು ಅದರ ಸಮೀಪ ಹೋಗಿ ನೋಡಿದ. ಕೋಮಲವಾಗಿತ್ತು. ದಳಗಳು ಕಮಲದ ದಳಗಳಂತಿದ್ದರೂ ಕೆಳಗೆ ನೀರಿರಲಿಲ್ಲ.

‘ಹೆಸರು ಗೊತ್ತಿಲ್ಲದ ಹೂವೇ ಒಂಟಿಯಾಗಿರಲು ಬೇಸರವಾಗುವುದಿಲ್ಲವೆ?’

ಅಂತ ತಂತಾನೇ ಅಂದುಕೊಂಡಂತೆ ಹೇಳಿ ಮುಂದೆ ನಡೆದ. ಒಂದೆರಡು ಹೆಜ್ಜೆ ಇಡುವಷ್ಟರಲ್ಲಿ ಅಪೂರ್ವವಾದ ಲಯ ಕೇಳಿಸಿತು. ಹಾಗೆಯೇ ಆಲಿಸುತ್ತ ನಿಂತಿದ್ದಾಗ ಕೇಳಿಸಿತುꞌ

“ಇಲ್ಲವಲ್ಲ! ನಾನು ಎಲ್ಲವನ್ನು ಒಳಗೊಂಡಿರುವುದರಿಂದ ಇಡೀ ಪ್ರಕೃತಿ ನನ್ನೊಂದಿಗಿದೆ. ನಾನು ಒಬ್ಬಂಟಿ ಹ್ಯಾಗಾದೇನು? ನೀನು ನನ್ನಲ್ಲಿ ಇಲ್ಲದಿದ್ದರೆ ಹೀಗೆ ಕೇಳುತ್ತಿದ್ದೆಯೇನು?

-ಜಯಸೂರ್ಯ ನಾಚಿಕೊಂಡು ಸುತ್ತ ನೋಡಿದ. ಹೂವು ಕಿಲಕಿಲ ನಗುವಂತೆ ಅಲುಗಾಡಿತ್ತು. ತನಗೆ ಕೇಳಿಸಿದ್ದು ಹೂವಿನ ದನಿಯ? ಇಲ್ಲಾ ಯಾವುದಾದರೂ ದೇವತೆಯ ದನಿಯ?-ಅಂತ ಅನುಮಾನ ಬಂತು!

-ಎಚ್ಚರಾಯ್ತು!

ಮೂರನೇ ದಿನ ಬೆಳಗ್ಗೆ ಮರದ ಕಟ್ಟೆಯ ಮೇಲೆ ಶಿವಪಾದ ಕುಂತಿದ್ದ. ಜಯಸೂರ್ಯ ಅಲ್ಲಿಗೆ ಹೋಗಿ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ಬಾಯಿ ತೆರೆಯುವಷ್ಟರಲ್ಲಿ ಶಿವಪಾದನೇ ಪ್ರಶ್ನೋತ್ತರಿಸಿದ.

“ಲಯ ಅಂದರೇನು?”

“ಸಸ್ಯವು ನೆಲ, ಜಲ, ವಾಯು ಮತ್ತು ತಿರ್ಯಕ್‌ಜೀವಗಳೊಂದಿಗೆ ಮಾತಾಡುವುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡೋದೇ ಸಸ್ಯರಹಸ್ಯ. ಅದನ್ನು ಅರ್ಥ ಮಾಡಿಕೊಳ್ಳಲು ತನ್ಮಯತೆ ಬೇಕು. ನಿಸರ್ಗದ ತನ್ಮಯತೆಯೊಂದಿಗೆ ನಿನ್ನ ತನ್ಮಯತೆ ಸಮರಸಗೊಂಡಾಗ ಇಬ್ಬರ ಮಧ್ಯೆ ಹರಿವ ಲಯ ಕೇಳಿಸುತ್ತದೆ, ಅನಾಹತ ನಾದದ ಹಾಗೆ! ಈ ಛಂದಸ್ಸನ್ನ ತಿಳಿದವನೇ ಕವಿರಾಜ, ಸಿದ್ಧ ವೈದ್ಯ. ಇದನ್ನು ಮೊದಲು ಅಮ್ಮನಿಗೆ ಬೋಧಿಸಿದವನು ಶಿವ. ಅದಕ್ಕೇ ನಾದಪ್ರಿಯನೆಂಬರು ಶಿವನ! ಅಮ್ಮ ಕವಿರಾಜನಿಗೆ ಬೋಧಿಸಿದಳಾಗಿ ಅಮ್ಮನೇ ಸಸ್ಯಹೃದಯದ ಅಭಿಮಾನಿ ದೇವತೆ.”

“ಮನುಷ್ಯನಿಗೆ ರೋಗ ಯಾಕೆ ಬರುತ್ತದೆ?”

“ಪ್ರಕೃತಿ ಅಂದರೆ ಅಮ್ಮ. ತಾಯಿ ಸಹಜವಾಗಿಯೇ ಆರೋಗ್ಯಪೂರ್ಣೆಯಾಗಿರುತ್ತಾಳೆ. ಆದರೆ ಮನುಷ್ಯ ತನ್ನ ವಿಕಾರದಿಂದ ಪ್ರಕೃತಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತ ರೋಗಕ್ಕೆ ಗುರಿಯಾಗುತ್ತಾನೆ. ಅದನ್ನು ಗುಣಪಡಿಸಬಲ್ಲವಳು ಪ್ರಕೃತಿ ಮಾತ್ರ. ಅದಕ್ಕಾಗಿಯೇ ತನ್ನಲ್ಲಿ ಸಸ್ಯಗಳನ್ನು ಇಟ್ಟುಕೊಂಡಿದ್ದಾಳೆ. ಆ ಸಸ್ಯಗಳನ್ನು ಗುರುತಿಸಬೇಕು.”

“ಅಂಥ ಸಸ್ಯಗಳ ಲಕ್ಷಣಗಳೇನು?”

“ಮಣ್ಣಲ್ಲಿದ್ದಾಗ ಅದು ಹ್ಯಾಗೆ ಜೀವಂತವಾಗಿರುತ್ತ, ಗಾಳಿ ಮಳೆಗೆ ಸ್ಪಂದಿಸುತ್ತ ಬೆಳೆಯುತ್ತದೋ ಹಾಗೆ ರೋಗಿಯ ದೇಹದಲ್ಲೂ ಅದು ಗುಣರೂಪದಲ್ಲಿ ಬೆಳೆದು ರೋಗವನ್ನ ನಾಶ ಮಾಡಬೇಕು.”

“ರೋಗವು ನಿನ್ನ ದೇಹದ ಲಯವನ್ನರಿತು ಹ್ಯಾಗೆ ನಿನ್ನನ್ನು ಪ್ರವೇಶಿಸುತ್ತದೋ ಅದೇ ರೀತಿ ಸಸ್ಯ ಕೂಡ ನಿನ್ನ ರೋಗ ಮತ್ತು ಲಯಗಳನ್ನರಿತು ಪಸರಿಸಬೇಕು. ಹಾಗೆ ಪಸರಿಸಿದ್ದು ತಿಳಿಯಬೇಕಾದರೆ ಸಸ್ಯಹೃದಯ ತಿಳಿದಿರಬೇಕು.”

“ಸಸ್ಯಹೃದಯ ತಿಳಿಯತೆಂದು, ಹ್ಯಾಗೆ ಗೊತ್ತಾಗುತ್ತದೆ? ಅದಕ್ಕೆ ನಮ್ಮ ಪೂರ್ವ ಸಿದ್ಧತೆಗಳೇನು?”

“ನೀನು ಆ ಸಸ್ಯವನ್ನು ಮುಟ್ಟುತ್ತೀಯಲ್ಲ. ಅದರ ಮಿಡಿತ ನಿನ್ನಲ್ಲಿ ಪ್ರವೇಶ ಮಾಡುತ್ತದೆ. ಅದು ನಿನಗೂ ಗೊತ್ತಾಗುತ್ತದೆ. ಯಾಕೆಂದರೆ ನಿನಗೆ ಅಪರಿಚಿತವಾದೊಂದು ಲಯಗಾರಿಕೆ ನಿನ್ನ ನಾಡಿಗೆ ಬಡಿಯುತ್ತಿರುತ್ತದೆ. ಆಗ ನಿಧಾನವಾಗಿ ನಿನ್ನ ದೇಹ ಒಂದು ಸಸ್ಯವಾದ ಅನುಭವವಾಗುತ್ತದೆ! ಮೈತುಂಬ ಎಲೆ ಚಿಗುರು ಮೂಡಿ ಗಾಳಿಗೆ ಅಲುಗಾಡಿದ ಅನುಭವವಾಗುತ್ತದೆ. ನಿನ್ನ ಕಾಲು ಅದರೊಂದಿಗೆ ಬೇರು ಬಿಟ್ಟಿವೆ ಅನಿಸುತ್ತದೆ. ಆಗ ನೀನು ಆ ಎಲ್ಲದರ ಒಂದು ಭಾಗವಾದುದರ ಅನುಭವ ನಿನಗಾಗುತ್ತದೆ. ಈಗ ರೋಗವನ್ನು ಅನುಭವಿಸುವ ದೇಹವೂ ನೀನೇ! ಅದನ್ನು ಗುಣಪಡಿಸುವ ಸಸ್ಯವೂ ನೀನೇ! ರೋಗದಂಥ ಕೃತಕತೆ ಇಲ್ಲಿದೆಯಲ್ಲಾ ಅಂತ ಅನ್ನಿಸಿ ಅದನ್ನು ಗುಣಪಡಿಸುವ ಚಡಪಡಿಕೆ ನಿನ್ನಲ್ಲಿ ಉಂಟಾಗುತ್ತದೆ. ಇದು ಶಿವಾಪುರದ ಗವಿಯ ವೈದ್ಯ.

ಇದು ತಿಳಿಯಬೇಕಾದರೆ, ಪೂರ್ವಸಿದ್ಧತೆ ಎಂದರೆ ಅಮ್ಮನ ಬಗ್ಗೆ ನಿರ್ಮಲವಾದ ಭಕ್ತಿ ನಿನ್ನಲ್ಲಿರಬೇಕು. ಅದಿಲ್ಲದಿದ್ದಲ್ಲಿ ಅಂಥ ವೈದ್ಯಗಾರಿಕೆ ಒಂದು ಪಿಶಾಚಿ ಕೃತ್ಯ!”

## ಏಳು

ಆಮೇಲೆ ಎಷ್ಟು ದಿನಗಳಾದರೂ ಶಿವಪಾದ ಸಿಕ್ಕಲೇ ಇಲ್ಲ. ತನ್ಮಯತೆಯ ಬಗ್ಗೆಯೇ ಬೇಕಾದಷ್ಟು ತಿಳಿಯಬೇಕಾಗಿತ್ತು. ಗವಿಯಲ್ಲಿದ್ದವರು ನಾವು ಮೂವರೇ ಎಂದು ಜಯಸೂರ್ಯ ನಂಬಿದ್ದೂ ಈಗ ಹುಸಿಯಾಗಿತ್ತು. ಹಗಲು ಹೊತ್ತು ಮೂವರೇ ಇರುತ್ತಿದ್ದರು. ನಿಜ. ಹಟ್ಟಿಯವರ್ಯಾರೂ ಮಂಗಳವಾರ ವಿನಾ ಬೇರೆ ದಿನಗಳಲ್ಲಿ ಅಮ್ಮನ ಬಳಿಗೆ ಬರುತ್ತಿರಲಿಲ್ಲ, ಅಥವಾ ಇನ್ನೇನೋ ತೀರಾ ಅಗತ್ಯದ ಕೆಲಸ ಇದ್ದರೆ, ಹಬ್ಬ ಹುಣ್ಣಿಮೆಗಳಾದರೆ ಶಿವಪಾದನನ್ನು ನೋಡಲಿಕ್ಕೆ ಬರುತ್ತಿದ್ದರು. ಇಲ್ಲದಿದ್ದರೆ ಕಾಡಿನ ತುದಿಯ ಗವಿ ಭಿಕೋ ಎನ್ನುತ್ತಿತ್ತು. ಆದರೆ ಮಧ್ಯರಾತ್ರಿಯ ಸುಮಾರಿಗೆ ಎಲ್ಲೆಲ್ಲಿಂದಲೋ ಸಾಧಕರು, ಸನ್ಯಾಸಿಗಳು ಶಿವಪಾದನ ಬಳಿಗೆ ಬರುತ್ತಿದ್ದರು. ಚರ್ಚಿಸುತ್ತಿದ್ದರು. ಸಲಹೆ ಕೇಳುತ್ತಿದ್ದರು. ಅವರ ಭಾಷೆ ಒಮ್ಮೊಮ್ಮೆ ಅರ್ಥವಾಗುತ್ತಿತ್ತು. ಕೆಲವು ಸಲ ಏನೇನೂ ತಿಳಿಯುತ್ತಿರಲಿಲ್ಲ. ಆದರೆ ಇಷ್ಟಂತೂ ನಿಜ, ಬಂದವರೆಲ್ಲರೂ ಶಿವಪಾದನ ಬಗ್ಗೆ ಅಪಾರ ಗೌರವ ಭಕ್ತಿಗಳನ್ನಿಟ್ಟು ಕೊಂಡವರು, ಗಂಭೀರ ಪ್ರಶ್ನೆಗಳನ್ನು ತಂದವರು. ಅವನ ಸೇವೆ ಮಾಡುವ ಯಾವ ಸಣ್ಣ ಅವಕಾಶವನ್ನೂ ಬಿಡುತ್ತಿರಲಿಲ್ಲ.

ಶಿವಪಾದನೂ ಅಷ್ಟೆ. ದೊಡ್ಡ ವ್ಯಕ್ತಿತ್ವದವನು, ವಯಸ್ಸಿಗೆ (ಅದೆಷ್ಟೆಂದು ಯಾರಿಗೂ ತಿಳಿದಿಲ್ಲವೆಂದು ಎಲ್ಲರ ಹೇಳಿಕೆ) ಸಹಜವಾದುದಕ್ಕಿಂತ ಹೆಚ್ಚು ಎತ್ತರವಾಗಿದ್ದ. ಮಿಂಚುವ ಕಣ್ಣು, ಅಭಿಮಾನದಿಂದ ಬೀಗುವ ಶಕ್ತಿಯುತ ಕತ್ತು, ಕಟ್ಟಿದ್ದರೂ ಬಿಚ್ಚಿಕೊಂಡು ಸ್ವಚ್ಛಂದವಾಗಿ ಹಾರಾಡುವ ಬೆಳ್ಳಿಯ ಕೂದುಲು, ಹೊಕ್ಕಳುವರೆಗೆ ಇಳಿಬಿದ್ದ ಗಡ್ಡ, ಕಿವಿಯವರೆಗಿನ ಮೀಸೆ -ಇವೆಲ್ಲ ಅವನ ಪೌರುಷ ಮತ್ತು ಆತ್ಮವಿಶ್ವಾಸಗಳನ್ನು ಪ್ರದರ್ಶಿಸುತ್ತಿದ್ದವು. ಶಿಷ್ಯರ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸುತ್ತ ನಡೆದಾಡುವಾಗ ದೇಹದ ಏರಿಳುವುಗಳಲ್ಲಿ ಸಹಜವಾಗಿ ಉಂಟಾಗುವ ಲಯಗಾರಿಕೆಯನ್ನ ಕಂಡಾಗ ‘ರಾಜರೇನು, ದೇವರಲ್ಲಾದರೂ ಇವನಂಥ ಘನತೆ ಗಾಂಭೀರ್ಯಗಳು ಇರುವುದು ಸಾಧ್ಯವೆ?’ ಅನಿಸುತ್ತಿತ್ತು.

ಶಿವಪಾದ ದಣಿವರಿಯದೆ ಶಿಷ್ಯರ ಸಂದೇಹಗಳನ್ನು ಪರಿಹರಿಸುತ್ತಿದ್ದ. ಕೇಳಿ ತಿಳಿದ ಮೇಲೆ ಶಿಷ್ಯರ ಮುಖ ಆನಂದದಿಂದ ಅರಳುತ್ತಿದ್ದವು. ಒಮ್ಮೊಮ್ಮೆ ಬಂದವರೊಂದಿಗೆ ಕುರುಮುನಿಯೂ ಚರ್ಚೆಗಿಳಿಯುವುದಿತ್ತು. ಶಿವಪಾದನೇ ಅವನನ್ನು ಮಾತಾಡಲು ಪ್ರಚೋದಿಸುತ್ತಿದ್ದ ಮತ್ತು ಅವನ ಅಭಿಪ್ರಾಯಗಳನ್ನು ಗಂಭೀರವಾಗಿ ಕೇಳಿಸಿಕೊತ್ತಿದ್ದ. ಆದರೆ ಜಯಸೂರ್ಯ ಮಾತ್ರ ಅವರ ಚರ್ಚೆಯಲ್ಲಿವಾದ್ದರಿಂದ ಇವನ ಹಾಜರಾತಿಗೆ ಅಲ್ಲಿ ಮಹತ್ವವೂ ಇರಲಿಲ್ಲ. ಅಂಥ ಸಂದರ್ಭಗಳಲ್ಲಿ ಈತ ಬೇರೆ ಕಡೆಗೆ ಹೋಗಿ ತನ್ನ ಒಂಟಿತನವನ್ನು ಕಾಪಾಡಿಕೊಳ್ಳುತ್ತಿದ್ದ. ಬೆಳಿಗ್ಗೆದ್ದು ನೋಡಿದರೆ ಅದೆಲ್ಲ ಕನಸೆಂಬಂತೆ ರಾತ್ರಿ ಬಂದವರು ಒಬ್ಬರೂ ಕಾಣಿಸುತ್ತಿರಲಿಲ್ಲ. ಗವಿ ಮತ್ತೆ ಬರೀ ಮೂವರಿಂದ ಭಿಕೋ ಎನ್ನವಂತೆ ಕಾಣುತ್ತಿತ್ತು.

ಒಂದು ದಿನ ಕುರುಮುನಿ ಗವಿಯಲ್ಲಿರಲಿಲ್ಲ. ಉತ್ತರದ ಕಡೆಗೆ ಶಿವಪಾದನ ದೂತನಾಗಿ ಹೋಗಿದ್ದ. ಜಯಸೂರ್ಯನಿಗೆ ಸಸ್ಯಹೃದಯ ಬಿಟ್ಟು ಬೇರೆ ಸಂಗಾತಿಗಳಿರಲಿಲ್ಲ. ಶಿವಪಾದ ಸಾಮಾನ್ಯವಾಗಿ ಸೂರ್ಯಾಸ್ತದ ಸಮಯ ಹೊರಗಡೆ ಇರುತ್ತಿರಲಿಲ್ಲ. ಇವತ್ತು ಮಾತ್ರ ಅದ್ಯಾಕೋ ಹೊನ್ನೆಮರದ ಕಟ್ಟೆಯ ಬಳಿ ಅತ್ತಿತ್ತ, ಹೆಜ್ಜೆ ಹಾಕುತ್ತ ಏನನ್ನೋ ಧ್ಯಾನಿಸುತ್ತಿದ್ದ. ಜಯಸೂರ್ಯ ಅಲ್ಲಿಗೆ ಹೋದ.

“ವೈದ್ಯಶಾಸ್ತ್ರದ ಅಂತಿಮ ಗುರಿ ಆಯುಷ್ಯವೃದ್ಧಿ ಅಲ್ಲವೆ?”

ಅಂದ, ಧ್ಯಾನಭಂಗವಾದುದಕ್ಕೆ ಶಿವಪಾದನಿಗೆ ಅಸಮಾಧಾನವಾಯಿತಾದರೂ “ಹೌದು” ಅಂದ.

“ಇಷ್ಟೇ ಆದರೆ ಇದರಲ್ಲಿ ಅಂಥ ವಿಶೇಷವೇನಿದೆ? ಮನುಷ್ಯನನ್ನು ಅಮರನಾಗಿಸುವ, ಚಿರಂಜೀವಿಯಾಗಿಸುವ ಗುರಿ ಹೊಂದಿದ್ದರೆ ಅದು ದೊಡ್ಡದಾಗುತ್ತಿರಲಿಲ್ಲವೆ?”

“ಪ್ರಕೃತಿಗೆ ವಿರುದ್ಧವಾದ ಸಿದ್ಧಿಗಳನ್ನು ಬೋಧಿಸುವುದು ನಮ್ಮ ಗವಿಯ ಪರಂಪರೆ ಅಲ್ಲ. ಅದಕ್ಕೇ ಸಸ್ಯಹೃದಯಕ್ಕೆ ಅಂಥ ಮಹತ್ವಾಕಾಂಕ್ಷೆ ಇಲ್ಲ. ಕುರುಮುನಿಯಲ್ಲಿ ಅದನ್ನು ಬೋಧಿಸುವ ಗ್ರಂಥಗಳಿವೆ, ಬೇಕಿದ್ದರೆ ನೋಡಿಕೊ.”

-ಎಂದ. ದನಿ ಬಿರುಸಾದುದನ್ನು ಜಯಸೂರ್ಯ ಗಮನಿಸಲಿಲ್ಲ.

“ನಿಮಗೆ ಅದರಲ್ಲಿ ಆಸಕ್ತಿ ಇಲ್ಲವೆ?”

“ಇಲ್ಲ”

-ಎಂದಷ್ಟೇ ಹೇಳಿ ಶಿವಪಾದ ಸುಮ್ಮನಾದ. ಆದರೆ ಮುದುಕ ಇಷ್ಟು ಸುಧೀರ್ಘ ಅವಧಿ ಬದುಕಿದ್ದ ಸುಳ್ಳೆ? ತನ್ನೆದುರಿಗೆ ಗುಟ್ಟು ಬಚ್ಚಿಟ್ಟುಕೊಳ್ಳುತ್ತಿದ್ದಾನೆಂದೇ ಜಯಸೂರ್ಯ ಚಿತ್ತಸಂಶಯ ತಾಳಿದ. ಅಂದಿನಿಂದ ಶಿವಪಾದ ಮಾತ್ರ ಜಯಸೂರ್ಯನ ಉಸಾಬರಿ ತೊರೆದು ಬಿಟ್ಟ. ಜಯಸೂರ್ಯ ಏನನ್ನಾದರೂ ಕೇಳಿದರೆ ಕುರುಮುನಿಯ ಮೂಲಕ ಉತ್ತರಿಸುತ್ತಿದ್ದ.

ಕುರುಮುನಿಯಿಂದ ತನಗೆ ಬೇಕಾದ ಗ್ರಂಥಗಳನ್ನು ಪಡೆದ ಮೇಲೆ ಜಯಸೂರ್ಯನ ಅಧ್ಯಯನ ಸ್ವತಂತ್ರವಾಗಿಯೇ ಸಾಗಿತ್ತು. ಗ್ರಂಥಗಳನ್ನು ಪಠಿಸುವ ಮತ್ತು ಅರ್ಥೈಸುವ ಕ್ರಮ ಅವನಿಗೆ ಗೊತ್ತಾಗಿದ್ದುದರಿಂದ ಈಗ ಶಿವಪಾದನ ಅಗತ್ಯವೂ ಕಾಣಲಿಲ್ಲ. ಬೇಕೆನಿಸಿದಾಗ ಒಬ್ಬನೇ ಕಾಡಿನಲ್ಲಿ ಕಣ್ಮರೆಯಾಗುತ್ತಿದ್ದ. ಮೊದಮೊದಲು ದಿನ ಬಿಟ್ಟು ದಿನ ಕುರುಮುನಿಯ ಭೇಟಿಯಾಗುತ್ತಿದ್ದವನು ಈಗ ಅದೂ ಅಪರೂಪವಾಯಿತು. ಅಲ್ಲದೆ ಕುರುಮುನಿಯ ಜವಾಬ್ದಾರಿಗಳೂ ಜಾಸ್ತಿಯಾಗಿದ್ದವು. ಈ ಸಂದರ್ಭವನ್ನೇ ಉಪಯೋಗಿಸಿಕೊಂಡು ಜಯಸೂರ್ಯ ವಿಷವಿದ್ಯೆಯಲ್ಲಿ ಪರಿಣತನಾದ. ರಸವಿದ್ಯೆ ಹತ್ತಲಿಲ್ಲ.

ಕೆಲವು ಅಮೂಲ್ಯ ಮೂಲಿಕೆಗಳಿಂದ ರಸಗಳನ್ನು ಸಿದ್ಧಪಡಿಸಿ, ತಾನೇ ಸೇವಿಸಿ ಅವುಗಳ ಪರಿಣಾಮದ ಬಗ್ಗೆ ಖಾತ್ರಿ ಮಾಡಿಕೊಂಡ. ಗುರುಮುಖೇನ ಬಂದಲ್ಲದೆ ಮುಟ್ಟಲೇಬಾರದ ಕೆಲವು ರಸಗಳನ್ನು ಕುರುಮುನಿಯ ತಿಳಿವಳಿಕೆಗೂ ಬಾರದಂತೆ ತನ್ನ ಮೇಲೆಯೇ ಪ್ರಯೋಗಿಸಿ ಖಚಿತಪಡಿಸಿಕೊಂಡ. ಜಯಸೂರ್ಯನ ದೇಹದಲ್ಲಾದ ವಿಕಾಸ ಮತ್ತು ಮಾರ್ಪಾಡುಗಳನ್ನು, ದೇಹಕ್ಕೆ ಅಡರಿದ ಲೋಹದ ಕಾಂತಿಯನ್ನು ಕುರುಮುನಿ ಗಮನಿಸಿದ್ದ. ಅದಕ್ಕೇ ಸಂಶಯ ಬಂದು ಗುರುವಿನ ಗಮನಕ್ಕೆ ತರುವುದು ಉಚಿತವೆಂದು ಪ್ರಯತ್ನ ಮಾಡಿದ. ಆದರೆ ಶಿವಪಾದ ಮಾತ್ರ ಜಯಸೂರ್ಯನ ಬಗೆಗಿನ ಯಾವ ಸಂಗತಿಯನ್ನೂ ಕಿವಿಯ ಮೇಲೆ ಹಾಕಿಕೊಳ್ಳದಿರಲು ತೀರ್ಮಾನಿಸಿದಂತಿತ್ತು.

ಈ ಸಲದ ಯುಗಾದಿ ಮುಂಚಿನ ಒಂದು ದಿನ ಮಧ್ಯಾಹ್ನ ಕುರುಮುನಿ ಮತ್ತು ಜಯಸೂರ್ಯ ಬೆಟ್ಟದಡಿಯ ಮಡುವಿನಲ್ಲಿ ಮೀಯುತ್ತಿದ್ದರು. ನಿಚ್ಚಳವಾದ ಬಿಸಿಲಿನಿಂದಾಗಿ ಹೊಸ ಚಿಗುರುಟ್ಟ ಬೆಟ್ಟ ಚಿನ್ನದ ಕಾಂತಿಯಿಂದ ಹೊಳೆಯುತ್ತಿತ್ತು. ಹೊರಗಡೆ ಹರಿತವಾದ ಬಿಸಿಲಿನಿಂದಾಗಿ ಮಡುವಿನ ತಂಪು ನೀರು ಹಿತಕರವಾಗಿತ್ತು. ಮಡುವಿನಲ್ಲಿ ಮೂಡಿದ ಸೂರ್ಯ ಉರಿಬಿಸಿಲಿಗೆ ನೀರಲ್ಲಿ ಬಿದ್ದು ಮುಳುಗೇಳುತ್ತಿರುವಂತೆ ಕಂಡಿತು. ಅಷ್ಟರಲ್ಲಿ ಬೆಟ್ಟದ ಮೇಲಿನ ಹೊಲೆಬಂಡೆಯ ಬದಿಯಿಂದ ಸಣ್ಣ ಬಂಡೆಯೊಂದು ಉರುಳಿ ಬೀಳುತ್ತಿರುವ ಸದ್ದಾಯಿತು. ಕುರುಮುನಿ ಮೊದಲು ಗಮನಿಸಿ “ತಮ್ಮಾ ಇತ್ತ ಸರಿ” ಎಂದು ಕೂಗಿದ. ಬಂಡೆಯ ಉರುಳುವ ಸದ್ದನ್ನಾಗಲೇ ಕೇಳಿಸಿಕೊಂಡಿದ್ದ ಜಯಸೂರ್ಯ ಮೇಲೆ ನೋಡಿದ. ಅದೇನು ಆವೇಶ ಬಂತೋ - ಅವಸರದಿಂದ ಸರಿದು ಆ ಬಂಡೆ ಬೀಳುವ ಸ್ಥಳದಲ್ಲೇ ತನ್ನ ಮೈಯೊಡ್ಡಿ ನಿಂತುಬಿಟ್ಟ! ಕ್ಷಣಾರ್ಧದಲ್ಲಿ ಬಂಡೆ ಸದ್ದಿನೊಂದಿಗೆ ಉರುಳಿ ಜಯಸೂರ್ಯನ ದೇಹಕ್ಕೆ ಸದ್ದಿನೊಂದಿಗೆ ಅಪ್ಪಳಿಸಿ ಒಡೆದು ಪುಡಿಯಾಗಿ ಬಿದ್ದಿತು! ಜಯಸೂರ್ಯ ಕುರುಮುನಿಯನ್ನೇ ನೋಡುತ್ತ ಹೆಮ್ಮೆಯಿಂದ ತನ್ನ ದೇಹವನ್ನ ತಟ್ಟಿಕೊಂಡು ಗಹಗಹಿಸಿ ನಗತೊಡಗಿದ. ಕುರುಮುನಿ ಅಘಾತ ಹೊಂದಿ ತೆರೆದ ಕಣ್ಣು ತೆರೆದಂತೇ ಬರೆದ ಚಿತ್ರದ ಹಾಗೆ ನಿಂತುಕೊಂಡೇ ಇದ್ದ!

ಜಯಸೂರ್ಯ ಕ್ಷೇಮವಾಗಿಯೇ ನಗುತ್ತಿರುವುದನ್ನು ನೋಡಿ ಆಮೇಲೆ ಅರಿವಾಗಿ ಕೇಳಿದ:

“ನೀನು ವಜ್ರಕಾಯನಾಗಿದ್ದೀಯ ತಮ್ಮಾ?”

“ಇನ್ನೂ ಗೊತ್ತಾಗಲಿಲ್ಲವೆ ಅಣ್ಣಾ?”

-ಎಂದು ವ್ಯಂಗ್ಯ ಬೆರೆತ ಹೆಮ್ಮೆಯಿಂದ ಬೀಗಿ ಹೇಳುತ್ತ ಈ ಸಲ ಇನ್ನೂ ಜೋರಾಗಿ ನಕ್ಕ.

“ನನಗೆ ಹೇಳಲೇ ಇಲ್ಲವಲ್ಲೋ ತಮ್ಮ!”

“ಈಗಲಾದರೂ ತಿಳೀತಲ್ಲ ಅಣ್ಣಾ?”

“ಗುರುಗಳಿಗಾದರೂ ಹೇಳಿದ್ದೀಯೋ? ಇಲ್ಲೊ?”

“ಹೋಗಿ ನೀ ಹೇಳು.”

ಅಂದ. ಇದು ಸೊಕ್ಕಿನ ಮಾತೆನ್ನಿಸಿತು ಕುರುಮುನಿಗೆ. ಆಘಾತದಿಂದ ಜಯಸೂರ್ಯನನ್ನು ನೋಡಿದ. ಹಸನಾದ ಬಿಸಿಲು ಅವನ ಮ್ಯಾಲೆ ಬಿದ್ದು ಮೈ ಮಸೆದ ಆಯುಧದಂತೆ ಮಿರಿ ಮಿತಿ ಮಿಂಚುತ್ತಿತ್ತು. ಬಿಗಿದ ಬೋಲ್ಟಿನ ಯಂತ್ರದ ಹಾಗೆ ದೇಹವಿಡೀ ಸಿಡಿವ ಕಿಡಿಯಂತೆ ಹೊಳೆಯುತ್ತಿತ್ತು. ಅವನ ಕಣ್ಣು ಮತ್ತು ನಗುವಿನಲ್ಲಿ ಹೊಸ ಸೀಮೆ ಗೆದ್ದವನ ಅಹಂಕಾರ ಮತ್ತು ಕ್ರೌರ್ಯಗಳು ಕಂಡವು. ಅರ್ಥಾಥ್ ಅವನೆದುರಿಗೆ ಈಗ ಯಾರಿದ್ದರೂ ಹೆದರಿ ಹಿಂಜರಿಯಬೇಕಾದ ಸ್ಥಿತಿಗೆ ತಲುಪುತ್ತಿದ್ದರು. ಈ ವಿಷಯ ಬಹುಶಃ

ಶಿವಪಾದನಿಗೂ ಗೊತ್ತಿಲ್ಲವೆಂದು ಕುರುಮುನಿಗನ್ನಿಸಿ ಆತಂಕವಾಯಿತು. ವಿದ್ಯಾರ್ಥಿಯಾದವನಲ್ಲಿರಬೇಕಾದ ಕಿಂಚಿತ್ ಮುಗ್ಧತೆಯೂ ಜಯಸೂರ್ಯನಲ್ಲಿರಲಿಲ್ಲ. ಬದಲಾಗಿ ಬಲವಾದ ಬುದ್ಧಿವಂತಿಕೆ ಮತ್ತು ಸದಾ ಜಾಗೃತವಾದ ಚೆರಿಕಿತನವಿತ್ತು. ಇಂಥವರ ಕೈಗೆ ಏನು ಸಿಕ್ಕರೂ ಅದನ್ನವರು ಅಪಾಯಕಾರಿಯಾದ ಆಯುಧವಾಗಿ ಮಾರ್ಪಡಿಸಿಕೊಳ್ಳಬಲ್ಲರು.

ಇದಾಗಿ ಅಮ್ಮನ ಪರ್ವದ ಮೂರನೇ ರಾತ್ರಿ ಜಯಸೂರ್ಯ ಇಲ್ಲಿಂದ ಪರಾರಿಯಾಗಿ ಕನಕಪುರಿಯಲ್ಲಿ ಬೇರೊಂದು ಹೆಸರಿನೊಂದಿಗೆ ಅವತರಿಸಿದ.

## ಎಂಟು

ಅದು ನಡೆದದ್ದು ಹೀಗೆ: ಈ ಸಲದ ಯುಗಾದಿಯಾಗಿ ಕೊಯ್ಲಿನ ಹುಣ್ಣಿಮೆ ಮಂಗಳವಾರ ಬಂದಿತ್ತು. ಅದು ನಡೆಯುವುದು ಗವಿಯ ಮುಂದೆ. ಆ ದಿನ ಸಂಜೆ ಸಮಯದಲ್ಲಿ ಸೀಮೆಯ ಒಂದು ಕಡಿಮೆ ನಲವತ್ತು ಹಟ್ಟಿಯ ಭಕ್ತಾದಿಗಳು ಗವಿಯ ಮುಂದೆ ಸೇರಿ ಕುಣಿಯುವುದು, ಕಾರಣಿಕ, ಪ್ರಸಾದ-ಇತ್ಯಾದಿ ಪಾರಂಪರಿಕ ಕಾರ್ಯಕ್ರಮಗಳಿದ್ದವು.

ಜಯಸೂರ್ಯ ತನಗೆ ಬೇಕಾದ ಎಲ್ಲ ಜ್ಞಾನವನ್ನು ಗ್ರಹಿಸಿಯಾಗಿತ್ತು. ಪ್ರಕೃತಿಗೆ ವಿರೋಧವಾದ ವಿಷವಿದ್ಯೆಯನ್ನು ಗವಿಯ ಪರಂಪರೆ ತಿರಸ್ಕರಿಸಿತ್ತು. ಶಿವಪಾದನಿಗೆ ತಿಳಿಸದೆ ಆ ವಿದ್ಯೆಯನ್ನ ಈತ ಕಲಿತುದೇ ಅಲ್ಲದೆ ಅದರ ಸಾಧ್ಯತೆಗಳ ಆಧಾರದಲ್ಲಿ ಹೊಸ ಪ್ರಯೋಗಗಳನ್ನೂ ಮಾಡಿದ್ದ. ಶಿವಪಾದನಿಗಿದು ತಿಳಿದರೆ ಅವನ ಕೋಪಕ್ಕೆ ಗುರಿಯಾಗುವುದು ನಿಶ್ಚಿತವೆಂದು ಅವನಿಗೆ ಗೊತ್ತಿತ್ತು.

ಕೊಯ್ಲಿನ ಹಬ್ಬದಂದು ಗವಿಯ ಹಿರಿಕಿರಿಯ ಶಿಷ್ಯರು ಎಲ್ಲೆಲ್ಲಿದ್ದರೆ ಅಲ್ಲಲ್ಲಿಂದ ಬಂದು ಅಮ್ಮ ಮತ್ತು ಶಿವಪಾದರಿಗೆ ಭಕ್ತಿ ಸಲ್ಲಿಸುವುದು ವಾಡಿಕೆ. ಸೋಮವಾರ ಬೆಳಿಗ್ಗೆಯಿಂದಲೇ ಶಿವಪಾದನ ದೂರ ದೂರದ ಶಿಷ್ಯರು ಬಂದು ಗವಿಯಲ್ಲಿ ಸೇರತೊಡಗಿದ್ದರು. ಅವರ ಆತಿಥ್ಯವನ್ನೆಲ್ಲ ಕುರುಮುನಿಯೇ ನೋಡಿಕೊಳ್ಳಬೇಕಾಗಿತ್ತು. ಜಯಸೂರ್ಯ ಇಂಥ ಜವಾಬ್ದಾರಿಗಳನ್ನು ಹೊರುವ ಪೈಕಿ ಅಲ್ಲ. ಈ ಗದ್ದಲದಲ್ಲಿ ಜಯಸೂರ್ಯನಿಗೆ ಶಿವಪಾದನಿರಲಿ, ಕುರುಮುನಿ ಸಿಕ್ಕುವದೂ ಸಾಧ್ಯವಿರಲಿಲ್ಲ. ಬಂದ ಶಿಷ್ಯರನ್ನು ಅಮ್ಮನ ಚೇಲಾಗಳೆಂದು ಟೀಕಿಸಿ ಒಳಗೊಳಗೇ ನಗುತ್ತಿದ್ದ. ಇವರ ಉಸಾಬರಿಯೇ ಬೇಡವೆಂದು ಆ ದಿನ ಕಾಡಿನಲ್ಲಿ ಕಣ್ಮರೆಯಾದ.

ಪುಣ್ಯಾತ್ಮ ಇಷ್ಟು ವರ್ಷ ಗವಿಯಲ್ಲಿದ್ದವನು ತಪ್ಪಿಕೂಡ ಬೆಳ್ಳಿಯನ್ನಾಗಲಿ, ಜಟ್ಟಿಗನನ್ನಾಗಲಿ ನೆನೆದವನಲ್ಲ. ಅಷ್ಟೇ ಯಾಕೆ ಮೂಲ ಹಟ್ಟಿಯನ್ನು ಕೂಡ ಜ್ಞಾಪಿಸಿಕೊಂಡವನಲ್ಲ. ಅವನ ಬಗ್ಗೆ ಮಾತಾಡುವಾಗ "ಕಲ್ಲಿನ ಮನುಷ್ಯ" ಎಂದು ಕುರುಮುನಿ ಸರಿಯಾಗಿಯೇ ಹೇಳಿದ್ದಾನೆಂದು ಶಿವಪಾದ ಅಂದುಕೊಳ್ಳುವುದಿತ್ತು. ತಾನು ಹುಟ್ಟಿದ ಹಟ್ಟಿಯ ಬಗ್ಗೆಯಾಗಲಿ, ಪ್ರದೇಶದ ಬಗ್ಗೆಯಾಗಲಿ, ಯಾವುದೇ ಅರ್ದ್ರ ಭಾವನೆಗಳು ಅವನಲ್ಲಿರಲಿಲ್ಲ.

"ನಿನ್ನ ಹಟ್ಟಿ ಯಾವುದು?"

ಎಂದು ಕುರುಮುನಿ ಕೇಳಿದರೆ ಗೊತ್ತಿಲ್ಲವೆಂದೇ ಹೇಳಿದ್ದ!

"ಹೋಗಲಿ ನಿನ್ನ ಅವ್ವ, ಅಪ್ಪ, ಯಾರು? ಅದನ್ನಾದರೂ ಹೇಳು ಮಾರಾಯಾ" ಅಂದರೆ "ನನಗೆ ಯಾರ ಉಸಾಬರಿಯೂ ಬೇಕಿಲ್ಲ; ನನ್ನ ಉಸಾಬರಿಗೆ ಯಾರೂ ಬರಕೂಡದು, ಅಷ್ಟೆ."

ಎಂದಿದ್ದ ಅಷ್ಟೇ ಅಲ್ಲ ಶಿವಪಾದನ ಬಗ್ಗೆ ಗೌರವ ಭಾವನೆ ಇದ್ದರೂ ಒಪ್ಪಿಕೊಂಬ ಸಹನೆ ಅವನಲ್ಲಿರಲಿಲ್ಲ. "ಅಖಂಡ ನಾನೇ ನಾನಾಗಿ ಯಾರ ಹಂಗಿಲ್ಲದೆ ನನ್ನ ಸಾಮರ್ಥ್ಯ ಮತ್ತು ಪ್ರತಿಭೆಗಳಿಂದಲೇ, ಸ್ವಯಂನಿರ್ಮಿತನಾದ ಸೂರ್ಯ ನಾನು!" ಎಂದಿದ್ದ. ಆದ್ದರಿಂದ

ಪುಣ್ಯಾತ್ಮ ಯಾವ ಸ್ಥಳಕ್ಕೆ ಹೋದರೂ ಹೊಸಬನಾಗಿಯೇ ಇರಬಯಸುತ್ತಿದ್ದ. "ಆತ ಗಾಯಗೊಂಡ ಜಂಬಗಳುಳ್ಳಾತ. ಅವನ ಆತ್ಮ ಕೀವುಗಟ್ಟಿದ ವ್ರಣಗಳಿಂದ ಹೊಲಸು ನಾರುತ್ತಿದೆ" ಎಂದು ಕುರುಮುನಿ ತೀರ್ಮಾನಿಸಿ ಬಿಟ್ಟಿದ್ದ.

ಕಾಡು ಹೊಕ್ಕನಲ್ಲ-ಅಲೆದಾಡುತ್ತ, ಸುಮಾರು ಇಳಿಹೊತ್ತಿನಲ್ಲಿ ಜಟ್ಟಿಗನ ಹಟ್ಟಿಯ ಸಮೀಪದ ದೊಡ್ಡ ಹುಲುಗಲು ಮರದ ಹತ್ತಿರ ಬಂದಿದ್ದಾಗ-ಮರದ ಕೆಳಗಡೆಯಿಂದ ಬೀಸಿ ಬರುತ್ತಿದ್ದ ಸೂಸುಗಾಳಿ ಕಾರಣವಾಗಿ ಜಯಸೂರ್ಯನಿಗೆ ಬೆಳ್ಳಿಯ ನೆನಪಾಯಿತು. ಜೋರಾಗಿ ಉಸಿರು ಒಳಗೆ ತಗೊಂಡ. ಮೆಲ್ಲಗೆ ಚಿಗುರೆಲೆಗಳ ಸ್ಪರ್ಶಿಸಿ, ಮುದ್ದಿಸಿ ಅಲುಗಿಸುತ್ತ, ಮುಟ್ಟಿದಲ್ಲಿ ಮುದ ನೀಡುತ್ತ, ತಾನೂ ಮುದಗೊಳ್ಳುವ ಪ್ರೇಮಿಯ ಹಾಗೆ, ಅಥವಾ ಮೈಮರೆಸಿ ಕೆಡಿಸುವ ಅತ್ಯಾಚಾರಿಯ ಹಾಗೆ ಗಾಳಿಯ ನಡಾವಳಿಯಿತ್ತು. ಮ್ಯಾಲೆ ಮುತ್ತಿಕ್ಕಿದ ತೆಳುಮೋಡಗಳಿಂದ ಸೂರ್ಯನ ಮೋರೆ ರಾಡಿಯಾಗಿತ್ತು.

ಆ ದಿನ ಸುಮಾರು ಇದೇ ಹೊತ್ತಿನಲ್ಲಿ ಇದೇ ಮರದ ಬಳಿಗೆ ಬೆಳ್ಳಿ ಮತ್ತು ಜಯಸೂರ್ಯ ಬಂದಿದ್ದರು. ಲಯಾನುಸಾರ ಹೆಜ್ಜೆಯಿಡುತ್ತ ಕಾಡುಪರಿಮಳ ಸೂಸುತ್ತ ಬೆಳ್ಳಿ ಬಂದು ಕೂತಾಗ ಇವನ ಮನವೆಂಬ ನವಿಲು ರೆಕ್ಕೆ ಬಿಚ್ಚಿ ಕುಣಿಯತೊಡಗಿತ್ತು. 'ಇನ್ನವಳ ಮಾದಕರೂಪ... ಬಿಗಿದ ಹೆದೆಯಂಥ ಎದೆಯೊಂದೇ ಸಾಕಯ್ಯ ಹುಚ್ಚು ಹಿಡಿಸುವುದಕ್ಕೆ!' ಎಂದುಕೊಂಡ. ಮೈ ಬಿಸಿಯೇರಿತು, ತಕ್ಷಣ ಬರಸೆಳೆದು ಕನಸಿಗೆ ಕರೆದೊಯ್ದು;

ತಾವಿಬ್ಬರೂ ಅಲೆದಾಡಿದ ಸ್ಥಳಗಳಲ್ಲಿ ಅಲೆದಾಡಿದ. ಆಯಾಯಾ ಸ್ಥಳಗಳಲ್ಲಿ ಅವಳಾಡಿದ ಮಾತುಗಳನ್ನು ಅವಳ ಧಾಟಿಯಲ್ಲೇ ಆಡಿದಂತೆ ಕಲ್ಪಿಸಿಕೊಂಡ. ಅವಳೊಂದಿಗಿದ್ದೇನೆಂದೇ ಭಾವಿಸಿ, ಆ ದಿನ ಕೂತ ಹಾಗೇ ಕೂತು, ನಡೆದ ಹಾಗೇ ನಡೆದು ಆನಂದಿಸಿದ. ಏನೆಂದು ವಿವರಿಸಲಾಗದ ಅನುಭವಗಳ ಬಿರುಗಾಳಿಗೆ ಸಿಕ್ಕು ಏನು ಮಾಡಲೂ ತೋಚದೆ ಕಾಲು ದಣಿಯುವತನಕ ಅಲೆದಲೆದು ಕೂತ. ಅವಳ ಎಲಡಿಕೆ ತಿಂದ ಒದ್ದೆ ತುಟಿಗಳ ಜ್ಞಾಪಿಸಿಕೊಂಡ. ಸಂತೋಷವಾದಾಗ ಅವಳ ಮೂಗು ಕೆಂಪಾಗಿ ಬಿರುಸಾದುದನ್ನು ಜ್ಞಾಪಿಸಿಕೊಂಡ. ಸಂತೋಷವಾದಾಗ ಅವಳ ಮೂಗು ಕೆಂಪಾಗಿ ಬಿರುಸಾದುದನ್ನು ಹೊಳೆಯುವುದನ್ನು ಜ್ಞಾಪಿಸಿಕೊಂಡ. ಆಗ ಅವಳ ಇಡೀ ಮುಖ ತೊಳೆದ ಕನ್ನಡಿಯಂತೆ ಸ್ವಚ್ಛವಾಗಿ ಆಕಾಶ, ಹಸಿರು, ಹೂಗಳನ್ನ ಪ್ರತಿಬಿಂಬಿಸುವುದನ್ನ ಜ್ಞಾಪಿಸಿಕೊಂಡ.

ಕೊನೆಗೆ ಬೆಳ್ಳಿ ಮದುವೆ ಮಾಡಿದ ಗಿಡಗಳ ಬಳಿಗೆ ಹೋದ. ಒಂಟಿ ಗಿಡ ಇತ್ತು. ಈಗ ದೊಡ್ಡದಾಗಿತ್ತು. ಉಳಿದೊಂದು ಗಿಡ ಬೆಳ್ಳಿಯದೋ? ಜಟ್ಟಿಗನದೋ? ಗೊತ್ತಾಗಲಿಲ್ಲ. ಕಾರೇ ಹಣ್ಣಿಗಾಗಿ ತಾನು ಹೊದದ್ದು, ಕಾರೀ ಮುಳ್ಳು ತರಚಿ ಕೈಗೆ ರಕ್ತ ಬಂದದ್ದು ನೆನಪಾಗಿ ವಾಸ್ತವ ಲೋಕಕ್ಕೆ ಬಂದ. ಬೆಳ್ಳಿಯ ಕನಸು ಕಾಂಬುದು ಸಲ್ಲದೆಂದು ಬೆಟ್ಟ ಏರತೊಡಗಿದ.

ನೆನಪುಗಳು ಈ ಪರಿ ಕಾಡಿದ್ದಕ್ಕೆ ಆಶ್ಚರ್ಯಪಡುತ್ತ ಬೆಟ್ಟ ಹತ್ತಿ, ಅದರ ನೆತ್ತಿಗೆ ತಲುಪುವಾಗ ಹುಣ್ಣಿವೆ ಬೆಳ್ದಿಂಗಳು ಬಲಿತ್ತಿತ್ತು. ಬೆಟ್ಟದ ತುಂಬ ಗುಡ್ಡರು ಸೇರಿ ಗದ್ದಲವಾಗುತ್ತಿತ್ತು. ಗವಿಯೊಳಗೆ ಪ್ರವೇಶಿಸುವುದಂತೂ ಬೇಕಿರಲಿಲ್ಲ. ಗವಿಯ ಮುಂದಿನ ಬಯಲಿನಲ್ಲಿ ಮಧ್ಯೆ ಆಯಕಟ್ಟಾದ ಜಾಗದಲ್ಲಿ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಹಾಕಿ ಬೆಂಕಿ ಮಾಡಿದ್ದರು. ಅದರ ಸುತ್ತ ಕುಣಿಯುವವರಿಗೆ ಜಾಗ ಬಿಟ್ಟು ಜನ ಕೂತಿದ್ದರು. ಅವರ ಮಧ್ಯೆ ಇವನೂ ಕೂತ. ಯಾರೊಂದಿಗೂ ಸಂಪರ್ಕವಿರಲಿಲ್ಲವಾಗಿ ಟಕಮಕ ಅವರಿವರನ್ನು ನೋಡುತ್ತ, ಅವರ ಬೆರಗಿನ ನೋಟಗಳಿಗೆ ಗುರಿಯಾಗುತ್ತ ಆಸೀನನಾದ. ಬೆಟ್ಟಕ್ಕೆ ಬಂದ ಥರಾವರಿ ಬಟ್ಟೆಯ ಜನರ್ಯಾರೂ ಇವನನ್ನ ಆಕರ್ಷಿಸಲೇ ಇಲ್ಲ. ಹೆಂಗಸರ ಮಧ್ಯೆ ಕಣ್ಣಿಂದಲೇ ಬೆಳ್ಳಿಯನ್ನು ಹುಡುಕಿದ. ಕಾಣಿಲಿಲ್ಲ. ಜಟ್ಟಿಗನೂ ಸಿಕ್ಕಲಿಲ್ಲವಾಗಿ ಬೋರುಬೋರಾಯಿತು. ಆಮೇಲೆ ದೊಡ್ಡ ಮರದಾಚೆ ದುಡಿಗಳ ರಭಸದ ದನಿ ಕೇಳಿಸಿತು. ಬಯಲಿನಲ್ಲಿ ಕೂತಿದ್ದ ಜನರ ಉತ್ಸಾಹ ಕೆರಳಿ 'ಹೋ' ಎಂದು ಎದ್ದು ಗಲಾಟೆ ಮಾಡಲಾರಂಭಿಸಿದರು. ಆಮೇಲೆ ಗೊತ್ತಾಯಿತು: ಅಮ್ಮನ ಪೂಜೆ ಜರುಗಿ ಪ್ರಸಾದ ವಿತರಣೆ ಸುರುವಾಯಿತೆಂದು.

ಬಹಳಷ್ಟು ಜನ ಎಲೆಗಳಲ್ಲಿ ಪ್ರಸಾದ ತಗೊಂಡರು. ಉಳಿದವರು ಅಂಗೈಗಳಲ್ಲೇ ಪ್ರಸಾದ ತಗೊಂಡು ತಿಂದರು, ಕುಡಿದರು. ಬೆಳಕಿನ ಬಳೆ ನಗುತ್ತ ನೀಲ ನೆಮ್ಮದಿಯಲ್ಲಿಯ ಚಂದ್ರ ಬೆಟ್ಟದ ಮೇಲೆ ಹಾಲು ಸುರಿಯುತ್ತಿದ್ದ, ಅದನ್ನೂ ಕುಡಿದರು. ಒಂದು ಮೂಲೆಯಲ್ಲಿ ಉತ್ಸಾಹದ ಹುಡುಗರು ಜಟ್ಟಿಗನ ಹಿರಿತನದಲ್ಲಿ ದುಡಿಗಳನ್ನು ಬಿಗಿದುಕೊಂಡು ನುಡಿಸತೊಡಗಿದರು. ಅಷ್ಟರಲ್ಲಿ ದೊಡ್ಡ ಪಂಜನ್ನು ದೊಡ್ಡ

ಪಂಜನ್ನು ಎತ್ತಿಕೊಂಡು ಒಬ್ಬ ಹುಡುಗ ಓಡೋಡಿ ಬಂದ. ಅವನ ಹಿಂದಿನಿಂದ ಹಿರಿಯನೊಬ್ಬ ಬಗೆಬಗೆ ಬಣ್ಣ ಮತ್ತು ಹೂಗಳಿಂದ ಅಲಂಕೃತವಾದ ಮಡಕೆಯನ್ನು ತಲೆಯ ಮೇಲಿಟ್ಟುಕೊಂಡು ಬಂದ. ಇಬ್ಬರೂ ಒಂದು ಸಾರಿ ಬಯಲ ಮಧ್ಯದ ಬೆಂಕಿಯನ್ನು ಸುತ್ತಿ ಆ ಮೂಲಕ ಜನರನ್ನು ದೂರ ಸರಿಸಿ ದೊಡ್ಡ ಮರದಡಿ ಮಡಕೆಯನ್ನಿಟ್ಟರು. ಈಗ ಜನ ತಲೆ ಮೇಲೆ ಮುಗಿದ ಕೈ ಹೊತ್ತುಕೊಂಡು ಗವಿಯ ಕಡೆ ನೋಡುತ್ತ ಕಾದರು. ಅವರ ನಿರೀಕ್ಷೆ ಹುಸಿಯಾಗಿಲಿಲ್ಲ. ಶಿವಪಾದ ಬಂದ! ಈಗ ಜನರ ಉತ್ಸಾಹ ಮೇರೆ ಮೀರಿತು. ಪಾದಮುಟ್ಟಿ ನಮಸ್ಕರಿಸುವವರು, ಅಡ್ಡ ಬೀಳುವವರು, ಮಕ್ಕಳನ್ನು ಅಡ್ಡ ಚೆಲ್ಲುವವರು-ಶಿವಪಾದ ಎಲ್ಲರನ್ನೂ ದಾಟುತ್ತ ಮಡಿಕೆಯ ಬಳಿ ಬಂದು ಕೂತ. ಆಗಲೂ ಜನರ ನೂಕುನುಗ್ಗಲು ತಗ್ಗಲಿಲ್ಲ. ಜಟ್ಟಿಗ ಮುಂದಾಗಿ ಜನರನ್ನ ಚೆದುರಿಸಿ ಶಿವಪಾದದ ಪಾದ ಮುಟ್ಟಿ ಅಪ್ಪಣೆ ಕೇಳಿದ. ಶಿವಪಾದ ಸಮ್ಮತಿಸಿದ ಮೇಲೆ ಮೇಳಗಳಿಗೆ ಕುಣಿಯಿರಯ್ಯಾ ಎಂದು ಸನ್ನೆ ಮಾಡಿದ.

ಈಗ ಅನೇಕರು ಮೇಳವಾಗಿ ಒಂದೇ ತಾಳದಲ್ಲಿ ದುಡಿ ನುಡಿಸತೊಡಗಿದರು. ಜಟ್ಟಿಗನೂ ತನ್ನ ದುಡಿ ತಗೊಂಡು ಅವರನ್ನು ಸೇರಿಕೊಂಡ. ಈಗ ಮೆಳೆಯ ಕಡೆಯಿಂದ ಒಂದೊಂದು ಹಟ್ಟಿಯ ಹೆಂಗಸರು ಹಿಂಡು ಹಿಂಡಾಗಿ ಬಂದು ಬೆಂಕಿಯ ಸುತ್ತ ಕುಣಿದರು. ಆಮೇಲೆ ಹುಡುಗರ ತಂಡ ಬಂತು. ಹುಡುಗಿಯರ ತಂಡಗಳು ಬಂದವು. ಕುಂತ ನಿಂತ ಜನ ಹುರುಪಾದರು.

ಈಗ ಬಂದ ಹುಡುಗಿಯರ ತಂಡ ಎಲ್ಲ ಅರ್ಥಗಳಲ್ಲಿ ಮೇಲಾಗಿತ್ತು. ಇವರ ಕುಣಿತದಲ್ಲಿ ಪರಿಣತಿ ಇತ್ತು. ತಂಡವಾಗಿ ಕುಣಿವ ಹೊಂದಾಣಿಕೆ ಇತ್ತು. ಜಯಸೂರ್ಯನಿಗೆ ಇದು ಇನ್ನೂ ಪ್ರಿಯವಾದ ತಂಡವಾಯ್ತು. ಯಾಕೆಂದರೆ ಇದರಲ್ಲಿಯೇ ಬೆಳ್ಳಿ ಇದ್ದಳು. ಅವಳ ತೆಳುವಾದ ಮೈಗೆ ಸಪೂರವಾದ ಕೊರಳು, ಎಣ್ಣೆ ಹಚ್ಚಿ ಬಾಚಿಕೊಂಡು ನಿಯಂತ್ರಣದಲ್ಲದ್ದೂ ಚಂದ ಕಾಣುವ ಕೂದಲಿತ್ತು. ಎಲಡಿಕೆ ಹಾಕಿಕೊಂಡ ಬಾಯಲ್ಲಿ ಒಂದು ಬದಿಗೆ ಗಲ್ಲ ಉಬ್ಬಿ ರಸ ತುಟಿಗಳ ಮ್ಯಾಲೆ ತುಳುಕುತ್ತಿತ್ತು. ತಮ್ಮ ಹೆಜ್ಜೆಗಳ ತಾಳಕ್ಕೆ ಹೊಂದಿಕೊಂಡವೆಂದು ತೋರಿದೊಡನೆ ತಂಡದ ಎಲ್ಲರೂ ಚುರುಕಿನಿಂದ ಹೆಜ್ಜೆ ಹಾಕತೊಡಿದರು. ಕೂಡಿದವರೆಲ್ಲ ಹೋ ಎಂದು ಕೂಗಿ ಸಂತೋಷದ ನಗೆಯಲೆ ಎಬ್ಬಿಸಿ ಸ್ವಾಗತಿಸಿದರು. ದುಡಿಗಳೊಂದಿಗೆ ಪ್ರೇಕ್ಷಕರೂ ಚಪ್ಪಾಳೆ ತಟ್ಟಿ ತಾಳ ಕುಟ್ಟಿದರು. ಬೆಳ್ಳಿ ಮಿಂಚಿನಂತೆ ಜಿಗಿಯುತ್ತ ಪ್ರತಿಯೊಬ್ಬ ಹುಡುಗಿಯ ಎಡಗೈಗೆ ಹೊಡೆದು ಇನ್ನೊಂದು ಪೆಟ್ಟಗೆ ಸೊಂಟದ ಮೇಲೆ ಕೈ ತಂದು ಎರಡು ಹೆಜ್ಜೆ ಕುಣಿದು ಮೂರನೇ ಏಟಿಗೆ ಬಲಗಾಲಿನ ಹಿಂಬಡದಿಂದ ನೆಲಕ್ಕೆ ಏಟು ಹಾಕಿ ಹಾರಿ ಕುಣಿದಳು. ಜಟ್ಟಿಗನಿಗೆ ಇದರಿಂದ ಭಾರೀ ಪ್ರೋತ್ಸಾಹವಾಯಿತು. ಮುಂದೆ ಮುಂದೆ ಸರಿಯುತ್ತ ಬಂದು ಬೆಳ್ಳಿಯ ಮುಂದೇನೇ ನಿಂತು ಕುಣಿ ಎಂದು ಕಣ್ಣಿನಲ್ಲೇ ಆಹ್ವಾನ ಕೊಡುತ್ತ ದುಡಿ ನುಡಿಸಿದ.

ಬೆಳ್ಳಿ ಕೆಲವು ತಿಂಗಳ ಹಿಂದೆಯಷ್ಟೇ ಹಲಿವುಳ್ಳಳಾಗಿ ತುಂಬ ನೊಂದಿದ್ದಳು. ಅವಳನ್ನು ಸಮಾಧಾನ ಪಡಿಸಲಿಕ್ಕೆ ಊರಿನ ಹೆಂಗಸರೆಲ್ಲ ಪ್ರಯತ್ನಿಸಿ ಕೊನೆಗೆ ಅವಳ ಬಗ್ಗೆ ಕಾಳಜಿ ಮಾಡದ ಅಮ್ಮನಿಗೇ ಶಾಪ ಹಾಕಿದ್ದರು. ಈಗ ಗಂಡ ಹೆಂಡತಿ ಹಳೆಯ ದುಃಖವ ಮರೆತು ಹುಡಗ ಹುಡಿಗಿಯರಾಗಿ ಕುಣಿಯುವುದು ಕಂಡು ಇಡೀ ಸಮೂಹ 'ಹೋ' ಎಂದು ಚಪ್ಪಾಳೆ ತಟ್ಟಿ ಆನಂದಿಸಿದತು!

ಜಯಸೂರ್ಯ ಋತು ತಾಗಿದ ಮರದ ಹಾಗೆ ಚುರುಕಾದ. ಅವನಾಗಲೇ ಸಲ್ಲದು ಸಲ್ಲದೆಂದುಕೊಂಡರೂ ಕಣ್ಣತುಂಬ ಬೆಳ್ಳಿಯ ಕನಸು ತುಂಬಿಕೊಂಡಿದ್ದ. ತನ್ನ ಕಡೆಗೆ ಯಾರೋ ನೋಡುತ್ತಿರುವರೆನ್ನಿಸಿ ಯಾರೆಂದು ನೊಡಿದ. ಜಟ್ಟಿಗ ಇವನನ್ನೇ ನೋಡುತ್ತಿದ್ದ ! ತಕ್ಷಣ ಮನಸ್ಸಿನಲ್ಲಿ 'ಜಟ್ಟಿಗ ಸಾಯಬಾರದೆ?' ಎಂದೂ ಒಂದಾಸೆ ಮೂಡಿ ಕಣ್ಣು ಫಳ್ಳನೆ ಹೊಳೆದವು. ಅದು ಅಸಾಧ್ಯವೆನ್ನಿಸಿ, ನಾಚಿ ತಂತಾನೆ ಸಂಕೋಚಗೊಂಡು ಬೇರೆ ಹುಡುಗಿಯರನ್ನ ನೋಡಿ ಆ ಭಾವನೆಯಕನ್ನು ಮರೆಯಲು ಪ್ರಯತ್ನಿಸಿದ. ಈಗ ಎಲ್ಲರ ಕಣ್ಣು ಕುಣಿವ ಬೆಳ್ಳಿಯ ಮ್ಯಾಲೆ ನೆಟ್ಟು ಹೊಳೆಯತೊಡಗಿದವು. ಇಡೀ ಕಾಡು ಬಾಯಿ ಮುಚ್ಚಿಕೊಂಡು ಮೈಯೆಲ್ಲ ಕಣ್ಣು ಕಿವಿಯಾಗಿ ತೆರೆದುಕೊಂಡು ಮೆಚ್ಚುಗೆಯಿಂದ ಕುಣಿತ ನೋಡುತ್ತಿರುವಂತೆ ಕಂಡಿತು.

ಆಮೇಲೆ ಉಳಿದ ತರುಣರ ಹಿಂಡು ಬಂದು ಜಟ್ಟಿಗನನ್ನು ಕೂಡಿಕೊಂಡಿತು. ಎಲ್ಲರೂ ಯೌವನದ ಸೊಕ್ಕನ್ನು ಪ್ರದರ್ಶಿಸುತ್ತ, ಬಡಿತಕ್ಕೆ ಅನುಗುಣವಾಗಿ ಮೈಗಳ ಕುಣಿಸುತ್ತ, ಎಲೆತಿಂದ ಕೆಂಪು ನಗೆಗಳ ನಗುತ್ತ, ಪೆಟ್ಟಿಗನುಗುಣವಾಗಿ ಆಗಾಗ ಹಾರಾಡಿ ಸ್ಥಳ ಬದಲಿಸುತ್ತ, ಹುಡುಗಿರಯ ಕಡೆಗೆ ಪ್ರೇಮದ ನೋಟಗಳ ಬೀರಿ ಅರ್ಥಪೂರ್ಣವಾಗಿ ಭುಜಗಳ ಹಾರಿಸುತ್ತ ದುಡಿಗಳ ನುಡಿಸಿದರು. ಜನ ಅಳತೆಮೀರಿ

ಆನಂದಪಡುತ್ತ, ಸಹಜವಾಗಿ ನಗುವುದಕ್ಕಿಂತ ಹೆಚ್ಚಾಗಿ ನಕ್ಕರು. ಅಪರಿಚಿತವಾದ ಲೋಕವೊಂದರಲ್ಲಿ ಆನಂದದಿಂದ ನಲಿದಾಡುತ್ತಿರುವಂತೆ, ಅಥವಾ ಮರೆತದ್ದನ್ನು ಪುನಃ ಪಡೆದಂತೆ ಆನಂದಗೊಂಡರು. ನಿಜ ಹೇಳಬೇಕೆಂದರೆ ಆ ದುಡಿಯ ಏಟು ಹಾಗೂ ಆ ಕುಣಿತ ಇವುಗಳ ವಿನಾ ಜಗತ್ತಿನಲ್ಲಿ ಇನ್ನೊಂದಿದೆ ಎಂಬುದನ್ನೇ ಮರೆತರು.

ಜಯಸೂರ್ಯನಿಗಂತೂ ಬೆಳ್ಳಿ ತನ್ನ ಹೃದಯದಲ್ಲಿ ಹೆಜ್ಜೆಯಿಟ್ಟು ಕುಣಿದಂತಿತ್ತು. ಸ್ವಚ್ಛಂದವಾದ, ಉಜ್ವಲವಾದ ಆನಂದ ಅವಳ ಮುಖ ಮತ್ತು ಕಣ್ಣುಗಳಲ್ಲಿ ಹೊಳೆಯುತ್ತಿದ್ದುದನ್ನು ಈತ ಕಣ್ತುಂಬ ನೋಡಿದ. ನೋಡಿದ ಎನ್ನುವುದಕ್ಕಿಂತ ಹೀರಿದ ಎನ್ನುವುದು ಹೆಚ್ಚು ಉಚಿತ. ಅಥವಾ ವಸಂತದ ಸಾರಸಾರಾಂಶದಂತಿದ್ದ ಅವಳ ಸೌಂದರ್ಯವನ್ನು ತನ್ನ ಹೃದಯಕ್ಕೆ ಬಗ್ಗಸಿಕೊಂಡ ಎನ್ನುವುದೇ ಸರಿಯಾದ ಮಾತು. ಕಾಡಿನ ಹೂಗಳ ಸೌಂದರ್ಯವಾಗಿ, ಬೆಳ್ದಿಂಗಳ ಮಾದಕತೆಯಾಗಿ, ಸುತ್ತಲ ಪರಿಸರದ ಚೈತನ್ಯವಾಗಿ ನಳನಳಿಸಿದಳು ಬೆಳ್ಳಿ!

ಬರಬರುತ್ತ ಒಬ್ಬೊಬ್ಬರೇ ಹುಡಿಗಿಯರು ದಣಿದು ದುಡಿ ಮತ್ತು ಬೆಳ್ಳಿಯ ವೇಗಕ್ಕೆ ಹೊಂದಿಕೊಳ್ಳಲಾರದೆ ಹಿಂದೆ ಸರಿದರು. ಅವರು ಹಿಂದೆ ಸರಿದರು. ಅವರು ಹಿಂದೆ ಸರಿದಷ್ಟೂ ಬೆಳ್ಳಿಯ ಉತ್ಸಾಹ ಹೆಚ್ಚಾಯಿತು. ಜಟ್ಟಿಗನಿಗೆ ಮಂದಹಾಸ ಬೀರಿ ಇಬ್ಬರೂ ಪರಸ್ಪರ ಮೆಚ್ಚುಗೆಯ ನೋಟಗಳನ್ನು ವಿನಿಮಯ ಮಾಡಿಕೊಂಡರು. ಕುಣಿತ ಮತ್ತು ದುಡಿಯ ಲಯ ಅವರ ಮೈಯ ರೋಮರೋಮಗಳಲ್ಲಿ ವ್ಯಕ್ತವಾಗುತ್ತಿದ್ದವು. ಆನಂದ ಮತ್ತು ಆಶ್ಚರ್ಯಗಳ ಮಿಶ್ರಣದ ಕಾಡು ಮೈಮರೆತು ಸ್ತಬ್ದವಾಗಿತ್ತು. ಕಗ್ಗತ್ತಲಿಂದ ಭರಿತವಾಗಿದ್ದ ಜಯಸೂರ್ಯನ ಹೃದಯದಲ್ಲಿ ಕಾಮನೆಗಳು ತುಳುಕಿದವು.

ದುಡಿ ಈಗ ಪ್ರಾರಂಭದ ಲಯಕ್ಕೆ ತಿರುಗಿತು. ದುಡಿಯ ಕಲಾವಿದ ಸೋತಿದ್ದ. ಬೆಳ್ಳಿಯ ಮುಖ ಕೆಂಪಾಗಿ ಬೆಂಕಿಯ ಬೆಳಕಿನಲ್ಲಿ ಕಣ್ಣು ಗುಲಗಂಜಿಯಂತೆ ಹೊಳೆಯುತ್ತಿದ್ದವು. ಹಣೆ, ಕೆನ್ನೆ, ಕತ್ತಿನ ತುಂಬ ಬೆವರು ಹರಿದಾಡುತ್ತಿತ್ತು. ಚಲನಶೀಲ ಸಂಭ್ರಮದಿಂದ ಇಡೀ ದೇಹ ನಡುಗುತ್ತಿತ್ತು. ಆನಂದ ಹೆಮ್ಮೆಗಳಿಂದ ಬೀಗುತ್ತ ಜಯಸೂರ್ಯನ ಕಡೆಗೊಮ್ಮೆ ನೋಡಿದಳು. ಜಯಸೂರ್ಯ ಮುಖ ಕೆಳಗೆ ಹಾಕಿದ. ದುಡಿ ನಿಂತದ್ದೇ ಆಯ್ತು. ಮೌನ ಆವರಿಸಿ ಬಯಲಿನಲ್ಲಿ ಹೆಪ್ಪುಗಟ್ಟಿತು. ಅಪೂರ್ವವಾದ ಆನಂದದ ಅನುಭವದಲ್ಲಿ ಅವರೆಲ್ಲ ಮೂಕವಿಸ್ಮಿತರಾಗಿದ್ದರು. ಅಷ್ಟರಲ್ಲಿ ಘನವಾದ ಮೌನವನ್ನು ತುಂಬಿಕೊಂಡ ಬೆಟ್ಟ ಕೊಳ್ಳಗಳಲ್ಲಿ ಕಾರಣಿಕ ಪ್ರತಿಧ್ವನಿಸಿತು:

ಒಂದು ಕಾಲಾಗ ತಕ್ಕಡಿ, ಒಂದು ಕಾಲಾಗ ಕತ್ತಿ ಹಿಡಿದುಕೊಂಡು
ರಣಹದ್ದು ಬಂದು
ಬೆಟ್ಟದ ನೆತ್ತೀಮ್ಯಾಲೆ ಕುಂತು ಹಟ್ಟೀ ಕಡೆ ನೋಡ್ಯಾವಲೇ ||
ಬ್ರಹ್ಮನ ಅವತಾರ ಮುಗಿದು
ಶಿವಪಾರ್ವತಿಯರು ಅವತಾರಕ್ಕಾಗಿ
ತುದಿಗಾಲಲ್ಲಿ ನಿಂತಾರಲೇ ||

ಕೇಳಿದ ಸಮಸ್ತ ಜನ ಆಘಾತ ಹೊಂದಿ ಸ್ತಬ್ಧರಾದರು. ಯಾಕೆಂದರೆ ಈ ಸಲದ ಕಾರಣಿಕ ಎಂದಿನಂತಿರಲಿಲ್ಲ. ಪ್ರತಿವರ್ಷ ಮಳೆ ಬೆಳೆ, ದನಕರುಗಳ, ಮಕ್ಕಳು ಮರಿಗಳ ವಿಚಾರ ಬರುತ್ತಿದ್ದುದೇ ಹೆಚ್ಚು. ಈ ಸಲ ಅದ್ಯಾವುದರ ಪ್ರಸ್ತಾಪವನ್ನು ಮಾಡದೆ ತಾಯಿ ರಣಹದ್ದಿನ ವಿಷಯ ಹೇಳಿದ್ದಳು. ರಣಹದ್ದು ಅಂದರೆ ಯಾವುದು? ಬೆಟ್ಟದ ಮ್ಯಾಲೆ ನಿಂತು ಹಟ್ಟೀ ಕಡೆ ನೋಡುವುದೆಂದರೇನು? ಅಮ್ಮನ ಕಾರಣಿಕ ಕೇಳಿ ಕೇಳಿ ಅದರ ಮಂಡಿಗೆ ಒಡೆಯುವುದರಲ್ಲಿ ತಜ್ಞರಾದ ಹಿರಿಯ ಗುಡ್ಡರಿಗೂ ಬಗೆಹರಿಯಲಿಲ್ಲ. ಅದು ನೆಮ್ಮದಿಯ ಕಾರಣಿಕವಂತೂ ಅಲ್ಲವೆಂದು ಮಾತ್ರ ಖಾತ್ರಿಯಾಗಿತ್ತು. ಅಷ್ಟರಲ್ಲಿ ತೇಜೋಮಯವಾದ ಸೂರ್ಯೋದಯವಾಗಿ ಎಳೆಯರು ರಾತ್ರಿಯ ಕುಣಿತದ ಭಾವಲಹರಿಯಲ್ಲಿ ತೇಲುತ್ತಲೂ, ಹಿರಿಯರು ಕಾರಣಿಕದ ಕಗ್ಗಂಟು ಬಿಡಿಸುತ್ತಲೂ ಇರುವಾಗ-

# ಒಂಬತ್ತು

ಇತ್ತ, ಜಯಸೂರ್ಯನಲ್ಲಿ - ಮೂರು ವರ್ಷದಿಂದ ತಾನೇ ಹಾಕಿಕೊಂಡಿದ್ದ ಬ್ರಹ್ಮಚರ್ಯದ ಕಟ್ಟುಪಾಡುಗಳೆಲ್ಲ ಕಳಚಿಬಿದ್ದು ಕಾಮನೆಯ ಬೆಂಕಿ ಧಗ ಧಗ ಉರಿಯ ತೊಡಗಿತು. ಹಲ್ಲುಕಚ್ಚಿ ಮನಸ್ಸನ್ನು ತಹಬಂದಿಗೆ ತಂದುಕೊಳ್ಳಲು ಪ್ರಯತ್ನಿಸಿದಷ್ಟೂ ಸೋಲುತ್ತಿರುವ ಅನುಭವವಾಯಿತು. ಬೆಟ್ಟದ ಮ್ಯಾಲೊಂದು ಹದ್ದು ಕೂತು ಕೋಪದಿಂದ ಕಣ್ಣು ಬಿರಿಯುವಂತೆ ತನ್ನನ್ನೇ ನೋಡುತ್ತಿರುವಂತೆ ಕಂಡಿತು. ಮುಖ ಈ ಕಡೆ ತಿರುಗಿಸಿದ. ಹೊನ್ನೆ ಮರ ಕಂಡಿತು. ಸೊಕ್ಕಿದ ಈ ಮರವೇ ನನ್ನ ಮೈತುಂಬಿ ಹೀಗೆ ಮಾಡಿಸುತ್ತಿದೆಯೆನ್ನಿಸಿತು. ಯಾಕೆಂದರೆ ಮರದ ಮುಖವೂ ಎಳೆ ಬಿಸಿಲಲ್ಲಿ ಹೊಳೆಯತೊಡಗಿತ್ತು. ಬೆಟ್ಟವನ್ನು ಪುಡಿಮಾಡುವ ತನ್ನ ಆತ್ಮವಿಶ್ವಾಸಕ್ಕೆ ಏನಾಗಿದೆ ಇವತ್ತು? ಜಯಸೂರ್ಯನೇ ನಾನು? ರಕ್ತದ ಒತ್ತಡ ಹೆಚ್ಚಾಗಿ ವಜ್ರಕಾಯದಲ್ಲಿ ನಡುಕ ಉಂಟಾಯಿತು. ಕೆನ್ನೆ ಕಿವಿ ಕಂಕುಳಲ್ಲಿ ಬೆವರು ಹನಿ ಮೂಡಿದವು. ಚಕ್ಕನೆ ಎದ್ದು ಮಡುವಿನ ಕಡೆಗೆ ನಡೆದ. ಹೊಲೆಬಂಡೆಯ ಮೇಲೆ ಹೋಗಿ ದೇಹದಂಡನೆ ಮಾಡಲೆಂದು ಕಣ್ಣು ಮುಚ್ಚಿದ.

ಇತ್ತ ಗವಿಯ ಒಳಗಡೆಯಿಂದ ಬೆಳ್ಳಿ ಮತ್ತು ಜಟ್ಟಿಗರಿಗೆ ಶಿವಪಾದನಿಂದ ಕರೆ ಬಂತು. ಇಬ್ಬರೂ ಒಳಗೋಡಿ ಅಮ್ಮನಿಗೆ ಅಡ್ಡಬಿದ್ದು, ಶಿವಪಾದನ ಪಾದ ಪಡಕೊಂಡು ಯಥೋಚಿತ ಗೌರವಾರ್ಪಣೆ ಮಾಡಿದರು. ಶಿವಪಾದ ಹೇಳಿದ:

"ಇಂದಿಗೆ ನಿನ್ನ ವ್ರತ ಮುಗಿಯಿತು ಮಗಳೆ. ಮುಂದಿನ ಶಿಪವಾದನ ಅವತಾರವಾಗಿದೆ! ಅಮ್ಮ ಆರಿಸಿದ ಆತನ ತಂದೆ ತಾಯಿಗಳು ನೀವೇ! ಸಕಾಲದಲ್ಲಿ ಗುರುತು ತೋರಿಸಿ ತಾಯಿ ನಿನ್ನ ಉಡಿ ತುಂಬುತ್ತಾಳೆ ಮಗಳೆ. ಇಬ್ಬರನ್ನೂ ಅಮ್ಮ ಕಾಪಾಡಲಿ."

ಎಂದು ವಚನ ಹೇಳಿ ದಂಪತಿಗಳು ಆನಂದ ಆಶ್ಚರ್ಯಗಳನ್ನು ಅನುಭವಿಸಲಿಕ್ಕೂ ಬಿಡದೆ ಬೆಳ್ಳಿಯ ಉಡಿಯಲ್ಲಿ ಫಲಪುಷ್ಪ ಹಾಕಿ, ಆಶೀರ್ವದಿಸಿ ಅವಳ ಮಸ್ತಕದ ಮೇಲೆ ಹಸ್ತ ಊರಿದ್ದೇ ಆಯ್ತು, - ಬೆಳ್ಳಂಬೆಳಗು ಕುಣಿದಾಡಿದ ದಣಿವಾಗಲಿ, ಹುಡುಗಾಟಿಕೆಯಾಗಲಿ- ಎಲ್ಲ ಮಾಯವಾದುವು. ದೊಡ್ಡ ಜವಾಬ್ದಾರಿಯೊಂದು ತಮ್ಮ ಮೇಲಿದೆ ಎಂದು ಅರಿವಾಗಿ ಜಟ್ಟಿಗ ಮತ್ತು ಬೆಳ್ಳಿ ಪುಳಕಿತರಾದರು. ಇಬ್ಬರ ಮುಖಗಳೂ ಪ್ರಸನ್ನವಾಗಿ ಕಣ್ಣಲ್ಲಿ ಆನಂದದ ನೀರು ಹರಿದಾಡಿತು. ಇಬ್ಬರ ಕಣ್ಣುಗಳಲ್ಲಿ ದೃಢವಾದ ಸಂಕಲ್ಪ ಮತ್ತು ಸೌಜನ್ಯಗಳು ವಿಜೃಂಭಿಸಿದವು. ಒಳ್ಳೆಯ ವಚನ ಅನುಗ್ರಹಿಸಿದ ಶಿವಪಾದನ ಪಾದಗಳನ್ನು ಇಬ್ಬರೂ ಭಕ್ತಿಯಿಂದ ಮುಟ್ಟಿ ಹಣೆಗೊತ್ತಿಕೊಂಡು ಧನ್ಯತೆಯನ್ನು ಅನುಭವಿಸಿದರು.

ಈ ಸುದ್ದಿ ಮಿಂಚಿನಂತೆ ಹರಿದಾಡಿ ಇಡೀ ಸಮೂಹದ ಹೃದಯ ಆನಂದದಿಂದ ತುಂಬಿ ಬಂತು. ಗಂಡಸರು ಜಟ್ಟಿಗನನ್ನು ತಬ್ಬಿಕೊಂಡು ಅಭಿನಂದಿಸಿದರೆ ವಯಸ್ಸಾದವರು ಇಬ್ಬರ ನೆತ್ತಿಯ ಮ್ಯಾಲೆ ಹಸ್ತ ಊರಿ ಹರಿಸಿದರು. ಹೆಂಗಸರು ಬೆಳ್ಳಿಯ ಮುಡಿಗೆ ಕಾಡುಹೂ ಮುಡಿಸಿದರು. ಕೆಲವರಂತೂ ಮಕ್ಕಳನ್ನು ಅವಳ ಪಾದಗಳ ಮ್ಯಾಲೆ ಚೆಲ್ಲಿದರು. ಹುಡುಗಿಯರು ಬೆಳ್ಳಿಯ ಪಾದ ಮುಟ್ಟಿ ನಮಸ್ಕರಿಸಿದರು. ಗರತಿಯರು ಸೋಬಾನೆ ಹಾಡತೊಡಗುತ್ತಲೂ ಹಿರಿಯರು ಬೆಳ್ಳಿ ಜಟ್ಟಿಗರನ್ನು ಜೊತೆಗೂಡಿಸಿ ಮಂಗಳವಾದ್ಯ ಸಮೇತ ಮೆರವಣಿಗೆಯಲ್ಲಿ ನಡೆಸಿಕೊಂಡು ಅವರ ಗೂಡಿನತನಕ ಬಂದು ಬಿಟ್ಟು ಹೋದರು. ಮೆರವಣಿಗೆ ಅವರ ಗೂಡು ತಲುಪಿದಾಗ ನಾಕು ತಾಸು ಹೊತ್ತೇರಿತ್ತು. ಅಲ್ಲಿಯತನಕ ಬೆಳ್ಳಿ ಜಟ್ಟಿಗರು ಏನೂ ಮಾಡಲಾಗದೇ ತಮ್ಮನ್ನು ತಾವು ಜನರ ಪ್ರೀತಿಗೆ ಅರ್ಪಿಸಿಕೊಂಡು ಆನಂದ ಭಾಷ್ಪಗಳನ್ನು ಉದುರಿಸುತ್ತ ಬಂದರು. ಬಂದ ಮುತ್ತೈದೇರು ಲಟಿಕೆ ಮುರಿದು ದೃಷ್ಟಿ ತೆಗೆದು, ಆಶೀರ್ವದಿಸಿ ದಂಪತಿಗಳನ್ನು ಮನೆ ಹೋಗಿಸಿ ಹೋದರು.

ಆಮೇಲೆ ದಂಪತಿಗಳು ಕುಲದೇವರಿಗೆ, ಹೆತ್ತಯ್ಯ ಮುತ್ತಯ್ಯರಿಗೆ ದೊಡ್ಡ ನಮಸ್ಕಾರಗಳನ್ನಾಚರಿಸಿ ಮಧುರಭಾವದಿಂದ ಮಾತು ಬಾರದೆ ಪರಸ್ಪರ ಮಂದಹಾಸ ಬೀರಿ ನೋಡುತ್ತ ನಿಂತುಕೊಂಡರು. ಆಮೇಲೆ ಬೆಳ್ಳಿ ಜಟ್ಟಿಗನನ್ನು ತಬ್ಬಿ ಅವನೆದೆಯ ಮೇಲೊರಗಿ ಆನಂದದ ಕಣ್ಣೀರು ಸುರಿಸಿದಳು. ಜಟ್ಟಿಗನೂ ಆರ್ದನಾಗಿ ಮಡದಿಯ ಬೆನ್ನಮೇಲೆ ಕೈಯಾಡಿಸಿ ಆನಂದಭಾಷ್ಪ ಉದುರಿಸುತ್ತಿದ್ದಾಗ

ಬೆಳ್ಳಿ ಅವನ ಅಪ್ಪುಗೆಯಿಂದ ಬಿಡಿಸಿಕೊಂಡು ಹಣ್ಣಿಗೆ ಜೋತು ಬೀಳುವ ಗಿಣಿಯಂತೆ ಅವನ ಮುಖವನ್ನು ತನ್ನೆಡೆಗೆ ಸೆಳೆದುಕೊಂಡು ಕೆನ್ನೆ ಮೂಗು ಗದ್ದ ತುಟಿಗಳನ್ನು ಕಚ ಕಚ ಕಚ್ಚಿ -ಆತ ನೋವಿನಿಂದ ನರಳಿದಾಗ ಕಿಲ ಕಿಲ ನಗುತ್ತ ಒಳಗೋಡಿದಳು. ಜಟ್ಟಿಗ ಪ್ರೀತಿಯಿಂದ ಮುಖದ ಜೊಲ್ಲು ಒರೆಸಿಕೊಳ್ಳುತ್ತ ಹೆಮ್ಮೆಯಿಂದ ಮಡದಿಯ ಕಡೆಗೆ ನೋಡುತ್ತ ನಿಂತ.

ಸಂಜೆಯ ಗೋಧೂಳಿ ಸಮಯವಾಗಿ ಕಾಡಿನಿಂದ ದನ ಬಂದವು. ಬೆಳ್ಳಿ ಅವುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹುಲ್ಲು ಹಾಕಿ ಅಕ್ಕಚ್ಚು ಎರೆದು ಹಾಲು ಕರೆದಳು. ಅಷ್ಟರಲ್ಲಿ ಮುತ್ತೈದೆಯರು ಮತ್ತೆ ಬಂದು ಅಂಗಳದ ಕಸ ಗುಡಿಸಿ ಬಣ್ಣದ ಗೆರೆ ಎಳೆದು ರಂಗೋಲಿ ಬಿಡಿಸಿದರು. ಕುಲದೇವರ ಮುಂದೆ ಕಪಿಲೆ ಹಸುವಿನ ತುಪ್ಪದ ಸೊಡರಿಟ್ಟರು. ಸತ್ಯದ ಮಹಾತಾಯಿ ಸಹಾಯ ಮಾಡಿದಳೆಂದು ಪದ ಪಾಡುತ್ತ, ಮಿಂದು ಬರಲು ಜಟ್ಟಿಗನ ಮಡುವಿಗಟ್ಟಿ, ಬೆಳ್ಳಿಯ ತಣ್ಣೀರಲೊಮ್ಮೆ ಬಿಸಿನೀರನಲ್ಲೊಮ್ಮೆ ಮೀಯಿಸಿದರು. ಫಲಬಿರಿವ ಹದವಂತಿಯ ತಲೆಬಾಚಿಕ, ಮುಡಿಕಟ್ಟಿ ಹೂಮುಡಿಸಿ, ಸೆಳೆನೂಲುಡಿಸಿದರು. ಕಣ್ಣಿಗೆ ಕೋಲು ಕಾಡಿಗೆ ಬರೆದು ನೊಸಲಲ್ಲಿ ಚಂದ್ರನ ಬೊಟ್ಟಿಟ್ಟರು. ಅಷ್ಟರಲ್ಲಾಗಲೇ ಮೂರು ತಾಸು ರಾತ್ರಿಯಾಗಿ ಉಂಡು ಮಲಗುವ ಸಮಯವೆಂದು ಇಬ್ಬರಿಗೂ ರುಚಿಕರ ಅಡಿಗೆಯಟ್ಟು, ಎರಡು ಬಾಳೆಲೆಯಿಟ್ಟು, “ಇನ್ನು ಮ್ಯಾಕೆ ನಾವ್ಯಾಕೆ? ನೀನಿಲ್ಲೇ ನಿನ್ನ ಇನಿಯನಿಲ್ಲೇ?” ಎಂದು ನಗಾಡುತ್ತ ಮುತ್ತೈದೇರು ಬಾಗಿಲು ಮುಂದೆ ಮಾಡಿಕೊಂಡು ಹೋದರು. ಒದಗಲಿರುವ ಸೌಭಾಗ್ಯದ ಸುಖ ನೆನೆದು ಬೆಳ್ಳಿ ಅಡಿಯಿಂದ ಮುಡಿತನಕ ಜಟ್ಟಿಗನಿಗಾಗಿ ಕಾಯುತ್ತ ಬಾಗಿಲು ನೋಡುತ್ತ ಕುಂತಳು.

ಬಿಸಿಲು ಚಳಿಯೆನ್ನದೆ ಉಂಡು ಮಲಗುವ ಸಮಯದ ತನಕ ಜಯಸೂರ್ಯ ಹೊಲೆಬಂಡೆಯ ಮೇಲೆ ಹಾಗೇ ಕೂತಿದ್ದವನು ಯಾರೋ ಮೀಯುವ ಸದ್ದಾಗಿ ಕೆಳಗೆ ನೋಡಿದ. ಮಡುವಿನಲ್ಲಿ ಜಟ್ಟಿಗ ಮುಳುಗು ಹಾಕುತ್ತಿದ್ದ. ಈವರೆಗಿನ ನಿಯಂತ್ರಣವೆಲ್ಲ ಹರಿದು ತುಂಡಾಗಿ ಬಿದ್ದು ಒಳಗೊಳಗೆ ಅಸೂಯೆಯ ಧಗೆ ಧಗೆ ಧಗೆ ಎದೆ ಸುಟ್ಟ ಅನುಭವವಾಯಿತು. ಮ್ಯಾಲೆ ನೋಡಿದರೆ ಬಾಲ ನಿಗುರಿದ ಚಿರತೆಯೊಂದು ಬೆಟ್ಟದ ನೆತ್ತಿಯ ಮ್ಯಾಲೆ ಬೆಂಕಿಗಣ್ಣಿಂದ ನೋಡಿ ಇವನೆದೆಯನ್ನು ಇರಿದಂತಾಯಿತು. ಕಿಟಾರನೇ ಕಿರಿಚಿ ಏನು ಮಾಡುತ್ತಿದ್ದೇನೆಂಬುದೂ ಅರಿವಾಗದೆ ಮಡುವಿನಲ್ಲಿ ಮೂರು ಮೂರು ಮುಳುಗು ಹಾಕಿ ಏಳುತ್ತಿದ್ದ ಜಟ್ಟಿಗನ ಮೇಲೆ ದೊಡ್ಡ ಬಂಡೆಯೊಂದನ್ನೆತ್ತಿ ಎಸೆದುಬಿಟ್ಟ! ಬಂಡೆ ಬಿದ್ದ ಸದ್ದೆಷ್ಟೋ ಅಷ್ಟೆ, ಆಮೇಲೆ ಅತ್ತಿತ್ತ ನೋಡದೆ ಸೀದಾ ಜಟ್ಟಿಗನ ಮನೆಗೆ ನಡೆದ.

ಆಗಲೇ ಕತ್ತಲಾಗಿ ಹಟ್ಟಿಯ ಜನ ಮಲಗಿದ್ದರು. ಸೀದಾ ಜಟ್ಟಿಗನ ಮನೆಗೆ ಹೋಗಿ ಬಾಗಿಲು ನೂಕಿದ. ಮೆಲ್ಲಗೆ ಪಡುಕೋಣೆಗೆ ಹೋಗಿ ಹಣಿಕಿ ಹಾಕಿದ. ಬೆಳ್ಳಿ ದಣಿದು ಜಟ್ಟಿಗನಿಗಾಗಿ ಕಾಯುತ್ತ ಒರಗಿ ಹಾಗೇ ನಿದ್ದೆ ಹೋಗಿದ್ದಳು. ಕುಲದೇವರ ಮುಂದಿನ ನಂದಾದೀಪವ ಆರಿಸಿ ಮೆಲ್ಲಗೆ ಬೆಳ್ಳಿಯ ಬಳಿಗೆ ಸರಿದ.

ತುಸು ಸಮಯದಲ್ಲೇ ಬೆಳ್ಳಿ ಉನ್ಮಾದ, ಹಿಂಸೆ ಬೆರೆತ ನೋವಿನಲ್ಲಿ ಮುಲುಗ ತೊಡಗಿದಳು. ದೇಹಂತ ದೇಹ ಕುದಿಯುತ್ತಿರುವಂತೆನ್ನಿಸಿತು. ಅಸಹಜವಾಗಿ ದನಿ ತೆಗೆದು ನರಳಿದಳು. ಉಸಿರುಗಟ್ಟುವಂತೆ ಬಿಗಿಹಿಡಿದು ಯಾರೋ ಕಬ್ಬಿಣದ ಕೈಗಳಿಂದ ತನ್ನನ್ನ ಬಂಧಿಸಿ ತಿನ್ನುತ್ತಿರುವ ಅನುಭವವಾಗಿ, ತನ್ನ ಅಷ್ಟೂ ಬಲದಿಂದ ಎರಡೂ ಕೈಗಳನ್ನ ಬಿಡಿಸಿಕೊಂಡು ತನ್ನ ಮ್ಯಾಲೆ ಆಕ್ರಮಣ ಮಾಡಿದವನ ಮುಖ ಹಿಡಿದು ತಳ್ಳುತ್ತಿದ್ದಾಗ ಕಿವಿಯಲ್ಲಿ ಕೂದಲ್ಲಿದ್ದುದು ತಿಳಿವಿಗೆ ಬಂತು! ಇದು ಜಟ್ಟಿಗನಲ್ಲವೆಂದು ಕಿಟಾರನೆ ಕಿರಿಚಿ, ಯಾವುದೋ ಮಾಯೆಯಿಂದ ಆಕ್ರಮಣಕಾರನಿಂದ ಬಿಡಿಸಿಕೊಂಡು ಎರಡೂ ಕಾಲುಗಳಿಂದ ಝಾಡಿಸಿ ಒದ್ದಳು. ಜಯಸೂರ್ಯನ ಎದೆಗೇ ದೊಡ್ಡ ಏಟು ಬಿದ್ದು ಅಷ್ಟು ದೂರ ಹೋಗಿ ಬಿದ್ದ. ಕ್ಷಣಾರ್ಧದಲ್ಲಿ ಜಯಸೂರ್ಯ ಅಲ್ಲಿಂದ ಮಾಯವಾದ. ಬೆಳ್ಳಿ ಎದ್ದು ಕಿರುಚುತ್ತಲೇ ಇದ್ದಳು.

ಮಂಟಪದಲ್ಲಿದ್ದ ಅತಿಥಿಗಳನ್ನು ನೋಡಿಕೊಳ್ಳಲು ಬಂದಿದ್ದ ಕುರುಮುನಿಗೆ ಜಯಸೂರ್ಯ ರಭಸದಿಂದ ಓಡಿಬರುತ್ತಿರುವುದು ಕಂಡಿತು. ಅವನ ಆಕಾರ ಮತ್ತು ಬೆಳ್ಳಿಯ ಕಿರುಚಾಟ ಕೇಳಿದ್ದೇ ಅವನಿಗೆದುರಾಗಿ ನಿಂತ. ಅಕಸ್ಮಾತ್ ಎದುರಾದ ಎರಡು ಸಹಜ ವೈರವುಳ್ಳ ಪ್ರಾಣಿಗಳ ಹಾಗೆ, ಒಂದರ ಸಾಮರ್ಥ್ಯ ಇನ್ನೊಂದಕ್ಕಾಗದೆ, ಹ್ಯಾಗೆ ಎದುರಿಸಬೇಕೆಂದು ಉಪಾಯಗಳ ಹೊಂಚುತ್ತ ಇಬ್ಬರೂ ಎದುರು ಬದುರು ನಿಂತರು. ಜಯಸೂರ್ಯನಿಗೆ ಇದು ಅನಿರೀಕ್ಷಿತವಾದ್ದರಿಂದ ಎದುರಿಸಲಾರದೆ ಓಡುವುದಕ್ಕೆ ಇನ್ನೊಂದು ಹೆಜ್ಜೆ ಹಾಕಿದ.

ಕುರುಮುನಿ ಅಲ್ಲಿಗೂ ನೆಗೆದು ಎದುರಾದ. ಕುರುಮುನಿಗೆ ಎಲ್ಲವೂ ಗೊತ್ತಾಗಿ ನಾಶಮಾಡಲೆಂದೇ ಎದುರು ನಿಂತಿರುವನೆಂದು ಸ್ಪಷ್ಟವಾಯಿತು. ತಾನಾಯಿತು, ತನ್ನ ಗುರುನಾಮಸ್ಮರಣೆಯಾಯಿತು ಎಂದು ಮಗುವಿನಂತೆ ಆಡಿಕೊಂಡಿದ್ದ ಕುರುಮುನಿ ಈ ದಿನ ಸಾಕ್ಷಾತ್ ಭೈರವನಾಗಿ ಕಣ್ಣಿಂದ ಕಿಡಿ ಸಿಡಿಸುತ್ತ ಬಲದ ಹಸ್ತವ ಅಗಲಿಸಿ ಜಯಸೂರ್ಯನ ಕೆನ್ನೆಗೊಂದು ಏಟು ಬಿಟ್ಟ! ವಜ್ರಕಾಯನಾದ ಜಯಸೂರ್ಯ ನೆಲದ ಮೇಲೆ ಅಂಗಾತ ಬಿದ್ದು ವಿಲ ವಿಲ ಒದ್ದಾಡಿದ. ಓಡಬೇಕೆಂದಾಗ ಕುರುಮುನಿ ಹಿಡಿ ಮಣ್ಣು ತಗೊಂಡು "ನಿತ್ಯವೂ ಶಾಪಗಳಿಗೆ ಗುರಿಯಾಗುತ್ತ ಚಿರಂಜೀವಿಯಾಗು ಪಿಶಾಚಿ!" ಎಂದು ಅವನ ಮ್ಯಾಲೆಸೆದ. ಅದು ಬೆಂಕಿಯ ಕಿಡಿಯ ಹಾಗೆ ಮೈತುಂಬ ಸಿಡಿದು ಸತ್ತೆನೋ ಕೆಟ್ಟೆನೋ-ಎಂದು ವಿಕಾರವಾಗಿ ಕಿರುಚುತ್ತ ಓಡಿದ.

ಇಡೀ ಶಿವಾಪುರ ಸೀಮೆ ತನ್ನ ಮೇಲೆ ಕೆಂಡದ ಮಳೆ ಸುರಿದಂತಾಗಿ ಶಿವಪಾದನ ವಚನ ಹುಸಿಹೋಯಿತೇ ಎಂದು ಆಘಾತ ಹತಾಶೆಗಳಿಂದ ಬೆಟ್ಟದ ಕಡೆ ನೋಡುತ್ತ, ನಿಶ್ಶಬ್ದವಾಯಿತು!

## ಹತ್ತು

ಕುದುರೆ ದಣಿದಿತ್ತು. ಒಂದು ವಾರದಿಂದ ಓಡುತ್ತಲೇ ಇದ್ದ ಕುದುರೆ ರಾತ್ರಿ ಯಾವುದಾದರೂ ಹಟ್ಟಿ ಸಿಕ್ಕರೆ ಒಂದೆರಡು ಗಂಟೆ ನಿದ್ದೆ ಮಾಡಿದ್ದರೇ ಹೆಚ್ಚು, ಅಷ್ಟರಲ್ಲಿ ಸವಾರ ಬಂದು ಹತ್ತಿ ಪಕ್ಕೆಗೆ ಒದೆಯುತ್ತಿದ್ದ. ಹಗಲು ಹೊತ್ತಿನಲ್ಲಾದರೆ ಜನ ಇಲ್ಲದ ಸ್ಥಳದಲ್ಲಿ ತುಸು ಹೊತ್ತು ತಂಗಿ ಹುಲ್ಲು ಮೇದು, ನೀರು ಕುಡಿದು ಮತ್ತೆ ಓಡಬೇಕು. ಪ್ರಯಾಣದ ಕೊನೆಕೊನೆಗಂತೂ ಕುದುರೆಯ ಕಣ್ಣು ಸಂಕೋಚಗೊಂಡು ಮನಸ್ಸಿಲ್ಲದೆ ತೆರೆದಂತೆ ಕಾಣುತ್ತಿದ್ದ. ಬಿಟ್ಟೂ ಬಿಡದೆ ಓಡಿ ಬಂದುದರಿಂದ ಕುದುರೆ ಮತ್ತು ಸವಾರ ಇಬ್ಬರ ಮೈತುಂಬ ಧೂಳಡರಿ, ಬಟ್ಟೆ ಬರೆ ಹೊಲಸಾಗಿ ಇಬ್ಬರ ಮುಖಗಳಲ್ಲೂ ಧೂಳಿನಲ್ಲಿ ಉರುಳಾಡಿದ ಶವದ ಕಳೆಯಿತ್ತು. ಕುದುರೆ ಎಲ್ಲಿಗೆ ಹೊರಟಿದೆ ಎಂದು ತಿಳಿಯುವಷ್ಟು ಚೈತನ್ಯ ಸವಾರನಿಗಿರಲಿಲ್ಲ. ಸವಾರ ನಿರ್ದೇಶಿಸಲಿಲ್ಲವಾದರೂ ತನ್ನ ಯಜಮಾನನ ಮನೆ ಯಾವುದೆಂದು ತಿಳಿದುದರಿಂದ, ಸಂಶಯವಿಲ್ಲದೆ ತರುಮರಗಳಿರುವ ಪ್ರಾಂಗಣಕ್ಕೆ ಕುದುರೆ ಬಂದು ನಿಂತಿತು.

ಕಲ್ಲಿನಲ್ಲಿ ಕಟ್ಟಿದ ಎರಡಂತಸ್ತಿನ, ಚಿತ್ತಾರದ ಬಾಗಿಲುಳ್ಳ, ದಪ್ಪ ಮರದಲ್ಲಿ ಮಾಡಿದ ಕಿಟಕಿಗಳುಳ್ಳ, ನೋಡಿದರೆ ಗೌರವಸ್ಥ ಶ್ರೀಮಂತರ ಮನೆಯೆಂದು ಗೊತ್ತಾಗುವಂಥ ಮನೆ ಅದು. ಮನೆಯ ಸೇವಕ ಕುದುರೆಯನ್ನು ಕಂಡವನೇ ಅಪರಿಚಿತ ಸವಾರ ನನ್ನ ನೋಡಿ ಪುನಃ ಕುದುರೆಯನ್ನು ಗುರುತಿಸಿ "ಕುದುರೆಯೇನೋ ನಮ್ಮದೇ, ಆದರೆ ಈತ ಯಾರು? ಯಾಕೆ? ಹ್ಯಾಗೆ?" ಎಂದು ಬೆರಗಾಗಿ ಒಡೆಯರಿಗೆ ತಿಳಿಸಲು ದೊಡ್ಡ ಮನೆಗೋಡಿದ.

ಒಡೆಯನೂ ತೊಲೆಬಾಗಿಲಲ್ಲಿ ನಿಂತು ಕುದುರೆ ಮತ್ತು ಸವಾರನನ್ನೇ ಬೆರಗಿನಿಂದ ನೋಡುತ್ತ "ಕುದುರೆ ಒಯ್ದವನೇ ಬೇರೆ: ತಂದವನೇ ಬೇರೆ! ನಿಧಾನವಾಗಿ ತಿಳಿದರಾಯ್ತು, ಅವ ಬರಲಿ" ಎಂದು ಕಟ್ಟೆಯ ಮೇಲೆ ಕಾಲುಗಳನ್ನು ಇಳಿಬಿಟ್ಟು ಕೂತ. ಸೊಂಟದ ದೋತ್ರ, ಹೆಗಲ ಮೇಲೊಂದು ಕೈಬಟ್ಟೆ ಬಿಟ್ಟು ಮೈಮೇಲೆ ಬೇರೆ ಬಟ್ಟೆಗಳಿರಲಿಲ್ಲ. ಕಿವಿಯಲ್ಲಿ ದೊಡ್ಡ ಓಲೆ, ದೊಡ್ಡ ತಲೆಯ ಹಿಂದೆ ಕೂದಲಿದ್ದು ಬೆನ್ನು, ಭುಜದ ಮೇಲೆ ಒರಗಿದ್ದವು. ಬೆರಳುಗಳಲ್ಲಿ ಬಣ್ಣದ ಉಂಗುರಗಳಿದ್ದು ನೀಳವಾದ ಕೈಗಳನ್ನು ಕೊಂಚ ಉಬ್ಬಿದ ಹೊಟ್ಟೆಯ ಮೇಲೆ ಇಟ್ಟುಕೊಂಡು ಆಗಂತುಕನನ್ನೇ ನೋಡುತ್ತ ಕೂತ. "ಇವನ್ಯಾರೋ! ನಮ್ಮ ಕುದುರೆಯೇನೋ ಬಂತು ಸೈ, ಹೊಳೆಯ ಏನಾದ?" ಎಂದು ಇನ್ನೊಮ್ಮೆ ಯೋಚಿಸಿ "ಗೊತ್ತಾದೀತು" ಅಂತ ಮತ್ತೊಮ್ಮೆ ಸಮಾಧಾನ ಮಾಡಿಕೊಂಡು ಕೂರುವಷ್ಟರಲ್ಲಿ ಜಯಸೂರ್ಯ ಕುದುರೆಯಿಂದಿಳಿದ. ಸೇವಕ ಕುದುರೆ ಹಿಡಿದುಕೊಂಡು ಅದರ ಒಡಲ ಸುತ್ತ ಕಟ್ಟಿದ ಪಟ್ಟಿಯನ್ನೂ ಕೊರಳ ಪಟ್ಟಿಯನ್ನೂ ಸಡಿಲಿಸಿದ. ಜೊಲ್ಲಿನಿಂದ ಅಂಟಂಟಾದ ಕಡಿವಾಣವನ್ನು ಅದರ ಬಾಯಿಂದ ಹೊರತೆಗೆದು ಪಾಗಾದತ್ತ ಕರೆದೊಯ್ದ. ಜಯಸೂರ್ಯ ಈ ಕಡೆ ಬಂದ.

ಎತ್ತರವಾದ, ತಾಮ್ರ ಬೆರೆತ ಉಕ್ಕಿನ ದೇಹದ, ಠೀವಿಯ ನಡಿಗೆಯ, ದಪ್ಪ ಹುಬ್ಬಿನ, ಕಿವಿಗೂದಲಿನ ವಿಲಕ್ಷಣ ಮುಖದ, ದಣಿದುದರಿಂದ ಒದಲಾಗದ ಕಣ್ಣುಳ್ಳ ಜಯಸೂರ್ಯನ ನೋಡಿ-ಇವನ್ಯಾವನೋ ದೊಡ್ಡ ಮನುಷ್ಯನೇ ಇರಬೇಕು-ಅಂದುಕೊಂಡ, ಯಜಮಾನ.

ಸೊಂಟದ ದಟ್ಟಿ ಮತ್ತು ಹೆಗಲ ಕಂಬಳಿ ವಿನಾ ಬೇರೆ ಬಟ್ಟೆಯಿರಲಿಲ್ಲ. ಧೂಳಡರಿದ ನೀಳ ಕೂದಲು ಭುಜದ ಮ್ಯಾಲೊರಗಿ ನಡಿಗೆಯ ಲಯಾನುಸಾರ ನಲುಗುತ್ತಿದ್ದವು. ಕುದುರೆ ಇಳಿದಾಗಿನಿಂದ ತನ್ನಲ್ಲಿಗೆ ಬರುವ ತನಕ ಆ ಈ ಕಡೆ ನೋಡದೆ ಆಗಂತುಕನನ್ನೇ ನೋಡುತ್ತ ಕೂತ. ಬಿಲಿಸಲಿನಲ್ಲಿ ಬಂದುದರಿಂದ ಅವನ ಮುಖ ಕೆಂಪೇರಿತ್ತು. ಬೆವರಿನಿಂದ ಒದ್ದೆಯಾದ ಅವನ ಕಣ್ಣು ಹೆಚ್ಚಾಗಿಯೇ ಹೊಳೆಯುತ್ತಿದ್ದವು. ಆತ ಬರುತ್ತಲೂ ಕೂತೇ ಇರಬೇಕೆಂಬ ನಿಲುವು ಸಡಲಿ ಇದ್ದು ಬಾಗಿಲಿಗೆ ಬಂದ. ಯಜಮಾನನ ಮನೆಯೆದುರು ಬಾವಿಗೆ ಹೋಗಿ ನೀರು ತಕ್ಕೊಂಡು ಕೈಕಾಲು ತೊಳೆದುಕೊಂಡು ಮುಖ ಶುದ್ಧಿ ಮಾಡಿಕೊಂಡು ಬಂದು ಆಗಂತುಕ ಕೇಳಿದ:

"ಅರ್ಥಕೌಶಲ ನೀವೇನೊ?"

"ಹೌದು"

ಎಂದೊಂದು ಆಸನ ತೋರಿಸಿ ಕೂರಲಿಕ್ಕೆ ಸನ್ನೆ ಮಾಡಿದ. ಜಯಸೂರ್ಯನಿಗೆ ಇಷ್ಟು ಉಪಚಾರ ಸಾಕಾಯ್ತು, ಹೋಗಿ ಕೂತ.

"ನಿಮ್ಮ ಸೇವಕ ಹೊಳೆಯ ಎಂಬಾತನನ್ನು ಹುಲಿ ಮುರಿಯಿತು. ನಾನೂ ಸಹಾಯ ಮಾಡಲಾಗಲಿಲ್ಲ. ನಾನಲ್ಲಿಗೆ ತಲುಪಿ ಹುಲಿಯನ್ನ ಓಡಿಸಿದಾಗ ಅವನಾಗಲೇ ಅರೆಜೀವವಾಗಿದ್ದ. ನಿಮಗೆ ತಲುಪಿಸಲು ಇದಿಷ್ಟನ್ನು ಕೊಟ್ಟ ತಗೊಳ್ಳಿ."

-ಎಂದು ಹೇಳಿ ಒಂದು ಗಂಟನ್ನು ಕೊಟ್ಟ. ಅರ್ಥಕೌಶಲ ತಗೊಂಡು ನೋಡಿದ. ತಾನು ಸೇವಕರಿಗೆಂದು ಕೊಡುವ ತನ್ನ ಹೆಸರು ಬರೆದ ಕಠಾರಿಯಿತ್ತು. ಗಂಟಿನಲ್ಲಿ ಹಣವಿದೆಯೆಂದು ಗೊತ್ತಾಯ್ತು. ಬಿಚ್ಚಲಿಲ್ಲ. ಸೇವಕಿ ಆಗಲೇ ಬಾಯಾರಿಕೆಗೆ ಮುಂದೆ ಇಟ್ಟು ಹೋಗಿದ್ದಳು. ಅರ್ಥಕೌಶಲನೇ ಬೆಲ್ಲದ ಬಟ್ಟಲು ಮತ್ತು ನೀರಿನ ಚೊಂಬನ್ನು ತೋರಿಸಿ 'ಬಾಯಾರಿಕೆಗೆ' ಅಂದ. ಜಯಸೂರ್ಯ ಬೆಲ್ಲದ ಸಣ್ಣ ಕರಣೆಯನ್ನ ಬಾಯಿಗೆ ಒಗೆದುಕೊಂಡು ಚೊಂಬನ್ನೆತ್ತಿ ಗಟ ಗಟ ನೀರು ಕುಡಿದ. ಅಲ್ಲಿದ್ದವರು ತನ್ನನ್ನೇ ನೋಡುತ್ತಿರುವುದನ್ನು ಗಮನಿಸುತ್ತ ಬಾಯೊರೆಸಿಕೊಂಡ. ಅರ್ಥಕೌಶಲ ಮಾತ್ರ ಇನ್ನೂ ಕುತೂಹಲದಲ್ಲಿಯೇ ಇದ್ದ. ಕಣ್ಣು ಸಂಕೋಚಗೊಳಿಸಿ ಹರಿತವಾದ ನೋಟವನ್ನ ಇವನ ಹೃದಯದಲ್ಲಿ ನಾಟಿಸಿ ಇವನರಿಯದಂಗೆ ನೋಡಲು ಹಾರೈಸುತ್ತಿದ್ದ. ಜಯಸೂರ್ಯ ಇದನ್ನ ಗಮನಿಸಿ ಮುಂದುವರೆಸಿದ:

"ನಿಮ್ಮ ಸೇವಕ ಹೊಳೆಯನ ಕುದುರೆಯಿಂದ ನನಗೆ ಸಹಾಯವಾಯಿತು. ನಾನು ಕವಿರಾಜ. ನಿಮ್ಮ ರಾಜರಿಗೆ ಜಡ್ಡಿದೆಯೆಂದು ಕೇಳಿದೆ. ಅವಕಾಶವಾದರೆ ಮದ್ದು ಕೊಡುವಾ ಅಂತ ಬಂದೆ." ಅಂದ.

"ನಿಮ್ಮ ಹೆಸರು?"

"ಶಿಖರಸೂರ್ಯ?"

"ಪೂರ್ತಿ ಹೆಸರು?"

"ಶಿಖರಸೂರ್ಯ ಹೆಗಡೆ"

ಭೇಟಿಯಾದವರ ಮೇಲೆ ಭೌತಿಕ ಪ್ರಭಾವ ಬೀರಿ ಅವರಲ್ಲಿ ಸ್ನೇಹೋಲ್ಲಾಸಗಳನ್ನ ಉಂಟು ಮಾಡುವ ಒಂದು ಕಲೆ ಜಯಸೂರ್ಯನಲ್ಲಿತ್ತು. ಅದನ್ನ ಈಗ ಸರಿಯಾಗಿಯೇ ಉಪಯೋಗಿಸಿದ್ದ. ಅರ್ಥಕೌಶಲ ತನ್ನ ಮಾತನ್ನು ಆಸಕ್ತಿಯಿಂದ ಆಲಿಸುತ್ತಿದ್ದಾನೆಂದು ಗೊತ್ತಿದ್ದೂ ತಾನು ಮಾತ್ರ ಯಾರನ್ನೂ ಒಲಿಸಿಕೊಳ್ಳಲು ಆತುರನಾಗಿಲ್ಲೆಂಬಂತೆ ಮಾತಾಡಿದ. ಅರ್ಥಕೌಶಲ ನಂಬಲಿಲ್ಲ. "ವಿಶ್ರಾಂತಿ ಆಗಲಿ, ಆಮೇಲೆ ಮಾತಾಡುವಾ" ಎಂದು ಹೇಳಿ ತನ್ನ ಖಾಸಗಿ ಅತಿಥಿಗೃಹದ ಮಹಡಿಗೆ ಕರೆದೊಯ್ಯುವಂತೆ

ಅಲ್ಲಿದ್ದ ಸೇವಕನಿಗೆ ಹೇಳಿದ. ಇಬ್ಬರೂ ಹೋದಮೇಲೆ ಅರ್ಥಕೌಶಲ ತನಗೆ ಕೊಟ್ಟ ಗಂಟಿನಲ್ಲಿಯ ಹಣವ ಎಣಿಸಿದ. ಸರಿಯಾಗಿ ಮುನ್ನೂರು ಹಣ ಇತ್ತು. ಆದ್ದರಿಂದ ಈತ ಹೊಳೆಯನನ್ನು ಉದ್ದೇಶಪೂರ್ವಕ ಕೊಂದು ಬಂದವನಲ್ಲವೆಂದು ನಂಬಿಕೆಯಾಯಿತು. ಇನ್ನಿವನ ವೈದ್ಯವಿದ್ಯೆ, ರಾಜನ ಜಡ್ಡಿಗೆ ವೈದ್ಯನಾಗಿ ಒಂದು ಅವಕಾಶ ಕೊಟ್ಟು ನೋಡುವುದರಲ್ಲಿ ಹಾನಿಯೇನೂ ಇಲ್ಲವೆನ್ನಿಸಿತು. ಇಂದಿನ ಸಂಜೆ ಅರಮನೆಗೆ ಕರೆದೊಯ್ದು ರಾಜರ ಭೇಟಿ ಮಾಡಿಸಿ ರಾತ್ರಿ ಧರ್ಮಶಾಲೆಗೋ, ಅತಿಥಿಗೃಹಕ್ಕೋ ಅಟ್ಟಿದರಾಯಿತೆಂದು ಅರ್ಥಕೌಶಲ ಅಂದುಕೊಂಡ.

ಎರಡೇ ಕಿಡಕಿಗಳಿದ್ದ ಕಲ್ಲಿನ ದೊಡ್ಡ ಕೋಣೆಯಲ್ಲಿ ಮಂಚದ ಮೇಲೆ ಅಡ್ಡಾಗಿ ಜಯಸೂರ್ಯ ಚಿಂತಿಸಿದ. ಈ ದಿನ ಅನಿರೀಕ್ಷಿತವಾದ ಅನೇಕ ಮಾತಗಳು ಅವನ ಬಾಯಿಂದ ಬಂದಿದ್ದವು. ತನ್ನನ್ನು ಶಿವಾಪುರದ ಗವಿಯಲ್ಲಿ ಕಂಡವರ್ಯಾರೂ ಇಲ್ಲಿಗೆ ಬರಲಾರೆಂದು ನಂಬಿಕೆ ಇದ್ದರೂ ಅರ್ಥಕೌಶಲ ತನ್ನ ಹೆಸರನ್ನು ಎರಡು ಬಾರಿ ಯಾಕೆ ಕೇಳಿದ? ಮನುಷ್ಯ ಮೂಬೆರಿಕಿ. ಪ್ರಾಯ ಮಾಗಿ ಕೊಬ್ಬಿದ ಮುಖದಲ್ಲಿ ನೀಳ ಮೂಗು, ಹೆಂಗಸರಿಗಿರುವಂಥ ಕೊರೆದ ಹಾಗಿದ್ದ ಹುಬ್ಬು, ಸದಾ ಏನಾದರೊಂದು ಹೊಸದನ್ನು ಹುಡುಕುವ ಕಣ್ಣುಗಳು, ಎದುರಿನವರನ್ನು ಭೇದಿಸಿ ನೋಡುವ ಅವನ ಆಸಕ್ತಿ-ಇವುಗಳ ಬಗ್ಗೆ ಚಿಂತಿಸುತ್ತಲೇ ಜಯಸೂರ್ಯ ಕೊಂಚ ಹೊತ್ತು ಅಡ್ಡಾದ.

ಬೆಳ್ಳಿಯಿಂದ ಒದೆ ತಿಂದು, ಕುರುಮುನಿಯಿಂದ ಏಟು ತಿಂದು ಓಡಿ ಬರುವಾಗ ಜಯಸೂರ್ಯ ಯೋಚನೆ ಮಾಡಿದ್ದು: ದೂರದೂರಕ್ಕೆ ಶಿವಾಪುರದ ಯಾರೂ, ಅಂದರೆ ಗಾಳಿ ಕೂಡ ಸುಳಿಯದಲ್ಲಿ ಬದುಕಬೇಕೆಂದು, ಬದುಕಿ ಸೇಡು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದ. ನಾಲ್ಕು ರಾತ್ರಿ ಮೂರುಗಹಲು ಓಡಿ ಬಂದು ಕಾಡಿನಲ್ಲಿ ವಿಶ್ರಾಂತಿ ತಗೊಳ್ಳುತ್ತಿದ್ದಾಗ ಅರ್ಥಕೌಶಲನ ಸೇವಕ ಹೊಳೆಯ ಸಿಕ್ಕ. ಪರಿಚಯವಾಯಿತು. ಕನಕಪುರಿಯ ವಿಷಯ, ಅರ್ಥಕೌಶಲ ಮತ್ತು ರಾಜನ ವಿಚಾರ ಗೊತ್ತಾಯಿತು. ಹೊಳೆಯನನ್ನು ಕೊಂದು ಅವನದೇ ಕುದುರೆಯೇರಿ ಇಲ್ಲಿಗೆ ಬಂದಿದ್ದ. ಶಿವಪಾದನಿಗೆ ಎಲ್ಲಾ ದೇಶಗಳಲ್ಲಿ ಶಿಷ್ಯರಿದ್ದುದರಿಂದ ಅವರಿಗೆ ಗೊತ್ತಾಗಬಾರದೆಂದೂ, ಅದಕ್ಕಾಗಿ ತನ್ನ ಹೆಸರು ಬದಲಿಸಬೇಕೆಂದೂ ಯೋಚಿಸಿದ್ದ. ಆದರೆ ತನ್ನ ಹೆಸರು "ಶಿಖರಸೂರ್ಯ" ಎಂದು ಮಾತ್ರ ಯೋಚಿಸಿದ್ದವನು 'ಹೆಗಡೆ' ಎಂದು ಸೇರಿಸಿದ್ದು ಅರ್ಥಕೌಶಲನ ಮನೆಗೆ ಬಂದ ಮೇಲೆಯೇ.

ಓಡಿಬರುವಾಗ ಹಗಲು ರಾತ್ರಿ ಅನ್ನಲಿಲ್ಲ. ನಿದ್ದೆ ನೀರಡಿಕೆ ಅನ್ನಲಿಲ್ಲ. ಕಲ್ಲು ಮುಳ್ಳು ಕಂಟಿ ಅನ್ನಲಿಲ್ಲ. ಅಷ್ಟೆಲ್ಲ ಕಷ್ಟಪಟ್ಟು ಬಂದವನಿಗೆ ಇಲ್ಲೇನು ಕಾದಿದೆಯೋ ಎಂದು ಚಿಂತೆಯಿಂದಲೇ ಅಡ್ಡಾದ. ಇನ್ನು ಮೇಲೆ ನಾವೂ ಅವನನ್ನ ಶಿಖರಸೂರ್ಯ ಎಂದೇ ಕರೆಯೋಣ.

## ಹನ್ನೊಂದು

ಊಟಕ್ಕೆ  ಕರೆ ಬಂದಾಗ ಹೊತ್ತು ಇಳಿಮುಖವಾಗಿತ್ತು. ಬಂದು ನೋಡಿದರೆ ಮನೆಯವರೆಲ್ಲ ಅತಿಥಿಗೆ ವಿಶೇಷ ಗೌರವ ತೋರಿಸುತ್ತಿದ್ದಾರೆ! ಎಲ್ಲರ ಮುಖದಲ್ಲಿ ಮುಗುಳುನಗೆಯಿದೆ. ಊಟದಲ್ಲಿ ಎರಡು ಪದಾರ್ಥಗಳು ಮೂರು ಚಟ್ನಿಯಲ್ಲದೆ ಬಿಳಿ ಅನ್ನ, ಸೊಪ್ಪಿನ ಸಾರು ಜೊತೆಗೊಂದು ಸಿಹಿ ಇದ್ದುದರಿಂದ ಸೇವಕರಿಗೆ ಶಿಖರಸೂರ್ಯನ ಬಗ್ಗೆ ವಿಶೇಷ ಗೌರವ ಭಾವನೆ ಮೂಡಿತು. ಯಾಕೆಂದರೆ ಅರ್ಥಕೌಶಲನ ಜಿಪುಣತನ ಇಡೀ ಕನಕಪುರಿಗೇ ಪರಿಚಿತವಾದದ್ದು. ನಾಲ್ಕು ರೊಟ್ಟಿ ತಿಂದ ನಾಯಿ ಮೂರೇ ಸಲ ಬೊಗಳಿದರೆ ಅನ್ಯಾಯವಾಯಿತೆಂದುಕೊಳ್ಳುವ ಅರ್ಥಕೌಶಲ ಇಷ್ಟು ಉದಾರನಾಗಿ, ಇಂಥಾ ರಾಜಭೋಜನ ಹಾಕಬೇಕಾದರೆ ಬಂದ ಅತಿಥಿ ರಾಜವಂಶದವನೇ ಇರಬೇಕೆಂದು ತರ್ಕ ಮಾಡಿದರು ಸೇವಕರೆಲ್ಲ! ಎಷ್ಟೋ ವರ್ಷಗಳಾದ ಮೇಲೆ ಇಂಥಾ ರುಚಿಕರ ಭೋಜನ ಸಿಕ್ಕುದರಿಂದ ಆನಂದಿತನಾದ ಶಿಖರಸೂರ್ಯ ಮೈಚಳಿ ಬಿಟ್ಟು ತಿನ್ನಬೇಕೆಂದು ಕೈ ಹಾಕಿದರೆ ಮನೆಯಲ್ಲಿದ್ದವರೆಲ್ಲ ಇವನು ತಿನ್ನುವುದನ್ನೇ ನೋಡುತ್ತಿರುವುದರ ಅರಿವಾಗಿ ಹುಷಾರಾದ.  ಅಡಿಗ ಪರವಾಯಿಲ್ಲವೆಂಬಂತೆ ಮುಖ ಮಾಡಿ, ಮಾಡಿದವರಿಗಾದರೂ ಗೌರವ ಕೊಡಲು ತಿನ್ನಬೇಕಲ್ಲಾ ಎಂಬಂತೆ ಉಂಡ. ಅರ್ಥಕೌಶಲ ಮಾತ್ರ ಅಗುಳಗಳು ಅಗಿದು ಹನಿ ಹನಿ ನಂಜಿಕೊಂಡು ಸುಖಿಸುತ್ತ ಅಂಗೈ ಸಮೇತ ಐದೂ ಬೆರಳು ನೆಕ್ಕಿ ಖಾಲಿ ಎಲೆ ಮಾತ್ರ ಉಳಿಸಿ ಅದರಲ್ಲಿ ಕೈ ಊರಿ,

“ಇವತ್ತು ಸಂಜೆಗೆ ರಾಜರ ಸನ್ನಿಧಿಗೆ ಹೋಗುವಾ” ಅಂದ.

“ಆಗದಾಗದು, ಸಂಜೆ ಸಮಯ ನಾನು ರೋಗಿಗಳನ್ನು ನೋಡುವುದಿಲ್ಲ. ಬೆಳಿಗ್ಗೆ ಆದೀತು. ನಾನು ನೋಡುವತನಕ ಮಹಾರಾಜರು ಬರಿ ಹೊಟ್ಟೆಯಲ್ಲಿರುವುದು ಅಗತ್ಯ.”

-ಅಂದ. ಅರ್ಥಕೌಶಲನಿಗೆ ಅರ್ಥವಾಯಿತು. ಬೆಳಿಗ್ಗೆ ವೈದ್ಯರು ಬರುತ್ತಾರೆಂದು ಅರಮನೆಗೆ ಸುದ್ದಿ ಕಳಿಸಿ, ಅತಿಥಿಯನ್ನೇ ನೋಡುತ್ತ ನಿಂತಿದ್ದ ಅರ್ಧಾಂಗಿಗೆ ಕಣ್ಣುಕಿಸಿದು ಒಳಕ್ಕೆ ಕಳಿಸಿ ಕೈ ತೊಳೆಯಲೆದ್ದ.

ಬೆಳಿಗ್ಗೆ ಕೋಳಿ ಕೂಗಿ ಅಂಗಳ ಗುಡಿಸುವ ಹೊತ್ತಿಗೆ ಇಬ್ಬರೂ ಅರಮನೆಗೆ ಹೊರಡುವ ಮುನ್ನ ಅರ್ಥಕೌಶಲ,

“ಕವಿರಾಜ ಶಿವಾಪುರದವರೆನೊ?”

-ಎಂದು ಕೇಳಿದ. ಶಿಖರಸೂರ್ಯ ತಕ್ಷಣ ಎಚ್ಚತ್ತು “ಅಲ್ಲ” ಅಂದ.

“ಹಾಗಿದ್ದರೆ ಮಹಾರಾಜರು ನಿನ್ನದು ಯಾವೂರಾಯ್ತು? ಅಂತ ಕೇಳೇ ಕೇಳ್ತಾರೆ. ಆವಾಗ ನೀನು ಶಿವಾಪುರದವನೆಂದು ಹೇಳಬೇಕು. ಅಂದರೇನೆ ನಿನ್ನ ವೈದ್ಯವನ್ನು ಅವರು ಒಪ್ಪಿಕೊಳ್ಳೋದು. ಇಲ್ಲದಿದ್ದರೆ ನಾವು ಅಲ್ಲಿಗೆ ಹೋಗಿಯೂ ಪ್ರಯೋಜನವಿಲ್ಲ.”

ಎಂದು ಸ್ಪಷ್ಟವಾಗಿ ಹೇಳಿಬಿಟ್ಟ. ಸನ್ನಿವೇಶ ಅರ್ಥವಾಗದೆ ಶಿಖರಸೂರ್ಯ ತಬ್ಬಿಬ್ಬಾದ. ‘ಶಿವಾಪುರದಲ್ಲಿ ತಾನು ಮಾಡಿದ ಆಕಾರ್ಯದ ಬಗ್ಗೆ ಇವನಿಗೆ ತಿಳಿದಿದೆಯೊ? ಶಿವಪಾದನ ಬಳಕೆ ಇಲ್ಲಿಯೂ ಇದೆಯೊ?’ …ಎಂಬಿತ್ಯಾದಿ ಒಂದೇ ಕ್ಷಣದಲ್ಲಿ ಹಲ ಬಗೆ ಯೋಚಿಸಿ,

“ತಾವು ಹ್ಯಾಗೆ ಹೇಳಿದರೆ ಹಾಗೆ” ಅಂದುಬಿಟ್ಟ.

“ಶಿವಾಪುರದವನು ಅಂತ ಹೇಳು. ಮುಂದಿನದನ್ನು ನೋಡಿಕೊಳ್ಳುವಾ.”

ಎಂದು ಸಹಜವಾಗಿ ಎಂಬಂತೆ ಹೇಳಿಕೊಟ್ಟು ನೀನು ವೈದ್ಯನಾದುದು ನನ್ನ ದಯದಿಂದ ಎಂಬುದು ನೆನಪಿರಲಿ ಎಂಬಂತೆ ನೋಡಿ ಮುಂದೆ ನಡೆದ. ಹಿಂದಿನಿಂದ ಕವಿರಾಜನೂ ಹೆಜ್ಜೆ ಹಾಕಿದ.

ದಾರಿಯುದ್ದಕ್ಕೂ ಭೇಟಿಯಾದ ಜನ ಅರ್ಥಕೌಶಲನಿಗೆ ಕೈಮುಗಿದು ಗೌರವ ತೋರಿಸುತ್ತಿದ್ದರು. ಅಂಗಳ ಗುಡಿಸುವವರು, ರಂಗೋಲಿ ಗೆರೆ ಎಳೆಯುವವರು ಇವರಿಬ್ಬರೂ ದಾಟುವತನಕ ಬದಿಗೆ ನಿಂತು ಮರ್ಯಾದೆ ತೋರಿಸಿದರು. ದೂರದ ಅನೇಕರು ಈತ ಮಾತಾಡಿಸದಿದ್ದರೂ ಅವರಾಗಿ ಓಡಿಬಂದು ನಮಸ್ಕರಿಸಿ ಹೋದರು. ಇದೆಲ್ಲ ಶಿಖರಸೂರ್ಯ ನಿರೀಕ್ಷಿದಂತೆಯೇ ಇತ್ತು. ಆದರೆ ಅರಮನೆ ಮಾತ್ರ ಇವನ ಕಲ್ಪನೆಯನ್ನು ಮೀರಿ ಭಿಕೋ ಎನ್ನುತ್ತಿತ್ತು. ವೈರಿ ರಾಜರು ಈಗಷ್ಟೆ ಲೂಟಿ ಮಾಡಿಕೊಂಡು ಹೋದ ಅರಮನೆಯ ಹಾಗೆ ಹಾಳು ಸುರಿಯುತ್ತಿತ್ತು. ಸುಮಾರು ಎರಡು ಎಕರೆಯಷ್ಟಿದ್ದ ರಾಜಾಂಗಳವನ್ನು ಇಬ್ಬರೇ ಆಳುಗಳು ಗುಡಿಸುತ್ತಿದ್ದರೆಂದರೆ ಅರಮನೆಯ ಸ್ಥಿತಿಯನ್ನು ವಾಚಕರೇ ಊಹಿಸಿಕೊಳ್ಳಬೇಕು.

ದೂರದಲ್ಲಿ ಇವರಿಗಾಗಿ ಕಾಯುತ್ತಿದ್ದ ಸೇವಕನೊಬ್ಬ ಓಡಿಬಂದು ಮಹಾರಾಜರ ಸಮಯ ಹೇಳಿ ಇವರನ್ನು ಕರೆದುಕೊಂಡು ಮುಂದೆ ಮುಂದೆ ಹೊರಟ. ಇವರು ನೇರ ರಾಜನಿದ್ದಲ್ಲಿಗೇ ಹೋದರು. ಮಹಾರಾಜ ‘ನಿದ್ದೆಮಾಡಿ ದಣಿದವರಂತೆ’ ಹಾಸಿಗೆಯ ಮೇಲೆ ದಿಂಬಿಗೆ ಒರಗಿದ್ದ. ಅರ್ಥಕೌಶಲ ಪರಿಚಯ ಮಾಡಿಕೊಡುತ್ತಿರುವಾಗಲೇ ಶಿಖರಸೂರ್ಯ ರಾಜನ ಕೈನಾಡಿಯ ಮೇಲೆ ಬೆರಳಿಟ್ಟಿದ್ದ. ಶಿಖರಸೂರ್ಯ ಅರ್ಧ ಗಳಿಗೆ ರಾಜನ ರೋಗದ ಲಕ್ಷಣಗಳನ್ನು ಸ್ಪಷ್ಟವಾದ ಮಾತುಗಳಲ್ಲಿ ಅವರು ಹೇಳುವ ಮೊದಲೇ ವರ್ಣಿಸಿದ.

ಅವನು ತನ್ನ ರೋಗವನ್ನು ಗ್ರಹಿಸಿದ ರೀತಿ ಮತ್ತು ವಿವರಿಸಿದ ಪರಿಗೆ ರಾಜ ಮೆಚ್ಚುಗೆಯ ಮುಗುಳುನಗೆ ಬೀರಿ ಅರ್ಥಕೌಶಲನ ಕಡೆಗೆ ನೋಡಿದ. ಅವನು ಧನ್ಯನಾದಂತೆ ಹಿಂಡಿದ ತುಟಿಗಳನ್ನು ಹಿಗ್ಗಿಸಿ ಮುಖದ ತುಂಬ ನಗು ಉಕ್ಕಿಸಿದ. ಆಶ್ಚರ್ಯವೆಂದರೆ ಅರ್ಥಕೌಶಲ ಮೊದಲೇ ಹೇಳಿದ್ದಂತೆ ಕವಿರಾಜನನ್ನು “ನಿನ್ನದು ಯಾವೂರಾಯ್ತು?” ಎಂದು ಮಹಾರಾಜ ಕೇಳಿಯೇಬಿಟ್ಟ! ಆದರೆ ಪ್ರಶ್ನೆಯನ್ನ ಮೆಚ್ಚುಗೆಯಿಂದ, ತಾನು ಕಾಯುತ್ತಿದ್ದ ಶಿವಾಪುರದ ವೈದ್ಯ ಇವನೇ ಎಂಬ ವಿಶ್ವಾಸದಿಂದ ಕೇಳಿದ್ದ. ಶಿಖರಸೂರ್ಯನಿಂದ ನಿರೀಕ್ಷಿತ ಉತ್ತರ ಬಂದಾಗ ರಾಜ, ಪ್ರಧಾನಿ ಇಬ್ಬರೂ ಸಮಾಧಾನಕರ ನಿಟ್ಟುಸಿರು ಬಿಟ್ಟರು. ಈಗ ವಿಶ್ವಾಸ ತುಂಬಿ ರಾಜಶೀರ್ಣ ದನಿಯಲ್ಲಿ ಹೇಳಿದ:

“ನೋಡಯ್ಯಾ ನೀನು ನನ್ನ ನಾಡಿ ನೋಡುತ್ತಿರುವ ನೂರನೆಯ ವೈದ್ಯ. ಬದುಕಿನಲ್ಲಿ ನಂಬಿಕೆ ಕಳೆದುಕೊಂಡಿದ್ದವನು ಅರ್ಥಕೌಶಲನ ಒತ್ತಾಯಕ್ಕೆ ಬಾಗಿ ನಿನ್ನ ಕೈಯಲ್ಲಿ ಜೀವ ಇಟ್ಟಿದ್ದೇನೆ. ನನಗೆ ಭರವಸೆ ಬೇಡ. ಶೀಘ್ರ ಪರಿಣಾಮ ಬೇಕು. ಒಂದೇ ದಿನದಲ್ಲಿ ಪರಿಣಾಮ ತೋರಿಸಬಲ್ಲೆಯಾ?”

“ಆಯ್ತು ಪ್ರಭು. ನಾಳೆ ಬೆಳಿಗ್ಗೆ ನಾವಿಬ್ಬರೂ ಉದ್ಯಾನದಲ್ಲಿ ವಾಯುವಿಹಾರಕ್ಕೆ ಹೋಗುವಾ. ಆಗಬಹುದಲ್ಲ?”

ಮುದಿರಾಜನಿಗೆ ಯೌವನ ಪ್ರಾಪ್ತಿಯಾದಷ್ಟು ಆನಂದವಾಗಿ, ಆದರೂ ನಂಬದೆ “ಆಯ್ತು” ಅಂದ. ತಕ್ಷಣ ಶಿಖರಸೂರ್ಯನೆದ್ದು ನಿಂತು,

“ನಾನು ಕಾಡಿಗೆ ಹೋಗಿ ಬರಬೇಕು. ನನ್ನೊಂದಿಗೆ ಯಾರನ್ನಾದರೂ ಕಳಿಸುತ್ತೀರಾ” ಅಂದ.

“ನಾನಿಲ್ಲವೆ? ಬಾ”

-ಎಂದು ಅರ್ಥಕೌಶಲ ಎದ್ದು ನಿಂತ, ಕೂಡಲೇ ಇಬ್ಬರಿಗೂ ಕುದುರೆಗಳ ವ್ಯವಸ್ಥೆಯಾಯಿತು. ಇಬ್ಬರೂ ಮಾಯವಾಗಿ ಒಂದು ತಾಸಿನಲ್ಲಿ ಮತ್ತೆ ಹಾಜರಾದರು. ಕಾಡಿನಿಂದ ತಂದ ಮೂಲಿಕೆಗಳಿಂದ ಮದ್ದರೆದು ಮಹಾರಾಜನಿಗೆ ಕೊಟ್ಟು ಸಂಜೆ ಪುನಃ ಬರುವುದಾಗಿ ಹೇಳಿ ಹೊರಟರು. ತನ್ನ ಅಂತಃಪುರದ ಬಾಗಿಲಲ್ಲಿ ನಿಂತು ಮಹಾರಾಣಿ ಶಿಖರಸೂರ್ಯನನ್ನು ಆಪಾದಮಸ್ತಕ ಗಮನಿಸುತ್ತಿದ್ದಳು.

ಮನುಷ್ಯಜೀವನದಲ್ಲಿ ಒಮ್ಮೊಮ್ಮೆ ವಿಚಿತ್ರ ಗಳಿಗೆಗಳು ಬರುತ್ತವೆ. ಅಂಥ ಗಳಿಗೆಗಳಲ್ಲಿ ಇದ್ದಕ್ಕಿದ್ದಂತೆ ಮನುಷ್ಯನಿಗೆ ಕೆಲವು ಬಾಗಿಲುಗಳು ಎದುರಾಗುತ್ತವೆ. ಯಾವುದೋ ಒಂದು ಬಾಗಿಲು ತೆರೆದರೆ ಸಾಮಾನ್ಯವಾಗಿ ಕಾಣಲಾರದ ಸೌಭಾಗ್ಯಗಳು, ನಿಧಿಗಳು, ನಾಳೆಗಳು, ಸುದೈವಗಳು, ಅವಕಾಶಗಳು ಕಾಣಿಸತೊಡಗುತ್ತವೆ. ಆದರೆ ಸರಿಯಾದ ಬಾಗಿಲನ್ನ ತೆರೆಯಬೇಕಷ್ಟೆ. ಇನ್ನು ಕೆಲವರಿಗೆ ಕೈ ಹಚ್ಚಿದ್ದೇ ಸರಿಯಾದ ಬಾಗಿಲಾಗಿರುತ್ತದೆ. ಎರಡರಲ್ಲಿ ಯಾವುದಾದರೂ ಸರಿಯೆ ಶಿಖರಸೂರ್ಯನಿಗೀಗ ಅಂಥ ಗಳಿಗೆ ಸಿಕ್ಕಿತು.

ಮೂರನೇ ದಿನ ಬೆಳಗಿನ ಸಮಯ ರಾಜ ಶಿಖರಸೂರ್ಯನೊಂದಿಗೆ ಉದ್ಯಾನದಲ್ಲಿ ನೂರು ಹೆಜ್ಜೆ ನಡೆದಾಡಿದ. ಅಂದಿನಿಂದಲೇ ಆತ ರಾಜವೈದ್ಯನಾದ!

## ಹನ್ನೆರಡು

ಇತಿಹಾಸದಲ್ಲಿ ಪ್ರಥಮ ಹೆಜ್ಜೆ ಇಟ್ಟ ಶಿಖರಸೂರ್ಯನಿಗೆ ಸುಸ್ವಾಗತ!

ಇಂತು ಶಿಖರಸೂರ್ಯ ಕನಕಪುರಿಗೆ ಬಂದು ರಾಜನನ್ನೇ ಪ್ರಥಮ ರೋಗಿಯನ್ನಾಗಿ ಪಡೆದು ತನ್ನ ವೈದ್ಯಗಾರಿಕೆಯನ್ನು ಸುರು ಮಾಡಿದ. ಒಂದು ವರ್ಷದಿಂದ ನರಳುತ್ತ ಬಿದ್ದಿದ್ದ ರಾಜ ಒಂದೇ ವಾರದಲ್ಲಿ, ಆಶ್ಚರ್ಯಕರ ರೀತಿಯಲ್ಲಿ ಗುಣ ಹೊಂದಿದ್ದು ಮಾತ್ರವಲ್ಲದೆ

ಒಬ್ಬನೇ ಯಾರ ನೆರವಿಲ್ಲದೆ ಅರಮನೆ ಮತ್ತು ಉದ್ಯಾನದಲ್ಲಿ ಅಲೆದಾಡತೊಡಗಿದ್ದು ಶಿಖರಸೂರ್ಯನ ಪ್ರಥಮ ಗೆಲುವಾಯಿತು. ಆಳು ಕಾಳು ದೊಡ್ಡ ಮನೆಯನ್ನು ವಾಸಕ್ಕೆ ಪಡೆದ.

ನದೀ ತೀರದ ಎತ್ತರವಾದ ಕಲ್ಲಿನ ಮನೆ ತುಂಬ ಸುಂದರವಾಗಿತ್ತು. ಚಿತ್ತಾರ ಕೆತ್ತಿದ ತೊಲೆಬಾಗಿಲು ತೆಗೆಯುವುದಕ್ಕೆ ಎರಡೂ ಕೈ ಬಲ ಉಪಯೋಗಿಸಬೇಕಿತ್ತು. ಆರಡಿ ಅಗಲದ ಗೋಡೆಗಳಲ್ಲಿ ಗಾಳಿ ಬೆಳಕುಗಳಿಗಾಗಿ ಕೋಣೆಗೆ ಎರಡೆರಡು ಕಿಡಿಕಿಗಳಿದ್ದವು. ಕೆಳಗಿನ ಮನೆಯಲ್ಲಿ ಅಡಿಗೆ ಮನೆ, ದೇವರ ಕೋಣೆ, ರೋಗಿಗಳು ಕಾಯುವುದಕ್ಕೆ - ಆಳುಗಳಿಗೆ - ಹೀಗೆ ಬೇಕಾದಷ್ಟು ಭಾಗಗಳಿದ್ದವು. ಅಟ್ಟದ ಮೇಲೆ ಮಾತ್ರ ವಿಶಾಲವಾದ ಒಂದು ಪಡುಕೋಣೆಯಿದ್ದು ಅದರಲ್ಲಿ ದೊಡ್ಡ ಕನ್ನಡಿ ಮತ್ತು ಶೃಂಗಾರ ಸಾಧನಗಳಿದ್ದವು. ಇಡೀಮನೆ ಶ್ರೀಮಂತಿಕೆ ಮತ್ತು ಹಳೆ ಮನೆಯ ಗಾಂಭೀರ್ಯಗಳು ಮನದಟ್ಟಾಗುವಂಥ, ದೊಡ್ಡವರು ವಾಸಿಸುವಂಥ ಮನೆ ಎಂದು ಗೊತ್ತಾಗುವಂತಿತ್ತು.

ಮನೆ ಸುತ್ತಲೂ ತರುಮರಗಳಿದ್ದು, ಸದಾ ಹಸಿರಾಗಿ ಒಂದಿಲ್ಲೊಂದು ಜಾತಿಯ ಮರಗಳಲ್ಲಿ ಒಂದಿಲ್ಲೊಂದು ಪರಿಮಳದ ಹೂಗಳಿರುವಂತೆ ನೋಡಿಕೊಳ್ಳಲಾಗಿತ್ತು. ಅಟ್ಟದ ಕಿಡಿಕಿಗಳಿಂದ ಹೊರಗೆ ನೋಡಿದಾಗಲೂ ಅಷ್ಟೆ; ಒಂದೊಂದು ಕಡೆಯಲ್ಲಿ ಒಂದೊಂದು ಬಗೆಯ ನಿಸರ್ಗದ ದೃಶ್ಯಾವಳಿ ಕಣ್ಣಿಗೆ ಬೀಳುವಂತೆ ವ್ಯವಸ್ಥೆ ಮಾಡಲಾಗಿತ್ತು. ಒಂದೇ ಕೊರತೆಯೆಂದರೆ ಮನೆಯ ಹಿತ್ತಲಲ್ಲಿ ವೈದ್ಯನಿಗೆ ತುರ್ತಾಗಿ ಬೇಕಾಗುವ ನಾರುಬೇರು ಮೂಲಿಕೆಗಳನ್ನು ಬೆಳೆಸಿರಲಿಲ್ಲ. ಅವನು ಬೆಳೆಸುವ ವ್ಯವಸ್ಥೆಯನ್ನು ಶಿಖರಸೂರ್ಯ ಕೂಡಲೇ ಮಾಡಿದ. ಗೃಹಪ್ರವೇಶ ಮಾಡಿ ಅಟ್ಟದ ಮೇಲಿಂದ ಬಡಗು ದಿಕ್ಕಿನಲ್ಲಿಯ ಗಂಧರ್ವರ ಮನೋಹರ ತೋಟದಂಥ ಉದ್ಯಾನ ನೋಡುತ್ತಿದ್ದಾಗ ಅರ್ಥಕೌಶಲನ ಆಳು ಬಂದು ಪ್ರಧಾನಿಯ ಮನೆಗೆ ಸಂಜೆಯ ಊಟಕ್ಕೆ ಬರಲು ಆಮಂತ್ರಣವಿದ್ದುದನ್ನು ಹೇಳಿ ಹೋದ.

ಶಿಖರಸೂರ್ಯ ವೈದ್ಯನಾದಾಗ ಅವನ ವೃತ್ತಿ ಪ್ರತಿಭೆಯನ್ನು ಕನಕಪುರಿಯ ವರ್ತಕ ಸಮಾಜವಾಗಲಿ, ಅರಮನೆಯ ಪರಿವಾರ, ಪ್ರಜೆಗಳಾಗಲಿ ಯಾರೂ ಪ್ರಶ್ನಿಸಲಿಲ್ಲ. ವರ್ಷಗಳಿಂದ ಮಲಗಿದ್ದ ಮಹಾರಾಜ ಒಂದೇ ದಿನದಲ್ಲಿ ಎದು ಅಡ್ಡಾಡುವಂತೆ ಮಾಡಿದ್ದು ವೃತ್ತಿ ಪವಾಡವೆಂದೇ ಎಲ್ಲರ ಒಮ್ಮತದ ಅಭಿಪ್ರಾಯವಾಗಿತ್ತು. ಅವನು ಹಿಮಾಲಯದಲ್ಲಿ ತಪಸ್ಸು ಮಾಡಿ ವಿದ್ಯೆ ಕಲಿತವನೆಂದು, ಅಶ್ವಿನಿ ಕುಮಾರರನ್ನು ಒಲಿಸಿಕೊಂಡವನೆಂದು ಸಾಮಾನ್ಯರಲ್ಲಿ ಕತೆಗಳು ಹುಟ್ಟಿಕೊಂಡವು.

ಮಹಾರಾಜ ಗುಣಾಧಿಕ್ಯನಂತೂ ಶಿಖರಸೂರ್ಯನನ್ನು ಒಂದು ದಿನ ನೋಡದಿದ್ದರೂ ಚಡಪಡಿಸುತ್ತಿದ್ದ. ಒಬ್ಬರ ಮೇಲೊಬ್ಬರು ಸೇವಕರನ್ನು "ವೈದ್ಯನನ್ನು ಕರೆದು ತಾ" ಎಂದು ಕಳಿಸುತ್ತಿದ್ದ. ಹೋದ ಸೇವಕ ಬರುವತನಕ ಕಾಯದೆ ಮತ್ತೊಬ್ಬನನ್ನು ಅಟ್ಟುತ್ತಿದ್ದ. ಆದರೆ ಅವನ ಅಗಲವಾದ ಹಣೆ, ಆಳದಲ್ಲಿ ಹೊಳೆಯುವ ನೀಲಿ ಕಣ್ಣು, ಕುಡುಗೋಲಿನಂತೆ ಬಾಗಿದ ಮೂಗು, ತುಸು ಮುಂಚಾಚಿ ಮುಖವನ್ನು ಇನ್ನಷ್ಟು ಅಗಲವಾಗಿಸಿದ ಕೆನ್ನೆಗಳು, ಅವುಗಳಂಚಿಗಿರುವ ದೊಡ್ಡ ಕಿವಿಗಳಲ್ಲಿ ಬೆಳೆದ ಪೊದೆಗೂದಲು - ಇಂಥ ಲಕ್ಷಣಗಳಿಂದಾಗಿ ಅವನನ್ನು ಕಂಡು ಭಯವೂ ಆಗುತ್ತಿತ್ತು. ಈತ ತನ್ನ ವೈದ್ಯದಿಂದ ನನಗೆ ವಿಪತ್ತನ್ನೂ ತರಬಹುದೆಂದು ಅನುಮಾನ ಪಡುತ್ತಿದ್ದ. ಅನುಮಾನ ಪಡುವುದು ತನ್ನ ವಂಶಬುದ್ಧಿಯ ದೌರ್ಬಲ್ಯವೆಂದು ಕೂಡಲೇ ಧೈರ್ಯ ತಂದುಕೊಳ್ಳುತ್ತಲೂ ಇದ್ದ. ಇಷ್ಟಂತೂ ನಿಜ- ಶಿಖರಸೂರ್ಯ ಅರಮನೆ ಪ್ರವೇಶ ಮಾಡಿದಾಗಿನಿಂದ ಹೋಗುವತನಕ ಅವನನ್ನು ಸೂಕ್ಷ್ಮವಾಗಿ ವೀಕ್ಷಿಸಲೆಂದೇ ಒಂದು ಕಣ್ಣು ಮೀಸಲಾಗಿಡುತ್ತಿದ್ದ.

ಮಹಾರಾಣಿಗೆ ಶಿಖರಸೂರ್ಯನ ಬಗ್ಗೆ ಆತಂಕವಿದ್ದರೂ ತೋರಿಸಿಕೊಂಡಿರಲಿಲ್ಲ. ಮಾತಿನವನಲ್ಲ. ಆದರೂ ಮಹತ್ವಾಕಾಂಕ್ಷಿಯೆಂದು ಖಚಿತವಾಗಿತ್ತು. ಆದರೆ ಇವನ ಬಲಾಬಲಗಳ ಬಗ್ಗೆ ಸಾಧ್ಯಾಸಾಧ್ಯತೆಗಳ ಬಗ್ಗೆ, ಮನಸ್ಸಿನ ಒಳಗುಟ್ಟುಗಳ ಬಗ್ಗೆ ಅಂದಾಜಾಗಿರಲಿಲ್ಲ. ಇವನ ವರ್ಮಸ್ಥಳವನ್ನರಿಯಲು ಯಾವುದಾದರೂ ಕಳ್ಳ ದಾರಿ ಇವೆಯೇ ಎಂದು ಹುಡುಕಲು ಅರ್ಥಕೌಶಲನಿಗೇ ಹೇಳಿ ಬಿಟ್ಟಿದ್ದಳು.

ಅರ್ಥಕೌಶಲ ಮಾತ್ರ ಶಿಖರಸೂರ್ಯನ ಬಗ್ಗೆ ಬಾರೀ ಖುಶಿಯಿಂದಿದ್ದ. ಅವನೇ ಪ್ರಧಾನಿಯಾದ್ದರಿಂದ ಅವನ ಸಂತೋಷಕ್ಕೆ ಒಂದು ಮಹತ್ವವೂ ಇತ್ತು. ಶಿಖರಸೂರ್ಯನ ಪ್ರತಿಭೆಯನ್ನ ತಾನೇ ಶೋಧಿಸಿ ಗುರುತಿಸದವನೆಂಬ, ತಾನೇ ಅವನನ್ನು ಮಹಾರಾಜನಲ್ಲಿಗೆ ಕರೆದೊಯ್ದವನೆಂಬ ಸಂಗತಿಗಳನ್ನು ಅರಮನೆಯ ಒಳಗೂ ಹೊರಗೂ ಸಾರಿ ಸಾರಿ ಹೇಳುತ್ತಿದ್ದ. ತನ್ನನ್ನು ಹುಡುಕಿಕೊಂಡು ಶಿಖರಸೂರ್ಯ ಹ್ಯಾಗೆ ಬಂದನೆಂದು, ಹ್ಯಾಗೆ ಇವನು ಸ್ವಾಗತಿಸಿದನೆಂದು, ಹ್ಯಾಗೆ ಇವನನ್ನು ಪರೀಕ್ಷಿಸಿದನೆಂದು - ಇಂಥದೇ ಸಣ್ಣ ಪುಟ್ಟ ವಿವರಗಳನ್ನು ಕತೆ ಮಾಡಿ ಹೇಳುತ್ತಿದ್ದ ಮತ್ತು ಬೇರೆಯವರು ಅವನ ಬಗ್ಗೆ ಕತೆ ಹೇಳುವಾಗ ತಾನೂ ಅದರಲ್ಲಿ ಒಂದು ಪಾತ್ರವಾಗಿ ಸೇರುವಂತೆ ವ್ಯವಸ್ಥೆ ಮಾಡಿಕೊಂಡಿದ್ದ. ಆದರೆ ಅರ್ಥಕೌಶಲನಿಗೂ ದಿಗಿಲಿತ್ತು. ಕಂಡವರ ಮೇಲೆ ಕಣ್ಣಿಂದಲೇ ಹುಕುಂ ಚಲಾಯಿಸುವ ಧಿಮಾಕಿನ, ರಾಜ ಕಳೆದುಕೊಂಡ ಸಾಮ್ರಾಟನ ನಿಲುವಿನ ಶಿಖರಸೂರ್ಯನನ್ನು ಕಂಡಾಗೆಲ್ಲ ಒಳಗೊಳಗೇ ಭೀತನಾಗುತ್ತಿದ್ದ. ಇವನ ಒಳಗುಟ್ಟನ್ನು ತಿಳಿಯಲು ತನ್ನಿಬ್ಬರು ಬೇಹುಗಾರರನ್ನು ಇವನಲ್ಲಿ ವೈದ್ಯವಿದ್ಯೆ ಕಲಿವ ಶಿಷ್ಯರಾಗಿ ನೇಮಿಸಿ ಕಾಯತೊಡಗಿದ್ದ. ಶಿಖರಸೂರ್ಯನಲ್ಲಿ ಮಾತ್ರ-ರಾಜರು ದೇವರು ಸೈನಿಕರು-ಇವರಲ್ಲಿ ಯಾರಿಗಾದರೂ ಹೆದರುವುದೂ ಬಿಡುವುದೂ ನಿಮ್ಮಿಷ್ಟ; ನನಗಂತೂ ಹೆದರಲೇಬೇಕೆಂದು ತಾಕೀತು ಮಾಡುವಂಥ ಚಹರೆಯಿತ್ತು!

## ಹದಿಮೂರು

ಈಗ ಕನಕಪುರಿಯ ಐತಿಹಾಸಿಕ ಸಂದರ್ಭವನ್ನು ತಿಳಿಯದಿದ್ದರೆ ನಮ್ಮ ಕಥನವೇ ಗೋಜಲಾಗುವುದರಿಂದ ಮೊದಲು ಅದನ್ನೇ ನಾತಿ ಹ್ರಸ್ವನಾತಿ ದೀರ್ಘವಾಗಿ ನೋಡೋಣ:

ಕನಕಪುರಿ ಪ್ರಾಚೀನ ನಗರವೇನಲ್ಲ. ಸುಮಾರು ಇನ್ನೂರು ವರ್ಷಗಳೀಚಿನ ಕಾವ್ಯೇತಿಹಾಸಗಳಲ್ಲಿ ವೈಭವದಿಂದ ಮೆರೆದ ನಗರವಸ್ಥೆ. ಜಂಬೂದ್ವೀಪದ ಪರಶುರಾಮ ಕ್ಷೇತ್ರದಲ್ಲಾಗಲಿ ಪುರಾಣ ಕತೆಗಳಲ್ಲಾಗಲಿ ಅದರ ಸುದ್ದಿಯಿಲ್ಲ. ಪಶ್ಚಿಮ ಕರಾವಳಿ, ಅದರ ಮೂಡಣ ಘಟ್ಟ ದಾಟಿ ಬರುವಾಗ ಪರ್ವತ ಪ್ರದೇಶ ಮತ್ತು ಬಯಲಸೀಮೆಯ ಮಧ್ಯೆ ಸಿಕ್ಕೋದೇ ಕನಕಪುರಿ. ಪುರದ ಉತ್ತರದಲ್ಲಿ ಪಶ್ಚಿಮಕ್ಕೆ ಹರಿದು ಘಟ್ಟದಿಂದ ಕೆಳಗೆ ಧುಮುಕಿ ಸಮುದ್ರ ಸೇರುವ ಶೀಲವಂತಿ ನದಿ ಇದೆ. ಪಾತ್ರ ದೊಡ್ಡದು. ಅದರ ದಕ್ಷಿಣಕ್ಕೆ ಬೋಳುಗುಡ್ಡವಿದೆ. ಅದನ್ನು ಅಗಿದಗಿದು ತಗ್ಗುತೋಡಿದ ಗುರುತುಗಳಿವೆ. ಗುಡ್ಡದ ಪೂರ್ವಕ್ಕೆ ಕನಕಪುರಿಯಿದ್ದು ಅದರ ದಕ್ಷಿಣಕ್ಕೆ ಹೊಲಗದ್ದೆಗಳು, ನೀರಾವರಿ ತೋಟಗಳಿದ್ದು ಅವುಗಳಂಚಿಗೆ ಪರ್ವತ ಸಾಲಿದೆ. ನದಿಯ ದಕ್ಷಿಣ ಬದಿಯ ಪುರಿ ಸುರುವಾಗೋದೇ ಅರಮನೆಯಿಂದ. ಅಲ್ಲಿಂದ ಮುಖ್ಯರಸ್ತೆ ಪೂರ್ವಕ್ಕೆ ಹೋಗುತ್ತದೆ. ಅದರ ಆಜೂಬಾಜೂ ಅವುಗಳ ಅಕ್ಕಪಕ್ಕ ಊರು ಬೆಳೆದಿದೆ.

ಮಲೆನಾಡ ಸೆರಗಿನ ಪ್ರದೇಶವಾಗಿದ್ದರಿಂದ ಹೆಚ್ಚಿನ ಮಳೆಯಿಂದಾಗಿ ಬಣ್ಣಗಳಿಲ್ಲದ ಕಲ್ಲಿನ, ಪಾಚಿಗಟ್ಟಿ ಕರಿಬಣ್ಣಕ್ಕೆ ತಿರುಗಿದ ಮನೆಗಳಿಂದಾಗಿ ಊರು ನೋಡುವುದಕ್ಕೆ ಚಂದದ್ದಲ್ಲ. ಮುಖ್ಯರಸ್ತೆಗಳು ಪೂರ್ವಪಶ್ಚಿಮಗಳಿಗೆ ಮಾತ್ರ ಹೋಗುತ್ತವೆ, ಬರುತ್ತವೆ. ಪೂರ್ವದ ರಸ್ತೆಗಳು ಪಟ್ಟಣ ಸೇರುವಲ್ಲಿ ಅರ್ಧ ಯೋಜನದಷ್ಟು ದೂರ ಬಗೆ ಬಗೆಯ ಬೃಹತ್ ಗೋದಾಮುಗಳಿವೆ. ಅವನ್ನು ದಾಟಿ ಒಳಕ್ಕೆ ಪ್ರವೇಶಿಸಿದರೆ ಇಡೀ ಪಟ್ಟಣ ಒಂದು ಅಖಂಡ ಮಾರುಕಟ್ಟೆಯಂತಿದೆ. ಯಾವ ಬೀದಿ ನೋಡಿದರೂ ಅದಕ್ಕೆ ಉಪಬೀದಿಗಳು, ಉಪಬೀದಿಗಳಿಗೆ ಸಂದಿಗಳು, ಸಂದಿಗಳಲ್ಲಿ ಚಾಳಗಳು ಇದ್ದರೂ ಅವೆಲ್ಲವೂ ಅಂಗಡಿಗಳೇ ಆಗಿವೆ. ಜನರ ವಾಸದ ಮನೆಗಳೆಲ್ಲಿವೆಯೆಂದು ತಿಳಿಯುವುದೇ ಇಲ್ಲ. ಅಂಗಡಿಗಳು ಹೊರಗೆ ಒರಟು ಕಲ್ಲಿನ ಭದ್ರ ಕಟ್ಟಡಗಳೆಂದು ಕಂಡರೂ ಒಳಗೊಳಗೆ ಬಹಳ ವೈಭವ 'ಹಾವ ಭಾವ ವಿಲಾಸ ವಿಭ್ರಮ'ಗಳಿಂದ ಸದಾ ಭೋಗನಿರತವಾಗಿರುವಂತೆ ಕಾಣಿಸುತ್ತವೆ.

ಮಾರುಕಟ್ಟೆ ದಾಟಿ ಬಲಕ್ಕೆ ತಿರುಗಿದರೆ ನದಿಯಲ್ಲಿ ನಡೆವ ವ್ಯವಹಾರಗಳ ದೊಡ್ಡ ಬಲೆಯೇ ಕಾಣಸಿಗುತ್ತದೆ. ನದಿಯಲ್ಲಿ ನಾಲ್ಕಾರು ದೊಡ್ಡ ನಾವೆಗಳು ಸಾಮಾನು ಸರಂಜಾಮುಗಳನ್ನು ಇಳಿಸುತ್ತಲೋ ಇಲ್ಲ ಹೇರಿಕೊಳ್ಳುತ್ತಲೋ ನಿಂತಿರುವುದು ಕಾಣಿಸುತ್ತದೆ. ಅಲ್ಲಿಂದ ನೋಡಿದರೆ ನಗರದತ್ತ ಮುಖ ಮಾಡಿದ ಅರಮನೆಯ ಬೆನ್ನು ಕಾಣಿಸುತ್ತದೆ. ಎತ್ತರವಾದ ಪೌಳಿಯ ಒಳಗೆ ಕೆಂಪುಕಲ್ಲಿನಿಂದ ಕಟ್ಟಿದ ಒಡ್ಡೋಲಗದ ಸುತ್ತ ನಾಲ್ಕು ಸೌಧಗಳಿರುವ ವೈಭವದ ಅರಮನೆ ಅದು. ಒಡ್ಡೋಲಗದ ಮೇಲೆ ಮುಖ್ಯ ಮತ್ತು ಅತಿ ಎತ್ತರವಾದ

ಗೋಪುರವಿದ್ದು ಅದನ್ನು ಹ್ಯಾಗೆ ಕಟ್ಟಿರಬಹುದೆಂದು ನೋಡಿದ ಪ್ರತಿಯೊಬ್ಬರಿಗೂ ಆಶ್ಚರ್ಯವಾಗುತ್ತದೆ. ಆದಿತ್ಯರ ಆಳ್ವಿಕೆಯ ಅಂಚಿನಲ್ಲಿ ವರ್ತಕ ವಂಶವೊಂದು ಬಂದು ಸೇರಿಕೊಂಡಂತೆ ರಾಜವಂಶದ ಚರಿತ್ರೆಯಿದೆ. ಆ ಬಗೆಗಿನ ಕತೆಗಳನ್ನು ಸುಲಿದರೆ ಉಳಿಯುವ ಇತಿಹಾಸ ಇಂತಿದೆ:

ಗರುಡವಂಶದ ಪಾಳೇಗಾರನೊಬ್ಬ ಬಂಗಾರದ ಹಟ್ಟಿಗೆ ಒಡೆಯನಾಗಿದ್ದ. ಮಸಾಲೆ ಸಾಮಾನಿಗಾಗಿ ದೂರದ ವರ್ತಕರೂ ಬಂದು ಇಲ್ಲಿ ನೆಲೆಸಿದರು. ಒಡೆಯನೂ ವರ್ತಕರೂ ಪರಸ್ಪರ ಸಹಕಾರದಿಂದ ರಾಜ್ಯ ಕಟ್ಟಿ ಸಣ್ಣ ಸೀಮೆಯಿದ್ದದ್ದು ರಾಜ್ಯವಾಗಿ, ಒಡೆಯ ರಾಜನಾದ. ಮುಂದೆ ಬಂಗಾರದ ಹಟ್ಟಿ ಕನಕಪುರಿಯೆಂಬ ರಾಜಧಾನಿಯಾಗಿ ರಾಜ ಮಹಾರಾಜನಾದ. ಈ ವಂಶದ ಕೊನೆಯ ದೊರೆ ವಿಜಯಶೀಲ ವರ್ತಕಶ್ರೇಷ್ಠನ ಅನುಪಮ ಸುಂದರಿಯಾದ ಕನಕರೇಖೆ ಎಂಬ ಮಗಳನ್ನು ಮೋಹಿಸಿದ. ಮದುವೆಗೆ ವರ್ತಕ ಕುಲದವರು ಒಪ್ಪಲಿಲ್ಲ. ಮಹಾರಾಜನ ಒತ್ತಡದ ಮೇರೆಗೆ ಕೆಲವು ಕರಾರುಗಳನ್ನು ಹಾಕಿ ಒಪ್ಪಿಕೊಂಡರು. ರಾಜ ಅವೆಲ್ಲವನ್ನು ಒಪ್ಪಿಕೊಂಡು ಮದುವೆಯಾದ. ಅವರಿಂದ ಸುರುವಾದ ವಂಶವೇ ಈಗಿನ ರಾಜರದು. ವಿಜಯಶೀಲ ಕನಕರೇಖೆಯನ್ನು ಮದುವೆಯಾಗುವಾಗ ಹಿರಿಯ ಪಟ್ಟದ ರಾಣಿಗೊಬ್ಬ ಮಗನಿದ್ದ. ಅವನಿಗೆ ರಾಜ್ಯ ತಪ್ಪಿಸಲೆಂದು ವರ್ತಕರು ಇನ್ನೂ ಒಂದು ಕರಾರಿಗೆ ಒಪ್ಪಿಗೆ ಪಡೆದರು. ಅದೆಂದರೆ, ರಾಜ ಹಿರಿಯ ಪಟ್ಟದ ರಾಣಿಯ ಮಗನನ್ನೇ ಯುವರಾಜನನ್ನಾಗಿ ಮಾಡಬೇಕೆಂದಿಲ್ಲ. ತನ್ನ ಇಷ್ಟಾನುಸಾರ ಕಿರಿಯ ರಾಣಿಯರ ಮಕ್ಕಳನ್ನೂ ಮಾಡಬಹುದಾಗಿತ್ತು. ಇದೇ ಇಂದಿನ ಎಲ್ಲ ಸಮಸ್ಯೆಗಳ ಮೂಲ ಉರುಲಾಯಿತೆಂದು ಮುಂದೆ ನಿಮಗೇ ತಿಳಿಯುತ್ತದೆ.

ಅಂದಿನಿಂದ ಅರಸೊತ್ತಿಗೆಯ ಸ್ವರೂಪ ಮಾತ್ರವಲ್ಲ, ರಾಜಲಾಂಛನವೂ ಬದಲಾಯಿತು. ಮೊದಲು ಸೂರ್ಯನ ಗುರುತಾದ ಹದ್ದು ರಾಜಲಾಂಛನವಾದದ್ದು ವರ್ತಕ ಸಮಾಜದ ಬೆರಕೆಯಾದ ಮೇಲೆ ಒಂದು ಕಾಲಲ್ಲಿ ತಕ್ಕಡಿ ಇನ್ನೊಂದು ಕಾಲಲ್ಲಿ ಖಡ್ಗ ಹಿಡಿದ ಹದ್ದು ರಾಜಲಾಂಛನವಾಯಿತು. ವಿಜಯಶೀಲ ವಿಲಾಸಿ. ಇದು ಗೊತ್ತಾದದ್ದೇ ಮಾಂಡಳಿಕರು ಬಲಿತು ಸ್ವತಂತ್ರರಾದರು. ರಾಜ ಕನಕರೇಖೆಯ ಪ್ರೇಮಪಾಶದಲ್ಲಿಯೇ ಸದಾಕಾಲ ಬಿದ್ದಿರುತ್ತ ರಾಜ್ಯಭಾರ ಮರೆತ. ಕನಕರೇಖೆಯ ಅಣ್ಣತಮ್ಮಂದಿರು ರಾಜ್ಯಭಾರ ನೋಡಿಕೊಂಡರು. ಈಗ ಕ್ಷತ್ರಿಯರು ಮತ್ತು ವರ್ತಕರ ಮಧ್ಯೆ ವಿರಸ ಉಂಟಾಗಿ ಶೂರರಾದ ಕ್ಷತ್ರಿಯರು ಬೇರೆ ರಾಜರಲ್ಲಿಗೆ ಹೋದರು. ರಾಜ ಮತ್ತವನ ಆಡಳಿತದ ಗುಟ್ಟುಗಳನ್ನರಿತ ಕೆಲವರು ಸ್ವತಂತ್ರ ಸೈನ್ಯಕಟ್ಟಿ ಕನಕಪುರಿಯ ಮೇಲೆ ದಂಡೆತ್ತಿ ಬಂದರು. ಹೀಗೆ ಬಂದವರನ್ನೆಲ್ಲ ಎದುರಿಸಲು ರಾಜ್ಯದಲ್ಲಿ ಶೂರರಾದ ಸೈನಿಕರು ಇರಲಿಲ್ಲ. ಮಹಾರಾಣಿ ಕನಕರೇಖೆಯ ಸಹೋದರರಲ್ಲಿ ದಂಡೆತ್ತಿ ಬಂದವರನ್ನು ನಿಭಾಯಿಸಲು ಅನುಭವವೂ ಇರಲಿಲ್ಲ, ಶೌರ್ಯವೂ ಇರಲಿಲ್ಲ. ಹೀಗಾಗಿ ಬಂದ ಬಂದವರಿಗೆ ಕಾದಾಡದೆ ಅಷ್ಟಿಷ್ಟು ಹಣ, ಚಿನ್ನ ಕೊಟ್ಟು ಹಿಂದಿರುಗಿಸುವ ಉಪಾಯ ಕಂಡುಕೊಂಡರು. ಈ ಉಪಾಯ ಮೊದಮೊದಲು ಯಶಸ್ವಿಯಾದದ್ದು ಬರಬರುತ್ತ ದುಬಾರಿಯಾಯಿತು. ಈಗ ರಾಜ್ಯವನ್ನು ಉಳಿಸಿಕೊಳ್ಳಲು ಎಷ್ಟು ಚಿನ್ನವಿದ್ದರೂ ಸಾಲದಾಯಿತು. ವರ್ತಕ ಸಮಾಜ ತನ್ನ ಚಿನ್ನವನ್ನೆಲ್ಲ ಕಳೆದುಕೊಂಡಿತು.

ಚಿನ್ನದ ಅಭಾವ ಚಿನ್ನದ ಶೋಧನೆಯಾಗಿ ಮಾರ್ಪಾಡಾಯಿತು. ಇದರ ಪರಿಣಾಮವೆಂದರೆ ಬೋಳು ಗುಡ್ಡಗಾಡು ಪ್ರದೇಶ ವರ್ತಕರು ತೋಡಿದ ತಗ್ಗು, ಕುಳಿ, ಹೊಂಡಗಳಿಂದ ತುಂಬಿ ಹೋಯಿತು. ಈ ಸನ್ನಿವೇಶವನ್ನು ಒಮ್ಮೆ ಅರ್ಥಕೌಶಲ ಹೀಗೆ ವರ್ಣಿಸಿದ್ದ:

ಮನೆಯಲ್ಲಿಯ ಚಿನ್ನವೆಲ್ಲಾ ಖಾಲಿಯಾಯತ್ತು. ಕಳೆಯುತ್ತ ಬಂದ ಹಾಗೆ ತಿಳಿಯುತ್ತಾ ಬಂತು. ಮನೆ ಖಾಲಿ ಆಗಿತ್ತಲ್ಲ, ಹೃದಯವೂ ಖಾಲಿ, ಕಣ್ಣೂ ಖಾಲಿ. ವರ್ತಮಾನವಂತೂ ಮೊದಲೇ ಖಾಲಿ. ಭವಿಷ್ಯವೂ ಖಾಲಿ! ಆಗ ನೋಡು ಇಡೀ ಕನಕಪುರಿಗೆ ಒಂದು ಸಂಕ್ರಾಂತಿಯ ಮುಂಜಾನೆ ಅದ್ಭುತವಾದ ದರ್ಶನವಾಯಿತಯ್ಯ!-ಕಲ್ಪಿಸಿಕೊಳ್ಳಯ್ಯಾ ಇಡೀ ಕನಕಪುರಿಗೆ ಒಂದೇ ದರ್ಶನ!

ಅದೇನಪ್ಪಾ ಅಂದರೆ, ಆ ದಿನ ಬೆಳಿಗ್ಗೆ ನದಿಯಲ್ಲಿ ಮುಳುಗೆದ್ದು ಸೂರ್ಯನಿಗೆ ನಮಸ್ಕಾರ ಮಾಡೋಣವೆಂದು ನೋಡಿದರೆ ಅಲ್ಲೆಲ್ಲಿದ್ದಾನೆ ಸೂರ್ಯ? ಆಕಾಶದಲ್ಲೊಂದು ಚಿನ್ನದ ತಲೆ ಫಳಫಳಾ ಹೊಳೀತಿದೆ! ಕೈಯಿಲ್ಲ, ಕಾಲಿಲ್ಲ. ಏನಿದರ ಅರ್ಥ ಅಂತ ತಲೆ ಕೆಡಿಸಿಕೊಂಡಿರಬೇಕಾದರೆ ಆ ತಲೆ ಹೇಳಿತು, ನೋಡು:

"ಲೋ ಮಕ್ಕಳ್ರಾ, ಚಿನ್ನ ಗಳಿಸಬೇಕಾದ್ದು ಕೈ ಮೈ ದುಡಿಮೆಯಿಂದಲ್ರೊ, ತಲೆ! ತಲೆಯಿಂದ ಕಣ್ರೋ ಮುಂಡೇವಾ!"

ಅಂತಂದು ನಕ್ಕ! ಒಮ್ಮೆ ಚಿನ್ನದ ಕನಸಿನಿಂದ ಉದ್ರಿಕ್ತರಾದರೋ ಆಮೇಲೆ ಒಬ್ಬನೂ ಹಿಂದಿರುಗಿ ನೋಡಲೇ ಇಲ್ಲ
ಐವತ್ತಾರೂ ದೇಶಗಳಲ್ಲಿ ನಮ್ಮ ರಾಜ್ಯ ಮಾತ್ರ ಶ್ರೀಮಂತವಾಗಿದೆ! ಯಾಕೆ?
ಭೂಮಿಸೀಮೆ ಹೆಚ್ಚಾಗಿದೆಯ?
ಇಲ್ಲ.
ದುಡಿಯೋ ಜನ ಹೆಚ್ಚಿಗಿದ್ದಾರಾ?
ಇಲ್ಲ.
ಸಂಪನ್ಮೂಲ ಹೆಚ್ಚಿಗಿದೆಯ?
ಇಲ್ಲ.
ಮತ್ತ್ಯಾಕಪ್ಪ ಹಿಂಗಿದ್ದೀವಿ? ಅಲ್ಲೇ ಮಜಾ ಇರೋದು ರಾಜಾ!
ಹೆಂಗೆ?
ಹೆಂಗೆಂದರೆ, ನಮ್ಮಷ್ಟು ಯುದ್ಧಗಳನ್ನ ಬೇರೆ ಯಾರಾದರೂ ಮಾಡಿದ್ದಾರಾ?
ಇಲ್ಲ.
ಯಾಕೆ? ಯಾಕೆಂದರೆ ಯುದ್ಧವಿಲ್ಲದೆ ಶ್ರೀಮಂತಿಕೆಯಿಲ್ಲ. ಸಣ್ಣಪುಟ್ಟ ಯುದ್ಧ ಬಿಡು, ಮೂರು ವರ್ಷಕ್ಕೊಂದು ದೊಡ್ಡ ಯುದ್ಧ ಮಾಡಿದ್ದೀವಿ. ಒಂದು ಬಿಟ್ಟು ಅಷ್ಟೂ ಯುದ್ಧ ಗೆದ್ದಿದ್ದೀವಿ. ಹ್ಯಾಗೆ? ಅನ್ನು. ತಲೆ!

ಇಷ್ಟು ಯುದ್ಧ ಗೆದ್ದರೂ ನಮ್ಮ ರಾಜ್ಯ ಅಷ್ಟೇ ಇದೆಯಲ್ಲ? ವಿಸ್ತಾರವಾಗಿಲ್ಲವಲ್ಲ? ಯಾಕೆ? ಗೆದ್ದ ರಾಜ್ಯಗಳನ್ನ ಅಲ್ಲಿಯ ರಾಜರ ಮೂಲಕ ಆಳೋರ್ಯಾರು? ನಾವೆ! ಹೆಂಗಿದೆ? ತಲೆ!

ಹೆಂಗೆ?

ತಲೆ ಇದ್ದರೆ ಚಿನ್ನ, ಚಿನ್ನ ಇದ್ದರೆ ಸೈನ್ಯ, ಸೈನ್ಯ ಇದ್ದರೆ ದೇಶ, ಇದ್ದರೆ ಅಧಿಕಾರ -ಅಧಿಕಾರ ಇದ್ದರೆ ಚಿನ್ನ... ಹ್ಯಾಗಿದೆ ವರ್ತುಳ? ಈ ವರ್ತುಳದ ಮಧ್ಯೆ, ಧರ್ಮ, ಕುಟುಂಬ, ಸಮಾಜ, ಮೌಲ್ಯ ಇತ್ಯಾದಿ ಬಿದ್ದುಕೊಂಡಿರ್ಲೇಳು, ಅವೂ ಚಿನ್ನ ಗಳಿಸೋ ಹಾಗೆ ಮಾಡಿದರಾಯ್ತಪ್ಪ! ಅದಕ್ಕೇನು ಮಾಡಿದಿವಿ ಗೊತ್ತ? ತಲೆಗೆ ರಾಜ್ಯವ್ಯವಸ್ಥೆ ಸೇರಿಸಿಕೊಂಡಿವಿ!

ಹ್ಯಾಗೆ?

ಅದು ಹೀಗೆ:

ರಾಜ ಕ್ಷತ್ರಿಯ ಧರ್ಮವನ್ನಾಚರಿಸಿದರೂ ಅರಸೊತ್ತಿಗೆಯ ಅಧಿಕಾರವನ್ನು 'ವರ್ತಕ ಸಂಘ'ದೊಂದಿಗೆ ಹಂಚಿಕೊಂಡಿದ್ದು ಕನಕಪುರಿಯ ವಿಶೇಷ. ಅಂದರೆ ರಾಜ ತೆಗೆದುಕೊಳ್ಳುವ ಯಾವುದೇ ಮಹತ್ವದ ತೀರ್ಮಾನಕ್ಕೆ ವರ್ತಕ ಸಂಘದ ಒಪ್ಪಿಗೆ ಬೇಕು. ವರ್ತಕ ಸಂಘಕ್ಕೆ ತಂತಮ್ಮ ಸಮ್ಮತಿಯಿಂದಾಯ್ದ ಐದು ಜನ ಪಂಚರಿರುತ್ತಾರೆ. ಅವರ ಅಧ್ಯಕ್ಷ ವರ್ತಕ ಶ್ರೇಷ್ಠ. ಅನಂತರದವ ವರ್ತಕೋತ್ತಮ. ಮೂರು ಜನ ವರ್ತಕಧನರು ಸದಸ್ಯರು. ಹೀಗೆಯೇ ರಾಜ ನೇತೃತ್ವದಲ್ಲಿ ಪ್ರಧಾನಿ ಸೇನಾಪತಿ ಇವರ 'ರಾಜಸಭೆ' ಇರುತ್ತದೆ. ರಾಜ್ಯದ ಮಹತ್ವದ ಆರ್ಥಿಕ ವಿಚಾರಗಳು, ಯುದ್ಧ, ಸಂಧಿ - ಕಂದಾಯವೇ ಮೊದಲಾದ ವಿಚಾರಗಳನ್ನು ಸದರೀ ಸಂಘ ಮತ್ತು ಸಭೆ ಸೇರಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಕನಕಪುರಿಯ ವ್ಯಾಪಾರವೂ ಅಷ್ಟೇ- ಐವತ್ತೈದೂ ದೇಶಗಳ ತುಂಬ ಇವರ ವ್ಯಾಪಾರಕೌಶಲದ ಖ್ಯಾತಿ ಹಬ್ಬಿದೆ. ವಾರಕ್ಕೊಮ್ಮೆ ನಡೆಯುವ 'ಊರ ಸಂತೆ' ಮತ್ತು ವರ್ಷಕ್ಕೊಮ್ಮೆ ನಡೆಯುವ "ವಾರ್ಷಿಕ ವ್ಯಾಪಾರ"ಕ್ಕೆ ವಿದೇಶಗಳಿಂದಲೂ ಗಿರಾಕಿಗಳು ಬರುತ್ತಾರೆ. ಇಲ್ಲಿ ಸಿಕ್ಕುವ ಆಯುಧ, ಯುದ್ಧ ಸಾಮಗ್ರಿ ಮತ್ತು ಚಿನ್ನಾಭರಣಗಳ ಅಸಲಿತನದ ಬಗ್ಗೆಯಾಗಲಿ, ಕುಸುರಿಗೆಲಸದ ಬಗ್ಗೆಯಾಗಲಿ ಹೆಸರಿಡುವಂತೆಯೇ ಇಲ್ಲ.

ಕನಕಪುರಿಯ ಕರಕುಶಲಗಾರಿಕೆ ಮತ್ತು ಕಸುಬುದಾರಿಕೆಯ ಬಗ್ಗೆ ಹೇಳದಿದ್ದರೆ ಅದೊಂದು ದೊಡ್ಡ ಕೊರತೆಯೇ ಆದೀತು. ರಾಜರು ಮತ್ತು ಶ್ರೀಮಂತರಿಗಾಗಿ ತಾಸು ಗಳಿಗೆಗಳನ್ನು ತೋರಿಸುವ ಕಾಲಯಂತ್ರ (ಗಡಿಯಾರ)ಗಳಲ್ಲದೆ ಸೈನ್ಯಕ್ಕೆ ಬೇಕಾಗುವ ಅನೇಕ ಮಾರಕ ಆಯುಧಗಳ ತಯಾರಿಕೆಯಲ್ಲಿ ಇಲ್ಲಿಯ ಕಸಬುದಾರರು ಪ್ರಸಿದ್ಧರಾಗಿದ್ದರು. ಇವರು ಮಾಡುವ ಸಿಡಿತಲೆ ಗುಂಡುಗಳು ಗುರಿಯಿಟ್ಟು ಹಾರಿಸಿದಲ್ಲಿ ವೈರಿಯ ಕೋಟೆಕೊತ್ತಳಗಳನ್ನು ಧೂಳಿಪಟ ಮಾಡುವಷ್ಟು ಸಮರ್ಥವಾಗಿದ್ದವು. ಚರ್ಮದ ಪಟ್ಟಿಯ ಹಾಗೆ ಸೊಂಟಕ್ಕೆ ಸುತ್ತಿಕೊಳ್ಳುವಂಥ ಸೂಕ್ಷ್ಮಕತ್ತಿಗಳನ್ನು ಮಾಡುವುದಲ್ಲದೆ ವಿಷದ ನೀರು ಕುಡಿಸಿದ ಕಟಾರಿ, ಚಾಕು ಚೂರಿಗಳ ನಿರ್ಮಾಣದಲ್ಲೂ ಕೆಲವರು ಬೇಕಸಬಿನವರು. ಹೆಸರು ಮಾಡಿಕೊಂಡಿದ್ದರು. ಇನ್ನಿವರ ಕುದುರೆ ವ್ಯಾಪಾರವಂತೂ ಅಕ್ಷರಶಃ ಅಂತರ್ದೇಶೀಯವೆನ್ನಬಹುದಾದ ವ್ಯವಹಾರವಾಗಿತ್ತು. ಅರಬ ದೇಶದ ಕುದುರೆಗಳು ಹಡಗು ಇಳಿದು ನೇರ ಇಲ್ಲಿಗೇ ಬರುವ ಹಾಗೆ, ಇವರು ಆರಿಸಿಬಿಟ್ಟ ಕುದುರೆಗಳನ್ನು ಮಾತ್ರ ಬೇರೆಯವರಿಗೆ ಮಾರುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು.

ಕನಕಪುರಿಯ ವರ್ತಕ ಸಂಘದ ಒಗ್ಗಟ್ಟು ಸಹಕಾರಗಳಂತೂ ದೇಶಗಳ ತುಂಬ ಗಾದೆ ನಾಣ್ಣುಡಿಯಾಗಿ ಖ್ಯಾತವಾಗಿದ್ದವು. ಯುದ್ಧ ಸಾಮಾಗ್ರಿಗಳ ತಯಾರಿಕೆ ಪೂರ್ತಿ ವರ್ತಕರದಾಗಿದ್ದು ಬಂದ ಲಾಭದಲ್ಲಿ ಅರಮನೆಯ ಪಾಲುದಾರಿಕೆಯೂ ಇರುತ್ತಿತ್ತು. ಯುದ್ಧ ಮಾಡುವುದು, ಆದ್ದರಿಂದ ಆಗಾಗ ಯುದ್ದಗಳು ನಡೆಯುವಂತೆ ನೋಡಿಕೊಳ್ಳುವುದು ಅರಮನೆಯ ಜವಾಬ್ದಾರಿಯಾಗಿತ್ತು. ನಡೆಯದಿದ್ದಲ್ಲಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿಯಾದರೂ ಯುದ್ಧ ನಡೆಯವಂತೆ ನೋಡಿಕೊಳ್ಳಲಾಗಿತ್ತಿತ್ತು.

ಯಾವ ಯುದ್ಧದಿಂದ ಲಾಭವಾಗುವುದೋ ಅಂಥ ಯುದ್ಧಗಳಲ್ಲಿ ಮಾತ್ರ ವರ್ತಕ ಸಂಘ ಆಸಕ್ತಿ ತೋರಿಸುತ್ತಿತ್ತು. ರಾಜ ಮತ್ತು ವರ್ತಕರು ಯುದ್ಧದಿಂದ ಶೇಕಡಾ ನೂರರಷ್ಟು ಲಾಭ ಪಡೆಯುತ್ತಿದ್ದರಾಗಿ ಕನಕಪುರಿ ಎಲ್ಲ ರಾಜಧಾನಿಗಳಿಗಿಂತ ಶ್ರೀಮಂತವಾಗಿತ್ತು. ಒಂದು ಯುದ್ಧದ ಹುನ್ನಾರು ಮಾಡಿದರೆ ಅದರಿಂದ ಬರುವ ಲಾಭನಷ್ಟಗಳನ್ನು ಸರಿಯಾಗಿ ಲೆಕ್ಕ ಹಾಕಿ, ಯೋಜನೆಗಳನ್ನು ಸಿದ್ಧಗೊಳಿಸಿ, ಅದರಂತೆಯೇ ಮಾಡುತ್ತಿದ್ದರಾದ್ದರಿಂದ ಅವರ ಯೋಜನೆಗಳು ಎಲ್ಲಿಯೂ ಹಾದಿ ತಪ್ಪುತಿರಲಿಲ್ಲ. ಗೆದ್ದ ರಾಜ್ಯದ ಪ್ರಜೆಗಳಂತೂ ತಾವು ಕನಕಪುರಿಗೆ ಸೋತದ್ದೇ ಸೌಭಾಗ್ಯವೆಂದು ನಂಬುವ ಹಾಗೆ ಮಾಡುತ್ತಿದ್ದರು. ತಾವು ಗೆದ್ದ ರಾಜನನ್ನು ಹೊಸ ಹೊಸ ಮರ್ಯಾದೆಗಳಿಂದ, ರಂಜನೀಯವಾದ ಬಿರುದಾವಳಿಗಳಿಂದ, ಬೆಲೆಯುಳ್ಳ ಕಾಣಿಕೆಗಳಿಂದ ಮುಚ್ಚಿಬಿಡುತ್ತಿದ್ದರು. ಗೆದ್ದೆವೆಂದು ಆ ರಾಜ್ಯವನ್ನೆಂದೂ ಆಕ್ರಮಿಸಿದವರಲ್ಲ. ಪ್ರತಿಯಾಗಿ ಆ ರಾಜ್ಯದ ವ್ಯಾಪಾರದ ಗುತ್ತಿಗೆ ಮತ್ತು ಸಲಹಾಮಂತ್ರಿಯಾಗಿ ತಮ್ಮಲ್ಲಿಯ ಒಬ್ಬ ವರ್ತಕನನ್ನು ನಿಯಮಿಸಿ ಗೊತ್ತಾಗದ ಹಾಗೆ ಸುಲಿಯುತ್ತಿದ್ದರು. ಇದು ಆ ರಾಜ್ಯದ ಜನತೆಗೂ ತಿಳಿಯುತ್ತಿತ್ತು; ತಡವಾಗಿ; ಅಂದರೆ ಎಲ್ಲ ಕಳೆದುಕೊಂಡು ನಿರ್ವೀರ್ಯರಾದ ಮೇಲೆ!

ಒಂದು ಕಾಲಕ್ಕೆ ವರ್ತಕರು ಚಿನ್ನದ ಅಭಾವದಿಂದ ಕಂಗಾಲಾದರೂ ಆಮೇಲೆ ತಮ್ಮಲ್ಲಿದ್ದ ಶ್ರೀಮಂತಿಕೆಯನ್ನು ರಾಜ್ಯಕ್ಕಾಗಿ ಬಳಸಿ ಶೂರರ ಸೈನ್ಯಕಟ್ಟಿ ಜಾಣತನದಿಂದ ನಿಭಾಯಿಸಿದರು; ಜೊತೆಗೆ ಆರ್ಥಿಕತೆಯನ್ನು ಕೂಡ. ಈ ಮಧ್ಯೆ ಶೂರರೂ ಕೆಲವರು ಹೇಡಿಗಳೂ ಆದ ರಾಜರನ್ನು ಮುಂದಿಟ್ಟುಕೊಂಡು ಬೇಕಾದಷ್ಟು ಯುದ್ಧಗಳನ್ನು ಮಾಡಿ ಗೆದ್ದರೂ ಸೋತರೂ ಕನಕಪುರಿಯ ಸಿಂಹಾಸನ ಇನ್ನೊಬ್ಬರ ಪಾಲಾಗದಂತೆ ನೋಡಿಕೊಂಡಿದ್ದು ಸಣ್ಣ ಸಾಧನೆಯಲ್ಲ. ಅದೂ ಹತ್ತರೊಂದಿಗೆ ಹನ್ನೊಂದನೇ ದೇಶವಾಗಿ ಅಲ್ಲ. ಕನಕಪುರಿ ಸಮೃದ್ಧ ದೇಶವೆಂದು, ಶ್ರೀಮಂತ ದೇಶವೆಂದು ಐವತ್ತೈದು ದೇಶಗಳ ಜನ ನೆನಪಿಟ್ಟುಕೊಳ್ಳುವಂತೆ ನಿಭಾಯಿಸಿದ್ದರು. ಕನಕಪುರಿಯ ಒಂದು ಹಣಕ್ಕೆ ಮಾಳವ ದೇಶದ ಐವತ್ತು ಹಣ, ತಿಗುಳರ ಮೂವತ್ತು ಹಣ ಸಮ!- ಹೀಗೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಬೆಲೆಯಿರೋದು ಯಾಕೆ?" ಇದು ಕನಕಪುರಿಯ ಹಿರಿಮೆ! ಈಗಿನ ದೊರೆ ಗುಣಾಧಿಕ್ಯ ವಿಷಪ್ರಾಶನ ಕಾರಣವಾಗಿ ಜಡ್ಡಾಗಿ ಬಿದ್ದು ರಾಜ್ಯ

ಈ ಸ್ಥಿತಿಗೆ ಬಂದಿತ್ತು. ರಾಜನ ಜಡ್ಡು ಕಾರಣವಾಗಿ ಯುದ್ಧವಿರಲಿಲ್ಲ. ಒಂದು ಉತ್ಸವವಿರಲಿಲ್ಲ. ವ್ಯವಹಾರದಲ್ಲಿ ಒಂದು ಚುರುಕಿರಲಿಲ್ಲ. ದುಡಿಮೆಗಾರರು, ವರ್ತಕರು ಸೈನಿಕರು ಎಲ್ಲರೂ ಕೈ ಖಾಲಿ ಮಾಡಿಕೊಂಡು ಆಕಳಿಸುತ್ತ ಕೂತಿದ್ದರು. ಶಿಖರಸೂರ್ಯನ ಪ್ರವೇಶವಾದದ್ದು ಈ ಸಂಧರ್ಭದಲ್ಲಿ.

## ಹದಿನಾಲ್ಕು

ಕನಕಪುರಿಯನ್ನು ಆಳಿದ ರಾಜರಲ್ಲಿ ಈಗಿನ ಗುಣಾಧಿಕ್ಯನೇ ಹೆಚ್ಚು ಯಶಸ್ವಿಯಾದವನು. ಇಪ್ಪತ್ತ ನಾಲ್ಕು ವರ್ಷ ರಾಜ್ಯವಾಳಿ ಎಂಟು ದೊಡ್ಡ ಯುದ್ಧಗಳನ್ನು ಗೆದ್ದು ಕನಕಪುರಿಗೆ ಅಪಾರ ಸಂಪತ್ತು ಮತ್ತು ಕೀರ್ತಿ ತಂದವನು. ಅವುಗಳಲ್ಲೆಲ್ಲ ಬಿಳಿಗಿರಿ ರಾಜನ ಮೇಲೆ ದಂಡೆತ್ತಿ ಹೋದ ಒಂಬತ್ತನೇ ಯುದ್ಧವೇ ಮಹತ್ವದ್ದು. ಅಲ್ಲಿಯೇ ಅವನಿಗೆ ಶರಣಾಗತನಾದ ಬಿಳಿಗಿರಿ ರಾಜ 'ವಿಜಯದ ಕಡಗ' ಕೊಟ್ಟು ಸನ್ಮಾನ ಮಾಡಿದ್ದು, ಆ ಊರಿನಲ್ಲಿದ್ದಾಗಲೇ ಅವನು ಪ್ರೀತಿಯ ಚಿಕ್ಕಮ್ಮಣ್ಣಿಯನ್ನು ಮದುವೆಯಾದದ್ದು. ಇದು ಕನಕಪುರಿಯ ಇತಿಹಾಸದ ಮಹತ್ವದ ಅಧ್ಯಾಯವಾಗಿರುವದರಿಂದ ಅದನ್ನು ತಿಳಿಯುವ ಅಗತ್ಯವಿದೆ.

'ಜಗತ್ಪ್ರಸಿದ್ಧ ಪ್ರಬಲ ಕನಕಪುರಿಯನ್ನು ನಿರ್ಲಕ್ಷಿಸಿ ತನ್ನ ಶ್ರೀಮಂತಿಕೆಯಿಂದ ಇವರ ಕಣ್ಣು ಮತ್ತು ಅಸೂಯೆಯಗಳನ್ನು ಕುಕ್ಕುತ್ತ ಏಳುಮಲೆಯ ದೊರೆ ರಾಜ್ಯಭಾರ ಮಾಡುತ್ತಿದ್ದ. ಬಿಳಿಗಿರಿ ಅವನ ರಾಜಧಾನಿ. ಇವರ ಅಡಿಕೆ ಮತ್ತು ಮಸಾಲೆ ಸಾಮಾನುಗಳಿಗೆ ಐವತ್ತಾರು ದೇಶಗಳಲ್ಲಿ ಭಾರಿ ಬೇಡಿಕೆಯಿತ್ತು. ಅಂಥದೊಂದು ನಾಡು ತನ್ನ ಆಧೀನ ಇಲ್ಲದ್ದೇ ಕನಕಪುರಿಯ ವರ್ತಕರು ನಿದ್ದೆಗೆಡುವುದಕ್ಕೆ ಕಾರಣವಾಯಿತು. ಏಳುಮಲೆಯ ಗಿರಿಗಹ್ವರಗಳನ್ನು ಅಧ್ಯಯನ ಮಾಡಿ, ಎರಡು ವರ್ಷ ಯುದ್ಧದ ತಯಾರಿ ಮಾಡಿಕೊಂಡು ಒಳ್ಳೆಯ ಮುಹೂರ್ತ ಸಂದರ್ಭಗಳನ್ನು ಕಾಯುತ್ತ ಕೂತರು.

ಇದರ ಸುಳಿವಿಲ್ಲದ ಬಿಳಿಗಿರಿಯ ಚೆಲುವರಾಯ ಅನತಿದೂರದ ಅಳುಪರ ಮೇಲೆ ದಂಡೆತ್ತಿ ಹೋದ. ಇದನ್ನೇ ಕಾಯುತ್ತಿದ್ದ ಕನಕಪುರಿಯವರು ಸಮಯ ಸಾಧಿಸಿ ದಾಳಿ ಮಾಡಿ ಬಿಳಿಗಿರಿಯನ್ನು ವಶಮಾಡಿಕೊಂಡರು. ಅತ್ತ ಆಳುಪರ ಮೇಲೆ ದಂಡೆತ್ತಿ ಹೋಗಿದ್ದ ಚೆಲುವರಾಯನಿಗೆ ಸುದ್ದಿ ಮುಟ್ಟಿ ವಾಪಸು ಬಂದ. ಅನ್ಯರ ಅಧೀನದಲ್ಲಿದ್ದ ತನ್ನ ರಾಜಧಾನಿಯನ್ನು ಹಿಂದಿರುಗಿ ಪಡೆಯುವುದಕ್ಕೆ ಈಗ ಯುದ್ಧ ಮಾಡಬೇಕಾಯಿತು! ಆದರೆ ಹ್ಯಾಗೆ ಯುದ್ಧ ಮಾಡಿದರೂ ತನ್ನ ಊರಲ್ಲಿದ್ದ ಪ್ರಜೆಗಳಿಗೇ ಹಾನಿಯಾಗಬೇಕು. ಊರಿನ ನೀರಿನ ಸರಬರಾಜು ತಪ್ಪಿಸಬಹುದು. ಅದು ತನ್ನವರಿಗೇ ಹಾನಿ. ಸಿಡಿತಲೆ ಹಾರಿಸಿದರೂ ತನ್ನವರಿಗೇ ಹಾನಿ. ಕೊನೆಗೂ ಒಂದು ಒಪ್ಪಂದಕ್ಕೆ ಒಪ್ಪಲೇಬೇಕಾಯಿತು. ಒಪ್ಪಂದವೂ ಆಗಿ ರಾಜ ತನ್ನ ರಾಜಧಾನಿಯ ಪ್ರವೇಶ ಮಾಡಿದರೆ ಆಶ್ಚರ್ಯವೋ ಆಶ್ಚರ್ಯ! ಕನಕಪುರಿಯವರೇ ಮುಂದಾಗಿ ಭರ್ಜರಿಯಾಗಿ ಬರಮಾಡಿಕೊಂಡರಲ್ಲದೆ, ಕನಕಪುರಿಯ ಸೈನಿಕರು ತಮ್ಮ ವಿಶೇಷ ಕವಾಯತನಿಂದ ಬಿಳಿಗಿರಿ ರಾಯನಿಗೆ ಮರ್ಯಾದೆ ತೋರಿಸಿದರು. ಚೆಲುವರಾಯನನ್ನು ಅವನ ಸಿಂಹಾಸನದ ಮೇಲೆ ಕೂರಿಸಿ ಭಾರಿ ಸನ್ಮಾನ ಮಾಡಿ ಅಮೂಲ್ಯವಾದ ಮತ್ತು, ಆಶ್ಚರ್ಯಕರ ಕಾಣಿಕೆಗಳಿಂದ ಬಿಳಿಗಿರಿರಾಯ ಆನಂದಪರವಶನಾಗುವಂತೆ ಮಾಡಿದರು. ಸಮಯವನ್ನಳೆಯುವ ಯಂತ್ರವನ್ನು ಕೊಟ್ಟು ರಾಜ ಮತ್ತವನ ಪರಿವಾರದ ಮನಸ್ಸಂತೋಷ ಪಡಿಸಿದರು. ಒಬ್ಬ ಆಟಿಗೆ ಸೈನಿಕ ಮನೆಯೊಳಗಿಂದ ಬಂದು ಎತ್ತರವಾದ ದೀಪವನ್ನು ಪ್ರತಿಸಂಜೆ ಸಮಯಕ್ಕೆ ಸರಿಯಾಗಿ ಹೊತ್ತಿಸಿ ಮತ್ತೆ ಆಟಿಗೆ ಮನೆಯೊಳಕ್ಕೆ ಹೋಗುವಂಥ ಯಂತ್ರಕೊಟ್ಟು ಇಡೀ ಬಿಳಿಗಿರಿಯನ್ನು ಬೆರಗಿನಲ್ಲಿ ಮುಚ್ಚಿಬಿಟ್ಟರು. ಇನ್ನು ಕನಕಪುರಿ ರಾಜನನ್ನು ತಾನು ಹ್ಯಾಗೆ ಆನಂದಪಡಿಸಬೇಕೆಂದು ಚೆಲುವರಾಯನಿಗೆ ತಿಳಿಯದಾಯಿತು. ತನ್ನ ತಂಗಿ ವಿನಯವತಿಯನ್ನು ಗುಣಾಧಿಕ್ಯನಿಗೆ ಕೊಟ್ಟು ಅದ್ದೂರಿಯಾಗಿ ಲಗ್ನಮಾಡಿ, ಬೀಗತನದ ಮತ್ತು ಮಹಾರಾಜನ ಶೌರ್ಯದ ಗುರುತಿಗಾಗಿ ನವರತ್ನ ಖಚಿತವಾದ ಮತ್ತು ಒಳಗೂ ನವರತ್ನಗಳು ತುಂಬಿದ್ದ "ವಿಜಯದ ಕಡಗ"ವನ್ನು ಬಲಗೈಗೆ ತೊಡಿಸಿದನು.

ಈಗ ಇಬ್ಬರೂ ತುಂಬಿದ್ದ 'ವಿಜಯದ ಕಡಗ'ವನ್ನು ಬಲಗೈಗೆ ಕರಾರುಗಳು:

ಒಂದು: ಕನಕಪುರಿಯ ವರ್ತಕಶ್ರೇಷ್ಠನಿಗೆ ಏಳುಮಲೆಯ ಮಸಾಲೆ ಸಾಮಾನುಗಳನ್ನು ಸಗಟು ಖರೀದಿಸುವ ಮತ್ತು ಎಲ್ಲ ದೇಶಗಳಿಗೆ ವಿತರಿಸುವ ಅಧಿಕಾರ ಕೊಡತಕ್ಕದ್ದು.

ಎರಡು: ಬಿಳಿಗಿರಿಗೆ ಬೇಕಾಗುವ ಎಲ್ಲ ಯುದ್ಧ ಸಾಮಗ್ರಿಗಳನ್ನು ಕನಕಪುರಿಯ ಪರಮ ವರ್ತಕನಿಂದಲೇ ತೆಗೆದುಕೊಳ್ಳತಕ್ಕದ್ದು.

ಮೂರು: ಬಿಳಿಗಿರಿಗೆ ಸ್ವಂತ ಸೈನ್ಯ ಬೇಡ. ಕನಕಪುರಿಯ ಪ್ರಧಾನಿಯೇ ಬಿಳಿಗಿಯ ರಕ್ಷಣೆಗೆ ಶಾಶ್ವತವಾಗಿ ಸೈನ್ಯವ್ಯವಸ್ಥೆ ಮಾಡತಕ್ಕದ್ದು.

ಮೂರನೇ ಕರಾರನ್ನು ಚೆಲುವರಾಯ ಒಪ್ಪಿದರೂ ಅವನ ತಮ್ಮ ಶಿವದೇವರಾಯ ಒಪ್ಪಲಿಲ್ಲ. ನಮ್ಮಲ್ಲಿಯ ಸೈನಿಕರು ಅನಾಥರಾಗುವರೆಂದು, ನಿರುದ್ಯೋಗಿಗಳಾಗುವರೆಂದು ನೆಪಹೇಳಿ ಇದೊಂದರಿಂದ ವಿನಾಯತಿ ಬೇಕೆಂದು ಪಟ್ಟು ಹಿಡಿದು ಪಡೆದ. ಮೊದಲಿನ ಎರಡರಿಂದಲೇ ಸಿಕ್ಕುವ ನಿವ್ವಳಲಾಭವನ್ನು ವಾಚಕರು ಊಹಿಸಬಲ್ಲರಾದ್ದರಿಂದ ಒಪ್ಪದೇ ಇದ್ದ ಮೂರನೇ ಕರಾರಿನ ಬಗ್ಗೆ ಈಗ ಹೇಳಲೇಬೇಕು.

ಒಪ್ಪಂದವಾದ ಮೂರು ವರ್ಷ ಕನಕಪುರಿಯು ಬಿಳಿಗಿರಿಯನ್ನು ಅಕ್ಷರಶಃ ಸುಲಿಗೆ ಮಾಡಿತು. ಸಾಮಾನ್ಯವಾಗಿ ಮೂರು ವರ್ಷಕ್ಕೊಂದಾದರೂ ದೊಡ್ಡ ಯುದ್ಧ ಮಾಡಿ ದೇಶಗಳನ್ನು ಸುಲಿಯುವ ಪದ್ಧತಿ ಇಟ್ಟುಕೊಂಡಿದ್ದ ಕನಕಪುರಿಯವರು ಆ ವರ್ಷ ಯುದ್ಧದ ಸುದ್ದಿ ಎತ್ತಲಿಲ್ಲ. ಈ ಮಧ್ಯೆ ಗುಣಾಧಿಕ್ಯ ಮಹಾರಾಜನಿಗೆ ವಿನಯವತಿಯಿಂದ ಛಾಯಾದೇವಿ ಮತ್ತು ತರುಣಚಂದ್ರ ಎಂಬ ಇಬ್ಬರು ಮಕ್ಕಳಾದರು. ಆಗಲೇ ಹೋದಾಗ ತರುಣಚಂದ್ರ ಕಾಣೆಯಾಗಿದ್ದಾನೆಂದು ಕನಕಪುರಿಯಿಂದ ಸುದ್ದಿ ಬಂತು. ಯುದ್ಧವನ್ನು ಅರ್ಧಕ್ಕೇ ನಿಲ್ಲಿಸಿ ಮಹಾರಾಜ ವಾಪಸಾದ. ಬಳಿಕ ಕಳೆದು ಹೋದ ಮಗನನ್ನು ಪತ್ತೆಹಚ್ಚಲು ಎಷ್ಟು ಪ್ರಯತ್ನಿಸಿದರೂ ಮಗ ಸಿಕ್ಕದೆ ನಿರಾಸೆಯಲ್ಲಿ ಕೈ ಚೆಲ್ಲಿ ರೋಗಕ್ಕೆ ತುತ್ತಾದ. ಮಳೆಯಾಳ ಮದ್ದು ಮಾಟವೆಂದರು, ವಿಷ ಸೇವನೆಯೆಂದರು, ಯಾವುದಕ್ಕೆ ಮದ್ದು ಕೊಟ್ಟರೂ ಗುಣ ಕಾಣಲಿಲ್ಲ.

ಕನಕಪುರಿಯ ರಾಜ ದುರ್ಬಲನಾದ ಸುದ್ದಿ ತಿಳಿದದ್ದೇ ತಡ ಬಿಳಿಗಿರಿರಾಯನ ಸೋದರ ಶಿವದೇವರಾಯ ಕನಕಪುರಿಯೊಂದಿಗಿನ ಅಣ್ಣನ ವ್ಯವಹಾರದ ಬಗ್ಗೆ ತಕರಾರು ತೆಗೆದ. ನಾವು ಬೆಳೆವ ಮಸಾಲೆಗಳ ಬೆಲೆ ನಿಗದಿಯ ಮತ್ತು ಮಾರಾಟದ ಹಕ್ಕು ನಮ್ಮದೇ ಎಂದು ಬಹಿರಂಗವಾಗಿಯೇ ಅಣ್ಣನನ್ನು ಟೀಕೆ ಮಾಡತೊಡಗಿದ. ಚೆಲುವರಾಯ ತಮ್ಮನಿಗೆ ತಿಳಿಹೇಳಲು ಮಾಡಿದ ಪ್ರಯತ್ನಗಳು ವಿಫಲವಾದವು. ಕೊನೆಗೆ ಬುಡಕಟ್ಟು ನಾಯಕರ ಬೆಂಬಲ ತಗೊಂಡು ಅಣ್ಣನ ಮೇಲೆ ಯುದ್ಧ ಸಾರಿದ. ಬಿಳಿಗಿರಿಯ ಚೆಲುವರಾಯನ ಬೆಂಬಲಕ್ಕೆ ಕನಕಪುರಿ ನಿಂತಿತು.

ಅಣ್ಣ ತಮ್ಮಂದಿರ ಮಧ್ಯೆ ಯುದ್ಧವಾಯಿತು. ಯುದ್ಧದಲ್ಲಿ ಬಿಳಿಗಿರಿಯ ಚೆಲುವರಾಯ ಸೋತು ಅಪಾರವಾದ ಚಿನ್ನಬೆಳ್ಳಿ ವಜ್ರ ವೈಢೂರ್ಯಗಳನ್ನು ನಾಲ್ಕು ಗಾಡಿಗಳಲ್ಲಿ ಹೇರಿಕೊಂಡು ರಾತೋರಾತ್ರಿ, ಯಾರಿಗೂ ಗೊತ್ತಾಗದಂತೆ ತಪ್ಪಿಸಿಕೊಂಡು ಓಡಿ ಕನಕಪುರಿಗೆ ಬಂದುಬಿಟ್ಟ.

ಕನಕಪುರಿಯಲ್ಲಿ ಭವ್ಯ ಸ್ವಾಗತ ದೊರೆಯಿತು. ಅತಿಥಿರಾಜನಿಗಾಗಿ ನದೀ ತೀರದ ಸುಂದರವಾದ ಅತಿಥಿಗೃಹ ಇಂದ್ರಭವನದಲ್ಲಿ ವ್ಯವಸ್ಥೆ ಮಾಡಿದರು. ತನ್ನೊಂದಿಗೆ ಚೆಲುವರಾಯ ಸುಮಾರು ಒಂದು ಕಡಿಮೆ ನಲವತ್ತು ಸೈನಿಕರ ಚಿಕ್ಕ ಪಡೆ ತಂದಿದ್ದ. ಅವರು ಚೆಲುವರಾಯನ ಸೇವಕರಾದರು. ಅತಿಥಿಯೆಂದರೂ ಅವನಿದ್ದ ಇಂದ್ರನಿವಾಸದ ಬಾಡಿಗೆ ಮತ್ತು ಅವನ ಕಡೆಯವರ ದಿನನಿತ್ಯದ ಖರ್ಚಿಗೆ ಅವನು ತಂದ ನಿಧಿಯಿಂದಲೇ ಹಣ ಸಂದಾಯವಾಗುತ್ತಿತ್ತು.

ಚೆಲುವರಾಯನ ಆನಂದಕ್ಕೆ ಕಿಂಚಿತ್ತೂ ಕೊರತೆಯಾಗದಂತೆ, ಅವನ ಅಹಂಕಾರಕ್ಕೆ ಕಿಂಚಿತ್ತೂ ಕೊಂಕಾಗದಂತೆ ಅವನನ್ನು ಹಗಲು ರಾತ್ರಿ ಕಣ್ಣಿಗೆ ಕಣ್ಣು ಹಚ್ಚದೆ ಅವನ ಜನ ನೋಡಿಕೊಂಡರು.

ಒಂದು ವರ್ಷ ಕಳೆದಿರಬೇಕು, ಸೈನ್ಯ ಪಡೆಯ ಅರ್ಧ ಜನ ಮತ್ತು ತಾಣು ತಂದ ನಿಧಿ ಅರ್ಧ ಮಾಯವಾಗಿತ್ತು! ದಿನ ಬಿಟ್ಟು ದಿನ ಬಂದು ಯೋಗಕ್ಷೇಮ ಕೇಳುತ್ತಿದ್ದ ಪ್ರಧಾನಿ ಅರ್ಥಕೌಶಲನಿಗೆ ಈಗ ಸಮಯವೇ ಸಿಕ್ಕದಾಯಿತು. ಹೀಗೇ ನಿರ್ಲಕ್ಷಿಸುತ್ತ ಬಂದು ಇನ್ನೊಂದು ವರ್ಷ ಕಳೆಯುವುದರೊಳಗಾಗಿ ಬಿಳಿಗಿರಿರಾಯ ಪೂರ್ತಿ ನಿಧಿ ಕಳೆದುಕೊಂಡು ಪಾಪರಾಗಿ ಸಾಮಾನ್ಯ ಪ್ರಜೆಯಾಗಿದ್ದ. ಚೆಲುವರಾಯನ ತಂಗಿ ಅಂದರೆ ಇಲ್ಲಿ ಚಿಕ್ಕ ರಾಣಿಯಾಗಿದ್ದ ಚಿಕ್ಕಮ್ಮಣ್ಣಿ ಅಣ್ಣನ ಸ್ಥಿತಿ ನೋಡಿ ಪ್ರತಿಭಟಿಸಿದಳು. ಇದರಿಂದಾದ ಪ್ರಯೋಜನವೆಂದರೆ ಸೈನ್ಯ ಪಡೆಯ ಉಳಿದ ಜನ ಮಾಯವಾಗಲಿಲ್ಲ. ಚೆಲುವರಾಯನ ಸೇವೆ ಮಾಡಿಕೊಂಡು ಅಲ್ಲೇ ಇದ್ದರು.

## ಹದಿನೈದು

ಒಂದು ದಿನ ಮೂಲಿಕೆ ಹುಡುಕುತ್ತ ಅರ್ಥಕೌಶಲನೊಂದಿಗೆ ಬೋಳುಗುಡ್ಡದ ಮೇಲೆ ಹೋಗಿದ್ದ ಶಿಖರಸೂರ್ಯ ಅಲೆದಾಡುತ್ತ ಗುಡ್ಡದ ನೆತ್ತಿಗೆ ಬಂದ. ಹಾಗೇ ಮುಂದೆ ಬಂದಂತೆ ಕೆಳಗಡೆ ನದಿ, ಕನಕಪುರಿ ಕಂಡವು. ಶಿಖರಸೂರ್ಯ ತಕ್ಷಣ ಕುದುರೆಯಿಂದಿಳಿದು, ಅದನ್ನಲ್ಲೇ ಬಿಟ್ಟು ಗುಡ್ಡದ ತುದಿತನಕ ಬಂದು ಬೆರಗಾಗಿ ನಗರ ಮತ್ತು ಅದರ ಸುತ್ತಲ ಪ್ರದೇಶವನ್ನು ನೋಡುತ್ತ ನಿಂತ. ಬೋಳುಗುಡ್ಡದ ಕೆಳಭಾಗವೇ ಅಲ್ಲದೆ ಇಡೀ ಕೊಳ್ಳ ಅತ್ಯಾಚಾರಕ್ಕೊಳಗಾದ ಹೆಂಗಸಿನಂತೆ ಅಸ್ತವ್ಯಸ್ತ ಬಿದ್ದುಕೊಂಡಿತ್ತು. ನದಿಯಾಚೆ ಕೊಳ್ಳದಲ್ಲಿ ಅಲ್ಲಲ್ಲಿ ಅಗಿದು ಬಿಟ್ಟ ತಗ್ಗುಗಳು, ಅವುಗಳಲ್ಲಿ ನೀರು ತುಂಬಿದ ಹೊಂಡಗಳು ಬೇಕಾದಷ್ಟಿದ್ದವು. ಸಾಲದ್ದಕ್ಕೆ ನಗರದ ಎಡಬದಿಯ ತೋಟಗದ್ದೆಗಳಲ್ಲೂ ಕೆಲವು ಕೆಮ್ಮಣ್ಣಿನ ತಗ್ಗುಗಳಿದ್ದವು. ನದಿಯಿದೆ, ಚಲನಶೀಲವಾಗಿದೆಯೆಂದು ಅನ್ನಿಸುತ್ತಿರಲಿಲ್ಲ. ಹಸಿರಿದೆ, ಬಾಡಿತ್ತು. ಹಕ್ಕಿ ಹಾರುತ್ತಿದ್ದವು, ಹಾಡುತ್ತಿರಲಿಲ್ಲ. ಕೆಳಗೆ ಮನುಷ್ಯರ ಸುಳಿವೇನೋ ಇತ್ತು. ಆದರೆ ಎತ್ತರದಿಂದ ನೋಡಿದವರಿಗೆ ಅವರು ನಡೆದಾಡುವಂತೆ ಕಾಣುತ್ತಿರಲಿಲ್ಲ. ಮೆಲ್ಲಗೆ ಸರಿದಂತೆ, ಅಥವಾ ಎಳೆಯಲ್ಪಡುವವರಂತೆ ಕಾಣುತ್ತಿದ್ದರು. ನದಿಯಾಚೆ ಬದಿಯಲ್ಲಿ ಗದ್ದೆಗಳು, ತೋಟಗಳು ಹಸಿರಾಗಿ ಹೊಳೆಯುತ್ತಿದ್ದವು. ಅವುಗಳ ಪಕ್ಕ ಬಿಳಿ ಹಸುಗಳು, ಮರಿಯಾನೆಯಂಥ ಎಮ್ಮೆಗಳು ಮೇಯುತ್ತಿದ್ದವು. ನದಿಯ ನೀರಿನಲ್ಲಿ ನೀಲಿ ಆಕಾಶ ಪ್ರತಿಫಲಿಸಿತ್ತು. ಆದರೆ ಅದೂ ಹಸನಾಗಿರಲಿಲ್ಲ. ಗಾಳಿ ಕೂಡ ನಿರ್ಮಲವಾಗಿರಲಿಲ್ಲ. ಬೆಟ್ಟದಲ್ಲಿ ಕೂಡ ಹೆಸರಿಸಲಾಗದ ತೆಳು ವಾಸನೆಗಳಿಂದ ಕೂಡಿದ, ಪರಾಗಕ್ಕಿಂತ ಸೂಕ್ಷ್ಮವಾದ ಧೂಳು ಅಲ್ಲಿಯ ಹಸಿರನ್ನು ಬಿಳಿಚಿಕೊಳ್ಳುವಂತೆ ಮಾಡಿತ್ತು. ಕೆಳಗೆ ದೂರದಲ್ಲಿ ಒಂದೊಂದು ಕೆಂಪು ಹೆಂಚಿನ ಮನೆಗಳು ಕಾಣಿಸುತ್ತಿದ್ದವು. ಈ ಕಡೆ ಸೂರ್ಯಾಸ್ತದ ಬಿಸಿಲು ಬಿದ್ದು ಅರಮನೆಯ ಕಿಡಿಕಿಗಳು ಉರಿವ ಬೆಂಕಿಯ ಹಾಗೆ ಕಾಣುತ್ತಿದ್ದವು. ಅರಮನೆಯ ತರುಮರಗಳ ಹಸಿರಿಗೆ ಚಿನ್ನದ ಬಣ್ಣವೇರಿ ಫಳಫಳ ಹೊಳೆದು ಕಣ್ಣು ಕುಕ್ಕುತ್ತಿದ್ದವು. ಆದರೆ ಅರಮನೆಯಲ್ಲಿ, ಅಷ್ಟು ದೊಡ್ಡ ಕಟ್ಟಡದಲ್ಲಿ ಯಾರೂ ವಾಸವಾಗಿಲ್ಲವೆಂಬಂತೆ ಬಣಗುಡುತ್ತಿದ್ದುದರಿಂದ ನೋಡಿ ಹಳಹಳಯಾಯಿತು. ಇಲ್ಲೆಲ್ಲೂ ಬೆರಗಿನ ನೋಟವಿಲ್ಲವಲ್ಲ! ಈ ವೈದ್ಯನೇನು ಕಂಡ! ಎಂದುಕೊಂಡು ಅರ್ಥಕೌಶಲನೂ ಬಂದು ಶಿಖರಸೂರ್ಯನ ಪಕ್ಕದಲ್ಲಿ ನಿಂತುಕೊಂಡು ಕೇಳಿದ:

"ಏನಯ್ಯಾ ಮಿತ್ರಾ, ಏನು ಸೋಜಿಗ ಕಂಡೆ?"

"ಅದ್ಯಾಕೆ ಇಷ್ಟೊಂದು ತಗ್ಗುಗಳು, ಕುಳಿಗಳು ಇಲ್ಲಿವೆ ಪ್ರಧಾನಿಗಳೆ?"

"ಇವೆಲ್ಲ ಚಿನ್ನದ ಗಣಿಗಳಪ್ಪಾ! ಸಾಮಾನ್ಯವೇ? ಕನಕಪುರಿಗೆ ಬಂದು ಕನಕದ ಗಣಿಯ ವಿಷಯ ತಿಳಿಯದಿದ್ದರೆ ಹ್ಯಾಗೆ? ಕೊಳ್ಳದಲ್ಲಿರೋವೆಲ್ಲ ವರ್ತಕರ ಗಣಿಗಳು. ವರ್ತಕರು ಎಂದಿದ್ದರೂ ಚಿನ್ನದ ಬೆನ್ನು ಹತ್ತಿ ಹೋಗುವವರೆಂದೇ ಅನ್ನೋಣ!-ಆಚೆ ಗದ್ದೆ ತೋಟಗಳಲ್ಲೂ ತೋಡಿದ್ದಾರೆ ನೋಡು ರೈತರು! ರೈತರಿಗೂ ಚಿನ್ನದ ರುಚಿ ಹತ್ತಿಬಿಟ್ಟಿತಣ್ಣಾ! ರೈತರೂ ಬಂಗಾರಮ್ಮನ ಒಕ್ಕಲಾಗಿ ಅಗಿಯತೊಡಗಿದರು. ಇಬ್ಬರಿಗೂ ಸಿಕ್ಕಿದ್ದು ಬರೀ ಮಳಲಷ್ಟೆ."

ಶಿಖರಸೂರ್ಯ ಅವನ ಮಾತು ಕೇಳಿ ನಕ್ಕ, ಆದರೆ ಅರ್ಥಕೌಶಲ ಬಿಡಲಿಲ್ಲ. ಅವನ ಭುಜದ ಮೇಲೆ ಕೈಯೂರಿ ಹೇಳಿದ:

"ಇಡೀ ಪ್ರಪಂಚ ಕನಕಪುರಿಯೆಂಬ ನಗರವಾಗಿ ಹೊಸ ನಾಗರಿಕತೆಯೊಂದು ಹುಟ್ಟುತ್ತಿರುವ ದರ್ಶನ ನಿನಗಾಗುತ್ತಿಲ್ಲವೆ? ಇತಿಹಾಸದ ಹಳೇ ಚಕ್ರ ತನ್ನೊಂದು ಸುತ್ತು ಮುಗಿಸಿಯಾಯ್ತು ಮಾರಾಯ; ಈಗ ಸುರುವಾಗಿರೋದು ಹೊಸ ಸುತ್ತು. ಹೊಸ ಒತ್ತಡಗಳಿಂದ ಉಂಟಾಗುತ್ತಿರುವ, ಹೊಸದೊಂದು ನಾಗರಿಕತೆಯ ಪ್ರಾರಂಭ ಕಾಣಿಸುತ್ತಿಲ್ಲವೆ? ಬ್ರಾಹ್ಮಣ, ಕ್ಷತ್ರಿಯರ ಕಾಲ ಮುಗಿದು ಈಗ ವೈಶ್ಯಯುಗ ಸುರುವಾಗಿದೆಯಣ್ಣಾ!

ಹಿಂಗಂದು ಶಿಖರಸೂರ್ಯನ ಮೇಲೆ ತನ್ನ ಮಾತಿನ ಪ್ರಭಾವ ಹ್ಯಾಗಾಯಿತೆಂದು ಪರೀಕ್ಷಿಸಿದ. ಅವನಿನ್ನೂ ನಗರದ ಮೇಲಿನ ಕಣ್ಣು ಕಿತ್ತರಲಿಲ್ಲ. ಇವನು ಮುಂದುವರಿಸಿದ:

"ಹೊಸನಾಗರಿಕತೆಯಲ್ಲಿ ಎಲ್ಲವೂ ಸ್ಥಳ ಬದಲಿಸುತ್ತವೆ. ಧರ್ಮಗಳು ರಾಜರು, ಕಳ್ಳರು, ದೇವರು, ಸ್ವರ್ಗನರಕಗಳು, ಪ್ರೇಮ, ಪ್ರೀತಿ, ಶಿಕ್ಷಣ ಎಲ್ಲ ಎಲ್ಲವೂ ಸ್ಥಳ ಬದಲಾಯಿಸುತ್ತವೆ. ಅವನ್ಯಾವನೋ ಶಿವಪಾದನಂತೆ...."

ತಕ್ಷಣ ಶಿಖರಸೂರ್ಯ ಇವನನ್ನ ಭಯ ಮತ್ತು ಇರಿವ ಕಣ್ಣಿಂದ ನೋಡಿದ. ಯಾಕೆಂದು ಅರ್ಥಕೌಶಲನಿಗೆ ಹೊಳೆಯಲಿಲ್ಲ. ತನ್ನ ಪಾಡಿಗೆ ತಾನು ಮಾತು ಮುಂದುವರೆಸಿದ:

"ಅವನು ಕಳೆದ ನಾಗರಿಕತೆಯ ಕೊನೆಯ ಕವಿ. ಹಳೆಯ ನಾಗರಿಕತೆಯ ದೊಡ್ಡ ಕನಸಿಗೆ ಮತ್ತು ಸೋಲಿಗೆ ಸಾಕ್ಷಿಯಾಗಿರುತ್ತ ಅದರ ತೂಕ ಮಾಡೋದಕ್ಕೆ ಪ್ರಯತ್ನ ಮಾಡಿದ. ಕೊನೆಗೆ ಹೊಸ ನಾಗರಿಕತೆಯ ಹೊಸ್ತಿಲಿಗೆ ಬಂದು ಅಮ್ಮಾ ಅಂತ ಕೂತ!"

'ಇವನಿಗೆ ಶಿವಪಾದ ಹ್ಯಾಗೆ ಗೊತ್ತು? ಗೊತ್ತಿದ್ದರೆ ಎಷ್ಟು ಗೊತ್ತು? ತಾನು ಅಲ್ಲಿಂದ ಓಡಿಬಂದದ್ದು ಇವನಿಗೆ ಗೊತ್ತಿರಬಹುದೆ? ಎಂದೆನಿಸಿ ಶಿಖರಸೂರ್ಯನಿಗೆ ಚಿಂತೆಯಾಯಿತು. ಆದರದನ್ನು ಕಿಂಚಿತ್ತೂ ತೋರಿಸಿಕೊಳ್ಳದೆ ಶಿವಪಾದನ ಬಳಿಗೆ ಬೇಕಾದಷ್ಟು ಜನ ಬರುತ್ತಾರೆ ಹೋಗುತ್ತಾರೆ. ಆದರೆ ಆತ ಇಂಥ ಖ್ಯಾತಿಯವನೆಂದು, ಅರ್ಥಕೌಶಲ ಹೇಳುವಮತೆ ಒಂದು ಪರ್ಯಾಯ ವ್ಯವಸ್ಥೆಯ ಪ್ರತಿನಿಧಿಯೆನಿಸುವಷ್ಟು ದೊಡ್ಡವನೆಂದು ಗೊತ್ತಿರಲಿಲ್ಲ. ಅಥವಾ ಅವನೇ ಬೇರೆ, ಈ ಶಿವಪಾದನೇ ಬೇರೆ ಇರಬಹುದೇ? ಎಂದು ಯೋಚಿಸುತ್ತ ಅರಿವು ಹಾರಿ,

"ನನಗೇನೋ ಅನುಮಾನವೇ" ಅಂದ ದೊಡ್ಡ ದನಿಯಲ್ಲಿ.

"ಅದ್ಯಾಕಣ್ಣಾ ಅನುಮಾನ? ಹಳೇ ಆಸೆಗಳ ಆಮಿಷಕ್ಕೆ ಬಲಿಯಾಗಬೇಡ ಮಿತ್ರಾ. ಅವುಗಳ ಅಸಂಗತ ಆಸೆಗಳನ್ನ ಈಡೇರಿಸಲಿಕ್ಕಾಗುತ್ತ? ದೇವರಂತೆ, ಸ್ವರ್ಗವಂತೆ ನರಕವಂತೆ... ಒಬ್ಬೊಬ್ಬರಿಗೆ ಒಂದೊಂದು ಥರ ಕಾಣಿಸುವ ಅಂಥ ಕಲ್ಪನೆಗಳನ್ನು ನಿಯಂತ್ರಿಸಲಿಕ್ಕಾದೀತೆ? ಅಣ್ಣಾ ಶಿಖರಸೂರ್ಯನೇ ಅವನ್ನೆಲ್ಲಾ ಅವುಗಳ ಸ್ಥಾನದಲ್ಲಿ ಕೂರಿಸಬೇಕಣ್ಣಾ!"

"ಶಿವಪಾದ ಇಲ್ಲಿಗೆ ಬಂದಿದ್ದನ?"

"ಅವನ್ಯಾಕೆ ಬರ್ತಾನೆ ಅವನಮ್ಮನ್ನ ಬಿಟ್ಟು? ಅವನ ಚೇಲಾ ಒಬ್ಬ ಬಂದಿದ್ದ, ಪಂಡಿತ. ಮಹಾರಾಜರು ವಾಕ್ಯಾರ್ಥ ಏರ್ಪಡಿಸಿದರು. ಎದುರಿಗೊಂದು ಬೆದರು ಇರಲಿ ಅಂತ ನಮ್ಮವನೊಬ್ಬನನ್ನು ತಯಾರು ಮಾಡಿದೆವು. ಇಬ್ಬರೂ ವಾದ ಪ್ರತಿವಾದ ಮಂಡಿಸಿದರಪ್ಪ. ಆತ ಬೆರಿಕಿ. ಈ ನಗರ ಈಗ ರೂಪುಗೊಳ್ಳುತ್ತಿರುವ ಪರಿಗೆ ಬೆರಗಾಗಿ ಇದಕ್ಕೆ ಪರ್ಯಾಯ ಅಂತ ಶಿವಾಪುರ, ಶಿವಪಾದ, ಅವರಮ್ಮನ ವಿಷಯ ಹೇಳಿದ...."

ಬೇಗ ಹೇಳಲೆಂದು ಒತ್ತಾಯಿಸಲು "ಮುಂದೆ?" ಅಂದ ಶಿಖರಸೂರ್ಯ.

"ನಮ್ಮವನು ನಾವಂದುಕೊಂಡ ಹಾಗೆ ಬೆಬ್ಬೆಬ್ಬೆ ಅಂತ ಬೆವರು ಸುರಿಸಿದ. ಆಮ್ಯಾಲೆ ಯಾರಾದರೂ ಪ್ರಶ್ನೆ ಕೇಳಬಹುದು ಅಂತಾಯ್ತು. ಯಾರೂ ಏಳಲಿಲ್ಲಯ್ಯ. ಕೊನೆಗೊಬ್ಬ ಮೇಧಾವಿ ಎದ್ದ ನೋಡು! ಯಾರು ಗೊತ್ತ"

"ಯಾರು?"

"ನಾನೇ!"

"ಭಲೆ! ನೀವೇನು ಹೇಳಿದಿರಿ ಪ್ರಧಾನಿಗಳೆ?"

"ಹೇಳಿದೆ: ಒಂದು ಮಾತು ಹೇಳಲ ಪಂಡಿತನೆ? ಈ ಪ್ರಪಂಚದಲ್ಲಿ ಚಿನ್ನ ಬಿಟ್ಟು ಉಳಿದದ್ದೆಲ್ಲಾ ಸೆಗಣಿ! ನಮ್ಮ ಕೈಲಿರೋದು ಸೆಗಣಿ ಅಂತ 'ಒಪ್ಪಿಕೊಳ್ಳೋದಕ್ಕೆ ನಮಗೆ ಮನಸ್ಸಿಲ್ಲ. ಅದಕ್ಕೆ ಏನೇನೋ ಹೆಸರಿಡ್ತೇವಿ: ಸದ್ಗುಣ ಅಂತೀವಿ, ಗೌರವ ಅಂತೀವಿ. ಆತ್ಮ ಪರಮಾತ್ಮ ಅಂತೀವಿ. ಮೌಲ್ಯ ಅಂತೀವಿ, ಸಂಸ್ಕೃತಿ ಮಣ್ಣು ಮಸಿ ಅಂತೀವಿ....

ಅಷ್ಟರಲ್ಲಿ ಆ ಪಂಡಿತ

'ಸೆಗಣಿ ವ್ಯವಹಾರದಲ್ಲಿ ವರ್ತಕರಾದ ನಿಮ್ಮ ಪಾತ್ರವೇನು ಮಹಾಶಯರೆ?" ಅಂದ ವ್ಯಂಗ್ಯವಾಗಿ.

ನನಗೆ ವ್ಯಂಗ್ಯ ಹೇಳಿಕೊಡ್ತಾನ ಇವನು? ಹೇಳಿದೆ:

ಇಷ್ಟೆ ಪಂಡಿತನೆ: ಸೆಗಣಿ ತಿನ್ನಬಾರದು. ಇನ್ನೊಬ್ಬರಿಗೆ ತಿನ್ನಿಸಬೇಕು. ಆದರೆ ಹ್ಯಾಗೆ ತಿನ್ನಿಸಬೇಕು? ಅಂದರೆ ಅದನ್ನವರು ಅದು ಪಾಯಸ ಅಂತ ತಿಳಿದುಕೊಂಡು ತಿಂದಿರಬೇಕು!

ಅದು ಹ್ಯಾಗೆ ಸಾಧ್ಯ? ಹ್ಯಾಗಂದರೆ ನಯ, ನಾಜೂಕು, ಸಂಗೀತ, ನೃತ್ಯ, ಮಾತು, ಬಣ್ಣ... ಇತ್ಯಾದಿ ಸಂಸ್ಕೃತಿಯ ಮಸಾಲೆಗಳನ್ನೆಲ್ಲಾ ಬೆರೆಸಿ ಕೊಡಬೇಕು!

ಇದು ನಿಮ್ಮ ಶಿವಾಪುರಕ್ಕೆ ಪರ್ಯಾಯವಾದ ಕನಕಪುರಿ!"

ಶಿಖರಸೂರ್ಯನಿಗೆ ಈ ವಾದ ಸಮ್ಮತವೆನ್ನಿಸಿ ಮೆಚ್ಚುಗೆಯಿಂದ "ಅಬ್ಬಾ!" ಅಂದ. ಅರ್ಥಕೌಶಲ ಉಬ್ಬಿ ಮುಂದುವರೆಸಿದ :

"ನಿಜ ಹೇಳ್ತೀನಯ್ಯಾ ವೈದ್ಯ ಮಿತ್ರಾ. ನನ್ನ ಮಾತು ಕೇಳಿ ಶಿವಾಪುರ ಪಂಡಿತ ಆವಾಕ್ಕಾದ! ನಾನಿಷ್ಟು ಒರಟಾಗಿ ಮಾತಾಡಲಿಲ್ಲ ಅಂತಿಟ್ಟುಕ, ಎದುರಿಗೆ ಮಹಾರಾಜರಿದ್ದರು ನೋಡು. ಆದರೂ ಆಸಾಮಿ "ಸರಿ ಸ್ವಾಮಿ" ಅಂತ ಮಾತೆಳೆದು ಮಾಯವಾದವನು, ಆಮೇಲ ಅವನ ದರ್ಶನ ಆಗಲೇ ಇಲ್ಲವೆ!"

"ಭಲೆ ಪ್ರಧಾನಿಗಳೆ! ಮೆಚ್ಚಿಕೊಂಡೆ ನಿಮ್ಮ ವಾದವನ್ನ!"

"ಹಾಗೆ ಬಾ ದಾರಿಗೆ."

ಈಗ ಶಿಖರಸೂರ್ಯ ಶಿವಪಾದನ ಭಯದಿಂದ ಮುಕ್ತನಾದ. ಅವರ್ಯಾರಾದರೂ ಬಂದರೆ ಅರ್ಥಕೌಶಲನ ಮೂಲಕ ನಿವಾರಿಸಬಹುದೆಂಬ ವಿಶ್ವಾಸ ಮೂಡಿತು. ಕೇಳಿದ:

"ಇಲ್ಲಿಗೆ ಅವರು ಆಗಾಗ ಬರುವುದುಂಟಾ?"

"ಕಡಿಮೆ, ಇಲ್ಲಿ ಯಾರೂ ಅವರ ಒಕ್ಕಲಿಲ್ಲ."

"ಶಿವಪಾದ ಇರೋದೆಲ್ಲಿ?"

"ಎಂಥದೋ ಶಿವಾಪುರವಂತೆ."

"ನೀವು ಅಲ್ಲಿಗೆ ಹೋಗಿದ್ದಿರ?"

"ವರ್ತಕರ್ಯಾಕೆ ಅಲ್ಲಿಗೆ ಹೋಗುತ್ತಾರೆ, ವೈದ್ಯನೆ? ಅವನೇನೋ ಅಹಿಂಸೆ ಅಂತಾನೆ. ಧರ್ಮ ದೇವರು ಅಂತಾನೆ, ತಾಯಿ ಅಂತಾನೆ. ಎಲ್ಲವೂ ನಮ್ಮ ಕನಕಪುರಿಗೆ ವಿರೋಧವಾದ ಮಾತುಗಳೇ, ಅವನ್ನಿಟ್ಟುಕೊಂಡು ನಾವು ಬದುಕಲಿಕ್ಕಾಗುತ್ತ?"

"ಇಲ್ಲಿಂದ ಶಿವಪುರ ಎಷ್ಟು ದೂರ?"

"ನನಗೆ ಗೊತ್ತಿಲ್ಲ, ಗೊತ್ತಿದ್ದವರಿದ್ದಾರೆ."

ಎಂದು ಹೇಳಿ ಅವನ ಆಸಕ್ತಿಗಾಗಿ ಆಶ್ಚರ್ಯ ತಳೆದು ಅವನ ಮುಖವನ್ನೇ ನೋಡಿದ. ಅಷ್ಟರಲ್ಲಿ ಬಂಟನೊಬ್ಬ ಕುದುರೆ ಓಡಿಸುತ್ತ ಬಂದು ಅನತಿ ದೂರದಲ್ಲಿ ಕೆಳಗಿಳಿದು ಪ್ರಧಾನಿಗೆ ನಮಸ್ಕಾರವನ್ನಾಚರಿಸಿದ. ಪಕ್ಕಕ್ಕೆ ಹೋಗಿ ಇವನಿಗೆ ತಿಳಿಯದಂತೆ ಒಂದೆರಡು ಮಾತಿನಲ್ಲಿ ವಿಷಯ ತಿಳಿಸಿ ಹೋದ. ಇವರೂ ಹೊರಟರು.

## ಹದಿನಾರು

ಹಾಲಿನ ಕೆನೆವರ್ಣ ಬಳಿದ ಹಜಾರದಲ್ಲಿ ಚಿಕ್ಕರಾಣಿ ನಿಧಾನವಾಗಿ ನಡೆಯುತ್ತ ಬಂದಳು. ಇಳಿಹೊತ್ತಿನ ಮಾಗಿದ ಬಿಸಿಲು ಪಡುವಣದ ಕಿಡಿಕಿಡಿಗಳ ಮೂಲಕ ಹಜಾರದ ಕೆಲವು ಭಾಗಗಳನ್ನಾಕ್ರಮಿಸಿ ಅಲ್ಲಿದ್ದ ಕಂಬಗಳಿಗೆ ಚಿನ್ನದ ಮೆರುಗು ಕೊಟ್ಟಿತ್ತು. ಮಾಗಿಯ ಕೊನೆಗಾಲದ ಹವೆ ಬೆಚ್ಚಗಿತ್ತು. ಉದ್ಯಾನದ ಹೂಗಳ ಪರಿಮಳ ಹಜಾರದ ತುಂಬ ವಿರಳವಾಗಿ ಪಸರಿಸಿತ್ತು. ಅಂಗಳದಲ್ಲಿ ಕೆಂಪು ಹೂ ಮುಡಿದ ತರುಣ ಗಿಡಗಳು ತಲೆ ಎತ್ತಿ ಎಳೆಬಿಸಿಲಲ್ಲಿ ಹೊಳೆಯುತ್ತಿದ್ದವು. ಚಿಕ್ಕಮ್ಮಣ್ಣಿಗೆ ಇವತ್ತು ವಿಚಿತ್ರವಾದ ನಂಬಿಕೆ ಮತ್ತು ಆತ್ಮವಿಶ್ವಾಸ ಬಂದುಬಿಟ್ಟಿತ್ತು. ಇದಕ್ಕೆ ಮಹಾರಾಜರ ಆರೋಗ್ಯ ವಾಪಸಾದದ್ದು ಒಂದು ಕಾರಣವಾದರೆ ಇನ್ನೊಂದು ಅವಳ ಉಳಿದೆಲ್ಲ ಕನಸುಗಳು ನನಸಾಗುವ ಶಕುನಗಳನ್ನು ಕಂಡಿದ್ದಳು.

ಹದಿನಾರು ವರ್ಷಗಳ ಹಿಂದೆ ಬಿಳಿಗಿರಿಯ ಚೆಲುವರಾಯ ತಂಗಿ ವಿನಯವತಿಯನ್ನು ಕನಕಪುರಿಯ ಮಹಾರಾಜ ಗುಣಾಧಿಕ್ಯನಿಗೆ ಧಾರೆಯೆರೆದು ಕೊಟ್ಟಾಗ ಮಹಾರಾಣಿ ಇವಳನ್ನು ಸ್ವಾಗತಿಸಲು ಬರಲೇ ಇಲ್ಲ. ಮುಂದೊಂದು ವಾರವಾದ ಮೇಲೆ ಇಬ್ಬರ ಮುಖಾಮುಖಿಯಾಯಿತು. ಪಟ್ಟು ಹಿಡಿದು ಹಕ್ಕುದಾರಿಕೆ ಕೇಳದ ಚಿಕ್ಕರಾಣಿಯ ಮೃದು ಸ್ವಭಾವ, ಜಗಳವಾಡದ ಸಾತ್ವಿಕ ಗುಣ-ಇವು ಮಹಾರಾಣಿಗೆ ಇಷ್ಟವಾದವು. ಅವಳೇ ದಯಮಾಡಿ ನಾಲ್ಕನೇ ಸೌಧದ ಅಂತಃಪುರದ ಒಂದು ಚಿಕ್ಕ ಕೋಣೆಯನ್ನು ಬಿಟ್ಟುಕೊಟ್ಟಳು.

ಮೊದಲ ನೋಟದಲ್ಲಿಯೇ ಚಿಕ್ಕರಾಣಿ ಮಹಾರಾಣಿಗೆ ಹೆದರಿ ಬಿಟ್ಟಳು. ಆತ್ಮವಿಶ್ವಾಸದಿಂದ ಬೀಗುವ ಗೋಧಿಬಣ್ಣದ ಮುಖದಲ್ಲಿ ನೀಳವಾದ ಮೂಗು, ರಂಗು ಹಚ್ಚಿದ ಕೆಂದುಟಿ, ನಕ್ಕಾಗ ಕಾಣಿಸುವ ಸುಂದರವಾದ ದಂತಪಂಕ್ತಿ, ಹೊಳೆವ ಕಣ್ಣು ಮತ್ತು ಸಮೃದ್ಧ ಕೂದಲ ರಾಶಿಯಿಂದಾಗಿ ಮಹಾರಾಣಿಯನ್ನು ಯಾರು ಕಂಡರೂ ಕೊಂಚ ಹಿಂಜರಿಯುತ್ತಿದ್ದರು. ಮಕ್ಕಳಿಗಂತೂ ಇಷ್ಟವಾಗುವ ಆಕಾರವಲ್ಲ ಅದು. ಆಕೆಯ ಮಾತಿನಲ್ಲಿ ಯಾರನ್ನೂ ಒಲಿಸಿಕೊಳ್ಳುವ ಅಥವಾ ಮೆಚ್ಚಿಸುವ ಆತುರ ಇರುತ್ತಿರಲಿಲ್ಲ. ಎಲ್ಲರೂ ತನ್ನ ಮಾತನ್ನು ಆಲಿಸುತ್ತಿದ್ದಾರೆಂಬ ಖಾತ್ರಿಯಿಂದಲೇ ಮಾತಾಡುತ್ತಿದ್ದಳು ಮತ್ತು ಪರರ ಬಗ್ಗೆ ಅವಳ ಮಾತಿನಲ್ಲಿ ತಾತ್ಸಾರವಿರುತ್ತಿತ್ತು. ಮಾತಾಡುವಾಗ ಯಾರೂ ತನ್ನ ಅಂತರಂಗದಲ್ಲಿ ಇಣಿಕಿ ಹಾಕದಂತೆ ಎಚ್ಚರಿಕೆ ವಹಿಸುತ್ತಿದ್ದಳು. ಓದಿಕೊಂಡಿದ್ದಳು ಮತ್ತು ವಾದಕ್ಕೆ ನಿಂತರೆ ಸಮರ್ಥನೆಗಾಗಿ ಬೇಕಾದ ಗ್ರಂಥ ಮತ್ತು ಆಧಾರ ತರ್ಕಗಳನ್ನು ಬಳಸಬಲ್ಲವಳಾಗಿದ್ದಳು. ಅಲ್ಲದೆ ದನಿಯಲ್ಲಿ ಭಾವಕ್ಕೆ ತಕ್ಕಂತೆ ಏರಿಳಿವು ಮಾಡದೆ ಆಜ್ಞೆಗಳ ಧಾಟಿಯಲ್ಲಿ ಮಾತಾಡುತ್ತಿದ್ದಳು. ತಾನು ಅರ್ಥಕೌಶಲನ ಸಂಬಂಧಿಯೆಂಬ, ರಾಜನ ವಂಶಾವಳಿಗೆ ಬಳುವಳಿಯಾಗಿ ಆದಿತ್ಯಪ್ರಭನನ್ನು ಹೆತ್ತುಕೊಟ್ಟ ತಾಯಿಯೆಂಬ ನಿಶ್ಚಿಂತೆಯಿಂದ ಇದ್ದಳಾಗಿ ಮಹಾರಾಜ ವಿನಯವತಿಯನ್ನು ಚಿಕ್ಕರಾಣಿಯಾಗಿ ಮದುವೆಯಾದುದಕ್ಕೆ ಅವಳಿಗ್ಯಾವ ಆತಂಕಗಳೂ ಇರಲಿಲ್ಲ.

ಮಹಾರಾಣಿಯ ಕೈಯಲ್ಲಿ ಸದಾ ಒಂದು ನಾಯಿ ಮರಿ ಇರುತ್ತಿತ್ತು. ಒಮ್ಮೊಮ್ಮೆ ಮರಿಯ ತಾಯಿಯೂ ಆಕೆಯ ಜೊತೆಗಿರುತ್ತಿತ್ತು. ಅವಳ ಪಾಡಿಗವಳನ್ನು ಶ್ವಾನ ಸ್ನೇಹದಲ್ಲಿ ಬಿಟ್ಟು ಉಳಿದವರು ನೆಮ್ಮದಿಯಿಂದ ಇದ್ದರು.

ಮಹಾರಾಜನ ಚಿಕ್ಕ ಮಡದಿಯಾಗಿ ಬಂದ ವಿನಯವತಿ ಇಲ್ಲಿ ಚಿಕ್ಕಮ್ಮಣ್ಣಿಯಾದಳು. ಎಲ್ಲರೂ ತನ್ನನ್ನು ನೋಡಿ ಮರುಗುತ್ತಿರುವಂತೆ, ತನಗೆ ಅನುಕಂಪ ತೋರಿಸುತ್ತಿರುವಂತೆ ಅನ್ನಿಸಿ ತಾನು ಈ ಸಂದರ್ಭದಲ್ಲಿ ಅಪಮೇಳವಾದೆನೆಂದು ಭಾವಿಸಿದಳು. ಮೊದಮೊದಲು ಮಹಾರಾಣಿ ಮತ್ತವಳ ಪರಿವಾರದೊಂದಿಗೆ ಮಾತುಗಳಲ್ಲಿ ಭಾಗವಹಿಸಲು ಮಾಡಿದ ಅವಳ ಪ್ರಯತ್ನಗಳು ವಿಫಲವಾದವು. ಮಹಾರಾಣಿ ಅವಳ ಮಾತುಗಳನ್ನು ನಿರ್ಲಕ್ಷ್ಯದಿಂದ ತಳ್ಳಿಹಾಕುತ್ತಿದ್ದಳು. ಮಹಾರಾಣಿಯ ಮಾತುಗಳಲ್ಲಿ ಜಾಣತನ, ಪ್ರಾಸ, ಸಂಗೀತ ಇರುತ್ತಿತ್ತು. ಕುಚೋದ್ಯವಂತೂ ಬೇಕಾದಷ್ಟು ಇರುತ್ತಿತ್ತು. ಆತ್ಮೀಯತೆ ಮಾತ್ರ ಎಳ್ಳಷ್ಟೂ ಇರುತ್ತಿರಲಿಲ್ಲ. ಅವಳ ಆತ್ಮೀಯತೆ ಏನಿದ್ದರೂ ನಾಯಿಗಳಿಗೆ ಮೀಸಲು, ರಾಜನಿಗೂ ಅದರಲ್ಲಿ ಪಾಲಿರಲಿಲ್ಲ. ಇದೇ ಕಾರಣವಾಗಿ ಚಿಕ್ಕಮ್ಮಣ್ಣಿಗೆ ರಾಜನ ಪ್ರೀತಿ ಆಸರೆಯಾಗಿ ಸಿಕ್ಕಿತು. ರಾಜ ಕ್ಷತ್ರಿಯ ಕನ್ಯೆಯನ್ನು ಮದುವೆಯಾದುದರಿಂದ ಕುಲಗೆಟ್ಟನೆಂದೇ ಮಹಾರಾಣಿ ದೂರುತ್ತಿದ್ದಳು. ಚಿಕ್ಕಮ್ಮಣ್ಣಿ ಮಾತ್ರ ರಾಜನಿಗೂ ಸೇವಕರಿಗೂ ಅಚ್ಚುಮೆಚ್ಚಿನವಳಾಗಿ ಛಾಯಾದೇವಿ, ತರುಣಚಂದ್ರರನ್ನು ಹೆತ್ತು ಅರಮನೆಯನ್ನ ಬೆಳ್ದಿಂಗಳಿಂದ ತುಂಬಿಬಿಟ್ಟಳು.

ತರುಣಚಂದ್ರ ಚಂದ್ರನಿಗಿಂತ ಹೆಚ್ಚಲ್ಲ ಕಮ್ಮಿಯಲ್ಲ. ಬಿಳಿಯ ಹಲ್ಲುಗಳನ್ನು ಪ್ರದರ್ಶಿಸುತ್ತ ತೇವವಾದ ಮತ್ತು ಮೃದುವಾದ ತುಟಿಗಳಿಂದ ಮಂಜುಳ ಧ್ವನಿಯಲ್ಲಿ ಗಾಗೂ ತೊದಲುತ್ತ ಇಡೀ ವಾತಾವರಣಕ್ಕೆ ವಿಶೇಷ ಕಳೆ ತರುತ್ತಿದ್ದ. ಆ ಪುಟ್ಟ ಸುಕುಮಾರ ಬಾಲಕನನ್ನು ಯಾವಾಗ ಕಂಡರೂ ಯಾರೂ ಕಂಡರೂ ಅವರ ಭಾವಶ್ರೀಮಂತಿಕೆ ಹೆಚ್ಚುತ್ತಿತ್ತು. ಇತ್ತ ಮಹಾರಾಣಿಗೂ ಅವನೆಂದರೆ ಆಶ್ಚರ್ಯವೇ. ಅವನನ್ನು ನೋಡಿ ಅವಳ ಒಂದು ನಾಯಿಯೂ ಬೊಗಳುತ್ತಿರಲಿಲ್ಲ. ಅಷ್ಟೇ ಅಲ್ಲ, ಅವನನ್ನು ಬಹಳ ದಿನಗಳಿಂದ ಬಲ್ಲಂತೆ ಸಲಿಗೆಯಿಂದ ವರ್ತಿಸುತ್ತಿದ್ದವು. ಒಂದು ಸಲ ತನ್ನ ಶ್ವಾನಕೂಪದ ಕ್ರೂರವಾದ ನಾಯಿಯೊಂದನ್ನು ತರಿಸಿದ್ದಳು. ಮಹಾರಾಣಿಗೆ ಗೊತ್ತಿಲ್ಲದ್ದ ಹಾಗೆ ಅದು ಅಂಬೆಗಾಗಲಲ್ಲಿ ತನ್ನ ಕಡೆಗೆ ಬರುತ್ತಿದ್ದ ತರುಣಚಂದ್ರನ ಕಡೆಗೆ ಓಡಿ ಹೋಯಿತು. ಸುತ್ತ ಸೇವಕಿಯರಿರಲಿಲ್ಲ. ಕೂಸನ್ನು ಕಚ್ಚಿ ಕೊಲ್ಲುತ್ತದೆಂದು ಮಹಾರಾಣಿ ಗಾಬರಿಯಾದಳು, ಕೂಗಿದರೂ ಅಪಾಯವೇ ಎಂದು ಬಾಯಿಮುಚ್ಚಿಕೊಂಡು ನೋಡಿದರೆ -ನಾಯಿ ಬಾಲ ಅಲ್ಲಾಡಿಸುತ್ತಾ ಮುಂಗಾಲ ಮೇಲೆ ನೆಗೆಯುತ್ತಾ ಅವನೊಂದಿಗೆ ಚಲ್ಲಾಟವಾಡುತ್ತಿದೆ! “ಈ ವಿಶ್ವಾಸವನ್ನ ನನ್ನ ನಾಯಿಗಳಿಂದ ಮೂಳೆ ಬಲಿಯದ ಈ ಹಸುಳೆ ಹ್ಯಾಗೆ ಪಡೆದುಕೊಂಡ!”

ಅಂದಿನಿಂದಲೇ ಮಹಾರಾಣಿಯ ಅಸೂಯೆಯ ಸಿಡಿಮಿಡಿ ಸುರುವಾಯಿತು. ಅರಮನೆಗೆ ಮದ್ದು ಮಾಟದ ಮಲೆಯಾಳ ಮಾಂತ್ರಿಕರು, ವಿಷವೈದ್ಯರುಗಳ ಬಳಕೆ ಜಾಸ್ತಿಯಾಯಿತು. ಮಕ್ಕಳನ್ನು ತೌರಿಗೆ ಕಳಿಸೋಣವೆಂದು ಚಿಕ್ಕಮ್ಮಣ್ಣಿ ಚಿಂತಿಸಿದಳಾದರೂ ದೊಡ್ಡಣ್ಣನೇ ಕನಕಪುರಿಯಲ್ಲಿ ಶಾಶ್ವತ ಅತಿಥಿಯಾಗಿರುವಾಗ ಹ್ಯಾಗೆ ಸಾಧ್ಯ? ಬೇರೆ ಗತಿಯಿಲ್ಲವೆಂದು ಚಿಕ್ಕಮ್ಮಣ್ಣಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು

ಸದಾಕಾಲ ಮಕ್ಕಳನ್ನು ಕಾಪಾಡುತ್ತಿದ್ದಳು. ಮಹಾರಾಜ ಯುದ್ಧಕ್ಕೆ ಹೋಗಿದ್ದಾಗಲಂತೂ ರಾತ್ರಿ ಮಕ್ಕಳನ್ನು ತಬ್ಬಿಕೊಂಡೇ ಮಲಗುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಒಂದು ದಿನ ಬೆಳಿಗ್ಗೆ ನೋಡಿಕೊಂಡಾಗ ತಾಯಿಯ ತೋಳು ಬರಿದಾಗಿತ್ತು; ತರುಣಚಂದ್ರ ಇರಲಿಲ್ಲ! ಕಣ್ಮರೆಯಾಗಿರುವ ತರುಣಚಂದ್ರನ ಬಗ್ಗೆ ಮಹಾರಾಜ ಪಕ್ಷಪಾತದಿಂದ ಇರುವುದನ್ನು ಗಮನಿಸಿ, ಅಪಾಯದ ಮುನ್ಸೂಚನೆಯನ್ನು ಮುಂಗಂಡು ಬಹುಬೇಗ ತನ್ನ ಮಗ ಆದಿತ್ಯನಿಗೆ ಯುವರಾಜನ ಪಟ್ಟಗಟ್ಟಬೇಕೆಂದು ಮಹಾರಾಣಿ ಬಯಸಿದ್ದಳು. ಆದರೆ ಹೋಲಿಕೆಯಲ್ಲಿ ಪ್ರಧಾನಿಯ ಪ್ರತಿಬಿಂಬದಂತಿರುವ ಆದಿತ್ಯಪ್ರಭನ ಬಗ್ಗೆ ಮಹಾರಾಜನಿಗೆ ಅನುಮಾನಗಳಿದ್ದವು. ವರ್ತಕ ಸಂಘದ ಸರಿ ಅರ್ಧ ಸದಸ್ಯರೂ ಸಮರ್ಥಿಸಿದ್ದರಿಂದ ಮಹಾರಾಜ ಈ ಘರ್ಷಣೆಯ ಅನುಕೂಲ ತಗೊಂಡು ಯುವರಾಜನ ನೇಮಕಾತಿಯನ್ನು ಮುಂದೆ ಮುಂದೆ ಹಾಕುತ್ತಿದ್ದ. ಈ ಸಂದರ್ಭದಲ್ಲೇ ತರುಣಚಂದ್ರ ಕಾಣೆಯಾದ.

ಚಿಕ್ಕಮ್ಮಣ್ಣಿ ಇಡೀ ತಿಂಗಳು ಅತ್ತು ಕರೆದಳು. ಅಳುತ್ತ ತನ್ನ ಕೋಣೆಯ ಮೂಲೆಯಿಂದ ಮೂಲೆಗೆ ಅಲೆದಳು. ಒಬ್ಬಳೇ ಕನ್ನಡಿಯ ಮುಂದೆ ಕೂತು 'ಏನು ಹೇಳಲೇ ತಾಯೀ' ಎಂದತ್ತಳು. ಮಗಳನ್ನು ತಬ್ಬಿ ಅತ್ತಳು. ಮಗಳು ಸಮಾಧಾನ ಮಾಡಿದರೆ "ಇಲ್ಲ ಮಗಳೇ ನಾನೀಗ ನೆಮ್ಮದಿಯಿಂದ ಇದ್ದೇನೆ, ನಾನಿನ್ನು ಮಗನ ಬಗ್ಗೆ ಚಿಂತಿಸುವುದಿಲ್ಲ ಎಂದು ಹೇಳಿ ಗದ್ಗದಿಸಿದಳು. ಒಂದು ದಿನ ಕನ್ನಡಿಯ ತನ್ನ ಪ್ರತಿಬಿಂಬ -"ಮಗ ಬಂದೇ ಬರ್ತಾನೆ, ಅಲ್ಲೀ ತನಕ ನೆಮ್ಮದಿಯಿಂದ ಇರೋದಕ್ಕೆ ಕಲಿಯಬೇಕಮ್ಮ" ಎಂದು ಬುದ್ಧಿ ಹೇಳಿದಂತೆ ತಾನೇ ಹೇಳಿಕೊಂಡಳು. ದುಃಖ ಒತ್ತರಿಸಿ 'ತರುಣಚಂದ್ರಾ' ಎಂದು ದನಿ ಮಾಡಿ ಅತ್ತಳು. ಅಷ್ಟರಲ್ಲಿ ಹೊರಗೆ ಕಾಲ ಸಪ್ಪಳ ಕೇಳಿಸಿ ಮುಖ ಬಿಳಿಚಿಕೊಂಡು ಸುಮ್ಮನಾದಳು. ಬಂದವನು ಮಹಾರಾಜ, ತನ್ನ ದುಃಖ ರಾಜನಿಗೆ ಗೊತ್ತಾಗಲಿಲ್ಲವೇ? ಎಂದು ಸಂಶಯದಿಂದ ಕಣ್ಣೀರು ಬತ್ತುವತನಕ ಅತ್ತಳು.

ಮಹಾರಾಜನಿಗೆ ಮಗ ಕಳೆದುಹೋದುದರ ಬಗ್ಗೆ ದುಃಖವಾಗಿರಲಿಲ್ಲವೆಂದಲ್ಲ ತರುಣಚಂದ್ರನನ್ನ ಜೀವಕ್ಕೆ ಹಚ್ಚಿಕೊಂಡಿದ್ದ. ಆದರೆ ಯಾವ ಪ್ರಸಂಗದಲ್ಲಿಯೂ ಯಾರ ಮುಂದೆಯೂ ಮಗನ ಬಗ್ಗೆ ಬಾಯಿ ಬಿಟ್ಟಿರಲಿಲ್ಲ. ಅನುಕಂಪದಿಂದ ಚಿಕ್ಕಮ್ಮಣಿಯ ಕಡೆಗೆ ನೋಡುತ್ತಿದ್ದನಾದರೂ ಸಾಂತ್ವನದ ಒಂದು ಮಾತನ್ನೂ ಆಡಿರಲಿಲ್ಲ. ಅವಳೊಮ್ಮೆ ಆದಿತ್ಯಪ್ರನನ್ನು ಯುವರಾಜನನ್ನಾಗಿ ಮಾಡಬೇಕೆಂದು ಅರ್ಥಕೌಶಲ ಮತ್ತು ಮಹಾರಾಣಿ ಆಗಾಗ ಕೊಡುತ್ತಿದ್ದ ಕಾಟ ಮಾತ್ರ ತರುಣಚಂದ್ರ ಕಾಣೆಯಾದಾಗಿನಿಂದ ತಪ್ಪಿಹೋಗಿತ್ತು. ಅರ್ಥಕೌಶಲ ಮತ್ತು ಮಹಾರಾಣಿಯರ ಷಡ್ಯಂತ್ರಕ್ಕೆ ತರುಣಚಂದ್ರ ಗುರಿಯಾಗಿದ್ದಾನೆಂದು ಮಹಾರಾಜನಿಗೆ ಖಚಿತವಾಗಿತ್ತು. ಆದರೆ ಅದನ್ನು ಬಾಯಿಬಿಟ್ಟು ಹೇಳಲಾರದವನಾಗಿದ್ದ. ಚಿಕ್ಕಮ್ಮಣ್ಣಿ ಮತ್ತು ಮಗಳು ಛಾಯಾದೇವಿಯನ್ನು ಕೊಲೆ ಮಾಡಬಹುದೆಂಬ ಸಂದೇಹದಿಂದ ತನ್ನ ಕೋಣೆಯ ಪಕ್ಕದಲ್ಲೇ ಅವರ ವಾಸದ ವ್ಯವಸ್ಥೆ ಮಾಡಿ ಮೈಕಾವಲಿದ್ದಂತೆ ಅವರ ಮ್ಯಾಲೂ ಒಂದು ಕಣ್ಣಿಟ್ಟಿದ್ದ. ಇಂಥ ಆತಂಕದಲ್ಲಿಯೇ ಮಹಾರಾಜ ಹಾಸಿಗೆ ಹಿಡಿದಿದ್ದ. ವಿಷದ ಪರಿಮಾಣವೆಂದು, ಮದ್ದು ಮಾಟವೆಂದು ಜನರಾಡಿಕೊಳ್ಳುತ್ತಿದ್ದರು. ಬರಬರುತ್ತ ಹಾಸಿಗೆ ಬಿಟ್ಟು ಏಳಲಾರದ ಸ್ಥಿತಿ ಬಂದಾಗ ಶಿಖರಸೂರ್ಯ ಬಂದು ವಾಸಿ ಮಾಡಿದ್ದ.

## ಹದಿನೇಳು

ಒಂದು ದಿನ ಮುಂಜಾನೆ ಚಿಕ್ಕಮ್ಮಣ್ಣಿ ಮಹಾರಾಜನ ಮುಂದೊಂದು ವಿಚಾರ ಹೇಳಿ, ಅನುಮತಿ ಸಿಕ್ಕಿದ್ದೇ ಆನಂದಭರಿತಳಾದಳು. ವರ್ಷಗಳಾದ ಮೇಲೆ ಅವಳ ತುಟಿಗಳ ಮೇಲೆ ತಿಳಿಯಾದ ನಗೆ ಮೂಡಿತ್ತು. ಅಷ್ಟರಲ್ಲಿ ಮೆಟ್ಟಲಿಳಿದು ಛಾಯಾದೇವಿ ಬಂದಳು. ಮಗಳು ಬಂದುದೂ ಶುಭಸೂಚನೆ ಎಂದುಕೊಂಡಳು. ಮಗಳಿಗಾಗಲೇ ಹದಿನೈದು ವರ್ಷ. ಈ ವಯಸ್ಸಿಗೆ ತಾನು ತಾಯಿಯಾಗಿದ್ದಳು. ಈಗಿನ ಹುಡುಗಿಯರು ಭಾರೀ ಧೈರ್ಯಸ್ಥರು. ಸ್ವಂತ ಅಭಿಪ್ರಾಯ ಉಳ್ಳವರು ಮತ್ತು ಅದನ್ನು ಸ್ಪಷ್ಟವಾಗಿ ಹೇಳಬಲ್ಲವರು. ತನ್ನ ಮಗಳಲ್ಲಿ ಹಿರಿಯರ ಬಗ್ಗೆ ಕೊಂಚ ಅನಾದರವಿತ್ತು. ಆದರೆ ಅವಳೊಮ್ಮೆ ನಕ್ಕರಾಯ್ತು, ಆ ನಗೆಯ ಬೆಳಕಿನಲ್ಲಿ ಅವಳ ದೋಷಗಳೆಲ್ಲ ಮರೆಯಾಗುತ್ತಿದ್ದವು. ಮಗಳು ಬಂದು "ಅಮ್ಮ ಉದ್ಯಾನದಲ್ಲಿರ್ತೀನಿ" ಎಂದು ಹೇಳಿ ತಾಯಿಯ ಉತ್ತರಕ್ಕೂ ಕಾಯದೆ ಜಿಂಕೆಯಂತೆ ಹೊಸ್ತಿಲು ಹಾರಿ ಬಿಟ್ಟಳು. ಚಿಕ್ಕಮ್ಮಣ್ಣಿ ನಿಧಾನವಾಗಿ ಹೊಸ್ತಿಲು ದಾಟಿ ಉದ್ಯಾನಕ್ಕೆ ಕಾಲಿಡುತ್ತಿದ್ದಂತೆ ಸುಸ್ತಾಯಿತು. "ಅಬ್ಬಾ ಮಕ್ಕಳಿಗಾಗಿಯಾದರೂ ನಾನು ಗಟ್ಟಿಮುಟ್ಟಾಗಿರಬೇಕು" ಎಂದುಕೊಂಡಳು.

ನಿಧಾನವಾಗಿ ಉದ್ಯಾನದ ಕಡೆಗೆ ಬರುತ್ತಿದ್ದ ತಾಯಿಯನ್ನು ನೋಡಿ ಛಾಯಾದೇವಿಗೆ ಬೇಸರವಾಯಿತು. "ಅಮ್ಮ ಯಾವಾಗಲೂ ಹೀಗೇ, ಏನಾದರೊಂದು ತಲೆಯಲ್ಲಿ ಹಾಕಿಕೊಂಡು ಕೊರಗೋದು... ಮಗ ಸಿಗಲಿಲ್ಲ. ದೇವರಿಗೆ ಹೂವೇರಲಿಲ್ಲ, ತಂದೆ ಉಣಲಿಲ್ಲ... ಹೀಗೇ..." ಚಿಕ್ಕಮ್ಮಣ್ಣಿ ಸೊರಗಿ ಆಗಲೇ ಎಲುಬಿನ ಗೂಡಾಗಿ ಈಗೀಗ ಮಾತು ಕೂಡಾ ನಿಧಾನವಾಗಿ ಆಡುತ್ತಿದ್ದಳು.

ಛಾಯಾದೇವಿ ಹದಿನೈದರ ಪ್ರಾಯಕ್ಕೆ ತಕ್ಕ ಸೌಂದರ್ಯ, ಕಾಂತಿ ತುಂಬಿಕೊಂಡು ಮೋಹಕವಾಗಿ ರೂಪುಗೊಂಡಿದ್ದಳು. ತುಂಬಿದೆದೆ, ದುಂಡಗಿನ ಕೈಕಾಲು, ಗೋದಿಬಣ್ಣದ ಚೆಲುವೆ, ಎಳೆಬಿಸಿಲಲ್ಲಿ ತಾಮ್ರದ ಗೊಂಬೆಯಂತೆ ಹೊಳೆಯುತ್ತಿದ್ದಳು. ಅವಳ ಸದಾ ಹೊಳೆವ ಚಂಚಲ ಕಣ್ಣುಗಳನ್ನು ತಾಯಿ ನೋಡಿದಾಗೊಮ್ಮೆ ಮನಸ್ಸಿನಲ್ಲೇ ದೃಷ್ಟಿ ನಿವಾಳಿಸುತ್ತಿದ್ದಳು. ಮುಖ ಗುಂಡಗಿದ್ದರೂ ಮೇಲ್ಭಾಗದಲ್ಲಿ ತುಸು ಚಪ್ಪಟೆಯಾಗಿ ಕೆಳಗೆ ಇಳಿವಾಗ ಮೂಗನ್ನು ತುಸು ಕೆಳಕ್ಕೆ ಒತ್ತಿತ್ತು. ಹಲ್ಲು ತುಸು ದಪ್ಪಗಿದ್ದುದರಿಂದ ಕೆಂಪು ಮೇಲ್ತುಟಿಯನ್ನು ತುಸು ಹಿಂದೆ ತಳ್ಳಿದ್ದವು. ಗದ್ದದ ತುದಿ ಕೊಂಚ ಮುಂದೆ ಬಂದು ಮುಖಕ್ಕೊಂದು ಅಪರೂಪದ ಚೆಲುವಿಕೆಯನ್ನು ಕೊಟ್ಟಿತ್ತು.

ಛಾಯಾದೇವಿಗೆ ತಾಯಿ ಅಂದರೆ ಅಷ್ಟಕಷ್ಟೆ. ಮಾತಿನಲ್ಲಿ ಅತಿ ವಿನಯ, ಸೇವಕರಿಗೂ ದರ್ಪ ತೋರಿಸುತ್ತಿರಲಿಲ್ಲ. ಇವಳೊಂದು ಬಡಹೆಂಗಸೆಂದು ದೂರುತ್ತಿದ್ದಳು. ತಂದೆಯ ಬಗೆಗೂ ತಕರಾರುಗಳಿದ್ದವು. ಮಹಾರಾಣಿಗೆ ಹೆದರುತ್ತಿದ್ದ. ಯುದ್ಧದ ವಿಷಯದಲ್ಲಿ ಮಾತ್ರವಲ್ಲ, ಬೇಟೆಗೆ ಹೋಗಬೇಕಾದರೂ ಮಹಾರಾಣಿಯನ್ನು ಕೇಳುತ್ತಾನೆಂದರೆ ಇವನೆಂಥ ರಾಜ? ಅರಮನೆಯ ಹೆಂಗಸರು ಗಂಡಸರನ್ನು ಹಾಳು ಮಾಡಿದ್ದಾರೆಂದೇ ಅವಳು ನಂಬಿದ್ದಳು ಮತ್ತು ಹಾಗೆಂದು ತಂದೆಯ ಮುಂದೆಯೂ ಹೇಳುತ್ತಿದ್ದಳು. ಇಂಥ ಮಾತು ಕೇಳಿ ರಾಜ ದೊಡ್ಡದಾಗಿ ನಗುತ್ತಿದ್ದ. ಆದರೆ ಅಣ್ಣ ಆದಿತ್ಯಪ್ರಭನ ಯುದ್ಧಾಸಕ್ತಿಯ ಬಗ್ಗೆ ಅವಳಿಗೆ ಹೆಮ್ಮೆಯಿತ್ತು. ಅಲ್ಲಿಯೂ ಅವನ ತಾಯಿಯ ಪ್ರಭಾವವಿರಬೇಕೆಂದು, ಇಲ್ಲದಿದ್ದರೆ ಮಾಡಿದ ಒಂದೇ ಯುದ್ಧವನ್ನು ಆತ ಸೋಲುತ್ತಿರಲಿಲ್ಲವೆಂದೂ ನಂಬಿದ್ದಳು. ವರ್ತಕರು ಅಣ್ಣನನ್ನು ನಂಬಿರಲಿಲ್ಲವಾದ್ದರಿಂದ ಅವಳು ಅವರನ್ನು ಎಂದೂ ಕ್ಷಮಿಸಿರಲಿಲ್ಲ. ಯುದ್ಧದ ವಿಷಯದಲ್ಲಿ ತಂದೆಯ ಬಗ್ಗೆ ಕೊಂಚ ಅಭಿಮಾನವಿದ್ದುದು ನಿಜ. ಯಾಕೆಂದರೆ ಆತ ಮಾಡಿದ ಎಲ್ಲ ಯುದ್ಧಗಳನ್ನು ಗೆದ್ದಿದ್ದ. 'ವಿಜಯದ ಕಡಗ' ಪಡೆದು ಸನ್ಮಾನಿತನಾಗಿದ್ದ!

ಉದ್ಯಾನದ ಕಡೆಗೆ ನಿಧಾನವಾಗಿ ಬರುತ್ತಿದ್ದ ತಾಯಿಯನ್ನು ನೋಡಿ ಗಾಳಿಗಲುಗಿ ಮುಖದ ಮ್ಯಾಲೆ ಚೆಲ್ಲುವರಿದ ಕೂದಲನ್ನ ರಭಸದಿಂದ ಹಿಂದೆ ಸರಿಸಿಕೊಂಡು ತನ್ನ ಅಸಹನೆಯನ್ನ ತೋರಿಸಿದಳು ಛಾಯಾದೇವಿ. ಅಷ್ಟರಲ್ಲಿ ಅಲ್ಲಿಗೆ ಓಡಿಬಂದ ಹೂಗಾರ ಹುಡುಗನಿಗೆ ಅರಳಿದ ಹೂವೊಂದನ್ನು ತೋರಿಸಿ ಕಿತ್ತುಕೊಡಲು ಹೇಳಿದಳು. ಅವು ದೇವರ ಹೂವಾದ್ದರಿಂದ ಕಿತ್ತರೆ ತನ್ನ ತಾಯಿ ಕೆರಳುತ್ತಾಳೆ ಅಂತ ಗೊತ್ತಿದ್ದರೂ ಕೇಳಿದಳಾದ್ದರಿಂದ ಹುಡುಗ ಚಿಕ್ಕಮ್ಮಣ್ಣಿಯ ಕಡೆಗೆ ನೋಡಿ ಅನುಮಾನಿಸುತ್ತ ನಿಂತ. ಇವಳು ತಾಯಿಗೆ ಕೇಳಿಸುವಂತೆ ಇನ್ನೊಮ್ಮೆ ಒತ್ತಾಯಿಸಿದಳು.

ನಸುಗೋಪದ ಮಗಳು ಎಳೆಬಿಸಿನಲ್ಲಿ ಮಿರುಗುತ್ತಿದ್ದಳು. ಸುಳಿಗಾಳಿಗೆ ಮುಖದ ಮೇಲಾಡುವ ಕರಿಗೂದಲನ್ನು ಹಿಂತಗೊಂಡು ಕಿವಿಯ ಹಿಂದೆ ತಗಲಿಸಿ ಕೊಂಡಳು. ದೇವರಿಗೊಂದು ಹೂ ಕಡಿಮೆ ಆದರೆ ಆಗಲಿ, ಹಾಗಂತ ಇವಳು ಹೂಗಾರ ಹುಡುಗನೊಂದಿಗೆ ಸಲಿಗೆಯಿಂದ ಮಾತಾಡಿದ್ದು ತಪ್ಪೆಂದು ಅನ್ನಿಸಿತು ತಾಯಿಗೆ. ಮೈತುಂಬ ರೇಶ್ಮೆಲಂಗ ದಾವಣಿ ಹಾಕಿದ್ದಳಾದರೂ ಅವಳಿನ್ನೂ ಬಾಲಕಿಯೆಂದು ತಿಳಿಯಲು ತಾಯಿಯ ಮನಸ್ಸು ಒಪ್ಪಲಿಲ್ಲ. ಇಷ್ಟರಲ್ಲೇ ಇವಳು ಮದುವೆಯಾಗಿ ಮುಖದ ಮೇಲೆ ಸ್ವಚ್ಛಂದ ಸಂಚರಿಸುವ ಕೂದಲನ್ನು ತುರುಬುಕಟ್ಟಿ ಹಣೆಗೆ ಕುಂಕುಮ, ಕೈ ತುಂಬ ಹಸಿರು ಬಳೆ, ಮೈತುಂಬ ರೇಶ್ಮೆ ಸೀರೆ ಉಟ್ಟು ನಿಂತರೆ... ಅಬ್ಬ! ಏನು ಚೆಲುವೆ ನನ್ನ ಮಗಳು! ತಕ್ಷಣ ಶಿಖರಸೂರ್ಯನ ನೆನಪಾಯ್ತು.

ಮಗಳ ಮನಸ್ಸಿಗೆ ಶಿಖರಸೂರ್ಯನ ನಂಜೇರಿದೆಯೆಂದು ತಿಳಿದಿತ್ತು. ಅವನ ವಿಷಯ ಎತ್ತಿದಾಗ ಛಾಯಾದೇವಿಯ ಮುಖ ಕೆಂಪೇರಿದ್ದನ್ನು, ಆ ದಿನ ರಾಜನೊಂದಿಗೆ ತಾನು ಆಡಿದ ಮಾತನ್ನು ಆಕೆ ಕದ್ದು ಕೇಳಿಸಿಕೊಂಡಿದ್ದನ್ನು ಗಮನಿಸಿದ್ದಳು. ಅಣ್ಣ ಬಿಳಿಗಿರಿಗೆ ಮಗಳನ್ನು ಕೊಡಬೇಕೆಂದರೆ ಅವನೇ ಇಲ್ಲಿ ಇವರ ಅತಿಥಿಯಾಗಿ ಖೈದಿಯಂತೆ ಕೊಳೆಯುತ್ತಿದ್ದ. ಚಿಕ್ಕ ಅಣ್ಣನ ಬಗ್ಗೆ ಇನ್ನೂ ಅಂದಾಜಾಗಿರಲಿಲ್ಲ. ಅರಮನೆಯಲ್ಲಿ ಯಾರನ್ನ ನಂಬಿದರೂ ಅವರು ಯಾವಾಗ ಚೂರಿ ಇಲ್ಲವೆ ವಿಷಯ ಹಾಕುತ್ತಾರೆಂದು ಖಾತ್ರಿಯಿರಲಿಲ್ಲ. ಇದ್ದುದರಲ್ಲಿ ಪ್ರಾಮಾಣಿಕವಾಗಿ ರಾಜನನ್ನು ಕಾಪಾಡಿದ ಶಿಖರಸೂರ್ಯನೇ ಅರಮನೆಯ ವಿಷಕಾರಿ

ವಾತಾವರಣದಿಂದ ಮಗಳನ್ನು ಕಾಪಾಡಬಲ್ಲನೆಂದು ನಂಬಿಕೆ ಬಂದಿತ್ತು. ಕುಲಗೋತ್ರ ಅಂತಸ್ತಿನಲ್ಲಿ ಕೊಂಚ ಕಮ್ಮಿ ಬರಬಹುದು. ಕನಕಪುರಿಯವರು ವರ್ತಕರೊಂದಿಗೇ ಸಂಬಂಧ ಬೆಳೆಸಬಹುದಾದರೆ ಹೆಗಡೆ ಜೊತೆಗೆ ಯಾಕಾಗಬಾರದು? 'ಆತ ಎಂದಿಗೂ ಚಿಕ್ಕವನಾಗಿರಲಿಲ್ಲ' ಅಂತ ಅನ್ನಿಸೋದಿಲ್ಲವೆ? ಎಂದು ಮಹಾರಾಜ ಅಂದಿದ್ದ.

ಇದನ್ನೆಲ್ಲ ಅಡಗಿ ಕೇಳಿಸಿಕೊಂಡಿದ್ದ ಛಾಯಾದೇವಿ ಅಂದುಕೊಂಡಿದ್ದಳು:

"ಇಂಥದೇನಿದ್ದರೂ ಹೇಳಬೇಕಿದ್ದವಳು ನಾನಲ್ಲವೆ? ನಾನೇ ಹೇಳಿಲ್ಲವೆಂದ ಮೇಲೆ ಇವನಿಗಿನ್ನೇನು? ಯಾರೇ ಯಾಕೆ, ದೇವರು ಕೈ ಚಾಚಿ ಬಂದರೂ ಒಪ್ಪಿಗೆ ಸೂಚಿಸಬೇಕಾದವಳು ನಾನು, ಛಾಯಾದೇವಿ! ನಾನು ಒಪ್ಪಿಗೆ ಕೊಟ್ಟರೆ ಇಂದ್ರನಾದರೂ ಧನ್ಯತೆಯಿಂದ ಬಾಗಿ ನಿಂತಾನು. ವಯಸ್ಸಾದ ಮಾತ್ರಕ್ಕೆ ನನ್ನಂಥವಳನ್ನು ಬಿಟ್ಟು ಆ ವೈದ್ಯ ಇನ್ನೇನು ಅಡಗೂಲಜ್ಜಿಯ ಮಲಮಗಳನ್ನು ಮದುವೆಯಾಗಬೇಕೆ?"

ಆದರೆ ಇನ್ನೂ ಉದ್ಯಾನದಲ್ಲಿ ನಿಂತಿರುವ ತಾಯಿಯನ್ನು ಕಂಡು ರಾಜಕುಮಾರಿಯ ಸಹನೆ ಮೀರಿತು. ಏನು ಮಾಡುತ್ತಿದ್ದಾಳೆ ಅಮ್ಮ? ಬಿಳಿ ಹೂಗಳ ಗೊಂಚಲು ಕಟ್ಟಿ ಚಿಕ್ಕಮ್ಮಣ್ಣಿಯ ಕೈಗಿತ್ತು ಹೂಗಾರ ಹುಡುಗ ಬಾಗಿದ. ಚಿಕ್ಕಮ್ಮಣ್ಣಿ ಪ್ರಸನ್ನಚಿತ್ತಳಾಗಿ ಅವನ ನಮಸ್ಕಾರ ಸ್ವೀಕರಿಸಿದಳು. ಅಷ್ಟರಲ್ಲಿ...

## ಹದಿನೆಂಟು

ಕುರಿ ಉಣ್ಣೆಯ ಒರಟಾದ ತುಂಡು ಬಟ್ಟೆಯ, ನೀಳ ಕೂದಲಿನ, ಕೈಯಲ್ಲಿ ಉದ್ದ ಕೋಲು ಹಿಡಿದ, ಎತ್ತರದ ವ್ಯಕ್ತಿಯೊಬ್ಬ ಅರಮನೆಯ ಪೌಳಿಯ ಹೊಕ್ಕು ಯಾರಾದರೂ ಇದ್ದಾರೆಯೇ? ಅಂತ ಆ ಈ ಕಡೆ ಶೋಧಕ ದೃಷ್ಟಿಯಿಂದ ಹುಡುಕಿ, ರಾಜಕುಮಾರಿ ಉದ್ಯಾನದ ಒಂದು ಬದಿಯಲ್ಲಿದ್ದರೂ ಅವಳನ್ನು ಬಿಟ್ಟು ಉದ್ಯಾನದ ಅಂಚಿನಲ್ಲಿದ್ದ ಚಿಕ್ಕಮ್ಮಣ್ಣಿಯ ಕಡೆಗೆ ಅವಸರದಲ್ಲಿ ನಡೆಯತೊಡಗಿದ. ಆತ ತನ್ನ ಕಡೆ ನೋಡಿದ್ದನ್ನು ಛಾಯಾದೇವಿ ಗಮನಿಸಿದ್ದಳು. ಆದರೂ ತನ್ನನ್ನು ಬಿಟ್ಟು ಚಿಕ್ಕಮ್ಮಣ್ಣಿಯ ಕಡೆಗೆ ಹೋದದ್ದನ್ನು ನೋಡಿ ಯಾವುದೋ ಅಮ್ಮನಿಗೆ ಸಂಬಂಧಪಟ್ಟ ತುರ್ತು ಕಾರ್ಯವಿರಬೇಕೆಂದು ಊಹಿಸಿ, ಹಾಗೆ ದೊಡ್ಡ ಹೆಜ್ಜೆ ಹಾಕುತ್ತ ದೂರದೂರಕ್ಕೆ ಕೋಲೂರುತ್ತ ನಡೆದಾಗ ಕಾಲ್ಕಡಗ ಮತ್ತು ಕೋಲಿನ ಗೆಜ್ಜೆ ಅಲುಗಿ ನಾದಮಯ ಶಬ್ದ ಕೇಳಿಸುತ್ತಿತ್ತು. ಗಾಳಿಗೆ ಅಲುಗಲುಗಿ ಮುಖದ ಮ್ಯಾಲೆ ತೂರಿ ಬರುತ್ತಿದ್ದ ನರೆಗೂದಲ ಬಗ್ಗೆ ನಿರ್ಲಕ್ಷದಿಂದ ಇದ್ದ. ಆತನ ಮುಖದಲ್ಲಿ ಅವನ ಅವಸರವನ್ನು ಗಮನಿಸಿ ಕೈಯ ಹೂಗಳನ್ನು ಪುನಃ ಹುಡುಗನ ಕೈಗಿತ್ತು ಪೂಜಾರಿಗೆ ತಲುಪಿಸಲು ಹೇಳಿ ಬರುತ್ತಿರುವ ವ್ಯಕ್ತಿಯ ಕಡೆಗೆ ಹೆಜ್ಜೆ ಹಾಕಿದಳು.

ಬಂದಾತ ಬಾಗಿ ನಮಸ್ಕಾರವನ್ನಾಚರಿಸಿ, ಚಿಕ್ಕಮ್ಮಣ್ಣಿ ಅದನ್ನು ಸ್ವೀಕರಿಸಿ, ಈತ ಅವಸರದಲ್ಲಿ ಏನನ್ನೋ ಹೇಳಿದ. ಹೇಳಿದ ದನಿ ಕೇಳಿಸಿತಾದರೂ ಶಬ್ದಗಳು ಪ್ರತ್ಯೇಕವಾಗಿರಲಿಲ್ಲ. ಚಿಕ್ಕಮ್ಮಣ್ಣಿ ಅವಸರ ಮತ್ತು ಆತಂಕದಲ್ಲಿ ಕೇಳಿದ ಒಂದೆರಡು ಪ್ರಶ್ನೆಗಳಿಗೆ ಆತ ಅಭಿನಯಪೂರ್ವಕ ದೀರ್ಘವಾದ ಉತ್ತರ ಕೊಟ್ಟ. ಆಮೇಲೆ ಚಿಕ್ಕಮ್ಮಣ್ಣಿ ಮಾತಾಡಲಿಲ್ಲ. ದುಃಖದ ಸುದ್ದಿ ಕೇಳಿದಂತೆ ಅಳುಮುಖ ಮಾಡಿಕೊಂಡು, ನಿಟ್ಟುಸಿರು ಬಿಟ್ಟು ಅರಮನೆಯ ಕಡೆಗೆ ತಿರುಗಿದಳು. ಬಂದ ವ್ಯಕ್ತಿ ಎತ್ತರದ ದನಿಯಲ್ಲಿ ಹೇಳಿದ:

"ನಮ್ಮ ರಾಜನಿಗೂ ಕುಲಕ್ಕೂ ಅವಮಾನ ಮಾಡಿದ್ದಾರೆ. ಅವರ ಪೈಕಿ ಯಾರು ಬಂದರೂ ನಾವು ಜೀವಂತ ಬಿಡುವುದಿಲ್ಲ!"

ಮೊದಲು ಸುದ್ದಿ ಕೇಳಿಯೇ ದುಃಖ ತುಂಬಿದ ಚಿಕ್ಕಮ್ಮಣ್ಣಿ ಈಗ ಶಕ್ತಿ ಉಡುಗಿ ಹೋದಂತಾಗಿ ಅಸ್ಥಿರವಾದ ಎರಡು ಹೆಜ್ಜೆ ಇಡುವಷ್ಟರಲ್ಲಿ ಬೀಳುವಂತಾದಳು. ಬಂದ ವ್ಯಕ್ತಿಯೇ ಓಡಿಹೋಗಿ ಆಧಾರಕ್ಕೆ ಕೈ ಕೊಡಬೇಕೆಂಬಲ್ಲಿ ಚಿಕ್ಕಮ್ಮಣ್ಣಿಯೇ ಸುಧಾರಿಸಿಕೊಂಡು ಬೇಡವೆಂಬಂತೆ ಕೈ ಚಲಿಸಿದಳು. ಸ್ವಲ್ಪ ಹೊತ್ತು ನಿಂತು ಸುಧಾರಿಸಿಕೊಂಡು ಆ ಒರಟು ಮನುಷ್ಯನ ಕಡೆಗೆ ತಿರುಗುವಷ್ಟರಲ್ಲಿ ಅಲ್ಲಿಗೆ

ಛಾಯಾದೇವಿ ಬಂದಿದ್ದಳು. ಆ ಕಾಡು ಮನುಷ್ಯನನ್ನು ನೋಡಿ ಬೆರಗಾದರೂ ತನ್ನ ತಾಯಿಯನ್ನು ಕಳವಳಕ್ಕೀಡು ಮಾಡಿದವನೆಂದು ಕೋಪವುಕ್ಕಿ ಮಾತಾಡಿದಳು ರಾಜಕುಮಾರಿ:

"ಯಾರು ನೀನು?"

"ಬಿಳಿಗಿರಿರಾಯರ ಭಂಟ ಸುಕ್ರ."

-ಎಂದ ಬೆರಗಿನಿಂದ ಆಕೆಯನ್ನೇ ನೋಡುತ್ತ. ಅಷ್ಟರಲ್ಲಿ ಚಿಕ್ಕಮ್ಮಣ್ಣಿ ಬೀಳುವಳೋ ಏಳುವಳೋ ಎಂಬಂತೆ ಹೊಯ್ದಾಡುತ್ತ ಅರಮನೆಯ ಕಡೆಗೆ ನಡೆದಿದ್ದಳು. ಬಿದ್ದಾಳೆಂದು ಇವಳೂ ಸಹಾಯಕ್ಕೆ ಓಡಿದಳು. ಸುಕ್ರ ಚಿಕ್ಕಮ್ಮಣ್ಣಿಯನ್ನು ಆಕೆ ಕಣ್ಮರೆಯಾಗುವತನಕ ಅನುಕಂಪದಿಂದ ನೋಡಿ ಬಂದ ದಾರಿಯಿಂದ ಹೊರಕ್ಕೆ ಹೋದ.

ಚಿಕ್ಕಮ್ಮಣ್ಣಿ ಒಳಗೆ ಬಂದಾಗ ಅರ್ಥಕೌಶಲ ಬಂದು ಮಹಾರಾಜನ ಮುಂದೆ ಕೂತಿದ್ದ. ಮೂವರು ಯೋಚಿಸಿದರು: ಅರಮನೆಯ ಯಾರೊಬ್ಬರಿಗೂ ಬಿಳಿಗಿರಿ ಭಂಟರ ಎದುರು ನಿಂತು ಮಾತನಾಡುವ ನೈತಿಕ ಧೈರ್ಯವಿರಲಿಲ್ಲ. ಬಿಳಿಗಿರಿ ರಾಯನನ್ನು ಕನಕಪುರಿಯವರು ಬಹಳ ಕೆಟ್ಟದಾಗಿ ನಡೆಸಿಕೊಂಡಿದ್ದರು. ಗೌರವ ತೋರಿರಲಿಲ್ಲ, ಸಾಲದ್ದಕ್ಕೆ ಅವನ ಚಿನ್ನವನ್ನೆಲ್ಲಾ ಸುಲಿದ ಮೇಲೆ ಅಸ್ಪೃಶ್ಯನಂತೆ ನಡೆಸಿಕೊಂಡಿದ್ದರು. ಈಗ ರಾಯ ಮರಣ ಹೊಂದಿದ್ದಾನೆ. ಅಂತ್ಯ ಸಂಸ್ಕಾರ ಮಾಡಬೇಕು. ಆದರೆ ಹೆಣದ ಬಳಿ ಕನಕಪುರಿಯ ಯಾರು ಬಂದರೂ ಸೇಡು ತೀರಿಸಿಕೊಳ್ಳುವುದಾಗಿ ಸುಕ್ರ ಬೇರೆ ಸಾರಿ ಹೋಗಿದ್ದಾನೆ. ಈಗ ಅರ್ಥಕೌಶಲನಿರಲಿ, ಮಹಾರಾಜ ಹೋದರೂ ಅಪಾಯಕಾರಿ. ಚಿಕ್ಕಮ್ಮಣ್ಣಿಯ ಬಗ್ಗೆ ಗೌರವವಿದ್ದುದೇನೋ ನಿಜ, ಆಕೆಯ ಹಿಂದೆ ನಿಂತು ಅವಳನ್ನು ಮುಂದೆ ಮಾಡುವುದು ರಾಜನಿಗೂ ಇಷ್ಟವೆ. ಆದರೆ ಪರಿಸ್ಥಿತಿಯನ್ನು ನಿಭಾಯಿಸುವಷ್ಟು ಚಾಲಕುತನ ಅವಳಲ್ಲಿರಲಿಲ್ಲ. ಅಲ್ಲದೆ ಅವಳ ಮುಗ್ಧತೆಯಿಂದಾಗಿ ಉದ್ದೇಶಕ್ಕೆ ವಿರುದ್ಧವಾಗಿ ಪರಿಸ್ಥಿತಿ ಬಿಗಡಾಯಿಸಬಹುದೆಂಬ ಭಯವೂ ಉಂಟಾಯಿತು. ಇಂಥ ಬಿಗಿ ಸನ್ನಿವೇಶದಿಂದ ಅರಮನೆಯ ಮಾನಮರ್ಯಾದೆಗೆ ಕುಂದುಂಟಾಗದಂತೆ ಅದನ್ನು ಸುರಳೀತ ಪಾರು ಮಾಡಬಲ್ಲಾತ ಶಿಖರಸೂರ್ಯನೊಬ್ಬನೇ ಎಂಬ ತೀರ್ಮಾನಕ್ಕೆ ಮೂವರು ಬಂದು ಬಿಟ್ಟರು. ಹೇಳಿಕಳಿಸಿ ಶಿಖರಸೂರ್ಯನಿಗಾಗಿ ಕಾಯುತ್ತ ಕೂತರು.

ಶಿಖರಸೂರ್ಯ ಬಂದಾಗ ಅರಮನೆಯ ಮೊಗಸಾಲೆಯಲ್ಲಿ ಛಾಯಾದೇವಿ ಮತ್ತು ಆದಿತ್ಯಪ್ರಭ ಚಿಂತಾಕ್ರಾಂತರಾಗಿ, ಆತಂಕದಲ್ಲಿ ಕೂತಿದ್ದರು. ಇಬ್ಬರೂ ಮಾತಾಡಲಿಲ್ಲ. "ಚಿಕ್ಕಮ್ಮಣ್ಣಿಯ ಕೋಣೆ ಯಾವುದು?" ಅಂದ ಆದಿತ್ಯಪ್ರಭನಿಗೆ. ಯುವರಾಜ ಕೈಯಿಂದ ಒಂದು ಬಾಗಿಲು ತೋರಿಸಿದ. ಯುವರಾಜನ ಕಡೆಗೆ ನೋಡದೆ ಅವನು ತೋರಿದ ಕೋಣೆಯನ್ನು ಪ್ರವೇಶಿಸಿದ. ತಿಳಿ ಕೆಂಬಣ್ಣ ಬಳಿದ ವಿಶಾಲ ಕೋಣೆ, ಕಿಡಕಿಯ ಸುತ್ತ ಸುಣ್ಣ ಮತ್ತು ನೀಲಿ ಬಣದಲ್ಲಿ ಚಿತ್ತಾರ ಬರೆದಿದ್ದರು. ಅದರಡಿಯ ಮಂಚದಲ್ಲಿ ಕೂತಿದ್ದ ಮಹಾರಾಜ ಕಂಡ. ಇವನ ದೃಷ್ಟಿಯಿಂದ ತಪ್ಪಿಸಿಕೊಳ್ಳಲು, ಇವನಿಗಿಂತ ಮುಂಚೆ ರಾಜನೇ ಮುಖ ತಿರುಗಿಸಿದ್ದ. ಕಿಡಿಕಿಯಿಂದ ಬರುವ ಬೆಳಕು ಸಾಲದೆ ಮೂಲೆಯ ಕಡೆಗೆ ಮುಖ ತಿರುಗಿಸಿದ್ದರಿಂದ ರಾಜನ ಮುಖ ಕಾಣಿಸುತ್ತಿರಲಿಲ್ಲ. ಬಂದಾಗೊಮ್ಮೆ "ಬಾ ವೈದ್ಯನೇ" ಎಂದು ಕೈಚಾಚಿ ಕರೆಯುತ್ತಿದ್ದ ರಾಜ ಇಂದು ಬೇರೆ ಕಡೆ ಮುಖ ತಿರುಗಿಸಿದ್ದು ಶಿಖರಸೂರ್ಯನ ಕುತೂಹಲ ಕೆರಳಿಸಿತು. 'ಇವತ್ತೇನೋ ಆಗಿದೆ' ಎಂದು ಯೋಚಿಸುತ್ತಲೇ ಹೊರಗೆ ಬಂದ. ಪುನಃ ಯುವರಾಜನ ಕಡೆಗೆ ಪ್ರಶ್ನಾರ್ಥಕವಾಗಿ ನೋಡಿದ. ಅವನು ಮುಂದಿನ ಕೋಣೆ ಎಂದು ಸನ್ನೆಯಿಂದಲೇ ಹೇಳಿದ. ಮುಂದಿನ ಕೋಣೆಯ ಬಾಗಿಲು ತಳ್ಳಿ ಒಳಕ್ಕೆ ಹೋದ.

ಇದೂ ದೊಡ್ಡ ಕೋಣೆಯೇ. ಬಣ್ಣದ ಬಟ್ಟೆಗಳಿಂದ ಕಿಡಿಕಿಗಳನ್ನು ಅಲಂಕರಿಸಿದ್ದರು. ಕೆನೆಬಣ್ಣದ ಗೋಡೆಗಳಿಗೆ ಅಲಂಕಾರದ ಕಲಾತ್ಮಕ ವಸ್ತುಗಳನ್ನ ಅಂಟಿಸಲಾಗಿತ್ತು. ಅವನ್ನು ನೋಡುವ ತಾಳ್ಮೆ ಇಲ್ಲದೆ ನೇರ ಮಂಚದ ಕಡೆಗೆ ನೋಡಿದ. ಪೀಠದ ಮೇಳೆ ರಾಜಗುರು ಮಂಡಿಸಿದ್ದ. ಅವನೆದುರಿನ ಪೀಠದಲ್ಲಿ ಚಿಕ್ಕಮ್ಮಣ್ಣಿ ಬಿಕ್ಕುತ್ತ ಕೂತಿದ್ದಳು. ರಾಜಗುರುವಿನ ಆಚೆ ಪೀಠದಲ್ಲಿ ಅರ್ಥಕೌಶಲ ಕೂತಿದ್ದವನು ಗೊಂದಲದಲ್ಲಿ ಎದ್ದುನಿಂತು ದುಃಖದ ಅಭಿನಯವನ್ನೂ ಮಾಡುತ್ತ, ಹಸ್ತ ಹೊಸೆದು ಶಿಖರಸೂರ್ಯನ ಕಡೆಗೂ, ಚಿಕ್ಕಮ್ಮಣ್ಣಿಯ ಕಡೆಗೂ ನೋಡುತ್ತ, ತನ್ನ ಅಸಹಾಯಕತೆಗೆ ತಾನೇ ಮರುಗುತ್ತ ಶಿಖರಸೂರ್ಯನಿಗೆ ಕೂರಲು ಒಂದು ಆಸನ ತೋರಿಸಿದ.

ಚಿಕ್ಕಮ್ಮಣ್ಣಿ ಅತ್ತು ಅತ್ತು ಮುಂಗೂದಲು ಚದುರಿ ಬೆವರು ಕಣ್ಣೀರಲ್ಲಿ ಒದ್ದೆಯಾಗಿದ್ದವು. ಕಣ್ಣುಮೂಗಿನ ತುದಿಗಳು ಕೆಂಪಗಾಗಿ ಮುಖ ಊದಿಕೊಂಡಿತ್ತು. ಹಣೆಯ ಕುಂಕುಮದಲ್ಲಿ ಬೆವರ ಹನಿ ಹರಿದು ಅದರಗುಂಟ ಕುಂಕುಮ ಮೆತ್ತಿ ಹಣೆಯಿಂದ ನೆತ್ತರು ಸೋರಿದ ಹಾಗೆ ಕಾಣುತ್ತಿತ್ತು. ಸೀರೆ ಮತ್ತು ಆಭರಣಗಳು ಅಸ್ತವ್ಯಸ್ಥವಾಗಿದ್ದವು. ಶಿಖರಸೂರ್ಯನನ್ನು ನೋಡಿ ದುಃಖ ಒತ್ತರಿಸಿ ಬಂತು. ಎದ್ದು ಅವನಲ್ಲಿಗೆ ಹೋಗಿ ಅವನ ಎರಡೂ ಹಸ್ತಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಅಂಗಲಾಚಿದಳು:

"ಮಗನೆ, ನನಗೊಂದು ಉಪಕಾರ ಮಾಡುತ್ತೀಯ ನನ್ನಪ್ಪ?"

ಎಂದು ಹೇಳಿ ಅವನ ಉತ್ತರಕ್ಕೆ ಅವಕಾಶ ಕೊಡದೆ, ಅವನ ಮುಖವನ್ನೇ ನೋಡುತ್ತ ತತ್ಕಾಲದ ಸಂದರ್ಭವನ್ನು ವಿವರಿಸಿದಳು. ಆಕೆ ನಿರೀಕ್ಷಿಸಿದ್ದಂತೆ ಅವಳ ಕೈಗಳಲ್ಲಿ ತನ್ನ ಅಗಲವಾದ ಹಸ್ತಗಳನ್ನ ಚಲಿಸದಂತೆ ಇಟ್ಟು, ಚಿಕ್ಕಮ್ಮಣ್ಣಿಯ ಮುಖವನ್ನೇ ನೋಡುತ್ತ ಹಾ ಹೂ ಎನ್ನದೆ, ಮಧ್ಯೆ ಪ್ರಶ್ನೆ ಕೇಳದೆ, ಅವಳು ಹೇಳಿದ್ದನ್ನೆಲ್ಲ ಕೇಳಿಸಿಕೊಂಡು "ಆಗಲಿ ತಾಯಿ" ಎಂದು ನಮ್ರತೆಯಿಂದ ಹೇಳಿ ಶಿಖರಸೂರ್ಯ ಬಿಟ್ಟ ಬಾಣದ ಹಾಗೆ ಹೊರಗೆ ಹೋದ. ಹಿಂದಿನಿಂದ ಅರ್ಥಕೌಶಲನೂ ಹೋದ.

ಇಂದ್ರಭವನಕ್ಕೆ ಬಂದ ಶಿಖರಸೂರ್ಯ ನೇರ ಬಿಳಿಗಿರಿರಾಯನ ಹೆಣವಿದ್ದಲ್ಲಿಗೆ ಹೋದ. ಹೆಣ ನೋಡಿದ್ದೇ ಅನುಮಾನ ಬಂತಾದರೂ ವಿವರಣೆ ಕೇಳುವ ಸಂದರ್ಭ ಇದಲ್ಲ ಎಂದು ಸುಮ್ಮನಾದ. ಸುಮಾರು ಹದಿನೆಂಟಿಪ್ಪತ್ತು ಜನ ಬುಡಕಟ್ಟಿನ ಬಂಟರು ಅಲ್ಲಲ್ಲಿ ಗುಂಪುಗುಂಪಾಗಿ ಅಸಮಾಧಾನದಿಂದ ನಿಂತಿದ್ದವರು ಇವನನ್ನು ಕಂಡುದೇ ಕೋಪದಿಂದ ಸುತ್ತುವರಿದು ನಿಂತರು. ಅವರಲ್ಲಿ ಅನೇಕರು ಕೈದುಧಾರಿಗಳಾಗಿದ್ದರು. ತಲೆಗೆ ಹಕ್ಕಿಯ ಗರಿ ಸಿಕ್ಕಿಸಿಕೊಂಡು ಕೆನ್ನೆ ಹಣೆ ಗದ್ದಗಳಿಗೆ, ಕೆಳಗೆ ಬೆನ್ನು ಎದೆ ತೋಳುಗಳಿಗೆ ಕೆಂಪು ಬಣ್ಣದ ಪಟ್ಟೆ ಬಳಿದುಕೊಂಡಿದ್ದರು. ಒಂದೇ ಬುಡಕಟ್ಟಿನವರೆಂದು ಹೇಳಲು ಸುಲಭವಾಗುವಷ್ಟು ಎಲ್ಲರ ಬಣ್ಣದ ಗೀರುಗಳಲ್ಲಿ ಸಾಮ್ಯವಿತ್ತು. ಕುರಿ ಉಣ್ಣೆಯ ಒರಟಾದ ತುಂಡು ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಂಡು ಕೈಯಲ್ಲಿ ಕೆಲವರು ಉದ್ದವದ ಭಲ್ಲೆ ಹಿಡಿದಿದ್ದರು. ಸೊಂಟದಲ್ಲಿ ಚೂರಿಗಿಂತ ಉದ್ದವಾದ ಆದರೆ ಕತ್ತಿಯಲ್ಲದ ಆಯುಧವನ್ನು ಸಿಕ್ಕಿಸಿಕೊಂಡಿದ್ದರು. ಕೂದಲು ಜಡೆಗಟ್ಟಿ ಕಗ್ಗಾಡುವಾಸನೆ ಬರುತ್ತಿತ್ತು. ಶಿಖರಸೂರ್ಯ ಅವರನ್ನು ನೋಡಿ ಮುಗುಳು ನಗುತ್ತ ಅವರೂ ಮುಗುಳು ನಗಲೆಂದು ಅಥವಾ ಮೈಮರೆಯಲೆಂದು ನೋಡುತ್ತ ನಿಂತ. ಅವರ್ಯಾರೂ ಇಂಥ ಅಮಾನುಷ ವ್ಯಕ್ತಿಯನ್ನು ನಿರೀಕ್ಷಿಸಿರಲಿಲ್ಲ ಮತ್ತು ಕಂಡಿರಲಿಲ್ಲವೆನ್ನುವದು ಅವರ ಬೆರಗಿನ ಮುಖಚರ್ಯೆಯಿಂದಲೇ ತಿಳಿಯುತ್ತಿತ್ತು. ಎಲ್ಲರಿಗಿಂತ ಒಂದಡಿ ಎತ್ತರದ ಅವನ ನಿಲುವು, ಭುಜದ ಮೇಲೊರಗಿದ್ದ ನೀಳ ಕೂದಲು, ಹುಬ್ಬು ದಪ್ಪ, ಪೊದೆಯಾದ ಕಿವಿಗೂದಲು ಅಜಾನುಬಾಹು ದೇಹಾಕೃತಿ ನೋಡಿ ಅವರಲ್ಲಿಯ ಅನೇಕರು ಗಾಬರಿಯಾದರು. ಅಷ್ಟರಲ್ಲಿ ಭಂಟರ ನಾಯಕ ಸುಕ್ರ 'ಬೆಟ್ಟಾ' ಎಂದು ಕೂಗಿದ. ಅವರಲ್ಲಿ ದೂರ ನಿಂತವನೊಬ್ಬ ತಡಮಾಡಬಾರದೆಂದು ಭಯದಲ್ಲಿ ಆವೇಶ ಬಂದವರಂತೆ ಭಲ್ಲೆಯ ತುದಿಯನ್ನು ಗುರಿಹಿಡಿದು, ಕಿಟಾರನೆ ಕಿರುಚುತ್ತ ಓಡಿ ಬಂದು ಶಿಖರಸೂರ್ಯನ ಎದೆಗೇ ತಿವಿದ. ಲೋಹಕ್ಕೆ ಲೋಹ ತಾಗಿದಂತೆ ಕೊಂಚ ಸದ್ದು ಮಾಡಿ ಭಲ್ಲೆಯದ ತುದಿ ಜಾರಿತು! "ಇನ್ನೊಮ್ಮೆ ಇರಿ" ಎಂದು ಶಿಖರಸೂರ್ಯ ಎದೆ ಸೆಟೆಸಿ ಅವನಿಗೆದುರಾಗಿ ನಿಂತ ಆಗ ಇನ್ನೊಮ್ಮೆ, ಈ ಸಲ ಇನ್ನೂ ಜೋರಾಗಿ ಇರಿದ. ಭಲ್ಲೆ ಹಿಂದೆ ಪುಟಿದು ಕೆಳಗೆ ಬಿತ್ತು! ಬಾಗಿ ತಕ್ಕೊಳ್ಳಲು ಭಯವಾಗಿ ಹಾಗೇ ನಿಂತ. ಕೂಡಲೇ ಶಿಖರಸೂರ್ಯ ಪಕ್ಕದವನ ಕಿರುಗತ್ತಿ ಹಿರಿದು ಇನ್ನೊಬ್ಬನ ಕೈಗಿತ್ತು 'ಹೊಯ್' ಎಂದು ಎದೆಯುಬ್ಬಿಸಿ ಒಡ್ಡಿದ. ಆತ ಹೊಡೆದರೆ ಖಣಲ್ ಖಣಲ್ ಎಂದು ಲೋಹಕ್ಕೆ ಹೊಡೆದ ಸದ್ದಾಗಿ ನಿಂತವರೆಲ್ಲ ಗಾಬರಿಯಾದರು. ಯಾರೊಬ್ಬರ ಬಾಯಿಂದಲೂ ಮಾತು ಬರದಾಯ್ತು. ಇವನ್ಯಾರಿರಬೇಕೆಂದು ದಿಗಿಲಾಗಿ, ಈತ ತಮಗೇನೂ ಮಾಡದಿರಲೆಂದು ಶಿಖರಸೂರ್ಯನ ಮುಖವನ್ನೇ ದಯೆ ಯಾಚಿಸುವಂತೆ ಕಣ್ಣಗಲಿಸಿ ನೋಡುತ್ತ ನಿಂತರು! ಇವನ್ಯಾರೋ ದೊಡ್ಡ ಗುಡ್ಡನಿರಬೇಕೆಂದು ಎಲ್ಲರೂ ಅವನೆದುರು ಬಾಗಿ, ನೆಲಕ್ಕೆ ಕೈ ಊರಿ ಹಣೆಯಿಂದ ಎರಡು ಬಾರಿ ನೆಲ ಕುಟ್ಟಿ ಶರಣಾದರು! ಶಿಖರಸೂರ್ಯನಿಗೂ ಧೈರ್ಯ ಬಂತು. ಆಜ್ಞೆ ಮಾಡುವಂತೆ ಬಿರುಸಾಗಿ "ಬನ್ನಿ ಹೆಣ ಚಂದ ಮಾಡುವಾ" ಎಂದು ಕೂಗಿದೊಡನೆ ಎಲ್ಲರೂ ನೆರವಾಗಲು ಬಂದರು. ದೂರದಿಂದ ಇದನ್ನೆಲ್ಲ ಬಿಟ್ಟಗಣ್ಣು ಬಿಟ್ಟಂತೆ ನೋಡುತ್ತಿದ್ದ ಅರ್ಥಕೌಶಲ ಕಾಲಿಗೆ ಬುದ್ಧಿ ಹೇಳಿದ.

# ಹತ್ತೊಂಬತ್ತು

ಬಿಳಿಗಿರಿರಾಯನ ಅಂತ್ಯಸಂಸ್ಕಾರ ಮುಗಿದ ಮೇಲೆ ಅವನ ಜೊತೆ ಬಂದ ಬಂಟರು ತಮ್ಮ ಸೀಮೆಗೆ ಹೊರಟು ನಿಂತಾಗಲೇ ಶಿಖರಸೂರ್ಯ ಎಚ್ಚರಗೊಂಡ. ಕನಕಪುರಿಯಲ್ಲಿ ಅವರಂಥ ನಂಬಿಕಸ್ಥರು ಸಿಕ್ಕುವುದು ಸಾಧ್ಯವಿಲ್ಲವೆಂದು ಅವನಿಗೆ ಗೊತ್ತು. ಅವರೊಂದಿಗಿನ ಅಲ್ಪಾವಧಿಯ ಒಡನಾಟದಲ್ಲಿ ಅವರ ಚಾಕಚಕ್ಯತೆಯ ಕೈಚಳಕ, ಪರಸ್ಪರ ತಿಳುವಳಿಕೆ, ಕಣ್ಣು ಮೂಗು ತುಟಿ ಮತ್ತು ಕೈಕಾಲು ಬೆರಳು ಸನ್ನೆಗಳ ಮೂಲಕವೇ ಇನ್ನೊಬ್ಬನಿಗೆ ಸಂದೇಶ ಕಳಿಸುವ ಅವರ ಸಂವಹನ ವ್ಯವಸ್ಥೆಗೆ ಬೆರಗಾದ. ಅವರು ಬಂದಾಗಿನಿಂದ ಈ ವರೆಗೆ ಸಂಬಳವನ್ನೇ ಕೊಟ್ಟಿರಲಿಲ್ಲವೆಂದು ತಿಳಿಯಿತು. ತಕ್ಷಣ ಅರ್ಥಕೌಶಲನ ಬಳಿಗೆ ಹೋಗಿ ಹಣದ ವ್ಯವಸ್ಥೆ ಮಾಡಿಕೊಂಡು ಬಂದ.

ಮೊದಲು ಸುಕ್ರನನ್ನು ಕರೆದ. ಆತ ಬಂದು ಬಾಗಿ ನಿಂತೊಡನೆ ಅವನ ಕೈಗೆ ನಲವತ್ತು ಹಣ ನೀಡಿ ಅವನ್ನು ಕೃತಜ್ಞತೆಯಿಂದ ತಬ್ಬಿಕೊಂಡ. ಹಣವನ್ನೇ ಕಾಣದ ಎಲ್ಲರ ಮುಖಗಳೂ ಅರಳಿದವು. ಆಮೇಲೆ ಪ್ರತಿಯೊಬ್ಬರ ಕೈಗೂ ಹಣಕೊಟ್ಟ. ಒಬ್ಬೊಬ್ಬರಿಗೆ ಹಣ ಕೊಡುವಾಗಲೂ ಅವರ ಕೈ ಹಿಡಿದುಕೊಂಡು ಮುಖಭಾವದಲ್ಲಿ ಕೃತಜ್ಞತೆ ಸೂಚಿಸಿ ಮೃದುವಾಗಿ ಹಿಸುಕಿದ. ಇದು ಬಂಟರ ಮೇಲೆ ಬಹಳ ಪರಿಣಾಮ ಬೀರಿತು. ಇಷ್ಟು ದಿವಸ ಅಸ್ಪೃಶ್ಯರಂತಿದ್ದ ಅವರಲ್ಲಿ ಕೃತಜ್ಞತಾ ಭಾವ ಮೂಡಿ ಆರ್ದ್ರ ಹೃದಯಿಗಳಾದರು. ಕೆಲವರು ಜಲಜಲ ಕಣ್ಣೀರುಗರೆದರು. ಇನ್ನೇನು ಅವರು ಹೊರಡಲಿದ್ದಾಗ ಶಿಖರಸೂರ್ಯ

"ಸುಕ್ರ" ಅಂದ.

"ಒಡೆಯಾ"

"ಇಲ್ಲಿ ಬಾ"

ಎಂದು ಹೇಳಿ ಅವನನ್ನು ಒಳಮನೆಗೆ ಕರೆದುಕೊಂಡು ಹೋದ, ನಿಂತ ಬಂಟರು ಪ್ರಶ್ನಾರ್ಥಕ ದೃಷ್ಟಿಗಳನ್ನು ವಿನಿಮಯ ಮಾಡಿಕೊಂಡು 'ಕಾಯೋಣ'ವೆಂದು ಸನ್ನೆಯಿಂದ ತೀರ್ಮಾನಿಸಿ ನಿಂತರು.

ಒಳಗೆ ಬಂದು ಶಿಖರಸೂರ್ಯ ಕಿಡಿಕಿಯ ಬಳಿಯ ಪೀಠದ ಮೇಲೆ ಕುಂತು ಸುಕ್ರನಿಗೆ ಇನ್ನೊಂದು ಪೀಠ ತೋರಿಸಿದ. ಸುಕ್ರ ನಿರಾಕರಿಸಿ ಅವನ ಪೀಠದ ಬಳಿ ನೆಲದ ಮೇಲೆ ಕುಂತ. ಒತ್ತಾಯ ಮಾಡಿದರೂ ಸ್ಥಳ ಬದಲಿಸಲಿಲ್ಲ. ಅವನ ಮುಖವನ್ನೇ ನೋಡುತ್ತ ಶಿಖರಸೂರ್ಯ ಕೇಳಿದ:

"ಸುಕ್ರ, ಮಾತು ನಮ್ಮಿಬ್ಬರಲ್ಲೇ ಇರಬೇಕು. ಒಪ್ಪಿಗೆಯಾ?"

"ಬೆಟ್ಟದಯ್ಯನಾಣೆ ಒಪ್ಪಿದೆ ಒಡೆಯಾ"

"ಸುಕ್ರ, ನಿಮ್ಮ ರಾಯರದು ಸಾವೊ? ಕೊಲೆಯೊ?"

"ಕೊಲೆ ಒಡೆಯಾ."

ನಿರೀಕ್ಷಿದ ಉತ್ತರವೇ ಸಿಕ್ಕಿದ್ದರಿಂದ ಆಶ್ಚರ್ಯವಾಗಲಿಲ್ಲ. ಆದರೆ ಆಸಕ್ತಿ ಕೆರಳಿತು.

“ಹಗಲು ರಾತ್ರಿ ರಾಜನೊಂದಿಗೆ ಇರುತ್ತಿದ್ದವನು ನೀನು. ಈಗ ನೀನೇ ಹೇಳು: ಕೊಲೆ ಮಾಡಿದವಳು ಒಬ್ಬ ವಿಷಕನ್ಯೆ. ಆಕೆಯನ್ನು ಯಾರು ಕಳಿಸಿದ್ದು?”

“ಪ್ರಧಾನರ ತಿಳುವಳಿಕೆ ಇಲ್ಲದೆ ಇಲ್ಲಿ ಏನೂ ನಡೆಯುವುದಿಲ್ಲ. ಅಲ್ಲವೇ”

ಶಿಖರಸೂರ್ಯ ಸ್ವಲ್ಪ ಹೊತ್ತು ಮಾತಾಡಲಿಲ್ಲ. ಆಮೇಲೆ ಸುಕ್ರನನ್ನೇ ನೋಡುತ್ತ “ನೀವರಿಲಿಲ್ಲವೇ”? ಅಂದ.

“ನಾವಿಷ್ಟು ಜನ ಇದ್ದೂ ನಮ್ಮ ರಾಜನನ್ನು ಉಳಿಸಲಾಗಲಿಲ್ಲ ಒಡೆಯಾ!”

ಎಂದು ಹೇಳುತ್ತ ಸುಕ್ರ ಕಂಬನಿ ಮಿಡಿದು, ಹೇಳಿದ:

“ಕನಕಪುರಿಯೆಂದರೆ ಗೊತ್ತ ಒಡೆಯಾ? ಸುಳ್ಳು ಕಪಟ ಮಾಡುವವರು, ಒಂದು ಬಳ್ಳ ಭತ್ತಕ್ಕೆ ತಲೆ ಕಡಿಯುವವರು, ಎಂದು ಆಗಾಗ ನಮ್ಮ ರಾಜ ಹೇಳುತ್ತಲೇ ಇದ್ದ. ಅವನು ಹೇಳಿದ ಹಾಗೇ ಆಯ್ತು. ಈ ಜನ ಅವನ ಮಾನಕ್ಕೆ ಹೀನಾಯ ಮಾಡಿ ಕೊಂದರು. ಅದನ್ನೆಲ್ಲ ನೆನೆದರೆ ಕಣ್ಣೀರು ಬರುವಲ್ಲಿ ನೆತ್ತರು ಬರುತ್ತದೆ ಒಡೆಯಾ”

ಎಂದು ಹೇಳುತ್ತ, ಕೋಪದಿಂದ ನಡುಗುತ್ತ, ಕಡುದುಃಖದ ಕಣ್ಣೀರನತ್ತ. ದುಃಖದ ಆವೇಗ ಕಡಿಮೆ ಆಗಲೆಂದು ತುಸುಹೊತ್ತು ಸುಮ್ಮನಿದ್ದು ಆಮೇಲೆ ಮೆಲ್ಲಗೆ ಅವನ ಭುಜದ ಮೇಲೆ ಕೈಯಿಟ್ಟ ಶಿಖರಸೂರ್ಯ. ಹಾಗೆ ದುಃಖಿಸಿದ್ದು ಹುಟ್ಟಾ ಬಂಟನಾದ ತನಗೆ ಅವಮಾನಕರವೆಂದು ಸುಕ್ರನಿಗೆ ಅನ್ನಿಸಿತು. ಕಣ್ಣೀರನೊರೆಸಿಕೊಂಡು, ಉರಿಯುವ ನೇತ್ರಗಳಿಂದ ಅರಮನೆಯನ್ನು ನೋಡುತ್ತ ಎದ್ದು ಹೇಳಿದ:

“ರಾಯನಿಲ್ಲದೆ ಬರಿಗೈಯಲ್ಲಿ ಹೋಗಿ ಜನಕ್ಕೆ ನಾವೇನು ಹೇಳಬೇಕು ಒಡೆಯಾ?”

“ನಿಮ್ಮ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ ಸುಕ್ರ”

ಅಂದ ಶಿಖರಸೂರ್ಯ. ತಕ್ಷಣ ಸುಕ್ರನ ಕರ್ತವ್ಯ ಪ್ರಜ್ಞೆ ಜಾಗೃತವಾಯಿತು. ಗಟ್ಟಿಯಾಗಿ ಕೋಲೂರಿ ಹಾಗೇ ನಿಂತ. ಶಿಖರಸೂರ್ಯ ಕೇಳಿದ:

“ಹೇಳು ಸುಕ್ರ ಈ ಕೊಲೆಗೆ ಏನು ಕಾರಣ?”

ಸುಕ್ರ ಹೇಳಿದ:

“ಇನ್ನೇನಿರುವುದು ಸಾಧ್ಯ ಒಡೆಯಾ ತರುವಷ್ಟು ಚಿನ್ನವನ್ನ ಇಲ್ಲಿಗೆ ತಂದು ಉಳಿದದ್ದನ್ನು ನಮ್ಮ ರಾಜ ಗುಪ್ತಸ್ಥಳದಲ್ಲಿ ಇಟ್ಟು ಬಂದ. ಆ ಸ್ಥಳ ಗೊತ್ತಿಲ್ಲದ ಈಗಿನ ರಾಜ ಅಂದರೆ ನಮ್ಮ ರಾಜನ ತಮ್ಮ ಶಿವದೇವರಾಯ “ವೈರ ಮರೆತು, ನಮ್ಮ ರಾಜ್ಯಕ್ಕೇಬಂದು ನೆಮ್ಮದಿಯಿಂದ ಇರಬಹುದಲ್ಲ? ನಾವು ಕನಕಪುರಿಯವರಷ್ಟು ಕಟುಕರಲ್ಲ.”

-ಎಂದು ಹೇಳಿ ಕಳಿಸಿದ. ಇದು ನಮ್ಮ ರಾಜನಿಗೂ ಒಪ್ಪಿಗೆಯಾಯಿತು. ಎಷ್ಟೆಂದರೂ ರಕ್ತ ಸಂಬಂಧ. ಅವನು ಕೊಂದರೂ ಇವರು ಮಾಡುವ ಅವಮಾನಕ್ಕಿಂತ ಮೇಲು-ಎಂದುಕೊಂಡು ಹೊರಡುವ ತಯಾರಿ ಮಾಡಿದ. ಇದೆಲ್ಲವೂ ನಿಮ್ಮ ಪ್ರಧಾನಿಗೆ ಗೊತ್ತಾಯಿತು. ಇವರ ಬಳಿ ಬಚ್ಚಿಟ್ಟ ಚಿನ್ನವಿದೆ ಎಂದು ತಿಳಿದದ್ದೇ ನಮ್ಮ ರಾಜನ ಸೇವೆಯ ವ್ಯವಸ್ಥೆ ಒಂದೇ ತಾಸಿನಲ್ಲಿ ಅದ್ಭುತವಾಗಿ ಮೇಲೇರಿತು.

ಆಳುಕಾಳುಗಳೇನು, ಸೇವೆ ಚಾಕರಿಗಳೇನು! ಮಹಾರಾಣಿಯೇ ಖುದ್ದಾಗಿ ಜರತಾರಿ ಕುಸುರಿ ಪೀತಾಂಬರವುಟ್ಟು ಅಲಂಕೃತಳಾಗಿ ಸಡಗರದಲ್ಲಿ ಸರಸರ ಸದ್ದು ಮಾಡುತ್ತ ಬಂದಳು! ನಮ್ಮ ರಾಜ ನನ್ನ ಲಘುವಾಗಿ ಉಪಚರಿಸಿದ್ದಕ್ಕೆ ಪ್ರಧಾನಿ ಮೊದಲಾಗಿ ಎಲ್ಲರನ್ನು ವಾಚಾಮಗೋಚರ ಬೈದಳು. ಸಂಗೀತಮಯ ವಿಶೇಷಣಗಳಿಂದ ನಮ್ಮ ರಾಜನನ್ನು, ಅವನ ಧಾರಾಳತನವನ್ನು ಹೊಗಳಿದಳು. ಸುದೈವದಿಂದ ನಮ್ಮ ರಾಜ ಆಕೆಯ ಮಾತಿಗೆ ಮರುಳಾಗಲಿಲ್ಲ.

ಚಿಕ್ಕಮ್ಮಣ್ಣಿಯನ್ನು ಮೊದಲು ಇಲ್ಲಿಗೆ ಕಳಿಸುತ್ತಿರಲಿಲ್ಲ. ಈಗ ಕರೆತಂದು ಇಲ್ಲಿ ಬಿಟ್ಟು ಹೋದಳು. ಅಣ್ಣನನ್ನು ನೋಡಿ ತಂಗಿ, ತಂಗಿಯನ್ನು ನೋಡಿ ಅಣ್ಣ ಇಬ್ಬರೂ ಕಣ್ಣೀರುಗರೆದರೇ ವಿನಾ ಮಾತಾಡಲಿಲ್ಲ. ಕೊನೆಗೆ ಮೋದಹ ಮೋಡಿಗಾರುಡಿಗಳ ಬಲ್ಲ ಪರಮಾಯಿಷಿ ಹೆಣ್ಣೊಂದನ್ನು ಕಳಿಸಿದರು."

'ಈಗ ಚೆನ್ನ ಎಲ್ಲಿದೆ? ನಿನಗೆ ಗೊತ್ತಿಲ್ಲವೆ ಸುಕ್ರ?" ಎಂಬ ಪ್ರಶ್ನೆ ಶಿಖರಸೂರ್ಯನ ನಾಲಗೆಯ ತುದಿತನಕ ಬಂದಿತ್ತು. ಕೇಳಲಿಲ್ಲ. ಅವನೇ ಹೇಳಲೆಂದು ಅವನ ಮುಖವನ್ನೇ ನೋಡುತ್ತ ಕೂತ. ಅಧರೆ ಸುಕ್ರ ವಿಷಕನ್ಯೆಯ ವಿಷಯದಿಂದ ಇನ್ನೂ ಹೊರಬಂದಿರಲಿಲ್ಲ. ಅದು ಅವನನ್ನ ಗಾಢವಾಗಿ ತಟ್ಟಿದಂತಿತ್ತು.

"ನಮ್ಮ ರಾಜನಾದರೋ ಪಾನಪ್ರಿಯ ಪ್ರಣಯ ವಿಲಾಸಿ. ಅವಳೋ ಅಪ್ಸರೆ. ಅವಳ ಕಡೆಯಿಂದ ಸುಳಿವ ಗಾಳಿಗೂ ಮದನಜ್ವರ ಏರುತ್ತಿತ್ತು. ಅಂಥ ಕಾಮೋಜ್ವಲೆಯ ಮುಂದೆ ಗಂಡಸಿನ ಗಂಡಸುತನ, ದೃಢ ನಿರ್ಧಾರಗಳು ಬೆಂಕಿಯ ಮುಂದಿನ ಬೆಣ್ಣೆಯಂತೆ ಕರುತ್ತಿದ್ದವು. ನಮ್ಮ ರಾಜನಾಗಲೇ ಮರ್ಯಾದೆಯ ಗಡಿಗಳನ್ನ ದಾಟಿ ಬಿಟ್ಟಿದ್ದ. ಇವನ ಮುಗ್ಧತನಕ್ಕೆ ಬೆರಗಾದ ಅವಳಿಗೆ ಅದ್ಯಾಕೆ ಕರುಣೆ ಬಂತೋ- ಬೇಡಬೇಡವೆಂದು ಗೋಗರೆದಳು. ಅವಳ ತೊಡೆಯಿಂದ ಅವನನ್ನು ಸೆಳೆದು ತರಲು ನಾವು ಮಾಡಿದ ಪ್ರಯತ್ನ ಫಲ ಕೊಡಲಿಲ್ಲ. ಬಾಗಿಲು ಭದ್ರವಾಗಿತ್ತು. ಕೊನೆಗೆ ಹೀಗಾದರೂ ನಮ್ಮ ರಾಜ ಆನಂದವಾಗಿರಲೆಂದು ನಾವೂ ಸುಮ್ಮನಾದೆವು. ಬೆಳಿಗ್ಗೆದ್ದು ನೋಡಿದಾಗ ಅವಳು ಅಲ್ಲಿರಲಿಲ್ಲ! ರಾಜನ ಶವ ಇತ್ತು! ಆಕೆ ವಿಷಕನ್ಯೆಯೆಂದು ನಮಗೆ ಆಗಲೇ ಗೊತ್ತಾಯಿತು!"

ಇಬ್ಬರ ಮಧ್ಯೆ ದಟ್ಟವಾದ ಮೌನ ಆವರಿಸಿತು. ಕಂಬನಿ ಮಿಡಿಯುತ್ತ ಸುಕ್ರ ನಿಂತ. ನೆಲ ನೋಡುತ್ತ ಶಿಖರಸೂರ್ಯ ಕೂತ. ತನ್ನಲ್ಲಿದ್ದ ಎಲ್ಲ ಕಂಬನಿಗಳ ಅತ್ತನೆಂದೆನಿಸಿದಾಗ ಶಿಖರಸೂರ್ಯ ಹೇಳಿದ:

"ಚಿಕ್ಕಮ್ಮಣ್ಣಿಯ ಬಗ್ಗೆ ನನಗೆ ಕಾಳಜಿಯಿಂದ ಸುಕ್ರ,"

ಸುಕ್ರನಿಗೆ ತಕ್ಷಣ ಚಿಕ್ಕಮ್ಮಣ್ಣಿಯ ಮಾತು ನೆನಪಾಯಿತು; 'ಮೃಗಗಳೇ ತುಂಬಿಕೊಂಡಿರುವ ಅರಮನೆಯಲ್ಲಿ ಶಿಖರಸೂರ್ಯ ಒಬ್ಬನೇ ನಂಬಿಕಸ್ಥ ಕಣಪ್ಪ. ನನಗೆ ಅವನೇ ಆಸರೆ' ಎಂದಿದ್ದಳು.

ಸುಕ್ರ ಸೂಕ್ಷ್ಮಕಣ್ಣುಗಳಿಂದ ಶಿಖರಸೂರ್ಯನ ಹೃದಯದೊಳಗೆ ಇಳಿಯುವಂತೆ ಅವನನ್ನೇ ನೋಡಿದ. ಇವನನ್ನ ನಂಬಬಹುದೆನ್ನಿಸಿತು. ಶಿಖರಸೂರ್ಯ ಹೇಳಿದ:

"ನಾನೂ ನಿನ್ನಂತೆ ಈ ಊರಿಗೆ ಹೊರಗಿನವ ಸುಕ್ರ. ನಿನ್ನ ದುಃಖದಲ್ಲಿ ನಾನೂ ಭಾಗಿ. ನೀನು ನನ್ನನ್ನು ನಂಬುತ್ತೀಯಾ ಸುಕ್ರ? ನಂಬಿದರೆ ಮುಂದೆ ಮಾತಾಡಬಹುದು. ಇಲ್ಲಿದಿದ್ದರೆ ಬೇಡ, ಹೊರಡು"

"ನಂಬಿದೆ. ಅದೇನು ಹೇಳೊಡೆಯಾ."

ಎಂದು ಹೇಳಿ ತನ್ನ ಎಡಗೈಯಲ್ಲಿ ಬಲಗೈ ಹಾಕಿಕೊಂಡು ಎದೆಗೆ ಮುಟ್ಟಿಕೊಂಡು ತನ್ನನ್ನು ನಂಬಬಹುದೆಂದು ಸೂಚಿಸಿದ. ಮುಂದೆ ಶಿಖರಸೂರ್ಯನಿಗೆ ತೊಂದರೆಯಾಗಲಿಲ್ಲ.

ಸುಕ್ರನಲ್ಲಿ ಸ್ನೇಹೋಲ್ಲಾಸಗಳನ್ನು ಕೆರಳಿಸಿ ಹೇಳಿದ ಎಲ್ಲವನ್ನು ಪ್ರಶ್ನೆಯಿಲ್ಲದೆ ಒಪ್ಪಿಕೊಳ್ಳುವಂತೆ ಶಿಖರಸೂರ್ಯ ಮೋಡಿ ಮಾಡಿದ. ಈಗ ಇಬ್ಬರ ನಡುವೆ ಸಂವಹನ ಸುಲಭವಾಯಿತು. ಸುಕ್ರ ಬೇರೆಲ್ಲೂ ಸೇರದೆ ತನ್ನ ಆಪ್ತ ಮಿತ್ರನಾಗಿ ದಳವಾಯಿಯಾಗಿರಬೇಕೆಂದೂ, ಒಂದು ಕಡಿಮೆ ನಲವತ್ತು ಭಂಟರ ಪಡೆ ಕಟ್ಟಿ ಸದ್ಯ ತನ್ನ ಹಟ್ಟಿಯಲ್ಲೇ ನಿತ್ಯ ಕವಾಯತು ಮಾಡುತ್ತಿರಬೇಕೆಂದೂ ಮಾತಾಯಿತು. ಚುರುಕಿನ ಹಾಗೂ ನಂಬಕಸ್ಥರಾದ ನಾಲ್ಕು ಭಂಟರನ್ನು ತನ್ನಲ್ಲಿಟ್ಟಿರಬೇಕೆಂದೂ ಅವರ ಮೂಲಕ ಸುಕ್ರನ ಹಟ್ಟಿಗೂ ಕನಕಪುರಿಯ ತನ್ನ ಮನೆಗೂ ಸಂದೇಶ ರವಾನೆಯಾಗುತ್ತಿರಬೇಕೆಂದೂ, ಇವರೆಲ್ಲರ ಸಂಬಳದ ವ್ಯವಸ್ಥೆ ಮಾಡುವುದಾಗಿಯೂ ಮಾತಾಗಿ, ಮಾತಿಗಿಬ್ಬರೂ ಒಪ್ಪಿ ವೀಳ್ಯ ಬದಲಿಸಿಕೊಂಡು ತಿಂದರು. ಆಮೇಲೆ ಇಬ್ಬರೂ ಆಲಂಗಿಸಿ ಎದೆಗೆ ಎದೆ ತಾಗಿಸಿ ವಿಶ್ವಾಸಗಳನ್ನು ದೃಢಪಡಿಸಿಕೊಂಡು ಈ ಎಲ್ಲವನ್ನೂ ಗುಟ್ಟಾಗಿಡುವ ಪ್ರತಿಜ್ಞೆಗೈದರು. ಆಮೇಲೆ ಸುಕ್ರ ತನ್ನ ಮೇಲಾಧಿಕಾರಿಗೆ ಮಾಡುವಂತೆ ಬಿಲ್ಲಿನಂತೆ ಬಾಗಿ ಯಥೋಚಿತ ಗೌರವಾರ್ಪಣೆ ಆಚರಿಸಿದ. ಶಿಖರಸೂರ್ಯನ ಮುಖದಲ್ಲೂ ತೃಪ್ತಿಯ ಮಂದಹಾಸ ಮೂಡಿತು. ಆಮೇಲೆ ಇಬ್ಬರೂ ಹೊರಗೆ ನಿಂತ ಭಂಟರನ್ನು ತಮ್ಮ ಮುಗುಳುನಗೆಯಲ್ಲಿ ಮೀಯಿಸುತ್ತ ಹೊರಬಂದರು.

## ಇಪ್ಪತ್ತು

ಅದಾಗಿ 'ಹಾ' ಅನ್ನುವುದರೊಳಗಾಗಿ ಶಿಖರಸೂರ್ಯನ ವಜ್ರದೇಹದ ಸುದ್ದಿ ಪುರದ ತುಂಬ ಹಬ್ಬಿತು. ಬಿಳಿಗಿರಿರಾಯನ ಭಂಟರು ಅವನನ್ನ ಹ್ಯಾಗೆ ಇರಿದರು? ಇವನು ಹ್ಯಾಗೆ ಎದುರಿಸಿದ? ಹ್ಯಾಗೆ ಅವರೆಲ್ಲ ಶರಣಾಗಿ ಬಾಗಿ ನಿಂತರು... ಇತ್ಯಾದಿ, ಆಳಿಗೊಂದು ಕತೆ ಹುಟ್ಟಿಕೊಂಡವು. ಅವನ್ನು ಕೇಳಿ ಮಹಾರಾಜನಿಗೆ ಸಂತೋಷವಾದರೆ ವಣಿಕರಿಗೆ ಅವನನ್ನ ಶ್ವಾನಕೂಪದಲ್ಲಿ ತಳ್ಳಿ ಮಜ ಮೋಜು ತಗಂಬಹುದೆಂಬ ಆಸೆಯಾಯಿತು. ಕೆಲವರಿಗೆ ತಾವೂ ವಜ್ರಕಾಯರಾಗಬೇಕೆಂಬ ಅಪೇಕ್ಷೆ ಹುಟ್ಟಿತು. ಅರ್ಥಕೌಶಲ ಮತ್ತು ಮಹಾರಾಣಿಗೆ ಸದಾಕಾಲ ಆತ ತಮ್ಮ ಆಜ್ಞಾಧಾರಕ ಭಂಟನಾಗಿರಬೇಕೆಂಬ, ತನ್ನ ದೇಹ, ಆಯುಧ ಮತ್ತು ಜಾಣತನ-ಎಲ್ಲವನ್ನೂ ತಮ್ಮ ಸೇವೆಗೆ ಮುಡುಪಿಡುವಂತೆ ಮಾಡಬೇಕೆಂಬ ಹಂಬಲವಾಗಿ ಅವನ ಸ್ನೇಹಕ್ಕಾಗಿ ಕಾತರಿಸಿದರು.

ಸಾಮಾನ್ಯವಾಗಿ ತನ್ನ ಮನಸ್ಸಿನ ಯಾವುದೇ ಭಾವನೆಯನ್ನು ಯಾರಿಗೂ ತೋರಗೊಡದ ಶಿಖರಸೂರ್ಯ ಈ ದಿವಸ ಅಡಿಗೆಯ ಆಳುಗಳೊಂದಿಗೆ ಮುಗುಳ್ನಗುತ್ತ ಮಾತಾಡಿದ. ಅದೇ ಮಧ್ಯಾಹ್ನ ಚಿಕ್ಕಮ್ಮಣ್ಣಿಗೆ ಭೇಟಿಯಾಗಿ ಭಂಟರಿಗೆ ಹಣ ಕೊಟ್ಟು ವಾಪಸು ಕಳಿಸಿದ್ದನ್ನು ಹೇಳಿದ. ಆಕೆಯ ಆರೋಗ್ಯದ ಬಗ್ಗೆ ವಿಚಾರಿಸಿ ಆಕೆ ಕೇಳದಿದ್ದರೂ ಇವಿಷ್ಟು ಮಾತ್ರೆಗಳನ್ನು ತಗೊಳ್ಳಲೇಬೇಕೆಂದು ಒತ್ತಾಯದಿಂದ ಕೊಟ್ಟು ಛಾಯಾದೇವಿಗೆ ತಾಯಿಯ ಬಗ್ಗೆ ಕಾಳಜಿ ವಹಿಸಲು ತಾಕೀತು ಮಾಡಿದ. ಶಿಖರಸೂರ್ಯ ತನ್ನೊಂದಿಗೆ ಮಾತಾಡಿದ್ದರಿಂದ, ತನಗೊಂದು ಜವಾಬ್ದಾರಿ ಹೇಳಿದ್ದರಿಂದ ಛಾಯಾದೇವಿ ಹರ್ಷಾತಿರೇಕದಿಂದ ಪುಳಕಿತಳಾಗಿ ಆಗಲಾಗಲೆಂದು ಹೇಳಿದಳು. ಅದು ಅವನಿಗೆ ತಿಳಿಯಿತೋ ಇಲ್ಲವೋ ಎಂದುಕೊಂಡು "ತಪ್ಪದೇ ತಗೊಳ್ಳುತ್ತೇನೆ" ಅಂದಳು. ಅದೂ ಸಾಲದೆನಿಸಿ "ನೀವು ಹೇಳಿದ ಹಾಗೆ ತಪ್ಪದೆ ಅಮ್ಮನ ಕಾಳಜಿ ವಹಿಸುತ್ತೇನೆ" ಎಂದು ಹೇಳಿ. 'ಪರಿಣಾಮ ಸರಿಯಾಗಿ ಆಯಿತೇ?'ಎಂದು ಮಳಮಳ ಅವನ ಮುಖ ನೋಡಿದಳು. ಶಿಖರಸೂರ್ಯ ಮುಗುಳು ನಕ್ಕು ಅವಳ ಕಣ್ಣಲ್ಲಿ ಕಣ್ಣಿಟ್ಟು ಒಂದು ಸಲ ನೋಡಿದ. ಹುಡುಗಿ ಅಡಿಯಿಂದ ಮುಡಿತನಕ ಥರಥರ ನಡುಗಿದಳು.

ಶಿಖರಸೂರ್ಯ ವಿಜಯದ ನಗೆ ನಗುತ್ತ ಮುಂದೆ ನಡೆದ. ಮಹಾರಾಜನ ದೊಡ್ಡ ಕೋಣೆಯ ಮುಂದೆ ದಾಟಿ ಹೋಗುವಾಗ ಬಾಗಿಲು ತನಕ ಮಹಾರಾಜ ಬಂದು ಮೆಲ್ಲಗೆ "ಬಾ" ಎಂದು ಕೈಮಾಡಿ ಕರೆದ. ಶಿಖರಸೂರ್ಯ ಕ್ಷಣ ನಿಂತು ಯೋಚಿಸಿದ. 'ಮಹಾರಾಜನಾಗಿ ಅಕ್ಕಪಕ್ಕ ಸೇವಕರ್ಯಾರು ಇದ್ದಂತಿಲ್ಲವಲ್ಲ'! -ಎಂದು ಆಶ್ಚರ್ಯವಾಯಿತು. ಅನುಕೂಲವಾಯಿತೆಂದು ಮಹಾರಾಜರ ಕೋಣೆ ಹೊಕ್ಕ. ಮಹಾರಾಜ ಬಾಗಿಲು ಮುಂದೆ ಮಾಡಿ ಶಿಖರಸೂರ್ಯನ ಕೈ ಹಿಡಿದು ಆಸನದಲ್ಲಿ ಕುಳ್ಳಿರಿಸಿ ಎದುರಿನ ಆಸನದಲ್ಲಿ ತಾನು ಕುಳಿತುಕೊಂಡ. ಸಂಕೋಚ, ನಾಚಿಕೆಗಳಿಂದ ಮುಖ ಬೆವರಿತ್ತು. ಮಹಾರಾಜ ಶಿಖರಸೂರ್ಯನ ಎರಡೂ ಹಸ್ತಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಮೆಲ್ಲಗೆ 'ಕವಿರಾಜ, ಮಾತಾಡಬೇಕು." ಅಂದ. "ತಮ್ಮ ಕೃಪೆ" ಎಂದು ಹೇಳಿ ಇವನೂ ಸಿದ್ಧನಾದ. ಮಹಾರಾಜ

ಬಾಗಿಲವರೆಗೆ ಹೋಗಿ ಆ ಈ ಕಡೆ ನೋಡಿ ಯಾರಿಲ್ಲದ್ದನ್ನು ಖಾತ್ರಿಮಾಡಿಕೊಂಡು ಬಂದು ಮತ್ತೆ ರಾಜವೈದ್ಯನ ಕೈ ಹಿಡಿದ. ಈ ಸಲ ಅವನ ಕೈ ನಡುಗುತ್ತಿದ್ದವು. ಪಿಸುದನಿಯಲ್ಲಿ.

"ನನಗೆ ಕೊಬ್ಬು ಹೆಚ್ಚಾಗುತ್ತಿದೆ. ಕೊಬ್ಬಿನ ವಿಷ ಹಾಕಿದ್ದಾರಂತೆ, ಹೌದೆ?"

ಎಂದು ಹೇಳಿ ಮಳ ಮಳ ರಾಜವೈದ್ಯನ ಮುಖ ನೋಡಿದ.

"ಹಾಗಿದ್ದರೆ ಮದ್ದು ನಿಮ್ಮ ಕೈಯಲ್ಲಿಯೇ ಇದೆ. ಕಡಿಮೆ ಊಟ ಮಾಡಿ."

"ಆಗುತ್ತಿಲ್ಲ."

"ಆಯ್ತು, ಅದಕ್ಕೂ ಮದ್ದಿದೆ."

-ಎಂದು ಹೇಳಿ ಅವನ ಕೊಬ್ಬಿನ ದೇಹ ನೋಡಿದ. ಶಿಖರಸೂರ್ಯನ ಚಿರತೆಯ ಕಣ್ಣು ಭಗ್ಗನೆ ಹೊಳೆದವು. 'ಸಾವಿನ ವಿನಾ ನಿನಗೆ ಬೇರೆ ಯಾರೂ, ಯಾವುದೂ ಸುಖ ಕೊಡಲಾರದು, ಮಹಾರಾಜ' ಎಂದು ಮನಸ್ಸಿನಲ್ಲೇ ಅಂದುಕೊಂಡು ಮುಗುಳುನಕ್ಕ. ಈ ಸಲದ ಅವನ ಉಕ್ಕಿನ ಮುಗುಳು ನಗೆ ಹೆಚ್ಚು ಅಗಲವಾಗಿತ್ತು. ಕೆನ್ನೆಯ ತೆರೆಗಳು ಕಿವಿಯಿಂದ ಕಿವಿತನಕ ಹಬ್ಬಿದ್ದವು. ಅಷ್ಟರಲ್ಲಿ ಅರ್ಥಕೌಶಲನ ಮನೆಯಲ್ಲಿ ಸಂಜೆಯ ಊಟಕ್ಕೆ ಕರೆಬಂತು.

ಅರ್ಥಕೌಶಲನ ಊಟಗಳೆಂದರೆ ಅವನು ಮೂಗಿನ ಮಟ ಕುಡಿಯುವುದು, ಕುಡಿಯುವತನಕ ಒಂದು ಥರ ಮಾತಾಡುವುದು, ಕುಡಿದಾದ ಮೇಲೆ ಇನ್ನೊಂದು ಬಗೆಯ ಮಾತಾಡುವುದು. ಆದರೆ ಈ ಎರಡೂ ಬಗೆಯ ಮಾತುಗಳು ಅವನ ಆಭಿನಯದ ಭಾಗಗಳಾಗಿದ್ದು ತನ್ನ ಪತ್ತೇದಾರಿಕೆಯನ್ನು ಮುಚ್ಚುವುದಕ್ಕೆ ಅವನೇ ಸೃಷ್ಟಿಸಿಕೊಂಡ ಹೊದಿಕೆಯೆಂದು ಶಿಕರಸೂರ್ಯನಿಗೆ ಗೊತ್ತಿತ್ತು. ಆ ದಿವಸದ ಊಟಕ್ಕೆ ಯುವರಾಜ ಆದಿತ್ಯಪ್ರಭ ಬಂದಿದ್ದ. ಮಹಡಿಯ ಮೇಲೆ ಪಾನಗೋಷ್ಟಿ ನಡೆಯಿತು. ಕೆಳಗಡೆ ಊಟದ ತಯಾರಿ ನಡೆದಾಗ ನಾಯಿ ಬೊಗಳಿದ್ದು ಕೇಳಿ ಮಹಾರಾಣಿ ಬಂದುದನ್ನು ಕವಿರಾಜ ಸರಿಯಾಗಿಯೇ ಗ್ರಹಿಸಿದ. ಮಹಾರಾಣಿಯಾದವಳು ಪ್ರಧಾನಿಯ ಮನೆಗೆ ಬರುವುದು ಅಸಹಜವೆನ್ನಿಸಿದರೂ ಸಂಬಂಧಿಕರೆಂಬುದರಿಂದ ಇರಬಹುದೆಂದು ಸಮಾಧಾನ ತಂದುಕೊಂಡ.

ಆಶ್ಚರ್ಯವೆಂದರೆ ಈ ದಿನ ಶಿಖರಸೂರ್ಯನೂ ಕುಡಿಯುವುದಕ್ಕೆ ಸುರುಮಾಡಿದ. ಇವನೇ ಹೆಚ್ಚಾಗಿ ಕುಡಿದು, ಮುರಿದು ಮಾತಾಡುತ್ತ, ಅವರ ಮಾತಿಗೆ ತಲೆದೂಗುತ್ತ ಕೂತ. ಯುವರಾಜ ಮತ್ತು ಅರ್ಥಕೌಶಲ ಕೂಡ ಇವನ ಮಾತು ನಂಬಿ ತಮ್ಮ ಅಭಿನಯ ನಿಲ್ಲಿಸಿದರು. ಶಿಖರಸೂರ್ಯ ಹೇಳಿದ:

"ನಿಜ ಹೇಳ್ತೀನಿ ಪ್ರಧಾನಿಗಳೆ, ಪ್ರಪಂಚದ ಕೊನೇ ದಿನ ಬಂದಿದೆ ಸ್ವಾಮೀ! ಕನಕಪುರಿ ನಾಶವಾಗುತ್ತೋ ಇಲ್ಲವೋ, ಬೇಕಾದರೆ ಇದೊಂದು ಉಳಿಯಲೂಬಹುದು. ಆದರೆ ಪ್ರಪಂಚ ನಾಶವಾಗೋದು ಖಚಿತ!"

-ಎಂದು ಹೇಳಿ ಅಭಿನಯದಲ್ಲಿ ತೇಲುಗಣ್ಣಾದಾಗ ಇಬ್ಬರೂ ಪರಸ್ಪರ ಮುಖ ನೋಡಿ ತೃಪ್ತಿಯ ನಗೆ ನಕ್ಕರು. ದೂರದಲ್ಲಿ ಕಾಣದ ಹಾಗೆ ಕತ್ತಲೆಯಲ್ಲಿದ್ದ ಮಹಾರಾಣಿಯ ಕಡೆಗೆ ಕಣ್ಸನ್ನೆ ಮಾಡಿ, ಶಿಖರಸೂರ್ಯನನ್ನು ತೋರಿಸಿ ಅರ್ಥಕೌಶಲ ಹುಬ್ಬು ಹಾರಿಸಿದ. ಇದು ಸಕಾಲವೆಂದರಿತು ಶಿಖರಸೂರ್ಯನ ಪಾತ್ರೆಗೆ ಇನ್ನಷ್ಟು ಮದ್ಯ ಸುರಿಯುತ್ತ ನೇರವಾಗಿ ಕೇಳಿದ:

"ಅರಮನೆಯಲ್ಲಿ ಇವತ್ತು ಮಹಾರಾಜನ ಭೇಟಿ ಮಾಡಿದೆಯಲ್ಲ, ಮಹಾರಾಜರ ಆರೋಗ್ಯ ಸರಿಯಿದೆಯೇ ವೈದ್ಯನೆ? ಅಥವಾ……?

ಮಹಾರಾಜನ ವಿರುದ್ಧವಾಗಿ ಅರ್ಥಕೌಶಲ, ಮಹಾರಾಣಿ ಹಾಗೂ ಅವರ ಮಗ ಆದಿತ್ಯಪ್ರಭ ಗುಂಪಾಗಿ ಅಧಿಕಾರ ಕಸಿಯಲು ಹಾತೊರೆಯುತ್ತಿರುವ ಸಂಗತಿಯನ್ನು ಶಿಖರಸೂರ್ಯ ಮೊದಲೇ ಅನುಮಾನಿಸಿದ್ದ. ಆ ಮುದಿ ದೊರೆ ಸಕಾಲದಲ್ಲಿ ಹಿಂದೆ ಸರಿಯದಿದ್ದರೆ, ಸಾಯಿಸಿಯಾದರೂ ಮುಂದೆ ಬರುವ ಮಹತ್ವಾಕಾಂಕ್ಷೆ ಆದಿತ್ಯಪ್ರಭನಿಗಿದ್ದದ್ದು ತಿಳಿದಿತ್ತು. ಈ ಮುದಿರಾಜ ಇರುವತನಕ ಎಳ್ಳುಕಾಳಷ್ಟು ಚಿನ್ನವೂ ಈ ರಾಜ್ಯಕ್ಕೆ ಬಾರದೆಂದು ಅರ್ಥಕೌಶಲ ಆಪ್ತರೆದುರಿಗೆ ಹೇಳಿದ್ದನ್ನ ಶಿಖರಸೂರ್ಯನೇ ಕೇಳಿಸಿಕೊಂಡಿದ್ದ. ಈಗ ಹೇಳಿದ:

"ನೋಡಿ ಪ್ರಧಾನರೇ, ನಾನು ವೈದ್ಯ. ಮಹಾರಾಜರ ಗುಪ್ತ ರೋಗಗಳನ್ನೇ ಆಗಲಿ ಬಹಿರಂಗದ ರೋಗಗಳನ್ನೇ ಆಗಲಿ ಇನ್ನೊಬ್ಬರೆದುರಿಗೆ ಹೇಳಬಾರದು. ಯಾಕಂತೀರೋ? ಮಹಾರಾಜರ ಆರೋಗ್ಯದ ಮೇಲೆ ರಾಜ್ಯದ ದೈವ ನಿರ್ಣಯ ನಿಂತಿರುತ್ತದೆ. ಸರಿ ಅಂತೀರೋ ಅಲ್ಲ ಅಂತೀರೋ?"

"ಅದು ಸರಿ ರಾಜವೈದ್ಯನೇ, ನಾವು ಮಹಾರಾಜರಿಗೆ ನೇರ ಸಂಬಂಧಪಟ್ಟವರಲ್ಲವೆ? ನಮಗೂ ತಿಳಿಯುವುದು ಬೇಡವೇ?"

"ಅದಕ್ಕೇ ನಾನು ನಿಮಗೆ ಹೇಳಲಿಲ್ಲ. ಯಾಕಂದರೆ ಮಹಾರಾಜರೇ ತಮಗೆ ತಿಳಿಸುತ್ತಾರೆ? ಅಲ್ಲವೇ?"

ಇದನ್ನು ಅರ್ಥಕೌಶಲ ಊಹಿಸಿರಲಿಲ್ಲ. ಆತ್ಮೀಯರೆಂದ ಮೇಲೆ ನಮಗೆ ಮಹಾರಾಜ ಹೇಳಿಯೇ ಹೇಳುತ್ತಾನೆಂಬುದು ತಾರ್ಕಿಕವಾಗಿಯೇ ಇದೆ, ನಿಜ. ಆದರೂ ಈತ ಕೊಂಚದವನಲ್ಲ. ತಾವು ಬಚ್ಚಿಟ್ಟ ಮಾತುಗಳನ್ನೇ ಆಡುತ್ತಿದ್ದಾನೆಂದು ಊಹಿಸಿದ. ತೇಲುಗಣ್ಣಿನ ಅಂಚಿನಿಂದ ಪ್ರಧಾನಿಯ ಮುಖವನ್ನೇ ನೋಡುತ್ತ ಆದಿತ್ಯಪ್ರಭ ಹೇಳಿದ:

"ವಿಷಯ ಹಾಗಲ್ಲ ವೈದ್ಯನೇ; ಮಹಾರಾಜರಿಗೆ ನೇರ ಸಂಬಂಧಪಟ್ಟವರು ನವಾದ್ದರಿಂದ ನೋವಾಗದಿರಲೆಂದೇ ಮಹಾರಾಜರು ನಮಗೆ ಕೆಲವು ಸಂಗತಿಗಳನ್ನು ಹೇಳೋದೆ ಇಲ್ಲ. ಬದಲು ತಮ್ಮ ತಾವೇ ಹಿಂಸಿಸಿಕೊಳ್ಳುತ್ತಾರೆ."

-ಎನ್ನುತ್ತ ಪ್ರಧಾನಿಯ ಮುಖ ನೋಡಿದ ಆತ ಮೆಚ್ಚಿಕೊಳ್ಳಲೆಂದು. ಈಗ ಕತ್ತಲೆಯಲ್ಲಿದ್ದ ಮಹಾರಾಣಿ ದನಿ ನಡುಗಿಸಿ ಗದ್ಗದಳಾಗಿ ಕೇಳಿದಳು:

"ಇದು ನಿನಗೆ ಗೊತ್ತಿಲ್ಲದ ವಿಚಾರವೇ ರಾಜವೈದ್ಯನೇ? ನಾನಾಗಲಿ, ಯುವರಾಜರೇ ಆಗಲಿ, ನನ್ನ ಅಣ್ಣನವರಾದ ಪ್ರಧಾನಿಗಳೇ ಆಗಲಿ ನಾವೆಲ್ಲ ಮಹಾರಾಜರನ್ನೇ ನಂಬಿ ಜೀವ ಹಿಡಿದವರಲ್ಲವೇ?"

ಎಂದು ಹೇಳಿ ಒಂದು ಸಲ ಬಿಕ್ಕಳಿಸಿ "ಮಹಾರಾಜರಿಗೆ ಯಾವುದಾದರೂ ಹೊಸ ಖಾಯಿಲೆ ಸುರುವಾಗಿದೆಯೇ? ವೈದ್ಯನೇ?" ಎಂದಳು. ಅವಳ ದನಿಯಲ್ಲಿಯ ಯಾವ ಭಾಗವನ್ನು ಗ್ರಹಿಸಿತೋ ಅವಳ ನಾಯಿ ದೊಡ್ಡದಾಗಿ ಬೊಗಳಿತು. ಅದರ ದನಿಯೂ ಗದ್ಗದವಾಗಿತ್ತು. ಮಹಾರಾಣಿಯ ದನಿ ಕೇಳಿ ಗಡಬಡಿಸಿ ಶಿಖರಸೂರ್ಯ ಎದ್ದು ನಿಂತ. ಅರ್ಥಕೌಶಲ ಕುಳಿತುಕೊಳ್ಳಲು ಸನ್ನೆ ಮಾಡಿದ. ಹೆದರುವಂತೆ ಅಭಿನಯಿಸುವ, ಗೌರವಕ್ಕೆ ಎದ್ದು ನಿಲ್ಲುವ ಅಭಿನಯದಲ್ಲಿ ಅವರಿಗೆ ಕೊಡುವ ಉತ್ತರವನ್ನು ಮರೆಮಾಚುವಂತೆ ಇವನೂ ಅಭಿನಯಿಸುತ್ತಿದ್ದ. ಎಲ್ಲರೂ ಸ್ತಬ್ಧರಾದ ಮೇಲೆ ಅರ್ಥಕೌಶಲ ಪಿಸುದನಿಯಲ್ಲಿ ಮತ್ತೆ ಅದೇ ಪ್ರಶ್ನೆ ಕೇಳಿದ. ಉತ್ತರಕ್ಕೆ ಅವರೆಷ್ಟು ಕಾತರರಾಗಿದ್ದರೆಂದು ತಿಳಿದು ಅವರ ಮಹತ್ವಾಕಾಂಕ್ಷೆಯ ಅರಿವಾಗಿ 'ಈಗ ಸುಮ್ಮನಿರೆಂದು ಆಮೇಲೆ ತಿಳಿಸುವುದಾಗಿ' ಕದ್ದು ಹೇಳಿದ.

ಊಟವಾದ ಮೇಲೆ ಎಲಡಿಕೆ ಮೆಲ್ಲುವಾಗ ಅರ್ಥಕೌಶಲ ಮತ್ತೆ ಅದೇ ಪ್ರಶ್ನೆ ಕೇಳಿದ.

"ಅದು ಭಯಂಕರ ರೋಗವಲ್ಲ ಪ್ರಧಾನಿಗಳೇ, ಅವರು ಮನಸ್ಸು ಮಾಡಿದರೆ ಒಂದು ವಾರದಲ್ಲಿ ವಾಸಿಯಾಗಬಹುದಾದ್ದು. ಕೆಲವು ಪಥ್ಯಗಳಿವೆ. ಅವರೇ ಪಥ್ಯ ಪಾಲಿಸುವ ದೊಡ್ಡ ಮನಸ್ಸು ಮಾಡಬೇಕು."

ಎಂದು ಹೇಳಿ ನೇರವಾಗಿ ಇಬ್ಬರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ "ಮಹಾರಾಜರಿಗೆ ಈ ಸಲ ಬಂದಿರೋದು ಭಯದ ರೋಗ!"

ಎಂದು ಹೇಳಿ ಒಳಗೆ ಮಂದ ಬೆಳಕಿನಲ್ಲಿ ಪೀಠದ ಮೇಲೆ ಕುಳಿತಿದ್ದ ಮಹಾರಾಣಿಯ ಕಡೆಗೂ ನೋಡಿದ. ಅರ್ಥಕೌಶಲ ತಾಳ್ಮೆಕಳೆದುಕೊಂಡು ಕೇಳಿದ:

"ಅವರೇ ಮನಸ್ಸು ಮಾಡುವುದೆಂದರೇನು ವೈದ್ಯನೇ?"

"ಮಾನಸಿಕ ರೋಗ."

"ಅದು ವಯಸ್ಸಿಗೆ ಸಹಜ"

"ಅಲ್ಲ, ಭಯ ಹೊರಗಿನದು. ಬಿಳಿಗಿರಿರಾಯ ಹ್ಯಾಗೆ ದೈವಾಧೀನನಾದನೆಂದು ಅವರಿಗೆ ತಿಳಿದಿದೆ."

"ಹ್ಯಾಗೆ ಅಂದರೆ ಜೀವ ಹೋಗಿ"

-ಪ್ರಧಾನಿ ನಗುತ್ತ ಹೇಳಿದ.

"ಅಲ್ಲ, ವಿಷಕನ್ಯೆಯ ಸಂಪರ್ಕದಿಂದ!"

ಅರ್ಥಕೌಶಲನ ನಗು ವಿಕಾರವಾಗಿ ಯಾರೋ ತನ್ನನ್ನು ಅವಮಾನಿಸಿದಂತಾಗಿ ಮುಖ ಕಪ್ಪಗಾಯಿತು. ನಕ್ಕಂತೆ ಸೋಗು ಮಾಡಿದರೂ ಒಳಗೊಳಗೆ ಭಯವಾಯಿತು. ಕೃತಕ ನಗೆಯನ್ನು ಮುಂದುವರಿಸಲಾರದೆ, ಉಕ್ಕುವ ಉದ್ವೇಗವನ್ನು ಹತ್ತಿಕ್ಕಲಾರದೆ, ಎದ್ದುಹೋಗಿ ನೀರು ಕುಡಿದು ಬಂದ. ಆಮೆಲೆ ವ್ಯಥೆಭರಿತ ದನಿಯನ್ನು ಗಡುಸಾಗಿಸಿ ಮಾತಿನಲ್ಲಿ ಗಾಢವಾದ ರಾಜನಿಷ್ಠೆಯನ್ನು ಪ್ರದರ್ಶಿಸುತ್ತ ಹೇಳಿದ:

"ಇಂಥ ಕತೆಗಳನ್ನು ಮಹಾರಾಜರು ನಂಬುತ್ತಾರಲ್ಲ ಮಾರಾಯಾ!"

"ಕತೆಯಾಗುವುದಕ್ಕೆ ನಾಲ್ವರು ವಿನಾ ಈ ಸುದ್ದಿ ಯಾರಿಗೂ ತಿಳಿದಿಲ್ಲ ಪ್ರಧಾನಿಗಳೇ. ಮಹಾರಾಜರಾಯ್ತು ಈಗ ನೀವು ಮೂವರಾಯ್ತು."

"ಅಂದರೆ ಈ ಸುದ್ದಿಯ ಜನಕ ನೀನೇ ಎಂದಾಯ್ತು!"

ಶಿಖರಸೂರ್ಯ ಈ ಮಾತಿನಿಂದ ಎಷ್ಟೂ ವಿಚಲಿತನಾಗದೆ "ನಿಜ" ಎಂದು ಹೇಳಿ ತನ್ನ ಮಾಮೂಲಿ ವರಸೆಯಲ್ಲಿ ಹೇಳಿದ:

"ಬಿಳಿಗಿರಿರಾಯ ವಿಷಕನ್ಯೆಯಿಂದ ಮರಣ ಹೊಂದಿದ ಸುದ್ದಿಯನ್ನು ರಾಜ್ಯ ನಡೆಸುವ ನೇತಾರರಿಗೆ ತಿಳಿಸಬೇಕಾದ್ದು ರಾಜವೈದ್ಯನಾದ ನನ್ನ ಕರ್ತವ್ಯ. ನಾನದನ್ನು ಮಾಡಿದ್ದೇನೆ. ಇದು ಹೇಳಲೇಬೇಕಾದ ಮಾತು. ಆಶ್ಚರ್ಯವೆಂದರೆ ಮಹಾರಾಜರಿಗಿದು ಗೊತ್ತೇ ಇರಲಿಲ್ಲ. ಮಧ್ಯದವರ್ಯಾರೋ ಮಾಡಿದ್ದೆಂದು ತಿಳಿದು ಭಯಭೀತರಾದರು."

ಈ ಮಾತು ಕೇಳಿದ್ದೇ ಅಸಮಾಧಾನದಿಂದ ಮತ್ತೆ ಅರ್ಥಕೌಶಲನ ಮುಖ ಕಿವುಚಿ ವಿಕಾರಗೊಂಡಿತು. ಮುಂದೆ ಮಾತು ಬೆಳೆಸಿದರೆ ಅದರ ತುದಿ ತನ್ನಲ್ಲಿಗೇ ಬಂದು ತಲುಪಬಹುದೆಂದು ಅರಿವಾಗಿ ಅವನ ಮಾತುಗಳನ್ನು ಕತ್ತರಿಸಿ ಆಜ್ಞೆಯೆಂಬಂತೆ ದರ್ಪದಿಂದ ಹೇಳಿದ:

“ಸುದ್ದಿಯ ಸತ್ಯಾಸತ್ಯತೆಯ ವಿಚಾರ ಆಮೇಲೆ ತಿಳಿಯೋಣ. ಮಹಾರಾಜರಿಗೆ ಹೇಳಿದ ಹಾಗೆ ಅವರ ಆಪ್ತರಾದ ನಮಗೂ ತಿಳಿಸಿದ್ದು ಒಳ್ಳೆಯದಾಯಿತು. ನಿನಗಿನ್ನೂ ಆಶ್ಚರ್ಯವಾದೀತು: ಸುದ್ದಿ ನಮಗೂ ತಿಳಿದಿರಲಿಲ್ಲ ವೈದ್ಯನೇ! ಸದ್ಯಕ್ಕೆ ಈ ಸುದ್ದಿ ನಮ್ಮಲ್ಲೇ ಇರಲಿ. ಯಾಕಂತೀನಿ, ಇದು ಎರಡು ನೆರೆಹೊರೆ ರಾಜ್ಯಗಳ ಆಂತರಿಕ ಸಂಬಂಧದ ವಿಚಾರ; ಗೊತ್ತಾಯಿತಲ್ಲ?”

ಮಹಾರಾಣಿ ತನ್ನ ನಾಯಿಯನ್ನು ಒದ್ದಳೆಂದು ತೋರುತ್ತದೆ, ಅದು ಕುಂಯೋ ಎಂದೊದರಿ ಸುಮ್ಮನಾಯಿತು. ಮತ್ತೆ ಮೌನ ವ್ಯಾಪಿಸಿತು. ಅರ್ಥಕೌಶಲ ಮೆಲ್ಲಗೆ ಮುಖ ಮುಂದೆ ತಂದು ಶಿಖರಸೂರ್ಯ ತನ್ನ ಒಳಗೆ ಇಣಿಕಿ ಹಾಕದಂತೆ ಎಚ್ಚರ ವಹಿಸಿ, ಕೆಟ್ಟದ್ದನ್ನು ತಾನೆಂದೂ ಯೋಚಿಸುವುದೇ ಸಾಧ್ಯವಿಲ್ಲವೆಂಬಂಥ ವಿಶ್ವಾಸವನ್ನು ಎದುರಿನವರಲ್ಲಿ ಮೂಡಿಸಲು ಪ್ರಯತ್ನಿಸುತ್ತ, ಭಾವಕ್ಕೆ ತಕ್ಕಂಥ ಏರಿಳುವುಗಳನ್ನು ದನಿಯಲ್ಲಿ ಮಾಡದೆ, ಸ್ಥಿರವಾದ ಮಂದಹಾಸ ಬೀರುತ್ತ ಹೇಳಿದ:

“ನೋಡು ಮಿತ್ರಾ, ನೀನು ನಮ್ಮವ್ನ. ನೀನು ಈ ಊರಿಗೆ ಬಂದಾಗ ಮೊದಲು ನನ್ನ ಮನೆಗೇ ಬಂದೆಯಲ್ಲ, ಆಗಲೇ ನೀನು ನಮ್ಮ ಬಳಗದ ಸದಸ್ಯನಾಗಿಬಿಟ್ಟೆ. ನಿನ್ನ ಬಿಟ್ಟು ನಾವು ಆಲೋಚನೆ ಮಾಡೋದನ್ನ ಎಂದಾದರು ಕಲ್ಪಿಸಿದ್ದೀಯಾ? ಸಾಧ್ಯವಿಲ್ಲ. ಯಾಕೆ ಹೇಳು? ಯಾಕೆಂದರೆ ನಿಜವಾಗಿ ಸಾಧ್ಯವಿಲ್ಲ. ಅದಕ್ಕೆ!”

ಶಿಖರಸೂರ್ಯ ಸುಮ್ಮನೇ ಕುಂತಿದ್ದ. ಅರ್ಥಕೌಶಲ ಈಗ ಒಲಿಸಿಕೊಳ್ಳುವ ಉಪಾಯವಾಗಿ ಬಲಗೈ ಶಿಖರಸೂರ್ಯನ ಭುಜದ ಮ್ಯಾಲಿರಿಸಿ ಸ್ನೇಹದಿಂದ ಹೇಳಿದ:

“ನೀನ್ಯಾಕೆ ಯುವರಾಜನನ್ನು ವಜ್ರದೇಹಿಯನ್ನಾಗಿ ಮಾಡಬಾರದು?”

ಮಹಾರಾಜ ಅಥವಾ ಯುವರಾಜ ಅಥವಾ ಪ್ರಧಾನಿ ಅಥವಾ ಈ ಮೂವರೂ ವಜ್ರದೇಹಿಗಳಾಗುವ ಆಮಿಷದಿಂದ ತನ್ನ ಬಳಿ ಬರುತ್ತಾರೆಂದು ಶಿಖರಸೂರ್ಯ ನಿರೀಕ್ಷಿಸಿದ್ದ. ಈತನಕ ಅವರಿಬ್ಬರ ಸಹವಾಸದಲ್ಲಿ ಅಪಮೇಳವಾದಂತೆ, ವಯಸ್ಸು ಮಾತ್ರವಲ್ಲ ಮನಸ್ಸು ಕೂಡ ಹೊಂದಾಣಿಕೆ ಆಗದೆ, ಇಬ್ಬರೂ ತನ್ನ ಬಗ್ಗೆ ಮರುಗುವಂತೆ ಕೂತಿದ್ದ ಆದಿತ್ಯಪ್ರಭ ಈಗ ಉತ್ಸಾಹದಿಂದ ಅದರಿಂದ ಹೊರಬರಬೇಕೆಂದು ಮಾತಾಡಿದ.

“ಮಿತ್ರಾ, ನಮ್ಮ ರಾಜ್ಯಕ್ಕೆ ನಿನ್ನ ಸೇವೆ ಬೇಕು. ಕೇವಲ ರಾಜವೈದ್ಯನಾಗಿ ಮಾತ್ರವಲ್ಲ, ರಾಜ್ಯದ ಆಪ್ತಮಿತ್ರನಾಗಿ, ಸೇನಾನಿಯಾಗಿ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಬಳಗದವನಾಗಿ ನಿನ್ನ ಸೇವೆ ಬೇಕು. ಮಾವನವರು ಹೇಳಿದ ಹಾಗೆ ನಾವ್ಯಾರೂ ಯಾವುದೇ ಸಂದರ್ಭದಲ್ಲಿ ನಿನ್ನ ಬಿಟ್ಟು ಆಲೋಚನೆ ಮಾಡಿದವರೇ ಅಲ್ಲ. ಕನಕಪುರಿ ಬಲಿಷ್ಠ ಸಾಮ್ರಾಜ್ಯವಾಗಬೇಕು. ಐವತ್ತೈದೂ ದೇಶಗಳನ್ನು ಆಳುವ ಏಕಮೇವ ಸಾಮ್ರಾಜ್ಯವಾಗಬೇಕು. ಈ ನಮ್ಮ ಸಂಕಲ್ಪಕ್ಕೆ ನೀನೇ ದಾರಿದೀಪ, ನೀನೇ ಗುರು, ನೀನೇ ನಾಯಕ. ಈ ಸಾಧನೆಗಾಗಿ ನನಗೆ ವಜ್ರದೇಹ ಬೇಕು. ಅದನ್ನು ಕೊಡೋದು ನಿನ್ನಿಂದ ಮಾತ್ರ ಸಾಧ್ಯ. ನೀನು ದೊಡ್ಡ ಮನಸ್ಸು ಮಾಡಬೇಕು.”

ಶಿಖರಸೂರ್ಯ ಆದಿತ್ಯಪ್ರಭನ ಮಾತು ಕೇಳುತ್ತ, ಅವನ ಹಾವಭಾವಗಳ ಮೂಲಕ ಅವನ ಹೃದಯದಲ್ಲಿ ಇಣಿಕಿ ನೋಡುತ್ತ, ತನ್ನ ಮಹತ್ವಾಕಾಂಕ್ಷೆಯನ್ನು ಅದರೊಂದಿಗೆ ತಾಳೆ ಹಾಕುತ್ತ ಕೂತಿದ್ದ. ಜೊತೆಗೆ ಎದುರಿಗಿದ್ದ ಅರ್ಥಕೌಶಲನ ಮತ್ತು ಹದ್ದಿನ ನೆರಳಿನಂತೆ ಆಗಾಗ ಸಂಚರಿಸಿ ಕದ್ದು ಕೇಳಿಸಿಕೊಳ್ಳುತ್ತಿದ್ದ ಮಹಾರಾಣಿಯನ್ನೂ ಗಮನಿಸುತ್ತಿದ್ದ. ಯುವರಾಜ ಭಾವಾವೇಶದಿಂದ ಮಾತಾಡಿದ್ದರಿಂದ ಮಾತು ಮುಗಿದ ಮೇಲೆ ಕೆಂಪಗಾದ ಮುಖದಲ್ಲಿ ಕಿರುಬೆವರು ಮೂಡಿತ್ತು. ಅನಗತ್ಯ ಭಾವಾವೇಶಕ್ಕೆ ಒಳಗಾದನೆಂಬ ಸಣ್ಣ ನಾಚಿಕೆಯೂ ಮುಖದಲ್ಲಿತ್ತು. ಶಿಖರಸೂರ್ಯ ಗದ್ಗದ ಕಂಠದಿಂದ ಮೆಲ್ಲನೆ ಉಸುರಿದ:

“ನಿಮ್ಮ ಮಾತು ಕೇಳಿ ಉದ್ವೇಗಕ್ಕೆ ಒಳಗಾಗಿದ್ದೇನೆ; ಕ್ಷಮಿಸಿ ಯುವರಾಜರೇ. ಪ್ರಧಾನಿಗಳೇ, ಮಹಾರಾಣಿಯವರು ಹಾಗೂ ನಿಮ್ಮ ನಂಬಿಕೆಗೆ ಅರ್ಹನಾದುದು ನನ್ನ ಸೌಭಾಗ್ಯ! ತಮ್ಮ ಸ್ನೇಹದ ಋಣವನ್ನು ಒಂದು ಜನ್ಮದಲ್ಲಿ ತೀರಿಸುವುದು ಸಾಧ್ಯವೇ? ಎಂದು

ಚಿಂತೆಯಾಗಿದೆ ನನಗೆ. ಯುವರಾಜರನ್ನು ವಜ್ರದೇಹಿಯಾಗಿ ಮಾಡುವ ಕೆಲಸವನ್ನು ಒಪ್ಪುತ್ತೇನೆ. ಆದರೆ ತಾವಿಟ್ಟ ವಿಶ್ವಾಸಕ್ಕೆ ಚ್ಯುತಿ ಬರದಂತೆ ಪ್ರಾಮಾಣಿಕವಾಗಿ ಮಹಾರಾಜರ ಸೇವೆ ಮಾಡಲಾಗುತ್ತಿಲ್ಲವಲ್ಲ-ಎಂಬುದೇ ನನ್ನ ಚಿಂತೆಯಾಗಿದೆ. ನನ್ನ ಮಾತನ್ನು ತಾವು ನಂಬಬೇಕು ಪ್ರಧಾನಿಗಳೇ…"

-ಎಂದು ಹೇಳುತ್ತ ಮುಂದಿದ್ದ ಅರ್ಥಕೌಶಲನ ಎರಡೂ ಹಸ್ತಗಳನ್ನು ತನ್ನ ಹಸ್ತಗಳಲ್ಲಿ ಇಟ್ಟುಕೊಂಡು ಅಪಾರವಾದ ಗಾಢಸ್ನೇಹವನ್ನು ಸೂಚಿಸುವಂತೆ ಮೆಲ್ಲಗೆ ಹಿಸುಕಿ ಅರ್ಥಕೌಶಲ ಮತ್ತು ಯುವರಾಜರಿಗೆ ಕಾಣಿಸುವಂತೆ ಎರಡು ಹನಿ ಕಣ್ಣೀರು ಸುರಿಸಿದ. ಅರ್ಥಕೌಶಲ ಹೇಳಿದ:

"ಮಿತ್ರಾ, ಗಾಢವದ ನಂಬಿಕೆ, ವಿಶ್ವಾಸ, ಪ್ರೀತಿ ನಮ್ಮ ನಮ್ಮಲ್ಲಿ ಇರದಿದ್ದರೆ ನಾವು ಇಲ್ಲಿ ಹೀಗೆ ಕೂಡ್ತಿದ್ದಿವ ಒಟ್ಟಾಗಿ? ಮಹಾರಾಜರ ರೋಗ ಪರಿಹಾರ ಮಾಡಿದೆ. ಬಿಳಿಗಿರಿರಾಯನ ಸಾವನ್ನ ಚಾಕಚಕ್ಯತೆಯಿಂದ ನಿಭಾಯಿಸಿದೆ! ಸ್ವಲ್ಪ ಯೋಚನೆ ಮಾಡು; ನೀನಿಲ್ಲದಿದ್ದರೆ ಆ ಕಾಡು ಜನರ ಮೇಲೆ ಸೈನ್ಯ ಬಿಟ್ಟುಕೊಂಡು ರಾಡಿ ಮಾಡಿಕೊಳ್ತಿದ್ದಿವಿ! ಅಂಥ ಯಾವ ಉಸಾಬರಿಯೂ ಇಲ್ಲದೆ ಸಮಸ್ಯೆ ಬಗೆಹರಿಯಿತಲ್ಲವೊ? ಇದನ್ನೆಲ್ಲ ಅರಮನೆ ಮರೆಯೋದು ಸಾಧ್ಯವೇ? ಈಗ ಹೇಳು ಮಹಾರಾಜರ ವಿಷಯದಲ್ಲೇನಾದರೂ ಸಮಸ್ಯೆ ಇದೆಯೆ?"

"ಸಮಸ್ಯೆ ಇದೆ ಪ್ರಧಾನರೆ, ಮಹಾರಾಜರು ಅಖಂಡ ಸುಖದ ಬದುಕನ್ನು ಬಾಳಿದವರು, ಬೆಳೆದವರು; ಆಹಾರದಲ್ಲಿ ಸಂಯಮ ತೋರುತ್ತಿಲ್ಲ ಎನ್ನುವುದು ನನ್ನ ಸಮಸ್ಯೆ. ಇದೇ ಮುಂದುವರಿದು ಒಂದು ವರ್ಷದಲ್ಲಿ ಏನಾದರೂ ಎಡವಟ್ಟಾದರೆ ಆಗುವ ದುಷ್ಪರಿಣಾಮಕ್ಕೆ ನಾನು ತಲೆ ಕೊಡಬೇಕಾಗುತ್ತದೆ."

ಮೂವರಲ್ಲೂ ಮೌನ ಆವರಿಸಿತು. ಒಂದೇ ಮಾತಿನಲ್ಲಿ ಅಲ್ಲಿದ್ದ ಮೂವರಿಗೂ ಪ್ರಿಯವಾಗುವಂಥ ವಿಷಯಗಳನ್ನು ಜಾಣ್ಮೆಯಿಂದ ಬಹಿರಂಗಪಡಿಸಿ ಅವರ ಕುತಂತ್ರಕ್ಕೆ ಕುಮ್ಮಕ್ಕು ಕೊಟ್ಟ ಶಿಖರಸೂರ್ಯ. ಮಹಾರಾಜರ ಆಯುಷ್ಯ ಇನ್ನೊಂದು ವರ್ಷವೆಂದು ಹೇಳಿ-ನಿಶ್ಚಿಂತವಾಗಿ ಇರಿ ಎಂಬ ಸಂದೇಶವನ್ನೂ ಕೊಟ್ಟು, ಆಹಾರದಲ್ಲಿ ಸಂಯಮ ತೋರಿಸುತ್ತಿಲ್ಲವಾದ್ದರಿಂದ ಹೆಚ್ಚು ತಿನ್ನಲು ಪ್ರೋತ್ಸಾಹಿಸಿದರೆ ನಿಮಗೆ ಬೇಗ ಫಲ ಉಂಟೆಂಬ ಆಸೆಯನ್ನೂ ಹಚ್ಚಿ, ಕ್ಷಿಪ್ರ ಪರಿಣಾಮ ತೋರಿಸಿದ ಮದ್ದು ವಿಷಕಾರಿಯಾಗಿ ಹುಸಿಹೋದ ತನ್ನ ಸಂತೋಷವನ್ನು ಅನುಭವಿಸಿದ. ಮಹಾರಾಣಿ ಕುಡಿದು ಮುಖ ಕೆಂಪೇರಿಸಿಕೊಂಡಳು. ಅರ್ಥಕೌಶಲ ಕೂತವನ್ನು ಕೂತೇ ಕನಸು ಕಾಣತೊಡಗಿದ. ಶಿಖರಸೂರ್ಯ ಯಾವಾಗಲೋ ನಗುನಗುತ್ತ ಮಾಯವಾಗಿದ್ದ!

## ಇಪ್ಪತ್ತೊಂದು

ಆದಾಗಿ ಒಂದು ವಾರ ಕಳೆದರೂ ಯುವರಾಜ ಒಮ್ಮೆಯೂ ವಜ್ರಕಾಯದ ಮಾತೆತ್ತಲಿಲ್ಲ. ಆದರೆ ಆತ ಇನ್ನಾವುದೋ ಗುಪ್ತ ಹುನ್ನಾರದಲ್ಲಿ ಮುಳುಗಿರುವಂತೆ ಕಾಣಿಸುತ್ತಿತ್ತು. ಶಿಖರಸೂರ್ಯನೂ ಈ ಬಗ್ಗೆ ಮಾತಾಡಲಿಲ್ಲ.

ಒಂದು ದಿನ ಕೋಳಿ ಕೂಗಿ ಬೆಳಕೇರುವಾಗ ಶಿಖರಸೂರ್ಯ ನದಿಯಲ್ಲಿ ಮಿಂದು ಮನೆಗೆ ಬಂದಾಗ ಅಂಗಳದಲ್ಲಿ ನಾಲ್ಕು ಮಂದಿ ಕಾಡುಜನ ಗೊಂಡೆ ಕಟ್ಟಿದ ಕೋಲುಗಳನ್ನು ಹಿಡಿದುಕೊಂಡು ಶಿಸ್ತಿನಿಂದ ನಿಂತಿದ್ದರು. ಇವನನ್ನು ಕಂಡುದೇ ನಾಲ್ವರೂ ಅಂಡೆತ್ತಿ ಬಾಗಿ, ಎರಡು ಸಲ ನೆಲ ಬಡಿದು ನಮಸ್ಕಾರವನ್ನಾಚರಿಸಿ ನಿಂತರು. ನಾಲ್ವರೂ ಉನ್ನತ ಕಾಯರು, ದೊಡ್ಡ ಗಾತ್ರದವರು. ತಟ್ಟಿನಂತೆ ಉರುಟಾಗಿ ನೆಯ್ದ ಬಟ್ಟೆ ಹೊದ್ದು ಅಂಥದನ್ನೇ ಉಟ್ಟಿದ್ದರು. ಉತ್ತರೀಯದಂತೆ ಬಟ್ಟೆಯೊಂದನ್ನು ಭುಜದ ಮ್ಯಾಲೆ ಚೆಲ್ಲಿಕೊಂಡಿದ್ದರು. ಅವರಲ್ಲಿಯ ಒಬ್ಬನನ್ನು ಮಾತ್ರ ಶಿಖರಸೂರ್ಯ ಗುರುತಿಸಿದ. ಅವನ ಒಂದು ಕಣ್ಣು ಚಿಕ್ಕದಾಗಿದ್ದು ಆಗಾಗ ತಂತಾನೇ

ಸಂಕುಚಿತವಾಗುತ್ತಿತ್ತು. ಹಾಗೆ ಸಂಕುಚಿತವಾದಾಗಲೆಲ್ಲ ಆತ ಕಣ್ಣು ಹೊಡೆದಂತೆ ಭಾಸವಾಗುತ್ತಿತ್ತು. ಅತಿ ಸೋಜಿಗದ ಅಪರಿಚಿತ ವಸ್ತುವನ್ನು ಕಂಡಾಗ ಆಗುವ ಕುತೂಹಲ ಇವನನ್ನು ಕಂಡಾಗಲೂ ಆಯಿತು.

ಇವನನ್ನು ಸುಕ್ರ ಮೂಬೆರಿಕಿ ಎಂದು ವರ್ಣಿಸಿದ್ದ. ಪತ್ತೇದಾರಿಯಲ್ಲಿ, ನರರ ಸ್ವಭಾವಗಳನ್ನು ಗುರುತಿಸುವಲ್ಲಿ, ಮತ್ತು ಮೋಸ ಮಾಡುವುದರಲ್ಲಿ ಹಾಗೂ ನಂಬಿಕೆಯಲ್ಲಿ ಇವನನ್ನು ಸರಿಗಟ್ಟುವವರು ಯಾರಿಲ್ಲವೆಂದು ಹೇಳಿದ್ದ. ಜೊತೆಗೆ ಇವನು ಸುಕ್ರನಿಗೂ ನಂಬಿಗಸ್ಥ. ಬಿಳಿಗಿರಿರಾಯನ ಶವದ ಬಳಿ ಬಂದಾಗ ಭಲ್ಲೆಯಿಂದ ಇರಿದು ನೋಡುತ್ತ ನಿಂತಿದ್ದವನು ಇವನೇ ಎಂದು ಗುರುತಿಸಿದ. ಶಿಖರಸೂರ್ಯ ಅವನ ಬಳಿಗೆ ಹೋಗಿ "ಬೆಟ್ಟ!" ಅಂದ. ಅವನು "ಹೌಂದು ನನ್ನೊಡೆಯಾ" ಎಂದು ಹೇಳಿ ಕಣ್ಣು ಹೊಡೆದು ಮಂದಹಾಸ ಬೀರಿ ಇನ್ನೊಮ್ಮೆ ನಮಸ್ಕಾರವನ್ನಾಚರಿಸಿದ.

ಇನ್ನೊಬ್ಬ ಕಟ್ಟುಮಸ್ತು ಮೈಕಟ್ಟಿನ, ದಪ್ಪ ಕೈಗಳ ವ್ಯಕ್ತಿ; ಒಂದೇ ಕಡೆ ನೋಡುತ್ತ ನಿಂತಿದ್ದ. ಅವಸರದಲ್ಲಿ ಒಡ್ಡೊಡ್ಡಾಗಿ ಕೆತ್ತಿದ ಬಂಡೆಗಲ್ಲಿನ ಮೂರ್ತಿಯಂತಿದ್ದ. ಆತನ ಹೆಸರು ಕೂಡ ಬಂಡೆಯನೆಂದೇ ಇತ್ತು. ಅವನ ನಿರ್ಭಾವದ ಮುಖದಲ್ಲಿ ಸಹಜ ಗೆರೆಗಳೊಂದೋ ಇರಲಿಲ್ಲ. ಭಾವನೆಗಳನ್ನು ಅಭಿವ್ಯಕ್ತಿಸುವಾಗ ಗೆರೆ ಮೂಡಬಹುದಿತ್ತೇನೋ, ಆದರೆ ಅವನನ್ನ ನೋಡಿದರೆ ಅವನೆಂದೂ ಭಾವನೆಗಳನ್ನ ಅನುಭವಿಸಿದವನಲ್ಲ ಎಂಬಂತಿದ್ದ. ಒರಟುತನ ಅವನ ದಪ್ಪ ಮುಖದಲ್ಲಿ ಅಚ್ಚೊತ್ತಿದಂತೆ ಇದುದ್ದರಿಂದ ಅವನನ್ನು ಕಂಡಾಗ ಯಾರಿಗಾದರೂ ಭಯವಾಗುತ್ತಿತ್ತು. ಶೂರ. ಯುದ್ಧಕಲೆಯನ್ನ ಚೆನ್ನಾಗಿ ಬಲ್ಲವನು. ಇತರರಿಗೆ ಅರಿವಾಗುವಂತೆ ಮಾತಾಡುವುದು ಅವನಿಗೆ ತಿಳಿಯದೆಂದೂ ಸುಕ್ರ ಹೇಳಿ ಕಳಿಸಿದ್ದ. ಇನ್ನೊಬ್ಬ ಮನುಷ್ಯ ಸಹಜವಾದ ಭಾವನೆಗಳನ್ನುಳ್ಳ ಎತ್ತರ ಕಾಯದವನು. ಮನೆಯಲ್ಲಿ ಕಾವಲಿಗೆ ಇಲ್ಲವೆ ಸಂದೇಶ ರವಾನೆಗೆ ಇರಲೆಂದು ಸುಕ್ರ ಹೇಳಿದ್ದ.

ಕೊನೆಯವನು ಬೊಂತೆಯ: ಸುಕ್ರ ಹೇಳಿ ಕಳಿಸಿದ್ದ;

"ನಿನಗೆ ಬೇಕೆನಿಸಿದಾಗ ಯಾರನ್ನಾದರೂ ಕೊಲೆ ಮಾಡುವ ಆಯುಧ ಇವನು! ನೀನು ಹೇಳಿದವರನ್ನ ಹೇಳಿದ ಸಮಯಕ್ಕೆ ಕೊಂದು ಹೇಳಿದಲ್ಲಿ ಚೆಲ್ಲಿ ಬರೋದೊಂದೇ ಇವನಿಗೆ ಗೊತ್ತಿರುವ ಕಸಬು, ಗುರಿ. ಯಾಕೆ ಕೊಲ್ಲಬೇಕೆಂದು ಇವನು ಕೇಳುವುದಿಲ್ಲ. ಕೊಂದದ್ದಕ್ಕೆ ಪ್ರತಿಫಲವೂ ಬೇಕಿಲ್ಲ. ಕೊಲ್ಲುತ್ತಾನೆ, ಯಾಕೆಂದರೆ ನೀನು ಹೇಳುತ್ತಿ, ಆದ್ದರಿಂದ ಈತ ನಿನ್ನ ಹತ್ತಿರ ಅನ್ಯರಿಗೆ ಕಾಣದ ಅಪಾಯಕಾರಿ ಆಯುಧ ಇದ್ದಂತೆ. ಆಯುಧಕ್ಕೂ ಇವನಿಗೂ ವ್ಯತ್ಯಾಸವೆಂದರೆ ಆಯುಧ ಒಮ್ಮೊಮ್ಮೆ ಹುಸಿಹೋಗಬಹುದು, ಇವನಲ್ಲ!"

ಬೆಟ್ಟನೇ ಉಳಿದ ಮೂವರಿಗೂ ನಾಯಕನೆಂದಾಯಿತು. ಮೊದಲಿನ ಮೂವರಿಗೂ ನಾಗರಿಕ ಭಾಷೆ ಬರುತ್ತಿತ್ತಾದ್ದರಿಂದ ಅವರಿಂದ ಕೆಲಸ ತೆಗೆಯುವುದು ಕಷ್ಟವಾಗಲಿಕ್ಕಿಲ್ಲವೆಂದು ಅನ್ನಿಸಿತು. ಆದರೆ ನಾಲ್ಕನೆಯ ಬೊಂತೆಯನಿಗೆ ಬಾಯಿ ಇಲ್ಲ; ಮೂಗ. ಆದರೂ ಸುಕ್ರ ಕಳಿಸಿರಬೇಕಾದರೆ ಅವನ ಉಪಯೋಗ ಇರಲೇಬೇಕೆಂದು ಇಟ್ಟುಕೊಂಡ. ನಾಲ್ವರೂ ಅವನ ವೈದ್ಯ ಶಿಷ್ಯರೆಂದು ಅರ್ಥಕೌಶಲನಿಗೆ ಹೇಳಿ ಅವರ ಸೇವೆಯನ್ನು ಒಪ್ಪಿಕೊಂಡ.

* * *

ಶಿಖರಸೂರ್ಯನ 'ಅರಮನೆ ವಹಿವಾಟ'ದ ಮೂರು ವರ್ಷಗಳ ಈ ಅವಧಿಯಲ್ಲಿ ಎಷ್ಟು ಪ್ರಯತ್ನಿಸಿದರೂ ನಿರ್ಲಕ್ಷಿಸಲಾರದ ಮತ್ತೆ, ಮತ್ತೆ ಅನಾಯಾಸ ನೆನಪಿಗೆ ಬರುವ ವ್ಯಕ್ತಿ ಎಂದರೆ ಚಿಕ್ಕಮ್ಮಣ್ಣಿ. ಬೇರೆಯವರಿಗಾಗಿ ಸದಾ ಸ್ಪಂದಿಸುವ ಹೃದಯದ ಅವಳನ್ನು ಮರೆಯುವುದು ಸಾಧ್ಯವೇ ಇರಲಿಲ್ಲ. ಅವಳ ನೆನಪು ಬಹಳ ಹೊತ್ತು ಇದ್ದಾಗ ಹೋಲಿಕೆಗಾಗಿ ಮಹಾರಾಣಿ ನೆನಪಾಗುತ್ತಿದ್ದಳು. ಮಹಾರಾಣಿ ತನ್ನ ಅಪ್ರಿಯವಾದ, ಕ್ರೂರವಾದ ಕಣ್ಣು ಮತ್ತು ಕುಹಕತನ, ಲಜ್ಜೆಗಟ್ಟು ಪ್ರದರ್ಶಿಸುವ ಹೆಚ್ಚುಗಾರಿಕೆ, ಸ್ಪಷ್ಟವಾಗಿ ಅಭಿನಯವೆಂದು ಕಾಣುವ ಧೂರ್ತವಿನಯ, ಇವುಗಳನ್ನು ತನ್ನ ಸೌಂದರ್ಯದಿಂದ ಬಚ್ಚಿಡಲಾಗದ ರಾಕ್ಷಸಿಯಂತೆ ಕಾಣುತ್ತಿದ್ದಳು. ಅವಳನ್ನಾತ ದ್ವೇಷಿಸುತ್ತಿದ್ದ. ಯಾಕೆಂದರೆ ಆಕೆ ಚಿಕ್ಕಮ್ಮಣ್ಣಿಯನ್ನು ತನ್ನ ಸೇವಕಿಯೆಂಬಂತೆ ನಡೆಸಿಕೊಳ್ಳುತ್ತಿದ್ದಳು. ಇದೇ ಕಾರಣಕ್ಕಾಗಿ

ಶಿಖರಸೂರ್ಯ ಒಳಗೊಳಗೆ ರಾಜ ಮತ್ತು ಪ್ರಧಾನಿಯನ್ನೂ ದ್ವೇಷಿಸುತ್ತಿದ್ದ. ರಾಜ ಚಿಕ್ಕಮ್ಮಣ್ಣಿಯ ಅಸಹಾಯಕತೆಯ ಎಲ್ಲಾ ಪ್ರಯೋಜನ ಪಡೆಯುತ್ತಿದ್ದ. ರಾತ್ರಿ ಉಪಯೋಗಿಸಿ ಹಗಲು ಮಹಾರಾಣಿಗೆ ಹೆದರಿ ಚಿಕ್ಕಮ್ಮಣ್ಣಿ ಅರಮನೆಯ ಗೌರವಕ್ಕೆ ತಕ್ಕ ಹೆಣ್ಣಲ್ಲವೆಂಬಂತೆ ನಡೆದುಕೊಳ್ಳುತ್ತಿದ್ದ. ಆದರೂ ಬೇರೆ ದೇಶದ ರಾಜ, ಮಂತ್ರಿ ಬಂದಾಗ ಚಿಕ್ಕಮ್ಮಣ್ಣಿಯನ್ನ ಜೊತೆ ಕರೆಯುತ್ತಿದ್ದ. ಆಗವಳು ಬಹಳ ಸಂತೋಷದಿಂದ ಬರುತ್ತಿದ್ದಳು. ರಾಜನ ಬಗ್ಗೆ ನಿಜವಾದ ಪ್ರೀತಿ ಇದ್ದ ಪತಿವ್ರತೆ ಅವಳು.

ಇದನ್ನೇ ಶಿಖರಸೂರ್ಯ ಇಷ್ಟಪಡುತ್ತಿರಲಿಲ್ಲ. ಗಂಡ ಇಷ್ಟು ಕೆಟ್ಟದಾಗಿ ನಡೆಸಿಕೊಂಡರೂ ಅವನು ಕರೆದಾಗ ಹೋಗುವಳಲ್ಲ! ಇವಳಿಗೆ ಮಾನ ಅವಮಾನಗಳ ವ್ಯತ್ಯಾಸವೇ ತಿಳಿಯುವುದಿಲ್ಲವೆ? ತನ್ನ ಗಂಡನ ದ್ರೋಹ, ಮಹಾರಾಣಿಯ ಕುಹಕ, ತನ್ನ ಬಾಯಿಲ್ಲದ ಗಾಯಗಳು-ಇವುಗಳ ವಿಷಯ ಇವಳಿಗೇನೂ ತಿಳಿಯುವುದಿಲ್ಲವೆ? ಕೊನೇಪಕ್ಷ ಮಕ್ಕಳ ಬಗೆಗಿನ ಅರಮನೆಯ ನಿರ್ಲಕ್ಷವನ್ನಾದರೂ ತಿಳಿಯಬ್ಯಾಡವೆ? ಅವಳ ಕಳೆದುಹೋದ ಮಗ ತಿರುಗಿಬಾರದುದಕ್ಕೆ ಕಾರಣ ಯಾರು? ರಾಜನೇ ಇರಬೇಕು! ಅಷ್ಟಾದರೂ ಇವಳಿಗೆ ತಿಳಿಯಬಾರದೆ? ಅಥವಾ ಅವಮಾನದಲ್ಲೇ ಈ ಹೆಂಗಸಿಗೆ ಸಂತೋಷವಿದೆಯೆ? ಹಾಗಾದರೆ ಈಕೆ ನನ್ನ ಸಹಾನುಭೂತಿಗೆ ಯೋಗ್ಯಳಲ್ಲ ಎನಿಸುತ್ತಿತ್ತು. ಆದರೆ ಆಕೆಯ ಪ್ರಶಾಂತವಾದ ಮುಗುಳುನಗೆಯ ಮುಖ ಮತ್ತು ಇಂಪಾದ ದನಿ ಕೇಳಲು ಸದಾ ಕಾತರನಾಗಿರಲು ಕಾರಣವೇನು? ಅವಳ ಸರಳತನ, ಹೊಳೆವ ಕಣ್ಣು-ಇನ್ನೇನೋ ಹೇಳುತ್ತವೆ. ಪ್ರೀತಿಗೆ ನಾಚಿಕೆಯಿಲ್ಲ. ಪ್ರೀತಿಗೆ ಸೀಮೆಯಿಲ್ಲ. ಅದು ಎಲ್ಲವನ್ನು ತಾಳಿಕೊಳ್ಳುತ್ತದೆ. ಯಾವುದೇ ಪ್ರಸಂಗದಲ್ಲಿ ಅದು ಪ್ರೀತಿಸದೆ ಇರಲಾರದು! ಯಾವುದದು? ತಕ್ಷಣ ಹೊಳೆಯಿತುಃ ಅದು ಅವಳ ತಾಯ್ತನ! ಆ ಕ್ಷಣವೆ ಅವನಿಗೆ ಶಿವಾಪುರ ಗವಿಯ ಅಮ್ಮನ ಕಣ್ಣು ನೆನಪಾಗಿ - ಆ ವಿಚಾರ ಅಲ್ಲಿಗೆ ನಿಲ್ಲಿಸುತ್ತಿದ್ದ.

ಇತ್ತ ಚಿಕ್ಕಮ್ಮಣ್ಣಿಯ ಚಿಂತೆಗಳು ಹೆಚ್ಚಾಗಿದ್ದವು. ಅಣ್ಣನ ನಿಧನದಿಂದ ಅವಳ ಅಳಿದುಳಿದ ಆಸೆಗಳೂ ಇದ್ದಿಲಾಗಿದ್ದವು. ಅರಮನೆಯಲ್ಲಿಯ ದೇವರ ಗುಡಿಗೆ, ತೆವಳಿದಂತೆ ಮೆಲ್ಲಗೆ ಹೆಜ್ಜೆ ಇಡುತ್ತ ಹೋಗಿ ವಿಗ್ರಹದ ಮುಂದೆ-ಕಣ್ಣು ಮುಚ್ಚಿಕೊಂಡು ಕೂರುತ್ತಿದ್ದಳು. ಒಮ್ಮೊಮ್ಮೆ ಕೂತವಳು ಚಲನೆಯಿಲ್ಲದೆ ಕೂತೇ ಇರುತ್ತಿದ್ದಳು. ಆಗ ಮಾತ್ರ ನಿರ್ಜೀವ ಗೊಂಬೆಯಂತೆ ಕಾಣುತ್ತಿದ್ದಳು. ಒಮ್ಮೊಮ್ಮೆ ನಿಟ್ಟುಸಿರುಬಿಟ್ಟು ಕಳೆದುಕೊಂಡ ಮಗನ ನೆನಪಾಗಿ ಕಣ್ಣೀರು ಸುರಿಸುತ್ತಿದ್ದಳು. ದುಃಖ ಒತ್ತರಿಸಿ ಬಂದರೆ “ನನ್ನ ನಂದಾದೀಪವ ನಂದಿಸಿದೆಯೋ ಶಿವನೇ!” ಎಂದು ಮುಖ ಮುಚ್ಚಿಕೊಂಡು ಮಕ್ಕಳ ಹಾಗೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಮಗಳು ಛಾಯಾದೇವಿಗೂ ಇದೇ ಗತಿಯಾದರೆ ಹ್ಯಾಗೆಂದು ಹಗಲು ರಾತ್ರಿ ಚಿಂತಿಸುತ್ತಿದ್ದಳು. ಛಾಯಾದೇವಿ ತನ್ನ ಕಣ್ಣಿನಿಂದ ಅರೆಗಳಿಗೆ ಮರೆಯಾದರೂ ಕಳವಳಗೊಳ್ಳುತ್ತಿದ್ದಳು. ಇಂಥ ಸಂದರ್ಭಗಳಲ್ಲಿ ಪೂಜಾರಿ ಬಂದರೆ ಆಕೆಗೆ ಸಂತೋಷವಾಗುವಂತೆ ಪೂಜೆ ಮಾಡಿ, ಪ್ರಸಾದ ಕೊಟ್ಟು ಸಮಾಧಾನದ ನಾಲ್ಕು ಮಾತು ಹೇಳುತ್ತಿದ್ದ. ಅದರಲ್ಲಿ ‘ಕಳೆದ ಮಗ ತಿರುಗಿ ಸಿಕ್ಕುವನೆಂದು, ಛಾಯಾದೇವಿಯನ್ನು ಶಿವ ಕಾಪಾಡುತ್ತಾನೆಂದು’ ಎರಡು ಮಾತು ತಪ್ಪದೆ ಸೇರಿಸುತ್ತಿದ್ದ. ಆಗ ಮಾತ್ರ ಚಿಕ್ಕಮ್ಮಣ್ಣಿಯ ಉದ್ವೇಗ ಕಡಿಮೆಯಾಗಿ ಕಳೆಕಳೆಯಾಗುತ್ತಿದ್ದಳು. “ಹೌದೆ ನನ್ನಪ್ಪಾ!” ಎಂದು ಅವನ ಮುಂದೆ ಕೂತು ಅವನು ಹೇಳುವ ಎಲ್ಲ ದಂತಕತೆಗಳನ್ನು, ಶಿವನ ಪರವಾಗಿ ಕೊಡುವ ಭರವಸೆಗಳನ್ನು ಧ್ಯಾನದಿಂದ, ನಂಬುಗೆಯಿಂದ ಕೇಳಿ ತೃಪ್ತಿ ಹೊಂದುತ್ತಿದ್ದಳು.

ಒಮ್ಮೆ ಗುಡಿಯಲ್ಲಿ ಒಬ್ಬಳೇ ಕೂತು ತಾನಿದ್ದ ಸ್ಥಿತಿಯ ನೆನೆದು ಸಂಕಟ ಪಡುತ್ತಿದ್ದಳು. ಶಿಖರಸೂರ್ಯ ಅವಳಿಗೆ ಗೊತ್ತಾಗದಂತೆ ಅವಳ ಹಿಂದೆಯೇ ಮೂಲೆಯಲ್ಲಿ ನಿಂತುಕೊಂಡಿದ್ದ. ಸುಮ್ಮನೆ ಕೂತಿದ್ದ ಚಿಕ್ಕಮ್ಮಣ್ಣಿ ಇದ್ದಕ್ಕಿದ್ದಂತೆ “ಅಂದದ ಮಗ, ಚಂದದ ಮಗ, ರೂಪುರೇಖೆ ಸುದ್ದುಳ್ಳ ಮಗನ ಕಸಿದೆಯಲ್ಲೋ ಶಿವನೇ!” ಎಂದು ಆಕಾಶದ ಕಡೆ ನೋಡಿ ಶಿವದುಃಖ ಮಾಡುತ್ತ ಸಂಕಟದ ಆಧಿಕ್ಯದಲ್ಲಿ ತನ್ನ ಕೂದಲು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಶಿಖರಸೂರ್ಯ ಹೋಗಿ ಮೆಲ್ಲನೆ ಕೈಹಿಡಿದು “ಅಮ್ಮಾ” ಅಂದ. ಆಶ್ಚರ್ಯದಿಂದ ಚಿಕ್ಕಮ್ಮಣ್ಣಿ ಅವನ ಕಡೆ ನೋಡಿದರೆ- ಶಿಖರಸೂರ್ಯ! ಮುಖ ಪ್ರಕಾಶಮಾನವಾಯಿತು. “ಹೌದು, ನನ್ನ ಮಗ ನನ್ನೊಂದಿಗಿದ್ದಿದ್ದರೆ ಇಂದು ಹೀಗೇ ಅಮ್ಮಾ ಅಂತಿದ್ದ!” ಎಂದು ಹೇಳುತ್ತ ಶಿಖರಸೂರ್ಯನ ತೋಳುಗಳನ್ನ ಬಿಗಿಯಾಗಿ ಹಿಡಿದುಕೊಂಡಳು. ತಾನಾಡಿದ್ದು ನಂಬಿಕೆಯಾಗದೆ ಹಿಂದೆ ಸರಿದು ಶಿಖರಸೂರ್ಯನನ್ನು ಕಣ್ತುಂಬ ನೋಡಿದಳು. ಮುಖದಲ್ಲಿ ಕಪಟ ಕಾಣಲಿಲ್ಲವಾಗಿ ಮತ್ತೆ ತೋಳು ಹಿಡಿದುಕೊಂಡು ಚಿಕ್ಕವನಾಗಿದ್ದಾಗಿನ ಪುತ್ರಭಾಷಿತರ ನೆನೆದಳು. ಆನಂದವಾಗಿ ಯಾತನೆಯೂ ಆಗಿ, ಕೊರಳ ಸೆರೆ ಬಿಗಿದು, ಮುತ್ತಿನಂತ ಕಣ್ಣೀರು

ಸುರಿಸುತ್ತ ಏನನ್ನೋ ನೆನೆಯುತ್ತಿದ್ದಾಗ ಯಾವಾಗಲೋ ಅಲ್ಲಿಗೆ ಬಂದಿದ್ದ ಪೂಜಾರಿ ಇದನ್ನೆಲ್ಲ ನೋಡಿ ಅವನೂ ಕಣ್ಣು ಒದ್ದೆ ಮಾಡಿಕೊಂಡು, ಇವರನ್ನು ಎಚ್ಚರಿಸಲೆಂದು ಗಂಟೆ ದನಿ ಮಾಡಿದ. ದೇವರು ಶುಭನುಡಿದನೆಂದು ಚಿಕ್ಕಮ್ಮಣ್ಣಿ ಎದ್ದಳು.

ಒಂದು ದಿನ ಮೂರು ಸಂಜೆ ಸುರುವಾಗುವ ಮುನ್ನವೇ ಚಿಕ್ಕಮ್ಮಣ್ಣಿ ದೇವಾಲಯಕ್ಕೆ ಬಂದಿದ್ದಳು. ಪೂಜಾರಿ ಇನ್ನೂ ಬಂದಿರಲಿಲ್ಲ. ಕಣಗಿಲೆ ಮರದ ಕೆಳಗೆ ಉದುರಿದ್ದ ತಾಜಾ ಹೂಗಳನ್ನು ಆರಿಸಿ ಉಡಿ ತುಂಬಿಕೊಳ್ಳುತ್ತಿದ್ದಳು. ಇವಳಿಗೆ ಗೊತ್ತಿಲ್ಲದ ಹಾಗೆ ದೂರ, ಗುಡಿಯ ಮರೆಯಲ್ಲಿ ಬೆಟ್ಟ. ಇವಳನ್ನೇ ಗಮನಿಸುತ್ತ ನಿಂತಿದ್ದ. ಚಿಕ್ಕಮ್ಮಣ್ಣಿಯ ಸರಳತೆಗೆ ಆತ ಬೆರಗಾಗಿದ್ದ. ಮಹಾರಜನ ಕೈಧಾರೆಯ ಮಡದಿಯಾಗಿ, ಬಿಗುಮಾನದ ನಡೆಯಿಲ್ಲ. ಆಕರ್ಷಕ ಭಾವ ಭಂಗಿಗಳಿಲ್ಲ, ಮಾತಿನಲ್ಲಿ ದರ್ಪವಿಲ್ಲ, ಸೇವಾಪರಿವಾರವಿಲ್ಲ, ಅಂಗರಕ್ಷಕರಿಲ್ಲ. ಸಂತೆಗೆ ಬಂದ ಸಾಮಾನ್ಯಳಂತೆ ಕಣಗಿಲ ಹೂವಾರಿಸುತ್ತ ಅಡ್ಡಾಡುತ್ತಿದ್ದಾಳೆ! ಮರುಕದಿಂದ ಮೈಮರೆಯುತ್ತ ನಿಂತಿದ್ದಾಗ ಚಿಕ್ಕಮ್ಮಣ್ಣಿ ಆಕಸ್ಮಾತ್ತಾಗಿ ಈ ಕಡೆ ತಿರುಗಿ ಇವನನ್ನ ನೋಡಿದಳು - "ಯಾರದು? ಬಾಪ್ಪಾ ಇಲ್ಲಿ" ಅಂದಳು. ಬಂದ.

'ನನ್ನ ಕಂಡರೆ ನಿನಗೂ ಬೇಸರ ಏನಪ್ಪಾ?" ಅಂದಳು.

-ರಾಜ್ಯದ ಚಿಕ್ಕರಾಣಿ ಸೇವಕನಿಗೆ ಹೇಳುವ ಮಾತೇ ಇದು? ಬೆಟ್ಟ ಹಿಂದೆ ಮುಂದೆ ನೋಡದೆ ಹಾಜರಾಗಿ ಬಾಗಿ ನಮಸ್ಕಾರವನ್ನಾಚರಿಸಿ "ಮಹಾರಾಣಿ" ಅನ್ನಬೇಕಾಗಿತ್ತು, ಅದವನ ಬಾಯಿಂದ ಬಾರದೆ "ತಾಯೀ!" ಎಂದು ಹೇಳಿ ಬಾಗಿ ನಿಂತ.

"ಈಗೆರಡು ವಾರಗಳಿಂದ ನೋಡುತ್ತಿದ್ದೇನೆ; ಬೆಳಿಗ್ಗೆ ಬಂದವನು ಮದ್ದುಕೊಟ್ಟು ಇಲ್ಲೇ ಸುಳಿದಾಡುತ್ತಿ. ನೋಡಿದಾಗೊಮ್ಮೆ ಮುಖ ಕೆಳಗೆ ಹಾಕಿ ನೆಲ ನೋಡುತ್ತಿ. ಊಳಿಗದ ಕೆಲಸ ಏನೂ ಇಲ್ಲದಿದ್ದರೆ ಉದ್ಯಾನದ ತರುಮರ ನೋಡಿಕೊಳ್ಳುತ್ತಿ. ಇದನ್ನೆಲ್ಲ ಇಷ್ಟದಲ್ಲಿ ಮಾಡುತ್ತೀಯೋ? ಕಷ್ಟದಲ್ಲಿ ಮಾಡುತ್ತೀಯೋ ನನ್ನಿಂದ ನಿನಗೇನಾದರೂ ಆಗಬೇಕಾದಿದ್ದೆದೆಯೆ ನನ್ನಪ್ಪಾ?"

ದೊಡ್ಡ ದೇಶದ ರಾಣಿ ಸರಳ ಮಾತಾಡಿದರೆ ಬೆಟ್ಟನಂಥವನಿಗೆ ಹ್ಯಾಗನಿಸಬೇಡ? ತನ್ನ ಕುಣಿವ ಹುಬ್ಬು ಕಾಣದಷ್ಟು ಬಾಗಿ ಹೇಳಿದ:

"ನಾನು ಬೆಟ್ಟ. ಬಿಳಿಗಿರಿರಾಯನ ಭಂಟ ತಾಯಿ."

ತಕ್ಷಣ ಚಿಕ್ಕಮ್ಮಣ್ಣಿ ಯಾರಾದರೂ ಇದ್ದಾರೆಯೇ ಅಂತ ಆ ಈ ಕಡೆ ನೋಡಿ, ಬೆಟ್ಟನ ಸಮೀಪ ಬಂದು,

"ಯಾಕಾಗಿ ಬಂದೆಯಪ್ಪಾ? ನಾವೇ ಅಭದ್ರ ಅನಾಥರಾಗಿರುವಾಗ ನೀನು ಬೇರೆ ಬಂದು ಸೇರಿಕೊಂಡೆಯಾ?" ಅಂದಳು.

"ನಾನು ಈಗ ನಿಮ್ಮ ರಾಜವೈದ್ಯನ ಭಂಟ ತಾಯಿ. ಅವನೇ ನಿನಗೂ ರಾಜ-ಕುಮಾರಿಗೂ ಯಾವುದೇ ತೊಂದರೆ ಅಥವಾ ಕೊರತೆ ಆಗದ ಹಾಗೆ ನೋಡಿಕೊಂಡಿರಬೇಕೆಂದೇ ನನ್ನನ್ನ ನೇಮಿಸಿರೋದು. ಬೇಕಾದರೆ ರಾಜವೈದ್ಯನನ್ನೇ ಕೇಳು ತಾಯಿ!"

ಚಿಕ್ಕಮ್ಮಣ್ಣಿ ಈ ಮಾತು ಕೇಳಿ ಆನಂದಪರವಶಳಾಗಿ ಬಿಟ್ಟಳು. ಮಗಳು ಮತ್ತು ತನ್ನ ಬಗ್ಗೆ ಕಾಳಜೀ ಮಾಡೋದಕ್ಕೆ ಶಿವ ಯಾರನ್ನೋ ಕಳಿಸಿದ್ದಾನೆ ಅಂದುಕೊಂಡಳು. ತನ್ನ ಮಗಳು ಸುರಕ್ಷಿತಳೆಂಬ ಭಾವನೆ ಬಂದು ನೆಮ್ಮದಿಯಿಂದ ಜಲ ಜಲ ಕಣ್ಣೀರು ಮಿಡಿದಳು. ಶಿಖರಸೂರ್ಯನ ಬಗ್ಗೆ ಕೃತಜ್ಞತಾ ಭಾವ ಬಂತು ನಿಜ; ಅದಕ್ಕೂ ಮಿಗಿಲಾಗಿ ಆತನ ಒಳ್ಳೆಯತನದ ಪ್ರಯೋಜನ ಪಡೆದು ಖಾಯಮ್ಮಾಗಿ ಮಗಳ ಯೋಗಕ್ಷೇಮವನ್ನು ಆತನಿಗೊಪ್ಪಿಸುವ ಯೋಗಭಾಗ್ಯ ಕೂಡಿಬರಲೆಂದು ಶಿವನಲ್ಲಿ ಪ್ರಾರ್ಥಿಸಿದಳು. ಆವಾಗಲೇ ಗರ್ಭಗುಡಿಯ ಬಾಗಿಲು ಫಳ್ಳನೆ ತೆರೆದುಕೊಂಡು ಒಳಗೆ ಸಾಲು ಸೊಡರಿನ ಬೆಳಕಾಯಿತು! ಶುಭಶಕುನವಾಯಿತೆಂದು ಭಾವಪರವಶಳಾಗಿ ಬೆಟ್ಟನನ್ನು ಮರೆತು ಗುಡಿಯ ಕಡೆಗೆ ನಡೆದಳು.

# ಇಪ್ಪತ್ತೆರಡು

ಶಿಖರಸೂರ್ಯನ ಕುಲನಾಮ ಹುಟ್ಟುಕಟ್ಟುಗಳನ್ನು ಕೇಳಿತಿಳಿದ ಚಿಕ್ಕಮ್ಮಣ್ಣಿ ಪುಳಕಿತಳಾದಳು. ಸಾಕ್ಷಾತ್ ಶಿವನೇ ಹೀಗೆ ಎಲ್ಲರನ್ನು ದೇವರ ಮುಂದಿನ ಹೂವೆತ್ತಿದಷ್ಟು ಸುಲಭವಾಗಿ ಬೇರೀಜು ಮಾಡಿಕೊಡುತ್ತಿದ್ದಾನೆಂದು ನಂಬಿದ್ದಳು. ತಾನೇ ಹೇಳಿದರೆ ಮಹಾರಾಣಿಯ ಅಹಂಕಾರ ಕೊಂಕಿ ಕೆಲಸ ಹುಸಿದೋದೀತೆಂದು, ಮಹಾರಾಣಿಗೆ ಹೇಳಿ ಅವಳಗುಂಟ ಮುಂದುವರಿಯಲೆಂದು ಮಹಾರಾಜ ಮತ್ತು ಚಿಕ್ಕಮ್ಮಣ್ಣಿ ಹಾರೈಸಿದರು.

ಮಹಾರಾಣಿ ಅರ್ಥಕೌಶಲರು ಇಂಥದನ್ನು ಮೊದಲೇ ಆಲೋಚಿಸಿದ್ದರು. ಸವತಿಯ ಮಗಳಾದ ಛಾಯಾದೇವಿಯನ್ನು ಯಾವನೋ ಹಾದಿಹೋಕನಿಗೆ ಕಟ್ಟಿ ಕೈತೊಳೆದು ಕೊಳ್ಳುವುದರಲ್ಲಿ ಅವರ ಕ್ಷೇಮವಿತ್ತೇ ಹೊರತು ಯಾವನೋ ರಾಜನಿಗೆ ಕಟ್ಟಿದರೆ ಇಂದಿಲ್ಲಾ ನಾಳೆ ಅವನು ತಲೆನೋವಾಗುವವನೇ! ಅದರ ಬದಲು ವೈದ್ಯನ ಕತ್ತಿಗೆ ಕಟ್ಟಿದರೆ ಇಬ್ಬರೂ ಮದ್ದರೆಯುತ್ತ ವೈದ್ಯಶಾಲೆಯಲ್ಲೇ ಬಿದ್ದಿರುತ್ತಾರೆ. ಕೊಂಚ ಬಲಾಢ್ಯನೇ ಆದ ವೈದ್ಯ ಶಾಸ್ತ್ರೀಯವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ ನಮ್ಮ ವಶದಲ್ಲಿರುತ್ತಾನೆ! ಇದನ್ನು ತಾವೇ ಮಾಡಬೇಕೆಂದಿದ್ದರು. ಆದೀಗ ತಾನಾಗಿ ಕೂಡಿಬಂದಿರುವುದರಿಂದ ಮಹಾರಾಣಿಯೂ ಉತ್ಸಾಹಭರಿತಳಾಗಿ ಶಿಖರಸೂರ್ಯ, ಯುವರಾಜ ಮತ್ತು ಅರ್ಥಕೌಶಲರನ್ನು ಕರೆತರಲು ಸೇವಕರನ್ನು ಅಟ್ಟಿದಳು.

ಮಹಾರಾಣಿ ಅರಮನೆಯ ಶಕ್ತಿಕೇಂದ್ರವೆಂಬುದನ್ನು ಚಿಕ್ಕಮ್ಮಣ್ಣಿ ಸರಿಯಾಗಿಯೇ ಗ್ರಹಿಸಿದ್ದಳು. ಗಂಡ ಮಹಾರಾಜ ಅವಳಿಗೆ ಹೆದರುತ್ತಿದ್ದ. ಮಗ ಯುವರಾಜ ಹೆದರುತ್ತಿದ್ದ. ಅರ್ಥಕೌಶಲನಲ್ಲದೆ ದೇವರ ಪೂಜಾರಿ ಮತ್ತು ಊರ ವರ್ತಕರು ಕೂಡ ಅವಳಿಗೆ ಹೆದರುತ್ತಿದ್ದರು. ಅವಳಿದ್ದಾಗ ಅವಳ ನಾಯಿಗಳಿಗೂ ಗೌರವ ಕೊಡುತ್ತಿದ್ದರು. ಗಂಡಸರ ಆಲೋಚನೆಗಳನ್ನ ಉಪಯೋಗಿಸುವುದರಲ್ಲಿ ಮಹಾನಿಪುಣೆ ಮಹಾರಾಣಿ. ಯಾರೇ ಇರಲಿ, ತನ್ನನ್ನ ವಿರೋಧಿಸಿದವರ ವಿರುದ್ಧವಂತೂ ಸ್ವಚ್ಛಂದವಾಗಿ ನಾಲಗೆ ಹರಿ ಬಿಡುವುದರಲ್ಲೂ ಚೂಪು ಮಾತುಗಳಿಂದ ಕೆಣಕಿ ಅಂಥವರೊಂದಿಗೆ ಹಗೆ ಎಸಗುವುದರಲ್ಲೂ ಅವಳನ್ನು ಮೀರಿಸುವಂಥವರಿರಲಿಲ್ಲ.

ಅಂತಃಪುರದ ಅತಿದೊಡ್ಡ ಕೋಣೆ ಅವಳದೆ. ಅದರ ತುಂಬ ದೇಶವಿದೇಶಗಳಿಂದ ತರಿಸಿದ ಕನ್ನಡಿಗಳಿದ್ದವು. ಬೆಳಗಾನೆದ್ದರೆ ಅವಳೇಳುವುದು ಕನ್ನಡಿ ತೋರಿಸಿದ ಬೆಳಕಿನಲ್ಲಿ!

ಇಂತಪ್ಪ ಕನ್ನಡಿಯ ಅಂತಃಪುರದಲ್ಲಿ ಕಂತು ಅವಳು ಮಾಡಿಕೊಂಬ ಶೃಂಗಾರಕ್ಕೆ ಕನಿಷ್ಠ ಎರಡು ಗಂಟೆ ಬೇಕಾಗುತ್ತಿತ್ತು. ಯಾರಾದರೂ ನೋಡಲಿ ಬಿಡಲಿ ಶೃಂಗಾರವಿಲ್ಲದೆ ಒಂದು ದಿನವೂ ಅಂತಃಪುರದಿಂದ ಹೊರಗೆ ಬಂದವಳೇ ಅಲ್ಲ. ಅರಮನೆಯಿಂದ ಹೊರಗಡೆ ಹೊರಟರೆ ಬೆಳಗಿನ ಶೃಂಗಾರ ಕಳಚಿ ಇನ್ನೆರಡು ಗಂಟೆ ಇನ್ನೊಂದು ಬಗೆಯ ಶೃಂಗರ ಮಾಡಿಕೊಳ್ಳುತ್ತಿದ್ದಳು. ನೆರಿಗೆಯ ತೀಡಿ ತೀಡಿ ಮೂವತ್ತು ಮೊಳದ ಚಂದ್ರಗಾವಿಯನುಟ್ಟು, ಬಿಗಿದ ಹೆದೆಯಂಥ ಎದೆಗೆ ಕಸೂತಿ ಹೂ ಬರೆದ ಕುಬಸವ ತೊಟ್ಟು, ವಾರೆದುರುಬಿಗೆ ಮಲ್ಲಿಗೆಯ ಮಾಲೆಯ ಮುಡಿದು, ನೊಸಲಲ್ಲಿ ಸೂರ್ಯ ತಿಲಕವನ್ನಿಟ್ಟು; ವಜ್ರದ ನತ್ತು, ಜಾಜಿ, ಎಂಟೆಳೆ ಸರ, ಸೊಂಟಕ್ಕೆ ಗಜಲಕ್ಷ್ಮಿ ಪಟ್ಟಿಯ ಬಿಗಿದುಕೊಂಡು ಕೈತುಂಬ ವಜ್ರದ ಬಳೆಯಿಟ್ಟುಕೊಂಡು ಅಲಂಕೃತಳಾಗಿ ಚೆಲುವ ಚೆಲ್ಲುತ ಬಂದರೆ ಮಹಾರಾಜ ಕೂಡ ಅವಳನ್ನು ಕದ್ದು ನೋಡಿ ನಿಟ್ಟುಸಿರು ಬಿಡುತ್ತಿದ್ದ. ನಡೆವಾಗಿನ ಅವಳ ನಿತಂಬಗಳ ಲಯಕ್ಕೆ ಸ್ವಯಂ ಶಿಖರಸೂರ್ಯನೂ ಮಾರುಹೋಗಿದ್ದನೆಂಬ ಬಳಿಕ ಅವಳ ಸೌಂದರ್ಯವನ್ನು ವಾಚಕರೇ ಊಹಿಸಿಕೊಳ್ಳಬೇಕು.

ಇಷ್ಟು ಹೇಳಿ ಇನ್ನಾಕೆಯ ಹವ್ಯಾಸದ ಬಗ್ಗೆ ಹೇಳದಿದ್ದರೆ ಆಕೆಯ ಪರಿಚಯವೇ ಅಪೂರ್ಣ. ಆಕೆಯ ನಾಯಿ ಸಾಕುವ ಹವ್ಯಾಸ ಕೂಡ ದೇಶವಿದೇಶಗಳಲ್ಲಿ ಸುದ್ದಿಯಾಗಿತ್ತು. ಯಾವನೊಬ್ಬ ರಾಜನಿಗೆ ಕನಕಪುರಿಯ ರಾಜನ ಕೃಪೆಯಾಗಬೇಕಿದ್ದರೆ ಒಂದು ಬೆಲೆಯುಳ್ಳ ತಳಿಯ ಅಪರೂಪದ ನಾಯಿಯನ್ನು ಕಾಣಿಕೆಯಾಗಿ ಕೊಟ್ಟರಾಯಿತು; ಕೆಲಸವಾಯಿತೆಂದೇ ಲೆಕ್ಕ! ಊರಾಚೆಯ ಕಾಡಿನಲ್ಲಿ ಸಾವಿರೆಕರೆ ತೋಟ ಇದೆ. ಅದೇ ಶ್ವಾನಪುರ. (ಈ ಹೆಸರನ್ನು ಸೂಚಿಸಿದ ಕಾಶ್ಮೀರಿ ಪಂಡಿತನಿಗೆ ಮಹಾರಾಣಿ ಶಾಲು ಹೊದಿಸಿ ಸನ್ಮಾನ

ಮಾಡಿದಳಂತೆ.) ಸದರಿ ಶ್ವಾನಪುರದಲ್ಲಿ ದೂರ ದೂರ ಕಟ್ಟಿದ ಸುಮಾರು ಐವತ್ತು ಮನೆಗಳಿವೆ. ಮನೆಗೊಂದು ತಳಿಯ ನಾಯಿಗಳಿವೆ. ಐವತ್ತಾರೂ ದೇಶಗಳ ನಾಯಿಗಳಲ್ಲದೆ ಅವುಗಳ ಶುದ್ಧ ತಳಿಯ ನಾಯಿ, ಅಶುದ್ಧ ತಳಿಯ ನಾಯಿ, ಕಸಿಮಾಡಿ ಬೆರೆಸಿದ ಹೊಸ ತಳಿಯ ನಾಯಿ, ಅರಚುವ ನಾಯಿ, ಹಡುವ ನಾಯಿ, ಬೊಗಳುವ ನಾಯಿ, ಕೌಟುಂಬಿಕ ನಾಯಿಗಳಲ್ಲದೆ ಹಾದೀನಾಯಿ, ಬೀದೀನಾಯಿ, ಕಾಡುನಾಯಿ, ಹುಚ್ಚುನಾಯಿ ಕೂಡ ಇವೆ. ಒಂದೊಂದು ತಳಿಗೂ ಅದಕ್ಕದಕ್ಕೆ ಅದರದರದೇ ಆಳುಕಾಳು ಚಾಕರ ನೌಕರ ಬೇರೆ ಬೇರೆ. ಅವುಗಳ ಆಹಾರ ವಿಹಾರ ಮೈಥುನ ಮಕ್ಕಳ ಫಲಪುತ್ರ ಸಂತಾನ-ಯಾವುದಕ್ಕೂ ತೊಂದರೆ ಇಲ್ಲ.

ಶ್ವಾನಪುರದ ನಾಯಿಗಳಿಗೆ ಜೀವದ ಹಂಗುದೊರೆಯ ಬೇಟೆಯಾಡುವ, ದ್ವಂದ್ವ ಯುದ್ಧ ಮಡುವ ವಿಶೇಷ ಶಿಕ್ಷಣ ಕೊಡಲಾಗುತ್ತಿತ್ತು. ವರ್ಷದ ವಿಶೇಷ ಹಬ್ಬ ಹರಿದಿನಗಳಂದು, ಆಮಂತ್ರಿತ ಅತಿಥಿಗಳೆದುರು ವಿಶಿಷ್ಟವಾಗಿ ತಯಾರಿಸಿದ ಶ್ವಾನಕೂಪದ ಅಂಗಣದಲ್ಲಿ ಎರಡು ತಳಿಯ ನಾಯಿಗಳನ್ನು ಎದುರೆದುರೆ ಬಿಟ್ಟು ಅವು ಬೊಗಳಿ ಕಚ್ಚಿ ಎಳೆದಾಡಿ ಪರಸ್ಪರರನ್ನು ಕೊಲ್ಲುವತನಕ ಹೋರಾಡುವ ದೃಶ್ಯವನ್ನು ಅತಿಥಿಗಳು ನೋಡಿ ಆನಂದಪಡುತ್ತಿದ್ದರು. ಇದು ಸಾಮಾನ್ಯ ಮನರಂಜನೆ. ವಿಶೇಷ ಮನರಂಜನೆ ಯಾವುದೆಂದರೆ ಯುದ್ಧ ಕೈದಿಗಳ ಮೇಲೆ, ಕೊಲೆಗಡುಕರ ಮೇಲೆ, ಅವಿಧೇಯ ಸೇವಕರ ಮೇಲೆ, ಅರಮನೆಗೆ ಬೇಡವಾದವರ ಮೇಲೆ ನಾಯಿಗಳನ್ನು ಛೂ ಬಿಟ್ಟು ಬೇಟೆಯಾಡಿಸುವ ಆಟ ಮಾತ್ರ ರೋಮಾಂಚಕಾರಿಯಾದುದು. ಇವಲ್ಲದೆ ಮಹಾರಾಣಿ ಖುದ್ದಾಗಿ ಸಾಕಿ ಮುದ್ದಿಸುವ, ಆಟವಾಡುವ ಮೂರು ನಾಲ್ಕು ತಳಿಯ ನಾಯಿಗಳು ಅಂತಃಪುರದಲ್ಲಿವೆ. ಅವುಗಳಿಗೆ ಅವಳ ಅಕ್ಕಪಕ್ಕ ಕೂರುವ, ನಿಲ್ಲುವ ಕೆಲವಕ್ಕೆ ಅವಳ ತೊಡೆಯ ಮೇಲೇರುವ ಅವಕಾಶ ಕೂಡ ಇದೆ.

ಅವಳ ಆತ್ಮಗೌರವ ಮತ್ತು ಅಭಿರುಚಿಗಳೂ ಹಾಗೆಯೇ ಇವೆ. ಅವಳಿಗೆ ಏನನ್ನ ಕಾಣಿಕೆ ಕೊಟ್ಟರೂ ಅದು ಇಡೀ ಜಗತ್ತಿನಲ್ಲಿ (ಅಂದರೆ ಐವತ್ತೈದೂ ದೇಶಗಳಲ್ಲಿ) ಇಂಥದಿಲ್ಲ ಅನ್ನಿಸುವಂಥ ಅಪರೂಪದ ವಸ್ತುವಾಗಿರಬೇಕು. "ಸಾಲದು ಸಾಧಾರಣ, ಅಸಾಧಾರಣವೆ ಆಗಬೇಕು." ಎಂದು ರಾಗವಾಗಿ, ಗಿಳಿ ಪದ್ಯ ಓದಿದ ಹಾಗೆ ಕಾಣಿಕೆ ಕೊಡುವವರಿಗೆ ಹೇಳುತ್ತಿದ್ದಳು. ವಿದೇಶಗಳಿಂದ ಯಾರಾದರೂ ಗೌರವಾನ್ವಿತರು ಬಂದಾಗ ಮಹಾರಾಜ ಮಹಾರಾಣಿ ಇಬ್ಬರೂ ಒಡ್ಡೋಲಗ ಕೊಡುವುದಿದ್ದಲ್ಲಿ ಇವಳನ್ನು ಕರೆದೊಯ್ಯಲು ಪ್ರಧಾನಿಯೇ ಬರಬೇಕು. ಅತಿಥಿಗಳ ಪ್ರಭಾವ, ಶ್ರೀಮಂತಿಕೆಗಳನ್ನು ಹೇಳಿದ ಮೇಲೆ ಬರುವುದೂ ಬಿಡುವುದೂ ಅವಳಿಷ್ಟ.

ವಿದೇಶೀ ಗೌರವಾನ್ವಿತ ಅತಿಥಿಗಳು ಬಂದು ಇವಳನ್ನ ಬಾಯಿ ತೆರೆದುಕೊಂಡೇ ನೋಡಿ ಇವಳಿಗಿರುವ ಸ್ವಮೋಹ ನೋಡಿ ಕೊಂಚ ಹೊಗಳಿದರೆ ಆಮೇಲೆ ನಾಲ್ಕೈದು ತಿಂಗಳು ಅವಳು ಅದನ್ನೇ ಹೇಳಿಕೊಂಡು ಬೀಗುವ ಪರಿಯಂತೂ ಅವಳಿಗೆ ಮಾತ್ರ ಸಾಧ್ಯ. ಒಂದು ಸಣ್ಣ ಮಾದರಿ ನೋಡಿರಿ:

"ಅದೇನು ಸೌಂದರ್ಯ ರಾಶಿಯಿದೆಯೋ ನನ್ನಲ್ಲಿ, ನನಗೇ ಗೊತ್ತಿಲ್ಲ ಮಾರಾಯರೇ! ಯಾರೇ ಬರಲಿ, ನನ್ನ ನೋಡಿ ಬಾಯಿ ತಗೀತಾರೆ! ವಯಸ್ಸಾದ ಅತಿಥಿಗಳಿದ್ದರೇ ಒಳ್ಳೆಯದು, ಮುಖ ಕೊಟ್ಟು ಮಾತಾಡಲಿಕ್ಕಾದರೂ ಸಾಧ್ಯ. ಹದಿವಯಸ್ಸಿನವರು ಬಂದರಂತೂ, -ಅಬ್ಬ! ನನ್ನನ್ನ ಕಣ್ಣಿಂದ ಹರಿದುಕೊಂಡು ತಿನ್ನೋಹಾಗೆ ನೋಡೋದೆ! ಹೋಗಲಿ ಅಂದರೆ ಬೇಗನೆ ನಿಂತ ಜಾಗ ಖಾಲಿ ಮಾಡ್ತಾರೆಯೇ? ಅದೂ ಇಲ್ಲ! ಕಣ್ಣು ಪಿಳುಕಿಸದೆ ನೋಡುತ್ತ ನಿಂತುಬಿಡುತ್ತಾರೆ! ಅದಕ್ಕೇ ಮಾತಾಡಬೇಕಾದರೆ ನಾನು ಅವರ ಕಡೆಗೆ ನೋಡೋದೇ ಇಲ್ಲ; ನನ್ನ ಮೂಗಿನ ತುದಿ ನೋಡಿಕೊಳ್ತೇನೆ! ಇನ್ನೇನು ಮಾಡಲಿ ಹೇಳಿ. ಯಾವ್ಯಾವ್ದೋ ದೇಶಗಳ ಅರಮನೇಲಿ ನನ್ನ ಚಿತ್ರ ಹಾಕಿದ್ದಾರಂತೆ! ನನಗೆ ಹೇಳದೆ ಕೇಳದೆ ನನ್ನ ಚಿತ್ರ ಬರಿಸಿ ಹಾಕೋದು ನಾಗರಿಕತೆಯ ಲಕ್ಷಣ ಅಲ್ಲ ಅಂತ ಅವರಿಗೆ ಯಾರು ಹೇಳೋರು?" ಇತ್ಯಾದಿ!

ಐವತ್ತಾರೂ ದೇಶಗಳ ಮಹಾರಾಣಿ ತಾನಾಗಬೇಕೆಂಬ, ಪ್ರಪಂಚದ ಎಲ್ಲರೂ ತನ್ನ ಪ್ರಜೆಗಳಾಗಿರಬೇಕೆಂಬ ಆಸೆಗಳು ಅವಳಲ್ಲಿ ಇದ್ದವಾದರೂ ಇದಿಷ್ಟೇ ಅವಳ ಆಸೆಯೆಂದು ಹೇಳಬರುವಂತಿರಲಿಲ್ಲ. ಒಟ್ಟಿನಲ್ಲಿ ಅವಳು ಮಹತ್ವಾಕಾಂಕ್ಷೆಯ ಹೆಂಗಸೆಂದು ಹೇಳಬಹುದೇ ವಿನಾ ಅದೇನೆಂದು ಅಳತೆ ಮಾಡಿ ಹೇಳುವುದಾಗಲಿ, ವರ್ಣಿಸುವುದಾಗಲಿ ಸಾಧ್ಯವಿಲ್ಲವಾಗಿ ಮೊಗಮ್ಮಾಗಿ ಹೇಳುವುದೇ ಉಚಿತ:- ಚಿನ್ನ, ಅಧಿಕಾರ, ಸಾರ್ವಭೌಮತ್ವಗಳಿಗಾಗಿ ಸದಾ ಬಾಯ್ದೆರೆದ, ತೃಪ್ತಿಯೇ ಇಲ್ಲದ ನಿರಂತರ ದಾಹವೇ ಈ ಮಹಾರಾಣಿ!

ಶಿಖರಸೂರ್ಯ ಬಂದಾಗ ಮಹಾರಾಣಿ ನಾಯಿಮರಿಯೊಂದನ್ನು ಕಂಕುಳಲ್ಲಿಟ್ಟುಕೊಂಡು “ಕಳ್ಳ ನೀನು” ಎನ್ನುತ್ತ ಮುದ್ದುಮಾಡುತ್ತಿದ್ದಳು. ಅವಳ ಒಂದು ಬದಿಯಲ್ಲಿ ಅರ್ಥಕೌಶಲ ಎದ್ದು ಬಂದು ಬರಮಾಡಿಕೊಂಡು ಇನ್ನೊಂದು ಪೀಠದಲ್ಲಿ ಕೂರಿಸಿ ತಾನೂ ಪೀಠದಲ್ಲಿ ಕೂತ. ಮಹಾರಾಣಿ “ಕ್ಷಮವೇ ರಾಜವೈದ್ಯನೇ” ಅಂದಳು ನಾಯಿಮರಿಯನ್ನೇ ನೋಡುತ್ತ. ಮೂವರ ಮುಖ ನೋಡಿ ಆಗಲೇ ಒಂದು ಸುತ್ತು ಮಾತುಕತೆ ನಡೆದಿದೆ ಎಂದುಕೊಂಡ ಶಿಖರಸೂರ್ಯ, “ತಮ್ಮ ಕೃಪೆ ಮಹಾರಾಣಿ” ಎನ್ನುತ್ತ ಬಾಗಿ ನಮಸ್ಕಾರವನ್ನಾಚರಿಸಿದ. ಅರ್ಥಕೌಶಲ ನಗುತ್ತ ಹೇಳಿದ:

“ಇದು ಭಾರೀ ಬೆಲೆಯ ಕುದುರೆ ಮಹಾರಾಣಿ! ಒಮ್ಮೆ ಕೊಂಡರೆ ಸಾಲದು. ಸವಾರಿ ಮಾಡಿದಾಗೊಮ್ಮೆ ಕೊಳ್ಳಬೇಕು. ಕೊಂಡಾಗೊಮ್ಮೆ ದುಬಾರಿ ಬೆಲೆ ಕೊಡಬೇಕು!”

ಪ್ರಧಾನಿಯ ಹಾಸ್ಯಕ್ಕೆ ಮಹಾರಾಣಿಯೂ ನಗುತ್ತ ಹೇಳಿದಳು:

“ಖಾಯಂ ಆಗಿ ಒಮ್ಮೆಕೊಂಡು ಅರಮನೆಯಲ್ಲಿ ಕಟ್ಟಿಹಾಕೋಣ; ಬೆಲೆ ಎಷ್ಟಾದರೂ ಆಗಲಿ. ಆದೀತೆ ರಾಜವೈದ್ಯನೇ?”

“ಸನ್ನಿಧಿಯಲ್ಲಿ ಬೆಲೆ ಕೇಳಲುಂಟೆ? ತಾವಾಗಲೇ ನನ್ನ ಮೇಲೆ ಹಕ್ಕಿನ ಯಜಮಾನಿ ಯಾಗಿದ್ದೀರಿ, ಆಜ್ಞೆ ಆಗಲಿ ಮಹಾರಾಣಿ.” ಅಂದ.

“ಪ್ರಧಾನಿಗಳೇ….”

“ನೀನು ಸತ್ಪಾತ್ರ ಹೌದೋ ಅಲ್ಲವೋ. ನಿನ್ನ ಮೇಲೆ ಮಹಾರಾಣಿಯವರ ಅನುಗ್ರಹವಂತೂ ಯಥೇಚ್ಛವಾಗಿ ಆಗಿದೆ ರಾಜವೈದ್ಯನೇ, ಅದು ನಿನ್ನ ಸೌಭಾಗ್ಯ,”

ಅರ್ಥಕೌಶಲನ ಮಾತಿಗೆ ಶಿಖರಸೂರ್ಯ ಮಹಾರಾಣಿಯನ್ನು ಪ್ರಶ್ನಾರ್ಥಕವಾಗಿ ನೋಡಿದ. ಅವಳು ನಾಯಿ ಮರಿಯ ಬೆಚ್ಚನೆಯ ಕತ್ತಿನಲ್ಲಿ ಬೆರಳಾಡಿಸುತ್ತ ಅದರಲ್ಲಿ ತನ್ಮಯಳಾದಂತೆ ಅಭಿನಯಿಸುತ್ತಿದ್ದಳು. ಆಮೇಲೆ ಯಾರೂ ಮಾತಾಡಲಿಲ್ಲವಾಗಿ ಶಿಖರಸೂರ್ಯ “ಅರ್ಥವಾಗಲಿಲ್ಲ”ವೆಂಬಂತೆ ಎಲ್ಲರ ಮುಖ ನೋಡಿದ. ಯುವರಾಜ ತನ್ನ ತಾಯಿಯ ಕಡೆಗೆ ಮುಖ ಮಾಡಿ ಅವಳೇ ಹೇಳುವವಳೆಂಬಂತೆ ಸನ್ನೆ ಮಾಡಿದ. ಈಗ ಮೂವರು ಅವಳ ಕಡೆಗೇ ನೋಡುತ್ತಿರುವಾಗ ಮಹಾರಾಣಿ ನಾಯಿಮರಿಯ ನೋಡಿಕೊಂಡೇ ಹೇಳಿದಳು:

“ಅರ್ಥವಾಗದ್ದು ಇದರಲ್ಲಿ ಏನಿದೆ ರಾಜವೈದ್ಯನೇ? ನೀನು ನಮ್ಮ ಕುಟುಂಬದ ಸದಸ್ಯನಾಗಿರಬೇಕೆಂದು ನನ್ನ ಇಚ್ಛೆ. ಆದ್ದರಿಂದ ಗುರುಹಿರಿಯರ ಒಪ್ಪಿಗೆ ಪಡೆದುಕೊಂಡು ನಿನಗೂ ನಮ್ಮ ರಾಜಕುಮಾರಿ ಛಾಯಾದೇವಿಗೂ ಕಲ್ಯಾಣ ಮಾಡಬೇಕೆಂದು ದೊಡ್ಡ ಮನಸ್ಸು ಮಾಡಿದ್ದೇನೆ. ಈಗಲಾದರೂ ನಿನ್ನ ಮುಖದಲ್ಲಿ ಒಂದು ಮುಗುಳು ನಗೆ ಮೂಡೀತು ಅಂತ ಹಾರೈಸೋಣ. ಆದೀತೋ?”

ಶಿಖರಸೂರ್ಯನ ಮುಖದಲ್ಲಿ ಮುಗುಳುನಗೆ ಮೂಡಿತು. ಯಾಕೆಂದರೆ ಇದು ತಾನು ಊಹಿಸಿದಂತೇ ನಡೆದಿತ್ತು.

“ಇದು ನನ್ನ ಸೌಭಾಗ್ಯವೆಂದುಕೊಳ್ಳುತ್ತೇನೆ. ಮಹಾರಾಣಿ!”

ಎಂದು ಹೇಳುತ್ತ ಎರಡೂ ಕೈಜೋಡಿಸಿ ಮಹಾರಾಣಿಗೆ ಬಾಗಿದ. ಮಹಾರಾಣಿ ದಯಮಾಡಿ ಮುಖ ಸಡಿಲಿಸಿ ದೊಡ್ಡದಾಗಿ ತೃಪ್ತಿಯ ನಗೆ ನಕ್ಕಳು.

# ಇಪ್ಪತ್ತೂರು

ಒಳ್ಳೆಯ ವಾರ, ಒಳ್ಳೆಯ ಗಳಿಗೆ ಒಳ್ಳೆಯ ಮೂಹೂರ್ತದಲ್ಲಿ ಶಿಖರಸೂರ್ಯ ತನ್ನ ಭಾಗ್ಯದ ಸಿರಿ ಛಾಯಾದೇವಿಯನ್ನು ಮದುವೆಯಾದ. ಬಹಳ ದಿನಗಳಿಂದ ಸಮಾರಂಭಗಳನ್ನೇ ಕಾಣದಿದ್ದ ಅರಮನೆಯಲ್ಲಿ ಮದುವೆ ಮಂಗಳ ಕಾರ್ಯ ಜರುಗಿ ಕನಕಪುರಿಯ ಜನ ಸಡಗರಗೊಂಡರು. ಜಗತ್ತಿನ ಬೇಕಾದಷ್ಟು ಜನ ಮಹಾರಾಜರು ಇಲ್ಲವೆ ಅವರ ಪ್ರತಿನಿಧಿಗಳು, ಪ್ರಮುಖರು, ಮಾಂಡಳಿಕ ಮನ್ನೆಯರು, ಶೆಟ್ಟಿ ಸಾವ್ಕಾರ, ನಾಲ್ಕೂರ ಗುರಿಕಾರರು, ಹಿರಿಯರು, ದೊಡ್ಡವರು, ಭಾಗವಹಿಸಿ ಮದುವೆಗೆ ಶೋಭೆ ತಂದರು. ಬಿಳಿಗಿರಿಯ ಶಿವದೇವರಾಯ ಅನಾರೋಗ್ಯವೆಂದು ಬರಲಿಲ್ಲ. ಅವನ ಪ್ರತಿನಿಧಿಯಾಗಿ ಮಂತ್ರಿ ಬಂದಿದ್ದ. ಇದರಿಂದ ಅರ್ಥಕೌಶಲ ಮತ್ತು ಮಹಾರಾಣಿಗೆ ಆತಂಕವಾದರೂ ತೋರಿಸಿಕೊಳ್ಳಲಿಲ್ಲ. ಚಿಕ್ಕಮ್ಮಣ್ಣಿ ಮಾತ್ರ ಅಣ್ಣ ಬಾರದ್ದಕ್ಕೆ ಆತಂಕಗೊಳ್ಳಲೇ ಇಲ್ಲ, ಮಾತ್ರವಲ್ಲ ಉತ್ಸಾಹದಿಂದ ಮಂಗಳ ಕಾರ್ಯದಲ್ಲಿ ಭಾಗಿಯಾದಳು. ಒಳ್ಳೆಯ ಮೂಹೂರ್ತದಲ್ಲಿ ಮದುಮಗಳಿಗೆ ಗಿಣಿ ನೂರು ಬರೆದ ಅರವತ್ತು ಮೊಳದ ಪಟ್ಟೆಸೀರೆ ಉಡಿಸಿ ಕೈಗೆ ಗೆಜ್ಜೆ ಕತ್ತಿಕೊಟ್ಟು ಶೃಂಗರಿಸಿ, ಆರತಿ ಮಾಡಿ ದಂಡಿಗೆಯಲ್ಲಿ ಕೂರಿಸಿ ಧಾರೆಯ ಮಂಟಪಕ್ಕೆ ಕರೆದೊಯ್ಯುವುದರಿಂದ ಹಿಡಿದು, ದಂಡಿಗೆಯಿಂದ ಕೆಳಗಿಳಿಸಿ ಒಳ್ಳೆಯ ಗಳಿಗೆ ಮುಹೂರ್ತದಲ್ಲಿ ಚಪ್ಪರ ಹೊಗಿಸುವತನಕ ದಣಿವರಿಯದೆ ಕಾರ್ಯವೆಸಗಿದಳು. ಯುವರಾಜ ಕೂಡ ಬಂದ ಅತಿಥಿಗಳಿಗೆ ಆಸರೆಗೆ ಬೆಲ್ಲನೀರು ಕೊಡುವುದರಿಂದ ಹಿಡಿದು ಊಟ ವಸತಿಯವರೆಗಿನ ಕಾರ್ಯಗಳನ್ನ ಉತ್ಸಾಹದಿಂದ ನೋಡಿಕೊಂಡ. ಆಮೇಲೆ ವಧೂವರ ಧಾರೆಯ ಮಂಟಪದಲ್ಲಿ ಕುಳ್ಳಿರಿಸಿ ಕೂಡಿದ ಜನ ಕೈ ಮುಟ್ಟಿ ಸೇಸೆ ಹಾಕಿ ಹೆಣ್ಣೊಪ್ಪಿಸಿ ಕೊಟ್ಟರು.

ಮದುವೆಯ ಶಾಸ್ತ್ರಗಳೆಲ್ಲಾ ಮುಗಿದ ಮೇಲೆ ಮಗಳನ್ನು ಪ್ರಸ್ತಕ್ಕೆ ಕಳಿಸುವ ಮುನ್ನ ಚಿಕ್ಕಮ್ಮಣ್ಣಿ ತೃಪ್ತಿ ಮತ್ತು ಕೃತಜ್ಞತೆಯಿಂದ ಶಿಖರಸೂರ್ಯನ ಕೈ ಹಿಡಿದು “ಆಯ್ತು ಅಳಿಯಂದಿರೇ, ನಾನು ನಿಮಗೆ ಹೇಳಲಿಕ್ಕೇನಿದೆ? ಎಲ್ಲವನ್ನು ನೀವೇ ಬಲ್ಲಿರಿ. ಮಗಳು ಬಿಚ್ಚಿದ ಕೂದಲು ಕಟ್ಟಿಕೊಳ್ಳಲೂ ತಿಳಿಯದ ಹಸುಳೆ, ನೀವೇ ಸುಧಾರಿಸಿಕೊಳ್ಳಿ” ಎಂದು ಹೇಳಿ ಕೈಮುಗಿದು ಹೊರಡಲಿದ್ದಳು. ಅಷ್ಟರಲ್ಲಿ ಶಿಖರಸೂರ್ಯ

“ಇನ್ನುಮೇಲೆ ಈ ಮನೆಯೂ ನಿಮ್ಮದೇ. ನೀವೂ ಇಲ್ಲಿಯೇ ಇರಬಹುದಲ್ಲ, ತಾಯೀ.” ಅಂದ.

“ಉಂಟೆ ಅಳೀಮಯ್ಯನವರೆ, ಮಹಾರಾಜರನ್ನ ನೋಡಿಕೊಳ್ಳೋದಕ್ಕೆ ನಾನಿರಬೇಡವೆ?” ಎಂದು ಹೇಳಿ ವಿಶ್ವಾಸದಿಂದ ನಡೆದಳು.

ಮೊದಲರಾತ್ರಿ ಶಿಖರಸೂರ್ಯನಿಗೆ ಬೆಳ್ಳಿಯ ನೆನಪಾಯಿತು. ಛಾಯಾದೇವಿ ನಿದ್ರಿಸುತ್ತಿದ್ದಳು. ಆತ್ಮತೃಪ್ತಿಯ ಹರುಷದಿಂದ, ಯೌವನದ ಸಂಪನ್ನತೆಯಿಂದ, ಸುಂದರವಾದ ಕನಸು ಕಾಣುತ್ತಿದ್ದಳಾದ್ದರಿಂದ ಅವಳ ಮುಖ ಮಂದಹಾಸದಿಂದ ಅರಳಿತ್ತು. ಪಕ್ಕದಲ್ಲಿ ಕೂತಿದ್ದ ಈತ ಮುಖ ಗಂಟಿಕ್ಕಿ ಬಳಲಿದವನಂತೆ ಕಾಣುತ್ತಿದ್ದ. ಶಿವಾಪುರದಿಂದ ಓಡಿ ಬರುವ ರಾತ್ರಿ ಕದ್ದು ಬೆಳ್ಳಿಯಲ್ಲಿಗೆ ಹೋದದ್ದು, ಅವಳ ಒದೆ ಮತ್ತು ಕುರುಮುನಿಯ ಏಟು ನೆನಪಾಗಿ ಇನ್ನೊಮ್ಮೆ ಅವಮಾನಿತನಾದಂತಾಗಿ ಮುಖ ಮತ್ತು ಹಸ್ತಗಳ ನರ ಬಿಗಿದವು. ಸೇಡಿನ ಭಾವಾವೇಶಕ್ಕೆ ಒಳಗಾದರೂ ತಾನು ಕನಕಪುರಿಯ ರಾಜಕುಮಾರಿಯನ್ನು ಮದುವೆಯಾದುದು ತಿಳಿದರೆ ಬೆಳ್ಳಿಯ ಭಾವನೆ ಏನಾಗಬಹುದೆಂದು, ಹ್ಯಾಗಾಗಬಹುದೆಂದು ಊಹಿಸಲು ನೋಡಿದ. ಸಾಧ್ಯವಾಗಲಿಲ್ಲ. ಬಲಿಷ್ಠ ಹೆಂಗಸದು. ಬಹುಶಃ ಆಕೆ ಇದಕ್ಕೂ ತನಗೂ ಏನು ಸಂಬಂಧ ಎಂದು ನಿರ್ವಿಕಾರಳಾಗಿ ಇರಬಹುದು. ಕೂಡಲೇ ತನ್ನ ಬಗ್ಗೆ ತಾನೇ ಭಾವುಕನಾಗುತ್ತಿರುವೆನೆನ್ನಿಸಿ ಅಸಹ್ಯಪಟ್ಟುಕೊಂಡ.

ರಾಜಕುಮಾರಿಯನ್ನು ಮದುವೆಯಾದುದು ದೊಡ್ಡ ಸಾಧನೆಯಲ್ಲವೆಂದು ಶಿಖರಸೂರ್ಯನಿಗೆ ತಿಳಿದಿತ್ತು. ಇದು ಚಿಕ್ಕಮ್ಮಣ್ಣಿಯ ಸಂಕಲ್ಪವಾದರೂ ಮಹಾರಾಣಿ ಮತ್ತು ಅರ್ಥಕೌಶಲರ ಷಡ್ಯಂತ್ರದ ಒಂದು ತುಂಡು ಕೂಡ ಇದರಲ್ಲಿದೆ ಎಂದು ತಿಳಿದಿತ್ತು. ತನ್ನ ವಿಚಾರದಲ್ಲಿ ಗುಪ್ತಶೋಧ ನಡೆಯುತ್ತಿದೆಯೆಂದು ಗೊತ್ತಿದ್ದವನಿಗೆ ಇದರಿಂದ ಅನುಕೂಲವಾದುದು ನಿಜ. ಆದರೆ ಇದೂ ನಿಜ-

ಚಿಕ್ಕಮ್ಮಣ್ಣಿಯ ಮಗ ತರುಣಚಂದ್ರ ಇದ್ದಕ್ಕಿದ್ದಂತೆ ಕಾಣೆಯಾದುದಕ್ಕೆ ಈ ದುಷ್ಟಕೂಟವೇ ಕಾರಣವೆಂಬ ಸಂಗತಿಯೂ ಆತನಿಗೆ ಖಚಿತವಾಗಿತ್ತು. ಆದ್ದರಿಂದಲೇ ತನ್ನ ಬೆನ್ನಿಗೂ ಎರಡು ಕಣ್ಣು ಮೂಡಿಸಿಕೊಂಡು ಸುತ್ತ ನಡೆಯುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ.

## ಇಪ್ಪತ್ತನಾಲ್ಕು

ಆಮೇಲಿನ ಎರಡು ವರ್ಷಗಳಲ್ಲಿ ಶಿಖರಸೂರ್ಯನಿಗೆ ಅವಳಿಜವಳಿ ಮಕ್ಕಳಾದುದೇ ಮುಖ್ಯ ಘಟನೆ. ಗಂಡು ಹೆಣ್ಣು ಎಳೇಕೂಸುಗಳ ಮುಖದರ್ಶನವಾದ ದಿನ ಮಾತ್ರ ಶಿಖರಸೂರ್ಯ ಆನಂದದಿಂದ ಪುಳಕಿತನಾಗಿದ್ದ. ಮಡದಿ ಛಾಯಾದೇವಿಯನ್ನು ತಬ್ಬಿಕೊಂಡು ಮೂಕವಿಸ್ಮಿತನಾಗಿ, ಮಕ್ಕಳ ಮುಖಗಳನ್ನು ಮತ್ತೆ ಮತ್ತೆ ನೋಡುತ್ತ ಭಾವುಕನಾಗಿದ್ದ. ಭೀತಿ ಮತ್ತು ಪ್ರೀತಿ ಎರಡೂ ಗೊತ್ತಿಲ್ಲದ ಪಶುವಿನಂತಿದ್ದವನು ಪ್ರಥಮ ಬಾರಿ ತನ್ನನ್ನು ಮೀರಿದ ಒಂದರಿಂದ ವಿಪರೀತವಾದದ್ದು, ತನ್ನ ಅಹಂಕಾರಕ್ಕೆ ತೃಪ್ತಿ ತುಳುಕುವಷ್ಟು ಕನಸು ಕಾಣುತ್ತ ಕಂಡು, ಬೆರಗಾಗಿ ಕೆನ್ನೆ ನೋಯುವಷ್ಟು ಮುಗುಳು ನಗುತ್ತ ಅಂಗೈ ಮೇಲಿನ ಗೊಂಬೆಯಂತೆ ಕೂತಿದ್ದಳು.

ಸದಾ ಒಂದಿಲ್ಲೊಂದು ಲಾಭಾದಾಯಕ ಯುದ್ಧದಲ್ಲೋ ಅದರ ತಯಾರಿಯಲ್ಲೋ ತೊಡಗುವ, ಸಂದರ್ಭಗಳು ಒದಗದಿದ್ದಲ್ಲಿ ಎರಡು ರಾಜ್ಯಗಳ ಮಧ್ಯೆ ಜಗಳ ತಂದಾದರೂ ಲಾಭ ಪಡೆವ, ಅದೂ ಸಾಲದೆಂದು ಮೂರು ವರ್ಷಕ್ಕೊಂದು ದೊಡ್ಡ ಯುದ್ಧವನ್ನೇ ಮಾಡುವ ಕನಕಪುರಿಗೆ ಶಿಖರಸೂರ್ಯನಿಗೆ ಮಕ್ಕಳಾದದ್ದು ಹೇಳಿಕೊಳ್ಳುವಂಥ ಘಟನೆ ಅಲ್ಲ ನಿಜ. ಆದರೆ ಮಹಾರಾಜ, ಪ್ರಧಾನಿ ಮತ್ತು ಮಹಾರಾಣಿಗಿದು ಮಹತ್ವದ ಘಟನೆಯಾಗಿತ್ತು. ಮಹಾರಾಣಿ ಪ್ರಧಾನಿಗಳಿಗಂತೂ ಭಯಂಕರ ಘಟನೆಯಾಗಿತ್ತು!

ಮಹಾರಾಜನ ಹಸಿವು ಮತ್ತು ದೇಹ ದಿನೇ ದಿನೇ ಹೆಚ್ಚುತ್ತಿದ್ದವಾದರೂ ಮಹಾರಾಣಿಗಿದು ಸಾಲದಾಗಿತ್ತು. ಭೇಟಿಯಾದಾಗೊಮ್ಮೆ "ಇವತ್ತು," (ಇವತ್ತು ಸಾಯುವನೆ?) ಎಂಬಂತೆ ಸನ್ನೆಯಲ್ಲಿ ಅರ್ಥಕೌಶಲನನ್ನು ಕೇಳುತ್ತಿದ್ದಳು. ಇವನೂ ಸನ್ನೆಯಲ್ಲೇ ಇಲ್ಲವೆನ್ನುತ್ತಿದ್ದ. ಗೌಪ್ಯತೆ ಕಾಯಬೇಕಾಗಿದ್ದರಿಂದ ಮತ್ತು ಪರಿಣಾಮ ಕಣ್ಣೆದುರಿನಲ್ಲಿಯೇ ಕಾಣುತ್ತಿದ್ದುದರಿಂದ ದಿನ ಎಣಿಸುತ್ತ ಕೂತಿದ್ದಳು ಮಹಾರಾಣಿ.

ಈ ಮಧ್ಯೆ ಶಿಖರಸೂರ್ಯ ವೈದ್ಯರಿಗೆಲ್ಲ ಸಸ್ಯಕಾಶಿಯಾದ ಹದ್ದಿನ ಕೊಳ್ಳಕ್ಕೆ ಹೋಗಿದ್ದ. ಅದು ಅಕ್ಷರಶಃ ಸಸ್ಯಗಳ ನಿಧಿ. ದಂತಕತೆಗಳ ವೈದ್ಯ ನಾಗಾರ್ಜುನ ರಸವಿದ್ಯೆ ಕಲಿತದ್ದು, ಪ್ರಯೋಗಿಸಿ ಯಶಸ್ವಿಯಾದದ್ದು, ಅದರ ಮುಂದಿನ-ಧಾನ್ಯದಿಂದ ಚಿನ್ನಮಾಡುವ ವಿದ್ಯೆಯನ್ನು ಕಲಿತದ್ದೂ ಇಲ್ಲಿಯೇ, ಇದೇ ಕೊಳ್ಳದಲ್ಲಿ ಎಂದು ಕೊಳ್ಳದ ಖ್ಯಾತಿ. ಬಿಳಿಗಿರಿ ರಾಜ್ಯಕ್ಕೆ ಸೇರಿದ ಆ ಕೊಳ್ಳದ ದಿನ್ನೆಯ ಮೇಲೆ ರಾಜನ ಸುಂದರವಾದ ಚಿಕ್ಕ ಅರಮನೆಯಿದೆ. ಎರಡು ದಿನ ಅಲ್ಲಿ ತಂಗಿ ನಾರು ಬೇರು ಸಂಗ್ರಹಿಸಿಕೊಂಡು ಬಂದಿದ್ದ. ಮನೆಗೆ ಬರುವ ಮುನ್ನ ಅರಮನೆಗೆ ಹೋಗಿ ಮಹಾರಾಜನ ಆರೋಗ್ಯ ಪರೀಕ್ಷಿಸಿ ಹೊರಗೆ ಬಂದರೆ ಎದುರಿಗೆ ಪ್ರಧಾನಿ ಸಿಕ್ಕ. ಯಥಾಪ್ರಕಾರ ಕಣ್ಣಲ್ಲೇ ಪ್ರಶ್ನೋತ್ತರವಾಗಿ ಮನೆಗೆ ಬಂದನಾದರೂ ಮನಸ್ಸಿಗೆ ಕಿರಿಕಿರಿಯನ್ನೆಸಿತು.

ಎಷ್ಟೇ ಚೆನ್ನಾಗಿ ಸಜ್ಜನಿಕೆಯ ಅಭಿನಯ ಮಾಡಿದರೂ ಪ್ರಧಾನಿಗೆ ತನ್ನಲ್ಲಿ ನಂಬಿಕೆಯಿರಲಿಲ್ಲವೆಂದು ಶಿಖರಸೂರ್ಯನಿಗೆ ತಿಳಿದಿತ್ತು. ವಿಷದ ವ್ಯವಹಾರದಲ್ಲಿ ಉಪಯೋಗಿಸಿಕೊಂಡ ವೈದ್ಯನನ್ನು ತಕ್ಷಣ ಮುಗಿಸಿಬಿಡುವುದು ಪ್ರಧಾನಿಯ ಪದ್ಧತಿ. ಆದರೆ ತಾನು ವಜ್ರದೇಹಿ, ಹೊರಗಟ್ಟಿದರೆ ಗೌಪ್ಯತೆ ಬಯಲಾಗುವ ಭಯ. ಬಿಸಿತುಪ್ಪ ನುಂಗಲಾರ-ಉಗಿಯಲಾರ! ಹಾಗೆಂದು ಅವ ಸುಮ್ಮನಿರಲಿಲ್ಲ. ತನ್ನ ಸುತ್ತ ಕಟ್ಟು ನಿಟ್ಟಾದ ಕಾವಲಿಟ್ಟಿದ್ದರೂ ಸುಕ್ರನ ನೇತೃತ್ವದಲ್ಲಿ ತಾನೊಂದು ಖಾಸಗಿ ಪಡೆಯನ್ನ ಸಾಕಿದ ವಿಷಯ ಪ್ರಧಾನಿಗೆ ತಿಳಿದಿರಲಿಲ್ಲ. ಮಹಾರಾಜನ ವಿಷಯದಲ್ಲಿ ತನ್ನ ವೈದ್ಯವೇನೋ ಗುರಿಯನ್ನ ಮುದ್ಧತಿನಂತೆ ಮುಟ್ಟಲಿತ್ತು. ಆದರೆ ಆಮೇಲೆ ಪ್ರಧಾನಿಯ ಗುರಿಯೇನೆಂಬುದು ತಿಳಿಯದಾಗಿತ್ತು. ಇದನ್ನೇ ಯೋಚಿಸುತ್ತ ಮನೆಗೆ ಬಂದ.

ಈ ದಿನ ಮಹಾರಾಜ ಚಿಕ್ಕಮ್ಮಣ್ಣಿಯೊಂದಿಗೆ ರಾಜವಯದ್ಯನ ಮನೆಗೆ ಬಂದು ಮೊಮ್ಮಕ್ಕಳನ್ನು ನೋಡಿ ಕೈತುಂಬ ಕಾಣಿಕೆ ನೀಡಿ ಹೋಗಿದ್ದ. ಛಾಯಾದೇವಿಗಂತೂ ಬಹಳ ಖುಶಿಯಾಗಿತ್ತು. ಮಹಾರಾಜ ತನ್ನ ಮೊಮ್ಮಗನನ್ನು ಎತ್ತಿಕೊಂಡು ಮುದ್ದಾಡಿದ್ದಲ್ಲದೆ ಮಗನ ಕೈಗೆ ವಿಜಯದ ಕಡಗವನ್ನು ಹಾಕಿ ಕಣ್ತುಂಬ ನೋಡಿ, ಆಮೇಲೆ ಕಡಗವನ್ನು ಕಳಚಿಕೊಂಡು ಹೋಗಿದ್ದ! ಇದನ್ನ ನೆನೆದಂತೆ ಛಾಯಾದೇವಿಯ ಕನಸುಗಳು ಕೆರಳಿದವು. ಆನಂದೋತ್ಕರ್ಷದಲ್ಲಿ ಕನ್ನಡಿಮುಂದೆ ಅತ್ತೂ ಬಿಟ್ಟಳು.

ಮಹಾರಾಜ ಇಂದು ತಮ್ಮ ಮಗನ ಬಗ್ಗೆ ಆಡಿದ ಮಾತನ್ನು ಹೇಳಿ ತನ್ನ ಕನಸುಗಳನ್ನು ಗಂಡನಿಗೆ ಹೇಳಬೇಕೆಂದುಕೊಂಡಳು. ಆಗ ಅವನ ಮುಖ ಹ್ಯಾಗಾಗಬಹುದು? ಕಲ್ಪಿಸಿಕೊಳ್ಳಲು ಪ್ರಯತ್ನಿಸಿದಳು. ಆಗಲಿಲ್ಲ. ಸದಾ ಬಿಗಿದ ಹುಬ್ಬಿನ, ಮಾತಾಡಬೇಡವೆಂದು ತಾಕೀತು ಮಾಡುವ ಚೂಪು ಮೂಗಿನ, ನಾನೆಲ್ಲಾ ಬಲ್ಲೆನೆಂಬ ಛಲದ ಕಣ್ಣಿನವನಿಗೆ ತನ್ನ ಕನಸುಗಳನ್ನು ಹ್ಯಾಗೆ ಹೇಳುವುದೆಂದು ಛಾಯಾದೇವಿ ನಿಟ್ಟುಸಿರುಬಿಟ್ಟಳು. ಆದರೆ ಇಂದಿನ ವಿಷಯ ತುರ್ತಿನದಾಗಿತ್ತು. ಮಹಾರಾಜ ತನ್ನ ಮಗನನ್ನು ಎತ್ತಿಕೊಂಡು ಮುದ್ದಾಡುವಾಗ ಏನೋ ಆಡಿದ್ದ! ಆ ಮಾತನ್ನು ಮತ್ತು ಅದರ ನೆಪದಲ್ಲಿ ಇನ್ನಷ್ಟು ಸಂಗತಿಗಳನ್ನು ಗಂಡನಿಗೆ ಹೇಳಬೇಕಿತ್ತು.

ಮಹಾರಾಜ ರಾಜಕುಮಾರ ಆದಿತ್ಯಪ್ರಭನನ್ನು ಯುವರಾಜನನ್ನಾಗಿ ಮಾಡಲು ಒಪ್ಪಿರಲಿಲ್ಲ. ಮಹಾರಾಣಿಯ ಪರವಾಗಿ ಯಾರಾದರೂ ಆ ವಿಷಯ ಎತ್ತಿದರೆ ಕೇಳಿಸದಂತೆ ಇರುತ್ತಿದ್ದ, ಇಲ್ಲವೆ ಮುಗುಳು ನಗುತ್ತಿದ್ದ. ಇದು ಮಹಾರಾಣಿ, ಪ್ರಧಾನಿ ಮತ್ತು ರಾಜಕುಮಾರ ಮೂವರನ್ನೂ ಕೆರಳಿಸುತ್ತಿತ್ತು. ಮಹಾರಾಣಿಯಂತೂ ಚಡಪಡಿಸಿ ತಾಳ್ಮೆಗೆಡುತ್ತಿದ್ದಳು. ಅದು ಅವಳ ಕಣ್ಣುಗಳಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ಈ ದಿನ ಮಹಾರಾಜ ಛಾಯಾದೇವಿಯ ಮಗನನ್ನು ಎತ್ತಿಕೊಂಡು ಮುದ್ದಾಡಿ ಆಸು ಪಾಸು ಬೇರೆ ಯಾರೂ ಇಲ್ಲದ್ದನ್ನು ನೋಡಿ "ಇವನೇ ನಮ್ಮ ಯುವರಾಜ" ಎಂದಿದ್ದ!

"ನಿಮ್ಮ ಮನಸ್ಸಿನಲ್ಲಿ ಹಾಗಿದ್ದರೆ ರಾಜಸಭೆಯಲ್ಲಿ ಹೇಳಬಹುದಲ್ಲ ಅಪ್ಪಾಜಿ" ಎಂದು ಮಗಳು ಪುಸಲಾಯಿಸಿ ನೋಡಿದ್ದಳು. ಮಹಾರಾಜ ಅರ್ಥಪೂರ್ಣವಾಗಿ ಮಗಳನ್ನು ನೋಡಿ ತೋರುಬೆರಳು ತುಟಿಗಿಟ್ಟುಕೊಂಡು,-

"ತರುಣಚಂದ್ರನಿಗಾದ ಗತಿಯೇ ಇವನಿಗೂ ಆದೀತು, ಸುಮ್ಮನಿರಮ್ಮ!" ಎಂದಿದ್ದ. ಕೇಳಿ ಇವಳೂ ಗಾಬರಿಯಾಗಿದ್ದಳು.

ಈಗೀಗ ಸಾಯುವ ಎಲ್ಲ ಲಕ್ಷಣಗಳೂ ಮುದಿರಾಜನಲ್ಲಿ ಕಾಣತೊಡಗಿದ್ದವು. ರಾಜಕುಮಾರ ಆದಿತ್ಯಪ್ರಭ ಇದ್ದಕಿದ್ದಂತೆ ಒಂದು ಕಡಿಮೆ ನಲವತ್ತರ ಪಡೆ ತಗೊಂಡು ರಾಜಕಾರಣಕ್ಕೆಂದು ರಾಜಧಾನಿಯಿಂದ ದೂರ ಹೋಗಿದ್ದ. ಅದೂ ಯಾಕಾಗಿ ಹೋದನೆಂಬ ಸಂಗತಿಯೂ ತಿಳಿದಿತ್ತು. "ಅವನು ಹಿಂದಿರುಗಿ ಬರುವುದರೊಳಗೆ ಮಹಾರಾಜ ತನ್ನ ಮಗನ ಹೆಸರನ್ನು ಯುವರಾಜನೆಂದು ಘೋಷಿಸಲಾದೀತೆ?" ಎಂಬ ಆಸೆಯೂ ಇತ್ತು. ಕಾಲ ಮಿಂಚಿದರೆ ಏನೇನೋ ಆಗಬಹುದೆಂಬ ಆಂತಕವೂ ಇತ್ತು. ಅಷ್ಟರಲ್ಲಿ ಶಿಖರಸೂರ್ಯ ಬಂದೇ ಬಿಟ್ಟ.

ಬಂದವನು ಪೀಠದಲ್ಲಿ ಮುಂಗೈಮೇಲೆ ಗದ್ದ ಊರಿ ಕೂತು ತನ್ನ ರಾಣಿಯ ಕಡೆಗೆ ಪರಿಚಯವಿಲ್ಲದವಂತೆ ನೋಡಿದ.

"ರಾಜಧಾನಿಗೆ ಬಂದು ಹೊತ್ತಾಯಿತೇ ಸ್ವಾಮಿ?"

-ಎಂದಳು ಛಾಯಾದೇವಿ ಅವನ ಪಕ್ಕದ ಪೀಠದಲ್ಲಿ ಕೂರುತ್ತ. ಶಿಖರಸೂರ್ಯ ಮಾತಾಡಲಿಲ್ಲ.

"ಬಾಯಾರಿಕೆಗೆ ಏನಾದರೂ ಕೊಡಲೇ ಸ್ವಾಮಿ?"

ಅಂದಳು. ಆಗ ಶಿಖರಸೂರ್ಯ ಅವಳ ಕಡೆಗೆ ನೋಡುತ್ತ "ಆಗಬಹುದು ದೇವಿ"

-ಎಂದು ಹೇಳಿದ್ದೇ ಛಾಯಾದೇವಿ ಉತ್ಸಾಹಗೊಂಡು ಸೇವಕಿಯನ್ನು ಕೂಗುತ್ತ ಒಳಗೋಡಿದಳು. ಸೇವಕಿಗೆ ಹೇಳುವುದು ಹೇಳಿ, ಅಷ್ಟೇ ವೇಗವಾಗಿ ಶಿಖರಸೂರ್ಯನಲ್ಲಿಗೆ ಬಂದು ತುಟಿತುಂಬ ಮಂದಹಾಸ ಬೀರುತ್ತ ಕೂತಳು. ಗಂಡನನ್ನು ಆಕೆ ಎಷ್ಟು ಪ್ರೀತಿಸುತ್ತಿದ್ದಳೋ ಅದಕ್ಕೂ ಹೆಚ್ಚು ಅವನಿಗೆ ಹೆದರುತ್ತಿದ್ದಳು. ಗಂಡನೊಂದಿಗೆ ಅಂತರಂಗ ಮಾತಾಡಲು ಅವಕಾಶ ಕೂಡಿಬಂತೆಂಬ ನಿರಾಳ ಭಾವ ಅವಳಲ್ಲಿ ಮೂಡಿದ್ದರೂ ವಿಚಾರಗಳ ಅನುಕ್ರಮಣಿಕ ಮಾಡಿಕೊಳ್ಳಲು ಹೆಣಗುತ್ತಿದ್ದಳು. ಅಲ್ಲದೆ ಹ್ಯಾಗೆ ಸುರುಮಾಡಬೇಕೆಂಬ ಸಮಸ್ಯೆಯೂ ಕಾಡಿತು. ಅಷ್ಟರಲ್ಲಿ ಸೇವಕಿ ಬಂದು ಬೆಳ್ಳಿಯ ಗಿಂಡಿಯಲ್ಲಿ ನೀರು, ಬಟ್ಟಲಲ್ಲಿ ಬೆಲ್ಲ ತಂದು ಒಡತಿಗೆ ಕೊಟ್ಟಳು. "ಯಾರನ್ನೂ ಒಳಗೆ ಬಿಡಬೇಡ" ಎಂದು ಸೇವಕಿಗೆ ತಾಕೀತು ಮಾಡಿ ಬಾಗಿಲಿಕ್ಕಿಕೊಂಡು ಮುಗುಳು ನಗುತ್ತ ನೀರು ಬೆಲ್ಲ ಗಂಡನಿಗೆ ಕೊಟ್ಟು, ಶಿಖರಸೂರ್ಯನ ಪೀಠದಲ್ಲೇ ಜಾಗ ಮಾಡಿಕೊಂಡು, ಅವನಿಗೆ ಹತ್ತಿರ ಕೂತು ಅವನ ಮುಖ ನೋಡಿದಳು. ಅವನ ಮುಖದಲ್ಲೇನಿದೆ? ತಿಳಿಯಲಿಲ್ಲ. ಅದೆಂದೂ ತಿಳಿಯುವುದೂ ಇಲ್ಲ! 'ದೇವರೇ ಇವನ ಮನಸ್ಸು ಪ್ರಸನ್ನವಾಗಲಿ. ನನ್ನ ಮಾತನ್ನು ಕೇಳಿಸಿಕೊಳ್ಳಲಿ' ಎಂದು ಪ್ರಾರ್ಥಿಸಿಕೊಂಡಳು. ಆತ ಬೆಲ್ಲ ತಿಂದು ನೀರು ಕುಡಿದ. ಹೇಳಿದಳು:

"ಮಹಾರಾಜರ ಆರೋಗ್ಯ ಪೂರ್ತಿ ಹದಗೆಟ್ಟಿದೆ. ಬೆಳಿಗ್ಗೆ ಮನೆಗೆ ಬಂದಿದ್ದರು. ನಮ್ಮ ರವಿಯನ್ನು ಎತ್ತಿ ಮುದ್ದಾಡಿ 'ಮಗಳೆ ಇದು ಕೊನೇ ಆಶೀರ್ವಾದ'.... ಅಂತ ಏನೇನೋ ಆಡಿಕೊಳ್ತಾ ಇದ್ದರು."

-ಎಂದು ಹೇಳಿ ಬಾಗಿಲ ಕಡೆಗೆ ನೋಡಿದಳು. ಮುಂದುವರೆದು,
"ಹಾಗಂತ ನಾವು ಸುಮ್ಮನಿರಲಿಕ್ಕಾದೀತ? ಇವತ್ತು………"
-ಎಂದು ಹೇಳಿ ಅವನ ಕಿವಿಯ ಬಳಿ ಬಾಯಿ ಒಯ್ದು.....
"ಮಹಾರಾಜರು ನಮ್ಮ ರವಿಯನ್ನು ಎತ್ತಿ ಮುದ್ದಾಡಿ 'ಇವನೇ ನಮ್ಮ ಯುವರಾಜ!' ಅಂದರು!"

'ನಿಮ್ಮ ಅಭಿಪ್ರಾಯ ಇದೇ ಆಗಿದ್ದರೆ ರಾಜಸಭೆಯಲ್ಲಿ ಹೇಳಿ ಅಪ್ಪಾಜಿ' ಅಂದೆ. 'ತರುಣಚಂದ್ರನಿಗಾದಂತೆ ಇವನಿಗೂ ಆದರೆ ಗತಿಯೇನಮ್ಮ?' ಅಂದರು. ಮುಂದೆ ಮಾತಾಡಲಿಲ್ಲ."

ಕೇಳಿ ಶಿಖರಸೂರ್ಯ ಮೈಮನಸ್ಸುಗಳಲ್ಲಿ ಬಿಸಿರಕ್ತ ಹರಿದಾಡಿ ಮೈಯಂತ ಮೈಯೆಲ್ಲ ಪಾದರಸದಂತೆ ಚಲನಶೀಲವಾಯಿತು. ತಕ್ಷಣ ತನ್ನಲ್ಲಾದ ಬದಲಾವಣೆಗಳನ್ನು ಮುಚ್ಚಿಕೊಂಡು ಯಥಾತಥಾ ಇದ್ದವನಂತೆ ಮುಖದ ಮೇಲೆ ನಿರ್ಲಿಪ್ತತೆಯನ್ನು ಹೇರಿಕೊಂಡ. ತನ್ನಿಚ್ಛೆಯ ನುಡಿದ ಮಡದಿಯ ಬಗ್ಗೆ ಮೆಚ್ಚುಗೆ ಮೂಡಿತಾದರೂ ಮುಂದಿನ ಹುನ್ನಾರಿಗಾಗಿ ತಯಾರಿ ಸಾಲದೆನ್ನಿಸಿತು. ಪೀಠದಿಂದ ಎದ್ದು ಆ ಈ ಕಡೆ ಹೆಜ್ಜೆ ಹಾಕುತ್ತ ಅಭಿನಯ ಸುರುಮಾಡಿದ:

"ನಿಮ್ಮನ್ನು ಮದುವೆಯಾಗುವ ಮುನ್ನ ನಾನು ಯಾರಾಗಿದ್ದೆ? ಒಬ್ಬ ಅಳಲೇಕಾಯಿ ವೈದ್ಯ! ನನ್ನೆಲ್ಲ ವಿದ್ಯೆ ಬಳಸಿ ವಿಷವುಂಡ ಮಹಾರಾಜರನ್ನು ಬದುಕಿಸಲಿಕ್ಕೆ ಪ್ರಯತ್ನಿಸಿದೆ. ಮಹಾರಾಜರು ಪಥ್ಯ ಮಾಡುತ್ತಿಲ್ಲ!"

-ಎಂದು ಹೇಳಿ ನಾಟಕೀಯವಾಗಿ ಸರ್ರನೇ ತಿರುಗಿ ಮಡದಿಯ ಮುಂದೆ ಬಂದು "ಇದರಲ್ಲಿ ನನ್ನ ಅಪರಾಧವೇನಿದೆ ದೇವಿ?"

ಅಂದ. ಮಹಾರಾಜನಿಗೆ ತಾನು ಕೊಟ್ಟ ಬೇಮದ್ದಿನ ಸುಳಿವೇನಾದರೂ ಸಿಕ್ಕಿದೆಯೋ? ಅಂತ ತಿಳಿಯಲು ಮಳಮಳ ಅವಳ ಮುಖವನ್ನೇ ನೋಡಿದ.

ಇದ್ಯಾವುದರ ಪರಿವೆಯಿಲ್ಲದ ಛಾಯಾದೇವಿಯ ಅಂತಃಕರಣವಾಗಲೇ ಕರಗಿ ಕಣ್ಣೀರಾಗಿ ಹರಿಯಲು ತಯಾರಾಗಿತ್ತು.

“ನನಗಿದೆಲ್ಲಾ ಗೊತ್ತು ಸ್ವಾಮಿ, ಇದರಲ್ಲಿ ನಿಮ್ಮ ತಪ್ಪೇನಿದೆ? ಪಥ್ಯ ಮಾಡದೆ ವೈದ್ಯ ನಾಟುವುದುಂಟೆ? ಮಹಾರಾಜರಿಗೂ ಇದು ಗೊತ್ತಿದೆ.”

“ನನ್ನಿಂದ ನಿಮಗೆ ಯಾವ ಸುಖವೂ ಸಿಗಲಿಲ್ಲ ದೇವೀ. ಮಹಾರಾಣಿಯಾಗಿ ಮೆರೆಯಬೇಕಿದ್ದವಳು ಪ್ರಧಾನಿಯ ಕುತಂತ್ರಕ್ಕೆ ಬಲಿಯಾಗಿ ಒಬ್ಬ ಗುರುತಿಲ್ಲದ ವೈದ್ಯನ ಮಡದಿಯಾಗಿ ಬದುಕುತ್ತಿರುವುದು ನನಗೆ ಸಂತೋಷವೆಂದು ಭಾವಿಸಿದಿರಾ?”

“ಹಾಗೆಲ್ಲ ಹೇಳಿದರೆ ನನಗೆ ದುಃಖವಾಗುತ್ತದೆ. ಈಗ ನನಗೇನು ಕಡೆಮೆಯಾಗಿದೆ? ನಾನು ಬಯಸಿದ ಸುಖವೆಲ್ಲ ಸಿಕ್ಕಿದೆಯೆಲ್ಲ!”

-ಎಂದು ಬಿಕ್ಕಿದಳು. ಶಿಖರಸೂರ್ಯ ಹಿಂದುರುಗಿ ಬಂದು ಕಣ್ಣೀರು ಸುರಿಸುತ್ತಿದ್ದ ಛಾಯಾದೇವಿಗೆ ಹತ್ತಿರ ಕೂತು, ಬೆನ್ನಮೇಲಿನ ಸೀರೆಯ ಮೇಲೆ ಕೈಯೂರಿ ಹೇಳಿದ:

“ನನ್ನಿಂದ ನಿಮಗೆ ಸುಖ ಸಿಕ್ಕಿದೆಯೆಂದರೆ ಅದು ನಿಮ್ಮ ಔದಾರ್ಯ”

“ನೋಡಿ ನೀವಿಂಥ ಮಾತು ಹೇಳಿದರೆ ನನಗೆ ಅಳು ಬರುತ್ತದೆ. ನನ್ನಾಣೆ.”

-ಎಂದು ಅಳತೊಡಗಿದಳು. ಅವಳ ಮುಗ್ಧತೆಗೆ ಅನುಕಂಪ ಮಾಡಿ, ಹೆಗಲ ಬಟ್ಟೆಯಿಂದ ಅವಳ ಕಣ್ಣೀರೊರೆಸಿ, ಕೇಳಿದ:

“ನಮ್ಮ ಚಿರಂಜೀವಿ ಮಗನ ಬಗೆಗಿನ ನಿಮ್ಮ ಕರುಳು ನನಗೆ ಅರ್ಥವಾಗುತ್ತದೆ ದೇವಿ, ಆದರೆ ನಾವು ಏನನ್ನಾದರೂ ಮಾಡುವುದು ಸಾಧ್ಯವೇ?”

“ಗಂಡಸರ ಮನಸ್ಸುಗಳು ಎಷ್ಟು ಜಟಿಲ, ಎಷ್ಟು ಆಳ ಅಂತ ನಮಗೇನು ಗೊತ್ತು? ಅವರನ್ನು ನಾವು ಹೆಂಗಸರು ಎದುರಿಸಲಾದೀತೆ? ಹೀಗೆ ಮಾಡು ಅಂತ ನೀವು ಹೇಳಿದರೆ ನಾನು ಹಾಗೆ ಮಾಡಬಲ್ಲೆ.”

ನಿರೀಕ್ಷಿತ ಉತ್ತರ ಇಷ್ಟು ಬೇಗ ಸಿಕ್ಕೀತೆಂಬ ಭರವಸೆಯಿರಲಿಲ್ಲ. ಮಾತುಗಳನ್ನ ಇನ್ನಷ್ಟು ಚೂಪಾಗಿಸಿ-

“ರಾಜ್ಯದ ಸ್ಥಿತಿಗತಿ ನಿಮಗೆ ಗೊತ್ತೇ ದೇವಿ? ಭಂಟರಿಗೆ ಸಂಬಳವಿಲ್ಲ. ಮಹಾರಾಜರ ಆರೋಗ್ಯದ ವಿಚಾರ ಗೊತ್ತಾಗಿ ಮಾಂಡಳಿಕರು ಸ್ವತಂತ್ರರಾಗಿದ್ದಾರೆ. ಕೆಲವರು ಒಟ್ಟಾಗಿ ನಮ್ಮ ಮೇಲೆ ಏರಿ ಬಂದರೂ ಆಶ್ಚರ್ಯವಿಲ್ಲ. ವಣಿಜರು ತೆರಿಗೆ ಕೊಡುತ್ತಿಲ್ಲ. ರಾಜಕುಮಾರ ತಮ್ಮ ವಿಲಾಸಕ್ಕಾಗಿ ವರ್ತಕರಿಂದ ಹತ್ತು ವರ್ಷಗಳ ತೆರಿಗೆಯನ್ನು ಮುಂಗಡವಾಗಿ ವಸೂಲಿ ಮಾಡಿದ್ದಾರೆ! ಈಗ ರಾಜ್ಯ ನಡೆಸೋದೇ ಕಷ್ಟವಾಗಿದೆ. ಗೊತ್ತೆ ದೇವಿ?”

-ಎಂದು ಹೇಳಿ ಅವಳ ಮುಖ ನೋಡಿದ.

“ನೀವು ಅಂದುಕೊಂಡಷ್ಟು ಅಲ್ಲವಾದರೂ ರಾಜ್ಯದ ವಿದ್ಯಮಾನಗಳು ನನಗೂ ಅಷ್ಟಿಷ್ಟು ಗೊತ್ತು ಸ್ವಾಮಿ. ಮಹಾರಾಜನಂತೆ ನಾವೂ ಅಸಹಾಯಕರು. ರಾಜ್ಯದ ಹಣಕಾಸಿನ ಕಡಾಯಿ ಚಿನ್ನದ ಹಣವನ್ನು ತನ್ನ ಅಂತಃಪುರದಲ್ಲಿ ಇಟ್ಟುಕೊಂಡಿದ್ದಾಳೆ!”

ಆಶ್ಚರ್ಯ ಮತ್ತು ಮೆಚ್ಚುಗೆಗಳನ್ನು ಅಭಿನಯಿಸುತ್ತ, ಅನುಭವಿಸುತ್ತ, ಮಂದಹಾಸದಿಂದ ಮಡದಿಯನ್ನೇ ನೋಡುತ್ತ ಕೂತ. ಇವನನ್ನ ಮೆಚ್ಚಿಸಿದಕ್ಕೆ ಛಾಯಾದೇವಿಯ ಸಂತೋಷ ಕುದಿವ ಹಾಲಿನಂತೆ ಉಕ್ಕಿ ಹರಿಯಿತು. ಅವಳ ನಿರೀಕ್ಷೆಗೂ ಮೀರಿ ಪತಿರಾಯ

ಖುಷಿಯಾಗಿದ್ದ. ಅವಳಿಗರಿವಿಲ್ಲದೆಯೇ ರಾಜಕೀಯದ ರಂಗ ಪ್ರವೇಶ ಮಾಡಿದ್ದಳು. ಆ ಪ್ರವೇಶದ ಸಂಭ್ರಮವನ್ನು ಆನಂದಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಹೇಳಿದ:

“ದೇವಿ ನಿಮ್ಮನ್ನು ಸಂತೋಷ ಪಡಿಸುವ ಅವಕಾಶಕ್ಕಾಗಿ ಅನೇಕ ದಿನಗಳಿಂದ ಕಾದಿದ್ದೆ. ಅದೀಗ ಸಿಕ್ಕಿದೆಯೆಂದು ನನ್ನ ನಂಬಿಕೆ. ಅದು ಕೈಗೂಡಬೇಕಾದರೂ ನಿಮ್ಮ ಸಹಾಯಹಸ್ತ ಬೇಕೇ ಬೇಕು.”

“ಅದೇನು ಹೇಳಿ ಸ್ವಾಮಿ.”

“ನಿಮ್ಮ ಅಣ್ಣ ಆದಿತ್ಯಪ್ರಭ ಮಹತ್ವಾಕಾಂಕ್ಷಿ. ಯುವರಾಜನಾಗುವ ಹಕ್ಕಿನವನು….”

ತಕ್ಷಣ ಶಿಖರಸೂರ್ಯನ ಮಾತನ್ನು ಕತ್ತರಿಸಿ ಗುಡುಗಿದಳು:

“ಅದೇ ನೀವು ಮಾಡುತ್ತಿರುವ ತಪ್ಪು. ಯುವರಾಜನಾಗೋದಕ್ಕೆ ಅವನಿಗೇನು ಹಕ್ಕಿದೆ ಸ್ವಾಮಿ?”

“ಅಂದರೆ?”

“ಆದಿತ್ಯಪ್ರಭ ಪ್ರಧಾನಿಗೆ ಹುಟ್ಟಿದವನು. ಇದು ಮಹಾರಾಜರಿಗೂ ಗೊತ್ತಿದೆ. ಅದಕ್ಕೇ ಅವರು ಅವನನ್ನು ಯುವರಾಜನನ್ನಾಗಿ ಮಾಡುತ್ತಿಲ್ಲ ಯುವರಾಜನಾಗೋದು ನನ್ನ ಮಗ ರವಿಕೀರ್ತಿಯ ಹಕ್ಕು.”

-ಎಂದು ಹೇಳಿ “ಇದೇ ನ್ಯಾಯವಾದ ತೀರ್ಮಾನ” ಎನ್ನುವಂತೆ ಮುಷ್ಟಿ ಬಿಗಿದು ಶಿಖರಸೂರ್ಯನ ತೊಡೆ ಗುದ್ದಿದಳು. ಶಿಖರಸೂರ್ಯ ಬೆಕ್ಕಸಬೆರಗಾದ. ಮತ್ತೆ ಛಾಯಾದೇವಿ ಮುಂದುವರೆಸಿದಳು.:

“ಅವನೀಗ ನನ್ನ ಸೋದರಮಾವನ ಚಿನ್ನ ದೋಚುವುದಕ್ಕೆ ಹೋಗಿದ್ದಾನೆ.”

“ಸೋದರಮಾವನ ಚಿನ್ನ ಅಂದರೆ?”

“ಬಿಳಿಗಿರಿ ಮಹಾರಾಜ, ನನ್ನ ಸೋದರಮಾವ, ತಮ್ಮನ ಜೊತೆ ಯುದ್ಧಮಾಡಿ ಸೋತು ಇಲ್ಲಿಗೆ ಬರುವಾಗ ಅರ್ಧ ಚಿನ್ನ ಬಚ್ಚಿಟ್ಟು ಇನ್ನರ್ಧ ಇಲ್ಲಿಗೆ ತಂದಿದ್ದ. ತಂದದ್ದನ್ನ ಮಹಾರಾಣಿ, ಪ್ರಧಾನಿ ದೋಚಿಕೊಂಡರು. ಹ್ಯಾಗೂ ಸತ್ತುಹೋದರಲ್ಲಾ, ಸಿಕ್ಕರೆ ಬಚ್ಚಿಟ್ಟಿದ್ದನ್ನೂ ತಗಂಬೋಣ ಅಂದುಕೊಂಡು ಇಷ್ಟು ದಿನ ಹುಡುಕಿಸಿದರು. ಅದು ಇರುವ ಸ್ಥಳ ಗೊತ್ತಾಗಿ ನನ್ನಣ್ಣ ಹೋಗಿದ್ದಾನೆ. ಆತ ಬರೋದರೊಳಗೆ ನೀವು ತಂದೆಯ ಜೊತೆಗೆ ಒಂದು ಮಾತು ಆಡಬಹುದಲ್ಲಾ- ಅಂತಾ ನನ್ನಾಸೆ.”

ಶಿಖರಸೂರ್ಯ ಯೋಚನಾಮಗ್ನನಾದ. ಎಳೆ ಮನದ ಸರಳೆ ಅಂದುಕೊಂಡ ತನ್ನ ಮಡದಿಯ ಮನ್ಸು ಎಷ್ಟು ಜಟಿಲ ಅನ್ನಿಸಿ ಆಶ್ಚರ್ಯವಾದರೆ ತನ್ನ ಹುಳುಕುಗಳ ಅರಿವೂ ಇವಳಿಗಿರಬಹುದೇ? ಎಂದು ಚಿಂತಿಸಿದ. ಆಕೆ ಹೇಳಿದ್ದರಲ್ಲಿ ತನಗೆ ಈವರೆಗೆ ತಿಳಿಯದಿದ್ದ ಬೇಕಾದಷ್ಟು ಸಂಗತಿಗಳಿದ್ದವು. ತನ್ನ ಗುಪ್ತಚಾರರಿಗೂ ತಿಳಿಯದ ಸಂಗತಿಗಳು ತನ್ನ ಸೌಭಾಗ್ಯವತಿಗೆ ತಿಳಿದಿರಬೇಕಾದರೆ ಇವಳ ಬಳಿಯೂ ಗುಪ್ತಚಾರರಿದ್ದಾರೆಂದಾಯಿತು. ಸೌಂದರ್ಯದಲ್ಲಿ ಅಲ್ಲವಾದರೂ ಮಹತ್ವಾಕಾಂಕ್ಷೆಯಲ್ಲಿ ಇವಳೂ ಮಹಾರಾಣಿಯ ಸ್ಪರ್ಧಿಯಾಗಬಲ್ಲವಳೆನ್ನಿಸಿತು. ಪ್ರಧಾನಿ, ಮಹಾರಾಜ, ಮಹಾರಾಣಿ, ವರ್ತಕ ಸಂಘ, ವರ್ತಕರು, ಆದಿತ್ಯಪ್ರಭ, ತಾನು, ತನ್ನ ಮಡದಿ ಇಷ್ಟೊಂದು ಜನರಿಗೆ ಸ್ವತಂತ್ರವಾದ ಗುಪ್ತಚಾರ ದಳಗಳಿದ್ದಾವೆಂದರೆ ಕನಕಪುರಿಯ ರಾಜಕಾರಣ ಎಷ್ಟು ಜಟಿಲ! - ಎಂದು ತಬ್ಬಿಬ್ಬಾದ. ತಡಮಾಡಬಾರದೆಂದು ಎದ್ದು ಮಾತಿಗೊಂದು ಮುಕ್ತಾಯ ಕೊಡಲು,

“ನಮ್ಮ ಮಗ ರವಿಕೀರ್ತಿ ನಿಮ್ಮ ಆಯ್ಕೆ ಅಲ್ಲವೆ ದೇವಿ?” ಅಂದ.

“ನಮ್ಮ ಆಯ್ಕೆಯಲ್ಲ ಸ್ವಾಮೀ, ಮಹಾರಾಜರ ಆಯ್ಕೆ ಎಂದು ಹೇಳಿರಿ.”

ಎಂದು ಪತಿಯನ್ನು ತಿದ್ದಿ ಕಳಿಸಿದಳು.

ಶಿಖರಸೂರ್ಯ ವೈದ್ಯಶಾಲೆಗೆ ಬಂದವನೇ ಸುಕ್ರನಿಗೆ ಸೂಕ್ತ ಸಂದೇಶ ಕಳಿಸಿದ.

## ಇಪ್ಪತ್ತೈದು

ಆದಾಗಿ ಒಂದು ದಿನ ಕಳೆದು, ಎರಡು ದಿನ ಹೋಗಿ, ಮೂರನೇ ಹಗಲು ಮಾಗಿ ರಾತ್ರಿಯಾಗಿ ಶಿಖರಸೂರ್ಯ ಗಾಢನಿದ್ದೆಯಲ್ಲಿದ್ದಾಗ ಕನಸಿನಲ್ಲಿ ಯಾರೋ 'ಒಡೆಯಾ' ಅಂದಂತೆ ಕೇಳಿಸಿ ಎಚ್ಚರಾದ. ಎಚ್ಚರಾದ ಮೇಲೂ “ಒಡೆಯಾ” ಎಂದ ಸಣ್ಣ ದನಿ ಕೇಳಿಸಿ ತಕ್ಷಣ ಎದ್ದು ಕೂತ. ಬೆಟ್ಟನ ದನಿಯಂತಿತ್ತು. ಸುಕ್ರನ ಭೇಟಿಗೆ ಹೋಗಿದ್ದವ ಈಗ ಬಂದನೆಂದು ಕಾಣುತ್ತದೆ ಎಂದು ಹೋಗಿ ಮೆಲ್ಲನೆ ಬಾಗಿಲು ತೆರೆದು ನೋಡಿದ. ಬೆಟ್ಟನ ಜೊತೆಗೆ ಸುಕ್ರನೂ ನಿಂತಿದ್ದ! ಇಬ್ಬರೂ ಬಾಗಿ ಯಥೋಚಿತ ನಮಸ್ಕಾರ ಗೌರವ ಸೂಚಿಸಿದ ಮೇಲೆ ಸುಕ್ರ ಸಮೀಪ ಬಂದು “ಮಾತಾಡಬೇಕು ಒಡೆಯಾ” ಅಂದ. ಸೇವಕರು ಎಲ್ಲೆಂದರಲ್ಲಿ ಮಲಗಿದ್ದರಿಂದ ಮೂವರೂ ಮಾತಾಡದೆ ದೂರದ ಗೋವಿನ ಕೊಟ್ಟಿಗೆಯ ಬಳಿಗೆ ಹೋದರು. ಸ್ಥಳ ಸುರಕ್ಷಿತವೆಂದು ಖಾತ್ರಿಯಾದ ಮೇಲೆ “ಹೇಳು ಸುಕ್ರ” ಅಂದ.

ಬಿಳಿಗಿರಿಯ ಅಳಿದ ಮಹಾರಾಜ ಬಚ್ಚಿಟ್ಟ ಚಿನ್ನ ನಮಗೆ ಸಿಕ್ಕಿದೆ ಒಡೆಯಾ!" ಎಂದು ಹೇಳುತ್ತಿರುವಂತೆ ಶಿಖರಸೂರ್ಯ ಸುಕ್ರನ ಎರಡೂ ಕೈಹಿಡಿದು ಅಭಿಮಾನ ಮತ್ತು ಉಕ್ಕಿದ ಸಂತೋಷದಿಂದ ಆಮುಕಿದ. ಸುಕ್ರ ಮುಂದುವರೆಸಿ,

“ಚಿಕ್ಕಮ್ಮಣ್ಣಿಯ ಬಳಿಗೆ ಹೋಗಿ….”

ಎಂದು ಹೇಳುತ್ತಿರುವಂತೆ ಶಿಖರಸೂರ್ಯ ಮಧ್ಯದಲ್ಲೇ ಬಾಯಿ ಹಾಕಿ

“ಮೂರ್ಖಾ ಅವಳ ಬಳಿಗ್ಯಾಕೆ ಹೋದಿರಿ?” ಅಂದ.

“ಇನ್ನೂ ಹೋಗಿಲ್ಲ ಹೋಗಬೇಕು.”

“ಯಾಕೆ?”

“ಒಡೆಯನೇ ಇದು ಅವಳ ಅಣ್ಣನ ನಿಧಿ. ಇಲ್ಲಿಗೆ ಬರುವಾಗ ಅರ್ಧ ತಂದು ಅರ್ಧ ಅಡಗಿಸಿಟ್ಟ ನಿಧಿ. ಅಂದಮೇಲೆ ಅವಳಿಗೇ ಸೇರಬೇಕಲ್ಲವೆ? ಅದು ಎಲ್ಲಿರಬೇಕೆಂದು ಹೇಳಬೇಕಾದವಳೂ ಅವಳೇ ಅಲ್ಲವೆ?”

ತಕ್ಷಣ ಶಿಖರಸೂರ್ಯ ಕೋಪ ಅಸಮಾಧಾನಗಳನ್ನು ನಿಯಂತ್ರಿಸಿಕೊಂಡು ತಾನಿರುವ ಸಂದರ್ಭವನ್ನು ಜ್ಞಾಪಿಸಿಕೊಂಡು

“ಮುಂದೆ?” ಅಂದ.

“ಆಕೆಗೆ ವಿಷಯ ತಿಳಿಸಿ ಎಲ್ಲಿಡಬೇಕೆಂದು ಕೇಳುವುದಾಗಲಿಲ್ಲ. ಅದನ್ನ ನೀನೇ ಮಾಡಬೇಕು. ಇದು ಯಾರಿಗೂ ಗೊತ್ತಾಗಬಾರದು.”

“ಈಗ ಚಿನ್ನ ಎಲ್ಲಿದೆ?”

“ಹೊರಗೆ ಗಾಡಿ ನಿಂತಿದೆ. ನಾಲ್ಕು ಹಂಡೆ ತುಂಬಿವೆ.”

“ಇಡೋಣ ಬನ್ನಿ”

ಎಂದು ಹೇಳುತ್ತ ಮೂವರೂ ಮನೆಗೆ ಬಂದು ಹಿತ್ತಲ ಬಾಗಿಲ ಕಡೆಯಿಂದ ಚಿನ್ನ ತುಂಬಿದ ಹಂಡೆಗಳನ್ನು ತಂದು ಧಾನ್ಯಸಂಗ್ರಹದ ಕೋಣೆಯಲ್ಲಿರಿಸಿದರು. ಆಮೇಲೆ ಸೇವಕಿಯರನ್ನೆಬ್ಬಿಸಿ ಜೊತೆಗಿದ್ದ ಒಂದು ಕಡಿಮೆ ನಲವತ್ತು ಭಂಟರಿಗೆ ಅಡಿಗೆ ಮಾಡಲಿಕ್ಕೆ ಹೇಳಿ ಸುಕ್ರನನ್ನು ಏಕಾಂತಕ್ಕೆ ಕರೆದೊಯ್ದು ವಿವರಗಳನ್ನು ಕೇಳಿದ. ಆಗಲೇ ಬಿಳಿಗಿರಿಯ ಈಗಿನ ರಾಯ ಯುವರಾಜನನ್ನು ಸೆರೆಹಿಡಿದ ವಿಚಾರ ಗೊತ್ತಾಯಿತು.

“ಹ್ಯಾಗೆ?” ಅಂದ ಕುತೂಹಲ ತಾಳದೆ.

“ನಾವೇನೋ ನೀನು ಹೇಳಿದ ಹಾಗೆ ಬಿಳಿಗಿರಿಯ ಅಳಿದ ರಾಯ ಬಚ್ಚಿಟ್ಟ ಚಿನ್ನದ ಹುಡುಕಾಟದಲ್ಲಿದ್ದೆವು. ಇಷ್ಟು ದಿನವೂ ಸುಳಿವು ಸಿಕ್ಕಿರಲಿಲ್ಲ. ಆ ಕಡೆ ಬಿಳಿಗಿರಿ ಭಂಟರೂ ಶೋಧನೆಯಲ್ಲಿದ್ದರು. ಅವರಿಗೆ ತಿಳಿಯದಂತೆ ನಾವು, ನಮಗೆ ತಿಳಿಯದಂತೆ ಅವರು; ಅವರಿಗೆ ಗೊತ್ತಿದೆಯೆಂದು ನಾವು, ನಮಗೆ ಗೊತ್ತಿದೆಯೆಂದು ಅವರು ನಂಬುತ್ತ, ಪರಸ್ಪರರನ್ನು ಅನುಮಾನಿಸುತ್ತಾ ಅನುಸರಿಸುತ್ತಿದ್ದೆವು!”

“ನೀವು ಯಾರ ಪಡೆಯೆಂದು ಅವರಿಗೆ ಗೊತ್ತಿದೆಯೊ?”

ಆತಂಕದಿಂದ ಕೇಳಿದ ಶಿಖರಸೂರ್ಯ.

“ಇಲ್ಲ ಇಲ್ಲ. ಯಾವದೋ ಬುಡಕಟ್ಟಿನ ದರೋಡೆಕೋರರೆಂದು ತಿಳಿದಿದ್ದಾರೆ.”

“ಆಮೇಲೆ?”

“ಒಂದುವಾರದ ಹಿಂದೆ ಗೊತ್ತಾಯಿತು; ನಾವಿಬ್ಬರಲ್ಲದೆ ಇನ್ನೂ ಒಂದು ತಂಡ ಅದೇ ಚಿನ್ನದ ಶೋಧದಲ್ಲಿದೆ ಎಂದು! ನಿಧಿ ಇರುವ ಜಾಗ ಪತ್ತೆ ಮಾಡಿದವರೂ ಅವರೇ!”

“ಅವರ್ಯಾರು?”

“ನಿನ್ನ ಪ್ರಧಾನಿಯ ಭಂಟರು! ನಾವಿನ್ನೂ ನಿಧಿಗಾಗಿ ಚಡಪಡಿಸುತ್ತಿದ್ದಾಗಲೇ ನಿನ್ನ ಸಂದೇಶ ಬಂತು. ನಿನ್ನ ಯುವರಾಜ ಒಂದು ಕಡಿಮೆ ನಲವತ್ತಾಳಿನ ಒಡೆಯನಾಗಿ, ಬಂಡೀ ಸಮೇತ ಬಂದಾ ನೋಡು, - ಆಗಲೇ ಗೊತ್ತಾಯಿತು ನಿಧಿ ಇವರಿಗೆ ಸಿಕ್ಕಿದೆಯೆಂದು! ಕತ್ತಲಾಗಿತ್ತು! ಆಗಲೇ ನಾವೂ ಅವರ ಭಂಟರ ಹಾಗೇ ಬಟ್ಟೆತೊಟ್ಟುಕೊಂಡು ಅವರ ಹಾಗೇ ಬಂಡಿ ಹೂಡಿಕೊಂಡು ಹೋದೆವು. ನಮ್ಮ ಬಂಡಿಯಲ್ಲಿದ್ದ ಹಂಡೆಗಳಲ್ಲಿ ಕಲ್ಲುಮಣ್ಣಿಟ್ಟು ಮುಚ್ಚಳ ಹಾಕಿ ತಟ್ಟು ಕಟ್ಟಿದ್ದೆವು. ಅವರು ಬರುತ್ತಿದ್ದಾಗ ದಾರಿ ತಪ್ಪಿಸಿ ಕಾವಲುಗಾರರನ್ನು ಮಾತ್ರ ಕೊಂದು ಚಾಕಚಕ್ಯತೆಯಿಂದ ಬಂಡಿಗಳ ಬದಲಿಸಿ ಅವರ ಬಂಡಿಯನ್ನು ನಾವು ಹೊಡೆದುಕೊಂಡು ಅಡ್ಡದಾರಿಯಿಂದ ಬಂದೆವು. ಅವರು ಇನ್ನೊಂದು ಅಡ್ಡದಾರಿ ಹಿಡಿದು ಹೋಗುವಾಗ, ದಾರಿತಪ್ಪಿ ಬಿಳಿಗಿರಿ ಭಂಟರ ಕೈಯಲ್ಲಿ ಸಿಕ್ಕು ಬಂಧಿಗಳಾದರು. ಇಷ್ಟೆ ಒಡೆಯಾ ನಡೆದದ್ದು. ಇದಿಷ್ಟು ಸುದ್ದಿಯನ್ನು ಚಿಕ್ಕಮ್ಮಣ್ಣಿಗೆ ತಿಳಿಸಿ ಅವಳ ಕೈಗೆ ಚಿನ್ನ ಒಪ್ಪಿಸಿದೆಯಾದರೆ ನಮ್ಮ ಕೆಲಸ ಮುಗಿಯಿತು.”

"ಆಯ್ತು ಅದನ್ನು ನಾನೇ ಮಾಡ್ತೀನಿ ಬಿಡಯ್ಯಾ"

"ಅಷ್ಟಾದರಾಯ್ತು ಒಡೆಯಾ."

ಶಿಖರಸೂರ್ಯ ಎದ್ದ. ಇವರೂ ಎದ್ದರು.

"ನಿನ್ನ ಯುವರಾಜನ ಗತಿ ಮಾತ್ರ ಬೆಟ್ಟದಯ್ಯನೇ ಗತಿ!"

ಎಂದು ಹೇಳಿ ಸುಕ್ರ ಚಪ್ಪಾಳೆ ತಟ್ಟಿ ನಕ್ಕ! ಶಿಖರಸೂರ್ಯ ಸಕ್ರನ ಬೆನ್ನುತಟ್ಟಿ ಮನಸಾರೆ ನಕ್ಕ. ಊಟವಾದ ಮೇಲೆ ಭಂಟರು ಮಲಗಲಿಲ್ಲ. ಸುಕ್ರ ವಿನಾ ಎಲ್ಲರೂ ತಮ್ಮ ಹಟ್ಟಿಗೆ ಹೊರಟುಹೋದರು.

ಸುಕ್ರ ಮತ್ತವನ ಭಂಟರ ಚಾಣಾಕ್ಷತನ ಮತ್ತು ಸಮಯ ಬುದ್ಧಿಗಳನ್ನು ಶಿಖರಸೂರ್ಯ ಮೆಚ್ಚಿಕೊಂಡ. ಹೇಳಿಕೊಳ್ಳುವಂಥ ಲಾಭವಾಗಿತ್ತು. ಒಳಗೆ ಹೋಗಿ ನಿದ್ರಿಸುತ್ತಿದ್ದ ಮಡದಿಯನ್ನು ಹೃತ್ಪೂರ್ವಕ ಮುದ್ದಿಸಿದ. ನಿದ್ದೆ ಬಾರದೆ ಸುಕ್ರ ಹೇಳಿದ್ದರ ಹಿಂದು ಮುಂದುಗಳನ್ನು ಬೇರೀಜು ಮಾಡುತ್ತಿದ್ದಾಗ ಬೆಳ್ಳಿಮೂಡಿ ಹಕ್ಕಿಯ ಸ್ವರ ಹೊಮ್ಮಿತು. ಎದ್ದು ಮುಳುಗು ಹಾಕಿ ಬರಲು ನದಿಗೆ ಹೊರಟ.

ಹಿಂದಿರುಗಿ ಬಂದಾಗ ಬೆಳ್ಳಂ ಬೆಳಕಾಗಿ ಆಗಲೇ ಚಿಕ್ಕಮ್ಮಣ್ಣಿ ಅರಮನೆಯಿಂದ ಅಳಿಯನ ಮನೆಗೆ ಬಂದಿದ್ದಳು. ಅವಳ ಉತ್ಸಾಹವಂತೂ ಹೇಳತೀರದು.

ಸೇವಕಿಯಂತೆ ಅಡಿಗೆಯಟ್ಟು ಮಗಳು ಮೊಮ್ಮಕ್ಕಳನ್ನು ಮೀಯಿಸಿದಳು. ಬಾಳೆಯೆಲೆ ಹಾಕಿ, ಹಾಕಿದ ಎಲೆಗೆ ನೀರಿನ ಹನಿ ಚಿಮುಕಿಸಿ ಮಲ್ಲಿಗೆ ವರ್ಣದ ಅನ್ನ, ಪಚ್ಚೆವರ್ಣದ ಸೊಪ್ಪಿನ ಸಾರು ಬಡಿಸಿ ನಡುವೆ ತುಪ್ಪವ ಸುರಿದು ಅದಕ್ಕೊಪ್ಪುವ ಉಪ್ಪಿನಕಾಯಿ ಬಡಿಸಿದಳು. ಮೆಣಸು ಸೇರಿಸಿ ಮಾಡಿದ ಹನ್ನೆರಡು ಬಗೆಯ ಪಲ್ಯ, ಮಜ್ಜಿಗೆ ಸೇರಿಸಿ ಮಾಡಿದ ಐದಾರು ಬಗೆಯ ಪಲ್ಯ ಬಡಿಸಿ, ಹುಳಿ ಸೇರಿಸಿ ಮಾಡಿದ ಆರು ಬಗೆಯ, ತೆಂಗಿನ ಕಾಯಿ ಹಾಕಿ ಮಾಡಿದ ಒಂಬತ್ತು ಬಗೆಯ ಪದಾರ್ಥಗಳ ಹಾಕಿ ಘನವಾದ ನ್ಯಾರೇ ಮಾಡಿಸಿ ತೃಪ್ತಿಪಟ್ಟಳು.

ಆಮೇಲೆ ಚಿಕ್ಕಮ್ಮಣ್ಣಿಯ ಜೊತೆ ಮಾತಾಡಲು ಕಾಯುತ್ತಿದ್ದ ಶಿಖರಸೂರ್ಯ ದೂರದಲ್ಲಿ ಬೆಟ್ಟ ನಿಂತುದನ್ನು ನೋಡಿ, ಆತ ನೋಡುತ್ತಿರುವ ಹಾಗೇನೇ, ಸಮಯ ಸಾಧಿಸಿ

"ಅಂತರಂಗ ಮಾತಾಡಬೇಕು ತಾಯೀ" ಅಂದ.

"ಹೇಳಿ ಅಳೀಮಯ್ಯನವರೆ." ಅಂದಳು.

ಸರಸರ ಬಳಿಗೆ ಬಂದು –

"ಮೊದಲಿನಂತೆ ನಾನು ನಿಮ್ಮ ಮಗನಾಗಿ ಇರೋದು ನನಗಿಷ್ಟ. ಬಹುವಚನ ಬೇಡ. ನೀವು ಉಡುಗೊರೆಯಾಗಿ ಕೊಟ್ಟ ಚಿನ್ನ ಬೇಡ ತಾಯಿ." ಅಂದ.

"ಉಂಟೆ ಅಳಿಯಂದಿರೆ? ಆ ಚಿನ್ನ ನಿಮ್ಮದು, ನನ್ನದಲ್ಲ. ನೀವದನ್ನ ತಕ್ಕೊಳ್ಳದಿದ್ದರೆ ಶಿವನಾಣೆ. ನೀವು ಅದನ್ನು ಇನ್ನೊಮ್ಮೆ ಬೇಡ ಅಂದರೂ ನನ್ನಾಣೆ."

ಎಂದು ಹೇಳಿ ಸರಸರ ಅರಮನೆಗೆ ಹೊರಟಳು. ಬೆಟ್ಟ ಕೇಳಿಸಿಕೊಂಡು ಹಿಂದೆ ಸರಿದು ನಿಂತು. ಚಿಕ್ಕಮ್ಮಣ್ಣಿ ಹೋಗುವತನಕ ಕಾದಿದ್ದು ಆಮೇಲೆ ಶಿಖರಸೂರ್ಯನ ಬಳಿಗೆ ಹೋಗಿ ಹೇಳಿದ:

“ಮಹಾರಾಣಿಯ ಸೇವಕ ಹೊರಗೆ ಕಾಯುತ್ತಿದ್ದಾನೆ. ಈಗಲೇ ನೀನು ಹೋಗಬೇಕೆಂತೆ, ಒಡೆಯಾ!”

ಎಂದು ಹೇಳಿ ನಕ್ಕ.

## ಇಪ್ಪತ್ತಾರು

ಶಿಖರಸೂರ್ಯ ಬಂದಾಗ ಅರಮನೆ ಬಣಗುಡುತ್ತಿತ್ತು. ಜನ ಇರಲಿಲ್ಲ. ಇದ್ದವರ ಮುಖಗಳ ಮೇಲೆ ಹೆಣಗಳ ಕಳೆ ಇತ್ತು. ಒಳಕ್ಕೆ ಹೋದರೆ ಅದಿನ್ನೂ ಬಣಗುಡುತ್ತಿತ್ತು. ಮಹಾರಾಜರ ಕೊಠಡಿಯ ಬಾಗಿಲಿಕ್ಕಿತ್ತು. ಸೇವಕನ ಹಿಂದಿನಿಂದ ನೇರವಾಗಿ ಮಹಾರಾಣಿಯ ಮುಖ ಕಳಾಹೀನವಾಗಿ ಗುರುತು ಸಿಗುತ್ತಿರಲಿಲ್ಲ. ಶಿಖರಸೂರ್ಯನನ್ನು ನೋಡಿದ್ದೇ ಕೊಂಚ ಚೇತರಿಸಿಕೊಂಡಳು. ಅವಳ ಜಂಬಗಳಿಗೆ ಗಾಯವಾದದ್ದು ಸ್ಪಷ್ಟವಿತ್ತು. ಅವಮಾನದ ಭಾರಕ್ಕೆ ತಲೆ ಕುಸಿದು ತೊಣಚಿ ಹೊಕ್ಕ ಹಸುವಿನಂತೆ ಕೂತಲ್ಲಿ ಕೂರದೆ ನಿಂತಲ್ಲಿ ನಿಲ್ಲದೆ ಶತಪಥ ತಿರುಗುತ್ತ ಪರಿತಪಿಸುತ್ತಿದ್ದಳು. ಅವಳ ಪೀಠದಿಂದ ಅತಿದೂರದಲ್ಲಿ ಅರ್ಥಕೌಶಲ ಕೈಕೈ ಹೊಸೆಯುತ್ತ, ದವಡೆಯಲ್ಲಿ ಚಿಂತೆಗಳಲ್ಲಿ ಜಗಿಯುತ್ತ ನಿಂತಿದ್ದ. ಪಕ್ಕದಲ್ಲೇ ಕೈಕಟ್ಟಿಕೊಂಡು, ಸೇನಾಪತಿ ಬಲವಂತನೂ ನಿಂತಿದ್ದ.

ಶಿಖರಸೂರ್ಯ ಸ್ವಲ್ಪ ಹೆಚ್ಚಾಗಿಯೇ ಬಾಗಿ ಮಹಾರಾಣಿಗೆ ನಮಸ್ಕಾರವನ್ನಾಚರಿಸಿ

“ಅಪ್ಪಣೆಯಾಗಲಿ ಮಹಾರಾಣಿ,”

ಎಂದ. ವಿನಯದಿಂದ ಹೇಳಿದನೋ, ವ್ಯಂಗ್ಯವಾಗಿ ಹೇಳಿದನೋ ಎಂದು ಮಹಾರಾಣಿ ಕಣ್ಣು ಕಿಸಿದು ಅವನನ್ನೇ ನೋಡಿದಳು. ಅಂಥ ಯಾವ ದುಷ್ಟಗುಣಗಳೂ ಕಾಣಲಿಲ್ಲವಾಗಿ ಅರ್ಥಕೌಶಲನ ಕಡೆಗೆ ನೋಡಿ,-

“ನಿನ್ನ ನರಿಭಾಷೆಯಲ್ಲಿ ಅದೇನು ಹೇಳುತ್ತೀಯೋ ಹೇಳಿಕೋ.”

ಅಂದಳು. ಅರ್ಥಕೌಶಲ ಮುಂದೆ ಬಂದು-

“ವೈದ್ಯನೇ, ಯುವರಾಜನನ್ನು ಬಿಳಿಗಿರಿರಾಯ ಸೆರೆಹಿಡಿದಿದ್ದಾನೆ!”

ಎಂದು ಹೇಳಿದ. ತನಗೇನೂ ಗೊತ್ತಿಲ್ಲದೆ, ತಾನಿದನ್ನು ನಂಬುತ್ತಿಲ್ಲವೆಂಬಂತೆ ಅವನನ್ನೇ ನೋಡುತ್ತ,

“ನಿಜವಾಗ್ಲೂ?” ಎಂದು ಶಿಖರಸೂರ್ಯ ಆಶ್ಚರ್ಯ ಆಘಾತಗಳನ್ನು ಅಭಿನಯಿಸಿದ. ಮಹಾರಾಣಿ ತಾಳ್ಮೆಗೆಟ್ಟಳು,-

“ಹೌದಯ್ಯ. ವಿವರಗಳನ್ನು ಆಮೇಲೆ ಕೇಳಿಕೊ. ಈಗ ಯುವರಾಜನನ್ನು ಬಿಡಿಸಿ ತರಬೇಕು. ಉಪಾಯ ಹುಡುಕು. ನನಗೆ ಬೇಕಾದ್ದು ನಿನ್ನ ಮಾತು, ಮಾತು ಕೊಟ್ಟಾದ ಮೇಲೆ ಮಾತನ್ನು ಉಳಿಸಿಕೊಳ್ಳಬೇಕು. ಒಂದು ವಾರದಲ್ಲಿ ಒಂದು ಕೂದಲು ಕೂಡ ಕೊಂಕದ ಹಾಗೆ ನನ್ನ ಮಗ ನನ್ನ ಮುಂದಿರಬೇಕು. ಆದೀತ?”

-ಎಂದು ಹೇಳಿ ಕೆಲವೇ ನಿಮಿಷ ಉತ್ತರಕ್ಕಾಗಿ ಕಾದು, ಅದು ಬಾರದೆ, ಈದ ಹುಲಿಯಂತೆ ಇಬ್ಬರನ್ನೂ ಕ್ರೂರ ದೃಷ್ಟಿಯಿಂದ ಇರಿದು ಒಳ ಕೋಣೆಗೆ ಹೊರಟಳು. ಹೋಗುವ ದಾರಿಯಲ್ಲಿ ಅಳುಮೋರೆಯಲ್ಲಿ ನಿಂತಿದ್ದ ಚಿಕ್ಕಮ್ಮಣ್ಣಿಯನ್ನು ತಿರಸ್ಕಾರದಿಂದ ನೋಡಿ ಮರೆಯಾದಳು.

ಈಗ ಅಲ್ಲಿ ಉಳಿದವರು ಪ್ರಧಾನಿ, ಸೇನಾಪತಿ ಮತ್ತು ಶಿಖರಸೂರ್ಯ ಮೂವರೆ. ಪ್ರಧಾನಿಯ ಮುಖ ಬಾಡಿತ್ತು. ತುಟಿ ಒಣಗಿ ಮಸಿ ಬಳಿದಂತೆ ಕಪ್ಪಗಾಗಿದ್ದವು. ನಾನು ಕೂಡ ನಿಮ್ಮಂತೆಯೇ, ನಿಮ್ಮಷ್ಟೇ ಚಿಂತಾಕ್ರಾಂತನಾಗಿದ್ದೇನೆಂದು ತೋರಿಸುವುದು ಸೂರ್ಯನ ಉದ್ದೇಶವಾಗಿತ್ತು. ಆದರೆ ಉಳಿದಿಬ್ಬರ ಮುಖ ನೋಡಿ ಆನಂದದಾಯಕವಲ್ಲದ ಕೆಲಸದಲ್ಲಿ ತೊಡಗಿದ್ದೇನೆಂಬಂತೆ ಮುಖ ಮಾಡಿಕೊಂಡು ಕೇಳಿದ:

“ಬಿಳಿಗಿರಿಯ ಕಡೆಯಿಂದ ಸಂದೇಶವೇನಾದರೂ ಬಂದಿದೆಯೇ ಪ್ರಧಾನಿಗಳೆ?”

“ಇಲ್ಲ, ಆದರೆ ಮೊದಲು ಬಂದ ಸಂದೇಶದ ಪ್ರಕಾರ ಎಂಟು ಹಂಡೆ ಚಿನ್ನ ಕೊಟ್ಟರೆ ಯುವರಾಜನನ್ನು ಬಿಡುತ್ತೇವೆ. ಇಲ್ಲದಿದ್ದರೆ ಯುವರಾಜನ ಆಸೆ ಬಿಡಿರಿ ಅಂದಿದ್ದಾರೆ.”

“ಎಂಟು ಹಂಡೆ ಚಿನ್ನ?”

ಸೂರ್ಯ ಕೇಳಿದ. ಈಗ ಅರ್ಥಕೌಶಲ ಬಾಯಿ ಬಿಡಲೇಬೇಕಾಯಿತು. ಅವನತ ಮುಖನಾಗಿಯೇ ಹೇಳಿದ:

“ಬಿಳಿಗಿರಿಯ ಹಿಂದಿನ ರಾಜರು ಎಲ್ಲೋ ಚಿನ್ನ ಬಚ್ಚಿಟ್ಟಿದ್ದಾರೆಂದು ತಿಳಿಯಿತು. ಈಗಿನ ರಾಜರೂ ನಮ್ಮ ಭಂಟರೂ ಅದರ ಶೋಧನೆಯಲ್ಲೇ ಇದ್ದರು. ಮೊನ್ನೆ ಮೊನ್ನೆ ಅಡಗಿಸಿಟ್ಟ ಚಿನ್ನದ ಸುಳಿವು ಸಿಕ್ಕಂತಾಗಿ ಯುವರಾಜ ಅವಸರ ಮಾಡಿದ. ಭಂಟರನ್ನು ಕರೆದುಕೊಂಡು ಸೇನಾಪತಿಗೂ ಹೇಳದೆ ಹೋಗಿ ಸಿಕ್ಕುಬಿದ್ದ! ಚಿನ್ನ ಮಾಯವಾಗಿದೆ. ತಗೊಂಡವರು ನಾವೇ ಅಂತ ಅವರ ಅನುಮಾನ. ಅನಾಯಾಸ ಹೋಗಿ ಸಿಕ್ಕುಬಿದ್ದನಲ್ಲ, ಹಿಡಿದುಕೊಂಡು ಆಟ ಆಡಿಸ್ತಿದ್ದಾರೆ.”

ಅವಶ್ಯವಿದ್ದಷ್ಟು ವಿಷಯಗಳನ್ನು ಮಾತ್ರ ಅರ್ಥಕೌಶಲ ಹೇಳಿದರೂ ಎಷ್ಟೋ ವಿಷಯ ಬಚ್ಚಿಟ್ಟಿದ್ದನ್ನು ಕಂಡು ಹಿಡಿಯಲು ಶಿಖರಸೂರ್ಯನಿಗೆ ಕಷ್ಟವಾಗಲಿಲ್ಲ. ಆದರೂ ತಿಳಿಯೋಣವೆಂದು ತೋರಿಸಿಕೊಳ್ಳಲು

“ಹಾಗಾದರೆ ಆ ಚಿನ್ನ ಎಲ್ಲಿ?” ಅಂದ.

“ಗೊತ್ತಿಲ್ಲವಪ್ಪ”

ಹತಾಶನಾಗಿ ಹೇಳಿದ ಅರ್ಥಕೌಶಲ,-

“ಅವರೇ ತಗೊಂಡು ನಮ್ಮ ಚಿನ್ನ ಕಕ್ಕಿಸಲಿಕ್ಕೆ ಹೀಗೆ ಹೇಳಿದ್ದಾರೋ? ಯಾರಾದರೂ ನಿಜವಾಗಿ ಕದ್ದಿದ್ದಾರೋ? ಗೊತ್ತಿಲ್ಲ. ಇಷ್ಟಂತೂ ನಿಜ: ನಾವು ಅವರ ಚಿನ್ನ ತಗೊಂಡಿಲ್ಲ. ನನ್ನ ಅಂದಾಜಿನ ಪ್ರಕಾರ ನಾವು ಚಿನ್ನ ಕಕ್ಕಬೇಕಾದ್ದು ಅನಿವಾರ್ಯ. ಯಾಕಂತೀಯೋ? ಹಿಂದಿನ ರಾಜರು ತಂದ ಚಿನ್ನವನ್ನು ತಿಂದಿವಲ್ಲ? ಅದನ್ನು ಕಕ್ಕಿಸಬೇಕೂಂತ ಅವರ ಉದ್ದೇಶ ಇರಬಹುದು.”

‘ಹಾಗಾದರೆ ಇವರಿಂದಲೂ ಒಂದಷ್ಟು ಚಿನ್ನ ಕಕ್ಕಿಸಬಹುದು ಎಂದಾಯಿತು?’ ಎಂದುಕೊಂಡ ಶಿಖರಸೂರ್ಯ. ಆದರೀಗ ಹುಟ್ಟಾ ಭಂಟನಾಗಿ ಸೇನಾಪತಿ ಮಾತಾಡಲೆಂದು ಸೂಚಿಸಲು-

“ಹೀಗೆ ಹೀಗೆ ಮಾಡಬಹುದೆಂದು ಸೇನಾಪತಿಗಳು ಒಂದು ಯೋಜನೆ ಹೇಳಲಿ. ನಾವದನ್ನು ಅನುಸರಿಸುವಾ. ಮುಖ್ಯ ಮಹಾರಾಣಿಯವರು ಆಜ್ಞಾಪಿಸಿದಂತೆ ಯುವರಾಜರ ಕೂದಲು ಕೊಂಕದ ಹಾಗೆ ಕೆಲಸವಾಗಬೇಕು - ಅಲ್ಲವೇ ಪ್ರಧಾನಿಗಳೆ?” ಅಂದ.

“ಅಷ್ಟೆ ಕಣಪ್ಪ!”

ಎಂದು ಭಾರ ಇಳಿದಂತೆ ಹಗುರವಾಗಿ ಹೇಳಿದ ಅರ್ಥಕೌಶಲ. ಸೇನಾಪತಿ ಹೇಳಿದ:

“ಯಾವ ಕಡೆಯಿಂದ ನೋಡಿದರೂ ನಾವೇ ತೊಂದರೆಯಲ್ಲಿದ್ದೇವೆಂದು ತೋರುತ್ತದೆ ಪ್ರಧಾನಿಗಳೆ. ನಮ್ಮವರು ಮುನ್ನೂರು ಜನ ಭಂಟರಿದ್ದಾರೆ. ನೆರೆಹೊರೆ ಮಾಂಡಳಿಕ ಮನ್ನೆಯರನ್ನ ಸೇರಿಸಿಕೊಂಡರೂ ಐನೂರಾಯ್ತು. ಇಷ್ಟು ಜನ ಭಂಟರಿಂದ ಅವರನ್ನು ಎದುರಿಸಲಾಗುವುದಿಲ್ಲ. ಬಿಳಿಗಿರಿಯವರಿಗೆ ನೆರೆಹೊರೆಯವರಿಂದ ನಿವ್ವಳ ಸಹಾಯವಿದೆ. ನಾವೇ ದಂಡೆತ್ತಿ ಹೋದರೆ ಯುದ್ಧ ತಿಂಗಳಾನುಗಟ್ಟಲೆ ನಡೆಯಬಹುದು. ನಮಗೆ ಆಹಾರ ನೀರು ಸಿಗುವುದೂ ಕಷ್ಟ. ಹಳ್ಳಿಗಳನ್ನ ಲೂಟಿ ಮಾಡಿ ತಿನ್ನಬೇಕೆಂದರೆ ಆ ಭಾಗದಲ್ಲಿನ್ನೂ ಈ ವರ್ಷದ ಕುಯ್ಲಾಗಿಲ್ಲ. ನಮಗೀಗ ಪಡುಮಲೆ ರಾಜರ ಸಹಾಯ ಸಿಕ್ಕರೆ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ. ಅವರಲ್ಲಿ ಒಳ್ಳೆ ಭಂಟರಿದ್ದಾರೆ. ಆಹಾರದ ಕೊರತೆಯನ್ನೂ ನೀಗಿಸುತ್ತಾರೆ. ಸದ್ಯಕ್ಕೆ ಪಡುಮಲೆಯವರ ಸಹಾಯ ಕೇಳಿ ಮುಂದುವರಿಯುವುದು ಕ್ಷೇಮ.”

“ಏನಿದ್ದರೂ ನೀವು ಯುದ್ಧದ ಮಾತನ್ನೇ ಆಡುತ್ತಿದ್ದೀರಿ. ಹಾಗಂತ ದಂಡೆತ್ತಿ ಹೋದರೆ ಯುವರಾಜರ ಜೀವಕ್ಕೆ ಅಪಾಯವಲ್ಲವೇದ?

-ಎಂದು ಶಿಖರಸೂರ್ಯ ಅಡ್ಡಬಾಯಿ ಹಾಕಿದ.

“ಹೌದಲ್ಲ ದಂಡನಾಯಕರೆ! ಸಮಸ್ಯೆಗೆ ಯುದ್ಧ ಖಂಡಿತ ಪರಿಹಾರವಲ್ಲ. ಯುವರಾಜರ ಕೂದಲು ಕೊಂಕದ ಹಾಗೆ ಬಿಡಿಸಿಕೊಂಡು ಬರುವ ಉಪಾಯ ಹೇಳಿಯಪ್ಪಾ.”

-ಎಂದು ಅರ್ಥಕೌಶಲ ಹೇಳಿ “ಸರಿಯಲ್ಲವೇ?” ಎಂಬಂತೆ ಶಿಖರಸೂರ್ಯನ ಮುಖ ನೋಡಿದ. ಆದರೆ ಮೂಲ ಚಿಂತೆಯ ಭಾರ ಹಾಗೇ ಇತ್ತು. ರೆಪ್ಪೆಗಳನ್ನ ಸಂಕೋಚಗೊಳಿಸಿ ಹರಿತ ದೃಷ್ಟಿಯಿಂದ ಅರ್ಥಕೌಶಲನ ಒಳಗಿಣುಕುತ್ತ ಶಿಖರಸೂರ್ಯ ಹೇಳಿದ

“ಇದಕ್ಕೂ ವಿಷಕನ್ಯೆ ಕಾಣೆಯಾದುದಕ್ಕೂ ಸಂಬಂಧವಿರಬಹುದೆ ಪ್ರಧಾನರೆ?”

ನಿದ್ದೆ ಹೋಗಿದ್ದವನ ಮೇಲೆ ತಣ್ಣೀರೆರಚಿದಂತೆ ಬೆಚ್ಚಿಬಿದ್ದ ಅರ್ಥಕೌಶಲ ತನ್ನೆಲ್ಲ ಬುದ್ಧಿಯನ್ನು ಜಾಗೃತಗೊಳಿಸಿ ಕಾವಲಿಗಿಟ್ಟುಕೊಂಡು “ಛೇ ಛೇ” ಅಂದ. ‘ಸಂಬಂಧವಿರಲಾರದು’ ಎಂದು ದಂಡನಾಯಕ ಹೇಳಿದನಾದರೂ ಶಿಖರಸೂರ್ಯ ಅವನ ಕಡೆಗೆ ನೋಡಲೇ ಇಲ್ಲ. ಅರ್ಥಕೌಶಲ ಮಾತ್ರ ಭೀತನಾದಂತೆ ಕಂಡಿತು. ಕಿಡಿಕಿಯಲ್ಲಿ ದೃಷ್ಟಿಯನ್ನು ನೆಟ್ಟು ಕೂತ. ಕೊನೆಗೆ ಇಂದಿನ ಸಭೆಯ ಚರ್ಚೆಗೊಂದು ಕೊನೆ ಹೇಳಬೇಕಿತ್ತಲ್ಲ-ಅರ್ಥಕೌಶಲ ಹೇಳಿದ:

“ಈಗಂತೂ ಹೀಗೆ ಮಾಡೋಣ: ವೇಷಾಂತರದಿಂದ ಬಿಳಿಗಿರಿಗೆ ಹೋದ ಭಂಟರು ಏನು ಸುದ್ದಿ ತರುತ್ತಾರೋ ನೋಡೋಣ. ದಂಡೆತ್ತಿ ಹೋಗುವ ವಿಚಾರವನ್ನ ಇಂದಿನ ಮಟ್ಟಿಗೆ ಬಿಟ್ಟರೂ ದಂಡನಾಯಕ ನಮ್ಮ ಸೈನ್ಯವನ್ನು ಸಜ್ಜಾಗಿಡಲಿ. ಪಡುಮಲೆ ರಾಜರು ನಾನು ತಿಳಿದಂತೆ ಸಹಾಯಕ್ಕೆ ಬಂದೇ ಬರುತ್ತಾರೆ. ಅಲ್ಲಿಗೂ ಸಂದೇಶ ಕಳಿಸಿರೋಣ. ಮತ್ತೆ ನಾಳೆ ಭೇಟಿಯಾಗೋಣ. ನಾನೀಗಲೂ ಹೇಳುವುದೇನೆಂದರೆ ವಿಷಕನ್ಯೆ ಕಾಣೆಯಾದುದಕ್ಕೂ ಇದಕ್ಕೂ ಸಂಬಂಧವಿಲ್ಲ. ಮುಂದಿನದು ದೈವೇಚ್ಛೆ!”

ಶಿಖರಸೂರ್ಯ ಅವಸರದಲ್ಲಿ ಸೀದಾ ತನ್ನ ಮನೆಗೆ ಬಂದು ಯಾರೊಂದಿಗೂ ಮಾತಾಡದೆ ಮೆಟ್ಟಿಲುಗಳಿಂದ ಅನತಿ ದೂರದಲ್ಲಿ ನಿಂತಿದ್ದ ಛಾಯಾದೇವಿಯನ್ನೂ ಗಮನಿಸದೆ ದಡದಡ ಮೇಟ್ಟಿಲೇರಿ ಅಟ್ಟಕ್ಕೆ ಹೋಗಿ ಶತಪಥ ಅಡ್ಡಾಡತೊಡಗಿದ. ದೊಡ್ಡ ದನಿ ಮಾಡಿ ನಗಬೇಕೆನಿಸಿತ್ತು. ನಕ್ಕಿದ್ದರೆ ಖಂಡಿತ ಕೇಳಿದವರಿಗೆ ಸಂತೋಷವಾಗುತ್ತಿರಲಿಲ್ಲ. ಮನಸ್ಸಿಗೆ ವಿಚಿತ್ರವಾದ ಹಿತವಾಗಿತ್ತು. ಅರಮನೆ ಅನಾಥವಾಗಿತ್ತು. ಮಹಾರಾಣಿಗೆ ತನ್ನ ನೆರವು ಬೇಕಾಗಿತ್ತು. ಅರ್ಥಕೌಶಲನ ಪ್ರಸಿದ್ಧ ಬುದ್ಧಿ ಕೈಕೊಟ್ಟಿತ್ತು. ಸೈನ್ಯ ಕೂಡ ಅಸಹಾಯಕವಾಗಿತ್ತು. ಈಗ ನಿಜವಾಗಿ ತಾನು ಒಂಟಿಯಾದಂತೆನಿಸಿತು. ಇಂಥ ಕ್ಷಣಗಳನ್ನು ತನ್ನೊಂದಿಗೆ ಹಂಚಿಕೊಂಡು ನಗುವಂಥ ಯಾರ ಸಂಬಂಧವನ್ನೂ ಆತ ಗಳಿಸಿರಲಿಲ್ಲ. ಮಹಾರಾಣಿ, ಅರ್ಥಕೌಶಲರು ಅನುಭವಿಸುತ್ತಿರುವ ಒಳಹಿಂಸೆಯನ್ನು ಕಲ್ಪಿಸಿಕೊಂಡು, ಕಲ್ಪನೆಯಲ್ಲೇ ಅವರಿಗೆ ಇನ್ನಷ್ಟು ಹಿಂಸೆ ಕೊಟ್ಟು ನೋಡಿದ. ಅರ್ಥಕೌಶಲ ತನ್ನ ನೆರವಿಗೆ ಬಂದ ಸಂಗತಿ ಅವನಿಗೆ ನೆನಪಾಯಿತಾದರೂ ಅದು ಭಾವುಕತೆ ಎಂದುಕೊಂಡು ಮರೆತ.

ಹಿಂದೆ ಕೂಡ ಮೈಮುರಿದುಕೊಂಡು ಕಾಡಿನಲ್ಲಿ ಬಿದ್ದಿದ್ದ ತನ್ನನ್ನು ಹೊತ್ತು ತಂದು ಸೇವೆ ಮಾಡಿದ ಜಟ್ಟಿಗ, ಬೆಳ್ಳಿ, ಶಿವಪಾದ, ಕುರುಮನಿಯ ನೆನಪಾದಾಗಲೂ ಹೀಗೇ ಅಂದುಕೊಂಡಿದ್ದ. “ಇನ್ನೊಬ್ಬರ ಉಪಕಾರ ನೆನೆದುಕೊಂಡು ಬದುಕುವಾತ ತನ್ನ ಸುಖ ಮತ್ತು ಅಸ್ತಿತ್ವಗಳನ್ನು ಮರೆಯುತ್ತಾನೆ. ಆತ್ಮೀಯ, ಆನಂದದ ಕ್ಷಣಗಳಲ್ಲಿ ಬೇರೆಯವರನ್ನು ನೆನಪಿಸಿಕೊಳ್ಳುವುದೆಂದರೆ ಆತ್ಮಹತ್ಯೆ ಮಾಡಿಕೊಂಡಂತೆ. ಹಾಗೆ ನೆನಪಿಗೆ ಬರುವವರು ಸ್ವಾರ್ಥಿಗಳಾದ ಕೊಲೆಗಡುಕರು!” ಎಂದುಕೊಂಡು ಸ್ವತಂತ್ರವಾದ ಏಕಾಂತ ಬಯಸಿದ.

## ಇಪ್ಪತ್ತೇಳು

ಮಾರನೇ ಬೆಳಿಗ್ಗೆ ಬೆಟ್ಟನನ್ನು ಜೊತೆ ಕರೆದುಕೊಂಡು ಶಿಖರಸೂರ್ಯ ಕಾಲ್ನಡಿಗೆಯಿಂದಲೇ ಕಾಡಿಗೆ ಹೋದ. ನಾರು ಬೇರು ಹುಡುಕುವುದಕ್ಕೆಂದು ನೆಪ ಹೇಳಿದ್ದರೂ ಬೆಟ್ಟ ಹೇಳಿದ ಕೆಲವು ಸಂಗತಿಗಳನ್ನು ಖಾತ್ರಿ ಮಾಡಿಕೊಳ್ಳುವ ಅಗತ್ಯವಿತ್ತು. ಬೆಟ್ಟ ತೋರಿಸಿದಂತೆ ನದಿಯ ಒತ್ತಿನಗುಂಟ ಹೊರಟು ಪಾತ್ರ ಸಣ್ಣದಾಗಿರುವಲ್ಲಿ ಸಂಕದ ಮ್ಯಾಲಿಂದ ದಾಟಿ ಆಚೆ ಹೋದರು. ಕಾಡು ದಟ್ಟವಾಗುತ್ತ ಬಂದಂತೆ ಬೆಟ್ಟ ಮುಂದಾದ, ಶಿಖರಸೂರ್ಯ ಹಿಂದಿನಿಂದ ನಡೆದ. ಬರಬರುತ್ತ ಸೂರ್ಯನ ಮುಖವೇನು, ಆಕಾಶವೂ ಕಾಣಿಸದಾಯ್ತು. ಕೆಲವು ಸಲ ಸಹಾಯ ಮಾಡಲು ಬೆಟ್ಟ ಕೈನೀಡಿದಾಗ ಶಿಖರಸೂರ್ಯ ನಿರಾಕರಿಸಿ ಹಾಗೇ ಸಾಗಿದ. ವೈದ್ಯನ ಕಣ್ಣು ತನ್ನ ಕಣ್ಣಿಗಿಂತ ಹರಿತವಾಗಿದ್ದವು. ಅಪರಿಚಿತವಾದ ದಟ್ಟ ಕಾಡಿನಲ್ಲಿ ಅಷ್ಟೊಂದು ಕತ್ತಲಿದ್ದರೂ ಶಿಖರಸೂರ್ಯ ಒಂದು ಬಾರಿಯೂ ತಪ್ಪಿ ಹೆಜ್ಜೆ ಇಡಲಿಲ್ಲ, ಎಡವಲಿಲ್ಲ, ತಡವರಿಸಲಿಲ್ಲ! ಹಗಲು ಬೆಳಕಿನಲ್ಲಿ ಪರಿಚಿತ ದಾರಿಯಲ್ಲಿ ನಡೆದಾಡುವಂತೆ ನಡೆದುದನ್ನು ಕಂಡು ಬೆಟ್ಟ ಬೆರಗಾದ. ದಟ್ಟ ಕಾಡು ಮುಗಿದು ವಿರಳವಾಗುತ್ತಿದ್ದಂತೆ ಬೆಳಕು, ಬಿಸಿಲು ಬಂದು ದೂರದಲ್ಲೊಂದು ಸುಣ್ಣ ಬಳಿದ ಸುಂದರ ಮನೆ ಕಂಡಿತು. ‘ಇದೇನಾಶ್ಚರ್ಯ’ ಎಂಬಂತೆ ಬೆಟ್ಟನನ್ನು ನೋಡಿದ.

“ಅದೋ, ಅಥವಾ ಆ ಮನೆ ಆಚೆಯದೋ ಸ್ವರ್ಣಲತೆಯ ಮನೆ ಒಡೆಯಾ. ಅದರಾಚೆ ಇನ್ನೊಂದು ಒತ್ತಿದೆ. ಅದನ್ನು ದಾಟಿದರೆ ಸಿಕ್ಕೋದೇ ಶ್ವಾನಕೂಪ. ನಾವು ಸುತ್ತು ಬಳಸಿ ಹೋಗಬೇಕು.”

ಎಂದು ಬೆಟ್ಟ ಹೇಳಿ ಎಡಕ್ಕೆ ತಿರುಗುವಷ್ಟರಲ್ಲಿ ದೂರದಲ್ಲಿ ಕೆಂಪು ಲಂಗದಲ್ಲಿದ್ದ ಹುಡುಗಿಯೊಂದು ಚಲಿಸಿದಂತಾಗಿ ಶಿಖರಸೂರ್ಯ ಅವಳನ್ನು ನೋಡುತ್ತ ಹಾಗೇ ನಿಂತ.

ಸುಣ್ಣದ ಮನೆಯತನಕ ಸುಮಾರು ಮೂರೆಕರೆಯ ತೆಳುವಾದ ಕಾಡಿನಲ್ಲಿ ಸಂಪಿಗೆ ಪಾರಿಜಾತ ಮರಗಳೇ ಹೆಚ್ಚಿಗಿದ್ದವು. ಆ ಮನೆತನಕ ಮೂರಡಿ ಅಗಲದ ಕಾಲುದಾರಿ ಇದ್ದು ಇಕ್ಕೆಲಗಳಲ್ಲಿ ಆಕಾಶಮಲ್ಲಿಗೆಯ ಮರಗಳಿದ್ದವು. ಅರಳಿದ ಹಾಗೂ ಅರಳಿ ಉದುರಿದ ಹೂಗಳಿಂದಾಗಿ ತೀಕ್ಷ್ಣವಾದ ಪರಿಮಳ ಇಡಗಿ ವಾತಾವರಣ ಸುಖಕರವಾಗಿತ್ತು. ಕಾಡಿನ ತಂಪಿನಿಂದಾಗಿ ಎಳೆಬಿಸಿಲು ಕೂಡ ತನ್ನ

ಹದನ ಕಳೆದುಕೊಂಡು ಆಹ್ಲಾದಕರವಾಗಿತ್ತು. ಹುಡುಗಿ ಪುನಃ ಕಂಡು ಮರಗಳಲ್ಲಿ ಮರೆಯಾದಳು. ಅವಳು ಮರೆಯಾದ ದಿಕ್ಕನ್ನೇ ಗಮನಿಸುತ್ತ ಶಿಖರಸೂರ್ಯ ಅಲ್ಲೇ ನಿಂತ. ಬಹಳ ಹೊತ್ತು ಅವಳು ಕಾಣಿಸಲಿಲ್ಲ. ಜಾಡು ತಪ್ಪಿತೆಂದು ಬೇಟೆಯ ನಾಯಿಯಂತೆ ಕಣ್ಣಿಂದ ಹುಡುಕಿದ. ಅಗೋ ಅಲ್ಲಿ ಪಾರಿಜಾತದ ಮರವ ಅಲುಗಿ ಉದುರಿದ ಹೂಗಳನ್ನು ಆಯ್ದು ಲಂಗದಂಚಿನ ಉಡಿಯಲ್ಲಿ ತುಂಬಿಕೊಂಡಳು. ತೊಡೆತನಕ ಕಾಲುಗಳೆರಡೂ ದಂತದ ಕಾಲುಗಳಂತೆ ಶುಭ್ರವಾಗಿ ಹೊಳೆದವು. ಈಗ ಆ ಕಡೆಗೇ ನಡೆದ. ಹುಡುಗಿ ಹೂ ತಗೊಂಡು ಮನೆಗೋಡಿದಳು. ಆ ಮನೆಯೇ ಗುರಿಯಾಗಿ ಶಿಖರಸೂರ್ಯನೂ ಧಾವಿಸಿದ.

ಹೊರಗೆ ನಾಯಿಗಳಾಗಲಿ, ಆಳುಗಳಾಗಲಿ ಇರಲಿಲ್ಲ. ನೇರಹೋಗಿ ಬಾಗಿಲಲ್ಲಿ ನಿಂತು ಚಿಲಕ ಬಡಿದ. ಹೊರಗೆ ಬಂದವಳು ಅದೇ ಚೆಲುವೆ. ಒಂದು ಕ್ಷಣ ತೆರೆದ ಬಾಯಿ ತೆರೆದಂತೇ ಬೆರಗಾಗಿ ನಿಂತ. ಯಾರೀಕೆ? ವಯಸ್ಸು ಹದಿನೆಂಟಕ್ಕೆ ಹೆಚ್ಚಿಗಿರಲಾರದು. ಲಂಗವಾಗಲಿ, ಎದೆಗುಪ್ಪಸವಾಗಲಿ, ಅವಳ ಹುರಿಗೊಂಡ ಯೌವನವನ್ನು ಅಡಗಿಸಿಡಲು ಸಾಧ್ಯವಾಗಿರಲಿಲ್ಲ. ಬಾಗಿದ ಹುಬ್ಬಿನ ಕೆಳಗೆ ಅಚ್ಚರಿಯಿಂದರಳಿದ ದೊಡ್ಡಕಣ್ಣು, ಅರೆದೆರೆದ ತೊಂಡೆದುಟಿಗಳು, ನಡುವೆ ಹೊಳೆವ ದಂತಪಂಕ್ತಿ, ಭುಜ ಮತ್ತು ಬೆನ್ನಿನ ಮೇಲೆ ಸ್ವಚ್ಛಂದವಾಗಿ ಇಳಿಬಿದ್ದ ಮಿರುಗೂದಲಿಗೆ ಗಂಡಿನ ಮನಸ್ಸನ್ನು ಬಂಧಿಸಿಡುವ ಆಕರ್ಷಣೆ ಇತ್ತು.

ಈ ಕಾಡಿನಲ್ಲಿ ಈ ಪರಿಯ ಸೊಬಗನ್ನು ಶಿಖರಸೂರ್ಯ ನಿರೀಕ್ಷಿಸಿರಲಿಲ್ಲ. ಅವಳನ್ನು ಕಂಡುದೇ ಪ್ರಥಮ ಬಾರಿ ತನ್ನ ಉಡುಪು ಒರಟಾಗಿದೆಯೆಂದು ಅನ್ನಿಸಿತು. ಸೊಂಟಕ್ಕೊಂದು ಒರಟಾದ ದಟ್ಟಿ ಸುತ್ತಿಕೊಂಡು ಇನ್ನೊಂದು ದಟ್ಟಿಯನ್ನು ಮೈಮ್ಯಾಲೆ ಹೊದ್ದಿದ್ದನಷ್ಟೆ. ಆದರೆ ಈ ಭಾವನೆ ಅವನಲ್ಲಿ ಬಹಳ ಹೊತ್ತು ಉಳಿಯಲಿಲ್ಲ. ಅವಳ ಸೌಂದರ್ಯವನ್ನೇ ಧ್ಯಾನಿಸುತ್ತ ನೋಡತೊಡಗಿದ. ಹಾಲಿನ ಕೆನೆವರ್ಣದ ಮುಖದ ಮ್ಯಾಲೆ ಸೂರ್ಯನ ಎಳೆಬಿಸಿಲು ಬಿದ್ದು ಕಾಂತಿಯಿಂದ ಹೊಳೆಯುವಂತೆ ಮಾಡಿತ್ತು. ಕೆಂದುಟಿಗಳನ್ನು ತುಸುವೇ ಅಗಲಿಸಿ ಅನುಮಾನದಿಂದ ಹೊಮ್ಮುವ ಮೋಹಕ ಮುಗುಳು ನಗೆಯನ್ನು ಒತ್ತಾಯದ ಬಿಗುಮಾನದಿಂದ ತಡೆಹಿಡಿದಿದ್ದಳು. ಕೆನ್ನೆಗಳಲ್ಲಿ ಸಣ್ಣ ಕುಳಿ ಬಿದ್ದು ತುದಿಯಲ್ಲಿ ತುಸುವೇ ಬಾಗಿದ ಮೂಗಿನಿಂದಾಗಿ ಇಡೀ ಮುಖಕ್ಕೊಂದು ವಿಶೇಷ ಕಳೆ ಬಂದಿತ್ತು. ಕಣ್ಣುಗಳಿಗೆ ಮತ್ತು ಬರಿಸುವ ಯೌವನದ ಆ ಪದ್ಮಿನಿ, ಮಾದಕ ಪರಿಮಳದ ಭರಣಿ ಅವನಿಗೇ ಗೊತ್ತಿಲ್ಲದಂತೆ ಅವನಂತರಂಗದ ಒಳಗೊಳಗೆ ಭರಿತಳಾದಳು. ನೋಡನೋಡುತ್ತಿರುವಂತೆ ಅವನ ಉತ್ಸಾಹ ಬೆರಗುಗಳು ಸಹಾನುಭೂತಿಗೆ ತಿರುಗಿ ಕಂಡುದನ್ನು ನಂಬಲಾರದವಂತೆ ನೋಡತೊಡಗಿದ. “ಮೀಸಲು ನೆಲ ಈ ಹುಡುಗಿ! ನೇಗಿಲಿರಲಿ, ಇನ್ನೊಬ್ಬರ ಕಾಲು ಕೂಡ ಮೂಡದ ಇಂಥವಳಿಗೂ ಈ ಗತಿಯೆ!” ಅಂದುಕೊಂಡ. ಬಿಳಿಗಿರಿರಾಯನ ಕೊಲೆಗೆ ಕಾರಣವಾದ ಕುಟುಂಬ ಇಲ್ಲಿಯೇ ಇರಬೇಕೆಂಬ ನಂಬಿಕೆಯಿಂದ-

“ನಿನಗೆ ಸ್ವರ್ಣಲತೆ ಗೊತ್ತ?”

ಅಂದ. ಹುಡುಗಿ ತಕ್ಷಣ ಗಾಬರಿಯಾಗಿ ಒಂದು ಹೆಜ್ಜೆ ಹಿಂದೆ ಸರಿದಳು. ಅಷ್ಟರಲ್ಲಿ “ಯಾರದು?” ಎನ್ನುತ್ತ ಒಳಗಡೆಯಿಂದ ಹಣ್ಣು ಮುದುಕಿಯೊಬ್ಬಳು ಹೊರಬಂದಳು. ಮುಖಬಾಡಿ ದೇಹ ಕೃಶವಾಗಿ ಬಾಗಿದ್ದಳು. ಕೆನ್ನೆ ಹಣೆಗಳಲ್ಲಿ ಗೆರೆ ಮೂಡಿದ್ದವು. ಬಿಳಿವರ್ಣದ ದೇಹ ಗೋದಿಬಣ್ಣಕ್ಕೆ ತಿರುಗುತ್ತಿದ್ದ ಲಕ್ಷಣಗಳಿದ್ದವು. ಆದರೆ ಕಣ್ಣುಗಳಲ್ಲಿ ನಿಚ್ಚಳ ಬೆಳಕಿತ್ತು. ನಿಷ್ಕಾಳಜಿಯಿಂದ ಕೂದಲು ಕೆದರಿತ್ತು. ಅಂಥದರಲ್ಲೂ ಹೊಳೆವ ಓಲೆ ಮತ್ತು ಮೂಗುತಿ ಧರಿಸಿದ್ದಳು. ಒಂದು ಕಾಲದ ಸುಂದರಿಯೆಂದು, ಹೋಲಿಕೆಯಲ್ಲಿ ಈ ಹುಡುಗಿಯ ತಾಯಿಯೆಂಬುದು ಸ್ಪಷ್ಟವಾಗಿ ತಿಳಿಸುವಂತಿತ್ತು - ಅವಳ ಲಕ್ಷಣ. ಶಿಖರಸೂರ್ಯನ ಅಸಾಧಾರಣ ನಿಲುವು ಮತ್ತು ಆಕಾರಗಳಿಂದ ವಿಚಲಿತಳಾದರೂ ಧೈರ್ಯ ತಂದುಕೊಂಡು ಮುಂದೆ ಬಂದು, ಸೊಂಟದ ಮೇಲೆ ಕೈಯೂರಿಕೊಂಡು ನಿಂತು ಇವನನ್ನೇ ತುಸು ಹೊತ್ತು ನೋಡಿದಳು. ಮುದುಕಿ ಬಂದೊಡನೆ ಹುಡುಗಿ ಅವಳ ಹಿಂದೆ ಮುದುರಿದಳು. ಮುದುಕಿ ಮುಖ ಮುಂದೆ ಮಾಡಿ “ಯಾರಪ್ಪ ನೀನು?” ಎಂದಳು.

“ರಾಜ್ಯವೈದ್ಯ ಶಿಖರಸೂರ್ಯ.”

ತಕ್ಷಣ ಹುಡುಗಿ ಮಾತಾಡುವ ತಾಯಿಯನ್ನು ತಡೆಯಲು ಕೈಸನ್ನೆ ಮಾಡುವಷ್ಟರಲ್ಲಿ "ಆಯಿತು ಇಲ್ಲಿಗ್ಯಾಕಪ್ಪ ಬಂದೆ?" ಎಂದು ಕೇಳಿಯೇ ಬಿಟ್ಟಿದ್ದಳು. ಶಿಖರಸೂರ್ಯ ಹಿಂದೆ ಮುಂದೆ ನೋಡದೆ ವಿಚಾರ ಮಾಡದೆ,

"ಬಿಳಿಗಿರಿರಾಯನೊಂದಿಗಿದ್ದ ಸ್ವರ್ಣಲತೆಯನ್ನು ನೋಡಬೇಕಾಗಿತ್ತು."

ಅಂದ. ಆ ಮುದುಕಿ ದೂರದ ಮನೆಯನ್ನ ಕೈಮಾಡಿ ತೋರಿಸುತ್ತ,

"ಅಗೋ ಅಲ್ಲಿದೆಯಲ್ಲ ಕೆಂಪು ಹಂಚಿನ ಮನೆ. ಅದೇ ಅವಳ ಮನೆ. ನೀನು ರಾಜ್ಯವೈದ್ಯನೇ ಆಗಿರು, ಅವನಜ್ಜನೇ ಆಗಿರು. ಅಲ್ಲೊ ನಿನ್ನಂಥವನೇ ಒಬ್ಬ ಕವಿರಾಜ ಇದ್ದ. ಅವನೂ ನಿನ್ನ ಹಾಗೇ ಬಿರುದು ಬಾವಲಿ ಪಡೆದವನೇ. ನಿನ್ನ ದರ್ಪ, ಜಂಬಗಳನ್ನು ಅವನ ಮುಂದೆ ಕೊಚ್ಚಿಕೋ ಹೋಗು."

ಎಂದು ಹೇಳಿ, "ನಡಿಯೇ ಒಳಗೆ" ಎಂದು ಮಗಳನ್ನು ಒಳಕ್ಕೆ ಕರೆದುಕೊಂಡು ನಡೆದಳು. ಶಿಖರಸೂರ್ಯ ಅವಸರದಲ್ಲಿ "ಆದರೆ..." ಅಂದ.

"ನಿನಗೆ ಬೇಕಾದ್ದೆಲ್ಲ ಅಲ್ಲೇ ಸಿಕ್ಕೀತು ಹೋಗಪ್ಪ" ಎಂದು ಹೇಳಿ ಇನ್ನೊಂದು ಮಾತಿಗೆ ಕಾಯದೆ ಇವನ ಮುಖದ ಮೇಲೆಯೇ ಬಾಗಿಲಿಕ್ಕಿಕೊಂಡಳು. ಕೋಪ ಬಂತಾದರೂ ಅದನ್ನು ಕೇಳಿಸಿಕೊಳ್ಳಲು ಇಬ್ಬರಲ್ಲಿ ಒಬ್ಬರೂ ಇರಲಿಲ್ಲವಾದ್ದರಿಂದ ನಿರಾಶನಾಗಿ ಹಿಂದಿರುಗಿದ. ಅನತಿ ದೂರದಲ್ಲಿ ನಿಂತಿದ್ದ ಬೆಟ್ಟ ಇವನನ್ನು ಅನುಸರಿಸಿದ.

ಇಬ್ಬರೂ ಮುದುಕಿ ತೋರಿಸಿದ ಕಡೆಗೆ ಕಳ್ಳ ನೋಟ ಬೀರಿದಾಗ ಲಂಗದ ಹುಡುಗಿ ಹಿತ್ತಲ ಬಾಗಿಲಲ್ಲಿ ನಿಂತಿದ್ದನ್ನು ಕಂಡ. ಇವನು ಗಮನಿಸಿದ್ದು ಗೊತ್ತಾದೊಡನೆ ಅವಳು ಮೆಲ್ಲನೆ ಒಳಕ್ಕೆ ಸರಿದಳು.

ಕೆಂಪು ಹೆಂಚಿನ ಮನೆ ಸಾಧಾರಣವಾದದ್ದು, ಬೀಗ ಹಾಕಿತ್ತು. ಸುತ್ತ ನಿರ್ಜನವಾಗಿತ್ತು. ಸುತ್ತು, ಬಳಸಿ, ಕಿಡಿಕಿಗಳಿಂದ ಒಳಗಿಣಕಿದರು. ಒಳಗೆ ಕತ್ತಲಿತ್ತು. ಹಾಗೆಯೇ ವಾಪಾಸಾದರು. ಬರುವಾಗ ಶಿಖರಸೂರ್ಯನ ಕಳ್ಳನೋಟಗಳಿಗೆ ಹುಡುಗಿಯಾಗಲಿ, ಮುದುಕಿಯಾಗಲಿ ಸಿಕ್ಕಲಿಲ್ಲ. ಆದರೆ ಹಿತ್ತಲು ಮಾತ್ರ ಕಾಳಜಿಯಿಂದ ಬೆಳೆಸಿದ ಹೂಹಣ್ಣಿನ ಮರಗಳಿಂದ ಸುಂದರವಾಗಿತ್ತು.

ಬಿಳಿಮನೆ ದಾಟಿ ಬಂದ ಮೇಲೆ ಶಿಖರಸೂರ್ಯ "ಈ ಮನೆ ನಿನಗೆ ಗೊತ್ತ ಬೆಟ್ಟ?" ಎಂದು ಕೇಳಿದ.

"ಗೊತ್ತು ಒಡೆಯಾ. ಆ ಮುದಿ ಹೆಂಗಸು ಒಬ್ಬ ದೇವದಾಸಿ, ಹೆಸರು ಗುಣಶೀಲ. ಅವಳಿಗೆ ಮೂರು ಜನ ಮಕ್ಕಳು. ದೊಡ್ಡವ ಬದೆಗ, ರಾಜರಲ್ಲಿ ನೂರಾಳ್ಬಡೆಯ ದಂಡನಾಯಕ. ನಿಮ್ಮ ಭಂಟ ಸುಕ್ರನ ಗೆಣೆಕಾರ ಮತ್ತು ನಂಟ. ಸ್ವರ್ಣಲತೆ ಮತ್ತು ಆಗಲೇ ಲಂಗದ ಹುಡಿಗೆಯ ಕಂಡೆಯಲ್ಲ, ಇವರಿಬ್ಬರೂ ಒದೆಗನ ತಂಗಿಯರು. ಆ ಮುದಿ ಹೆಂಗಸು ಚಂಡೀದಾಸನ ಪ್ರೇಯಸಿ."

"ಚಂಡೀದಾಸ ಯಾರು?"

"ನೀನು ಬರುವ ಮುನ್ನ ಅವನೇ ಕನಕಪುರಿಯ ಜನಪ್ರಿಯ ವೈದ್ಯ. ಜೊತೆಗೆ ಮಳೆಯಾಳ ಮದ್ದುಮಾಟದ ವಾಮಾಚಾರಿ. ಚಿನ್ನ ಎಲ್ಲಿದ್ದರೂ ಮನಸ್ಸು ಮಾಡಿದರೆ ಅದು ತನ್ನಲ್ಲಿಗೇ ಬರುವಂತೆ ಮಾಡುತ್ತಿದ್ದ. ಧನಪಾಲ ಶೆಟ್ಟರ ಚಿನ್ನದ ಚೊಂಬು ತನ್ನಲ್ಲಿಗೇ ಬರುವಂತೆ ಮಾಡಿದ್ದ! ಜೊತೆಗೆ ಕಚ್ಚೆಹರಕ. ಇಂಥ ಪ್ರತಾಪಗಳಿಂದ ಬೇಸತ್ತ ಜನ ಅವನನ್ನು ಊರು ಬಿಟ್ಟು ಓಡಿಸಬೇಕೆಂದಾಗ ಪ್ರಧಾನಿಗೆ ಅವನಲ್ಲಿ ಆಸಕ್ತಿ ಮೂಡಿತು. ಇದೇ ಕೆಂಪು ಹೆಂಚಿನ ಮನೆಯಲ್ಲಿ ಕದ್ದು ಭೇಟಿಯಾಗುತ್ತಿದ್ದರು. ಕುಡಿದಾಗ ಅಮಲಿನಲ್ಲಿ

ಚಂಡೀದಾಸ ಪ್ರಧಾನಿಯ ಔದಾರ್ಯವನ್ನು ಹೊಗಳುತ್ತಿದ್ದ. ಪ್ರಧಾನಿಯಿಂದ ಯಥೇಚ್ಛ ಹಣ ಪಡೆದು ಮಂತ್ರ ತಂತ್ರಗಳಿಂದ ಬಡವಿ ಗುಣಶೀಲಳ ಮನ ಮರಳು ಮಾಡಿ ಅವಳ ಇಬ್ಬರೂ ಹುಡುಗಿಯರನ್ನು ವಿಷಕನ್ಯೆಯರನ್ನಾಗಿ ಮಾಡಿಬಿಟ್ಟ!

"ಒಂದು ದಿನ ಇದ್ದಕ್ಕಿದ್ದಂತೆ, ಇವತ್ತು ನೀನು ನೋಡಿದೆಯಲ್ಲ, ಲಂಗ ಹಾಕಿದ ಹುಡುಗಿ?-ಅವಳನ್ನು ನೋಡಿ "ಅಯ್ಯೋ ಕಂದಾ ನಿನಗೂ ವಿಷ ಹಾಕಿದೆನೇ? ನನ್ನಂಥಾ ಚಂಡಾಲ ಇನ್ನಿಲ್ಲ"ವೆಂದು ಅತ್ತು ಕರೆದು ಪಶ್ಚಾತ್ತಾಪ ಪಟ್ಟ. ಎಲ್ಲೆಲ್ಲಿಗೋ ಹೋಗಿ ಬೇಕಾದಷ್ಟು ವಿಷವಿದ್ಯೆ ಕಲಿತು ಬಂದು ಅವಳ ವಿಷ ತೆಗೆಯಲು ನೋಡಿದ. ಆಗಲಿಲ್ಲ. ಎಲ್ಲೋ ಮಾಯವಾಗಿ ಬಿಟ್ಟ. ಚಿನ್ನ ಶೋಧನೆಗಾಗಿ ಆಗಾಗ ವರ್ತಕರು ಅವನನ್ನು ಕರೆಸುವುದಂಟಂತೆ.

ಅದೇನಾದರಾಗಲಿ, ತಂಗಿಯರನ್ನ ವಿಷಕನ್ಯೆಯರನ್ನಾಗಿ ಮಾಡಿದ್ದು ಮೊದಮೊದಲು ಬದೆಗನಿಗೂ ತಿಳಿದಿರಲಿಲ್ಲ. ಯಾವಾಗಲೋ ಒಂದು ದಿನ ಗೊತ್ತಾಗಿ ಆ ಮನೆಯ ಸಹವಾಸ ತೊರೆದು ಮದುವೆಯಾಗಿ ಬೇರೆ ಬಂದು ಬಿಟ್ಟ.

"ಆ ದಿನ ಸ್ವರ್ಣಲತೆಯನ್ನು ಕರೆತಂದು ರಾಜರ ಕೋಣೆಯಲ್ಲಿ ಹೊಗಿಸಿದವನು ಪ್ರಧಾನಿಯ ಆಪ್ತ ಸೇವಕ. ಇದು ಸಾಮಾನ್ಯವಾಗಿ ರಾಜರಲ್ಲಿ ನಡೆದ ಲೈಂಗಿಕ ವ್ಯಾಪಾರವೆಂದು ನಾವಂದುಕೊಂಡೆವು. ಆದರೆ ನಮ್ಮ ಕಣ್ಣೆದುರಿನಲ್ಲೇ ನಮ್ಮ ರಾಜರು ಮರಣ ಹೊಂದಿದರಲ್ಲ, ನಮಗೆ ಆಘಾತವಾಯ್ತು. ಮೊದಮೊದಲು ಯಾಕೆ? ಏನು? ಎತ್ತ? ನಮಗೆ ತಿಳಿಯಲಿಲ್ಲ. ನಾವೂ ಅಷ್ಟೊಂದು ಕೋಪಾವಿಷ್ಟರಾಗಿದ್ದೆವು. ತನಿಖೆ ನಡೆದರೆ ಅದರ ತುದಿ ತನಗೇ ತಲುಪುವುದೆಂದು ಪ್ರಧಾನಿ ಸ್ವರ್ಣಲತೆಯನ್ನು ಕೊಲ್ಲಿಸುವ ವ್ಯವಸ್ಥೆ ಮಾಡಿದ. ಮಹಾರಾಣಿ, ಯುವರಾಜ ಮತ್ತು ಪ್ರಧಾನಿ ಈ ಮೂವರು ಎದುರಿನಲ್ಲಿಯೇ ಅವಳ ಅವಸಾನವಾಯಿತಂತೆ ಒಡೆಯಾ..."

ಈ ಕತೆಯನ್ನು ಬೆಟ್ಟನೂ ದುಃಖದಿಂದಲೇ ಹೇಳಿದ.

ಇಬ್ಬರೂ ಹಿಂದಿರುಗಿ ಮನೆಗೆ ಬಂದಾಗ ಐದು ತಾಸು ಹೊತ್ತೇರಿತ್ತು. ಮನೆಗೆ ಬಂದವನೇ ಅವಸರದಲ್ಲಿ ಊಟ ಮಾಡಿ ಕುದುರೆ ಹತ್ತಿ ಅರ್ಥಕೌಶಲನಲ್ಲಿಗೆ ಹೊರಟ. ಕೂಡಲೆ ಕುದುರೆ ನಿಲ್ಲಿಸಿ "ಬೆಟ್ಟಾ..." ಎಂದು ಕೂಗಿದ. ಬೆಟ್ಟ ಓಡಿಬಂದೊಡನೆ "ಸುಕ್ರನಿಗೆ ಬರಹೇಳಬೇಕಲ್ಲ" ಅಂದ. ಬೆಟ್ಟ ಬಾಗಿ "ಆಯ್ತು ಒಡೆಯಾ" ಅಂದ. ಶಿಖರಸೂರ್ಯ ಕುದುರೆ ಓಡಿಸಿದ.

ಸಾಂಸರ್ಗಿಕ ರೋಗದಂತೆ ಸುದ್ದಿ ಹಬ್ಬಿ ಇಡೀ ಕನಕಪುರಿ ಸ್ತಬ್ಧವಾಗಿತ್ತು. ಪೇಟೆಯ ಮೂಲೆಮೂಲೆಗಳಲ್ಲಿ, ಅಂಗಡಿಗಳಲ್ಲಿ, ಓಣಿಗಳ ಸಂದಿಗೊಂದಿಗಳಲ್ಲಿ ಜನ ಸಣ್ಣ ಸಣ್ಣ ಗುಂಪುಗಳಾಗಿ ಪಿಸುದನಿಯಲ್ಲಿ ಕದ್ದಾಡಿ, ಪಶ್ಚಾತ್ತಾಪ ಪಡುವಂತೆ ಇಲ್ಲವೆ ಕೋಪತಾಪಗಳನ್ನು ಅಭಿವ್ಯಕ್ತಿಸುವಂತೆ ಮಾತಾಡುತ್ತಿದ್ದರು. ಇಡೀ ಕನಕಪುರಿ ಅವಮಾನದಿಂದ ಕುದಿಯುತ್ತಿತ್ತು. ಅವರ ಸೈನ್ಯಶಕ್ತಿಯ ಅಹಂಕಾರಕ್ಕೆ, ಶ್ರೀಮಂತಿಕೆಯ ಧಿಮಾಕಿಗೆ, ಐವತ್ತಾರು ದೇಶಗಳಲ್ಲಿ ಶ್ರೇಷ್ಠರು ತಾವೆಂಬ, ಅಜೇಯರು ತಾವೆಂಬ ಜಂಬಗಳಿಗೆ ಗಾಯವಾಗಿತ್ತು. ಬಿಳಿಗಿರಿಯಂಥ ಕ್ಷುದ್ರ ದೇಶಕ್ಕೆ ಈ ಧೈರ್ಯವೇ? ಎಂದು ಮಕ್ಕಳೂ ಮಾತಾಡಿಕೊಂಬಂಥ, ಸ್ತ್ರೀಯರೂ ಕದ್ದಾಡುವಂಥ ವಿಷಯವಾಯಿತು. ಕನಕಪುರಿಯ ಪ್ರತಿಯೊಬ್ಬ ಪ್ರಜೆ ವಯಸ್ಸಿನ ಭೇದವಿಲ್ಲದೆ ತನತನಗೆ ತಿಳಿದ ದಾರಿಯಿಂದ ಬಿಳಿಗಿರಿಯನ್ನ ಧೂಳೀಪಟ ಮಾಡುವ ಕನಸು ಕಾಣುತ್ತಿದ್ದ. ಆದರೆ ಯುವರಾಜನ ಅಮೂಲ್ಯ ಜೀವ ಬಿಳಿಗಿರಿಯ ಕೈಯಲ್ಲಿತ್ತು. ಸ್ವಲ್ಪ ಹೆಚ್ಚುಕಮ್ಮಿಯಾದರೂ ಅವನ ಜೀವಕ್ಕೆ ಅಪಾಯವಿದ್ದುದರಿಂದ ಎಲ್ಲರ ಕಲ್ಪನೆ ಅಲ್ಲಿಗೇ ಬಂದು ನಿಲ್ಲುತ್ತಿತ್ತು.

ಶಿಖರಸೂರ್ಯ ಸೀದಾ ಅರಮನೆಗೆ ಬಂದ. ರಸ್ತೆ ಮತ್ತು ಪೇಟೆಯಲ್ಲಿ ಕುದುರೆಗಾಡಿಗಳಾಗಲಿ, ಎತ್ತಿನ ಗಾಡಿಗಳಾಗಲಿ ಇರಲಿಲ್ಲ. ಅರಮನೆ ಬಿಕೋ ಎನ್ನುತ್ತಿತ್ತು. ಚಡಪಡಿಕೆಯಿಂದಾಗಿ ಚಲನಶೀಲವಾಗಿದ್ದವರು ಮಹಾರಾಣಿ ಮತ್ತು ಅರ್ಥಕೌಶಲ ಇಬ್ಬರೇ. ಮಹಾರಾಜ ಕಂಗಾಲಾಗಿ ತಲೆಯ ಮೇಲೆ ಕೈಹೊತ್ತು ತನ್ನ ಕೋಣೆಯಲ್ಲಿ ಕುಳಿತುಬಿಟ್ಟಿದ್ದ. ಸೇವಕರಿಗೆ ಅವನನ್ನು ಮಾತಾಡಿಸುವ ಅಥವಾ ಉಪಚರಿಸುವ ಧೈರ್ಯವಿರಲಿಲ್ಲ.

ಶಿಖರಸೂರ್ಯ ಬಂದಾಗ ಮಹಾರಾಣಿ ಒಳಗಿದ್ದಳು. ಹಜಾರದಲ್ಲಾಗಲೇ ಅರ್ಥಕೌಶಲ, ಪರಮಶೆಟ್ಟಿ ಮತ್ತು ಸೇನಾಪತಿ ಕೂತಿದ್ದರು. ಯಾರೊಬ್ಬರ ಮುಖದ ಮೇಲೂ ಕಳೆಯಿರಲಿಲ್ಲ. ಅರ್ಥಕೌಶಲ ಹೆಣದಂತೆ ಕಾಣುತ್ತಿದ್ದ. ಈತನಕ ಪರಸ್ಪರ ಮುಖ ನೋಡದೆ ನೆಲವನ್ನು, ತಪ್ಪಿದರೆ ಮಹಾರಾಣಿಯ ಕೋಣೆಯ ಬಾಗಿಲನ್ನು ಟಕಮಕ ನೋಡುತ್ತಿದ್ದ ಎಲ್ಲರೂ ಶಿಖರಸೂರ್ಯ ಬಂದೊಡನೆ ತುಸು ಕಳೆಕಳೆಯಾದರು. ಎಲ್ಲರೂ ಮೊದಲೇ ಮಾತಾಡಿಕೊಂಡು ಒಂದು ನಿರ್ಧಾರಕ್ಕೆ ಬಂದ ಹಾಗೆ, ಇವನಿಗಾಗಿಯೇ ಕಾಯುತ್ತಿರುವಂತೆ ಕಂಡಿತು. ಸೇನಾಪತಿಯ ಪಕ್ಕದಲ್ಲಿದ್ದ ಪೀಠದಲ್ಲಿ ಕುಳಿತು ಯಾರಾದರೂ ಉತ್ತರ ಕೊಡಲೆಂದು “ಏನಾದರೂ ಹೊಸ ಸುದ್ದಿ?” ಎಂದು ಕೇಳಿ ಉತ್ತರಕ್ಕಾಗಿ ಒಬ್ಬೊಬ್ಬರನ್ನೇ ನೋಡಿದ. ಯಾರೂ ಉತ್ತರಿಸಲಿಲ್ಲ. ಕೊನೆಗೆ ಅರ್ಥಕೌಶಲನೇ ಜೋಲುಮುಖ ಹಾಕಿ ಏನು ಹೇಳುವನೋ ಎಂಬ ಆತಂಕದಿಂದಲೇ ಪೀಠದಲ್ಲಿದ್ದುಕೊಂಡೇ ಮುಂದೆ ಬಾಗಿ ಶಿಖರಸೂರ್ಯನಿಗೆ ಹೇಳಿದ:

“ಈ ಸಂದರ್ಭದಿಂದ ಕನಕಪುರಿಯನ್ನು ನೀನೇ ಪಾರುಮಾಡಬೇಕು ಮಿತ್ರಾ!”

“ಅಂದರೆ?”

“ಸಂಧಾನಕ್ಕಾಗಿ ಸೇನಾಪತಿಯ ಜೊತೆ ನೀನು ಬಿಳಿಗಿರಿಗೆ ಹೋಗಬೇಕೆಂದು ಮಹಾರಾಣಿಯವರ ಅಪೇಕ್ಷೆ.”

“ನಮ್ಮದೂ ಕೂಡ”

ಎಂದು ಪಟ್ಟಣಶೆಟ್ಟಿ ನಡುವೆ ಬಾಯಿ ಹಾಕಿ ಎದ್ದು ಹೋಗಿ ಶಿಖರಸೂರ್ಯನ ಕೈಹಿಡಿದುಕೊಂಡು,

“ನಿನ್ನ ಮೇಲೆ ವರ್ತಕ ಸಮಾಜಕ್ಕೆ ನಂಬಿಕೆ ಇದೆ. ನೀನದನ್ನು ಹುಸಿ ಮಾಡಬಾರದು.”

ಎಂದು ಮೆಲ್ಲನೆ ಕೈ ಹಿಸುಕಿದ. ಪರಮಶೆಟ್ಟಿ ಕೂತಲ್ಲೇ,

“ಹೌದು ರಾಜವೈದ್ಯನೇ”

ಎಂದು ವಿನಂತಿಸಿಕೊಂಡ. ಸೇನಾಪತಿ ವಿಶ್ವಾಸದಿಂದ ಇವನನ್ನೇ ನೋಡುತ್ತಿದ್ದ. ಆದರೆ ಸೇನಾಪತಿಯನ್ನು ಜೊತೆಯಲ್ಲಿ ಸೇರಿಸಿಕೊಳ್ಳಲು ಈತನಿಗೆ ಮನಸ್ಸಿರಲಿಲ್ಲ. ಆ ಬಗ್ಗೆ ಹೆಚ್ಚಿಗೆ ತಲೆ ಕೆಡಸಿಕೊಳ್ಳದೆ ಮುಂದಿನ ಕಾರ್ಯಕ್ರಮದ ಬಗ್ಗೆ ಕೇಳಬೇಕೆಂಬಷ್ಟರಲ್ಲಿ ಧುತ್ತೆಂದು ಮಹಾರಾಣಿ ಬಂದಳು. ಎಲ್ಲರೂ ಎದ್ದುನಿಂತರು. ಮಹಾರಾಣಿ ಕೂತು,

“ವಿಷಯ ಹೇಳಿದೆಯ ಪ್ರಧಾನಿ?” ಎಂದಳು.

“ವಿವರಗಳನ್ನು ಚರ್ಚಿಸಬೇಕು ಮಹಾರಾಣಿ”

“ಈ ಪ್ರಧಾನಿಯ ಮಾತೇ ಹೀಗೆ. ನಿನಗೆ ವಿಷಯ ಅರ್ಥವಾಯಿತ ರಾಜವೈದ್ಯನೇ?”

ಬಾಗಿಕೊಂಡೇ “ಅರ್ಥವಾಯಿತು ಮಹಾರಾಣಿ” ಎಂದು ಶಿಖರಸೂರ್ಯ.

“ಈಗ ನೀನೇ ಹೇಳು. ನಿನ್ನಿಂದ ಈ ಕೆಲಸ ಆದೀತ? ಇಲ್ಲವ?”

ಬಾಗಿದ್ದ ಶಿಖರಸೂರ್ಯ ಹಣೆಯ ಕಡೆಯಿಂದ ಮಹಾರಾಣಿಯನ್ನು ನೋಡಿದ. ಕೂದಲು ಕೆದರಿ ಕಣ್ಣ ಸುತ್ತ ಕಪ್ಪು ವಲಯಗಳು ಮೂಡಿ ನೋಡಿದವರು ಭಯ ಬೀಳುವಂತೆ ವಿಕಾರವಾಗಿದ್ದಳು.

"ತಾವು ತಮ್ಮ ವೈದ್ಯನನ್ನು ನಂಬಬಹುದು ಮಹಾರಾಣಿ"

ತಕ್ಷಣ ಮಹಾರಾಣಿ ಕಿರಿಚಿ "ಏನು ಹಾಗಂದರೆ" ಅಂದಳು.

"ಯುವರಾಜರನ್ನು ಕೂದಲು ಕೊಂಕದ ಹಾಗೆ ಹಿಂದಿರುಗಿ ತರುತ್ತೇನೆ ಮಹಾರಾಣಿ."

"ಚಿಕ್ಕದಾಗಿ ಹೇಳು ಎಷ್ಟು ದಿನ, ವಾರ ಮುದ್ದತು ಬೇಕು?"

"ಎರಡು ವಾರ ಮಹಾರಾಣಿ."

"ಆಯ್ತು!"

ಎಂದು ಅಸಹಜ ಎತ್ತರದ ದನಿಯಲ್ಲಿ ಸಮಾಧಾನ ಮತ್ತು ದುಃಖ ಬೆರೆತ ದನಿಯಲ್ಲಿ ಹೇಳಿ ಎದ್ದು ಹಸನ್ಮುಖದಿಂದ ಶಿಖರಸೂರ್ಯನನ್ನು ಒಂದೆರಡು ನಿಮಿಷಗಳ ಕಾಲ ನೋಡುತ್ತ ಹಾಗೇ ನಿಂತುಕೊಂಡಳು. ಮೂಗಿನ ಎರಡೂ ಬದಿಯಿಂದ ಕಣ್ಣೀರು ಸುರಿಯುತ್ತಿತ್ತು. ಗದ್ಗದ ಕಂಠದಲ್ಲಿ "ನಿನಗೆ ಜಯವಾಗಲಿ ರಾಜವೈದ್ಯನೇ" ಎಂದು ಹೇಳಿ ಕಣ್ಣೀರು ಮಿಡಿಯುತ್ತ ಒಳಗೆ ಹೋದಳು.

ಅರ್ಥಕೌಶಲ ಶಿಖರಸೂರ್ಯನನ್ನು ತಬ್ಬಿಕೊಂಡು ಅವನೂ ಕಣ್ಣೀರು ಮಿಡಿದ.

ಮಾರನೇ ಬೆಳಿಗ್ಗೆಯೇ ಸುಕ್ರ ಬಂದ. ನ್ಯಾರೇ ಆದ ಮೇಲೆ ಸುಕ್ರನೊಬ್ಬನನ್ನೇ ಅಂತರಂಗಕ್ಕೆ ಕರೆದೊಯ್ದು ಎದುರಿಗೆ ಕೂರಿಸಿಕೊಂಡು ಇಡೀ ಸಂದರ್ಭವನ್ನು ತಕ್ಕಡಿಯಲ್ಲಿಟ್ಟು ತೂಗಿದಂತೆ ಪ್ರಶ್ನೆಗಳನ್ನು ಹೇಳಿ ಕೇಳಿದ. ಅಧ್ಯಯನ ಮಾಡಿದ ಮೇಲೆ ಸುಕ್ರ ಹೇಳಿದ:

"ನೀನಾಗಿ ಅವಸರ ಮಾಡಬೇಡ ನನ್ನೊಡೆಯಾ. ಬಿಳಿಗಿರಿಯಿಂದ ಏನೇನು ಸಂದೇಶಗಳು ಬರುತ್ತವೋ ನೋಡ್ತಿರೋಣ. ಬಿಳಿಗಿರಿರಾಯರು ಕನಕಪುರಿಯ ವೈರಿಗಳು. ನಿನಗಲ್ಲವಲ್ಲ? ಚಿಕ್ಕಮ್ಮಣ್ಣಿ ಈಗಲೂ ಬಿಳಿಗಿರಿರಾಯರಿಗೆ ತಂಗಿಯೇ; ಆದ್ದರಿಂದ ಕರುಳಿನ ಮಿಡಿತ ಇದ್ದೇ ಇರುತ್ತದೆ. ಚಿಕ್ಕಮ್ಮಣ್ಣಿಯ ಪರವಾಗಿ ಯಾರಾದರೂ ಒಬ್ಬ ಯೋಗ್ಯನನ್ನು ಬಿಳಿಗಿರಿಗೆ ಅಟ್ಟಬಹುದಲ್ಲ? ಬಿಳಿಗಿರಿಯವರು ಒಲಿದರೆ ನಮಗೆ ಅನುಕೂಲವೇ: ಒಲಿಯದಿದ್ದರೂ ಅನುಕೂಲವೇ! ಯಾಕಂತೀಯೋ? ಪರಿಸ್ಥಿತಿಯನ್ನು ಅಂದಾಜು ಮಾಡುವುದಕ್ಕೆ ಸ್ವಲ್ಪ ಸಮಯ ತಗೊಂಡಂಗಾಯ್ತು."

ಇದಕ್ಕಿಂತ ಉತ್ತಮ ಸಲಹೆ ಇನ್ನಿಲ್ಲವೆನ್ನಿಸಿತು. ಹಾಗೆಯೇ 'ರಾಯಭಾರಕ್ಕೆ' ಸುಕ್ರನಿಗಿಂತ ಉತ್ತಮರ್ಯಾರೂ ಹೊಳೆಯಲಿಲ್ಲ.

"ನಿನಗಿಂತ ಯೋಗ್ಯ ಮತ್ತು ನಂಬಿಕಸ್ಥ ನನಗ್ಯಾರಿದ್ದಾರೆ ಸುಕ್ರ? ಇದು ರಕ್ತ ಸಂಬಂಧವನ್ನು ಜೋಡಿಸುವ ಕೆಲಸ. ಹುಷಾರಾಗಿ ಮಾಡಬೇಕು. ಏನಂತಿ?"

ಸುಕ್ರ ಸ್ವಲ್ಪ ಹೊತ್ತು ಸುಮ್ಮನೇ ಕೂತ. ಶಿಖರಸೂರ್ಯ ಮುಂದುವರೆಸಿದ-

“ನೀನು ಬಿಳಿಗಿರಿಯ ಭಂಟನಾಗಿದ್ದವ. ಇಲ್ಲಿಯ ಸಂದರ್ಭವನ್ನು ಒಲ್ಲವ. ಚಿಕ್ಕಮ್ಮಣ್ಣಿ ಅವರ ಮನೆ ಮಗಳು. ನಾನು ಚಿಕ್ಕಮ್ಮಣ್ಣಿಯ ಅಳಿಯ, ಅಂದರೆ ಈಗಿನ ರಾಯರಿಗೂ ಅಳಿಯ. ಈಗ ಯುವರಾಜನನ್ನು ಕರೆತರುವ ಜವಾಬ್ದಾರಿ ನನ್ನ ಮೇಲೆ ಬಿದ್ದಿದೆ.”

“ನೀ ಹೇಳಿದ್ದೂ ಬರೋಬ್ಬರಿ ಒಡೆಯಾ. ಯಾವುದಕ್ಕೂ ಒಬ್ಬ ರಾಯಭಾರಿಯನ್ನ ಬಿಳಿಗಿರಿಗೆ ಕಳಿಸೋದು ಒಳ್ಳೇದು ಅಂತ ಪ್ರಧಾನಿಗೆ ಹೇಳಿರು. ಅವನ ಮನಸ್ಸಿನಲ್ಲೂ ಯಾರಾದರೂ ಇರಬಹುದು. ಈ ಮಧ್ಯೆ ಚಿಕ್ಕಮ್ಮಣ್ಣಿಯ ಜೊತೆಗೂ ಮಾತಾಡೋಣ.”

ಇದೇ ಸರಿಯೆಂದು ಶಿಖರಸೂರ್ಯ ಅರ್ಥಕೌಶಲನಲ್ಲಿಗೆ ಹೋದ.

ಅರ್ಥಕೌಶಲ ಮನೆಯಲ್ಲಿರಲಿಲ್ಲ. ಊರಾಚೆಯ ಶಸ್ತ್ರಾಭ್ಯಾಸದ ಬಯಲಿನಲ್ಲಿ ಇರುವನೆಂದು ಗೊತ್ತಾಗಿ ಅಲ್ಲಿಗೇ ಹೋದ. ಅಲ್ಲಿ ನೋಡಿದರೆ ಆಗಲೇ ಸೇನಾಪತಿ ಬಲವಂತ ಪರವೂರುಗಳಲ್ಲಿದ್ದ ಭಂಟರನ್ನು ಕರೆಸಿ ತೀವ್ರವಾದ ಶಸ್ತ್ರಾಭ್ಯಾಸ ಮತ್ತು ಅಣಕಯುದ್ಧವನ್ನು ಸುರು ಮಾಡಿಸಿಯೇ ಬಿಟ್ಟಿದ್ದ. ಬದೆಗನಿಗೂ ಕರೆ ಹೋಗಿ ಬಂದಿದ್ದ. ಇಡೀ ದಂಡಿನಲ್ಲಿ ಬಲವಂತನ ತರುವಾಯ ಬದೆಗನನ್ನೇ ಅರ್ಥಕೌಶಲ ಮುಂತಾದವರು ವಿಶೇಷವಾಗಿ ಕಾಣುತ್ತಿದ್ದರು. ಶಿಸ್ತು, ಕವಾಯತು ಮತ್ತು ಮಲ್ಲಯುದ್ಧ ತರಬೇತಿಯಲ್ಲಿ ಅವನನ್ನು ಬಿಟ್ಟರಿನ್ನಿಲ್ಲವೆಂಬ ಖ್ಯಾತಿಯಿತ್ತು ಅವನಿಗೆ. ಯುದ್ಧಗಳಾದಾಗ ವಣಿಜರು ಪ್ರತ್ಯೇಕವಾಗಿ ಕಾಣಿಕೆ ನೀಡಿ ಬದೆಗನಿಗೆ ಗೌರವ ತೋರಿಸಿದ್ದೂ ಇದೆ. ಆತ ಬಯಲಿನಂಚಿಗೆ ಇರುವ ಗರಡೀ ಮನೆಯಲ್ಲಿ ತನ್ನ ಭಂಟರಿಗೆ ತರಬೇತಿ ಕೊಡುವಲ್ಲಿ ಅರ್ಥಕೌಶಲನಿರುವನೆಂದು ಕೇಳಿ ಅಲ್ಲಿಗೇ ಹೋದ.

ಸುಮಾರು ಹತ್ತು ಜನ ಯುವಕರಿಗೆ ಬದೆಗ ಮಲ್ಲಯುದ್ಧ ಹೇಳಿಕೊಡುತ್ತಿದ್ದ. ಒಬ್ಬಿಬ್ಬರು ಜೋಡಿಯಾಗಿ ಅಭ್ಯಾಸದ ಹೋರಾಟ ನಡೆಸಿದ್ದರು. ಬದೆಗ ಆಗಾಗ ಒಂದೊಂದು ಜೋಡಿಯ ಹತ್ತಿರ ಹೋಗಿ ತಿದ್ದುತ್ತಿದ್ದ; ಹೇಳಿಕೊಡುತ್ತಿದ್ದ. ಇಲ್ಲವೆ ತಾನೇ ಮಾಡಿ ತೋರಿಸುತ್ತಿದ್ದ. ಅವರ ಆಚೆ ತುದಿಯಲ್ಲಿ ನಿಂತಿದ್ದ ಅರ್ಥಕೌಶಲ ಶಿಖರಸೂರ್ಯನ ನೋಡಿ ಇಲ್ಲಿಗೇ ಬಂದ. ಮಲ್ಲರು ಇಬ್ಬರಿಗೂ ವಂದನೆ ಸಲ್ಲಿಸಿ ಅಭ್ಯಾಸದಲ್ಲಿ ತೊಡಗಿದರು.

ಅರ್ಥಕೌಶಲನ ಜೊತೆಗೆ ಪಿಸುದನಿಯಲ್ಲಿ ವಿಚಾರಿಸಿದಾಗ ಬಿಳಿಗಿರಿಯ ಹಳೆಯ ಸಂದೇಶವೇ ಬರವಣಿಗೆಯ ರೂಪದಲ್ಲಿ ಬಂದಿರುವುದು ಗೊತ್ತಾಯಿತು. ಸದರಿ ಬರವಣಿಗೆಯನ್ನ ನಂಬುವುದಕ್ಕೆ ಹ್ಯಾಗೋ ಹಾಗೆ ನಂಬದಿರುವುದಕ್ಕೂ ಕಾರಣಗಳಿದ್ದವು. ಅರ್ಥಕೌಶಲನೇ ನಂಬಿದ್ದ. ಅವನ ಅನುಭವ ಆಳವಾಗಿರುವುದರಿಂದ ಅವನನ್ನು ನಂಬದಿರುವುದೂ ಕಷ್ಟವೆ.

ಬಲವಂತನಾಗಲೇ ಸೇನೆಗೆ ಕವಾಯತು ಸುರುಮಾಡಿದ್ದನ್ನು ನೋಡಿ, ಬದೆಗನೂ ಸಿಡಿತಲೆ ಮದ್ದಿನ ಗುಂಡು ಆಯುಧಗಳನ್ನು ಎಣಿಕೆ ಮಾಡಿ ಜೋಡಿಸಿಟ್ಟುಕೊಂಡಿದ್ದಲ್ಲದೆ ಈ ಹಿಂದೆಯೇ ದೊಡ್ಡ ಚಕ್ರಗಳ ಎರಡು ವಿಶೇಷ ಗಾಡಿಗಳನ್ನು ಬಡಿಗರಿಂದ ಮಾಡಿಸಿದ್ದ. ಅಲ್ಲದೆ ನಿಖರವಾಗಿ ಗುರಿ ಹಿಡಿದು ಸಿಡಿತಲೆಗಳನ್ನು ಸಿಡಿಸಲು ಗಾಡಿಗಳಲ್ಲಿದ್ದ ಯಂತ್ರಗಳಿಗೆ ಉಕ್ಕಿನ ಉದ್ದ ನಳಿಕೆಗಳನ್ನು ಜೋಡಿಸಿ ತಯಾರು ಮಾಡಿಕೊಂಡಿದ್ದ. ಅವುಗಳ ಕಾರ್ಯ ನಿರ್ವಹಣೆಯನ್ನು ತಿಳಿಸಿಕೊಡಲು ಚೋಳದೇಶದ ಒಬ್ಬ ಕಮ್ಮಾರ ಬಂದಿದ್ದ. ಪ್ರಧಾನಿ ಸಿಡಿತಲೆಗಳ ಬಗ್ಗೆ ಕೇಳಿದ್ದೇ ತಡ ಕಮ್ಮಾರನೊಂದಿಗೆ ಪ್ರಧಾನಿಯನ್ನು ದೊಡ್ಡಗಾಲಿಯ ಗಾಡಿಗಳ ಬಳಿಗೆ ಕರೆದೊಯ್ದು. ಶಿಖರಸೂರ್ಯ ಆ ಕಡೆ ಹೋಗಿ ಅನತಿ ದೂರದಲ್ಲಿ ನಡೆಯುತ್ತಿದ್ದ ಮಲ್ಲಯುದ್ಧದ ಅಭ್ಯಾಸವನ್ನೂ, ಆಗಾಗ ಬದೆಗನನ್ನೂ ನೋಡುತ್ತ ನಿಂತ.

ಬದೆಗ ಕಟ್ಟುಮಸ್ತಾದ ಮೈಕಟ್ಟಿನ, ಗಟ್ಟಿಮುಟ್ಟ ಆರಡಿ ಎತ್ತರದ ಆಸಾಮಿ, ಚೌರಸಾಕಾರದ ಭುಜಗಳು, ಹೋರಿಯಂಥ ಹಿಣಿಲು ಬಂದ ಕತ್ತು, ಚಿಕ್ಕ ತಲೆಯಲ್ಲಿ ಗುಂಗುರುಕೂದಲು, ಮುಖದ ತುಂಬ ಮೈಲಿ ಕಲೆಗಳಿದ್ದ ವಿಕಾರ ಮುಖದಲ್ಲಿ ದೊಡ್ಡ ಮೂಗಿನ ಕೆಳಗೆ ಜೊಂಡು ಮೀಸೆಯಿದ್ದವು. ಆದರೆ ನಕ್ಕಾಗ ಕಾಣಿಸುವ ಮುತ್ತಿನ ಸಾಲಿನಂಥ ಬಿಳಿಹಲ್ಲುಗಳಿಂದಾಗಿ ಮುಖದಲ್ಲೊಂದು ಆಕರ್ಷಣೆ ಮತ್ತು ನಂಬಿಕೆಯನ್ನು ಪ್ರೇರಿಸುವ ಕಳೆ ಇತ್ತು. ಆದರೆ ಅವನ ಆಳವಾದ ಕಣ್ಣುಗಳನ್ನು ತಿಳಿಯಲಾಗುತ್ತಿರಲಿಲ್ಲ. ಉದ್ದವಾದ ತೋಳುಗಳ

ತುದಿಗೆ ಚೌರಸಾಕಾರದ ಹಸ್ತಗಳಿಂದಾಗಿ ಮಹಾ ಒರಟನಂತೆ ಕಂಡರೂ ಒಟ್ಟಾರೆ ನಂಬಿಗಸ್ಥ, ಸಜ್ಜನ, ದಯಾಳು ಎಂದು ನೋಡಿದವರಲ್ಲಿ ಭಾವನೆ ಹುಟ್ಟಿಸುವವನು.

ಪ್ರಧಾನಿ ಮತ್ತು ರಾಜವೈದ್ಯನ ಮಾತುಕತೆ ನಡೆದಾಗ ಬದೆಗ ವಿಶೇಷವಾಗಿ ಶಿಖರಸೂರ್ಯನನ್ನೇ ಗಮನಿಸುತ್ತಿದ್ದ. ಬದೆಗನ ಚಾಣಾಕ್ಷತನ ಮತ್ತು ಯುದ್ಧ ನಿರ್ವಿವಾದವಾದುವೆಂದು, ತಾನು ಊಹಿಸಿದ್ದಕ್ಕಿಂತ ಹೆಚ್ಚು ಚೂಟಿ ಎಂದು ಶಿಖರಸೂರ್ಯನಿಗೆ ಖಾತ್ರಿಯಾಯಿತು. ಆತ ಒತ್ತು ಕೊಟ್ಟು ಮೂರು ಸಂಗತಿಗಳನ್ನು ಕೇಳಿದ: "ನನಗೆ ಎಂಟಾಳು, ನಿಂತುಕೊಳ್ಳೋದಕ್ಕೆ ಆಯಕಟ್ಟಿನ ಜಾಗ ಕೊಟ್ಟು ಸರಿಯಾದ ಗುರಿ ತೋರಿಸಿ ಹಿಂದೆ ಸರಿಯಿರಿ. ಆಮೇಲೆ ನನ್ನ ಕೈ ನೋಡಿರಿ." ಅವನ ಉರಿಯುವ ಜಂಬಕ್ಕೆ ಎಣ್ಣೆ ಸುರಿದಂತೆ ಶಿಖರಸೂರ್ಯ ಮೆಚ್ಚುಗೆಯಿಂದ ಮುಗುಳುನಗುತ್ತಿದ್ದ. ಸಿಡಿತಲೆಯ ಬಗೆಗಿನ ಅವನ ತಿಳುವಳಿಕೆ ಮತ್ತು ಪರಿಣತಿ ಆಸುಪಾಸು ರಾಜ್ಯಗಳಲ್ಲಿಯೇ ಯಾರೊಬ್ಬರಿಗೂ ಇರಲಿಲ್ಲವೆಂದು ಅರ್ಥಕೌಶಲನೇ ಒಪ್ಪಿದ್ದ. ಯಾರು ಎಂಥ ಸಿಡಿತಲೆ ಮಾಡಬಲ್ಲರು, ಅವುಗಳ ಗರಿಷ್ಠ ಪ್ರಯೋಜನವೇನು? ಎಂಬ ಬಗ್ಗೆ ಖಚಿತ ಜ್ಞಾನ ಅವನಿಗಿದ್ದದ್ದೂ ಅವನ ಹೆಚ್ಚುಗಾರಿಕೆ. ಸಣ್ಣ ಸಿಡಿತಲೆಯಿಂದ ದೊಡ್ಡ ಅಪಾಯಗಳನ್ನು ಹ್ಯಾಗೆ ಮಾಡುವುದೆಂಬ ವಿದ್ಯೆಯ ಜೊತೆಗೆ ವೈರಿಗಳ ಸಿಡಿತಲೆಗಳನ್ನು ಧ್ವಂಸ ಮಾಡುವ ವಿಶಿಷ್ಟ ವಿದ್ಯೆಯೂ ಅವನಿಗೆ ತಿಳಿದಿತ್ತು. ಆದ್ದರಿಂದಲೇ ಅನೇಕರು ಅವನ ಗುರಿಯ ಮೇಲೆ ಪಣ ಕಟ್ಟುತ್ತಿದ್ದ ಸಂಗತಿ ಸುಳ್ಳಲ್ಲವೆನಿಸಿತು.

ಇಲ್ಲಿ ಬದೆಗ ತನ್ನೆಲ್ಲ ವಿದ್ಯೆಯ ಪ್ರದರ್ಶನದಿಂದ ಶಿಖರಸೂರ್ಯನನ್ನು ಪ್ರಭಾವಿಸಲು ಹವಣಿಸುವಂತಿತ್ತು. ಈಗ ಅರ್ಥಕೌಶಲ ಕೇಳಿದ:

"ಆಯಿತಯ್ಯ, ಇವನ್ಯಾರು ಗೊತ್ತ?"

-ಎಂದು ಶಿಖರಸೂರ್ಯನನ್ನು ತೋರಿಸಿದ.

"ರಾಜ್ಯವೈದ್ಯರು ಯಾರಿಗೆ ಗೊತ್ತಿಲ್ಲ ಬುದ್ಧಿ? ಅವರಿಗೆ ನಾವೂ ಗೊತ್ತು. ಕೇಳಿ ಬೇಕಾದರೆ…."

-ಎಂದು ಹೇಳಿ ಸಂತೋಷದಿಂದ ಮೈಲಿ ಕಲೆಗಳ ಕಪ್ಪು ಮುಖದಲ್ಲಿ ಬಿಳಿನಗೆ ನಗುತ್ತ ಗೌರವದ ನೋಟದಿಂದ ಶಿಖರಸೂರ್ಯನನ್ನು ನೋಡಿದ. ಅರ್ಥಕೌಶಲ ಗೊಂದಲಗೊಂಡಿದ್ದು ಸ್ಪಷ್ಟವಿತ್ತು. ತಕ್ಷಣ ಶಿಖರಸೂರ್ಯ ಸಂದರ್ಭವನ್ನು ನಿಭಾಯಿಸಲು ಮುಂದೆ ಬಂದು,

"ಹೌದು ಪ್ರಧಾನರೆ, ನಾರು ಬೇರು ಹುಡುಕುತ್ತಿದ್ದಾಗ ಇವನ ಪೈಕಿ ಒಬ್ಬ ಮೂಗಿ ಹುಡುಗಿ ಭೇಟಿಯಾದಳು. ಪಾಪ ಇಂಥ ಮುಗ್ಧ ಹುಡುಗಿಯನ್ನು ವಿಷಕನ್ಯೆ ಮಾಡಿದ್ದಾರಲ್ಲ ಅಂತ ಕೆಡುಕೆನಿಸಿತು."

ಎಂದು ಹೇಳಿ. ಇಬ್ಬರಿಗೂ ಆಘಾತ ಕೊಟ್ಟ. ಅರ್ಥಕೌಶಲ ಒಳಗೊಳಗೆ ಭಯಕಂಪಿತನಾಗಿ ಅವಸರದಲ್ಲಿ ಕೇಳಿದ:

"ವಿಷಕನ್ಯೆ ಅಂತ ನಿನಗವರು ಹೇಳಿದರೆ?"

"ಇಲ್ಲ"

"ಮೂಗಿ ಅಂತ?"

"ಅದನ್ನೂ ಹೇಳಲಿಲ್ಲ"

"ಮತ್ತೆ ನಿನಗಿವೆಲ್ಲ ಹ್ಯಾಗೆ ಗೊತ್ತಾಯ್ತು?"

“ನಾನು ನಿಮ್ಮ ರಾಜವೈದ್ಯನಲ್ಲವೆ ಪ್ರಧಾನರೆ? ನನ್ನ ವೈದ್ಯ ವಿದ್ಯೆಗೆ ಸವಾಲಾಗಬಲ್ಲ ರೋಗಿ ಅವಳು.”

ಬದೆಗನಿಗೆ ತಡೆಯಲಾಗಲಿಲ್ಲ.

“ಅಂದರೆ ನೀವು ಅವಳ ವಿಷವನ್ನ ತೆಗೆಯಬಲ್ಲೆ ಅಂತೀರಾ ಬುದ್ಧಿ?”

“ಕೊಂಚ ಕಡಿಮೆ ಮಾಡಬಹುದು.”

ಇಬ್ಬರಿಗೂ ಇನ್ನೊಂದು ಆಘಾತವಾಯ್ತು. ಇವನು ಕಡಿಮೆ ನೀರಿನಲ್ಲಿ ಮುಳುಗೋನಲ್ಲ ಎಂದು. ಆದರೆ ಆಶ್ಚರ್ಯ ವ್ಯಕ್ತಪಡಿಸುತ್ತ ಕೂರುವ ಸಮಯವಿದಲ್ಲ ಎಂದೂ ಚುರುಕಾಗಿ ಗ್ರಹಿಸಿ ಅರ್ಥಕೌಶಲ ಕೇಳಿದ:

“ಅಲ್ಲಿ ಇನ್ನೂ ಏನೇನು ಕಂಡೆ ರಾಜವೈದ್ಯನೇ?”

“ಅಲ್ಲೆಲ್ಲೋ ಶ್ವಾನಕೂಪ ಇದೆ ಅಂತ ಯಾರೋ ಹೇಳಿದರು. ನಾನು ಆ ಕಡೆ ಹೋಗಲಿಲ್ಲ.”

‘ಸಧ್ಯ’ ಎಂದು ಅರ್ಥಕೌಶಲ ಸಮಾಧಾನದ ನಿಟ್ಟುಸಿರು ಬಿಟ್ಟರೂ ಈತ ಸುಳ್ಳು ಹೇಳುತ್ತಿರಬಹುದೆಂದೂ ಊಹಿಸಿ ನೆಮ್ಮದಿಗೆಟ್ಟ. ಬದೆಗನಿಗೂ ಆಶ್ಚರ್ಯವಾಗಿತ್ತು. ಹಾಗೆಯೇ ಅವನಲ್ಲಿ ಆಶಾಂಕುರವೂ ಕುಡಿಬಿಟ್ಟಿತ್ತು. ಅವನ ಕಣ್ಣುಗಳಲ್ಲಿ ಅದನ್ನು ಕಾಣಬಹುದಿತ್ತು. ಯಾಕಂತಿರೋ? ಒಮ್ಮೆ ವಿಷಕನ್ಯೆಯಾದವಳು ಕೊನೆತನಕ ವಿಷಕನ್ಯೆಯಾಗಿಯೇ ಸಾಯಬೇಕೆಂಬುದು ಅವನು ಕೇಳಿ ನಂಬಿದ್ದ ಮಾತು. ಅವನೊಬ್ಬನೇ ಅಲ್ಲ, ಎಲ್ಲರೂ ಹಾಗೆ ನಂಬಿದ್ದರು. ಅದೀಗ ಹುಸಿಯಾಗಿತ್ತು. ಶಿಖರಸೂರ್ಯ ವಿಷಕನ್ಯೆಯ ವಿಷಯ ತಿಳಿದ ಬಗ್ಗೆ ಉಕ್ಕಿ ಬಂದ ಕೋಪ, ಅಸಮಾಧಾನಗಳನ್ನು ತೋರಲಾಗದೆ ಒಳ ಉದ್ವೇಗಕ್ಕೆ ಒಳಗಾಗಿ ಬದೆಗನನ್ನು ಕುರಿತು ಅರ್ಥಕೌಶಲ ಕೇಳಿದ:

“ಏನಯ್ಯಾ ವೀರಾ; ನಿನ್ನ ಯಾವುದಾದರೊಂದು ವರಸೆಯನ್ನು ವೈದ್ಯನಿಗೆ ತೋರಿಸಬಲ್ಲೆಯಾ?”

“ರಾಜವೈದ್ಯರ ಮುಂದೆ ನನ್ನ ವರಸೆಯೆ?”

ಎಂದು ಬದೆಗ ಹೇಳಿ ವೈದ್ಯನನ್ನೇ ನೋಡಿದ. “ಸರಿಬಿಡಪ್ಪ” ಎಂದು ಅರ್ಥಕೌಶಲ ಎದ್ದು “ಸಂಜೆ ಹೇಳಿ ಕಳಿಸ್ತೀನಿ” ಎಂದು ಶಿಖರಸೂರ್ಯನಿಗೆ ಹೇಳಿ ಹೊರಟ.

ಆ ದಿನ ಅರ್ಥಕೌಶಲ ನೆಮ್ಮದಿಗೆಟ್ಟ. ವೈದ್ಯದ ನೆಪದಲ್ಲಿ ಶಿಖರಸೂರ್ಯ ಎಲ್ಲಿ ಬೇಕಾದಲ್ಲೆ ಅಲೆದಾಡಿದ್ದು, ವಿಷಕನ್ಯೆಯರಿರುವ ಸ್ಥಳವನ್ನು ನೋಡಿದ್ದು ಸರಿಬರಲಿಲ್ಲ. ಆದರೆ ಅವನನ್ನು ನಿಯಂತ್ರಿಸುವಂತೆಯೂ ಇರಲಿಲ್ಲ. ತನಗೆ ತಿಳಿಯದಂತೆ ಗಮನಿಸಬಾರದ್ದನ್ನು ರಾಜ್ಯವೈದ್ಯ ಗಮನಿಸಿಯಾಗಿತ್ತು. ಒಂದಿಲ್ಲೊಂದು ದಿನ ಗೊತ್ತಾಗಲೇ ಬಹುದಾದದ್ದು ಈಗ ಗೊತ್ತಾಯಿತೆಂಬ ಸಮಾಧಾನವಾದರೂ ತನಗೆ ಹೇಳಕೇಳದೆ ಆತ ಸಂಗತಿಗಳನ್ನ ತಿಳಿದದ್ದರ ಬಗ್ಗೆ ಅಸಮಾಧಾನವಾಯಿತು. ಅಲ್ಲದೆ ಆತ ಯಾವುದನ್ನೂ ತಿಳಿಸಿ ಮಾಡುವ ಪೈಕಿ ಅಲ್ಲ. ಹಾಗಂತ ಅವನ ಸಾಮರ್ಥ್ಯಗಳನ್ನ ನಿರಾಕರಿಸುವಂತಿರಲಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಯುವರಾಜನನ್ನು ಬಿಡಿಸಿ ತರುವುದು ಅವನಿಂದಲ್ಲದೆ ಬೇರಾರಿಂದಲೂ ಸಾಧ್ಯವಿಲ್ಲವೆಂಬ ನಂಬಿಕೆ ಅರ್ಥಕೌಶಲನಲ್ಲಿ ಮಾತ್ರವಲ್ಲ ಮಹಾರಾಣಿ, ವರ್ತಕ ಸಂಘ ಮತ್ತು ನಾಗರಿಕರಲ್ಲಿಯೂ ಇತ್ತು. ಯುವರಾಜ ಸಿಕ್ಕದೆ ದಿನಗಳು ಕಳೆಯುತ್ತಿದ್ದಂತೆ ಮಹಾರಾಣಿ ಹೆಚ್ಚು ಹೆಚ್ಚು ಉದ್ವಿಗ್ನಗೊಳ್ಳುತ್ತಿದ್ದಳು. ಅವಳನ್ನು ಸಮಾಧಾನ ಪಡಿಸುವ ವಿಶಿಷ್ಟ ಶಕ್ತಿಯಿದ್ದುದೂ ಶಿಖರಸೂರ್ಯನಲ್ಲಿ ಮಾತ್ರ.....

# ಇಪ್ಪತ್ತೆಂಟು

ಇಂತೀಪರಿ ಯೋಚಿಸುತ್ತ ಮಧ್ಯಸೇವನೆ ಮಾಡುತ್ತ ಅರ್ಥಕೌಶಲ ಕೂತಿರುವಲ್ಲಿ ಸೇವಕ ಬಂದು "ರಾಜವೈದ್ಯರು ತಮ್ಮನ್ನು ಕಾಣಬೇಕಂತೆ" ಎಂದು ಹೇಳಿದ. ಇಷ್ಟೊತ್ತಿನಲ್ಲಿ ರಾಜ್ಯವೈದ್ಯ ಬಂದನೇ ಎಂದು ಅರ್ಥಕೌಶಲನಿಗೆ ಆಶ್ಚರ್ಯವಾಯಿತು. ಬಹಳ ಹೊತ್ತು, ಜೊತೆಯಲ್ಲೇ ಇದ್ದೆವಲ್ಲ! ಯಾಕಿರಬಹುದು? ಇರಲಿ, "ಹೋಗಿ ಒಳಗೆ ಕರೆದುಕೊಂಡು ಬಾ" ಎಂದು ಸೇವಕನ ಕಳಿಸಿ, ಲಗುಬಗೆಯಿಂದೆದ್ದು ಉಟ್ಟ ಕಚ್ಚೆ ಪಂಚೆಯನ್ನು ಸರಿಪಡಿಸಿಕೊಂಡು, ಮೈಮ್ಯಾಲೊಂದು ಬಟ್ಟೆ ಚೆಲ್ಲಿಕೊಂಡು ಕೂತ. ಕುಡಿದು ಮುಖವಾಗಲೇ ಬೆವರಿ ಕೆಂಪೇರಿತ್ತು. ಶಿಖರಸೂರ್ಯನನ್ನು ನೋಡಿ ನಗುತ್ತ ಎದ್ದು ಬಾಗಿಲತನಕ ಹೋಗಿ ಕೈಹಿಡಿದು ಒಳಗೆ ಕರೆತಂದ. ಪೀಠದಲ್ಲಿ ಕೂರಿಸುತ್ತ "ಊಟಕ್ಕೆ ಇಲ್ಲಿಯೇ ಆದೀತೋ?" ಅಂದ.

"ನನ್ನ ಊಟವಾಗಿದೆ ಪ್ರಧಾನಿಗಳೆ."

-ಎಂದು ಶಿಖರಸೂರ್ಯ ಕೂತು ಸೇವಕನ ಕಡೆಗೆ ನೋಡಿದ. ತಕ್ಷಣ ಅರ್ಥಕೌಶಲ ನಿಂತಿದ್ದ ಸೇವಕನಿಗೆ ಮರೆಯಾಗಲು ಸೂಚಿಸಿ ತನ್ನ ಪೀಠವನ್ನು ಇನ್ನಷ್ಟು ಹತ್ತಿರ ಸರಿಸಿಕೊಂಡು ಕೂತು,

"ಏನಾದರೂ ವಿಶೇಷವಿದೆಯೆ ವೈದ್ಯನೇ?"

-ಎಂದು ಕೇಳಿ ಆಸಕ್ತಿಯಿಂದ ಅವನ ಮುಖವನ್ನೇ ಟಕಮಕ ನೋಡುತ್ತ ಕೂತ. ಎಲ್ಲಿಂದ ಸುರುಮಾಡಬೇಕೆಂದು ಯೋಚಿಸುತ್ತ ಶಿಖರಸೂರ್ಯ,

"ತಮ್ಮೊಂದಿಗೆ ಅಂತರಂಗ ಮಾತಾಡಬೇಕಿತ್ತು" ಅಂದ.

"ಸಿದ್ಧನಿದ್ದೇನಲ್ಲ..."

"ತಮ್ಮ ಗಮನಕ್ಕೆ ತಾರದೆ ನಾನು ವಿಷಕನ್ಯೆಯಿದ್ದ ಬದೆಗನ ಮನೆಗೆ ಹೋಗಿ ತಮ್ಮ ಮನಸ್ಸಿಗೆ ನೋವುಂಟು ಮಾಡಿದೆನೆನ್ನಿಸಿತು. ಆಚಾತುರ್ಯವನ್ನು ಕ್ಷಮಿಸಬೇಕು."

-ಎಂದು ವಿನಯದಿಂದ ಹೇಳಿ, ಪಶ್ಚಾತ್ತಾಪವನ್ನು ಮುಖಭಾವದಿಂದ ಸೂಚಿಸಿ, ತೊಡೆಯ ಮೇಲಿನ ಪ್ರಧಾನಿಯ ಬಲ ಹಸ್ತ ಹಿಡಿದು ಮೆಲ್ಲಗೆ ಹಿಸುಕಿದ. ಅಮಲಿನ ಕಾರಣವೋ, ಅನಿರೀಕ್ಷಿತ ಶರಣಾಗತಿಯೋ ಅರ್ಥಕೌಶಲ ಕರಗಿ ಹೋದ.

"ನನಗೂ ಕೆಡುಕೆನಿಸಿತು ವೈದ್ಯ ಮಿತ್ರನೇ. ಹೇಳಲಾ ಯಾಕಂತ? ನಿನ್ನನ್ನ ಮಿತ್ರ ಅಂತ ಒಪ್ಪಿಕೊಂಡಾಗಿದೆ. ಅಂತರಂಗ ಬಹಿರಂಗ ಎಲ್ಲಾ ತೋರಿಸಿಯಾಗಿದೆ. ಸಂದರ್ಭ ಬಂದಿರಲಿಲ್ಲವಾದ್ದರಿಂದ ಶ್ವಾನಕೂಪ, ವಿಷಕನ್ಯೆಯರ ವಿಚಾರ ಹೇಳಿರಲಿಲ್ಲ. ತಾನಾಗೇ ತಿಳಿದಿದೆ. ಒಳ್ಳೇದೇ ಆಯ್ತು ಅಂತ ನಾನೂ ಸುಮ್ಮನಾದೆ. ಇಲ್ಲಿರೋದು ಇಷ್ಟೆ ಕಣಪ್ಪ."

-ಎಂದು ಹೇಳುತ್ತ ಅರ್ಥಕೌಶಲ ವಿಶ್ವಾಸದಿಂದ ತನ್ನೆರಡೂ ಹಸ್ತಗಳಿಂದ ಶಿಖರಸೂರ್ಯನ ಕೈ ಹಿಡಿದುಕೊಂಡ. ಮತ್ತೂ ಮುಂದುವರಿದು ಹೇಳಿದ:

“ನನ್ನ ಸ್ನೇಹವನ್ನ ಇನ್ನು ಹ್ಯಾಗೆ ತೋರಿಸಲಿ ಹೇಳು. ಯಾಕಂತೀಯೋ? ಅರಮನೆಯ ಯಾವುದೇ ಮಹತ್ವದ ತೀರ್ಮಾನವೂ ನಿನ್ನ ಕಣ್ತಪ್ಪಿ ನಡೆಯುವುದಿಲ್ಲ. ಒಪ್ಪಿದೆಯಾ?”

“ಒಪ್ಪಿದೆ”

“ಅಷ್ಟೆ ಮತ್ತೆ. ನಿನಗದು ತಿಳಿದಿದ್ದರೆ ಇಂಥ ರಾತ್ರಿ ವೇಳೆ ನೀನಿಲ್ಲಿಗೆ ಬರುತ್ತಿರಲಿಲ್ಲ. ಈಗ ಬಂದದ್ದಕ್ಕೆ ನನಗೆ ಅಸಮಾಧಾನವಾಗಿದೆ ಅಂದುಕೋಬೇಡ. ನಿನ್ನನ್ನು ನೋಡಿ ನನ್ನ ಮನಸ್ಸು ಈಗ ಹಗುರವಾಯಿತು. ಇಗೊ.”

ಎಂದು ಸಸ್ನೇಹದಿಂದ ಕೈ ಅಮುಕಿ ಆಮೇಲೆ ಗಟಗಟ ಮದ್ಯಸೇವನೆ ಮಾಡಿ ಆ ಕ್ಷಣವನ್ನ ಆಚರಿಸಿದ. ಈಗ ಅನುಮಾನಗಳು ನಿವಾರಣೆಯಾಗಿ ಮನಸ್ಸು ಹಗುರವಾಗಿ ಅರ್ಥಕೌಶಲನ ಮುಖ ಕಳೆಕಳೆಯಾಯಿತು. ಶಿಖರಸೂರ್ಯ ಊಟವಾದ ಮೇಲೆ ಮುಟ್ಟುವುದಿಲ್ಲವೆಂದು ಗೊತ್ತಿದ್ದರೂ “ಸ್ನೇಹಕ್ಕಾಗಿ ನೀನೊಂದು ಗುಟುಕು ಸೇವಿಸಿದರೆ, ನಿಜ ಹೇಳುತ್ತೇನೆ ಮಿತ್ರಾ, ನಾನು ಧನ್ಯನಾಗುತ್ತೇನೆ.” ಎಂದು ಹೇಳಿದ. ಅವನ ನಿರೀಕ್ಷೆಯಂತೆಯೇ ರಾಜವೈದ್ಯ ನಿರಾಕರಿಸಿದಾಗ ಮುಂದೆ ಬಾಗಿ ಪಿಸು ದನಿಯಲ್ಲಿ ಆ ಕಡೆ ಈ ಕಡೆ ನೋಡಿ ಯಾರಿಲ್ಲವೆಂದು ಖಾತ್ರಿ ಮಾಡಿಕೊಂಡು ಹೇಳಿದ:

“ಬದೆಗನ ಮನೆಯಲ್ಲೊಂದು ಹುಡುಗಿಯಿತ್ತಲ್ಲ? ಆ ಮೂಗಿ! ಅಪ್ಸರೆ! ಅಪ್ಸರೆ ಅಲ್ಲವೇನಯ್ಯಾ? ನಿಜ ಹೇಳು….”

ಇವನು ತನ್ನ ಭಾವನೆಗಳನ್ನು ಅಡಗಿಸಿ ಹೊರತೆ ಪ್ರೋತ್ಸಾಹಿಸಲೆಂಬಂತೆ

“ನಿಜ ಪ್ರಧಾನರೆ, ಅಂಥ ಚೆಲುವೆಯನ್ನು ನಾನೀವರೆಗೆ ಕಂಡಿಲ್ಲ” ಅಂದ.

“ದೇವರಾಣೆ ಮಾಡಿ ಹೇಳುತ್ತೇನಯ್ಯಾ ಅವಳು ಪರಮ ಸುಂದರಿ. ಕಾಮಾತುರ ಕೆರಳಿಸುವ ಕಣ್ಣು, ಪ್ರಣಯ ಕಾಳಗಕ್ಕೆ ಆಹ್ವಾನಿಸುವ ಮಾಟದ ಮೈಕಟ್ಟು, ಆಹಾಹಾ ರತಿಯ ಸಾರಸ್ವರೂಪಳಯ್ಯಾ ಅವಳು! ಕಾಮನೊಂದಿಗೆ ರಮಿಸಬೇಕಾದವಳು ಇಲ್ಲಿ ಹುಟ್ಟಿ ಬಂದಿದ್ದಾಳೆ, ಅಷ್ಟೆ!”

ಶಿಖರಸೂರ್ಯನ ದೇಹದಲ್ಲಿ ಕೊಲೆಗಡುಕನ ಕಳೆ ಪ್ರವೇಶಿಸಿ ಮುಖ ಕಪ್ಪಾಗಿ ಮಿಂಚಿನ ಹಾಗೆ ಕಣ್ಣು ಹೊಳೆದವು. ಹಸ್ತ ಬಿರುಸಾಗಿ ಗಟ್ಟಿಯಾಗಿ ಮುಷ್ಟಿ ಬಿಗಿದು ಸಂಗ್ರಹಿಸಿದ ಶಕ್ತಿಯನ್ನು ಹೊರಬಿಡುವಂತೆ ಹಸ್ತ ಸಡಿಲು ಮಾಡಿದ. ಅರ್ಥಕೌಶಲ ಅನಿರೀಕ್ಷಿತವಾದ ಈ ಬದಲಾವಣೆಯನ್ನು ಗಮನಿಸಿದನಾದರೂ ಅವನಿಂದ ಮಾತು ಬರಲಿಲ್ಲವಾದ್ದರಿಂದ ನಿರ್ಲಕ್ಷಿಸಿ ಮುಂದುವರೆದ.

“ನಮ್ಮ ದುರ್ದೈವ, ಚಂಡಾಲ ಚಂಡೀದಾಸ ಅವಳನ್ನ ವಿಷಕನ್ಯೆ ಮಾಡಿಬಿಟ್ಟ. ಅದೂ ನಂದೇ ತಪ್ಪು ಅಂದುಕೊ. ನನ್ನನ್ನು ಸಂತೋಷಪಡಿಸಿ ಹಣ ಕೀಳೋದಕ್ಕೆ ಹಾಗೆ ಮಾಡಿದ್ದ. ಆವಾಗ ನಮಗೂ ವಿಷಕನ್ಯೆಯರ ಅಗತ್ಯವಿತ್ತು. ಇವನು ವಿಷವೈದ್ಯ. ನನಗೆ ಒಟ್ಟು ಆರು ಜನ ವಿಷಕನ್ಯೆಯರನ್ನ ಕೊಟ್ಟ. ಆದರೆ ಚಂಡೀದಾಸನೇ ವಿಷ ತೆಗೆಯಲು ಪ್ರಯತ್ನಿಸಿ ಸೋತ. ಆ ಮೂಗಿಯ ವಿಷವನ್ನ ತಗೀಬಹುದು ಅಂದೆಯಲ್ಲಪ್ಪ ನೀನು!”

“ಹೌದು ಪ್ರಧಾನರೆ, ಸಂತಾನ ಮಾತ್ರ ಸಾಧ್ಯವಿಲ್ಲ. ಆದರೆ ಖಂಡಿತ ವಿಷದ ಪರಿಣಾಮವನ್ನ ತಗ್ಗಿಸಬಹುದು.”

“ಭಲೆ ವೈದ್ಯ ನೀನು, ನಾವ್ಯಾರೂ ಈ ತನಕ ಕಂಡಿಲ್ಲದ ಕೇಳಿಲ್ಲದ್ದನ್ನ ಮಾಡ್ತೀನಂತಿಯಲ್ಲ ಮಾರಾಯಾ! ಬದೆಗನಿಗೆ ತಿಳಿಸ್ತೀನಿರು.”

ಶಿಖರಸೂರ್ಯನಿಗೆ ಈಗ ವಿಷಯ ತಿಳಿಸಲು ಇದು ಸಕಾಲವೆನ್ನಿಸಿತು-

“ಚಿಕ್ಕಮ್ಮಣ್ಣಿಯ ವತಿಯಿಂದ ಒಬ್ಬ ಸಂಧಿವಿಗ್ರಹಿಯನ್ನು ಬಿಳಿಗಿರಿಗೆ ಕಳಿಸಬೇಕೆಂದಿದ್ದೇನೆ. ತಮ್ಮ ಅಪ್ಪಣೆ ಬೇಕು.”

ಇದರ ಔಚಿತ್ಯವನ್ನು ತಕ್ಷಣ ಅರಿತ ಪ್ರಧಾನಿ ತನಗಿದು ಹೊಳೆಯದ್ದಕ್ಕೆ ಆಶ್ಚರ್ಯಪಟ್ಟು ಆಯಿತೆಂದು ಕೂಡಲೇ ಒಪ್ಪಿಕೊಂಡ. ಆದರೂ

“ಅಂಥ ಚಾಣಾಕ್ಷ ನಮ್ಮಲ್ಲಿ ಯಾರಿದ್ದಾರೆ ಮಾರಾಯಾ?”

ಎಂದು ಹತಾಶೆಯಿಂದ ಕೈ ಚೆಲ್ಲಿದ.

“ಅದನ್ನು ಚಿಕ್ಕಮ್ಮಣ್ಣಿಯೇ ನಿರ್ಧರಿಸಲಿ. ಒಟ್ಟಿನಲ್ಲಿ ಆಕೆಯ ಭಾವನೆಗಳನ್ನ ಅವರಿಗೆ ಸರಿಯಾಗಿ ತಿಳಿಸಿ ಬಾಂಧವ್ಯ ವೃದ್ಧಿಯಾಗುವಂತೆ ಮಾಡಬೇಕು. ಅಂದರೆ ಕೂದಲು ಕೊಂಕಿಸದೆ ಯುವರಾಜನನ್ನು ಒಪ್ಪಿಸುವಂತೆ ಮಾತಾಡಬೇಕು.”

“ಅಷ್ಟೆ ಕಣಪ್ಪ, ನೀನು ಮುಂದುವರಿ. ಅಗತ್ಯ ಬಿದ್ದಾಗ ನಾನೂ ನಿನ್ನ ಜೊತೆಗಿದ್ದೇನೆ, ಆಯ್ತಲ್ಲ?”

ಎಂದು ಇನ್ನಷ್ಟು ವಿವರಗಳನ್ನು ಚರ್ಚಿಸಿ ಅಲ್ಲಿಂದ ಶಿಖರಸೂರ್ಯ ತನ್ನ ಮನೆಗೆ ಹೋದ.

## ಇಪ್ಪತ್ತೊಂಬತ್ತು

ಪ್ರಧಾನಿಯ ಮನೆಯಿಂದ ಬಂದವನು ಸೀದಾ ಅಟ್ಟ ಏರಿ ಸುಕ್ರನನ್ನು ಕರೆಸಿದ. ಆತ ಬಂದೊಡನೆ ಪಕ್ಕದಲ್ಲಿ ಕೂರಿಸಿಕೊಂಡು ಗರಡೀಮನೆ ಮತ್ತು ಬಯಲಿನಲ್ಲಿ ನಡೆದದ್ದನ್ನೆಲ್ಲ ಹೇಳಿದ. ಬದೆಗನ ವಿಚಾರ ಬರುತ್ತಲೂ

“ನಿನ್ನ ಗೆಳೆಯ ಬದೆಗ ಹ್ಯಾಗೆ?” ಅಂದ.

“ಗೆಳೆಯ ಅಲ್ಲ, ನಾವಿಬ್ಬರೂ ಕರುಳು ಹಂಚಿಕೊಂಡವರು.”

“ಅಂದರೆ?”

“ಅಕ್ಕತಂಗಿಯರ ಮಕ್ಕಳು. ಅಂದರೆ ನನ್ನಮ್ಮನಿಗೆ ಅವನಮ್ಮ ತಂಗಿಯಾಗಬೇಕು. ಅವ ನಿಮ್ಮ ಕನಕಪುರಿಯ ದಂಡು ಸೇರಿಕೊಂಡ. ನಾನು ಬಿಳಿಗಿರಿಯ ದಂಡು ಸೇರಿಕೊಂಡೆ.”

“ಹಾಗಿದ್ದರೆ ಇಲ್ಲಿ ಕೇಳು: ಅವನಿಲ್ಲದಾಗ ನಾನು ಮತ್ತು ಬೆಟ್ಟ ಅವನ ಮನೆಗೆ ಹೋಗಿದ್ದೆವು. ನಾವು ಅವನ ಮನೆಗೆ ಹೋದ ವಿಚಾರ ಅವನಿಗೆ ಸರಿಬಂದಂತೆ ಕಾಣಲಿಲ್ಲ.”

“ಅರಮನೆಯವರು ಅಂದರೆ ಅವನಿಗೆ ಆಗಿಬರಾಕಿಲ್ಲ. ಅವರ ಮನೆಯಲ್ಲಿ ನಿನಗೇನು ಸಿಕ್ಕೀತು ನನ್ನೊಡೆಯಾ?”

ಸುಕ್ರ ಬೇಸರದಿಂದ ಅಂದ. ತಾನು ಅವನಿಲ್ಲದಾಗ ಅವನ ಮನೆಗೆ ಹೋದದ್ದು ಸುಕ್ರನಿಗೂ ಸರಿಬರಲಿಲ್ಲವೆಂದು ಸ್ಪಷ್ಟವಾಯಿತು. ಈಗ ಸತ್ಯ ಹೇಳುವುದು ಉಚಿತವೆನ್ನಿಸಿ

“ಸಮಾಧಾನದಿಂದ ಕೇಳು: ವಿಷಕನ್ಯೆಯ ಶೋಧ ಮಾಡುತ್ತ ಅಲ್ಲಿಗೆ ಹೋಗಿದ್ದೆವು….”

ತಕ್ಷಣ ಸುಕ್ರನ ಮುಖ ಕಬ್ಬಿಣದಂತೆ ಕಪ್ಪಿಟ್ಟಿತು. ಅವಡುಗಚ್ಚಿದನೆಂದು ತೋರುತ್ತದೆ, ಗದ್ದ ಬಿರುಸಾಯಿತು. ತಕ್ಷಣ ತಪ್ಪೊಪ್ಪಿಕೊಳ್ಳುವಂತೆ ಶಿಖರಸೂರ್ಯ ಹೇಳಿದ:

“ನೀನು ನನ್ನ ಆತ್ಮೀಯನಾಗಿರೋದರಿಂದ ಹೇಳುತ್ತಿದ್ದೇನೆ ಕೇಳು: ನನಗೆ ಅವನ ಮನೆಯಲ್ಲಿರುವ ಆ ಮೂಗಿ ಹುಡುಗಿ ಬೇಕು.”

ಸುಕ್ರ ತಾಳ್ಮೆ ಕಳೆದುಕೊಂಡು “ಅವಳು ವಿಷಕನ್ಯೆ ಒಡೆಯಾ.” ಅಂದ ಎತ್ತರದ ದನಿಯಲ್ಲಿ. ಶಿಖರಸೂರ್ಯನೂ ದನಿ ಎತ್ತರಿಸಿ ಆದರೆ ಸಮಾಧಾನದಿಂದ ಹೇಳಿದ:

“ನನಗದು ಗೊತ್ತು. ಅದಕ್ಕೇ ನನಗವಳು ಬೇಕು. ಅವಳ ವಿಷ ತೆಗೆಯೋದು ನನ್ನ ವೈದ್ಯವಿದ್ಯೆಗೇ ಸವಾಲು. ನೀನು ಮತ್ತು ಬದೆಗ ದೊಡ್ಡ ಮನಸ್ಸು ಮಾಡಿ ಒಪ್ಪುವುದಾದರೆ ಅವಳ ವಿಷ ತೆಗೆದು ಧರ್ಮದಲ್ಲಿ ಕೂಡಿಕೆ ಮಾಡಿಕೊಳ್ಳೋದು ನನ್ನ ಆಸೆ.”

ಸುಕ್ರ ಮಾತಿಲ್ಲದೆ ರಾಜವೈದ್ಯನ ಮುಖಕ್ಕೆ ಮುಖ ಕೊಟ್ಟು ನೋಡಿ ಜಲ ಜಲ ಕಣ್ಣೀರು ಸುರಿಸತೊಡಗಿದ. ಶಿಖರಸೂರ್ಯನಿಗೆ ಆಶ್ಚರ್ಯ ಮತ್ತು ಗೊಂದಲವಾಯಿತು. ತಾನವನ ಭಾವನೆಗಳಿಗೆ ಗಾಯ ಮಾಡಿದನೆಂದು ಪಶ್ಚಾತ್ತಾಪವಾಯಿತು. ಅಷ್ಟರಲ್ಲಿ ಸುಕ್ರ ಮುಂದೆ ಬಂದು ಶಿಖರಸೂರ್ಯನಿಗೆ ಆಶ್ಚರ್ಯ ಮತ್ತು ಗೊಂದಲವಾಯಿತು. ತಾನವನ ಭಾವನೆಗಳಿಗೆ ಗಾಯ ಮಾಡಿದನೆಂದು ಪಶ್ಚಾತ್ತಾಪವಾಯಿತು. ಅಷ್ಟರಲ್ಲಿ ಸುಕ್ರ ಮುಂದೆ ಬಂದು ಶಿಖರಸೂರ್ಯನ ಕೈಹಿಡಿದು “ನಿಜವೆ ಒಡೆಯಾ?” ಅಂದ.

“ಸೂರ್ಯನಾಣೆಗೂ ನಿಜ ಮಾರಾಯ. ನಿನ್ನ ಮನಸ್ಸು ನೋಯಿಸೋದು ಖಂಡಿತ ನನ್ನ ಉದ್ದೇಶವಲ್ಲ.”

ಸುಕ್ರ ಮೆಲ್ಲಗೆ ಬಂದು ಶಿಖರಸೂರ್ಯನ ಕೈಗಳನ್ನು ತಗೊಂಡು ಹಣೆಗಂಟಿಸಿಕೊಂಡು, ಆಮೇಲೆ ಮ್ಯಾಲೆದ್ದು ರಾಜವೈದ್ಯನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು “ಆಟು ಮಾಡು ನನ್ನಪ್ಪಾ” ಅಂದ. ಮತ್ತೆ “ಆದರೂ ಸಂಶೆ ಬರ್ತದೆ, ವಿಷ ಒಯ್ತದಂತೀಯ ನನ್ನೊಡೆಯಾ?” ಅಂದ.

“ಕೊಂಚ ಕಡಿಮೆಯಾಗುತ್ತದೆ ಅದರಲ್ಲಿ ಸಂಶಯವೇ ಬೇಡ. ಆಕೆಗೆ ಉಳಿದೆಲ್ಲಾ ನೆಮ್ಮದಿ ಸಿಕ್ಕಬಹುದು. ಆದರೆ ಸಂತಾನಪ್ರಾಪ್ತಿಯಿಲ್ಲ. ಯಾಕಂತೀಯೋ? ಚಿಕ್ಕಂದಿನಲ್ಲಿ ವಿಷ ಹಾಕಿದ್ದರಿಂದ ಗರ್ಭ ಸುಟ್ಟುಹೋಗಿದೆ. ಅಷ್ಟೇ ಅಲ್ಲ, ಅವಳೊಂದಿಗೆ ಕೂಡಬೇಕಾದವನು ಕೂಡ ವಿಷ ನುಂಗಿರಬೇಕು. ನುಂಗದೆ ಸಂಪರ್ಕ ಮಾಡಿದರೆ ಅವನೂ ಸಾಯುವುದು ನಿಶ್ಚಿತ. ಆದ್ದರಿಂದ ಚೆನ್ನಾಗಿ ವಿಚಾರ ಮಾಡಿ ಹೇಳು.”

ಸುಕ್ರ ಅಳುತ್ತಲೇ ಹೇಳಿದ:

“ಅದು ನನಗೂ ತಂಗಿ ಒಡೆಯಾ. ನಮಗ್ಯಾರಿಗೂ ಗೊತ್ತಾಗದಂತೆ ಆ ಚಂಡಾಲ ಕೂಸಿಗೆ ವಿಷ ಹಾಕಿಬಿಟ್ಟ! ನಾವು ಕುಲದಲ್ಲಿ ತಾಯಿ ಒಕ್ಕಲು. ಆದರೆ ವಿಷದವರಲ್ಲ. ನೀನು ಉದ್ಧಾರ ಮಾಡ್ತೀನಂದರೆ ಬ್ಯಾಡಂತೀವ ಶಿವನೆ?”

“ಹಾಗಾದರೆ ಒಂದು ಕರಾರು”

“ಅರಮನೆಗೆ ಈ ಸುದ್ದಿ ತಲುಪಕೂಡದು. ಯಾಕಂತೀಯೋ? ಆ ಹೆಣ್ಣಿನ ಮೇಲೆ ಅರಮನೆಯ ಕಾಕದೃಷ್ಟಿ ಬೀಳಕೂಡದು.”

ಕರಾರು ಕೇಳಿ ಆನಂದದಿಂದ ಸುಕ್ರನ ಕಣ್ಣು ಫಳ್ಳನೆ ಹೊಳೆದವು. “ಆಯ್ತು ಒಡೆಯಾ” ಎಂದು ಅಂಡೆತ್ತಿ ನಮಸ್ಕಾರವನ್ನಾಚರಿಸಿದ.

ಸುಕ್ರ ಬದೆಗರಿಗಾಗಿ ಶಿಖರಸೂರ್ಯ ನಿಜವಾಗಿ ಮರುಗಿದ. ಸುಕ್ರನ ಕೈ ಹಿಡಿದೆತ್ತಿ ಪುನಃ ಪಕ್ಕದಲ್ಲಿ ಕೂರಿಸಿಕೊಂಡು ಅವನ ಭುಜದ ಮ್ಯಾಲೆ ಕೈಯಿಟ್ಟು ಹೇಳಿದ.

"ಸುಕ್ರ, ಹೊಸ ಕಳ್ಳು ತಯಾರಿಸಿದ್ದೇನೆ. ರುಚಿ ನೋಡ್ತೀಯಾ?"

ಕಳ್ಳು ಎಂಬ ಶಬ್ದ ಕಿವಿ ಮೇಲೆ ಬಿದ್ದುದೇ ತಡ ಸುಕ್ರನ ಮುಖ ಕಳೆಕಳೆಯಾಗಿ ಹೊಳೆಯಿತು. "ದಯವಿಟ್ಟು ಬೇಗ ಕೊಡು" ಎಂಬಂತೆ "ದಯ್ಮಾಡಿ ಬೇಡ ಒಡೆಯಾ" ಎಂದು ಹೇಳಿ ನಾಚಿಕೊಂಡ.

ಕಳ್ಳು ಒಳಗಿಳಿದ ಮೇಲೆ ಸುಕ್ರನ ಕಣ್ಣು ಕೋಪದಿಂದ ಗೂಳಿಯ ಕಣ್ಣಿನಂತೆ ಕೆಂಪಗಾದವು. ತಲೆ, ಹಣೆ, ಕತ್ತಿನಿಂದ ಬೆವರಿಳಿಯತೊಡಗಿತು. 'ಮತ್ತೆ ಯಾಕೆ ಕೋಪಗೊಂಡ?' ಎಂದು ಶಿಖರಸೂರ್ಯ ಆಶ್ಚರ್ಯಪಡುತ್ತಿರುವಾಗ ಬಾಯಿಬಿಟ್ಟ.

"ಅರಮನೆ ಕಂಡರೆ ನನಗಾಗಲ್ಲ ಒಡೆಯಾ. ಅದು ಸೊಕ್ಕಿನ ಮನೆ. ಮನಶೇರು ಕಾಣ್ಸಾಕೇ ಇಲ್ಲ. ನನಗೆಲ್ಲಾ ಗೊತ್ತಾಯ್ತದೆ; ನಿನಗೂ ಅರಮನೆ ಆಗಿ ಬರೋದಿಲ್ಲ. ಅದಕ್ಕೇ ನನಗೆ ನೀನು ಇಷ್ಟದವನು. ಆ ಮಂದಿ ಶ್ವಾನಕೂಪದಲ್ಲಿ ಜೀವಂತ ಜನರನ್ನು ತಳ್ಳಿ ಮೋಜು ನೋಡುತ್ತಾರಲ್ಲ, ಅವರು ಮನಿಶೇರು ಅಂತೀಯ ನೀನು? ಆ ಕೂಪದಲ್ಲಿ ನಿನ್ನನ್ನ ತಳ್ಳಿದರೆ ಎಂಗಿರ್ತದೆ ಅಂತಾಳಲ್ಲ ಆಯಮ್ಮಾ! ಇಂಥವಳನ್ನು ನಂಬು ಅಂತೀಯಲ್ಲ ಮಾರಾಯಾ!"

ಎಂದು ಹಣೆ ಹಣೆ ಬಡಿದುಕೊಂಡ. ಶಿಖರಸೂರ್ಯನಿಗೂ ಆಶ್ಚರ್ಯವಾಯಿತು. ಮತ್ತು ಮಹಾರಾಣಿಯ ಬಗೆಗೆ ಕೋಪ ಬಂತು. ಅದನ್ನ ಆಮ್ಯಾಲೆ ನೋಡಿದರಾಯ್ತೆಂದು, "ಬದೆಗನಿಗೂ ಅರಮನೆ ಕಂಡರೆ ಆಗಿಬರೋದಿಲ್ಲವಂತಲ್ಲ, ಯಾಕೆ?" ಅಂದ. ಸುಕ್ರ ಗಟಗಟ ಕಳ್ಳು ಹಿಡಿದ. ಹೇಳುವುದೋ ಬೇಡವೋ ಎಂದು ವಿಚಲಿತನಾದಾಗ ಶಿಖರಸೂರ್ಯ ಮತ್ತೆ ಹೇಳಿದ:

"ಹೇಳಬಹುದು ಅನ್ನಿಸಿದರೆ ಹೇಳು. ಬೇಸರವಾಗುವಂತಿದ್ದರೆ ಬೇಡ."

ಕಳ್ಳಿನ ಹನಿಹನಿಯನ್ನು ಆನಂದಿಸಿ ದೊಡ್ಡ ಹೊಟ್ಟೆಗಿಳಿಸಿ ಬಾಯೊರಿಸಿಕೊಂಡು "ಕೇಳು" ಅಂದ.

ಬದೆಗಿನ ಬಗ್ಗೆ ಸಕ್ರ ಹೇಳಿದ್ದನ್ನು ನಮ್ಮ ಭಾಷೆಯಲ್ಲಿ ಕಥಾಂತರಿಸುತ್ತೇವೆ;

ಕೇಳಿರಿ: ಸುಕ್ರ:

"ಕನಕಪುರಿಯ ರಾಜ ಬಿಳಿಗಿರಿಯ ಮ್ಯಾಲೆ ದಾಳಿಮಾಡಲು ತಯಾರಿ ನಡೆಸಿದ್ದ ದಿನಗಳವು. ಆಗಲೇ ಹೇಳಿದ್ದೆನಲ್ಲ ನಡಾವಳಿಯಿಂದ ಬದೆಗ ನನಗೆ ತಮ್ಮನಾಗಬೇಕು. ಅವನಿಗೆ ಹೊಸಪ್ರಾಯ ಬಂದಾಗ ಅವನಾಗಲೇ ಕನಕಪುರಿಯ ಸೈನ್ಯದಲ್ಲಿ ಭಂಟನಾಗಿ ಹೆಸರು ಮಾಡಿಕೊಂಡಿದ್ದ. ಪ್ರಾಯಕ್ಕೆ ಬಂದೊಡನೆ ನಾವೇ ಗೊಲ್ಲಗೋಕುಲದ ಚೆಂದೊಳ್ಳೆ ಹುಡುಗಿ ಸಿರಿಲಕ್ಕಿಯ ತಂದು ಮದುವೆ ಮಾಡಿದೆವು.

ಬದೆಗ ಹಸುವಾದರೆ ಇವನ ಹೆಂಡತಿ ಚಿರತೆ! ಮದುವೆಯಾದೊಡನೆ ತಾಯಿಯ ಮನೆ ತೊರೆದು ಬೇರೆ ಮನೆ ಮಾಡಿಕೊಂಡಿದ್ದ. ಆವಾಗ ನಡೆದದ್ದು ಈ ಕತೆ.

ಒಂದು ದಿನ ಏನಾಯ್ತಪ್ಪ ಅಂದರೆ, ರಾಜಕುಮಾರ ಕುದುರೆಯೇರಿ ಶ್ವಾನಕೂಪಕ್ಕೆ ಹೋಗುತ್ತಿದ್ದಾಗ ಕುದುರೆಗೆ ಬಾಯಾರಿಕೆಯಾಗಿ ನದಿಯ ಕಡೆಗೆ ಒಂದೇ ಸಮನೆ ಓಡತೊಡಗಿತು. ನದಿಯ ಇಳಿಜಾರು ದಡದಲ್ಲಿ ಇಳಿಯುತ್ತಿದ್ದಾಗ ಸೀರೆ ಒಗೆದು ಒಣಗು ಹಾಕುತ್ತಿದ್ದ ಬದೆಗನ ಮಡದಿ ಸಿರಿಲಕ್ಕಿಯನ್ನ ರಾಜಕುಮಾರ ಕಂಡ. ಕಂಡುದೇ ಹುರುಪು ಬಂತು ನೋಡು, ಕುದುರೆಯನ್ನು ಆ ಕಡೆಗೆ ಓಡಿಸುತ್ತ-

“ಕುದುರೆ ಬಂತು ಸೀರೆ ಎತ್ತು”

-ಎಂದು ನಗಾಡುತ್ತ ಎರಡು ಮೂರು ಬಾರಿ ಕೂಗಿ ಹೇಳಿದ. ಅವಳು ಸೀರೆ ಎತ್ತುವುದರೊಳಗೆ ಎರಡು ಬಾರಿ ಕುದುರೆಯ ಕಾಲಿಗೆ ಸಿಕ್ಕ ಸೀರೆಯ ಮೇಲೆ ಅದರ ಕೆಸರುಗಾಲಿನ ಹೆಜ್ಜೆ ಮೂಡಿ ಹೊಲಸಾಯಿತು. ಕುದುರೆ ಸವಾರ ರಾಜಕುಮಾರನೆಂದರಿಯದ ಅವಳು,

“ಯಾವೋನ್ಲಾ ಹೈವಾನ? ಮಡಿ ಸೀರೆ ರಾಡಿಯಾಯ್ತು, ಕಣ್ಣು ನೆತ್ತಿಮ್ಯಾಲಿದ್ದಾವೇನ್ಲಾ” ಎಂದಳು.

“ರೇಗಬೇಡವೇ ಹುಡುಗಿ. ನಾನು ಯಾರು ಅಂತ ಗೊತ್ತಾದರೆ ಓಡಿ ಬಂದು ಮಾವಾ ಅಂತೀಯ!”

ಎಂದ ರಾಜಕುಮಾರ ಚಿಗುರು ಮೀಸೆಯಲ್ಲಿ ನಗುತ್ತ.

“ನಾನರಿಯದ ಅದ್ಯಾವ ಪುಂಡನೋ ನೀನು? ನನ್ನ ಗಂಡನಿಗೆ ಗೊತ್ತಾದರೆ ನಿನ್ನ ಚಿಗುರು ಮೀಸೆಯನ್ನು ಮಣ್ಣುಗಾಣಿಸಿಯಾನು, ಹೋಗು ಹೋಗು”

ಎಂದಳು. ಆತ ಹೋಗಲಿಲ್ಲ.

“ನಿನ್ನ ಗಂಡ ನಾಳೆ ದಂಡಿಗೆ ಹೋಗ್ತಾನೆ. ಆಗಲಾದರೂ ನಾನು ನಿನಗೆ ಬೇಕಾಗ್ತೀನಿ, ನೋಡ್ತಿರು.”

ಸಿರಿಲಕ್ಕಿ ತನ್ನ ಪಾಡಿಗೆ ತಾನು ಸೀರೆ ಒಗೆದು ಹಿಂಡಿ, ಹೆಗಲ ಮೇಲೆ ಹಾಕಿಕೊಂಡು, ಕೊಡ ತುಂಬಿಕೊಂಡು ಮನೆ ಕಡೆ ಹೊರಟಳಾದರೂ ಆತ ತನ್ನನ್ನೇ ಹಸಿದ ಕಣ್ಣುಗಳಿಂದ ನೋಡುತ್ತಿರುವ ಬಗ್ಗೆ ಒಳಗೊಳಗೆ ಪುಳಕಗೊಂಡಿದ್ದಳು. ರಾಜಕುಮಾರನೂ ಅಷ್ಟೆ. ಪ್ರಾಯದಲ್ಲಿ ತನ್ನ ಮೊದಲನೇ ಹೆಜ್ಜೆಯಿಟ್ಟು ಪುಳಕಿತನಾದ ಕಿಶೋರ. ರಾಜಕುಮಾರನಾದ್ದರಿಂದ ಅವನಾಡಿದ್ದೇ ಆಟ, ಮಾಡಿದ್ದೇ ಮಾಟ! ಹೇಳಕೇಳೋರಿಲ್ಲ, ಶಿಕ್ಷೆಯ ಭಯವಿಲ್ಲ. ಬೇಲಿಯಿಲ್ಲದ ಬದುಕು ನೋಡು! ಸಾಲದ್ದಕ್ಕೆ ಒಂದು ಹುಡುಗಿಯ ಪ್ರೇಮಪಾಶದಲ್ಲಿ ಬೀಳುವುದೆಂದರೆ ಅದೊಂದು ಸುಮಧುರ ಅನುಭವ. ಕಲ್ಪನೆಗೆ ಮೀರಿದ ಆನಂದವನ್ನು ಕೊಡುವಂಥದ್ದು. ಆದರೆ ಅದು ಅವಗಡಿಸಿದರೆ ಅಪಾಯಕಾರಿಯಾದ ಶಿಕ್ಷೆಯೂ ಆಗಬಹುದೆಂದು ಗೊತ್ತಿಲ್ಲದವ. ಹೊತ್ತ ಕೊಡವ ಎಡಗೈಯಿಂದ ಹಿಡಿದುಕೊಂಡು, ವಯ್ಯಾರದಿಂದ ಮುಂದೆ ಮುಂದೆ ಹೊರಟಿದ್ದ ಸಿರಿಲಕ್ಕಿ ಹಿಂದಿನಿಂದ ಬರುತ್ತಿದ್ದ ರಾಜಕುಮಾರನ ಆಸಕ್ತ ಇಂದ್ರಿಯಗಳಿಗೆ ಹಬ್ಬವಾದಳು. ಮೊದಲೇ ಅವಳ ಸ್ತನ, ವದನ, ಯೌವನಕ್ಕೆ ಬೆರಗಾಗಿದ್ದಾತ ಈಗವಳ ಬಡನಡು, ತುಂಬಿದ ನಿತಂಬಗಳ ಲಯಬದ್ಧ ಚಲನೆಯಿಂದ ಆಕರ್ಷಿತನಾದ. ಭರ್ತಿ ಯೌನವದಿಂದ ಕೂಡಿದ ಆ ಸೊಬಗುಗಾತಿಯ ಸೌಂದರ್ಯಕ್ಕೆ ಯುವರಾಜ ಪರವಶನಾಗಿ ಹಿಂದೆ ಹಿಂದೆ ಅನತಿದೂರದಲ್ಲಿ ಕುದುರೆ ನಡೆಸುತ್ತ ಬೆನ್ನು ಹತ್ತಿದ. ಬಹಳ ಹೊತ್ತು ಅವನ್ಯಾಕೋ ಮಾತಾಡಲಿಲ್ಲವೆಂದು ಈಕೆ ಹಿಂದಿರುಗಿ ನೋಡಿದರೆ ಆತ ಎವೆಯಿಕ್ಕದೆ ಇವಳನ್ನೇ ನೋಡುತ್ತಿದ್ದಾನೆ! ಇದ್ಯಾವುದೋ ಎಳೆನಿಂಬೆ ಇದರೊಂದಿಗೆ ಆಟ ಆಡಬೇಕೆಂದು,

“ಏನ್ಹಂಗೆ ದುರುಗುಟ್ಟಿ ನೋಡ್ತೀಯ?” ಅಂದಳು.

“ನಿನ್ನನ್ನೇ ನೋಡೋದು”

“ಯಾಕೆ, ಹೆಂಗಸರ ಮುಕ ಕಂಡಿಲ್ಲವ?”

“ಬೇಕಾದಷ್ಟು ಕಂಡಿದ್ದೇನೆಯೇ, ನಿನ್ನಂಥ ಚಲುವೆಯನ್ನ ಕಂಡಿಲ್ಲ ಅಷ್ಟೆ.”

“ಅಂಗೆಲ್ಲ ದುರುಗುಟ್ಟಿ ನೋಡಿದರೆ ಏನ್ಮಾಡತೀನಿ ನೋಡಿಕೊ”

“ನೋಡ್ತೀನೇ ಇನ್ನೂ ನೋಡ್ತೀನಿ ಏನೇ ಮಾಡ್ತಿ?”

“ನನ್ನ ಗಂಡನಿಗೆ ಹೇಳಿ…”

“ನಿನ್ನ ಗಂಡ ದಂಡಿಗ್ಹೋಗ್ತಾನೆ, ಆವಾಗೇನೇ ಮಾಡ್ತಿ?”

“ಏ ಹುಚ್ಚಾ, ಅಕಾ ಯಾರೋ ಬರ್ತಿದಾರೆ. ನೋಡಿದರೆ ಏನಂದುಕೊಂಡಾರು? ಈಗೇನು ಹೋಗ್ತಿಯ? ಇಲ್ಲಾ ಕೂಗಂತೀಯಾ?”

ಎಂದು ಹೇಳಿ ಬೇರೆ ದಾರಿ ಹಿಡಿದಳು. ಸ್ವಲ್ಪ ಹೊತ್ತು ಅಲ್ಲೇ ನಿಂತಿದ್ದು ಆಮೇಲೆ ಮತ್ತೇನೋ ನೆನಪಾಗಿ ಕುದುರೆ ಓಡಿಸಿ ಅವಳನ್ನ ಅಡ್ಡಗಟ್ಟಿ ನಿಲ್ಲಿಸಿದ. ನಾಚಿ ಕೆಂಪೇರಿದ ಮುಖದಿಂದ ಹೇಳಿದ:

“ನೆನಪಿಡೇ ಇವಳೆ. ನಾನು ಹುಚ್ಚನಲ್ಲ, ರಾಜಕುಮಾರ! ನಿನ್ನ ನೋಡೋದಕ್ಕೆ ನಾಳೇನೂ ಇಲ್ಲಿಗೇ ಬರ್ತೀನಿ. ಸಂಜೇತನಕ ದುರುಗುಟ್ಟಿ ನೋಡ್ತೀನಿ. ಅದೇನ್ಮಾಡ್ತಿಯೋ ಮಾಡಿಕೊ.”

ಎಂದು ಹೇಳಿ ಕುದುರೆ ಓಡಿಸಿದ.

ಮಾರನೇ ದಿನ ಮುಂಜಾನೆ ಮೂರು ತಾಸು ಹೊತ್ತೇರಿತ್ತು. ಆಗಲೇ ನದಿಯ ಬಳಿಯ ಹುಲ್ಲುಗಾವಲಲ್ಲಿ ರಾಜಕುಮಾರನ ಕುದುರೆ ಮೇಯುತ್ತಿತ್ತು. ನಿನ್ನೆ ಅವಳು ಸೀರೆ ಒಗೆದ ಕಲ್ಲಿನ ಮ್ಯಾಲೆ ಕುಂತುಗೊಂಡು ನದಿಯನ್ನೇ ನೋಡುತ್ತಿದ್ದ. ಸೂರ್ಯನ ಎಳೆಬಿಸಿಲಿನ ಚಿನ್ನದ ಕಿರಣಗಳು ತೆರೆಗಳಲ್ಲಿ ಹೊಳೆಯುತ್ತ ನಂದುತ್ತ ಆಟ ಆಡುತ್ತಿದ್ದವು. ನೀರಿನ ಮೇಲೆ ಟಿಟ್ಟೆಭಗಳು ಸುತ್ತುಗಟ್ಟಿದ್ದವು. ಚಿಳಿಮಿಳಿ ಮೀನು ಆಗಾಗ ಹಾರಿ ಹನಿ ನೀರಿನ ಸಣ್ಣ ಸಣ್ಣ ಮುತ್ತುಗಳನ್ನು ಹಾರಿಸುತ್ತಿದ್ದವು. ದಡದಲ್ಲಿದ್ದ ದೊಡ್ಡ ನೇರಳೆ ಮರಗಳಲ್ಲಿ ಕಳಿತ ಹಣ್ಣು ಗೊಂಚಲು ಗೊಂಚಲಾಗಿ ಬಿಸಿಲಿನಲ್ಲಿ ಹೊಳೆಯುತ್ತ ದಟ್ಟ ನೀಲಿ ರತ್ನಗಳ ಕಾಂತಿಯನ್ನು ಸೂಸುತ್ತಿದ್ದವು. ಅವಳು ಬಂದೇ ಬರುತ್ತಾಳೆಂಬ ರಾಜಕುಮಾರನ ನಂಬಿಕೆ ಹುಸಿಹೋಗಲಿಲ್ಲ.

ದೂರದಲ್ಲಿ ಸಿರಿಲಕ್ಕಿ ಇವನನ್ನೇ ನೋಟಗಳಿಂದ ಹುಡುಕುತ್ತ ಬರುವುದನ್ನು ಗಮನಿಸಿ ಈ ಖಳನಾಯಕ ಮರದ ಮರೆಗೆ ಅವಿತು ನಿಂತ. ಬಂದವಳು ಸೀರೆಯನ್ನ ಮೊಳಕಾಲಿನತನಕ ಎತ್ತಿ, ನೀರು ತುಂಬಿಕೊಂಡು ಸುತ್ತ ಹುಡುಕು ದೃಷ್ಟಿಯಿಂದ ನೋಡಿದಳು. ಯಾರೂ ಕಾಣಿಸಲಿಲ್ಲ. ಆದರೆ ಹುಲ್ಲುಗಾವಲಲ್ಲಿ ನಿನ್ನೆಯ ಕುದುರೆ ಮೇಯುತ್ತಿತ್ತು! ಈಗ ಮರದ ಮರೆಯಲ್ಲಿ ದೃಷ್ಟಿ ಚೆಲ್ಲಿ ಹುಡುಕತೊಡಗಿದಾಗ ಅವಿತಿದ್ದ ರಾಜಕುಮಾರ ಹೊರಬಂದು ಅವಳೆದುರು ಧುತ್ತೆಂದು ನಗುತ್ತ ನಿಂತ.

“ಯಾಕೆ ಬಂದೆ? ಏನು ಬೇಕು ನಿನಗೆ?” ಅಂದಳು.

“ಏನು ಬೇಕಂತ ಗೊತ್ತಿಲ್ಲವೇ?”

ಎಂದು ಹೇಳುತ್ತ ಸಮೀಪಹೋಗಿ ಸಿರಿಲಕ್ಕಿಯ ಸೊಂಟಕ್ಕೆ ಕೈ ಸುತ್ತಿದ. “ಇದೆಲ್ಲ ಬ್ಯಾಡ, ಸುಮ್ನೆ ಹೋಗು” ಎಂದು ಅವನ ಕೈಯನ್ನ ಸರಿಸಿ ದುರುಗುಟ್ಟಿ ನೋಡಿ ಎರಡು ಹೆಜ್ಜೆ ಹಿಂದೆ ಸರಿದಳು. ಕ್ಷಣ ಗಾಬರಿಗೊಂಡ ರಾಜಕುಮಾರ ತಕ್ಷಣವೇ ಆತ್ಮವಿಶ್ವಾಸ ತಳೆದು ಬೆನ್ನಟ್ಟಿ ಹೋಗಿ ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕೆನ್ನೆಗೆ ಮುದ್ದಿಟ್ಟ. ಅವನ ಚುಂಬನದಲ್ಲಿನ್ನೂ ಭಯವಿತ್ತು. ತನ್ನ ಯಾವುದೋ

ಅಮೂಲ್ಯವಸ್ತುವನ್ನೀತ ಕದಿಯುತ್ತಿದ್ದಾನೆಂದು ಅವಳಿಗನ್ನಿಸಿತು. ಉಳಿಸಿಕೊಳ್ಳುವ ಕೊನೆಯ ಪ್ರಯತ್ನವೆಂದು ಅವನ ಮುಖವನ್ನು ಹಿಂದಕ್ಕೆ ತಳ್ಳಿದಳು. ಮಾಡಿದ ಪ್ರಯತ್ನದಲ್ಲಿ ಶಕ್ತಿಯೇ ಇರಲಿಲ್ಲ.

ತನ್ನ ಬೀಡಿಗೆ ಬಂದ ಮೇಲೆ ಮಾತ್ರ ಅವಳ ಮನಸ್ಸಿನಲ್ಲಿ ಬಿರುಗಾಳಿ ಎದ್ದಿತು. ಗಂಡ ದಂಡಿಗೆ ಹೋಗಿದ್ದ. ಅವಳೀಗ ಕೇವಲ ರಾಜಕುಮಾರನನ್ನೇ ಕುರಿತು ಯೋಚನೆ ಮಾಡುತ್ತಿದ್ದಳು. ಎಲ್ಲೆಲ್ಲೂ ಅವನೇ ಕಾಣುತ್ತಿದ್ದ. ನಿದ್ರೆ ಬರಲಿಲ್ಲ. ಅವನ ಹೆಜ್ಜೆ ಸಪ್ಪಳವನ್ನು ಕೇಳಲು ಕಾತರಳಾದಳು.

ಮಾರನೇ ದಿನ ಅವನನ್ನು ನೋಡಿದಾಗ ನಗೆ ಬಂತು. ಆದರದು ಆನಂದ ಉಲ್ಲಾಸಗಳ ನಗೆಯಾಗಿರಲಿಲ್ಲ. ಭಯ ಮತ್ತು ದಾರಿತಪ್ಪುತ್ತಿದ್ದೇನೆಂಬ ದುಃಖ ಆತಂಕಗಳು ಅಡಕವಾಗಿದ್ದ ನಗೆ ಅದು. ಅವಳ ಹೃದಯವಿನ್ನೂ ದುರ್ಬಲ ಸ್ವರದಲ್ಲಿ ಅವಳನ್ನು ಎಚ್ಚರಿಸುತ್ತಲೇ ಇತ್ತು. ಆದರೆ ಅವಳ ಸಮಸ್ತ ಪ್ರಾಣ ಅವನಿಗಾಗಿ ಹಾತೊರೆಯುತ್ತಿತ್ತು. ಆತ ಬಂದು ಸಮೀಪದಲ್ಲೇ ನಿಂತ. ಅವನ ಉದ್ವೇಗದ ಉಸಿರಾಟ ಅವಳಿಗೆ ಕೇಳಿಸುತ್ತಿತ್ತು. ಅವಳ ಎದೆ ಬಡಿತ ಅವನ ಕಿವಿಗೆ ಕೇಳಿಸುವಷ್ಟು ಜೋರಾಗಿತ್ತು. ಅವಳ ಬಗ್ಗೆ ಅವನಲ್ಲಿ ಅನುಕಂಪವೇನೋ ಮೂಡಿತು. ಮರುಕ್ಷಣವೇ ಪಶುತ್ವ ಎಚ್ಚರಾಗಿ ಅವಳ ಬೇಟೆಗೆ ಸಿದ್ಧನಾದ. ತೋಳು ಹಿಡಿದೆಳೆದ. ಅವಳ ಕಾಲಲ್ಲಿ ಶಕ್ತಿ ಸಾಲದೆ ಬೀಳುತ್ತಿರುವಷ್ಟರಲ್ಲಿ ರಾಜಕುಮಾರ ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡು ಮುಖದ ತುಂಬ ಮುದ್ದುಕೊಟ್ಟ. ಸಿರಿಲಕ್ಕಿ ಥರಥರ ನಡುಗಿದಳು. ಕುರಿಮರಿಯನ್ನೆತ್ತಿಕೊಂಡಂತೆ ಅವಳನ್ನು ಹೊತ್ತೊಯ್ದು ಬದಿಯ ಮೆಳೆಯಡಿಯ ಮಳಲಿನಲ್ಲಿ ಚೆಲ್ಲಿಕೊಂಡ. ಇಬ್ಬರಿಗೂ ಹುಚ್ಚಡರಿತು.

ಇವರ ಸಂತೋಷ ಬಹುದಿನ ಬಾಳಲಿಲ್ಲ. ಬಿಳಿಗಿರಿಯಲ್ಲಿ ಗೆದ್ದು ನಿಮ್ಮ ರಾಜ ವಾಪಾಸಾದ. ಯುದ್ಧದಲ್ಲಿ ಬದೆಗ ಅಪಾರ ಶೌರ್ಯ, ಜಾಣತನಗಳನ್ನು ಮೆರೆದು ಬಹುಮಾನಿತನಾಗಿದ್ದ. ಬಂದ ಬಹುಮಾನಗಳನ್ನು ಊರವರಿಗೆ, ಬಂಧು ಬಾಂಧವರಿಗೆ ಆಪ್ತೇಷ್ಟರಿಗೆ ತೋರಿಸಿ ಹೆಮ್ಮೆಪಟ್ಟ. ಆದರೆ ಮೂರನೇ ದಿನ ಸಾಯಂಕಾಲ ಮಡದಿಯ ವಿಷಯ ತಿಳಿದು ಅವನಲ್ಲಿ ಭೂತಪ್ರವೇಶವಾಗಿ ಬಿಟ್ಟಿತ್ತು. ಬೀಡಿಗೆ ಬಂದ. ಆಗವನ ಬೀಡಿನಲ್ಲಿ ತಾಯಿ ತಂಗಿಯರ್ಯಾರೂ ಇರಲಿಲ್ಲ.

ಅವನ ನಡಿಗೆ ಭಾರವಾಗಿತ್ತು. ನಡೆದಂತಿರಲಿಲ್ಲ. ಕಾಲು ಎತ್ತಿ ಎತ್ತಿ ಇಡುತ್ತ ನಿಧಾನವಾಗಿ ಒಳಗೆ ಬಂದು ಹೆಂಡತಿಯ ಮುಖ ನೋಡದೆ ಶತಪಥ ತಿರುಗಿದ. ಮೂಲೆಯಲ್ಲಿ ನಿಂತು ಅಗೋಚರ ಶತ್ರುವನ್ನಿರಿಯುವಂತೆ ಬಲಗೈ ಮುಷ್ಟಿಮಾಡಿ ಇನ್ನೊಂದು ಅಂಗೈಗೆ ಗುದ್ದಿಕೊಂಡ. ಅಡಿಗೆ ಮನೆಯ ಕಡೆಗೆ ಕಿರಾತ ದೃಷ್ಟಿಯಿಂದ ನೋಡಿ ಭಯಂಕರ ಕೋಪದ ಭಾವಪ್ರದರ್ಶನ ಮಾಡಿ, ಹಲ್ಲು ತಿಂದು, ಇನ್ನೊಮ್ಮೆ ಗುದ್ದಿಕೊಂಡು ಆಮೇಲೆ ತಿರುಗಿದ. ನಡುನಡುವೆ ಏನೇನೋ ಗೊಣಗುತ್ತಿದ್ದ. ಕೋಪದಿಂದ ಮನಸ್ಸನ್ನು ಪರಚಿಕೊಳ್ಳುತ್ತಿದ್ದ. ಭುಜ ಕುಣಿಸಿ ತನ್ನ ಅಸಹಾಯಕತೆಯನ್ನು ಅನೇಕ ಭಂಗಿಗಳಲ್ಲಿ ಅಭಿವ್ಯಕ್ತಿಸುತ್ತಿದ್ದ. ಆಮೇಲೆ ಸೋತವನಂತೆ ಭುಜ ಇಳಿಬಿಟ್ಟು ಗಡಂಚಿಯ ಮೇಲೆ ಕೂತ.

ಅಡಿಗೆ ಮನೆಯಲ್ಲಿ ಇದನ್ನೆಲ್ಲ ಕದ್ದು ನೋಡುತ್ತಿದ್ದ ಸಿರಿಲಕ್ಕಿಗೆ ಏನೊಂದೂ ತಿಳಿಯಲಿಲ್ಲ. ಎರಡು ದಿನ ನಗುನಗುತ್ತ ಇದ್ದನಾದ್ದರಿಂದ ಅವನಿಗೇನೂ ತಿಳಿದಿಲ್ಲವೆಂದೇ ಅವಳ ಲೆಕ್ಕವಾಗಿತ್ತು. ಈ ದಿನ ಇನ್ನೇನೋ ಆಗಿರಬೇಕೆಂದುಕೊಂಡು ಸಹಾನುಭೂತಿ ಮತ್ತು ಪ್ರೀತಿಯ ಭಾವನೆಗಳ ನೆರೆಬಂದು ನಿಯಂತ್ರಿಸಲಾರದೆ ಬಳಿ ಬಂದು ಹೆಗಲಮೇಲೆ ಕೈ ಹಾಕಿ,

"ಯಾಕ ಹಿಂಗಿದ್ದೀ? ಯಾರೇನಾರ ಅಂದರೇನು?"

ಅಂದಳು ಅವನ ಗುಂಗುರು ಕೂದಲಲ್ಲಿ ಬೆರಳಾಡಿಸುತ್ತ. ಅವನ ಮೈಯಿಂದ ಗಂಡಸಿನ ಬೆವರು ಮತ್ತು ವಾಸನೆ ಬರುತ್ತಿತ್ತು. ಅವನ ಜೊಂಡು ಮೀಸೆ ಜೋತಾಡುತ್ತಿತ್ತು. ಬದೆಗ ಮಾತಾಡಲಿಲ್ಲ. ಹೊರಗೆ ಕತ್ತಲು ದಟ್ಟವಾಗುತ್ತಿತ್ತು. ಅವಳ ಮುಖ ನೋಡದೇ ಕೇಳಿದ.

“ನನ್ನಲ್ಲಿದ್ದ ಎಲ್ಲ ವೀರ್ಯದೊಂದಿಗೆ ನಿನ್ನನ್ನ ಪ್ರೀತಿಸಿದೆನಲ್ಲೇ ಮಡದಿ, ಹೇಳು ಇಂಥ ಗಂಡನ ಮರ್ಯಾದೆಯನ್ನ ಹೆಂಗೆ ಕಾಪಾಡಿದೆ?”

ಸಿರಿಲಕ್ಕಿಗೆ ಈಗ ವಿಷಯ ತಿಳಿದು ಎದೆ ದಸಕ್ಕೆಂದು ಕುಸಿಯಿತು. ಥರಥರ ನಡುಗಿ ಸೀರೆ ಸೆರಗನ್ನು ಬಾಯಲ್ಲಿ ಕಚ್ಚಿಕೊಂಡು ಬರುವ ಬಿಕ್ಕನ್ನು ತಡೆಹಿಡಿದು, ಹಿಂದೆ ಹಿಂದೆ ಹೆಜ್ಜೆ ಇಡುತ್ತ ಅಡಿಗೆ ಮನೆ ಬಾಗಿಲಲ್ಲಿ ನಿಂತು ಮುಂದೇನು ಕಾದಿದೆಯೋ ಎಂದು ಬದೆಗನನ್ನೇ ನೋಡುತ್ತ ನಿಂತಳು. ಗೂಟಕ್ಕೆ ತೂಗುಹಾಕಿದ್ದ ಬಾರುಕೋಲು ತಗೊಂಡು ಅದನ್ನು ನೇವರಿಸುತ್ತ “ಬಾಯಿ ಬಿಡೇ” ಎಂದು ಗದರಿದ. ಸಿರಿಲಕ್ಕಿ ಹತಾಶಳಾಗಿ ಓಡಿ ಬಂದು ಧೊಪ್ಪನೆ ಅವನ ಕಾಲಮೇಲೆ ಬಿದ್ದು,

“ನನ್ನನ್ನು ಕೊಲ್ಲು, ನಿನ್ನ ಕಾಲು ಬೀಳ್ತೀನಿ ಕೊಲ್ಲು”

-ಎಂದು ಗಟ್ಟಿಯಾಗಿ ಅವನ ಕಾಲು ಹಿಡಿದು ತಲೆ ಗಿಟ್ಟಿಸಿದಳು. ಬದೆಗ ಅವಳ ತುರುಬಿಗೆ ಕೈಹಾಕಿ ದನಕ್ಕೆ ಹೊಡೆದಂತೆ ನಾಲ್ಕು ಕಟೆದ ನೋಡು, ಬಾರಿನಗುಂಟ ಬಾರಿನಳತೆಯ ಚರ್ಮ ಕಿತ್ತು ಬಂತು. ಕಿಟಾರನೆ ಕಿರಿಚಿ ಬಟ್ಟೆಯ ಗಂಟಿನಂತೆ ಮುದ್ದೆಯಾಗಿ ಬಿದ್ದುಬಿಟ್ಟಳು. ಕರುಳು ಚುರ್ರೆಂದು ತಾನೆಷ್ಟು ಅವಳನ್ನ ಪ್ರೀತಿಸುತ್ತಿದ್ದೆ ಅಂತ ಬದೆಗನಿಗೆ ಅರಿವಾಯ್ತು. ತಿರಸ್ಕಾರ ಬೆರೆತ ಆ ಪ್ರೀತಿ ಈಗ ಭೀಕರವಾಗಿತ್ತು. ಹಾಗೇ ಗೋಡೆಗಾಧಾರವಾಗಿ ಕೂತುಕೊಂಡ. ಸೊಗಸಿನ ಹಾಸಿಗೆ ಬಿಟ್ಟು ಬರಿ ನೆಲದಲ್ಲಿ ಕವಚಿ ಮಲಗಿದ್ದಳು ಹೆಣ್ಣು.

ಬಹಳ ಹೊತ್ತಿನ ತನಕ ಇಬ್ಬರೂ ತುಟಿ ಬಿಚ್ಚಲಿಲ್ಲ. ಹೊರಗಿನ ತಂಗಾಳಿ ಬೀಸಿದಾಗ ಸಣ್ಣದಾಗಿ ಸಿರಿಲಕ್ಕಿ ನರಳಿದ್ದು ಕೇಳಿಸಿತು. ಎತ್ತಿಕೊಂಡು ಅವಳ ಮುಖ ನೋಡಿದ. ಕಣ್ಣೀರಿನಿಂದ ಒದ್ದೆಯಾಗಿದ್ದ ಕಣ್ಣು ಕೆನ್ನೆಗಳನ್ನ ಚುಂಬಿಸಿದ. ಬೆನ್ನು ಹಿಡಿದಿದ್ದ ತನ್ನ ಎಡಗೈ ಮ್ಯಾಲೆ ಬಾರು ಮೂಡಿ ಚರ್ಮ ಕಿತ್ತಲ್ಲಿಂದ ಹರಿವ ನೆತ್ತರಿಂದ ಕೈ ಒದ್ದೆಯಾಯ್ತು.

“ಏನೇನು ನಡೆಯಿತು ಹೇಳೇ ಮುದ್ದಿನ ಮಡದಿ; ಅಂಗೈ ಅರಗಿಣಿಯಂಗೆ ನೋಡಿಕೊಂಡ್ನಲ್ಲೇ, ಯಾಕೆ ಹಿಂಗಾಯ್ತು? ಇಷ್ಟದಲ್ಲಿ ಸೋತೆಯೋ ಕಷ್ಟದಲ್ಲಿ ಸೋತೆಯೋ? ಹೇಳೆ”

-ಎಂದ ತಾನೂ ಕಣ್ಣೀರು ಸುರಿಸುತ್ತ, ಸಿರಿಲಕ್ಕಿ ಬಿಕ್ಕಿದಳೆ ವಿನಾ ಮಾತಾಡಲಿಲ್ಲ. ಬಿಕ್ಕುತ್ತ ಪುನಃ ಅವನ ಕಾಲು ಹಿಡಿದು “ಕೊಲ್ಲು ನನ್ನ” ಎಂದಳು. ಇನ್ನಷ್ಟು ಕೋಪ ಬಂದು ಬದೆಗ ಅವಳ ತುರುಬಿಗೆ ಕೈ ಹಾಕಿ “ಹೇಳೋದಿಲ್ಲವೇನೇ?” ಅಂದ.

“ಇಲ್ಲ.”

“ಅಂಗಾ? ಮಾಡಬಾರದ ಕೆಲಸಕ್ಕೆ ಕೊಡಬಾರದ ಶಿಕ್ಷೆಯೇ ಸೈ”

-ಎಂದು ಅವಳ ಜುಟ್ಟು ಹಿಡಿದು ಕೈ ದಣಿಯುವಷ್ಟು ಗುದ್ದಿದ. ಕಾಲು ದಣಿಯುವಷ್ಟು ಒದ್ದ. ಆಮೇಲೆ ಅವಳ ತಲೆಯಿಂದ ಅವಳ ಕೂದಲನ್ನು ಕೀಳಬೇಕೆಂದು ತಲೆಗೆ ಜಿಗ್ಗಾಲು ಕೊಟ್ಟು ಜೋರಿನಿಂದ ಎಳೆದ. ಸಿರಿಲಕ್ಕಿ ವಿಕಾರವಾಗಿ ಕಿರಿಚಿದ್ದೇ ಆಯಿತು, ಆ ದನಿಗೆ ಬೆರಗಾಗಿ ಕೈ ಸಡಿಲು ಬಿಟ್ಟ. ತಕ್ಷಣ ಅವಳು ಜೋರಿನಿಂದ ಅವನ ಮುಖಕ್ಕೆ ಒದ್ದು ಎದ್ದು ಓಡಬೇಕೆನ್ನುವಷ್ಟರಲ್ಲಿ ಕಾಲು ಇವನ ಕಾಲಿಗೆ ತಾಕಿ ಬಿದ್ದಳು. ಈತ ತಕ್ಷಣ ರಭಸದಿಂದ ಅವಳ ಕಾಲು ಹಿಡಿದೆಳೆದ. ಬೆನ್ನುಮೇಲಾಗಿ ಬೊಕ್ಕ ಬೋರಲಾಗಿ ಬಿದ್ದಳು. ಕೂಡಲೇ ಅವಳ ಮೇಲೆ ಹಾರಿ ಬೆನ್ನುಹುರಿಗೆ ಬಾಯಿ ಹಾಕಿ ಕುರಿಮರಿಯನ್ನು ಚಿರತೆ ಸಿಗಿಯುವಂತೆ ಹಲ್ಲಿನಿಂದ ಸಿಗಿದು ಎಡಗಡೆ ಚೆಲ್ಲಿದ. ಅಡಿಗೆ ಕೋಣೆಯ ಬಾಗಿಲ ಚೌಕಟ್ಟಿಗೆ ತಲೆ ಬಡಿದು ತಲೆ ಬೆನ್ನುಗಳಿಂದ ನೆತ್ತರು ಸುರಿದು ಮಡುಗಟ್ಟಿತು.

ಮಾರನೆ ಬೆಳಿಗ್ಗೆ ಅವಳ ಹೆಣವ ಒಂದು ಕಡಿತ ಕಡಿದು ಇಕ್ಕಡಿ ಮಾಡಿದ. ಇನ್ನೊಂದು ಕಡಿತ ಕಡಿದು ಮೂರು ತುಂಡು ಮಾಡಿ ಮೂರು ಹಾದಿ ಕೂಡುವಲ್ಲಿ ಇಟ್ಟು ನಾಯಿ ನರಿ ಹದ್ದು ಕಾಗೆಗಳಿಗೆ ಭಕ್ಷ್ಯಭೋಜ್ಯ ನೀಡಿದ. ನದಿಗೆ ಬಂದು ಋಣ ತೀರಿತೆಂದು ಮೂರು ಬೊಗಸೆ ನೀರು ಬಿಟ್ಟ. ಅಲ್ಲೇ ಸಿರಿಲಕ್ಕಿ ಬಟ್ಟೆ ಒಗೆವ ಕಲ್ಲಿನ ಮೇಲೆ ರಾಜಕುಮಾರನಿಗಾಗಿ ಕಾಯುತ್ತ ಕೂತ.

ನಾಕು ತಾಸು ಹೊತ್ತೇರಿರಬೇಕು ರಾಜಕುಮಾರ ಕುದುರೆಯೇರಿ ಬಂದ. ಕೊಡಲಿ ಹಿಡಿದುಕೊಂಡು ಕೂತ ಬದೆಗನನ್ನು ನೋಡಿದ್ದೇ ಕಾಡಿನಲ್ಲಿ ಕದುರೆಯನ್ನ ಓಡಿಸಿದ. ಆಮ್ಯಾಲೆ ಬದೆಗನ ಸಿಟ್ಟು ಇಳಿಯಿತು ಅಂತಿಟ್ಟುಕೊ. ಈ ಕತೆಯನ್ನ ಹೇಳಿ ಕೇಳೋದರಿಂದ ಯಾರಿಗೂ ಯಾವ ಪುಣ್ಯಫಲ ಇಲ್ಲವಾಗಿ ನೀನೂ ಯಾರ ಮುಂದೂ ಹೇಳಬ್ಯಾಡ ನನ್ನೊಡೆಯಾ" ಅಂದು, ಮುಂದೆ ಬದೆಗನ ಅಧಿಕಾರ ಮತ್ತು ಸಂಬಳಗಳನ್ನು ಹೆಚ್ಚಿಸಿ ಬದೆಗ ತನಗಾದ ಅವಮಾನವನ್ನು ಮರೆಯುವಂತೆ ಪ್ರಧಾನಿ ವ್ಯವಸ್ಥೆ ಮಾಡಿದ್ದನ್ನು ಹೇಳಿ ಸುಕ್ರ ತನ್ನ ಕಥೆ ಮುಗಿಸಿದ.

## ಮೂವತ್ತು

ಸುಕ್ರ ಬಿಳಿಗಿರಿಗೆ ಹೋಗಿ ಬಂದರೂ ಬಯಸಿದ ಪ್ರಯೋಜನವಾಗಲಿಲ್ಲ. ಅರಸು ಪ್ರಧಾನಿಯಿರಲಿ, ಸಾಮಾನ್ಯ ಭಂಟರೂ ವೈಯಕ್ತಿಕವಾಗಿ ಕನಕಪುರಿಯಿಂದ ಅವಮಾನಗೊಂಡವರ ಹಾಗೆ ಬಾಯಿಗೊಂದೊಂದು ಉದ್ಧಟತನದ ಮಾತಾಡಿದ್ದರು. ಭೂಮಿಯ ಮೇಲೆ ನಾವಿರಬೇಕು, ಇಲ್ಲಾ ಅವರಿರಬೇಕು ಎಂಬಂಥ ವೀರಾವೇಶದ ಜಂಬಗಳನ್ನು ಕೊಚ್ಚಿಕೊಂಡಿದ್ದರು.

ಇಂಥ ನಿರಾಸೆಯ ವಾತಾವರಣದಲ್ಲೂ ಸುಕ್ರ ಬಿಳಿಗಿರಿಯವರ ಮನಸ್ಸಿನಲ್ಲಿ ಚಿಕ್ಕಮ್ಮಣ್ಣಿ ಮತ್ತು ರಾಜವೈದ್ಯನ ಬಗ್ಗೆ ಸದಭಿಪ್ರಾಯ ಮೂಡಿಸುವುದರಲ್ಲಿ ಯಶಸ್ವಿಯಾಗಿದ್ದ. ಅದಕ್ಕಾಗಿ ಅವನು ಅವರಿಬ್ಬರನ್ನು ಕನಕಪುರಿಯ ಅರಮನೆಯ ಬಳಗದಿಂದ ಬೇರ್ಪಡಿಸಿ ಅವರ ಒಂಟಿತನ, ಅವರು ಎದುರಿಸುವ ದೌರ್ಜನ್ಯಗಳನ್ನು ಇತ್ಯಾದಿ ಬಣ್ಣಿಸಿ ಅವರೂ ನಿಮ್ಮ ಬಳಗವೆಂದು ಹೇಳಿದ್ದ ಮತ್ತು ನಂಬಿಸಿದ್ದ. ಇದು ಸುಕ್ರನ ರಾಯಭಾರದ ದೊಡ್ಡ ಸಾಧನೆ.

ಅಂತೂ ದಂಡು ಮತ್ತು ಅವರು ಕೇಳಿದ ಎಂಟು ಸಾವಿರದ ಬದಲು ನಾಲ್ಕು ಸಾವಿರ ಹಣ ತಗೊಂಡು ಶಿಖರಸೂರ್ಯ ಯುದ್ಧಕ್ಕೆ ಹೊರಡುವುದೆಂದು ನಿರ್ಧಾರವಾಯಿತು. ಯುದ್ಧ ಮಾಡದೆ ಅವರು ಕೇಳಿದ ಹಣ ಕೊಟ್ಟು ಯುವರಾಜನನ್ನು ಬಿಡಿಸಿತರುವುದಷ್ಟೆ ಶಿಖರಸೂರ್ಯನ ಕೆಲಸ. ಅವರು ಹಣ ತಗೊಂಡೂ ಕೈ ಎತ್ತದಂತೆ, ಯುವರಾಜನ ಜೀವಕ್ಕೆ ಅಪಾಯವಾಗದಂತೆ ಕರೆತರುವುದು ರಾಜವೈದ್ಯನ ಕರ್ಮಕೌಶಲಕ್ಕೆ ಬಿಟ್ಟದ್ದು. ಇದೆಲ್ಲವೂ ಕೈಮೀರಿ ಅನಿವಾರ್ಯವಾದರೆ ಯುದ್ಧ ಮಾಡುವುದೆಂದು ತಾಕೀತು ಮಾಡಲಾಯಿತು.

ಇತ್ತ ಕನಕಪುರಿಗೆ ತಿಳಿಯದಂತೆ ಸುಕ್ರನ ನೇತೃತ್ವದಲ್ಲಿ ಒಂದು ಕಡಿಮೆ ನಲವತ್ತರ ಎರಡು ಪಡೆಗಳನ್ನು ಸಿದ್ಧ ಮಾಡಿಟ್ಟು ಅವರು ಬಿಳಿಗಿರಿ ಸಮೀಪದ ಹದ್ದಿನ ಕೊಳ್ಳದಲ್ಲಿ ತನ್ನ ಆಜ್ಞೆಗಾಗಿ ಕಾಯುತ್ತಿರುವಂತೆ ಶಿಖರಸೂರ್ಯ ಸುಕ್ರನಿಗೆ ಹೇಳಿ ಕಳಿಸಿದ.

ಹೊರಡುವ ಮುನ್ನ ರಾಜವೈದ್ಯ ಚಿಕ್ಕಮ್ಮಣ್ಣಿಯಲ್ಲಿಗೆ ಹೋಗಿ, ಬಾಗಿ ನಮಸ್ಕಾರವ ಮಾಡಿ ಕೈಮುಗಿದೇ ನಿಂತುಕೊಂಡ. ಚಿಕ್ಕಮ್ಮಣ್ಣಿ ಜಯ ಒದಗಲೆಂದು ಹಾರೈಸಿ, ಆಶೀರ್ವಾದ ಮಾಡಿ, ಹೇಳಿದಳು:

"ನನ್ನ ಚಿಕ್ಕಣ್ಣಂಗೆ ಹೇಳಿ ಅಳಿಯಂದಿರೇ, ತಾಯಿ ಮಗಳ ಬಗ್ಗೆಯಾದರೂ ಯೋಚಿಸಿ ಯುವರಾಜನನ್ನು ಕಳಿಸಿಕೊಡಬೇಕೆಂದು ಸೆರೆಗೊಡ್ಡಿ ಬೇಡಿದೆ ಅಂತ ಹೇಳಿರಿ. ಯುದ್ಧ ಮಾಡದೆ ಯುವರಾಜನನ್ನು ಕರೆತಂದರೆ ಬಹಳ ಒಳ್ಳೆಯದು. ಯುದ್ಧದ ಪ್ರಸಂಗ ಅನಿವಾರ್ಯವಾದರೆ ಬಿಳಿಗಿರಿಯನ್ನು, ಬಿಳಿಗಿರಿಯ ಬಳಗವನ್ನ ಕಾಪಾಡಿರಿ. ತೌರುಮನೆಯ ಮಗಳಾಗಿ ನಾನಿಷ್ಟು ಹೇಳಬಲ್ಲೆ. ಮುಂದಿನದು ಶಿವನ ಚಿತ್ತ!"

ಸಿದ್ಧತೆಗಳೆಲ್ಲ ಮುಗಿದ ಮೇಲೆ ಕನಕಪುರಿಯ ದಂಡು ಬೆಳ್ಳಿ ಮೂಡುವ ಮುನ್ನ ಬಿಳಿಗಿರಿ ಗುರಿಯಾಗಿ ಹೊರಟಿತು. ನೂರಾಳಿನ ಮೂರು ಪಡೆಗಳಾಗಿ ಹೊರಟ ದಂಡು ಕನಕಪುರಿ ಬಿಟ್ಟು ಬಹಳ ಹೊತ್ತಿನ ತರುವಾಯ ಹಟ್ಟಿಯೊಂದರಲ್ಲಿ ಕೋಳಿ ಕೂಗಿದ್ದನ್ನು ಕೇಳಿಸಿಕೊಂಡಿತು.

ಅಗತ್ಯವಿದ್ದಲ್ಲಿ ಮಾತ್ರ ಮಾತಾಡುವ ಭಂಟರು, ಕುದುರೆ, ಕತ್ತೆಗಳ ಕಾಲಸಪ್ಪಳ ಹಾಗೂ ಚಿನ್ನದ ಹಂಡೆ ಮತ್ತು ಸಿಡಿತಲೆ ಹೇರಿದ ಬಂಡಿಗಳ ಗಾಲಿಗಳ ಸದ್ದಿನಿಂದಾಗಿ ಕಾಡು ಭಯಭೀತಿಗೊಂಡು ಪಿಸುಗುಡುವಂತೆ ಕೇಳಿಸುತ್ತಿತ್ತು.

ಎರಡು ಹಗಲು ಎರಡು ರಾತ್ರಿ ನಡೆದು ಮೂರನೇ ದಿನದ ಬೆಳಿಗ್ಗೆ ಬಿಳಿಗಿರಿ ಬೆಟ್ಟ ತಲುಪಿದ ದಂಡು ಬಿಡದಿ ಹೂಡಿ, ಪ್ರಾತರ್ವಿಧಿಗಳನ್ನು ತೀರಿಸುವ ಮೊದಲೇ ಇವರ ಆಗಮನದ ಸಮಯವನ್ನು ಅರಿತು ಬಿಳಿಗಿರಿ ಭಂಟರು ಎದುರುಗೊಂಡು, ಮೂರು ಸಲ ಕಿರಿಚಿ ದಾಳಿ ನಡೆಸುವ ಸೂಚನೆ ಕೊಟ್ಟರು! ನೆಲದ ಮೇಲಿನ್ನೂ ತಳವೂರದ, ಮಾನಸಿಕವಾಗಿ ದಣಿವು ಮತ್ತು ಅರೆನಿದ್ದೆಯ ಮಂಪರಿನಲ್ಲಿದ್ದ ಕನಕಪುರಿ ಭಂಟರಿಗೆ ಇದು ಅನಿರೀಕ್ಷಿತವಾಗಿತ್ತು. ಅವಸರವಸರವಾಗಿ ಕೈಗೆ ಕೈಯಂಗಿ, ಮೈಗೆ ಮೈಯಂಗಿ, ಕಾಲಿಗೆ ಚಲ್ಲಣ ಹಾಕಿಕೊಂಡರು. ಕೈದುಗಳ ಹೊರತೆಗೆಯುವಷ್ಟರಲ್ಲಿ ಸನ್ನೆಯ ಕೊಂಬು ಹಲಗೆಯ ಶಬ್ದ ಕೇಳಿಸಿತು. ಇವರು ಸದ್ದನ್ನಾಲಿಸಿ ಸಿದ್ಧರಾಗುವುದಕ್ಕೇ ಅವಕಾಶ ಕೊಡದೆ ದಂಡಿಗೆ ದಳವಾಯಿಯಾಗಿ ಕುದುರೆ ಮೇಲಿದ್ದ ಬಲವಂತನನೇ ಗುರಿಯಾಗಿ ಎಸೆದ ಬಾಣವೊಂದು ಬಲವಂತ ತನ್ನ ಭಲ್ಲೆಯನ್ನು ಬಲವಾಗಿ ಹಿಡಿದುಕೊಂಡಿದ್ದ. ಬೆವರಿನಿಂದ ಅಂಗೈ ತೊಯ್ದು ಹೋಯಿತು. ಇನ್ನೊಂದು ಬಾಣ ಬಂದಾಗ ತಲೆತಗ್ಗಿಸಿ ಕುದುರೆಯ ಕತ್ತಿಗೆ ಒರಗಿದ. ಕುದುರೆಯ ಬೆವರಿನ ವಾಸನೆ ಅವನ ಮೂಗು ತುಂಬಿತು.

ಈ ಅನಿರೀಕ್ಷಿತ ಆಕ್ರಮಣದಿಂದ ಸೇನಾಪತಿಯ ರಕ್ತ ವೇಗವಾಗಿ ಚಲಿಸತೊಡಗಿತು. ಆದರೆ ಜಾತಿವಂತ ಭಂಟನಾಗಿದ್ದರಿಂದ ಸ್ವಲ್ಪ ಹೊತ್ತಿನಲ್ಲಿಯೇ ಅವನ ನರನಾಡಿಗಳು ನಿಯಂತ್ರಣಕ್ಕೆ ಬಂದು ಸ್ಥಿರಗೊಂಡವು. ಕಿವಿಗಳಲ್ಲಿ ಮಾತ್ರ ಹಿಂದೆ ಹಾದು ಹೋದ ಬಾಣಗಳ ಸೊಂಯ್ ಸೊಂಯ್ ಶಬ್ದ ಸುತ್ತುತ್ತಲೇ ಇತ್ತು. ಆದರೆ ಯಾವಾಗ ಇನ್ನೊಂದು ಬಾಣ ಗುರಿತಪ್ಪಿ ಕುದುರೆಯ ಕತ್ತಿಗೆ ನೆಟ್ಟಿತೋ ಕುದುರೆ ಚಂಗನೆ ಮೇಲೆ ನೆಗೆಯಿತು. ಅನಿರೀಕ್ಷಿತ ನೆಗೆತದಿಂದ ಬಲವಂತ ಕೆಳಗಡೆ ಬಿದ್ದ. ಮರುಕ್ಷಣವೇ ಇನ್ನೊಮ್ಮೆ ನೆಗೆದ ಕುದುರೆ ಗೊರಸಿನ ಕಾಲನ್ನು ಅವನ ತೊಡೆಯ ಮೇಲೂರಿದಾಗ ಅವನ ತೊಡೆಯೆಲುಬು ಮುರಿದ ಕರಕರ ಸದ್ದು ಕೂಡ ಕೇಳಿಸಿತು! ಅಷ್ಟರಲ್ಲಿ ಹಿಂದಿನಿಂದ ಬಂದ ವೈರಿಭಂಟನ ಕುದುರೆ ಕೂಡ ಅದೇ ಜಾಗದಲ್ಲಿ ಕಾಲೂರಿ ಓಡಿಹೋಯಿತು. ಬಲವಂತ ನರಳಲಿಲ್ಲವಾದರೂ ಕಾಲು ಹಿಡಿದುಕೊಂಡು, ಹಲ್ಲುಕಚ್ಚಿ, ಜೋರಿನಿಂದ ಕಣ್ಣು ತೆರೆದಾಗ ಕಣ್ಣು ಹೊರಬಂದಂತೆನಿಸಿತು. ಆಮೇಲೆ ಕನಕಪುರಿಯ ಅನೇಕರ ಕುದುರೆಗಳು ಸವಾರರ ಸಮೇತ ನೆಲಕ್ಕುರುಳಿದವು. ಬಲವಂತನ ಕಣ್ಣೀರು ಚಿಮ್ಮಿ ಕೆನ್ನೆಗಳು ಒದ್ದೆಯಾದವು. ದೂರದ ಕಂದಕದ ಕಡೆಯಿಂದ ಬಲವಂತನತ್ತ ಈಟಿ ಹಿಡಿದುಕೊಂಡೊಬ್ಬ ಭಂಟ ಓಡಿಬರುತ್ತಿದ್ದ. ಅಷ್ಟರಲ್ಲಿ ಶಿಖರಸೂರ್ಯ ಖಡ್ಗ ಹಿರಿದುಕೊಂಡು ಬಂದವನೇ ಬಿಳಿಗಿರಿ ಸೈನಿಕನ ತಲೆಗೆ ಬಲವಾದ ಏಟು ಕೊಟ್ಟ. ಭಂಟನ ಮುಖ ಕರ್‍ರಗಾಗಿ ತಲೆ ಕೆಳಗಾಗಿ ಉರುಳಿ ಬಿದ್ದ. ನೆತ್ತರು ಚಿಮ್ಮಿ ಭುಜದಗುಂಟ ಕೆಳಗಿಳಿದು ಬಟ್ಟೆ ಕೆಂಪಗಾಯಿತು.

ಬೇರೊಂದು ದಿಕ್ಕಿನಲ್ಲಿದ್ದ ಬಿಳಿಗಿರಿ ಭಂಟರೂ ಒಟ್ಟಾಗಿ ಬಲವಂತನ ಹಿಂದಿನಿಂದ ಬಂದು ಅವನ ಮತ್ತವನ ಹಿಂದಿನ ಭಂಟರ ಮೇಲೆ ಬಿದ್ದರು. ಈ ಅನಿರೀಕ್ಷಿತ ಆಕ್ರಮಣದಿಂದ ಅಕ್ಕಪಕ್ಕದ ಎಲ್ಲ ಕನಕಪುರಿ ಭಂಟರು ತತ್ತರಿಸಿ, ಬಿಲ್ಲು ಬಾಣ ಈಟಿ ಖಡ್ಗಗಳ ಎಸೆದು ವಿರುದ್ಧ ದಿಕ್ಕಿಗೆ ಪಲಾಯನ ಗೈದರು. ಈಗ ಶಿಖರಸೂರ್ಯ ತನ್ನ ದೊಡ್ಡ ದೇಹವನ್ನು ಬಿಳಿಗಿರಿಯವರ ಎದುರಿಗೊಡ್ಡಿ ನಿಂತ! ಒಂದು ಕ್ಷಣ ಬಿಳಿಗಿರಿ ದಂಡಿನಲ್ಲಿ ಗೊಂದಲವುಂಟಾಗಿ ಎಲ್ಲವೂ ನಿಶ್ಯಬ್ಧವಾಯಿತು.

ಅಷ್ಟರಲ್ಲಿ ಒಬ್ಬ ಭಂಟ "ವೈದ್ಯ! ರಾಜವೈದ್ಯ! ಸಲ್ಲದು ಸಲ್ಲದು ಇವನೊಂದಿಗೆ ಕದನ! ಬನ್ರೋ!" ಎಂದು ಮುನ್ನುಗ್ಗುತ್ತಿರುವ ತನ್ನ ಭಂಟರನ್ನು ತಡೆದ. ಕ್ಷಣಮಾತ್ರದಲ್ಲಿ ಬಿಳಿಗಿರಿ ಭಂಟರಲ್ಲಿ ಪರಿವರ್ತನೆಯಾಗಿ ಅಷ್ಟೇ ಶೀಘ್ರ ಪರಿಣಾಮವೂ ಕಂಡು ಬಂತು. ಕೈದುಗಳ ಸುಮ್ಮನೆ ಹಿಡಿದುಕೊಂಡು ಒಬ್ಬೊಬ್ಬರೇ ರಾಜವೈದ್ಯನನ್ನು ತದೇಕದೃಷ್ಟಿಯಿಂದ ನೋಡುತ್ತ ಹಿಂದಿರುಗಿದರು! ಒಬ್ಬಿಬ್ಬರು ನಮಸ್ಕಾರವನ್ನೂ ಆಚರಿಸಿದರು!

ಈ ಬೆಳವಣಿಗೆಯಿಂದ ಶಿಖರಸೂರ್ಯ ನಿಬ್ಬೆರಗಾದ. ಇದು ಸುಕ್ರನ ರಾಯಭಾರದ ಪವಾಡವೆಂದು ತಿಳಿಯಲು ರಾಜವೈದ್ಯನಿಗೆ ಬಹಳ ಸಮಯ ಹಿಡಿಯಲಿಲ್ಲ. ಸಾವಧಾನದಿಂದ ಯೋಚಿಸುವ ಸಮಯವೂ ಇದಲ್ಲವೆನ್ನಿಸಿ, ದಂಡಿನ ಕಡೆಗೆ ನಡೆದ. ಕುದುರೆಯಿಂದಿಳಿದು ಬದೆಗನನ್ನು ಕರೆದು ಸೇನಾಪತಿಯ ಬಳಿ ನಿಲ್ಲಿಸಿ, ಅಕ್ಕ ಪಕ್ಕ ಅಲ್ಲೇ ಹುಡುಕಾಡಿ ಸಿಕ್ಕ ಒಂದು ಸೊಪ್ಪನ್ನು ದಳವಾಯಿಯ ತೊಡೆಯ

ಗಾಯದ ಮೇಲೆ ಹಿಂಡಿದ. ಆಮೇಲೆ ತನ್ನ ಎದೆ ಮೇಲಿನ ಬಟ್ಟೆಯ ಒಂದು ತುಂಡು ಹರಿದು ಗಾಯಕ್ಕೆ ಕಟ್ಟಿದ. ತೊಡೆಯ ಕೆಳಗೆ ರಕ್ತ ಮಡುಗಟ್ಟಿತ್ತು. ಬಟ್ಟೆಯ ಮೇಲೆಯೇ ಇನ್ನೊಮ್ಮೆ ಸೊಪ್ಪು ಹಿಂಡಿದ. ತುಸು ಹೊತ್ತಾದ ಬಳಿಕ ರಕ್ತ ಸೋರುವುದು ಕಡಿಮೆಯಾಯ್ತು. ಗಾಡಿ ತರಿಸಿ ಮೆಲ್ಲಗೆ ಸೇನಾಪತಿಯನ್ನು ಅದರಲ್ಲಿಸಿರಿ ಒಬ್ಬ ಭಂಟನನ್ನು ಜೊತೆಗಿಟ್ಟು ಕನಕಪುರಿಗೆ ಕಳಿಸಿದ.

ಕನಕಪುರಿಯ ಅನೇಕ ಭಂಟರು ಕುದುರೆ, ಈಟಿ, ಬಿಲ್ಲು ಬಾಣ ಕಳೆದುಕೊಂಡು ಬಿದ್ದು ನರಳುತ್ತಿದ್ದರು. ಒಬ್ಬನ ಕೆನ್ನೆಯ ಮೇಲೆ ಕುದುರೆ ಲಾಳದ ಗುರುತು ಮೂಡಿತ್ತು. ಇನ್ನೊಬ್ಬನ ಮುಖದಲ್ಲಿ ಸುಟ್ಟುಕೊಂಡ ಚರ್ಮದಂಥ ಗಾಯವಾಗಿತ್ತು. ಆತ ಬಿಳಿಗಿರಿಯ ಭಂಟರನ್ನು ಬಾಯಿಗೆ ಬಂದಂತೆ ಬಯ್ಯುತ್ತಿದ್ದ. ಮಾತಿಗೊಮ್ಮೆ ವೀರಾವೇಶದಿಂದ ಎದ್ದೆದ್ದು ಬೀಳುತ್ತಿದ್ದ. ಹಲ್ಲು ಕಚ್ಚುತ್ತ ಸೇಡು ತೀರಿಸಿಕೊಂಬ ಆಣೆ ಪ್ರಮಾಣ ಮಾಡುತ್ತ ಶಾಪಗಳ ಕಿರುಚುತ್ತಿದ್ದ. ಇನ್ನೊಬ್ಬನ ತುಟಿ ಮತ್ತು ಗದ್ದದ ಚರ್ಮ ಹರಿದು ಕಿತ್ತ ನಾರಿನಂತೆ ಅವನ ಕಲ್ಲೀಮೀಸೆ ಜೋತಾಡುತ್ತಿತ್ತು.

ಅಂದಿನ ಯುದ್ಧ ಅನಿರೀಕ್ಷಿತವಾಗಿ ಇಳಿಹೊತ್ತಿಗೇ ಒಂದು ನಿಲುಗಡೆಗೆ ಮುಟ್ಟಿದ್ದರಿಂದ ಶಿಖರಸೂರ್ಯ ಎಲ್ಲರ ಉಸಾಬರಿಯನ್ನು ಬದೆಗನಿಗೆ ವಹಿಸಿಕೊಟ್ಟ. ಸುಕ್ರನನ್ನು ಕರೆತರಲು ಭಂಟನೊಬ್ಬನನ್ನಟ್ಟಿ ತಾನು ಸೀದಾ ಬಿಳಿಗಿರಿಯ ಅರಮನೆಗೆ ಕುದುರೆ ಓಡಿಸಿದ.

ಇಡೀ ಬಿಳಿಗಿರಿ ತನ್ನ ಮನಸ್ಸುಗಳನ್ನು ಅಲಂಕರಿಸಿಕೊಂಡು ಇವನನ್ನು ಸ್ವಾಗತಿಸಲು ಸಿದ್ಧವಾಗಿತ್ತು. ಅದ್ಯಾವುದನ್ನೂ ಗಮನಿಸದೆ ಸೀದಾ ಅರಮನೆಗೆ ಹೋಗಿ “ಯುವರಾಜನೆಲ್ಲಿ?” ಎಂದು ಅರಸು ಪ್ರಧಾನರನ್ನು ಕೇಳಿದ. ಆವಾಗ ಗುಟ್ಟು ಬಯಲಾಯಿತು: ಯುವರಾಜ ಅವರಲ್ಲಿ ಇರಲಿಲ್ಲ!

ಹತಾಶೆ, ನಾಚಿಕೆಗಳಿಂದ ಶಿಖರಸೂರ್ಯನ ಮುಖ ವಿವರ್ಣವಾಯಿತು. ತಾನಿನ್ನು ಅಣಕಕ್ಕೆ, ಅವಿಶ್ವಾಸಕ್ಕೆ ಗುರಿಯಾಗಬೇಕಾಯಿತೆಂದು ಅನ್ನಿಸಿ ಕನಕಪುರಿಯಲ್ಲಿ ತನ್ನ ಮುಖದಲ್ಲಿ ಬಿಂಬಿತವಾಗಬಹುದಾದ ಬಾಲಿಶ ಪ್ರವೃತ್ತಿಗೆ ನಾಚಿಕೊಂಡ. ಸರಿಪಡಿಸಲಾರದ ತಪ್ಪು ದಾರಿಯಲ್ಲಿ ತಾನು ಹೆಜ್ಜೆಯಿಟ್ಟೆನೆಂದು ಖಾತ್ರಿಯಾಗಿತ್ತು. ಸಿಡುಕಿನ ಮುಖದಿಂದ ಅತ್ತಿತ್ತ ಅಲೆದಾಡಿದ. ಮುಷ್ಠಿ ಬಿಗಿದು ಸಡಿಲಗೊಳಿಸಿ ಪೀಠದ ಮೇಲೆ ಕೂತ, ಎದ್ದ. ಅರಸು ಪ್ರಧಾನರಿಬ್ಬರೂ ನಿಶ್ಯಬ್ದರಾಗಿ ಇವನನ್ನೇ ನೋಡುತ್ತ ಕೂತರು. ನೋಟದ ಮೂಲಕ ಒಳಕ್ಕಿಳಿದು ಹೃದಯಗಳನ್ನು ಭೇದಿಸುವಂತೆ ನೇರ ಅವರ ಮುಖ ನೋಡುತ್ತ ಅರಸು ಪ್ರಧಾನರನ್ನು ಪುನಃ ಪುನಃ ಪ್ರಶ್ನಿಸಿದ. ಸಿಕ್ಕ ಉತ್ತರ ಮಾತ್ರ ಒಂದೇ; ನಮಗೆ ತಿಳಿಯದು. ಆಮೇಲೆ ಬಿಳಿಗಿರಿಯರಸ ಹೇಳಿದ:

“ನಿಮ್ಮಲ್ಲಿ ಯುವರಾಜನಿಲ್ಲವೆಂದು ತಿಳಿಯಿತು. ನಮ್ಮಲ್ಲಿದ್ದಾನೆಂದು ಹೇಳಿ ನಾವು ಕಳೆದುಕೊಂಡ ಚಿನ್ನವನ್ನು ನಿಮ್ಮಿಂದ ವಸೂಲಿ ಮಾಡುವುದೊಂದೇ ನಮ್ಮ ಉದ್ದೇಶವಾಗಿತ್ತು; ಇಷ್ಟೆ ಕಣಪ್ಪ!”

“ಇದರ ಪರಿಣಾಮ ಏನಾಗುತ್ತದೆಂದು ಊಹಿಸಿದ್ದೀರಾ?”

“ಖಂಡಿತ ಊಹಿಸಿದ್ದೆವು. ಎಲ್ಲವೂ ನಮ್ಮ ಲೆಕ್ಕದಂತೆ ನಡೆದಿದ್ದರೆ ನಾವು ಸುರಕ್ಷಿತವಾಗಿ ಅವರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದೆವು. ಈ ಸಲದ ನಮ್ಮ ತಯಾರಿ ಮೂರು ಪಟ್ಟು ಹೆಚ್ಚಿತ್ತು. ನೀವು ಯುದ್ಧಕ್ಕೆ ಬಂದುದರಿಂದ ನಮ್ಮ ಯೋಜನೆ ತಲೆಕೆಳಗಾಯ್ತು.”

ಅದೇನೋ ನಿಜವೆ. ಅವರ ಯೋಜನೆಯಂತೆ ಮೊದಲೇಟಿಗೇ ದಳವಾಯಿಯನ್ನು ಮುಗಿಸಿ ಕನಕಪುರಿಯವರಿಗೆ ಏಳಲಾರದ ಏಟು ಕೊಟ್ಟಿದ್ದರು. ಕನಕಪುರಿಯ ಅಶ್ವದಳ ಸಂಪೂರ್ಣ ನಾಶವಾಗಿ ಸುಮಾರು ನಲವತ್ತು ಕುದುರೆಗಳನ್ನು ಕಳೆದುಕೊಂಡಿದ್ದರು. ಅಸಮಾಧಾನದ ಸಂಕಟದಿಂದ ಶಿಖರಸೂರ್ಯ ಕೇಳಿದ-

“ಇದು ತಪ್ಪಲ್ಲವೇ?”

"ಆಶ್ರಿತ ರಾಜನ ಚಿನ್ನವ ಅಪಹರಿಸಿ ಅವನನ್ನ ವಿಷಕನ್ಯೆಯ ಸಾಂಗತ್ಯದಿಂದ ಕೊಲ್ಲಿಸುವುದು ಸರಿಯೊ? ನೀವೇ ಹೇಳಿ ಕವಿರಾಜರೇ."

ಶಿಖರಸೂರ್ಯ ಸುಮ್ಮನಾದ. ಆದರೆ ಪ್ರಧಾನಿ ಸುಮ್ಮನಿರದೆ ಮುಂದುವರೆಸಿದ.

"ಮಹಾರಾಜರು ಸಾವಿಗೀಡಾದ ದುಃಖದಲ್ಲೇ ನಾವಿರುವಾಗ ಯುವರಾಜ ಭಂಟರೊಡನೆ ಬಂದು ಬಚ್ಚಿಟ್ಟ ಚಿನ್ನವ ಕದ್ದುಕೊಂಡು ಹೋದ. ಅದು ಸರಿಯೊ? ಅವನನ್ನು ಬಂಧಿಸದೆ ಚಿನ್ನಕ್ಕಾಗಿ ಪ್ರಯತ್ನ ಮಾಡಿದ್ದರಿಂದ ನಾವು ಎಡಬಿಡಂಗಿಯಾದೆವು. ಇಲ್ಲದಿದ್ದರೆ ಈಗವನು ನಮ್ಮ ಬಂಧಿಯಾಗಿರುತ್ತಿದ್ದ. ಆಗ ಮಾತ್ರ ಯಾರು ಬಂದು ಕೇಳಿಕೊಂಡರೂ ನಾವು ಅವನನ್ನು ಬಿಡುತ್ತಿರಲಿಲ್ಲ."

ಪ್ರಧಾನಿಯ ತರ್ಕಸರಣಿ ಸರಿಯಾಗಿಯೇ ಇತ್ತು. ಕನಕಪುರಿಯದೆ. ಅತಿಯಾಸೆಯಿಂದಾಗಿ ಪರಿಣಾಮವನ್ನು ಅನುಭವಿಸಬೇಕಷ್ಟೆ. ಎಂದು ಮನಸ್ಸಿನಲ್ಲಿಯೆ ಯೋಚಿಸಿ "ಆದರೆ ಯುವರಾಜ ಏನಾದ? ಆತ ಸತ್ತದ್ದಾದರೂ ಖಾತ್ರಿಯಾಗಬೇಕಲ್ಲ?" ಎಂದು ಅರ್ಧ ತನಗೂ ಅರ್ಧ ಪ್ರಧಾನಿಗೂ ಹೇಳಿದ.

"ನನಗೂ ಅದೇ ಆಶ್ಚರ್ಯ ಕವಿರಾಜರೇ! ನಮ್ಮ ಚಿನ್ನ ದೋಚಿಕೊಂಡು ಕನಕಪುರಿಗೆ ಹೋದ ಅಂದುಕೊಂಡೆವು. ಅವನು ಅಲ್ಲಿಗೇ ಬಂದಿಲ್ಲವೆಂದರೆ ನಮಗೂ ಆಶ್ಚರ್ಯವೇ!"

"ಆಯ್ತು ಈ ಅರಮನೆಯ ಅಳಿಯನಾಗಿ ಹೇಳುತ್ತೇನೆ: ಪ್ರಧಾನರೆ, ನೀವು ಪುನಃ ಯುದ್ಧಕ್ಕೆ ತೊಡಗಬಾರದು."

ಅದಕ್ಕೆ ಅರಸು ಹೇಳಿದ:

"ಮಾವನಾಗಿ ನಿಮಗೂ ಒಂದು ಮಾತು ಹೇಳುತ್ತೇನೆ: ನೀವು ನಮ್ಮ ಮನೆತನದ ಅಳಿಯಂದಿರು, ನಮ್ಮ ಕ್ಷೇಮವನ್ನು ನೋಡಿಕೋಬೇಕಾದ ಜವಾಬ್ದಾರಿಯೂ ನಿಮ್ಮದೇ, ಅದು ಇಂದಿನಿಂದಲೇ ಸುರುವಾಗಲಿ, ನಮ್ಮಲ್ಲೇ ಉಳಿಯಿರಿ." ಅಂದ.

ಶಿಖರಸೂರ್ಯ ಅವರ ಆತಿಥ್ಯ ವಹಿಸಿಕೊಂಡು ಸುಕ್ರನ ಕರೆತರಲು ಸೇವಕನನ್ನು ಅಟ್ಟಿ, ಚಡಪಡಿಸುತ್ತ ಕೂತ.

## ಮೂವತ್ತೊಂದು

ಸುಕ್ರ ಒಳಗೆ ಬಂದಾಗ ಶಿಖರಸೂರ್ಯ ಒಬ್ಬನೇ ಪೀಠದಲ್ಲಿ ಕುಳಿತು ಚಿಂತೆ ಮಾಡುತ್ತಿದ್ದ. ಅಸಮಾಧಾನದಿಂದ ಮುಖ ಕಿವುಚಿ, ಕೂದಲು ಕೆದರಿ ವಿಕಾರಗೊಂಡಿತ್ತು. ಸುಕ್ರ ಬಂದು ನಮಸ್ಕಾರವನ್ನಾಚರಿಸಿ ಕೂರುವುದೋ ನಿಲ್ಲುವುದೋ ತಿಳಿಯದೆ ಯೋಚಿಸುತ್ತಿದ್ದಾಗ ಅವನ ಮುಖ ನೋಡದೆ ಶಿಖರಸೂರ್ಯ "ಕೂರು ಸುಕ್ರ" ಅಂದ. ನೆಲದ ಮ್ಯಾಲೆ ಕುಂತ. "ಮ್ಯಾಲೆ ಕೂರು" ಅಂದ. ಸುಕ್ರ ಅನತಿ ದೂರದ ಪೀಠದಲ್ಲಿ ಕೂತ. ಇವನು ಮಾತಾಡಲೆಂದು ಅವನು, ಅವನು ಸುರುಮಾಡಲೆಂದು ಇವನು ಮಾತಿಲ್ಲದೆ ಸುಮಾರು ಹೊತ್ತು ಕೂತರು. ಹೇಳುವುದಕ್ಕೆ ಹೊಸದೇನೂ ಇಲ್ಲವೆಂದು ಶಿಖರಸೂರ್ಯನಿಗೆ ಗೊತ್ತಿತ್ತು. ಏನೋ ಆತಂಕವಿದೆಯೆಂದು ಸುಕ್ರನಿಗೆ ಗೊತ್ತಾಯಿತು. ಶಿಖರಸೂರ್ಯ ಹತಾಶನಾಗಿ ಬಾಯಿಬಿಟ್ಟ.

"ಸುಕ್ರಾ ನಾನು ಸೋತೆ."

ಏನಂದೆ? ಎಂಬಂತೆ "ಒಡೆಯಾ...?" ಅಂದ ಸುಕ್ರ.

“ಸುಕ್ರಾ, ಯುವರಾಜನೆಲ್ಲಿ?”

“ಇದೇ ಅರಮನೆಯಲ್ಲಿ! ಯಾಕೆ ಅರಮನೆಯಲ್ಲಿ ಇಲ್ಲವೆ ಒಡೆಯಾ?”

ಎನ್ನುತ್ತ ಆಘಾತ ಅನುಭವಿಸಿ ಎದ್ದುನಿಂತ. ಶಿಖರಸೂರ್ಯ ಮಾತಾಡದೆ ಇಲ್ಲವೆಂದು ಕತ್ತಲುಗಿಸಿ ದಯನೀಯವಾಗಿ ಸುಕ್ರನ ಕಡೆ ನೋಡಿದ. ಸುಕ್ರ ಹೊಯ್ಕಿನಿಂದ ಬಾಯಮೇಲೆ ಕೈ ಇಟ್ಟುಕೊಂಡು ಶಿಖರಸೂರ್ಯನ ಮುಂದೆ ನೆಲದ ಮೇಲೆ ಕೂತ.

“ನಮ್ಮ ಮುಂದೆ ಎರಡು ಪ್ರಶ್ನೆ ಇವೆ. ಯುವರಾಜ ಸತ್ತಿದ್ದಾನೆಯೇ? ಇಲ್ಲಾ ಜೀವಂತ ಇದ್ದಾನೆಯೇ? ಸತ್ತಿದ್ದರೆ ಯಾರು ಕೊಂದರು? ಯಾವಾಗ? ಯಾಕೆ? ಬದುಕಿದ್ದರೆ ಎಲ್ಲಿದ್ದಾನೆ?”

“ಅರಮನೆಯಲ್ಲಿ ಇಲ್ಲ ಅಂತಿಯಾ?”

“ಖಂಡಿತಾ ಇಲ್ಲಿಲ್ಲ ಮಾರಾಯ. ಯುವರಾಜ ಬಿಳಿಗಿರಿಯಲ್ಲಿ ಇಲ್ಲ ಅಂತಾಯ್ತಲ್ಲ, ಕಳೆದುಕೊಂಡ ಚಿನ್ನದ ಆಸೆಯಿಂದ ಈ ಆಟ ಹೂಡಿದ್ದಾರೆ, ಮೂರ್ಖರು. ಹಾಗಂತ ಬಿಳಿಗಿರಿಯನ್ನು ದಂಡಿಸಲಿಕ್ಕಾದೀತ?”

ಬಿಳಿಗಿರಿ ಸುಕ್ರನ ಮಾತೃಭೂಮಿ ಎಂದು ಶಿಖರಸೂರ್ಯ ಬಲ್ಲ. ಅಲ್ಲದೇ ಆ ವಿಚಾರವೂ ಅವನಲ್ಲಿರಲಿಲ್ಲ. ಮಾತಿಗೆ ಮಾತು ಬಂದು ಹೇಳಿದ್ದ ಅಷ್ಟೆ. ಕನಕಪುರಿ ದಂಡಿಸಬೇಕೆಂದರೂ ಸುಕ್ರ ಹೇಳಿದಂತೆ ಬಿಳಿಗಿರಿ ಈಗ ಬಲಾಢ್ಯ ರಾಜ್ಯವಾಗಿತ್ತು.

“ಹಾಗಿದ್ದರೆ ನೀನೇ ಹೇಳಯ್ಯಾ, ನಾನೇನು ಮಾಡಲಿ? ಬರಿಗೈಯಲ್ಲಿ ನಿರ್ಲಜ್ಜನಾಗಿ ಕನಕಪುರಿಗೆ ಹೋಗಲ? ಇಲ್ಲಾ ಸಾಯಲ?”

ಸಮಸ್ಯೆಯ ಗಾಂಭೀರ್ಯದ ಅರಿವಾಗಿ ಸುಕ್ರ ತಲೆಯ ಮೇಲೆ ಕೈ ಇಟ್ಟುಕೊಂಡು ‘ಎಲಾ ಬೆಟ್ಟದಯ್ಯನೇ!’ ಎಂದು ಹಾಗೇ ಕುಸಿದು ಕೂತ. ಆಮೇಲೆ ತಂತಾನೇ ಹಸ್ತಾಭಿನಯ ಮಾಡುತ್ತ ಪ್ರಶ್ನೋತ್ತರಿಸಿಕೊಳ್ಳತೊಡಗಿದ. ಸ್ವಗತದಲ್ಲೇ ಒಂದು ತೀರ್ಮಾನಕ್ಕೆ ಬಂದು

“ಯುವರಾಜ ಈ ಲೋಕದಲ್ಲೇ ಇಲ್ಲ ಅಂದಮ್ಯಾಕೆ ನಾವೆಲ್ಲಿಂದ ತರಬೇಕು ಒಡೆಯಾ?” ಅಂದ.

“ಹಾಗಿದ್ದರೆ ಹ್ಯಾಗೆ ಇಲ್ಲದಾದ? ಯಾಕೆ? ಸತ್ತನ? ಮಾಯವಾದನ?”

“ಅದನ್ನೆಲ್ಲಾ ಶೋಧನೆ ಮಾಡೋಣೇಳು. ನಮಗವನು ಸಿಗಾಕಿಲ್ಲ ಅನ್ನು. ಹಾಗಂತ ನೇಣು ಹಾಕ್ಕೋ ಅಂತೀಯಾ?”

“ಅದಲ್ಲಪ್ಪ ನಾನು ಹೇಳೋದು. ನೀನೇ ಹೇಳಯ್ಯಾ, ಕೊಟ್ಟ ಮಾತು ಹೆಚ್ಚೊ? ಮಾತು ಮುರಿದು ಬದುಕೋದು ಹೆಚ್ಚೊ?”

“ಕೊಟ್ಟ ಮಾತು ಹೆಚ್ಚು.”

“ಅಷ್ಟೆ ಕಣಯ್ಯಾ, ಇಲ್ಲಿಗೆ ಬರೋದಕ್ಕೆ ಮುಂಚೆ ಯುವರಾಜನನ್ನು ಕೂದಲು ಕೊಂಕದ ಹಾಗೆ ತಂದುಕೊಡ್ತೇನೆ ಅಂತ ಮಹಾರಾಣಿಗೆ ಮಾತು ಕೊಟ್ಟೆ. ಈಗ ಬರಿಗೈಲಿ ಹೋಗೋದು ಯೋಗ್ಯವ?”

“ನೀ ಯೇಳಾದು ನಿಜ. ಕೊಟ್ಟಮಾತು ಬಿಟ್ಟ ಮ್ಯಾಕೆ ಏನುಳೀತು?”

ಎಂದು ನಿರಾಸೆಯಿಂದ ತಲೆಮೇಲೆ ಕೈಹೊತ್ತು ಕೂತ ಸುಕ್ರ. ಹುಲಿಯಂಥವ ಕೊಟ್ಟ ಮಾತಿನ ವಿಚಾರ ಬಂದ ತಕ್ಷಣವೆ ಮೆತ್ತಗಾಗಿ ಅಳುಮುಖ ಮಾಡಿದ್ದನ್ನು ನೋಡಿ ಅವನ ಬಗ್ಗೆ ಅಪಾರ ಮೆಚ್ಚುಗೆ ಉಂಟಾಯ್ತು ಶಿಖರಸೂರ್ಯನಿಗೆ. ಜೊತೆಗೇ ಈತನನ್ನು ಉಪಯೋಗಿಸಿಕೊಂಬ ಸುಲಭೋಪಾಯವೂ ಸಿಕ್ಕಿತು. ಭಾವುಕತೆಗೆ ಒಳಗಾದಂತೆ ಹತ್ತಿರ ಹೋಗಿ, ಅವನ ಭುಜದ ಮ್ಯಾಲೆ ಸ್ನೇಹದಿಂದ ಬಲಗೈ ಊರಿ ಮಾತಿಗೆ ತಡಕಾಡಿದಂತೆ ಅಭಿನಯಿಸಿ,

"ಸುಕ್ರಾ" ಅಂದ.

"ಒಡೆಯಾ" ಎಂದು ಎದ್ದು ನಿಂತ ಸುಕ್ರ.

"ಮುಳುಗೋನಿಗೆ ಹುಲ್ಲುಕಡ್ಡಿ ಆಧಾರ ಅಂದಂತೆ ಈಗ ಒಂದು ದಾರಿ ಉಳಿದಿದೆ ಸುಕ್ರ."

"ಅದೇನು ನನ್ನಪ್ಪ"

"ಇದು ಗೊತ್ತು ಮುಟ್ಟಿದರೆ ನಾನು ಉಳಿಯುತ್ತೇನೆ. ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ತೇನೆ."

"ಅದೇನು ಹೇಳು ಶಿವ, ಬೆಟ್ಟದಯ್ಯ ಇದ್ದಾನೆ."

-ಎಂದು ಇನ್ನೇನು ಅಳುವ ಸ್ಥಿತಿಯಲ್ಲಿ ನಿಂತ ಸುಕ್ರ. ಶಬ್ದಗಳಿಗೆ ಮುದ್ದಿನ ಶಕ್ತಿ ತುಂಬಿ ನೇರವಾಗಿ ಸುಕ್ರನ ಕಣ್ಣುಗಳನ್ನೇ ನೋಡುತ್ತ ಹೇಳಿದ:

"ಸುಕ್ರ, ಯುವರಾಜನನ್ನ ಬದೆಗ ಬಚ್ಚಿಟ್ಟಿರಬಹುದ?"

"ಅವನ್ಯಾಕೆ ಬಚ್ಚಿಡ್ತಾನೆ?"

"ಹಳೇ ಸೇಡಿನಿಂದ"

"ಅವ ಅದನೆಲ್ಲಾ ಮರ್ತಿದಾನಒಡೆಯಾ... ನಾ ನಂಬಲಾರೆ...."

ಎನ್ನುತ್ತ ಹಿಂದೆ ಸರಿದ. ಬರಬರುತ್ತ ಕಣ್ಣಂಚಿನಲ್ಲಿ ಸಣ್ಣ ಅನುಮಾನ ಮೂಡಿದ್ದರಿಂದ "ನಿನ್ನ ಸಮಾಧಾನಕ್ಕಾಗಿ ಬೇಕಾದರೆ ಕೇಳಲ?" ಎಂದ. ಯುವರಾಜ ಸಿಕ್ಕಿದ್ದರೆ ಶಿಖರಸೂರ್ಯ ನಿಜವಾಗಿ ಸಾಯುವನೆಂದು ಅವ ಬದುಕಿದರೆ ಸಾಕೆಂದು ಸಮೀಪ ಬಂದು 'ಇದೂ ಒಂದು ಒರೆಗೆ ಹಚ್ಚುವಾ' ಎಂದು,-

"ಬೆಟ್ಟದಯ್ಯನ ದಯದಿಂದ ಯುವರಾಜ ಬದೆಗನಿಂದ ಬದುಕಿರಲೂಬಹುದು. ನಾ ಈಗಲೇ ಹೋಗಿ ಇಚಾರಿಸಿಕೊಂಬರ್ಲಾ? ಅಂದ.

"ಸೂಕ್ಷ್ಮ ಇದೆ ಇರು. ಬದೆಗ ಅವನನ್ನು ಕೊಂದಿರಬಹುದು. ಇಲ್ಲಾ ಬಚ್ಚಿಟ್ಟಿರಬಹುದು. ಇಲ್ಲಾ ಎರಡೂ ಸುಳ್ಳಿರಬಹುದು. ಬದೆಗ ನಮ್ಮವನು. ಅವನಿಗೆ ಅಪಾಯ ಒದಗಬಾರದು. ವಿಷಯ ನಮ್ಮ ಮೂವರಲ್ಲೇ ಇರಬೇಕು. ನೀನು ಹೀಗೆ ಕೇಳಿದೆ ಅಂತ ಗೊತ್ತಾದರೂ ಪ್ರಧಾನಿ ಬದೆಗನನ್ನು ಬಿಡಲಾರ. ಅದಕ್ಕೇ ಇನ್ನೊಬ್ಬರಿಗೆ ಇದರ ವಾಸನೆ ಬರಕೂಡದು."

ಶಿಖರಸೂರ್ಯನ ಅಂತಃಕರಣಕ್ಕೆ ಸುಕ್ರ ಬೆಂಕಿಯ ಮುಂದಿನ ಬೆಣ್ಣೆಯಂತೆ ಕರಗಿದ. ಬದೆಗನ ಜೀವದ ಬಗ್ಗೆ ತಕ್ಷಣ ಚುರುಕಾಗಿ "ಅಂಗೇ ಆಗಲೇಳು" ಎಂದು ಹೇಳಿ,

"ಇಲ್ಲೀದನ್ನೆಲ್ಲ ನೀನು ನೋಡಿಕೊ. ಕನಕಪುರಿ ಬಿಟ್ಟರೂ ಬಿಳಿಗಿರಿ ಎಂದಿಗೂ ನಿನ್ನ ಕೈ ಬಿಡುವುದಿಲ್ಲ. ಇದನ್ನ ಚೆನ್ನಾಗಿ ನೋಡಿಕೊ. ನಾ ಬರೋಗಂಟಾ ಜೀವಕ್ಕೇನೂ ಮಾಡ್ಕೊಳ್ಳಾಕಿಲ್ಲ ಅಂತ ಬೆಟ್ಟದಯ್ಯನ ಮ್ಯಾಲೆ ಆಣೆ ಇಡು"

ಎಂದು ಅವನ ಬಲಗೈ ತಗೊಂಡು ತನ್ನೆರಡೂ ಹಸ್ತಗಳಲ್ಲಿ ಹಿಡಿದುಕೊಂಡ. ಶಿಖರಸೂರ್ಯ ಸುಕ್ರನ ಹಸ್ತಕ್ಕೆ ತನ್ನ ಇನ್ನೊಂದು ಹಸ್ತ ಸೇರಿಸಿ ಸುಕ್ರನನ್ನ ಬಾಚಿ ತಬ್ಬಿಕೊಂಡು "ಬೆಟ್ಟದಯ್ಯನ ಆಣೆ, ನೀ ಬರೋತನಕ ಏನೂ ಮಾಡಿಕೊಳ್ಳೋದಿಲ್ಲ" ಅಂತ ಹೇಳಿ ಆತ್ಮೀಯವಾದ ಕಣ್ಣೀರೆಂಬಂತೆ ಹರ್ಷದ ಕಣ್ಣ ಹನಿ ಉಕ್ಕಿಸಿ ಹಿಂದೆ ಸರಿದು ಸುಕ್ರನಿಗೆ ಕಾಣುವಂತೆ ಕಣ್ಣೊರೆಸಿಕೊಂಡು ಕಳಿಸಿದ. ಸುಕ್ರ ಮುದುಕಿಯರಂತೆ ಬಿಕ್ಕುತ್ತ ಹೋದ.

ಈಗ ಇಡೀ ಬಿಳಿಗಿರಿಯ ಅರಮನೆ ಮತ್ತು ಊರು ಶಿಖರಸೂರ್ಯನ ವಶವಾದವು. ಅದೇನು ಕನಕಪುರಿಯಂಥ ದೊಡ್ಡ ಮತ್ತು ಭವ್ಯವಾದ ಅರಮನೆ ಅಲ್ಲ. ಊರಿಂದ ಪ್ರತ್ಯೇಕವಾಗಿ, ಎತ್ತರದಲ್ಲಿದ್ದ ದೊಡ್ಡ ಮನೆ, ಅಷ್ಟೆ. ಮರದ ದೊಡ್ಡ ದೊಡ್ಡ ತಲೆಗಳಿಂದ ಕಟ್ಟಿದ್ದು ಅಪರೂಪದ ಕೆತ್ತನೆ ಕೆಲಸಗಳಿಂದ ಅಲಂಕೃತಗೊಂಡು ಸುಂದರವಾಗಿತ್ತು. ಅಲ್ಲಿಂದ ಅನತಿ ದೂರದಲ್ಲಿ ಊರಿತ್ತು. ಚಿಕ್ಕದೊಂದು ಪೇಟೆಯೂ ಇದ್ದ ಊರು. ರಸ್ತೆಗಂಟಿದ ಪ್ರತಿಯೊಂದು ಮನೆಯೂ ಒಂದಿಲ್ಲೊಂದು ಮಸಾಲೆ ಮಾರುವ ಅಂಗಡಿಯಾದ್ದರಿಂದ ವರ್ತಕರಲ್ಲದವರು ಎಲ್ಲಿರುತ್ತಾರೆ ಎಂಬ ಅನುಮಾನ ಬರುವಂತಿತ್ತು. ಅದಕ್ಕೇ ಏಲಕ್ಕಿ ಐದು ಸಾವಿರ, ಮೆಣಸು ಹತ್ತುಸಾವಿರದ ಸೀಮೆಅರಸ-ಎಂದೇ ಬಿಳಿಗಿರಿ ಅರಸನ ಬಿರುದು.

ಊರಿನವರು ಸದಾ ಮುಗುಳುನಗುವ ಸುಂದರ ಜನ. ಹಸಿರಿನಂಥ ಮುಗ್ಧರು. ಶಿಖರಸೂರ್ಯನಂತೂ ಅಲ್ಲಿಯ ಎಲ್ಲರ ಮೇಲೆ ಪ್ರಭಾವ ಬೀರಿಬಿಟ್ಟ. ಅವನ ವೈದ್ಯ ವಿದ್ಯೆಯ ಬಗ್ಗೆ, ವಜ್ರದೇಹದ ಬಗ್ಗೆ ಕೇಳಿ ತಿಳಿದುಕೊಂಡಿದ್ದರು. ಅವನ ಎತ್ತರವಾದ, ಆಕರ್ಷಕವೂ, ಕಿವಿಗೂದಲಿನಿಂದ ಭಯಾನಕವೂ ಆದ ವ್ಯಕ್ತಿತ್ವದಿಂದ ಎಲ್ಲರೂ ಅವನ ಸ್ನೇಹ ಸಂಪಾದನೆಗಾಗಿ ಹಾರೈಸುವಂತೆ ಮಾಡಿದ. ವೈರಿ ಕಡೆಯ ಭಂಟನೆಂದು ಯಾರೂ ತಿಳಿಯಲೊಲ್ಲರು. ಅವನು ಕೇಳುವ, ಬಯಸುವ ಯಾವುದೇ ಸೇವೆಯನ್ನು ಮಾಡುವುದಕ್ಕೆ ವಯಸ್ಸಾದ ರಾಜರಾಣಿಯರಿಬ್ಬರು ಹೊರತು ಉಳಿದೆಲ್ಲರೂ ತುದಿಗಾಲ ಮೇಲೆ ಸಿದ್ಧವಾಗಿದ್ದರು.

ಅರಮನೆಯಲ್ಲಂತೂ ಚಿಕ್ಕಮ್ಮಣ್ಣಿಯ ಅಳಿಯನೆಂದು ಎಲ್ಲರೂ ಆತ್ಮೀಯ ಗೌರವ ಕೊಡುತ್ತಿದ್ದರು. ಇವನೊಂದಿಗೆ ಮಾತಾಡಲು ಹವಣಿಸುತ್ತಿದ್ದರು. ವಿಚಿತ್ರ ಹಸ್ತಾಭಿನಯಗಳಿಂದ ಬಗೆಬಗೆಯ ನಮಸ್ಕಾರಗಳನ್ನಾಚರಿಸುತ್ತಿದ್ದರು. ಅವರ ಭಾಷೆ ಬೇಗ ಅರ್ಥವಾಗುತ್ತಿರಲಿಲ್ಲವಾದರೂ ಮಾತಿಗೊಮ್ಮೆ ಕವಿರಾಜನೆಂದೋ, ಚಿಕ್ಕಮ್ಮಣ್ಣಿಯ ಅಳಿಯನೆಂದೋ ಒಮ್ಮೊಮ್ಮೆ ಪಿಸುದನಿಯಲ್ಲಿ ಶಿಖರಸೂರ್ಯನೆಂದೋ ಹೇಳುತ್ತಿದ್ದರು.

ಬೆಳಿಗ್ಗೆ ನ್ಯಾರೆ ಮಾಡಿ ಕೈತೊಳೆದೇಳುವಷ್ಟರಲ್ಲಿ ಮಹಾರಾಣಿ ಸೇವಕಿಯ ಕೈಹಿಡಿದುಕೊಂಡು ಬಂದು

"ಅಳಿಯನೇ, ನಿನ್ನನ್ನು ಕಣ್ಣಾರೆ ಕಾಣುವ ಭಾಗ್ಯ ನನಗಿಲ್ಲವಪ್ಪ. ದೇವರು ಕಣ್ಣು ಕಸಿದುಕೊಂಡು ಬಿಟ್ಟ. ಹತ್ತಿರ ಬಾ. ಆಶೀರ್ವಾದ ಮಾಡುತ್ತೇನೆ."

ಎಂದು ಹತ್ತಿರ ಕರೆದು ಬೆನ್ನು ಭುಜ ಸವರಿ ತಲೆ ಮೇಲೆ ಕೈಯಿಟ್ಟು "ನೂರು ವರ್ಷ ಬದುಕು ನನ್ನಪ್ಪಾ. ನನ್ನಕ್ಕ ಚೆನ್ನಾಗಿದ್ದಾಳಪ್ಪ?" ಅಂದಳು. "ಚೆನ್ನಾಗಿದ್ದಾಳೆ ತಾಯೀ" ಅಂದು ಅವಳ ಕಣ್ಣ ನೋಡಿ, "ಇರಿ ಹಾಗೇ" ಎಂದು ಸ್ವಲ್ಪ ಹೊತ್ತು ಅವಳ ಕಣ್ಣಗಲಿಸಿ ನೋಡಿ-

ನಾಡಿ ಹಿಡಿದು ತಾಳೇ ಮಾಡಿ - ಸೇವಕನೊಬ್ಬನನ್ನು ಕರೆದುಕೊಂಡು ಅರಮನೆಯ ಹೊರಗೆ ಹೋದ. ಹೇಳದೆ ಕೇಳದೆ ಹೀಗೆ ಹೊರಗೆ ಹೋದದಕ್ಕೆ ಎಲ್ಲರಿಗೂ ಆಶ್ಚರ್ಯವಾಯಿತು.

ಊರ ಹೊರಭಾಗದ ಕಾಡಿನಲ್ಲಿ ಮಧ್ಯಾಹ್ನದವರೆಗೆ ಅಲೆದು ಸೊಪ್ಪು ತಂದ. ಬಂದು ಅಂಗೈಯಲ್ಲಿ ತಿಕ್ಕಿ ರಸರಸ ಮಾಡಿ ಮಹಾರಾಣಿಯ ಕಣ್ಣಲ್ಲಿ ಹಿಂಡಿದ. ಅರಮನೆಯ ಎಲ್ಲರೂ ಕಿಂಚಿತ್ ಸದ್ದು ಮಾಡದೆ ಅವನ ವೈದ್ಯಗಾರಿಕೆಯನ್ನು ಗಮನಿಸಿದರು. ಕೆಲವರು ಅವನ ವೈದ್ಯಕೀಯ ಪವಾಡಗಳ ಬಗ್ಗೆ ಪಿಸುದನಿಯಲ್ಲಿ ಮಾತಾಡಿಕೊಂಡು ಆನಂದಪಟ್ಟರು. ಅವಕಾಶ ಸಿಕ್ಕರೆ ಅರಸು ಮೊದಲುಗೊಂಡು ಆಳು ಕಡೆಯಾಗಿ ಎಲ್ಲರೂ ಅವನೊಂದಿಗೆ ಮಾತಾಡಲು ಸಿದ್ಧರಿದ್ದರು. ಆದರೆ ಅವನ ಚಿಂತಗಳೇ ಬೇರೆ. ಅವು ಅವರಿಗೆ ಅರ್ಥವಾಗುವಂತಿರಲಿಲ್ಲ.

ಸುಕ್ರ ಬಂದಿರಲಿಲ್ಲ. ಆತನಿಂದ ಸುದ್ದಿಯೂ ಬಂದಿರಲಿಲ್ಲ. ನಿರಾಸೆಯ ಸುದ್ದಿ ತಂದರೆ ಹ್ಯಾಗೆ ಎದುರಿಸುವುದೆಂದು ಯೋಚಿಸುತ್ತ ಕೂತಿದ್ದ. ಆದರೆ ತನ್ನ ಆತಂಕವನ್ನು ಯಾರಿಗೂ ತೋರಿಸಿಕೊಳ್ಳದೆ ಅನುಗ್ರಹಿಸುವಂತೆ ಎಲ್ಲರ ಕಡೆಗೆ ನೋಡುತ್ತ, ಅದೇನು ಇದೇನೆಂದು ಕೇಳಿ ಕೇಳಿ ಅರಮನೆಯ ಎಲ್ಲಾ ವಿವರಗಳನ್ನು ತಿಳಿದುಕೊಳ್ಳುತ್ತಿದ್ದ. ಅರಸು, ಪ್ರಧಾನಿಯೊಂದಿಗೆ ಹರಟೆ ಹೊಡೆದ. ಅವರು ಬೇಟೆಯಾಡುವ ಕ್ರಮ, ಅಲ್ಲಿ ಸಿಕ್ಕುವ ಪ್ರಾಣಿಗಳ ಬಗ್ಗೆ ತಿಳಿಯುತ್ತ ಸುತ್ತಲಿನ ಭೂಗೋಳವನ್ನು ಅಧ್ಯಯನ ಮಾಡಿದ. ಇಂಥ ಭಾವುಕ ಮತ್ತು ಹೆಂಗರುಳಿನ ಜನ ಇಷ್ಟೊಂದು ಶ್ರೀಮಂತ ರಾಜ್ಯವನ್ನು ಹ್ಯಾಗೆ ನಿಭಾಯಿಸುವರೆಂದು ಚಕಿತನಾದ. ಅರಸನಲ್ಲಿಗೆ ಹೋಗಿ ದೇಹವನ್ನು ಪರೀಕ್ಷಿಸಿ ಅವನ ಆರೋಗ್ಯ ಸುಧಾರಣೆಯ ಮದ್ದು ಕೊಡುವುದಾಗಿ ಹೇಳಿದ. ಅವನೆಲ್ಲಿ ಹೋದರೂ ಹೆಂಗಸರು ಕದ್ದು ಅವನನ್ನೇ ನೋಡುತ್ತಿದ್ದರು. ಆಕಸ್ಮಾತ್ ಆತನ ದೃಷ್ಟಿ ಅವರ ಮ್ಯಾಲೆ ಬಿದ್ದರೆ ಮುಗುಳುನಗುತ್ತ ಅವನ ದೃಷ್ಟಿಗಳನ್ನು ಸ್ವಾಗತಿಸುತ್ತಿದ್ದರು.

ಸಾಯಂಕಾಲವಾಗುವಾಗ ಪ್ರಧಾನಿ ಭೇಟಿಯಾದಾಗ ಆತ ಕೇಳದಿದ್ದರೂ

“ಕನಕಪುರಿಯಿಂದ ಸಂದೇಶ ಕಳಿಸಿದ್ದಾರಂತೆ ಅದಕ್ಕಾಗಿ ಕಾಯುತ್ತಿದ್ದೇನೆ” ಎಂದು ಹೇಳಿ ಅವನ ಕುತೂಹಲ ಕೆರಳಿಸಲು ನೋಡಿದ. ಅವನು ಸ್ಪಂದಿಸಲೇ ಇಲ್ಲ. ಅಂತೂ ರಾತ್ರಿಯಾಗಿ ಮಹಾರಾಣಿಯ ಕಣ್ಣಿಗೆ ಇನ್ನೊಮ್ಮೆ ಮದ್ದು ಹಿಂಡಿ ಉಂಡು ಮಲಗುವ ಹೊತ್ತಿಗೆ “ಒಡೆಯಾ” ಎಂದು ಸುಕ್ರನ ದನಿ ಕೇಳಿಸಿ ಗಡಬಡಿಸಿ ಎದ್ದು ಬಂದು ಕೋಣೆಯ ಬಾಗಿಲು ತೆಗೆದ. ಸುಕ್ರ ಕಂಡೊಡನೆ ಸರ್ರನೆ ಅವನ ಕೈಹಿಡಿದೆಳೆದುಕೊಂಡು ಒಳಬಂದು “ಹೋದ ಕೆಲಸವೇನಾಯ್ತು?” ಅಂದ.

“ನಿನಗೊಂದು ಬೆಲ್ಲದ ಸುದ್ದಿ ತಂದಿವ್ನಿ.”

ಎಂದು ಹೇಳಿ ಶಿಖರಸೂರ್ಯನ ಕಿವಿಯಲ್ಲಿ

“ಯುವರಾಜ ಈಗ ನಮ್ಮ ವಶದಲ್ಲವ್ನೆ”

ಎಂದು ಪಿಸುದನಿಯಲ್ಲಿ ನುಡಿದ. ಶಿಖರಸೂರ್ಯ ಜೋರಿನಿಂದ ಸುಕ್ರನ ಎಳೆದು ತಬ್ಬಿ, ತಕ್ಷಣ ಭಾವುಕತೆ ಎನ್ನಿಸಿ, ಬಿಟ್ಟು ಅವನ ಬಲ ಹಸ್ತವನ್ನು ತನ್ನೆರಡೂ ಹಸ್ತಗಳಿಂದ ಬಿಗಿ ಹಿಡಿದು, ತುಸುಹೊತ್ತು ಹಾಗೇ ಇದ್ದು “ಊಟಕ್ಕೇನು ಮಾಡಿದೆ?” ಅಂದ. ತಕ್ಷಣ ಸುಕ್ರ “ಬದೆಗ ಬಂದವ್ನೆ. ಹೋಗಿ ಕರೆದು ತಾ ಒಡೆಯಾ” ಎಂದು ಹೇಳಿದ. “ಕಾಣಲಿಲ್ಲವಲ್ಲ ಮಾರಾಯಾ” ಎನ್ನುತ್ತ ಹೊರಬಂದು ಮೂಲೆಯಲ್ಲಿ ನಿಂತಿದ್ದ ಬದೆಗನನ್ನು ಬರಸೆಳೆದು ತಬ್ಬಿಕೊಂಡು, ಬೆನ್ನು ಚಪ್ಪರಿಸಿ, ಕೈಹಿಡಿದು ಒಳಕ್ಕೆ ಕರೆತಂದ. ನೋಡಿದರೆ ಮೂವರ ಕಣ್ಣುಗಳೂ ಭಾವೋದ್ವೇಗದಿಂದ ಒದ್ದೆಯಾಗಿದ್ದವು. ಪರಸ್ಪರ ಮಾತಿಲ್ಲದೆ ಮೂವರೂ ತುಸುಹೊತ್ತು ನಿಂತಿದ್ದು, ಆಮೇಲೆ ಶಿಖರಸೂರ್ಯ ತನ್ನ ಭಾವನೆಗಳನ್ನು ನಿಯಂತ್ರಿಸಿಕೊಂಡು “ಮೊದಲು ಊಟ” ಎಂದು ಹೇಳಿ ಊಟದ ವ್ಯವಸ್ಥೆಗಾಗಿ ಹೊರಗಡೆ ಹೋದ.

ಆಮೇಲೆ ರಾತ್ರಿ ಬಹಳ ಹೊತ್ತಿನ ತನಕ ಮೂವರೇ ಕಿರುದನಿಯಲ್ಲಿ ಮಾತಾಡುತ್ತಾ ಕೂತರು. ಸುಕ್ರ ಮತ್ತು ಬದೇಗರ ಮೈಮುಖಗಳು ಧೂಳು ಬೆವರಿನಿಂದ ಹೊಲಸಾಗಿದ್ದವು. ಅಷ್ಟು ದೂರದಿಂದಲೂ ಅವರ ಮೈಯಿಂದ ಗಬ್ಬು ವಾಸನೆ ಬರುತ್ತಿತ್ತು. ಸುಕ್ರನಿಂದ ವಿವರಗಳು ತಿಳಿದುಬಂದವು:

ಶಿಖರಸೂರ್ಯ ಅಂದುಕೊಂಡಂತೆಯೇ ಬದೇಗ ಚೆನ್ನದ ಕಳವಿನ ರಾತ್ರಿ ಕಗ್ಗತ್ತಲೆಯ ಸಮಯ ಸಾಧಿಸಿ ವೈರಿ ಭಂಟರ ಕಡೆಯಿಂದ ನುಗ್ಗಿ ಯುವರಾಜನನ್ನು ಹಿಂದಿನಿಂದ ಇರಿದ. ಯುವರಾಜ "ಅಯ್ಯೋ" ಎಂದು ಕಿರಿಚಿ ಬಿದ್ದ. ಅವನು ಸತ್ತನೆಂದೇ ಬದೇಗ ತಿಳಿದಿದ್ದ. ಆದರೆ ತುಸು ಹೊತ್ತಾದ ಮೇಲೆ ಅದು ಮೂರ್ಛೆಯೆಂದು ಗೊತ್ತಾಗಿ ಮೂರ್ಛೆ ತಿಳಿದೇಳುವ ಲಕ್ಷಣ ಕಂಡು ಶಿಕ್ಷೆಯ ಬಗ್ಗೆ ಮನಸ್ಸು ಬದಲಿಸಿದ. ಯುವರಾಜನ ಬಾಯಿ ಕಟ್ಟಿ ಗೋಣಿ ಚೀಲದಲ್ಲಿ ತುಂಬಿ ಹೊತ್ತುಕೊಂಡೊಯ್ದ. ತನ್ನ ಬೀಗರ ಹಟ್ಟಿಯಾದ ಬೆಟ್ಟದಯ್ಯನ ಗುಡಿಯಲ್ಲಿಟ್ಟು ಇಬ್ಬರು ದಡಿಯರನ್ನ ಕಾವಲಿಗಿಟ್ಟು ಬಂದ.

ಇಷ್ಟು ದಿನವೂ ಅವರು ಅವನ ಜೊತೆ ಮಾತಾಡಿರಲಿಲ್ಲ. ಅಗತ್ಯವಿದ್ದಾಗ ಮಾತ್ರ ಬಾಯಿ ಬಿಚ್ಚಿ, ಉಳಿದಂತೆ ಕೈಬಾಯಿ ಕಟ್ಟಿಯೇ ಚೆಲ್ಲಿದ್ದರು. ಸ್ವಲ್ಪ ಸಲಿಗೆ ತಗೊಂಡರೂ, ದಡಿಯರು ಯುವರಾಜನನ್ನು ಪುಂಡು ದನವನ್ನು ಬಡಿದ ಹಾಗೆ ಬಡಿದು ಹಣ್ಣು ಮಾಡಿದ್ದರು. ಒದರಿದರೂ ಪ್ರಯೋಜನವಿರಲಿಲ್ಲ. ಯಾಕೆಂದರೆ ಯುವರಾಜನನ್ನು ಕೂಡಿಹಾಕಿದ ಬೆಟ್ಟದಯ್ಯನ ಗುಡಿ ಹಟ್ಟಿಯ ಬಿಟ್ಟು ದೂರದಲ್ಲಿತ್ತು. ತಪ್ಪಿಕೊಂಡ ಅವನಿಗೆ ತನ್ನನ್ನು ಹಿಡಿದು ತಂದವರ್ಯಾರೆಂದು, ಯಾಕೆಂದು, ತಾನೆಲ್ಲಿದ್ದೇನೆಂದು ತಿಳಿಯಲಿಲ್ಲ. ಕೊನೆಯಲ್ಲಿ ಸುಕ್ರ ತುರ್ತಾಗಿ ಹೇಳಿದ-

"ಬದೇಗ ನಿನ್ನ ಮಾತಿಗೆ ಗೌರವ ಕೊಟ್ಟು ಯುವರಾಜನನ್ನು ಬಿಟ್ಟವ್ನೆ. ಆದರಿನ್ನೂ ತನ್ನ ಹಳೇ ಕೋಪವ ಬಿಟ್ಟಿಲ್ಲ. ಒಂದೆರಡು ಬುದ್ಧೀ ಮಾತು ಹೇಳಿ ಅವನ ಕೋಪವ ಪಳಗಿಸು."

ಶಿಖರಸೂರ್ಯ ತಕ್ಷಣ ಬದೇಗನನ್ನು ಬೆಳಕನ್ನು ಮೆಲುಕಾಡಿಸುವ ಕಣ್ಣುಗಳಿಂದ ನೋಡಿದ. ಬದೇಗ ಉಗುರು ಕಚ್ಚುತ್ತ ಕುಂತಿದ್ದ. ಕೋಪಗೊಂಡ ಗೂಳಿಯ ಕಣ್ಣಿನಂತೆ ಅವನ ಕಣ್ಣು ಕೆಂಪಾಗಿದ್ದವು. ಮುಖ ಕಿವುಚಿ ವಿಕಾರವಾಗಿತ್ತು. ತಿರಸ್ಕಾರ ಹಾಗೂ ಕ್ರೌರ್ಯಗಳನ್ನು ಸೂಚಿಸಲು ಆತ ಪ್ರಯತ್ನಿಸುತ್ತಿರುವ ಹಾಗಿತ್ತು. ಶಿಖರಸೂರ್ಯ:

"ಬದೇಗ, ನನಗೆ ಉಪಕಾರ ಮಾಡಿದೆ ಮಾರಾಯ, ನಾನಿದನ್ನ ಎಂದಿಗೂ ಮರೆಯಲಾರೆ."

-ಎಂದ. ರಾಜವೈದ್ಯನ ಮಾತು ಕೇಳಿ ತಕ್ಷಣ ಅನಿರೀಕ್ಷಿತ ಮದ್ದಿನಂತೆ ಬದೇಗ ಸಿಡಿದು ಬಿಟ್ಟ-

"ಯಾರಿಗೆ ಬೇಕಿತ್ತು, ನಿನ್ನುಪಕಾರ? ಅವ ನನ್ನ ಗಂಡಸ್ತನಕ್ಕೇ ಔಮಾನ ಮಾಡಿ ನಾಯಿಗಿಂತ ಕಡೆಯಾಗಿ ಬದುಕುವಂತೆ ಮಾಡಿದ. ಅದು ನೆಪ್ಪಾದರೆ ಸಾಕು. ಈ ನಾಯಿನರಕದಲ್ಲಿ ಇನ್ನೂ ಬದುಕಿದ್ದೀನಲ್ಲೋ ಬೆಟ್ಟದಯ್ಯ ಅಂತ ಚೀರೋ ಹಂಗಾಯ್ತದೆ. ಇದೊಂದು ಸಣ್ಣ ಸೇಡು ತೀರಿಸಿಕೊಂಬೋವಾ ಅಂತಂದರೆ ನೀ ಅಡ್ಡ ಬಂದಿ!"

"ಹೌದೋ, ಅಂಥವ ಅಂದೇ ಕೊಲ್ಲಬೇಕಾಗಿತ್ತು. ಹೊತ್ತುಕೊಂಡು ಬೆಟ್ಟದಯ್ಯನ ಗುಡಿಗ್ಯಾಕೋ ಒಯ್ದೆ?"

"ನನ್ನ ಅಕ್ಕನ್ನ ಕೊಂದಿದ್ದರಲ್ಲ? ಇವನನ್ನೂ ಹಾಗೇ ಕೊಲ್ಲೋವಾ ಅಂತ ಕಾದಿದ್ದೆ. ನಡುವೆ ನೀ ನಿಂತಿಯಲ್ಲ ಮಾರಾಯಾ? ನನಗೀಗ ನನ್ನೆಲು ನಾನೇ ತಿಂದಂಗಾಯ್ತಿದೆ."

ಎನ್ನುತ್ತ ಮತ್ತೆ ಮತ್ತೆ ಅದೇ ಮೊಂಡಾದ ಉಗುರು ಕಚ್ಚುತ್ತ ಕೂತ. ಒದೇಗನ ಬಗ್ಗೆ ಸುಕ್ರನಲ್ಲೂ ಕಳವಳವಿತ್ತು. ಮಾತು ಬದಲಿಸಲೆಂದು, ಆದರೂ ತನ್ನ ಕುತೂಹಲ ಮರೆಯದೆ ಚಕಿತ ನೇತ್ರಗಳಿಂದ ನೋಡುತ್ತ

“ಅಂಗಾದರೆ ಒಡೆಯಾ, ಅದೆಂಗೆ ನಿನಗೆ ಯುವರಾಜ ಬದೆಗನಲ್ಲವ್ನೆ ಅಂತ ಗೊತ್ತಾಯ್ತು?”

“ನಿಜ ಹೇಳಲ ಸುಕ್ರ? ಬೆಟ್ಟದಯ್ಯನೇ ಕನಸಿನಲ್ಲಿ ಬಂದು ಬದೆಗನನ್ನು ತೋರಿಸಿ ನಕ್ಕ!”

ಎಂದೊಂದು ಸುಳ್ಳು ಬಿಟ್ಟ. ಇಬ್ಬರೂ ತಣ್ಣಗಾದರು! ಸುಕ್ರ “ನನ್ನೊಡೆಯಾ” ಅಂದು ತೆರೆದ ಬಾಯಿ ತೆರೆದಂತೆ ಕೂತಲ್ಲೇ ಕೈಮುಗಿದ. ಬದೆಗನೂ ಹಣ್ಣಾಗಿ

“ಔಂದೆ ಒಡೆಯಾ?” ಅಂದ.

“ಬೆಟ್ಟದಯ್ಯನ ಆಣೆಗೂ ನಿಜ ಬದೆಗ!”

ಇಂತೆಂದು ನುಡಿಯ ಬೀಸು ಬಲೆ ಎಸೆದು ಅವನ ಕೈ ತಗೊಂಡು ವಿಶ್ವಾಸ ಮೂಡುವಂತೆ ಹಿಸುಕಿ ಮೀನು ತಾನಾಗಿ ಬಂದು ಬಲೆಗೆ ಬೀಳುವಂತೆ ನಿಗೂಢ ನಗೆ ನಕ್ಕ. ನಿರೀಕ್ಷೆಯಂತೆ ಕೂಡಲೇ ಬದೆಗ ಅವನ ಕಾಲಿಗೆರಗಿದ!

ಬೆಳಿಗ್ಗೆ ಮೂವರೂ ಇನ್ನೂ ನಿದ್ರೆಯಲ್ಲಿದ್ದಾಗ ಅರಮನೆಯಲ್ಲಿ ಸಡಗರದ ಕಿರುಚಾಟ ಕೇಳಿಸಿತು. ಎದ್ದು ಏನೆಂದು ವಿಚಾರಿಸಿದರೆ; ಮಹಾರಾಣಿಗೆ ದೃಷ್ಟಿ ಬಂದಿತ್ತು! ಅದನ್ನಾಕೆ ಕಿರಿಚಿ ಕೂಗಿ ಎಚ್ಚರಿಸಿ ಹೇಳಿ ಆನಂದ ಪಡುತ್ತಿದ್ದಳು. ಹಾ ಎನ್ನುವುದರೊಳಗಾಗಿ ಸುದ್ದಿ ಊರು ತಲುಪಿ ಜನ ಹಿಂಡು ಹಿಂಡಾಗಿ ಅರಮನೆಗೆ ನುಗ್ಗತೊಡಗಿದರು. ಪ್ರಧಾನಿಯೂ ಓಡಿ ಬಂದ. ಅರಮನೆ ಮತ್ತು ಊರಿನ ಜನರ ಆಶ್ಚರ್ಯ ಆನಂದಗಳ ಬೆಲೆಯನ್ನು ವಸೂಲು ಮಾಡುವುದಕ್ಕೆ ಶಿಖರಸೂರ್ಯ ಹಂಚಿಕೆ ಹಾಕಿದ. ಅರಸು ಮತ್ತು ಪ್ರಧಾನಿ ಇರುವಲ್ಲಿಗೆ ಹೋದ. ಇಬ್ಬರೂ ಆನಂದ ಹೆಮ್ಮೆಗಳ ಮಡುವಿನಲ್ಲಿ ಮುಳುಗೇಳುತ್ತಿದ್ದರು. ನಮಸ್ಕಾರಗಳ ಆಚರಣೆ ಮುಗಿದು, ಅಳಿಯಂದಿರ ಗುಣಗಾನವಾಗಿ ಆಮೇಲೆ ಶಾಂತವಾಗಿ ಹೇಳಿದ:

“ಮಹಾರಾಜರಲ್ಲಿ ನನ್ನದೊಂದು ಪ್ರಾರ್ಥನೆಯಿದೆ. ಅಪ್ಪಣೆಯಾದರೆ ಕೇಳುತ್ತೇನೆ” ಅಂದ.

“ಅವಶ್ಯವಾಗಿ ಕೇಳಿ ಅಳಿಯಂದಿರೇ.”

“ನಿಮ್ಮ ಆಳ್ವಿಕೆಯ ಹದ್ದಿನ ಕೊಳ್ಳ ವೈದ್ಯರ ಸಸ್ಯಕಾಶಿ ಎಂದು ಕೇಳಿಬಲ್ಲೆ. ಆಗಾಗ ಅಲ್ಲಿದ್ದು ನನ್ನ ವೈದ್ಯಕೀಯ ಪ್ರಯೋಗಗಳನ್ನು ಮಾಡಿಕೊಂಡಿರಲಿಕ್ಕೆ ಅನುಮತಿ ಸಿಕ್ಕರೆ ನಾನು ಧನ್ಯ.”

ಎಂದು ಅನುಮಾನದಿಂದ ಕೇಳಿ ಅರಸು ಪ್ರಧಾನರ ಮುಖ ನೋಡಿದ. ಈಗ ರಾಜ ಬಾಯಿಹಾಕಿ

‘ಏನು’ ಮಾತು ಅಳಿಯಂದಿರೇ, ಇಡೀ ಕೊಳ್ಳ ನಿಮ್ಮದು. ಕೊಳ್ಳದಲ್ಲಿರುವ ಅರಮನೆಯೂ ನಿಮ್ಮದೇ ಅಂದುಕೊಳ್ಳಿರಿ. ಅಲ್ಲಿಗೆ ಬಂದವರು ನಮ್ಮಲ್ಲಿಗೂ ಆಗಾಗ ಬರುತ್ತಿರಿ. ನಮ್ಮ ಅರಮನೆಯಲ್ಲಿ ನಿಮಗೆ ರೋಗಿಗಳ ಕೊರತೆಯಂತೂ ಆಗುವುದಿಲ್ಲ.”

ಎಂದು ಹೇಳಿ ಡೊಳ್ಳು ಬಾರಿಸಿದಂತೆ ದೊಡ್ಡದಾಗಿ ನಕ್ಕ. ಇಂತು ಬಿಳಿಗಿರಿಯವರ ವಿಶ್ವಾಸ ಮತ್ತು ಹದ್ದಿನ ಕೊಳ್ಳದ ಕಾಣಿಕೆ ಪಡೆದು, ಕನಕಪುರಿಯವರು ಬಿಳಿಗಿರಿಗೆ ಕೊಡಲು ಹೇಳಿದ್ದ ಚಿನ್ನವನ್ನು ಗೌಪ್ಯವಾಗಿ ತನ್ನ ಮನೆಗೇ ತಲುಪಿಸಲು ಸುಕ್ರನಿಗೆ ವಹಿಸಿಕೊಟ್ಟು ಶಿಖರಸೂರ್ಯ ಕನಕಪುರಿಗೆ ಹೊರಟು ನಿಂತ. ಬೀಳ್ಕೊಡುತ್ತ ಅರಸು,- ‘ಮೊಮ್ಮಕ್ಕಳು ಸಮೇತ ಭಾಯಾದೇವಿ, ಚಿಕ್ಕಮ್ಮಣ್ಣಿಯನ್ನು ಕಳಿಸಲು’ ಹೇಳಿ ಕಳಿಸಿಕೊಟ್ಟ.

# ಮೂವತ್ತೆರಡು

ದಂಡು ಕನಕಪುರಿ ತಲುಪಿದಾಗ ಸಂಜೆಯಾಗಿತ್ತು. ಇವರು ಬರುವ ಸುದ್ದಿ ಮೊದಲೇ ತಲುಪಿದ್ದರಿಂದ ಕನಕಪುರಿ ಥರಾವರಿ ದೀಪಗಳಿಂದ ಝಗಮಗ ಹೊಳೆಯುತ್ತಿತ್ತು. ಆಗಲೇ ಪಶ್ಚಿಮದ ಬಿಳಿಗಿರಿಯಿಂದ ಪೂರ್ವದ ಕನಕಪುರಿಯವರೆಗೆ ಶಿಖರಸೂರ್ಯನ ಕೀರ್ತಿಪತಾಕೆ ಹಾರಾಡತೊಡಗಿತ್ತು. ಇವರನ್ನು ಸ್ವಾಗತಿಸಲು ಊರ ಅಗಸಿಗೇ ಅರ್ಥಕೌಶಲ, ವರ್ತಕ ಸಂಘದ ಅಧ್ಯಕ್ಷ ಪಟ್ಟಣಶೆಟ್ಟಿ, ಪರಮಶೆಟ್ಟಿ ಧನಪಾಲ ಮುಂತಾದವರು ಬಂದು ನಿಂತಿದ್ದರು. ಅರ್ಥಕೌಶಲ ಯುವರಾಜ ಮತ್ತು ಶಿಖರಸೂರ್ಯ ಇಬ್ಬರಿಗೂ ಮಾಲೆ ಹಾಕಿ ತಬ್ಬಿಕೊಂಡು ಕಣ್ಣೊದ್ದೆ ಮಾಡಿಕೊಂಡ. ಮೊದಲು ಚಿವುಟಿದರೆ ರಕ್ತ ಚಿಮ್ಮುವಂತಿದ್ದ ಯುವರಾಜ ಈಗ ಬರೀ ಚರ್ಮ ಮತ್ತು ಮೂಳೆಗಳಿದ್ದ ಬಡಕಲು ಪ್ರಾಣಿಯಂತಾಗಿದ್ದ. ಮುಖದಲ್ಲಿ ಕಳೆಯಿರಲಿಲ್ಲ. ಕೆನ್ನೆ ಕಣ್ಣುಗಳು ಒಳಸೇರಿ ಕುಳಿಬಿದ್ದಿದ್ದವು. ದಂಡು ಸಾಲಾಗಿ ನಿಂತ ಮೇಲೆ ಮೆರವಣಿಗೆ ಹೊರಟಿತು. ಮೆರವಣಿಗೆಯ ಹಿಂದೆ ಯುವರಾಜನ ಆನೆ ಮತ್ತು ಶಿಖರಸೂರ್ಯರ ಕುದುರೆಗಳು ಬರುತ್ತಿದ್ದವು.

ರಸ್ತೆಯ ಇಕ್ಕೆಲಗಳಲ್ಲಿ ಗಿಜಿಗಿಜಿ ಜನ ತುಂಬಿ ಯುವರಾಜ ಮತ್ತು ಶಿಖರಸೂರ್ಯರಿಗೆ ಜಯಕಾರ ಒದರುತ್ತಿದ್ದರು. ಇಬ್ಬರೂ ಜನರ ಜಯಕಾರ ಮತ್ತು ಅಭಿನಂದನೆಗಳನ್ನು ಮುಖದ ತುಂಬ ನಗುತ್ತ ಕೈಬೀಸಿ ಸ್ವೀಕರಿಸುತ್ತಿದ್ದರು. ಮೆರವಣಿಗೆ ಮುಂದುವರಿದಂತೆ ಮನೆಮನೆಯ ಸ್ತ್ರೀಯರು ನೀರು ನೀಡಿ ಆರತಿ ಬೆಳಗಿದರು. ಕೆಲವರು ಅವರ ಮೇಲೆ ಹೂ ಎಸೆದು ತಮ್ಮ ಆನಂದ ಅಭಿಮಾನಗಳನ್ನ ವ್ಯಕ್ತಪಡಿಸಿದರು. ಗೆಲುವು ತಂದುಕೊಟ್ಟ ಮತ್ತು ಕೊಟ್ಟ ಮಾತನ್ನು ಉಳಿಸಿಕೊಂಡ ಶಿಖರಸೂರ್ಯ ಬಹುದೊಡ್ಡ ಜನನಾಯಕನಾಗಿ ಬಿಟ್ಟಿದ್ದ. ಇವನ ಮೇಲೆ ಜನ ಯುವರಾಜನ ಎರಡು ಪಟ್ಟು ಹೂಮಳೆಗರೆದರು. ಇವನ ಜಯಘೋಷ ಮುಗಿಲು ಮುಟ್ಟುವಂತೆ ಒದರಿದರು. ಇಲ್ಲಿಯವರೆಗೆ ಅರಮನೆ ಮಾತ್ರ ಒಪ್ಪಿಕೊಂಡಿದ್ದ ರಾಜವೈದ್ಯನನ್ನು ಈಗ ಇಡೀ ಕನಕಪುರಿ ತಮ್ಮವನನ್ನಾಗಿ ಒಪ್ಪಿಕೊಂಡಿತು.

ಅರಮನೆಯಲ್ಲಿ ಮಹಾರಾಜ ಮಹಾರಾಣಿಯವರಿಬ್ಬರೂ ವಿಶೇಷ ಅಲಂಕಾರ ಮಾಡಿಕೊಂಡು ಹೊಳೆವ ಕಂಗಳಿಂದ ಕಾಯುತ್ತಿದ್ದರು. ಮಹಾರಾಜನ ಎದ್ದು ಕಾಣುವ, ಕೊಂಚ ಮಿತಿಮೀರಿ ಬೆಳೆದ ಕೊಬ್ಬಿನಿಂದಾಗಿ ಆತನ ಕೆನ್ನೆ ಫಳಫಳ ಹೊಳೆಯುತ್ತಿದ್ದವು. ಹಿಂದೆ ತಾನು ಬಿಳಿಗಿರಿಯನ್ನು ಗೆದ್ದಾಗಿನ ಪಟ್ಟೆ ಪೀತಾಂಬರದ ಉತ್ತರೀಯ ಮತ್ತು ಕೆಂಪಂಚಿನ ನೂಲು ಕಟ್ಟಿಕೊಂಡು ವಿಜಯದ ಕಡಗ ಧರಿಸಿ ಸೊಗಸುಗಾರನಂತೆ ಕಾಣುತ್ತಿದ್ದ. ಮಹಾರಾಣಿ ಜರತಾರಿ ಕುಸುರಿಯ ಪೀತಾಂಬರದಿಂದ ಅಲಂಕೃತಳಾಗಿದ್ದಳು. ಚಿಕ್ಕಮ್ಮಣ್ಣಿಯೂ ಅಲ್ಲಿಯೇ ನಿಂತಿದ್ದಳು. ಮಹಾರಾಣಿ ಮಗನನ್ನು ತಬ್ಬಿಕೊಂಡು ಅತ್ತುಬಿಟ್ಟಳು.

ಅರ್ಥಕೌಶಲ ಶಿಖರಸೂರ್ಯನಿಗೆ ಬಂಗಾರದ ಕಡಗ, ಮುಂಗೈ ಸರಪಳಿ ಕೊಟ್ಟು, ದೊಡ್ಡ ಹಚ್ಚಡ ಹೆಗಲ ಮೇಲೆ ಹೊದಿಸಿ, ವೀಳ್ಯ ಕೊಟ್ಟು ಸನ್ಮಾನಿಸಿದ. ಮಹಾರಾಜ ಮತ್ತು ಮಹಾರಾಣಿ ಬಿಳಿಯ ಕುದುರೆ, ಬಿಳಿಯ ಸತ್ತಿಗೆ ಕೊಟ್ಟು ಬಿರುದಾವಳಿಗಳಿಂದ ಹೊಗಳಿಸಿ ಉಂಬಳಿ ಉತ್ತಾರ ಬಿಟ್ಟರು. ವರ್ತಕ ಸಂಘದವರು ಜರದ ಶಲ್ಯ, ರೇಷ್ಮೆ, ದೋತರ, ಮೊಳಕೈ ಕಡಗ ಕೊಟ್ಟು ಸತ್ಕರಿಸಿದರು. ಶಿಖರಸೂರ್ಯ ಬದೆಗನನ್ನು ಮರೆಯಲಿಲ್ಲ. ಸೇನಾಪತಿ ಕಾಲ್ಮುರಿದು ಬಿದ್ದುದರಿಂದ ಖಾಲಿಯಾದ ಅವನ ಸ್ಥಳಕ್ಕೆ ಬದೆಗನನ್ನು ನಿಯಮಿಸುವಂತೆ ಮಾಡಿದ.

ಇನ್ನೊಂದು ದಿನ ಸುಕ್ರ, ಬದೆಗರನ್ನು ಕರೆದು ಬೆಟ್ಟದಯ್ಯನಿಗೆ ಬರುವ ಸೋಮವಾರ ಮೂರು ಕುಡುತೆ ತುಂಬೆ ಹೂ, ಮೂರು ಬಳ್ಳ ಬೆಳ್ತಿಗೆ ಅಕ್ಕಿ, ವೀಳ್ಯ, ಕಲ್ಲುಸುಣ್ಣ, ಕಪಿಲೆ ಹಾಲು, ಐದು ತೆಂಗಿನ ಕಾಯಿ ಕೊಟ್ಟು ತನ್ನ ಹೆಸರಿನಲ್ಲಿ ಪೂಜೆ ಪುನಸ್ಕಾರ ಆಚರಿಸಲು ಹೇಳಿ ಐದು ಹಣ ಕೊಟ್ಟ. ಹತ್ತು ಹಣ ಕೊಟ್ಟು ಬೆಟ್ಟದಯ್ಯನಿಗೆ ಒಂಟಿ ದೀವಟಿಗೆ, ತಾಳೆಗರಿಯ ಬೆಳ್ಗೊಡೆ, ಕೋಲು ಗಗ್ಗರ ಕಂಚಿನ ಗುರಾಣಿಯ ಉಡುಗೊರೆ ಕೊಡೆಂದು ಹೇಳಿದ. ಸಾವಿರ ಹಣ ಕೊಟ್ಟು ಬೆಟ್ಟದಯ್ಯನಿಗೆ ನೂರಿಪ್ಪತ್ತು ಕಂಬಗಳ ಗುಡಿ ಕಟ್ಟಿ, ನೂರಪ್ಪತ್ತು ಗೊಂಬೆಗಳ ಮಾಡಿ ಕಂಬಕ್ಕೊಂದು ಗೊಂಬೆ ನಿಲ್ಲಿಸುವಂತೆಯೂ, ಅಂಗಳದಲ್ಲಿ ಆನೆಕಲ್ಲಿನ ಕೆಲಸ ಮಾಡುವಂತೆಯು, ವರ್ಷಂಪ್ರತಿ

ನೇಮ, ಉತ್ಸವ ವ್ಯವಸ್ಥೆ ಮಾಡುವಂತೆಯೂ ಹೇಳಿದ. ತಮ್ಮ ದೇವರ ಬಗ್ಗೆ ತಮ್ಮೊಡೆಯನ ಭಕ್ತಿಯ ನೋಡಿ ಸುಕ್ರ ಬದೆಗರಿಬ್ಬರಿಗೂ ಒದ್ದೆ ಕಣ್ಣಿನವರಾಗಿ, ಆನಂದಗಳ ಮುಕ್ಕಳಿಸುವವರಾಗಿ ಅಂಡೆತ್ತಿ ಬಾಗಿ ನಮಸ್ಕಾರವನ್ನಾಚರಿಸಿ ಹಣದ ಸಮೇತ ತಮ್ಮ ಹಟ್ಟಿಗೆ ಹೋದರು.

ರಾಜವೈದ್ಯನ ಮಕ್ಕಳಿಬ್ಬರಿಗೂ ಹುಟ್ಟು, ಬಳಿಗಳ ಹೆಸರು ಹೇಳಿ, ಮಗನಿಗೆ ರವಿಕೀರ್ತಿಯೆಂದೂ, ಮಗಳಿಗೆ ಮುದ್ದುಗೌರಿಯೆಂದೂ ಮೂರು ಮೂರು ಸಲ ಕೂಗಿ ಕರೆದು, ಮರದ ತೊಟ್ಟಿಲುಗಳಿಗೆ ಬಣ್ಣದ ಗುಬ್ಬಿಗಳನ್ನು ಕಟ್ಟಿ ಅಟ್ಟದ ತೋಳಿಗೆ ಕಟ್ಟಿದರು. ಚಿಕ್ಕಮ್ಮಣ್ಣಿ ಶಿವ ಶಿವ ಪದ ಹೇಳಿ ಜೋಗುಳಗಳ ಹಾಡಿದಳು. ಬಿಳಿಗಿರಿಯಿಂದ ಮುದ್ದು ಗೌರಿಗೆ ಅತ್ತೀಕಾಯಿ ಕುಂಡಲ, ಕಂಠಕ್ಕೆ ಪಾರಿಜಾತ ಮಾಲೆ, ಕೈಗೆ ಮುರಿಗಿ ಬಳೆ, ಕಾಲಿಗೆ ಹುರಿಗೆಜ್ಜೆ, ಸೊಂಟಕ್ಕೆ ಪಟ್ಟಿ ಮಾಡಿಸಿ ಕಳಿಸಿದ್ದರು. ರವಿಕೀರ್ತಿಗೆ ಆಡಲು ಮುತ್ತಿನ ಚೆಂಡು, ಹವಳದ ಹರಳು, ಚಿನ್ನದ ಬಿಲ್ಲುಬಾಣಗಳ ಕಳಿಸಿದ್ದರು. ಮಕ್ಕಳಿಬ್ಬರೂ ಬಾಳುತ್ತ ಬೆಳೆಯುತ್ತ ಒಂದು ವರ್ಷ ಕಳೆವಾಗ ಕೈ ಹಿಡಿದು ನಡೆಯುತ್ತ, ಎರಡು ವರ್ಷಗಳ ಬೆಳವಣಿಗೆ ಬೆಳೆದರು. ಎರಡು ವರ್ಷ ಕಳೆವಾಗ ನಾಲ್ಕರ ಪ್ರಾಯದ ಬೆಳವಣಿಗೆ ಹೊಂದಿ, ಸಣ್ಣ ಪ್ರಾಯದಲ್ಲಿ ದೊಡ್ಡ ಬುದ್ಧಿಯ ತೋರಿಸುವಂಥವರಾದರು. ಆಟಗುಳಿ ಮಕ್ಕಳಿಬ್ಬರೂ ಹಾರಾಟವಾಡಿ ತಂದೆತಾಯಿಗಳಿಬ್ಬರ ಕಣ್ಣಿಗೆ ಹಬ್ಬವಾದರು. ಮಕ್ಕಳು ಕುಣಿದು ಕುಪ್ಪಳಿಸಿದರೆ ಶಿಖರಸೂರ್ಯ ಮತ್ತು ಛಾಯಾದೇವಿಯರಿಬ್ಬರೂ ಉಕ್ಕಿ ಬರುವ ಹರ್ಷ ಮತ್ತು ನಗುವನ್ನು ಮಿತಿಯೊಳಗಿಡಲು ಪ್ರಯತ್ನಿಸುತ್ತಿದ್ದರು. ತಡೆಯಲಾರದಾದಾಗ ಪರಸ್ಪರ ಮುಖ ನೋಡಿಕೊಂಡು ಮತ್ತೆ ನಗುತ್ತಿದ್ದರು.

ರವಿಕೀರ್ತಿಗೆ ಕಾಳಗದ ವಿದ್ಯಾಬುದ್ಧಿ ಓದು ಬರಹ ಕಲಿಸಿದರು. ಆತ ಒಂದನೇ ವರ್ಷ ಒಂದನೇ ಕಿತಾಬು ಕಲಿತ. ಎರಡನೇ ವರ್ಷ ಎರಡನೇ ಕಿತಾಬು ಕಲಿತ, ಅದಾಗಿ ಮೂರನೇ ವರ್ಷ ಮೂರನೇ ಕಿತಾಬು ಕಲಿತು ಕಲಿಕೆಯಲ್ಲಿ ಮಿಗಿಲಾದ. ಶಿಖರಸೂರ್ಯ ಮಕ್ಕಳಿಗೆ ಸ್ವಯಂ ಕೆಲವು ಪಾಠಗಳನ್ನು ಹೇಳಿದ: ಅವನ ಪ್ರಕಾರ ಈ ಜಗತ್ತು ನಡೆಯೋದು ಎರಡರಿಂದ: ಒಂದು ಚಿನ್ನ, ಇನ್ನೊಂದು ಬುದ್ಧಿಶಕ್ತಿ. ಚಿನ್ನದಿಂದ ಬಲ ಬರುತ್ತದೆ. ಬಲದಿಂದ ಅಧಿಕಾರ ಬರುತ್ತದೆ. ಚಿನ್ನ ಗಳಿಸಲಿಕ್ಕೆ ಮತ್ತು ಆ ಮೂಲಕ ಅಧಿಕಾರ ಪಡೆದು ಜನರನ್ನಾಳಲಿಕ್ಕೆ ಬುದ್ಧಿಶಕ್ತಿ ಬೇಕು.

ಮನುಷ್ಯ ದೇಹದಂಡನೆಯಿಂದ ಚಿನ್ನ ಗಳಿಸಬೇಕು ಎನ್ನುತ್ತಾರೆ. ಅದು ತಪ್ಪು. ದೇಹದಂಡನೆ ಮಾಡಲಿಕ್ಕೆ ಮನುಷ್ಯನೇನು ಪ್ರಾಣಿಯೆ? ಪ್ರಾಣಿಗಳಿಗೆ, ಪ್ರಾಣಿ ಸಮಾನರಿಗೆ ಬುದ್ಧಿಶಕ್ತಿ ಇರುವುದಿಲ್ಲವಾದ್ದರಿಂದ ಅಂಥವರು ದೇಹದಂಡನೆ ಮಾಡುತ್ತಾರೆ. ಆದರೆ ಮನುಷ್ಯ ಬುದ್ಧಿಜೀವಿ! ತಲೆ ಉಪಯೋಗಿಸಬೇಕು. ಆ ಮೂಲಕ ಚಿನ್ನ, ಚಿನ್ನದಿಂದ ಬಲ, ಬಲದಿಂದ ಅಧಿಕಾರ ಪಡೆದು ಜಗತ್ತನ್ನಾಳಬೇಕು. ಅಂದರೆ ಪ್ರಾಣಿಗಳನ್ನೂ, ಪ್ರಾಣಿಸಮಾನರನ್ನೂ ಆಳಬೇಕು.

ಬುದ್ಧಿಶಕ್ತಿಯನ್ನು ಅರಳಿಸುವುದಕ್ಕಾಗಿ ಶಿಖರಸೂರ್ಯ ಬೀಜಗಣಿತ, ರೇಖಾಗಣಿತಗಳನ್ನು ಮಕ್ಕಳಿಗೆ ಕಲಿಸಲು ಉತ್ಸುಕನಾಗಿದ್ದ. ರವಿಕೀರ್ತಿ ಹತ್ತರವರೆಗೆ ಬೆರಳು ಮಡಿಚಿ ಎಣಿಸಿ ತಂದೆಯನ್ನು ಆನಂದಗೊಳಿಸಿದ. ಮಗನ ದಿನಚರಿ, ಯಾವುದೇ ಕೆಲಸ ಆಟಗಳು ಕೂಡ ಬೀಜಗಣಿತದ ಹಾಗೆ ನಿರ್ದಿಷ್ಟ ಪರಿಣಾಮದ ಕಡೆಗೆ ಓಡುವಂತೆ ಕಲಿಸಿದ. ಆಮೇಲೆ ಉಚ್ಚಗಣಿತಶಾಸ್ತ್ರದ ಸಮಸ್ಯೆಗಳು, ಅವುಗಳ ಪರಿಹಾರಗಳು, ಜೀವನದಲ್ಲಿ ಸಹಜವಾಗಿ ಉದ್ಭವಿಸುವ ಸಮಸ್ಯೆಗಳು ಕರಾರುವಾಕ್ಯಾದ ಪರಿಣಾಮಗಳು-ಇವೇ ಮುಂತಾದ ಪಾಠಗಳನ್ನು ಮುಂದುವರೆಸಿ ಮಗನಿಗೆ ಹೇಳಿದ

"ನಮ್ಮಲ್ಲಿದ್ದಾರಲ್ಲ ಅನೇಕ 'ಅಗಣಿತರು'... (ಗಣಿತ ಬಾರದವರಿಗೆ ಅವನೇ ಕೊಟ್ಟ ಹೆಸರು)

ನೀನು ಅವರಂತಾಗಬಾರದಣ್ಣ, ಸತತ ಅಭ್ಯಾಸದಿಂದಷ್ಟೇ ಗಣಿತದಲ್ಲಿ ಆಸಕ್ತಿ ಮುಡೋದು. ಅದೊಮ್ಮೆ ಮೂಡಿದರೆ ನಿನ್ನ ತಲೆಯಲ್ಲಿರೋ ದಡ್ಡತನವನ್ನ ಅದೇ ಓಡಿಸುತ್ತದೆ."

ಗೌರಿಯ ತಲೆಗೆ ಮಾತ್ರ ಗಣಿತ ಹತ್ತಲೇ ಇಲ್ಲ. ಗಣಿತ ಹೇಳಿಕೊಡುವಾಗಿನ ಅಪ್ಪನ ಕಣ್ಣುಗಳನ್ನು ಕಂಡು ಆಕೆ ಬೆವರುತ್ತಿದ್ದಳು. ಅವನ ಪಾಠ ಸ್ಪಷ್ಟವಾಗಿದ್ದರೂ ಭಯವೇ ಅವಳ ಗ್ರಹಿಕೆಗೆ ಅಡ್ಡಿಯಾಗಿತ್ತು. ಹೀಗಾಗಿ ಪಾಠ ನಡೆದಾಗ ಆತಂಕ ಭೀತಿಗಳಿಂದ ಮುಖ ಬಿಳಿಚಿಕೊಂಡು ಮಂಕಾಗಿ ಕೂರುತ್ತಿದ್ದಳು. ಹಾಗೆ ಕೂತಾಗ ಅವಳಿಗೆ ಯಾವುದೂ ಕೇಳಿಸುತ್ತಿರಲಿಲ್ಲ. ಕಾಣಿಸುತ್ತಿರಲಿಲ್ಲ. ಆತ್ಮಚಿಂತನೆ ಮಾಡುವಾಗ ಮಾತ್ರ ಅವಳ ಕಣ್ಣುಗಳು ಸೊಬಗನ್ನು ಮುಕ್ಕುಳಿಸುತ್ತಿದ್ದವು. ಆದರೆ ಆ ಕ್ಷಣವೆ ಹಿಂದಕ್ಕೆ ಕೈ ಕಟ್ಟಿಕೊಂಡು, ಹುಬ್ಬು ಗಂಟಿಕ್ಕಿ, ಕಣ್ಣುಗಳನ್ನು ಕಿರಿದುಗೊಳಿಸಿ ಆಲೋಚಿಸುತ್ತ ಮೂಲೆಯಿಂದ ಮೂಲೆಗೆ ಹೆಜ್ಜೆ ಹಾಕುವ ತಂದೆಯನ್ನು ನೆನೆಯುತ್ತ ಅವನ ದೃಷ್ಟಿ ತನ್ನ ಮೇಲೆಯೇ ನಾಟಿಕೊಂಡಿದೆಯೆಂದು ಚಡಪಡಿಸುತ್ತಿದ್ದಳು!

## ಮೂವತ್ಮೂರು

ಈ ಎರಡು ವರ್ಷಗಳ ಅವಧಿಯಲ್ಲಿ ಮಹತ್ವದ ಘಟನೆಗಳೇನೂ ನಡೆಯಲಿಲ್ಲ. ಮಹಾರಾಣಿ ಮತ್ತು ಅರ್ಥಕೌಶಲರ ಅಪೇಕ್ಷೆಯಂತೆ ಕಡ್ಡಿಯಂತೆ ಬಡಕಲಾಗಿದ್ದ ಯುವರಾಜನನ್ನು ವಜ್ರದೇಹಿಯನ್ನಾಗಿಸಲು ಶಿಖರಸೂರ್ಯ ಒಪ್ಪಿಕೊಂಡು ಅವನನ್ನು ತನ್ನ ಕಾಳಜಿಯ ವಲಯಕ್ಕೆ ತಗೊಂಡಿದ್ದ. ಚಪಲಚಿತ್ತದ ಯುವರಾಜನನ್ನು ನಿತ್ಯ ವ್ಯಾಯಾಮ, ಅಂಗಮರ್ಧನವೇ ಮುಂತಾದ ಕಟ್ಟುನಿಟ್ಟಿನ ಶಿಸ್ತಿಗೊಳಪಡಿಸಿದ್ದ. ಪಥ್ಯಾಹಾರದ ಜೊತೆಗೆ ಶಕ್ತಿವರ್ಧಕದ ಹೆಸರಿನಲ್ಲಿ ಕಾಮಾತಿಕಾಮದ ಮದ್ದನ್ನೂ ಕೊಡುತ್ತಿದ್ದ. ಆತ ತುಡುಗು ದನದಂತೆ ಆಗಾಗ ಮಾಯವಾಗುವುದನ್ನ ತೂಕಡಿಸುವಂತೆ ಅಭಿನಯಿಸುತ್ತ ಪ್ರೋತ್ಸಾಹಿಸುತ್ತಿದ್ದ! ಈ ಕಡೆ ತಾನು ಬೇಸಿಗೆಯ ಋತುಮಾನದ ಹವಾಮಾನ ನೋಡಿಕೊಂಡು ವಿದ್ಯುಲ್ಲತೆಯ ದೇಹದ ವಿಷ ಇಳಿಸುವ ಪ್ರಯೋಗವನ್ನೂ ಆರಂಭಿಸಿದ್ದ. ವಿದ್ಯುಲ್ಲತೆಗೆ ನಿತ್ಯವೂ ಮದ್ದಿನ ಉಪಚಾರವಾಗಬೇಕಿದ್ದಿತಲ್ಲದೆ ಅವಳ ದೇಹದ ಮೇಲಾಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿತ್ತು. ಆದ್ದರಿಂದ ತನ್ನ ಮನೆ ಸಮೀಪದ ಮನೆ 'ಸಂಜೀವಿನಿ'ಯಲ್ಲಿ ಅವಳ ಮತ್ತು ಅವಳ ತಾಯಿಯ ವಾಸ್ತವ್ಯದ ವ್ಯವಸ್ಥೆ ಮಾಡಿದ್ದ. ಅದು ವಿಶಾಲವಾದ, ಮರದ ಕೆತ್ತನೆ ಕೆಲಸಗಳಿಂದ ಅಲಂಕರಿಸಿ ಮನೆ, ಬದೆಗನ ಹಟ್ಟಿಯಿಂದ ಬಂದ ಮೂರು ಜನ ಆಳುಗಳಿದ್ದರಲ್ಲದೆ ಮನೆಯ ಹಿಂಭಾಗ ಮತ್ತು ಮುಂಭಾಗದಲ್ಲಿ ಅಪರೂಪದ ಸಸ್ಯಗಳು, ನೇರಳೆ ಮರಗಳಿದ್ದ ತೋಟವಿತ್ತು.

ಶಿಖರಸೂರ್ಯ ತದೇಕಧ್ಯಾನದಿಂದ ವಿದ್ಯುಲ್ಲತೆಯ ವಿಷ ತೆಗೆಯಲು ಪ್ರಯತ್ನಿಸುತ್ತಿದ್ದ. ತಾನು ಕಲಿತುದರ ಜೊತೆಗೆ ಪರ ವಿರೋಧವಾಗಿ ವರ್ತಿಸುವ ಬೇರೆ ವಿಷಗಳ ಮಿಶ್ರಣ ಮತ್ತು ಅವುಗಳ ವರ್ತನೆಗಳನ್ನು ಅಧ್ಯಯನ ಮಾಡುತ್ತ ಪ್ರಯೋಗ ನಡೆಸಿದ್ದ. ತನ್ನ ಸಹಜ ಆಸಕ್ತಿಗಳನ್ನು ತಾತ್ಪೂರ್ತಿಕವಾಗಿ ಹಿಂದಕ್ಕೆ ತಳ್ಳಿ ದಿನದ ಅನೇಕ ತಾಸುಗಳನ್ನು ವಿಷದ ಯೋಚನೆ ಹಾಗೂ ಪ್ರಯೋಗಗಳಲ್ಲೇ ಕಳೆಯುತ್ತಿದ್ದ. ಇಲ್ಲವೆ ಕಾಡಿನ ನಾರು ಬೇರು ಸಸ್ಯಗಳೊಂದಿಗೆ ಕಳೆಯುತ್ತಿದ್ದ. ಆಕೆಯ ಎಂಜಲು ಬೆವರುಗಳನ್ನು ಬಾಳೆಯೆಲೆಯಲ್ಲಿ ಸಂಗ್ರಹಿಸಿ ಇರುವೆ ಮತ್ತು ಇತರೇ ಕೀಟಗಳು ಮುತ್ತಿ ತಿಂದಾಗ ಆಗುವ ಪರಿಣಾಮಗಳನ್ನ ಗಮನಿಸುತ್ತಿದ್ದ. ಕ್ರಮ ತಪ್ಪದೆ ಮದ್ದು ಮತ್ತು ನಿರ್ದಿಷ್ಟ ಪಥ್ಯದ ಆಹಾರ ನೀಡುತ್ತ ಅವಳ ಮೇಲಾಗುವ ಪರಿಣಾಮಗಳನ್ನ ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದ. ಇದು ಅನೇಕರ ಊಹಾಪೋಹ ಚಾಡಿಗಳಿಗೆ ಕಾರಣವಾಗಿ-ಹೀಗೆ ಹುಟ್ಟಿದ ಜಾನಪದವೆಲ್ಲ ಛಾಯಾದೇವಿಯನ್ನೇ ಹುಡುಕಿಕೊಂಡು ಬರುವಂತಾಯಿತು. ಶಿಖರಸೂರ್ಯ ಮತ್ತು ವಿದ್ಯುಲ್ಲತೆಯ ಮಧ್ಯೆ ಅಕ್ರಮ ಸಂಬಂಧವಿರಲೇಬೇಕೆಂದು ಬರುತ್ತಿದ್ದ ಸುದ್ದಿಗಳು ಕೂಡಿಕೆಯಾಗಿದೆ ಎಂಬಲ್ಲಿಗೂ ತಲುಪಿದ್ದವು. ಛಾಯಾದೇವಿಯೀಗ ಅಸೂಯೆಯಿಂದ ಕುದಿಯತೊಡಗಿದ್ದಳು.

ಸುಂದರ ಜೋಡಿ ಮಕ್ಕಳ ತಾಯಾದ ಹೆಮ್ಮೆ, ರಾಜವೈದ್ಯನಾದರೂ ಪ್ರಧಾನಿಗೆ ಕಮ್ಮಿಯಿಲ್ಲದ ಗೌರವುಳ್ಳ ಗಂಡನ ಮಡದಿಯಾದ ಅಹಂಕಾರ-ಇವುಗಳಿಂದ ಅವಳಿಗೇ ಗೊತ್ತಿಲ್ಲದ ಒಂದು ಗತ್ತು ಅವಳ ವ್ಯಕ್ತಿತ್ವದಲ್ಲಿ ಸೇರಿಕೊಂಡಿತ್ತು. ಅವಳಿಗೇ ಪ್ರತ್ಯೇಕವಾದ ಪಲ್ಲಕ್ಕಿ ಮತ್ತು ಬೋಯಿಗಳಿದ್ದರು. ಚಿಕ್ಕ ಪರಿವಾರವಿತ್ತು. ಬಿಳಿಗಿರಿಯಿಂದ ಹೇರಳ ಕಾಣಿಕೆ ಬರುತ್ತಿತ್ತು. ಅಳತೆಗೆ ಸಿಗದಷ್ಟು ತಾಯ ಮಮತೆ ಇತ್ತು. ಹೀಗಾಗಿ ಸೇವಕ, ಪರಿಚಾರಕರಿಂದ ಮಾತ್ರವಲ್ಲದೆ ಗಂಡನಿಂದಲೂ ಕೆಲವು ಕರ್ತವ್ಯಗಳನ್ನಾಕೆ ನಿರೀಕ್ಷಿಸುತ್ತಿದ್ದಳು ಮತ್ತು ಅವು ಈಡೇರದಿದ್ದಲ್ಲಿ ಅವಳ ಅಹಂಕಾರ ಕೊಂಕುತ್ತಿತ್ತು.

ನೀವೇ ಕಂಡಂತೆ ಶಿಖರಸೂರ್ಯ ಯಾರನ್ನೂ ಅತಿಯಾಗಿ ಹಚ್ಚಿಕೊಂಡವನಲ್ಲ. ಅವನ ವಿನಾ ಅವನೊಳಗೆ ಇನ್ಯಾರೂ ಇಲ್ಲವೆಂದೇ ಛಾಯಾದೇವಿಯ ಸಾಮಾನ್ಯ ತಿಳುವಳಿಕೆಯಾಗಿತ್ತು. ಆದರೆ ಮಕ್ಕಳೊಂದಿಗೆ ಮಾತ್ರ ಮೈ ಮರೆಯುತ್ತಿದ್ದ. ಮಕ್ಕಳೊಂದಿಗೆ ಆಡುವಾಗ ಅವನ ಕಣ್ಣು ಥರಾವರಿ ಬಣ್ಣಗಳಿಂದ ಲಕಲಕಿಸುತ್ತಿದ್ದವು ನಿಜ. ಅದನ್ನೂ ಅತಿಗೊಯ್ದವನಲ್ಲ. ಈಗ ವಿದ್ಯುಲ್ಲತೆಯ ಜೊತೆಗೆ ರೋಗದ ನೆಪದಲ್ಲಿ ಅನೇಕ ತಾಸುಗಳನ್ನ ಕಳೆಯುತ್ತಿದ್ದನಲ್ಲ, ಮಡದಿಗೆ ಅಸೂಯೆ ಅದರಿತು. ಅವಳಲ್ಲಿಗೆ ಹೋಗಬಾರದೆಂದು, ಮೈತುಂಬ ಹುಳು ತುಂಬಿರುವ ಅತ್ತೀಹಣ್ಣಿನಂಥ ಅವಳ ವಿಷಸಂಪರ್ಕದಿಂದ ದೂರವಿರಬೇಕೆಂದು, ಅದರಿಂದ ವಿಷದ ಸಂಪರ್ಕ ಮಕ್ಕಳಿಗೂ ತಗಲೀತೆಂದು ಮೆಲ್ಲಗೆ ಹೇಳಿ ನೋಡಿದಳು. ಅವನು ತಿರಸ್ಕಾರದ ಬಿರುನೋಟ ಬೀರಿದೊಡನೆ ಮುದುಡಿಕೊಂಡಳು: ತಾಯಿಗೆ ಹೇಳಿದಳು. ಮಗಳ ಕಥೆಯನ್ನು ನಂಬಿ ಅವಳೂ ನವುರಾಗಿ ಹೇಳಿ ನೋಡಿದಳು. ಶಿಖರಸೂರ್ಯ ಕೇಳಿ ಸುಮ್ಮನಾದನಷ್ಟೆ.

ಚಿಕ್ಕಂದಿನಿಂದಲೂ ಅಷ್ಟೆ; ಶಿಖರಸೂರ್ಯ ಪಡ್ಡೆ ವಯಸ್ಸಿನ ಸುಖಗಳಿಂದ ವಂಚಿತನಾಗಿದ್ದ. ಚಂದಮುತ್ತನೊಂದಿಗಿದ್ದಾಗ ಅಸೂಯೆ ಮತ್ತು ಅದರಿಂದುಂಟಾಗುವ ಉದ್ವೇಗಗಳಲ್ಲದೆ ಬೇರೆ ಭಾವನೆಗಳಿಗೆ ಆಸ್ಪದವಿಲ್ಲವಾಗಿತ್ತು. ಶಿವಾಪುರದ ಕುರುಮುನಿ ಮತ್ತು ಜಟ್ಟಿಗರಿಬ್ಬರೂ ಇವನ ಅಸೂಯೆಗೆ ಕಾರಣರಾಗಿದ್ದರು. ದೇಶಕ್ಕಾಗಿ, ದೇವರಿಗಾಗಿ, ತನ್ನ ಕುಲ ಕುಟುಂಬಕ್ಕಾಗಿ ಬದುಕುವವರದು ಒಂದು ಜಾತಿಯಾದರೆ, ತನಗೋಸ್ಕರ ಮಾತ್ರ ಬದುಕುವವರದು ಇನ್ನೊಂದು ಜಾತಿ. ಶಿಖರಸೂರ್ಯ ಎರಡನೆಯ ಜಾತಿಯವನು. ತನಗೆ ಹಿತಕರವಲ್ಲವಾದರೆ ತಂದೆ ತಾಯಿಗಳಾದರೂ ಸರಿ ತಿರಸ್ಕರಿಸುವವನು. ನಿರೀಕ್ಷಿಸಿದ್ದನ್ನು ಕೊಡಲಿಲ್ಲವಾದರೆ ಅಂಥವರನ್ನ ದ್ವೇಷಿಸುವವನು. ತನ್ನನ್ನು ಕೇಂದ್ರದಲ್ಲಿಟ್ಟುಕೊಂಡು ಉಳಿದೆಲ್ಲವನ್ನು ಪರಿಘವಾಗಿಸಿ ಕೇಂದ್ರದ ಸುತ್ತ ತಿರುಗುವಂತೆ ಮಾಡುವವನು.

ಒಂದು ದಿನ ಇಳಿಹೊತ್ತಿನಲ್ಲಿ ಶಿಖರಸೂರ್ಯ ಕಾಡಿನಿಂದ ಸೀದಾ ಸಂಜೀವಿನಿಗೆ ಬಂದು ಹಿತ್ತಲ ತೋಟದಲ್ಲಿ ನಿಂತ. ಈಗೊಂದು ತಾಸಿನ ಹಿಂದೆಯಷ್ಟೆ ಹನಿ ಹನಿ ಮಳೆಯಾದ್ದರಿಂದ ಸಂಜೆ ಸೂರ್ಯನ ಹೊಂಬಿಸಿಲಲ್ಲಿ ಇಡೀ ತೋಟ ಮಿಂದ ಹೆಣ್ಣಿನ ಹಾಗೆ ಲಕಲಕ ಹೊಳೆಯುತ್ತಿತ್ತು. ತೋಟದ ಅಂಚನ್ನು ಆವರಿಸಿದ್ದ ನೇರಳೆ ಮರಗಳು ಕಳಿತ ಹಣ್ಣಿನ ಗೊಂಚಲುಗಳಿಂದ ಬಿಸಿಲಲ್ಲಿ ಮಿರುಗುತ್ತಿದ್ದವು. ಮಣ್ಣಿನ ವಾಸನೆಗೆ ಹೂಮರಗಳ ವಾಸನೆ ಸೇರಿ ಉನ್ಮಾದಗೊಳಿಸುವ ಪರಿಮಳ ಇಡಗಿತ್ತು. ವಾತಾವರಣ ನಿಶ್ಯಬ್ದವಾಗಿದ್ದರೂ ಆಗಾಗ ಕೂಗುವ ಗೊರವಂಕನ ದನಿ ಮಾತ್ರ ಇಡೀ ತೋಟವನ್ನ ವ್ಯಾಪಿಸುವಂತಿತ್ತು.

ಅಷ್ಟರಲ್ಲಿ ವಿದ್ಯುಲ್ಲತೆಯ ತಾಯಿ ಸೊಂಟದ ಮೇಲೆ ಕೈಇಟ್ಟುಕೊಂಡು ನಿಧಾನವಾಗಿ ನಡೆಯುತ್ತ ಹಿತ್ತಲಿಗೆ ಬಂದಳು. ಬೆನ್ನಮೇಲೆ ಇಳಿಬಿದ್ದ ಮುದುಕಿಯ ವಿರಲ ಕೂದಲು ಬಂಗಾರದ ಕೂದಲಿನಂತೆ ಕಂಡುವಾದರೂ ಬಾಡಿದ್ದವು. ಬಹಳ ನೋವುಂಡ ಮುಖ; ದಣಿದು ಕಳೆಗುಂದಿತ್ತು. ಕಣ್ಣುಗಳಲ್ಲಿ ಆಸಕ್ತಿಯ ಚಂಚಲತೆ ಇರಲಿಲ್ಲ. ತಕ್ಷಣ ಶಿಖರಸೂರ್ಯ ಮರೆಯಲ್ಲಿ ನಿಂತ. ಮುದುಕಿ "ಗೊಂಬೇ" ಎನ್ನುತ್ತ ಯಾರನ್ನೋ ತುಸು ಹೊತ್ತು ಹುಡುಕಿ, ಆಮೇಲೆ ನೆಲ ನೋಡಿ ಹೆಜ್ಜೆ ಇಡುತ್ತ ಮುಂದುವರಿದಳು. ಅನತಿ ದೂರದ ನೇರಳೆ ಮರದಡಿಯಿಂದ ವಿದ್ಯುಲ್ಲತೆ ಎದ್ದು ನಿಂತಳು. ವಿದ್ಯುಲ್ಲತೆಗೆ ಗೊಂಬೆ ಎನ್ನುವ ಸಾರ್ಥಕವಾದ ಮುದ್ದಿನ ಹೆಸರಿದೆಯೆಂದು ಶಿಖರಸೂರ್ಯನಿಗೆ ತಿಳಿದಿರಲಿಲ್ಲ. ಮುದುಕಿಗೆ ಅವಳು ತಕ್ಷಣ ಕಾಣಲಿಲ್ಲ. ಟಕಮಕ ಹುಡುಕುತ್ತಿದ್ದಾಗ-ವಿದ್ಯುಲ್ಲತೆ ಮೂಗರು ಮಾಡುವಂಥ ಒಂದು ಶಬ್ದ ಮಾಡಿ ತಾಯಿಗೆ ಕೈ ಬೀಸಿದಳು. ಮುದುಕಿ ಆ ಕಡೆ ನೋಡಿ "ಬಾ ಕಂದಾ" ಎಂದು ಕರೆದಳು. ವಿದ್ಯುಲ್ಲತೆ ಉಡುತುಂಬ ಆಯ್ದ ನೇರಳೆ ಹಣ್ಣುಗಳೊಂದಿಗೆ ತಾಯ ಬಳಿಗೆ ಜಿಂಕೆಯಂತೆ ನೆಗೆಯುತ್ತ ಬಂದು ಉತ್ಸಾಹದಿಂದ ತುಂಬಿದ ಉಡಿ ತೆರೆದು ತಾಯಿಗೆ ಹೆಮ್ಮೆಯಿಂದ ತೋರಿಸಿದಳು.

"ನೋಡಿದೆಯಾ, ಕಳಿತ ಅಣ್ಣು ಉಡೀಲಿ ಆಕಬಾರದು ಅಂತ ಯೇಳಾಕಿಲ್ಲವ ನಿಂಗೆ? ನೋಡು ಲಂಗ ಒಲಸಾಯ್ತು. ಬಾ ಒಳೀಕೆ"

-ಎಂದು ಮಗಳ ಕೈ ಹಿಡಿದುಕೊಂಡು ಹಿಂದಿರುವ ಮನೆ ಬಾಗಿಲ ಕಡೆ ನಡೆದಳು. ಮಾತಾಡಲಿಲ್ಲವಾದರೂ ಮಗಳ ಬಗ್ಗೆ ತಾಯಿಯ ಹೃದಯ ಕರುಣಾರ್ದ್ರವಾಗಿ ಮಿಡಯುತ್ತಿತ್ತು. ಮಗಳಿಗಿದರ ಪರಿವೆ ಇರಲಿಲ್ಲ. ಉಡಿತುಂಬ ಹಣ್ಣು ಪಡೆದ ಗೆಲುವು ಮತ್ತು ಉತ್ಸಾಹವೇ ಅವಳ ಮುಖದಲ್ಲಿ ಮಿಂಚುತ್ತಿತ್ತು. ಅದೊಂದು ಅಸಾಧಾರಣ ಸಾಧನೆಯೆಂಬಂತೆ ತೋರಿಸುತ್ತಿದ್ದಳು. ಎರಡು ಬಾರಿ ವಿದ್ಯುಲ್ಲತೆಯ ಹಣೆ

ಮತ್ತು ಕತ್ತಿನ ಬೆವರನ್ನು ಸೀರೆಯಂಚಿನಿಂದ ಒರೆಸಿ, ತಲೆ ನೇವರಿಸಿ ಮುದ್ದು ಕೊಡುವ ಉತ್ಕಟೇಚ್ಛೆಯನ್ನು ತಡೆದುಕೊಂಡಳು. ಅಷ್ಟರಲ್ಲಿ ಸೇವಕಿ ಬಂದು ಛಾಯಾದೇವಿ ಬಂದುದನ್ನು ತಿಳಿಸಿದಳು!

ಸೂರ್ಯ ಮುಳುಗುವುದಕ್ಕೆ ಇನ್ನೂ ಗಳಿಗೆ ಸಮಯವಿತ್ತು. ಬಿಸಿಲಿನ ತೀಕ್ಷ್ಣತೆ ಕಡಿಮೆಯಾಗಿ ಸಂಜೆಯ ಸಣ್ಣ ಚಳಿ ಮೆಲ್ಲಗೆ ಆವರಿಸತೊಡಗಿತ್ತು. ನೇರಳೆ ಮರದ ಕಡೆಯಿಂದ ಮಲ್ಲಿಗೆಯೂ ಸೇರಿದ ಮಿಶ್ರ ಪರಿಮಳ ಸೂಸುತ್ತಿತ್ತು. ಸೇವಕಿ ಮುದುಕಿಗೆ ಏನು ಹೇಳಿ ಕರೆದೊಯ್ದಳೆಂದು ಶಿಖರಸೂರ್ಯನಿಗೆ ತಿಳಿಯಲಿಲ್ಲ. ವಿದ್ಯುಲ್ಲತೆ ಉಡಿಯಲ್ಲಿಯ ಹಣ್ಣುಗಳನ್ನು ಒಂದೊಂದೇ ಆರಿಸಿ ತಿನ್ನುತ್ತ ತಾನೂ ಮನೆಯಂಗಳಕ್ಕೆ ಬಂದಾಗ ತಕ್ಷಣ ತನ್ನ ತಾಯಿ ಆಶ್ಚರ್ಯದಿಂದ ನಿಂತದ್ದು ಕಾಣಿಸಿತು. ನೋಡಿದರೆ ಇನ್ನೊಬ್ಬ ಸೇವಕಿ ಬಂದು ಸೀರುದನಿಯಲ್ಲಿ ಕಿರಿಚಿ ಹೇಳಿದಳು:

“ವಿದ್ಯುಲ್ಲಮ್ಮ ಅಂದರೆ ನೀನೇನಾ?”

“ಯಾಕೆ?”

“ರಾಣಿ ಛಾಯಾದೇವಿ ಕೂಗತವಳೆ”

“ಯಾಕಂತೆ?”

“ನೀ ಬಂದು ಕೇಳಿಕೊಳ್ಳಮ್ಮಾ. ಯಾಕೆ? ಎತ್ತ? ಸೇವಕಿಗೆ ಹೇಳ್ತಾರ?”

ಹಿಂದುಮುಂದೆ ಗೊತ್ತಾಗದೆ ಮುದುಕಿ ಚಿಂತೆಗೀಡಾಗಿ, ಹುಬ್ಬು ಗಂಟಿಕ್ಕಿ ಕೇಳಿದಳು:

“ಛಾಯಾದೇವಿ? ಅವಳ್ಯಾರಮ್ಮ?”

ಅಷ್ಟರಲ್ಲಿ ಬೋಯಿಗಳು ಛಾಯಾದೇವಿ ಕೂತಿದ್ದ ಪಲ್ಲಕ್ಕಿಯನ್ನು ತುಸು ಮುಂದೆ ತಂದರು. ಒಳಗಿದ್ದ ಛಾಯಾದೇವಿ ಪರದೆ ಸರಿಸಿ,

“ನನ್ನನ್ನೇ ಯಾರೂಂತ ಕೇಳೋಳು-ಎಷ್ಟು ಧೈರ್ಯವೆ ನಿನಗೆ?”

-ಎಂದು ಗುಡುಗಿದಳು. ಹಿಂದಿನಿಂದ ಬಂದ ಶಿಖರಸೂರ್ಯ ಮೆಲ್ಲಗೆ ಕಂಟಿಯ ಮರೆಗೆ ಸರಿದು ನಡೆಯುತ್ತಿರುವುದನ್ನು ಗಮನಿಸುತ್ತ ನಿಂತುಕೊಂಡ. ಮದುವೆಯಾದ ಮೇಲೂ ಛಾಯಾದೇವಿ ಕಲಿತದ್ದು ಕಡಿಮೆ. ಅವಳಲ್ಲಿದ್ದುದ್ದು ಬಿಳಿಗಿರಿ ಬುಡಕಟ್ಟಿನ ಒರಟು ರಕ್ತ. ಹೆಚ್ಚು ದನಿ ಮಾಡಿದರೆ ಹೆಚ್ಚು ಪರಿಣಾಮ ಬೀರುತ್ತದೆಂದು ಅವಳ ತರ್ಕ. ಅದರದು ಸೇವಕರನ್ನು ಬೆದರಿಸಲು, ಅವರಿಂದ ಹೆಚ್ಚು ಕೆಲಸ ತೆಗೆಯಲು ಬೈಗಳಿಗೆ ಯೋಗ್ಯವಾದ ದನಿಯೆಂದು ಅವಳಿಗೆ ತಿಳಿಯದು.

“ನೋಡೇ ಮುದಿಯಳೆ, ಇದು ರಾಜ್ಯವೈದ್ಯ ಶಿಖರಸೂರ್ಯನ, ಅಂದರೆ ನನ್ನ ಗಂಡನ ಮನೆ. ಇಲ್ಲಿ ಇರಬೇಕಾದರೆ ನನ್ನ ಅನುಮತಿ ಬೇಕು. ಅಗೋ ಆ ಬಿಳಿಗೂಬೆ ನಿಂತಿದೆಯಲ್ಲ, ಅಂಥವರಿಗೆಲ್ಲಾ ಇಲ್ಲಿ ಅವಕಾಶ ಇಲ್ಲ. ಗೊತ್ತಾಯ್ತೇನೆ ಮುದಿಗೂಬೆ?”

ಛಾಯಾದೇವಿ ಬಾಯಿಂದ ಈ ಪರಿಯ ಸಂಭಾಷಣೆ ಬಂದಾವೆಂದು ರಾಜವೈದ್ಯನೆಂದೂ ಊಹಿಸಿರಲಿಲ್ಲ. ಮುದುಕಿ ಶಾಂತಿಚಿತ್ತಳಾಗಿ, ಮುಖದಲ್ಲಾಗಲಿ, ದನಿಯಲ್ಲಾಗಲಿ ಯಾವುದೇ ವ್ಯಗ್ರತೆಯನ್ನ ತೋರದೆ ಹೇಳಿದಳು:

“ನೋಡಮ್ಮಾ, ರಾಜವೈದ್ಯ ನಿನಗೇನಾಗಬೇಕೋ ನನಗೆ ತಿಳೀದು. ನೀನೇಳ್ದೆಯಲ್ಲ ಆ ಬಿಳಿಗೂಬೆ-ಅದು ನನ್ನ ಕೂಸು. ರಾಜವೈದ್ಯ ಅದರ ವೈದ್ಯ. ಅವ್ನೇ ನಮ್ಮನ್ನಿಲ್ಲಿ ಇಟ್ಟವ್ನೆ. ನಿನಗೇನಾರ ಬೇಕಿದ್ದರೆ ಅವನ್ನೇ ಕೇಳಿಕೊ ಹೋಗು.”

ಆಘಾತ ಅವಮಾನಗಳಿಂದ ಧಗಧಗ ಕಿಚ್ಚಿನಲ್ಲಿ ನಿಂತಹಾಗೆ ಛಾಯಾದೇವಿ ಚಡಪಡಿಸಿದಳು. ಪಲ್ಲಕ್ಕಿಯನ್ನ ಕೆಳಗಿಡಲು ಜಬರದಸ್ತ ಸನ್ನೆ ಮಾಡಿ ಕೆಳಗಿಸಿದೊಡನೆ ಸರ್‍ರನೆ ತೆರೆ ಸರಿಸಿ ವಿದ್ಯುಲ್ಲತೆಯ ಮುಂದೆ ಹೋದಳು. ಅವಳು ಏನೇನೂ ಅರಿಯದೆ ತನ್ನ ಉಡಿತೆರೆದು ಅಷ್ಟೂ ನೇರಳೆ ಹಣ್ಣು ಕೊಡಲು ಉಡಿಯನ್ನ ಮುಂದೆ ಮಾಡಿದಳು. ತಾನೇನು ಮಾಡುತ್ತಿದ್ದೇನೆಂದರಿಯದೆ “ನನ್ನ ಸವುತೇ, ನನಗೆ ಚಳ್ಳೇಹಣ್ಣು ತಿನ್ನಸ್ತಿಯೇನೆ?” ಎಂದು ಕಿರಿಚಿ ಬಲಗೈ ಎತ್ತಿ ಬೀಸಿ ಇನ್ನೇನು ಕೆನ್ನೆಗೆ ಏಟು ಚಲ್ಲಬೇಕು-ವಿದ್ಯುಲ್ಲತೆಗೆ ಪರಿಸ್ಥಿತಿಯ ಅರಿವಾಯಿತು. ಉಡಿಬಿಟ್ಟು ತನ್ನ ಬಲಗೈ ಬಲವನ್ನೆಲ್ಲ ಉಪಯೋಗಿಸಿ ಛಾಯಾದೇವಿಯ ಮುಂಗೈ ಹಿಡಿದಳು! ದೊಡ್ಡ ಕಣ್ಣುಗಳ ಉಕ್ಕಿನ ಶಲಾಖೆ ದೃಷ್ಟಿಯನ್ನ ಅವಳ ಕಣ್ಣಲ್ಲಿ ನೆಟ್ಟು ನಿಂತಳು. ಆ ಬಿಳಿ ಹುಡಿಗಿಯ ಬಲದ ಮುಂದೆ ಗಡಗಡ ನಡುಗಿ ಸಮತೋಲ ತಪ್ಪಿದರೂ ತೋರಗೊಡದೆ ಭಂಡತನದಿಂದ ಛಾಯಾದೇವಿ ಒದರಿದಳು:

“ಅತ್ತೀಹಣ್ಣಿನಂಗೆ ಒಳಗೆಲ್ಲ ಕ್ರಿಮಿ ತುಂಬಿಕೊಂಡು, ಕೊಳೆಯೋ ಹೆಣ್ಣೇ... ಹೊರಗೆ ನೋಡು ಎಂಗಿದಾಳೆ ಥಳುಕು ಬಳುಕು...”

ಮರೆಯಲ್ಲಿ ನಿಂತಿದ್ದ ರಾಜವೈದ್ಯನನ್ನ ಕಂಡಳಾದ್ದರಿಂದ ಮುದುಕಿ ಬರೆದ ಚಿತ್ರದ ಹಾಗೆ ಸುಮ್ಮನೆ ನಿಂತಿದ್ದಳು. ವಿದ್ಯುಲ್ಲತೆಯ ಮುಖ ಕೆಂಪಗಾಗಿ ಮೂಗಿನ ಅರಳೆ ಬಿರುಸಾಗಿದ್ದವು. ಛಾಯಾದೇವಿ ಅಲ್ಲಾಡದ ಹಾಗೆ ಅವಳ ಕೈಯನ್ನ ಬಲವಾಗಿ ಹಿಡಿದು ಬಿಟ್ಟಿದ್ದಳು. “ಕೈ ಬಿಡೇ ಕಪಿಯೇ” ಎಂದು ಛಾಯಾದೇವಿ ಕೈಬಿಡಿಸಿಕೊಳ್ಳಲು ಹೋರಾಡುತ್ತ ಅಸಹಾಯಕಳಾಗಿ ತನ್ನ ಸೇವಕಿಯತ್ತ ನೋಡಿದಳು. ಆಕೆ ಮುಂದೆ ಬರತೊಡಗಿದಾಗ ಮುದುಕಿ ಬಂದು ಕೈ ಬಿಡಿಸಿ ಮಗಳನ್ನು ಹಿಂದೆ ಹಾಕಿಕೊಂಡು ನಿಂತಳು.

“ನೋಡಮ್ಮ ನೀನು ರಾಣಿಯೇ ಆಗಿರು. ಅಂಗಂತ ಎಲುಬಿಲ್ಲದ ನಾಲಿಗೇನ್ನ ಅಂಗೆಲ್ಲಾ ಅರಿಬಿಡಬಾರ್ದಮ್ಮ. ಇವತ್ತಿಗಿಟ್ಟು ಸಾಕು, ಇನ್ನು ಒರಡು”

“ನನಗೇ ಆಜ್ಞೆ ಮಾಡ್ತೀಯೇನೆ?” ಎಂದು ಛಾಯಾದೇವಿ ಕಿರಿಚಿದಳು.

ವಿದ್ಯುಲ್ಲತೆ ಮುಂದೆ ಬಂದು ಬಾಯಮೇಲೆ ಬೆರಳಿಟ್ಟುಕೊಂಡು “ಬಾಯ್ಮುಚ್ಚು” ಎಂಬಂತೆ ಸನ್ನೇ ಮಾಡಿದಳು. ಅವಳನ್ನು ನೋಡಿ ಛಾಯಾದೇವಿ ಇನ್ನಷ್ಟು ಗಾಬರಿಯಾಗಿ ಹಿಂದೆ ಸರಿದಳು. ಛಾಯಾದೇವಿಯ ಮುಖದಲ್ಲಿ ಕೊಲೆಗಡುಕಿಯ ಕಳೆಹೊಳೆದು ತನ್ನ ಮೇಲಿನ ನಿಯಂತ್ರಣ ಕಳೆದುಕೊಂಡು ಥರಥರ ನಡುಗಿದಳು. ತಕ್ಷಣ ಸೇವಕಿ ಬಂದು ಕೈ ಆಧಾರ ಕೊಟ್ಟುದರಿಂದ ಸರಿಹೋಯ್ತು. ಇಲ್ಲದಿದ್ದಲ್ಲಿ ಬಿದ್ದೇ ಬಿಡುತ್ತಿದ್ದಳು. ತಕ್ಷಣ ರೇಶ್ಮೆ ಸೀರೆಯ ಸರಸರ ಸದ್ದು ಮಾಡುತ್ತ ಪಲ್ಲಕ್ಕಿಯಿದ್ದಲ್ಲಿಗೆ ಹೋಗಿ ಒಳಗೆ ಕೂತಳು. ಪಲ್ಲಕ್ಕಿ ಮರಗಳಲ್ಲಿ ಮರೆಯಾಯಿತು. ಸೂರ್ಯನಾಗಲೇ ಅಸ್ತಂತಗನಾಗಿ ಮಬ್ಬು ಬೆಳಕು ಆವರಿಸಿತ್ತು. ಮೆಲ್ಲಗೆ ಶಿಖರಸೂರ್ಯ ಹೊರಗೆ ಬಂದ. ಅವನನ್ನು ನೋಡಿ ಮಗಳನ್ನು ಅಲ್ಲಿಯೇ ಬಿಟ್ಟು ಮುದುಕಿ, ರಾಜವೈದ್ಯ ಬಂದಿರುವ ಬಗ್ಗೆ ಸನ್ನೆ ಮಾಡಿ ತಿಳಿಸಿ. ಮನೆಯೊಳಕ್ಕೆ ಹೋದಳು.

ಕಣ್ಣಿಗೆ ಕೋಮಲೆಯಾಗಿ ಕಂಡ ವಿದ್ಯುಲ್ಲತೆಯ ಸ್ವಾಭಿಮಾನ ಮತ್ತು ತನ್ನ ಮಡದಿಯ ಮುಂಗೈ ಹಿಡಿದು ಪ್ರತಿಭಟಿಸಿದ ರೀತಿ ನೋಡಿ ಅವಳ ಬಗ್ಗೆ ಶಿಖರಸೂರ್ಯನಲ್ಲಿ ಅಪಾರವಾದ ಮೆಚ್ಚುಗೆ ಉಂಟಾಯಿತು. ಸಹಾಯಕ್ಕಾಗಿ ರಾಜವೈದ್ಯನತ್ತ ನೋಡದೆ, ಒದರದೆ ಒಬ್ಬಳೇ ಛಾಯಾದೇವಿಯನ್ನ ಎದುರಿಸಿ ಗೆದ್ದಿದ್ದಳು! ಮನಸ್ಸಿನಲ್ಲೇ ಭಲೆ! ಅಂದ. ಛಾಯಾದೇವಿ ಅವಳ ಮುಂದೆ ಬಹಳ ಸಣ್ಣವಳಾಗಿ, ಅಗ್ಗದ ಜಗಳಗಂಟಿಯಾಗಿ ಕಂಡಳು. ಇವಳು ಬೆಳ್ಳಿಯಂಥ ಅಸಲೀ ಹೆಣ್ಣೆಂದು ಅನಿಸಿತು. ತೆಳ್ಳಗೆ ಬೆಳ್ಳಗಿದ್ದುದರಿಂದ ಇರುವುದಕ್ಕಿಂತ ಹೆಚ್ಚು ಎತ್ತರವಾಗಿ ಕಾಣಿಸುತ್ತಿದ್ದಳು. ಅವಳು ಹೊದ್ದ ದಾವಣಿ ಅವಳ ಮೈಗಂಟಿದ ಚರ್ಮವೆಂಬಂತೆ ಕಂಡಿತೇ ವಿನಾ, ಹೊದ್ದ ಉಡುಪಿನಂತೆ ಕಾಣಲೇ ಇಲ್ಲ. ಎಷ್ಟೇ ಸಡಿಲವಾದರೂ ಲಂಗ ಮಾತ್ರ ಅವಳ ನಿತಂಬಗಳ ದುಂಡು ಸೀಮೆಯನ್ನ ಗುರುತಿಸಿತ್ತು. ವಿದ್ಯುಲ್ಲತೆ ಹಿಂದಿರುಗಿದಾಗ ಶಿಖರಸೂರ್ಯ ಅವಳ ಹಿಂದೆಯೇ ನಿಂತಿದ್ದನ್ನು ನೋಡಿ ಮೊದಲು ಭೀತಿ, ಆಶ್ಚರ್ಯಗಳಿಂದ ಮುಖಚರ್ಯೆ

ಬದಲಾಯಿತು. ರಾಜವೈದ್ಯ ಬಂದು ಮೆಲ್ಲಗೆ ಅವಳ ಭುಜದ ಮೇಲೆ ಕೈಯಿಟ್ಟ. ವಿದ್ಯುಲ್ಲತೆ ಗಾಂಭೀರ್ಯದಿಂದ ಹಾಗೇ ನಿಂತಿದ್ದಳು. ಬೆನ್ನು ಸವರಿ ಸಮಾಧಾನ ಮಾಡಲು ನೋಡಿದ.

ತುಸು ಸಮಯವಾದ ಬಳಿಕ ಮೆಲ್ಲಗೆ ಅವಳ ಗದ್ದ ಹಿಡಿದು ಮೇಲೆತ್ತಿದಾಗ ನೋಟಗಳು ಪರಸ್ಪರ ಎದುರಾದವು. ಸನ್ಯಾಸಿಯಂತಿದ್ದ ಸೂರ್ಯನ ಕಣ್ಣುಗಳಲ್ಲಿಯ ವಿನೋದ ಮತ್ತು ಆತುರತೆಯನ್ನು ಪ್ರಥಮಬಾರಿ ಕಂಡು ವಿದ್ಯುಲ್ಲತೆಯ ದಾವಣಿಯಲ್ಲಿಯ ಮೊಲೆಗಳು ಕಂಪಿಸಿ ನಿಮಿರಿದವು. ಬೆಳ್ಳಿಯ ಸೌಂದರ್ಯಕ್ಕೆ ಮರುಳಾಗಿ ಚಿರತೆಯಂತೆ ಹುರಿಗೊಂಡಿದ್ದ ಮೈಯಲ್ಲಿ ಬಲಾಢ್ಯವಾದ ಆವೇಶ ಹೊಕ್ಕಂತಾಗಿ ಅವಳ ಒದ್ದೆ ಮುಖವನ್ನ ಕೈಯಲ್ಲಿ ಹಿಡಿದುಕೊಂಡು ಮುಖದ ತುಂಬ ಮುದ್ದುಕೊಟ್ಟ. ಕೆನ್ನೆ ತುಟಿಗಳನ್ನ ಸವಿಯುತ್ತ ಬಾಯೊಳಕ್ಕೆ ನಾಲಗೆ ತೂರಿ ಅವಳ ಎಂಜಲನ್ನು ಹೀರಿಕೊಂಡ. ಅವನ ಬಲಾಢ್ಯ ಬಾಹುಬಂಧನದಲ್ಲಿ ಸಿಕ್ಕು ಸುಖದ ನೋವಿನಲ್ಲಿ ಮುಲುಗುತ್ತ ವಿದ್ಯುಲ್ಲತೆ ವಿಲಿವಿಲಿ ಒದ್ದಾಡಿದಳು. ಬಹಳ ಹೊತ್ತಿನ ಮೇಲೆ ಬಿಟ್ಟಾಗ ಸುಖದ ಮತ್ತೇರಿ ಇಬ್ಬರ ಮೈ ಬಿಸಿಯಾಗಿದ್ದವು. ಕಾಲಲ್ಲಿ ಶಕ್ತಿ ಸಾಲದೆ ವಿದ್ಯುಲ್ಲತೆ ಬೀಳುವಂತಾಗಿ ಅವನಿಗಂಟಿಕೊಂಡೇ ನಿಂತಳು. ಮೆಲ್ಲಗೆ ಅವಳ ಕೆನ್ನೆಗಳನ್ನು ತಟ್ಟಿ ಎಚ್ಚರಿಸಿ "ಒಳಗೆ ನಡೆ" ಎಂದು ಸನ್ನೆ ಮಾಡಿದ. ಇಬ್ಬರಿಗೂ ಅಗಲುವ ಮನಸ್ಸಿರಲಿಲ್ಲ. ಇನ್ನೂ ಅಂಟಿಕೊಂಡೇ ಇರುವುದನ್ನ ನೋಡಿ ಅವಳನ್ನು ಬಾಗಿಲವರೆಗೆ ಬಿಟ್ಟು ಒಂದು ಮರದ ಬಳಿ ಬಂದ.

ಕಣ್ಣಿಗೆ ಕತ್ತಲೆ ಬಂದಂತಾಗಿ ಹಾಗೇ ಮರಕ್ಕಂಟಿಕೊಂಡೇ ಕೆಳಕ್ಕೆ ಜರುಗಿ ಕುಸಿದ. ವಿಷವಾಗಲೇ ಅವನ ಒಳಕ್ಕೆ ಇಳಿದಿತ್ತು. ತನ್ನ ವಜ್ರದೇಹಕ್ಕೆ ಘಾಸಿ ಮಾಡಲಾರದೆಂದು ಗೊತ್ತಿದ್ದರೂ ಒಂದು ಕ್ಷಣ ಭಯವಾಗಿ ಮೈ ತಣ್ಣಗಾಯ್ತು. ಕಣ್ಣು ಮುಚ್ಚಿಕೊಂಡು ತನ್ನೊಳಗೆ ನಡೆಯುತ್ತಿರುವುದನ್ನು ಗಮನಿಸುತ್ತ ಹಾಗೇ ಕೂತ. ಸುಮಾರು ಒಂದು ಗಂಟೆಯ ತರುವಾಯ ಅಪಾಯವಿಲ್ಲವೆಂದು ಖಾತ್ರಿಯಾಗಿ ಎದ್ದು ಯಾರಿಗೂ ಹೇಳದೇ ಮನೆಗೆ ಹೋದ.

ಮಾರನೇದಿನ ಮದ್ದನ್ನು ಕಳಿಸಿದನೇ ವಿನಾ ತಾನಾಗಿ ಸಂಜೀವಿನಿಯ ಕಡೆ ಹೋಗಲಿಲ್ಲ. ನ್ಯಾರೀ ಮಾಡುವ ಸಮಯದಲ್ಲಿ ಉಣ್ಣಲು ಬಿಸಿಗಂಜಿ ಕೇಳಿದ. ಛಾಯಾದೇವಿ ಬಿಸಿಗಂಜಿ ತಂದರೆ ತಂಗುಳನ್ನ ಬೇಕೆಂದ. ತಂಗುಳನ್ನ ತಂದಾಗ ಮೊಸರು ಬೇಕಂದ, ಮೊಸರು ತಂದರೆ ತಾನು ಕೇಳಿದ್ದು ಮಜ್ಜಿಗೆ ಅಂದ. ಮಜ್ಜಿಗೆ ತಂದರೆ "ನಿನ್ನಂಥ ಜಗಳಗಂಟಿಯ ಇನ್ನು ಕಾಣೆನಲ್ಲಾ!" ಎಂದು ಬಯ್ಯುಬಾರದ ಬೈಗುಳ ಬೈದು "ನಿನ್ನಂಥವಳ ಕಟ್ಟಿಕೊಂಡು ಏಗಾಡುವುದು ನನ್ನಿಂದಾಗಲಿಕ್ಕಿಲ್ಲ"ವೆಂದೂ ಬಿರುನುಡಿದ. ತಲೆಯ ಮೇಲೆ ಆಕಾಶ ಕಳಚಿಬಿದ್ದಂತೆ ಛಾಯಾದೇವಿ ಎದೆ ಬಡಿದುಕೊಂಡು ಅತ್ತಳು. ಸೇವಕಿಯರು ಸಮಾಧಾನ ಮಾಡಿದಷ್ಟೂ ಹೆಚ್ಚು ಅತ್ತಳು. ಇದೆಲ್ಲ ಆ ಕೊಳೆತ ಬಿಳಿಗೂಬೆಯ ಪ್ರಭಾವವೆಂದು ಇನ್ನಷ್ಟು ಅತ್ತಳು. ಸಮಾಧಾನ ಮಾಡಲಿಕ್ಕೆ ತಾಯಿ ಬರಲಿಲ್ಲವೆಂದು ಮತ್ತಷ್ಟು ಅತ್ತಳು. ಮಕ್ಕಳು ತಮ್ಮ ಪಾಡಿಗೆ ತಾವು ಆಡಿಕೊಂಡಿದ್ದರೆ ಅದಕ್ಕೂ ಅತ್ತಳು. ನಿನ್ನೆ ನೀನು ವಿದ್ಯುಲ್ಲತೆಯ ಜೊತೆಗೆ ಜಗಳಾಡಿದ್ದು ತಪ್ಪೆಂದು ತಿಳಿಸಿ ಹೇಳಲು ಈ ನಾಟಕವಾಡಿದ್ದ ಶಿಖರಸೂರ್ಯ, ಆಮೇಲೆ ಛಾಯಾದೇವಿಯ ಅಳಾಪ ನೋಡಿ ಇದು ವಾಸಿಯಾಗದ ರೋಗವೆಂದು ತನ್ನ ಪಾಡಿಗೆ ತಾನು ಸುಮ್ಮನಾದ.

ಅಂದು ರಾತ್ರಿ ಶಿಖರಸೂರ್ಯನಿಗೆ ಬಹಳ ಹೊತ್ತು ನಿದ್ದೆ ಬರಲಿಲ್ಲ. ಮಲಗಿದ್ದ ಮಕ್ಕಳನ್ನು ನೋಡುತ್ತ ಕೂತ. ನಿರ್ಮಲವಾದ ಸ್ವಪ್ನನಿದ್ದೆಯಲ್ಲಿ ಮಕ್ಕಳಿಬ್ಬರೂ ದೇವತೆಗಳಂತೆ ಮಲಗಿದ್ದರು. ಅತ್ತು ಕರೆದು ರಾಡಿ ರಂಪ ಮಾಡಿಕೊಂಡು ಛಾಯಾದೇವಿ ಮಲಗಿದ್ದಳು. ಮೊದಲ ಬಾರಿಯೆಂಬಂತೆ ದೊಡ್ಡದಾಗಿ ಗೊರಕೆ ಹೊಡೆಯುತ್ತಿದ್ದ ಮಡದಿಯನ್ನ ನೋಡಿದ. ಅವಳ ಎಡಗಿವಿಯ ಕೆಳಗೊಂದು ಸಣ್ಣ ಮಚ್ಚೆಯಿತ್ತು. ಅದರಲ್ಲೆರಡು ಕರಿಕೂದಲು ಹುಟ್ಟಿಕೊಂಡಿದ್ದು ಅವು ಅಲ್ಲೇ ಒರಗಿದ್ದವು. ಅರೆದೆರೆದ ಬಾಯಿಂದ ಬೆಳ್ಳುಳ್ಳಿಯ ವಾಸನೆಯ ಉಸಿರು ಹೊಮ್ಮಿ ಬೆವರಿನ ವಾಸನೆಯೊಂದಿಗೆ ಬೆರೆತು ಸಹಿಸಲು ಕಷ್ಟವಾಗುತ್ತಿತ್ತು.

ನಂತರ ನಲವತ್ತೆಂಟು ದಿನ ಏನೇನೂ ಸಂಭವಿಸಲಿಲ್ಲ. ಅಷ್ಟು ದಿನವೂ ಶಿಖರಸೂರ್ಯ ಹಠಯೋಗದಿಂದೆಂಬಂತೆ ದಿನಾಲು ಕೊಂಚ ವಿಷ ಸೇವನೆ ಮಾಡುತ್ತ ಸಾತ್ಮ್ಯಕ್ಕಾಗಿ ಹಾರೈಸುತ್ತಿದ್ದ. ಹೆಂಡತಿ ಮಕ್ಕಳನ್ನು ಸ್ಪರ್ಶದಿಂದ ದೂರ ಇಟ್ಟು, ಪ್ರತ್ಯೇಕ ಮಲಗುತ್ತಿದ್ದ. ಸಂಜೀವಿನಿಯ ಕಡೆಗೆ ಹೋಗುವುದನ್ನು ಕಡಿಮೆ ಮಾಡಿದ್ದ. ಮದ್ದಿಗೆ ವಿದ್ಯುಲ್ಲತೆ ಸಹಕರಿಸುತ್ತಿದ್ದಳು ಮತ್ತು ಇಬ್ಬರ ಮಧ್ಯೆ ಏನೇನೂ

ನಡೆದಿಲ್ಲವೆಂಬಂತೆ ಸಹಜವಾಗಿದ್ದಳು. ಆದರೆ ಆತ ಸಂಜೀವಿನಿಗೆ ಬಂದರೆ, ಬಂದಾಗಿನಿಂದ ಹೋಗುವತನಕ ಅವನ ಮೇಲಿನ ಕಣ್ಣು ಕೀಳುತ್ತಿರಲಿಲ್ಲ.

ನಲವತ್ತೊಂಬತ್ತನೆಯ ದಿನ ಸೂರ್ಯ ಮುಳುಗುವ ಸಮಯದಲ್ಲಿ ರಾಜವೈದ್ಯ ಸಂಜೀವಿನಿಯ ನೇರಳೆ ಮರದಡಿ ಕೂತಿದ್ದ. ಛಾಯಾದೇವಿಯು ಮಕ್ಕಳನ್ನು ಕರೆದುಕೊಂಡು ಎರಡು ವಾರಗಳ ಹಿಂದೆ ಬಿಳಿಗಿರಿಗೆ ಹೋಗಿದ್ದಳು. ದೊಡ್ಡ ನೇರಳೆ ಮರಗಳಿದ್ದ ಸ್ಥಳ ಅದು. ಅದರಂಚಿಗೆ ನದಿಯ ಒತ್ತಿನ ನೀರು ನಿಂತುದರಿಂದ ಅದಕ್ಕೊಂದು ಸ್ವತಂತ್ರ ಸರೋವರದ ಘನತೆ ಬಂದಿತ್ತು. ತಿಳಿಯಾದ ನೀರು, ಅದರ ಸಣ್ಣ ಸಣ್ಣ ತೆರೆಗಳು, ಅದರ ಮೇಲೆ ಎಳೆಮೀನಿಗೆ ಗುರಿಯಿಡುವ ಟೀವಕ್ಕಿಗಳು-ಇವನ್ನೆಲ್ಲ ನೋಡುತ್ತ ಕೂರುವುದು ಅವನ ಇತ್ತೀಚಿನ ಹವ್ಯಾಸವಾಗಿತ್ತು. ಸಂಜೆಯ ಮಬ್ಬಿನ ಮೇಲೆ ಎಳೆಬೆಳುದಿಂಗಳು ಹರಡತೊಡಗಿತ್ತು. ಬೆಳ್ಳಿಯ ನೆನಪಾಯಿತು, ಅದನ್ನೇ ಮೆಲುಕಾಡಿಸುತ್ತ ಕೂತಿದ್ದಾಗ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. ಬೆಳುದಿಂಗಳಾಗಲೇ ಬಲಿತು ವಾತಾವರಣ ನಿಶ್ಯಬ್ದವಾಗಿತ್ತು. ಹಸಿವಿನ ಅರಿವಾಗಿ ಎದ್ದ. ಮದ್ದುಕೊಟ್ಟು ಬೇಗನೆ ಹೊರಡಬೇಕೆಂದು ತಿರುಗಿದರೆ ಹಿಂದಿನ ಮರಕ್ಕಂಟಿಕೊಂಡು ಇನ್ಯಾರೋ ಕೂತಿದ್ದರು. ಕೂತಿದ್ದವಳು ವಿದ್ಯುಲ್ಲತೆ! ಇವನನ್ನು ನೋಡಿ ಅವಳೂ ಎದ್ದಳು. ಆಶ್ಚರ್ಯದಿಂದ ಸಮೀಪ ಹೋದ. ಅವಳು ಮನೆ ಕಡೆ ನಡೆದಳು. ತುಸು ಹೊತ್ತು ಅವಳನ್ನೇ ನೋಡುತ್ತ ನಿಂತ. ಲಂಗದ ನರಿಗೆಗಳನ್ನು ಲಯಬದ್ಧವಾಗಿ ತಳ್ಳುತ್ತ ತನ್ನ ಪ್ರಮಾಣಬದ್ಧ ಆಕೃತಿಯನ್ನು ಬೆಳುದಿಂಗಳ ತೆರೆಗಳಲ್ಲಿ ತೇಲಿಸುತ್ತ ನಡೆದಳು. ಹಿಂದಿನಿಂದ ಇವನೂ ನಡೆದ.

ಹಿತ್ತಲ ಬಾಗಿಲು ತೆಗೆದೊಡನೆ ಸ್ವಾಗಿತಿಸುವುದಕ್ಕೆ ಬಾಗಿಲಲ್ಲಿ ನಿಂತು ಈತ ಒಳಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಳು. ಆಗಲೇ ಮನೆಯಲ್ಲಿದ್ದ ತಾಯಿ ಮತ್ತು ಸೇವಕಿ ಉಂಡು ಮಲಗಿದ್ದರು. ಈತ ಅವಳಿಗೆ ತನ್ನ ಹೊಟ್ಟೆ ತೋರಿಸಿ ತಿನ್ನಲು ಏನಾದರೂ ಕೊಡು ಎಂದು ಸನ್ನೆ ಮಾಡಿದ. ಅವಳ ಮೃದುವಾದ ಕೆನ್ನೆಗಳಿಗೆ ಬಣ್ಣವೇರಿದ್ದು ಅಂಥ ಮಂದ ಬೆಳಕಿನಲ್ಲೂ ಕಂಡಿತು. ಭಾವೋದ್ವೇಗಕ್ಕೆ ಒಳಗಾಗಿ ಉಕ್ಕಿಬಂದ ನಾಚಿಕೆಯ ಮಂದಹಾಸವನ್ನ ಕಷ್ಟದಿಂದ ನಿಯಂತ್ರಿಸುತ್ತ ಅವನ ಕೈ ಹಿಡಿದು ಒಳಕ್ಕೆ ಕರೆದೊಯ್ದಳು. ಬಚ್ಚಲಿಗೆ ಕರೆದೊಯ್ದು ಕೈಕಾಲಿಗೆ ಬಿಸಿನೀರು ಹಾಕಿ ತೊಳೆದಳು. ಕೈ ವಸ್ತ್ರದಿಂದ ಕೈಕಾಲು ಒರಸಿ ಅಡಿಗೆ ಮನೆಗೆ ಕರೆತಂದಳು.

ಸರಳವಾದ ಅಡಿಗೆ ಮನೆಯಲ್ಲಿ ಊಟಕ್ಕೆ ಕೂರುವುದಕ್ಕೂ ವ್ಯವಸ್ಥೆಯಿತ್ತು. ಗೋಡೆಗಳ ಮೇಲೆ ಕೆಂಪು ಮತ್ತು ಬಿಳಿ ಬಣ್ಣಗಳಲ್ಲಿ ಹಬ್ಬಿದ ಬಳ್ಳಿಯ ಚಿತ್ರ ಬಿಡಿಸಿದ್ದರು. ಒಲೆಯ ಸುತ್ತ ಮಾತ್ರವಲ್ಲದೆ ಊಟಕ್ಕೆ ಕೂರುವ ಸ್ಥಳದ ಸುತ್ತಲೂ ರಂಗೋಲಿ ಬಿಡಿಸಿದ್ದರು. ಮೂಡಣದ ಕಿಡಿಕಿಯಿಂದ ಮಲ್ಲಿಗೆಯ ಮಾದಕ ಪರಿಮಳ ಬರುತ್ತಿತ್ತು. ಭರ್ಜರಿಗೆ ಒಗ್ಗಿಕೊಂಡಿದ್ದ ರಾಜವೈದ್ಯನಿಗೆ ಈ ಅಡಿಗೆ ಮನೆಯ ಸರಳತೆ ಬಹಳ ಹಿಡಿಸಿತ್ತು. ವಾತಾವರಣ ನಿಶ್ಯಬ್ದವಾಗಿದ್ದು ಹೊರಗಿನ ಮರದೆಲೆಗಳ ಸರಸರ ಸದ್ದು ಕೂಡ ಕೇಳಿಸುತ್ತಿತ್ತು. ಸೌಜನ್ಯವತಿಯಾದ, ದುಂಡುದೋಳಿನ, ಉಬ್ಬಿದೆದೆಯ ಚೆಲುವೆ ಚೈತನ್ಯ ಉತ್ಸಾಹಗಳಿಂದ ನಳನಳಿಸುತ್ತಿದ್ದಳು. ಗುರುನಿತಂಬಗಳು ನರ್ತಿಸುವಂತೆ ನಡೆಯುತ್ತ ವಿದ್ಯುಲ್ಲತೆ ಬಂದು ಬಾಳೆಯೆಲೆ ಹಾಕಿ ನೀರಿನ ಗಿಂಡಿಯ ಬಳಿಯಿಟ್ಟು ಸಿಂಪಡಿಸಿಕೊ ಎಂದು ಸನ್ನೆ ಮಾಡಿದಳು. ಅವಳ್ಯಾಕೆ ಹಾಗೆ ಮಾಡಿದಳೆಂದು ವಿಷವೈದ್ಯನಿಗೆ ಗೊತ್ತಾಯಿತು. ಈಗ ಅವನಲ್ಲಿ ಆತ್ಮವಿಶ್ವಾಸವೂ ಬಲಿತಿತ್ತು. ನೀನೇ ಸಿಂಪಡಿಸು ಎಂದು ಸನ್ನೆ ಮಾಡಿದ. ವಿದ್ಯುಲ್ಲತೆಗೆ ತನ್ನ ವಿಷ ನೀಗಿತೇ ಎಂದು ಆನಂದದಿಂದ ರೋಮಾಂಚನವಾಯ್ತು! ಉತ್ಸಾಹದಿಂದ ನೀರು ಸಿಂಪಡಿಸಿದಳು. ಎಲೆ ಒರೆಸಿ ಹಸನು ಮಾಡಿ ತನ್ನ ವೈದ್ಯನ ಕಡೆಗೆ ಕೃಪಾಕಟಾಕ್ಷ ಬೀರುತ್ತ, ಸುಂದರವಾದ ವೃಕ್ಷದ ಮೇಲಿನ ದಾವಣಿಯನ್ನು ಒಮ್ಮೆ ಎಳೆದು ಸರಿಪಡಿಸಿಕೊಂಡು ಮುತ್ತಿನ ವರ್ಣದ ಅನ್ನ, ಪಚ್ಚೆ ವರ್ಣದ ತಂಬುಳು ಹಾಕಿದಳು.

ರಾಜವೈದ್ಯ ಉದ್ದೇಶಪೂರ್ವಕ ನೆಲುವಿನ ಕಡೆಗೆ ನೋಡಿದ. ಅಲ್ಲಿ ಅವಳ ತಾಯಿಗಾಗಿ ತಾನೇ ತಯಾರಿಸಿಕೊಟ್ಟ ಕಳ್ಳು ಇತ್ತು. ಆ ಕಡೆ ಕೈ ತೋರಿಸಿ ಬೇಕು ಎಂದು ಸನ್ನೆ ಮಾಡಿದ. ವಿದ್ಯುಲ್ಲತೆ ಕಿಲಕಿಲ ನಗುತ್ತ ಅದನ್ನು ತಂದು ಅವನ ಮುಂದಿಟ್ಟು ಒಂದು ಸಣ್ಣ ಚಟಿಗೆಯನ್ನು ಪಕ್ಕಕ್ಕಿಟ್ಟು ಹ್ಯಾಗೆ ಕುಡಿಯುವನೆಂದು ಕದ್ದು ಓರೆ ನೋಟ ಬೀರುತ್ತ ಪಲ್ಯ ಬಡಿಸಿದಳು. ನಿಂಬೆ ಮಾದಳದ ಉಪ್ಪಿನಕಾಯಿ ಬಡಿಸಿದಳು. ನಂಜಿಕೊಳ್ಳುತ್ತ ಕುಡಿದಾಗ ಬೆರಗಿನಿಂದ ನೋಡಿದಳು. ಆತ ಉಂಡು ಎಂಜಲು ತೊಳೆದುಕೊಳ್ಳುವವರೆಗೂ ಅವಳ ಮಂದಹಾಸ ಅವನಲ್ಲೇ ನೆಟ್ಟಿತ್ತು.

ಆಮೇಲೆ ತುಗೂಯ್ಯಾಲೆಯಲ್ಲಿ ಕುಂತು ಅಡಿಕೆ ವೀಳ್ಯ ಮೆಲ್ಲುವಾಗ ಅವಸರವಸರವಾಗಿ ಅವಳೂ ಊಟ ಮಾಡಿ ಬಂದು, ಅವನಷ್ಟೇ ತೃಪ್ತಿಯಿಂದ ಪಕ್ಕದಲ್ಲಿ ನಿಂತಳು. ರಾಜವೈದ್ಯ ಅವಳನ್ನು ನೋಡಿದ. ಅಹಂಕಾರವಿಲ್ಲದೆ ಅವಳ ಸರಳ ಸ್ನೇಹಶೀಲ ಮನೋಭಾವ ಅವನ ಒಡ್ಡತನವನ್ನು ಮರೆಮಾಡಿತ್ತು. ಹೆಣ್ಣನ್ನ ಅದರ ನಿಜವಾದ ಬಣ್ಣದಲ್ಲಿ ನೋಡಬಲ್ಲನೆಂಬ ಅಹಂಕಾರಿಯ ಮಾಂಸಖಂಡಗಳಲ್ಲಿ ಭಾವೋದ್ರೇಕ ಮೂಡಿ ಅವನ ಜಂಬಗಳನ್ನ ನಡುಗಿಸಿತ್ತು. ಲೋಕವನ್ನ ಅದು ಇರುವಂತೆಯೇ ಒಪ್ಪಿಕೊಂಡು, ಅದರ ವಿಪರೀತಗಳನ್ನು ಮೌನವಾಗಿ ಸಹಿಸುವ ಹೆಣ್ಣಾಗಲಿ, ಹೇಳಿದಂತೆ ಕೇಳಿಕೊಂಡು ಬಿದ್ದಿರುವ ದಡ್ಡ ಹೆಣ್ಣಾಗಲಿ ಇವನಿಗಾಗದು.

ಇವಳು ಬೆಳ್ಳಿಯಂತೆಯೇ ಚುರುಕು ಬುದ್ಧಿ ಮತ್ತು ಹರಿತ ಸೌಂದರ್ಯಗಳಿಂದ ಗಂಡಿನ ಶಕ್ತಿಗೆ ಸವಾಲೆಸೆಯಬಲ್ಲ ಹೆಣ್ಣೆಂದು ಗೊತ್ತಾಗಿತ್ತು. ಆ ದಿನ ನೋಡನೋಡುತ್ತಿರುವಂತೆ ಪುಣ್ಯಕೋಟಿ ಹಸುವಿನಂತಿದ್ದವಳು, ಹುಲಿಯಾಗಿ ಕೈಯುಗುರು ಕೋರೆಹಲ್ಲುಗಳ ಮಸೆದು ನಿಂತಾಗ ಹುಲಿಯಂತಿದ್ದ ರಾಣಿ ಜಿಂಕೆಯಾಗಿ ಥರಥರ ನಡುಗಿದ್ದಳು. ಇನ್ನೊಂದು ಹೆಣ್ಣಿನಲ್ಲಿ ಸಿಕ್ಕದ ಯಾವುದೋ ಆಕರ್ಷಕ ಗುಣ ಇವಳಲ್ಲಿದೆಯೆಂದು ಅಂದೇ ಖಾತ್ರಿಯಾಗಿತ್ತು.

ಒಂದು ಹುಡುಗಿಯ ಪ್ರೇಮಪಾಶದಲ್ಲಿ ಬೀಳುವುದು ಸುಮಧುರ ಅನುಭವವಾಗಿರುವಂತೆಯೇ ಅದು ಅಪಾಯಕಾರಿಯಾದ ಶಿಕ್ಷೆಯೂ ಹೌದೆಂಬುದನ್ನು ರಾಜವೈದ್ಯನಿಗೆ ಹೇಳಿಕೊಡಬೇಕೆ? ಆ ದಿನ ಛಾಯಾದೇವಿಯ ಮುಂಗೈ ಹಿಡಿದು ಪ್ರತಿಭಟಿಸಿದಾಗ ಇವನೆದೆಯಲ್ಲಿ ಮಲಗಿದ್ದ ಚಿರತೆ ಮೈಮುರಿಗೆದ್ದು ಇಡೀ ನರಮಂಡಲ ಹುರಿಗೊಂಡು ಬೇಟೆಯಾಡುವ ಹಂಬಲ ಹೊಮ್ಮಿತ್ತು. ಆ ಛಲದಿಂದಲೇ ತನಗೆ ಸವಾಲಾದ ಅವಳ ವಿಷದ ಎಂಜುಲು ಹೀರಿ ಆವೇಶಭರಿತನಾಗಿದ್ದ. ವಿಷದ ಪರಿಣಾಮದಿಂದ ಹೆದರಿದ್ದಕ್ಕೆ ಒಳಗೊಳಗೇ ಅವಮಾನಗೊಂಡಿದ್ದ. ಆದರೆ ವಿದ್ಯುಲ್ಲತೆ ಅಂಥ ಭಾವಾವೇಶದಿಂದ ಹೆದರಿದ್ದಕ್ಕೆ ಒಳಗೊಳಗೇ ಅವಮಾನಗೊಂಡಿದ್ದ. ಆದರೆ ವಿದ್ಯುಲ್ಲತೆ ಅಂಥ ಭಾವಾವೇಶದವಳಲ್ಲ. ಸಮಾನರನ್ನು ಗೌರವಿಸುವವಳು, ಪ್ರೀತಿಸುವವಳು. ಪ್ರೇಮ ಕಟಾಕ್ಷದಿಂದ ನೋಡಿ ಕೃಪೆ ಮಾಡುವವಳು. ಇವಳ ನೋಟ ಚಂದ, ನಗು ಚಂದ, ಮಂದಾನಿಲದಲ್ಲಿ ಅಲುಗಾಡುವ ಮುಂಗುರುಳು ಚಂದ, ಕೆನ್ನೆಯ ಮೇಲಿನ ಕುಳಿ ಚಂದ, ನಿಲುವು ಕೂಡ ಇವಳನ್ನು ಪ್ರೀತಿಸುವಂತೆ ಮಾಡಿದ್ದವು. ತನ್ನ ಹಾವ ಭಾವ ವಿಲಾಸ ಭಂಗಿಯಿಂದ ಒಂದು ಕ್ಷಣದಲ್ಲೇ ಶಿಖರಸೂರ್ಯನನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಳು. ದಾವಣಿ ಸರಿದಾಗ ಅದನ್ನವಳು ಸರಿಸಿ ಮೈ ಮುಚ್ಚಿಕೊಂಬ ರೀತಿಯೇ ಬೆರಗುಗೊಳಿಸಿತ್ತು. ಯೌವನದಿಂದ ಕೂಡಿದ ಸೊಬಗುಗಾತಿಯ ಸೌಂದರ್ಯಕ್ಕೆ ಇವನು ವಿವಶನಾಗಿ ಬಿಟ್ಟದ್ದು ಇವಳೊಂದು ಹೆಣ್ಣು ಚಿರತೆಯೆಂಬ ಕಾರಣಕ್ಕೆ! ಇವಳು ಜಿಂಕೆಗಳಿಗೆ ಚಿರತೆ, ಪ್ರೇಮಿಗೆ ಪ್ರೇಯಸಿಯಾಗಬಲ್ಲಳೆಂಬ ಕಾರಣಕ್ಕೆ!

ರಾಜವೈದ್ಯ ಊಟಮಾಡಿ ತನ್ನ ಮನೆಗೆ ಹೋಗುವ ಲಕ್ಷಣಗಳು ಕಾಣಲಿಲ್ಲವಾದ್ದರಿಂದ ಮಲಗುವ ವ್ಯವಸ್ಥೆ ಮಾಡಲು ವಿದ್ಯುಲ್ಲತೆ ಹೊರಟಳು. ಇವನೂ ಎದ್ದ. ವಿದ್ಯುಲ್ಲತೆ ಅವನ ಮುಖ ನೋಡಿದಳು. ಅವನಲ್ಲಿ ತಾಕಲಾಡುವ ಭಾವನೆಗಳ ಅರಿವಾಯ್ತು ಅವಳಿಗೆ. ಮೂಕಿಯಾದರೂ ಸ್ತ್ರೀಗುಣ ಜಾಗೃತಳಾದ ಅವಳು ಅವನನ್ನು ಸರಿಯಾಗಿ ಗ್ರಹಿಸಿದ್ದಳು. ಅವನ ದೇಹಾಕೃತಿ, ಪೊದೆ ಬೆಳೆದ ಕಿವಿ, ಭುಜದ ಮೇಲೊರಗಿ ಈಗಷ್ಟೆ ಬೆಳ್ಳಗಾಗುತ್ತಿರುವ ಕೂದಲು, ಅವನ ಪ್ರಾಣಬಲ - ಇವನ್ನೆಲ್ಲ ಆಕೆ ಗಮನಿಸಿದ್ದಳು. ಅವನ ಕಣ್ಣುಗಳನ್ನೇ ನೋಡುತ್ತಿದ್ದ ಅವಳಿಗೆ ಇದ್ದಕ್ಕಿದ್ದಂತೆ ಅಲ್ಲಿರುವ ಎಲ್ಲ ವಸ್ತುಗಳಲ್ಲಿ ಜೀವಸಂಚಾರವಾದಂತೆನಿಸಿತು. ಉರಿಯುತ್ತಿರುವ ದೀಪಕ್ಕೂ ಜೀವವಿದೆಯೆನ್ನಿಸಿತು. ಕೈಹಿಡಿದು ತಾನು ಮಲಗುತ್ತಿದ್ದ ಕೋಣೆಯತನಕ ಕರೆದೊಯ್ದಳು. ತನ್ನ ಗ್ರಹಿಕೆಯಲ್ಲಿ ಕೊಂಚ ಅನುಮಾನ ತೋರಿ ಹಾಸಿಗೆಯ ಕಡೆಗೆ ಕೈ ನೀಡಿ ಇಲ್ಲಿ ಮಲಗಿ ಎಂದು ಸೂಚಿಸಿದಳು. ಈತ ಅವಳನ್ನು ಪುಟ್ಟ ಗೊಂಬೆಯಂತೆ ಎತ್ತಿಕೊಂಡು ಮುದ್ದಿಸುತ್ತ ಹಾಸಿಗೆಗೊಯ್ದು ದೀಪ ಆರಿಸಿದ.

ರಾಜವೈದ್ಯನಿಗೆ ಎಚ್ಚರವಾಗಿ ಕಣ್ಣು ತೆರೆದಾಗ ಹೊರಗೆ ಆಗಲೇ ಮುಂಜಾನೆಯಾಗಿ ಹೊಂಬಿಸಿಲು ಬಿದ್ದಿತ್ತು. ಅದರೊಂದಿಗೆ ಚಳಿ ಕೂಡ ಇತ್ತು. ಆಗೀಗ ಹಕ್ಕಿಗಳ ಪ್ರಿಯವಾದ ಉಲಿ ಬಿಟ್ಟರೆ ಬೇರೊಂದು ಶಬ್ಧವಿರಲಿಲ್ಲ. ವಿದ್ಯಲ್ಲತೆ ದಿಂಬಿನ ಮೇಲೆ ರೇಶ್ಮೆ ಕೂದಲು ಹರವಿ ಕೂಸಿನ ಹಾಗೆ ತುಟಿಗಳನ್ನು ಅರೆದೆರೆದು ನಿರ್ಭಯ ಗೃಪ್ತಿಯಿಂದ ಮಲಗಿದ್ದಳು. ಕೂದಲು ನೇವರಿಸಿ ಮೆಲ್ಲಗೆ ಅವಳ ಹಣೆಗೂ, ನಂತರ ತುಟಿಗೂ ಮುದ್ದು ಒತ್ತಿದ. ಅವಳ ಬೆಚ್ಚಗಿನ ಉಸಿರು ಪರಿಮಳಭರಿತವಾಗಿತ್ತು.

ಅವಳಿಗೂ ಎಚ್ಚರವಾಗಿ ಕಣ್ತೆರೆದಾಗ ಶಿಖರಸೂರ್ಯ ತನ್ನನ್ನೇ ಎವೆಯಿಕ್ಕದೆ ನೋಡುತ್ತಿದ್ದುದರಿಂದ ನಾಚಿ ಅವನ ತೆಕ್ಕೆಗೆ ಸರಿದು ಕಣ್ಣು ಮುಚ್ಚಿಕೊಂಡಳು. ಪ್ರಸನ್ನವಾಗಿ ಸಂತೃಪ್ತಿಯಿಂದ ಇವ ತೇಲುಗಣ್ಣಾದ. ಇವನಿಗೆ ಪ್ರಥಮ ಬಾರಿ ಸ್ತ್ರೀಸುಖ ಸಿಕ್ಕಿತ್ತು. ಆ ಸುಖ ಕಳಂಕರಹಿತವಾಗಿತ್ತು. ಅನುಮಾನರಹಿತವಾಗಿತ್ತು. ಭಯರಹಿತವಾಗಿತ್ತು. ಸ್ವತಂತ್ರವಾಗಿತ್ತು.

## ಮೂವತ್ನಾಲ್ಕು

ಅದಕ್ಕೇ ಇದು ನಿಜವೇ? ಎಂದು ಅನುಮಾನ ಬರುತ್ತಿತ್ತು. ತಾನು ಮೊದಲಿನ ಚಿನ್ನಮುತ್ತ ಯಾ ಜಯಸೂರ್ಯ ಯಾ ಶಿಖರಸೂರ್ಯನೇ? ಅನ್ನಿಸುತ್ತಿತ್ತು. ಯಾರನ್ನೂ ನಂಬದ ಶಿಖರಸೂರ್ಯ ಈಗ ವಿದ್ಯುಲ್ಲತೆಯನ್ನು ನಂಬಿದ. ಮೊದಮೊದಲು ನಂಬಿಕೆ ಅಂಬೋದು ಕ್ಷಣಿಕವೆನ್ನುತ್ತಿದ್ದವನು ಈಗ ತನಗೇ ಗೊತ್ತಿಲ್ಲದ ಹಾಗೆ ನಂಬಿಕೆ ಬದುಕಿಗೊಂದು ಆಧಾರ ಕೊಡುತ್ತದೆಂದು ನಂಬುವವನಾದ. ಇನ್ನೊಬ್ಬರಿಗೆ ಈ ನಂಬಿಕೆಯನ್ನು ಹಂಚಲು ಸಿದ್ಧನಾಗದಿದ್ದರೂ ವಿದ್ಯುಲ್ಲತೆಯನ್ನು ಮಾತ್ರ ನಂಬಿದ. ಅವಳ ಸೂಕ್ಷ್ಮಗ್ರಹಿಕೆ, ಚುರುಕುತನ ವ್ಯವಹಾರಜ್ಞಾನ, ಒಳನೋಟಗಳು ಅವಳ ಬಗ್ಗೆ ಹೆಚ್ಚಿನ ಗೌರವ ಅಭಿಮಾನಗಳು ಮೂಡುವಂತೆ ಮಾಡಿದವು. ಸುಳ್ಳು ವಿನಯವನ್ನಾಗಲಿ, ನಿಷ್ಠೆಯನ್ನಾಗಲಿ ಅವಳೆಂದೂ ಅಭಿನಯಿಸುತ್ತಿರಲಿಲ್ಲ.

ತಾನು ಈವರೆಗೆ ಯಾರಿಗಾಗಿ ಮೀಸಲಾಗಿದ್ದೆನೋ ಆ ಗಂಡಸು ಇವನೇ ಎಂದು ವಿದ್ಯುಲ್ಲತೆಗೂ ಖಾತ್ರಿಯಾಯಿತು. ಮುಖ ನೋಡಿಯೇ ಇವನ ಇಷ್ಟಾನಿಷ್ಟಗಳನ್ನು, ಅಭಿಪ್ರಾಯಗಳನ್ನು ತಿಳಿಯುತ್ತಿದ್ದಳು. ಇಬ್ಬರ ಮಧ್ಯೆ ಸಂವಹನಕ್ಕೆ ಸರಳವಾದ ವ್ಯವಸ್ಥೆಯೊಂದನ್ನು ಬಹು ಬೇಗ ನಿರ್ಮಿಸಿಕೊಂಡರು. ಒಂದೆರಡು ನೋಟಗಳು, ಒಂದೆರಡು ಮುಗುಳು ನಗೆಗಳ ವಿನಿಮಯ, ಅಗತ್ಯ ಬಿದ್ದರೆ ಅನ್ಯರಿಗೆ ಕಾಣದಂತೆ ಒಂದೆರಡು ಕೈಬಾಯಿ ಸನ್ನೆಗಳು ಇವಿಷ್ಟರಿಂದಲೇ ಇಬ್ಬರೂ ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ಸಂದೇಹಕ್ಕೆ ಎಡೆ ಇಲ್ಲದಂತೆ ಸಂವಹನ ಮಾಡುತ್ತಿದ್ದರು. ಮಕ್ಕಳ ಬಗೆಗಿನ ತಂದೆಯ ಕರ್ತವ್ಯಗಳನ್ನು ಅವಳೇ ಜ್ಞಾಪಿಸಿ ಅವನ ಮಹತ್ವಾಕಾಂಕ್ಷೆಗಳನ್ನು ಉದ್ದೀಪಿಸಿದಳು. ಆಟಗುಳಿತನದ ಚಲನೆಯ ವಿಲಾಸದಿಂದ, ತನ್ನ ಹಾಗೇ ದೊಡ್ಡಗಾತ್ರದಲ್ಲಿ ಅಸಾಧಾರಣ ಮೈಕಟ್ಟಿನಿಂದ ಬೆಳೆಯುತ್ತಿದ್ದ ರವಿಕೀರ್ತಿ, ಹೊಳೆವ ನೀಲಿ ಕಣ್ಣಿನ, ನೀಳಗೂದಲಿನ ಅಪೂರ್ವ ಸುಂದರಿಯಾಗಿ ಅಸಾಧಾರಣ ಸ್ಮರಣಶಕ್ತಿಯುಳ್ಳ ಜಾಣೆಯಾಗಿ ಬೆಳೆಯುತ್ತಿದ್ದ ಮುದ್ದುಗೌರಿ ಇವರನ್ನು ಕಂಡಾಗಲೆಲ್ಲ ಕವಿರಾಜ ಭಾವೋದ್ವೇಗಕ್ಕೆ ಒಳಗಾಗಿ ಅವರ ಭವಿಷ್ಯದ ಕನಸು ಕಾಣಲಿಕ್ಕೆ ಸುರುಮಾಡಿದ್ದ. ವಿದ್ಯುಲ್ಲತೆ ಅವನ ಬಾಳಿಗೊಂದು ನೆಮ್ಮದಿ ಕೊಟ್ಟರೆ ಮಕ್ಕಳು ಅವನ ಬದುಕಿಗೊಂದು ಉದ್ದೇಶವನ್ನು, ಅರ್ಥವನ್ನು ಕೊಟ್ಟರು. ವಯಸ್ಸಾಗಿ ಧಣಿದವನ ಬದುಕಿಗೆ ಹೊಸ ಯೌವನ ಪ್ರಾಪ್ತಿಯಾಗಿ ಆನಂದಫಲಗಳು ದೊರೆಯಲಾರಂಭಿಸಿದವು.

ಛಾಯಾದೇವಿ ಮಾತ್ರ ಬಂದ ಎಲ್ಲಾ ಚಾಡಿಗಳಿಗೆ ಕಿವಿಯೊಡ್ಡುತ್ತ, ಹೊಸವನ್ನು ಹೊಸೆಯುತ್ತ, ತನ್ನ ಪರಿವಾರದೊಂದಿಗೆ ಅಸೂಯೆಯಿಂದ ಉರಿಯುತ್ತ ಕಾಲ ಕಳೆಯುತ್ತಿದ್ದಳು. ಮಕ್ಕಳೊಂದಿಗೆ ಬಿಳಿಗಿರಿಗೆ ಹೋಗಿದ್ದಳಲ್ಲ, ಅಲ್ಲಿಯಾದರೂ ನೆಮ್ಮದಿಯಿತ್ತೆ?

"ನಿನ್ನ ಗಂಡ ವಿಷಕನ್ಯೆಯ ಕೂಡಿಕೆ ಸಂಗ ಮಾಡಿರುವನಂತೆ! ಹೌಂದೆ!" ಎಂದು ಚಿಕ್ಕಮ್ಮನೂ ಕೇಳಿ ಸಹಾನುಭೂತಿ ಸೂಚಿಸಿದ್ದಳು. ಅಲ್ಲಿಯೂ ಬಹಳ ದಿನ ನಿಲ್ಲಲಾಗದೆ ವಾಪಸಾದಳು.

ಹಿಂದಿರುಗಿ ಕನಕಪುರಿಗೆ ಬರುವಾಗ ಇಳಿಹೊತ್ತಾಗಿತ್ತು. ಸೂರ್ಯನಾಗಲೇ ಪಡುವಣಕ್ಕೆ ಹೊರಳಿ, ಬಿಸಿಲು ತನ್ನ ಕಾವು ಕಳೆದುಕೊಂಡು ಚಿನ್ನದ ವರ್ಣಕ್ಕೆ ತಿರುಗಿತ್ತು. ಗಾಡಿಯ ಗಾಲಿಗಳು ಬಡಬಡ ಸದ್ದು ಮಾಡುತ್ತಿದ್ದವು. ಗೊರಸುಗಳ ಟಣತ್ಕಾರ, ಗಾಡಿಯ ಕುಲುಕಾಟಗಳಿಗೆ ಮಕ್ಕಳು ದಣಿದು ಅವಳ ತೊಡೆಯ ಮೇಲೆ ನಿದ್ದೆ ಹೋಗಿದ್ದವು. ಮನೆಯ ದಾರಿ ಬಂದ ಕೂಡಲೇ ಗಾಡಿ ನೇರ ಕನಕಪುರಿಗೆ ಹೋಗುವ ಬದಲು ಎಡಗಡೆಗೆ ತಿರುಗಿತು. ದಾರಿಯಲ್ಲೇ ಸಂಜೀವಿನಿ ಇತ್ತು.

ಗಾಡಿಯಿಂದ ಹಣಿಕಿ ಹಾಕಿದಾಗ ನೇರಳೆ ಮರದಡಿ ತನ್ನ ಪತಿರಾಯ ಮತ್ತು ವಿದ್ಯುಲ್ಲತೆ ಜೊತೆಯಾಗಿ ನಿಂತಿರುವುದು ಕಂಡಿತು! ಗಾಡಿಯನ್ನು ಮರೆಗೆ ನಿಲ್ಲಿಸಿದಳು. ನೋಡಿದರೆ ಶಿಖರಸೂರ್ಯ ಕೈಗೆ ನಿಲುಕುವ ಒಂದು ಟೊಂಗೆಯನ್ನೆಳೆದು ನೇರಳೆ ಹಣ್ಣುಗಳನ್ನ ಕಿತ್ತು ವಿದ್ಯುಲ್ಲತೆಗೆ ಕೊಡುತ್ತಿದ್ದ. ಅವಳು ತಗೊಂಡು ತಿನ್ನುತ್ತಿದ್ದಳು. ಅವಳ ಮುಖದಲ್ಲಿ ತೃಪ್ತಿಯ ಮಂದಹಾಸವಿತ್ತು. ಅವಳು ಒಮ್ಮೊಮ್ಮೆ ತನಗೆ ಬೇಕಾದ ಗೊಂಚಲ ಕಡೆಗೆ ಬೆರಳು ಮಾಡಿ ತೋರಿಸುತ್ತಿದ್ದಳು. ಈತ ಕೃತಾರ್ಥನಾಗಿ ಉಮೇದಿಯಿಂದ ಟೊಂಗೆಯನ್ನು ಬಗ್ಗಿಸಿ ಆ ಹಣ್ಣು ಅವಳಿಗೆ ಸಿಕ್ಕುವಂತೆ ಮಾಡುತ್ತಿದ್ದ. ಪ್ರೇಮದ ನಂಜೇರಿ ಇಬ್ಬರ ಮುಖಗಳೂ ಆನಂದವನ್ನು ಮುಕ್ಕಳಿಸುತ್ತ ಕೆಂಪೇರಿದ್ದವು. ಶಿಖರಸೂರ್ಯನ ಇಂಥ ನಗೆಯನ್ನು ಅವಳೆಂದೂ ಕಂಡಿರಲಿಲ್ಲ. ಅವಳಂಥ ಚೆಲುವೆ ತಾನಲ್ಲವೆಂದು ಒಪ್ಪಿಕೊಂಡಳು. ಕೂತಿದ್ದರೂ ಕಾಲಲ್ಲಿ ಶಕ್ತಿಯಿಲ್ಲವೆನ್ನಿಸಿ ಕಂಪಿಸಿದಳು. ಎದೆಗೆ ಚಳಿ ತಾಗಿ ಬಿಗಿಯಾಗಿ ಸೆರಗು ಹೊದ್ದು ಗಾಡಿ ಮುನ್ನಡೆಸಲು ಹೇಳಿದಳು. ತಾನು ಬೇಗ ಸಾಯಬಹುದೆನ್ನಿಸಿ ಗಾಬರಿಯಾಗಿ ಬೆವರಿದಳು. ತುಟಿಗಳನ್ನು ನಾಲಗೆಯಿಂದ ಸವರಿಕೊಂಡರೂ ಸಮಾಧಾನವಾಗಲಿಲ್ಲ. ತಾನು ಬಯಸಿದ ವೇಗದಲ್ಲಿ ಕುದುರೆ ಓಡುತ್ತಿಲ್ಲವೆನ್ನಿಸಿ ಕುದುರೆಗಳನ್ನು ಸಾಯುವಂತೆ ಹೊಡೆದು ಓಡಿಸಬೇಕೆಂದು ಆಜ್ಞೆಕೊಟ್ಟಳು.

ಮನೆಗೆ ಬಂದು ಪ್ರಯಾಣದ ದಣಿವೆಂದು ಹೇಳಿ ತನ್ನ ಕೋಣೆಗೆ ಹೋಗಿ ಜಂತಿ ನೋಡುತ್ತ, ಹಾಸಿಗೆಯಲ್ಲಿ ಬಿದ್ದುಕೊಂಡಳು. ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದಳು. ಆದರೆ ಮಕ್ಕಳಿವೆ. ಅವು ಅನಾಥವಾದರೆ ಗತಿ ಯಾರು? ಅನಾಥನಾದ ರವಿಯನ್ನು ಕಲ್ಪಿಸಿಕೊಂಡಳು ತಕ್ಷಣ ಕಣ್ಣೀರುಕ್ಕಿತು. ಮಕ್ಕಳಿಗಾಗಿ ಬದುಕಬೇಕೆಂದುಕೊಂಡಳು.

ಇತ್ತ ಶಿಖರಸೂರ್ಯನಿಗಾದರೂ ನೆಮ್ಮದಿಯಿತ್ತೆ? ದಿನವೆಲ್ಲಾ ಚಡಪಡಿಸುತ್ತಿದ್ದ. ಮನೆಯಲ್ಲಿದ್ದಾಗ ಮುಂಗೋಪ ಅವನ ಮೂಗಿನ ತುದಿಯಲ್ಲೇ ಕುಂತಿರುತ್ತಿತ್ತು. ಒಂದೇ ಸಮಾಧಾನವೆಂದರೆ ಮಕ್ಕಳ ಮುಂದೆ ಇಬ್ಬರೂ ತಮ್ಮ ಕೋಪತಾಪಗಳನ್ನ ನಿಯಂತ್ರಿಸಿಕೊಂಡಿದ್ದರು. ಚಿಕ್ಕಮ್ಮಣ್ಣಿಗೆ ವಿಷಯ ತಿಳಿದಿದ್ದರೂ ತಾನಾಗಿ ಬಾಯಿ ಹಾಕಿ ಜಗಳ ತೀರಿಸುವುದು ಅವಳ ಜಾಯಮಾನವಲ್ಲ.

ಶಿಖರಸೂರ್ಯನ ಹಿಂದಿನ ಜೀವನದ ಬಗ್ಗೆ ಯೋಚಿಸುವುದಕ್ಕೆ ಅಥವಾ ಕಲ್ಪಿಸಿಕೊಳ್ಳಲಿಕ್ಕೆ ಛಾಯಾದೇವಿಗೆ ಎಳ್ಳಷ್ಟೂ ಆಸಕ್ತಿಯಿರಲಿಲ್ಲ. 'ಒಬ್ಬ ಮುದಿ ವೈದ್ಯನ ಸೇವೆ ಮಾಡಿಕೊಂಡು, ಮದ್ದರೆದು ಕೊಡುತ್ತ ಬೆಳೆದಿದ್ದಾನಾದೀತು. ಮೊದಮೊದಲು ಕಷ್ಟಪಟ್ಟಿದ್ದಾನು. ಆಮೇಲೆ ಅರ್ಥಕೌಶಲನ ಸಹಾಯದಿಂದ ಮುಂದೆ ಬಂದ:' ಅವನ ತಂದೆ ತಾಯಿಗಳ ಬಗ್ಗೆಯಾಗಲಿ, ಬಂಧು ಬಳಗದ ಬಗ್ಗೆಯಾಗಲಿ ಅವಳ ಕುತೂಹಲ ಕೆರಳಲೇ ಇಲ್ಲ. ಅವಳಿಗೆ ವರ್ತಮಾನ ಇಷ್ಟ, ಮತ್ತು ಅದರಲ್ಲಿ ಬದುಕುವುದು ಅವಳಿಗೆ ಪ್ರಿಯವಾದದ್ದು. ಅದಕ್ಕೆ ಅಡ್ಡಿ ಬಂದವಳು ವಿದ್ಯುಲ್ಲತೆ!

ಅವಳ ಬಗ್ಗೆ ಯೋಚಿಸಿದಾಗೆಲ್ಲ "ಅಗ್ಗದ ಸೂಳೇರ ಜಾತೀದು!" ಎಂದು ಹೀಗಳೆದು 'ಇವಳೊಬ್ಬಳು ತನ್ನ ಹಾಸಿಗೆಯಲ್ಲಿ ಪಾಲು ಬೇಡಲು ಬಂದಳು ಸೂಳೆಮುಂಡೆ!' ಎಂದು ಬಯ್ದು "ಸಾಯಬಾರದೆ ಶನಿ!" ಎಂದು ಶಾಪ ಹಾಕುತ್ತಿದ್ದಳು. ವಿದ್ಯುಲ್ಲತೆಯ ಬಗ್ಗೆ ನೊಂದ ಹಾವಿನ ಸೇಡಿತ್ತು ಅವಳಲ್ಲಿ. ಯಾರು ಬಂದರೂ ಅವರೆದುರು ವಿದ್ಯುಲ್ಲತೆಗೆ ಹತ್ತೆಂಟು ಶಾಪ ಹಾಕುವುದನ್ನ ಮರೆಯುತ್ತಿರಲಿಲ್ಲ. ತನ್ನ ಕುಲವೇನು, ತನ್ನ ಸಂಸ್ಕೃತಿಯೇನು, ತನ್ನ ಅಂತಸ್ತೇನು, ತನ್ನ ಮರ್ಯಾದೆಯೇನು? ಎಂದುಕೊಳ್ಳುತ್ತ ಅವಳನ್ನು ಹೀನ ಶಬ್ದಗಳಲ್ಲಿ ನಿಂದಿಸಿ ಅದೊಂದು ಕಹಿಪದಾರ್ಥವೆಂಬಂತೆ ಮಾತಾಡುತ್ತ ತನ್ನ ಬಗ್ಗೆ ಅವರಲ್ಲಿ ಅನುಕಂಪ ಉಂಟಾಗುವಂತೆಯೂ, ಅವಳ ಬಗ್ಗೆ ತಾತ್ಸಾರವುಂಟಾಗುವಂತೆಯೂ, ಶಿಖರಸೂರ್ಯನ ಬಗ್ಗೆ (ಅಕ್ಕಪಕ್ಕ ಅವನ ಪಕ್ಷಪಾತಿಗಳಿಲ್ಲವೆಂದು ಖಾತ್ರಿ ಮಾಡಿಕೊಂಡು) ಅವನೆಷ್ಟು ಕ್ರೂರ ಅಮಾನುಷ ಎಂಬಂಥ ಭಾವನೆ ಬರುವ ಹಾಗೆಯೂ ಮಾತಾಡುತ್ತಿದ್ದಳು.

"ಅದರ ವಯಸ್ಸು ಗೊತ್ತಿಲ್ಲಮ್ಮ. ಮಾತಾಡಲಿಕ್ಕೆ ಬಾಯಿ ತೆಗೆದರೆ ಸಾಕು ನಮ್ಮ ದೊಡ್ಡಮ್ಮಣ್ಣಿಯ ಬಿಳಿನಾಯಿ ಕುಂಯ್‌ಗುಡೋದಿಲ್ಲವ? ಹಾಂಗಿರ್ತದೆ! ಅಯ್ಯೋ ಅಯ್ಯೋ ಮೊನ್ನೆ ಕುಂಯ್ಯೊ ಮುರ್ರೊ ಅಂತ ಏನೇನೋ ಅಂದ್ಕೊಂಡು ಕಣ್ಣೀರುಗರೀತಿತ್ತು! ಆಮ್ಯಾಲೆ ನಮ್ಮವನೇ ಬಂದು ಅನ್ನ ಹಾಕಿದನೋ ಏನು ಕತೆಯೋ ತಿಂದು ಸುಮ್ಮನಾಯ್ತು!..." ಇತ್ಯಾದಿ.

ನಿತ್ಯವೂ ವಿದ್ಯುಲ್ಲತೆ 'ಈ ದಿನ ಯಾರೊಂದಿಗೆ ಮಾತಾಡಿದಳು, ಯಾರು ಎಷ್ಟು ಹೊತ್ತು ಅವಳ ಮನೆಯಲ್ಲಿದ್ದರು? ಏನೇನು ಮಾತಾಡಿದರು?' ಎಂಬಿತ್ಯಾದಿ ವಿವರಗಳನ್ನು ಕಲ್ಪಿತವೋ ನಿಜವೋ ತರಿಸಿಕೊಳ್ಳುತ್ತಿದ್ದಳು. ಅವನ್ನು ಇನ್ನೊಬ್ಬರಿಗೆ ಹೇಳುವಾಗ ತನ್ನ ಕಲ್ಪನೆಯನ್ನೂ ಬೆರೆಸಿ ಇನ್ನೂ ವಿರೂಪಗೊಳಿಸಿ ಹೇಳುತ್ತಿದ್ದಳು. ಅವಳ ಹತ್ತಿರದ ಎಲ್ಲ ಆಭರಣ, ಸೀರೆಗಳ ಪಟ್ಟಿ ಇಟ್ಟುಕೊಂಡು, ಅವತ್ತು ಉಟ್ಟ ಸೀರೆ, ಧರಿಸಿದ ಆಭರಣಗಳಲ್ಲಿ ಅವಳೆಷ್ಟು ಅಸಹ್ಯ ಕಾಣುವಳೆಂದು ವಿವರಿಸಿ ಆನಂದಪಡುತ್ತಿದ್ದಳು. ದುರ್ದೈವವೆಂದರೆ ಅವಳು ಹೇಳಿದ ಒಂದು ಮಾತನ್ನೂ ಯಾರೂ ನಂಬುತ್ತಿರಲಿಲ್ಲ. ಯಾಕಂತಿರೋ? ಶಿಖರಸೂರ್ಯ ಕೊಟ್ಟ ಎಲ್ಲಾ ಆಭರಣ, ಸೀರೆಗಳಿಗಿಂತ ಅವಳ ನೀಲಿಕಣ್ಣುಗಳ ಕಾಂತಿ ಮತ್ತು ಮೋಹಕತೆ ಮಿಗಿಲಾಗಿತ್ತು.

ಆದರೆ ಶಿಖರಸೂರ್ಯ ಮತ್ತು ತನ್ನ ತಾಯಿಯ ಮುಂದೆ ಮಾತ್ರ ಛಾಯಾದೇವಿ ಬಾಯಿ ಬಿಗಿ ಹಿಡಿದುಕೊಂಡಿರುತ್ತಿದ್ದಳು. ಶಿಖರಸೂರ್ಯನಿಗೆ ಹೆದರುತ್ತಿದ್ದಳು. ತಾಯಿ ಬಯ್ಯುತ್ತಿದ್ದಳು. "ನೀನು ತಿಳಿದುಕೊಂಡಂಥ ಅಗ್ಗದ ಹುಡುಗಿ ಅಲ್ಲ ಅವಳು; ಅವಳ ಪಾಡಿಗೆ ಅವಳನ್ನು ಬಿಟ್ಟು ಬಿಡು" ಎಂದಿದ್ದಳು ತಾಯಿ.

"ನನಗೆ ನನ್ನ ಗಂಡ ಬೇಕು."

ಎಂದು ಕಂಬನಿ ಮಿಡಿಯುತ್ತ ಇವಳು ಹೇಳಿದರೆ,

"ಅವನನ್ನು ಯಾರೂ ಕದ್ದಿಲ್ಲ. ಸುಮ್ಮನೇ ಗೋಳಾಡಬೇಡ"

ಎಂದು ಸಮಾಧಾನ ಮಾಡಲು ಪ್ರಯತ್ನಿಸಿದ್ದಳು. ಛಾಯಾದೇವಿ ಸಮಾಧಾನ ಹೊಂದಲಿಲ್ಲ. ನಿಟ್ಟುಸಿರಿಟ್ಟು,

"ನನಗೆ ನನ್ನ ಗಂಡ ಬೇಕು. ಆತ ನನ್ನ ಬಳಿಯಲಿಲ್ಲ ಅಂತ ನನಗೆ ಗೊತ್ತು. ಜೊತೆಯಲ್ಲಿ ಮಲಗುವುದಿಲ್ಲ. ಹತ್ತಿರ ಬಂದರೂ ಧ್ಯಾನ ಇನ್ನೆಲ್ಲೋ ಇರ್ತದೆ."

ಎಂದರೆ-

"ಅದು ನಿನ್ನ ಭ್ರಮೆ" ಎಂದಿದ್ದಳು ತಾಯಿ. "ನಿನ್ನ ಭ್ರಮೆಗಳನ್ನ ಬದಿಗಿಟ್ಟು ಅವನಿಗೊಂದಿಷ್ಟು ನೆಮ್ಮದಿ ಕೊಡು, ರಾಜಕಾರಣ ಅಂದರೆ ಸೊಪ್ಪು ಕುದಿಸಿ ಪಲ್ಯ ಮಾಡಿದಂತಲ್ಲ."

"ನೆಮ್ಮದಿ ಯಾಕೆ ಬೇಕವನಿಗೆ? ನಾನಿಲ್ಲವೆ?"

"ಅದನ್ನೇ ಹೇಳುತ್ತಿದ್ದೇನೆ, ಮುದ್ದುಮಗಳೇ,- ಅವನ ಚಿಂತೆಬಿಟ್ಟು ಮಕ್ಕಳ ಕಾಳಜಿ ಮಾಡು".

ಎಂದವಳ ಕೂದಲು ಸಿಕ್ಕು ಬಿಡಿಸುತ್ತ ಹೇಳಿದ್ದಳು ತಾಯಿ. ಆಮೇಲೆ ಮಗಳ ಅವ್ಯವಸ್ಥೆಗೊಂಡ ಆಭರಣಗಳನ್ನು, ಸೀರೆ ಸೆರಗನ್ನು ಸರಿಪಡಿಸಿ, ಕಣ್ಣೀರಿನಿಂದ ಒದ್ದೆಯಾದ ಕೆನ್ನೆಗಳನ್ನು ಒರೆಸಿ,

"ವಿದ್ಯುಲ್ಲತೆ ಒಂದು ಮೇಣದ ಗೊಂಬೆ. ನಿನ್ನಂತೆ ಹೆಣ್ಣಲ್ಲ. ನೋಡಬಹುದೇ ವಿನಾ ಹಿಡಿಯಲಿಕ್ಕಲ್ಲ."

ಎಂದೂ ಹೇಳಿದ್ದಳು. ಈ ಮಾತನ್ನು ಸಮಾಧಾನಕ್ಕಾಗಿ ಹೇಳಿದ್ದೆಂದು ತಾಯಿಯೇ ಅಂದುಕೊಂಡಿದ್ದಳು. ಛಾಯಾದೇವಿ ಮಾತ್ರ ಉರಿಯುತ್ತಲೇ ಇದ್ದಳು. ತನಗಾಗಿ ಮರುಗುವವರು ಯಾರೂ ಇಲ್ಲ, ತಂದೆತಾಯಿಗಳೂ ಮರುಗುವುದಿಲ್ಲ. ತಾನೇ ತನ್ನ ದೈವವನ್ನು

ನೇರ್ಪುಗೊಳಿಸಿಕೊಳ್ಳಬೇಕು. ಈ ಊರಿನಲ್ಲಿ ಇಲ್ಲಾ ಅವಳಿರಬೇಕು, ಇಲ್ಲಾ ನಾನಿರಬೇಕು. ವಿದ್ಯುಲ್ಲತೆಯ ಮನೆಗೆ ಹೋಗಿ ಅವಳ ಕೈಕಾಲು ಕಟ್ಟಿಕೊಂಡು ಸೆರಗೊಡ್ಡಿ ಕೇಳುವುದು. ಮನ್ನಿಸಿದರೆ ಸೈ, ಮನ್ನಿಸದಿದ್ದರೂ ಸೈ, ಎದುರಿಸುವುದು! ಎಂದು ತೀರ್ಮಾನಿಸಿದಳು.

ವಿದ್ಯುಲ್ಲತೆಗೆ ಬಾಯಿ ಇರಲಿಲ್ಲವಾದರೂ ಹೃದಯ ಇತ್ತು. ಭಾವನೆಗಳನ್ನರಿಯುವ ಅಂತಃಕರಣ ಇತ್ತು. ಇನ್ನೊಬ್ಬರಿಗೆ ನೋವಾಗದಂತೆ ಪರಿಸ್ಥಿತಿಯನ್ನು ನಿಭಾಯಿಸುವ ಜಾಣ್ಮೆ ಇತ್ತು. ಶಿಖರಸೂರ್ಯನಿಗೆ ನೆಮ್ಮದಿ ಇಲ್ಲವೆಂದು, ಅದಕ್ಕೆ ಕಾರಣ ಛಾಯಾದೇವಿಯಲ್ಲ, ಅವನ ಆಳದಲ್ಲಿರುವ ಯಾವುದೋ ಆಕಾಂಕ್ಷೆಯೆಂದು ಅವಳಿಗೆ ತಿಳಿದಿತ್ತು. ಅದೇನೆಂದು ತಿಳಿಯುವ ಮೊದಲೇ ಒಂದು ದಿನ ಒಂದು ಘಟನೆ ನಡೆಯಿತು.

ಈಗಷ್ಟೇ ಸೂರ್ಯಹುಟ್ಟಿ ಎಳೆಬಿಸಿಲನ್ನ ಆಕಳಿಸುತ್ತಿರುವಾಗ ಬಾಗಿಲು ಬಡಿದ ಸದ್ದಾಯಿತು. ವಿದ್ಯುಲ್ಲತೆಯೇ ಹೋಗಿ ಕದ ತೆರೆದು ನೋಡಿದರೆ ಬಾಗಿಲಲ್ಲಿ ಛಾಯಾದೇವಿ! ಒದ್ದೆ ಸೀರೆ ಉಟ್ಟು, ಕೆನ್ನೆಗೆ ಅರಿಷಿಣ, ಹಣೆತುಂಬ ಕುಂಕುಮ ಬಡಿದುಕೊಂಡು, ಒದ್ದೆ ಕೂದಲು ಬೆನ್ನಮೇಲೆ ಹರವಿಕೊಂಡು ಕೈಯಲ್ಲಿ ಕುಂಕುಮದ ಭರಣಿ ಹಿಡಿದುಕೊಂಡು ದೈವದ ಆವೇಶವಾದವರಂತೆ ನಿಂತಿದ್ದಾಳೆ! ಬಾಗಿಲು ಪೂರ್ತಿ ತೆರೆದದ್ದೇ ಪ್ರವಾಹದಂತೆ ಒಳನುಗ್ಗಿ, ಒದ್ದೆ ಸೀರೆ ಸೆರಗಿನಿಂದ ಹೊಸ್ತಿಲು ಒರೆಸಿ ಅರಿಷಿಣ ಕುಂಕುಮ ಹಚ್ಚಿ ಎದುರಿನ ವಿದ್ಯುಲ್ಲತೆಗೂ ಕುಂಕುಮ ಹಚ್ಚಿ, ಒಳಗೊಂದು ಹೊರಗೊಂದು ಕಾಲಿಟ್ಟುಕೊಂಡು ಹೊಸ್ತಿಲ ಮೇಲೆ ಕೂತು ಬಿಟ್ಟಳು! ಈ ಅನಿರೀಕ್ಷಿತದಿಂದ ಕಂಗಾಲಾಗಿ ವಿದ್ಯುಲ್ಲತೆ ಒಳಗೋಡಿ ತಾಯಿಯನ್ನು ಕರೆತಂದಳು. ನೋಡಿದರೆ ಈ ದೃಶ್ಯ! ಮುದುಕಿಗೆ ಮೂರ್ಛೆ ಬೀಳುವಷ್ಟು ಆಶ್ಚರ್ಯವಾಯಿತು. ಇದು ಕನಸೋ, ಎಚ್ಚರವೋ ತಿಳಿಯದೆ,

“ಏನಮ್ಮಾ ಇದು?” ಎಂದಳು.

ಛಾಯಾದೇವಿ ಹೊಸ್ತಿಲ ಮೇಲೆ ಕುಂತಿದ್ದವಳು ಎದ್ದು ಒದ್ದೆ ಸೀರೆಯ ಸೆರಗೊಡ್ಡಿ ವಿದ್ಯುಲ್ಲತೆಯ ಎದುರು ನಿಂತು,

“ಈ ಊರಲ್ಲಿ ಒಂದೋ ನಾನಿರಬೇಕು, ಇಲ್ಲಾ ನೀನಿರಬೇಕು. ನನ್ನ ಮಕ್ಕಳ ಮ್ಯಾಲೆ ಕರುಣೆ ತಗೊಂಡು ನೀನು ಜಾಗ ಖಾಲಿ ಮಾಡಿದರೆ ಸರಿ. ಇಲ್ಲಾ ನಾನೇ ನನ್ನ ತೌರಿಗೆ ಹೋಗ್ತೇನೆ; ಆಶೀರ್ವಾದ ಮಾಡು”

ಎಂದು ಹೇಳಿ ಬೆರಗಿನಲ್ಲಿ ಮೈಮರೆತು ನಿಂತಿದ್ದ ವಿದ್ಯುಲ್ಲತೆಯ ಕಾಲುಮುಟ್ಟಿ ನಾಟಕೀಯವಾಗಿ ನಮಸ್ಕರಿಸಿದಳು! ವಿದ್ಯುತ್ ಸ್ಪರ್ಶವಾದಂತೆ ವಿದ್ಯುಲ್ಲತೆ ಥಟ್ಟನೆ ಕಾಲು ಹಿಂತೆಗೆದುಕೊಂಡಳು. ಇವಳು ಹಿಂದೆ ಸರಿದರೆ ಇವಳೂ ಮುಂದೆ ಸರಿದು ಮತ್ತೆ ಕಾಲು ಗಟ್ಟಿಯಾಗಿ ಹಿಡಿದಳು! ವಿದ್ಯುಲ್ಲತೆ ಒಪ್ಪಿ ಕೈಮೇಲೆ ಕೈಯಿಟ್ಟು ಭಾಷೆ ಕೊಟ್ಟಮೇಲೆಯೇ ಛಾಯಾದೇವಿ ಕಾಲುಬಿಟ್ಟು ಎದ್ದು ಹೋದಳು. ಆ ದಿನವೇ ಅಣ್ಣ ಬದೆಗನೊಂದಿಗೆ ಚರ್ಚಿಸಿ ತಾಯಿ ಮಗಳು ಒಂದು ನಿರ್ಧಾರಕ್ಕೆ ಬಂದರು.

## ಮೂವತ್ತೈದು

ಈಗೊಂದು ವಾರದಿಂದ ಶಿಖರಸೂರ್ಯ ಸಂಜೀವಿನಿಯ ಕಡೆಗೆ ಬಂದಿರಲಿಲ್ಲ. ಬರುವ ಸೂಚನೆಗಳೂ ಕಾಣಲಿಲ್ಲ. ವೈದ್ಯಶಾಲೆಯಲ್ಲೇ ಹೆಚ್ಚಿನ ಸಮಯ ಕಳೆಯುವನೆಂದು ಅಣ್ಣ ಬದೆಗನಿಂದ ತಿಳಿದಿದ್ದ ವಿದ್ಯುಲ್ಲತೆ ಅಲ್ಲಿಗೇ ಹೋಗಿ ನೋಡಿ ಬರಲು ತೀರ್ಮಾನಿಸಿದಳು. ಅಲ್ಲದೆ ಅನತಿದೂರದ ಮನೆಯಲ್ಲಿ ವಾಸವಾಗಿರುತ್ತಿದ್ದ ಛಾಯಾದೇವಿಯೂ ತೌರುಮನೆಗೆ ಹೋಗಿರುವ ಸುದ್ದಿ ತಿಳಿಯಿತು. ಇದೇ ಅನುಕೂಲಕರ ಸಂದರ್ಭವೆಂದು ವೈದ್ಯಶಾಲೆಗೆ ಹೋದಳು. ಶಿಖರಸೂರ್ಯ ಇರಲಿಲ್ಲ. ಇನ್ನೇನು ಬರುವ ಸಮಯವೆಂದು ಸೇವಕನಿಂದ ತಿಳಿದು ಮಹಡಿಯ ಕೋಣೆಗೆ ಹೋಗಿ ಕಾಯುತ್ತ ಕೂತಳು.

ಕೋಣೆ ನಿರಾಡಂಬರವಾಗಿತ್ತು. ಗೋಡೆಗೆರಡು ದೊಡ್ಡ ಕಿಡಕಿಗಳು, ಅಲಂಕರಿಸಿದ ಕಿತ್ತಳೆ ಬಣ್ಣದ ಪರದೆಗಳು, ಎರಡು ಕಿಡಿಕಿಗಳ ಮಧ್ಯೆ ನೇತಾಡುವ ತನ್ನ ಬುಡಕಟ್ಟು ಮರದ ದೇವರು, ಕೆಳಗೆ ಕಲಾವಂತಿಕೆಯಿಂದ ಮಾಡಿದ ಮರದ ಪೀಠಗಳು, ಒಂದು ಕಡೆ ಮಂಚ, ಮಂದದ ಮೇಲೆ ಚಿತ್ರವಿರುವ ಬಟ್ಟೆಯನ್ನು ಹಾಸಲಾಗಿತ್ತು. ಅದರ ಪಕ್ಕದ ಗೋಡೆಯ ಮೇಲೆ ಓರಣವಾಗಿ ನಿಲುವುಗನ್ನಡಿಯನ್ನ ತೂಗು ಹಾಕಿತ್ತು. ಕನ್ನಡಿಯಲ್ಲಿ ತನ್ನ ತೇಜೋಹೀನವಾದ ಬಿಳಿಚಿಕೊಂಡ ಮುಖ ಮೂಡಿತ್ತು. ಮೊದಲೇ ವಿಷಣ್ಣವಾಗಿದ್ದ ಕಣ್ಣುಗಳಲ್ಲೀಗ ಹತಾಶೆ ವ್ಯಕ್ತವಾಗುತ್ತಿತ್ತು. ಅದರ ಇನ್ನೊಂದು ಬದಿಗೆ ಎರಡು ಹಿತ್ತಾಳೆಯ ಸಮೆಗಳು, ಅವುಗಳ ನಡುವೆ ಎರಡು ತಾಡೋಲೆ ಗ್ರಂಥಗಳು, ಪಡುವಣದ ಎರಡೂ ಕಿಡಿಕಿಗಳಿಂದ ಸೂರ್ಯನ ಕೋಲುಬಿಸಿಲು ತೂರಿ ಬಂದು ನೆಲದ ಮೇಲೆ ಚೆನ್ನದ ಚಿತ್ತಾರ ಬಿಡಿಸಿತ್ತು.

ನೋಡುತ್ತ ಹೋದ ಹಾಗೆ ಮೈಯಲ್ಲಿ ಹುಷಾರಿಲ್ಲವೆನ್ನಿಸಿತು. ಹೃದಯ ಬಲವಾಗಿ ಬಡಿದುಕೊಳ್ಳತೊಡಗಿತು. ತಲೆ ಸುತ್ತಿರುಗಿ ಸಮೀಪದ ಪೀಠದಲ್ಲಿ ಒಂದು ನಿಮಿಷ ಒರಗಿ ಕೂತಳು. ಆಮೇಲೆ ವಿಶಾಲವಾಗಿ ಕಣ್ಣಗಲಿಸಿ ಏನಾಗುತ್ತಿದೆ ಎಂದು ತಂತಾನೇ ನೋಡಿಕೊಳ್ಳುತ್ತಿರುವಂತೆ ಉಸಿರುಗಟ್ಟಿ ನೆತ್ತಿಗೇರಿದಂತಾಗಿ ಕೂತಲ್ಲಿಂದ ಬೀಳುತ್ತಿರುವೆನೆ? ಅನ್ನಿಸಿತು. ಗಟ್ಟಿಯಾಗಿ ಪೀಠವನ್ನ ಹಿಡಿದುಕೊಂಡಳು. ತುರುಬು ಸಡಿಲಗೊಂಡು ಮೃದುವಾದ ಕೂದಲು ಭುಜದಗುಂಟ ಇಳಿಯಿತು. ತೇಲುಗಣ್ಣಾಗಿ ಪ್ರವಾಹದಲ್ಲಿ ಈಜುತ್ತಿರುವಂತೆ, ಕಷ್ಟಪಟ್ಟು ದಂಡೆಗೆ ಬರುತ್ತಿರುವಂತೆ ಅನ್ನಿಸಿತು. ರಾಜವೈದ್ಯನಿಗೆ ಹೆದರಿದ್ದೇನೆಯೆ? ಅವನ ಕೋಪ ಭಯಾನಕವೆಂಬುದು ನಿಜ. ಕಿವಿಯ ಕೂದಲು ನಿಮಿರಿ ಕಣ್ಣು ಕೆಂಜಗಾದಾಗ, ನರ ಬಿಗಿದು ಎದುರಿಗೆ ಏನು ಸಿಕ್ಕರದನ್ನೇ ಕೊಂದುಹಾಕುವ ಮೃಗೀಯ ಶಕ್ತಿ ಅವನ ಹಸ್ತಕ್ಕೆ ನುಗ್ಗತೊಡಗುತ್ತದೆ. ಹೀಗೊಮ್ಮೆ ಪ್ರಕಟವಾದ ಶಕ್ತಿ ಏನನ್ನಾದರೂ ನಾಶಮಾಡಿದಲ್ಲದೆ ಶಾಂತವಾಗುವುದೇ ಇಲ್ಲವೆಂದು ಅವಳಿಗೆ ಗೊತ್ತು. ಆಯ್ತು, ಜೀವನಾಶವಾದರೆ ಅದಕ್ಕಿಂತ ಹೆಚ್ಚಿನ ನೆಮ್ಮದಿ ಯಾವುದರಲ್ಲಿದೆ? ಎಂದು ಬಂದಿದ್ದನ್ನು ಎದುರಿಸಲು ಸಿದ್ಧಳಾದಳು.

ಆದರೆ ಹಾಗೆ ಮಾಡಿದ ಮೇಲೆ ಅವನಾದರೂ ಕೋಪವನ್ನಾದರೂ ನೋಡಬಹುದು. ಆದರೆ ಸ್ವಹಿಂಸೆ ಮಾಡಿಕೊಂಬ ಪಶ್ಚಾತ್ತಾಪದ ಪರಿತಾಪವನ್ನ ನೋಡಲಿಕ್ಕಾಗುವುದಿಲ್ಲ. ಪಶ್ಚಾತ್ತಾಪದ ತುದಿಗೆ ತಪ್ಪದೆ ತನ್ನಲ್ಲಿಗೇ ಬಂದು ಬಾಗಿಲು ತಟ್ಟುತ್ತಿದ್ದ. ಮಡಿಲಲ್ಲಿ ಮಲಗಿ ಸಮಾಧಾನಗೊಳ್ಳುತ್ತಿದ್ದ. ಆಗ ಇಬ್ಬರಲ್ಲೂ ಹೊಸಶಕ್ತಿ ಸಂಚಾರವಾಗುತ್ತಿತ್ತು. ಅವನಿಲ್ಲದೆ ನಾನಾದರೂ ಬದುಕಲುಂಟೆ? ನನಗಾಗಿ ತಾನೂ ವಿಷ ತಗೊಂಡು ತನಗೆ ತಾನೇ ಹೆಂಡತಿ ಮಕ್ಕಳಿಂದ ಅಸ್ಪೃಶ್ಯನಾದ!

ಅಷ್ಟರಲ್ಲಿ ಮೆಟ್ಟಿಲೇರಿ ಶಿಖರಸೂರ್ಯ ಬಂದ. ಅವಳನ್ನು ನೋಡಿದ್ದೇ ಅವನ ಕಣ್ಣು ಉಜ್ವಲವಾಗಿ ಹೊಳೆದವು. ಮುಖ ನಿಗಿ ನಿಗಿ ಪ್ರಕಾಶಮಾನವಾಗಿ ಆನಂದವನ್ನು ತುಳುಕಿಸಿತು. ಇವಳೂ ಅವನನ್ನು ನೋಡಿದ್ದೇ ತಡ ಕ್ಷಣಕಾಲ ಎಲ್ಲವನ್ನು ಮರೆತು ಅರಳಿ ಹೂವಾದಳು. ವಿಶ್ವಾಸದ ಮಂದಹಾಸ ಬೀರುತ್ತ ಎರಡೂ ತೋಳು ತೆರೆದು ಶಿಖರಸೂರ್ಯನಲ್ಲಿಗೆ ಧಾವಿಸಿ ಅವನ ತೆಕ್ಕೆಗೆ ಸೇರಿ ನೆಮ್ಮದಿಯಿಂದ ಅವನೆದೆಗೆ ಒರಗಿದಳು. ಅವನು ಹಾಗೇ ಅವಳನ್ನೆತ್ತಿಕೊಂಡು ತೊಡೆಯ ಮ್ಯಾಲಿಟ್ಟುಕೊಂಡೇ ಪೀಠದ ಮ್ಯಾಲೆ ಕುಂತು,

“ಹೇಳು ದೇವಿ, ಕರೆಕಳಿಸಿದ್ದರೆ ನಾನೇ ಬರುತ್ತಿದ್ದೆ. ನೀನಾಗಿ ಯಾಕೆ ಬಂದೆ?”

ಎಂದು ಕೆನ್ನೆಗೊಂದು ಮುದ್ದಿಟ್ಟು ಲಲ್ಲೆಗೆರೆಯುತ್ತ ಕೇಳಿದ. ನೇರ ಹೇಳುವುದಕ್ಕೆ ಭಯ. ‘ಇದ್ಯಾವ ಗ್ರಂಥ’ವೆಂದು ಕೈ ಮಾಡಿ ತೋರಿಸಿ ಕೇಳಿದಳು.

“ಇದು ಮನುಧರ್ಮಸಾರ. ಜನಕ್ಕೆ ಮೋಸ ಮಾಡುವುದಕ್ಕೆ ಎಲ್ಲೆಲ್ಲಿ ಅವಕಾಶಗಳಿವೆ ಅಂತ ನೋಡಬೇಕು. ಯಾಕಂತಿಯೋ? ಶಾಸ್ತ್ರೀಯವಾಗಿ ಮೋಸ ಮಾಡೋಣ ಅಂತ.”

“ಛೆ ಮೋಸಗಾರ ಅಂತ ತೋರಿಸಿಕೊಳ್ಳೋದಕ್ಕೆ ಅಷ್ಟೊಂದು ಇಷ್ಟಾನಾ ನಿಮಗೆ?” ಎಂಬಂತೆ ಎದೆಗೆ ಪುಟ್ಟದೊಂದು ಏಟು ಕೊಟ್ಟು ಸಿಟ್ಟು ಮಾಡಿದಳು.

“ನೀನೊಬ್ಬಳಾದರೂ ನನ್ನ ಬಗ್ಗೆ ಒಳ್ಳೆ ಅಭಿಪ್ರಾಯ ಹೊಂದಿದ್ದೀಯಲ್ಲ! ಸಾಕು. ಈಗ ಹೇಳು, ಯಾಕೆ ಬಂದೆ?”

ಇನ್ನು ಮುಂದಿನ ಅವರ ಸಂಭಾಷಣೆಯನ್ನು ಬರಹರೂಪದಲ್ಲಿ ಕೊಡುತ್ತೇವೆ. ಯಾಕಂತೀರೋ? ಇವನು ಭಾಷೆಯಲ್ಲಿ ಮಾತಾಡುವುದು, ಅವಳು ಮೃಗಗಳಂಥಹ ಹಾ ಹೂ ಸ್ವರ ಮಾಡಿ ಸನ್ನೆ ಭಾಷೆಯಲ್ಲಿ ಉತ್ತರಿಸುವುದು... ಇತ್ಯಾದಿ ಅವನಿಗೆ ಅರ್ಥವಾಗಬಹುದಾದರೂ ವಾಚಕರ ಅನುಕೂಲಕ್ಕಾಗಿ ಅವನು ಅರ್ಥೈಸಿಕೊಂಡಂತೆ ಸನ್ನೆ ಭಾಷೆಯನ್ನು ಕತೆಯ ಭಾಷೆಗೆ ಅನುವಾದಿಸಿ ಕೊಡುತ್ತೇವೆ.

ಆಮೇಲೆ ವಿದ್ಯುಲ್ಲತೆ ಅವನ ತೊಡೆಯ ಮ್ಯಾಲಿಂದ ಕೆಳಗಿಳಿದು ಹಿಂದೆ ಬಂದು ಎರಡೂ ಕೈಗಳಿಂದವನ ಕತ್ತು ಬಳಸಿ ಕೆನ್ನೆಗೆ ಕೆನ್ನೆ ತಾಗಿಸಿ ಕೇಳಿದಳು:

“ನೀವು ನನ್ನನ್ನು ನಿಜವಾಗಿ ಪ್ರೀತಿಸ್ತೀರಾ?”

“ನೂರನೇ ಸಲ ಹೇಳುತ್ತೇನೆ ಕೇಳು: ನಾನು ನಿನ್ನನ್ನು ಹೃತ್ಪೂರ್ವಕವಾಗಿ, ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಪ್ರೀತಿಸುತ್ತೇನೆ. ನಿನ್ನಷ್ಟು ಪ್ರೀತಿಯನ್ನು ನಾನು ಯಾರಿಗೂ ಕೊಟ್ಟಿಲ್ಲ. ಇದಕ್ಕೆ ನೀನೇ ಸಾಕ್ಷಿ! ಸಾಕೋ?”

ಎಂದು ಹೇಳಿ ತೋಳು ಹಿಡಿದೆಳೆದು ಅವಳನ್ನು ತನ್ನ ಬೆನ್ನು ಮತ್ತು ಕೆನ್ನೆಗೆ ಅಂಟಿಸಿಕೊಳ್ಳುತ್ತಿದ್ದಾಗ!,-

“ನಾನು ನಿಮ್ಮಿಂದ ದೂರ ಇದ್ದರೂ ಪ್ರೀತಿಸ್ತೀರಾ?”

-ಎಂದಳು. ಶಿಖರಸೂರ್ಯ ತಕ್ಷಣ ಗಂಭೀರವಾಗಿ, ತನ್ನ ಕಣ್ಣಿಂದ ತಪ್ಪಿಸಿಕೊಳ್ಳಬೇಕೆಂದ ಅವಳನ್ನು ಎಳೆದು ಎದುರು ನಿಲ್ಲಿಸಿಕೊಂಡು ನೋಡಿದ. ದೃಷ್ಟಿ ಭಯಾನಕವಾಗಿತ್ತು. ಅವನ ಕಣ್ಣುಗಳನ್ನ ಕಂಡು ಆಗಲೇ ಅವಳ ನೋಟ ಮತ್ತು ನಗೆಗಳಲ್ಲಿಯ ಆಟಗುಳಿತನ ಹೋಗಿ ಪುಕ್ಕಲು ತುಂಬಿತು. ಮಂಕಾಗಿ ನಿಂತಳು. ಅವನ ಉಸಿರಾಟದ ಮದ್ದಿನ ವಾಸನೆ ಮಾತ್ರ ತಪ್ಪದೆ ಅರಿವಿಗೆ ಬಂತು ಹೇಳಿದ:

“ನೀನೆಲ್ಲಿದ್ದರೂ ಪ್ರೀತಿಸ್ತೇನೆ; ಆಯ್ತು? ಈಗ ಹೇಳು, ನೀನ್ಯಾಕೆ ನನ್ನಿಂದ ಅಗಲಬೇಕಂತಿ?”

-ಎಂದು ಗಟ್ಟಿಯಾಗಿ ಹಿಡಿದುಕೊಂಡ. ಅವನ ಬಿಗಿ ಹಿಡಿತಕ್ಕೆ, ದನಿಯ ಬಿರುಸಿಗೆ ಗಾಬರಿಯಾಗಿ ಅವನ ಮುಖ ನೋಡುತ್ತಿರುವಂತೆ ಮುತ್ತಿನ ಕಣ್ಣೀರುಕ್ಕಿ ಬಂತು. ನರಳುವ ಪ್ರಾಣಿಯಂತೆ ದನಿಮಾಡುತ್ತ ಕೈ ಸನ್ನೆಯಲ್ಲಿ ಹೇಳಿದಳು:

“ಬೆಟ್ಟದಯ್ಯನಾಣೆ. ಇಷ್ಟು ದಿನ ಹೇಳಬಾರದು ಅಂತಲೇ ಇದ್ದೆ. ಆದರೀಗ ಹೇಳದಿರಲಿಕ್ಕೆ ಸಾಧ್ಯವಾಗುತ್ತಿಲ್ಲ. ದಯಮಾಡಿ ನನ್ನನ್ನ ಹದ್ದಿನ ಕೊಳ್ಳಕ್ಕೆ ಕಳಿಸಿಬಿಡಿರಿ. ನನ್ನನ್ನ ಹಾಗೆ ನೋಡಬ್ಯಾಡ್ರಿ. ನನ್ನ ಪಾಡಿಗೆ ನಾನು ಅಲ್ಲಿ ಸುಖವಾಗಿರ್ತೀನಿ. ಎಲ್ಲಿಯೂ ಹೋಗೋದಿಲ್ಲ.”

ಎನ್ನುತ್ತ ಮಕ್ಕಳ ಹಾಗೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಶಿಖರಸೂರ್ಯನ ಕಿವಿಯ ಕೂದಲು ನಿಮಿರಿದವು. ಆ ಕೂದಲು, ಆ ಕಣ್ಣುಗಳ ಕ್ರೂರವಾದ ನೋಟ, ಇವುಗಳನ್ನು ಎದುರಿಸಲಿಕ್ಕೆ ಇದ್ದಬಿದ್ದ ಧೈರ್ಯವನ್ನುಒಟ್ಟುಗೂಡಿಸಿಕೊಂಡು ದೂರ ಸರಿದಳು.

“ಯಾರಿಗೆ ಹೆದರಿ ನೀನು ಊರು ಬಿಟ್ಟು ಹೋಗುತ್ತಿರುವಿ ಅಂತ ನನಗ್ಗೊತ್ತು ಕಣೇ.”

“ಬೆಟ್ಟದಯ್ಯನ ಆಣೆ, ಯಾರಿಗೂ ಹೆದರಿಲ್ಲಾರೀ.”

“ನಾನು ಹೇಳಲ? ನನ್ನ ಮಡದಿ ಛಾಯಾದೇವಿಗೆ!”

ಇದನ್ನು ಕೇಳಿದ್ದೇ ವಿದ್ಯುಲ್ಲತೆ ಜಲಜಲ ಕಣ್ಣೀರು ಸುರಿಸುತ್ತ ಛಾಯಾದೇವಿ ನಿಜವಾಗ್ಲೂ ನನಗೆ ಹೇಳಿಲ್ಲ” ಎಂದು ಬಿಕ್ಕುತ್ತ ಕಣ್ಣೀರೊರೆಸಿಕೊಂಡಳು. ಶಿಖರಸೂರ್ಯ ಗೆದ್ದವನಂತೆ ಹುಮ್ಮಸುಗೊಂಡು ಹೇಳಿದ-

“ವಿಷಕನ್ಯೆ ನೀನು. ವಿಷ ತೆಗೆಯೋದಕ್ಕೆ ಒದ್ದಾಡ್ತ ಇದ್ದೀನಿ. ಖುದ್ದಾಗಿ ಕಾಡುಸುತ್ತಿ ನಾರು ಬೇರು ತರ್ತಾ ಇದ್ದೀನಿ. ಇದೆಲ್ಲಾ ನಿನಗೆ ಕಾಣಲಿಲ್ಲವಲ್ಲೆ! ‘ಆ ರಾಜಕುಮಾರಿಗೆ ಅನ್ಯಾಯ ಮಾಡಿದವಳು. ಮಕ್ಕಳ ತಂದೆಯನ್ನ, ತಾಯಿಯ ಗಂಡನನ್ನ ಕಸಿದುಕೊಂಡವಳು... ಅಯ್ಯೋ ಪಾಪವೆ! ಅಯ್ಯಯ್ಯೋ ಅನ್ಯಾಯವೇ!’ ಇದಕ್ಕೇ ಅಲ್ಲವೇನೆ ನೀನು ಹೆದರಿದ್ದು? ಕೇಳೆ ಹುಚ್ಚೆ, ಇದೇ ಜಗತ್ತು ನಿನ್ನನ್ನು ವಿಷಕನ್ಯೆ ಮಾಡಿತು. ನೀವೇನು ಮಾಡಿದಿರಿ?

“ಬೆಟ್ಟದಯ್ಯ ಮಾಡಿದರೆ ಯಾರೇನು ಮಾಡಲಾದೀತು ಅಂತ ಸುಮ್ಮನಾದಿರಿ. ನಿನ್ನ ದೇವರು ಮತ್ತು ಸಮಾಜ ಮಾಡಿದ ತಪ್ಪನ್ನ ಸರಿಪಡಿಸ್ತೇನೆ ಅಂತ ನಾನು ಬಂದೆ. ನಿನಗಿಟ್ಟ ವಿಷಕ್ಕೆ ಎರಡು ನಾಲಗೆಗಳಿದ್ದವು: ಒಂದು ನಿನ್ನನ್ನ ವಿಷಕನ್ಯೆ ಅಂತಿತ್ತು. ಇನ್ನೊಂದು ಸೂಳೆ ಅಂತಿತ್ತು.

“ಅಷ್ಟೇ ಅಲ್ಲ, ಒಂದು ದಿನ ನಿನ್ನನ್ನ ಕೊಲ್ಲುತ್ತಿದ್ದರು, ನಿನ್ನ ಅಕ್ಕನನ್ನ ಕೊಂದ ಹಾಗೆ! ಮುಂದೆ ಬಂದು ‘ನಾನು ಇವಳ ಯಜಮಾನ! ಅಂತ ನಿಂತೆ. ಸುಮ್ಮನಾದರು. ಖುದ್ದಾಗಿ ಮೈ ವಿಷ ಮಾಡಿಕೊಂಡು ನಿನಗೆ ಸುಖ ಕೊಟ್ಟೆ. ಸಾಲದೇನೆ ನಿನಗೆ? ನನಗೆ ದ್ರೋಹ ಮಾಡಿ ನನ್ನಿಂದ ದೂರ ಹೊಂಟಿದೀಯ?”

ಬಿದ್ದು ಉರುಳಾಡುವಂತೆ ಕೆನ್ನೆಗೆರಡೇಟು ಬಿಗಿಯಬೇಕೆಂದುಕೊಂಡ. ನನ್ನ ಮಡದಿಯ ಮುಂಗೈ ಹಿಡಿದು ಮಣಿಸಿದವಳು ಇವಳೇನಾ? ಮಡದಿಯ ಭಯದಲ್ಲಿ ವಿದ್ಯುಲ್ಲತೆ ಕುರೂಪಿಯಾಗಿ ಕಂಡಳು. ಇವಳಿಗೆ ಸಂಬಂಧಪಟ್ಟುದೆಲ್ಲ ಇವಳ ಮೈ, ಮುಖ, ಕೂದಲು, ಅಂಗಾಂಗಗಳು, ಇವಳುಟ್ಟ ಬಟ್ಟೆ ಎಲ್ಲ ಎಲ್ಲವೂ ಅಸಾಧಾರಣ, ಅಪ್ರತಿಮ ಅಪ್ಸರೆಗೆ ಸಮ ಎಂದುಕೊಂಡಿದ್ದ ವಿದ್ಯುಲ್ಲತೆ ಈ ದಿನ ಹೇಸಿಕೆ ಬರುವಷ್ಟು ವಿಕಾರವಾಗಿ ಕಂಡಳು. ಸೊತ ದನಿಯಲ್ಲಿ ಹೇಳಿದಳು.

“ಹದ್ದಿನ ಕೊಳ್ಳವೇನು ದೂರದ ನಾಡಲ್ಲ. ನಾನಲ್ಲಿ ಸುಖವಾಗಿರ್ತೀನಿ. ಬಿಡುವು ಮಾಡಿಕೊಂಡು ಬಂದರೆ ನಿಮಗೂ ವಿಶ್ರಾಂತಿ ಸಿಗುತ್ತದೆ. ನಮಗೆ ಹೆಚ್ಚಿನ ಅನುಕೂಲವೇನೂ ಬೇಡ. ವಾಸಿಸಲು ನಿಮ್ಮ ಅರಮನೆಯ ಹಿಂದಿನ ಒಂದು ಗೂಡಾದರೆ ಸಾಕು.”

“ನನಗೆ ವಂಚನೆ ಮಾಡಿ ಹೋಗ್ತಿಯೇನೆ?”

ಅವಳು ತನ್ನ ಹಿಂದಿನ ಮಾತನ್ನೇ ಮುಂದುವರಿಸಿದಳು.

“ನನ್ನ ಕಾಳಜಿಯಲ್ಲಿ ನೀವು ನಿಮ್ಮ ಸುಖವನ್ನು ಕೂಡ ನೋಡಿಕೊಳ್ಳಲಿಲ್ಲ. ಪ್ರೀತಿಯಲ್ಲಿ ಕಾಲ ಕಳೆದದ್ದು ಇಬ್ಬರಿಗೂ ಗೊತ್ತಾಗಲಿಲ್ಲ. ವಿಷಕನ್ಯೆಯಾದರೂ ಮೈ ಮರೆಯುವಷ್ಟು ಸುಖ ಕೊಟ್ಟಿರಿ. ಈ ತನಕ ನಿಮ್ಮ ದೇಹವನ್ನು ಮಾತ್ರ ಪ್ರೀತಿಸುತ್ತಿದ್ದೆ. ಈಗ ಇಡಿಯಾಗಿ ನಿಮ್ಮ ಆತ್ಮವನ್ನೂ ಪ್ರೀತಿಸುತ್ತೇನೆ. ಹೆಚ್ಚು ಹೆಚ್ಚು ಪ್ರೀತಿಸುತ್ತೇನೆ. ಈ ಜಗತ್ತಿನಲ್ಲಿ ನನಗೆ ನಿಮಗಿಂತ ಹತ್ತಿರದವರು ಯಾರಿದ್ದಾರೆ? ನಿಮಗಿಂತ ಪ್ರಿಯರಾದವರು ಯಾರೂ ಇಲ್ಲ. ಬರಲೆ?”

ಎಂದು ಹೇಳಿ ಕಿಡಿಕಿಯ ಎಳೆಬಿಸಿಲು ಬಿಂಬಿಸಿ ಸೊಡರಿನಂತೆ ಹೊಳೆಯುತ್ತಿದ್ದ ಕಂಗಳಿಂದ ಅವನನ್ನೇ ನೋಡಿ, ಬಾಗಿ ಕಾಲುಮುಟ್ಟಿ ನಮಸ್ಕರಿಸಿ, "ನನ್ನನ್ನು ಆಶೀರ್ವದಿಸಿರಿ" ಎಂದಳು.

ಶಿಖರಸೂರ್ಯ ಅವಳನ್ನು ಎತ್ತಲೂ ಇಲ್ಲ, ಆಶೀರ್ವದಿಸಲೂ ಇಲ್ಲ. ಅವಳೇ ಬಿಕ್ಕಿಬಿಕ್ಕಿ ಅಳುತ್ತ ಓಡಿಹೋದಳು.

ಮಾರನೇ ದಿನವೇ ಬದೆಗನೇ ಖುದ್ದಾಗಿ ತನ್ನ ತಾಯಿತಂಗಿಯರನ್ನ ಕರೆದೊಯ್ದು ಹದ್ದಿನಕೊಳ್ಳದ ಅರಮನೆಯಲ್ಲಿ ಬಿಟ್ಟು ಬರುವಂತೆ ಶಿಖರಸೂರ್ಯ ವ್ಯವಸ್ಥೆ ಮಾಡಿದ.

## ಮೂವತ್ತಾರು

ಶಿಖರಸೂರ್ಯ ಕನಕಪುರಿಗೆ ಬಂದು ನರಳುತ್ತ ಬಿದ್ದಿದ್ದ ಮಹಾರಾಜನನ್ನು ಒಂದೇ ವಾರದಲ್ಲಿ ಗುಣಪಡಿಸಿ, ಆತ ಯಾರ ನೆರವಿಲ್ಲದೆ ಅರಮನೆ ಮತ್ತು ಉದ್ಯಾನಗಳಲ್ಲಿ ಅಲೆದಾಡುವಂತೆ ಮಾಡಿದ್ದು ಸರಿಯಷ್ಟೆ.

ರೋಗ ಮಗ್ಗಲು ಬದಲಿಸುತ್ತಿದ್ದಂತೆ ಮಹಾರಾಜನಿಗೆ ಬುದ್ಧಿ ಮರುಕಳಿಸಿ ಮರುಜನ್ಮ ಸಿಕ್ಕಂತಾಯ್ತು. ಈ ಹೊಸ ಜನ್ಮದಲ್ಲಿ ಅವನಿಗೆ ಮೂರು ಭಯಾನಕ ಸತ್ಯಗಳ ದರ್ಶನವಾಯಿತು. ಯಾರೋ ವಿಷವೂಡಿ ತನ್ನ ದೀರ್ಘಕಾಲದ ರೋಗಕ್ಕೆ ಕಾರಣರಾದರೆಂಬುದು, ನವೆದು ನವೆದು ಇನ್ನೇನು ಸಾಯಲಿದ್ದಾಗ ಶಿಖರಸೂರ್ಯ ಬಂದು ಉಳಿಸಿದನೆಂಬುದು ಒಂದನೇ ಸತ್ಯ. ಇದಕ್ಕೆ ಯುವರಾಜನ ಮಹತ್ವಾಕಾಂಕ್ಷೆಯೇ ಕಾರಣವೆಂದು, ಅವನಿಗೆ ಪ್ರಧಾನಿ ಮತ್ತು ಮಹಾರಾಣಿಯ ಬೆಂಬಲವಿದೆಯೆಂದೂ ತಿಳಿದು ಬಂದದ್ದು ಎರಡನೆಯ ಸತ್ಯ. ಯುವರಾಜ ಇದನ್ನು ಬಚ್ಚಿಟ್ಟುಕೊಳ್ಳಲೂ ಇಲ್ಲ. ಒಂದೆರಡು ಸಲ ಮಹಾರಾಣಿಯೊಂದಿಗೆ ಪಿಸುದನಿಯಲ್ಲಿ ಮಾತಾಡುತ್ತ, ಆದರೆ ಮಹಾರಾಜನಿಗೆ ಕೇಳಿಸುವಂತೆ 'ರೋಗಗಳು ಮನುಷ್ಯನ ಸಾವಿನಾಸೆಯ ಪ್ರಕಟಣೆಗಳು' ಎಂದು ಹೇಳಿದ್ದ! ಮೂರನೇ ಸತ್ಯವೆಂದರೆ ಸದರಿ ರೋಗದ ಅವಧಿಯಲ್ಲಿ ಸ್ವಂತ ಅರಮನೆಯ ಮೇಲಿನ ಅಧಿಕಾರ ಕಳೆದುಕೊಂಡಿದ್ದ ಮತ್ತು ಬಳಗದಲ್ಲಿದ್ದೂ ಒಂಟಿಯಾಗಿದ್ದ!

ಕೊನೆಯ ಸತ್ಯವನ್ನು ಮೊದಮೊದಲು ಅವನೇ ನಂಬಲಿಲ್ಲ. 'ಈಗಲೂ ನಾನು ಮಹಾರಾಜನೇ! ಈ ಅರಮನೆಯ ಯಜಮಾನ ನಾನೇ!" ಎಂದು ಸೇವಕರ ಮುಂದೆ ಅನೇಕ ಬಾರಿ ಹೇಳಿಕೊಂಡ. ಬಿಳಿಗಿರಿರಾಯ ಸೋತಾಗ ಇವನಿಗೆ ಕೊಟ್ಟ 'ವಿಜಯದ ಕಡಗ'ವನ್ನು ಪೆಟ್ಟಿಗೆಯಿಂದ ತೆಗೆಸಿ, ಬಲಗೈಗೆ ಧರಿಸಿಕೊಂಡು ಅಲುಗಲುಗಿ, ಸಪ್ಪಳ ಮಾಡಿ ಮಾಡಿ 'ಕೇಳಿಸಿತ?' ಎಂಬಂತೆ ಸೇವಕರ ಕಡೆಗೆ ವಿಜಯ ನಗೆ ಬೀರಿದ. ರೋಗಾವಸ್ಥೆಯಲ್ಲಿ ಮಹಾರಾಜ ಯಾವುದೇ ರಾಜಸಭೆಗೆ ಬರಲಾರನೆಂದೋ ಅಥವಾ ಬರಬಾರದೆಂದೋ ಅರ್ಥಕೌಶಲ ರಾಜಕುಮಾರನನ್ನು ಯುವರಾಜನೆಂದು ತಾನೇ ಹೆಸರಿಸಿ ಅವನ ನೇತೃತ್ವದಲ್ಲಿ ರಾಜಸಭೆಗಳನ್ನ ನಡೆಸುತ್ತಿದ್ದ. ಮೊದಮೊದಲು ವರ್ತಕರು ಒಪ್ಪಲಿಲ್ಲವಾದರೂ ಆಮೇಲೆ ಅನಿವಾರ್ಯವೆಂದು ಒಪ್ಪಿಕೊಳ್ಳಬೇಕಾಯಿತು. ಒಂದೆರಡು ಬಾರಿ ರಾಜಸಭೆಗಳಿಗೆ ಕರೆಯದಿದ್ದರೂ ಸಡಗರದಿಂದ ಮಹಾರಾಜ ಪ್ರವೇಶ ಮಾಡಿದ. ಯುವರಾಜನ ಕಣ್ಣು ಕೆಂಪಾದವು. ದಂಡನಾಯಕ, ಮಂತ್ರಿ ಮಾನ್ಯರು ಮತ್ತು ವರ್ತಕ ಸಮಾಜದ ಗಣ್ಯರು-ಎಲ್ಲರೂ ಎದ್ದುನಿಂತು ಬಾಗಿ ಗೌರವ ಕೊಟ್ಟರು. ಅವರಾಡುವ ಮಾತುಗಳನ್ನು ಬಾಯಿ ಮುಚ್ಚಿಕೊಂಡು ಕೇಳಿಸಿಕೊಂಡ. ಅವರ ಮಾತುಗಳಲ್ಲಿ ಸಮಸ್ಯೆಗಳು ತಲೆದೋರಿದಾಗ ಅದರ ಎಲ್ಲಾ ಜವಾಬ್ದಾರಿ ತನ್ನದೇ ಎಂಬಂತೆ ಹುಬ್ಬು ಗಂಟು ಹಾಕಿ ಚಿಂತೆ ಮಾಡಿದ. 'ಬಿಳಿಗಿರಿರಾಯ ಅವಿಧೇಯತೆಯಿಂದ ನಡೆದುಕೊಳ್ಳುತ್ತಿದ್ದಾನೆ' ಎಂದು ಅವರು ಹೇಳಿದರೆ ವಿಜಯದ ಕಡಗವನ್ನು ಮುಂಗೈಯಲ್ಲಿ ತಿರುಗಿಸುತ್ತ 'ಅವನಿಗೆ ಈ ಕಡಗದ ನೆನಪು ಮಾಡಿಕೊಡಿರಿ' ಎಂದು ಮುದಿನಾಯಿಯಂತೆ ಗುರುಗುಟ್ಟಿ ಒಬ್ಬನೇ ಗಹಗಹಿಸಿ ನಕ್ಕು ಹೊರಟು ನಿಂತಾಗ ಎಲ್ಲರೂ ಎದ್ದು ನಿಂತು ಗೌರ ಕೊಟ್ಟರಾದರೂ, ಇದೆಲ್ಲ ಸುಳ್ಳು ಅಭಿನಯವೇ ಶಿವಾಯಿ, ನಾನಿಲ್ಲದಾಗ ಬಯ್ಯುತ್ತಾರೆಂದು ಅಂದುಕೊಂಡು ಖೇದದಿಂದ ಹೋದ.

ಮಹಾರಾಣಿ ಇವನ ಕಡೆಗೆ ನೋಡುತ್ತಿರಲಿಲ್ಲ. ಆಕಸ್ಮಾತ್ ನೋಡಿದರೂ ತಿರಸ್ಕಾರದಿಂದ 'ಇನ್ನೂ ಬದುಕಿದ್ದೀಯಾ ಮುದಿಯಾ?' ಎಂಬಂತೆ ನೋಡುತ್ತಿದ್ದಳು. ಚಿಕ್ಕಮ್ಮಣ್ಣಿ ಆಗಾಗ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದಳು, ಮಹಾರಾಜನ ಸೇವೆ ಮಾಡಲು ಹಾರೈಸುತ್ತಿದ್ದಳು. ಆದರೆ ಮಹಾರಾಣಿ ಕಣ್ಣು ಕಿಸಿದು ವಿಕಾರ ದೃಷ್ಟಿಯಿಂದ ಇರಿಯುತ್ತಿದ್ದಳಾಗಿ ಚಿಕ್ಕಮ್ಮಣ್ಣಿಯೂ ಮಹಾರಾಜನಲ್ಲಿಗೆ ಬರಲು ಹೆದರುತ್ತಿದ್ದಳು. ಯುವರಾಜ ಬರುತ್ತಿರಲಿಲ್ಲ. ಮಗಳು ಛಾಯಾದೇವಿಯಲ್ಲಿ ತಂದೆಯೆಂಬ ಅಂತಃಕರಣವಿತ್ತು. ಆದರೆ ಅವಳೂ ಹೆದರಿ ಬರುವುದನ್ನು ಕಡಿಮೆ ಮಾಡಿದ್ದಳು.

ಇನ್ನಿವನ ಕೊಬ್ಬಿನ ವಿಚಾರಕ್ಕೆ ಬರೋಣ. ಮೊದಲಿನ ಬೆನ್ನು ನೋವು ಈಗ ಪುನಃ ಕಾಣಿಸಿಕೊಂಡು ಮಹಾರಾಜ ನೊಂದ ನಾಯಿಯಂತೆ ನರಳುತ್ತಿದ್ದ. ಆದರೆ ಹೊಟ್ಟೆಯಲ್ಲಿ ಆಹಾರವಿದ್ದಾಗ ಆ ನೋವಿನ ಉಪಟಳ ಇರುತ್ತಿರಲಿಲ್ಲವಾದ್ದರಿಂದ ಯಾವಾಗಲೂ ಏನನ್ನಾದರೂ ಬಾಯಾಡಿಸುತ್ತಲೇ ಇರುತ್ತಿದ್ದ. ಇದರಿಂದಾಗಿ ಅವನಿಗೆ ಆಹಾರದಲ್ಲಿ ವಿಪರೀತವೆಂಬಂಥ ಆಸಕ್ತಿ ಮತ್ತು ರುಚಿ ಮೂಡಿ ಹಿಂದೆ ನಿರಾಕರಿಸುತ್ತಿದ್ದ ಕೆಲವು ಪದಾರ್ಥಗಳನ್ನು ತರಿಸಿ ಚಪ್ಪರಿಸಿ ತಿನ್ನುತ್ತಿದ್ದ. ಬಿಸಿಬಿಸಿಯಾದ ಆಹಾರವನ್ನು ತಾಸುಗಟ್ಟಳೆ ತಿನ್ನುವಾಗ ಸಹಜವಾಗಿ ಬೆವರು ಸುರಿಯುತ್ತಿತ್ತು. ಮೂಗು ಕಿವಿಗಳು ಕೆಂಪಾಗಿ ಕಣ್ಣು ಮೂಗಿನಲ್ಲಿ ರಾಡಿನೀರು ಬಂದು ನೋಡುವವರಿಗೆ ಅಸಹ್ಯವಾಗಿ ಕಾಣಿಸುತ್ತಿದ್ದುದೂ ಅವನ ಗಮನಕ್ಕೆ ಬರುತ್ತಿರಲಿಲ್ಲ. ತಿಂದು ಜೀರ್ಣವಾಗುವ ಮದ್ದು ತಗೊಂಡು ಮಲಗುವದು, ನಿದ್ದೆ ಬಾರದಿದ್ದರೆ ತನ್ನ ವಿಜಯದ ಕಡಗವನ್ನು ತಿರುಗಿಸುತ್ತ ಮೈಮರೆಯುವುದು, ನಿದ್ದೆ ಬಂದು ಅಂಗಾತ ಮಲಗಿದರೆ ಮದ್ದಾನೆ ಗರ್ಜಿಸಿದಂತೆ ಸುದೀರ್ಘ ಗೊರಕೆ ಹೊಡೆಯುವುದು ಅವನ ದಿನಚರಿಯಾಯಿತು. ಹೋಳಾಗಿ ಮಲಗಿದರೆ ಮಾತ್ರ ಗಾಳಿ ಬೀಸುವ ಸೇವಕರಿಗೆ ಭೀತಿಯಾಗುವಂತೆ ಸ್ಮಶಾನ ಮೌನ ಆವರಿಸುತ್ತಿತ್ತು.

ಹೀಗೆ ಮಿತಿಮೀರಿ ತಿನ್ನುತ್ತಲೇ ಇದ್ದರೆ ಕೊಬ್ಬು ಬಾರದಿರುತ್ತದೆಯೇ? ಅವನ ದೇಹಕ್ಕೆ ಕೊಬ್ಬೇರುತ್ತಿದ್ದ ಸಂಗತಿಯನ್ನು ಎಲ್ಲರಿಗಿಂತ ಮೊದಲು ಶಿಖರಸೂರ್ಯನೇ ಗಮನಿಸಿದ್ದ. ದೇಹದಲ್ಲಿ ಅನಿರೀಕ್ಷಿತ ಕೊಬ್ಬು ಸಂಗ್ರಹವಾಗಿ ತೋಳುಗಳು ಬಾತುಕೊಂಡಂತಾದುವಲ್ಲದೆ, ಚಲಿಸಿದಾಗ ಕುರುಡನ ಕೈಗಳು ಚಲಿಸಿದಂತೆ ಕಾಣುತ್ತಿದ್ದವು. ಕೂಡಲೇ ಶಿಖರಸೂರ್ಯ ಅಪಥ್ಯದ ಆಹಾರ ಕೊಡುತ್ತಿದ್ದೀರೆಂದು ಅಡಿಗೆಯವರಿಗೆ ಸಿಟ್ಟು ಮಾಡಿದ. ಅಪಥ್ಯ ಮಾಡಿದರೆ ಮಹಾರಾಜನ ಅನಾರೋಗ್ಯದ ಮೇಲೆ ತನ್ನ ಮದ್ದು ಕೆಲಸ ಮಾಡುವುದಿಲ್ಲವೆಂದು ಗೊಣಗುತ್ತ ತನ್ನ ವೈದ್ಯವಿದ್ಯೆಗೇನು ಅರ್ಥವೆಂದು ಪಶ್ಚಾತ್ತಾಪ ಪಟ್ಟ. ಆಮೇಲೆ ಮಹಾರಾಜ ತಿನ್ನಬೇಕಾದ ಆಹಾರ ಮತ್ತು ಅದರ ಪ್ರಮಾಣದ ಒಂದು ಪಟ್ಟಿ ಕೊಟ್ಟು ಇದನ್ನು ನಿಷ್ಠುರವಾಗಿ ಪಾಲಿಸಲೇಬೇಕೆಂದು ತಾಕೀತು ಮಾಡಿದ. ಮೊದಮೊದಲು ಪ್ರತಿಸಲ ಊಟ ಮಾಡುವಾಗಲೂ ಸೇವಕರು ಆ ಪಟ್ಟಿಯನ್ನು ಮಹಾರಾಜನ ತಟ್ಟೆಯ ಸಮೀಪದಲ್ಲಿ ಇಡುತ್ತಿದ್ದರು. ಮಹಾರಾಜ ಪಟ್ಟಿಯಲ್ಲಿ ಹೇಳಿದ ಪ್ರಮಾಣವನ್ನು ಒಂದೆರಡು ತುತ್ತುಗಳಲ್ಲಿ ಮುಗಿಸಿ, 'ಇರುವೆ ಮತ್ತು ಇಲಿಗಳಿಗೆ ಕೊಡುವಷ್ಟು ಆಹಾರವನ್ನು ಒಬ್ಬ ರಾಜ ತಿಂದರೆ ರಾಜ್ಯವಾಳಲಿಕ್ಕೆ ಆಗುತ್ತದೇನ್ರಯ್ಯಾ?' ಎಂದು ಗದರಿ ಹಲ್ಲಿಗೆ ರುಚಿಕರವಾದದ್ದನ್ನು ಬೇಕಾದಷ್ಟು ಹಾಕಿಸಿಕೊಂಡು ತಿನ್ನುತ್ತಿದ್ದ. ಅದಾಗಿ ಜೀರ್ಣವಾಗುವ ಸಸ್ಯಗಳನ್ನ ನಂಜಿಕೊಳ್ಳುವಾಗ ಅವನ್ನೂ ಪ್ರಮಾಣ ಮೀರಿ ಸೇವಿಸುತ್ತ, 'ನಿಜ ಹೇಳಬೇಕೆಂದರೆ ಇದಪ್ಪ ಆರೋಗ್ಯಕರ ಆಹಾರವೆಂದರೆ! ಸರಳ ಆಹಾರವೆಂದರೂ ಇದೇ; ಬಡವರು, ಕಾಡುಜನರು ತಿನ್ನೋ ಆಹಾರವೆಂದರೂ ಇದೇ! ಉಳಿದದ್ದು ನಾವು ರಾಜರು ಅಂಬೋರು ತಿಂತೀವಲ್ಲ?-ಅದು, ಕೇವಲ ಹಲ್ಲಿನಿಂದ ಗೋರಿ ಅಗೆಧಂಗೆ ಕಣ್ರಯ್ಯಾ! ನಾಳೆಯಿಂದ ಇದನ್ನೇ ಹೆಚ್ಚಾಗಿ ಬಡಿಸಿರಿ.' ಎಂದೂ ಉಪದೇಶ ಮಾಡುತ್ತಿದ್ದ. ಅಲ್ಲದೆ ಒಂದೊಂದು ದಿನ ಜೀರ್ಣವಾಗುವ ಸಸ್ಯಗಳೇ ರುಚಿಯಾಗಿದ್ದರೆ ಅವನ್ನೇ ಜಾಸ್ತಿ ತಿಂದು ತೃಪ್ತಿಗೊಂಡು ಬೆಳಿಗೆದ್ದು ಕೊಬ್ಬಿನ ಅಲ್ಪಾಂಶವಾದರೂ ಕರಗಿತೆ? ಎಂದು ನೋಡಿಕೊಳ್ಳುತ್ತಿದ್ದ.

ಅವನ ವಿಕಾರವಾದ ಹೊಟ್ಟೆ, ಅಸಹ್ಯಕರವಾಗಿ ಕೊಬ್ಬಿದ ತೋಳುಗಳು, ಇಳಿಬಿದ್ದ ಕೆಳದುಟಿ, ರಾಡಿ ಸೋರುವ ಕಣ್ಣುಗಳನ್ನು ಕಂಡಾಗ ಮಕ್ಕಳು ಹೇಸಿಕೊಳ್ಳುತ್ತಿದ್ದರು. ನೆಪ ಹೇಳಿ ಅವನೊಂದಿಗೆ ಊಟಮಾಡುವ ಅವಕಾಶಗಳನ್ನು ಈಗೀಗ ರಾಜಕುಮಾರಿ ಛಾಯಾದೇವಿಯೂ ತಪ್ಪಿಸಿಕೊಳ್ಳುತ್ತಿದ್ದಳು.

ಬಂದು ನೋಡುವ ಗೆಳೆಯರಿರಲಿಲ್ಲ. ಅಲ್ಲಿಗೆ ಬಂದ ಯಾರಾದರೂ ಪ್ರಜೆಗಳೋ ಅಧಿಕಾರಿಗಳೋ ನಮಸ್ಕಾರ ಮಾಡಿದರೆ ಮಹಾರಾಜ ಅನುಮಾನದಿಂದ ಅಥವಾ ಹೆದರಿಕೆಯಿಂದ ನೋಡುತ್ತಿದ್ದ. ಬಂದವರೊಂದಿಗೆ ಮಾತಾಡುವುದಕ್ಕೆ ಹಿಂಜರಿಯುತ್ತಿದ್ದ. ಅವನ ಹಿಂಜರಿಕೆಯಿಂದಾಗಿ ಬಂದವರೂ ಮಾತಾಡಿಸದೆ ಇದು ಅಭಿನಯ ಇಲ್ಲವೆ ಹುಚ್ಚಿರಬಹುದೆಂದು ಭಾವಿಸಿ ಸಹಾನುಭೂತಿ ಮತ್ತು ಸಂಕೋಚಗಳಿಂದ ಹಿಂದೆ ಸರಿಯುತ್ತಿದ್ದರು. ಅಥವಾ ಅವರು ಅವನ ಉತ್ತರಕ್ಕಾಗಿ ಕಾದು ಹಾಗೇ ನಿಂತರೆ ಏನು ಉತ್ತರ ಕೊಟ್ಟರೂ ಅವರು ನಂಬುವುದಿಲ್ಲವೆಂದು, ತಾನು ಮೋಸ ಹೋದುದು ಇವರಿಗೆ ತಿಳಿದಿದೆಯೆಂದು ಭಾವಿಸಿ 'ಚೆನ್ನಾಗಿದ್ದೀನಿ' ಎಂದು ಹೇಳಿ ಮಳ ಮಳ ಅವರ ಮುಖ ನೋಡುತ್ತಿದ್ದ. ಅವರು ಹೋದ ಮೇಲೆ ಒಬ್ಬನೇ 'ತಾನು ಆಡಿದ್ದರಲ್ಲಿ ಅವರಿಗೇನಾದರೂ ದೋಷ ಕಂಡಿತೆ? ಅಥವಾ ಅವರು ಹೋಗಿ ಯುವರಾಜ ಅಥವಾ ಮಹಾರಾಣಿಗೆ ಹೇಳುವರೆ?' ಎಂದೂ ಚಿಂತೆ ಮಾಡುತ್ತಿದ್ದ.

ಸಂಗೀತಕ್ಕೂ ಅವನಿಗೆ ಕಿವಿಗಳಿರಲಿಲ್ಲ. ಆತ ಇಷ್ಟಪಡುತ್ತಿದ್ದ ಒಂದೇ ಒಂದು ಆಟವೆಂದರೆ ಇಬ್ಬರು ಖೈದಿಗಳು ಮಲ್ಲಯುದ್ಧ ಮಾಡಿದರೆ, ಅವರನ್ನು ಶ್ವಾನಕೂಪದಲ್ಲಿ ತಳ್ಳಿ ಆ ನಾಯಿಗಳು ಅವರನ್ನು ಹರಿದು ತಿನ್ನುತ್ತಿದ್ದರೆ ನೋಡಿ ವಿಜಯದ ಕಡಗದ ಸಪ್ಪಳಾಗುವಂತೆ ಚಪ್ಪಾಳೆ ತಟ್ಟಿ ನಲಿಯುತ್ತಿದ್ದ. ಆದರೆ ಅದು ಇತ್ತೀಚೆಗೆ ನಡೆದಿರಲಿಲ್ಲ. ನಡೆದರೂ ಅವರು ಇವನನ್ನು ಕರೆದಿರಲಿಲ್ಲ.

ಸೇವಕರು ಬೆಕ್ಕಿನ ಹೆಜ್ಜೆ ಇಡುತ್ತ ಅಡಗಿ ನಿಂತು ಮಹಾರಾಜ ಅಡ್ಡಾಡುವುದನ್ನು ಕಂಡು ಚಕಿತರಾಗುತ್ತಿದ್ದರೂ ಯಾರೂ ಮುಂದೆ ಬಂದು ಕಾಣಿಸಿಕೊಳ್ಳುತ್ತಿರಲಿಲ್ಲ. ಮಹಾರಾಜ ಮಾತ್ರ ಆಗಾಗ ಬಾಗಿಲು ತಟ್ಟಿದ ಶಬ್ದ ಕೇಳಿಸಿ, ಹೋಗಿ ಬಾಗಿಲು ತೆರೆಯುತ್ತಿದ್ದ. ಯಾರೂ ಇಲ್ಲದನ್ನು ಗಮನಿಸಿ ಮತ್ತೆ ಬಾಗಿಲು ಮುಚ್ಚಿಕೊಂಡು ಬಂದು ವಿಜಯದ ಕಡಗದ ಸಪ್ಪಳ ಮಾಡುತ್ತ ಕೂರುತ್ತಿದ್ದ.

ರಾಜ ಹೆದರಿದ್ದಾನೆಂದು, ಆ ಹೆದರಿಕೆಯಿಂದಲೇ ದಿನೇ ದಿನೇ ಸಾವಿಗೆ ಸಮೀಪವಾಗುತ್ತಿದ್ದಾನೆಂದು ಸೇವಕರಿಗೆ ಗೊತ್ತಾಗಿತ್ತು. ಒಂದು ದಿನ ಯುವರಾಜನ ವರ್ತಕ ಚೇಲನೊಬ್ಬ ಇನ್ನೊಬ್ಬನಿಗೆ, ಮಹಾರಾಜನೂ ಕೇಳಿಸಿಕೊಳ್ಳುವಂತೆ ಒಂದು ಕತೆ ಹೇಳಿದ:

'ಒಂದಾನೊಂದು ಕಾಲದಲ್ಲಿ ಒಬ್ಬಾನೊಬ್ಬ ರಾಜ ಇದ್ದ. ಅವನು ಕನ್ನಡಿ ಬಿಟ್ಟು ಬೇರೆ ಕಡೆಗೆ ನೋಡಿದವನೇ ಅಲ್ಲ. ಕನ್ನಡಿ ನೋಡುತ್ತಲೇ ಮಲಗುತ್ತಿದ್ದ. ಕನ್ನಡಿಯಲ್ಲೇ ಎಚ್ಚರಾಗುತ್ತಿದ್ದ. ಭೇಟಿಯಾಗಲು ಬಂದವನು ಕನ್ನಡಿಯಲ್ಲೇ ಮಾತಾಡುತ್ತಿದ್ದರು. ಇವನೂ ಅವರ ಪ್ರತಿಬಿಂಬದೊಂದಿಗೇ ಮಾತಾಡಿ ಕಳಿಸುತ್ತಿದ್ದ. ಹೆಂಡತಿ ಮಕ್ಕಳನ್ನು ಕೂಡ ಕನ್ನಡಿಯ ಮೂಲಕವೇ ನೋಡುತ್ತಿದ್ದ. ಮಾತಾಡುತ್ತಿದ್ದ, ಪ್ರೀತಿಸುತ್ತಿದ್ದ ಕೂಡ.

ಸದರಿ ರಾಜನಿಗೆ ಒಂದು ಸಲ ಕನ್ನಡಿಯಲ್ಲಿ ಕಾಡು ಕಂಡಿತು. ಹಾಗೆಯೇ ನೋಡುತ್ತಿರಬೇಕಾದರೆ ಕಾಡಿನೊಳಗಿನಿಂದ ಒಂದು ಧಡೂತಿ ಕರೀ ಕುದುರೆ ಓಡಿ ಬಂದು 'ಹತ್ತು ಬಾ' ಎಂದು ಕೆನೆಯುತ್ತ ಮಾತಾಡಿತು! ಕುದುರೆ ಮಾತಾಡಿತಲ್ಲಾ! ಎಂದು ಆಶ್ಚರ್ಯದಿಂದ ಕನ್ನಡಿ ಬಿಟ್ಟು ಹಿಂದೆ ನೋಡಿದರೆ ಕರಿ ಕುದುರೆ ಅಲ್ಲೇ-ಅವನ ಹಿಂದೆಯೇ ನಿಂತಿತ್ತು! ರಾಜ ನೋಡಿದವನೇ ಅಲ್ಲೇ ಹಾಗೇ ಸತ್ತ!'

ಸದರಿ ಕತೆಯನ್ನ ಕೇಳಿಸಿಕೊಂಡ ಮಹಾರಾಜ ಆ ದಿನ ಕನ್ನಡಿಯ ಕಡೆಗೆ ನೋಡಲಿಲ್ಲ! ಸೇವಕರ ಕಪಿಚೇಷ್ಟೆಗೆ ನಗಲಿಲ್ಲ. ಸದರಿ ವರ್ತಕನನ್ನ ಕರೆದು ಊರಲ್ಲಿ ಯಾರ್ಯಾರು ಸತ್ತರೆಂದು, ಕೇಳಿ ತಿಳಿದುಕೊಂಡಾದ ಮೇಲೆ ಕಳಿಸಿಬಿಟ್ಟ. ಮಹಾರಾಜ ಆ ದಿನ ಯಾವುದೋ ಅನಾಹತ ನಾದವನ್ನ ಆಲಿಸುವಂತೆ ಕಿಟಕಿಯ ಬಳಿ ನಿಂತುಕೊಂಡ. ಸಾವಿನ ಹೆಜ್ಜೆಗಳನ್ನು ಆಲಿಸುತ್ತಿರುವಂತೆ ಆಗವನ ಮುಖಚರ್ಯೆ ಇತ್ತು.

ಕೊನೆಯ ಸಲವೆಂಬಂತೆ ಅರಮನೆಯಲ್ಲಿ ಅಡ್ಡಾಡಿದ. ಸೇವಕರು ಸಿಕ್ಕರೆ ಅಲ್ಲಿಯ ಒಂದೊಂದು ವಸ್ತುವನ್ನೂ ತೋರಿಸಿ, 'ಇದೆಲ್ಲ ನಾನೇ ತಂದದ್ದು. ಈ ರತ್ನಗಂಬಳಿಯನ್ನ ಕಾಶ್ಮೀರದ ರಾಜ ಕಾಣಿಕೆಯಾಗಿ ಕೊಟ್ಟ. ಇದು ವಿಜಯದ ಕಡಗ, ಬಿಳಿಗಿರಿರಾಯ ಸೋತು ಕೊಟ್ಟದ್ದು.' -ಎಂದು ಹೇಳುತ್ತ ಕೈ ಕಡಗವನ್ನು ಅಲುಗಲುಗಿಸಿ ಸಂತೋಷಪಟ್ಟ. ಕಡಗದ ದನಿಯೇ ಅವನಿಗೆ ಮುದನೀಡುವ, ಕೊನೆಗೆ

ದಣಿವು ಕೂಡಾ ಕೊಡುವ ಸಾಧನವಾಗಿತ್ತು. ಆ ದಿನ ಮಧ್ಯರಾತ್ರಿಯಾದರೂ ನಿದ್ದೆ ಬರದಿದ್ದಾಗ ಕಳ್ಳದನಿಯಲ್ಲಿ ಕಡಗದ ದನಿಯನ್ನ ಅನುಕರಿಸುತ್ತ ಮಲಗಿದ. ನಿದ್ದೆ ಬಂತೆಂದಾಗ ಹಳವಂಡೆಗಳು ಬೇಟೆಯಾಡತೊಡಗಿದ್ದವು.

'ಈ ಹುಚ್ಚನನ್ನು ಅಡವಿಗಟ್ಟಿರೆಂದು, ನೀರಲ್ಲಿ ಮುಳುಗಿಸಿರೆಂದು, ಮಣ್ಣಲ್ಲಿ ಹುಗಿಯಿರೆ'ಎಂದು ಹೇಳುತ್ತ ಕನಕಪುರಿಯ ವರ್ತಕರು ತನ್ನ ಕಡೆಗೆ ಕಲ್ಲು ಬೀಸಿ ಎಸೆದರು... ಕೊಲೆಗೊಳಗಾದವರ, ಶ್ವಾನಕೂಪದಲ್ಲಿ ಸಾಯುತ್ತಿರುವವರ ಕಿರುಚಾಟಗಳು ಒದರಾಟಗಳು ಕೇಳಿಸಿದವು... ಯುವರಾಜನ ನೇತೃತ್ವದಲ್ಲಿ ತನ್ನ ಅಧೀನಕ್ಕೆ ಒಳಪಡದ ಪಾಳೆಯಗಾರರನ್ನೆಲ್ಲ ಬಂಧಿಸಿ ಸುಟ್ಟು ಬೂದಿ ಮಾಡುತ್ತಿದ್ದರು... ಹಾಳಾದ ಪಾಳೆಯಗಾರರಿಂದ ದೊರೆತ ಲಾಭ ಐಶ್ವರ್ಯಗಳನ್ನು ಹಂಚಿಕೊಳ್ಳುವ ಬಗ್ಗೆ ವರ್ತಕರು ಜಗಳಾಡುತ್ತಿದ್ದರು... ಹುಬ್ಬೇರಿಸಿ ನಗುವ ಮುಖಗಳು... ತುಟಿ ಅಲುಗುತ್ತಿವೆ ಮಾತು ಕೇಳಿಸುತ್ತಿಲ್ಲ...

ಆ ದಿನ ರಾಜ ಬೆಳಗಿನ ಸಮಯ ವರ್ತಕರನ್ನ ಉದ್ದೇಶಿಸಿ ರಣರಂಗದಲ್ಲಿ ನಿಂತ ವೀರಾಗ್ರಣಿಯಂತೆ ಮಾತಾಡುವ ಕನಸಾಯಿತು. ಹೇಳಿದ:

"ಈ ಯುದ್ಧವನ್ನ ನಾವು ಗೆಲ್ಲಲೇಬೇಕ್ರಯ್ಯಾ, ಗೆದ್ದರೆ ನಮ್ಮ ಪಾಳಯಗಳಲ್ಲಿ ಮುಕ್ತ ವ್ಯಾಪಾರ ಮಾಡುವುದಕ್ಕೆ ನಿಮಗೆ ಇಗೋ ಪರವಾನಗಿ ಸಿದ್ಧಪಡಿಸಿದ್ದೇನೆ. ಅಲ್ಲದೆ ತೆರಿಗೆಯಿಲ್ಲದೆ ಅಷ್ಟೂ ರಾಜ್ಯಗಳಲ್ಲಿ ನಿಮ್ಮ ವಸ್ತುಗಳನ್ನ ಮಾರುವ ಅಧಿಕಾರ ಮಾತ್ರವಲ್ಲ ಸ್ಥಳೀಯರು ಆ ವಸ್ತುಗಳನ್ನ ಮಾರಿದರೆ ಶೇಕಡಾ ನೂರರಷ್ಟು ತೆರಿಗೆಯನ್ನೂ ಕಕ್ಕುವ ವ್ಯವಸ್ಥೆ ಮಾಡುತ್ತೇನೆ. ಸಾಕೋ?" ಎಂದು ಸಾರಿದ.

ಹಾಗೇ ಹೇಳ ಹೇಳುತ್ತ,

"ಚಿನ್ನ, ಅಧಿಕಾರ, ಕೊಲೆ, ಸುಲಿಗೆ, ದುಃಖ-ಇವು ನನ್ನ ಖಾಸಗೀ ಶಬ್ದಗಳು. ಇವುಗಳಿಂದ ಮನುಷ್ಯನಿಗೆ ಮುಕ್ತಿಯೇ ಇಲ್ಲ!" ಎಂದು ಹೇಳಹೇಳುತ್ತ ಅಪರಾಧ ಮಾಡಿದವನು ತಾನೇ ಎಂದು ಹೆಚ್ಚು ಹೆಚ್ಚು ಖಾತ್ರಿಯಾಗಿ ನೋಯಲಾರಂಭಿಸಿದ. ಬಾಣ ನೆಟ್ಟು ಸಾಯಲಾರದ, ಆದರೆ ಬೇಟೆಗಾರನಿಗೂ ಸಿಕ್ಕದೆ ನರಳುತ್ತ ಬಿದ್ದ ಪ್ರಾಣಿಯ ಹಾಗೆ ನೋವನ್ನನುಭವಿಸಿದ. ತನ್ನ ಅಪರಾಧ ಯಾವುದೆಂದು ತಿಳಿಯದಾಯಿತು. ಆದರೆ ನೋವು ಅಧಿಕವಾಯಿತು. ಎದ್ದು ರಾಜಪೀಠದ ಮ್ಯಾಲೆ ಕುಳಿತ. ಅವರೆಲ್ಲ ಎದುರಿಗೆ ನಿಂತಿದ್ದಾರೆಂಬಂತೆ ಸ್ಪಷ್ಟವಾಗಿ ಶಬ್ದಗಳನ್ನು ಹಲ್ಲಿನಿಂದ ಚಚ್ಚಿದಂತೆ ಹೇಳಿದ:

"ಬೇರೆಯವರಿಗೆ ಮೋಸ ಮಾಡುವ ಮಾತು ಆಮೇಲೆ. ನಿಮಗೆ ನಾವೇ ಮೋಸ ಮಾಡಿಕೊಳ್ಳುತ್ತಿದ್ದರೆ ಅದು ಹೆಚ್ಚು ಅಪಾಯಕಾರಿ. ಅದಕ್ಕಿಂತ ಭಯಂಕರ ಅಪಾಯಕಾರಿ ಯಾವುದಪ್ಪಾ ಅಂದರೆ ನಮಗೆ ನಾವೇ ಮೋಸ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಸಂಗತಿ ಇದೆಯಲ್ಲ, ಅದು ಕಣ್ರಯ್ಯಾ!"-ಎಂದು ಹೇಳಿ ಆಮೇಲೆ ಎರಡೂ ಮುಷ್ಠಿಗಳನ್ನ ಬಿಗಿದು ಮೊಳಕಾಲುಗಳ ಮೇಲೆ ಕೋಪದಿಂದ ಗುದ್ದಿಕೊಳ್ಳುತ್ತ "ಆತ್ಮಹತ್ಯೆಯಿಂದ ಮಾನವ ಕುಲವನ್ನೇ ನಾಶಮಾಡುತ್ತಿದ್ದೇವೆ; ಗೊತ್ತೇನ್ರಯ್ಯಾ? ಇದಕ್ಕೆ ನಾನೊಬ್ಬ ಯಾಕೆ? ನೀವೆಲ್ಲರೂ ಅಪರಾಧಿಗಳೇ!" ಎಂದು ಕಿರಿಚಿ ಹೇಳಿದ.

ಆಮೇಲೆ ಮಹಾರಾಜ ಭಯಂಕರ ಮೌನದಲ್ಲಿ ಮುಳುಗಿಬಿಟ್ಟ!

# ಮೂವತ್ತೇಳು

ಯುವರಾಜನ ನೇಮಕಾತಿಯಾಗದೆ ಮಹಾರಾಜನ ಮರಣವಾಗಿ ರಾಜ್ಯದಲ್ಲಿ ಒಂದು ಶೂನ್ಯ ಸ್ಥಿತಿ, ನಿರ್ಮಾಣವಾದುದು ನಿಜ. ಹಾಗಂತ, ನೆರೆಹೊರೆ ರಾಜರಾಗಲಿ, ಮಾಂಡಳಿಕರಾಗಲಿ, 'ಕಳ್ಳತನವ ಮಾಡಲಿಕ್ಕೆ ಒಳ್ಳೆ ಸಮಯ' ಒದಗಿತೆಂದು ಎಂದು ನಿಲ್ಲಲಿಲ್ಲ. ಯಾಕಂತಿರೋ, ಮಹಾರಾಜನಿದ್ದಾಗಲೂ ಈಗಲೂ ರಾಜ್ಯಭಾರ ನೋಡಿಕೊಳ್ಳುವವನು ಪ್ರಧಾನಿ ಅರ್ಥಕೌಶಲನೇ ಆಗಿರುವುದರಿಂದ ಅವನೇ ಏನಾದರೊಂದು ವ್ಯವಸ್ಥೆ ಮಾಡುತ್ತಾನೆಂದು, ಅವನಿಗೆ ಆಗಿಬರದ ವರ್ತಕರು ಕೂಡ ಬಾಯಿ ಹೊಲಿದುಕೊಂಡಿದ್ದರು.

ಅರ್ಥಕೌಶಲ ಜಾಣರ ಜಾಣ. 'ನೀವು ಗಳಿಸುವ ಪ್ರತಿಯೊಂದು ಕಾಸಿಗೆ ಒಬ್ಬ ಕಳ್ಳನಿರುತ್ತಾನೆ 'ಎಂದು ಹೆದರಿಸಿ ವರ್ತಕರಿಗೆ ರಾಜನ ಅಗತ್ಯವನ್ನ, ಹಣವಿಲ್ಲದೆ ರಾಜ್ಯವಿಲ್ಲ, ವರ್ತಕನಿಲ್ಲದೆ ಹಣವಿಲ್ಲ ಎಂದು ರಾಜನಿಗೆ ವರ್ತಕರ ಅಗತ್ಯವನ್ನು ಮನದಟ್ಟು ಮಾಡಿಕೊಟ್ಟು ಇಬ್ಬರೂ ಸದಾ ಒಂದಾಗಿರುವಂತೆ ವ್ಯವಸ್ಥೆ ಮಾಡಿದ್ದ! ಯುದ್ಧವಿಲ್ಲದ ರಾಜ್ಯದಲ್ಲಿ ವರ್ತಕ ಬದುಕೋದುಂಟೆ? ಎಂದು ರಾಜನಿಗೆ ಹೇಳಿ ಯುದ್ಧಕ್ಕೆ ಪ್ರಚೋದನೆ ಕೊಟ್ಟು ಎಲ್ಲರ ಮಧ್ಯೆ ಒಂದು ಸಮತೋಲನ ಕಾದಿಟ್ಟುಕೊಂಡದ್ದು ಅವನ ಜಾಣ್ಮೆ. ಕೊಂಚದಲ್ಲಿ ಅವನ ಹಿನ್ನೆಲೆ ಅರಿತು ಇಂದಿನ ಇತಿಹಾಸಕ್ಕೆ ಪ್ರವೇಶಿಸೋಣ.

ಅರ್ಥಕೌಶಲನ ಮುತ್ತಾತ ಬಯಲು ಸೀಮೆಯಿಂದ ಒಂದು ಗುಡ್ಡ, ಒಂದು ಬಯಲು ದಾಟಿ, ತಾವರೆಕೆರೆ ಕಳೆದು ಗಟ್ಟದೀಚೆಯ ಕನಕಪುರಿಗೆ ವ್ಯಾಪಾರಕ್ಕಾಗಿ ಬಂದ. ಕನಕಪುರಿ ನೆರಳಿಗೆ ಹಿತಕರ, ನೀರಿಗೆ ಅನುಕೂಲಕರ ಜಾಗವೆಂದು ಇಲ್ಲಿಯೇ ನೆಲೆಸಿ ಬೆಳೆದ. ತಂದೆಗಿಂತ ಮಗ, ಮಗನಿಗಿಂತ ಮೊಮ್ಮಗ ದೊಡ್ಡವರಾಗಿ ಶ್ರೀಮಂತರಾಗಿ ಅರ್ಥಕೌಶಲನ ಕಾಲಕ್ಕೆ ಪ್ರಧಾನಿಯಾಗುವಷ್ಟರ ಮಟ್ಟಿಗೆ ಆ ಕುಟುಂಬ ಪ್ರಭಾವಶಾಲಿಯಾಗಿ ಬೆಳೆದಿತ್ತು. ಪಾರಂಪರಿಕ ಶ್ರೀಮಂತಿಕೆಯಿಂದ ಮಾತ್ರವಲ್ಲ ಅರ್ಥಕೌಶಲ ತನ್ನ ದೊಡ್ಡ ತಲೆಯ ಬುದ್ಧಿವಂತಿಕೆಯಿಂದಲೂ ಅತಿ ಶ್ರೀಮಂತ ವರ್ತಕನಾದ. ರಾಜನಿಷ್ಠೆಯಿಂದ ಅರಮನೆಯಲ್ಲಿ ಪ್ರಭಾವ ಬೆಳೆಸಿಕೊಂಡು ಪ್ರಧಾನಿಯಾದ. ಸುಮಾರು ಐವತ್ತು ವರ್ಷ ವಯಸ್ಸಿನ ಆತ ಸದೃಢನಾಗಿದ್ದ. ನಗೆಮಾರಿ ಮುಖದಲ್ಲಿರುವ ಹೊಳಪುಳ್ಳ ಕಣ್ಣುಗಳಲ್ಲಿ ಕರುಣೆಯುಳ್ಳವನಾಗಿದ್ದ. ಹೆಣ್ಣುಗಳನ್ನು ಕೆಣಕುವ, ಸ್ನೇಹಿತರ ಅಸೂಯೆಗೆ ಕಾರಣವಾಗುವ ಯಾವುದೋ ಒಂದು ವಿಶೇಷ ಗುಣ ಆ ಕಣ್ಣುಗಳಲ್ಲಿತ್ತು. ಒತ್ತಿ ಬಂದ ಎರಡೂ ಕೆನ್ನೆಗಳ ನಡುವೆ ತುಟಿಗಳು ಹಿಸುಕಲ್ಪಟ್ಟು ತುಸು ಮುಂದೆ ಬಂದಿದ್ದುವಾದರೂ ಬಾಯಿ ತೆರೆದಾಗ ಕಾಣುವ ಶುಭ್ರವಾದ ಹಲ್ಲುಗಳು ಮಾತ್ರ ಬಹಳ ಚಂದಾಗಿದ್ದವು. ಅವನ ಮಾತನ್ನು ಜಾಗರೂಕತೆಯಿಂದ ಆಲಿಸುತ್ತಿದ್ದರು. ಅಲ್ಲದೆ ಮಾತಾಡುವಾಗ ಹುಬ್ಬು ಕುಣಿಸುತ್ತ ಹಣೆಯನ್ನು ಅಗಲಿಸಿ ಸಂಕುಚಿತಗೊಳಿಸಿ ಮಾತನಾಡುತ್ತಿದ್ದುದರಿಂದ ಅವನ ಮಾತಿಗೊಂದು ನಾಟಕೀಯವಾದ ರಂಗೇರುತ್ತಿತ್ತು. ಇವು ಎಲ್ಲರೂ ಅವನ ಮಾತುಗಾರಿಕೆಯನ್ನು ಮೆಚ್ಚೋದಕ್ಕೆ, ಹೆಂಗಳೆಯರು ಮನಸೋಲುವುದಕ್ಕೆ ಕಾರಣವಾಗಿದ್ದವು. ತಾನು ನಕ್ಕಾಗ ಚಂದ ಕಾಣುವುದು ಗೊತ್ತಾಗಿಯೇ ಸದಾ ನಗುತ್ತ ಮಾತಾಡುವ ಚಾಳಿಯನ್ನು ಬೆಳೆಸಿಕೊಂಡಿದ್ದ.

ಅವನ ನಗೆಮುಖದ ಸರಸ, ಹಾವಭಾವ ಮತ್ತು ರಸಿಕತೆಗೆ, ಇಂಥದನ್ನೇ ಅಪೇಕ್ಷಿಸುವ ಬೆಡಗಿ ಮಹಾರಾಣಿ ಗುಪ್ತವಾಗಿ ಒಲಿದದ್ದು ಹೆಚ್ಚಲ್ಲ. ಈ ವಿಷಯದಲ್ಲಿ ಅವನಿಗೆ ಆಗಿಬರದ, ಪ್ರೀತಿ ಮತ್ತು ಗಳಿಕೆಯಲ್ಲಿ ಇವನೊಂದಿಗೆ ಸ್ಪರ್ಧಿಸಿ ಸೋತ ಅಸೂಯಪರರು ಬೇಕಾದಷ್ಟು ಜನ ಸರೀಕ ವರ್ತಕರಿದ್ದರು. ಆದರೆ ಅವನ ಶತ್ರುಗಳು ಕೂಡ ಅವನ ರಾಜನಿಷ್ಠೆಯನ್ನ ಹೊಗಳುತ್ತಿದ್ದರು.

ಅವನ ರಾಜನಿಷ್ಠೆ ಕಿಂಚಿತ್ತೂ ಕೆಸರಿಲ್ಲದ್ದು, ಸಂಶಯಾತೀತವಾಗಿ ಪ್ರಾಮಾಣಿಕವಾದದ್ದು. ಆದ್ಯತೆಯ ವಿಷಯ ಬಂದರೆ ಅರಮನೆಯ ಹಿತ ಮೊದಲು, ನಂತರ ಸ್ವಂತ ಹಿತ; ಆಮೇಲೆ ಉಳಿದೆಲ್ಲ ಆಗಬೇಕು. ಪ್ರಸಂಗ ಬಂದರೆ ಅರಮನೆಗೋಸ್ಕರ ಸ್ವಂತ ಸುಖವನ್ನೂ ತ್ಯಾಗ ಮಾಡಿಯಾನು. ಇಷ್ಟು ವರ್ಷ ಅರಮನೆಯ ಹಣ ಮತ್ತು ಮರ್ಯಾದೆಗಳನ್ನು ಆತ್ಮಸಾಕ್ಷಿಯಾಗಿ ಕಾಪಾಡಿಕೊಂಡು ಬಂದವನು, ಶ್ರೀಮಂತಿಕೆಯಲ್ಲಿ ಹತ್ತರಲ್ಲಿ ಹನ್ನೊಂದನೆಯದಾಗಿದ್ದ ರಾಜ್ಯವನ್ನು ಮೊದಲ ಸ್ಥಾನಕ್ಕೇರಿಸಿದವನು! ಮಹಾರಾಣಿಯೇ ಅವನವಳಾಗಿರುವಾಗ ಅರಮನೆಗೆ ನಿಷ್ಠನಾಗದೇನು ಮಾಡಿಯಾನು? ಎಂದು ಆಗದವರು ಕದ್ದಾಡುವುದೂ ಇದೆ. ಅವನ ವ್ಯಕ್ತಿತ್ವದ ವಿಷಯವಾಯಿತಲ್ಲ, ಈಗ ಪ್ರಸ್ತುತಕ್ಕೆ ಬನ್ನಿರಿ:

ಯುವರಾಜನನ್ನು ಬಿಡಿಸಿ ತಂದು ಈ ಒಂದೂವರೆ ವರ್ಷದಲ್ಲಿ ಕನಕಪುರಿಯ ಆತ್ಮಸ್ಥೈರ್ಯ ಕುಸಿದು ಹೋಗಿತ್ತು. ಯುವರಾಜನ ವಿಲಾಸದ ಹವ್ಯಾಸಗಳಾಗಲಿ, ಬೇಲಿಯಿಲ್ಲದ ಬದುಕಿನ ಶೈಲಿಯಾಗಲಿ ಬದಲಾವಣೆಯಾಗಿರಲಿಲ್ಲ. ಇದೇ ಕಾರಣವಾಗಿ ಯುವರಾಜನಿಗೆ ಧನಪಾಲನ ಸ್ನೇಹವಾಗಿದೆಯೆಂದು ತಿಳಿದಾಗ ಪ್ರಧಾನಿ ಗಾಬರಿಯಾದ.

ದನಪಾಲ ದೊಡ್ಡ ಶ್ರೀಮಂತನೇನೋ ನಿಜ. ಅರ್ಥಕೌಶಲ ಮತ್ತು ಧನಪಾಲ ಇಬ್ಬರೂ ಸ್ಪರ್ಧಿಗಳು; ಶ್ರೀಮಂತಿಕೆಯಲ್ಲಿ ಮತ್ತು ಅಧಿಕಾರ ಗ್ರಹಣದಲ್ಲಿ ಅರ್ಥಕೌಶಲ ಮುಂದಿದ್ದ. ಆದರೆ ಧನಪಾಲ ಶ್ರೀಮಂತಿಕೆಯಲ್ಲಿ ಬಹಳ ಮುಂದಿದ್ದ. ಕನಕಪುರಿಯಲ್ಲಿಯ ಮೂರು ಜೂಜಾಟದ ಮಳಿಗೆಗಳಲ್ಲಿ ಮುಖ್ಯವಾದ ಎರಡನ್ನು ಅವನೇ ನಡೆಸುತ್ತಿದ್ದ. ವಿಷಕನ್ಯೆಯರನ್ನು ತಯಾರು ಮಾಡಿ ರಾಜರಿಗೆ ಮಾರುತ್ತಿದ್ದ. ಇದೇ ಕಾರಣವಾಗಿ ಚಂಡೀದಾಸ ಅವನ ಸ್ನೇಹಿತನಾಗಿದ್ದ. ಇಬ್ಬರ ಬಗೆಗೂ ಅರಮನೆಗೆ ಸದಭಿಪ್ರಾಯ ಇರಲಿಲ್ಲ. ಧನಪಾಲನಂತೂ ಅರ್ಥಕೌಶಲ ತನ್ನ ಪರಮಶತ್ರುವೆಂದೇ ಭಾವಿಸಿದ್ದ. ತನ್ನ ಅಭ್ಯುದಯಕ್ಕೆ ಅಡ್ಡಗಾಲು ಹಾಕುವಾತ ಇವನೇ ಎಂದು ನಂಬಿದ್ದ.

ಇದನ್ನು ತಿಳಿದ ಪ್ರಧಾನಿ ಅರಮನೆಯ ಸಂಪರ್ಕಕ್ಕೆ ಧನಪಾಲ ಬಾರದ ಹಾಗೆ ಸರ್ಪಗಾವಲು ಹಾಕಿ ಕಾಯುತ್ತಿದ್ದ. ಮಹಾರಾಜನಿರುವತನಕ ಕಾಪಾಡಿಕೊಂಡೂ ಇದ್ದ. ಆದರೆ ಚಂಚಲಚಿತ್ತದ ಯುವರಾಜನ ಬಗ್ಗೆ ಆ ನಂಬಿಕೆ ಇರಲಿಲ್ಲ.

ಧನಪಾಲ ಎತ್ತರದ ಆಕೃತಿಯ, ಬೋಳುದಲೆಯ ಮಧ್ಯವಯಸ್ಸಿನ ಕುಳ. ಮುಖ ಕಪ್ಪಗಿದ್ದರೂ ತುಂಬಿಕೊಂಡು ಹೊಳೆಯುತ್ತಿತ್ತು. ಸಡಿಲು ಅಂಗಿ ದರಿಸುತ್ತಿದ್ದ. ಕತ್ತಿನಲ್ಲಿ ಸದಾ ಹೆಬ್ಬೆರಳು ಗಾತ್ರದ ಚಿನ್ನದ ಸರ, ಹತ್ತೂ ಬೆರಳಿಗೆ ಹತ್ತು ಹರಳಿನುಂಗುರು ಧರಿಸುವ ಶೋಕಿಯವ. ಮಾತಿಗೊಮ್ಮೆ ನಗುತ್ತಿದ್ದನಾದ್ದರಿಂದ ಮತ್ತು ಹಾಗೆ ನಕ್ಕಾಗೊಮ್ಮೆ ಕಣ್ಣು ಸಂಕೋಚಗೊಳ್ಳುತ್ತಿದ್ದುದರಿಂದ ಅವನು ಚೇಷ್ಟೆ ಮಾಡುತ್ತಿದ್ದಾನೋ, ನಿಜ ಹೇಳುತ್ತಿದ್ದಾನೋ ಎಂದು ತಿಳಿಯುತ್ತಿರಲಿಲ್ಲ. ಇತರರ ಸಾಮರ್ಥ್ಯಗಳನ್ನು ಮೆಚ್ಚುವಂತೆ ಅಭಿನಯಿಸಬಲ್ಲವನಾದರೂ ಲಾಭವಿಲ್ಲದೆ ಯಾರನ್ನೂ ಓಲೈಸಿದವನಲ್ಲ. ಇದೆಯೆಂದಾದರೆ ದಾಸನಂತೆ ಹಲ್ಲುಗಿಂಜಬಲ್ಲಾತ. ಅರಮನೆಯಲ್ಲಿ ಆತನಿಗೆ ಪ್ರವೇಶವಿರಲಿಲ್ಲ, ನಿಜ. ಆದರೆ ಅರಮನೆಯೆಂದರೆ ಅರ್ಥಕೌಶಲ ಮತ್ತು ಮಹಾರಾಣಿ-ಇಬ್ಬರೇ ಅಲ್ಲವಲ್ಲ. ರಾಜಕುಮಾರನೂ ಇದ್ದ!

ರಾಜಕುಮಾರನಿಗೆ ಮಹಾರಾಜ ತನ್ನನ್ನು ಯುವರಾಜನನ್ನಾಗಿ ಮಾಡಲಿಲ್ಲವೆಂಬ ಕೊರಗು ಇದ್ದೇ ಇತ್ತು. ಅವನ ಮುಖದಲ್ಲಿದ್ದ ಚಿಂತೆಯ ಗೆರೆ ಅದೊಂದೇ. ಧನಪಾಲನಿಗೆ ಇಷ್ಟು ಸಾಕಲ್ಲ! ವಿಲಾಸಿನಿಯೊಬ್ಬಳ ಮನೆಯಲ್ಲಿ ರಾಜಕುಮಾರ ಸಿಕ್ಕೊಡನೆ ಹೋದವನೇ "ಮಹಾರಾಜರಿಗೆ ಜಯವಾಗಲೆಂದು" ಅಂಡೆತ್ತಿ, ಬಾಗಿ ನಮಸ್ಕರಿಸಿದ. ರಾಜಕುಮಾರ ಅಚ್ಚರಿಯಿಂದ ನಿಂತರೆ "ತಾವೇ ನಮ್ಮ ಮುಂದಿನ ಮಹಾರಾಜರು!" ಎಂದ. ವರ್ತಕಸಂಘದ ಅಧ್ಯಕ್ಷನ ಈ ಮಾತು ಕೇಳಿ ರಾಜಕುಮಾರನ ತಲೆ ತಿರುಗಿತು.

ಊರ ಹೊರಗಿನ ತನ್ನ ವಿಲಾಸಿ ಮಂದಿರಕ್ಕೆ ಕರೆದೊಯ್ದ. ಊಟಕ್ಕಿಂತ ಮುಂಚೆ ಕುಯ್ಯಲಿರುವ ಕೋಳಿಯ ಜೊತೆ ಆಟವಾಡುವುದು ರಾಜಕುಮಾರನ ಹವ್ಯಾಸ. ಉದ್ದಕೋಲಿನಿಂದ ಚುಚ್ಚಿ, ಅವು ಒದರಿದರೆ-ಆ ದನಿಯನ್ನು ಅನುಕರಿಸಿ ಕೊಲ್ಲುವುದು. ಧನಪಾಲ ನಾಲ್ಕು ಕೋಳಿಬಿಟ್ಟ ಮೆಚ್ಚಿ ನಗಾಡುವುದಕ್ಕೆ ವಿಲಾಸಿನಿಯರ ಜೊತೆಗೆ ತನ್ನ ಕುಮಾರಿಯರನ್ನೂ ಬಿಟ್ಟ!

ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಯುವರಾಜನನ್ನು ಕಾಯುತ್ತಿದ್ದ ಅರ್ಥಕೌಶಲನಿಗೆ ಅವನ ಕಣ್ಣು ತಪ್ಪಿಸಿ ಧನಪಾಲನೊಂದಿಗೆ ಸಲಿಗೆ ಬೆಳೆಸಿರುವುದು ಆಘಾತಕಾರಿ ವಿಷಯವಾಗಿತ್ತು. ಇದಕ್ಕೆ ಶಿಖರಸೂರ್ಯನ ಪರೋಕ್ಷ ಪ್ರೋತ್ಸಾಹವೂ ಇದ್ದಿತೆನ್ನುವುದನ್ನು ಹೇಳಿದ್ದೇವೆ. ಆದರೆ ಧನಪಾಲನಾಗಲೇ ಪ್ರಧಾನಿಯ ಲೆಕ್ಕಗಳನ್ನು ತಲೆಕೆಳಗೆ ಮಾಡಿಬಿಟ್ಟಿದ್ದ. ತನ್ನಿಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬಳನ್ನು ಯುವರಾಜನಿಗೆ ಕೊಟ್ಟು ಅರಮನೆಯ ಬೀಗನಾಗುವ ಹುನ್ನಾರಿನಲ್ಲಿದ್ದ! ಯುವರಾಜನಿಗೆ ತನ್ನ ಕುಮಾರಿಯರನ್ನು ಪರಿಚಯಿಸಿ ಸಲಿಗೆ ಬೆಳೆಯುವಂತೆ ಮಾಡಿದ್ದ. ಆದರೆ ಚಂಡೀದಾಸನಿಗೆ ಈ ಸಂಬಂಧ ಒಪ್ಪಿಗೆಯಿರಲಿಲ್ಲ. ಧನಪಾಲನಿಗೆ ಹೇಳಲಾರದ ಗುಟ್ಟೊಂದನ್ನು ಬಚ್ಚಿಟ್ಟುಕೊಂಡು,

“ಯುವರಾಜನ ಚಂಚಲ ಸ್ವಭಾವವನ್ನು ಕಂಡ ಮೇಲೂ ಹಿಂಗಾಡುತ್ತೀಯಲ್ಲ ಮಾರಾಯಾ, ಕೊಂಚ ನಿಧಾನ ಮಾಡು. ನಿನ್ನ ಅವಸರದಲ್ಲಿ ಮಕ್ಕಳ ಜೀವನ ಹಾಳಾಗಬಾರದಲ್ಲ.”

-ಎಂದೂ ತಾಕೀತು ಮಾಡಿದ್ದ.

“ಇನ್ನೆಂಥ ನಿಧಾನವೋ ಚಂಡಿ? ಹಕ್ಕಿ ಸಿಕ್ಕಾಗಲೇ ಹಿಡಿಯೋದು ಬಿಟ್ಟು ಮುಹೂರ್ತಕ್ಕಾಗಿ ಕಾಯುತ್ತಾರೆಯೇ”

-ಎಂದು ವಾದಿಸಿದ್ದ ಧನಪಾಲ. ‘ತಪ್ಪಿಸಲಾರದ್ದನ್ನು ತಪ್ಪಿಸಲು ನಾನ್ಯಾರು?’ ಎಂದುಕೊಂಡು ಚಂಡೀದಾಸನೂ ಸುಮ್ಮನಾಗಿ ಊರು ಬಿಟ್ಟಿದ್ದ.

ಇಂಥ ಯುವರಾಜನ ಬೆನ್ನು ಹತ್ತಿ ನಾವು ಬೇರೆ ರಾಜ್ಯಗಳನ್ನ ದೋಚುವುದಿರಲಿ ಇದ್ದುದನ್ನು ಕಾಪಾಡಿಕೊಂಡು ಹೋಗುವುದೇ ಕಷ್ಟವಾಗಿದೆಯೆಂದು ವರ್ತಕರು ಬಹಿರಂಗದಲ್ಲೇ ಆಡಿಕೊಳ್ಳುವಂತಾಗಿತ್ತು. ತೆರಿಗೆ ಸಂಗ್ರಹ ಕಡಿಮೆಯಾಗಿತ್ತು. ಆದಾಯವಿಲ್ಲದೆ ತೆರಿಗೆ ಎಲ್ಲಿಂದ ಕೊಡೋಣವೆಂದು ಶ್ರೀಮಂತ ವರ್ತಕರೇ ಕೇಳುತ್ತಿದ್ದರು. ಮಹಾರಾಜ ಸ್ವರ್ಗಸ್ಥನಾಗಿ ಒಂದು ತಿಂಗಳು ಕಳೆದರೂ ಯುವರಾಜನ ಪಟ್ಟವಾಗಿರಲಿಲ್ಲ. ಪಟ್ಟಾಭಿಷೇಕಕ್ಕೆ ಚಿನ್ನ ಇಲ್ಲವೆ ಹಣ ಕಕ್ಕಬೇಕಾದವರು ವರ್ತಕರೇ ತಾನೆ? ಯುವರಾಜ ರಾಜನಾದರೆ ಕಕ್ಕಿದ ಚಿನ್ನ ವಾಪಸಾದೀತೆಂದು ಯಾವ ಭರವಸೆಯಿದೆ? ಸಧ್ಯ ಗಳಿಸಿದಷ್ಟನ್ನು ಸಕಾಲ ಬರುವತನಕ ಉಳಿಸಿಕೊಂಡು ಹೋದರೆ ಸಾಕೆಂದು ಕೆಲವರೆಂದರೆ ಇನ್ನು ಕೆಲವರು ಜೂಜಾಡಿ ಸೋತೋ ಗೆದ್ದೋ ಕಾಲಹರಣ ಮಾಡುತ್ತಿದ್ದರು.

ಯುವರಾಜನನ್ನು ಯಾರು ಅಪಹರಿಸಿದರೆಂಬ ಬಗ್ಗೆಯೂ ಜನ ಬಹಿರಂಗವಾಗಿಯೇ ಚರ್ಚಿಸುತ್ತಿದ್ದರು: ‘ಬಿಳಿಗಿರಿರಾಯನ ಬಳಿ ಯುವರಾಜ ಇರಲಿಲ್ಲವಂತೆ’ದಿಂದ ಹಿಡಿದು ರಾಜವೈದ್ಯನೇ ಮಂಕು ಮರಳು ಮಾಡಿ ಯುವರಾಜನನ್ನು ಎಲ್ಲಿಂದಲೋ (ಅಂದರೆ ಅದೆಲ್ಲಿಂದ?) ಕರೆತಂದನೆಂಬುವವರೆಗೆ ಸುದ್ದಿಗಳು ಹಬ್ಬಿದ್ದವು. ಪ್ರಧಾನಿಯ ಬೇಹುಗಾರರು ತಂದ ಮಾಹಿತಿಗಳಂತೂ ಹೆಚು ಕಡಿಮೆ ಶಿಖರಸೂರ್ಯನ ಕಡೆಗೇ ಬೆರಳು ಮಾಡಿದ್ದವು. ಈ ಬಗ್ಗೆ ಯುವರಾಜನನ್ನು ಕೇಳಿದರೆ:

“ಕನಕಪುರಿಯ ಕಾಡಿನಲ್ಲಿ ನನ್ನ ಕಣ್ಣು ಬಾಯಿ ಕಟ್ಟಿ ಎಲ್ಲಿಗೋ ಒಯ್ದರು. ಎಲ್ಲಿಟ್ಟರೆಂದು ತಿಳಿಯದು. ಅದೊಂದು ಒಂಟಿ ಗುಡಿಸಲು. ನನ್ನನ್ನು ನೋಡಿಕೊಳ್ಳಲು ಇಬ್ಬರು ಧಡಿಯರಿದ್ದರು. ಯಾವಾಗಲೂ ನನ್ನ ಕೈ ಕಾಲು ಕಟ್ಟಿ ಚೆಲ್ಲಿರುತ್ತಿದ್ದರು. ಮಾತಾಡಲು ಬಾಯಿ ತೆರೆದರೆ ಸಾಕು ಒದೆಯುತ್ತಿದ್ದರು. ಅವನ ವಿನಾ ಇನ್ನೊಬ್ಬರ ಮುಖವನ್ನು ನಾನು ನೋಡಲೇ ಇಲ್ಲ. ಆಮೇಲೆ ಪುನಃ ಕಣ್ಣು ಕಟ್ಟಿ ಇನ್ನೆಲ್ಲೋ ಚೆಲ್ಲಿದರು. ಕಣ್ಣು ತೆರೆದಾಗ ಸುತ್ತಲೂ ನಮ್ಮ ಭಂಟರಿದ್ದರು.”

ಒಂದೆರಡು ಬಾರಿ ಈ ಸುದ್ದಿಗಳನ್ನು ಹೇಳಿ ಶಿಖರಸೂರ್ಯನ ಪ್ರತಿಕ್ರಿಯೆ ತಿಳಿಯಲು ಅರ್ಥಕೌಶಲ ಪ್ರಯತ್ನಿಸಿದನಾದರೂ ಆತ ಬಾಯಿ ಬಿಟ್ಟಿರಲಿಲ್ಲ. ಚಾಡಿಯ ಮೌಖಿಕ ಬೆಲೆ ತಿಳಿದು ‘ಪ್ರಧಾನಿಯೇ ಮಾಡಿಸಿರಬಹುದೇ?’ ಅಂತ ಕೆಲವರು ಅಂತಿದ್ದಾರೆಂಬ ಸುದ್ದಿಯನ್ನು ಹಬ್ಬಿಸಲು ಶಿಖರಸೂರ್ಯ ಪ್ರಯತ್ನಿಸಿದ. ಎಷ್ಟೇ ಚಾಣಾಕ್ಷನಿದ್ದರೂ ಅರ್ಥಕೌಶಲನಿಗೂ ಕನಕಪುರಿಯಲ್ಲಿ ಶತ್ರುಗಳಿದ್ದರು. ಈ ಚಾಡಿಯನ್ನವರು ನಂಬಿದರು ಎನ್ನುವುದಕ್ಕಿಂತ ಇಷ್ಟಪಟ್ಟರೆಂದು ಹೇಳುವುದೇ ಸೂಕ್ತ.

ಕೊನೆಗೆ ಈ ಎಲ್ಲ ಗೊಂದಲಗಳ ಹತಾಶೆ, ನಿರಾಸೆಗಳ ತೋರುಬೆರಳು ತನ್ನನ್ನೇ ತೋರಿಸುತ್ತವೆಂದು, ಇವೆಲ್ಲ ಒಂದು ದಿನ ತನಗೇ ಉರುಲಾಗುವುದೆಂದು ಶಿಖರಸೂರ್ಯನಿಗೆ ಯಾವಾಗ ಖಾತ್ರಿಯಾಯಿತೋ ಆವಾಗ ಗಾಬರಿಯಾದ. ತನ್ನ ಬಳಿಯಿದ್ದ ಒಟ್ಟು ಆರು ಕಡಾಯಿ ಚಿನ್ನಕ್ಕೆ ಧಕ್ಕೆ ಬಾರದ ಹಾಗೆ, ಯಾರಿಗೂ ಸಂದೇಹವೂ ಬಾರದ ಹಾಗೆ ಬದೆಗನೇ ರಾಜಕುಮಾರನನ್ನು ಅಪಹರಿಸಿರಬಹುದೆಂದು ವಿಶ್ವಾಸವಾಗುವಂತೆ ಗುಪ್ತದಲ್ಲಿ ಪ್ರಧಾನಿಗೆ ಹೇಳಿ ಕೈ ತೊಳೆದುಕೊಂಡು ಬಿಟ್ಟ!

ಇದ್ದಕ್ಕಿದ್ದಂತೆ ಒಂದು ದಿನ ಶ್ವಾನಕೂಪಕ್ಕೆ ಬರಬೇಕೆಂದು ಪ್ರಧಾನಿ ಸೇವಕನಿಂದ ಹೇಳಿ ಕಳಿಸಿದ. ಶಿಖರಸೂರ್ಯನಿಗೆ ಆ ಬಗ್ಗೆ ಆಸಕ್ತಿ ಇರಲಿಲ್ಲ. ಆದರೆ "ಶ್ವಾನಕೂಪಕ್ಕೆ ವೈದ್ಯನನ್ನು ತಳ್ಳಿದರೆ ಹ್ಯಾಗಾದೀತು!" ಎಂದೊಮ್ಮೆ ಮಹಾರಾಣಿ ತನ್ನ ವಿಕೃತ ಊಹೆಯನ್ನು ಹೇಳಿ ಕಣ್ಣಗಲಿಸಿದ್ದ ಸುದ್ದಿಯನ್ನು ತಿಳಿದಿದ್ದ. ಆಗಲೇ ರಾಜವೈದ್ಯ ಮಹಾರಾಣಿ ಮತ್ತವಳ ಅರಮನೆಯ ದೃಷ್ಟಿಯಲ್ಲಿ ತನ್ನ ಸ್ಥಾನಮಾನಗಳೇನೆಂಬುದನ್ನು ತೂಗಿ ಅಳತೆ ಮಾಡಿಕೊಂಡಿದ್ದ. ಇದೇ ಕಾರಣಕ್ಕಾಗಿ ಅದನ್ನೊಮ್ಮೆ ನೋಡಬೇಕೆಂದು ಹೋದ.

ಬೇರೆ ರಾಜ್ಯಗಳಲ್ಲಿ ಮನರಂಜನೆಗೆ ಕುಸ್ತಿ, ದ್ವಂದ್ವಯುದ್ಧ, ಬಗೆಬಗೆಯ ಪಂದ್ಯಾವಳಿಗಳಿರುವಂತೆ ಕನಕಪುರಿಯವರಿಗೆ ಶ್ವಾನಕೂಪದ ಆಟ ವಿಶೇಷ ಮನರಂಜನೆಯಾಗಿತ್ತು. ಚಿಕ್ಕಮ್ಮಣ್ಣಿ ಆಟದ ಬಗ್ಗೆ ಕೇಳಿ ಭಯದಿಂದ ಬಿಳಿಚಿಕೊಂಡು ನಡುಗಿದ್ದಳಾದ್ದರಿಂದ ಶ್ವಾನಕೂಪಕ್ಕೆ ಬರುತ್ತಿರಲಿಲ್ಲ. ಇದೇ ಕಾರಣಕ್ಕಾಗಿ ಅವಳನ್ನು ಕರೆಯುತ್ತಲೂ ಇರಲಿಲ್ಲ. ಆದರೆ ಮಹಾರಾಣಿ ಹಾಗಲ್ಲ. ಶ್ವಾನಕೂಪಕ್ಕೆ ತಳ್ಳಿ ನಾಯಿಗಳನ್ನು ಛೂ ಬಿಡುವ ಕಾರ್ಯಕ್ರಮವನ್ನಂತೂ ಮಹಾರಾಣಿ ಮಾತ್ರವಲ್ಲದೆ ರಾಜ, ಪ್ರಧಾನಿ ಮತ್ತು ಕನಕಪುರಿಯ ಪ್ರತಿಷ್ಠಿತರು ಕೂಡ ಇಷ್ಟುಪಟ್ಟು ನೋಡುತ್ತಿದ್ದರು. ಎಲ್ಲರೂ ಎಲ್ಲರಿಗೂ ಕೇಳಿಸುವಂತೆ ಚಪ್ಪಾಳೆ ತಟ್ಟಿ ನಗುತ್ತ, ಕೇಕೆ ಹಾಕುತ್ತ ನಾಯಿಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಅಲ್ಲದೆ ಆ ಆಟದ್ದೇ ಒಂದು ಭಾಷೆಯನ್ನು ಕಟ್ಟಿಕೊಂಡಿದ್ದರು: ಆತ (ಅಂದರೆ ಸಧ್ಯ ಬೇಟೆಯಾಡುತ್ತಿರುವ ನಾಯಿ) ಪಟ್ಟು ಹಾಕಿ ಕಚ್ಚುತ್ತಾನೆ… ರಕ್ತ ಪೋಲಾಗದಂತೆ ಹೀರುತ್ತಾನೆ, ಹಿನ್ನೆಗೆತದಿಂದ ಹಿಡಿಯುತ್ತಾನೆ. ಚೆಳ್ಳುಗುರಿನಿಂದ ಇರಿಯುತ್ತಾನೆ… ಅವನು ಅಂಜುಬುರುಕ… ಹೇತಲಾಂಡಿ… ಇತ್ಯಾದಿ. ಮಹಾರಾಣಿಯಂತೂ ತನಗೆ ಪ್ರಿಯವಾದ ನಾಯಿಗಳ ಹೆಸರು ಹಿಡಿದು ಕೂಗಿ ಕತ್ತಿಗೆ ಬಾಯಿ ಹಾಕು… ಅವಳ ತಿಗ ನೋಡಿಕೊ… ಇತ್ಯಾದಿ ಅಂದು ನಾಯಿಗಳಿಗೆ ನಿರ್ದೇಶನ ನೀಡುತ್ತಿದ್ದಳು. ನಾಯಿಗಳು ಅವಳು ಹೇಳಿದ ಹಾಗೇ ಮಾಡಿ, ಬಾವಿಯಲ್ಲಿಯ ಹೆಂಗಸು ಕಿರಿಚಿದರೆ ಇವಳು ಚಪ್ಪಾಳೆ ತಟ್ಟಿ ನಕ್ಕು 'ಆತ ನಾನು ಹೇಳಿದಂತೆ ಕೇಳಿದ್ದರಿಂದ ಅವಳು ಬಲಿಯಾದಳು' ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದಳು.

ಶ್ವಾನಕೂಪವೆಂದರೆ ಮೂವತ್ತಡಿ ವ್ಯಾಸದ, ಅಷ್ಟೇ ಆಳದ ಒಂದು ಬಾವಿ. ಕೈದಿಗಳನ್ನು ಅದರಲ್ಲಿ ತಳ್ಳಿ ನಾಯಿಗಳಿಂದ ಬೇಟೆಯಾಡಿಸುವುದೇ "ಶ್ವಾನಕೂಪದ ಆಟ" ತಳದಲ್ಲಿ ಸ್ವಚ್ಛವಾದ ಮಳಲನ್ನು ಹಾಕಿದ್ದು ಬೇಟೆಯಾಡುವ ನಾಯಿಗಳಾಗಲಿ, ಜೀವದಾಸೆಗೆ ತಪ್ಪಿಸಿಕೊಂಬ ಕೈದಿಗಳಾಗಲಿ ವೇಗವಾಗಿ ಚಲಿಸಲಾಗುತ್ತಿರಲಿಲ್ಲ. ಒಳಗಿನವರು ಗೋಡೆ ಹತ್ತಿ ಪಾರಾಗದಂತೆ ಬಾವಿಯ ಎತ್ತರ ಗೋಡೆಗಳನ್ನು ನುಣ್ಣಿಸಲಾಗಿದೆ. ತಳದಲ್ಲಿ ಬಿಲದಂಥ ಒಂದು ಕಿಂಡಿ, ಒಂದು ಬಾಗಿಲು ಇವೆ. ಅವನ್ನು ಕಬ್ಬಿಣದ ಶಲಾಕೆಯಿಂದ ಮಾಡಲಾಗಿದ್ದು, ಬಿಲದಿಂದ ನಾಯಿಗಳನ್ನೂ ಬಾಗಿಲಿನಿಂದ ಕೈದಿಗಳನ್ನೂ ಬಾವಿಗೆ ಬಿಡಲಾಗುತ್ತದೆ. ನಾಯಿ ಮತ್ತು ಕೈದಿ ಬಾವಿಗೆ ಬಂದೊಡನೆ ಎರಡರ ಕದ ಮುಚ್ಚಿ ಭದ್ರಪಡಿಸಲಾಗುತ್ತದೆ.

ಬಾವಿಯ ಸುತ್ತ ಮೇಲ್ಭಾಗದಲ್ಲಿ ಎರಡಡಿ ಎತ್ತರದ ಪೌಳಿ ಕಟ್ಟಿದ್ದು ಅದರಗುಂಟ ರಾಜ ಮತ್ತವನ ಪರಿವಾರ ಕೂರಲಿಕ್ಕೆ ಮರದ ಆಸನಗಳಿವೆ. ಉಳಿದಂತೆ ಪ್ರತಿಷ್ಠಿತ ರಸಿಕರು ಕೂರಲು ರಾಜಪರಿವಾರದ ಎದುರು ಉಳಿದವರು ಎಷ್ಟೇ ಸಂಕೋಚಗಳನ್ನು ಅಭಿನಯಿಸಿದರೂ ದೃಶ್ಯ ಕ್ರೂರ ಅಥವಾ ರಮಣೀಯವಾಗಿದ್ದಾಗ ಮಾತ್ರ ಎಲ್ಲರೂ ರಾಜನೆದುರಿನ ನಡಾವಳಿ ಮರೆತು ಉತ್ಸಾಹದಿಂದ ಕಿರುಚುತ್ತಾರೆ.

ಈ ದಿನ ಕಾರ್ಯಕ್ರಮ ಶುರುವಾಗುವ ಮುನ್ನ ಶ್ವಾನಕೂಪದ ಕಲ್ಲಿನ ಆಸನಗಳಲ್ಲಿ ಪ್ರತಿಷ್ಠಿತರು, ಮಾಂಡಳಿಕರು ಆಸೀನರಾಗಿ ರಾಜಕುಟುಂಬದ ಆಗಮನಕ್ಕಾಗಿ ಕಾಯುತ್ತಿದ್ದರು. ಕೆಲವರು ಇಂದಿನ ಬೇಟೆ ಯಾರೆಂದು ತಂತಮ್ಮಲ್ಲಿ ಚರ್ಚಿಸುತ್ತಿದ್ದರು. ಅಷ್ಟರಲ್ಲಿ ಕಹಳೆ ಮೊಳಗಿ ವಂದಿಮಾಗಧರು ಬಿರುದಾವಳಿ ಹೊಗಳಿ ಕೂತಿದ್ದವರೆಲ್ಲ ಎದ್ದು ನಿಂತರು. ಯುವರಾಜ ಮತ್ತು ಪ್ರಧಾನಿಯ ಜೊತೆಗೆ ಮಹಾರಾಣಿ ಬಂದಳು. ಅವರೊಂದಿಗೆ ಅಪರೂಪಕ್ಕೆ ಶಿಖರಸೂರ್ಯನೂ ಬಂದ. ಎದ್ದು ನಿಂತಿದ್ದವರೆಲ್ಲರೂ ಬಾಗಿ ಗೌರವ ಕೊಟ್ಟು, ಅದನ್ನು ಮಹಾರಾಣಿ ಸ್ವೀಕರಿಸಿದ ಮೇಲೆ ಕೂತರು. ಪ್ರಧಾನಿ ಶಿಖರಸೂರ್ಯನನ್ನು ತನ್ನ ಪಕ್ಕದಲ್ಲೇ ಕುಳ್ಳಿರಿಸಿಕೊಂಡ. ಇಬ್ಬರೂ ಅದು ಇದು ಮಾತಾಡುತ್ತ ಕೂತರು.

ಸ್ವಲ್ಪ ಸಮಯವಾದ ನಂತರ ಎಲ್ಲವೂ ಸಿದ್ಧವಾಗಿದೆಯೆಂದು ಸೂಚನೆ ಬಂದಮೇಲೆ ಮಹಾರಾಣಿ ಎಲ್ಲರ ಕಡೆ ಕೈ ಬೀಸಿ ತೆಂಗಿನ ಕಾಯಿ ಒಡೆದು ಸುರುಮಾಡಬಹುದೆಂದು ಅಪ್ಪಣೆ ಕೊಟ್ಟಳು. ಶ್ವಾನಕೂಪದ ತಳದಲ್ಲಿರುವ ಬಿಲದ ಬಾಗಿಲು ತೆರೆಯಿತು. ಒಳಗಿನಿಂದ ಜವಾರಿ ಹೋರಿಗಳಂಥ ಎಂಟು ಕರೀ ನಾಯಿಗಳು ಗೇಣುದ್ದ ಕೆಂಪು ನಾಲಗೆ ಚಾಚಿಕೊಂಡು ಬಾವಿಗೆ ಬಂದವು! ಎತ್ತರವಾಗಿ ಪ್ರಮಾಣಬದ್ಧ ಮೈಕಟ್ಟಿನ, ಕರಿಯ ಮಿಂಚುಗಳಂತೆ ಮಿರುಗುವ ನಾಯಿಗಳು ಸಾಣೆಹಿಡಿದ ಉಕ್ಕಿನ ನಾಯಿಗಳಂತೆ ಕಂಡವು. ಬಾವಿಯ ತುಂಬ ಅಲೆದಾಡಿ ಬೇಟೆ ಸಿಗದೆ ಪ್ರೇಕ್ಷಕರ ಕಡೆ ನೋಡಿ ಒಂದೆರಡು ಹೆಜ್ಜೆಗಳನ್ನು ಮೂಸಿ ನೋಡಿ ಬೊಗಳಿದವು. ಹಿರಿದ ನಾಲಗೆಗಳಿಂದ ಜೊಲ್ಲು ಸುರಿಸುತ್ತ ಚಂಚಲ ಕಣ್ಣುಗಳಿಂದ ಬೇಟೆಯನ್ನು ಹುಡುಕತೊಡಗಿದವು. “ಪಾದರಸದಂತೆ ನಿಂತಲ್ಲಿ ನಿಲ್ಲದೆ ಬೇಟೆ ಕಾಣದೆ ಚಡಪಡಿಸುವ ನಾಯಿಗಳನ್ನು ನೋಡುವುದೇ ಚಂದ”ವೆಂದು ಮಹಾರಾಣಿ ಕಣ್ಣಗಲಿಸಿ ಶಿಖರಸೂರ್ಯನ ಕಡೆಗೆ ನೋಡಿ ಅಂದಳು. ಪ್ರಧಾನಿ “ಹೌದು ಮಹಾರಾಣಿ” ಎಂದು ಸಮ್ಮತಿ ಸೂಚಿಸಿದ.

ಅಷ್ಟರಲ್ಲಿ ಇನ್ನೊಂದು ಬಾಗಿಲಿನಿಂದ ಹಿಂಗೈ ಕಟ್ಟಿದ, ಕಣ್ಣು, ಮುಖ ಕಾಣದಂತೆ ಮುಖಕ್ಕೆ ಬಟ್ಟೆ ಕಟ್ಟಿದ, ಸೊಂಟದ ಮೇಲೆ ಮಾತ್ರ ಬಟ್ಟೆ ಸುತ್ತಿಕೊಂಡಿದ್ದ ಒಬ್ಬ ದಾಂಡಿಗನನ್ನು ಬಾವಿಗೆ ತಳ್ಳಿ ಬಾಗಿಲಿಕ್ಕಿಕೊಂಡಿತು. ಕಣ್ಣು ಮುಚ್ಚಿ ತೆಗೆಯುವಷ್ಟರಲ್ಲಿ ಎಂಟೂ ನಾಯಿಗಳು ಕೈದಿಯ ಮೇಲೆ ಹಾರಿದವು. ಒಂದು ಅವನ ಕತ್ತಿಗೇ ಬಾಯಿ ಹಾಕಿ ಮುಖಕ್ಕೆ ಕಟ್ಟಿದ್ದ ಬಟ್ಟೆಯನ್ನು ಹರಿದು ಹಾಕಿತು. ಇನ್ನೊಂದು ಅವನ ಕೈಗೆ ಬಾಯಿ ಹಾಕಿ ಎಡಗೈ ರಟ್ಟೆಯನ್ನೇ ಹರಿದು ಹಾಕಿತು. ಮತ್ತೊಂದು ಬಾಯಿ ಹಾಕಿದಾಗ ಹಿಂಗೈ ಕಟ್ಟಿದ ಹಗ್ಗವೇ ಬಾಯಿಗೆ ಬಂದು ಕೈ ಸ್ವತಂತ್ರವಾದವು. ಅದೇ ಅವಕಾಶಕ್ಕಾಗಿ ಕಾಯುತ್ತಿದ್ದ ಕೈದಿ ತನ್ನೆದುರಿಗೆ ಹಾರಿಬಂದ ಒಂದು ನಾಯಿಯ ಎರಡೂ ಮುಂಗಾಲುಗಳನ್ನು ಹಿಡಿದು ಮುರಿದುಬಿಟ್ಟ! ಅದರ ಮುರಿದ ಸೊಟ್ಟ ಕಾಲುಗಳನ್ನೇ ಹಿಡಿದು ಇಡೀ ನಾಯಿಯನ್ನೇ ಆಯುಧದಂತೆ ಬೀಸುತ್ತ ಉಳಿದ ನಾಯಿಗಳ ಮೇಲೆ ಆಕ್ರಮಣ ಮಾಡಿ ಹೊಡೆಯತೊಡಗಿದ! ಕಾಕು ಕೇಕೆಗಳು ಮೊಳಗಿದವು. ಪ್ರೇಕ್ಷಕರು ಹೋ ಎಂದು ಮೆಚ್ಚಿಕೊಂಡು ಎದ್ದು ನಿಂತು ಚಪ್ಪಾಳೆ ತಟ್ಟುತ್ತಿರಲು ಮಹಾರಾಣಿ “ಹುಲಿ ಹುಲಿ ಎಂದೊಂದು ನಾಯಿಯನ್ನು ಕರೆದು ಅವನ ಕಾಲು ಹಿಡಿ” ಎಂದು ಅಪ್ಪಣೆಯ ಕೂಗಿದಳು. ಆತ ಉರಿಯುವ ಕಂಗಳಿಂದ ಮ್ಯಾಲೆ ನೋಡಿದ. ಆಗಲೇ ಆತ ಬದೆಗನೆಂದು ಗೊತ್ತಾಗಿ, ಮಹಾರಾಣಿ ಮತ್ತು ಯುವರಾಜನನ್ನು ಬಿಟ್ಟು ಉಳಿದರೆಲ್ಲ ಸ್ತಬ್ಧರಾದರು!

ಶಿಖರಸೂರ್ಯ ತಾನೆಲ್ಲಿದ್ದೇನೆಂಬುದನ್ನೇ ಮರೆತು ಬಿಟ್ಟ. ಅವಮಾನದಿಂದ ಅವನ ಮುಖ ಕರ್ರಗಾಯಿತು. ಯುವರಾಜನನ್ನು ಕದ್ದುಕೊಂಡು ಹೋದವನು ಬದೆಗನೇ ಎಂದು ಹೇಳಿದ್ದು ತಾನೇ ಹೌದಾದರೂ ಅವನಿಗೆ ಇಂಥ ಶಿಕ್ಷೆ ಕೊಟ್ಟಾರೆಂದು ಊಹಿಸಿರಲಿಲ್ಲ. ಅಥವಾ ಇಂಥ ಶಿಕ್ಷೆ ಕೊಡುವ ಮೊದಲು ತನ್ನನ್ನೊಂದು ಮಾತು ಕೇಳಬಹುದಿತ್ತು ಎನ್ನಿಸಿ ಇರಿವ ಕಣ್ಣಿಂದ ಮಹಾರಾಣಿಯನ್ನು ನೋಡಿದ. ಇಡೀ ಅರಮನೆ ತನಗೆ ಎದುರಾಗಿದೆಯೆಂದು ಪ್ರಥಮ ಬಾರಿ ಅರಿವಾಗಿ ಬಿಟ್ಟಿತು. ಈವರೆಗಿನ ತನ್ನ ಕನಸುಗಳೆಲ್ಲ ಭ್ರಮೆಗಳೆಂದು ಗೊತ್ತಾಗಿ ಆಸನದ ಮೇಲೆ ಕುಸಿದ. ಪ್ರಧಾನಿಯನ್ನು ತಿರಸ್ಕಾರದಿಂದ ನೋಡಿ ತಕ್ಷಣ ತನ್ನನ್ನು ತಾನು ನಿಯಂತ್ರಿಸಿಕೊಂಡು ಒಣ ಮುಗುಳು ನಗೆ ಬೀರಿದ. ಉಳಿದವರು ಕೂಪದಲ್ಲಿ ನಡೆಯುತ್ತಿರುವ ಬದೆಗ ಮತ್ತು ನಾಯಿಗಳ ಹೋರಾಟ ನೋಡಿ ಆನಂದ ಪಡುತ್ತಿದ್ದರೆ ಪ್ರಧಾನಿ ಒಂದು ಕಣ್ಣಿನಿಂದ ಇವನನ್ನೇ ಗಮನಿಸುತ್ತಿದ್ದ.

ಸೇಡು ತೀರಿತೆಂದು ಯುವರಾಜ ಕಾಲುಗಳನ್ನು ನೆಲಕ್ಕೆ ಅಪ್ಪಳಿಸುತ್ತ ಥೈ ಥೈ ಕುಣಿದಾಡಿದ. ವರ್ತಕರಲ್ಲಿ ಕೆಲವರು ಎದ್ದುನಿಂತು ಎರಡೂ ಕೈ ಎತ್ತಿ ಬದೆಗನ ಪರಾಕ್ರಮವನ್ನು ಮೆಚ್ಚಿ ಸ್ಪಷ್ಟ ಶಬ್ದಗಳಲ್ಲೇ ಪ್ರೋತ್ಸಾಹಿಸುತ್ತಿದ್ದರೆ ಮಹಾರಾಣಿ ನಾಯಿಗಳಿಗೆ ನಿರ್ದೇಶನ ನೀಡಿ ಪ್ರೋತ್ಸಾಹಿಸುತ್ತಿದ್ದಳು. ಬದೆಗ ಆಗಲೇ ಇನ್ನೊಂದು ನಾಯಿಯ ನಾಲ್ಕು ಕಾಲು ಹಿಡಿದೆತ್ತಿ ಗೋಡೆಗೆ ನಾಲ್ಕು ಬಾರಿ ಅಪ್ಪಳಿಸಿ ಕೊಂದು ಹಾಕಿದ್ದ. ಉಳಿದವು ಅವನ ಬಳಿ ಬರಲು ಹೆದರುತ್ತ, ಅಸಹಾಯಕತೆಯಿಂದ ಕುಂಯ್‌ಗುಡುತ್ತ ಬಿಲದ ಬಾಗಿಲ ಬಳಿ ಸೇರಿದ್ದವು. ಆಗಲೇ ಬದೆಗನೂ ರಕ್ತದ ಅತಿ ಸೋರಿಕೆಯಿಂದ ನಿಶ್ಯಕ್ತನಾಗಿದ್ದ. ಮೈತುಂಬ ರಕ್ತ ಸುರಿಯುತ್ತಿತ್ತು. ಎಡಗೆನ್ನೆ, ಎಡಗಿವಿ ಹರಿದು ಕಿವಿ ಜೋತಾಡುತ್ತಿತ್ತು. ಸೊಂಟದ ಮೇಲಿನ ಬಟ್ಟೆ ಕಳಚಿ ಬತ್ತಲಾಗಿದ್ದ. ಶಿಖರಸೂರ್ಯನ ಕಡೆಗೆ ಬೆರಳು ಚಾಚಿ “ಲೇ ನಾಯಿ ಥೂ!” ಎಂದುಗಿದು ಅವನ ಕಡೆಗೆ ಹಿಡಿ ಮಳಲನ್ನ ಎಸೆದ. ಅದು ತಪ್ಪಿ ಯುವರಾಜನ ಕಣ್ಣಿಗೆ ಬಿದ್ದು ಆತ “ಬೇರೆ ನಾಯಿ ಬಿಡ್ರೋ”

ಎಂದು ಕಿರುಚಿದ. ಇನ್ನಷ್ಟು ಮಳಲು ತಗೊಂಡು ಕೋಪತಾಪಗಳಿಂದ ಮತ್ತೆ ಎಸೆದ. ಅದು ನೇರ ಮಹಾರಾಣಿಯ ಕಣ್ಣಿಗೇ ಬಿದ್ದು ಆಕೆ ಕಿಟಾರನೇ ಕಿರಿಚಿ ಮುಖ ಮುಚ್ಚಿಕೊಂಡಳು. ಉಳಿದವರು ಹೆದರಿ ಸ್ಥಳ ಬಿಟ್ಟು ದೂರ ಸರಿದರು.

ಪ್ರಧಾನಿ ಅಲ್ಲೇ ನಿಂತಿದ್ದ. ಅಷ್ಟರಲ್ಲಿ ಕಂದು ಬಣ್ಣದ, ಹಸುವಿನ ಗಾತ್ರದ ಹತ್ತು ನಾಯಿಗಳನ್ನು ಬಿಲದಿಂದ ಬಿಟ್ಟರು. ಅವು ವಿಕಾರವಾಗಿ ಬಾವಿ ಪ್ರತಿಧ್ವನಿಸುವಂತೆ ಒದರುತ್ತ ಏರಿಬಂದುದೇ ಆಯ್ತು, ಬದೆಗ ಜೀವದ ಆಸೆ ಬಿಟ್ಟು ವೀರಾವೇಶದಿಂದ ಕಿರಿಚಿ ಅವುಗಳ ಮೇಲೆ ಹಾರಿದ. ಹುಲಿಯಂಥ ನಾಯಿಗಳು ಅವನ ಮೇಲೆ ಮುಗಿಬಿದ್ದು ಎದುರಿಸಲಾರದೆ ಬದೆಗ ಅಂಗಾತವಾಗಿ ಕೆಳಗೆ ಬಿದ್ದ. ನಾಯಿಗಳು ಅವನ ಅಂಗಾಂಗಗಳನ್ನು ಎಳೆದೆಳೆದು ಹರಿದು ಹಾಕಿದವು. ಮಹಾರಾಣಿಯಿನ್ನೂ ಹುಚ್ಚಿಯಂತೆ ಕಿರುಚುತ್ತಿದ್ದಳು. ಆಗಲೇ ಶಿಖರಸೂರ್ಯ ಎಲ್ಲರೂ ನೋಡನೋಡುತ್ತಿರುವಂತೆ ಬಾವಿಯಲ್ಲಿ ಜಿಗಿದ! ಇಡೀ ಪ್ರೇಕ್ಷಕ ಸಮುದಾಯ ಹೋ ಎಂದೊದರಿ ಬಾವಿಯ ಸುತ್ತ ಮುಗಿಬಿದ್ದು ಸ್ತಬ್ಧವಾಯಿತು.

ನಾಯಿಗಳು ಬದೆಗನನ್ನು ಬಿಟ್ಟು ಶಿಖರಸೂರ್ಯನನ್ನು ನೋಡುತ್ತ ನೋಡುತ್ತ ಬಿಲದ ಕಡೆಗೆ ಸರಿದು ಹಿಂಡಾಗಿ ನಿಂತವು. ಕೆಲವು ಬಿಲದೊಳಗೆ ನುಗ್ಗುವುದಕ್ಕೂ ನೋಡಿದವು. ಆದರೆ ಒಂದು ನಾಯಿಯೂ ಶಿಖರಸೂರ್ಯನ ಬಳಿಗೆ ಸುಳಿಯಲಿಲ್ಲ; ಬೊಗಳಲಿಲ್ಲ! ಅವನೇ ಸಾಕಿದ ನಾಯಿಗಳಂತೆ ಬಾಲ ಅಲ್ಲಾಡಿಸುತ್ತ, ಆದರೆ ಅವನ ದೃಷ್ಟಿಯಿಂದಲೂ ತಪ್ಪಿಸಿಕೊಳ್ಳುತ್ತ, ಕ್ಷೀಣಸ್ವರದಲ್ಲಿ ಕುಂಯ್‌ಕುಂಯ್ ಮಾಡುತ್ತ ಬಿಲದ ಬಳಿ ಅದು ಮುಚ್ಚಿದ್ದರಿಂದ ಗುಂಪುಗೂಡಿ ನಿಂತವು. ಇನ್ನೊಂದು ಮನರಂಜನೆಯನ್ನು ಬಯಸಿದ್ದ ಪ್ರೇಕ್ಷಕರಿಗೆ ನಿರಾಸೆಯಾಯ್ತು. ಪ್ರಧಾನಿ, ಮೊದಲಾಗಿ ಎಲ್ಲರೂ ಪವಾಡ ಕಂಡವರಂತೆ ಕಣ್ಣು ಬಾಯಿ ಬಿಟ್ಟುಕೊಂಡು ನಿಂತರು. ಮಹಾರಾಣಿ ಮಾತ್ರ 'ಛೂ' ಎಂದು 'ಹುಯಿಲು ಹುಯಿಲು' ಎಂದು ನಾಯಿಗಳ ಹೆಸರುಗೊಂಡು ಬೇಟೆಯಾಡಲು ಪ್ರೋತ್ಸಾಹಿಸಿದಳಾದರೂ ನಾಯಿಗಳು ಕುಂಯ್‌ಗುಡುತ್ತ ದೂರ ಸರಿದವಷ್ಟೆ. ಶಿಖರಸೂರ್ಯ ಮಹಾರಾಣಿಯನ್ನ, ಪ್ರಧಾನಿಯನ್ನ ಕ್ರೂರದೃಷ್ಟಿಯಿಂದ ಇರಿದ. ಪ್ರೇಕ್ಷಕರ್ಯಾರೂ ಬೆಂಬಲಿಸಲಿಲ್ಲವಾಗಿ ಮಹಾರಾಣಿ ಅವರ ಮುಖ ನೋಡಿ ತಂತಾನೇ ಸುಮ್ಮನಾದಳು.

ಬದೆಗನಲ್ಲಿ ಶಕ್ತಿ ಉಳಿದಿರಲಿಲ್ಲಿ. ಇಡೀ ಮೈ ರಕ್ತದಲ್ಲಿ ಅದ್ದಿತೆಗೆದಂತಾಗಿತ್ತು. ಅವನ ಎಡಗಿವಿ, ಗುಪ್ತಾಂಗಗಳು ಹರಿದು ಜೋತು ಬಿದ್ದಿದ್ದವು. ಹೊಟ್ಟೆಯ ಕರುಳು ಕೂಡ ಹೊರಬಂದು ಜೋತಾಡುತ್ತಿತ್ತು. ಶಿಖರಸೂರ್ಯ ತನ್ನ ಭುಜದ ಮೇಲಿನ ಬಟ್ಟೆಯನ್ನು ಬದೆಗನಿಗೆ ಹೊದಿಸಿ ಕನಕಪುರಿಯ ಹೊಸದರ್ಶನದೊಂದಿಗೆ ಹೊರಬಂದ.

ನಾಯಿಗಳು ಶಿಖರಸೂರ್ಯನನ್ನು ಕಚ್ಚಲಿಲ್ಲವಾಗಿ ಎಲ್ಲರಿಗೂ ಹೊಯ್ಕಾದರೂ ಶಿಖರಸೂರ್ಯನಿಗಾಗಲಿಲ್ಲ. ಯಾಕೆನೆ ವಿದ್ಯುಲ್ಲತೆಗಾಗಿ ನಿತ್ಯ ವಿಷಸೇವನೆ ಮಾಡಿ ಸಾತ್ಮ್ಯ ಸಾಧಿಸಿದವನಾದ್ದರಿಂದ ನಾಯಿಗಳು ಅವನ ಬಳಿ ಸುಳಿಯುವುದಿಲ್ಲವೆನ್ನುವುದು ಅವನಿಗೆ ಗೊತ್ತಿತ್ತು. ಹಾಗಿದ್ದರೆ ಬದೆಗನನ್ನ ಆತ ಉಳಿಸಬಹುದಿತ್ತಲ್ಲ ಎಂದರೆ ನಾಲ್ಕು ಕಡಾಯಿ ಚಿನ್ನದ ಗುಟ್ಟು ಉಳಿಸಲಿಕ್ಕಾದರೂ ಬದೆಗ ಸಾಯಲೇಬೇಕಾಗಿತ್ತು. ಅವನು ಸಾಯುವನೆಂದು ಖಾತ್ರಿಯಾದಾಗ ಮಾತ್ರ ರಾಜವೈದ್ಯ ಬಾವಿಗೆ ಜಿಗಿದ! ಬಾವಿಗೆ ಜಿಗಿದು ನಿಮ್ಮ 'ನಾಯಿಗಳಿಂದ ನನ್ನನ್ನು ಮುಟ್ಟುವುದು ಅಸಾಧ್ಯವೆಂದು ತೋರಿಸಿದ. ಆದರೆ ಬದೆಗ 'ಲೇ ನಾಯಿ' ಎಂದು ಇವನನ್ನು ಕುರಿತು ಕಿರಿಚಿದ್ದನ್ನು ಪ್ರಧಾನಿ ಗಮನಿಸಿದ್ದ!

## ಮೂವತ್ತೆಂಟು

ಇಂತಿಪ್ಪ ಸ್ಥಿತಿಯಲ್ಲಿ ತೆರೆಗಳಿಲ್ಲದ ಕೆರೆಯಲ್ಲಿ ಕಲ್ಲು ಚೆಲ್ಲಿದಂತೆ ಅರ್ಥಕೌಶಲ ಮನೆಗೆ ಚಂಡೀದಾಸ ಬಂದ! ಬೇಸಿಗೆಯ ದಿನಗಳಾದ್ದರಿಂದ ಮನೆಯ ಹೊರಗೆ ಕಟ್ಟೆಯ ಮೇಲೆ ಅರ್ಥಕೌಶಲ ಕುಂತಿದ್ದ. ಅನತಿ ದೂರದಲ್ಲಿ ಕಟ್ಟುಮಸ್ತಾದ, ಕುಬ್ಜಾಕೃತಿಯ ವ್ಯಕ್ತಿಯೊಬ್ಬ ಅಗಲವಾದ ಬೆನ್ನಿನ ಕುದುರೆಯ ಮೇಲೆ ಕೂತು ತನ್ನ ಮನೆಯ ಕಡೆಗೇ ಬರುತ್ತಿರುವುದನ್ನು ನೋಡಿ ಪ್ರಧಾನಿ ದಿಗಿಲುಗೊಂಡ. ಗೋದಿ ಬಣ್ಣದ, ಗಿಡ್ಡ ಮೂಗಿನ, ಸೂರ್ಯನ ಬಿಸಿಲಿನಲ್ಲಿ ಕಬ್ಬಿಣದ ಅಚ್ಚಿನಂತೆ ಕಾಣುತ್ತಿದ್ದ ಮುಖದ ವ್ಯಕ್ತಿ ನೆರಿಗೆ

ನೆರಿಗೆಯಾಗಿ ನೇತಾಡುವ ದೊಗಳೆ ಅಂಗಿ ಹಾಕಿಕೊಂಡಿದ್ದ. ದಟ್ಟಕೂದಲ ಭಾರಕ್ಕೆಂಬಂತೆ ತಲೆ ಹಿಂದಕ್ಕೆ ವಾಲಿತ್ತು. ಉಬ್ಬಿದ ಕೆನ್ನೆ ಮತ್ತು ಹುಲುಸಾದ ಹುಬ್ಬಿನ ಕೂದಲ ಮಧ್ಯೆ ಕಣ್ಣು ಹುದುಗಿ ಹೋಗಿದ್ದವು. ಆಗಾಗ ಉಬ್ಬು ಹಲ್ಲುಗಳನ್ನು ಪ್ರದರ್ಶಿಸುತ್ತ ಪೊದೆಗೂದಲಲ್ಲಿ ಬೆರಳಾಡಿಸುತ್ತಿದ್ದ. ಸಂಗೀತ ತಾಳಲಯಗಳಿಗೆ ತಕ್ಕಂತೆ ಹೆಜ್ಜೆ ಹಾಕುತ್ತಿದ್ದ ತನ್ನ ಉತ್ತಮ ತಳಿಯ ಕುದುರೆಯ ಪಕ್ಕೆಯ ಚೋದಕಗಳನ್ನೊತ್ತಿ ಮುಂದೆ ಮುಂದೆ ಬರುತ್ತಿದ್ದ ಅವನನ್ನು ನೋಡಿ ಅರ್ಥಕೌಶಲ ಚಕಿತನಾದ. ಆದರೆ ಅದನ್ನು ತೋರಿಸಿಕೊಳ್ಳದೆ ಮುಗುಳು ನಗುತ್ತ ಎದ್ದು “ಬರಬೇಕು ಬರಬೇಕು ವೈದ್ಯ ಮಹಾಶಯ ಬರಬೇಕು” ಎಂದು ಕಟ್ಟೆಯಿಂದ ಕೆಳಗಿಳಿದು ಬಂದು ಆಗಷ್ಟೆ ಕುದುರೆಯಿಂದಿಳಿದು ನಿಂತಿದ್ದ ಚಂಡೀದಾಸನ ಕೈ ಹಿಡಿದು ಕಟ್ಟೆಯ ಮೇಲೆ ಕರೆದೊಯ್ದು ಕೂರಿಸಿದ. “ಲೇ ಯಾರೇ ಅಲ್ಲಿ? ಬಾಯಾರಿಕೆಗೆ ತಗಂಬಾರೆ” ಎಂದು ಸೇವಕಿಗೆ ಆಜ್ಞೆ ಮಾಡಿದ. ಸೇವಕಿ ಬರುವುದು ತಡವಾಯಿತೆಂದು ಬಾಗಿಲಿಗೆ ಹೋಗಿ ನಿಂತ.

ಒಬ್ಬಳು ಗಿಂಡಿಯಲ್ಲಿ ನೀರು ತಂದುಕೊಟ್ಟಳು. ಚಂಡೀದಾಸ ನೀರು ತಗೊಂಡು ಕೈಕಾಲಿನ ಪುಡಿಧೂಳು, ಮೋರೆಯ ಜಿಡ್ಡು ಬೆವರು ತೊಳೆದು ಕಳೆದ. ಆಮೇಲೆ ಪುನಃ ಕಟ್ಟೆಯೇರಿ ಹಾಸಿದ ಚಿತ್ತಾರದ ಕಂಬಳಿಯ ಮೇಲೆ ಕೂತ. ಇನ್ನೊಬ್ಬಳು ಬಟ್ಟಲಲ್ಲಿ ಬೆಲ್ಲ, ಬೆಳ್ಳಿಗಿಂಡಿಯಲ್ಲಿ ಹಾಲು ಹಿಡಿದುಕೊಂಡು ಬರುವಾಗ ಹೊಸ್ತಿಲ ಮೇಲುಪಡಿ ತಾಗಿತು. ನೋವಿಗೆ ಕೆಳಗಿನ ಹೊಸ್ತಿಲು ಎಡವಿದಳು. “ಹೊಸ್ತಿಲ ಮೇಲುಪಡಿ ತಾಗುವುದಾದರೆ ಹೆಣ್ಣೇ ತುಸು ಬಾಗಿ ಬರಬೇಕು; ಹೊಸ್ತಿಲು ಎಡವಿದರೆ ಕಾಲೆತ್ತಿ ನಡೆಯಬೇಕು.” ಎಂದು ಹೇಳಿ ಚಂಡೀದಾಸನಿಗೆ ಬಾಯಾರಿಕೆಗೆ ಕೊಟ್ಟ. ಬಾಳೆಯೆಲೆಯಲ್ಲಿ ಚಿಗುರು ವೀಳ್ಯ, ಎಲೆ ಅಡಿಕೆ ಹೋಳು ಕೊಟ್ಟ. ಎಲಡಿಕೆ ಹಂಚಿ ತಿಂಬಾಗ ಆ ಸುದ್ದಿ ಈ ಸುದ್ದಿ ಪಕ್ಕದ ಹಲವು ಸುದ್ದಿಗಳ ಮಾತಿಗೆ ತೊಡಗಿದರು. ಚಂಡೀದಾಸ ಹೇಳಿದ:

“ಅಯ್ಯಾ ಪ್ರಧಾನರೇ ನಾನೆಂದೂ ಒಳಗೊಂದು ಹೊರಗೊಂದು ಆಡಿದವನಲ್ಲ ಹೌದೊ?”

“ಹೌದು”

“ನಿಮ್ಮ ಮುಂದೊಂದು ಹಿಂದೊಂದು ಆಡಿದವನಲ್ಲ; ಹೌದೊ?”

“ಹೌದು”

“ನೀವು ಈ ಎರಡೂ ಆಡಬಲ್ಲರಿ; ಅದು ನಿಮ್ಮ ಕರ್ಮ. ನನ್ನದಂತೂ ಇಷ್ಟೆ ಕಣ್ರಪ್ಪ. ಪಟ್ಟಣಶೆಟ್ಟರಲ್ಲಿಗೆ ಹೋಗಿದ್ದೆ. ಅವರಿಲ್ಲ, ಈಗ ನಾನು ಹೋಗಬೇಕಾದ್ದು...”

“ಗುಣಶೀಲಳಲ್ಲಿಗೆ,”

“ಅವಳೂ ಇಲ್ಲ. ಯಾವನೋ ನಿಮ್ಮ ರಾಜವೈದ್ಯನನ್ನು ಕಟ್ಟಿಕೊಂಡು ಊರು ಬಿಟ್ಟಳಂತಲ್ಲ ಮಾರಾಯ, ನಿಜವೋ?”

“ಹಾಗಲ್ಲ, ನಮ್ಮ ರಾಜವೈದ್ಯ ಅವಳ ಮಗಳನ್ನು ಇಷ್ಟಪಟ್ಟದ್ದು ನಿಜ...”

“ಇಷ್ಟಪಡಬಾರದಲ್ಲ! ಅವಳು ವಿಷಕನ್ಯೆ ಅಲ್ಲವೊ?”

“ಅವನೂ ನಿನ್ನಂಥ ಹಟಮಾರಿ ವೈದ್ಯನೇ! ಏನೇನು ಮಾಡಿಕೊಂಡಿದ್ದಾನೋ ತಿಳಿಯದು. ಆ ಮನೆತನದೊಂದಿಗೆ ಅವನ ಸಲುಗೆಯಂತೂ ಇದೆ.”

“ಆಯ್ತು; ನಿಮ್ಮೊಂದಿಗೆ ಎರಡು ಮಾತಾಡೋದಿದೆ. ಆಗಬಹುದೋ?”

“ಆದೀತು, ಒಳಗೆ ಹೋಗೋಣವ?”

“ಇಲ್ಲೇ ಕೇಳಿ. ಎರಡೇ ಎರಡು ಮಾತಿವೆ. ಒಂದು ನಿಮಗೆ ಹೇಳುವಂಥದ್ದು, ಇನ್ನೊಂದು ಧನಪಾಲನಿಗೆ. ನಿಮ್ಮ ಮಾತು ಇಗೋ ಕೇಳಿಕೊಳ್ಳಿ: ಕರಾವಳಿಯ ರಾಜ ಆಳುವ ಬಿಲ್ಲಪ್ಪ ಗೊತ್ತಲ್ಲ?”

“ಗೊತ್ತು”

“ಆತ ಸತ್ತು ಹೋದ. ಅದು ಅಳಿಯಸಂತಾನದ ಮನೆತನ. ಬಿಲ್ಲಪ್ಪನ ಅಳಿಯ ಜೀವರಾಯ ಮತ್ತು ಮಗ ಎರಡನೇ ಬಿಲ್ಲಪ್ಪ ರಾಜ್ಯಕ್ಕಾಗಿ ಕದನವಾಡುತ್ತಿದ್ದಾರೆ. ಈಗ ಅಳಿಯನೇ ನ್ಯಾಯವಾಗಿ ರಾಜನಾಗಬೇಕು. ಆದರೆ ರಾಜನ ಮಗ ಒಪ್ಪುತ್ತಿಲ್ಲ. ಅಳೀಮಯ್ಯ ಜೀವರಾಯನಿಗೆ ನಿಮ್ಮ ಸಹಾಯ ಬೇಕು. ಅದಕ್ಕಾಗಿ ನನ್ನನ್ನು ಕಳಿಸಿದ್ದಾನೆ. ನಿಮ್ಮ ಗೋಳು ಮರೆತು ಸಹಾಯ ಮಾಡಬಲ್ಲಿರೊ? ಕೈತುಂಬ ಚಿನ್ನದ ಪ್ರತಿಫಲ ಉಂಟು ಮಾರಾಯರೇ, ಅದಾಗಿ ಮಿಕ್ಕು ದೋಚುವ ವ್ಯವಹಾರವನ್ನ ಕನಕಪುರಿಗೆ ಹೇಳಿಕೊಡಬೇಕೋ? ಯಾವುದಕ್ಕೂ ಮಹಾರಾಣಿಯವರೊಂದಿಗೆ ಯೋಚನೆ ಮಾಡಿಕೊಂಡು ಬನ್ನಿ, ಸಂಜೆ ಧನಪಾಲನ ಮನೆಗೆ ಊಟಕ್ಕೆ ಬರ್ತೀರಂತಲ್ಲ? ಅಲ್ಲಿ ಹೇಳಿದರಾಯ್ತು. ಬರಲೋ?”

ಎಂದು ಎದ್ದು ನಡೆದೇಬಿಟ್ಟ! ಇರು ಎಂದು ಇವನೂ ಒತ್ತಾಯ ಮಾಡಲಿಲ್ಲ. ಒಂದೆರಡು ಹೆಜ್ಜೆ ಇಡುವಷ್ಟರಲ್ಲಿ ಯಾವುದೋ ವಿಚಿತ್ರ ವಾಸನೆಗೆ ಬೆರಗಾದಂತೆ ಮೂಗರಳಿಸಿ ನಿಂತು, ತಕ್ಷಣ ಹಳೆಯ ವೈರಿ ನೆನಪಾಗಿ ಅರ್ಥಕೌಶಲ ಕಡೆಗೊಮ್ಮೆ ನೋಡಿ ಏನೋ ಕೇಳಬೇಕನ್ನಿಸಿತು. ಸಕಾಲವಲ್ಲವೆಂದು ತನ್ನ ಆಸಕ್ತಿಯನ್ನು ಮುಚ್ಚಿಕೊಂಡು, “ಬರ್ತೀರಲ್ಲ?” ಎಂದು ಪುನಃ ಕೇಳಿ ಉತ್ತರಕ್ಕಾಗಿ ಕಾಯದೆ ನಡೆದ.

ಚಂಡೀದಾಸನೂ ಒಂದು ಕಾಲಕ್ಕೆ ಕನಕಪುರಿಯ ಭ್ರಷ್ಟ ಜೀವನದ ಭಾಗವಾಗಿದ್ದವನೇ; ಅರ್ಥಕೌಶಲನ ಕೃಪೆಯಲ್ಲಿದ್ದವನೇ. ಆಗಿನ ಕಾಲದಲ್ಲಿ ಐವತ್ತಾರು ದೇಶಗಳಲ್ಲಿ ಇವನ ಸಮಾನ ವಿಷವಿದ್ಯೆ ಬಲ್ಲವರು ಯಾರೂ ಇಲ್ಲವೆಂದು ಇವನ ಖ್ಯಾತಿ. ರಸವಿದ್ಯೆಯಲ್ಲೂ ಇವನಿಗೆ ಪರಿಶ್ರಮವಿತ್ತು. ಚಿನ್ನವನ್ನ ಆಸುಪಾಸು ಎಲ್ಲಿ ಬಚ್ಚಿಟ್ಟರೂ, ಎಷ್ಟು ಬಚ್ಚಿಟ್ಟರೂ ಕರಾರುವಕ್ಕಾಗಿ ಅದು ಎಲ್ಲಿದೆಯೆಂದು ಎಷ್ಟಿದೆಯೆಂದು ಹೇಳಬಲ್ಲ ವಿದ್ಯೆ ಇವನಲ್ಲಿತ್ತು. ಹೂತ ಎರಡು ನಿಧಿಗಳನ್ನುಪತ್ತೆ ಹಚ್ಚಿ ತೆಗೆಸಿ ಬಹುಮಾನ ಪಡೆದಿದ್ದ. ತೆಗೆದ ಮೇಲೆ ಆ ನಿಧಿಯ ಮ್ಯಾಲೆ ಮಹಾರಾಜರ ವಿನಾ ಯಾರಿಗೂ ಅಧಿಕಾರ ಸಲ್ಲದೆಂದು ಅರ್ಥಕೌಶಲ ಆ ನಿಧಿಯನ್ನು ಅರಮನೆಗೇ ಒಪ್ಪಿಸಿದ್ದ.

ಚಂಡೀದಾಸನಿಗೆ ವಿಷವಿದ್ಯೆಯಲ್ಲೂ ಅಷ್ಟೇ ಗತಿಯಿತ್ತೆಂದು ಹೇಳಿದೆವಲ್ಲ? ಸಮಾಜದ ಬಡವರು, ದುರ್ಬಲರು, ಹೊಟ್ಟೆಪಾಡಿಗಾಗಿ ಹಾತೊರೆವ ಕುಟುಂಬಗಳ ಹೆಂಗೂಸುಗಳನ್ನು ಆಯ್ದು ಕೈತುಂಬ ಹಣಕೊಟ್ಟು ಚಿಕ್ಕಂದಿನಲ್ಲೇ ವಿಷವೊಡುತ್ತ ಸಾತ್ಮ್ಯವಾಗಿಸಿ, ದೊಡ್ಡವರನ್ನಾಗಿ ಮಾಡಿ ಅರ್ಥಕೌಶಲನಿಗೆ ಮಾರುತ್ತಿದ್ದ. ಇದು ಅರಮನೆಗೂ ತಿಳಿದಿತ್ತು. ಮೊದಮೊದಲು ಈತನ ವಿದ್ಯೆಯ ಬಗ್ಗೆ ಎಲ್ಲರೂ ಚಕಿತರಾದರೂ ಇವನ ಮದ್ದಿನಿಂದ ಮಹಾರಾಜನ ರೋಗ ಉಲ್ಬಣಗೊಂಡಾಗ ವಿಷವಿಕ್ಕಿರಬಹುದೆಂದು ಶಂಕಿಸಿ ಊರು ಬಿಡಿಸಿ ಹೊರಗಟ್ಟಿದ್ದರು. ಆಗ ಇವನಿಗಾಗಿದ್ದ ಮಿತ್ರನೆಂದರೆ ಧನಪಾಲನೊಬ್ಬನೇ. ಆಗ ಹೊರಗೆ ಹೋದವನು ಇವತ್ತು ಪುನಃ ಧನಪಾಲನ ಭೇಟಿಗಾಗಿ ಬಂದಿದ್ದ.

ನಡಾವಳಿಯಿಂದ ಧನಪಾಲನ ತಾಯಿ ಅರ್ಥಕೌಶಲನಿಗೆ ಸೋದರತ್ತೆ. ಆ ಹೊತ್ತು ಮುಂಜಾನೆ ಬಂದು ಅರ್ಥಕೌಶಲನನ್ನು ಊಟಕ್ಕೆ ಆಮಂತ್ರಿಸಿದ್ದಳು. ಒಪ್ಪಿಕೊಂಡಿದ್ದ. ಆದರೀಗ ಚಂಡೀದಾಸನೂ ಅವರ ಅತಿಥಿಯಾದುದರಿಂದ ಹೋಗುವುದೇ? ಬೇಡವೇ? ಎಂದು ಯೋಚನೆಯಾಯಿತು. ವಿಷದ ಅನುಮಾನವೂ ಬಂತು. ಕೊನೆಗೆ ಅತ್ತೆಯ ಹಿರಿತನಕ್ಕಾದರೂ ಮರ್ಯಾದೆ ಕೊಡಲೇಬೇಕೆಂದು ಮನಸ್ಸು ಮಾಡಿ, ಜೊತೆಗೆ ಶಿಖರಸೂರ್ಯನನ್ನೂ ಕರೆದೊಯ್ಯಬೇಕೆಂದು ಸೇವಕನನ್ನು ಅಟ್ಟಿದ. ನಿರೀಕ್ಷಿಸಿದಂತೆ ಶಿಖರಸೂರ್ಯ ಅರೆಮನಸ್ಸಿನಿಂದಲೇ ಬಂದ.

ಇಬ್ಬರೂ ತೋಟದ ಮನೆಗೆ ಹೋದಾಗ ಸೂರ್ಯ ಮುಳುಗಿ ಹೆಚ್ಚು ಸಮಯವಾಗಿತ್ತು. ಬೇಸಿಗೆಯ ದಿನಗಳಾದ್ದರಿಂದ ಹಗಲಿನ ಶಕೆಯಿನ್ನೂ ಆರಿರಲಿಲ್ಲ. ಎರಡು ತಿಂಗಳಿಂದ ಮಳೆಯಾಗಿರಲಿಲ್ಲ. ದೂರದಿಂದ ಗೋಧೂಳಿಯ ವಾಸನೆ ಬರುತ್ತಿತ್ತು. ಜೊತೆಗೆ ನದಿ ದಂಡೆಯ ಕೊಳೆತ ಸಸ್ಯಗಳ ವಾಸನೆಯೂ ಅದರಲ್ಲಿ ಬೆರೆತಿತ್ತು. ನಿಶ್ಚಲವಾಗಿದ್ದ ನದಿಯ ನೀರು ಮಡುಗಟ್ಟಿದ ರಾಡಿನೀರಿನಂತೆ ಕಾಣುತ್ತಿತ್ತು.

ಅಲ್ಲಿದ್ದದ್ದು ಕೆಂಪು ಇಟ್ಟಿಗೆಯ ಸುಂದರವಾದ ಮನೆ. ಫಾಲ್ಗುಣ ಮಾಸದ ಚೌತಿ ಚಂದ್ರ ಕಿವಿಯಿಂದ ಕಿವಿತನಕ ನಗುತ್ತಿದ್ದ. ಬೆಳ್ದಿಂಗಳಿನ್ನೂ ಬಲಿತಿರಲಿಲ್ಲ. ಇಬ್ಬರೂ ಕುದುರೆಗಳನ್ನು ಕಟ್ಟುವುದಕ್ಕೆ ಸೇವಕರ ಕೈಗೆ ಕೊಟ್ಟು ಮನೆಯೊಳಕ್ಕೆ ಹೋದರು. ಆಗಲೇ ಚಂಡೀದಾಸ, ಧನಪಾಲ ಕೂತವರೆದ್ದು ಇಬ್ಬರನ್ನೂ ಸ್ವಾಗತಿಸಿದರು. ಉಭಯಕುಶಲೋಪರಿ ವಿಚಾರಿಸಿಕೊಳ್ಳುತ್ತ ಚಿತ್ರವಿರುವ ಕಂಬಳಿ ಹಾಸಿದ್ದ ಹೊರಸುಗಳ ಮೇಲೆ ಕುಳಿತರು. ಶಿಖರಸೂರ್ಯ ಅನಿರೀಕ್ಷಿತವಾಗಿ ಬಂದುದಕ್ಕೆ ಅಲ್ಲಿದ್ದವರೆಲ್ಲ ಸಂತೋಷಪಟ್ಟರು. ಧನಪಾಲನ ತಾಯಿ ಒಳಗೆ ಅಡಿಗೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದಳು. ಗಾಳಿಯಿಲ್ಲದೆ ತೋಟದ ತರುಮರಗಳ ಎಲೆ ಕೂಡ ಚಲಿಸುತ್ತಿರಲಿಲ್ಲ. ಶಿಖರಸೂರ್ಯ ಮೊದಲ ಬಾರಿ ಇಲ್ಲಿಗೆ ಬಂದುದರಿಂದ ಅಪರಿಚಿತ ಸ್ಥಳ ಆಕರ್ಷಕವೆನ್ನಿಸಿತು. ಅಷ್ಟರಲ್ಲಿ ಸೇವಕರು ಗೊಳಬಾರಸವೆಂಬ ಅಪೂರ್ವ ಮದ್ಯವನ್ನು ಗಿಂಡಿಗಳಿಗೆ ಬಗ್ಗಿಸಿ ಇಟ್ಟರು. ಈಗಷ್ಟೇ ಹುರಿದ ಖಾರದ ಧಾನ್ಯ, ಬಿಳಿಗಿರಿಯ ಮಸಾಲೆ ಬೆರೆಸಿ ಕರಿದ ಹಿಟ್ಟು- ಇವನ್ನು ಜೇನಿನಲ್ಲಿ ಸಂಸ್ಕರಿಸಿದ ಕೊಬ್ಬರಿಯ ತಿಂಡಿಗಳನ್ನು, ನೋಡಿ ಅರ್ಥಕೌಶಲ ತುಟಿಗಳಲ್ಲಿ ಸಂತೋಷದ ಮಂದಹಾಸ ಮೂಡಿತು.

ಇದೆಲ್ಲ ಅವನ ಅತ್ತೆಯೇ ಕಷ್ಟಪಟ್ಟು ಸಿದ್ಧಪಡಿಸಿದ್ದು. ಅಡಿಗೆಯ ರುಚಿ, ಗಂಧಗಳಲ್ಲಿ ಅವಳ ಹಸ್ತಗುಣ ಎದ್ದು ಕಾಣುತ್ತಿತ್ತು. ಪ್ರತಿಯೊಂದರ ರುಚಿ ನೋಡುತ್ತ "ಇಂಥ ಅಡಿಗೆಯನ್ನ ನಿನ್ನ ಕೈಯಿಂದ ವಿನಾ ಬೇರೆಲ್ಲೂ ನಾನು ತಿಂದಿಲ್ಲ"ವೆಂದು ನಿಜ ಮತ್ತು ಪ್ರಶಂಸೆಗಳನ್ನು ಬೆರೆಸಿ ಹೇಳಿ, ಮದ್ಯದ ಪಾತ್ರೆಗೆ ಕೈ ಇಟ್ಟ. ವಾಸನೆ ಪರಿಚಿತವೆನ್ನಿಸಿ ಶಿಖರಸೂರ್ಯ ತಕ್ಷಣ ತನ್ನ ಮುಂದಿನ ಗಿಂಡಿಯನ್ನೆತ್ತಿ ಮೂಸಿ ನೋಡಿ ಒಂದು ಗುಟುಕು ರುಚಿ ನೋಡಿ ಇಟ್ಟ.

ಚಂಡೀದಾಸ ಇವನನ್ನೇ ತೀಕ್ಷ್ಣವಾಗಿ ನೋಡುತ್ತಿದ್ದ. ಅರ್ಥಕೌಶಲನಿಗೆ ಆ ಸ್ಥಳ ಪರಿಚಿತವಾದರೂ ಈ ದಿನ ಅದ್ಯಾಕೋ ವಾತಾವರಣದಲ್ಲಿ ಅಹಿತಕರ ಕೃತಕತೆ ಕಂಡು ಬಂತು. ಪ್ರಧಾನಿಗೆ ಹೊಸ ಮದ್ಯದ ಬಗ್ಗೆ ಕೊಂಚ ಮಾಹಿತಿ ಕೊಡುವುದು ಉಚಿತವೆನ್ನಿಸಿ ಶಿಖರಸೂರ್ಯ ಹೇಳಿದ:

"ಗೊಳಬಾರಸ ಇದು. ಶಕ್ತಿಶಾಲಿ ಮದ್ಯ. ನಿಧಾನವಾಗಿ ಕುಡಿಯಬೇಕು. ರುಚಿಯೆಂದು ಗಟಗಟ ಕುಡಿದರೆ ಇದರಂಥ ಅಪಾಯಕಾರಿ ರಸ ಇನ್ನೊಂದಿಲ್ಲ."

ಚಂಡೀದಾಸ ಈಗ ಇನ್ನಷ್ಟು ಎಚ್ಚರಿಕೆಯಿಂದ ಶಿಖರಸೂರ್ಯ ಅಂದರೆ ತನ್ನ ಸ್ಥಳದಲ್ಲಿ ರಾಜವೈದ್ಯನಾದವನನ್ನ, ಅಂದರೆ ವಿಷಕನ್ಯೆಯಾದ ತನ್ನ ಮಗಳನ್ನು ವರಿಸಿದ ಅಳಿಯನನ್ನ, ಅವನ ಆಜಾನುಬಾಹು ಆಕೃತಿಯನ್ನ, ಮಾಂಸದಿಂದಲ್ಲ ಉಕ್ಕಿನಿಂದಲೇ ಮಾಡಿದಂತಿದ್ದ ಆ ಗಡುಸು ಮುಖವನ್ನ, ಆ ಮುಖಕ್ಕೆ ಗರುಡನ ಚಹರೆ ಕೊಟ್ಟು ನಿಗುರಿದ ಕಿವಿಗೂದಲನ್ನ, ಆಳವಾದ ಕಣ್ಣುಗಳಿಂದ ಬಾಣದಂತೆ ಬರುವ ದೃಷ್ಟಿಗಳನ್ನ ಗಮನಿಸಿದ. ತಾನು ತಿಳಿದಂತೆ ಈತನೂ ಸಂತೋಷದಲ್ಲಿಲ್ಲ; ಈತನೂ ತನ್ನ ಹಾಗೇ ಕ್ರೂರಿ, ವಂಚಕ, ದ್ರೋಹಿ, ಕಚ್ಚೆಹರುಕ ಮಹತ್ವಾಕಾಂಕ್ಷಿ ಎಂದೆನ್ನಿಸಿ ರಾಜವೈದ್ಯನ ಬಗ್ಗೆ ಇದ್ದ ವೈರವಡಗಿ ಸಹಾನುಭೂತಿ ಉಂಟಾಯಿತು. ತನ್ನ ಜಾಗ ಬಿಟ್ಟು ಶಿಖರಸೂರ್ಯನ ಬಳಿಗೆ ಹೋಗಿ ಭುಜದ ಮೇಲೆ ಕೈ ಇಟ್ಟು ಹೇಳಿದ:

"ಹೇಳು ಮಿತ್ರಾ ಈ ರಸವನ್ನ ನೀನೆಲ್ಲಿ ಸೇವಿಸಿದ್ದೆ?"

"ಅಮ್ಮನ ಆಶ್ರಮದಲ್ಲಿ ಸೇವಿಸಿದೆನೆಂದು ನಿನಗೂ ಗೊತ್ತಿದೆ."

“ಯಾವ ಅಮ್ಮನ ಆಶ್ರಮ?”

“ಅದೂ ನಿನಗೆ ಗೊತ್ತಿದೆ.”

“ಸರಿ ಈ ಬಗ್ಗೆ ನಾನೇನೂ ಹೇಳಬಾರದೆಂದು ನೀನು ಹೇಳಿದ ಹಾಗಾಯ್ತು. ಇಗೋ ಬಿಟ್ಟೆ.”

ತಕ್ಷಣ ಶಿಖರಸೂರ್ಯನಿಗೆ ಅನ್ನಿಸಿತು ತನ್ನ ಬಗ್ಗೆ ಇವನಾಗಲೇ ವಿಷಯ ತಿಳಿದುಕೊಂಡೇ ಬಂದಿದ್ದಾನಾದ್ದರಿಂದ ಹುಷಾರಾಗಿರಬೇಕೆಂದುಕೊಂಡ. ಅಷ್ಟರಲ್ಲಿ ಅರ್ಥಕೌಶಲ,

“ಏನ್ರಯ್ಯಾ, ಇಬ್ಬರೇ ಏನೇನೋ ಒಗಟಿನಲ್ಲಿ ಮಾತಾಡಿಕೊಳ್ತಿದ್ದೀರಾ?”

ಅಂದ. ಶಿಖರಸೂರ್ಯ ಹೇಳಿದ:

“ಎಲ್ಲಾ ರೋಗಗಳಿಗೂ ಈ ಮದ್ಯ ದಿವ್ಯೌಷಧಿ. ಅಲ್ಲವೆ ಚಂಡೀದಾಸರೆ?”

“ಹೌದು ಹೌದೆಂದು” ಅವನೂ ಒಪ್ಪಿಗೆ ಸೂಚಿಸಿದ

ಆದರೆ ಅವನ ಮಾತಿನಲ್ಲಿ ವ್ಯಂಗ್ಯವಿತ್ತೆ? ಎಂದು ಅನುಮಾನ ಬಂತು. ಚಂಡೀದಾಸನ ಮಾತಿನಲ್ಲಿರುವ ಆಯುಧಗಳನ್ನ ಅವುಗಳಿರುವ ಸ್ಥಳದಲ್ಲೇ ಮುರಿಯಬೇಕೆಂದು ರಾಜವೈದ್ಯ ನಿರ್ಧರಿಸಿದ.

ಅರ್ಥಕೌಶಲನಿಗೆ ಮದ್ಯದ ಶಕ್ತಿಯ ಬಗ್ಗೆ ಶಿಖರಸೂರ್ಯ ಹೇಳಿದ್ದು ಮೊದಮೊದಲು ನೆನಪಿತ್ತು. ಹೆಚ್ಚು ಹೆಚ್ಚು ಕುಡಿದಂತೆ ಮದ್ಯದ ರುಚಿಯೇರಿ ಮಿತ್ರರಿಗೆ ಚೇಷ್ಟೆಯ ಮಾತಾಡಿ ಮನಸಾರೆ ನಕ್ಕ. ವಿಚಿತ್ರವೆಂದರೆ ನಗುವಾಗ ಅವನ ದನಿ ತಾರಕಕ್ಕೇರುತ್ತಿತ್ತು. ನಗೆಯ ಅಂತ್ಯದಲ್ಲಿ ಹೆಂಗಸಿನ ದನಿಯಂತಾಗಿ ಇನ್ನೂ ಸ್ವಲ್ಪ ನಕ್ಕರೆ ಅತ್ತು ಬಿಡುತ್ತಾನೆನ್ನುವಂತೆ ಕೇಳಿಸುತ್ತಿತ್ತು. ಇದು ಅನಿರೀಕ್ಷಿತವೆನ್ನಿಸಿ ಉಳಿದವರು ನಗದೆ ಟಕಮಕ ಪರಸ್ಪರ ನೋಡಿಕೊಂಡು ಪ್ರಧಾನಿಯನ್ನೇ ನೋಡುತ್ತಿದ್ದರು. ಪ್ರಧಾನಿ ನಕ್ಕಷ್ಟೂ ಕುಡಿವ ಮತ್ತೆ ಕುಡಿವ ಆಸೆಯಾಗುತ್ತಿತ್ತು. ಕುಡಿದಷ್ಟೂ ನಗುತ್ತಿದ್ದ. ನಗುತ್ತಲೇ ಶಿಖರಸೂರ್ಯನಿಗೆ ಹೇಳಿದ “ಜೀವನದಲ್ಲಿ ಇಂಥ ತಿನಿಸು ನಿನಗೆ ಮತ್ತೊಮ್ಮೆ ದೊರೆಯಲಾರದಣ್ಣ. ಸಾವು ನಿಶ್ಚಿಯ. ಯಾವುದೂ ಶಾಶ್ವತವಲ್ಲ. ಅಂತಿಮವಾಗಿ ನಾವು ಹ್ಯಾಗೆ ಸಾಯುತ್ತೇವೆ ಅನ್ನೋದು ಮುಖ್ಯ. ನಾವು ಹ್ಯಾಗೆ ಬದುಕಿರುತ್ತೇವೋ ಅದರ ಫಲ ನಮ್ಮ ಸಾವಿನಲ್ಲಿ ಕಾಣುತ್ತದೆ! ಅಂತ ನನ್ನ ಅಭಿಪ್ರಾಯ. ನೀ ಏನಂತಿ?”

ಅಷ್ಟರಲ್ಲಿ ಸೇವಕರು ಬಾಳೆಯೆಲೆ ಹಾಕಿ ಅವುಗಳ ಮೇಲೆ ಕೋಲುದರ್ಭೆಯ ಕಡ್ಡಿಗಳಿಂದ ಗಿಂಡಿ ನೀರು ಸಿಂಪಡಿಸುತ್ತ ಬಂದರು. ಮಿಡಿಗಾಯಿ ಉಪ್ಪಿನಕಾಯಿ ಬಡಿಸಿ ಮಲ್ಲಿಗೆ ಬಣ್ಣದ ಅನ್ನ, ಸೌತೆಪಳದ್ಯ ಬಡಿಸಿದರು. ಪಚ್ಚೆ ವರ್ಣದ ಇನ್ನೊಂದು ಪಲ್ಯ ಬಡಿಸಿ ಬಗೆ ಬಗೆ ಪದಾರ್ಥಗಳ ನಡುವೆ ತುಪ್ಪವ ಸುರಿದು ಅದಕ್ಕೊಪ್ಪುವ ಚಟ್ನಿಯ ಬಡಿಸಿದರು. ಅತಿಥಿಗಳು ಬಿಸಿಬಿಸಿ ಉಂಡು ಬಗ ಬಗ ಬೆವೆತರು. ಎಂಜಲುಗೈ ತೊಳಕೊಂಡು ಎದ್ದು ಹೊರಸಲ ಮ್ಯಾಲೆ ಕುಂತು ಅಡಿಕೆ ವೀಳ್ಯ ಮೆಲ್ಲುತ್ತ ಆ ಸುದ್ದಿ ಈ ಸುದ್ದಿ ಊರಿನ ವರ್ತಮಾನ ಮಾತಾಡುತ್ತಿರಲು ಅರ್ಥಕೌಶಲ ಹೇಳಿದ:

“ಆಯಿತಯ್ಯಾ ವೈದ್ಯಮಿತ್ರಾ, ಈಗ ವಿಷಯಕ್ಕೆ ಬರೋಣ”

“ಹೇಳುವುದನ್ನೆಲ್ಲ ಮಧ್ಯಾಹ್ನವೇ ಹೇಳಿದೆನಲ್ಲ ಪ್ರಧಾನರೇ, ಅದೇನಿದ್ದರೂ ಈಗ ನೀವೇ ಹೇಳಬೇಕು.”

-ಎಂದ ಚಂಡೀದಾಸ.

“ಮಧ್ಯಾಹ್ನ ಶಿಖರಸೂರ್ಯ ಇರಲಿಲ್ಲ. ಈಗ ಬಂದಿದ್ದಾನೆ. ನಿನ್ನ ಮಾತು ನಿನ್ನ ಬಾಯಿಂದ ಬಂದರೇ ಚಂದ. ಯಾಕಂತೀಯೋ? ಅರಮನೆಯ ವ್ಯವಹಾರ ಇವನಿಗೂ ಗೊತ್ತು.”

“ಆಯ್ತು, ಕೇಳಿ ಸ್ವಾಮೀ, ಕರಾವಳಿಯ ಬಿಲ್ಲಪನ ಅಳೀಮಯ್ಯ ಜೀವರಾಯ ದೊರೆ ಕನಕಪುರಿಯ ಸಹಾಯ ಕೇಳಿ ನನ್ನನ್ನು ಕಳಿಸಿದ್ದಾನೆ. ಆಗುತ್ತೊ? ಇಲ್ಲವೊ? ಅಪ್ಪಣೆ ಕೊಡಿ.”

-ಎಂದು ಹೇಳಿ ಶಿಖರಸೂರ್ಯನ ಕಡೆಗೆ ನೋಡಿದ. ಶಿಖರಸೂರ್ಯನೂ ಚಂಡೀದಾಸ ಮತ್ತವನ ಮಾತುಗಳನ್ನ ತೂಗುತ್ತಿದ್ದ: ಚಂಡೀದಾಸ, ಧನಪಾಲರು ದುಷ್ಟರೆಂದು ಅರಮನೆಯಲ್ಲಿ ಖ್ಯಾತಿಯಿದೆ! ಅರ್ಥಕೌಶಲ ಕಡಿಮೆ ದುಷ್ಟ. ಆದರೆ ಮೂವರಲ್ಲೂ ಹಾಸ್ಯಪ್ರಜ್ಞೆ ಇತ್ತು. ವೈರಿಯನ್ನು ಮಿತ್ರನೆಂಬಂತೆ ನಗಿಸುತ್ತ ಕೊಲ್ಲುವ, ಕೊಂದಾದ ಮೇಲೆ ಅವನ ಬಳಗವನ್ನ ಮೈಮರೆಸುವಂತೆ ನಗಿಸುವ ಕಲೆಯಲ್ಲಿ ಕನಕಪುರಿ ಖ್ಯಾತಿವೆತ್ತ ಪಟ್ಟಣ. ಆದರೆ ತಮ್ಮೆಲ್ಲ ನಗೆ, ನಯವಂಚನೆಯ ಕೊನೆಗೆ ದೋಚುವುದಕ್ಕೆ ಅಂತಿಮ ಸಮ್ಮತಿ ಕೊಡುವವರೆಂದರೆ ಅರ್ಥಕೌಶಲ ಮತ್ತು ಮಹಾರಾಣಿ-ಎಂದು ಆತನಿಗೆ ಗೊತ್ತಿತ್ತು. ಅದಕ್ಕೇ ಆತ ಯಾರನ್ನು ನೊಡಿದರೂ ಈತನ ಬಗ್ಗೆ ಅರ್ಥಕೌಶಲನ ಅಭಿಪ್ರಾಯವೇನಿರಬಹುದು?' ಎಂದು ಅಳತೆ ಮಾಡಿಯೇ ಅವರೊಂದಿಗೆ ಬಹುರಂಗದಲ್ಲಿ ಆ ಪ್ರಮಾಣದ ಸಲಿಗೆ ಬೆಳೆಸುತ್ತಿದ್ದ. ಇಂಥ ವಲಯಗಳಲ್ಲಿಯೇ ಕನಕಪುರಿಯ ವಿಶಿಷ್ಟತೆ ಬೆಳಕಿಗೆ ಬರುತ್ತಿತ್ತು. ಅದು ಯಾವಾಗಲೂ ಅರ್ಥಕೌಶಲನಂಥ ವ್ಯಕ್ತಿಗಳನ್ನೇ ಕೇಂದ್ರಕ್ಕೆ ಆಯುತ್ತಿತ್ತು. ಮತ್ತು ಅವನೆಂಥಾ ಬೆರಕಿ ಆಗಿರುತ್ತಿದ್ದ ಅಂದರೆ ಮುಗುಳುನುಗುತ್ತಲೂ ಇರುತ್ತಿದ್ದ, ಕಣ್ಣೀರೂ ಸುರಿಸುತ್ತಿದ್ದ. ಇವನು ಸೂಲಗಿತ್ತಿಗೂ ಸಿಗದವನು. ಇದನ್ನರಿತೇ ಶಿಖರಸೂರ್ಯ ತನ್ನ ಮಗನಿಗೆ ಹೇಳಿದ್ದ: “ನಗುನಗುತ್ತಲೇ ನೀನು ಕಣ್ಣೀರು ಸುರಿಸಬಲ್ಲೆಯಾದರೆ ನೀನೇ ಕಣಯ್ಯ ಕನಕಪುರಿಯ ಸಾಮ್ರಾಟ!”

ಅಷ್ಟರಲ್ಲಿ ಅರ್ಥಕೌಶಲ ಕೇಳಿದ:

“ಸಹಾಯ ಅಂದರೇನು? ಧನಸಹಾಯವ? ಸೈನ್ಯ ಸಹಾಯವ?”

“ಎರಡೂ ಸೈ” ಅಂದ ಚಂಡೀದಾಸ.

“ನೀನು ಕೇಳಿದ ಎರಡೂ ಸಹಾಯ ಮಾಡುವ ಸ್ಥಿತಿಯಲ್ಲಿ ನಾವಿಲ್ಲ ವೈದ್ಯಮಿತ್ರನೇ. ಯುವರಾಜರ ಪಟ್ಟಾಭಿಷೇಕಕ್ಕೇ ಹಣದ ಅಡಚಣೆಯಾಗಿದೆ. ಇನ್ನು ನೆರೆ-ಹೊರೆಯವರಿಗೆ ಧನಸಹಾಯ ಮಾಡುವುದುಂಟೆ? ಇದಕ್ಕಿಂತ ಹೆಚ್ಚಿಗೆ ನನ್ನನ್ನ ಕೇಳಬೇಡ”

ಈ ತನಕ ಸುಮ್ಮನಿದ್ದ ಧನಪಾಲ ಪ್ರಧಾನಿಯ ಕುತಂತ್ರವನ್ನು ಬಯಲು ಮಾಡಬೇಕೆಂದು,-

“ಅರಮನೆಗೆ ಧನದ ಅಭಾವ ಆಗೋದುಂಟೆ ಪ್ರಧಾನರೆ? ಉಪ್ಪಿನವನು ಅತ್ತ ಅಂತ ತೆಂಗಿನಕಾಯಿಯವನೂ ಅತ್ತರೆ ಜನ ನಗದೆ ಇರ್ತಾರೆಯೆ?” ಅಂದ.

ಅವನಷ್ಟೇ ಖಚಿತವಾಗಿ ಆದರೆ ಉದ್ವೇಗಗೊಳ್ಳದೆ ಪ್ರಧಾನಿ ಹೇಳಿದ:

“ನನಗೆ ತಿಳಿದಿದ್ದನ್ನು ನಾನು ಹೇಳಿದೆ. ಯಾವುದಕ್ಕೂ ಹೇಳಕೇಳುವುದಕ್ಕೆ ಮಹಾರಾಣಿಯವರಿದ್ದಾರೆ. ನೀನೇ ಹೋಗಿ ಕೇಳು.”

ಅಷ್ಟರಲ್ಲಿ ಈವರೆಗೆ ಯಾರಿಗೂ ಕಾಣದಿದ್ದ, ಆದರೆ ಬಾಗಿಲೊಳಕ್ಕೆ ನಿಂತು ಇವರ ಮಾತುಗಳನ್ನ ಆಲಿಸುತ್ತಿದ್ದ ಧನಪಾಲನ ತಾಯಿ ಬಾಗಿಲಿನ ಚೌಕಟ್ಟಿನಲ್ಲಿ ನಿಂತು ಹೇಳಿದಳು:

"ಅಲ್ಲಪ್ಪ ಅರ್ಥಕೌಶಲ, ಅರಮನೆಯಲ್ಲಿ ಧನ ಇಲ್ಲ ಅಂತೀಯ. ಆಯ್ತಪ; ನಾವು ಕೋಡ್ತೇವೆ; ನಮ್ಮ ಮಗುವನ್ನ ಯುವರಾಜನಿಗೆ ಮದುವೆ ಮಾಡಿಕೊಂಡರೆ ಪಟ್ಟಾಭಿಷೇಕದ ಖರ್ಚು ವೆಚ್ಚ ಕೂಡ ನಾವೇ ನೋಡಿಕೊಂಡು ಮದುವೇನೂ ಮಾಡಿಕೊಡ್ತೀವಿ. ಇದನ್ನಾದರೂ ಒಪ್ಪಿಕೊ."

"ತಾಯೀ ಧನಪಾಲನಿಗೆ ನಾನು ಹೇಳಿದ್ದೇನೆ; ಇನ್ನೂ ಒಮ್ಮೆ ಹೇಳುತ್ತೇನೆ ಕೇಳು; ನಾನು, ನೀನು ಮತ್ತು ಧನಪಾಲ ಮೂವರೂ ಮಹಾರಾಣಿಯವರ ಹತ್ತಿರ ಹೋಗೋಣ. ಅವರು ಯುವರಾಜರನ್ನ ಕರೆಸಿ ಮದುವೆಗೆ ಒಪ್ಪಿಸಿದರೆ ಧಾಂಧೂಂ ಸಡಗರದಿಂದ ಮದುವೆ ಮಾಡೋಣ, ಆದೀತೋ?"

ಧನಪಾಲ ಅಸಮಾನದಿಂದ ಹೇಳಿದ.

"ಪ್ರಧಾನಿ ಹ್ಯಾಗೆ ಹೇಳಿದರೆ ಹಾಗೆ ಅಂತ ಯುವರಾಜ ತನ್ನ ಮನದ ಇಂಗಿತ ಹೇಳಿಯಾಗಿದೆ. ನೀವು ಹೀಗೆ ಹೇಳ್ತೀರಾ! ಈ ಸಂಬಂಧ ನಿಮಗಿಷ್ಟವಿಲ್ಲ ಅನ್ನಿ ಸ್ವಾಮೀ."

"ನೀನೊಬ್ಬ ಮೂರ್ಖ, ನನ್ನಿಷ್ಟ ಅಲ್ಲವೋ ಮದುವೆ ಆಗಬೇಕಾದವನ ಇಷ್ಟಾನಿಷ್ಟ ಕೇಳು ಅಂದದ್ದು. ದಯವಿಟ್ಟು ನನ್ನನ್ನ ಅರ್ಥಮಾಡಿಕೊಳ್ಳಿ ತಾಯೀ."

"ಏನೋಪ್ಪ ಯುವರಾಜನ ಮೇಲೆ ನಿನಗೊಂದು ಅಧಿಕಾರ ಇದೆ ಅಂತ ಅವನೇ ಹೇಳಿದ್ದರಿಂದ ಒಪ್ಪಿಸು ಅಂದಿವಿ. ಮಹಾರಾಣಿಯೂ ನಿನ್ನ ಮಾತು ಮೀರುವುದಿಲ್ಲ, ಒಂದು ಮಾತು ಹೇಳು ಅಂದಿವಿ. ನೀನೇ ಆಗೋದಿಲ್ಲ ಅಂದಮೇಲೆ ಯಾರೇನು ಮಾಡಲಾದೀತು? ಬಿಡು. ನಮ್ಮ ದೈವ ಸುಮಾರು."

ದನಪಾಲನಿಗೆ ಅರ್ಥಕೌಶಲನ ಮಾತು ಸವಾಲೆನಿಸಿತು. ಜಿದ್ದಿನಿಂದ ಹೇಳಿದ:

"ಯುವರಾಜರನ್ನ ಈಗಲೇ ಇಲ್ಲಿಗೇ ಕರೆಸಿ ಈ ಮದುವೆಗೆ ಒಪ್ಪಿಗೆ ಇದೆ ಅಂತ ಅನ್ನಿಸಿದರೆ?"

"ಇಲ್ಲಿ ಬೇಡ ಮಾರಾಯಾ, ಈಗಲೇ ಬೇಕಾದರೆ ಮಹಾರಾಣಿಯ ಮುಂದೆ ಹೇಳಿಸು, ಮದುವೆ ಮಾಡಿಬಿಡೋಣ."

ಮುದುಕಿಗೆ ಅರ್ಥಕೌಶಲನ ಮಾತು ತರ್ಕಬದ್ಧವೆನಿಸಲಿಲ್ಲ. ತಮ್ಮ ಸಂಬಂಧ ಈತನಿಗೆ ಸಮ್ಮತವಿಲ್ಲವೆನಿಸಿ ಕೊನೆಯದಾಗಿ,

"ಏನೋಪ್ಪ ಪಟ್ಟಾಭಿಷೇಕಕ್ಕೆ ಹಣ ಇಲ್ಲ ಅಂತೀಯ. ನಾವೇ ಪಟ್ಟಾಭಿಷೇಕವನ್ನೂ ಮಾಡ್ತೀವಿ ಅಂದರೆ ಆಗೋದಿಲ್ಲ ಅಂತೀಯ. ಹೋಗಲಿ ಕರಾವಳಿ ರಾಜನಿಗಾದರೂ ನೀನು ಸಹಾಯ ಮಾಡಿದರೆ ಆತ ನಮ್ಮ ಒಂದು ಮಗುವನ್ನ ಮದುವೆ ಆಗ್ತಾನಂತೆ, ಹಾಗಾದರೂ ಮಾಡು. ಏನೋ, ನಮ್ಮವನು ಅಂತ ಬಾಯಿಬಿಟ್ಟು ಕೇಳಿದೆನಪ್ಪ. ಇನ್ನು ನಿನ್ನಿಷ್ಟ."

-ಎಂದು ಹೇಳಿ ಒಳಕ್ಕೆ ಹೋದಳು. ಧನಪಾಲ ಹುಬ್ಬುಗಂಟಿಕ್ಕಿ ಜಿಗುಪ್ಸೆಯಿಂದ ನುಡಿದ,

“ಸುತ್ತುಬಳಸಿ ಮಾತಾಡಿ ನಾವೆಲ್ಲಿಗೂ ಮುಟ್ಟೋದಿಲ್ಲ ಪ್ರಧಾನರೇ, ಯುವರಾಜರನ್ನ ಅಪಹರಿಸಿದವರು ಯಾರೆಂದು ಇನ್ನೂ ಪತ್ತೆಯಾಗಲಿಲ್ಲ. ಇದಕ್ಕೆಲ್ಲಾ ಹೊಣೆ ಯಾರು? ನೀವೋ? ರಾಜವೈದ್ಯರೋ? ಹೇಳಿ ಸ್ವಾಮೀ.”

“ಮದುವೆಗೂ ಇದಕ್ಕೂ ಏನಯ್ಯಾ ಸಂಬಂಧ?” ಎಂದು ಅರ್ಥಕೌಶಲ. ತಕ್ಷಣ ಶಿಖರಸೂರ್ಯ ಬಾಯಿಹಾಕಿದ,-

“ನನ್ನ ಕೇಳಿದರೆ ಇದನ್ನೆಲ್ಲ ಚರ್ಚಿಸುವ ಸಂದರ್ಭ ಇದಲ್ಲ. ನಮ್ಮ ಮಾತು ಇಲ್ಲಿಗೆ ಮುಗಿದರೆ ಉತ್ತಮ.”

“ಯಾಕೆ ಮುಗಿಯಬೇಕು? ನನ್ನ ಪ್ರಶ್ನೆಗೆ ಉತ್ತರ ಕೊಡಿ ಸ್ವಾಮೀ, ಕನಕಪುರಿಯ ಜೀವನ ಗಬ್ಬೆದ್ದು ನಾರುತ್ತಿದೆ. ಬುಡಕಟ್ಟಿನ ಮಾಂಡಳಿಕರು ಕೂಡ ಒಬ್ಬೊಬ್ಬರೇ ಉದುರಿ ಹೋಗುತ್ತಿದ್ದಾರೆ. ಹಿಡಿಯೋದಕ್ಕೆ ತಾಕತ್ತಿಲ್ಲ. ಪೇಟೆಯಲ್ಲಿ ಕಾಸಿನ ವ್ಯಾಪಾರವಿಲ್ಲ. ಇದಕ್ಕೆಲ್ಲಾ ಕಾರಣ ಏನು? ಯುವರಾಜನ ಅಪಹರಣ ಸ್ವಾಮೀ! ಈಗ ಹೇಳಿ ಅವರ ಅಪಹರಣದ ನಾಟಕದ ಸೂತ್ರಧಾರ ಯಾರು?”

ಎಂದು ಹಟ ಹಿಡಿದ. ಅರ್ಥಕೌಶಲ ತಾಳ್ಮೆಗೆಟ್ಟು,

“ನೀನ್ಯಾರಯ್ಯಾ ನನ್ನ ಕೇಳೋದಕ್ಕೆ?” ಅಂದ.

“ಕನಕಪುರಿಯ ತೆರಿಗೆದಾರ! ವರ್ತಕ ಸಂಘದ ಅಧ್ಯಕ್ಷ ಸ್ವಾಮಿ! ನನಗೆ ಇದನ್ನೆಲ್ಲ ತಿಳಿಯುವ ಹಕ್ಕಿದೆ.”

ಶಿಖರಸೂರ್ಯನೆದ್ದು,

“ಮಹಾರಾಣಿಯವರೇ ಅಂತಿಮ ತೀರ್ಮಾನ ತಗಂಬೋರಾದ್ದರಿಂದ ಅವರಲ್ಲಿಗೇ ಹೋಗೋದು ಉತ್ತಮ ಅಲ್ಲವೆ?”

-ಅಂದ. ಸಮಯ ಕಾಯುತ್ತಿದ್ದ ಚಂಡೀದಾಸ

“ನಿಮ್ಮ ಹತ್ತಿರವೇ, ನಿಮ್ಮ ಮನೆಯಲ್ಲೇ ಹತ್ತು ರಾಜ್ಯ ನಡೆಸುವಷ್ಟು ಚಿನ್ನ ಇದೆಯಲ್ಲ ಪ್ರಧಾನರೇ!”

-ಅಂದ! ಅರ್ಥಕೌಶಲ ಹೊರಡುವುದಕ್ಕೆ ಎದ್ದು ನಿಂತು,

“ಇದು ನಿನ್ನ ರಸವಿದ್ಯೆ ಹೇಳಿಕೊಟ್ಟ ಸುಳ್ಳು!”

ಎಂದು ಹೇಳಿದ. ಇದನ್ನು ಕೇಳಿದ್ದೇ ಚಂಡೀದಾಸನಿಗೆ ಅವಮಾನವಾಗಿ ಎದೆಯಲ್ಲಿ ಸೇಡಿನ ಕಿಡಿ ಹೊತ್ತಿತ್ತು.

“ಇಗೋ ಖಚಿತವಾಗಿ ಹೇಳ್ತೇನೆ ಕೇಳಿ: ನಿಮ್ಮ ಮನೆಯಲ್ಲಿ ಆರು ಕಡಾಯಿ ಚಿನ್ನ ಇಲ್ಲ ಅಂದರೆ ಈ ಕ್ಷಣವೆ ತಲೆದಂಡ ಕೊಟ್ಟೇನು! ನನ್ನಿಂದ ನೀವೇ ಎರಡು ಬಾರಿ ನಿಧಿ ತೆಗೆಸಿದಿರಿ ನೆನಪಿಲ್ಲವೆ ಪ್ರಧಾನರೇ? ‘ನಿಧಿ ವಿಷಯದಲ್ಲಿ ಚಂಡೀದಾಸನ ಮುಂದೆ ಛಪ್ಪನ್ನೈವತ್ತಾರು ದೇಶಗಳಲ್ಲಿ ಯಾರಿಲ್ಲ! ಯಾರೂ ಇಲ್ಲ!!’ ಅಂತ ನೀವೇ ಅರಮನೆಯಲ್ಲಿ ಶಾಲು ಹೊದಿಸಿ ಸನ್ಮಾನಿಸಿದಿರಿ!”

-ಎಂದು ಹೇಳುತ್ತ ಜಗಳಕ್ಕೆ ಕಾದವರಂತೆ ಎದ್ದು ನಿಂತ. ಅವನ ದನಿಯಲ್ಲಿ ತನ್ನ ಬಗ್ಗೆ ತನ್ನ ವಿದ್ಯೆಯ ಬಗ್ಗೆ ಆತ್ಮವಿಶ್ವಾಸವಿತ್ತು. ತನಗಾಗಲಿ ತನ್ನ ವಿದ್ಯೆಗಾಗಲಿ ಆಗುವ ಅವಮಾನವನ್ನ ಅವನೆಂದೂ ಸಹಿಸುವಾತನಲ್ಲ. ಮಾತಾಡುವಾಗ ಆತ ತನ್ನ ತೋರುಬೆರಳುಗಳನ್ನ ಅಲುಗಿಸುತ್ತ ಪ್ರಧಾನಿಯನ್ನು ಗದುರುವಂತೆ ಕಾಣುತ್ತಿತ್ತು.

ಬೆಳುದಿಂಗಳು ಬಲಿತಿದ್ದರೂ ಹಗಲಿನ ಸೆಕೆಯಿನ್ನೂ ಹಾಗೇ ಇತ್ತು. ಅನತಿ ದೂರದಲ್ಲಿ ತರುಲತೆಗಳಿದ್ದರೂ ಅವೂ ಸುಂದರವಾಗಿ ಕಾಣುತ್ತಿರಲಿಲ್ಲ. ಚಂದಿರನ ಸುತ್ತ ಧೂಳು ಮುಸುಕಿದಂತೆ ಬೂದಿಬಣ್ಣದ ಮೋಡ ಮುಸುಕಿತ್ತು. ಇಲ್ಲಿಗೆ ಬರಬಾರದಿತ್ತೆಂದು ಪ್ರಧಾನಿಗೆ ಅನ್ನಿಸಿತು. ಆದರೆ ಹಿರಿತನಕ್ಕೆ ಗೌರವ ಕೊಟ್ಟು ಬಂದಾಗಿತ್ತು. ಇಲ್ಲಿ ನೋಡಿದರೆ ಎಲ್ಲರೂ ವೈರಿಗಳಾಗಿದ್ದಾರೆ! ಮಧ್ಯಾಹ್ನ ಚಂಡೀದಾಸನಿಗೆ ಬಾಯಾರಿಕೆ ಕೊಡುವಾಗ ಅಪಶಕುನವಾದದ್ದು ನೆನಪಾಗಿ ವಿಷಾದವಾಯ್ತು.

"ಆಯ್ತಪ್ಪ, ನಾನು ಬರ್ತೀನಿ; ನಾಳೆ ಮಾತಾಡೋಣ"

ಎಂದು ಹೇಳಿ ಅಲ್ಲಿಂದ ಕಾಲ್ದೆಗೆಯಲಿಕ್ಕೆ ನೋಡಿದ. ಜಗಳಕ್ಕೆ ಸಿದ್ಧನಾಗಿದ್ದ ಚಂಡೀದಾಸನಿಗೆ ನಿರಾಸೆಯಾಯ್ತು.

"ತಲೆದಂಡ ಎಂದು ನನ್ನ ಪಂಥ ಹೇಳಿದೆ. ನಿಮ್ಮ ಪಂಥ ಹೇಳಲೇ ಇಲ್ಲವಲ್ಲ ಪ್ರಧಾನರೇ."

-ಎಂದು ಹೋಗುತ್ತಿದ್ದ ಅರ್ಥಕೌಶಲನ ಕೆಣಕಿ ಸವಾಲಿನಂತೆ ಎದುರು ನಿಂತ! ಪ್ರಧಾನಿ ಸುಮ್ಮನೇ ನಿಂತ. ಚಂಡೀದಾಸ ಬಿಡಲಿಲ್ಲ.

"ನನ್ನ ಪಂಥ ಮಾತ್ರ ಕೇಳಿ ನಿಮ್ಮದನ್ನ ಹೇಳದಿದ್ದರೆ ಹ್ಯಾಗೆ ಪ್ರಧಾನರೆ? ನಿಮ್ಮ ಮನೆಯಲ್ಲಿ ಆರು ಕಡಾಯಿ ಚಿನ್ನದ ಹಣ ಇದ್ದದ್ದೆ ನಿಜವಾದರೆ ಎರಡು ಕಡಾಯಿ ನನ್ನದೊ?"

"ಯಾರದೋ ಹಣವನ್ನ ಕೊಡೋದಕ್ಕೆ ನಾನ್ಯಾರಯ್ಯಾ?"

"ಯಾರದೋ ಹಣ ನಿಮ್ಮಲ್ಲಿಗೆ ಹ್ಯಾಗೆ ಬಂತು ಸ್ವಾಮಿ?"

"ಅದು ನಮ್ಮ ನಮ್ಮ ವಿಶ್ವಾಸವಯ್ಯಾ, ಅದನ್ನೆಲ್ಲಾ ದೊಡ್ಡಮನುಷ್ಯ ನಿನ್ನ ಮುಂದೆ ಹೇಳಬೇಕೊ? ತೊಲಗಯ್ಯಾ"

ಆಮೇಲೆ ತಂತಾನೇ ಮಾತಾಡಿಕೊಂಡಂತೆ ಚಂಡೀದಾಸ ಹೇಳಿದ:

"ಆರು ಕಡಾಯಿ ಹಣ ಇಟ್ಟುಕೊಂಡು ಪಟ್ಟಾಭಿಷೇಕಕ್ಕೆ ಹಣ ಇಲ್ಲ ಅಂತಾರೆ! ಯಾರದೋ ಹಣ ಪ್ರಧಾನರ ಮನೆಯಲ್ಲಿ! ಈ ರಾಜ್ಯವನ್ನ ದೇವರೇ ಕಾಪಾಡಬೇಕು!..."

ಧನಪಾಲ ತಾಳ್ಮೆಗೆಟ್ಟು ನಿಂತ ಪ್ರಧಾನಿಯನ್ನ ನೋಡುತ್ತ,

"ಇದಕ್ಕೆಲ್ಲಾ ದೇವರ್ಯಾಕೆ ಬರಬೇಕಣ್ಣ? ವರ್ತಕರೇ ಮುಂದೆ ಬಂದು ಕಾಪಾಡುತ್ತಾರೆ, ಬೇಕೆನಿಸಿದರೆ ಚಾಣಕ್ಯನೇ ಮುಂದಾಗಿ ಅರಸೊತ್ತಿಗೆ ಬದಲು ಮಾಡುತ್ತಾನೆ."

ಅರ್ಥಕೌಶಲ ಉಕ್ಕಿಬಂದ ಸಿಟ್ಟನ್ನ ನಿಯಂತ್ರಿಸಿಕೊಂಡು ಕುದುರೆ ಏರಿ, ಧನಪಾಲನನ್ನ ಹರಿತ ದೃಷ್ಟಿಯಿಂದ ಇರಿಯುತ್ತ ಹೇಳಿದ-

"ವರ್ತಕ ಕುಲದ ಜ್ಞಾನಜ್ಯೋತಿಯ ಹಾಗೆ ಮಾತಾಡಬೇಡ. ಅರಸೊತ್ತಿಗೆ ಬದಲಾಗೋದು ವರ್ತಕನಿಂದಲ್ಲ. ಒಬ್ಬ ಪುಂಡ, ಒಬ್ಬ ಚಾಣಕ್ಯ ಇವರಿಬ್ಬರ-ಕಲಬೆರಕೆಯಿಂದ! ಪುಂಡನಿಗೆ ಅರಸೊತ್ತಿಗೆ ಬೇಕು. ಚಾಣಕ್ಯನಿಗೆ ಹೊಸ ಸುಖಗಳು ಬೇಕು. ಅದಕ್ಕಾಗಿ ಇಬ್ಬರೂ ಕಲಬೆರಕೆಯಾಗಿ ಬಡಪ್ರಜೆಯ ಬಳಿಗೆ ಹೋಗುತ್ತಾರೆ. ಪ್ರಜೆಯನ್ನ ಕಂಡರೆ ಇಬ್ಬರಿಗೂ ಹೇಸಿಕೆ. ಆದರೂ ಅವನನ್ನ ಸಂಗೀತದಲ್ಲದ್ದಿದ ಹೊಗಳಿಕೆಯಲ್ಲಿ ಉಸಿರುಗಟ್ಟುವಂತೆ ಮುಚ್ಚುತ್ತಾರೆ. ಆತ ಹೊಗಳಿಕೆಯಿಂದ ಉಬ್ಬಿ ತನ್ನ ಬಲ ಕೊಡುತ್ತಾನೆ. ಆ ಬಲದಿಂದ ಪುಂಡ

ಅರಸನಾಗ್ತಾನೆ. ಚಾಣಕ್ಯ ಅಧಿಕಾರಿಯಾಗ್ತಾನೆ. ಬಡ ಪ್ರಜೆಗೂ ಬಹುಮಾನವಿದೆ, ಅವನ ಹೆಗಲ ಮೇಲೆ ಹೊಸ ನೊಗ ಬರುತ್ತದೆ! ಇದು ರಾಜಕಾರಣ!"

"ಹಾಗಿದ್ದರೆ ವರ್ತಕನಿಗೆ ಏನೂ ಇಲ್ಲವೊ?"

"ಇದೆ! ವರ್ತಕನಿಲ್ಲದೆ ರಾಜ್ಯ ಬದುಕಲಾರದು. ಯುದ್ಧವಿಲ್ಲದೆ ವರ್ತಕ ಬದುಕಲಾರ! ಅರಸೊತ್ತಿಗೆ ಬದಲು ಮಾಡ್ತೇನೆ ಅಂದೆಯಲ್ಲ, ಅದಕ್ಕೇ ರಾಜಕಾರಣದ ಮೊದಲ ಪಾಠ ಗೊತ್ತಿರಲಿ ಅಂತ ಹೇಳಿದೆ. ಇಕೊ ಹೊರಟೆ!"

-ಎಂದು ಹೇಳಿ ಕುದುರೆ ಓಡಿಸಿದ. ಶಿಖರಸೂರ್ಯನೂ ಕುದುರೆ ಹತ್ತಿದ.

* * *

ಶಿಖರಸೂರ್ಯ ಬಿಟ್ಟ ಬಾಣದ ಹಾಗೆ ತನ್ನ ವೈದ್ಯ ಶಾಲೆಗೆ ಕುದುರೆ ಓಡಿಸಿದ. ಅಲ್ಲಿ ನೋಡಿದರೆ ಬೆಟ್ಟ ಮತ್ತು ಹುಲಿಯರ ಬದಲು ಬೇರೆ ಇಬ್ಬರು ಕಾವಲುಗಾರರಿದ್ದರು! ಧಸ್ಸೆಂದು ಎದೆ ಕುಸಿಯಿತು. ಅಯ್ಯೋ ನನ್ನ ಬದುಕು ಕೊಚ್ಚೆ ನೀರಲ್ಲಿ ಕೊಚ್ಚಿ ಹೋಯಿತೆಂದು ಹೃದಯ ಪರಚಿಕೊಂಡ.

"ಬೆಟ್ಟ ಹುಲಿಯರೆಲ್ಲಿ?"

-ಎಂದು ಕೋಪದಲ್ಲಿ ಕಂಪಿಸುತ್ತ ದನಿ ಎತ್ತರಿಸಿ ಕಣ್ಣು ಕಿಸಿದು ಕೇಳಿದ.

"ತಮ್ಮಟ್ಟಿಗೆ ಓಗವ್ರೆ. ಅವರ ಜಾಗದಲ್ಲಿ ನಾವಿದ್ದೀವಿ!" ಎಂದೊಬ್ಬ ಹೆಳಿದ.

"ನಿಮ್ಮನ್ನ ನಿಯಮಿಸಿದವರ್ಯಾರು?"

"ಸುಕ್ರಣ್ಣ"

"ನಿಜ ಬೊಗಳು"

-ಎಂದು ಬಲವಾಗಿ ಅವನ ಕೆನ್ನೆಗೆ ಹೊಡೆದ. ಏಟಿನ ರಭಸಕ್ಕೆ ಅವನು ಅಷ್ಟು ದೂರ ಹೋಗಿ ಬಿದ್ದ. ಇನ್ನೊಬ್ಬನನ್ನು ಎಡಗೈಯಲ್ಲಿ ಹಿಡಿದು ಬಲಗೈಯಿಂದ ಅವನದೇ ಭಲ್ಲೆ ಕಸಿದುಕೊಂಡು, ಏಳಲಿದ್ದವನ ಮೇಲೆ ಕಾಲಿಟ್ಟು, ಗಂಟಲ ಮೇಲೆ ಭಲ್ಲೆ ಊರಿ ಕೇಳಿದ.

"ನಿಜ ಬೊಗಳು" ನಿಮ್ಮನ್ನ ನೇಮಿಸಿದವರು ಯಾರು?"

"ಪ್ರಧಾನರು."

ಕಿರುಚಲಿಕ್ಕಾಗಲಿ, ಬಿಡಿಸಿಕೊಳ್ಳಲಿಕ್ಕಾಗಲಿ ಅವಕಾಶ ಕೊಡದೆ ಚಕ್ಕನೆ ಇಬ್ಬರನ್ನೂ ಭಲ್ಲೆಯಿಂದ ಇರಿದು ನೆಲಮನೆಗೆ ಧಾವಿಸಿದ. ದಡ ದಡ ಇಳಿದು ನೋಡಿದರೆ ಆರೂ ಚಿನ್ನದ ಕಡಾಯಿಗಳು ಕಣ್ಮರೆಯಾಗಿದ್ದವು! ತಕ್ಷಣ ಮ್ಯಾಲೆ ಬಂದು ಕುದುರೆಯೇರಿ ಅರಮನೆಗೆ ಓಡಿಸಿದ.

ಮಲಗಿದ್ದ ಯುವರಾಜನನ್ನ ಎಬ್ಬಿಸಿ, ಭೇಟಿಯಾಗಿ ಪ್ರಧಾನಿಯ ಮನೆಯಲ್ಲಿ ಆರು ಕಡಾಯಿ ಚಿನ್ನದ ಹಣ ಇದ್ದುದನ್ನ ಹೇಳಿದ. ಪ್ರಧಾನಿಯೇ ಹಣಕ್ಕಾಗಿ ತಮ್ಮನ್ನು ಅಡಗಿಸಿಟ್ಟುದೆಂದು ಹೇಳಿದ. ಯುವರಾಜ ಆವಕ್ಕಾಗಿ ಇವನನ್ನೆ ನೋಡುತ್ತಿದ್ದರೆ ಈತ ಮುಂದುವರೆದು, 'ಬೇರೆ ಕಡೆಗೆ ಸಾಗಿಸುವ ಮುನ್ನ ಈಗಲೇ ತಾವು ಪರೀಕ್ಷಿಸಿದರೆ, ಹಣ ಖಂಡಿತ ಸಿಕ್ಕುತ್ತದೆ' ಎಂದ! 'ಉದ್ದೇಶಪೂರ್ವಕ ಹಣ ಇಟ್ಟುಕೊಂಡು ಪಟ್ಟಾಭಿಷೇಕವನ್ನು ಮುಂದೂಡುತ್ತಿದ್ದಾನೆಂದು ಹೇಳಿದ. ಈಗಲ್ಲದಿದ್ದರೆ ಬೆಳಿಗ್ಗೆ ಹೋದರೂ ಹಣ ಸಿಕ್ಕಲಾರದೆಂದು ಎಚ್ಚರಿಸಿದ.

ಚಪಲ ಚಿತ್ತದ ಯುವರಾಜ ತಕ್ಷಣವೇ ಮಹಾರಾಣಿಗೂ ತಿಳಿಸದೆ ತನ್ನ ಭಂಟರೊಂದಿಗೆ ಅರ್ಥಕೌಶಲನ ಮನೆಗೆ ದಾಳಿಯಿಟ್ಟೇ ಬಿಟ್ಟ!

ಆರು ಕಡಾಯಿ ಚಿನ್ನದ ಹಣದೊಂದಿಗೆ ಯುವರಾಜ ಅರಮನೆಗೆ ಹಿಂದಿರುಗಿ ಬಂದಾಗ ಮಧ್ಯರಾತ್ರಿ ಮೀರಿತ್ತು. ಸೇವಕಿಯರು ಬೇಡಬೇಡವೆಂದರೂ ಮಲಗಿದ್ದ ಮಹಾರಾಣಿಯನ್ನ ಎಬ್ಬಿಸಿದರು. ಕೋಪದಲ್ಲಿ ಸಿಡಿಮಿಡಿಗೊಳ್ಳುತ್ತ ಆಕೆ ಬಂದಾಗ "ಅಮ್ಮಾ ರಾಜಮಾತೇ" ಎಂದು ಉದ್ದಕ್ಕೂ ಶಿರಸಾಷ್ಟಾಂಗ ನಮಸ್ಕರಿಸಿ,

"ನನ್ನನ್ನು ಅಪಹರಿಸಿದ್ದು ಯಾರೆಂದು ಗೊತ್ತಾಯಿತು ತಾಯಿ! ಕಳ್ಳ ಮಾಲು ಸಮೇತ ಕೈಗೆ ಸಿಕ್ಕಿಬಿದ್ದ! ಇಕೊ ಆರು ಕಡಾಯಿ ಚಿನ್ನ! ಇದೆಲ್ಲದರ ರೂವಾರಿ ನಿಮ್ಮ ಪ್ರಧಾನಿ!"

-ಎಂದು ಕಡಾಯಿಗಳ ಮೇಲಿನ ಬಟ್ಟೆ ತೆಗೆದು ತೋರಿಸಿದ. ಗೆಲುವಿನ ಹೆಮ್ಮೆ ಅಹಂಕಾರಗಳಿಂದ ಅವನ ಮುಖ ಫಳಫಳ ಹೊಳೆಯುತ್ತಿತ್ತು. ಚಿನ್ನ ಕಂಡು ಮಹಾರಾಣಿಗೆ ಸಂತೋಷವಾಯಿತಾದರೂ ಇದನ್ನೆಲ್ಲ ಪ್ರಧಾನಿ ಮಾಡಿದ್ದು ಎಂಬುದನ್ನು ನಂಬದಾದಳು.

"ಇದೆಲ್ಲ ನಿಜವಾಗಿ ಪ್ರಧಾನಿಯ ಮನೆಯಲ್ಲಿತ್ತೇ?" ಎಂದಳು.

"ಹೌದು ರಾಜಮಾತೇ ಹೌದು. ಇದನ್ನೆಲ್ಲ ಅವರ ಮನೆಯಿಂದಲೇ, ಇವೇ ಕೈಗಳಿಂದ, ಈಗಷ್ಟೇ ತಂದೆವು! ಹೌದೇನ್ರೋ?"

-ಎಂದು ಭಂಟರನ್ನು ಕೇಳಿ "ಹೌದು ಮಹಾರಾಣಿ" ಎಂದು ಅವರೂ ಸಾಕ್ಷಿ ನುಡಿವಂತೆ ಮಾಡಿದ.

"ನೀವಿದನ್ನು ತರುವಾಗ ಪ್ರಧಾನಿಗಳು ಮನೆಯಲ್ಲಿದ್ದರೆ?"

"ಇದ್ದ ರಾಜಮಾತೆ. ಇದನ್ನೆಲ್ಲ ಅವನೆದುರಿನಲ್ಲೇ ತಂದೆವು. ಹೌದೇನ್ರೋ?"

"ಹೌದು ಹೌದು ಮಹಾರಾಣಿ. ನಾಳೆ ಬೆಳಿಗ್ಗೆ ಬಂದು ತಮ್ಮನ್ನು ಕಾಣುತ್ತೇನೆ. ಮಹಾರಾಣಿಯವರಲ್ಲಿ ನನ್ನ ಪರವಾಗಿ ವಿಜ್ಞಾಪಿಸಿ ಅಂತ ಅಂದರು."

"ಆಯ್ತು, ಈ ಕಡಾಯಿಗಳನ್ನ ನನ್ನ ಕೋಣೆಯಲ್ಲಿಡಿ. ನಾಳೆ ಬೆಳಿಗ್ಗೆ ವಿಚಾರಿಸುವಾ. ಈಗ ನೀವು ಹೋಗಿ ಮಲಗಿಕೊಳ್ಳಿ."

-ಎಂದು ಎಲ್ಲರನ್ನೂ ಕಳಿಸಿ ಆಮೇಲೆ ಯುವರಾಜನೊಬ್ಬನನ್ನೇ ಕರೆದು,

"ನಾಳೆ ಬೆಳಿಗ್ಗೆ ನಾವು ವಿಚಾರಿಸುತ್ತೇವೆ. ಕೋಪದ ಆವೇಶದಲ್ಲಿ ಪ್ರಧಾನಿಗಳ ಬಗ್ಗೆ ನೀನು ಲಘುವಾಗಿ ಮಾತನಾಡಬಾರದು. ಅವರು ನಿನ್ನ ತಂದೆ ಸಮಾನರೆಂಬುದು ನೆನಪಿರಲಿ."

-ಎಂದು ತಾಕೀತು ಮಾಡಿ ಕಳಿಸಿದಳು.

ತಡವಾಗಿ ನಿದ್ದೆಗೆ ಸಂದ ಮಹಾರಾಣಿ ಹಕ್ಕಿಗಳ ಚಿಲಿಪಿಲಿ ಸುಪ್ರಭಾತದೊಂದಿಗೆ ಎಚ್ಚರವಾದಾಗ ಸೊಗಸಾದ ಹರ್ಷದಾಯಕವಾದ ಮುಂಜಾನೆ ಎದುರುಗೊಂಡಿತು. ಸೂರ್ಯೋದಯದೊಂದಿಗೆ ತಂಪುಗಾಳಿಯೂ ಬೀಸಿ ಮನಸ್ಸು ನಿಶ್ಚಿಂತ ಹಕ್ಕಿಯಂತೆ ಹಗುರವಾಗಿದ್ದಾಗ ಎದುರಿಗಿದ್ದ ಆರು ಕಡಯಿಗಳನ್ನು ಕಂಡು ನೆಮ್ಮದಿಯ ಕ್ಷಣಗಳು ಧಸಕ್ಕೆಂದು ಕುಸಿದು ಹೋದವು. ಕೂಡಲೆ ಸೇವಕನೊಬ್ಬನನ್ನು "ಪ್ರಧಾನಿಯನ್ನ ಕರೆತು ತಾ" ಎಂದು ಓಡಿಸಿದಳು. ಅವಳಿಗರಿವಿಲ್ಲದಂತೆಯೇ ಚಡಪಡಿಕೆಯಿಂದ ತಾಳ್ಮೆಗೆಟ್ಟಳು. ಚಿಂತೆ ಆತಂಕಗಳಿಂದ ಮನಸ್ಸು ಭಾರವಾಗಿ ಬಲ ಮುಂಗೈ ಮೇಲೆ ಗದ್ದ ಊರಿ ಕುಂತಳು.

ಸಾಮಾನ್ಯವಾಗಿ ಬೆಳಿಗ್ಗೆದ್ದು ಪಾದರಸದಂತೆ ಚಲನಶೀಲವಾಗುವ ಮಹಾರಾಣಿ ಇವತ್ತು ಪೀಠ ಬಿಟ್ಟು ಎದ್ದಿರಲಿಲ್ಲ. ಸೇವೆ ಹೇಳಬಹುದೆಂದು ಒಬ್ಬಳಾದ ಮೇಲೆ ಒಬ್ಬಳು ಸೇವಕಿಯರು ಬಂದು ಕಾದು ಕಾದು ಹೋದರು. ಸೇವಕಿಯರಿಗೆ ಹೇಳುವಂಥಾದ್ದು ಏನೂ ಇರಲಿಲ್ಲವಾದ್ದರಿಂದ ಬಾಯಿಂದ ಮಾತು ಬರಲಿಲ್ಲ. ಬಂದ ಮಾತುಗಳು ತನಗೇ ಕೇಳಿಸದಷ್ಟು ಕೃಶವಾಗಿದ್ದವು. ಕೃಶವಾದ ದನಿಯಲ್ಲೇ,

"ಪ್ರಧಾನಿಗಳು ಬಂದರೇನು ನೋಡೇ..." ಎಂದಳು.

ಆಮೇಲೆ ಮತ್ತೆ ಘನವಾದ ಮೌನ ಕೋಣೆಯನ್ನು ಆವರಿಸಿತು.

ಕೊನೆಗೂ ಸೇವಕ ಬಂದು ಬಾಗಿ ನಿಂತು,

"ಮಹಾರಾಣಿ, ಪ್ರಧಾನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ!"

ಎಂದು ಅಳುತ್ತ ಹೇಳಿದ. ಮಹಾರಾಣಿ ಎದ್ದು "ಹಾ!" ಎಂದು ಬಾಯಿ ತೆರೆದವಳು ಹಾಗೇ ಕುಸಿದಳು.

## ಮೂವತ್ತೊಂಭತ್ತು

ಕೆಲವರಿರುತ್ತಾರೆ, ಸೋಲುಗಳಿಂದ ಕಂಗಾಲಾಗಿ ತಮ್ಮ ಕಥೆ ಮುಗಿಯಿತೆಂದು ಆತ್ಮಹತ್ಯೆಗೆ ತಯಾರಾಗಿ ಇನ್ನೇನು ಕುಣಿಕೆ ಬಿಗಿದುಕೊಳ್ಳಬೇಕು-ಅಷ್ಟರಲ್ಲಿ ದೈವ ತನ್ನ ಮಗ್ಗಲು ಬದಲಿಸುತ್ತದೆ.

ಅರ್ಥಕೌಶಲನ ಸಾವು ಹತ್ಯೆಯಿಂದಾದರೂ ಅದನ್ನು ಬಚ್ಚಿಟ್ಟು ಆತ್ಯಹತ್ಯೆಯೆಂದು ಸಾರಲಾಯತು. ಶಿಖರಸೂರ್ಯನ ಚಾಡಿಯನ್ನು ನಂಬಿ ಹೋಗಿದ್ದ ಯುವರಾಜನಿಗೆ ಪ್ರಧಾನಿಯ ಮನೆಯಲ್ಲಿ ಚಿನ್ನದ ಕಡಾಯಿಗಳನ್ನು ಕಂಡಾಗ ಭಾರೀ ಆಘಾತವಾಯ್ತು. ದೇಶದ ಪ್ರಧಾನಿಯೇ ಅರಮನೆಯ ಚಿನ್ನವ ಕದ್ದವನೆಂದು ತಿಳಿದ ಮೇಲಂತೂ ಯುವರಾಜನನ್ನು ತಡೆಯುವವರೇ ಇಲ್ಲವಾದರು. "ನಾಳೆ ಬಂದು ನೋಡುತ್ತೇನೆ ಅಂತ ಮಹಾರಾಣಿಯವರಿಗೆ ತಿಳಿಸು!" ಎಂದು ಹೇಳುತ್ತಿದ್ದಂತೆ ಉಕ್ಕಿ ಬಂದ ಕೋಪವ ತಡೆಯಲಾರದೆ ಯುವರಾಜ ಪ್ರಧಾನಿಯ ಎದೆಗೆ ಜೋರಾಗಿ ಒದ್ದಿದ್ದ. ಪ್ರಧಾನಿ ಅಷ್ಟು ದೂರ ಸಿಡಿದು ಹೋಗಿ ಗೋಡೆಗೆ ತಲೆ ತಾಗಿ ಬಿದ್ದು ಅಲ್ಲೇ, ಆಗಲೇ ಸತ್ತಿದ್ದ. ಇವರ್ಯಾರೂ ಅದನ್ನು ಗಮನಿಸದೆ ಚಿನ್ನದ ಕಡಾಯಿಗಳೊಂದಿಗೆ ಅರಮನೆಗೆ ಬಂದಿದ್ದರು. ಇದರಿಂದ ಶಿಖರಸೂರ್ಯನಿಗಾದ ನಿವ್ವಳ ಲಾಭವೆಂದರೆ ಅರಮನೆಯ ಆರು ಕಡಾಯಿ ಹಣ ದೋಚಿದ ಹಾಗೂ ಯುವರಾಜನನ್ನು ಅಪಹರಿಸಿಟ್ಟ ಆಪಾದನೆ ಅರ್ಥಕೌಶಲನ ಹೆಸರಿಗೆ ಹೋದುದೆಷ್ಟೋ ಅಷ್ಟೇ.

ಆದರೆ ಅರ್ಥಕೌಶಲ ಹತ್ಯೆಯಿಂದಾಗಬಹುದಾಗಿದ್ದ ಶೂನ್ಯ ಸ್ಥಿತಿಯನ್ನು ಧನಪಾಲ ಮತ್ತವನ ಸ್ನೇಹಿತರು ಕೃತಕವಾಗಿ ತಪ್ಪಿಸಿ ಕನಕಪುರಿಯ ಬದುಕಿಗೊಂದು ವೇಗವನ್ನು ತಂದುಕೊಟ್ಟರು. ಧನಪಾಲನ ಮಗಳು ಗಜಲಕ್ಷ್ಮಿಯನ್ನು ಯುವರಾಜ ಮದುವೆಯಾಗಿ, ಪಟ್ಟಾಭಿಷೇಕವೂ ಆಗಿ ಯುವರಾಜನಾಗಿದ್ದವನು "ಚಂಡ ಪ್ರಚಂಡ ಆದಿತ್ಯಪ್ರಭ ಮಹಾರಾಜ"ನಾದನು. ಅರ್ಥಕೌಶಲನ ಜಾಗದಲ್ಲಿ ಧನಪಾಲ ಪ್ರಧಾನಿಯಾದ. ಮಹಾರಾಜ ಆದಿತ್ಯಪ್ರಭನ ಸಹಾಯದಿಂದ ಕರಾವಳಿಯ ಬಿಲ್ಲಪನ ಮಗ ಎರಡನೆಯ ಬಿಲ್ಲಪನನ್ನು ಸಂಹರಿಸಿ ಅಳೀಮಯ್ಯನಿಗೆ ಪಟ್ಟಗಟ್ಟಿ ಮಾಂಡಳಿಕನ ಮಾಡಿಕೊಂಡು ಧನಪಾಲನ ಎರಡನೆಯ ಮಗಳು ಶುಭಲಕ್ಷ್ಮಿಯನ್ನು ಕೊಟ್ಟು ಮದುವೆ ಮಾಡಲಾಯಿತು.

ಮದುವೆಯ ವಿಚಾರದಲ್ಲಾಗಲಿ, ಪಟ್ಟಾಭಿಷೇಕದ ವಿಚಾರದಲ್ಲಾಗಲಿ ಯಾರೂ ಶಿಖರಸೂರ್ಯನನ್ನು ಒಂದು ಮಾತು ಕೂಡ ಕೇಳಲಿಲ್ಲ. ಯುವರಾಜ ಮಹಾರಾಜನಾದರೆ ತನ್ನನ್ನು ಪ್ರಧಾನಿಯಾಗಿ ನಿಯಮಿಸಿಕೊಳ್ಳುತ್ತಾನೆಂದು ಶಿಖರಸೂರ್ಯ ಕನಸು ಕಂಡಿದ್ದ. ಅದೂ ಹುಸಿಯಾಗಿತ್ತು. ಸಂಬಂಧಿಕರಿಗೆ ವರ್ತಕರಿಗೆ ಕೊಟ್ಟಂತೆ ಇವನಿಗೂ ಮದುವೆ, ಪಟ್ಟಾಭಿಷೇಕಗಳ ಆಮಂತ್ರಣ ಕೊಟ್ಟಿದ್ದರೇ ಶಿವಾಯಿ ಯಾವೊಂದು ಸಂದರ್ಭದಲ್ಲೂ ರಾಜವೈದ್ಯನ ಸಲಹೆ ಸಹಕಾರ ಕೇಳಿರಲಿಲ್ಲ. ಇವನೂ ದೂರದ ಸಂಬಂಧಿಕರಂತೆ ಬಂದು ಅಕ್ಷತೆ ಚೆಲ್ಲಿ ಹೋಗಿದ್ದನಷ್ಟೆ. ಒಂದೇ ಸಮಾಧಾನವೆಂದರೆ ಮಹಾರಾಣಿಯನ್ನೂ ಕಡೆಗಣಿಸಿದ್ದರು. ಆಕೆ ಕಣ್ಣೀರುಗರೆಯುತ್ತ ಅಂತಃಪುರದಲ್ಲಿ ಕೂತಿದ್ದಳು. ಮಹಾರಾಣಿಗೇ ಹೀಗಾದ ಮೇಲೆ ತನಗಿನ್ನೇನೆಂದು ಇವನೂ ಸುಮ್ಮನಾಗಿದ್ದ.

ಶಿಖರಸೂರ್ಯ ಪೂರ್ತಿ ಪಾಪರಾಗಿದ್ದ. ಮಕ್ಕಳಿಗೆ ಕೊಡೋದಕ್ಕೆ ಅವನ ಬಳಿ ಉಗುರು ಬೆಚ್ಚಗಿನ ತೊಟ್ಟು ಪ್ರೀತಿ ಕೂಡ ಇರಲಿಲ್ಲ. ಮಡದಿ, ಮಕ್ಕಳ ಲಾಲನೆ ಪಾಲನೆಗಳನ್ನ ಚಿಕ್ಕಮ್ಮಣ್ಣಿಗೆ ವಹಿಸಿಕೊಟ್ಟು ಒಂಟಿತನದ ಬಂಜರಿನಲ್ಲಿ ತನ್ನನ್ನು ತಾನು ಬಂಧಿಸಿಕೊಂಡು ತಾನಾಯಿತು, ವೈದ್ಯಶಾಲೆಯಾಯಿತು -ಇದ್ದ.

ಮಗ ರವಿಕೀರ್ತಿ ತಂದೆಯಂತೆಯೇ ಧೈರ್ಯಶಾಲಿ ಮತ್ತು ಶೂರನಾಗಿದ್ದ. ತಾಯಿ, ಅಜ್ಜಿಯರಿಂದ, ಸರಿಕರಿಂದ, ಸೇವಕರಿಂದ ಕೂಡಿಸಿದ ಮಾಹಿತಿಯಿಂದ ತಂದೆಯ ಬಗ್ಗೆ ತಿಳಿಯಬೇಕಾದ್ದನ್ನೆಲ್ಲ ತಿಳಿದುಕೊಂಡಿದ್ದ. ತಿಳಿದ ಮೇಲೂ ಆತ ನಿಗೂಢ ವ್ಯಕ್ತಿಯಾಗಿ ಕಂಡಿದ್ದ. ಆದ್ದರಿಂದಲೇ ತಂದೆಗೆ ಹೆದರುತ್ತಿದ್ದ ಮತ್ತು ಗೌರವ ಕೊಡುತ್ತಿದ್ದ. ಆದರೆ ಶಿಖರಸೂರ್ಯ ಅಪಾಯಗಳನ್ನು ಸಾಧ್ಯವಾದಷ್ಟು ಮುಂದಾಗಿ ಊಹಿಸಿ ಅವು ಬರುವ ಮುನ್ನವೇ ನಿವಾರಿಸಿಕೊಳ್ಳುತ್ತಿದ್ದ. ರವಿಕೀರ್ತಿ ಮಾತ್ರ ಅವುಗಳನ್ನು ಮೈಮೇಲೆ ಹಾಕಿಕೊಂಡು ಎದುರಿಸುತ್ತಿದ್ದ. ಕೆಲವು ಸರಿ ಎದುರಿಸಲು ಗೊತ್ತಾಗದೆ ಅಪಾಯಕ್ಕೂ ಒಳಗಾಗುತ್ತಿದ್ದ. ಉಳಿದಂತೆ ಕುದುರೆ ಸವಾರಿ ಮಾಡುವುದರಲ್ಲಾಗಲಿ, ದ್ವಂದ್ವಯುದ್ಧದಲ್ಲಾಗಲಿ ಪುಂಡಾಟಿಕೆಯಲ್ಲಿ ಕೂಡ ಸರೀಕರಿಗಿಂತ ಮುಂದಿದ್ದ. ಎಲ್ಲರಿಗೂ ಪ್ರಿಯವಾಗುವಂತೆ ಮಾತಾಡುತ್ತಿದ್ದ. ನಗಾಡುತ್ತಿದ್ದ. ದೊಡ್ಡವರಿಗೆ ಗೌರವ ಕೊಡುತ್ತಿದ್ದ. ಒಮ್ಮೆ ಕಂಡವರು ಆ ಕ್ಷಣವೆ ಮಾರುಹೋಗುವಂಥ ಗುಣಗಳನ್ನು ಬೆಳೆಸಿಕೊಂಡಿದ್ದ.

ಮಗಳು ಮುದ್ದುಗೌರಿ ಮಾತ್ರ ಎಲ್ಲದರಲ್ಲಿ ಅಣ್ಣನಿಗೆ ವಿರುದ್ಧವಾಗಿದ್ದಳು. ಮೃದುವಾದ ನಡೆನುಡಿ, ಕನಸು ತುಂಬಿದ ಹಸಿರು ಕಣ್ಣು, ಸರಳವಾದ ಲಂಗದಾವಣಿ.... ಒಮ್ಮೆ ನೋಡಿದವರು ಅವಳ ಸರಳತೆಯನ್ನು ಮರೆಯುತ್ತಿರಲಿಲ್ಲ. ಆದರೆ ಗಿಜಿಗಿಜಿ ಜನ ಅಂದರೆ, ಬಾಗುವ ಸೇವಕರನ್ನು ಕಂಡರೆ ಅವಳಿಗಾಗದು. ಹೇಳಿಕೊಳ್ಳುವ ಗೆಳತಿಯರೂ ಅವಳಿಗಿರಲಿಲ್ಲ. ಸದಾಕಾಲ ಅಜ್ಜಿಗಂಟಿಕೊಂಡೇ ಇರುತ್ತಿದ್ದಳು. ಅಪರಿಚಿತರು ಬಂದಾಗಂತೂ ಒಳಮುಚುಕದಂತೆ ಮುದುಡಿ ಅಜ್ಜಿಯ ಹಿಂದೆ ಹುದುಗುತ್ತಿದ್ದಳು. ಅವಳೊಂದಿಗೇ ದೇವಸ್ಥಾನಕ್ಕೆ ಹೋಗುತ್ತಿದ್ದಳು. ಅವಳೊಂದಿಗೆ ಮಲಗುತ್ತಿದ್ದಳು. ರಾತ್ರಿ ಬಹಳ ಹೊತ್ತಿನ ತನಕ ಅಜ್ಜಿ ಅವಳಿಗೆ ಶಿವಲೀಲೆ ಶಿವಾಚಾರದ ಪುರಾಣ ಕಥೆಗಳನ್ನ ಹೇಳುತ್ತಿದ್ದಳು. ಇವಳು ಬಟ್ಟಲುಗಣ್ಣು ತಕ್ಕೊಂಡು ಆ ಕಥೆಗಳನ್ನು ಕೇಳಿ ಕಲ್ಪಿಸಿಕೊಂಡು ತಾದಾತ್ಮ್ಯ ಹೊಂದುತ್ತಿದ್ದಳು. ಛಾಯಾದೇವಿಯಂತೂ ಅಜ್ಜಿ ಹೇಳುವ ಕತೆ ಹಾಡು ಕೇಳಿ ಮಗಳು ತಲೆಕೆಡಿಸಿಕೊಂಡಿದ್ದಾಳೆಂದೇ ಗಾಬರಿಯಾಗಿದ್ದಳು, ಮತ್ತು ಅವನ್ನೆಲ್ಲ ಅವಳ ತಲೆಯಿಂದೋಡಿಸಿ ಅವಳಿಗಾಗಿ ಒಂದು ವರ ನೋಡುವಂತೆ ತಾಯಿಗೆ ಹೇಳಿದ್ದಳು.

ಇನ್ನು ಛಾಯಾದೇವಿಯ ಬಗ್ಗೆ ಹೇಳುವುದೇ ಬೇಡ. ನಿಜದಲ್ಲಿ ಆಕೆ ತನ್ನೆಲ್ಲ ಯೌವನದ ಆಕರ್ಷಣೆ ಕಳೆದುಕೊಂಡಿದ್ದಳು. ಮೊಲೆಗಳು ದೊಡ್ಡದಾಗಿ ಬೆಳೆದು ಎದೆ ವಿಶಾಲವಾಗಿತ್ತು. ನಿತಂಬಗಳು ಪ್ರಮಾಣ ಮೀರಿ ಬೆಳೆದಿದ್ದವು. ನಿತ್ಯವೂ ಜರಿಸೀರೆ ಉಟ್ಟು ಕತ್ತಿನ ತುಂಬ ಭಾರವಾದ ಆಭರಣಗಳನ್ನು ಹೇರಿಕೊಳ್ಳುತ್ತಿದ್ದಳು. ತಲೆಗೂದಲು ಕಡಿಮೆಯಾಗಿ ಮುಖ ತಾಮ್ರದ ಪಾತ್ರೆಯಂತೆ ದುಂಡಗಾಗಿ ಕೆನ್ನೆಗಳು ಎರಡೂ ಬದಿಗಂಟಿದ ಇನ್ನೆರಡು ತಾಮ್ರದ ಗಿಂಡಿಗಳಂತೆ ಕಾಣುತ್ತಿದ್ದವು. ಗಂಡನ ಹಾಗೆಯೇ ಇವಳಿಗೂ ಜನ ಗೌರವ ಕೊಡುತ್ತಿದ್ದರು, ಹೆದರುತ್ತಿದ್ದರು.

ಈಗ ವಿದ್ಯುಲ್ಲತೆಯೂ ಇರಲಿಲ್ಲ. ಎಲ್ಲಿರುವಳೆಂಬ ಬಗ್ಗೆಯಾಗಲೀ, ಇಬ್ಬರಿಗೂ ಸಂಬಂಧ ಮುಂದುವರಿದ ಬಗ್ಗೆಯಾಗಲೀ ಯಾರಿಗೂ ಮಾಹಿತಿ ಇರಲಿಲ್ಲ. ಆದ್ದರಿಂದ ಗಂಡ ತನ್ನ ದಾರಿಗೆ ಬಂದನೆಂದೇ ನಂಬಿ ಸೇವಕಿಯಂತೆ ಶಿಖರಸೂರ್ಯನ ಸೇವೆ ಮಾಡಿಕೊಂಡಿದ್ದಳು. ಆದರಿದನ್ನು ಶಿಖರಸೂರ್ಯ ಗಮನಿಸಿರಲಿಲ್ಲ. ಆಕೆ ಯಾವುದಕ್ಕೂ ಒತ್ತಾಯ ಮಾಡಿದವಳಲ್ಲ. ಏನನ್ನೂ ಕೇಳಿದವಳಲ್ಲ, ತೃಪ್ತಿಯಿಂದಿರುವಳೆಂದೇ ಭಾವಿಸಿದ್ದ. ಮನೆಗೆ ಬಂದಾಗ ಆತನಲ್ಲಿ ಉತ್ಸಾಹ ಇರುತ್ತಿರಲಿಲ್ಲ. ದಣಿದವರಂತೆ 'ದಯಮಾಡಿ ಯಾರೂ ಕಾಟ ಕೊಡಬೇಡಿ' ಎಂಬಂತೆ ಇರುತ್ತಿದ್ದ. ಮಾತಿನಲ್ಲಿ ಲವಲವಿಕೆ ಇರುತ್ತಿರಲಿಲ್ಲ. ಖಾಲಿ ಕಣ್ಣುಗಳಿಂದ ನೋಡುತ್ತಿದ್ದ. ಆದರೂ ಒಮ್ಮೊಮ್ಮೆ 'ಆತನನ್ನು ನಾನು ಇಷ್ಟು ಪ್ರೀತಿಸುತ್ತೇನಲ್ಲ-ಅದೇನಂಥ ಆಕರ್ಷಣೆ ಇದೆ ಅವನಲ್ಲಿ?' ಎಂದು ಆಶ್ಚರ್ಯ ಪಡುತ್ತಿದ್ದಳು. 'ನನ್ನ ಗುರುತಾದರೂ ಅವನಿಗಿದೆಯೋ ಇಲ್ಲವೋ...' ಎಂದೂ ಕೇಳಿಕೊಂಡಿದ್ದಳು. ಇನ್ನು ಶಿಖರಸೂರ್ಯನೋ ಒಂದೊಂದು ಸಲ ರಾತ್ರಿ ಎಚ್ಚರವಾದಾಗ 'ಪಕ್ಕದಲ್ಲಿ ಮಲಗಿದ್ದಾಳಲ್ಲಾ, ಯಾರಿವಳು!' ಎಂದು ಆಶ್ಚರ್ಯದಿಂದ ನೋಡುತ್ತಿದ್ದ. ಏನಾದರಾಗಲಿ ಅವನೊಮ್ಮೆ ಮನೆಬಿಟ್ಟು ಹೊರಬಂದ ಅಂದರೆ ಛಾಯಾದೇವಿ ಅವನ ಮನಸ್ಸಿನಲ್ಲಿ ಸುಳಿಯುತ್ತಲೇ ಇರಲಿಲ್ಲ.

ಆ ಒಂದು ದಿನ ಹದ್ದಿನ ಕೊಳ್ಳದಿಂದ ಚಂಡೀದಾಸ ಬರುವವನಿದ್ದ. ಅವನನ್ನು ಭೇಟಿಯಾಗಲು ಶಿಖರಸೂರ್ಯ ವೈದ್ಯಶಾಲೆಗೆ ಹೋದ. ಮೆಟ್ಟಲೇರಿ ಮೇಲಿನ ಕೋಣೆಗೆ ಹೋಗುವುದರೊಳಗೆ ಚಂಡೀದಾಸ ಆಗಲೇ ಬಂದು ಒಂದು ಕಿಡಿಕಿಯಿಂದ ನಿಂತು ಹೊರಗಡೆ ನೋಡುತ್ತಿದ್ದ. ಇಳಿಹೊತ್ತಿನ ಮಾಗಿದ ಬಿಸಿಲು ಅವನ ಮುಖದ ಕೆಳಭಾಗದ ಮೇಲೆ ಬಿದ್ದು ಇನ್ನರ್ಧ ನೆರಳಲ್ಲಿತ್ತು. ಈತ ಬಂದರೂ ಹಿಂದುರುಗದೆ ತದೇಕಚಿತ್ತದಿಂದ ನೋಡುತ್ತ ಮಂದಹಾಸ ಬೀರುತ್ತಿರುವುದನ್ನು ಗಮನಿಸಿ ಇವನೂ ಹಿಂದಿನಿಂದ ಹೋಗಿ ಇನ್ನೊಂದು ಕಿಡಿಕಿಯಿಂದ ಅದೇ ದಿಕ್ಕಿನಲ್ಲಿ ದೃಷ್ಟಿ ಹರಿಸಿದ. ದೂರದ ನೇರಳೆ ಮರದಡಿ ಮಕ್ಕಳಿದ್ದರು. ಅವರಿಂದ ದೃಷ್ಟಿ ಕೀಳದೆ ಚಂಡೀದಾಸ ಹೇಳಿದ:

"ಆ ಹುಡುಗ ನಿನ್ನ ಮಗ ಅಲ್ಲವೊ?"

"ಹೌದು"

"ಅವನಿಗೆ ರಾಜಯೋಗವಿದೆ."

"ಏನಂದೆ?"

"ಹೌದು. ಮಧ್ಯೆ ನಿನ್ನಿಂದಲೇ ಒಂದು ಕಂಟಕವಿದೆ. ಅದನ್ನು ದಾಟಿದರೆ ಸಾಮ್ರಾಟನಾಗುತ್ತಾನೆ. ಹುಷಾರಾಗಿ ನೋಡಿಕೊ. ನಿನ್ನ ಮಗಳು ಮಾತ್ರ ಯಾರೋ ದೇವತೆಯ ಅವತಾರ ಕಣಪ್ಪ!"

ಎಂದು ಹೇಳುತ್ತ ತಿರುಗಿ ಬಂದು ಪೀಠದ ಮೇಲೆ ಕೂತುಕೊಂಡ. ಶಿಖರಸೂರ್ಯ ಪ್ರಥಮಬಾರಿ ಎಂಬಂತೆ ಮಕ್ಕಳನ್ನು ನೋಡಿದ. ಕಟ್ಟುಮಸ್ತಾದ ಮೈಕಟ್ಟಿನ ಆಕರ್ಷಕ ನಿಲುವಿನ ರವಿಕೀರ್ತಿ ವಯಸ್ಸಿಗಿಂತ ದೊಡ್ಡವನಾಗಿ ಕಂಡ. ಸಂಪಿಗೆ ಎಸಳಿನ ನೇರ ಮೂಗಿನ ತುದಿ ಚೂಪಾಗಿತ್ತು. ಸ್ವಚ್ಛವಾದ ಬಿಳಿ ಹಲ್ಲಿನ ಮುಗುಳುನಗೆ ಚೆಲ್ಲುವ ತುಟಿಗಳು, ಬಾಚಿ ಹಿಂದೆ ಕಟ್ಟಿದ ಕಟ್ಟನ್ನು ಮೀರಿ ಕಿವಿ ಮುಚ್ಚಿದ್ದ

ದಟ್ಟವಾದ ಕರಿ ಕೂದಲು, ತಲೆಯ ಬಲಭಾಗದಲ್ಲಿ ಸಹಜವಾಗಿ ಬೈತಲಾಗಿ ಬೇರ್ಪಟ್ಟಿದ್ದವು. ಅವನ ಮುಖದಲ್ಲೆಲ್ಲೋ ನಾಗರಿಕತೆಯಿಂದ ದೂರವಾದ ಒರಟುತನವಿತ್ತು. ಅದು ಅವನ ಮುಖಕ್ಕೆ ಕಾಡಿನ ಚಹರೆಯ ಜೊತೆಗೆ ಅನುಪಮ ಚೆಲುವಿಕೆಯನ್ನೂ ಕೊಟ್ಟಿದ್ದರಿಂದ ನಗುವುದಕ್ಕೆ ಇಲ್ಲವೆ ಹಾಡುವುದಕ್ಕೆ ಸಿದ್ಧವಾಗಿ ನಿಂತಂತಿದ್ದ. ಅಣ್ಣನನ್ನು ನೇರಳೆ ಮರದಡಿ ಬಿಟ್ಟು ಯಾವುದೋ ನೆಪದಿಂದ ವೈದ್ಯಶಾಲೆಯ ಕಡೆಗೆ ಬರುತ್ತಿದ್ದ ಮಗಳನ್ನು ನೋಡಿದ. ದೊಡ್ಡವಳಾಗಿದ್ದಾಳೆ! ತಾನು ಮರೆತಿದ್ದ ತನ್ನ ತಾಯಿಯ ಗುಣಲಕ್ಷಣ ಸೌಂದರ್ಯಗಳನ್ನೆಲ್ಲ ಯಥಾವತ್ತಾಗಿ ತಂದಿದ್ದಾಳೆ! ಮಕ್ಕಳನ್ನು ಪ್ರಥಮಬಾರಿ ಕಂಡಂತೆ ಉಕ್ಕಿ ಬಂದ ಹೆಮ್ಮೆಯನ್ನು ನಿಯಂತ್ರಿಸುತ್ತ ಶಿಖರಸೂರ್ಯ ಚಂಡೀದಾಸನ ಕಡೆತೆ ತಿರುಗಿದ. ಇದನ್ನೇ ಕಾಯುತ್ತಿದ್ದ ಚಂಡೀದಾಸ ಎದ್ದು ಬಂದು ಅವನ ಕೈ ಹಿಡಿದುಕೊಂಡು ಹೇಳಿದ:

"ನನ್ನ ಮಗಳ ಕೈ ಹಿಡಿದು ಉಪಕಾರ ಮಾಡಿದೆ ಗೆಳೆಯಾ. ಮಡದಿ, ಮಗಳು ಇಬ್ಬರೂ ಆನಂದವಾಗಿರೋದನ್ನ ನೋಡಿ ಹಿರಿ ಹಿರಿ ಹಿಗ್ಗಾಯ್ತು. ನಿನ್ನ ಉಪಕಾರ ಮರೆಯಲಾರೆ."

-ಎಂದು ಹೇಳುತ್ತಾ ಆನಂದಬಾಷ್ಪಗಳನ್ನುದುರಿಸಿದ.

"ನಮ್ಮ ಸಂಬಂಧಕ್ಕೆ ಸಮ್ಮತಿಸಿದ್ದಕ್ಕೆ ನಾನು ಕೃತಜ್ಞತೆ ಹೇಳಬೇಕು. ಅದು ಬಿಟ್ಟು ನೀನೇ ಇಂಥ ಮಾತಾಡುತ್ತೀಯಲ್ಲ ಮಾರಾಯಾ" ಎಂದು ಹೇಳುತ್ತ ಶಿಖರಸೂರ್ಯ ಚಂಡಿದಾಸನನ್ನ ತಬ್ಬಿಕೊಂಡ.

"ಹಂಗಲ್ಲ ಮಾರಾಯ. ತಿಳಿದೂ ತಿಳಿದೂ ಚಂಡಾಲರ ವಿಷದೃಷ್ಟಿ ಬಿದ್ದವಳ ಕೈ ಹಿಡಿಯುವುದು ಸಾಮಾನ್ಯವಾದ ಮಾತೆ? ಅವಳಿಗೋಸ್ಕರ ನೀನು ವಿಷಸೇವನೆ ಮಾಡಿದೆಯಲ್ಲ, ಅದೇನು ಅಲ್ಪ ತ್ಯಾಗವೊ? ಸಾಲದು, ಸಾಲದು ಬರೀ ಕೃತಜ್ಞತೆ ಹೇಳಿದರೆ ಸಾಲದಪ್ಪಾ."

ಎಂದು ಕೈ ಮುಗಿದು ಗದ್ಗದಿತನಾದ. ಅವನು ಕಣ್ಣೀರುಗರೆವುದನ್ನು ಕಂಡು ಶಿಖರಸೂರ್ಯನ ಕಣ್ಣು ಒದ್ದೆಯಾದವು. ತಕ್ಷಣ ಸಾವರಿಸಿಕೊಂಡು, ಭಾವುಕ ಸನ್ನಿವೇಶವನ್ನು ತಹಬಂದಿಗೆ ತರಬೇಕೆಂದು,-

"ಅದು ಸರಿ ಮಾರಾಯಾ, ನನ್ನ ಮಗನಿಗೆ ರಾಜಯೋಗವಿದೆ ಎಂದೆಯಲ್ಲ, ನಿನ್ನ ಊಹೆಗೆ ಆಧಾರವೇನು? ಮೊದಲು ಹೇಳು."

ಚಂಡೀದಾಸನ ಅಭಿಮಾನ ಕೆರಳಿತು. ನಿಯಂತ್ರಿಸಿಕೊಂಡು, ಆದರೂ ಹೆಮ್ಮೆಯಿಂದ ಹೇಳಿದ:

"ನಾನು ಜ್ಯೋತಿಷ್ಯಶಾಸ್ತ್ರದಲ್ಲಿ ಪಂಡಿತನಯ್ಯಾ, ಹಾಗೆಂದು ಪೂಜ್ಯಪಾದನೇ ಆಶೀರ್ವಾದ ಮಾಡಿದ್ದು ಸಾಲದೊ?"

"ಶಿವಾಪುರದ ತಿಳುವಳಿಕೆ ನಿನಗೆ ಅಷ್ಟು ಪ್ರಯೋಜನವಾಯಿತೊ?"

"ಯಾಕೆ ನಿನಗೆ ಆಗಿಲ್ಲವೊ?"

"ಶಿವಾಪುರದ ಹಳೆ ಅಸಂಗತ ಬೇಡಿಕೆಗಳನ್ನು ನಾನು ಈಡೇರಿಸಲಾರೆ ವೈದ್ಯಮಿತ್ರಾ. ದೇವರಂತೆ, ಸ್ವರ್ಗ ನರಕಗಳಂತೆ, ಬಯಲಂತೆ, ಅಮ್ಮನಂತೆ-ಒಬ್ಬೊಬ್ಬರಿಗೆ ಒಂದೊಂದು ಥರ ಕಾಣಿಸುವ ಅಂಥ ಕಲ್ಪನೆಗಳ ಬೆನ್ನು ಹತ್ತಲಿಕ್ಕಾದೀತ?"

-ನಿರುತ್ಸಾಹದ ದನಿಯಲ್ಲಿ ಹೇಳಿದ ಶಿಖರಸೂರ್ಯ. ಚಂಡೀದಾಸ ಬಿಡಲಿಲ್ಲ-

“ಶಿವಾಪುರದ ತಿಳುವಳಿಕೆಯಿಂದಲೇ ಆರು ಕಡಾಯಿ ಚಿನ್ನ ಅರ್ಥಕೌಶಲನಲ್ಲಿದೆ ಅಂತ ಹೇಳಿದೆನಲ್ಲಪ್ಪ! ನಿಜವಾಗಲಿಲ್ಲವೊ?”

ಎಂದು ಕೆಣಕಿದ. ಶಿಖರಸೂರ್ಯ ಕೊಂಚ ನಾಚಿಕೊಂಡನಾದರೂ ಒಳಗಾಗಲಿಲ್ಲ. ಚಿನ್ನದ ಬಗೆಗೆ ಶಿವಪಾದನಲ್ಲಿ ವಿಜ್ಞಾನದಂಥ ಖಚಿತ ಜ್ಞಾನವಿದ್ದುದನ್ನು ಕೇಳಿ ತಿಳಿದಿದ್ದ. ಆ ಗುಟ್ಟುಗಳನ್ನು ಭೇದಿಸುವ ಉದ್ದೇಶವನ್ನು ಬಚ್ಚಿಟ್ಟುಕೊಂಡು ಶಿಖರಸೂರ್ಯ ಕೇಳಿದ:

“ಹೇಳು ಮಿತ್ರಾ, ನೀನು ಶಿವಪಾದನ ಪರಮಶಿಷ್ಯ. ನಾನು ಅಲ್ಲಿದ್ದಾಗ ಅನೇಕ ಸಲ ಶಿವಪಾದನೇ ನಿನ್ನ ಹೆಸರು ತಗೊಂಡು ಆನಂದ ಪಡುತ್ತಿದ್ದ.”

“ನಿಜವಾಗ್ಲೂ?”

-ನಡುವೆಯೇ ಅವನ ಮಾತು ಕತ್ತರಿಸಿ, ಆನಂದವನ್ನನುಭವಿಸುತ್ತ ಕೇಳಿದ ಚಂಡೀದಾಸ.

“ನಾನ್ಯಾಕೆ ಸುಳ್ಳು ಹೇಳಲಿ ಮಾರಾಯಾ?”

“ಪರಮಾನಂದವಾಯ್ತು! ಧನ್ಯನಾದೆನಪ್ಪ! ನನ್ನ ತಂದೆ ನನ್ನನ್ನು ಕ್ಷಮಿಸಿದ್ದಾನೆ ಎಂದಾಯ್ತು! ನಾನಿನ್ನು ನಿಶ್ಚಿಂತೆಯಿಂದ ಸಾಯಬಹುದು!”

ಅವನ ಮುಖ ಅರಳಿ ಸುಖ ಹೊಳೆವ ಮಂದಹಾಸ ನೋಡಿ ಶಿಖರಸೂರ್ಯನಿಗೆ ತಮಾಷೆ ಮತ್ತು ಆಶ್ಚರ್ಯವಾಯಿತು. ಇವನು ಇಂಥ ಮುಗ್ಧಮೂರ್ಖನೆ!” ಎಂದು ತಮಾಷೆಯಾದರೆ ಒಂದು ಹಗುರು ಸುಳ್ಳಿಗೇ ‘ಧನ್ಯನಾದೆ ಅಂತಾನಲ್ಲ!’” ಎಂದು ಆಶ್ಚರ್ಯವಾಯಿತು. ಅರ್ಥಕೌಶಲನನ್ನೆ ಎದುರು ಹಾಕಿಕೊಂಡು ಚಂಡೀದಾಸ ಇವನೇನ? ಎಂದು ಹೊಯ್ಕಾಯಿತು.

“ಯಾವ ಸಂದರ್ಭದಲ್ಲಿ ಶಿವಪಾದ ನನ್ನನ್ನು ಜ್ಞಾಪಿಸಿಕೊಂಡ? ನೆನಪಿದೆಯೋ?”

-ಉಕ್ಕಿಬಂದ ಭಕ್ತಿಯಿಂದ ಆಗಲೇ ಚಂಡೀದಾಸನ ಕೊರಳಸೆರೆ ಬಿಗಿದಿತ್ತು.

“ಚಿನ್ನದ ವಿಷಯದಲ್ಲಿಯೇ!”

- ಶಿಖರಸೂರ್ಯ ಇನ್ನೊಂದು ಸುಳ್ಳು ಉದುರಿಸಿದ. ಚಂಡೀದಾಸ ಜಲಜಲ ಕಣ್ಣೀರು ಸುರಿಸುತ್ತ,

“ಅಂಥಾ ನನ್ನ ಕರುಣಾಳು ತಂದೆಗೂ ಸುಳ್ಳು ಹೇಳಿದ ಚಂಡಾಲನಪ್ಪಾ ನಾನು?” ಎಂದು ಮಕ್ಕಳ ಹಾಗೆ ಮುಖ ಮುಚ್ಚಿಕೊಂಡು ಅಳತೊಡಗಿದ. ಅಳುವುದಕ್ಕೆ ಆಸ್ಪದ ಕೊಟ್ಟು ಆಮೇಲೆ ಕೇಳಿದ:

“ಯಾವ ಸಂದರ್ಭದಲ್ಲಿ ಸುಳ್ಳು ಹೇಳಿದೆ? ಯಾಕೆ ಹೇಳಿದೆ?”

-ಎಂದು ಕೆಣಕಿ ಕೇಳಿದ.

“ಯೋಗಭ್ರಷ್ಟನಯ್ಯಾ ನಾನು…..”

-ಎಂದು ಮತ್ತೆ ಬಿಕ್ಕಿದ. ಕಣ್ಣೀರುಕ್ಕಿ ಚಂಡೀದಾಸನ ಮುಖ ವಿಕಾರವಾಗಿತ್ತು. ದುಃಖದಿಂದ ಬಿಕ್ಕಿ ಕಂಪಿಸಿದ. ಶಿಖರಸೂರ್ಯ ಬೆರಗಿನಿಂದ ತಬ್ಬಿಬ್ಬಾದ!

ಶಿವಪಾದನ ಬಗ್ಗೆ ಶಿಷ್ಯರೆಲ್ಲರೂ ಇಷ್ಟೇ ಭಕ್ತಿಗೌರವಗಳನ್ನಿಟ್ಟುಕೊಂಡಿದ್ದರು. ತನ್ನ ವಿನಾ ಯಾರೊಬ್ಬರೂ ಅವನ ಶಕ್ತಿಯ ಬಗೆಗಾಗಲಿ, ಅಂತಃಕರಣದ ಬಗೆಗಾಗಲಿ ಅನುಮಾನ ಪಟ್ಟವರಲ್ಲ. ದೇವರನ್ನು ಕಂಡಂತೆ ಅವನ ಪಾದಧೂಳಿ ಪಡೆದು ರೋಮಾಂಚಿತರಾಗುತ್ತಿದ್ದರು, ಧನ್ಯರಾಗುತ್ತಿದ್ದರು. ದೇವರಂಥಾ ದೇವರು ಸನ್ನಿಧಿಯನ್ನು ಕೊಟ್ಟರೂ ಒಂದೆರಡು ಗಂಟೆಗಳಲ್ಲಿ ವಿಸರ್ಜನೆಯಾಗದಿದ್ದರೆ ಬೇಸರವಾಗುತ್ತದೆ. ಶಿವಪಾದನ ವಿಷಯ ಹಾಗಲ್ಲ. ಅವನ ಸನ್ನಿಧಿಯಲ್ಲಿದ್ದವರು ಅಲ್ಲಿದ್ದಷ್ಟು ಸಮಯವೂ ಆನಂದೋದ್ರೇಕದಲ್ಲಿ ಇರುತ್ತಿದ್ದರು. ಇದು ಪವಾಡವೆಂದು ಮತ್ಸರದಿಂದಲೇ ಶಿಖರಸೂರ್ಯ ಒಪ್ಪಿಕೊಂಡಿದ್ದ. ಚಂಡೀದಾಸನನ್ನು ಕೆಣಕಲೆಂದು ಮತ್ತೆ ಹೇಳಿದ:

"ಮಿತ್ರಾ, ಯೋಗಭ್ರಷ್ಟನಾದ ಘಟನೆಯನ್ನು ಕೇಳುವುದಕ್ಕೆ ಯಾರಿಗೆ ಸಂತೋಷವಾದೀತು? ಆದರೆ ಶಿವಪಾದನ ವಿಷಯ ಕೇಳಿದಷ್ಟೂ ಜಪತಪಾದಿ ಪೂಜೆ ಪುನಸ್ಕಾರ ಪಾರಾಯಣ ಮಾಡಿದ ತೃಪ್ತಿಯಾಗುವುದರಿಂದ ಕೇಳಿದೆನೇ ವಿನಾ ನಿನ್ನನ್ನ ನೋಯಿಸುವ ಉದ್ದೇಶದಿಂದಲ್ಲ. ನಿನಗೆ ಸಂಕೋಚವಾಗುವಂತಿದ್ದರೆ ಹೇಳಬೇಡ."

ಎಂದು ಇನ್ನೊಂದು ಸುಳ್ಳು ಬಿಟ್ಟ.

ಶಿವಪಾದನ ವಿಷಯದಲ್ಲಿ ಅವನ ಶಿಷ್ಯರ್ಯಾರೂ ಕುಹಕವನ್ನಾಗಲಿ, ಅಭಿನಯವನ್ನಾಗಲಿ ಕಂಡವರಲ್ಲ. ಚಂಡೀದಾಸ ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತ ಹೇಳಿದ:

"ನಾನು ಯೋಗಭ್ರಷ್ಟನಾದುದು ನಿಜ. ಅಲ್ಲಿದ್ದ ಮೊದಲಿನ ಮೂರು ವರ್ಷ ವಿಷವಿದ್ಯೆ ಕಲಿತೆ. ವಿಷವಿದ್ಯೆ ಎಂದರೆ ವಿಷ ಸೇವಿಸಿದವರ ವಿಷ ತೆಗೆಯುವುದು. ಆದರೆ ಕದ್ದು ಹೆಂಗೂಸುಗಳನ್ನ ವಿಷಕನ್ಯೆ ಮಾಡುವ ವಿಧಾನವನ್ನೂ ಕಲಿತೆ. ಜೊತೆಗೆ ರಸವಿದ್ಯೆಯಲ್ಲೂ ಆಸಕ್ತಿ ಬೆಳೆಯಿತು. ಅವರಿಗೆ ಹೇಳದೆಯೇ ಅಲ್ಲಿದ್ದ ಗ್ರಂಥರಾಶಿಯ ಉಪಯೋಗ ಪಡೆದು ಎರಡೂ ಅಪವಿದ್ಯೆಗಳನ್ನ ಕಲಿತೆ, ಕದ್ದು ಚೆಲುಮೆ ಕೂಡ ಸೇದುತ್ತಿದ್ದೆ."

"ಅಂದರೆ ರಸವಿದ್ಯೆಯನ್ನ ನಿನಗೆ ಶಿವಪಾದ ಕಲಿಸಲೇ ಇಲ್ಲ."

"ಇಲ್ಲ. ಅದೊಂದೇ ಅಲ್ಲ ವಿಷ ಹಾಕುವ ವಿದ್ಯೆಯನ್ನೂ ಕಲಿಸಲಿಲ್ಲ."

"ಅಂದರೆ ನೀನು ಕಲಿತದ್ದು ಅವನಿಗೆ ಗೊತ್ತಿರಲಿಲ್ಲ."

"ಹಾಗಂತ ನಾನು ಅಂದುಕೊಂಡಿದ್ದೆ. ಒಂದು ದಿನ ಒಂದು ಲೋಹದ ಗಟ್ಟಿಯನ್ನು ಚಿನ್ನವಾಗಿಸಿದೆ ನೋಡು! ಪ್ರಪಂಚವನ್ನೇ ಗೆದ್ದಷ್ಟು ಸಂತೋಷವಾಯಿತಯ್ಯ! ಹೆಮ್ಮೆಯಿಂದ ಬೀಗಿಬಿಟ್ಟೆ. ಒಂದು ದಿನ ಶಿವಪಾದ ಚಿನ್ನದ ಗಟ್ಟಿ ಸಮೇತ ಬಾ ಅಂತ ನನಗೆ ಹೇಳಿ ಕಳಿಸಿದ. ಹೋದೆ. ಶಿಷ್ಯರೆಲ್ಲಾ ಆಗಲೇ ಅಮ್ಮನ ಮುಂದೆ ಸೇರಿದ್ದರು. ನಾನು ಚಿನ್ನದ ಗಟ್ಟಿಯನ್ನ ಬಟ್ಟೆಯಲ್ಲಿ ಸುತ್ತಿ ಹಿಡಿದುಕೊಂಡಿದ್ದೆ. ಶಿವಪಾದ ಎಲ್ಲರನ್ನೂ ಕುರಿತು ಹೇಳಿದ:

"ಮಕ್ಕಳೇ, ನಿಮಗೆಲ್ಲಾ ನನ್ನೊಬ್ಬ ಶಿಷ್ಯನ ಪವಾಡಶಕ್ತಿಯನ್ನು ತೋರಿಸೋಣ ಅಂತ ಕರೆದೆ. ಈ ಬೆಟ್ಟಕ್ಕೆ ಸಾವಿರಾರು ಶಿಷ್ಯರು ಬಂದು ವಿದ್ಯೆಯನ್ನು ಕಲಿತು ಹೋಗಿದ್ದಾರೆ. ಆದರೆ ಇಂಥ ಅಪರೂಪದ ಸಿದ್ಧಿ ಪಡೆದವರೊಬ್ಬರೂ ಇಲ್ಲ. ಲೋಕದಲ್ಲಿ ಲೋಹದಿಂದ ಚಿನ್ನ

ಮಾಡಿದವರಿದ್ದಾರೆ. ಆದರೆ ಲೋಹದ ಗಟ್ಟಿಯಿಂದ ಸೆಗಣಿ ಮಾಡಿದವರು ಯಾರಾದರೂ ಇದ್ದಾರೆಯೆ? ನಮ್ಮಲ್ಲೇ ಇದ್ದಾನೆ ಅಂಥ ಒಬ್ಬ ವಿಜ್ಞಾನಿ! ಇಕೋ ಇವನೇ ಆ ಮಹಾನುಭಾವ.

ಎಂದು ನನ್ನನ್ನು ತೋರಿಸಿದ! ಎಲ್ಲರೂ ನಗತೊಡಗಿದರು. ನನ್ನ ಸರೀಕರೂ ನಕ್ಕರು. ನನ್ನ ಸ್ವಾಭಿಮಾನ ಕೆರಳಿತು. ಒಂದು ಹೆಜ್ಜೆ ಮುಂದೆ ಹೋಗಿ,

"ತಪ್ಪು ಗುರುವೆ, ನನ್ನ ಸಾಧನೆಯ ಬಗ್ಗೆ ನಿನಗ್ಯಾರೋ ತಪ್ಪು ಹೇಳಿದ್ದಾರೆ. ನಾನು ಮಾಡಿದ್ದು ಲೋಹದಿಂದ ಚಿನ್ನವನ್ನ, ಸೆಗಣಿಯನ್ನಲ್ಲ! ಇಕೋ ನೋಡಿರಿ...."

ಎಂದು ಕೈ ಮುಂದೆ ಮಾಡಿ ಗಟ್ಟಿಯ ಮೇಲಿನ ಬಟ್ಟೆ ತೆಗೆದ, ನೋಡಿದರೆ ಅಲ್ಲಿದ್ದುದು ಸೆಗಣಿ!

ಎಲ್ಲರೂ ಗೊಳ್ಳೆಂದು ಇನ್ನಷ್ಟು ನಕ್ಕರು. ನನ್ನ ಸರೀಕರು ಚಪ್ಪಾಳೆ ತಟ್ಟಿ ನಕ್ಕರು. ಮುಖಕ್ಕೆ ಮಸಿ ಹಚ್ಚಿ ಕನ್ನಡಿ ಹಿಡಿದಂಗಾಗಿ, ಮಾನಕ್ಕೆ ಹೀನಾಯವಾಗಿ, ಮರ್ಯಾದೆಗೆ ಅವಮರ್ಯಾದೆಯಾಗಿತ್ತು. ಅಂಗಾಲಿನಿಂದ ನೆತ್ತಿಯತನಕ ಕಂಪಿಸಿ ಧೊಪ್ಪೆಂದು ಬಿದ್ದು ಗುರುವಿನ ಪಾದ ಹಿಡಿದುಕೊಂಡೆ. ಗುರು ಅಪ್ಪಣೆ ಕೊಟ್ಟರು:

"ಇಷ್ಟು ಕಲ್ತಿದ್ದೀಯಲ್ಲ, ಇನ್ನು ಸಾಕಪ್ಪ ತಮ್ಮ, ನೀನಾಯ್ತು, ನಿನ್ನ ಹಡಬೆತನವಾಯ್ತು, ನಿನ್ನ ದುರಾಸೆಯಾಯ್ತು - ಈ ಮೂರಕ್ಕೂ ಕೂಲಿಯಾಗಿ ನೀ ಸೇದೋ ಚಿಲುವೆಯೊಳಗಿಂದ ದಿನಾ ಒಂದು ಗುಂಜಿ ತೂಕ ಬಂಗಾರ ಉದರ್ತದೆ. ಸಾಕಲ್ಲ? ಇನ್ನು ಇಲ್ಲಿಂದ ತೊಲಗು ತಮ್ಮ."

ಇದಪ್ಪ ನನ್ನ ದೈವ! ಈಗ ನಿನ್ನ ಮುಂದೆ ಹಿಂಗಿದ್ದೀನಿ!"

-ಎಂದು ಹೇಳಿ ಖಿನ್ನನಾದ. ಅವನ ಖೇದದಲ್ಲಿ ಕಿಂಚಿತ್ತೂ ಭಾಗಿಯಾಗದೆ,-

"ಇಂಥಾ ಅಡಗೂಲಜ್ಜಿ ಕಥೆಗಳನ್ನ ನೀನು ನಂಬುತ್ತೀಯಲ್ಲ ಮಾರಾಯಾ, ಈಗಲೂ ನಿನ್ನ ಚಿಲುಮೆಯಿಂದ ಒಂದು ಗುಂಜಿ ಬಂಗಾರ ಉದುರುತ್ತದೆ?" ಅಂದ.

"ಹೌದು"

"ಪ್ರಮಾಣವಾಗಿಯೂ?"

"ಇದಕ್ಕೆ ಪ್ರಮಾಣ ಯಾಕಯ್ಯಾ? ಕಣ್ಣಾರೆ ನೋಡಬಹುದಲ್ಲಾ?"

-ಚಂಡೀದಾಸ ಸಹಜ ದನಿಯಲ್ಲಿ ಹೇಳಿದ. ಶಿಖರಸೂರ್ಯ ಮಾತಿನ ಹಿಂದೆ ಮತಲಬಿಯನ್ನು ಅಡಗಿಸಿ ಕೃತಕ ನಯದಿಂದ ಹೇಳಿದ,

"ಹಾಗಾದರೆ ಇಕಾ ಕೇಳು" ಎನ್ನುತ್ತ ಚಂಡೀದಾಸನ ಮುಂದೆ ಬಂದು,

"ಎರಡು ಚಿಲುಮೆ ತಗೊಳ್ಳುವಾ. ನಿನ್ನ ಚಿಲುಮೆಯಲ್ಲಿ ಹಾಕಿದ ಸೊಪ್ಪನ್ನೇ ಇನ್ನೊಂದಕ್ಕೂ ಹಾಕೋಣ."

"ಸರಿ."

“ಒಂದನ್ನು ನೀನು ಸೇದು. ಇನ್ನೊಂದನ್ನು ನಾನು ಸೇದುತ್ತೇನೆ. ಎರಡರಲ್ಲೂ ಚಿನ್ನ ಇದ್ದರೆ ಅಥವಾ ಇಲ್ಲದಿದ್ದರೆ ನಿನ್ನ ಗುರುವಿನ ವಾಕ್ಯ ಹುಸಿಯಾದಂತೆ! ಆಯಿತಲ್ಲ?”

ಈತ ಗುರುವನ್ನ ಹುಸಿ ಮಾಡಲು ಯಾಕಿಷ್ಟು ಉತ್ಸಾಹಗೊಳ್ಳುತ್ತಿದ್ದಾನೆ? ಸಾಮಾನ್ಯವಾಗಿ ಗುರುನಿಂದೆ ಮಾಡಿದಾಗ ಚಂಡೀದಾಸ ಕೋಪಾವಿಷ್ಟನಾಗುತ್ತಿದ್ದ. ಈಗ ಇವನ ರಹಸ್ಯೋದ್ದೇಶವೇನೆಂದು ಯೋಚನಾಮಗ್ನನಾಗಿ ಕೇಳಿದ:
“ನೀನೂ ಅದೇ ಗುರುವಿನಿಂದ ಕಲಿತವನು. ಅವನ ಶಕ್ತಿಯ ಬಗ್ಗೆ ಅನುಮಾನ ಇದೆಯೊ?”

“ಯಾಕಿರಬಾರದು?”

“ಹೌದಪ್ಪ ಅಂಥ ಅನುಮಾನ ಯಾಕೆ ಬಂತು?”

“ಇಬ್ಬರಿಗೂ ಗೊತ್ತಾಗಲೆಂದೇ ಹೇಳ್ತಿರೋದು, ಗುರುವಾಕ್ಯ ನಿಜವಿದ್ದಲ್ಲಿ ನಿನ್ನ ಚಿಲುಮೆಯಲ್ಲಿ ಮಾತ್ರ ಚಿನ್ನ ಇರಬೇಕು. ಅದಲ್ಲವಾದಲ್ಲಿ ಎರಡರಲ್ಲೂ ಚಿನ್ನ ಇರುತ್ತದೆ ಅಥವಾ ಇರೋದಿಲ್ಲ! ಸರಿಯಾ?”

“ನಿನಗೂ ನನ್ನ ಹಾಗೆ ಗುರುವಾಕ್ಯವಾಗಿದ್ದರೆ ನಿನ್ನ ಚಿಲುವೆಯಲ್ಲೂ ಚಿನ್ನ ಇರುತ್ತದೆ.”

“ಖಂಡಿತ ಗುರುವಾಕ್ಯವಾಗಿಲ್ಲ.”

“ಹಾಗಿದ್ದರೆ ನನ್ನ ಚಿಲುಮೆಯಲ್ಲಿ ಮಾತ್ರ ಚಿನ್ನ ಇದ್ದರೆ ನೀನು ಅನುಭವಿಸುವ ಶಿಕ್ಷೆ ಏನು?”

“ಶ್ವಾನಕೂಪಕ್ಕೆ ಬೀಳುತ್ತೇನಯ್ಯಾ”

“ಭಲೇ ಬೆರಿಕಿ ನೀನು! ಶ್ವಾನಕೂಪಕ್ಕೆ ಬಿದ್ದರೂ ನಿನಗೇನೂ ಆಗಲಾರದೆಂದು ನಿನಗೆ ಗೊತ್ತಿಲ್ಲವೊ?

“ಯಾಕೆ ನಾನು ಮನುಷ್ಯನಲ್ಲವೇ?”

“ನಿನ್ನ ಮೈ ಆಗಲೇ ವಿಷಮಯವಾಗಿದೆ ಮಾರಾಯಾ; ಯಾವ ನಾಯಿಗಳೂ ನಿನ್ನನ್ನು ಮುಟ್ಟಲಾರವು. ನಿನ್ನ ಮೈ ಬೆವರಿನ ವಾಸನೆಯನ್ನು ನಾಯಿಗಳು ಸಹಿಸೋದು ಸಾಧ್ಯವೇ ಇಲ್ಲ.”

ತಕ್ಷಣವೆ ಶಿಖರಸೂರ್ಯ ಕೇಳಿದ:
“ನಿನಗಿದು ಹ್ಯಾಗೆ ತಿಳಿಯಿತು?”

“ನಾನೂ ವಿಷವಿದ್ಯೆ ಬಲ್ಲವನಲ್ಲವೊ!”

ಚಂಡೀದಾಸನ ಬಗ್ಗೆ ಕೊಂಚ ಗಾಬರಿಗೊಂಡು ಸುಮ್ಮನೇ ಕೂತ. ಆಮೇಲೆ ಮೆಲ್ಲಗೆ “ಇವತ್ತು ನಿನ್ನ ಊಟ ನಮ್ಮ ಮನೆಯಲ್ಲೇ ಆಗಲಿ. ಊಟವಾದ ಮೇಲೆ ಚಿಲುಮೆ ತುಂಬೋಣ, ಬಾ”

ಎಂದು ಚಂಡೀದಾಸನನ್ನು ಕರೆದುಕೊಂಡು ಹೊರಟ.

ಮೆಟ್ಟಲ ಮೇಲೆ ನಿಂತು ಇದೆಲ್ಲವನ್ನು ಕದ್ದು ಕೇಳಿಸಿಕೊಂಡ ಗೌರಿ ಇವರಿಗಿಂತ ಮುಂಚೆ ಮನೆಗೆ ನಡೆದಳು.

ಮಾರನೇ ಬೆಳಿಗ್ಗೆ ಸೇವಕರು ಏಳುವ ಮುನ್ನವೇ ಗೌರಿ ಎದ್ದು ಮುಖ ತೊಳೆದುಕೊಂಡು ಇನ್ನೊಬ್ಬರ ಕೈಗೆ ನಿಲುಕದಂತೆ ಎತ್ತರದ ಮ್ಯಾಲೆ ಚಿಲುಮೆ ಇಟ್ಟ ಸ್ಥಳವನ್ನೇ ನೋಡುತ್ತ ಕೂತಳು. ಆಮೇಲೆ ಶಿಖರಸೂರ್ಯ ಬಂದ. ಚಂಡೀದಾಸನೂ ಬಂದ. ಇಟ್ಟ ಸ್ಥಳದಿಂದ ಚಿಲುಮೆಗಳನ್ನು ಮೆಲ್ಲಗೆ ತಕ್ಕೊಂಡು "ಇದು ನಿಂದು" ಎಂದು ಒಂದು ಚಿಲುಮೆಯನ್ನು ಚಂಡೀದಾಸನತ್ತ ಸರಿಸಿ ತನ್ನದೆಂದುಕೊಂಡ ಚಿಲುಮೆಯನ್ನು ಮೆಲ್ಲಗೆ ನೆಲಕ್ಕೆ ತಟ್ಟಿದ. ಬರೀ ಬೂದಿ ಬಂತು. ಒಳಗೆ ಇನ್ನೂ ಬೂದಿ ಉಳಿದಿದೆಯೇ? ಎಂದು ಪರೀಕ್ಷಿಸಿದ. ಆಮೇಲೆ ಚಂಡೀದಾಸನ ಮುಂದಿಟ್ಟ ಚಿಲುಮೆಯನ್ನ ತಟ್ಟಿದ. ಜೋಳದ ಕಾಳಿನ ಗಾತ್ರದ ಚಿನ್ನದ ಗುಂಡು ಬಿತ್ತು! ಉಜ್ಜಿ ನೋಡಿದ-ಅಸಲಿ ಚಿನ್ನವೇ! ಮಾತಿಲ್ಲದೆ ಕೂತ. ಇದನ್ನೆಲ್ಲ ಕದ್ದು ನೋಡುತ್ತಿದ್ದ ಗೌರಿ ಮಾತ್ರ ಭಯಭಕ್ತಿಯಿಂದ ಕಣ್ಣಗಲ ಮಾಡಿಕೊಂಡು ಕೋಣೆಯ ಮೂಲೆಯಲ್ಲಿ ನಿಶ್ಶಬ್ದಳಾಗಿ ಕೂತಳು.

ಸೋಲಿನಿಂದ ಶಿಖರಸೂರ್ಯನ ಮುಖ ಕೆಂಪೇರಿತ್ತು. ತಾನು ಅಣಕಕ್ಕೆ ಗುರಿಯಾಗಬೇಕಾಯಿತೆಂದು ನಾಚಿಕೊಂಡ. ಚಂಡೀದಾಸ ಸಹಾನುಭೂತಿಯಿಂದ ಹೇಳಿದ:

"ನಿನ್ನ ವಿದ್ಯೆಯ ಮುಂದೆ ನನ್ನ ವಿದ್ಯೆ ಕಿಂಚಿತ್ ಎನ್ನಿಸಿ ಬಿಟ್ಟೆಯಲ್ಲಯ್ಯಾ... ಪ್ರಮಾಣ ಮಾಡಿ ಹೇಳುತ್ತೇನೆ, ವಿಷಕನ್ಯೆಯ ಸಹವಾಸ ಮಾಡಿಯೂ ಬದುಕಿದವನು ನಾನು ತಿಳಿದಂತೆ ನೀನೊಬ್ಬನೇ!"

"ಅದಿರಲಿ ಪಂಥ ಇವತ್ತೂ ಮುಂದುವರಿಯಬೇಕು. ಈ ದಿನ ಚಿಲುಮೆಗಳನ್ನು ಬದಲು ಮಾಡೋಣ."

ಸ್ವಲ್ಪ ಹೊತ್ತು ಸುಮ್ಮನಿದ್ದ ಚಂಡೀದಾಸ ಆಗಲೆಂದ.

ಆ ದಿನ ರಾತ್ರಿ ಚಿಲುಮೆಗಳನ್ನು ಬದಲಿಸಿ ಒಂದೇ ಸೊಪ್ಪನ್ನ ಎರಡರಲ್ಲೂ ತುಂಬಿ ಸೇದಿ ಇಟ್ಟರು. ಮಾರನೇ ದಿನವೂ ಚಂಡೀದಾಸನ ಚಿಲುಮೆಯಿಂದ ಮಾತ್ರ ಚಿನ್ನ ಬಂತು. ಖಿನ್ನನಾಗಿ ಶಿಖರಸೂರ್ಯ ಹೇಳಿದ:

"ನಿಜ ಹೇಳುತ್ತೇನೆ ಮಿತ್ರಾ, ಪಾದದಿಂದ ಕತ್ತಿನತನಕ ಮನುಷ್ಯನ ಬೆಲೆ ಇರೋದು ದಿನಕ್ಕೊಂದು ಹಣ ಮಾತ್ರ. ಆದರೆ ಕತ್ತಿನಿಂದ ಮೇಲೆ ಹೋದರೆ ಅದರ ಬೆಲೆ ದಿನಕ್ಕೆ ಎಷ್ಟು ಕೊಟ್ಟರೂ ಕಡಿಮೆ. ಮಜ್ಜೆ ಮಾಂಸದ ದೇಹ ನಮ್ಮನ್ನು ಎಲ್ಲಿಗೂ ಒಯ್ಯೋದಿಲ್ಲ. ಆದರೆ ತಲೆ ಮಾತ್ರ ಎಲ್ಲಿಗೂ ಒಯ್ಯಬಹುದು, ಅಂತ ನಂಬಿದವನು ನಾನು. ನನ್ನ ನಂಬಿಗೆಯನ್ನ ನೀನು ಇವತ್ತು ಹುಸಿ ಮಾಡಿದೆ!"

## ನಲವತ್ತು

ಅದಾಗಿ ಒಂದು ವಾರ ಕಳೆದಿರಬೇಕು, ಚಂಡೀದಾಸನೊಂದಿಗೆ ವೈದ್ಯಶಾಲೆಯಲ್ಲಿ ಶಿಖರಸೂರ್ಯ ವಿಷವೈದ್ಯದ ಬಗ್ಗೆ ಚರ್ಚಿಸುತ್ತಿದ್ದಾಗ ಸುಕ್ರ ದೇವಾಲಯದ ಅರ್ಚಕನನ್ನು, ಅವನೊಂದಿಗೆ ಒಬ್ಬ ಬಾಲ ವಟುವನ್ನು ಕರೆದುಕೊಂಡು ಬಂದ. ಅರ್ಚಕ ಮಂತ್ರಪೂರ್ವಕ ಆಶೀರ್ವದಿಸಿದ. ಶಿಖರಸೂರ್ಯ ಪೀಠ ತೋರಿಸಿದ. ಅವನು ಕೂತ ಮೇಲೆ ಯಥೋಚಿತ ಗೌರವಾರ್ಪಣೆ ಮಾಡಿ ಉಭಯ ಕುಶಲೋಪರಿ ವಿಚಾರಿಸಿಕೊಂಡು "ಅಪ್ಪಣೆಯಾಗಲಿ" ಅಂದ. ಶಿಖರಸೂರ್ಯ ತೋರಿದ ಗೌರವದಿಂದ ಪ್ರಸನ್ನಚಿತ್ತನಾಗಿ ಅರ್ಚಕ ಆಹ್ಲಾದಕರ ಮಂದಹಾಸ ಬೀರುತ್ತ,

"ನಿಮಗೂ ನಿಮ್ಮ ಕುಟುಂಬಕ್ಕೂ ಕುಲಪತಿಗಳು ಆಶೀರ್ವಾದ ಕಳಿಸಿದ್ದಾರೆ"

-ಎಂದ. ಶಿಖರಸೂರ್ಯನೂ ಬಾಗಿ "ನಮ್ಮ ಭಾಗ್ಯ" ಅಂದ.

"ನಿಮ್ಮ ಚಿರಂಜೀವಿಯವರು ಏನಾದರೂ ಹೇಳಿದರೊ?"

-ರಾಜವೈದ್ಯನ ಮನಸ್ಸನ್ನು ಒಳಹೊಕ್ಕು ನೋಡುವಂತೆ ಜಪ್ಪಿಸಿ, ಕೇಳಿದ ಅರ್ಚಕ.

"ಇಲ್ಲವಲ್ಲ!"

"ಆಶ್ಚರ್ಯ!"

"ಏನು ವಿಷಯ?"

"ನಿಮ್ಮ ಸುಕುಮಾರ ರವಿಕೀರ್ತಿಯವರ ಅವಿನಯದ ನಡತೆಯಿಂದ ಗುರುಗಳು ಬೇಸತ್ತು, ಅನಿವಾರ್ಯವಾಗಿ ಅವರನ್ನು ವಿದ್ಯಾಪೀಠದಿಂದ ಹೊರ ಹಾಕಿದ್ದಾರೆ."

ಅನಿರೀಕ್ಷಿತ ವಿಷಯ ಕೇಳಿ ಶಿಖರಸೂರ್ಯನಿಗೆ ಅಘಾತವಾಯ್ತು. ರವಿಕೀರ್ತಿಯಿಂದ ಈ ಬಗೆಯ ನಡೆಯನ್ನಾತ ನಿರೀಕ್ಷಿರಲಿಲ್ಲ. ನಿಜ ಹೇಳಬೇಕೆಂದರೆ ಮೊದಲು ಅರ್ಚಕನ ಮಾತನ್ನು ನಂಬಲಿಲ್ಲ. ಆದರೂ ಅರ್ಚಕನೇ ತಾನಿದ್ದಲ್ಲಿಗೇ ಬಂದು ಹೇಳಿದ್ದರಿಂದ ಆಶ್ಚರ್ಯ, ಕೋಪ ಅನುಮಾನಗಳಿಂದ.

"ಏನಯ್ಯಾ ಇದು? ರವಿಕೀರ್ತಿ ಎಲ್ಲಿ?"

-ಎಂದು ಸುಕ್ರನ ಕಡೆಗೆ ನೋಡಿದ. ಕರೆತರಲು ಸೇವಕರು ಹೋದುದನ್ನು ತಿಳಿಸುತ್ತಿರುವಲ್ಲಿ ರವಿಕೀರ್ತಿ, ಅವನ ಹಿಂದಿನಿಂದ ಬಂಡೆಯ, ಅಪರಾಧಿಗಳಂತೆ ಬಂದು ಹೊರಗೆ ನಿಂತರು. ತಾಳ್ಮೆಗೆಟ್ಟಿದ್ದ ಶಿಖರಸೂರ್ಯ ರವಿಯನ್ನ "ಒಳಗೆ ಬಾರಯ್ಯಾ" ಎಂದು ಕರೆದ. ರವಿಕೀರ್ತಿ ಒಳಗೆ ಬಂದ. ಇವರ್ಯಾರಿಗೂ ಗೊತ್ತಿಲ್ಲದಂತೆ ಗೌರಿ ಒಳಬಂದು ಮೂಲೆಯಲ್ಲಿ ಹುದುಗಿದ್ದಳು. ರಾಜವೈದ್ಯ ಕೋಪದಿಂದುರಿವ ಕಂಗಳಿಂದ ಮಗನನ್ನು ನೋಡಿದ.

ರವಿಕೀರ್ತಿ ತಂದೆಯ ಎದುರಿಗೆ ಬಂದು ಹಿಂದೆ ಕೈಕಟ್ಟಿಕೊಂಡು ಏನು ಬಂದರೂ ಎದುರಿಸಲು ಸಿದ್ಧನಾದಂತೆ ಎದೆ ಸೆಟೆಸಿ ಎದುರಿನ ಗೋಡೆ ನೋಡುತ್ತ ನಿಂತ. ಮೊಳಕಾಲಿನ ತನಕ ಸಣ್ಣ ದಡಿಯ ಕಂದುಬಣ್ಣದ ದೋತ್ರ ಉಟ್ಟಿದ್ದ. ಅದೇ ಬಣ್ಣದ ಬಟ್ಟೆಯೊಂದನ್ನು ಭುಜಗಳು ಮುಚ್ಚುವಂತೆ ಹೊದ್ದಿದ್ದ. ಭುಜಗಳ ಮೇಲಾಡುವ ಅಚ್ಚ ಕಪ್ಪು ವರ್ಣದ ಕೂದಲು ಅವನ ಒಟ್ಟಾರೆ ನಿಲುವಿಗೆ ಆಕರ್ಷಣೆ ತಂದಿತ್ತು. ಹುಬ್ಬುಗಂಟಿಕ್ಕಿ ಮಾತಾಡಲೇ ಕೂಡದೆಂಬಂತೆ ಗಟ್ಟಿಯಾಗಿ ತುಟಿಗಳನ್ನು ಬಿಗಿದುಕೊಂಡುದರಿಂದ ಮುಖ ಗಂಭೀರವಾಗಿತ್ತು. ಸದಾ ಥಳ ಥಳ ಹೊಳೆವ ಹುಡುಗನ ಮುಖ ಈ ಪರಿ ಬಿರುಸಾದದ್ದನ್ನು ತಂದೆ ಕಂಡಿರಲೇ ಇಲ್ಲ. ಈಗ ನೋಡಿದರೆ ಶಿಕ್ಷೆಯನ್ನು ಅನುಭವಿಸಲು ಸಿದ್ಧನಾಗಿ ನಿಂತಿದ್ದಾನೆ! 'ಏನೋ ತಪ್ಪು ಮಾಡಿರಬೇಕು. ಇಲ್ಲದಿದ್ದರೆ ಅರ್ಚಕರು ಇಲ್ಲಿಯವರೆಗೆ ಬರುತ್ತಿದ್ದರೆ?' ಎಂದು ನಂಬಿ ವ್ಯಂಗ್ಯವಾಗಿ ಹೇಳಿದ:

"ಮಕ್ಕಳಾದವರು ಬೆಳೆದು ದೊಡ್ಡವರಾಗಿ ತಂದೆಗೆ ಕೀರ್ತಿ ತರುತ್ತಾರಂತೆ. ಇಷ್ಟು ಚಿಕ್ಕ ವಯಸ್ಸಿನಲ್ಲೇ ಕೀರ್ತಿ ತಂದೆಯಲ್ಲಾ ಮಗನೇ! ಮನೆತನಕ್ಕೆ, ನನಗೆ, ನಿನ್ನ ವಿದ್ಯಾಪೀಠಕ್ಕೂ ಕೀರ್ತಿ ತಂದೆಯಲ್ಲಪ! ಅರ್ಚಕರು ಹೇಳಿದ್ದಕ್ಕೆ ಏನಾದರೂ ಹೇಳೋದಿದೆಯಾ? ಇದ್ದರೆ ಹೇಳು."

-ಎಂದ. ಶಿಖರಸೂರ್ಯನ ವ್ಯಂಗ್ಯದ ಮಾತಿನಿಂದ ಅರ್ಚಕನು ಸಂತೋಷಗೊಂಡದ್ದು ಅವನ ಮಂದಹಾಸದಿಂದಲೇ ತಿಳಿಯುತ್ತಿತ್ತು. ಕೋಪದಿಂದ ಶಿಖರಸೂರ್ಯನ ಕಣ್ಣು ಕೆಂಪಾದುದು ಸ್ಪಷ್ಟವಿತ್ತು. ನೋಡಿ ಸಕ್ರ, ಚಂಡೀದಾಸರು ಆತಂಕಗೊಂಡರು. ಚಂಡೀದಾಸ ನಡುವೆ ಬಾಯಿ ಹಾಕಿ

"ಅದೇನೆಂದು ಮೊದಲು ಅವನಿಗೆ ಹೇಳಬೇಕು ರಾಜ್ಯವೈದ್ಯರೇ" ಅಂದ.

"ವಿದ್ಯಾಪೀಠದಿಂದ ಹೊರಗೆ ಹಾಕಿದ್ದಾದರೂ ಅವನಿಗೆ ಗೊತ್ತಿರಲೇಬೇಕಲ್ಲ?"

-ಎಂದು ಶಿಖರಸೂರ್ಯ ಚಂಡೀದಾಸನಿಗೆ ಹೇಳಿ "ಯಾಕೆ ಗೊತ್ತೇನಯ್ಯಾ?" ಅಂದ.

"ಗೊತ್ತು"

"ಯಾಕೆ ನಿನ್ನನ್ನ ಹೊರಗೆ ಹಾಕಿದರು? ಹೇಳು"

"ಅವರು ನನ್ನನ್ನ ಮತ್ತು ಬಂಡೆಯನನ್ನ ಅವಮಾನಿಸಿದರಪ್ಪ"

"ಅವರು ಅರ್ಚಕರು"

"ಅವರೂ ಮಿತಿಬಾರದಪ್ಪ"

"ಮಿತಿಮೀರುವಂಥಾದ್ದು ಏನು ಮಾಡಿದರು?"

-ಎಂದು ಗುಡುಗಿದ. ರವಿ ಸುಮ್ಮನೆ ಎದುರಿನ ಕಿಡಕಿಯ ಕಡೆಗೆ ನೋಡುತ್ತ ತಂದೆಯ ಬಿರುಸು ನೋಟವನ್ನಾಗಲಿ ಬಿರುಸು ದನಿಯನ್ನಾಗಲಿ ಗಮನಿಸಲೇ ಇಲ್ಲವೆಂಬಂತೆ ನಿಂತ.

"ಹೇಳು ಏನು ಮಿತಿಮೀರಿದರು? ಹೇಳದಿದ್ದರೆ ಅರ್ಚಕರು ಹೇಳಿದ್ದೆಲ್ಲಾ ನಿಜವಾಗುತ್ತದೆ. ನೀನು ಎದುರಿಸಬೇಕಾದ ಶಿಕ್ಷೆಯೂ ಎರಡು ಪಟ್ಟಾಗುತ್ತದೆ. ನೋಡಿಕೊ"

"ಸ್ವಾಭಿಮಾನ ಇದ್ದವರು ಸಹಿಸಲಾರದ್ದನ್ನ ಅಂದರಪ್ಪ"

ತಕ್ಷಣ ಪ್ರತಿಭಟಿಸಲೆಂಬಂತೆ ಅರ್ಚಕರು ಎದ್ದು ಪುನಃ ಕೂತು ಹೇಳಿದರು;

"ನಾವೇನೂ ಅನ್ನಲಿಲ್ಲವಪ್ಪ! ಬೇಕಾದರೆ ಇಕೊ ಇವನನ್ನೇ ಕೇಳಿರಿ. ಹೇಳಿರಿ ವಟುಗಳೇ.... ಅಲ್ಲಿ ಏನೇನು ನಡೆಯಿತು?"

ಎಲ್ಲರೂ ಆ ವಟುವಿನ ಕಡೆಗೆ ನೋಡತೊಡಗಿದರು. ಕೂತಿದ್ದ ವಟು ಎದ್ದುನಿಂತು ಎರಡೂ ಕೈ ಕಟ್ಟಿಕೊಂಡು,

"ಇವನು ನಮಗೆ ಅವಾಚ್ಯ ಶಬ್ದಗಳಿಂದ ಬೈದನು. ಅಲ್ಲದೆ ಕೊಟ್ಟ ಪ್ರಸಾದವನ್ನು ಮುಖದ ಮೇಲೆ ಎರಚಿದನು ಮತ್ತು ನಮ್ಮ ಕೆನ್ನೆಗೆ ಹೊಡೆದು ಹೋದನು."

-ಎಂದು ಹೇಳಿ ಮೆಚ್ಚುಗೆಗಾಗಿ ಅರ್ಚಕನ ಕಡೆಗೆ ಆಸೆಗಣ್ಣಿನಿಂದ ನೋಡಿ “ಸರಿಯೆ ಗುರುಗಳೇ” ಎಂದು ಕೇಳಿದ. ಸುಕ್ರ, ಚಂಡೀದಾಸರಿಬ್ಬರೂ ಪರಸ್ಪರರನ್ನು ನೋಡಿಕೊಂಡು ಅರ್ಚಕನನ್ನು ನೋಡಿದರು. ಆತ ಮೆಚ್ಚುಗೆಯಿಂದ ತನ್ನ ಶಿಷ್ಯನನ್ನು ನೋಡಿದ. ವಟು ಹೇಳಿದ್ದು ಕೊಂಚ ಕೃತಕವೆನಿಸಿದರೂ ಭಲೆ ಎಂಬಂತೆ ಬಾಲಕನ ಬೆನ್ನು ತಟ್ಟಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡ ಚಂಡೀದಾಸ “ಇದು ಉರು ಹೊಡೆದ ಪಾಠದಂತಿದೆ, ಅಲ್ಲವೊ?” ಎಂದು ಹೇಳುವಷ್ಟರಲ್ಲಾಗಲೇ ಶಿಖರಸೂರ್ಯನ ಕಿವಿಯ ಕೂದಲು ನಿಮಿರಿ ಹಸ್ತಗಳು ಬಿರುಸಾಗಿದ್ದವು. ಪೀಠದಿಂದೆದ್ದು ನೇರ ರವಿಕೀರ್ತಿಯ ಮುಂದೆ ಹೋಗಿ, ಮುಖಕ್ಕೆ ಮುಖ ಕೊಟ್ಟು ನಿಂತು,

“ವಟು ಹೇಳಿದ್ದು ಸತ್ಯವೊ?” ಅಂದ ಒರಟು ದನಿಯಲ್ಲಿ.’

“ಹೌದು” ಅಂದ ರವಿ.

ಶಿಖರಸೂರ್ಯ ಕೊಂಚ ಹಿಂದೆ ಸರಿದು ಛಳಾರನೆ ರವಿಯ ಎಡ ಕೆನ್ನೆಗೆ ಜೋರಿನಿಂದ ಏಟು ಹಾಕಿದ. ಏಟಿನ ಸಪ್ಪಳಕ್ಕೆ ಇಡೀ ಮೊಗಸಾಲೆ ಸ್ತಬ್ಧವಾಗಿ ನಿಶ್ಚಲವಾಯಿತು. ರವಿ ಅಲುಗಲಿಲ್ಲ, ಕುಸಿಯಲಿಲ್ಲ. ಹಿಂದೆ ಕಟ್ಟಿದ ಕೈ ಬಿಚ್ಚಲಿಲ್ಲ. ಹೊಡೆದ ರಭಸಕ್ಕೆ ಮುಖ ಓರೆಯಾದುದು ನಿಜ. ಆಮೇಲೆ ಪುನಃ ತನ್ನ ಮೊದಲ ನಿಲುವಿನಲ್ಲೇ, ಯಾರೂ ತನ್ನನ್ನು ಹೊಡೆಯಲೇ ಇಲ್ಲವೆಂಬಂತೆ ಸ್ಥಿರವಾಗಿ ನಿಂತುಕೊಂಡ. ಮುಖದಲ್ಲಿ ಕೂಡ ಏನೂ ಬದಲಾವಣೆ ಕಾಣಲಿಲ್ಲ - ಎಡಕೆನ್ನೆಯ ಮೇಲೆ ಶಿಖರಸೂರ್ಯನ ನಾಲ್ಕು ಬೆರಳು ಮೂಡಿದ್ದನ್ನು ಬಿಟ್ಟರೆ.

ಇಲ್ಲಿಯತನಕ ಮೂಲೆಯಲ್ಲಿ ಮುದುಡಿ ಕೂತಿದ್ದ ಗೌರಿ “ಅಣ್ಣಾ” ಎಂದು ಅಳುತ್ತ ಓಡಿಬಂದು ರವಿಯನ್ನು ತಬ್ಬಿಕೊಂಡು ತಂದೆಯನ್ನು ಎದುರಿಸುವಂತೆ ಅಣ್ಣನನ್ನು ಹಿಂದಿಕ್ಕಿ ನಿಂತುಕೊಂಡು

“ಅಲ್ಲಿದ್ದವನು ವಟು ಒಬ್ಬನೇ ಅಲ್ಲ, ಬಂಡೆಯನೂ ಇದ್ದ. ಬೇಕಾದರೆ ಅವನನ್ನೇ ಕೇಳಿ.”

-ಎಂದಳು. ರವಿಕೀರ್ತಿ ತಂಗಿಯ ಕಣ್ಣೀರೊರೆಸುತ್ತ,

“ಮದ್ದು, ಮನೆಗೆ ನಡೆ, ನೀನಿಲ್ಲಿಗೆ ಬರಬಾರದು.” ಎಂದ.

ಶಿಖರಸೂರ್ಯ ಕಣ್ಣು ಕೆಂಪಗೆ ಮಾಡಿಕೊಂಡು ಕೇಳಿದ

“ಮದ್ದು, ಯಾರು ನಿನಗೆ ಇಲ್ಲಿಗೆ ಬರಹೇಳಿದ್ದು?”

“ನಾನೇ ಬಂದೆ”. ಅಂದಳು.

“ಈಗ ಮನೆಗೆ ನಡೆ”

-ಎಂದು ಗುಡುಗಿದ. ಗೌರಿ ಹೆದರಿ ಜೋರಾಗಿ

“ದೇವಸ್ಥಾನದಲ್ಲಿದ್ದವರು ಈ ವಟು ಮಾತ್ರ; ಅರ್ಚಕರು ಇರಲಿಲ್ಲ.”

-ಎಂದು ಹೇಳಿ ಜೋರಾಗಿ ಅಳುತ್ತ ಅಲ್ಲಿಂದ ಓಡಿಹೋದಳು. ಚಂಡೀದಾಸ ಸುಮ್ಮನಿರಲಿಲ್ಲ.

“ಗೌರಿ ಹೇಳಿದ್ದು ಅಲ್ಲಿದ್ದವನು ವಟು ಮಾತ್ರ. ಅರ್ಚಕರಲ್ಲ. ಹೌದೋ?”

“ಯಾರು ಪೂಜೆ ಮಾಡುವರೋ ಅವರೇ ಅರ್ಚಕರು. ತಮಗದು ತಿಳಿದಿರಬೇಕಲ್ಲ, ವೈದ್ಯರೆ?”

-ಎಂದು ಅರ್ಚಕ ಚಂಡೀದಾಸನ ವಾದವನ್ನ ಕತ್ತರಿಸಿದ, ಚಂಡೀದಾಸ ಬಿಡಲಿಲ್ಲ,

“ಪೂಜೆ ಮಾಡುವುದಕ್ಕೆ ಸಂಸ್ಕಾರದ ಅಗತ್ಯ ಇಲ್ಲವೋ?”

“ಸಂಸ್ಕಾರ ಇಲ್ಲದವನನ್ನು ಗುರುಗಳು ಪೂಜೆಗೆ ನಿಯಮಿಸುವುದುಂಟೆ ವೈದ್ಯರೇ”

-ಎಂದು ಪ್ರಶ್ನಿಸಿ ಅವರ ವಾದಕ್ಕೆ ಕೊನೆ ಮಾಡಲು ನೋಡಿದ.

“ಯಾಕೆ ಇದೆಲ್ಲ ನಡೆಯಿತು ಅಂತ ತಿಳಿಯುವುದಕ್ಕಾದರೂ ಬಂಡೆಯನ ಸಾಕ್ಷಿ ಕೇಳಬಹುದಲ್ಲ?”

ಶಿಖರಸೂರ್ಯ ಕೇಳಿದ:

“ನಾವು ಹೆಸರಿಸಲಾಗದ ಆ ಶೂದ್ರ ಅಲ್ಲಿದ್ದುದು ನಿಜ, ಆದರೆ ಜನ್ಮಶ್ರೇಷ್ಠರ ವಿರುದ್ಧ ಶೂದ್ರ ಸಾಕ್ಷಿ ನುಡಿಯಬಾರದಲ್ಲ!”

“ಸಾಕ್ಷಿ ಕೇಳುತ್ತಿಲ್ಲ. ಅರ್ಚಕರೇ, ನಡೆದ ಸಂಗತಿ ಏನೆಂದು ಕೇಳುತ್ತಿದ್ದೇವೆ.”

“ನಡೆದ ಸಂಗತಿಯನ್ನ ನಾವು ಹೇಳಿಯಾಯಿತಲ್ಲ. ನಮ್ಮ ಮಾತಿನಲ್ಲಿ ನಂಬಿಕೆ ಇಲ್ಲವೆಂದಾದರೆ….”

“ನಂಬಿಕೆಯ ಪ್ರಶ್ನೆಯಲ್ಲ ಅರ್ಚಕರೇ, ಇದು ನ್ಯಾಯದ ಪ್ರಶ್ನೆ. ಹೀಗೆ ನಡೆಯಿತೆಂದು ಬಾಲಕ ಸಾಕ್ಷಿ ನುಡಿಯಬಲ್ಲನಾದರೆ ಬಂಡೆಯನೂ ಹೇಳಬಹುದಲ್ಲ? ಅವನಿಗೂ ಕಣ್ಣಿವೆ.”

“ಅನುಮಾನ ಬಂದಲ್ಲಿ ಧರ್ಮಸೂಕ್ಷ್ಮವನ್ನು ಹೇಳಬೇಕಾದ್ದು ನಮ್ಮ ಕರ್ತವ್ಯವಾದ್ದರಿಂದ ಹೇಳಿದ್ದೇವೆ.”

-ಎಂದು ಹೇಳಿ ಎದ್ದು ನಿಂತಾಗ ಶಿಖರಸೂರ್ಯ, ಇದಕ್ಕೆಲ್ಲ ಒಂದು ಕೊನೆ ಕೊಡಬೇಕೆಂದು

“ಆಯ್ತು ಅರ್ಚಕರೇ, ನಾವು ಅವರನ್ನು ವಿಚಾರಿಸಿಕೊಳ್ತೇವೆ. ನೀವು ಹೊರಡಿ.”- ಅಂದ.

“ಶಿಕ್ಷೆ ಏನೆಂದು ತಿಳಿದು ಬರಲು ಗುರುಗಳು ಹೇಳಿದರು.”

“ನೀವೇ ಬಹಿಷ್ಕಾರ ಹಾಕಿಬಿಟ್ಟಿದ್ದೀರಲ್ಲ?”

“ಅದು ತಾತ್ಕಾಲಿಕ. ಶಿಕ್ಷೆ ಆಗಬೇಕಾದ್ದು ನಿಮ್ಮ ಚಿರಂಜೀವಿಗಲ್ಲ, ಈ ಶೂದ್ರನಿಗೆ! ಯಾಕೆಂದರೆ ಇಷ್ಟೆಲ್ಲಾ ರದ್ಧಾಂತಕ್ಕೆ ಪ್ರಚೋದನೆ ಕೊಟ್ಟವನು ಇವನೇ! ಈ ಶೂದ್ರನಿಗೆ ಶಿಕ್ಷೆ ಆಗುವತನಕ ಮಾತ್ರ ನಿಮ್ಮ ಚಿರಂಜೀವಿಗೆ ಶಿಕ್ಷೆ. ಇವನಿಗೆ ಕೊಟ್ಟ ಕೂಡಲೇ ನಿಮ್ಮ ಚಿರಂಜೀವಿಯನ್ನ ಹಿಂತೆಗೆದುಕೊಳ್ಳುತ್ತೇನೆ.”

ಚಂಡೀದಾಸ, ಸುಕ್ರ ಇಬ್ಬರೂ ದೃಷ್ಟಿಗಳ ವಿನಿಮಯ ಮಾಡಿಕೊಂಡು ರಾಜವೈದ್ಯನ ಕಡೆಗೆ ನೋಡಿದರು. ಶಿಖರಸೂರ್ಯ ಮತ್ತೆ ಅರ್ಚಕನನ್ನೇ ಕೇಳಿದ

"ಶಿಕ್ಷೆ ಏನಾಗಬೇಕೆಂದು ಗುರುಗಳು ಅಪ್ಪಣೆ ಕೊಡಲಿಲ್ಲವೆ?"

"ಧರ್ಮಗ್ರಂಥ ಮತ್ತು ನ್ಯಾಯಶಾಸ್ತ್ರಗಳನ್ನು ಪರಿಶೀಲಿಸಿ ಹೇಳಿದ್ದಾರೆ: ಶೂದ್ರನಿಗೆ ಇಂಥ ಅಪರಾಧಕ್ಕೆ ಮರಣ ದಂಡನೆಯೇ ಸರಿಯಾದ ಶಿಕ್ಷೆ!"

ಬಂಡೆಯ ನಿಂತಲ್ಲೇ ಥರಥರ ನಡುಗಿದ! ಸುಕ್ರ ಬಾಯ್ದೆರೆದು ಒಮ್ಮೆ ರಾಜವೈದ್ಯನನ್ನ, ಇನ್ನೊಮ್ಮೆ ಅರ್ಚಕನನ್ನ ನೋಡುತ್ತ ಬಾಯಿಗೆ ಮಾತು ಬಾರದೆ ತಬ್ಬಿಬ್ಬಾಗಿ ನಿಂತುಬಿಟ್ಟ. ಶಿಖರಸೂರ್ಯ ಒತ್ತಾಯದ ಅನುಕಂಪವನ್ನು ತಂದುಕೊಂಡು ಹೇಳಿದ:

"ಅರ್ಚಕರೇ ರಾಜ್ಯದ ಕಾನೂನುಗಳನ್ನು ಪರಿಶೀಲಿಸಿ ನಾವೇ ಶಿಕ್ಷೆ ಕೊಡುತ್ತೇವೆ ಅಂತ ಗುರುಗಳಿಗೆ ಹೇಳಿ, ನೀವಿನ್ನು ಹೊರಡಬಹುದು."

"ಆಯ್ತು."

-ಎಂದು ಅರ್ಚಕರು ಹೊರಡುತ್ತ ಆಶೀರ್ವಾದದ ಮಂತ್ರೋಚ್ಚಾರಣೆಗಾಗಿ ಬಾಯಿ ತೆರೆಯಲಿದ್ದಾಗ ಶಿಖರಸೂರ್ಯ ತಕ್ಷಣ ಕೈ ಮುಗಿದು ಬಾಗಿಲು ತೋರಿಸಿದ. ಅರ್ಚಕ ಬಾಯಿ ಮುಚ್ಚಿಕೊಂಡು ಹೋದ. ಹಿಂದಿನಿಂದ ವಟುವೂ ಹೋದ.

ಈಗ ಚಂಡೀದಾಸ ಸಿಡಿದ,-

"ಸಾಕ್ಷಿ ಬೇಡ ಸ್ವಾಮಿ, ಏನು ನಡೆಯಿತಂದಾದರೂ ಗೊತ್ತಾಗಬೇಕಲ್ಲವೊ?"

ರವಿಕೀರ್ತಿಯನ್ನ ವಿದ್ಯಾಪೀಠದಿಂದ ಹೊರಗೆ ಹಾಕಿದ್ದು, ಅರ್ಚಕನ ಅಸಂಗತ ಬೇಡಿಕೆ ಇವೆಲ್ಲವುಗಳಿಂದ ಶಿಖರಸೂರ್ಯನಿಗೆ ಬೇಸರವಾಗಿ ಬಂಡೆಯನ ವಿವರ ಕೇಳುವುದರಲ್ಲಿ ಆಸಕ್ತಿ ಇರಲಿಲ್ಲ. ಚಂಡೀದಾಸ ಮತ್ತೆ ಕೇಳಿದ;

"ಹೇಳು ಬಂಡೆಯ ಅಲ್ಲಿ ನಡೆದದ್ದೇನು?"

ಕೊನೆಗೂ ಬಂಡೆಯ ಬಾಯಿ ಬಿಟ್ಟ,

"ಚಿಕೋಡೇರ್ಜೊತೆ ನಾನೂ ದೇವಸ್ಥಾನಕ್ಕೋಗಿದ್ದೆ. ಪೂಜಾರಪ್ಪ ನನ್ನ ಒರಗೇ ನಿಲ್ಲಿಸಿದ. ಅಂಗಾದ್ರೆ ನಾನೂ ಒಳಾಕೆ ಬರಾಕಿಲ್ಲ ಅಂತ ಚಿಕ್ಕೊಡೇರೂ ಒರಗೇ ನಿಂತಕಂಡ್ರು. ನೀವೂ ಒಳಕ ಬನ್ನಿ ಅಂದರೂ ಓಗನಿಲ್ಲ. ತೀರ್ತಪ್ರಸಾದ ಇಲ್ಲೇ ಇಬ್ರಿಗೂ ಕೊಡಿ ಅಂದ್ರು. ಅವರಿಗೆ ಕೊಟ್ಟು ನನಕ್ಕೊಡಲಿಲ್ಲ, ನನಗೂ ಬ್ಯಾಡ ಅಂದು ಪ್ರಸಾದವ ಕೆಳಾಕ ಚೆಲ್ಲಿ ಬಿಟ್ಟರು. ಅವರಿಗೆ ಕ್ವಾಪ ಬಂತು. 'ಸೂಳೇಮಗ್ನೇ ಪ್ರಸಾದ ಕೆಳಗಾಕ್ತೀಯ?' ಅಂತ ಬೈದು ಪ್ರಸಾದಾನ್ನ ರಪ್ಪಂತ ಚಿಕ್ಕೋಡರ ಮಕ್ಕಕ್ಕ ರಾಚಿ ಒಳೀಕೊಂಟರು. ಇವರು ಅವಯ್ಯನ್ನ ಇಡದೆಳೆದು ಒಂದೇಟು ಕೊಟ್ಟರು, ಇಷ್ಟೇಯ ನಡೆದದ್ದು."

"ಅಂದರೆ ನಿಮಗೆ ತೀರ್ಥಕೊಟ್ಟೋರು ದೊಡ್ಡ ಅರ್ಚಕರೋ? ಚಿಕ್ಕವರೋ?"

"ಚಿಕ್ಕವರು, ಆ ಹುಡುಗ ಬಂದದ್ನಲ್ಲ, ಅವನೇ, ದೊಡ್ಡೋರಿರಲಿಲ್ಲ."

ಮೂವರಿಗೂ ಆಘಾತವಾಯ್ತು, ಚಂಡೀದಾಸ ಕೇಳಿದ:

"ರವಿಕೀರ್ತಿ ಇದು ನಿಜವೊ?"

"ಹೌದು"

ಚಂಡೀದಾಸನಿಗೆ ಕೋಪ ಬಂತು:

"ನೀನೇನು ಮನುಷ್ಯನೋ? ಪಶುವೋ? ವಟು ಹೇಳಿದ್ದಕ್ಕೂ ಹೌದು ಅಂದೆ. ಈಗ ಬಂಡೆಯ ಹೇಳಿದ್ದಕ್ಕೂ ಹೌದು ಅಂತೀಯ! ನಿಜ ಯಾವುದು?"

"ಅಲ್ಲಿದ್ದವನು ಆ ವಟು ಮಾತ್ರ. ವಟುವಿನಿಂದಲೇ ನಮಗೆ ಮಂಗಳಾರತಿ ಆದದ್ದು. ಅಪ್ಪನಿಗೆ ತಾಳ್ಮೆ ಇಲ್ಲ. ನಿನ್ನ ಕುಲಪತಿಗಳೆದುರಿಗೆ ನಾನು ಇದನ್ನೇ ಹೇಳಿದೆ. "ದೊಡ್ಡವನೋ ಚಿಕ್ಕವನೋ - ಅರ್ಚಕ ಅರ್ಚಕನೇ! ಅಂತ ಸಮರ್ಥಿಸಿಕೊಂಡರು. ದೊಡ್ಡ ಅರ್ಚಕನನ್ನ ಕಳಿಸಿದ್ದೂ ಅವರೇ"

ಈಗ ಮೂವರ ಬಾಯಿಂದಲೂ ಮಾತು ಬರಲಿಲ್ಲ. ಚಂಡೀದಾಸ ತನಗೇ ತಾನೇ ಮಾತಾಡಿಕೊಂಡ.

"ನಾನೂ ಮೂರು ವರ್ಷ ಶಿವಪಾದನ ಆಶ್ರಮದಲ್ಲಿದ್ದೆನಪ್ಪ. ಒಂದು ದಿನವೂ ಗುರು ನನ್ನ ಕುಲ ಕೇಳಲಿಲ್ಲ. ಇಲ್ಲಿ ನೋಡಿದರೆ ಶೂದ್ರನಿಗೆ ಸಾಕ್ಷಿ ನುಡಿವ ಹಕ್ಕಿಲ್ಲ. ಸಾಲದ್ದಕ್ಕೆ ಸಣ್ಣ ಬಾಲಕ ಆ ವಟು ಸಹಜವಾಗೇ ಮಾಡಿದ ತಪ್ಪಿಗೆ ಶೂದ್ರ ತಲೆ ಒಪ್ಪಿಸಬೇಕು! ಇದ್ಯಾವ ಸೀಮೆಯಲ್ಲಿದ್ದೇನೆ ನಾನು!"

ವಿದ್ಯಾಪೀಠದ ಅಸಂಗತ ನಿಲುವು ಶಿಖರಸೂರ್ಯನಿಗೆ ಆಮೇಲೆ ಅರ್ಥವಾಯ್ತು. 'ಬಂಡೆಯನಿಗೆ ಮರಣದಂಡನೆ ಕೊಡಬೇಕು; ತಪ್ಪಿದರೆ ರವಿಕೀರ್ತಿಗೆ ಶಿಕ್ಷಣವಿಲ್ಲ' ಎನ್ನುವುದನ್ನ ವಿದ್ಯಾಪೀಠ ತಿಳಿಸಿತ್ತು. ಆ ಸೀಮೆಯಲ್ಲಿದ್ದ ಅದೊಂದು ವಿದ್ಯಾಪೀಠವೇ ಹೀಗಾದರೆ ಹ್ಯಾಗೆಂದು ಚಂಡೀದಾಸನಿಗೆ ಹೇಳಿದಾಗ-

"ನಿನ್ನ ಮುಂದೆ ಮೂರು ಆಯ್ಕೆಗಳಿದ್ದಾವೆ. ನಿನ್ನ ಕುಮಾರನನ್ನ ಶಿವಪಾದನ ಬೆಟ್ಟದಲ್ಲಾದರೂ ಇಡು. ಬೆಟ್ಟ ಏನೆಂದು ನಿನಗೇ ಗೊತ್ತಿದೆ. ಕಂಚೀಪಟ್ಟಣದ ಪುರುಷೋತ್ತಮನ ಆಶ್ರಮದಲ್ಲಾದರೂ ಇಡು, ಅಲ್ಲಿ ಅರವತ್ತನಾಲ್ಕು ವಿದ್ಯೆಗಳನ್ನ ಶಾಸ್ತ್ರೀಯಪದ್ಧತಿಯಲ್ಲಿ ಕಲಿಸಿ ಕೊಡೋದುಂಟು. ಅದೂ ಬೇಡವೆಂದರೆ ನಿನ್ನ ಕನಕಪುರಿಯ ನರಕದಲ್ಲಾದರೂ ಇಡು."

ಎಂದು ಚಂಡೀದಾಸ ಹೇಳಿದ. ಶಿಖರಸೂರ್ಯ ಯೋಚನೆ ಮಾಡಲೇಬೇಕಾಯಿತು.

ಆಶ್ಚರ್ಯವೆಂದರೆ ಚಂಡೀದಾಸ ತನ್ನ ಹವ್ಯಾಸದಂತೆ ಈ ಸಲ ಊರು ಬಿಡಲೇ ಇಲ್ಲ, ಒಂದು ತಿಂಗಳಾದರೂ ಕನಕಪುರಿಯಲ್ಲೇ ಇದ್ದ. ಈಗೀಗ ಶಿಖರಸೂರ್ಯನಿಗೆ ಹೆಚ್ಚು ಆಪ್ತನಾದ. ಕಾರಣ ಹೀಗಿರಬಹುದು: ಧನಪಾಲ ಪ್ರಧಾನಿಯಾದೊಡನೆ ಶಿಖರಸೂರ್ಯನ ಬದಲು ಅವನೇ ರಾಜವೈದ್ಯನಾಗೆಂದು ಹೇಳಿದ್ದ. ಅದನ್ನು ಚಂಡೀದಾಸ ಸ್ಪಷ್ಟವಾಗಿ ನಿರಾಕರಿಸಿದ್ದ. ಅಲ್ಲದೆ ವೈದ್ಯದಲ್ಲಿ ಶಿಖರಸೂರ್ಯನ ಮುಂದೆ ನಾನಲ್ಲ ಎಂದೂ ಹೇಳಿದ್ದ. ಇದು ಗೊತ್ತಾಗಿ ಆತ ಆಪ್ತನಾಗಿರಬಹುದು.

ಆದರೆ ಶಿಖರಸೂರ್ಯ ಪಾಪರಾಗಿದ್ದ, ಮೊದಲಿದ್ದ ಅಧಿಕಾರ ಕೈ ತಪ್ಪಿ ಹೋಗಿತ್ತು. ಕೈಲಿದ್ದ ಚಿನ್ನವನ್ನ ಕಳೆದುಕೊಂಡಿದ್ದ. ಧನಪಾಲನಿಗೂ ಇವನಿಗೂ ಅಷ್ಟಕಷ್ಟೆ. ಸುಕ್ರನ ಪಡೆಗಳಿಗೆ ಸಂಬಳ ಕೊಡಲಾರದೆ ಬಂಟರನ್ನು ಮನೆಗೆ ಕಳಿಸಲಾಗಿತ್ತು.

ಇತ್ತ ಕನಕಪುರಿಯ ಸ್ಥಿತಿಯಾದರೂ ಸರಿಯಿತ್ತೆ? ಹೊಸರಾಜ, ಹೊಸ ಪ್ರಧಾನಿ ಬಂದು ಚಿನ್ನದ ದಿನಗಳು ಅಸ್ತಂಗತವಾದಂತೆ ಕನಕಪುರಿ ಕಳೆಗುಂದಿತ್ತು. ಇಬ್ಬರು ವಿನಾ ಮಾಂಡಳಿಕರೆಲ್ಲ ಉದುರಿ ಹೋಗಿ ಸ್ವತಂತ್ರರಾಗಿದ್ದರು. ಇನ್ನು ಕೆಲವರು ನಿಷ್ಠೆ ಬದಲಿಸಿ ನೆರೆರಾಜರ ಮಾಂಡಳಿಕ ಮನ್ನೆಯರಾಗಿದ್ದರು. ಸರೀಕರಾಜರ ಮೇಲೆ ಯಕ್ಕಶ್ಚಿತ್‌ಪ್ರಭಾವವೂ ಉಳಿದಿರಲಿಲ್ಲ. ತೆರಿಗೆ ಕೇಳಿದರೆ ಸ್ವಯಂ ಕನಕಪುರಿಯ ಶೆಟ್ಟಿ ಸಾಹ್ಕಾರರೇ ಯಾವ ಪುರುಷಾರ್ಥಕ್ಕೆ ಕೊಡಬೇಕೆಂದು ಟೀಕಿಸಿದ್ದರು. ಸಣ್ಣಪುಟ್ಟ ಲೇನಾ ದೇನಾ ವ್ಯವಹಾರಗಳು ಆಯವ್ಯಯಗಳು, ಲಾಭ ಲುಕ್ಸಾನುಗಳು, ಜಾತಿ ವರ್ಗಗಳ ಬೆರಕೆಗಳು, ಸಣ್ಣ ಚಾಡಿಗಳು, ನಾಚಿಗೆ ಬರಿಸುವ ಲೈಂಗಿಕ ಕಲೆಗಳು ಮತ್ತು ವ್ಯವಹಾರಗಳು-ಇತ್ಯಾದಿಗಳಿಂದ ರಾಜಧಾನಿ ಗುಸುಗುಸು ಅಂತಿತ್ತೇ ಹೊರತು ದೊಡ್ಡ ಸುದ್ದಿಯ ಯುದ್ಧ ಕದನಗಳ ಘಟನೆಗಳೊಂದೂ ನಡೆಯಲಿಲ್ಲ. ಜನ ಹಿಂದಿನ ಕಾಲದ ದಿನಮಾನಗಳನ್ನು ಅಂದರೆ ಅರ್ಥಕೌಶಲ ಮತ್ತು ಗುಣಾಧಿಕ್ಯ ಮಹಾರಾಜರ ಕಾಲವನ್ನು ದೊಡ್ಡದು ಮಾಡಿ ಮಾತಾಡುತ್ತಿದ್ದರು.

ಇದ್ದ ಒಬ್ಬಿಬ್ಬರು ಅವಿನೀತ ಮಾಂಡಳಿಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದರೂ ವರ್ತಕರು ಒಪ್ಪಲಿಲ್ಲ. ಹೇಳಿದರು,

"ಯುದ್ಧಕ್ಕೆ ಹಣ ಬೇಕು, ಹಣ ಕೊಡೋರು ವರ್ತಕರು. ವ್ಯವಹಾರದಲ್ಲಿ ಲಾಭದ ಕಡೆಗೆ ಗಮನ ಇರೋಹಾಗೆ ಇಲ್ಲೂ ಇರಬೇಕಪ್ಪ. ಲಾಭ ಇದ್ದರೆ ಹಣ ಕೊಡೋಣ, ಇಲ್ಲವ? ಇದೊಂದು ಕೆಟ್ಟ ವ್ಯವಹಾರ, ಅಷ್ಟೆ!" ಎಂದು ಹೇಳಿಬಿಟ್ಟರು. ಕೆಲವರಂತೂ ಆಡಳಿತ ಮಂಡಳಿಯ ಸಭೆಯಲ್ಲೇ, ಆದಿತ್ಯಪ್ರಭ ಮಹಾರಾಜನ ಎದುರಿನಲ್ಲೇ "ಯುದ್ಧ ಮಾಡಲು, ಬಿಡಲು ಹೇಳಬೇಕಾದವರು ನಾವು, ವರ್ತಕರು. ನಾವು ಹೇಳಬೇಕಾದರೂ ನಮಗೆ ಜವಾಬ್ದಾರಿ ಇವೆ. ಒಂದು ದೇಶ ಯುದ್ಧ ತಡೆದುಕೊಳ್ಳಬೇಕಾದರೆ ಸಮೃದ್ಧಿ ಬೇಕು. ಸಮೃದ್ಧಿ ಇದ್ದರೇ ಬುದ್ಧಿಜೀವಿಗಳ ಬುದ್ದಿ ಕೆಲಸ ಮಾಡೋದು. ಎರಡೊತ್ತಿನ ಊಟಕ್ಕೂ ಪರದಾಡಬೇಕಾದ ಸ್ಥಿತಿಯಲ್ಲಿ ಪ್ರಜೆಗಳಿರಬೇಕಾದರೆ ಅಂಥವರಿಂದ ಯುದ್ಧ ತಡೆದುಕೊಳ್ಳಲಿಕ್ಕೆ ಆದೀತೆ?"

ಆದಿತ್ಯಪ್ರಭ ತನ್ನನ್ನು ನಂಬದೆ ಧನಪಾಲನನ್ನು ನಂಬಿದ್ದು ಕೂಡ ಒಳ್ಳೆಯ ಲಕ್ಷಣವೆ ಅಂದುಕೊಂಡ ಶಿಖರಸೂರ್ಯ. ಸನ್ನಿವೇಶ ಈಗ ತಾನು ಬಯಸಿದಂತೆಯೇ ಮಾಗುತ್ತಿರುವ ಎಲ್ಲ ಲಕ್ಷಣಗಳು ಕಂಡು ಬಂದವು. ತನ್ನ ಭವಿಷ್ಯ ಉಜ್ವಲವಾಗಬೇಕಾದರೆ ಚಂಡೀದಾಸನ ಸಹಾಯ ಬೇಕೇಬೇಕೆಂಬ ತೀರ್ಮಾನಕ್ಕೆ ಬಂದ. ಚಂಡೀದಾಸನನ್ನು ಈಗ ಹೆಚ್ಚಿನ ಆದರದಿಂದ ಕಾಣತೊಡಗಿದ.

ಕಂಚೀ ಪಟ್ಟಣದ ಪುರುಷೋತ್ತಮನ ಆಶ್ರಯದಲ್ಲಿ ರವಿಕೀರ್ತಿಯ ಅಧ್ಯಯನವೆಂದು, ಜೊತೆಗೆ ಬೊಂತೆಯನನ್ನೂ ಜೋಡಿ ಮಾಡಿ ಇಡುವುದೆಂದು ಶಿಖರಸೂರ್ಯ ತೀರ್ಮಾನಿಸಿದ. ಸ್ವಯಂ ತಾನೇ ಮಗನನ್ನು ಬಿಟ್ಟು ಬರಲು, ಜೊತೆಗೆ ಚಂಡೀದಾಸನನ್ನೂ ಕರೆದುಕೊಂಡು ಹೋದ.

ಪುರುಷೋತ್ತಮನನ್ನು ಒಪ್ಪಿಸುವುದು ಕಷ್ಟವಾಗಲಿಲ್ಲ. ಹೋಗುತ್ತ ಬರುತ್ತ ಎಂಟು ದಿನಗಳ ಕಾಲ ಕುದುರೆಗಾಡಿಯಲ್ಲಿ ಚಂಡೀದಾಸ ಮತ್ತು ಶಿಖರಸೂರ್ಯ ಜೊತೆ ಇದ್ದರಲ್ಲ, ದಾರಿಯಲ್ಲಿ ಅತಿ ಎಂಬಷ್ಟು ಚಂಡೀದಾಸನನ್ನು ಆದರಿಸಿ, ಅತೀ ಎಂಬಷ್ಟು ಅವನ ಅಹಂಕಾರವನ್ನ ಕೆರಳಿಸಿ ಹೊಗಳಿ ತೃಪ್ತಿ ಮಾಡಿದ. ಬರುವಾಗ ಕನಕಪುರಿ ತಲುಪುವ ಮುನ್ನ ಕೇಳಿದ:

"ನೀನು ನನಗೊಂದು ಉಪಕಾರ ಮಾಡಬಲ್ಲೆಯಾ?"

"ಮಾಡಬಲ್ಲೆ, ಆದರೆ ಆ ಉಪಕಾರದಿಂದ ನೀನೇನು ಪ್ರಯೋಜನ ಪಡೆಯುತ್ತೀ ಅನ್ನುವುದನ್ನು ಮೊದಲು ಹೇಳು,"

ಶಿಖರಸೂರ್ಯನಿಗೆ ಆಶ್ಚರ್ಯವಾಯಿತು ಆದರೂ ಪರೀಕ್ಷಿಸಬೇಕೆಂದು

"ಉಪಕಾರ ಏನೆಂದು ನಾನು ಹೇಳಲಿಲ್ಲ, ಆದರೂ ಗೊತ್ತಾಯಿತೆ?"

“ಹೌದು”

“ಏನು ಹೇಳು ನೋಡೋಣ.”

“ನಿನಗೆ ಚಿನ್ನ ಮಾಡುವ ವಿದ್ಯೆ ಬೇಕು; ಅಪಾರ ಚಿನ್ನ ಬೇಕು ಹೌದೋ?”

ಶಿಖರಸೂರ್ಯ ಪೆಚ್ಚು ಮುಖ ಹಾಕಿ, ಆದರೂ ಹೆಚ್ಚಿನ ಕೌತುಕದಿಂದ ಕೇಳಿದ:

“ಹೌದು”

“ಅದನ್ನೇ ನಾನೂ ಹೇಳಿದೆ. ಅದರಿಂದ ನಿನಗೇನು ಪ್ರಯೋಜನ? ಅಂತ ಮೊದಲು ಹೇಳು. ಅಂದರೆ ಆ ವಿದ್ಯೆ ಕೊಡುವ ವ್ಯಕ್ತಿಯನ್ನ ತೋರಿಸುತ್ತೇನೆ.”

“ಇಷ್ಟೆಲ್ಲಾ ಹೇಳಿದವನು ಅದೂ ನಿನಗೆ ಗೊತ್ತಿರಬೇಕಲ್ಲ.”

“ಗೊತ್ತಿದೆ. ಆದರೂ ಹೇಳು”

“ನಾನು ಜನೋಪಕಾರ ಮಾಡಬೇಕು. ಈ ಪ್ರಪಂಚವನ್ನ ಬಡತನದಿಂದ ಮುಕ್ತಗೊಳಿಸಬೇಕು.”

ಚಂಡೀದಾಸ ತೊಡೆ ತಟ್ಟಿ ಹೃತ್ಪೂರ್ವಕ ನಕ್ಕ, ಭಂಗಿತನಾಗಿ ಶಿಖರಸೂರ್ಯ ಕೇಳಿದ,

“ಯಾಕೆ ನಕ್ಕೆ ಹೇಳು?”

“ಈ ಮಾತನ್ನ ನಾನು ನಂಬುತ್ತೇನೆ ಅಂತ ಅಂದುಕೊಂಡೆಯಲ್ಲವೊ? ಅದಕ್ಕೆ!”

“ನನ್ನ ನಿಜ ಗೊತ್ತಿದ್ದರೆ ಹೇಳು. ನಿನ್ನ ನಿಗೂಢ ವಿದ್ಯೆಯನ್ನಾದರೂ ಪರೀಕ್ಷಿಸೋಣ.”

“ಪರೀಕ್ಷೆ ಆಮೇಲೆ, ಈಗ ವಿಷಯ ತಿಳಿದುಕೊ: ನೀನು ಚಿನ್ನ ಮಾಡುವ ವಿದ್ಯೆ ಬೇಕೆಂತ ಕೇಳ್ತಿರೋದು; ಸಾಮ್ರಾಟನಾಗಲಿಕ್ಕೆ! ನೀನು ಸಾಮ್ರಾಟನಾಗಲೂಬಹುದು. ತೊಂದರೆಯೇನೆಂದರೆ ಮಂತ್ರದ ಚಿನ್ನ ಚಿನ್ನವಾಗದಣ್ಣಾ! ತಿರುಮಂತ್ರ ಹಾಕುವಾತ ಎದುರಾದರೆ ನಿನ್ನ ಕತೆ ಮುಗಿಯಿತು! ಅದಕ್ಕೇ ಹೇಳುತ್ತೇನೆ ಮಿತ್ರಾ ಚಿನ್ನದ ಆಸೆ ಮಾಡುವಾತ ಒಂದೆರಡಲ್ಲ; ಹತ್ತು ಸಲ ಬೆರಳು ಮಡಿಚಿ ಯೋಚನೆ ಮಾಡಬೇಕು! ನಿರ್ಧಾರ ತಗೋಬೇಕು!”

ಚಂಡೀದಾಸನ ಮಾತಿನಲ್ಲಿ ಸಹಜವಾದ ಸ್ನೇಹವಿತ್ತು, ಅನುಕಂಪವಿತ್ತು. ಶಿಖರಸೂರ್ಯನ ಅನಿಸಿಕೆಯೇ ಬೇರೆ ಇತ್ತು. ಇವನ ಮಾತಿನ ಹಿಂದೆ ರಹಸ್ಯೋದ್ದೇಶವೇನಾದರೂ ಇದೆಯ? ಅಂತ ಹುಡುಕಿದ. ತನ್ನ ಪಾಡಿಗೆ ತಾನು ಚಂಡೀದಾಸ ಮುಂದುವರೆಸಿದ:

“ಜನೋಪಕಾರಕ್ಕಾಗಿ ಚಿನ್ನಬೇಕು, ಅಂದೆಯಲ್ಲ; ನನಗ್ಯಾಕೆ ನಗು ಬಂತು ಗೊತ್ತೊ? ನಾಗಾರ್ಜುನ ನನ್ನ ಗುರುವಿಗೆ ಇದೇ ಉತ್ತರ ಕೊಟ್ಟಿದ್ದ. ಶಿವಪಾದನಂತೆ ನನಗೂ ನಗು ಬಂತು. ನನ್ನ ಗುರು ಕೊಟ್ಟ ಉತ್ತರವನ್ನೇ ನಾನೂ ಕೊಟ್ಟೆ! ಶಿವಪಾದ ಹೇಳಿದ ಇನ್ನೂ ಒಂದು ಮಾತು ತಿಳಿದುಕೊ: ಚಿನ್ನ ಅಂದರೆ ಸಂಗ್ರಹ. ಒಬ್ಬ ಒಂದು ವರ್ಷದ ಶ್ರಮದಿಂದ ಹತ್ತು ಚೀಲ ಧಾನ್ಯ ಬೆಳೀತಾನೆ. ನೀನು

ಅದನ್ನು ಹತ್ತು ಚಿನ್ನದ ಹಣದಲ್ಲಿ ಸಂಗ್ರಹಿಸುತ್ತೀ ಅಲ್ಲವೊ? ಇದೇ ಸಂಗ್ರಹ. ಸಂಗ್ರಹ ಮಾಡಿದಾಗಲೇ ನೀನು ಸಮಾಜವನ್ನ ಉಳ್ಳವ-ಇಲ್ಲದವ-ಅಂತ ಎರಡಾಗಿ ಒಡೆದುಬಿಟ್ಟೆ!"

ಶಿಖರಸೂರ್ಯನಿಗೆ ಬೋರು ಬೋರಾಯಿತು. ಶಿವಾಪುರದ ನೆನಪುಗಳಿಂದ ಇವನು ಹೊರಬರಲಾರನೆಂದು ತೀರ್ಮಾನಿಸಿ ನಿರುತ್ಸಾಹದ ನೀರಸ ದನಿಯಲ್ಲಿ ಕೆಣಕಿದ-

"ಆಯಿತಪ್ಪ, ಸಂಗ್ರಹಿಸೋದನ್ನ ಬಿಟ್ಟರೆ ನಿನ್ನ ಗುರು ಹೇಳುವ ಸಮಾನತೆ ಬಂದಂಗಾಯ್ತೊ?"

"ಖಂಡಿತ"

ಅಗೋ! ಅಲ್ಲಿ ನೋಡು ಸಮಾನರು ಕೂತಿದ್ದಾರೆ; ಹಾಂಗಿರಬೇಕು ನಿನ್ನ ಗುರುವಿನ ಸಮಾಜ!"

-ಎಂದು ಅನತಿದೂರದ ಮರದಡಿ ಕೆಲವು ಕೂತು, ಕೆಲವು ಒರಗಿ, ಕೆಲವು ಹಾರಾಡಿ ಕೆಲವು ಚೇಷ್ಟೆಯಲ್ಲಿ ತೊಡಗಿರುವ ಕಪಿಗಳ ಹಿಂಡು ತೋರಿಸಿ ಶಿಖರಸೂರ್ಯ ಹೋ ಎಂದು ಗಹಗಹಿಸಿ ನಕ್ಕ. ಚಂಡೀದಾಸ ನಗಲಿಲ್ಲ. ಕೋತಿಗಳನ್ನೇ ನೋಡುತ್ತ ಕೂತ. ಮತ್ತೆ ಶಿಖರಸೂರ್ಯನೇ ವಿನೋದದ ನಗೆಯನ್ನ ನಿಯಂತ್ರಿಸಿ ಕೇಳಿದ:

"ನಾಗಾರ್ಜುನ ಈಗಲೂ ಇದ್ದಾನಾ?"

"ಇದ್ದಾನೆ"

"ನಿಜವಾಗ್ಲೂ?"

"ನಿಜವಾಗ್ಲೂ ಇದ್ದಾನೆ. ನಿನ್ನ ಹದ್ದಿನ ಕೊಳ್ಳದ ಪಡುವಣದಂಚಿಗೆ ಗರುಡನ ಬೆಟ್ಟ ಇದೆಯಲ್ಲ, ಅದರ ಶಿಖರದಲ್ಲಿ!"

ಚಂಡೀದಾಸನ ಮಾತಿನಲ್ಲಿ ದೊಡ್ಡ ಮನುಷ್ಯನಿಗೆ ಸಹಜವಾದ ಅನುಗ್ರಹ ಭಾವವಿದ್ದುದನ್ನು ಶಿಖರಸೂರ್ಯ ಒಪ್ಪಿಕೊಂಡ.

## ನಲವತ್ತೊಂದು

ಅಣ್ಣ ಕಂಚೀಪಟ್ಟಣಕ್ಕೆ ಹೋದಮೇಲೆ ಗೌರಿ ಹೆಚ್ಚು ಒಂಟಿಯಾದಳು; ಏಕಾಂತಪ್ರಿಯಳಾದಳು. ಸುದೈವದಿಂದ ಅಣ್ಣನ ಬದಲು ಚಂಡೀದಾಸ ಸಿಕ್ಕ. ಅವಳಿಗೆ ಆತ ಧ್ಯಾನ ಮಾಡುವುದನ್ನ ಕಲಿಸಿದ. ಒಮ್ಮೆ "ನೀನು ಥೇಟ್ ಅಮ್ಮನ ಹಾಗೇ ಇದ್ದೀಯಮ್ಮ!" ಎಂದು ಹೇಳಿ ನಿಂತಲ್ಲೇ ಗದ್ಗದಿತನಾಗಿ ನಮಸ್ಕಾರ ಮಾಡಿದ. ಅವಳು ಸಂಕೋಚದಿಂದ ಓಡಿಹೋಗಿ ಅಜ್ಜಿಯ ಹಿಂದೆ ಅವಿತಿದ್ದಳು.

ಒಂದು ದಿನ ವೈದ್ಯಶಾಲೆಯಲ್ಲಿ ಚಂಡೀದಾಸನೊಬ್ಬನೇ ಯೋಚನೆ ಮಾಡುತ್ತ ಕೂತಿದ್ದ. ಈಗಿನ ಮಹಾರಾಜ ಸದಾ ಕಾಮೋದ್ರಿಕ್ತನಾಗಿರುವ ಮದ್ದಿನಂಥ ವಿಷ ತಗೊಂಡಿದ್ದ. ಅದನ್ನ ಯಾರು ಆತನಿಗೆ ಕೊಟ್ಟಿದ್ದರೋ, ಅದು ವಿಪರೀತಕ್ಕೆ ಮುಟ್ಟಿದರೆ ಮಹಾರಾಜ ಶಾಶ್ವತವಾಗಿ ವಿಕಲಾಂಗನಾಗಿ ಬಿದ್ದುಕೊಂಡಿರಬೇಕಾದ ಸ್ಥಿತಿ ಮುಟ್ಟುವುದು ನಿಶ್ಚಿತವಿತ್ತು. ಯಾಕೆಂದರೆ ಎಲ್ಲಿಂದಲೋ ಪ್ರವೇಶ ಮಾಡುವ ರೋಗ ಇನ್ನೆಲ್ಲೋ ತನ್ನ ಲಕ್ಷಣಗಳನ್ನು ತೋರಿಸುವಂತೆ, ಯಾವುದೋ ರೂಪದಲ್ಲಿ ತೋರಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಮದ್ದು ಕೊಟ್ಟವನಿಗಲ್ಲದೆ ಬೇರೆಯವನಿಗೆ ಗುಣಪಡಿಸುವುದು ಸುಲಭ ಸಾಧ್ಯವಾಗದು. ಅಲ್ಲದೆ ಮಹಾರಾಜ ಸದಾ

ಉನ್ಮತ್ತನಾಗಿರುವುದರಿಂದ ಪರೀಕ್ಷೆಗೆ ಸಹಕರಿಸುತ್ತಿರಲಿಲ್ಲ. ಮದುವೆ ಬೇಡವೆಂದು ಧನಪಾಲನಿಗೆ ತಾನು ಹೇಳಿದ್ದು ಫಲ ನೀಡಿರಲಿಲ್ಲ. ನಿವ್ವಳ ಲಾಭ ಸಿಕ್ಕುವಾಗ ಒಂದು ಹೆಣ್ಣು ಜೀವದ ಬಲಿ ಹೆಚ್ಚಲ್ಲ ಎನ್ನುವ ಪೈಕಿ ಅವನು. ಶಿಖರಸೂರ್ಯನಿಗೆ ಈ ಸಂಗತಿ ಹೇಳಿದಾಗ,

"ಅವರವರ ಕರ್ಮಕ್ಕೆ ನಾವೇನು ಮಾಡಲಾದೀತು? ಮಹಾರಾಜ ನನಗೂ ಸಹಕರಿಸುತ್ತಿಲ್ಲ" ಎಂದು ಹಾರಿಕೆಯ ಉತ್ತರ ಕೊಟ್ಟು ಜಾರಿಕೊಂಡಿದ್ದ. ಮದ್ದು ಕೊಟ್ಟವನು ಅವನೇ ಇರಬಹುದೆಂಬ ಸಂದೇಹವೂ ಚಂಡೀದಾಸನಲ್ಲಿ ಇದ್ದುದರಿಂದ ಈ ವಿಷಯವನ್ನ ಅವನೆದುರು ಬೆಳೆಸಿರಲಿಲ್ಲ. ತನ್ನ ಪಾಡಿಗೆ ತಾನು ಅಮ್ಮನ ಹೆಸರುಗೊಂಡು ಶಿವಪಾದನ ನೆನೆದು ಮಹಾರಾಜ ತಗೊಂಡಷ್ಟು ಮದ್ದು ಕೊಡುತ್ತ ಬಂದಿದ್ದ.

ಅಷ್ಟರಲ್ಲಿ ಗೌರಿ "ತಾತಾ ತಾತಾ" ಎಂದು ಗಿಳಿಯಂತೆ ಉಲಿಯುತ್ತ ಬಂದು ತೊಡೆಮೇಲೆ ಕೂತು "ನನಗೆ ಶಿವಪಾದನ ಕತೆ ಹೇಳು ಎಂದಳು. ವಿಷವೈದ್ಯದ ಬಗ್ಗೆ ಆಲೋಚಿಸುತ್ತಿದ್ದಾಗ ಈ ತಾಯಿ ಬಂದು ಶಿವಪಾದನ ಕತೆ ಹೇಳು ಎಂದಳಲ್ಲ! ಎರಡು ವಿರುದ್ಧ ಸಂಗತಿಗಳನ್ನ ಸಾಂಗತ್ಯಗೊಳಿಸಲು ಸಾಧ್ಯವಾಗದೆ ಸ್ವಲ್ಪ ಹೊತ್ತು ಸುಮ್ಮನೆ ಕೂತ. ಆಮೇಲೆ ತಾಯಿಯೇ ನನ್ನ ಪರೀಕ್ಷೆಗೆ ಬಂದಳೆಂದು ಗದ್ಗದಿತನಾದ. ತೊಡೆಯ ಮೇಲೆ ಕೂತು ಕುಲುಕುಲು ನಗುವ ಗೌರಿಯ ನೋಡಿ ಬಾಯಿಂದ ಮಾತು ಬಾರದಾಯ್ತು. ಕೆಳಗಿಳಿಸಲು ಮನಸ್ಸು ಬಾರದು. ಧಾರಾಕಾರ ಕಣ್ಣೀರು ಸುರಿಸುತ್ತ "ತಾಯೀ ತಾಯೀ" ಎಂದು ತೊದಲಿದರೆ ಅದು ಗಂಟಲಲ್ಲೇ ಬತ್ತಿ ಹೋಯ್ತು. ಗೌರಿ ಮಾತಾಡದಿದ್ದರೆ ಮೂರ್ಛೆ ಹೋಗುತ್ತಿದ್ದನೋ ಏನೊ, ಅಷ್ಟರಲ್ಲಿ ಗೌರಿ ಕೇಳಿದಳು:

"ಯಾಕೆ ತಾತಾ ಅಳುತ್ತಾ ಇದ್ದೀಯಲ್ಲ?" ಆಗಲೂ ತೊದಲಿದ.

"ಕತೆ ಬೇಡ ಅಂದರೆ ಆಟ ಆಡೋಣ."

-ಅಂದಳು ಗೌರಿ. "ಆಯ್ತು ತಾಯೀ!" ಅಂದು ಸಾವರಿಸಿಕೊಂಡ.

* * *

ಇನ್ನೊಂದು ದಿನ ಈಗ ಮೂರು ದಿನಗಳಿಂದ ಚೆಲುಮೆಯಿಂದ ಸಿಡಿದ ಮೂರು ಚಿನ್ನದ ಕಾಳುಗಳನ್ನು ಅವಳ ಕೈಗಿತ್ತು. "ಭದ್ರವಾಗಿ ಹಿಡಿದುಕೊ ತಾಯಿ!" ಅಂದ. ಹಿಡಿದುಕೊಂಡಳು. "ಕಣ್ಣುಮುಚ್ಚಿಕೊ" ಅಂದ. ಮುಚ್ಚಿಕೊಂಡಳು. "ನಾನು ಹೇಳುವತನಕ ಕಣ್ಣು ತೆರೆಯಬೇಡ"ವೆಂದು ಹೇಳಿ ಮುಂದಿನ ಜಾಗವನ್ನ ತನ್ನ ಹೆಗಲ ಮೇಲಿನ ಬಟ್ಟೆಯಿಂದ ಹಸನು ಮಾಡಿ, ಅಲ್ಲಿ ಗೌರಿಯನ್ನು ಕೂರಿಸಿ ಮೆಲ್ಲನೆ ಪಾದಗಳನ್ನು ಒರೆಸಿ ಸ್ವಚ್ಚಮಾಡಿ, ಕೈ ಮುಗಿದು ದೂರ ಕೂತ.

"ತಾಯೀ ನಿನಗೆ ಇಷ್ಟವಾದವರು ಯಾರು?" ಅಂದ.

"ನನಗೆ ಎಲ್ಲರೂ ಇಷ್ಟ."

"ನಿನಗೀಗ ಯಾರನ್ನು ನೋಡುವುದಕ್ಕೆ ಇಷ್ಟ?"

"ನಾನು ಹೇಳಿದವರನ್ನ ತೋರಿಸ್ತೀಯಾ ತಾತಾ?"

-ಎಂದು ಕೌತುಕದಿಂದ ಕಣ್ಣು ತೆರೆದಳು.

“ತೋರಿಸ್ತೀನಿ, ಎದುರಿಗಲ್ಲ, ನೀನು ಕಣ್ಣು ಮುಚ್ಚಿಕೊಂಡಿದ್ದರೆ ಒಳಗಣ್ಣಿಗೆ ತೋರಿಸ್ತೀನಿ ಆದೀತೋ?”

“ಆದೀತು. ಇಕೋ ಮುಚ್ಚಿಕೊಂಡೆ” ಎಂದು ಕಣ್ಣು ಮುಚ್ಚಿಕೊಂಡಳು.

“ಯಾರನ್ನ ನೋಡಬೇಕು?”

“ನನ್ನ ಸೋದರ ಮಾವ ತರುಣಚಂದ್ರನನ್ನ.”

“ಆಗಲಿ ಅವನ ರೂಪವನ್ನು ಕಲ್ಪಿಸಿಕೊ”

“ನಾನವನನ್ನ ನೋಡೇ ಇಲ್ಲ!”

“ನಾನೇ ತರುಣಚಂದ್ರ ಅಂತ ಯಾರಾದರೂ ನಿನ್ನ ಕನಸಿಗೆ ಬಂದರೆ ಆದೀತೊ?”

“ಹ್ಯಾಗಾದೀತು? ಅವನನ್ನ ಕಂಡರೆ ನನಗೆ ಇವನೇ ನನ್ನ ಮಾವ ಅಂತ ಗೊತ್ತಾಗ್ತದೆ.”

“ನೀನು ಅವನನ್ನು ನೋಡೇ ಇಲ್ಲವಲ್ಲ?”

“ಅದಕ್ಕೇ ಅವನನ್ನ ನೋಡಬೇಕು. ಅವನ ನೆನಪು ಮಾಡಿಕೊಂಡು ಅಜ್ಜಿ ಆಗಾಗ ಅಳ್ತಾಳೆ. ನಾನವನನ್ನ ಮದುವೆ ಆಗಬೇಕಾಗಿತ್ತಂತೆ.”

“ಹಾಗಾದರೆ ಗುಡಿಯಲ್ಲಿ ಶಿವ ಇದ್ದಾನಲ್ಲ, ಅವನನ್ನೇ ಕಲ್ಪಿಸಿಕೊ. ಅವನೇ ಬಂದು ತೋರಿಸ್ತಾನೆ.”

ತರುಣಚಂದ್ರ ಕಳೆದು ಹೋದ ವಿಷಯ ಚಂಡೀದಾಸನಿಗೆ ಕೊಂಚ ಗೊತ್ತಿತ್ತು. ಕಾಣೆಯಾಗಿದ್ದ ಅವನ ಬಗೆಗಿನ ಕುತೂಹಲವನ್ನು ಕೆದರಿ ಕೇಳಿ ಈ ಕೂಸಿನ ಭಾವನೆಗಳನ್ನು ನೋಯಿಸಲು ಮನಸ್ಸಾಗಲಿಲ್ಲ.

“ಕಂದಾ ಈಗ ನೀನು ಕಣ್ಣು ಮುಚ್ಚಿ ಬಲಗೈ ಮುಷ್ಟಿಯನ್ನ ಗಟ್ಟಿಯಾಗಿ ಹಿಡಿದುಕೊಂಡು ಗುಡಿಯ ಶಿವನ ಜ್ಞಾಪಿಸಿಕೊ.”

“ಆಯ್ತು”

-ಎಂದು ಕಣ್ಣು ಮುಚ್ಚಿದಳು. “ಇನ್ನುಮೇಲೆ ನಾನು ಹೇಳುವತನಕ ಕಣ್ಣು ತೆರೆಯಬೇಡ. ಶಿವನನ್ನ ಪ್ರೀತಿಯಿಂದ ಅಂತಃಕರಣದಿಂದ ಕಲ್ಪಿಸಿಕೊಳ್ಳಬೇಕು” ಹೀಗೆ ಏನೇನೋ ಹೇಳುತ್ತ ಮಧ್ಯೆ ಮಧ್ಯೆ ‘ಓಂ ನಮಃ ಶಿವಾಯ’ ಎನ್ನುತ್ತ ಹೋದ.

ಗೌರಿಗೆ ಅವನ ದನಿ ಮಾತ್ರ ಕೇಳಿಸುತ್ತಿತ್ತು. ಮಾತಿನ ಅರ್ಥ ಅವಳಿಗೆ ತಲುಪಲೇ ಇಲ್ಲ. ಅವನೇನೋ ಹೇಳುತ್ತಿದ್ದ. ಅವಳೇನು ಕಲ್ಪಿಸಿಕೊಂಡಳೋ…. ಅವಳಿಗ್ಯಾವ ಅಹಂಕಾರಗಳೂ ಇರಲಿಲ್ಲವಾದ್ದರಿಂದ ಬಹುಬೇಗ ತನ್ನ ಕಲ್ಪನೆಯನ್ನ ತಲುಪಿ ಅಲ್ಲಿಂದ ಮುಂದೆ ನಡೆದಳು.

ಈಗ ಅವಳ ಮುಖದ ಮೇಲೆ ಸುಗ್ಗಿ ಕಾಲದ ಹಗಲಿನ ಕಾಂತಿ ಬಂದಿತ್ತು. ಅದನ್ನು ನೋಡಿ ಬೆರಗಿನಿಂದ ಚಂಡೀದಾಸ ಮೌನಿಯಾದ. ಯಾರೋ ಹೊಸಬನನ್ನು ಕಂಡಂತಿತ್ತು ಅವಳ ಮುಖ. ಹುಬ್ಬುಗಳ ಚಲನೆಯಲ್ಲಿ ಕೌತುಕ ಮತ್ತು ಆನಂದಗಳಿದ್ದವು. ಹೊಸಬನೊಂದಿಗಿನ ಅವಳ ಸಹವಾಸದಲ್ಲಿ ಒಂದು ಅಲೌಕಿಕ ಮೆರುಗಿದ್ದದ್ದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು.

ಈಗ ಅಪರಿಚಿತನೊಂದಿಗೆ ಸಂತೋಷಕರ ಸಂಭಾಷಣೆ ನಡೆಸುತ್ತಿರುವಂತೆ ಕಂಡಿತು. ತನ್ನಲ್ಲಿದ್ದ ಗೊಂಬೆಗಳನ್ನು ಅವನಿಗೆ ಕೊಟ್ಟು ಅವನ ಗೊಂಬೆಗಳನ್ನು ತಾನು ತಗೊಂಡಂತೆ ಕಂಗೊಳಿಸಿದಳು. ಚಿಕ್ಕಂದಿನ ಯಾವುದೋ ಹಾಡಿನ ಲಯಕ್ಕೆ ತಲೆದೂಗಿದಳು. ತಾಳ ಹಾಕಿದಂತೆ ತಲೆ ಹಾಕಿದಳು. ಆಕೆಯ ಮುಖದಲ್ಲಿ ಸ್ವಚ್ಛವಾದ ಕೋಮಲವಾದ ಸಹಜ ಕಾಂತಿ ಹೊಳೆಯುತ್ತಿತ್ತು. ಚಂಡೀದಾಸ ಬೆರಗಿನಿಂದ ಧಾರಾಕಾರ ಕಣ್ಣೀರು ಸುರಿಸುತ್ತ ನೋಡುತ್ತಿದ್ದ. ತಾಯಿಯಿಂದ ಹೊರಟ ಆನಂದದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದ ಅನುಭವವನ್ನು ಪಡೆಯುತ್ತ ಕೈ ಮುಗಿದು ಕೂತ.

ಸ್ವಲ್ಪ ಹೊತ್ತಿನ ಬಳಿಕ ಗೌರಿ ಮೆಲ್ಲಗೆ ಕಣ್ಣು ತೆರೆದಳು. ಈಗಷ್ಟೇ ಪಡೆದ ಅನುಭವದ ನೆನಪು ಹಸಿಹಸಿಯಾಗಿ ಹಾಗೇ ಕಣ್ಣಿಗಂಟಿತ್ತು. ಚಕಿತ ನೇತ್ರಗಳಿಂದ ಚಂಡೀದಾಸನನ್ನು ನೋಡಿ, ಗುರುತಿಸಿ ಆಮೇಲೆ "ತಾತಾ!" ಅಂದಳು.

"ಏನು ತಾಯೀ?" ಅಂದ.

"ನನ್ನ ಮಾವನನ್ನ ಕಂಡೆ!" ಅಂದಳು.

"ನಿನಗೆ ಕಂಡವನು ನಿನ್ನ ಮಾವನೇ ಅಂತ ಹ್ಯಾಗೆ ಗೊತ್ತಾಯ್ತು?"

"ಅವನು ನನ್ನೆದುರಿಗಿದ್ದಾಗ ನನಗೆ ಇಂಥಾ ಸಂಶಯ ಬರಲೇ ಇಲ್ಲ."

"ಈಗ?"

"ಈಗಲೂ ಇಲ್ಲ"

"ಹಾಗಿದ್ದರೆ ಅವನು ನಿನ್ನ ಮಾವನೇ ಹೌದು!"

-ಎಂದು ಚಂಡೀದಾಸ ಚಕಿತನಾಗಿ ಹೇಳಿದ.

* * *

ಇನ್ನೆರಡು ದಿನ ಕಳೆದ ಮೇಲೆ ಬೆಳಿಗ್ಗೆ ಚಂಡೀದಾಸ ಅರಮನೆಯ ಬಗ್ಗೆ ಯೋಚಿಸುತ್ತ ಕೂತಿದ್ದ. ಮುಖದಲ್ಲಿ ಬೇಸರವಿತ್ತು. ಅರಮನೆಯ ವ್ಯವಹಾರಗಳು ಧನಪಾಲನ ಕೈಮೀರಿ ನಿಭಾಯಿಸಲಾಗದೆ ಚಡಪಡಿಸುತ್ತಿದ್ದದ್ದು ಸ್ಪಷ್ಟವಾಗಿತ್ತು. ಸಾಲದ್ದಕ್ಕೆ ಶಿಖರಸೂರ್ಯನ ಸ್ಥಳದಲ್ಲಿ ಚಂಡೀದಾಸನನ್ನು ರಾಜವೈದ್ಯನನ್ನಾಗಿ ನಿಯಮಿಸುವ ಪ್ರಸ್ತಾಪವನ್ನು ಬೇಡ ಬೇಡವೆಂದರೂ ಕೇಳದೇ ಈ ದಿನವೂ ಮಹಾರಾಜನೆದುರು ಮಾಡಿಬಿಟ್ಟಿದ್ದ. ಮೊದಲನೆಯದಾಗಿ ಕನಕಪುರಿಯ ಮೋಹವನ್ನು ಚಂಡೀದಾಸನೆಂದೋ ಕಳಚಿಕೊಂಡಿದ್ದ. ಎರಡನೆಯದಾಗಿ ಶಿಖರಸೂರ್ಯನ ಸ್ಥಳದಲ್ಲಿ ಬಂದು ಒಕ್ಕರಿಸುವ ಸಣ್ಣ ಬುದ್ಧಿ ಅವನಿಗಿರಲಿಲ್ಲ. ಮೂರನೆಯದಾಗಿ ಆದಿತ್ಯಪ್ರಭ ಮಹಾರಾಜ ಧನಪಾಲನ ಪ್ರಸ್ತಾವ ಕೇಳಿ "ಈ ವೈದ್ಯನಿಗೆ ವಿಷಹಾಕದ ಇನ್ನೊಬ್ಬ ಮಗಳಿದ್ದಾಳೊ?" ಎಂದು ಕೇಳಿ ಬಿಟ್ಟಿದ್ದ. ಇದನ್ನು ಕೇಳಿ ಚಂಡೀದಾಸ ಕತಕತ ಕುದಿಯುತ್ತ ಹೇಳದೆ ಕೇಳದೆ ಬಂದುಬಿಟ್ಟಿದ್ದ.

ಅಷ್ಟರಲ್ಲಿ ಗೌರಿ ಬಂದಳು. ಅವಳನ್ನು ಕಂಡೊಡನೆ ಇವನ ಸಂತಾಪ ಸಂಕಟಗಳು ಕರಗಿ ಹಸನ್ಮುಖಿಯಾದ. ಆದರೆ ಗೌರಿ ಎಂದಿನಂತೆ ಉತ್ಸಾಹದಲ್ಲಿರಲಿಲ್ಲ. ಮುಖ ಬಾಡಿತ್ತು. ಅಲ್ಲದೆ ನಿತ್ಯದ ಆಭರಣಗಳನ್ನೂ ಧರಿಸಿರಲಿಲ್ಲ. ದೇಹ ಬಡವಾದಂತೆ ಕಾಣುತ್ತಿತ್ತು.

“ಯಾಕೆ ಕಂದಾ ಇಷ್ಟು ಬೇಗ ಬಂದುಬಿಟ್ಟೆ? ಕನಸಿನಲ್ಲಿ ಇವತ್ತೂ ಮಾವನನ್ನ ಕಂಡೆಯೋ ಹೇಗೆ?” ಅಂದ.

“ಹೂ ತಾತ, ಇವತ್ತು ಕನಸಿನಲ್ಲಿ ಬಂದು ‘ನಿನ್ನ ಕೈಯಲ್ಲೇನಿದೆ ನನಗ್ಗೊತ್ತು’ ಅಂದ.”

‘ಹೇಳು ನೋಡುವಾ’ ಅಂದೆ.

‘ಮೂರು ಚಿನ್ನದ ಕಾಳಿವೆ, ಹೌದಾ’ ಅಂದ, ಹೇಳಿದ್ದಕ್ಕೆ ಪೆಚ್ಚಾಗಿ ಕೈ ತೆರೆದು ತೋರಿಸಿದೆ, ‘ಚಿನ್ನವೆಂದರೆ ನನಗಿಷ್ಟವಿಲ್ಲ!’ ಅಂತ ಹೇಳಿ ಕೋಪದಲ್ಲಿ ಮಾಯವಾಗಿ ಬಿಟ್ಟ!”-ಎಂದು ಹೇಳಿ ಗೌರಿ ಮುತ್ತುಗಳಂಥ ಕಣ್ಣೀರು ಸುರಿಸುತ್ತ ತನ್ನ ಕೈಯಲ್ಲಿದ್ದ ಮೂರೂ ಚಿನ್ನದ ಕಾಳುಗಳನ್ನ ಚಂಡೀದಾಸನ ಕೈಗಿಟ್ಟಳು. ಬಿಕ್ಕಿಬಿಕ್ಕಿ ಅಳುತ್ತಿರುವ ಅವಳನ್ನ ಸಮಾಧಾನ ಮಾಡುವುದೇ ಸಮಸ್ಯೆಯಾಯಿತು. ತಲೆ ನೇವರಿಸುತ್ತ ‘ನೋಡು ಚಿನ್ನು….’ ಎಂದರೆ ತಕ್ಷಣ “ನನಗಿನ್ನು ಮ್ಯಾಲೆ ಚಿನ್ನು ಅನ್ನಬೇಡ ತಾತಾ” ಎಂದು ಹೇಳಿ ಅಳು ಮುಂದುವರಿಸಿದಳು.

“ಮುದ್ದು ಅಂತೀನಾಯ್ತ?” ಅಂದರೆ ಆಗಲೆಂಬಂತೆ ಕತ್ತು ಹಾಕಿದಳು.

“ಸಿಟ್ಟು ಮಾಡಿ ಹೋದವನು ಮತ್ತೆ ನನ್ನ ಕನಸಿಗೆ ಬರ್ತಾನ ತಾತಾ?”

-ಅಂದಳು. ಚಂಡೀದಾಸ ಅಲ್ಲೇ ಬದುವಿನ ಮ್ಯಾಲಿದ್ದ ಒಂದು ಅಡಕೆ ತಗೊಂಡು “ನೋಡು ಮದ್ದೂ, ಈ ಅಡಕೆ ತಗೊ. ಇದನ್ನ ಹಿಡಿದುಕೊಂಡು ಧ್ಯಾನ ಮಾಡು; ಸಿಟ್ಟು ಮಾಡಿಕೊಂಡು ಹೋದ ನಿನ್ನ ಮಾವ ಬರದೆ ಹೋದರೆ ಹೇಳು”

ಎಂದು ಹೇಳಿ ಅಡಕೆಯನ್ನ ಅವಳ ಕೈಗಿಟ್ಟ.

ಗೌರಿ ಅಡಕೆ ತಗೊಂಡು ಓಡತೊಡಗಿದಳು. ತಕ್ಷಣ ಏನೋ ನೆನಪಾಗಿ

“ಮುದ್ದೂ ಇಲ್ಲಿ ಬಾ” ಅಂದ. ಬಂದಳು. “ಕೈಯಲ್ಲಿ ಚಿನ್ನದ ಬಳೆ, ಕತ್ತಿನ ಸರ ಇವತ್ತಿಲ್ಲವಲ್ಲ ಯಾಕೆ?”

“ನನ್ನ ಮಾವನಿಗೆ ಚಿನ್ನ ಇಷ್ಟವಿಲ್ಲ. ಅದಕ್ಕೆ ತಗೆದು ಬಿಟ್ಟೆ!”

-ಎಂದು ಹೇಳಿ ಓಡಿದಳು. ಚಂಡೀದಾಸ ಕಣ್ತುಂಬಿಕೊಂಡು ಮುದ್ದುವನ್ನೇ ನೋಡುತ್ತ ನಿಂತುಬಿಟ್ಟ.

ಅದರ ಮಾರನೇ ದಿನ ಚಂಡೀದಾಸ ಊರು ಬಿಡಲು ತಯಾರಾಗಿ ಶಿಖರಸೂರ್ಯನ ಭೇಟಿಗೆ ಬಂದ. ಶಿಖರಸೂರ್ಯ ವೈದ್ಯಶಾಲೆಯಲ್ಲಿ ಕೈಕಟ್ಟಿಕೊಂಡು ಚಿಂತೆ ಮಾಡುತ್ತ ನೆಲದ ಮೇಲೆ ಕೂತಿದ್ದ. ಆತ ಹಾಗೆ ಕೈಕಟ್ಟಿಕೊಂಡು ಹತಾಶನಾಗಿ ಕೂತಿದ್ದನ್ನು ಯಾರೂ ಕಂಡಿರಲಿಕ್ಕಿಲ್ಲ. ತನ್ನ ಸ್ಥಳದಲ್ಲಿ ಚಂಡೀದಾಸನನ್ನು ರಾಜವೈದ್ಯನನ್ನಾಗಿ ನಿಯಮಿಸಬೇಕೆಂದು ಯಾವಾಗ ಪ್ರಧಾನಿ ಯೋಚನೆ ಮಾಡಿದ್ದನೋ, ತನ್ನನ್ನು ಶ್ವಾನಕೂಪಕ್ಕಳಿಸಿ ನಾಯಿಗಳನ್ನ ಛೂ ಬಿಡಲು ಮಹಾರಾಣಿ ಯಾವಾಗ ಯೋಚನೆ ಮಾಡಿದಳೋ ಆಗಲೇ ಆತ ಕನಕಪುರಿಗೆ ಹೊರಗಿನವನಾಗಿಬಿಟ್ಟಿದ್ದ. ಮುಂದೇನೆಂದು ಹೊಳೆದಿರಲಿಲ್ಲ. ಶಿವಾಪುರದಿಂದ ಓಡಿಬಂದಾಗ ಹೆಂಡತಿ ಮಕ್ಕಳಿರಲಿಲ್ಲ. ಈಗ ಸಂಸಾರ ಕಟ್ಟಿಕೊಂಡಾಗಿತ್ತು. ಅವರಿಗೊಂದು ನೆಲೆಯ ವ್ಯವಸ್ಥೆಯಾಗಬೇಕು. ಅದನ್ನೇ ಯೋಚಿಸುತ್ತಿದ್ದಾಗ ಚಂಡೀದಾಸ ಬಂದು “ಊರು ಬಿಡಲು ಅಪ್ಪಣೆಯೆ?” ಅಂದ.

ಚಂಡೀದಾಸನ ಬಗ್ಗೆ ಶಿಖರಸೂರ್ಯನಲ್ಲಿ ಗೌರವಭಾವನೆ ಉಂಟಾಗಿತ್ತು. ಈ ಹಿಂದೆ ಕೂಡ ದುರಭಿಪ್ರಾಯ ಹೊಂದಿದ್ದು ಅರ್ಥಕೌಶಲನ ಚಾಡಿಗಳಿಂದ. ಈಗದ್ಯಾವುದಕ್ಕೂ ಅವಕಾಶವಿರಲಿಲ್ಲ. ಅಲ್ಲದೆ ತನ್ನ ಕೂಡಿಕೆಯ ಮಡದಿ ವಿದ್ಯುಲ್ಲೇಖೆಯ ತಂದೆಯೆಂಬ ಗೌರವ ಭಾವನೆಯೂ ಇತ್ತು. ಚಂಡೀದಾಸ "ಹೇಳಬೇಕಾದ ಒಂದು ಮಾತಿತ್ತಲ್ಲ…" ಎನ್ನುತ್ತ ಅವನ ಮುಂದೆ ನೆಲದ ಮೇಲೆ ಕೂತ.

"ಹಂಚಿಕೊಳ್ಳಬೇಕಾದ ಒಂದು ಮಾತಿತ್ತು."-ಎಂದು ಇವನೂ ಅಂದ.

"ನೀನು ಹಂಚಿಕೊಳ್ಳಬೇಕಾದ ಮಾತು, ನಾನು ಹೇಳೋ ಮಾತೂ ಒಂದೇ ಆಗಿರಬಹುದೊ? ಅಂತ ಅನುಮಾನ ನನಗೆ. ಇರಲಿ, ಈಗ ನೀನು ಹಂಚಿಕೊಳ್ಳೋ ಮಾತು ಹೇಳು."

-ಅಂದ ಚಂಡೀದಾಸ. ಶಿಖರಸೂರ್ಯ ಹೇಳಲೋ ಬೇಡವೋ ಹೇಳಿದರೆ ಹೇಡಿತನವಾದೀತ? ಅಂತ ಸ್ವಲ್ಪ ಹೊತ್ತು ತೂಗಿ ಕೊನೆಗೆ ಹೇಳಿದ:

"ನನ್ನ ಬಗ್ಗೆ ಅರಮನೆ ತಳೆದ ಧೋರಣೆಯಿಂದ ಬೇಸರವಾಗಿದೆ. ಊರು ಬಿಟ್ಟು ಹೋಗುವ ಆಲೋಚನೆ ಮಾಡಿದ್ದೇನೆ."

-ಎಂದು ಹೇಳಿ ನೆಲ ನೋಡುತ್ತ ಸುಮ್ಮನಾದ. ವಿದ್ಯಮಾನಗಳು ಊಹಿಸಬಾರದಂತೆ ಘಟಿಸತೊಡಗಿದ್ದರಿಂದ ಚಂಡೀದಾಸನೂ ಏನಾದರೂ ಹೇಳುವ ಸ್ಥಿತಿಯಲ್ಲಿರಲಿಲ್ಲ.

"ನನಗೂ ಪರಿಸ್ಥಿತಿಯ ಅಂದಾಜು ಆಗುತ್ತಿಲ್ಲ ಮಿತ್ರಾ. ಆದರೆ ನಿನ್ನ ಭವಿಷ್ಯದ ಬಗ್ಗೆ ಜ್ಯೋತಿಷ್ಯಶಾಸ್ತ್ರದ ಒಂದು ಮಾತು ಹೇಳೋಣ ಅನ್ನಿಸ್ತಿದೆ…. ಹೇಳಲೊ?"

"ಬೇಡ"

-ಎಂದು ಶಿಖರಸೂರ್ಯ ಅವನ ಉತ್ತರವನ್ನು ಕತ್ತರಿಸಿದ. ಸ್ವಲ್ಪ ಹೊತ್ತು ಇಬ್ಬರೂ ಸುಮ್ಮನಿದ್ದು ಕೊನೆಗೆ ಚಂಡೀದಾಸ ಎದ್ದ. ಬೀಳ್ಕೊಡಲು ಇವನೂ ಎದ್ದ. ತಬ್ಬಿಕೊಂಡು "ಮಕ್ಕಳನ್ನು ಚೆನ್ನಾಗಿ ನೋಡಿಕೊ" ಎಂದು ಹೇಳಿ ಚಂಡೀದಾಸ ನಡೆದ. ಇವನು ಭಾವುಕನಾಗಿ ನಿಂತುಕೊಂಡ.

ಚಂಡೀದಾಸ ಹೋಗಿ ಒಂದು ವಾರ ಕಳೆಯುವುದರೊಳಗಾಗಿ ಒಂದು ದಿನ ಅರಮನೆಗೂ ತಿಳಿಸದೆ ಹೆಂಡತಿ, ಮಗಳು ಮತ್ತು ಚಿಕ್ಕಮ್ಮಣಿ ಇವರನ್ನು ಕರೆದುಕೊಂಡು ಬಿಳಿಗಿರಿಗೆ ಹೋದ. ಅಲ್ಲಿ ಮೂವರನ್ನೂ ಬಿಟ್ಟು ತಾನೊಬ್ಬನೇ ಹದ್ದಿನ ಕೊಳ್ಳಕ್ಕೆ ಹೋಗಿ ವಿದ್ಯುಲ್ಲತೆಯೊಂದಿಗೆ ತೆಪ್ಪಗೆ ಇದ್ದುಬಿಟ್ಟ.

* * *

ಹದ್ದಿನಕೊಳ್ಳದಲ್ಲಿಯೂ ನಮ್ಮ ಕಥಾನಾಯಕ ಯಾರೊಂದಿಗೂ ಮನಸ್ಸು ಬಿಚ್ಚಿ ಮಾತಾಡಲಿಲ್ಲ. ಬರೀ ಮುಗುಳು ನಗೆ ಮತ್ತು ಹಾಹೂಗಳನ್ನೇ ಬದಲಿಸುತ್ತ ವಿದ್ಯುಲ್ಲತೆಗೆ ತನ್ನನ್ನು ತಾನು ಸಂಪೂರ್ಣ ಸಮರ್ಪಿಸಿಕೊಂಡು ಒಂದು ತಿಂಗಳಿದ್ದ.

ವಿದ್ಯುಲ್ಲತೆ ಮಾತ್ರ ಅವನು ಮಾತಾಡದ್ದಕ್ಕೆ ಬೇಸರ ಮಾಡಿಕೊಳ್ಳಲೇ ಇಲ್ಲ. ಆದರೆ ಹೇಳಿದಂತೆ ಕೇಳುತ್ತಿದ್ದನಾದ್ದರಿಂದ ಆನಂದದ ಶಿಖರದಲ್ಲಿದ್ದಳು. ಪಾದರಸದ ಬಳ್ಳಿಯಂತೆ ಸಂಚರಿಸುತ್ತ ಅವನ ಸೇವೆ ಮಾಡಿದಳು. ಅವನೊಮ್ಮೆ ಕಲ್ಲಕಟ್ಟೆಯ ಬಾವಿಗೆ ಹೋಗಿ ಹಲ್ಲುತೊಳೆದು ಬಹಿರ್ದೆಶೆ ಮುಗಿಸಿ ತಲೆಗೂದಲು ಬಿಚ್ಚಿ ಬೆನ್ನಿಗಿಕ್ಕಿಕೊಂಡು ಬಂದರಾಯ್ತು. ನೆತ್ತಿಗೆ ನೆಯ್ಯೆಣ್ಣೆ, ಕಿವಿಗೆ ಕೀಲೆಣ್ಣೆ ಬಿಟ್ಟು

ಬೆನ್ನಿಗೆ ಬಿಸಿಎಣ್ಣೆ, ಎದೆಗೆ ತಂಪೆಣ್ಣೆ, ಪಾದಕ್ಕೆ ಹನಿಯೆಣ್ಣೆ ಹಚ್ಚಿ, ಉಗುರಿಗೆ ಉರಿಯೆಣ್ಣೆ ಪೂಸಿ ಸಾವಿರ ಚೊಂಬು ಬಿಸಿನೀರು ಸಾವಿರ ಚೊಂಬು ತಣ್ಣೀರಿನಿಂದ ಸ್ನಾನ ಮಾಡಿಸುತ್ತಿದ್ದಳು. ಮೈಲಿಗೆ ಬಟ್ಟೆ ಬದಲಿಸಿ ಮಡಿಯುಡಿಸಿ ತಲೆಗೂದಲನ್ನ ಬೆನ್ನಿಗೆ ಕೊಡಹಿದರೆ ತಲೆಗೂದಲ ನೀರಹನಿ ಅಷ್ಟು ದೂರಕ್ಕೆ ಚಿಮ್ಮುತ್ತಿತ್ತು.

ಆಮೇಲೆ ಬಾಳೆಯೆಲೆ ಹಾಕಿ, ಹಾಕಿದ ಎಲೆಗೆ ನೀರು ಹನಿ ಚಿಮುಕಿಸಿ, ಮುತ್ತಿನ ಬಣ್ಣದ ಅನ್ನ, ಮೆಣಸು ಸೇರಿಸಿದ ಮೂವತ್ತು ಬಗೆಯ ಪಲ್ಯ, ಮಜ್ಜಿಗೆ ಸೇರಿಸಿ ಮಾಡಿದ ಹದಿನೈದು ಪಲ್ಯ, ತೆಂಗಿನ ಕಾಯಿ ಹಾಕಿದ ಹದಿನಾರು ಬಗೆಯ ಪದಾರ್ಥ ಬಡಿಸುತ್ತಿದ್ದಳು. ಅಮ್ಯಾಲೆ ನಿಂಬೆ ಮಾದಳದ ಉಪ್ಪಿನಕಾಯಿ ಬಡಿಸಿ ಅಕ್ಕಿಯ ಉಂಡೆಗೆ ಹಸಿರು ವರ್ಣದ ಸಾರು ಸುರಿಯುತ್ತಿದ್ದಳು. ಕೊನೆಯಲ್ಲಿ ಪಚ್ಚೆಸರಿನ ಪಾಯಸ ಹಾಕಿ ಘನವಾದ ಭೋಜನ ಪೂರೈಸಿದ ಮೇಲೆ ತೂಗುಯ್ಯಾಲೆಯಲ್ಲಿ ಕುಂತು ಸಂಚಿ ವೀಳ್ಯವ ಮೆಲ್ಲುತ್ತ ಸುಖಿಸುತ್ತಿದ್ದ.

ಅವನು ಕಾಡಿನಲ್ಲಿ ಸಂಚರಿಸಿ ಬಂದರೆ ಅವನ ಕೈಕಾಲು ತಾನೇ ತೊಳೆಯುತ್ತಿದ್ದಳು. ಮೋರೆಯ ಮುತ್ತು ಬೆವರು ತಾನೇ ಒರೆಸುತ್ತಿದ್ದಳು. ಬಟ್ಟಲಲ್ಲಿ ಬೆಲ್ಲ ಗಿಂಡಿಯಲ್ಲಿ ಹಾಲು ತಂದು ಕೈಯಾರೆ ಕುಡಿಸುತ್ತಿದ್ದಳು. ಬಾಳೆಯೆಲೆಯಲ್ಲಿ ಚಿಗುರು ವೀಳ್ಯ ಎಲೆ ಅಡಿಕೆ ಹೋಳು ಕೊಡುತ್ತಿದ್ದಳು. ಇಂತಿಪ್ಪ ಈ ಹುಡುಗಿ ಎಷ್ಟು ಸೇವೆ ಮಾಡಿದರೂ ಸಾಲದು ಸಾಲದೆಂದು ಚಡಪಡಿಸಿ ಸೇವೆ ಮಾಡಿದಳು.

ಸಂಜೆ ಮಲಗುವ ಮುನ್ನ ಮತ್ತು ಏಳುವಾಗ ಅವನು ಸದಾಕಾಲ ಹೀಗೆ ತನ್ನ ಸೇವೆ ಸ್ವೀಕರಿಸುತ್ತಲೇ ಇಲ್ಲೇ ಇರಲೆಂದು, ಜೊತೆಗೆ ಅವನ ಈಗಿನ ಅಸಹಜ ಮೌನಸ್ಥಿತಿ ಕೊನೆಗೊಂಡು ಮೊದಲಿನಂತೆ ನಗುನಗುತ್ತ ಬಾಳುವಂತಾಗಲೆಂದು ಬೆಟ್ಟದಯ್ಯನಲ್ಲಿ ನಿತ್ಯ ಎರಡು ಹೊತ್ತು ಕಪಿಲೆಯ ತುಪ್ಪದ ಸೊಡರಿಟ್ಟು ಪ್ರಾರ್ಥಿಸಿದಳು. ವ್ರತ ಮಾಡಿ ವಾರದಲ್ಲಿ ಮೂರು ದಿನ ಉಪವಾಸ ಮಾಡಿದಳು.

ಇಷ್ಟಾಗುವಾಗ ಇದ್ದಕ್ಕಿದ್ದಂತೆ ಒಂದು ದಿನ ಶಿಖರಸೂರ್ಯ ಅವಳಿಗೂ ಹೇಳದೆ ಕೇಳದೆ ಹದ್ದಿನ ಕೊಳ್ಳದಿಂದ ಮಾಯವಾದ.

ಇಲ್ಲೆಲ್ಲೋ ಹೋಗಿದ್ದಾನೆ, ಸಂಜೆ ಬಂದಾನೆಂದು ವಿದ್ಯುಲ್ಲತೆ ಕಾದಳು. ಬರಲಿಲ್ಲ. ಇಲ್ಲೇ ಅಕ್ಕಪಕ್ಕದ ಹಟ್ಟಿ, ಹಳ್ಳಿಗೆ ಹೋಗಿರಬೇಕೆಂದು ವಾರಗಳು ಕಾದಳು; ಬರಲಿಲ್ಲ. ಕನಕಪುರಿ, ತಪ್ಪಿದರೆ ಬಿಳಿಗಿರಿಗೆ ಹೋಗಿರಬಹುದೆಂದು ತಿಂಗಳು ಕಾದಳು; ಬರಲಿಲ್ಲ. ಅಷ್ಟೂ ಸ್ಥಳಗಳಿಗೆ ಭಂಟರನ್ನಟ್ಟಿ ವಿಚಾರಿಸಿದಳು; ಸಿಗಲಿಲ್ಲ. ದಯಮಾಡಿ ಹಿಂದಿರುಗಿ ಕಳಿಸೆಂದು ಬೆಟ್ಟದಯ್ಯನಲ್ಲಿ ಪ್ರಾರ್ಥಿಸುತ್ತ ಕಾದಳು. ಕೊನೆಗೆ ಬಂದಾಗ ಬರಲೆಂದು ತಪಿಸುತ್ತ ಕೂತಳು.

ಬಿಳಿಗಿರಿಯಲ್ಲಿ ಮಾತ್ರ ಆತಂಕ ತುಂಬಿತ್ತು. ಮೊದಮೊದಲು ಹದ್ದಿನ ಕೊಳ್ಳದಲ್ಲಿದ್ದಾನೆಂದು ಸುದ್ದಿ ಬಂತು. ಇಂದು ಬಂದಾನು ನಾಳೆ ಬಂದಾನೆಂದು ಸುಮ್ಮನಿದ್ದರು. ಆದರೆ 'ಇಲ್ಲಿದ್ದಾನೆಯೇ?' ಎಂದು ಬಿಳಿಗಿರಿಯಿಂದ ಯಾವಾಗ ಭಂಟ ಬಂದು ಕೇಳಿದನೋ ಆವಾಗ ಇವರೂ ಹತಾಶರಾಗಿ ಊಹಿಸುತ್ತ, ಚಿಂತಿಸುತ್ತ ಪ್ರಾರ್ಥಿಸುತ್ತ ಕೂತರು.

ವರ್ಷ ಕಳೆದರೂ ಯಾವಾಗ ಬರಲಿಲ್ಲವೋ ಆವಾಗ ಮಾತ್ರ ಆತ ಸತ್ತೇ ಹೋದನೆಂದು ನಂಬಿದರು. ಅಂಥವನೇ ಒಬ್ಬನನ್ನು ಅಲ್ಲಿ ಕಂಡೆವು. ಇಲ್ಲಿ ಕಂಡೆವು ಎಂದ ಯಾರ್ಯಾರದೋ ಮಾತೂ ಹುಸಿಹೋದವು. ಅಲ್ಲೆಲ್ಲೋ ಕಂಡಿದ್ದವನು ಹಿಂದಿರುಗಿ ಯಾಕೆ ಬರಲಿಲ್ಲ? ಆತ ಪಲಾಯನ ಮಾಡುವ ಹೇಡಿಯಂತೂ ಅಲ್ಲ. ತನಗಾದ ಅವಮಾನದ ಸೇಡು ತೀರಿಸಿಕೊಳ್ಳಲಿಕ್ಕೆ ಹೋಗಿದ್ದಾನೆಂದರೂ ಇಷ್ಟರಲ್ಲಿ ಬರಬೇಕಾಗಿತ್ತು. ಬರಲಿಲ್ಲವಾದ್ದರಿಂದ ಸತ್ತೇಹೋಗಿರಬೇಕೆಂದು, ಆದಿತ್ಯಪ್ರಭು ಕೊಲ್ಲಿಸಿರಬಹುದೆಂದು ಊಹಿಸಿ ಅದನ್ನೇ ಮತ್ತೆ ಮತ್ತೆ ಹೇಳಿಕೊಂಡು ನಂಬಿಯೂ ಬಿಟ್ಟರು.

ಸುದೈವದಿಂದ ಬಿಳಿಗಿರಿಯರಸ ತಂತಿ ಚಿಕ್ಕಮ್ಮಣ್ಣಿ, ಅವಳ ಮಗಳು ಮೊಮ್ಮಕ್ಕಳನ್ನು ತುಂಬ ವಿಶ್ವಾಸದಿಂದ ಕಂಡ, ಹಾಗೆ ಕಾಣುವುದಕ್ಕೆ ಕಾರಣವೂ ಇತ್ತು. ಆತನಿಗೆ ವಯಸ್ಸಾದ ಮೇಲೆ ಹುಟ್ಟಿದ ಮಗಳೊಬ್ಬಳಿದ್ದಳು. ಅವಳನ್ನು ರವಿಕೀರ್ತಿಗೆ ಕೊಟ್ಟು ಮದುವೆ ಮಾಡಬೇಕೆಂಬುದು ವೃದ್ಧ ರಾಜರಾಣಿಯರ ಆಸೆಯಾಗಿತ್ತು.

ಶಿಖರಸೂರ್ಯ ಎಲ್ಲಿಗೆ ಹೋದ? ಅವನಿಗೆ ಬೇಕಾದಷ್ಟು ನಿರಾಸೆಯಾಗಿದ್ದುದು ನಿಜ. ಅಧಿಕಾರದ ಕೈ ಬದಲಾದಾಗ ತನ್ನ ದೈವ ಖುಲಾಯಿಸಬಹುದೆಂದು ಅಂದುಕೊಂಡಿದ್ದ. ಅಂದುಕೊಂಡಿದ್ದುದು ಹಿಂದುಮುಂದಾಗಿತ್ತು. ಕಷ್ಟಪಟ್ಟು ಕೂಡಿಟ್ಟ ಚಿನ್ನ ಅರಮನೆಯ ಪಾಲಾಗಿತ್ತು. ಶ್ವಾನಕೂಪಕ್ಕಿಳಿದು; ನಾಯಿಗಳು ಮೂಸದೇ ಹೆದರಿದ ಪ್ರಸಂಗವನ್ನು ತನ್ನ ಪ್ರತಾಪವಾಗಿಸಿ ಮೆರೆಯಬೇಕೆಂದರೆ ಮಹಾರಾಣಿ ನಾಯಿಗಳಿಗೆ ಥೂ ಹೇಳಿ ತನ್ನ ಮನಸ್ಸಿನಲ್ಲಿ ಅವನ ಸ್ಥಾನಮಾನವೇನೆಂದು ತಿಳಿಸಿದ್ದಳು ಮತ್ತು ಅರಮನೆಗೆ ತನ್ನ ಬಗ್ಗೆ ಈ ಅವಜ್ಞೆ ಯಾಕೆ ಬಂತೆಂದು ತಿಳಿಯದೆ, ಅರ್ಥಕೌಶಲನನ್ನ ಮಹಾರಾಣಿಯನ್ನ ಶಪಿಸಿದ್ದ. ಖಾಸಗಿಯಾಗಿ ಕಟ್ಟಿದ್ದ ಒಂದು ಕಡಮೆ ನಲವತ್ತಾಳಿನ ಎರಡು ಪಡೆಗಳನ್ನ ಕೂಡ ಬರಖಾಸ್ತ ಮಾಡಬೇಕಾಗಿ ಬಂತು. ತನ್ನ ಮಗನನ್ನ ಚಕ್ರವರ್ತಿಯನ್ನಾಗಿ ಮಾಡುವ ಆಸೆ ಕಣ್ಣೆದುರಿನಲ್ಲೇ ಮಣ್ಣುಗೂಡಿತ್ತು. ಚಂಡೀದಾಸನ ಭವಿಷ್ಯವಾಣಿ ಹುಸಿಹೋಗಿತ್ತು.

ಶಿಖರಸೂರ್ಯ ಬಹುದೊಡ್ಡ ಮಹತ್ವಾಕಾಂಕ್ಷಿ. ಹೋದಹೋದಲ್ಲಿ ಪರದೇಶಿಯಾಗಿದ್ದರೂ ಆ ಪ್ರದೇಶವನ್ನ ಭೌತಿಕವಾಗಿ ಮತ್ತು ಮಾನಸಿಕವಾಗಿ ಗೆಲುವುದಕ್ಕೆ ಹಂಬಲಿಸುತ್ತಿದ್ದ. ದಾರಿ ಎಂಥದೇ ಆಗಿರಲಿ ಒಮ್ಮೆ ಗುರಿಯ ಕಡೆಗೆ ಕಣ್ಣಿಟ್ಟರೆ ಅತ್ತಿತ್ತ ನೋಡಿದವನಲ್ಲ. ಶಿವಾಪುರದಲ್ಲಾಗಲಿ, ಕನಕಪುರಿಯಲ್ಲಾಗಲಿ ಪ್ರತಿಕೂಲ ದೈವನಾಗಿ ಸೋತವನೇ ವಿನಾ ಪ್ರಯತ್ನ ಹಾಗೂ ಸಂಕಲ್ಪದ ಕೊರತೆಯಿಂದಲ್ಲ. ಅವನಿಗೆ ನೆಮ್ಮದಿ ಸಿಕ್ಕಲೆಂದು ಹಾರೈಸೋಣ. ಅವನಿಲ್ಲವೆಂಬ ಮಾತ್ರಕ್ಕೆ ಇತಿಹಾಸ ನಿಲ್ಲುವುದಿಲ್ಲವಲ್ಲ. ಕನಕಪುರಿ, ಬಿಳಿಗಿರಿಯಲ್ಲಿ ಮುಂದುವರಿಯಿತು. ಅವನದೇ ಕುಡಿ ರವಿಕೀರ್ತಿಯ ಮೂಲಕ ಕಂಚಿಯಲ್ಲಿ ಚಿಗುರೊಡೆಯಿತು. ಇದು ಆಮೇಲೆ ಈಗ-

## ನಲವತ್ತೆರಡು

ಶಿವಾಪುರದ ಕತೆಗೆ ಬರುತ್ತೇವೆ. ಕನಕಪುರಿ ಇತಿಹಾಸಕ್ಕಿರುವಂತೆ ಶಿವಾಪುರದ ಚರಿತ್ರೆಗೊಂದು ತರ್ಕವಿಲ್ಲ. ಇಲ್ಲಿ ಸಮಯ ಸರಿಯುವುದೇ ಇಲ್ಲ. ಇಲ್ಲಿಯ ಜನ ಸೀಸದಿಂದ ಮಾಡಿದ ರಥಕ್ಕೆ ಕಬ್ಬಿಣದ ಗಾಲಿಯ ಮಾಡಿ, ಸಮಯವನ್ನು ಅದರಲ್ಲಿ ಕೂರಿಸಿ, ಕೋಮಲವಾದ ರುತುಗಳನ್ನ ಹೂಡುತ್ತಾರೆ. ಆ ರುತುಗಳೇ ಪುನರಪಿ ಅವೇ ಹೆಜ್ಜೆಗಳನ್ನ ಅದೇ ಅದೇ ಸ್ಥಳದಲ್ಲಿಡುತ್ತ ಭಾರವಾದ ಆ ರಥವನ್ನ ವರ್ಷಕ್ಕೊಂದು ಹೆಜ್ಜೆ ಮುಂದೆ ಸರಿಸಿದರೆ ಅದೇ ಹೆಚ್ಚು. ಅಷ್ಟರಲ್ಲಿ ಬಲಾಢ್ಯವಾದ ನೆನಪುಗಳು ಆ ರಥವನ್ನ ಹತ್ತು ಹೆಜ್ಜೆ ಹಿಂದೆ ಸರಿಸಿರುತ್ತವೆ!

ಕನಕಪುರಿಗಾದರೆ ನಿನ್ನೆ ನಡೆದುದೆಲ್ಲ ನೆನಪುಗಳಿಂದ ಜಾರಿ ಇತಿಹಾಸವಾಗಿ ದಾಖಲಾಗಿರುತ್ತದೆ. ಶಿವಾಪುರದ ನೆನಪುಗಳೋ ಅಗಾಧ ಶಕ್ತಿಯಿರುವಂಥವು. ಪುರಾಣ ಕಾಲದ ದೇವರು ಕೂಡ ಅವರಲ್ಲಿ ಈಗಲೂ ಜೀವಂತವಾಗಿದ್ದು ಅವರೊಂದಿಗೆ ನಿತ್ಯ ವ್ಯವಹರಿಸುತ್ತಾರೆಂದರೆ ಅವರ ನೆನಪುಗಳ ಶಕ್ತಿ ಎಷ್ಟಿರಬೇಕೆಂದು ಅಳತೆ ಮಾಡಿಕೊಳ್ಳಿರಿ! ತಿರುಪತಿ ತಿಮ್ಮಪ್ಪ ಎಂಬ ದೇವರು ಪುರಾಣ ಕಾಲದಲ್ಲಿ ಪದ್ಮಾವತಿ ಎಂಬ ದೇವತೆಯನ್ನು ಮದುವೆಯಾಗುವಾಗ ಏಳು ಕೋಟಿ ಸಾಲ ಮಾಡಿದ್ದನಂತೆ. ಇತಿಹಾಸ ಕಾಲದ ಈಗಿನ ಜನ ಆ ಸಾಲ ತೀರಿಸಲು ಅವನ ಹುಂಡಿಯಲ್ಲಿ ಈಗಲೂ ಹಣ ಹಾಕುತ್ತಾರೆಂದರೆ ಕನಕಪುರಿಯವರು ನಂಬೋ ಮಾತ ಇದು? ಅಷ್ಟೇ ಅಲ್ಲ ಆ ಜನ ದೇವರೊಂದಿಗೆ ನಿತ್ಯ ವ್ಯವಹಾರ ಮಾಡುತ್ತಾರೆ. ನಮ್ಮ ವ್ಯವಹಾರದಲ್ಲಿ ಇಷ್ಟು ಲಾಭವಾದರೆ ಅದರಲ್ಲಿ ಇಷ್ಟು ಭಾಗ ನಿನ್ನ ಹುಂಡಿಗೆ ಹಾಕುತ್ತೇವೆಂದು ಹರಕೆ ಹೊರುತ್ತಾರೆ! ಅಂದರೆ ಅವರ ಲೇನಾದೇನಾ ವ್ಯವಹಾರದಲ್ಲಿ ದೇವರೂ ಪಾಲುದಾರನಾಗಿರುತ್ತಾನೆ!

ಈ ಜನಕ್ಕೆ ಕಾಲ ಅಂದರೆ ಒಂದು ಅಖಂಡ ಘಟಕ. ತಾವು ಬದುಕಿರುವಾಗ ತಮ್ಮೊಂದಿಗೆ ತಮ್ಮ ಹಿಂದನ ಎಲ್ಲ ಶತಮಾನಗಳ ಅನುಭವಗಳನ್ನ ಇತಿಹಾಸದಲ್ಲಿದ್ದೂ ಬದುಕುತ್ತಾರೆ. ಅಂದರೆ ನೆನಪುಗಳೇ ಇಲ್ಲಿಯ ಕಾಲವನ್ನ ಹಿಂದೆ ಮುಂದೆ ತಳ್ಳುತ್ತವೆ. ಇದನ್ನೇ ಅವರು ಪರಂಪರೆ ಅನ್ನುತ್ತಾರೆ. ಆದ್ದರಿಂದ ಶಿವಾಪುರದ ಸಂಗತಿಯನ್ನ ಯಾವಾಗ ಮುಂದುವರಿಸಿದರೂ ಚರಿತ್ರೆಗೆ ತೊಂದರೆಯಿಲ್ಲವೆಂದು ಬಿಟ್ಟಿದ್ದೆವು. ನಮ್ಮ ಕಥಾನಾಯಕ ಚೆನ್ನಮುತ್ತ ಯಾನೆ ಜಯಸೂರ್ಯ ಯಾನೆ ಶಿಖರಸೂರ್ಯನೇ ಶಿವಾಪುರದ ಚರಿತ್ರೆಯಲ್ಲಿ ಕೊಂಚ ಬದಲಾವಣೆ ಮಾಡಿದವನು, ಅದನ್ನು ನೋಡಿರಿ;

ಬೆಳ್ಳಿಯಿಂದ ಒದೆ ತಿಂದು ನಮ್ಮ ನಾಯಕ ಆಗಿನ ಜಯಸೂರ್ಯ ಓಡಿ ಬಂದವನಲ್ಲ, ರಾತ್ರಿಯ ಆ ಕ್ಷಣದಿಂದಲೇ ಇಡೀ ಊರು ಮತ್ತು ಅಮ್ಮನ ಬೆಟ್ಟ ನಿದ್ದೆ ಕಳೆದುಕೊಂಡವು. ಗಂಡಸರಲ್ಲಿ ಕೆಲವರು ಜಯಸೂರ್ಯನನ್ನು ಹುಡುಕಲು ಕಾಡಿಗೆ, ಕೆಲವರು ಶಿವಪಾದನಿಗೆ ಸುದ್ದಿ ಮುಟ್ಟಿಸಲು ಬೆಟ್ಟಕ್ಕೆ ದೌಡಾಯಿಸಿದರು. ಇನ್ನು ಕೆಲವರು ಜಟ್ಟಿಗನನ್ನು ಹುಡುಕುವುದಕ್ಕೆ ಹೋದರು. ಕೆಲವರು ಹೆಂಗಸರು ಬೆಳ್ಳಿಯನ್ನು ಸಮಾಧಾನ ಮಾಡಲಿಕ್ಕೆ ನಿಂತರೆ ಇನ್ನು ಕೆಲವರು ನೆಲವನ್ನ ಕೈಯಿಂದ ಬಡಿಯುತ್ತ, ಹಲ್ಲು ಕಚ್ಚಿ ಜಯಸೂರ್ಯನಿಗೆ ಶಾಪಗಳನ್ನ ಒದರಿದರು. ಬೆಳ್ಳಿ ಮಾತ್ರ ಮಾರನೆ ಬೆಳಿಗೆದ್ದು ಜಟ್ಟಿಗನ ಸಾವಿನ ಸುದ್ದಿ ತಿಳಿದು ಹಾಗೇ ಕುಸಿದಳು.

ಶವ ಮಡುವಿನ ಬಳಿ ಬಿದ್ದಿತ್ತು. ಬೋರಲಾಗಿ ಬಿದ್ದ ಜಟ್ಟಿಗನ ಹೆಣ ಹೆಣದ ಹಾಗೆ ಕಾಣಲೇ ಇಲ್ಲ. ಈಜಿ ಸುಸ್ತಾಗಿ ವಿಶ್ರಾಂತಿಗಾಗಿ ಡಬ್ಬು ಮಲಗಿದ ಹಾಗಿತ್ತು ಅದರ ಭಂಗಿ. ಕಬ್ಬಿಣದಂಥ ದೇಹ, ಉದ್ದಕ್ಕೆ ಚಾಚಿದ್ದ ಕಾಲು, ಮುಖದ ಎಡಬಲ ಮಡಿಚಿ ಬಿದ್ದ ದಷ್ಟಪುಷ್ಟ ಕೈಗಳು, ನಿದ್ರೆಯನ್ನಣಕಿಸುತ್ತ ಬಿದ್ದ ಸಾವು ಮಲಗಿದಂತಿದ್ದ ಹೆಣ ನೋಡಿದರೆ ಮೊದ ಮೊದಲು ಅನೇಕರಿಗೆ ದುಃಖ ಬರಲೇ ಇಲ್ಲ. ಮಲಗಿದವನನ್ನ ಎಬ್ಬಿಸಬೇಕೆನ್ನಿಸಿತು. ಅಷ್ಟರಲ್ಲಿ ಹೊಟ್ಟೆಯ ಕೆಳಗೆ ಹರಿದ ರಕ್ತ ಮಡುಗೊಂಡು ಹೆಪ್ಪುಗಟ್ಟಿದ್ದನ್ನ ನೋಡಿದಾಗ ಮಾತ್ರ ಜಟ್ಟಿಗ ಕಾಯಬಿಟ್ಟು ಕೈಲಾಸಕ್ಕೆ ಸಂದಿದ್ದ ವಿಷಯ ಗೊತ್ತಾಯಿತು. ಶವ ನೋಡಿ ಎಷ್ಟೆಷ್ಟೋ ಪರಿಯ ಸಾವುಗಳನ್ನ ಕಂಡ ಜನರ, ನೀರು ಬರುವ ಕಣ್ಣಲ್ಲಿ ನೆತ್ತರು ಬಂತು.

ಶವದ ತೀರ್ಥದಲ್ಲಿ ಮೀಯಿಸಿ ಹೊಸಬಟ್ಟೆಯ ಮುಸುಕು ಹಾಕಿದರು. ಶವವನ್ನು ಶಿವಪಾದನ ನೇತೃತ್ವದಲ್ಲಿ ಹೆಗಲಿಗೇರಿಸಿಕೊಂಡು ಜಟ್ಟಿಗನ ಗದ್ದೆಯ ಹೊನ್ನೆಮರದ ಬಳಿಯ ದಿನ್ನೆಗೆ ಒಯ್ದರು. ಕೂಡು ಹಾಕಿದ್ದ ಗಂಧದ ಕಾಷ್ಟಕ್ಕೆ ಮೂರು ಸುತ್ತು ಬಂದು ಕಾಷ್ಟದಲ್ಲಿರಿಸಿ, ಶಿವಪಾದನೇ ಮುಂದೆ ಬಂದು ಸಿರಿಕೊಳ್ಳಿಯ ನೀರು ಬಿಟ್ಟು ಕಾಷ್ಟಕ್ಕೆ ಬೆಂಕಿಯಿಟ್ಟನು. ಜಟ್ಟಿಗ ಆಕಾಶಕ್ಕೆ ಹೊಗೆಯಾಗಿ ಭೂಮಿಗೆ ಬೂದಿಯಾದ. ಹೊಸ ಗಡಿಗೆಯಲ್ಲಿ ಗಂಧದ ಕೆಂಡ ಹಾಕಿ ಕಾಷ್ಟದ ಬಳಿಗೆ ತಂದು, ಅಪಸವ್ಯವಾಗಿ ಒಡೆದು ಜಟ್ಟಿಗನ ಬೆಂಕಿ ಗಡಿಗೆ ಸಂದಿತೆಂದ. ಗೆರಸಿಗೆ ಒಂದು ಸೇರಿ ಬಳ್ತಿಗೆ ಹಾಕಿ, ಒಂದು ತೆಂಗಿನಕಾಯಿ, ಐದು ವೀಳೆಯದೆಲೆ ಒಂದಡಿಕೆ ಇಟ್ಟ. ನೊಗದ ತುಂಡನ್ನಿಟ್ಟ. ತೆಂಗಿನಕಾಯಿ ಗರಿಯಲ್ಲಿ ಕಪಿಲೆ ಹಸುವಿನ ಬಿಳಿಯ ತುಪ್ಪವ ಎರೆದ. ಒಂದು ಬತ್ತಿ ಹಾಕಿ ತೆಂಗಿನ ಕಾಯಿ ಗಡಿಗೆಯಲ್ಲಿ ಸೊಡರು ಹೊತ್ತಿಸಿ ಜಟ್ಟಿಗನ ಚಿತೆಯ ಬಳಿ ತಂದು, ಚಿತೆಗೆ ಮೂರು ಸುತ್ತು ಬಂದ. ಚಿತೆಯ ನಡುವಿಗೆ ಅಪಸವ್ಯವಾಗಿ ಬಿಸಾಡಿದ.

“ಜಟ್ಟಿಗನೇ, ನಿನ್ನ ಪರಿಕೆಯಡಿ ಸಂದಿತು. ಮನಸ್ಸಿನಲ್ಲಿ ಯಾವೊಂದು ಬೇಸರ ಇಟ್ಟುಕೋಬೇಡ. ಗಂಧದ ಚಿತೆಯಲ್ಲಿ ಮೂರು ಮುಕ್ಕಾಲು ಗಳಿಗೆಯಲ್ಲಿ ಉರಿದು ಹೋಗು”

-ಎಂದು ಹೇಳಿದಾಗ ಒಂದು ಬಣ್ಣದ ಹಕ್ಕಿ ಹಾರಾಡುತ್ತ ಮ್ಯಾಲಿನ ಮಿರಿಲೋಕಕ್ಕೆ ಹೋಯಿತು!

ಬೆಳ್ಳಿಯ ಈಗಿನ ಸ್ಥಿತಿ ಮಾತ್ರ ಚಿಂತಾಜನಕವಾಗಿತ್ತು. ಎರಡೂ ದಡಗಳ ಕೊಚ್ಚಿ ಹರಿವ ನದಿಯಂತೆ ಜಲ ಜಲ ಕಣ್ಣೀರು ಸುರಿಸಿದಳು. ಸದ್ದಿಲ್ಲದೆ ಸುರಿವ ಜಲಪಾತದಂತೆ ಮೌನವಾಗಿ ಕಣ್ಣೀರುಗರೆದಳು. ಅವಳನ್ನು ಹ್ಯಾಗೆ ಸಮಾಧಾನ ಮಾಡುವುದೆಂದು ಊರಿಗೂರೇ ಕಾಳಜಿ ಮಾಡಿ ಶಿವಪಾದನಲ್ಲಿ ಮೊರೆಯಿಟ್ಟಿತು. ಘಟನೆಯೊದಗಿ ಮೂರು ದಿನ ಕಳೆದರೂ ಆಕೆ ಬಾಯಲ್ಲಿ ಹನಿ ನೀರು ಹಾಕಿರಲಿಲ್ಲ. ಊರವರೆಲ್ಲ ಅವಳಿಂದ ಒಂದು ಮಾತು ಆಡಿಸಲು ಪ್ರಯತ್ನಿಸಿ ಸೋತಿದ್ದರು. ಮೂರು ಹಗಲು ಮೂರು ರಾತ್ರಿ ಕಣ್ಣಿಗೆ ಕಣ್ಣು ಹಚ್ಚದೆ ಬೆಟ್ಟದ ಕಡೆಗೆ ನೋಡುತ್ತ ಕೂತುಬಿಟ್ಟಿದ್ದಳು!

ನಾಕನೇ ದಿನ ಮಧ್ಯರಾತ್ರಿಯಾಗಿತ್ತು. ಆಸುಪಾಸಿನವರೆಲ್ಲ ಗಾಢ ನಿದ್ದೆಯಲ್ಲಿದ್ದರು. ಎದ್ದು ಒಬ್ಬಳೇ ಹೊರಗೆ ನಡೆದಳು. ಊರು ದಾಟಿ ಗದ್ದೆಗೆ ಬಂದು ಜಟ್ಟಿಗನ ಸಮಾಧಿಯ ಬಳಿ ಕೂತಳು. ಕತ್ತಲೆಯಿತ್ತು. ಗಾಳಿಯಿರಲಿಲ್ಲ. ನಕ್ಷತ್ರಗಳ ವಿನಾ ಬೇರೇನೂ ಬೆಳಕಿರಲಿಲ್ಲ. ಎಷ್ಟು ಹೊತ್ತು ಕೂತಿದ್ದಳೋ ಬೆಳಗಿನ ತಂಗಾಳಿ ತೀಡಿ ಸಪನಿದ್ದೆಗೆ ಸಲ್ಲುತ್ತಿರುವಾಗ ಯಾರೋ ಹೆಂಗಸು ತನ್ನ ಹಿಂಬದಿಯಲ್ಲಿ ಕೂತಿದ್ದಾಳೆ ಅನ್ನಿಸಿತು. ಮೆಲ್ಲಗೆ ಹಿಂದಿರುಗಿ ನೋಡಿದಳು. ಹಿಂದೆ ಕೂತಿದ್ದವಳು ಕರಗಿ ಹೋದಳು! ತನಗೆಲ್ಲೋ ಭ್ರಮೆ

ಎಂದುಕೊಂಡಳು. ತುಸು ಹೊತ್ತಾದ ಬಳಿಕ ಮತ್ತೆ ಆಕೆ ಹಿಂಬದಿಗೆ ಬಂದು ಕೂತ ಹಾಗನ್ನಿಸಿತು. ಈ ಸಲವೂ ಹಿಂದಿರುಗಿ ನೋಡಿದರೆ ಕರಗಿ ಹೋದಳು. ತಾಯಿ ಇರಬಹುದೆ? ಮೂರನೇ ಸಲವೂ ಆಕೆ ಹಾಗೇ ಕೂತಾಗ ಹಿಂದಿರುಗದೆ,

"ಯಾರದು?" ಅಂದಳು.

"ಇಗೊಳ್ಳವ್ವ! ಹುಟ್ಟಿದ ಕೂಸೇ ತಾಯಿಯನ್ನ ತೊಟ್ಟಿಲಲ್ಲಿ ಮಲಗಿಸಿ ತೂಗ್ತಾ ಇದೆ! ಕಂಡೀರೇನ್ರವ್ವಾ ಹೊಯ್ಕಾನ!"

"ಅದೆಲ್ಲವ್ವ ಅಂಥ ಹೊಯ್ಕಾ ಕಂಡೆ?" ಎಂದಳು ಬೆಳ್ಳಿ.

"ನೋಡೇ ಜೋಗುಳ ಹಾಡಿ ಹಾಡಿ ಕೂಸು ಮಲಗಿದೆ. ನಿನಗೆ ಎಚ್ಚರವೇ ಇಲ್ಲ!"

-ಎಂದು ಹೇಳುತ್ತ ಹಿಂದೆ ಕೂತಿದ್ದವಳು ಕಾಣಲಿಲ್ಲವಾಗಿ ಇದು ತನ್ನ ಭ್ರಮೆ ಎಂದು ಖಾತ್ರಿಯಾಗಿ ಸುಮ್ಮನಾದಳು. ಈಗ ದನಿ ಮುಂದಿನಿಂದ ಕೇಳಿಸಿತು:

"ನಿನ್ನ ಕೂಸು ನಿನಗೇ ಗೊತ್ತಿಲ್ಲ; ನೀನೆಂಥ ತಾಯಿಯೇ? ತಗೊ ತಗೊ ಹಸಿದಿದ್ದಾನೆ, ಮೊಲೆಯುಣ್ಣಿಸೇ ಬೆಳ್ಳಿ!"

-ಎಂದು ದನಿ ಕೇಳಿ ಬೆಳ್ಳಿಗೆ ಎಚ್ಚರವಾಯಿತು. ಕಣ್ಣು ತೆರೆದಳು. ಆಗಲೇ ಕೊಟ್ಟಿಗೆಯ ಕೋಳಿ ಕೂಗಿ ಬೆಳಗಿನ ತಂಗಾಳಿ ಬೀಸಿ ಮೂಡಲು ಹರಿದಿತ್ತು. "ಇದೇನು ವಿಚಿತ್ರ ಕನಸು ತಾಯೀ!" ಎಂದು ಮೈಮುರಿಯುವಾಗ ತೊಡೆ ಭಾರವಾಯ್ತು. ನೋಡಿದರೆ ತೊಡೆಯ ಮ್ಯಾಲೆ ಕಣ್ಣು ಕಣ್ಣು ಬಿಡುತ್ತ ನಿನ್ನಡಿ ಮಲಗಿದ್ದಾನೆ!

ಮುಂದೊಂದು ಮುದುಕಿ ಕುಂತಿದೆ!

ಇದು ಬೆಟ್ಟದಮ್ಮನ ಕಿತಾಪತಿಯೆಂದು ಖಾತ್ರಿಯಾಯಿತು. ಬೇರೆ ಸಂದರ್ಭಗಳಲ್ಲಾದರೆ ರೋಮಾಂಚಿತಳಾಗಿ ಸಡಗರ ಮಾಡುತ್ತಿದ್ದಳು. ಈಗ 'ಗಂಡನನ್ನೇ ಕಳೆದುಕೊಂಡವಳಿಗೆ ಬೆಟ್ಟದಮ್ಮನ ಹಂಗೇನು?'-ಎಂದು ಮುದುಕಿಗೆ ತಿರುಗೇಟು ಕೊಟ್ಟಳು ನೋಡು:

"ಗಂಡನನ್ನು ಅಗಲಿಸಿ ಎದೆತುಂಬ ಕಣ್ಣೀರು ಕೊಟ್ಟೆ. ಈಗ ವಿಧವೆಗೆ ಕೂಸು ಕೊಟ್ಟೆ! ಇದಕ್ಕೆ ನಾನೇ ತಾಯಿ ಅಂಬೋದಕ್ಕೆ ಗುರುತೇನು ಕೊಟ್ಟಿಯೇ ಮುದಿಮೂಳಿ?"

"ಈ ಕೂಸಿಗೆ ನೀನೇ ತಾಯಿ, ಜಟ್ಟಿಗನೇ ತಂದೆಯಾದರೆ ನಿನ್ನ ಮೊಲೆಯಿಂದ ಹಾಲುಕ್ಕಲಿ. ಇಲ್ಲದಿದ್ದರೆ ಕಣ್ಣೀರುಕ್ಕಲಿ!

ಎತ್ತಿಕೊಂಡಾದರೂ ನೋಡೇ ಮರುಳು ಮಗಳೇ!"

-ಎಂದು ಮುದುಕಿ ಜೋರು ಮಾಡಿದಳು. ಬೆಳ್ಳಿ ಬೆಟ್ಟದ ಕಡೆಗೆ ನೋಡಿದಳು. ಬೆಟ್ಟದ ನೆತ್ತಿಯ ಮ್ಯಾಲೆ ಸೂರ್ಯನಾಗಲೇ ಎಳೆಬಿಸಿಲನ್ನು ಸಿಂಪಡಿಸಿದ್ದ. ನಿನ್ನಡಿಯನ್ನು ನೋಡಿದ್ದೇ ತಡ ಎದೆಯ ಕಟ್ಟೊಡೆದು ಹರಿದ ಅನುಭವವಾಯಿತು. ಅವಳ ದುಃಖ ದುಗುಡ ಆಯಾಸಗಳು ಮಾಯವಾದವು. ತೊಡೆಯ ಮ್ಯಾಲಿನ ನಿನ್ನಡಿಯ ಸಾನಿಧ್ಯವೇ ಸುಖಕೊಡುವ ಆನಂದದಾಯಕ ದೃಶ್ಯವಾಗಿ ಮೈಮನಸ್ಸುಗಳನ್ನ ವ್ಯಾಪಿಸಿತು. ಕಳೆದುಹೋದ ಮಗ ತಿರುಗಿ ಸಿಕ್ಕಂತೆ ಸಡಗರಗೊಂಡು ಆನಂದಪರವಶಳಾದಳು. "ನನ್ನ ಕಂದಾ!" ಎಂದು ತಬ್ಬಿಕೊಂಡೊಡನೆ ಅವಳ ಎರಡೂ ಮೊಲೆ ಹಾಲುಕ್ಕಿ ಮೈಯಂತ ಮೈಯೆಲ್ಲಾ ರೋಮಾಂಚನಗೊಂಡಳು! ಅಷ್ಟರಲ್ಲಿ ನಿನ್ನಡಿ

“ಅಬ್ಬೇ” ಎಂದು ಎದ್ದು ಕೂತ. ತಾಯಿ ಅವನನ್ನ “ನನ್ನ ಕಂದಾ! ಮಗಾ! ಮಗನೇ!” ಎನ್ನುತ್ತ ಮುಖದ ತುಂಬ ಮುದ್ದಿಟ್ಟು ಮತ್ತೆ “ಮಗನೇ!” ಎಂದು ಮಳ ಮಳ ಮುಖ ನೋಡಿ ಹುಚ್ಚು ಹತ್ತಿದ ಹಾಗೆ ತಬ್ಬಿಕೊಂಡು ಅವನ ಬಾಯಿಗೆ ಹಾಲು ತುಂಬಿದ ಮೊಲೆಯಿಟ್ಟಳು!

ಮನೆಗೆ ಬಂದಾಗ ಬೆಳ್ಳಂ ಬೆಳಕಾಗಿ ಮುಂದಿನ ಕಟ್ಟೆಯ ಮೇಲೆ ಶಿವಪಾದ ಕೂತಿದ್ದಾನೆ! ಅವನ ಸಮೀಪ ಬರುತ್ತಿದ್ದಂತೆ ಅವನು ಮಾತ್ರವಲ್ಲ ಅವನ ಆಜು ಬಾಜುವಿನ ಪ್ರತಿಯೊಂದು ವಸ್ತುವೂ ಪ್ರಕಾಶಮಾನವಾಗಿ, ಹರ್ಷದಾಯಕವಾಗಿ, ಉತ್ಸವ ಶೀಲವಾಗಿ ರಾರಾಜಿಸತೊಡಗಿದೆ! ಹಿತಕರವೂ ಸ್ವರ್ಗೀಯವೂ ಆದ ಪ್ರಭಾವಳಿಯ ಕಿರಣಗಳನ್ನು ಚೆಲ್ಲುತ್ತ ಶಿವಪಾದ ಹತ್ತಿರವಾದಂತೆ ಅವನ ಪ್ರಭಾವಳಿಯ ಕಿರಣಗಳಲ್ಲಿ ಇವಳೂ ಬೆಚ್ಚಗಾದಂತೆನಿಸಿತು. ಶಿವಪಾದ ಶಾಂತವಾಗಿ,

“ಮಗ ಸಿಕ್ಕನೇ ಮಗಳೇ?”

-ಅಂದ. ಅವನ ಮಾತು ಸುಮಧುರ ಸಂಗೀತದಂತೆ ಕೇಳಿಸಿ ಸ್ವರ್ಗಸುಖದಲ್ಲಿ ತೇಲಾಡಿದಳು ಬೆಳ್ಳಿ! ಉಲ್ಲಾಸದಿಂದ, ಮುಗ್ಧತೆಯಿಂದ, ತಪಸ್ಸಿನ ವರ್ಚಸ್ಸಿನಿಂದ ಕಂಗೊಳಿಸುತ್ತಿದ್ದ ಆತನ ಮುಖದಲ್ಲಿ ಎಳೆಯ ಬಾಲಕನ ಕಳೆ ನಲಿದಾಡುತ್ತಿತ್ತು. ಬೆಳ್ಳಿ ಮತ್ತು ಶಿವಪಾದ ಇಬ್ಬರೂ ಆನಂದಬಾಷ್ಪ ಸುರಿಸಿದರು. ಬೆಳ್ಳಿ ಶಿವಪಾದನಿಗೆ ನಮಸ್ಕರಿಸಿ ಪಾದಗಳನ್ನು ಹಣೆಗೊತ್ತಿಕೊಂಡಳು. ಶಿವಪಾದ ಹೇಳಿದ:

“ಅಮ್ಮ ತನ್ನ ಸಾಲವನ್ನು ವಸೂಲ್ಮಾಡದೆ ಬಿಡೋದಿಲ್ಲ ಮಗಳೆ. ನಿನ್ನಿಂದ ಮಗ ಬೇಕೆಂದಳು. ಅವನನ್ನು ಪಡೆದೂ ಬಿಟ್ಟಳು.
ನೋಡಿಕೊ.”

-ಎಂದು ಹೇಳಿ ಕೋಲೂರುತ್ತ ಬೆಟ್ಟದತ್ತ ನಡೆದ.

ಮೇಲಿನದು ಹೇಳಿ ಕೇಳಿ ಕತೆ. ನಿನ್ನಡಿ ಎಂಬ ಬಾಲಕನ ಬಗ್ಗೆ ಓದುಗರ ಆಸಕ್ತಿ ಸಹಜವಾದದ್ದೇ, - ಎಂದು ನಾವು ಮುಂಗಂಡು ಹೇಳುತ್ತೇವೆ. ಈತ ಒಬ್ಬ ಬುಡಕಟ್ಟು ಹೆಂಗಸಿನ ಬಳಿಯಿದ್ದ ಎಳೆಯ ಬಾಲಕ. ಆಕೆ ಬಡತನದಿಂದ ತಾನವನನ್ನ ಸಾಕಲಾರೆನೆಂದು ಹಬ್ಬದ ಮಾರನೆ ದಿನ ಶಿವಪಾದನ ಬಳಿ ಬಿಟ್ಟು ಹೋದಳು. ಶಿವಪಾದ, ಬಾಲಕನನ್ನ ಒಪ್ಪಿಕೊಂಡು ‘ನಿನ್ನಡಿ’ ಎಂದು ಹೆಸರು ಕೂಗಿ ತನ್ನ ಬಳಿ ಇಟ್ಟುಕೊಂಡಿದ್ದ. ಈ ಕೂಸನ್ನೇ ಶಿವಪಾದ ಬೆಳ್ಳಿಯ ಉಡಿಗೆ ಹಾಕಿದ್ದು. ಈ ಸಂಗತಿಯ ಹಿಂದೆ ಏನೇನಿವೆಯೋ!-ನಿನ್ನಡಿ ಮಾತ್ರ ಬೆಳೆದು ದೊಡ್ಡವನಾಗಿ ಜವಾಬ್ದಾರಿಯನ್ನು ಅರಿತುಕೊಂಡು ತನ್ನ ವಯಸ್ಸಿಗಿಂತ ಹೆಚ್ಚು ಪ್ರೌಢನಾದ. ಹೆಚ್ಚು ಕ್ರಿಯಾಶೀಲನಾದ. ತಾಯಿಯ ಮಾರ್ಗದರ್ಶನದಂತೆ ಜಟ್ಟಿಗನ ಗೋರಿಯ ಮೇಲೆ ಹದಿನೆಂಟು ಕಂಬದ ಗುಡಿ ಕಟ್ಟಿಸಿ ಕಂಬಕ್ಕೊಂದು ಗೊಂಬೆ ನಿಲ್ಲಿಸಿದ, ಹೆಂಚು ಹಾಕಿಸಿ ಕಲಶ ಇಡಿಸಿದ, ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದೇವತೆಗಳ ನಿರ್ಮಿಸಿ ಅಂಗಳದಲ್ಲಿ ಆನೆ ಕಲ್ಲಿನ ಕೆಲಸ ಮಾಡಿಸಿದ. ನಿತ್ಯವೂ ಪೂಜೆ ಪುನಸ್ಕಾರ ಮಾಡಿಸಿ ಹಾಲು ಅಕ್ಕಿಯ ನೈವೇದ್ಯ ಅರ್ಪಿಸಿ ವರ್ಷಕ್ಕೊಮ್ಮೆ ನೇಮ ಉತ್ಸವದ ವ್ಯವಸ್ಥೆ ಮಾಡಿದ.

ನಿನ್ನಡಿ ದೊಡ್ಡವನಾದಂತೆ ಮನಸೆಳೆವ ಮೈತ್ರಿಯ ವರ್ತನೆಯಿಂದ, ಸರಸಾಂತಃಕರಣದಿಂದ, ಕಪಟವರಿಯದ ನಡೆನುಡಿಗಳಿಂದ ಎಲ್ಲರಿಗೂ ಬೇಕಾದವನಾದ. ಓರಗೆಯವರು ಅವನ ಸ್ನೇಹಕ್ಕಾಗಿ ಹಲುಬುವಂತೆ ಮಾಡಿದ. ಗೌರವದ ಕೊರತೆಯಾಯಿತೆಂದು ಹಿರಿಯರೆಂದೂ ಅಂದುಕೊಳ್ಳದ ಹಾಗೆ ನಡೆದುಕೊಂಡ.

ಶಿವಪಾದನೀಗ ನಿನ್ನಡಿಯನ್ನು ಶಿಷ್ಯನೆಂದು ಸ್ವೀಕರಿಸಿ, ಬೆಳ್ಳಿಯ ಮನೆ ಬಿಡಿಸಿ ತನ್ನ ಸನ್ನಿಧಿಗೆ ತಗೊಂಡು ಎಡೆಬಿಡದೆ ಬೋಧನೆ, ಸುರುಮಾಡಿದ.

ಇದು ಐದು ವರ್ಷ ನಡೆಯಿತು. ನಿನ್ನಡಿ ಈಗ ಸದಾ ಹೊಸ ತಿಳುವಳಿಕೆಯನ್ನ, ಹೊಸ ಒಳನೋಟಗಳನ್ನ ಹುಡುಕುತ್ತಿದ್ದ. ಅವನ ಕಣ್ಣಲ್ಲಿ ಕಾವ್ಯದ ಬೆಳಕಿತ್ತು. ಶಿವಪಾದ ಕೊಟ್ಟ ಗ್ರಂಥಗಳಲ್ಲಿಯ ಕಾವ್ಯದ ಭಾಗಗಳನ್ನು ಮತ್ತೆ ಮತ್ತೆ ಓದಿ ಸಂತೋಷ ಪಡುತ್ತಿದ್ದ. ಸರಿಕರಿಗೂ ಅಬ್ಬೆಗೂ ಓದು ಹೇಳುತ್ತಿದ್ದ. ನಿನ್ನಡಿಯ ಜ್ಞಾನ ಮತ್ತು ಅದನ್ನವನು ಪ್ರೀತಿಯಿಂದ ತನ್ನದನ್ನಾಗಿ ಮಾಡಿಕೊಂಡು ಉಪಯೋಗಿಸುತ್ತಿದ್ದ ರೀತಿಯಿಂದ ಶಿವಪಾದ ಸಂತೋಷಪಡುತ್ತಿದ್ದ. ಕೊಡುವ ವಿದ್ಯೆ ಕೊಡುತ್ತ ಮೇಲೆ ಪರೀಕ್ಷೆಯನ್ನೂ ಸುರು ಮಾಡಿದ.

ದಿನಾಲು ಅವನಿಗೆ ಸಿಗುತ್ತಿದ್ದುದು ಒಂದು ಗೆಣಸು, ಅದರೊಂದಿಗೆ ಸ್ವಲ್ಪ ಜೇನುತುಪ್ಪ. ಅದು ಒಂದು ಹೊತ್ತು ಮಾತ್ರ. ಈಗ ಯಾವಾಗಂದರೆ ಆವಾಗ ಬೆಳ್ಳಿಯ ಮನೆಗೆ ಹೋಗುವಂತಿರಲಿಲ್ಲ. ಗುರುಸೇವೆ, ಇಲ್ಲವೆ ಧ್ಯಾನ ಇಲ್ಲವೆ ಇವುಗಳ ಜೊತೆಗೆ ಧೈರ್ಯ, ನಂಬಿಕೆ, ಗ್ರಹಿಕೆ, ಆತ್ಮಸಂಯಮ, ರಹಸ್ಯ ಪಾಲನೆ ಇತ್ಯಾದಿ ಗುಣಗಳ ಬೋಧನೆಯೂ ಸುರುವಾಯ್ತು.

ಒಮ್ಮೆ ಅವನಿಗೆ ಸಿಕ್ಕುವ ಒಂದು ಹೊತ್ತಿನ ಊಟದ ಸಮಯದಲ್ಲಿಯೇ ಒಬ್ಬ ವೃದ್ಧಮುನಿ ಅತಿಥಿಯಾಗಿ ಬಂದ. ಶಿವಪಾದ ತಕ್ಷಣ ನಿನ್ನಡಿಗೆ "ನಿನ್ನ ಪಾಲಿನ ಊಟ ಅವನಿಗೆ ಕೊಡು" ಅಂದ. ಇದು ಬಿಟ್ಟರೆ ನಾಳೆಯವರೆಗೆ ತನಗೆ ಆಹಾರವಿಲ್ಲವೆಂದು ಗೊತ್ತಿದ್ದರೂ ಹಿಂದೆ ಮುಂದೆ ನೋಡದೆ ಮುನಿಯ ಎದುರಿಗೆ ತನ್ನ ಪಾಲಿನ ಊಟವನ್ನಿಟ್ಟ. ಇಡುವಾಗ ಕಿಂಚಿತ್ತಾದರೂ ಹಳಹಳಿಯಾಗಲಿ, ಬೇಸರವಾಗಲಿ, ನಿರಾಸೆಯಾಗಲಿ ಕಾಣಲಿಲ್ಲವಾಗಿ ಮುನಿ ಮತ್ತು ಶಿವಪಾದ ಇಬ್ಬರೂ ಆನಂದಪಟ್ಟರು. ಊಟವಾದ ಮೇಲೆ ಮುನಿ ನಿನ್ನಡಿಯನ್ನು ಕರೆದು ಅವನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದ.

ಇನ್ನೊಮ್ಮೆ ಶಿವಪಾದ ಮತ್ತು ನಿನ್ನಡಿ ಬೇರೆ ಹಟ್ಟಿಗೆ ಹೋದವರು ಸಾಯಂಕಾಲ ಬೆಟ್ಟಕ್ಕೆ ಬರುತ್ತಿದ್ದರು. ಶಿವಪಾದ ಎತ್ತನ್ನೇರಿದ್ದ. ನಿನ್ನಡಿ ನಡೆದುಕೊಂಡು ಬರುತ್ತಿದ್ದ. ಕಾಡಿನ ದಾರಿಯಾದರೂ ಹೆಚ್ಚು ಮರಗಳಿರಲಿಲ್ಲ. ಇಕ್ಕೆಲಗಳಲ್ಲಿ ಬಯಲಿತ್ತು. ದಾರಿಯ ತಿರುವು ದಾಟಿದ ಕೂಡಲೇ ಶಿವಪಾದ ಎತ್ತನ್ನು ತರುಬಿದ. ಯಾಕೆನೆ ದಾರಿಯ ಮಧ್ಯದಲ್ಲಿ ಆನೆ ಗಾತ್ರದ ಭಾರೀ ಹೋರಿಗೂಳಿ ಇವರನ್ನೇ ನೋಡುತ್ತ ನಿಂತಿತ್ತು. ಎರಡಡಿ ಉದ್ದದ ಕೊಂಬುಗಳು ಈಗಷ್ಟೇ ಒರೆಯಿಂದ ಹಿರಿದ ಖಡ್ಗಗಳಂತೆ ಕಾಣುತ್ತಿದ್ದವು. ಕೆಂಗಣ್ಣು ಪಿಳುಕಿಸದೆ ಇವರನ್ನೇ ನೋಡುತ್ತಿತ್ತು. ಮೈಮ್ಯಾಲೇರಿ ಬರುವ, ಇರಿವ ತಯಾರಿಯನ್ನು ಮೊದಲೇ ಮಾಡಿಕೊಂಡೇ ನಿಂತಂಗಿತ್ತು. ಬೆನ್ನ ಮೇಲಿನ ಇಣಿಯಂತೂ ಇರಿಯಲು ಅಂದಾಜು ಮಾಡುತ್ತಿರುವಂತೆ ನಡುಗುತ್ತಿತ್ತು. ಮುಸ ಮುಸ ತೇಗುವ, ಮೂಗಿನ ತುದಿ ಕಾದ ಕಬ್ಬಿಣದಂತೆ ಕೆಂಪಗಿತ್ತು. ಒಂದು ಕ್ಷಣ ಮೈಮ್ಯಾಲೇರಿ ಬಂದರೆ ಏನು ಮಾಡುವುದೆಂದು ನಿನ್ನಡಿ ಯೋಚಿಸಿದ. ತಾನೇನೋ ಓಡಬಹುದು. ಆದರೆ ಶಿವಪಾದನನ್ನು ಹ್ಯಾಗೆ ಪಾರು ಮಾಡುವುದು? ಅದಕ್ಕೆದುರಾಗಿ ತನ್ನ ಬಲ ಸಾಲಬಹುದೆ?-ಎಂದು ಯೋಚಿಸಿದ. ಗೂಳಿ ಬಾಲ ಎತ್ತಿ ಆಕ್ರಮಣದ ಅಂದಾಜು ಮಾಡುವಂತೆ ಅತ್ತ ಇತ್ತ ಅಲುಗಿ ಮುಖವನ್ನ ಕೆಳಗೆ ತಂದರೂ ಕಣ್ಣು ಮಾತ್ರ ಇವನಲ್ಲೇ ನೆಟ್ಟಿದ್ದವು. ಅಷ್ಟರಲ್ಲಿ ಗೂಳಿ ಒಂದು ಹೆಜ್ಜೆ ಮುಂದಿಟ್ಟಿತು. "ಓಡು" ಎಂದ ಶಿವಪಾದ. ನಿನ್ನಡಿ ಹಿಂದಿರುಗಿ ನೋಡಲೂ ಇಲ್ಲ. ಓಡಲೂ ಇಲ್ಲ. ಶಿವಪಾದನ ಎತ್ತನ್ನು ಹಿಂದೆ ಹಾಕಿ ಮುಂದೆ ಬಂದು ನಿಂತ. ಹೋರಿಗೂಳಿ ಅಲುಗಲಿಲ್ಲ. ಅದರ ಆ ಕಡೆಯ ತೊಡೆಗೆ ಗಾಯವಾಗಿತ್ತು. "ಗೂಳಿಯ ತೊಡೆಯೆಲುಬು ಉಳುಕಿದೆ ತಂದೆ!" ಅಂದ. ಇವನನ್ನು ನೋಡಿ ಗೂಳಿ ಹಿಂದೆ ಸರಿಯಿತು. ಹಿಂದೆ ಸರಿದಾಗ ಅದು ಕುಂಟುತ್ತಿರುವ ವಿಷಯ ಗೊತ್ತಾಗಿ ನಿನ್ನಡಿಯ ಬಗ್ಗೆ ಶಿವಪಾದನಲ್ಲಿ ಅಭಿಮಾನ ಮೂಡಿತು.

ಮುಂದೆ ಕೆಲದಿನ ಕಳೆದ ಮೇಲೆ ನೋಡಿದರೆ ಬೆಟ್ಟದ ಅಮ್ಮನ ಗುಡಿಗೆ ಆ ಗೂಳಿ ಬಂದಿತ್ತು! ಇನ್ನೂ ಕುಂಟುತ್ತಿತ್ತು. "ಅದರ ಕಾಲು ಸರಿಪಡಿಸಿ ಬೇಕಾದರೆ ಅದನ್ನೇ ನಿನ್ನ ವಾಹನವನ್ನಾಗಿ ಮಾಡಿಕೊ. ನಿನಗೂ ಒಂದು ವಾಹನ ಬೇಕಲ್ಲ!" ಅಂದ ಗುರುಪಾದ. ಅದರ ಕಾಲು ಸರಿಪಡಿಸುವ ಕೆಲಸವನ್ನಂತೂ ನಿನ್ನಡಿ ಒಪ್ಪಿಕೊಂಡ. ದಿನಾ ಎರಡು ಹೊತ್ತು ಅದರ ಕಾಲುಜ್ಜುತ್ತ, ಮಧ್ಯಾಹ್ನ ಹೊಂಡದಲ್ಲಿ ಈಜು ಬಿಡುತ್ತ ಅಂತೂ ಅದರ ಕಾಲು ವಾಸಿಯಾಗುವಂತೆ ಮಾಡಿದ. ಕೊನೆಗೆ ಒಂದು ದಿನ ಶಿವಪಾದನೇ ಕೇಳಿದ:

"ಅದರ ಕಾಲು ಕುಂಟಿದರೂ ನೀನು ನಿರಾಶನಾಗದೆ ಅದರ ಕಾಲನ್ನ ಗುಣಪಡಿಸೋದಕ್ಕೆ ನೋಡಿದೆಯಲ್ಲ? ನಿನಗೆ ಯಾಕೆ ವಿಶ್ವಾಸ ಮೂಡಿತು?"

“ನೀನು ಹೇಳಿದ ಮ್ಯಾಲೆ ಅದು ಗುಣವಾಗಲೇಬೇಕೆಂದು ನಂಬಿಕೆ ಇತ್ತು; ಅಷ್ಟೆ” -ಅಂದ ನಿನ್ನಡಿ.

ಇದು ಅವನ ನಂಬಿಕೆಯನ್ನ ಪರೀಕ್ಷಿಸಿದ ಪರಿ. ಇಂಥ ನೂರಾರು ಪರೀಕ್ಷೆಗಳನ್ನೊಡ್ಡಿ ಅವನ್ನೆಲ್ಲ ನಿನ್ನಡಿ ದಾಟಿದ ಮ್ಯಾಲೆ ಕೊನೆಗೊಂದು ನಿರ್ದಿಷ್ಟ ಮಂತ್ರವನ್ನ ಹೇಳಿ ಒಂದು “ಚೆಲ್ಲರೆ ವಿದ್ಯೆ”ಯನ್ನೂ ಕಲಿಸಿದ. ಅದರಿಂದ ಧಾನ್ಯವನ್ನ ಚಿನ್ನವನ್ನಾಗಿ, ಹುಲ್ಲೆಸಳನ್ನ ಸೈನಿಕರನ್ನಾಗಿ ಪರಿವರ್ತಿಸಬಹುದಾಗಿತ್ತು. ನಿನ್ನಡಿ ವರ್ಷಂಪೂರ್ತಿ ತನ್ನ ಚಲ್ಲಾಟಗಳನ್ನು ಮರೆತು ಮಂತ್ರ ಸಿದ್ಧಿ ಮಾಡಿಕೊಂಡು ಗುರುವಿಗೆ ಹೇಳಿದ. ಶಿವಪಾದನಿಗೆ ಸಹಜವಾಗಿಯೇ ಆನಂದವಾಯಿತು. “ಹೋಗು ನಿನ್ನ ಸಾಧನೆಯನ್ನ ನಿನ್ನ ಗೆಳೆಯರಿಗೆ ತೋರಿಸಿ ಬಾ” ಎಂದ.

ಬಹಳ ದಿನಗಳಾದ ಮೇಲೆ ನಿನ್ನಡಿ ತಾಯ ಮನೆಗೆ ಬಂದ. ಮಂಟಪದಲ್ಲಿ ಗೆಳೆಯರು ಸೇರಿ ಅದು ಇದು ಮಾತಾಡುತ್ತಾ ಇರುವಾಗ “ತಾನೊಂದು ಜಾದೂಗಾರಿಕೆ ತೋರಿಸುತ್ತೇನೆ” ಅಂದ. ಒಂದು ಹುಲ್ಲಿನ ಸಿವುಡು ತರಿಸಿದ. ಒಂದು ಚೀಲ ಜೋಳ ತರಿಸಿದ. ಅದೇನಪ್ಪ ಅಂತಾದ್ದು ಕಲ್ತಿದ್ದಾನೆ ನಮ್ಮ ಹುಡುಗ, ಅಂತ ಜನ ಸೇರಿದರು. ಮಂಟಪದ ಹೊರಬಂದು ಮಂತ್ರ ಅಂದು ಜೋಳದಲ್ಲಿ ಬಲಗೈ ಹಾಕಿದ. ಅಷ್ಟೂ ಧಾನ್ಯ ಚಿನ್ನದ ಧಾನ್ಯವಾಯಿತು! ಎಡಗೈಯಿಂದ ಹುಲ್ಲಿನ ಸಿವುಡು ಮುಟ್ಟಿದ - ಸುಮಾರು ನಾಕಿಪ್ಪತ್ತು ಜನ ಸೈನಿಕರಾದರು! ಜನ ಗಾಬರಿಯಾಗಿ ದೂರ ಸರಿದರು. ಹುಡುಗಿಯರು, ಹೆಂಗಸರು ಚೀರಿ ಮನೆಗಳಿಗೆ ಓಡಿಹೋಗಿ ಬಾಗಿಲಲ್ಲಿ ನಿಂತು ನೋಡತೊಡಗಿದರು. ನಿನ್ನಡಿ ನಗುತ್ತ “ಲೋ ಒಂದು ಕವಾಯತು ಮಾಡಿ ತೋರಿಸ್ರೋ ನಮ್ಮ ಜನಕ್ಕೆ” ಅಂದ. ಸೈನಿಕರೆಲ್ಲ ಅವನು ಹೇಳಿದ ಹಾಗೆಯೇ ಕವಾಯತು ಮಾಡತೊಡಗಿದರು. ಜನ ಬೆಕ್ಕಸ ಬೆರಗಾಗಿ ಕೆಲವರು ತಮ್ಮ ಕಣ್ಣು ತಾವೇ ನಂಬದಾದರು. ಚೀರಿ ಓಡಿದವರು ನಿನ್ನಡಿ ಮಧ್ಯೆ ನಿಂತು ಸೈನಿಕರಿಗೆ ಆಜ್ಞೆ ಕೊಡುತ್ತಿದ್ದನಾದ್ದರಿಂದ ಧೈರ್ಯ ತಗೊಂಡು ಬಳಿ ಬಂದರು. ಜನ ಚಪ್ಪಾಳೆ ತಟ್ಟಿದರು, ಕೂಗಿದರು, ನಕ್ಕರು, ಕುಣಿದರು, ಹಾರಾಡಿದರು, ನಿನ್ನಡಿಯನ್ನು ಹೊಗಳಿದರು.

ಇದನ್ನೆಲ್ಲ ನೋಡುತ್ತಿದ್ದ ಬೆಳ್ಳಿ ಬಹಳ ಸಂತೋಷಪಟ್ಟಳು. ಅವಳ ಆನಂದ ನೋಡಿ ನಿನ್ನಡಿಗೆ ಹೆಮ್ಮೆ. ಹತ್ತಿರ ಬಂದು “ಹೆಂಗೈತಬ್ಬೆ?” ಅಂದ.

“ಆದರೆ ಮಗಾ, ಉಣ್ಣೋ ಅನ್ನ, ದನಿನ ಮೇವು ಹಾಳ್ಮಾಡಬಾರದು ನನ್ನಪ್ಪಾ. ಈ ವಿದ್ಯೆ ನಿನಗಲ್ಲ” ಎಂದುಬಿಟ್ಟಳು.

ತಕ್ಷಣ ನಿನ್ನಡಿಯ ಅಹಂಕಾರದ ಬೆಟ್ಟ ಕರಗಿ ನೀರಾಯಿತು. ವಿವರಣೆಯ ಅಗತ್ಯ ಬೀಳಲಿಲ್ಲ. ಯಾರಿಗೂ ಹೇಳದೆ ಕೇಳದೇ ಬೆಟ್ಟಕ್ಕೆ ಓಡಿದ. ಬಿಟ್ಟ ಬಾಣದ ಹಾಗೆ ಓಡಿಬಂದು ಶಿವಪಾದನ ಪಾದ ಹಿಡಿದು,

“ತಂದೇ” ಎಂದ.

“ಯಾಕೊ ಮಗ? ಏನು ವಿಷಯ?” ಅಂದ ಶಿವಪಾದ, ಆಶ್ಚರ್ಯದಿಂದ.

“ಮನುಷ್ಯರು ತಿನ್ನೋ ಅನ್ನ, ದನ ತಿನ್ನೋ ಹುಲ್ಲು ಕಸಿದುಕೊಂಬಂದು ಚಿನ್ನ, ಸೈನ್ಯ ಮಾಡಿಟ್ಟರೆ ಎದಕ್ಕೆ ಬಂತು ನನ್ನಯ್ಯಾ? ಚಿನ್ನವನ್ನ ಪುನಃ ಧಾನ್ಯವನ್ನಾಗಿಸುವ, ಸೈನಿಕರನ್ನ ಪುನಃ ಹುಲ್ಲು ಮಾಡೋ ವಿದ್ಯಾ ಕೊಡು ತಂದೇ”

ಶಿವಪಾದನಿಗೆ ಹೊಯ್ಕಾಯಿತು. ನಿನ್ನಡಿ ಇಷ್ಟು ಬೇಗ ಈ ತಿಳುವಳಿಕೆಗೆ ತಲುಪಬಹುದೆಂದು ಊಹಿಸಿರಲಿಲ್ಲ. ಸಂತೋಷವಾದರೂ ತೋರಿಸಿಕೊಳ್ಳದೆ, ಹೇಳಿದ:

“ಜನಕ್ಕೆ ಚಿನ್ನ ಬೇಕು. ರಾಜ್ಯ ಆಳಲಿಕ್ಕೆ ಸೈನ್ಯ ಬೇಕು. ಇರಲಿ ಇಟ್ಟುಕೊಳ್ಳಪ್ಪ”

“ಉಂಟೆ ನನ್ನಯ್ಯ? ಜನ ದನಗಳ ಹೊಟ್ಟೆ ಮ್ಯಾಲೆ ಹೊಡೆದು ಇಂಥ ಆಟ ಆಡಿದರೆ ಅಮ್ಮ ಮೆಚ್ಚಭೌದ? ಈ ವಿದ್ಯೆ ನನಗೆ ಬೇಡ”

-ಎಂದು ತಿರುಮಂತ್ರ ಬೋಧಿಸಿದ.” ಇದಕ್ಕಾಗಿ ನೀನು ಕಾಯಬೇಕಿಲ್ಲ. ಈಗಲೇ ಇಲ್ಲಿಂದಲೇ ಪ್ರಯೋಗಿಸಿ ನೋಡು” ಅಂದ ಶಿವಪಾದ.

ಪರಿವರ್ತಿಸಿದ ಚಿನ್ನವನ್ನ ಪುನಃ ಧಾನ್ಯವಾಗಿಸಿ, ಸೈನಿಕರನ್ನ ಹುಲ್ಲಿನ ಸಿವುಡಾಗಿ ಪರಿವರ್ತಿಸಿ ಕುರುಮುನಿಗೆ ಆ ವಿದ್ಯೆಯ ನೀಡಿ ಶಿವಪಾದನ ಅನುಮತಿ ಇಲ್ಲದೆ ಪ್ರಯೋಗಿಸಕೂಡದೆಂದು ಆಣೆಯ ಹಾಕಿ ನೆಮ್ಮದಿಯ ನಿಟ್ಟುಸಿರಿಟ್ಟ. ಶಿವಪಾದ ಮತ್ತು ಬೆಳ್ಳಿ-ಇಬ್ಬರಿಗೂ ನೆಮ್ಮದಿಯಾಯಿತು. ತನಗೆ ಗೊತ್ತಿದ್ದ ಎಲ್ಲದಕ್ಕೂ ಒಬ್ಬ ಅರ್ಹ ಅಧಿಕಾರಿಯನ್ನ ಕರುಣಿಸಿದ್ದಕ್ಕೆ ಶಿವಪಾದ ಅಮ್ಮನಿಗೆ ಕೃತಜ್ಞತೆ ಹೇಳಿ ತನ್ನೆಲ್ಲ ವಿದ್ಯೆಯನ್ನು ನಿನ್ನಡಿಗೆ ಧಾರೆಯೆರೆದ.

## ನಲವತ್ತೊಮ್ಮರು

ಅದಾಗಿ ಒಂದು ದಿನ ಬೆಳ್ಳಿ ಗವಿಗೆ ಬಂದಾಗ ಶಿವಪಾದ

“ಮಗಳೇ ಈ ಬೇಸಿಗೆಯಲ್ಲೇ ಮಗನಿಗೆ ಮದುವೆಯ ವ್ಯವಸ್ಥೆ ಮಾಡು” ಅಂದ.

“ಅವನಿಗೊಪ್ಪುವ ಕನ್ಯೆಯನ್ನ ನೀನೇ ತೋರ್ಸು;”

-ಎಂದಳು.

“ಐದು ಬೊಗಸೆ ಗಂಧಶಾಳಿ ಭತ್ತ ತಗೊಂಡು ಅವನ ಶಲ್ಯದಲ್ಲಿ ಕಟ್ಟು. ಯಾವ ಕನ್ಯೆ ಕೇವಲ ಅವನ ಶಲ್ಯದೊಳಗಿನ ಭತ್ತದಿಂದ ಅವನ ಹೊಟ್ಟೆತುಂಬ ಊಟ ಹಾಕುವಳೋ ಅವಳೇ ಅವನ ಮಡದಿ”

“ಗಡಿಗೆ, ಮಡಿಕೆ ಅವೂ ಐದು ಬೊಗಸೆ ಭತ್ತದೊಳಗೇ ಬಂತ?”

“ಹೆಂಗಾದರೂ ಮಾಡಲಿ, ಏನೇ ಮಾಡಲಿ, ಅಷ್ಟೇ ಭತ್ತದಲ್ಲೇ ಮಾಡಬೇಕು.”

“ನನ್ನಯ್ಯಾ ಇದಾಗೋ ಮಾತ, ಹೋಗೋ ಮಾತ? ಯಾವಳಾದರೂ ಐದು ಬಗಸಿ ಭತ್ತದೊಳಗs ಇಷ್ಟೆಲ್ಲಾ ಮಾಡಾಕಾದೀತ?”

-ಎಂದು ಸಂದೇಹ ವ್ಯಕ್ತಪಡಿಸಿದಳು ಬೆಳ್ಳಿ.

“ಅಮ್ಮನ ಅಪ್ಪಣೆ ಈ ರೀತಿ ಆಗಿದೆ! ಅದರ ಕತೆ ನನಗೂ ನಿನಗೂ ತಿಳೀಲಾರದು ತಿಳಿದವಳ್ಯಾವಳೋ ಹುಡುಗಿ ಕಾದಿರ್ತಾಳ. ಒಳ್ಳೇ ದಿನ ಒಳ್ಳೇ ವ್ಯಾಳ್ಯೆ ನೋಡಿ ಕನ್ಯೆಯ ಶೋಧನೆಗೆ ಕಳಿಸು” ಅಂದ.

“ಆಯಿತೆಪ್ಪಾ”. ಅಂದಳು.

ಶಿವಪಾದ ಹೇಳಿದಂತೆ ಒಂದು ಒಳ್ಳೆಯ ದಿನ ಒಳ್ಳೆಯ ವೇಳೆ ಅಮ್ಮನ ನೆನೆದು ಬೆಳ್ಳಿ ಎದ್ದು ಕೊಟ್ಟಿಗೆಯ ಕೋಳಿ ಕೂಗುವ ಮುನ್ನ ಮಗನ ಎಬ್ಬಿಸಿದಳು. ಮಗ ಮಡುವಿಗ್ಹೆದಿ ಮೂರು ಮುಳುಗು ಹಾಕಿ ಮಿಂದು ಒದ್ದೆ ಬಟ್ಟೆಯಲ್ಲೇ ಬೀಡಿಗೆ ಬಂದು ಮುಂಜಾನೆಯ

ಹನಿಪೂಜೆ ಮಾಡಿದ. ಹೆತ್ತಯ್ಯ ಮುತ್ತಯ್ಯರ ನೆನೆದು ಬೆಟ್ಟದ ಅಮ್ಮನ ನೆನೆದ. ಮೂಡುದಿಕ್ಕು ನೋಡಿ ಸೂರ್ಯನ ಹೊಗಳಿದ. ಪಡುವಣಕ್ಕೆ ತಿರುಗಿ ಚಂದ್ರನ ನೆನೆದ, ಆಮೇಲೆ ಬಟ್ಟೆ ಬದಲಿಸಿ ಮಡಿಯುಟ್ಟು ಗಂಧವಪೂಸಿ ಭಕ್ತಿಗೆ ವಿಭೂತಿಯ ಹಚ್ಚಿಕೊಂಡ.

ಅಷ್ಟರಲ್ಲಿ ಬೆಳ್ಳಿ ಬೆಳಗಿನ ನ್ಯಾರೆ ಬೆಳಗಿನ ವ್ಯಾಳ್ಯದಲ್ಲೇ ಮಾಡಬೇಕೆಂದು ಎಲ್ಲ ಸಿದ್ಧಪಡಿಸಿ ಬಾಳೆ ಎಲೆ ಹಾಕಿ, ಹಾಕಿದ ಎಲೆಗೆ ನೀರಿನ ಹನಿ ಚಿಮುಕಿಸಿ ಮಗನಿಗಾಗಿ ಕಾಯುತ್ತಿದ್ದಳು. ನಿನ್ನಡಿ ಹೋಗಿ ನ್ಯಾರೆಗೆ ಕೂತ. ಮೆಣಸು ಹುಳಿ ಸೇರಿಸಿ ಐದು ತೆಂಗಿನ ಕಾಯಿ ಹಾಕಿ ಮಾಡಿದ ಚಟ್ನಿಯ ನೀಡಿದಳು. ಹಸಿರು ಬಣ್ಣದ ಕಾಯಿ ಪಲ್ಯ ಹಾಕಿ, ಬೆಳ್ಳನ ಆರು ರೊಟ್ಟಿಯ ಹಾಕಿ ಮ್ಯಾಲೆ ಪಚ್ಚವರ್ಣದ ಸೊಪ್ಪಿನ ಪಲ್ಯ, ಗಿಂಡಿಗಾತ್ರದ ಬೆಣ್ಣೆ ಉಂಡಿಯ ಹಾಕಿ, ಒಂದೆರಡು ಅಕ್ಕಿಯ ಉಂಡಿಗಳನ್ನಿಟ್ಟು ಅದಕ್ಕೊಪ್ಪುವ ಉಪ್ಪಿನಕಾಯಿ ನೀಡಿದಳು. ನಿನ್ನಡಿ ಎಡದಲ್ಲಿ ಬೆಕ್ಕಿಗೆ ಬೆಣ್ಣೆಯ ಹಾಕಿ, ಬಲದಲ್ಲಿ ನಾಯಿಗೆ ರೊಟ್ಟಿಯ ಹಾಕಿದ. ಬಿಸಿಬಿಸಿ ಉಂಡು ಭಗಭಗ ಬೆವೆತು ತಂಬಿಗೆ ಕಪಿಲೆಯ ಹಾಲು ಕುಡಿದು ಎಂಜಲು ತೊಳಕೊಂಡು ಮ್ಯಾಲೆದ್ದ.

ತಾಯಿ ಕಲ್ಲುಪೆಟ್ಟಿಗೆ ಬಾಗಿಲು ತೆಗೆದು ಪಟ್ಟೆಯ ಕಂಬಿ ಧೋತರ ಕೊಟ್ಟಳು. ಧೋತರವನ್ನು ಕತ್ತರಿ ಕಚ್ಚೆಹಾಕಿ ಉಟ್ಟ. ಓರವಾಗಿ ಬಟ್ಟೆ ತೊಟ್ಟ. ಪಟ್ಟೆಯ ರುಮಾಲು ತಕ್ಕೊಂಡು ನೆರಿಗೆ ನೆರಹಿ ಮುಂಡಾಸು ಕಟ್ಟಿಕೊಂಡ. ಬೆಳ್ಳಿಕಟ್ಟಿನ ಚೂರಿ ತಗೊಂಡ. ಅಷ್ಟರಲ್ಲಿ ಅಬ್ಬೆ ಪಟ್ಟೆಯ ಶಲ್ಯದಲ್ಲಿ ಐದು ಬೊಗಸೆ ಗಂಧಶಾಳಿ ಭತ್ತ ಕಟ್ಟಿ ಎಡಭುಜದ ಮ್ಯಾಲೆ ಹಾಕಿದಳು. ಅಬ್ಬೆಯ ಪಾದ ಮುಟ್ಟಿ ನಮಸ್ಕರಿಸಿದ, ಹೆತ್ತಯ್ಯ ಮುತ್ತಯ್ಯ ಬೆಟ್ಟದ ಅಮ್ಮ, ಶಿವಪಾದನ ನೆನೆದ.

ಹೊರಗೆ ಗೂಳಿ ಭೈರನ ಬೆನ್ನ ಮ್ಯಾಲೆ ಜೂಲು ಹಾಕಿ ಸಿಂಗಾರ ಮಾಡಿದ್ದರು. ಕುರುಮುನಿ ತನ್ನ ಕುದುರೆಯೊಂದಿಗೆ ಕಾಯುತ್ತಿದ್ದ. ಕುದುರೆಯೇರಿ ಚಂಡೀದಾಸ ಕಾಯುತ್ತಿದ್ದ. ಅಡಿಯುದ್ದದ ಎಕ್ಕಡ ಮೆಟ್ಟಿ ಆಳುದ್ದದ ಕೋಲು ಕೊಡೆ ಹಿಡಿದುಕೊಂಡು ಹೋರಿಯನ್ನೇರಿ ನಿನ್ನಡಿ ಕುರುಮುನಿ, ಚಂಡೀದಾಸರ ಜೊತೆಗೂಡಿ ಕನ್ಯಾರ್ಥಿಯಾಗಿ ಪಯಣವಾದ.

ತಮ್ಮ ಸ್ಥಾನಮಾನ ಗುಣಗೌರವಗಳಿಗೆ ಸಮಾನವಾದ ಯ್ಯಾರ್ಯಾರ ಮನೆತನಗಳಲ್ಲಿ ಕನ್ಯೆಯರಿದ್ದಾರೆಂದು ಕೇಳಿ ತಿಳಿದಿದ್ದರೋ ಆ ಎಲ್ಲ ಊರು ಹಟ್ಟಿ ಮನೆತನಗಳಿಗೆ ಹೋದರು. ಕನ್ಯಾರ್ಥಿಯಾಗಿ ಒಂದು ತಿಂಗಳು ಅಲೆದಾಡಿದರೂ ನಿನ್ನಡಿಯ ಕೈಹಿಡಿಯಲು ಯಾವೊಬ್ಬ ಕನ್ಯೆಯೂ ಮುಂದೆ ಬರಲಿಲ್ಲ. ಅನ್ನ ಮೊದಲಾಗಿ ಅಡಿಗೆಯ ಪಾತ್ರೆ ಪಡಗ, ಸಾರಿನ ಉಪ್ಪೆಣ್ಣೆ ಕೂಡ ಐದೇ ಬೊಗಸೆ ಭತ್ತದಲ್ಲಾಗಬೇಕೆಂದರೆ ಹ್ಯಾಗೆ?

ಇಲ್ಲಿಯವರೆಗೆ ಚಂಡೀದಾಸ ಗೌರಿಯ ಪ್ರಸ್ತಾಪ ಮಾಡಿರಲಿಲ್ಲ. ಅದಕ್ಕೆ ಎರಡು ಕಾರಣಗಳಿದ್ದವು. ಒಂದನೆಯದಾಗಿ ಸದರಿ ಕರಾರಿನಂತೆ ಅಡಿಗೆ ಮಾಡುವುದಾಗಲಿ, ವರನಿಗೆ ತೃಪ್ತಿಯಾಗುವಂತೆ ಉಣಬಡಿಸುವುದಾಗಲಿ ಅಸಾಧ್ಯವೆಂದು ಅವನೂ ನಂಬಿದ್ದ. ಎರಡನೆಯ ಕಾರಣವೆಂದರೆ ಒಂದುವೇಳೆ ಕರಾರಿನಂತೆ ಎಲ್ಲ ನಡೆದರೂ ಶಿಖರಸೂರ್ಯ ಈ ಸಂಬಂಧವನ್ನ ಒಪ್ಪಲಾರ. ಈಗ ಅವನು ಅದೃಶ್ಯನಾಗಿದ್ದರೂ ಆಕಸ್ಮಾತ್ ಮುಂದೆ ಪ್ರತ್ಯಕ್ಷನಾದರೂ ಅವನು ಒಪ್ಪಲಾರದ ಸಂಬಂಧವಿದು. ಆತ ಅರಮನೆಯವ. ಅವನ ಗೌರವ ಅಂತಸ್ತುಗಳು ದೊಡ್ಡವು. ಒಂದು ಚಿಕ್ಕ ಹಟ್ಟಿಯ, ಅದರಲ್ಲೂ ಶಿವಪಾದನ ಊರಿನ ಸಂಬಂಧ ಒಪ್ಪತ್ತಾನೆಂಬುದು ಅವನ ಊಹೆಗೆ ಮೀರಿದ ವಿಷಯವಾಗಿತ್ತು. ಈಗ ನೋಡಿದರೆ ಯಾವೊಬ್ಬ ಕನ್ಯೆಯೂ ಒಪ್ಪಿಲ್ಲವಾದ್ದರಿಂದ ಯಾಕೆ ಪ್ರಶ್ನಿಸಬಾರದು? ಅನ್ನಿಸಿ ಗೌರಿಯ ಹೆಸರು ಹೇಳಿದ. ನಿನ್ನಡಿ “ಅದೂ ಆದೀತು” ಅಂದ. ಬಿಳಿಗಿರಿಗೆ ಹೇಳಿ ಕಳಿಸಿದರು.

## ನಲವತ್ತಾಲ್ಕು

ಬಿಳಿಗಿರಿಗೆ ಚಿಕ್ಕಮ್ಮಣ್ಣಿ ಮಗಳು, ಮೊಮ್ಮಗಳೊಂದಿಗೆ ಬಂದುದೇ ಆಯ್ತು, ಇಡೀ ಅರಮನೆ ಆನಂದದಿಂದ ನಲಿದಾಡಿತು. ಶಿಖರಸೂರ್ಯ ಯಾಕೆ ಬರಲಿಲ್ಲವೆಂದು ಮತ್ತೆ ಮತ್ತೆ ಕೇಳಿದರು. ಚಿಕ್ಕಮ್ಮಣ್ಣಿಯ ಮುದಿ ಚಿಕ್ಕಪ್ಪನಂತೂ ತನ್ನೆಲ್ಲ ಸಮಸ್ಯೆಗಳು

ಬಗೆಹರಿದಂತೆ ಉಲ್ಲಾಸಭರಿತನಾದ. ಮಗಳು ಕನಕಪುರಿಯ ಹಂಗು ಹರಿದುಕೊಂಡು ತನ್ನಲ್ಲಿಗೆ ಬಂದದ್ದೇ ಮುದುಕು ಹೊಸಪ್ರಾಯ ಬಂದಷ್ಟು ಹುರುಪಾದ. ಅವನ ಆನಂದಕ್ಕೆ ಬೇರೊಂದು ಕಾರಣವೂ ಇತ್ತು. ತನ್ನ ಮಗಳು ಜಯರಾಣಿ ಚಿಕ್ಕವಳಾದರೂ ಅವಳನ್ನು ಯೋಗ್ಯವರನಿಗೇ ಕೊಡಬೇಕು. ವಯಸ್ಸು ಕೊಂಚ ಹೆಚ್ಚಾದರೂ ಮಗಳಿಗೆ ರವಿಕೀರ್ತಿಗಿಂತ ಹೆಚ್ಚಿನ ವರ ಯಾರಿದ್ದಾರೆ? ಈ ಮೂಲಕ ಬಲಾಢ್ಯನಾದ ಶಿಖರಸೂರ್ಯನೂ ಬಿಳಿಗಿರಿಯಲ್ಲಿರುತ್ತಾನೆ. ಅವನು ಜೊತೆಗಿದ್ದರೆ ನೂರಾಳ್ವಡೆ ಇದ್ದ ಹಾಗೆ. ರವಿಕೀರ್ತಿಯಿಂದಾಗಿ ರಾಜ್ಯವೂ ಬಳಗದವರ ಕೈಯಲ್ಲೇ ಉಳಿದಂತಾಗುತ್ತದೆ. ಚಿಕ್ಕಮ್ಮಣ್ಣಿ ಹಾಗೂ ಛಾಯಾದೇವಿಗೂ ಈ ವಿಚಾರ ಸಮ್ಮತವೇ.ಆದರೆ ರವಿಕೀರ್ತಿಗೊಂದು ಸ್ವಂತ ಅಭಿಪ್ರಾಯವಿದ್ದೀತೆಂದು ಮಾತ್ರ ಯಾರೊಬ್ಬರೂ ಯೋಚಿಸಲಿಲ್ಲ. ಎಲ್ಲರೂ ಗಂಭೀರವಾಗಿ ಆಲೋಚನೆ ಮಾಡಿದ್ದು ಗೌರಿಯ ಬಗ್ಗೆ. ಆಕೆ ಮಹಾಚೆಲುವೆಯಲ್ಲವೆಂಬ ಆತಂಕ ಛಾಯಾದೇವಿಗಿದ್ದರೆ ಚಿಕ್ಕಮ್ಮಣ್ಣಿ ಮತ್ತು ವೃದ್ಧ ದೊರೆಗೆ ಆ ಚಿಂತೆ ಇರಲಿಲ್ಲ. ನಮ್ಮ ಮೊಮ್ಮಗಳಿಗೆ ವರ ಸಿಕ್ಕುವುದಿಲ್ಲವೆಂದರೆ ಅದೊಂದು ಹಾಸ್ಯಾಸ್ಪದ ಪ್ರಸಂಗವೆಂದೇ ಅವರು ನಂಬಿದ್ದರು.

ಆದರೆ ಬಿಳಿಗಿರಿಗೆ ಬಂದಾದಮೇಲೆ ಗೌರಿ ಇನ್ನೂ ಒಂಟಿಯಾದಳು. ಅಣ್ಣನಿರಲಿಲ್ಲ. ಜೊತೆಗಿದ್ದ ಅಜ್ಜಿ ತನ್ನ ಬಳಗ ಸೇರಿಕೊಂಡು ಅಂತಃಪುರದ ಮೆಚ್ಚಿನ "ಚಿಕ್ಕಮ್ಮಣ್ಣಿ"ಯಾಗಿ ಬಿಟ್ಟಳು. ತಾಯಿ ಅಂತಃಕರಣದವಳಲ್ಲ. ನಿದ್ದೆಯಿಲ್ಲ, ಎಚ್ಚರದಲ್ಲಿ ಸೊಗಸಿಲ್ಲ. ನೋಡುವುದಕ್ಕೆ ಕನ್ನಡಿ ಬಿಟ್ಟರೆ ಬೇರೆ ಆತ್ಮೀಯರಿಲ್ಲ. ಮಾತಾಡುವುದಕ್ಕೆ ಬೇರೆ ದನಿಯಿಲ್ಲ. ಬೋರುಬೋರಾಗಿ ಕುಂಯೋ ಮರ್ಯೋ ಅಂತ ಹಾಡು ಒದರಿದರೆ ನಾಯಿ ಅತ್ತಂತೆ ಕೇಳಿಸಿ ಬಾಯಿ ಮುಚ್ಚುತ್ತಿದ್ದಳು. ಅವಳಿಗೆ ಸಮಾಧಾನ ತಂದ ಎರಡು ಸಂಗತಿಗಳೆಂದರೆ ಅರಮನೆಯ ಅನತಿದೂರದಲ್ಲೇ ಇದ್ದ ಶಿವದೇವಾಲಯ ಮತ್ತು ಅದರ ಸುತ್ತಲೂ ಹಬ್ಬಿದ್ದ ಹಚ್ಚ ಹಸಿರು ಕಾಡು.

ಸೋಮವಾರ ಬಿಟ್ಟರೆ ಉಳಿದ ದಿನಗಳಲ್ಲಿ ಆ ದೇವಸ್ಥಾನಕ್ಕೆ ಬರುತ್ತಿದ್ದ ಜನ ಕಡಿಮೆ. ಇದರಿಂದ ಹೆಚ್ಚು ಸಮಯ ದೇವಸ್ಥಾನದಲ್ಲೇ ಕಳೆಯಲು ಅನುಕೂಲವಾಯಿತು. ಸಂಜೆ ಸೂರ್ಯಾಸ್ತದ ಸಮಯದಲ್ಲಿ ದೇವಾಲಯದ ಹಿಂದಿನ ಬಂಡೆಯ ಮೇಲೇರಿ ಕ್ಷಿತಿಜವನ್ನು ನೋಡುತ್ತ ಕೂರುವುದು ಅವಳಿಗೆ ಪ್ರಿಯವಾದ ಹವ್ಯಾಸ. ಕ್ಷಿತಿಜ ಬಹುಬೇಗ ಅವಳ ಕಣ್ಣುಗಳನ್ನು ತನ್ನ ಕಡೆಗೆ ಸೆಳೆಯುತ್ತಿತ್ತು. ಮತ್ತು ತದೇಕ ಧ್ಯಾನದಿಂದ ತನ್ನ ಕಡೆಗೇ ನೋಡುತ್ತ ಕೂತಿರುವುದನ್ನು ಅದು ಅವಳಿಗೆ ಕಲಿಸಿಕೊಟ್ಟಿತು. ಹಾಗೆ ಕೂತಿರುವಂತೆಯೇ ಕಣ್ಣು ಕ್ಷಿತಿಜದಾಚೆಯ ಆಳಕ್ಕೆ ಪ್ರವೇಶಿಸಿ ಅದರೊಳಗಿಂದ ಬರುವ ಚಂದ್ರ ಚಿಕ್ಕೆ ತಾರೆಗಳನ್ನ ಆಕೆ ತನಗೆ ಮಾತ್ರ ಸಂದೇಶ ತಂದಂತೆ ತೋರುತ್ತಿತ್ತು. ಅಂಥ ಹಕ್ಕಿಯ ದರ್ಶನವಾದೊಡನೆ ಮೊದಲಿನ ಗೌರಿ ಇನ್ನೊಬ್ಬಳಾಗಿ ಇನ್ನೊಂದು ಲೋಕದವಳಾಗಿ, ಬಹುಶಃ ದೇವತೆಯಾಗಿ ಪರಿವರ್ತನೆ ಹೊಂದುತ್ತಿದ್ದಳು. ಆವಾಗ ತಾನಿದ್ದ ವಾತಾವರಣಕ್ಕೆ ತೀರ ಅಪರಿಚಿತಳಾಗಿ, ಅಥವಾ ಇದೆಲ್ಲದರಿಂದ ಗಾಬರಿಗೊಂಡು ಇದೆಲ್ಲ ಹಿಂಗ್ಯಾಕಾಗುತ್ತದೆ? ಇದರ ಅರ್ಥವೇನು? ಇವರ್ಯಾರು? ನಾನ್ಯಾರು? ಕ್ಷಿತಿಜವೆಂದರೇನು? ಅದರಾಚೆ ಯಾರಿದ್ದಾರೆ? ಆಕಾಶವ್ಯಾಕೆ? ತಂದೆ ತಾಯಿ ಯಾಕೆ? ಇತ್ಯಾದಿ ಕೇಳಿಕೊಂಡು ಕಳವಳಗೊಳ್ಳುತ್ತಿದ್ದಳು. ಆಮೇಲೆ ಕ್ಷಿತಿಜ ಬೂದುಬಣ್ಣಕ್ಕೆ ತಿರುಗಿ ಬರಬರುತ್ತ ಮಸಿಯಿಂದ ಬರೆದಂತೆ ಕಪ್ಪುಬಣ್ಣಕ್ಕೆ ತಿರುಗಿದಾಗ ಅರಮನೆಗೆ ಹಿಂದಿರುಗುತ್ತಿದ್ದಳು. ಅವಳು ದೇವಾಲಯದಿಂದ ಬಾರದಿರುವುದನ್ನು ಅಜ್ಜಿಯ ಶಿವಾಯಿ ಬೇರೆ ಯಾರೂ ಗಮನಿಸುತ್ತಿರಲಿಲ್ಲ.

ಅರಮನೆಯಲ್ಲಿ ಕೂಡ ಅವಕಾಶ ಸಿಕ್ಕಾಗಲ್ಲೆಲ್ಲ ಗೌರಿ ಚಂಡೀದಾಸ ಕೊಟ್ಟ ಅಡಿಕೆ ಹಿಡಿದುಕೊಂಡು ಕಣ್ಣಮುಚ್ಚಿ ತನ್ನ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿದ್ದಳು. ಕೆಲವು ಸಲ ಹಾಗೇ ನಿದ್ದೆ ಬಂದು ಕನಸು ಕಾಣುತ್ತ ಕೂರುತ್ತಿದ್ದಳು.

ಒಂದು ದಿನ ಎಡಗೈಯಲ್ಲಿ ಆರು ಬೆರಳಿದ್ದ ಹುಡುಗನೊಬ್ಬ ತನ್ನ ಹಿಂದೆ ನಡೆದು ಬರುವುದನ್ನು ಕನಸಿನಲ್ಲಿ ಕಂಡಳು. ಬಿಳಿಬಟ್ಟೆ ತೊಟ್ಟಿದ್ದ. ಎತ್ತಿನ ಮ್ಯಾಲೆ ಕೂತುಕೊಂಡು ಕಾಡಿನಲ್ಲಿ ಭೇಟಿಯಾದ. ದೇವಸ್ಥಾನಕ್ಕೆ ಹೋದಾಗ ಹೊರಗೆ ಅದೇ ಅಥವಾ ಅಂಥದೇ ಎತ್ತು ನಿಂತುಕೊಂಡಿತ್ತು! ಎತ್ತಿನ ಬಳಿ ಅವನಿರಲಿಲ್ಲ. ಆತ ಮತ್ತು ಆ ಎತ್ತು ದೈವವೋ? ಭೂತವೊ? ಗೊತ್ತಾಗದೆ ಹೆದರಿದಳು. ಆದರೆ ನೋಡುವುದಕ್ಕೆ ಚಂದ ಇದ್ದ ಹುಡುಗ. ದೈವವೇ ಇರಬೇಕೆಂದು ಸಾಮಾಧಾನ ಮಾಡಿಕೊಂಡಳು.

ಒಂದು ದಿನ ಸರಿ ರಾತ್ರಿ ಇದ್ದೀತು, ಕನಸಿನಲ್ಲಿ ಎತ್ತು ಘುರುಕೀ ಹೊಡೆದದ್ದು ಕೇಳಿಸಿ ಫಕ್ಕನೆ ಎದ್ದು ಕೂತಳು. ಎಲ್ಲರೂ ಗಾಢನಿದ್ದೆಯಲ್ಲಿದ್ದರು. ಕನಸೆ? ನಿಜವೆ? ದನಿ ಮಾತ್ರವಲ್ಲ, ಎತ್ತಿನ ಕಿಣಿಕಿಣಿ ಗಂಟೆಯ ನಾದವನ್ನೂ ಕೇಳಿಸಿಕೊಂಡ ನೆನಪಾಯಿತು. ಹಾಗಿದ್ದರೆ ದೇವಸ್ಥಾನದ ಎತ್ತು ಅರಮನೆಗೆ ಬಂದಿರಬಹುದೆ, ಎತ್ತಿನ ಜೊತೆ ಆರು ಬೆರಳಿನ ಹುಡುಗ ಬಂದಿರಬಹುದೆ? - ಎಂದು ಮೆಲ್ಲಗೆ ಕಿಡಿಕಿಯ ಬಳಿ ಹೋಗಿ ಹೊರಗೆ ನೋಡಿದಳು. ಎದುರು ಮರದಾಚೆ ಎತ್ತು ನಿಂತಿತ್ತು! ಎತ್ತಿನೊಂದಿಗೆ ಬೆಳಕು ಹಿಡಿದುಕೊಂಡು ತನ್ನ ಕಡೆಗೇ ನೋಡುತ್ತ ಆತ ನಿಂತುಕೊಂಡಿದ್ದ! ಗಡಗಡ ನಡುಕ ಹುಟ್ಟಿ ಓಡಿಬಂದು ಗಟ್ಟಿಯಾಗಿ ಅಜ್ಜಿಯನ್ನು ತಬ್ಬಿಕೊಡು ಮಲಗಿದಳು. ಅಜ್ಜಿಗೆ ಎಚ್ಚರವಾಗಿ ಮೊಮ್ಮಗಳನ್ನು ತಾನೂ ಬಿಗಿಯಾಗಿ ತಬ್ಬಿಕೊಂಡು ಇಬ್ಬರ ಹೊದಿಕೆಯನ್ನ ಮ್ಯಾಲೆಳೆದುಕೊಂಡು ಮಲಗಿದಳು. ಮೊಮ್ಮಗಳಿಗೆ ಚಳಿಜ್ವರ ಬಂದುದು ಅಜ್ಜಿಗೆ ತಿಳಿಯಲಿಲ್ಲ. ಇವಳೂ ಹೇಳಲಿಲ್ಲ.

ಆ ರಾತ್ರಿ ಬೆಳ್ಳಂಬೆಳಗು ಆ ಹುಡುಗನ, ಮತ್ತವನ ಎತ್ತಿನ ಹಳವಂಡಗಳು ಮಾಯವಾಗಲಿಲ್ಲ. ಎತ್ತು ಮೇಲಿಂದ ಮೇಲೆ ಗುಟುರು ಹಾಕುತ್ತಲೇ ಇತ್ತು. ಬೆಳಗಿನ ತಂಪುಗಾಳಿ ಬೀಸಿದಾಗ ಸಪನಿದ್ದೆಗೆ ಸಂದಳು. ಕನಸಿನಲ್ಲಿ ಮತ್ತೆ ಎತ್ತಿನ ಗುಟುರು ಕೇಳಿಸಿತು. ಇವಳು ಶಿವಲಿಂಗದೆದುರು ನೈವೇದ್ಯ ಇಟ್ಟು ಕೈ ಮುಗಿದಳು. ಆರುಬೆರಳಿನ ಹುಡುಗ ಈಗ ಜಂಗಮವೇಷದಲ್ಲಿದ್ದ.

ಏನೊಂದನ್ನೂ ಮಾತಾಡದೆ ಸೀದಾ ಪಾದವ ಬೆಳೆಸಿದ ಗರ್ಭಗುಡಿಗೆ; ಗಬಗಬ ನೈವೇದ್ಯ ತಿಂದು ಬಾಯೊರೆಸಿಕೊಡ. ಶಿವಲಿಂಗದ ಮ್ಯಾಲಿನ ಪತ್ರಿಯೆಲೆ ಇವಳ ಕೈಗಿಟ್ಟು ಕತ್ತಲೆಯಲ್ಲಿ ಮಾಯವಾದ! ಹಕ್ಕಿಯ ಕನವರಿಕೆ ಕೇಳಿಸಿತು. ಎಚ್ಚರಗೊಂಡಳು.

ಎಚ್ಚರವಾದಾಗ ಜ್ವರ ಕಮ್ಮಿಯಾಗಿ ಆಕಾಶದಲ್ಲಿ ಮೂಡಲು ಹರಿದ ಬೆಳಕು ಮೂಡಿತ್ತು. ಹಾಗೇ ಮಲಗಿದ್ದಳು. 'ಆರು ಬೆರಳಿನ ಈ ಹುಡುಗ ತನ್ನ ಸೋದರಮಾವ ತರುಣಚಂದ್ರನಾಗಿರಬಹುದೆ?' ಹೀಗೆಂದುಕೊಂಡೊಡನೆ ಹೌದೆಂದು ರೋಮಾಂಚಿತಳಾದಳು. ತುಸು ಹೊತ್ತಾದ ಬಳಿಕ ಕಿಡಿಕಿಯೊಳಗಿಂದ ಬೆಳಕು ಒಳಗೂ ನುಗ್ಗಿ ಅದರೊಂದಿಗೆ ದೇಹಕ್ಕೆ ಅನಾಯಾಸದ ಬಲವೂ ಬಂತು. ಈಗ ಕನಸನ್ನು ನೆನೆಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ "ಮುದ್ದು ಎದ್ದೇಳ್" ಎಂಬ ಅಜ್ಜಿಯ ದನಿ ಕೇಳಿಸಿತು. ಹಾಗೇ ಎದ್ದು ಹಾಸಿಗೆಯಲ್ಲೇ ಇನ್ನೂ ಕೂತಿದ್ದ ಅಜ್ಜಿಯ ತೊಡೆಯ ಮೇಲೆ ತಲೆಯಿಟ್ಟು ಒರಗಿದಳು. ಗೌರಿಯ ಮುಖ ಹಳವಂಡಗಳಿಂದ ಬಾಡಿತ್ತು. ಜ್ವರ ಹಿಡಿದಿಳಿದು ಮೈ ಭಾರವಾಗಿತ್ತು.

"ಮುದ್ದು, ಮುಖ ತೊಳೆಯಬೇಕಲ್ಲ?"

-ಎಂದಳು ಚಿಕ್ಕಮ್ಮಣ್ಣಿ ಅವಳ ತಲೆಯಲ್ಲಿ ಬೆರಳಾಡಿಸುತ್ತ. ಗೌರಿ ಹೇಳಿದಳು:

"ಬೆಳ್ಳಂ ಬೆಳಗು ಎತ್ತು ಗುಟುರು ಹಾಕುತ್ತಿತ್ತು ಅಜ್ಜಿ."

"ಎತ್ತಿನ ಗುಟುರು? ಅದ್ಯಾವ ಎತ್ತೇ ಮಾರಾಯಳೆ! ಅರಮನೆಯಲ್ಲಿ ಎಲ್ಲೂ ಎತ್ತೆಂಬೊ ಶಬ್ಧವೇ ಇಲ್ಲವಲ್ಲ! ಕನಸು ಗಿನಸು ಕಂಡೆಯೋ ಏನೊ!"

'ಹೌದೇನೊ! ಕನಸಿನಲ್ಲಿ ಆರುಬೆರಳಿನ ಆ ಹುಡುಗನೂ ಬಂದಿದ್ದ ಅಜ್ಜಿ."

"ಆರು ಬೆರಳಿನ ಹುಡುಗ" ಅಂದ ತಕ್ಷಣವೆ ಚಿಕ್ಕಮ್ಮಣ್ಣಿಗೆ ಆನಂದ ಸಂತಾಪಗಳ ಭಾವನೆಗಳಡರಿ "ಆರುಬೆರಳಿನ ಹುಡುಗ" ಎಂದು ತಂತಾನೇ ಅಂದುಕೊಳ್ಳುತ್ತ ಮಳಮಳ ಗೌರಿಯ ಮುಖ ನೋಡಿದಳು. "ಆರು ಬೆರಳಿನ ಹುಡುಗನ ಬಗ್ಗೆ ನಿನಗೆ ಯಾರು ಹೇಳಿದರು ಕೂಸೇ?" ಅಂದಳು.

"ಯಾರಿಲ್ಲ. ಆ ಹುಡುಗ ಎತ್ತಿನ ಜೊತೆ ಆಗಾಗ ನನ್ನ ಕನಸಿನಲ್ಲಿ ಬರ್ತಾನಜ್ಜಿ"

'ಬಹುಶಃ ತರುಣಚಂದ್ರನ ಬಗ್ಗೆ ನಾವು ಮಾತಾಡುವುದನ್ನ ಯಾವಾಗಲೋ ಕೇಳಿಸಿಕೊಂಡಿದೆ ಕೂಸು' ಎಂದುಕೊಂಡು

"ಏಳೇಳು ಮುಖ ತೊಳೆಯೇಳು"

ಎಂದು ಕಣ್ಣೀರು ಮಿಡಿಯುತ್ತ ಎದ್ದಳು.

ಆ ದಿನ ಮಧ್ಯಾಹ್ನ ಭಾರೀ ಬಿಸಿಲಿತ್ತು. ಕೋಣೆಯ ಕಿಡಿಕಿಯಲ್ಲಿ ಒಬ್ಬಳೇ ನಿಂತುಕೊಂಡು ಗೌರಿ ತನ್ನೊಂದಿಗೆ ತಾನೇ ಮಾತಾಡಿಕೊಳ್ಳುತ್ತಿದ್ದಳು. ಇಬ್ಬರ ಮಾತುಗಳನ್ನ ಒಬ್ಬಳೇ ಆಡುತ್ತಿದ್ದಳು. ಆ ಇನ್ನೊಬ್ಬರು ಯಾರೆಂದು ತಿಳಿಯುತ್ತಿರಲಿಲ್ಲ. ಇಬ್ಬರ ಮಾತುಗಳನ್ನು ಪ್ರತ್ಯೇಕದನಿ ಮತ್ತು ಶೈಲಿಗಳಲ್ಲಿ ಮಾತಾಡುತ್ತಿದ್ದು. ಒಂದು ಸಲ "ನಿನಗೆ ಆರು ಬೆರಳಿವೆಯಲ್ಲ, ಯಾಕೆ?" ಎಂದೂ ಕೇಳಿದಳು. ಈ ಸಂಭಾಷಣೆಯನ್ನು ಕದ್ದು ಕೇಳಿಸಿಕೊಂಡ ಛಾಯಾದೇವಿ -ಹೀಗೆ ಬಿಟ್ಟರೆ ಹುಚ್ಚು ಹಿಡಿದೀತೆಂದು ವರನನ್ನು ಹುಡುಕಲು ತಾಯಿಗೆ ದಂಬಾಲು ಬಿದ್ದಳು. ಇದಾಗಿ ಒಂದು ವಾರದಲ್ಲಿ ಚಂಡೀದಾಸನ ಸಂದೇಶ ಬಂತು: 'ಗೌರಿಯನ್ನು ನೋಡಲು ವರನನ್ನು ಕರೆತರುತ್ತಿದ್ದೇನೆ.' ಆ ದಿನವೇ ರವಿಕೀರ್ತಿಯನ್ನು ಕರೆತರಲು ಕಂಚಿಗೆ ಕುದುರೆ ಗಾಡಿಯನ್ನು ಕಳಿಸಲಾಯಿತು.

## ನಲವತ್ತೈದು

ಕಂಚಿಗೆ ಬಂದಾಗಿನಿಂದ ಹಿಡಿದು ಬಿಳಿಗಿರಿಯ ಕುದುರೆಗಾಡಿ ಬರುವತನಕ ರವಿಕೀರ್ತಿಯ ಬದುಕಿನಲ್ಲಿ ಬೇಕಾದಷ್ಟು ನೀರು ಹರಿದಿತ್ತು. ಹರಿದ ನೀರು ಎರಡೂ ದಡಗಳನ್ನು ಕೊರೆದು ಪ್ರವಾಹದ ಪಾತ್ರವನ್ನ ದೊಡ್ಡದಾಗಿಸಿತ್ತು. ಈಗವನು ವಿದ್ಯೆಗಾಗಿ ಬಂದ ಅನೇಕರಲ್ಲಿ ಒಬ್ಬನಾಗಿರಲಿಲ್ಲ. ಅವನ ಅಭಿಪ್ರಾಯಗಳಿಗೆ ವಿದ್ಯಾರ್ಥಿಗಳು ಮೊದಲುಗೊಂಡು ಅಧ್ಯಾಪಕರವರೆಗೆ ಮನ್ನಣೆ ಕೊಡುತ್ತಿದ್ದರು. ಅಭಿಪ್ರಾಯಗಳನ್ನ ಒಪ್ಪಲಿ ಬಿಡಲಿ ಯಾವುದಕ್ಕೂ ಅವನೊಂದಿಗೆ ಚರ್ಚಿಸಲು ಪಂಡಿತರಾದಿಯಾಗಿ ಎಲ್ಲರೂ ಇಷ್ಟಪಡುತ್ತಿದ್ದರು. ರವಿಕೀರ್ತಿ ದೂರದಿಂದ ನೋಡಿದವರಿಗೆ ಲಘು ಹೃದಯದ ಹಾಸ್ಯಪ್ರಿಯ, ಸಂತೋಷವನ್ನು ಇಷ್ಟಪಡುವ, ನಿಷ್ಕಾಳಜಿಯ ಶ್ರೀಮಂತನಾಗಿ ಕಂಡರೆ, ಸ್ನೇಹಿತರಾಗಿ ಹತ್ತಿರದಿಂದ ನೋಡಿದವರಿಗೆ ಒಡ್ಡನಾಗಿ, ಹಟಮಾರಿಯಾಗಿ, ಆದರೆ ಪ್ರಮಾಣಿಕವಾಗಿ ಕಾಣುತ್ತಿದ್ದ. ಸಂಕಟದಲ್ಲಿದ್ದ ಸ್ನೇಹಿತರಿಗೆ "ನಿನ್ನಂಥ ಮೂರ್ಖನಿಗೆ ಹೀಗೇ ಆಗಬೇಕು" ಎಂದು ಹೇಳಿ ತಪ್ಪದೆ ಸಹಾಯ ಮಾಡುತ್ತಿದ್ದ. ಯಾರಿಗಾದರೂ ಮಾತು ಕೊಟ್ಟರೆ ಪ್ರಾಣಹೋಗುವ ಪ್ರಸಂಗ ಬಂದರೂ ಮಾತಿಗೆ ಬದ್ಧನಾಗಿರುತ್ತಿದ್ದ. ತರತಮಗಳನ್ನು ಕಂಡರೆ ಅಸಹ್ಯ ಪಡುತ್ತಿದ್ದ. ಶಿವಾಪುರ ಅವನಿಗೆ ಇಷ್ಟವಾಗುತ್ತಿದ್ದುದೇ ಈ ಕಾರಣಕ್ಕೆ. ಯಾಕೆಂದರೆ ಅಲ್ಲಿಯ ಭಾಷೆಯಲ್ಲಿ ಏಕವಚನ ಬಿಟ್ಟು ಬಹುವಚನ ಇರಲೇ ಇಲ್ಲ. ಸಂಭೋದನೆಯಲ್ಲಿ ದೇವರಾದಿಯಾಗಿ ಎಲ್ಲರಿಗೂ ಏಕವಚನವೇ ಬಳಕೆಯಲ್ಲಿತ್ತು. ಹುಸಿ ಕಂಡರಾಗುತ್ತಿರಲಿಲ್ಲ. ಅಂಥವರ ಮೇಲೆ ಕೈಮಾಡಲೂ ಹಿಂಜರಿಯುತ್ತಿರಲಿಲ್ಲ. ಒಮ್ಮೊಮ್ಮೆ ಸಂಬಂಧವಿಲ್ಲದವರಿಗೆ ಅನ್ಯಾಯವಾದಾಗಲೂ ಬಾಯಿ ಹಾಕಿ ಜಗಳಕ್ಕೆ ನಿಲ್ಲುತ್ತಿದ್ದ. "ನಿನಗ್ಯಾಕೆ ಬೇಕು ಉಸಾಬರಿ? ನಿನಗೆ ಮೋಸವಾಗಿಲ್ಲವಲ್ಲ?" ಎಂದರೆ ಯಾರಿಗಾದರೂ ಯಾಕೆ ಮೋಸವಾಗಬೇಕು?" ಎಂದು ಮೊಂಡು ವಾದ ಹೂಡುತ್ತಿದ್ದ. ವರ್ಣಾಶ್ರಮದ ಬಗ್ಗೆ ಮಾತಾಡಿ ಪರವಿರೋಧ ಅಭಿಪ್ರಾಯಗಳನ್ನ ಬಿರುಸಾಗಿಯೇ ಪಡೆದಿದ್ದ.

ಕಂಚಿಗೆ ಬಂದ ಪ್ರಥಮದಲ್ಲಿ ರವಿಕೀರ್ತಿಗೆ ಸ್ನೇಹಿತನಾಗಿ ಸಿಕ್ಕವನು ಶ್ವೇತಕೇತು. ಆತ ಚೋಳರ ರಾಜಕುಮಾರ. ಹುಲುಸಾಗಿ ತಲೆಗೂದಲು ಬೆಳೆದ, ಗೋದಿವರ್ಣದ ಉಬ್ಬಿದ ಕೆನ್ನೆಗಳ, ತೆಳುದುಟಿಗಳ ಮ್ಯಾಲೆ ಗೆರೆಕೊರೆದಂಥ ಚಿಗುರುಮೀಸೆಯಿದ್ದ ಚೆನ್ನಿಗ. ನೋಡಿದರೆ ನಂಬಿಕೆ ಬರುವಂಥ, ಸದಾ ಆನಂದದಾಯಕ ನಗೆ ಬೀರುವಾತ. ರವಿಗಿಂತ ಮೂರುವರ್ಷ ಮುಂಚೆ ಬಂದವನು. ವಯಸ್ಸಿನಲ್ಲೂ ಹಿರಿಯ. ಇಬ್ಬರೂ ಕಾಳಗ, ಯೋಗವೇ ಮೊದಲಾದ ರಾಜವಿದ್ಯೆಗಳನ್ನು ಜೊತೆಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಒಂದು ಸಲ ವಾಕ್ಯಾರ್ಥದಲ್ಲಿ ಭಕ್ತಿಪಂಥದಂತಹ ಜನಾಂದೋಳನ ಇನ್ನೊಂದಿಲ್ಲವೆಂದೂ ಪುರೋಹಿತರ ಬಂಧನದಲ್ಲಿದ್ದ ದೇವರುಗಳನ್ನ ಶೂದ್ರರಾದಿಯಾಗಿ ಸರ್ವರಿಗೂ ಕೊಡಮಾಡಿದ ಮಹಾನ್ ಜನಪರ ಚಳುವಳಿಯೆಂದೂ ರವಿಕೀರ್ತಿ ವಾದ ಮಾಡಿದ. ಇಲ್ಲಿಯೇ

ಶ್ವೇತಕೇತು ರವಿಕೀರ್ತಿಯನ್ನು ಮೆಚ್ಚಿ ಸ್ನೇಹಿತನಾಗಿದ್ದ. ಆಮೇಲೆ ರಾಜವಿದ್ಯೆ ಕಲಿಯುವ ಆರು ಜನರಲ್ಲಿ ಇಬ್ಬರೂ ವಿಚಾರ, ಅನುಭವಗಳನ್ನು ಹಂಚಿಕೊಳ್ಳುತ್ತ ಪರಸ್ಪರ ಹಚ್ಚಿಕೊಂಡಿದ್ದರು.

ಒಂದು ದಿನ ಇಬ್ಬರೂ ಕಂಚೀಪಟ್ಟಣದ ಭಗವಾನ್ ಪುರುಷೋತ್ತಮರ ಆಶ್ರಮದಾಚೆಯ ಸರೋವರದ ತಡೆಯಲ್ಲಿ ಕೂತು ಚರ್ಚೆ ಮಾಡುತ್ತಿದ್ದರು. ಚಳಿಗಾಲದ ಹರಿತವಾದ ಇಳಿಬಿಸಿಲ ಸುಖವನ್ನ ಅನುಭವಿಸುತ್ತ, ಆಕಾಶದ ನೀಲಿಮದಲ್ಲಿ ತೇಲುತ್ತಿದ್ದ ಬಿಳಿಯ ಮೋಡಗಳನ್ನ ನೋಡುತ್ತ, ಕೂತಿದ್ದ ನೆಲದ ಮ್ಯಾಲಿನ ಚಿಗುರು ಗರಿಕೆಯ ಮೇಲೆ ಕೈಯಾಡಿಸುತ್ತ ಮಾತಾಡುತ್ತಿದ್ದರು. ಈ ತನಕ ಚಲನೆ ಮರೆತಿದ್ದ ಗಾಳಿ ಈಗ ಮೆಲ್ಲಗೆ ಉಸಿರಾಡತೊಡಗಿದಂತೆ ನೀರ ಮೇಲಿಂದ ಬೀಸತೊಡಗಿತು. ರವಿಕೀರ್ತಿ ಹೇಳಿದ:

"ಶಿವಾಪುರದ ವಿಷಯ ನಾನು ಕಂಡಿಲ್ಲ! ಆದರೆ ಕೇಳಿದ್ದೇನೆ. ಚಂಡೀದಾಸ ಶಿವಪಾದರ ಶಿಷ್ಯರು. ಅವರ 'ಒಂದು ಕಡಿಮೆ ನಲವತ್ತು ಹಟ್ಟಿಗಳ ಪ್ರದೇಶಕ್ಕೆ ಅಮ್ಮನ ಸೀಮೆಯೆಂದೇ ಹೆಸರು. ಜನ ತೃಪ್ತರು. ಅಸೂಯೆ ಇಲ್ಲದವರು. ಯುದ್ಧ, ಬೇಟೆ ಮತ್ತು ಸ್ತ್ರೀಕಾರಣವಾದ ನಮ್ಮ ಸಂತೋಷಗಳು ಅವರ ತೃಪ್ತಿಯ ಮುಂದೆ ಸೀಮಿತ ಮತ್ತು ಕೃತಕ' ಅಂತಿದ್ದನಪ! ಒಂದು ಸಲ ಅಲ್ಲಿಗೆ ಹೋಗಬೇಕೆಂದುಕೊಂಡಿದ್ದೇನೆ."

ಶ್ವೇತಕೇತು ಹೇಳಿದ:

"ನನಗೊಂದು ಸಂಶಯ ಇದೆ. ಕಗ್ಗಾಡಿನಲ್ಲಿ ಅದೇನು ಜೀವನ ಇದ್ದೀತು ಮಾರಾಯಾ? ಮಳೆ ಬಿಸಿಲು ಚಳಿಗಾಲ ಬಿಟ್ಟರೆ ಬೇರೇನೂ ಬದಲಾವಣೆಗಳನ್ನೇ ತೋರಿಸದ ನಿಸರ್ಗದ ಬಗ್ಗೆ ಸಾವಿರಾರು ವರ್ಷಗಳಿಂದ ಬದುಕುತ್ತಿರುವ ಈ ಜನಕ್ಕೆ ಬೇಸರವೇ ಆಗಿಲ್ಲವೆಂದರೆ ಆಶ್ಚರ್ಯವಲ್ಲವೆ? ನಮ್ಮ ಹಿತ್ತಲಲ್ಲೊಂದು ನೇರಳೆ ಮರವಿದೆ. ಅದನ್ನಂತೂ ಚಿಕ್ಕಂದಿನಿಂದ ನೋಡುತ್ತಿದ್ದೇನೆ. ಯಾವಾಗಲೂ ಇರೋ ಹಾಗೇ ಇದೆ. ನನ್ನೊಬ್ಬ ಕವಿಮಿತ್ರ ಮಾತ್ರ ಅದನ್ನು ಕಂಡಾಗೊಮ್ಮೆ ನವಿರೇಳುತ್ತ ಆನಂದವನ್ನು ಅನುಭವಿಸುತ್ತ ಇರುತ್ತಾನೆಂದರೆ... ಇದು ಆತ್ಮವಂಚನೆ ಅಲ್ಲವೆ?"

"ನಿಮಗೆ ನಿತ್ಯ ಬದಲಾವಣೆ ಬೇಕು. ಅದಕ್ಕಾಗಿ ಸಾಹಸ ಬೇಕು. ಯುದ್ಧ ಪ್ರಾಣಿಬೇಟೆ, ಸ್ತ್ರೀ ಬೇಟೆ, ಜೂಜು, ಅಧಿಕಾರ ಇವೆಲ್ಲ ಬೇಕು. ಇವುಗಳಾಚೆ ನಿಮಗೆ ಜೀವನವಿಲ್ಲ. ಅವರಿಗಾದರೆ ಅವರ ಬದುಕಿಗೆ ಇನ್ನೊಂದು ಆಯಾಮವಿದೆ; ಕ್ಷಿತಿಜದಾಚೆಗಿನದು! ಆ ಭಯ, ಆ ಬೆರಗು ಇಲ್ಲಿಯದನ್ನ ಕಣ್ಣು ತೆರೆದು ನೋಡುವುದಕ್ಕೆ ಪ್ರೇರಿಸುತ್ತದೆ. ಒಂದು ಮರದಂತೆ ಇನ್ನೊಂದಿಲ್ಲ, ಒಂದು ಸುರ್ಯೋದಯ ಸೂರ್ಯಾಸ್ತದಂತೆ ಇನ್ನೊಂದಿಲ್ಲ. ಒಂದು ಎಲೆಯಂತೆ ಇನ್ನೊಂದಿಲ್ಲ. ಒಂದು ದಿನದಂತೆ ಇನ್ನೊಂದಿಲ್ಲ. ಈ ವೈವಿಧ್ಯ, ಈ ಜೀವನ ಪ್ರೀತಿ ನಮಗೆ ಅಗೋಚರ ಮಿತ್ರಾ."

ಎಂದು ರವಿಕೀರ್ತಿ ಭಾವುಕನಾಗಿ ಹೇಳಿ ಮತ್ತೆ ಮುಂದುವರಿಸಿದ-

"ನೀವೇನು ಅಂದುಕೊಳ್ತೀರಿ ಗೊತ್ತೇನು? ಈ ಜಗತ್ತು ತನ್ನ ಮಾಮೂಲಿತನದಿಂದ ನಾಶದ ಕಡೆಗೆ ಹೊರಟಿದೆ. ಅದನ್ನ ಉಳಿಸಬೇಕೆಂದು ಸಂಕಲ್ಪ ಮಾಡುತ್ತೀರಿ. ಆ ಮೂಲಕ ನೀವೇ ಅದನ್ನು ವಿನಾಶಕ್ಕೂ ತಳ್ಳುತ್ತೀರಿ."

"ಹ್ಯಾಗೆ?"

"ಯುದ್ಧಗಳು, ಸ್ಪರ್ಧೆಗಳು, ಶೋಧನೆಗಳು, ಸಾಹಸಗಳು ಅಧಿಕಾರದ ದಾಹಗಳು…. ಇವೆಲ್ಲ ಏನು? ಬದಲಾವಣೆಗಳನ್ನ ಪ್ರಚೋದಿಸುತ್ತವೆ. ಇದನ್ನೇ ನೀವು ಪ್ರಗತಿ ಎನ್ನುತ್ತೀರಿ. ಇಂಥ ಯಾವ ಬದಲಾವಣೆಗಳೂ ಕಾಡಿಗೆ ಬೇಕಿಲ್ಲ. ಅಲ್ಲವೇ? ಅದು ಯುದ್ಧ ವಿರೋಧಿಯಾದ ಮಾತೃ ಸಂಸ್ಕೃತಿ."

ಈ ಮಾತುಗಳನ್ನ ಹೇಳುವಾಗ ರವಿಯ ಮುಖದಲ್ಲಿ ಆತ್ಮವಿಶ್ವಾದ ಕಳೆ ಹೊಳೆಯಿತು.

"ನಿಮ್ಮದು ಸ್ಪರ್ಧೆಯಿರುವ ಅಧಿಕಾರದಾಹಿಯಾದ ಪಿತೃ ಸಂಸ್ಕೃತಿ. ಇದಕ್ಕೆ ಸ್ಪರ್ಧೆಬೇಕು. ಯುದ್ಧ ಮಾಡಿ ನನ್ನ ಅಧಿಕಾರ ಕಸಿದುಕೊ ಅನ್ನುತ್ತಾನೆ ತಂದೆ. ಮಾತೃಸಂಸ್ಕೃತಿ ಹಾಗಲ್ಲ. ಅದಕ್ಕೆ ಶಾಂತಿ ಬೇಕು. ಮೌಲ್ಯಗಳು ಬೇಕು. ನೆನಪು ಬೇಕು. ನಿಮಗೆ ಚರಿತ್ರೆ ಬೇಕು. ಚರಿತ್ರೆಗೆ ನೆನಪುಗಳಿಲ್ಲ. ಅದಕ್ಕೇ ಮತ್ತೆ ಅವೇ ತಪ್ಪುಗಳನ್ನ ಮಾಡುತ್ತದೆ. ಅವೇ ಯುದ್ಧ ಮಾಡುತ್ತದೆ. ಮಾತೃ ಸಂಸ್ಕೃತಿಗೆ ಇತಿಹಾಸ ಬೇಡ, ಆದ್ದರಿಂದ ಯುದ್ಧಬೇಡ. ಗಂಡ, ಮಗ ಇಬ್ಬರೂ ಬದುಕಬೇಕು ಅನ್ನುತ್ತಾಳೆ ತಾಯಿ."

ಶ್ವೇತಕೇತುವಿಗೆ ರವಿಕೀರ್ತಿಯನ್ನ ಎದುರಿಸಲಿಕ್ಕಾಗದಿದ್ದರೂ ತನ್ನ ವಾದದಲ್ಲಿ ಹೆಚ್ಚು ಹುರುಳಿದೆ ಅನ್ನಿಸಿತು. ಆದರೆ ಅದನ್ನು ಸರಿಯಾಗಿ ಮಂಡಿಸಲಾಗುತ್ತಿಲ್ಲವೆಂದೂ ತಿಳಿಯಿತು. ಹತಾಶೆಯಿಂದ "ಇತಿಹಾಸವಿಲ್ಲದೆ ಈ ಬದುಕಿಗೆ ಅರ್ಥವಿದೆ ಅನ್ನುತ್ತೀಯಾ?" ಅಂದ. ಆದರೆ ಯಾಕೋ ಏನೋ ತನ್ನ ಮಾತಿನಲ್ಲಿ ತಥ್ಯವಿಲ್ಲವೆಂದು ಆತನಿಗೇ ಅನ್ನಿಸಿದ್ದರಿಂದ ಉತ್ತರ ಬಯಸಲಿಲ್ಲ. ಉತ್ತರಿಸಬೇಕೆಂಬ ಹಠ ಹಿಡಿಯದೆ ರವಿಯೂ ಹೇಳಿದ "ಇತಿಹಾಸವಿಲ್ಲದೆ ಮನುಷ್ಯನಿಗೆ ಬದುಕೋದು ಸಾಧ್ಯವಿಲ್ಲ ಅಂತೀಯಾ?" ಪರಸ್ಪರ ಪ್ರಶ್ನೆಗಳಿಂದ ಇಬ್ಬರೂ ವಿಚಲಿತರಾಗಿ ಸುಮ್ಮನಾದರು.

ಬೇಸಿಗೆ ಬಂತೆಂದರೆ ಯುದ್ಧರಹಿತ ಎಲ್ಲ ಪಟ್ಟಣಗಳಂತೆ ಕಂಚೇಪಟ್ಟಣದ ವಾತಾವರಣವೂ ಆಹ್ಲಾದಕರವಾಗುತ್ತದೆ. ಒಂದಾದ ಮೇಲೊಂದರಂತೆ ಬರುವ ಹಬ್ಬ, ಜಾತ್ರೆ, ವಸಂತೋತ್ಸವಗಳು ಪಡ್ಡೆ ಹುಡುಗ ಹುಡುಗಿಯರಿಗೆ ಪ್ರಣಯದ ವಾತಾವರಣ ನಿರ್ಮಿಸಿ ರಂಜನೆ ನೀಡುತ್ತವೆ. ಆಗ ಹೊಸ ಲಂಗದಾವಣಿಗಳಲ್ಲಿ ಸರಸರ ಸದ್ದು ಮಾಡುತ್ತ, ಲಜ್ಜೆಯಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಕ್ಕಿಗಳಂತೆ ಹಾರಾಡುವ ಎಳೆಯ ಬೆಡಗಿಯರ ಸಡಗರವನ್ನಂತೂ ಹೇಳತೀರದು. ಅವರ ನಗುವಿಗೆ ಮೈಮರೆಯದವರಿಲ್ಲ. ಫಳ ಫಳ ಹೊಳೆವ ನೀಲಿಕಣ್ಣುಗಳಿಗೆ ಮಾರು ಹೋಗದವರಿಲ್ಲ. ಪ್ರತಿಯೊಬ್ಬ ವಿಲಾಸಲೋಲ ತರುಣನೂ ಇಂಥ ಲಾವಣ್ಯವತಿಯರನ್ನು ಹಸಿದ ಕಂಗಳಿಂದ ನೋಡುತ್ತ, ನೋಡಿಸಿಕೊಳ್ಳುತ್ತ, ಹಾಡು ಗುನುಗುತ್ತ ಆಮೋದ ಪ್ರಮೋದಗಳಲ್ಲಿ ಸಂಭ್ರಮಿಸುತ್ತಾನೆ. "ಸುಖದ ಕ್ಷಣಗಳನ್ನು ಹಾಳು ಮಾಡಿಕೊಳ್ಳಬೇಡವೋ-ಪ್ರೀತಿಯೊಂದೇ ಸತ್ಯ; ಮಿಕ್ಕುದುಲ್ಲಾ ಮಿಥ್ಯ"ವೆಂದು ಬೋಧನೆ ಮಾಡುತ್ತ ಸರೀಕರನ್ನು ಪ್ರಚೋದಿಸುತ್ತಾನೆ.

ಒಂದು ದಿನ ಸಾಯಂಕಾಲ ಕಂಚೇಪಟ್ಟಣದ ವಸಂತೋತ್ಸವಕ್ಕೆ ಹೋಗಿದ್ದ ರವಿ ಮತ್ತು ಶ್ವೇತಕೇತು ಸಾಲುಮರಗಳ ಮಧ್ಯದ ದಾರಿಗುಂಟ ಆಶ್ರಮದ ಕಡೆಗೆ ಬರುತ್ತಿದ್ದರು. ಸರೋವರದ ಆಚೆ ದಡದ ಗುಡ್ಡ ಬಿಳಿ ಮೋಡಗಳಲ್ಲಿ ಮುಖ ಮುಚ್ಚಿಕೊಂಡಿತ್ತು. ಬೆಚ್ಚಗಿನ ಹಿತಕರವಾದ ಗಾಳಿ ದಕ್ಷಿಣದ ಕಡೆಯಿಂದ ಬೀಸಿ ಬರುತ್ತಿತ್ತು. ಹಳೆಯ ಋತುಮಾನ ತರುಮರಗಳ ಎಲೆ ಉದುರಿಸಿಯಾಗಿತ್ತು. ಹೊಸ ಚಿಗುರಿನ್ನೂ ಮೂಡಿರಲಿಲ್ಲ. ಹುಡುಗರಿಬ್ಬರೂ ತಮ್ಮ ವಯಸ್ಸಿನಷ್ಟೇ ಎಳೆಯ ಲೋಕವನ್ನ ಕಲ್ಪಿಸಿ ಅದರಲ್ಲಿ ತಮಗಿಷ್ಟವಾದ ಸಂಗತಿಗಳು, ವಸ್ತುಗಳು ಮೌಲ್ಯಗಳು ವ್ಯಕ್ತಿಗಳನ್ನ ತುಂಬುತ್ತಿದ್ದರು. ಅಷ್ಟರಲ್ಲಿ ಅನತಿದೂರದ ಸರೋವರದ ಕಡೆಯ ಮಳೆಯಲ್ಲಿ ಹುಡುಗಿಯರು ನಗಾಡುತ್ತ ಬರುತ್ತಿದ್ದುದು ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿ ಹುಡುಗಿಯರು ಗುಂಪಾಗಿ ಒಬ್ಬಳು ಇನ್ನೊಬ್ಬಳನ್ನ ಹಿಂದೆ ಹಾಕುತ್ತ ಉಲ್ಲಾಸದಿಂದ ಓಡೋಡುತ್ತ ಬಂದರು. ಎಲ್ಲರಿಗಿಂತ ಮುಂದಿನವಳು ಕಪ್ಪು ಕೂದಲಿನ ತೆಳ್ಳಗಿನ ಬಿಳಿ ಹುಡುಗಿ ಬಳಕುತ್ತ ರವಿಯನ್ನು ನೋಡಿ ಕಿಲ ಕಿಲ ನಗುತ್ತ ಓಡಿದಳು. ನಗುವಾಗಿನ ಅವಳ ದನಿ ಮಾದಕವಾಗಿತ್ತು. ಹಸಿರು ಲಂಗ ಮತ್ತು ಎದೆಯ ಚಿಗುರುಬ್ಬುಗಳನ್ನು ಕೊರೆದಂತೆ ತೋರಿಸುವ ಬಿಳಿ ದಾವಣಿ ಹೊದ್ದಿದ್ದಳು. ಓಡುತ್ತಿದ್ದಾಗ ಮುಖದ ಮೇಲಿನ ಮುಂಗುರುಳು ಮತ್ತು ಬೆನ್ನ ಮೇಲಿನ ನೀಳವಾದ ಸಡಿಲು ಜಡೆ ಎಡಬಲ ತೂಗಾಡುತ್ತಿದ್ದವು. ನಗಾಡುವಾಗ ಮಿಂಚಿನಂತೆ ಹೊಳೆದ ಅವಳ ದಂತಪಂಕ್ತಿ ಬಹಳ ಆಕರ್ಷಕವಾಗಿತ್ತು.

ಅಸ್ತಂಗತನಾಗುತ್ತಿದ್ದ ಸೂರ್ಯನ ಚಿನ್ನದ ಬಿಸಿಲು ಉಲ್ಲಾಸಕರವಾಗಿತ್ತು. ನಗುವತನಕ ಹುಡುಗಿಯರು ಮಳೆಯ ಮರೆಯಲ್ಲಿದ್ದದ್ದು ಗೊತ್ತಾಗಲೇ ಇಲ್ಲ. ಎಷ್ಟೊತ್ತಿನಿಂದ ಅಲ್ಲಿದ್ದರು? ಯಾಕಾಗಿ ಅಲ್ಲಿದ್ದರು? ಮುಂದಿನ ಆ ಹುಡುಗಿ ಹರ್ಷದಿಂದಿದ್ದಳು. ತನ್ನನ್ನು ನೋಡಿ ನಕ್ಕುದಕ್ಕೆ ಏನು ಕಾರಣವಿದ್ದೀತು?

ರವಿಗೆ ಆ ರಾತ್ರಿ ನಿದ್ದೆ ಬರಲಿಲ್ಲ. ಬೊಂತೆಯ ಹೊರಗೆ ಗೊರಕೆ ಹೊಡೆಯುತ್ತಿದ್ದ. ಎದ್ದು ಕಿಟಕಿಯ ಬಳಿಗೆ ಹೋದ. ಹೊರಗೆ ಬೆಳ್ದಿಂಗಳು. ಹುಲ್ಲು ಹೊದಿಸಿದ್ದ ಸಣ್ಣ ಸಣ್ಣ ಗುಡಿಸಲುಗಳು, ಅಲ್ಲಿದ್ದ ತರುಮರಗಳು ಸಂತೃಪ್ತಿಯಿಂದ ಮೈಮರೆತು ಬೆಳ್ದಿಂಗಳಲ್ಲಿ ಮೀಯುತ್ತಿದ್ದವು. ನೀರವ ರಾತ್ರಿ ಆಹ್ಲಾದಕರವಾಗಿತ್ತು. ದೂರದ ಹುಲಸಾದ ಮುದ್ದೆ ಮುದ್ದೆಯಾದ ಪೊದೆಗಟ್ಟಿದ ಸಸ್ಯರಾಶಿಯ ನೆತ್ತಿ ಬೆಳ್ದಿಂಗಳಿಂದ ಹೊಳೆಯುತ್ತಿತ್ತು.

ನಕ್ಷತ್ರರಹಿತವಾದ, ಪ್ರಶಾಂತವಾದ ಆಕಾಶದಲ್ಲಿ ಅಷ್ಟಮಿಚಂದ್ರ ಕಿವಿಯಿಂದ ಕಿವಿತನಕ ನಗುತ್ತಿದ್ದ. ಆಶ್ರಮದಲ್ಲಿ ಯಾರೂ ಎಚ್ಚರಿರಲಿಲ್ಲ. ರವಿಯ ಕಣ್ಣು ಚಂದ್ರನ ಮೇಲೆ ನಾಟಿದ್ದರೂ ಸಂಜೆ ಕಂಡ ಆ ಹುಡುಗಿಯ ಕಿಲ ಕಿಲ ನಗು ಕೇಳಿಸುತ್ತಿತ್ತು. ಅವಳ ನಗುಮುಖ ಗೋಚರವಾಗುತ್ತಿತ್ತು. ನೇತಾಡುವ ಮುಂಗುರುಗಳು ಮತ್ತೆ ಜಡೆ ಇವುಗಳೊಂದಿಗೆ ಅವಳ ದಂತಪಂಕ್ತಿ ಮಿಂಚುತ್ತಿತ್ತು. ರವಿ ಮಧುರಭಾವದಿಂದ ಪುಳಕಿತನಾದ. ಅಂಗೈಯಲ್ಲಿ ಹಿಡಿದು ಅವಳ ಮುಖವನ್ನ ಚಂದ್ರನಿಗೆದುರಾಗಿ ತಂದರೆ ಅವಳ ಕಂಗಳಲ್ಲಿ ಮೂಡುವ ಚಂದ್ರನ ಪ್ರತಿಬಿಂಬ ಹ್ಯಾಗಿರಬಹುದೆಂದು ಕಲ್ಪಿಸಿಕೊಂಡು ಆನಂದಪಟ್ಟ. ತಕ್ಷಣ ಅವಳನ್ನು ಹಿಂದೆ ನೋಡಿದ್ದ ನೆನಪಾಯಿತು. ದನಿ ಕೂಡ ಕೇಳಿದ್ದಂತೆ ನೆನಪಾಯಿತು. ಎಲ್ಲಿ ನೋಡಿದ್ದೇನೆ? ನೆನಪಾಗಲೇ ಇಲ್ಲ. ತನ್ನನ್ನು ನೋಡಿ ನಕ್ಕಳಲ್ಲ, ಅವಳಿಗೆ ತನ್ನ ನೆನಪಿರಬಹುದೆ? ಉದ್ದೇಶಪೂರ್ವಕ ನನ್ನನ್ನು ನೋಡಿ ನಕ್ಕಳೆ?

ಇಂತೆಂದು ಆಲೋಚನೆ ಮಾಡುತ್ತ ಯೌವನ ಸಹಜವಾದ ಯೋಚನೆ ಆಕಾಂಕ್ಷೆಗಳ ಅನಿರೀಕ್ಷಿತ ತುಮುಲದಲ್ಲಿ ಮನಸ್ಸು ಕಲಕಿದವನಾಗಿ ಹೋಗಿ ಹಾಸಿಗೆ ಮೇಲೆ ಉರುಳಿದ. ಏನೋ ನೆನಪಾಗಿ ಥಟ್ಟನೆ ಎದ್ದು ತನ್ನಲ್ಲೇ ನಗುತ್ತ ಬಂದು ಕಿಂಡಿಯಲ್ಲಿ ನಿಂತುಕೊಂಡ. ಹೌದು ಅವಳು ಶಿಲ್ಪಿ ವಿಶ್ವರೂಪಾಚಾರ್ಯನ ಮಗಳು!

ವಿಶ್ವರೂಪಾಚಾರ್ಯ ಇಡೀ ದಕ್ಷಿಣದ ಪ್ರಖ್ಯಾತ ಸ್ಥಪತಿ. ಚೋಳರಾಜರ ದೇವಸ್ಥಾನಗಳನ್ನ ಅವನೇ ನಿಂತು ಕಟ್ಟಿಸಿದ್ದಲ್ಲದೆ ಅವುಗಳಲ್ಲಿರುವ ಪ್ರಸಿದ್ಧ ಮೂರ್ತಿ ಶಿಲ್ಪಿಗಳಿಗಾಗಿ ಪ್ರತ್ಯೇಕವಾಗಿಯೇ ಹೆಸರುವಾಸಿಯಾದವನು. ಶಿಲ್ಪಶಾಸ್ತ್ರವನ್ನು ಕೂಲಂಕುಷ ಅಧ್ಯಯನ ಮಾಡಿದವನು ಮತ್ತು ಆ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲವನು. ಭಗವಾನ್ ಪುರುಷೊತ್ತಮನ ಆಶ್ರಮಕ್ಕೆ ಶಿಲ್ಪಶಾಸ್ತ್ರದ ಬಗ್ಗೆ ಪಾಠ ಮಾಡುವುದಕ್ಕೆಂದೇ ಬರುತ್ತಿದ್ದ. ಬಂದಾಗ ಒಂದೆರಡು ವಾಕ್ಯಾರ್ಥಗಳಲ್ಲೂ ಭಾಗವಹಿಸಿದ್ದ. ಒಂದು ಸಲ ಒಬ್ಬ ವಿದ್ವಾಂಸರ ಜೊತೆ ರವಿಕೀರ್ತಿ ಮಾತೃಸಂಸ್ಕೃತಿಯ ಬಗ್ಗೆ ವಾದ ಮಾಡಿ ಅನೇಕರ ಮೆಚ್ಚುಗೆ ಗಳಿಸಿದ್ದ. ಸಹಜವಾಗಿ ಅಲ್ಲಿದ್ದ ವಿಶ್ವರೂಪಾಚಾರ್ಯನಿಗೂ ಇವನ ವಾದ ಸರಿಕಂಡಿತ್ತು. ಯುದ್ಧಗಳು ಅನಗತ್ಯವೆಂದು ಒಂದು ದಿನ ರವಿ ವಾದಿಸಿದ್ದ. ಇವೆಲ್ಲ ಹೇಡಿಗಳ ಕಲ್ಪನೆಯೆಂದು ಶ್ವೇತಕೇತು ವಾದಿಸಿದ್ದ. ಆದರೆ ರವಿಯ ವಾದಗಳಲ್ಲಿ ತಾಳಮೇಳ ಇರಲಿಲ್ಲ. ನಿಜ; ಆದರೆ ಒಳನೋಟಗಳಿದ್ದವು. ಅದಕ್ಕೇ ಅವನು ತನ್ನ ವಾದದಿಂದ ಶ್ವೇತಕೇತುವನ್ನು ಕೆರಳಿಸಿದ್ದ. ಶ್ವೇತಕೇತು ಜಾಣತನದಿಂದ ತರ್ಕಬದ್ಧವಾಗಿ ಮಾತಾಡಿದ್ದ. ಆದರೆ ಅವನ ವಾದ ಶುಷ್ಕವಾಗಿತ್ತು. ಹುಸಿಯಾಗಿತ್ತು. ಮಾತಿಗಾಗಿ ಮಾತಾಡಿದಂಗಿತ್ತು ಅಥವಾ ವಾದದಲ್ಲಿ ಗೆಲ್ಲುವುದಕ್ಕಾಗಿ ಮಾತಾಡಿದಂಗಿತ್ತು. ವಿಶ್ವರೂಪಾಚಾರ್ಯ ಆ ದಿನ ರವಿಯನ್ನು ಬೆಂಬಲಿಸಿದ್ದ. ಇದೇ ನೆಪದಲ್ಲಿ ಪಟ್ಟಣದಲ್ಲಿದ್ದ ಆಚಾರ್ಯನ ಮನೆಗೂ ಒಮ್ಮೆ ರವಿ ಹೋಗಿದ್ದ, ಆಗ ನೋಡಿದ್ದು ಈ ಬೆಡಗಿಯನ್ನ!

ವಿಶ್ವರೂಪಾಚಾರ್ಯನ ವಾಸದ ಮನೆ ಚಿಕ್ಕದು. ಮನೆಯ ಮುಂದೆ ವಿಶಾಲವಾದ ಅಂಗಳವಿದ್ದು, ಅಂಗಳದ ತುಂಬ ಅರ್ಧಗಿರ್ಧ ಮುಕ್ಕಾಲು ಕಡೆದ ಮಾನವರು, ಕಣ್ದೆರೆಯದ ಅಪ್ಸರೆಯರು, ಕೈಕಾಲು ಮೂಡದ ದೇವತೆಗಳು, ಮುಂದೆ ಮೂರ್ತಿಯಾಗಬಹುದಾದ ಕಚ್ಚಾ ಕಲ್ಲುಗಳು-ಇವುಗಳಿಂದ ತುಂಬಿ ಹೋಗಿತ್ತು. ಅಂಗಳದ ಅಂಚಿನಲ್ಲಿ ದನದ ಕೊಟ್ಟಿಗೆಯಿತ್ತು. ಮನೆಗಂಟ ಅಂಗಳದ ಆರಂಭದಲ್ಲೇ ಹುಲುಸಾಗಿ ಬೆಳೆದ ಮಲ್ಲಿಗೆ ಬಳ್ಳಿಯಿತ್ತು. ನೆಲದಿಂದ ಛಾವಣಿಯವರೆಗೆ ಬೆಳೆದು ಹಬ್ಬಿಕೊಂಡಿದ್ದ ಆ ಬಳ್ಳಿಯಲ್ಲಿ ಎಲೆಗಳಿಗಿಂತ ಹೆಚ್ಚೆನಿಸುವಷ್ಟು ಹೂ ಅರಳಿದ್ದವು. ಅದರಿಂದಾಗಿ ಇಡೀ ಮನೆ ಮತ್ತು ಅಂಗಳಗಳು ಘಮಘಮ ಪರಿಮಳದಿಂದ ತುಂಬಿ ಮನಸ್ಸಿಗೆ ಉಲ್ಲಾಸ ತರುತ್ತಿದ್ದವು.

ಮನೆ ಚಿಕ್ಕದಾದರೂ ಒಳಗೆ ದೊಡ್ಡ ಮೊಗಸಾಲೆಯಿತ್ತು. ಮನೆಯ ಮೂಲೆಗಳಲ್ಲೂ ಮೂರ್ತಿಗಳು ತುಂಬಿದ್ದವು. ಮನೆಯ ಹಿಂದೊಂದು ತರಕಾರಿ ಬೆಳೆವ ಹಿತ್ತಲಿತ್ತು. ಅದರಂಚಿಗೆ ಪೌಳಿಯಿದ್ದು ಅದರಾಚೆ ಸುಂದರವಾದ ಶಿವದೇವಾಲಯವಿತ್ತು. ಮನೆ ಬಡವರದೇ ಆದರೂ ಸ್ವಚ್ಛವಾಗಿತ್ತು. ಗೋಡೆಗಳ ಮೇಲೆ ಬರೆದ ಸುಂದರವಾದ ಚಿತ್ತಾರಗಳು, ಕಲಾತ್ಮಕ ಬಾಗಿಲುಗಳು, ನೆಲಗಟ್ಟಿನ ಮೇಲೆ ಬರೆದ ಚಿತ್ರಗಳು, ಅಂಗಳದ ಅಂದವಾದ ರಂಗೋಲಿಗಳಿಂದ ಒಳಗೆ ಹೊಕ್ಕರೆ ವಿಚಿತ್ರವಾದ ತಂಪು ಶಾಂತಿ ಅನುಭವಕ್ಕೆ ಬರುತ್ತಿತ್ತು. ಭಾವಣೆ ಕಲಾತ್ಮಕವಾಗಿದ್ದುದರಿಂದ ಬಡವರ ಮನೆ ಕೂಡ ಅರಮನೆಗಿಂತ ಸುಂದರವಾಗಿರಬಹುದೆಂಬುದಕ್ಕೆ ಸಾಕ್ಷಿಯಾಗಿತ್ತು.

ದೊಡ್ಡ ಮನೆಯಲ್ಲಿದ್ದ ರವಿಕೀರ್ತಿಗಿದು ಚಿಕ್ಕ ಮನೆ ಅನ್ನಿಸಿದ್ದು ಸಹಜವೆ. ಆದರೆ ತಮ್ಮ ದೊಡ್ಡ ಮನೆಗಿಲ್ಲದ ಒಂದು ಅಚ್ಚುಕಟ್ಟುತನ, ಒಂದು ಚಂದ ಈ ಮನೆಗಿತ್ತು. ತಮ್ಮ ಮನೆಯಲ್ಲಿ ಆಳುಕಾಳು ಜನಗಳ ಗಿಜಿ ಗಿಜಿ; ಆಕಸ್ಮಾತ್ ಶಬ್ದ ಕೊಂಚ ಕಮ್ಮಿಯಾದರೂ ಬಿಕೋ ಎನ್ನುತ್ತಿತ್ತು. ಅದರಲ್ಲಿ ಸಂತೃಪ್ತಿಯ ಭಾವದ ಶಾಂತ ವಾತಾವರಣವಿತ್ತು. ಆಚಾರ್ಯನ ಹೆಂಡತಿ ಸ್ವರ್ಗವಾಸಿಯಾಗಿದ್ದಳು. ತಬ್ಬಲಿ ಮಗಳು ವಾಸಂತಿಯನ್ನು ಆತನ ಮುದಿ ತಾಯಿಯೇ ನೋಡಿಕೊಳ್ಳುತ್ತಿದ್ದಳು. ಮನೆ ತುಂಬ ಒಬ್ಬಳೇ ಮಗಳಾದ್ದರಿಂದ ಮುದುಕಿಗೂ ಆಚಾರ್ಯನಿಗೂ ವಾಸಂತಿಯೇ ಜೀವ, ವಾಸಂತಿಯೇ ಆತ್ಮ; ಗಲಾಟೆ ಮಾಡಿದರೂ ಅವಳೇ, ಶಾಂತವಾಗಿದ್ದರೂ ಅವಳೇ.

ಮನೆ ಚಿಕ್ಕದಿರಬಹುದು, ಆದರೆ ಆಚಾರ್ಯನ ಘನತೆ ಗೌರವಗಳಿಗೆ ಕೊರತೆಯಿರಲಿಲ್ಲ. ರಾಜಮಹಾರಾಜರು ಮೊದಲುಗೊಂಡು ತಪಸ್ವಿಗಳು, ಗುರುಗಳು ಮುನಿಗಳು ಮಂತ್ರಿಮಾನ್ಯರು ಮಾಂಡಳಿಕರು ಗೌಡಳಿಕೆ ಪಾಳೇಗಾರರು-ಎಲ್ಲರೂ ಇವನಿಗೆ ಗೌರವ ತೋರಿಸುತ್ತಿದ್ದರು. ರಾಜಸಭೆಗೂ ಈತನಿಗೆ ಆಮಂತ್ರಣವಿರುತ್ತಿತ್ತು.

ವಾಸಂತಿ ತಾಯಿಯಿಲ್ಲದ ತಬ್ಬಲಿ, ಒಬ್ಬಳೇ ಮಗಳೆಂಬ ಮಾಯದಲ್ಲಿ ಬೆಳೆದವಳು. ಮೊದಲನೇ ದಿನ ರವಿಕೀರ್ತಿ ಇವರ ಮನೆಗೆ ಬಂದಾಗ ಬಾಯಾರಿಕೆಗೆ ಗಿಂಡಿಯಲ್ಲಿ ನೀರು, ಬಟ್ಟಲಲ್ಲಿ ಬೆಲ್ಲ ತಂದಿಟ್ಟಿದ್ದಳು. ಮನೆಯ ವಿವರಗಳು ನೆನಪಿರಲಿಲ್ಲ. ಆದರೆ ಅಂಗಳದಲ್ಲಿ ಸೊಗಸಾಗಿ ಬೆಳೆದ ಮಲ್ಲಿಗೆ ಬಳ್ಳಿ, ಅದರ ತುಂಬ ಹೂ ಅರಳಿ ಇಡೀ ಅಂಗಳ ಪರಿಮಳದಿಂದ ತುಂಬಿದ್ದೂ ನೆನಪಾಯಿತು. ವಾಸಂತಿಯನ್ನು ಕಂಡದ್ದು ಸಂಕ್ಷಿಪ್ತವಾಗಿಯಾದರೂ ಸೂಸುತ್ತಿದ್ದ ಅವಳ ಕಿರುನಗೆಯಲ್ಲಿ, ಬಿಳಿ ಹಲ್ಲಿನ ಕಾಂತಿಯಲ್ಲಿ ಕ್ಷಣಕಾಲ ಮಿಂದದ್ದೂ ನೆನಪಾಯಿತು.

ಆದರೆ ಇವತ್ತು ಕೊಂಚ ದೀರ್ಘ ಕಾಲ ನೋಡಿದ್ದ. ಅಲ್ಲದೆ ಇವನ ಕಡೆಗೊಮ್ಮೆ ಕೃಪಾಕಟಾಕ್ಷ ಬೀರಿ ಸುಂದರವಾದ ವಕ್ಷದ ಮೇಲಿನ ದಾವಣಿಯನ್ನು ಸರಿಪಡಿಸಿಕೊಳ್ಳುತ್ತ ಓಡಿದ್ದಳು. ವಯಸ್ಸಿಗೆ ಸಹಜವಾದ ಲಜ್ಜೆಯಿಂದ ಓಡಿದಾಗ ಚಿಗುರೆದೆ ಮತ್ತು ನಿತಂಬಗಳು ನರ್ತಿಸಿದಂತೆ ಕಂಡು ಪುಳಕಿತನಾದ. ಅದನ್ನೇ ನೆನೆಯುತ್ತ ನಾಳೆ ಯಾವುದಾದರೂ ನೆಪದಿಂದ ಅವರ ಮನೆಗೆ ಹೋಗಲೇಬೇಕೆಂದು ತೀರ್ಮಾನಿಸಿ ಕಣ್ಣು ಮುಚ್ಚಿದ - ಕನಸಿನಲ್ಲಿ ಅವಳನ್ನು ಕಾಣುವ ಹಂಬಲದಲ್ಲಿ.

ಶ್ವೇತಕೇತುವಿಗೆ ಯಾವುದೋ ನೆಪ ಹೇಳಿ ಇಳಿಹೊತ್ತಿನಲ್ಲಿ ಕಂಚೀ ಪಟ್ಟಣಕ್ಕೆ ಹೋಗಿಯೇ ಬಿಟ್ಟ. ಅವರ ಮನೆಗೂ ಹೋಗಿ "ಆಚಾರ್ಯರು ಇದ್ದಾರೆಯೆ?" ಎಂದು ಕೇಳಿಯೂ ಬಿಟ್ಟ. ಬಾಗಿಲಿಗೆ ಬಂದು ಇಲ್ಲವೆಂದು ಹೇಳಿದವಳು ವಾಸಂತಿ. ಇಲ್ಲವೆಂದರೆ ಒಳಕ್ಕೆ ಬರಬೇಕಾಗಿದ್ದಿಲ್ಲ ಎಂದು ಅರ್ಥ. ಆದರೆ ಅಷ್ಟು ದೂರದಿಂದ ಅಷ್ಟೊಂದು ಆಸೆಯಿಟ್ಟುಕೊಂಡು ಬಂದವನಿಗೆ ಭೇಟಿ ಇಷ್ಟು ಸಂಕ್ಷಿಪ್ತವಾದರೆ ಹ್ಯಾಗೆ? ಸೌಜನ್ಯ ಮೀರಿ ಹಾಗೇ ನಿಂತು "ಬಾಯಾರಿಕೆಗೆ ನೀರು ಕೊಡುತ್ತೀರಾ" ಅಂದ. ತಕ್ಷಣ ವಾಸಂತಿ ಒಳಗೋಡಿದಳು.

ಅವಳು ಬರುವುದೊಳಗೆ ಮನೆ ಮುಂದಿನ ಕಟ್ಟೆಯ ಮೇಲೆ ಪ್ರತಿಷ್ಠಾಪಿತನಾಗಿ ಅಂಗಳದಲ್ಲಿ ಬಿದ್ದಿದ್ದ ಥರಾವರಿ ಮೂರ್ತಿಗಳನ್ನ ಅಧ್ಯಯನ ಮಾಡುವವರಂತೆ ನೋಡುತ್ತ, ಆದರೆ ಕಳ್ಳ ನೋಟಗಳಿಂದ ಮನೆ ಬಾಗಿಲನ್ನೇ ಕಾಯುತ್ತ ಕೂತ. ನಿರೀಕ್ಷೆಯಂತೆ ವಾಸಂತಿ ಬೆಲ್ಲ, ನೀರಿನೊಂದಿಗೆ ಬಂದಳು. ಕಟ್ಟೆಯ ಮೇಲಿಡುವುದಷ್ಟೇ ತಡ ಬೆಲ್ಲ ತಿಂದು ನೀರು ಕುಡಿದು ಬಾಯಾರಿಕೆ ನೀಗಿ ಒಡಲು ತಂಪು ಮಾಡಿಕೊಂಡವರಂತೆ ಹಾ!' ಎಂದು ಉದ್ಗರಿಸಿ, ಅವಳನ್ನೇ ನೋಡಿದ. ಇವನ ಆಗಮನದಿಂದ ಮನೆಯಲ್ಲಿ ತಾರುಣ್ಯದ, ಚೈತನ್ಯದ

ತಂಬೆಲರು ಸುಳಿದಂಗಾಗಿತ್ತು. ಅವಳೂ ಅವನನ್ನೇ ನೋಡುತ್ತಿದ್ದಳು. ಸರಳ ಸ್ವಭಾವದ ಹುಡುಗಿ, ಅವನು ಹಾಗೆ ನೋಡುವುದನ್ನು ಗಮನಿಸಿ ಲಜ್ಜೆಯಿಂದ ಒಳಗೊಳಗೇ ಮುಗುಳುನಗುತ್ತ ಗಿಂಡಿ ಬಟ್ಟಲು ತಗೊಂಡು ಹಿಂದಿರುಗಿದಳು. ಹೋಗುವಾಗ ಈಗಲೂ ಹಾಗೇ ನೋಡುತ್ತಿರುವನೇ? ಎಂದು ತಿಳಿಯಲು ಹಿಂದುರುಗಿ ನೋಡಿದಳು. ಆಸಾಮಿ ಪಳಗಿಸದ ಒರಟು ಪ್ರಾಣಿಯಂತಿದ್ದ. ಉತ್ಸುಕತೆಯಿಂದ ದುಂಡಗಿನ ಮುಖದಲ್ಲಿ ಮೂಗಿನ ತುದಿ, ಕೆನ್ನೆ, ಗದ್ದದ ತುದಿಗಳಲ್ಲಿ ತಾಜಾ ರಕ್ತ ಹರಿದಾಡುವ ತಾಣಗಳಾಗಿ ಕೆಂಪಗೆ ಹೊಳೆಯುತ್ತಿದ್ದವು. ಅವಳ ಪ್ರೇಮಾನುಗ್ರಹಕ್ಕೆ ಕಾತರನಾಗಿರುವಂತೆ ಅವನೂ ಹಾಗೇ ನೋಡುತ್ತಿದ್ದ.

ವಾಸಂತಿ ಈತನಕ ಯಾವ ಹುಡುಗನ ಕಡೆಗೂ ಗಂಭೀರವಾಗಿ ಗಮನ ಹರಿಸಿದವಳಲ್ಲ, ಅವನ ಪ್ರಸನ್ನವದನ, ದೃಢವಾದ ಆತ್ಮವಿಶ್ವಾಸ, ಸೌಜನ್ಯಶೀಲ ನಡೆವಳಿಕೆ, ವಯಸ್ಸಿಗೆ ಹಿರಿದಾದ ಗಾಂಭೀರ್ಯಗಳನ್ನು ಮೆಚ್ಚಿಕೊಂಡಳು. ಸಾಮಾನ್ಯವಾಗಿ ಹುಡುಗಿಯರು ಎದುರಾದ ಎಲ್ಲ ಗಂಡಸರ ಮುಖಗಳ ಮೇಲೆ ಒಂದು ಸಾರಿ ಕಣ್ಣಾಡಿಸಿದ ತಮಗೆ ಪ್ರಿಯವಾದ ಮುಖವನ್ನೇ ಆಯ್ದುಕೊಳ್ಳುತ್ತಾರೆ. ರವಿಯನ್ನು ನೋಡಿದ ಮೇಲೆ ಅವನಲ್ಲೇ ಅವಳು ಕಣ್ಣು ನೆಟ್ಟಳು. ಬೇರೆ ಮುಖ ನೋಡುವ ಆತುರವಾಗಲಿ, ಆಸಕ್ತಿಯಾಗಲಿ ಅವಳಲ್ಲಿ ಉಳಿಯಲಿಲ್ಲ. ಈಗಂತೂ ಲಜ್ಜೆ ಮತ್ತು ಸಂತೋಷಗಳಿಂದ ಅವಳ ಮುಖ ಮತ್ತು ಕಣ್ಣುಗಳಲ್ಲಿ ಅಪೂರ್ವವಾದ ಬೆಳಕು ಮಿಂಚಿತು. ನರ್ತಿಸುವಂತೆ ಹೆಜ್ಜೆಯಿಡುತ್ತ ಒಳನಡೆದಳು. ಈತ ಅವಸರದಿಂದ

“ಆಚಾರ್ಯರಲ್ಲಿ ಶಿಲ್ಪಶಾಸ್ತ್ರದ ಬಗ್ಗೆ ಕೆಲವು ಪ್ರಶ್ನೆ ಕೇಳಿ ತಿಳಿಯಬೇಕಾಗಿತ್ತು.”

-ಅವಳು ತಪ್ಪು ತಿಳಿದಾಳೆಂಬ ಸಂಕೋಚದಿಂದ ಹೇಳಿದ.

“ನಾಳೆ ಬರುತ್ತಾರೆ”

-ಅಂದಳು ಅವಳೂ ಅದೇ ಭಾವದಿಂದ ವಾಪಸು ಬರುತ್ತ.

“ಅಂದರೆ?….”

“ಇಂದಲ್ಲ ನಾಳೆ… ಅಂದರೆ ಇಪ್ಪತ್ತನಾಲ್ಕು ಘಂಟೆ ಆದಮೇಲೆ…”

ಎಂದು ಹೇಳಿ ಉಕ್ಕಿಬಂದ ನಗೆಯನ್ನು ನಿಯಂತ್ರಿಸಿಕೊಂಡಳು.

“ಮಲ್ಲಿಗೆ ಬಳ್ಳಿ ಸೊಗಸಾಗಿದೆ. ಎಷ್ಟೊಂದು ಹೂಗಳು!”

“ಬೇಕಾದರೆ ಒಂದೆರಡು ಕಿತ್ತುಕೊಳ್ಳಿ.”

-ಎಂದು ಹೇಳಿ ಈಗ ಮಾತ್ರ ನಗೆ ತಡೆಯದೆ ಕಿಲಕಿಲ ನಗುತ್ತ ಒಳಗೋಡಿದಳು. ವಾಸಂತಿ ಚಲನೆಯ ವಿಲಾಸದಿಂದ, ಅಂಗಾಂಗಳ ಸುಕುಮಾರ ಸಂಪನ್ನತೆಯಿಂದ, ಪ್ರಮಾಣಬದ್ಧ ಬೆಡಗಿನ ಆಕಾರದಿಂದ ಸೂಜಿಗಲ್ಲಿನಂತೆ ಅವನ ವ್ಯಕ್ತಿತ್ವವನ್ನು ಆಕರ್ಷಿಸಿದಳು. ಅವಳ ರೂಪ, ನಗೆಯ ಭಂಗಿ, ಚಲನೆ, ಹುಡುಗಾಟಿಕೆಯ ಮಾತು, ಇವೆಲ್ಲವೂ ಅಖಂಡವಾಗಿ ಅವನ ಹೃದಯವನ್ನು ಇರಿದಂತಾಗಿ ಮುಖ ಇನ್ನೂ ಕೆಂಪಗಾಯಿತು. ಮುಗುಳುನಕ್ಕಂತೆ ಸೋಗುಮಾಡಿದರೂ ಒಳಗೊಳಗೆ ಹುಡುಗನ ಯೌವನಕ್ಕೆ ಗಾಯವಾಗಿತ್ತು. ಕೃತಕ ನಗೆಯನ್ನು ಮುಂದುವರೆಸಲಾರದೆ ಹೊರಟ.

ಮಾರನೇ ದಿನವೂ ಅದೇ ಹೊತ್ತಿಗೆ ಬಂದ. ವಾಸಂತಿ ಹೂ ಕಿತ್ತು ಉಡಿಯಲ್ಲಿ ತುಂಬಿಕೊಳ್ಳುತ್ತ ನಿಂತಿದ್ದಳು. ಇವಳೇ ಮಾತಿಗೆ ಮುಂದಾದಳು:

"ಇನ್ನೂ ಬಂದಿಲ್ಲವಲ್ಲ!"

ರವಿಕೀರ್ತಿ ಇದನ್ನು ನಿರೀಕ್ಷಿಸಿರಲಿಲ್ಲ. ಅಥವಾ ಈಕೆಗೆ ತಾನಿಲ್ಲಿ ಬರುವುದರ ಉದ್ದೇಶದ ಬಗ್ಗೆ ಸಂದೇಹ ಬಂದಿರಬಹುದೇ? ಅನ್ನಿಸಿ,

"ನಿಜವಾಗ್ಲೂ ನಾನು ಆಚಾರ್ಯರನ್ನು ನೋಡಬೇಕಿತ್ತು ಇವರೇ"

ಅಂದ. ಇವಳೂ ಅದೇ ದಾಟಿಯಲ್ಲಿ

"ನಿಜವಾಗ್ಲೂ ಅವರಿನ್ನೂ ಬಂದಿಲ್ಲ ಇವರೆ." ಅಂದಳು. ಇಬ್ಬರೂ ಒಂದೇ ಧಾಟಿಯಲ್ಲಿ ಮಾತಾಡಿದ್ದಕ್ಕೆ ನಗೆ ಬಂದರೂ ಆತ ಪೆದ್ದನಂತೆ ನಿಂತುದರಿಂದ ನಗೆ ತಡೆದುಕೊಂಡೇ ನಿಂತಳು.

ಮಾತು ಮುಂದುವರಿಸುವುದಕ್ಕೆ ಇನ್ನೇನೂ ಇಲ್ಲವೆಂದುಕೊಂಡು ತಿರುಗಿ ಹೊರಟ.

"ಮಲ್ಲಿಗೆ ಬೇಡವೆ?"

ಇವಳೇ ತುಂಟತನದಿಂದ ಕೇಳಿದಳು. ಹೂ ಎಂದು ಕತ್ತು ಹಾಕಿದ. ಉಡಿಯಿಂದ ಕೈತುಂಬ ಹೂ ತೆಗೆದುಕೊಟ್ಟಳು. ಬರ್ತೀನಿ ಎಂದು ಹೇಳಿ ಹೊರಟ.

ಆ ದಿನ ಅಷ್ಟೂ ಹೂಗಳನ್ನ ಎದೆಯ ಮೇಲಿಟ್ಟುಕೊಂಡು ನಿದ್ದೆ ಮರೆತು ಮಲಗಿದ. ಅವಳನ್ನು ಕಂಡ ಕೂಡಲೇ ಹೃದಯ ಜೋರಾಗಿ ಬಡಿದುಕೊಂಡಿತ್ತು. ಅದಕ್ಕೆ ಕಾರಣ ಗೌರವವೋ, ಭಯವೋ, ನಿರೀಕ್ಷೆಯೋ, ಪ್ರೀತಿಯೋ, ಯಾವುದೂ ಅರ್ಥವಾಗಲಿಲ್ಲ. ಬಹುಶಃ ಅವಳ ವಿಶಿಷ್ಟ ಆಕೃತಿಯೇ ಕಾರಣವೆಂದು ತಿಳಿದುಕೊಂಡ. ತಕ್ಷಣ ಅದನ್ನೂ ನಿರಾಕರಿಸಿದ. ಹಾಳಾದ್ದು ಪ್ರೀತಿ ಎನ್ನುವುದು ತರ್ಕವನ್ನ ಮೀರಿದ್ದು. ನಮಗೆ ಗೊತ್ತಾಗುವ ಮುನ್ನವೇ ನಾವು ಪ್ರೀತಿಯಲ್ಲಿ ಮುಳುಗಿರುತ್ತೇವೆ. ಅದೇನೆಂದೇ ತಿಳಿಯುವುದಿಲ್ಲ. ಆದರೆ ಅದು ಇರುತ್ತದೆ ಎಂದು ತರ್ಕಿಸುತ್ತ ಹೊರಳಾಡುತ್ತ ಮಲಗಿದ. ಇವಳೂ ನಿದ್ದೆ ಕಳೆದುಕೊಂಡಿದ್ದಳು.

ವಾಸಂತಿ ತೆಳ್ಳಗೆ ಬೆಳ್ಳಗೆ ರವಿಕೀರ್ತಿಯ ಭುಜದಷ್ಟು ಎತ್ತರ ಬೆಳೆದ ಹುಡುಗಿ. ಗೊಂಬೆಯಂಥವಳು, ಉತ್ಸಾಹ ಆನಂದಗಳು ತುಂಬಿ ತುಳುಕುತ್ತಿದ್ದಳು. ಸದಾ ನಗುವ, ಫಳ ಫಳ ಹೊಳೆವ ದೊಡ್ಡ ಕಣ್ಣು, ಅಂದವಾಗಿ ಬಾಗಿದ ಹುಬ್ಬು, ದಟ್ಟವಾಗಿ ಹಣೆ ಕೆನ್ನೆಯ ಮೇಲೂ ಚೆನ್ನಾಟವಾಡುವ ಕಪ್ಪು ಕೂದಲು, ನೋಡಿದವರಿಗೆ ಪ್ರಿಯವಾಗುವಂತೆ ನಗುವ, ನಕ್ಕಾಗ ಫಳ್ಳನೆ ಬೆಳಕು ಚೆಲ್ಲುವ ದಂತ ಪಂಕ್ತಿಗಳಿಂದಾಗಿ ಒಮ್ಮೆ ನೋಡಿದವರು ಅವಳನ್ನು ಮರೆಯುವುದು ಸಾಧ್ಯವೇ ಇರಲಿಲ್ಲ. ಹಾಗೆಯೇ ಬುದ್ಧಿವಂತಿಕೆ, ಹಾಸ್ಯ ಮನೋಭಾವವುಳ್ಳಾಕೆ. ಹರಿತವಾದ ಗ್ರಹಿಕೆ, ಮತ್ತು ಇನ್ನೊಬ್ಬರ ಬಗ್ಗೆ ಅನುಕಂಪವುಳ್ಳಾಕೆ. ಹಾಗೆಯೇ ಸ್ವಾಭಿಮಾನಿ. ದೃಢವಾದ ಸಂಕಲ್ಪ ಶಕ್ತಿವುಳ್ಳವಳು. ರವಿಕೀರ್ತಿಯಂತೆ ಅವಳೂ ಜಾತಿ ವರ್ಣಾಶ್ರಮ ಧರ್ಮಗಳನ್ನು ವಿರೋಧಿಸುತ್ತಿದ್ದಳು.

ಅಂದಿನಿಂದ ಇಬ್ಬರೂ ನಿದ್ದೆ ಕಳೆದುಕೊಂಡರು. ಇನ್ನೂ ಪರಸ್ಪರ ತಿಳಿಸಿರಲಿಲ್ಲ. ಈ ಮಧ್ಯೆ ಇನ್ನೂ ಅನೇಕ ಭೇಟಿಗಳು, ನಗೆ ಮಾತುಗಳ ವಿನಿಮಯವಾಗಿ, ಅರ್ಥವಿಲ್ಲದ ಅದು ಇದು ಚರ್ಚೆಗಳ ನೆಪದಲ್ಲಿ ಪರಸ್ಪರ ನೋಡುತ್ತಾ ಕಾಲಕಳೆಯುವುದು-ಇದೆಲ್ಲ ನಡೆದು ನವರಾತ್ರಿಯ ಮೊದಲ ದಿನ ಬನ್ನಿ ಹಂಚಲು ರವಿ ಇವರ ಮನೆಗೆ ಬಂದ. ಆಚಾರ್ಯ ಅರಮನೆಗೆ ಹೋಗಿದ್ದ. ವಿದ್ಯಾರ್ಥಿಗಳ್ಯಾರೂ ಇರಲಿಲ್ಲ. ಅಜ್ಜಿ ಒಳಗಿದ್ದಳು. ಬನ್ನಿ ಹಂಚಿ ನಾವಿಬ್ಬರೂ ಬಂಗಾರವಾಗೋಣ ಎಂದು ಹೇಳಿ ಬನ್ನಿ ಕೊಟ್ಟು

ತಗೊಳ್ಳುವಾಗ ಇಬ್ಬರ ಕೈ ಉದ್ದೇಶಪೂರ್ವಕ ತಾಗಿದವು. ಒಂದು ಕ್ಷಣ ರವಿ ನಿಂತು ಅವಳನ್ನೇ ನೋಡಿದ. ಆ ಕೇಶರಾಶಿ, ಹೊಳೆಯುವ ಕಪ್ಪು ಕಣ್ಣು ಸಂಪೂರ್ಣ ವಿಕಾಸಗೊಳ್ಳದ ಕುಚಗಳು, ಕೆಂಪುಗೆನ್ನೆ, ಕೌಮಾರ್ಯದ ಸ್ವಾರ್ಥರಹಿತ ಪ್ರೇಮ, ಮುದ್ದಿಸುವ ಯಾವ ಉದ್ದೇಶವೂ ಇಲ್ಲದೇ ಮೆಲ್ಲನೆ ಅವಳ ಕಿವಿಯ ಬಳಿ ಬಾಯ ತಂದು "ನಿಮ್ಮಂಥ ಚೆಲುವೆಯ ನಾ ಕಾಣೆ" ಎಂದು ಮೆಲ್ಲನೆ ಉಸುರಿದ. ಕೆನ್ನೆ ಕೆಂಪೇರಿ ಅನುದ್ದಿಶ್ಯವಾಗಿ ಒಂದು ಹರಿತ ನೋಟ ಬೀರಿ ಅವನ ಕಡೆ ನೋಡಿದ್ದೇ, ಗಪ್ಪನೆ ಹಿಡಿದು ರವಿ ಮುದ್ದಿಟ್ಟು ತಪ್ಪಾಯಿತೇನೋ ಎಂಬಂತೆ ಅವಳ ಕಡೆ ನೋಡಿದ. ಅವಳು ನಾಚಿಕೆಯಿಂದ ಇನ್ನಷ್ಟು ಕೆಂಪೇರಿ ದೂರ ಸರಿದಳು. ಈದಿನ ನಾನು ತಪ್ಪು ಮಾಡಿದೆನೆ? ಎಂದು ರವಿ ಯೋಚಿಸುತ್ತ ನಿದ್ದೆಗೆಟ್ಟ. ವಾಸಂತಿಯೂ ಅಷ್ಟೆ.

ನವರಾತ್ರಿ ಮುಗಿದು ಒಂದು ವಾರವಾಗಿದ್ದೀತು. ಒಂದು ದಿನ ರವಿ ತನ್ನಿಂದ ತಪ್ಪಾಗಿದ್ದರೆ ಕ್ಷಮೆ ಕೇಳಬೇಕೆಂದು ಆಚಾರ್ಯರ ಮನೆಗೆ ಬಂದ. ವಾಸಂತಿ ದೇವಾಲಯಕ್ಕೆ ಹೊರಟಿದ್ದಳು. "ನಾನೂ ಬರಲೇ?" ಅಂದ ಧೈರ್ಯ ಮಾಡಿ. ಬನ್ನಿ ಅಂದಳು. ಜೊತೆಯಲ್ಲಿ ಈಶ್ವರ ದೇವಸ್ಥಾನಕ್ಕೆ ಹೋದರು. ಭಕ್ತಾದಿಗಳ ಹಾವಳಿಯ ದಿನ ಅಲ್ಲ ಅದು. ಸಂಜೆ ದೇವಸ್ಥಾನದಲ್ಲಿ ಇಬ್ಬರೇ ಗರ್ಭಗೃಹದ ಪ್ರದಕ್ಷಿಣೆ ಹಾಕುತ್ತಿದ್ದರು. ಏಕಾಂತದಲ್ಲಿ ಕೊಂಚ ಕತ್ತಲ ಪ್ರದೇಶ ಬಂದೊಡನೆ ರವಿಕೀರ್ತಿ ತನ್ನ ಮುಂದೆ ನಡೆದಿದ್ದ ವಾಸಂತಿಯ ಎಡಭುಜದ ಮೇಲೆ ಕೈ ಇಟ್ಟ. ಇವಳ ವೇಗ ಕಡಿಮೆಯಾಗಿ ರಕ್ತದೊತ್ತಡ ಅಧಿಕವಾಗಿ ಕೆನ್ನೆ ಬಿಸಿಯಾದವು. ಇಬ್ಬರ ದೇಹಗಳಿಗೆ ಪರಸ್ಪರ ಭಾವನೆಗಳು ಅರ್ಥವಾಗಿ ಅವುಗಳ ಪಾಡಿಗೆ ಅವನ್ನು ಬಿಟ್ಟಿದ್ದರೆ ಸಂವಹನ ಸುಲಭವಾಗಬಹುದಿತ್ತು. ಆದರೆ ಇವಳಿಗದು ತಿಳಿಯದೆ ಅವನ್ನು ವಾಚ್ಯವಾಗಿಸಲು ಶಬ್ದಗಳನ್ನು ಬಳಸಿ "ಏನಂದ್ರಿ?" ಅಂದಳು ಹಿಂದಿರುಗಿ! ಭಾಷೆ ಇಬ್ಬರ ಮಧ್ಯೆ ವಹಿವಾಟನ್ನು ಬೆಳೆಸದೆ ಕಲ್ಲಿನ ಗೋಡೆಯ ಹಾಗೆ ನಿಂತುಬಿಟ್ಟಿತು. ಅಕಸ್ಮಾತ್ ಭೇಟಿಯಾದ ಅಪರಿಚಿತರ ಹಾಗೆ ಒಬ್ಬರ ಮನಸ್ಸು ಇನ್ನೊಬ್ಬರಿಗೆ ತಿಳಿಯದೆ ಪ್ರದಕ್ಷಿಣೆ ಮುಂದುವರಿಸಿದರು.

ಇನ್ನೊಂದು ಸುತ್ತು ಮುಗಿದು ಅದೇ ಸ್ಥಳಕ್ಕೆ ಬಂದಾಗ ರವಿಕೀರ್ತಿ ಗಪ್ಪನೆ ಅವಳನ್ನು ಬರಸೆಳೆದು ಬಿಗಿಯಾಗಿ ತಬ್ಬಿಕೊಂಡು ಮುದ್ದಿಟ್ಟ. ವಾಸಂತಿ ಇದಕ್ಕಾಗಿ ಪೂರ್ವತಯಾರಿ ಮಾಡಿಕೊಂಡಿದ್ದಂತೆ ಮುದ್ದೆಯಾಗಿ ಅವನ ತೆಕ್ಕೆಗೆ ಸರಿದು ತನ್ನನ್ನು ತಾನು ಅರ್ಪಿಸಿಕೊಂಡು ಗಡಗಡ ನಡುಗಿದಳು. ಮುದ್ದಿಸುತ್ತ ಎಂಜಲು ವಿನಿಮಯ ಮಾಡಿಕೊಳ್ಳುವಾಗ ಯಾರೋ ಗಂಟೆ ಬಾರಿಸಿದೊಡನೆ ತಕ್ಷಣ ಬಿಟ್ಟು ಪ್ರದಕ್ಷಿಣೆ ಮುಂದುವರೆಸಿದರು.

ರವಿ ಅಂದು ರಾತ್ರಿಯೂ ನಿದ್ದೆಗೆಟ್ಟ. ಚುಂಬನದ ಸವಿಯಿನ್ನೂ ನಾಲಗೆಯಲ್ಲಿತ್ತು. ಮತ್ತೆ ಮತ್ತೆ ಜ್ಞಾಪಿಸಿಕೊಂಡ. ಪ್ರೀತಿ ಅಂದರೇನೆಂದು ತಿಳಿಯಲು ಪ್ರಯತ್ನ ಮಾಡಿದ: 'ಜೀವನದಲ್ಲಿ ಅನೇಕ ಕೆಟ್ಟ ಯೋಚನೆ ಮಾಡಿದ್ದೇನೆ, ಪಶ್ಚಾತ್ತಾಪ ಪಟ್ಟಿದ್ದೇನೆ. ಆದರೆ ಇದೊಂದನ್ನು ಮಾಡಿದಾಗ ಮಾತ್ರ ನನಗೆ ಪಶ್ಚಾತ್ತಾಪವಾಗಲೇ ಇಲ್ಲ. ನಾನು ಅವಳನ್ನು ಪ್ರೀತಿಸಿದೆ ಎನ್ನಿಸಿತೇ ವಿನಾ ಮೋಸಮಾಡಿದೆ ಅಂತ ಅನ್ನಿಸಲೇ ಇಲ್ಲ. ಅಥವಾ ಏನನ್ನೋ ಕಳೆದುಕೊಂಡೆ ಮತ್ತು ಏನನ್ನೋ ಪಡೆದುಕೊಂಡೆ ಅನ್ನಿಸಿತು. ಕಳೆದುಕೊಂಡದ್ದಕ್ಕೆ ಹಳಹಳಿಯಾಗಲಿಲ್ಲ, ಆದರೆ ಪಡೆದದ್ದಕ್ಕೆ ಆನಂದವಾಯಿತು. ಅವಳಿಗೂ ಹೀಗೇ ಅನ್ನಿಸಿದ್ದರೆ ಚಂದ' ಎಂದುಕೊಳ್ಳುತ್ತ ನಿದ್ದೆಗೆಟ್ಟು ಕೊನೆಗೆ ಅವಳನ್ನೇ ಮದುವೆಯಾಗುವುದೆಂದು ತೀರ್ಮಾನಿಸಿದ. ವಾಸಂತಿಯೂ....!

ಆದರೆ ಅದು ಸುಲಭವಲ್ಲವೆಂದು ತಿಳಿಯಲು ತಡವಾಗಲಿಲ್ಲ. ತಂದೆಯ ಸ್ವಭಾವ ಗೊತ್ತಿದ್ದ ರವಿಕೀರ್ತಿಗೆ ತಮ್ಮಿಬ್ಬರ ಮದುವೆ ದೂರದ ಕನಸಾಗಿ ಕಂಡಿತು.

ಒಂದು ದಿನ ವಾಸಂತಿಗೆ ಈ ಬಗ್ಗೆ ಹೇಳಿಯೂ ಬಿಟ್ಟ-

"ನಮ್ಮಪ್ಪ ಪ್ರೇಮ, ಪ್ರೀತಿ ಗೊತ್ತಿಲ್ಲದವ. ಹಾಗೆ ಯಾರಾದರೂ ಹೇಳಿದರೆ ಅವರನ್ನು ಆತ್ಮವಂಚಕರೆಂದೋ ಸಮಾಜದ್ರೋಹಿಗಳೆಂದೋ ಕರೆವಾತ. ಅಷ್ಟಾಗಿಯೂ ವಾದ ಮುಂದುವರಿಸಿದರೆ ಅವನ ಕಿವಿಗೂದಲು ನಿಮಿರುವುದರಲ್ಲಿ ಸಂದೇಹವೇ ಇಲ್ಲ."

ವಾಸಂತಿಗೆ ನಿರಾಸೆಯಿಂದ ಅವಮಾನವಾಯಿತು. ನೊಂದುಕೊಂಡು,

“ಅಂದರೆ ನಮ್ಮಪ್ಪ ಪುಕ್ಕಲು ಅಂತಲ? ಬಡಶಿಲ್ಪಿ, ಅವನಿಗ್ಯಾರು ಹೇಳೋರು ಕೇಳೋರು ಇಲ್ಲ ಅಂತಲ?”

“ಹಾಗಲ್ಲ ವಾಸಂತಿ, ಆಚಾರ್ಯರು ಸಜ್ಜನರು ಅಂತ. ಮುಗ್ಧರನ್ನ, ಮೂರ್ಖರನ್ನ, ನಿಜವಾದ ತತ್ವಗಳಿಗಾಗಿ ಸಾಯುವ ಸಂತರನ್ನ ಕಂಡರೆ ಆಗೋದಿಲ್ಲ ನಮ್ಮಪ್ಪನಿಗೆ. ಅಗತ್ಯ ಬಿದ್ದರೆ ಸಂತ, ಮೂರ್ಖ, ಮುಗ್ಧರಂತೆ ನಟಿಸಲೂ ಬಲ್ಲ. ಸಿಹಿಯಾದ ನಗೆಗಳಿಂದ, ಬೆಲ್ಲದ ಮಾತುಗಳಿಂದ, ಬೆಲೆಯಿಲ್ಲದ ಭರವಸೆಗಳಿಂದ, ಹಣವಿಲ್ಲದ ಔದಾರ್ಯಗಳಿಂದ ಪುಕ್ಕಟೆ ಹೃದಯವಂತಿಕೆಯಿಂದ ಅವನನ್ನು ಕೊಳ್ಳುವುದು ಸಾಧ್ಯವಿಲ್ಲ. ಕ್ರೌರ್ಯದಲ್ಲಿ ನಮ್ಮಪ್ಪನ ಹಂತಕ್ಕೆ ಹೋಗುವುದು ಯಾರಿಂದಲೂ ಸಾಧ್ಯವಿಲ್ಲ. ಅಗತ್ಯ ಬಿದ್ದರೆ ಮನುಷ್ಯರನ್ನೇ ಹರಿದು ತಿಂಬಾತ! ಅವನಾಗಲೇ ನನ್ನನ್ನು ಕೇಂದ್ರದಲ್ಲಿಟ್ಟುಕೊಂಡು ಮಹತ್ವಾಕಾಂಕ್ಷೆಗಳನ್ನ ಹಣೆದಿದ್ದಾನೆ!”

ವಾಸಂತಿ ಈಗ ಪ್ರತಿಯಾಗಿ ರವಿಗೆ ಅವಮಾನ ಮಾಡಲೆಂದೇ ಹೇಳಿದಳು:

“ಮಹತ್ವಾಕಾಂಕ್ಷೆ ಅಂದರೆ?.... ಅದೆ ನರಮಾಂಸ ತಿನ್ನೋದು?”

“ಹಾಗಲ್ಲ ಮಾರಾಯಳೇ, ನಾನು ಚಕ್ರವರ್ತಿ ಆಗಬೇಕಂತ ನಮ್ಮಪ್ಪನ ಆಸೆ. ಯಾವನೋ ಮಹಾರಾಜನ ಮಗಳನ್ನು ಮದುವೆಯಾದರೆ ಚಕ್ರವರ್ತಿ ಆಗೋದು ಸುಲಭ ಅಂತ ಅವನ ಲೆಕ್ಕಾಚಾರ.”

“ಸರಿ ಸ್ವಾಮಿ, ದೊಡ್ಡ ದೇಶದ ರಾಜಕುಮಾರಿಯನ್ನು ಕಟ್ಟಿಕೊಂಡು ನಮ್ಮ ಪಾಡಿಗೆ ನಮ್ಮನ್ನ ಬಿಟ್ಟು ಚಕ್ರವರ್ತಿಯಾಗಿ ಮೆರೆಯಿರಿ. ಆದರೆ ಒಂದು ಮಾತು. ಇಷ್ಟು ಸ್ವಾರ್ಥಿಯಾದ ನಿನ್ನಪ್ಪ ನಿನ್ನನ್ನೇ ಚಕ್ರವರ್ತಿ ಮಾಡತಾನೆ ಅಂತ ಏನು ಭರವಸೆ? ತಾನೇ ಆಗಬಹುದಲ್ಲ?”

ರವಿಕೀರ್ತಿಯ ಕಣ್ಣು ಹೊಳೆದವು.

“ಚಕ್ರವರ್ತಿಯಾದರೂ ಆಗಲಿ, ದೇವರಾದರೂ ಆಗಲಿ. ಆದರೆ ಒಂದಂತೂ ನಿಜ: ಆತ ಬೇಕಾದಷ್ಟು ವಿರೋಧಗಳನ್ನ, ಅವು ಇರಲೇ ಇಲ್ಲ ಎಂಬಂತೆ ನಿಭಾಯಿಸಬಲ್ಲ!”

“ಸರಿ ಸ್ವಾಮಿ”

-ಎಂದು ಹೇಳುತ್ತ ದೂರ ಸರಿದಳು. ಅವಳ ಮನಸ್ಸು ನೊಂದದ್ದು ಗೊತ್ತಾಗಿ ರವಿಕೀರ್ತಿ ತಕ್ಷಣ ವಾಸಂತಿಯನ್ನು ಆಲಂಗಿಸಿ ಗಟ್ಟಿಯಾಗಿ ತನಗಂಟಿಸಿಕೊಂಡು ಜೋರಾಗಿ ಮುದ್ದಿಟ್ಟ.

“ನಾನದನ್ನೆಲ್ಲಾ ಯೋಚನೆ ಮಾಡಿಲ್ಲ ಅಂದುಕೊಂಡೆಯಾ ವಾಸಂತಿ? ನನಗೆ ನಮ್ಮಪ್ಪನ ರಾಜ್ಯ ಬೇಡವೇ ಬೇಡ. ನಾವು ಬಿಳಿಗಿರಿಯಲ್ಲಿ ಇದ್ದು ಬಿಡುವಾ. ಅದು ನನ್ನ ಅಜ್ಜನ ಮನೆ. ಚಿಕ್ಕ ಮನೆ, ಚಿಕ್ಕ ಮಡದಿ, ನನಗೊಂದು ಚಿಕ್ಕ ಅಜ್ಜಿ ಇದೆ. ಚಿಕ್ಕ ಚೊಕ್ಕ ಸಂಸಾರ. ಬಿಳಿಗಿರಿಯವರೂ ಇಲ್ಲವೆಂದರೆ ನನ್ನ ಮಿತ್ರ ಶ್ವೇತಕೇತುವಿನಲ್ಲಿ ಆಸ್ಥಾನ ಪಂಡಿತನಾಗುತ್ತೇನೆ. ಹ್ಯಾಗಿದೆ ಉಪಾಯ?”

ವಾಸಂತಿಗೆ ಖುಶಿಯಾಗಿ ಮುಖ ಕೆಂಪೇರಿ ಅವನ ಎದೆ ಕೆನ್ನೆಗಳಿಗೆ ತನ್ನ ಕೆನ್ನೆಯಿಂದ ಉಜ್ಜುತ್ತ ರೋಮಾಂಚನ ಮತ್ತು ಲಜ್ಜೆ ಎರಡನ್ನೂ ಅನುಭವಿಸಿದಳು. ಸದ್ಯಕ್ಕೆ ಆಚಾರ್ಯನಿಗೆ ವಿಷಯ ತಿಳಿಸದೆ ಮೊದಲು ಅಜ್ಜಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಆಲೋಚನೆ ಮಾಡಿ ಎದ್ದರು.

ವಾಸಂತಿಯ ಅಜ್ಜಿಗೆ ಹುಡುಗ ಇಷ್ಟವಾದ. ಆದರೆ ಮುದುಕಿ ಎಚ್ಚರಿಕೆಯಿಂದ ಹೆಜ್ಜೆ ಇಡುವಂತೆ ಬೋಧಿಸಿದಳು. ಆಚಾರ್ಯನಿಗೆ ಹೇಳದಿದ್ದರೆ ಮಗಳು ಮತ್ತು ರವಿಕೀರ್ತಿಯ ಮಧ್ಯೆ ಬೆಳೆದ ಸಲುಗೆಯಿಂದ ವಿಚಲಿತನಾಗಿ ಸಕಾಲದಲ್ಲಿ ಬುದ್ಧಿ ಹೇಳಬೇಕೆಂದು ಮಗಳಿಗೆ ಹೇಳಿದ:

“ರವಿಕೀರ್ತಿಯ ತಂದೆಯನ್ನು ನಾನು ಕಂಡಿದ್ದೇನೆ ಮಗಳೆ. ಇಷ್ಟು ತಿಳಿದಿರು: ಆತ ಮನುಷ್ಯನಂತೂ ಅಲ್ಲ. ಈಗಲೇ ಅವನ ಮಗನಿಂದ ದೂರವಿರಲು ಹೇಳಿದ್ದೇನೆ, ಹುಷಾರ್!”

ವಾಸಂತಿಗೆ ತನ್ನ ದಿವಂಗತ ತಾಯಿಯ ಹೆಸರು ತಗೊಂಡು ಕಣ್ಣೀರಿಟ್ಟರೆ ಅಪ್ಪ ಮೆತ್ತಗಾಗುತ್ತಾನೆಂದು ಗೊತ್ತಿತ್ತು. ಆದ್ದರಿಂದ ಅವಳು ನಿಶ್ಚಿಂತಳಾಗಿದ್ದಳು. ನಿಶ್ಚಿತಾರ್ಥ ಕೂಡ ಆಗದೆ ಇವರಿಬ್ಬರೂ ಹೀಗೆ ಸಲುಗೆಹಿಂದ ವರ್ತಿಸುವುದು ಆಚಾರ್ಯನಿಗೂ ಅಜ್ಜಿಗೂ ಸರಿಬರದಿದ್ದರೂ ಇವರು ಹಿಂಜರಿಯಲಿಲ್ಲ. ಅವರಿಬ್ಬರ ಆತ್ಮೀಯ ಪರಿಚಯ ಕೂಡ ಇತ್ತೀಚೆಗಷ್ಟೆ ಸುರುವಾಗಿತ್ತು. ಇಬ್ಬರೂ ಆಗಲೇ ಅನೇಕ ವರ್ಷಗಳಿಂದ ಸ್ನೇಹಿತರೆಂಬಂತೆ, ಪ್ರೇಮಿಗಳೆಂಬಂತೆ ಸಹಜವಾಗಿ ಇರತೊಡಗಿದ್ದರು. ಹೊರಗಣ್ಣಿಗೆ ರವಿ ಬೇಜವಾಬ್ದಾರಿ ಪ್ರವಾಸಿಯಂತೆ ಕಂಡರೂ ವಾಸ್ತವವಾಗಿ ಒಳ್ಳೆಯವ, ತಾನೇನೆಂದು ಅರಿತವ, ಅವನಿಗೆ ಹೆದರಬೇಕಾಗಿಲ್ಲವೆಂದು ಮನೆಯವರಿಗೆ ವಾಸಂತಿ ಭರವಸೆ ನೀಡಿದಳು.

ಆಮೇಲಾಮೇಲೆ ರವಿ ಕೂಡ ಅವರೊಂದಿಗೆ ಸಂಕೋಚವಿಲ್ಲದೆ ಬೆರೆಯುತ್ತ ಯಾವ ನಿರ್ಬಂಧಗಳಿಲ್ಲದೆ ಅಜ್ಜಿಯ ಜೊತೆಗೂ ಆಚಾರ್ಯನ ಜೊತೆಗೂ ಮಾತಾಡುತ್ತಿದ್ದ. ಶಿಲ್ಪಶಾಸ್ತ್ರದ ಬಗ್ಗೆ ಆಚಾರ್ಯನೊಂದಿಗೆಸುದೀರ್ಘ ಚರ್ಚೆ ಮಾಡುತ್ತಿದ್ದ. ಅಪರೂಪಕ್ಕೆ ಒಮ್ಮೊಮ್ಮೆ ತನ್ನ ಭವಿಷ್ಯದ ಬಗ್ಗೆಯೂ ಹೇಳುತ್ತಿದ್ದ.

ವಾಸಂತಿ ರವಿಯನ್ನ ಸಂಪೂರ್ಣ ನಂಬಿ ಅವಲಂಬಿಸಿದವಳಾದ್ದರಿಂದ ರವಿಯಿದ್ದಲ್ಲಿ ತಾನು ಎಂಬಂತಿದ್ದಳು. ರವಿಯ ರಾಗ ಭಾವಗಳನ್ನು ಊಹಿಸಿ ಹಂಚಿಕೊಳ್ಳುತ್ತಿದ್ದಳು. ಇಬ್ಬರೇ ಏಕಾಂತದಲ್ಲಿದ್ದಾಗ ವಾಸಂತಿಯ ಕೆಂಪೇರಿದ ಮುಖವನ್ನು ರವಿ ಏಕಗ್ರಚಿತ್ತದಿಂದ ನೋಡುತ್ತಿದ್ದ. ತಾನು ಮಾತನಾಡುವಾಗ ಆತ ತದೇಕ ದೃಷ್ಟಿಯಿಂದ ತನ್ನನ್ನೇ ನೋಡುತ್ತಿದ್ದುದನ್ನ ಗಮನಿಸಿ ಅವಳೂ ಹರ್ಷೋನ್ಮಾದದಲ್ಲಿರುತ್ತಿದ್ದಳು. ರವಿಯ ಮಾತಿನ ಶೈಲಿ ಮತ್ತು ನಗೆಗಳನ್ನು ಚೆನ್ನಾಗಿ ಅನುಕರಣೆ ಮಾಡಿ ಅಜ್ಜಿಯನ್ನು ನಗಿಸುತ್ತಿದ್ದಳು. ಅಗಲಿಕೆಯ ವಿಚಾರ ಬಂದಾಗ ಮಾತ್ರ ವಾಸಂತಿ ಭಯಭೀತಳಾಗಿ ಬಾಡುತ್ತಿದ್ದಳು.

ಇಂತಿರುವಲ್ಲಿ ಬಿಳಿಗಿರಿಯಿಂದ ಕುದುರೆಗಾಡಿ ಸಮೇತ ಭಂಟನೊಬ್ಬ ಬಂದು ಗೌರಿಯ ನಿಶ್ಚಯ ಕಾರ್ಯಕ್ಕೆ ಬರಬೇಕೆಂಬ ಸಂದೇಶ ಪತ್ರವನ್ನು ರವಿಕೀರ್ತಿಯ ಕೈಗೆ ಕೊಟ್ಟ.

ಪತ್ರ ಓದಿ ಆಕಾಶದಲ್ಲಿ ಹಾರಾಡುತ್ತಿದ್ದ ಇಬ್ಬರೂ ದಸಕ್ಕನೇ ಕುಸಿದು ನೆಲದ ಮೇಲೆ ಕಾಲೂರಿದರು. ಹೋಗಿ ಒಂದೆರಡು ವಾರ ಇದ್ದು ಬರುವುದೆಷ್ಟೋ ಅಷ್ಟೇ ಎಂದು ಎಷ್ಟು ಹೇಳಿದರೂ ವಾಸಂತಿ ನಂಬಲಿಲ್ಲ. ಇಬ್ಬರೂ ಹಿಂದಿರುಗಿ ಮೊದಲಿನ ಸ್ಥಳಕ್ಕೆ ಬಾರದಷ್ಟು ಮುಂದೆ ಹೋಗಿದ್ದರು. ಮುಂದಿನ ದಾರಿ ಕಾಣದಾಗಿತ್ತು. ಈಗ ನಿರ್ಧಾರ ತೆಗೆದುಕೊಳ್ಳಬೇಕಾದವನು ರವಿಕೀರ್ತಿಯೇ; ಅವನ ಅನುಕೂಲಕರ ನಿರ್ಧಾರಕ್ಕಾಗಿ ವಾಸಂತಿ ಕಾತರಿಸಿದ್ದಳು.

ಕುದುರೆಗಳಿಗೆ ವಿಶ್ರಾಂತಿ ಕೊಡಲು ಒಂದು ದಿನ ಬಿಟ್ಟು ಅದರ ಮಾರನೇ ದಿನ ಬಿಳಿಗಿರಿಗೆ ಹೊರಡುವುದೆಂದು ನಿರ್ಧರಿಸಿದ. ವಿಶ್ರಾಂತಿಯ ದಿನ ಸಂಜೆ ರವಿ ನಿತ್ಯ ಕೂಡಿ ಮಾತಾಡುತ್ತಿದ್ದ ದೇವಸ್ಥಾನಕ್ಕೆ ಬಂದ. ವಾಸಂತಿ ಇನ್ನೂ ಸಪ್ಪಗಿದ್ದಳು.

“ವಾಸಂತಿ ನೀನು ಹೀಗೆ ಸಪ್ಪಗಿದ್ದರೆ ನನಗೆ ದುಃಖವಾಗುತ್ತದೆ, ನಿನಗೆ ನಂಬಿಕೆ ಬರುವಂತೆ ನಾನೇನು ಮಾಡಬೇಕು ಹೇಳು.”

-ಎಂದು ಭುಜ ಹಿಡಿದು ಎದುರು ನಿಲ್ಲಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಮುಂದೆ ಹೆಜ್ಜೆಯಿಟ್ಟು ಅವನ ಎದೆಯ ಮೇಲೆ ಒರಗಿ ಹೇಳಿದಳು:

"ನನಗೆ ನಿನ್ನಲ್ಲಿ ನಂಬಿಕೆಯಿದೆ. ನೀನೇನೂ ಮಾಡಬೇಕಾದ್ದಿಲ್ಲ."

"ನನ್ನ ಆತ್ಮತೃಪ್ತಿಗಾಗಿ ಹೇಳುತ್ತಿದ್ದೇನೆ: ನಾವ್ಯಾಕೆ ಶಿವಲಿಂಗದ ಮುಂದೆ ನಿಂತು ಈಗಲೇ ಮದುವೆಯಾಗಬಾರದು?" ಅಂದ.

"ನಾವಿಬ್ಬರೆ?"

"ಬೇಕಾದರೆ ಆಚಾರ್ಯರನ್ನ ಕರೆತರೋಣ."

ವಾಸಂತಿ ಸುಮ್ಮನೆ ನಿಂತಳು. ರವಿಕೀರ್ತಿಯ ಮಾತಿನಲ್ಲಿ ಅವಳಿಗೆ ನಂಬಿಕೆಯಿತ್ತು. "ಬೇರೆ ಯಾರೂ ಬೇಡ. ಶಿವಲಿಂಗನ ಸಾಕ್ಷಿಯಲ್ಲೇ ನಾವಿಬ್ಬರೇ ಮದುವೆಯಾಗೋಣ. ಅದಕ್ಕೆ ಇಬ್ಬರೂ ಬದ್ಧರಾಗಿರೋಣ."

ಇಬ್ಬರೂ ಶಿವಲಿಂಗದೆದುರಿಗೆ ಕೈ ಮುಗಿದು ನಿಂತರು. ಶಿವಲಿಂಗವನ್ನು ಕುರಿತು ರವಿ ಹೇಳಿದ:

"ಶಿವಲಿಂಗ ತಂದೆ, ನಾನು ವಾಸಂತಿಯನ್ನು ಹೃತ್ಪೂರ್ವಕ ಇಷ್ಟ ಪಟ್ಟಿದ್ದೇನೆ. ಪ್ರೀತಿಸಿದ್ದೇನೆ. ತಂಗಿಯ ಮದುವೆ ಮುಗಿಸಿ ಬಂದು ಶಾಸ್ತ್ರೋಕ್ತ ಮದುವೆಯಾಗುತ್ತೇನೆ. ನಿನ್ನ ಸಾಕ್ಷಿಯಲ್ಲಿ ಅವಳ ಕೈ ಹಿಡಿದಿದ್ದೇನೆ. ಇದೇ ಗುರುತು."

ಎಂದು ಹೇಳಿ ಶಿವಲಿಂಗದ ಮೇಲಿನ ಒಂದು ಹೂವನ್ನು ಅವಳ ಮುಡಿಗಿಡಿಸಿದ. ವಾಸಂತಿಯ ಕಣ್ಣು ತುಂಬಿ ಬಂತು. ಭಾವತುಂಬಿ ರವಿಕೀರ್ತಿಯ ಕಾಲು ಮುಟ್ಟಿ ನಮಸ್ಕರಿಸಿ ಶಿವಲಿಂಗಕ್ಕೂ ನಮಸ್ಕಾರ ಮಾಡಿದಳು. ಅಷ್ಟರಲ್ಲಿ ಹಿಂದಿನಿಂದ ಗಂಟೆ ಬಾರಿಸಿತು. ನೋಡಿದರೆ ಆಚಾರ್ಯ!

ಅವರನ್ನು ನೋಡಿ ಇಬ್ಬರಿಗೂ ಆಘಾತವಾಯ್ತು. ಆಚಾರ್ಯನಿಗೂ ಆಘಾತವಾಗಿತ್ತು. ದೇವರಿಗೂ ನಮಸ್ಕರಿಸದೇ ವಾಪಾಸಾದ.

ಮಾರನೇ ಬೆಳಿಗ್ಗೆ ಕೋಳಿ ಕೂಗುವ ಮೊದಲೇ ರವಿಕೀರ್ತಿಯ ಕುದುರೆಗಾಡಿ ಬಿಳಿಗಿರಿಗೆ ಹೊರಡುವ ಮುನ್ನ ಆಚಾರ್ಯನ ಮನೆ ಮುಂದೆ ಬಂದು ನಿಂತಿತು. ಬೆಳ್ಳಂಬೆಳಗು ದಿವಂಗತ ಮಡದಿಯನ್ನ ಮತ್ತು ಮಗಳ ಭವಿಷ್ಯವನ್ನ ನೆನೆದು ಮುದುಕ ನಿದ್ದೆಯಿಲ್ಲದೆ ಚಡಪಡಿಸಿದ್ದ. ಕೊನೆಗೆ ಯಾವುದೋ ದೃಢನಿರ್ಧಾರಕ್ಕೆ ಬಂದಾಗಲೇ ಕೊಂಚ ಸಮಾಧಾನವಾಗಿ ಕಣ್ಣು ಮುಚ್ಚಿದ್ದ. ಈಗಷ್ಟೇ ನಿದ್ದೆ ಹತ್ತಿತ್ತು; ಗಾಡಿಯ ಸಪ್ಪಳ ಕೇಳಿ ಎದ್ದು ಕೂತ. ರವಿ ಒಳಗೆ ಹೋಗಿ ಅಜ್ಜಿಗೆ ನಮಸ್ಕರಿಸಿ, ವಾಸಂತಿಗೆ ಸಮಾಧಾನ ಹೇಳಿ ಬಂದಾಗ ಇವನಾಗಲೇ ಎದ್ದು ಕೂತಿದ್ದ.

"ಹೋಗಿ ಬರ್ತೀನಿ"

ಅಂದ ರವಿ ಕೈಮುಗಿದು.

"ಆಯ್ತಪ್ಪ ಬೇಗ ಬಾ."

"ವಾಸಂತಿಯ ವಿಷಯದಲ್ಲಿ ಎಲ್ಲ ತೀರ್ಮಾನಿಸಿದ್ದೇನೆ. ಬೇಗ ಬಂದು ಕರೆದೊಯ್ಯುತ್ತೇನೆ. ಅಲ್ಲೀತನಕ..."

“ಲೋಕದ ತಂದೆ ತಾಯಿಗಳು ಮಾಡುವ ಯಾವುದೇ ಉಪಚಾರ ಅವಳಿಗೂ ಸಿಗುತ್ತದೆ. ಅವಳು ನಮಗೆ ಭಾರವಲ್ಲ. ಇನ್ನು ನಮ್ಮನ್ನು ಮೀರಿದ್ದು ಏನಾದರೂ ನಡೆದರೆ ಅದಕ್ಕೆ ಶಿವ ಜವಾಬ್ದಾರ, ನಾವಲ್ಲ ಅಲ್ಲವೆ?”

“ಅವಳು ಗಾಬರಿಯಾಗಿದ್ದಾಳೆ. ತಾಯಿ ಇಲ್ಲದ ಹುಡುಗಿ. ನೆರೆಹೊರೆ ಹೇಳಿದ್ದನ್ನೆಲ್ಲ ಕೇಳಿಕೊಂಡು ಹೆದರುತ್ತಾಳೆ.”

“ಹೌದಪ್ಪ. ಕನಸು ಕಂಡರೂ ಹೆದರುತ್ತಾಳೆ. ಏನು ಮಾಡ್ಲಿಕ್ಕಾಗುತ್ತದೆ? ಚಿಂತೆ ಬೇಡ ನಾನಿದ್ದೇನಲ್ಲ.”

ಆಚಾರ್ಯನಿಗೆ ವಯಸ್ಸಾಗಿ ಮೂಳೆಗಳೇ ಎದ್ದು ಕಾಣುತ್ತಿದ್ದವು. ಮೂಳೆ ಕೈಯಿಂದ ರವಿಯ ಬೆನ್ನು ಚಪ್ಪರಿಸಿ ನೇರವಾಗಿ ಅವನ ಅಂತರಂಗವನ್ನು ಸಮೀಕ್ಷಿಸುವಂತೆ ತೀಕ್ಷ್ಣದೃಷ್ಟಿ ಹಾಯಿಸಿ ನಕ್ಕ. ‘ನಿನ್ನೆ ದೇವಾಲಯದಲ್ಲಿ ಕೋಪದಿಂದ ದೇವರಿಗೂ ನಮಸ್ಕರಿಸದೇ ಬಂದ ಮುದುಕನೇ ಇವನು?’ ಎಂದು ರವಿಗೆ ಆಶ್ಚರ್ಯವಾಯಿತು. ಮುದುಕ ಪುನಃ ಹೇಳಿದ: “ನೀನು ನೆಮ್ಮದಿಯಿಂದ ಹೋಗು.” ರವಿ ಮಾತಾಡಲಿಲ್ಲ. ಸಮಾಧಾನದಿಂದ ಹೊರಟ. ಮುದುಕ ಆತುರಾತುರವಾಗಿ ಹೇಳಿದ:

“ನೀನು ರಾಜ ಮನೆತನದವ. ಜವಾಬ್ದಾರಿಗಳಿರುತ್ತವೆ. ಆಳು ಕಾಳು ಸಾಕಷ್ಟು ಜನ ಇರ್ತಾರಲ್ಲ? ಆಗಾಗ ಅವರನ್ನು ಇತ್ತ ಓಡಿಸಿ ನಿನ್ನ ಯೋಗಕ್ಷೇಮ ತಿಳಿಸುತ್ತಿರು. ನನಗಲ್ಲ, ವಾಸಂತಿಗೆ. ಯಾಕಂತಿಯೋ? ಆಕೆ ನಿನ್ನ ಮೇಲೆ ಜೀವ ಹಿಡಿದುಕೊಂಡವಳು ನೋಡು, ಅದಕ್ಕಾಗಿ.”

“ಖಂಡಿತ ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ. ನಂದೊಂದು ಮಾತಿದೆ. ಹೇಳಲೇ?”

-ಎಂದ ರವಿ. ಮುದುಕ ‘ಹೇಳು’ ಎಂಬಂತೆ ಅವನ ಕಡೆ ನೋಡಿದ.

“ನೀವು ಹೇಳಿದ ಹಾಗೆ, ನಮ್ಮನ್ನು ಮೀರಿದ್ದು ಏನಾದರು ನಡೆದು ನಾನು ಸತ್ತರೆ, ನಮಗೊಂದು ಕೂಸಾದರೆ ವಾಸಂತಿ ಮತ್ತು ಮಗುವನ್ನು ನೀವೇ ನೋಡಿಕೋಬೇಕು.”

ಮುದುಕನಿಗೆ ಆಘಾತವಾಗಿ ಒಂದು ಕ್ಷಣ ಕೋಪದಿಂದ ಗಡಗಡ ನಡುಗಿದ. ಮತ್ತೆ ತನ್ನನ್ನು ತಾನೇ ನಿಯಂತ್ರಿಸಿಕೊಂಡು ಸಮಾಧಾನವನ್ನ ಅಭಿನಯಿಸುತ್ತ ಸಮಯಪ್ರಜ್ಞೆಯಿಂದ “ಅಂಥಾ ಮಾತನಾಡಬಾರದು. ನೀನು ಯಾವ ದೇವರ ಸಾಕ್ಷಿಯಲ್ಲಿ ಅವಳ ಕೈ ಹಿಡಿದೆಯೋ ಆ ದೇವರು ನಿನ್ನ ಕೈ ಬಿಡಲಾರ.” ಅಂದ.

ತಕ್ಷಣ ಇಬ್ಬರೂ ಎದುರು ಬದುರಾಗಿ ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡರು.

ಮುದುಕನ ಹರಿತವಾದ ಕಣ್ಣು ರವಿಯ ಎಳೇ ಕಣ್ಣಲ್ಲಿ ನೆಟ್ಟಿದ್ದವು. ಮೂಳೆ ಕೈ ಚಾಚಿ ರವಿಯ ಕೈ ಹಿಡಿದುಕೊಂಡ. ಇಬ್ಬರ ಕೈಗಳೂ ತಣ್ಣಗಿದ್ದವು. ಕೋಪ ಮತ್ತು ಉದ್ವೇಗದಿಂದ ಆಚಾರ್ಯನ ಕೈ ನಡುಗುತ್ತಿದ್ದವು. ರವಿ ಸುಯ್ದು ಇನ್ನೊಮ್ಮೆ ವಾಸಂತಿಯ ಕಡೆಗೆ ಹೋದ. ಮುದುಕ ರಭಸದಿಂದ ತನ್ನ ಕೋಣೆಗೆ ಹೋದ.

ಅಳುತ್ತ ಕೂತಿದ್ದ ವಾಸಂತಿ ಎದ್ದು ನಿಂತಳು. ರವಿ ಬಾಚಿ ತಬ್ಬಿಕೊಂಡ. ಅವಳು ಹಾಗೇ ಮೂರ್ಛೆ ಹೋದಂತೆ ಅವನ ತೋಳುಗಳಲ್ಲಿ ಒರಗಿದಳು. ತುಸು ಹೊತ್ತಾದ ಬಳಿಕ ಮೆಲ್ಲಗೆ ಅವಳನ್ನು ತೋಳಿನಿಂದ ಬಿಡಿಸಿ, ಪೀಠದ ಮೇಲೆ ಕೂರಿಸಿ ಕೆನ್ನೆ ತಟ್ಟಿ, ‘ಬರ್ತೀನಿ” ಅಂದು ಕೈ ಹಿಸುಕಿದ. ವಾಸಂತಿ ಆಗಲೆಂಬಂತೆ ಕತ್ತು ಹಾಕಿದಳು. ಹೊರಗೆ ನಡೆದ.

ತುಸು ಹೊತ್ತಾಗಿ ಕೋಪ ನಿಯಂತ್ರಣಕ್ಕೆ ಬಂದ ಬಳಿಕ ಮುದುಕ ಹೊರಗೆ ಬಂದ. ರವಿ ಇರಲಿಲ್ಲ. ವಾಸಂತಿ ಅಂಗಳದಲ್ಲಿ ನಿಂತಿದ್ದಳು. ಮುದುಕ ಅವಸರದಿಂದ "ಹೋಗೇ ಬಿಟ್ಟನ?" ಎಂದು ಗೊಣಗುತ್ತ ಬಂದ.

ಕುದುರೆ ಗಾಡಿ ಆಗಲೇ ಮರೆಯಾಗಿತ್ತು. ಮುದುಕ ಅಲ್ಲೇ ಮಲ್ಲಿಗೆ ಕಟ್ಟೆಯ ಮೇಲೆ ಕುಸಿದು ಕೂತ!

## ನಲವತ್ತಾರು

ಬರುವಾಗ ಸಾರಥಿಯಿಂದ ತನ್ನ ಮನೆತನದ ಹುವೇನವೇ ತಿಳಿದು ರವಿಕೀರ್ತಿಗೆ ಆಘಾತವಾಯ್ತು. ಕನಕಪುರಿಯ ರಾಜ, ಮಹಾರಾಣಿಯವರ ಬಗ್ಗೆ ಕೋಪ ತಾಪ ಉಕ್ಕಿ ಬಂದಂತೆಯೇ ತಂದೆಯ ಬೇಜವಾಬ್ದಾರಿತನವೂ ಇದರಲ್ಲಿದೆ ಅನ್ನಿಸಿತು. ಶಿಖರಸೂರ್ಯ ತನ್ನ ಶಿಕ್ಷಣದ ಖರ್ಚುವೆಚ್ಚಗಳ ಬಗ್ಗೆ ಕಂಚಿಯಲ್ಲಿ ಮೊದಲೇ ಹಣ ತೆಗೆದಿಟ್ಟದ್ದು ಗೊತ್ತಿತ್ತು. ಹಾಗೆ ತೆಗೆದಿಡುವಾಗಲೇ ತಾನು ಕಾಣೆಯಾಗುವುದನ್ನು ಆಲೋಚಿಸಿದ್ದನೆ? ಎಷ್ಟೇ ಅವಮಾನವಾಗಿರಲಿ, ಆತ ಆತ್ಮಹತ್ಯೆ ಮಾಡಿಕೊಳ್ಳುವಾತನಲ್ಲ, ಎಂಬುದೊಂದು ಖಾತ್ರಿಯಿತ್ತು. ಹಾಗಿದ್ದರೆ ಈಗ ಎಲ್ಲಿದ್ದಾನೆ? ಹ್ಯಾಗಿದ್ದಾನೆ? ಏನಾಗಿದ್ದಾನೆ? ಇದೆಲ್ಲ ಹೇಗೆ ನಡೆಯಿತೆಂದು ಯೋಚಿಸುತ್ತ, ಈ ವಿಷಯ ತನಗೆ ತಿಳಿಸದೇ ಇದ್ದ ಎಲ್ಲರ ಬಗ್ಗೆ ಸಿಟ್ಟು ಬಂತು. ಈಗ ತಂಗಿ, ತಾಯಿ, ಅಜ್ಜಿಯರ ಬಗ್ಗೆ ಕಾಳಜಿಯಾಯಿತು. ಈ ಮೂವರಿಗೂ ತನೇ ದಿಕ್ಕು. ಆದರೆ ಈ ದುರಂತವಾಗುತ್ತಿದ್ದಾಗ ತಾನೇ ಇರಲಿಲ್ಲವೆಂದರೆ ನಾಚಿಕೊಳ್ಳಬೇಕಾದ ವಿಚಾರವಲ್ಲವೆ? ಈಗ ಮಾತ್ರ ಬಿಳಿಗಿರಿ ಯಾವಾಗ ಬಂದೀತು, ಯಾವಾಗ ತಂಗಿ, ತಾಯಿ, ಅಜ್ಜಿಯರನ್ನ ನೋಡೇನೆಂದು ಕಾತರಗೊಂಡ. ಹಳ್ಳ ಕೊಳ್ಳಗಳಲ್ಲಿ ಗಾಡಿಯ ಕುಲುಕಾಟ ಅವನ ಕಾತರದ ದೇಹಕ್ಕೆ ಗೊತ್ತಾಗಲೇ ಇಲ್ಲ. ಬೊಂತೆಯ ನಿದ್ರಿಸುತ್ತಿದ್ದ. ಸಾರಥಿ ತಗ್ಗು ದಿನ್ನೆಗಳಲ್ಲಿ ಗಾಡಿಯನ್ನು ಹುಷಾರಾಗಿ ನಡೆಸುತ್ತಿದ್ದ.

ಕೊನೆಗೂ ನಾಲ್ಕು ದಿನ ಪ್ರವಾಸದ ಬಳಿಕ ಬಿಳಿಗಿರಿಯ ಪರಿಚಿತ ಬೆಟ್ಟಗಳು ಕಾಣಿಸುತ್ತಿದ್ದಂತೆ ರವಿಯ ಕಾತರ ಹೆಚ್ಚಾಯಿತು. ಕೊನೆಗೂ ಒಮ್ಮೆ ಬಿಳಿಗಿರಿಯ ಅಗಸೆಗೆ ಬಂದೊಡನೆ ಗಾಡಿಯಲ್ಲಿ ಎದ್ದುನಿಂತು "ಬಿಳಿಗಿರಿ ಬಂತು!" ಎಂದು ಕೂಗಿದ. ಗಾಡಿ ಮೆಲ್ಲಗೆ ತೆವಳುತ್ತಿದೆ ಎನ್ನಿಸಿ ತಾಳ್ಮೆಗೆಟ್ಟು ಟಣ್ಣನೆ ಗಾಡಿಯಿಂದ ಕೆಳಗೆ ಹಾರಿ ಸಣ್ಣ ಅರಮನೆಯ ಕಡೆಗೆ ಓಡತೊಡಗಿದ. ಎದುರಾದವರು ಪರಾರಿಯಾಗುತ್ತಿದ್ದಂತೆ ಓಡುತ್ತಿದ್ದ ಇವನನ್ನು ನೋಡಿ ಬೆರಗಾದರು.

ಪೌಳಿಯನ್ನು ದಾಟಿ ಸಣ್ಣ ಅರಮನೆಯ ಅಂಗಳಕ್ಕೆ ಬಂದಾಗ ಸಾಯಂಕಾಲವಾಗಿ ಸೇವಕರು ದೀಪ ಹಚ್ಚುವ ತಯಾರಿ ಮಾಡುತ್ತಿದ್ದರು. ಒಬ್ಬ ಸೇವಕನಿಗೆ ಇವನ ಗುರುತು ಸಿಕ್ಕದೆ ಅಡ್ಡನಿಂತು "ಯಾರು ನೀನು?" ಅಂದ.

"ನಾನು ನಾನು ನಾನೋ ಕತ್ತೆ, ರವಿ!"

-ಎಂದು ಅವನನ್ನು ಸರಿಸಿ ದಡಬಡ ಮೆಟ್ಟಿಲೇರಿ ಒಳಕ್ಕೋಡಿದ. ಆಮೇಲೆ ಕನಕಪುರಿಯ ಸೇವಕ ಹೇಳಿದ ಮೇಲೆ ಸ್ಥಳೀಯ ಸೇವಕರೂ ಉತ್ಸಾಹದಿಂದ "ಚಿಕ್ಕ ಬುದ್ಯೋರು" ಎನ್ನುತ್ತ ಒಳಗೋಡಿದರು.

ಮೊಗಸಾಲೆಯಲ್ಲಿ ಆಗಲೇ ದೀಪ ಹಚ್ಚಿದ್ದರು. ಮಧ್ಯ ನಿಂತು, "ಮುದ್ದೂ, ಅಜ್ಜೀ, ಅಮ್ಮಾ.... ಯಾರಲ್ಲಿ?" ಎಂದು ಬೆಟ್ಟದಲ್ಲಿ ಕೂಗುವಂತೆ ದೊಡ್ಡ ದನಿಯಲ್ಲಿ ಕರೆದು ತಕ್ಷಣ ಇದು ನಮ್ಮ ಮನೆಯಲ್ಲವೆಂದು ಮೆತ್ತಗಾದ. ಅಂಗಳದಲ್ಲಿ ಎದುರಾದ ಸೇವಕ ಬಂದು, "ಅಮ್ಮಾವ್ರೆ ಚಿಕ್ಕ ಬುದ್ಯೋರು ಬಂದವ್ರೆ" ಎಂದು ದನಿಯಾಡಿಸಿದ. ಒಳಗಡೆಯಿಂದ ಬಂದವಳು ಛಾಯಾದೇವಿ. ಮೂಕವಿಸ್ಮಿತಳಾಗಿ, ಎದುರಿಗಿದ್ದವನು 'ತನ್ನ ಮಗನೇ?' ಎಂಬ ಸಂಶಯದಲ್ಲಿ ಕೆಲವು ಕ್ಷಣ ನಿಂತು, ಮಗನೆಂದು ಖಾತ್ರಿಯಾಗಿ ಆನಂದ ವಿಸ್ಮಯಗಳಿಂದ ಕಣ್ಣೀರುಕ್ಕಿ, ಮಾತುಬಾರದೆ ಗದ್ಗದಿತಳಾಗಿ, "ಮಗನೇ!" ಎಂದು ಉದ್ಗಾರ ತೆಗೆದು ಓಡಿಬಂದು ತಬ್ಬಿಕೊಂಡಳು. ಹಾಗೇ ಮಗನ ತೆಕ್ಕೆಯಲ್ಲಿ ಮೂರ್ಛಾಗತಳಾದಳು.

“ಚಿಕ್ಕಧಣಿ ಬಂದರೋ!” ಎಂದು ಸೇವಕ ಆ ಕಡೆ ಓಡಾಡಿ ತಿಳಿಸಿದ. ಕೆಲವೇ ಕ್ಷಣಗಳಲ್ಲಿ ಕನಕಪುರಿಯಿಂದ ಬಂದ ಸೇವಕರು ಮೊಗಸಾಲೆಯ ಮೂಲೆಯಲ್ಲಿ ಗುಂಪುಗೂಡಿ ಚಿಕ್ಕದಣಿಯ ಬೆಳೆದ ರೂಪವನ್ನು ಕಣ್ಣಾರೆ ಹೀರುತ್ತ ಮನಸಾರೆ ಸಂತೋಷಪಡುತ್ತ ಆ ಕ್ಷಣಗಳನ್ನು ಆಚರಿಸುತ್ತಿದ್ದರು. ಬಿಳಿಗಿರಿಯ ಸೇವಕರೂ ಅವರೊಂದಿಗೆ ಸೇರಿದರು. ಯಾರೊಬ್ಬರೂ ತಾಯಿ ಮಗನ ಕಡೆಗೆ ಸುಳಿಯಲಿಲ್ಲ. ಅವರಿಂದ ಕಣ್ಣುಗಳನ್ನು ಕೀಳಲೂ ಇಲ್ಲ.

“ಅಮ್ಮ ಮುದ್ದು ಎಲ್ಲಿ? ಅಜ್ಜೀ ಎಲ್ಲಿ?”

ಛಾಯಾದೇವಿ ಮೆಲ್ಲಗೆ ಅರಿವಿಗೆ ಬಂದಳು. ನೀರಲ್ಲಿಯ ಸೊಡರಿನಂತೆ ಉರಿವ ಕಣ್ಣುಗಳಲ್ಲಿ ಮಗನನ್ನು ತುಂಬಿಕೊಳ್ಳುತ್ತ “ಮಗನೇ ನಿನ್ನ ತಂದೆ….” ಎನ್ನುತ್ತ ಮುಂದೆ ಮಾತು ಬಾರದೆ ನಿಂತುಬಿಟ್ಟಳು. ಮುಖ ಕೆಂಪಗಾಗಿ ನಗುತ್ತಿರುವಳೋ ಅಳುತ್ತಿರುವಳೋ ಹೇಳುವುದೇ ಕಷ್ಟವಾಗಿತ್ತು. ಆಗಾಗ “ಮಗನೇ ನಿನ್ನ ತಂದೆ….” ಎನ್ನುತ್ತ ಆದರೆ ಆತನನ್ನು ದೂರ ಹೋಗಲು ಬಿಡದೆ ಮತ್ತೆ ಮತ್ತೆ ತಬ್ಬಿಕೊಳ್ಳುತ್ತ ಬೇರೆ ಮಾತು ಬಾರದೆ ಮಗನೇ ಎನ್ನುತ್ತ ನಿಂತುಬಿಟ್ಟಳು. ರವಿ ಅವಳನ್ನು ಎಚ್ಚರಿಸುವಂತೆ,

“ಅಮ್ಮ ಮುದ್ದು ಎಲ್ಲಿ?”

“ಮಗನೇ ನಿನ್ನ ತಂದೆ….!”

-ಎಂದು ಹೇಳುತ್ತ ಛಾಯಾದೇವಿ ತಬ್ಬಿಕೊಂಡು ಮತ್ತೆ ಅಳತೊಡಗಿದಳು.

ಅಷ್ಟರಲ್ಲಿ ದೇವಾಲಯಕ್ಕೆ ಹೋಗಿದ್ದ ತಂಗಿ ಮುದ್ದು ಗೌರಿ ಮತ್ತು ಅಜ್ಜಿ ತೊಲೆ ಬಾಗಿಲಲ್ಲಿ ನಿಂತಿದ್ದವರು ಗದ್ದಲ ಕೇಳಿಸಿಕೊಂಡು ಒಳಬಂದರು. ರವಿಕೀರ್ತಿಯನ್ನು ನೋಡಿದ್ದೇ ‘ಅಣ್ಣಾಃ’ ಎಂದು ಕಿಟಾರನೆ ಕಿರಿಚಿ ನಿಂತಲ್ಲಿಂದ ಎರಡೇ ಹೆಜ್ಜೆಗಳಲ್ಲಿ ನೆಗೆದುಬಂದು ಗೌರಿ ಅಮ್ಮನಿಂದ ಅಣ್ಣನನ್ನು ಕಸಿದು ಅಲಂಗಿಸಿಕೊಂಡು ‘ಅಣ್ಣಾಃ’ ಎಂದು ಆನಂದದಿಂದ ಅಳತೊಡಗಿದಳು. ಇಷ್ಟು ದಿನ ಯಾಕೆ ಬರಲಿಲ್ಲ.? ಎಂದು ಅವನ ಎದೆ ತುಂಬ ಗುದ್ದಿ ಅತ್ತಳು. ಅಣ್ಣಾ ಎಂದು ಅವನ ಕತ್ತಿಗೆ ಜೋತುಬಿದ್ದು ಅಣ್ಣನನ್ನೇ ಕಣ್ಣಗಲಿಸಿ ನೋಡುತ್ತ ಹರ್ಷೋತ್ಕರ್ಷದಿಂದ ನಗತೊಡಗಿದಳು. ಆತ “ಮುದ್ದು ಮುದ್ದೂ” ಎಂದು ತಂಗಿಯನ್ನು ತಬ್ಬಿಕೊಂಡು ದುಃಖಮಿಶ್ರಿತ ಆನಂದಪಡುತ್ತಿದ್ದರೆ ಚಿಕ್ಕಮ್ಮಣ್ಣಿಗೆ ತಂದೆ ಮಕ್ಕಳ ಅಗಲಿಕೆ, ಕನಕಪುರಿಯ ಕ್ರೌರ್ಯಗಳ ನೆನಪಾಗಿ ‘ಕಂದಾಃ’ ಎಂದು ಹೇಳುತ್ತ ಅಲ್ಲೇ ಕುಸಿದಳು. ಸೇವಕಿಯರು ಓಡಿಬಂದು ಚಿಕ್ಕಮ್ಮಣ್ಣಿಯನ್ನು ಪೀಠದಲ್ಲಿ ಒರಗಿಸಿ ಗಾಳಿ ಬೀಸತೊಡಗಿದರು.

ಒಬ್ಬೊಬ್ಬರು ತಮಗಿಷ್ಟವಾದಂತೆ ರವಿಯನ್ನು ಕರೆಯುತ್ತ, ಆಲಂಗಿಸುತ್ತ ಆನಂದಭಾಷ್ಪಗಳ ಸುರಿಸುತ್ತ, ಚೀರುತ್ತ, ಶಿಖರಸೂರ್ಯನ ಅಗಲಿಕೆ ಮತ್ತು ರವಿ ಬಂದು ಸೇರಿಕೊಂಡ ದುಃಖಮಿಶ್ರಿತ ಆನಂದವನ್ನ ಆಚರಿಸಿದರು. ಗೌರಿಯಂತೂ ಎಲ್ಲರಿಂದ ಅಣ್ಣನ ಲಕ್ಷ್ಯ ಮತ್ತು ಸಾಮೀಪ್ಯವನ್ನು ಕಸಿದುಕೊಳ್ಳುತ್ತಿದ್ದಳು. ಗುಂಪುಗೂಡಿದ್ದ ಸೇವಕರು ಆರಾಧಕ ನೇತ್ರಗಳಿಂದ ಚಿಕ್ಕದಣಿಯನ್ನು ನೋಡುತ್ತ, ಅವನ ಚಲನವಲನಗಳನ್ನು ಏಕಾಗ್ರತೆಯಿಂದ ನೋಡುತ್ತ ಸಂತೋಷಪಡುತ್ತ ಹೊರಗಿನ ಲೋಕವನ್ನ ಮರೆತಿದ್ದರು. ಗೌರಿಯಂತೂ ಅಮ್ಮನಿಗೆ “ನನ್ನಣ್ಣ ಎಷ್ಟು ದೊಡ್ಡವನಾಗಿದ್ದಾನೆ ನೋಡಮ್ಮ!” ಎಂದು ಅವನ ಚಿಗುರುಮೀಸೆಯನ್ನು ಹಿಡಿದಲುಗಿಸಿ ಅವನು ಅಯ್ಯೋ ಎಂದು ನೋವಿಂದ ಒದರಿದರೆ ಕೇಕೆ ಹಾಕಿ ನಕ್ಕಳು.

ಸುತ್ತಲೂ ಆನಂದಭಾಷ್ಪಗಳಿಂದ ತುಂಬಿದ ಕಣ್ಣುಗಳು, ಕೆಂಪೇರಿದ ಮುಖಗಳು, ತನ್ನನ್ನು ಆಲಂಗಿಸಲು ಹಾರೈಸುವ ತೋಳುಗಳು, ಹುಚ್ಚಿಯಂತೆ ಆನಂದದಿಂದ ನಗುತ್ತಿರುವ ತಂಗಿ ಮುದ್ದುವನ್ನ ಕಣ್ತುಂಬ ನೋಡಿ ತಕ್ಷಣ ರವಿ ಗಂಭೀರವಾಗಿ ಹಿಂದೆ ಸರಿದು ನೋಡಿದ. ಅವಳೀಗ ಹದಿನಾರರ ಚೆಲುವೆ! ಈ ಆನಂದ, ಉತ್ಸಾಹ, ಭಾವೋದ್ರೇಕದ ಸಮಯದಲ್ಲಂತೂ ಆಕೆ ವಯಸ್ಸಿಗೆ ಬಂದ ದೇವತೆಯಂತೆ ಕಂಗೊಳಿಸುತ್ತಿದ್ದಾಳೆ. ತಕ್ಷಣ ದೂರನಿಂತು ತನ್ನನ್ನೇ ನೋಡುತ್ತಿರುವನೆಂದು ಗೊತ್ತಾಗಿ ಗೌರಿ ಅವನ ಕಣ್ಣುಗಳಲ್ಲಿ ಕಣ್ಣು ಕೀಲಿಸಿ ಅವನ

ಬಳಿ ಸುಳಿದು ಅವನ ಎದೆಯನ್ನು ಜೋರಾಗಿ ಜಿಗುಟಿದಳು. ಅವನು 'ಹಾಃ' ಎಂದು ಕೂಗಿದೊಡನೆ ಬಿಟ್ಟು ಆನಂದದಿಂದ ಜೋರಾಗಿ ನಕ್ಕಳು.

ಅಷ್ಟರಲ್ಲಿ ಚಿಕ್ಕಮ್ಮಣ್ಣಿ ಎದ್ದು ಮೆಲ್ಲಗೆ ಮೊಮ್ಮಗನ ಬಳಿಗೆ ಬಂದಳು. ಮೊಮ್ಮಗನನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತಳು. ರವಿಯ ಕೆನ್ನೆ ಸವರಿದಳು. ರವಿ ಅಜ್ಜಿಯ ಕಾಲುಮುಟ್ಟಿ ನಮಸ್ಕರಿಸಿದ. ತಲೆ ನೇವರಿಸಿ ನೆತ್ತಿಯ ಮೂಸಿ ನೋಡಿ ಹೃತ್ಪೂರ್ವಕ ಎರಡೂ ಕೈ ನೆತ್ತಿಯ ಮೇಲೆ ಊರಿ "ಆಯುಷ್ಯವುಳ್ಳವನಾಗು ಕಂದಾ" ಎಂದು ಮತ್ತೆ ಬಿಕ್ಕಿದಳು. ಮತ್ತೆ ಗೌರಿ ಬಂದು ಅಜ್ಜಿಯಿಂದ ಅವನನ್ನು ಕಸಿದುಕೊಂಡು ಆಲಂಗಿಸಿದಳು. ಅಜ್ಜಿ, ತಾಯಿ, ಸೇವಕಿಯರು ಎಲ್ಲರೂ ಮುದ್ದುವಿನ ಪ್ರೀತಿ ಇವನ್ನೆಲ್ಲ ನೋಡುತ್ತ ಕನಸು ಹೊಸೆಯುತ್ತ ಆನಂದಭಾಷ್ಪ ಸುರಿಸುತ್ತಿದ್ದರು.

ಅಣ್ಣ ತಂಗಿಯರಿಬ್ಬರೂ ಊಟ ಮಾಡಿ ಕೂಡಲೇ ಮಲಗಲೇ ಇಲ್ಲ. ಮೊಗಸಾಲೆಯಲ್ಲಿ ಕೂತು ಸಣ್ಣ ದನಿಯಲ್ಲಿ ಇಬ್ಬರೂ ಅಗಲಿದಾಗಿನಿಂದ ಹಿಡಿದು ಇವತ್ತಿನವರೆಗೆ ತಂತಮ್ಮ ಸುತ್ತ ನಡೆದ ಸಾವಿರ ವಿಷಯ ಮಾತನಾಡಿದರು. ತಂದೆಯ ಬಗ್ಗೆ ರವಿಕೀರ್ತಿಯ ಕೋಪವಿನ್ನೂ ಆರಿರಲಿಲ್ಲ. "ಕನಕಪುರಿಯವರು ಹೇಳಿಕೇಳಿ ದುಷ್ಟರು. ಇವನು ಹೆಂಡತಿ ಮಕ್ಕಳನ್ನು ಬಿಟ್ಟುಹೋದದ್ದು ತಪ್ಪು! ಮುಚ್ಚುಮರೆ ಇಲ್ಲದೆ ಹೇಳು. ಅಪ್ಪನ ವರ್ತನೆ ಹೊಣೆಗೇಡಿತನದ್ದಲ್ಲವೆ?" ಎಂದ ರವಿ.

ಅದಕ್ಕೆ ಗೌರಿ ಹೇಳಿದಳು-

"ಸರಿಯಾಗಿ ಅಪ್ಪನನ್ನು ತಿಳಿದರೆ ಆತ ತಪ್ಪು ಮಾಡಿದ್ದರೂ ಕ್ಷಮಿಸಬೇಕೆನಿಸುತ್ತದೆ. ನಿನಗೆ ಬೌದ್ಧಿಕ ಅಹಂಕಾರವಿದೆ ಕಣೋ. ತಂದೆಯನ್ನ ವಿಮರ್ಶಿಸೋದು ಯೋಗ್ಯ ನಡೆಯಲ್ಲ. ನನಗಂತೂ ಅವನ ಬಗ್ಗೆ ಗೌರವ ಭಾವನೆ ಇದೆ. ಆದರೆ ಇಷ್ಟೆ, ದೇವರನ್ನ ನಂಬುವವರ ಬಗ್ಗೆ ಅಪ್ಪನ ಧೋರಣೆ ಸರಿ ಇಲ್ಲ."

ಹೀಗೆ ಕನಕಪುರಿ, ರಾಜ, ರಾಣಿ, ಬದೆಗ ಇತ್ಯಾದಿ ಪರಸ್ಪರ ಪ್ರಶ್ನೆ ಕೇಳಿ ಉತ್ತರ ಪಡೆದರೋ ಬರಿ ಪ್ರಶ್ನೆ ಕೇಳಿಕೊಂಡರೋ ಬರೀ ಹರಟೆ ಹೊಡೆದರೋ ಅಂತೂ ಮಾತನಾಡಿದರು. ಅಣ್ಣನ ಪ್ರತಿಮಾತಿಗೂ ಗೌರಿ ನಕ್ಕಳು. ಈ ಮಧ್ಯೆ ಅವನ ಮೀಸೆಗಳ ಮೇಲೆ ಅನೇಕ ಬಾರಿ ಕೈಯಾಡಿಸಿ "ಅಣ್ಣಾ ನೀನು ಗಡ್ಡ ಬೆಳೆಸಬೇಡ, ಸನ್ಯಾಸಿಯ ಹಾಗೆ ಕಾಣುತ್ತಿ" ಎಂದೂ ಸಲಹೆ ಮಾಡಿ ಅದಕ್ಕೆ ಅವನನ್ನು ಒಪ್ಪಿಸಿಯೂ ಬಿಟ್ಟಳು. ಅಷ್ಟರಲ್ಲಿ ಚಿಕ್ಕಮ್ಮಣ್ಣಿ,

"ಮುದ್ದೂ ನಿನ್ನಣ್ಣ ನಾಲ್ಕು ದಿನಗಳಿಂದ ಪ್ರವಾಸ ಮಾಡಿ ದಣಿದಿದ್ದಾನೆ, ಮಲಗಲಿ, ನಾಳೆ ಮಾತನಾಡಿದರಾಗದೆ? ನೀನೂ ಮಲಗು ಬಾ"

-ಎಂದು ಕರೆದಳು. "ಆಯ್ತಜ್ಜಿ" ಎಂದು ಹೇಳಿ ಹೋಗಲಿದ್ದವಳು ಆಮೇಲೆ ಇಬ್ಬರೂ ಪಿಸುದನಿಯಲ್ಲಿ ಒಂದು ಗಂಟೆ ಕಾಲ ಮಾತಾಡಿ, ಮಲಗಲು ಹೋದಳು.

ಮಾರನೇ ಮುಂಜಾನೆ ಮೂರು ತಾಸು ಹೊತ್ತೇರಿದರೂ ರವಿ ಎದ್ದಿರಲಿಲ್ಲ. ಅಷ್ಟರಲ್ಲಿ ಹತ್ತು ಸಾರಿ ಗೌರಿ ಬಂದು ಹೋಗಿದ್ದಳು. ಪ್ರತಿಸಲ ಬಂದಾಗಲೂ ಇನ್ನೂ ಎದ್ದಿಲ್ಲ ಪುಣ್ಯಾತ್ಮ; ಅದೆಷ್ಟು ದಣಿದಿದ್ದಾನೋ?" ಎಂದುಕೊಂಡು ಹೋದಳೇ ವಿನಾ ಎಬ್ಬಿಸುವ ಮನಸ್ಸು ಮಾಡಲಿಲ್ಲ.

ರವಿ ಕಣ್ಣುಜ್ಜಿಕೊಂಡು ಅಂಟಿಕೊಂಡ ರೆಪ್ಪೆಗಳನ್ನು ಬಿಚ್ಚಿ ನೋಡಿದರೆ ಕಿಡಿಕಿಯ ಮೂಲಕ ಬಲಿತ ಬಿಸಿಲು ಒಳಬಂದು ಇಡೀ ಕೋಣೆಯನ್ನು ಬೆಳಗುತ್ತಿತ್ತು. "ಅಯ್ಯೋ ಆಗಲೇ ಮೂರು ತಾಸು ಹೊತ್ತೇರಿದೆ" ಎನ್ನುತ್ತ ಎದ್ದ. ಬಾಗಿಲಲ್ಲಿ ನಿಂತಿದ್ದ ತಂಗಿ,

“ಮೂರಲ್ಲ, ನಾಲ್ಕು ತಾಸು ಹೊತ್ತೇರಿದೆ, ಏಳು”

-ಎಂದು ಒಳಬಂದಳು. ತಕ್ಷಣ ರವಿ ಮೈತುಂಬ ಹೊದಿಕೆ ಹೊದ್ದುಕೊಂಡು ಗಾಬರಿಯಿಂದ,

“ಮುದ್ದೂ ಹಾಗೆಲ್ಲ ಗಂಡಸರಿದ್ದಲ್ಲಿ ಯಾವಾಗೆಂದರೆ ಆವಾಗ ಹುಡಿಗೇರು ಬರಬಾರದು, ಹೊರಗೆ ನಡೆ” ಎಂದ.

ಗೌರಿಗೆ ಆಶ್ಚರ್ಯವಾಯಿತು; ಆಘಾತದಿಂದ ಕೆಲ ಕಣ ಹಾಗೇ ನಿಂತು ಆಮೇಲೆ ತಿಳವಳಿಕೆ ಬಂದು ದಿಗಿಲಿನಿಂದ ಅಣ್ಣನನ್ನು ಒಮ್ಮೆ ನೋಡಿ ಹೊರನಡೆದಳು. ಹೋಗುವಾಗ ತೆರೆದ ಬಾಗಿಲನ್ನು ಮುಚ್ಚಿಕೊಂಡು ಗೊಳ್ಳನೆ ನಗುತ್ತ ಓಡಿದಳು.

ರವಿಯೀಗ ದೊಡ್ಡವನಾಗಿದ್ದ. ಗಂಭೀರನಾಗಿದ್ದ. ಅಗತ್ಯವಿದ್ದಾಗ ಮಾತ್ರ ಮಾತಾಡುತ್ತಿದ್ದ. ಪ್ರಣಯದ ಭಾವನೆಗಳು ಸುಳಿದಾಗ ಬಿಳಿಗಿರಿಯ ಹುಡುಗಿಯರಲ್ಲಿ ತನ್ನ ಮನಸ್ಸು ಮತ್ತು ಮರ್ಯಾದೆಗೆ ಸಮನಾದವರು ಯಾರೂ ಇಲ್ಲವೆಂದು, ಅಂಥವರ ಜೊತೆ ಮಾತಾಡುವುದು ಅಲ್ಪರೊಂದಿಗಿನ ವ್ಯರ್ಥ ತಲೆಹರಟೆಯೆಂಬಂತೆ ನಡೆದುಕೊಳ್ಳುತ್ತಿದ್ದ. ವಯೋಮಾನದಿಂದ ತರುಣರೊಂದಿಗೆ ಸ್ನೇಹ ಬೆಳೆಸಬೇಕಾದ ಅವನು ಕಂಚೀಪಟ್ಟಣದಲ್ಲಿ ವಿದ್ಯೆಗಳಿಸಿದ ಹೆಚ್ಚುಗಾರಿಕೆ ಮತ್ತು ಡೌಲಿನಿಂದಾಗಿ ಯಾವಾಗಲೂ ತನಗಿಂತ ಹಿರಿಯರೊಂದಿಗೇ ಮಾತಾಡುತ್ತಿದ್ದ. ಇತರರಿಗೆ ತಿಳಿಯದ ಸಂಗತಿಗಳು, ಅನುಭವಗಳು ತನಗೆ ಗೊತ್ತಿವೆಯೆಂಬ ಬೌದ್ಧಿಕ ಅಹಂಕಾರವೂ ಅವನಲ್ಲಿತ್ತು. ಆದರೆ ಮಹಾರಾಜ ಮಾತ್ರ ಇದ್ಯಾವುದನ್ನೂ ಗಮನಿಸಿರಲಿಲ್ಲ. ತಂದೆಯಂತೆಯೇ ಮೈಕಟ್ಟಿನ ರವಿಯನ್ನು ಹುಡುಕಿ ಅವನು ಕಣ್ಣಿಗೆ ಬಿದ್ದರೆ ಸಂತೋಷಪಡುತ್ತ ತನಗಾದ ಆನಂದವನ್ನು ಅನೇಕ ರೀತಿಯಲ್ಲಿ ವ್ಯಕ್ತಮಾಡುತ್ತಿದ್ದ ಮತ್ತು ಕುಮಾರಿ ಜಯರಾಣಿಯೊಂದಿಗೆ ಈತನ ಕನಸು ಕಾಣುತ್ತಿದ್ದ. ಚಿಕ್ಕಂದಿನ ಆಟಗಳನ್ನು ನೆನಪಿಸುತ್ತಿದ್ದ. ಆದರೆ ರವಿ ಮಾತ್ರ ಅವೆಲ್ಲ ಬಾಲ್ಯದ ಹುಡುಗಾಟಗಳೆಂದು ನಕ್ಕು ನಿವಾರಿಸುತ್ತಿದ್ದ.

ಆದರೆ ತಂಗಿಯೊಂದಿಗೆ ಮಾತ್ರ ಈ ಯಾವ ನಿರ್ಬಂಧಗಳಿರಲಿಲ್ಲ. ಬೇಕಾದಷ್ಟು ಹರಟುತ್ತಿದ್ದ. ಅಣ್ಣ ತನ್ನೊಂದಿಗೆ ಮಾತ್ರ ಸಲುಗೆಯಿಂದ ನಗಾಡುವನೆಂದು ಅವಳಿಗೂ ಹೆಮ್ಮೆ. ಇಬ್ಬರೂ ದೇವಾಲಯದ ಹಿಂದಿನ ಬಂಡೆಯ ಮೇಲೆ ಕೂತು ರವಿ ಕಂಚಿಗೆ ಹೋದಾಗಿನಿಂದ ಹಿಡಿದು ಈವರೆಗಿನ ಘಟನೆ, ಅನುಭವಗಳನ್ನು ಹಂಚಿಕೊಂಡರು. ಚಂಡೀದಾಸ ಅಡಕೆ ಕೊಟ್ಟುದರಿಂದ ಹಿಡಿದು ಹೋರಿಯ ಹುಡುಗನ ಕನಸಿನವರೆಗೆ ಗೌರಿ ಹೇಳಿದರೆ ವಾಸಂತಿಯ ಬಗ್ಗೆ ರವಿ ಹೇಳಿದ. ಆಮೇಲೆ ತಂದೆಯ ಅಸಂಗತ ವರ್ತನೆಯ ಬಗ್ಗೆ ಮಾತಾಡಿದರು. ತಂದೆಯ ಬಗ್ಗೆ ಏನೂ ತಿಳಿಯಲಿಲ್ಲವಾದರೂ ಹಿಂದುರಿಗಿ ಬಂದೇ ಬರುವನೆಂಬ ಗೌರಿಯ ಭರವಸೆಯೊಂದಿಗೆ ಅರಮನೆಗೆ ಹಿಂದಿರುಗಿದರು.

ಆ ರಾತ್ರಿ ಬೆಳಗಿನ ಸಮಯ ಗೌರಿಗೊಂದು ಕನಸಾಯಿತು:

ಬೆಳ್ದಿಂಗಳಿತ್ತು. ಒಂದು ತಟ್ಟೆ ತಗೊಂಡು ಅದರಲ್ಲಿ ನೀರು ಹಾಕಿಕೊಂಡು ತೊಡೆಯ ಮೇಲೆ ಇಟ್ಟುಕೊಂಡು ಅಂಗಳದಲ್ಲಿ ಕೂತಳು. ಆಕಾಶದ ಚಂದ್ರ ಬಂದು ತಟ್ಟೆ ನೀರಲ್ಲಿ ಚಂಗನೆ ನೆಗೆದಂತಾಯಿತು! ನೋಡಿದರೆ ಚಂದ್ರ ತಟ್ಟೆಯ ತುಂಬ ಕುಣಿದಾಡುತ್ತಿದ್ದ. ಚಿಕ್ಕೆ ತಾರೆಗಳೂ ಬಂದು ಅವೂ ಚಂದ್ರನೊಂದಿಗೆ ಕುಣಿಯತೊಡಗಿದವು! ಎಲ್ಲವೂ ಗೌರಿಯ ಕೈ ಹಿಡಿದೆಳೆಯುತ್ತ “ನೀನೂ ನಮ್ಮ ಜೊತೆ ಬಾ” ಅಂತ ಕರೆದವು. ನೋಡಿದರೆ ಆಗಲೇ ಇವಳೂ ಚಂದ್ರ ಚಿಕ್ಕೆ ತಾರೆಯರ ಜೊತೆ ಸೇರಿ ಬೆಳ್ದಿಂಗಳಲ್ಲಿ ಈಜುತ್ತ ತೇಲುತ್ತ ಆಕಾಶದ ತುಂಬ ಆಡಿದಳು. ಆಟ ಮುಗಿದ ಮೇಲೆ ಚಂದ್ರ ಎಷ್ಟು ಒಳ್ಳೆಯ ಚಂದೂಮಾಮ!- “ನಿನಗೇನು ಬೇಕು ಮರಿ?” ಅಂದ! ಆದರೆ ತನಗೇನು ಬೇಕೆಂದು ಗೊತ್ತಾಗಲೇ ಇಲ್ಲ. ಗೊತ್ತಾಗದ್ದಕ್ಕೆ ಅಳುಬಂತು. ಆವಾಗ ಚಂದ್ರನೇ ಮುಂದೆ ಬಂದು ತನ್ನ ಕಣ್ಣೀರೊರೆಸಿ ಸಮಾಧಾನ ಮಾಡಿ ಅಂಗೈಯಲ್ಲೊಂದು ಚಿಕ್ಕೆ ಇಟ್ಟು ಕಳಿಸಿಕೊಟ್ಟ.

ಬೆಳಿಗ್ಗೆ ಎಚ್ಚರವಾಗಿ ನೋಡಿದರೆ ಗೌರಿಯ ಕೈಯಲ್ಲಿ ಏನೋ ಇದೆ! ಚಕ್ಕನೆ ಎದ್ದು ಕೈ ತೆರೆದು ನೋಡಿಕೊಂಡಳು. ಚಂಡೀದಾಸ ಕೊಟ್ಟ ಅಡಿಕೆ ಅಂಗೈಯಲ್ಲಿದೆ! ಸ್ಪರ್ಶಿಸಿ ನೋಡಿದಳು. ಪಳಪಳ ಪುಳಕವೆದ್ದು ಕಣ್ಣಗಲಿಸಿದಳು. ಅಡಿಕೆಯ ಮ್ಯಾಲೆ ಕೆಳಗೆ ಎರಡೂ ಹಸ್ತಗಳನ್ನು ಮುಗಿದು ಎದೆಗೊತ್ತಿಕೊಂಡು ನಿಶ್ಯಬ್ದಳಾಗಿ ಕೂತಳು. ಅಷ್ಟರಲ್ಲಿ ಹೊರಗೆ ಚಂಡೀದಾಸ ಬಂದು ದೇವಾಲಯದಲ್ಲಿ ಬೀಡು ಬಿಟ್ಟ ಸಂಗತಿಯನ್ನು ಚಿಕ್ಕಮ್ಮಣ್ಣಿಗೆ ಯಾರೋ ತಿಳಿಸಿದ್ದು ಕೇಳಿಸಿತು. ಚಕ್ಕನೆ ಎದ್ದಳು.

## ನಲವತ್ತೇಳು

ಚಂಡೀದಾಸ ತಾತ ಅರಮನೆಗ್ಯಾಕೆ ಬರಲಿಲ್ಲ?-ಎಂದು ಗೌರಿಗೆ ಬೇಸರವಾಯಿತು. ಅಥವಾ ಈಗ ಬರಬಹುದು. ಆದರೂ ಅವನು ಬರುವತನಕ ಕಾಯುವುದಾಗದೆ ದೇವಾಲಯಕ್ಕೆ ತಾನೇ ಓಡಿದಳು.

ದೇವಾಲಯದಲ್ಲಿ ಯಾರೂ ಇರಲಿಲ್ಲ. ಆದರೆ ಮುಂದುಗಡೆ ಒಂದು ಹೋರಿ ನಿಂತಿತ್ತು! ನೋಡಿದರೆ ತಾನು ಅನೇಕ ಸಲ ಕನಸಿನಲ್ಲಿ ಕಂಡ ಹೋರಿಯಂತಿದೆ! ಮತ್ತಷ್ಟು ನೋಡುತ್ತಿರುವಂತೆಯೇ ಆ ಹೋರಿಯೇ ಇವಳಿರುವಲ್ಲಿಗೆ ಬಂದು ನಿಂತುಕೊಂಡಿತು. ಕಳೆದು ಹೋದ ಪರಿಚಿತರನ್ನು ಕಂಡಂತೆ ಗೌರಿಗೆ ಹರ್ಷವಾಯಿತು. ಮೆಲ್ಲಗೆ ಅದರ ಸಮೀಪ ಹೋಗಿ ಮುಖದ ಮೇಲೆ ಕೈ ಇಟ್ಟಳು. ಅದು ಇನ್ನಷ್ಟು ಹತ್ತಿರಕ್ಕೆ ಮುಖ ಸರಿಸಿ ಅವಳ ಹಸ್ತಸ್ಪರ್ಶದ ಸುಖಕ್ಕೆ ಕಣ್ಣು ಮುಚ್ಚಿತು. ಗೌರಿ ರೋಮಾಂಚಿತಳಾಗಿ ಅದರ ಮುಖವನ್ನ ತಬ್ಬಿಕೊಂಡಳು. ಅದು ಪ್ರಾಣಿ, ಬಳಕೆಯಿಲ್ಲದವರನ್ನು ಇರಿಯಬಹುದೆಂಬ ಖಬರಿಲ್ಲದೆ ಮತ್ತೆ ಮತ್ತೆ ತಬ್ಬಿಕೊಂಡಳು. ಆಶ್ಚರ್ಯವೆಂದರೆ ಹೋರಿ ಸುಮ್ಮನೆ, ಆಕೆ ಹ್ಯಾಗೆ ತಬ್ಬಿದರೆ ಹಾಗೆ ಬಾಗುತ್ತ, ಹ್ಯಾಗೆ ಎಳೆದರೆ ಹಾಗೆ ಕತ್ತು ಚಾಚುತ್ತ, ಅವಳ ಪುಟ್ಟ ಕೈಗಳಿಗೆ ಮುಖ ನೀಡಿ ನಿಂತುಕೊಂಡಿತು. ಸುತ್ತ ನೋಡಿದಳು. ದೇವಾಲಯದಲ್ಲಿ ಯಾತ್ರಿಕರ ಸಾಮಾನು ಸರಂಜಾಮುಗಳ ಗಂಟುಗಳಿದ್ದವು. ಆದರೆ ಯಾರೂ ಇರಲಿಲ್ಲ. ಮಿಂದು ಬರಲು ಹೋಗಿರಬೇಕೆಂದು ಹೋರಿಯನ್ನು ಕರೆದುಕೊಂಡು ಅನತಿ ದೂರದ ಗೋಡೆಯ ಹಿಂಬದಿಯಲ್ಲಿ ಎತ್ತರದ ಹುಲ್ಲು ಬೆಳೆದಿರುವಲ್ಲಿಗೆ ಅದನ್ನು ಕರೆದೊಯ್ದಳು.

ಚಿಕ್ಕಮ್ಮಣ್ಣಿ ತಡಮಾಡಿ ಬಂದಾಗ ದೇವಾಲಯದ ಒಂದು ಮೂಲೆಯಲ್ಲಿ ಆರೇಳು ಜನ ಸೇರಿದ್ದರು. ಹೊರಭಾಗದಲ್ಲಿ ಚಂಡೀದಾಸ ನಿಂತು ಚಿಕ್ಕಮ್ಮಣ್ಣಿಯ ದಾರಿಯನ್ನೇ ಕಾಯುತ್ತಿದ್ದ. ಇವಳನ್ನು ಕಂಡುದೇ ಅವಸರದಿಂದ ಮುಂದೆ ಬಂದು ನಮಸ್ಕಾರ ಮಾಡಿದ. ಮೂಲೆಯಲ್ಲಿ ಪ್ರಭಾವಶಾಲಿಯಾಗಿದ್ದ ಒಬ್ಬ ಹುಡುಗ ಮಗುವಿನ ನಾಡಿ ನೋಡುತ್ತಿದ್ದ. ಅವನ ಕಡೆ ತೋರುಬೆರಳು ಮಾಡಿ ಅವನ್ಯಾರೆಂದು ಚಿಕ್ಕಮ್ಮಣ್ಣಿ ಕೇಳುವಷ್ಟರಲ್ಲಿ ಚಂಡೀದಾಸ ಮುಂದಾಗಿ "ಅವನೇ ತಾಯಿ ನಿನ್ನಡಿ! ಕರೆಯಲೆ?" ಎಂದು ಹೇಳಿ ಉತ್ತರಕ್ಕಾಗಿ ಕಾಯದೆ ಹೋಗಿಯೇಬಿಟ್ಟ. ಈತ ಹೋದಷ್ಟು ಅವಸರದಿಂದ ಆತ ಬರಲಿಲ್ಲ. ಕೈಸನ್ನೆ ಮಾಡಿ ಕಾಯಲಿಕ್ಕೆ ಹೇಳಿ ಸಮಾಧಾನದಿಂದಲೇ ನಾಡೀ ಪರೀಕ್ಷೆ ಮುಂದುವರಿಸಿದ. ಆಮೇಲೊಂದು ಬೇರು ಕೊಟ್ಟು ಮಗುವಿನ ತಂದೆಗೆ ಅದನ್ನುಪಯೋಗಿಸುವ ವಿಧಾನ ತಿಳಿಸಿ ಈ ಕಡೆ ಚಿಕ್ಕಮ್ಮಣ್ಣಿಯ ಬಳಿಗೆ ಬಾಯಿತುಂಬ ನಗುತ್ತ ಬಂದ. ಪ್ರಕಾಶಮಾನವಾದ ಅವನ ನೇತ್ರಗಳು ಅವನ ಮುಖಕ್ಕೆ ತೇಜಸ್ಸಿನ ಕಳೆ ಕೊಟ್ಟಿದ್ದವು. ಚಿಕ್ಕೆ ಬರೆದ ರುಮಾಲು ತೆಗೆದು ಮಿಂದು ಒದ್ದೆಯಾಗಿದ್ದ ಕೂದಲನ್ನು ಒರೆಸಿಕೊಂಡಾಗ ಬಂದ ವಾಸನೆಗೆ ಚಿಕ್ಕಮ್ಮಣ್ಣಿ ಸ್ವಲ್ಪ ಹಿಂದೆ ಸರಿದಳು. ತಕ್ಷಣ ಚಿಕ್ಕಂದಿನ ತನ್ನ ಮಕ್ಕಳ ದೇಹದ ವಾಸನೆ ನೆನಪಾಯಿತು. ಎರಡೂ ಕೈ ಜೋಡಿಸಿ "ಶರಣಬ್ಬೆ" ಅಂದ. ಅವನ ಎಡಗೈಯ ಕಿರುಬೆರಳಿಗೆ ಅಂಟಿಕೊಂಡು ನೇತಾಡುವಂತಿದ್ದ ಆರನೇ ಬೆರಳು ನೋಡಿ ಚಿಕ್ಕಮ್ಮಣ್ಣಿಯ ಮೈ ಝುಂ ಎಂದು ನವಿರೆದ್ದವು! ಮುಖ ನೋಡಿದರೆ ಹೆಚ್ಚು ಕಡಿಮೆ ಎಳೆಯ ಛಾಯಾದೇವಿಯಂತೇ ಇದ್ದಾನೆ! ಹುಬ್ಬು ಮತ್ತು ಮೂಗುಗಳಂತೂ ಛಾಯಾದೇವಿಯವೆ! ಮೂಕವಿಸ್ಮಿತಳಾಗಿ, ಕಣ್ಣಲ್ಲಿ ಆಶೆಯ ಸೊಡರು ಹಚ್ಚಿಕೊಂಡು ನಿಂತುಬಿಟ್ಟಳು! ಮಳೆ ಬಂದು ಉರಿಯುವ ಭೂಮಿ ತಣ್ಣಗಾಗುವಂತೆ ಅವಳ ಹೃದಯ ತಂಪಾಯಿತು. ಚಂಡೀದಾಸ ಮುಂದೆ ಬಂದು,

"ಇವನೇ ತಾಯಿ ನಿನ್ನಡಿ. ಕನ್ಯಾರ್ಥಿಯಾಗಿ ಬಂದವ."

ಅಂದ. ಈಗ ಆ ತರುಣ ಚಿಕ್ಕಮ್ಮಣ್ಣಿಯ ಮುಂದೆ ಬಂದು ಇನ್ನೊಮ್ಮೆ ಕೈ ಮುಗಿದು ನಿಂತು,

"ಶರಣು ಅಬ್ಬೆ ಶರಣು.

ನಿನ್ನ ಮನೆಯಲ್ಲೊಂದು ಕನ್ನೆಗೂಸು ಇದೆ ಅಂತ ಅಣ್ಣಯ್ಯ ಹೇಳಿದ. ಕೇಳೋಣ ಅಂತ ಬಂದೆ. ಉಳಿದದ್ದನ್ನ ಅಣ್ಣಯ್ಯ ಹೇಳುತ್ತಾನೆ."

ಚಿಕ್ಕಮ್ಮಣ್ಣಿಗೆ ಅವನ ಮಾತು ಪೂರ್ತಿ ಅರ್ಥವಾಗಲಿಲ್ಲ. ಪ್ರಶ್ನಾರ್ಥಕವಾಗಿ ಚಂಡೀದಾಸನ ಕಡೆಗೆ ನೋಡಿದಳು. ಚಂಡೀದಾಸ ಮುಂದ ಬಂದು,

"ತಾಯಿ ಇವನು ನಿನ್ನಡಿ, ಶಿವಾಪುರದ ಶಿವಪಾದನ ಶಿಷ್ಯ. ಗದ್ದೆಗೇಯ್ತಾನೆ. ವೈದ್ಯ ಮಾಡ್ತಾನೆ. ಅವನ ಮನೆಗೆ ತಕ್ಕ ಗೃಹಣಿಗಾಗಿ ಹುಡುಕುತ್ತ ಬಂದೆವು. ಮನೆ ಸಾಗಿಸೋದು ರಾಜ್ಯಭಾರ ಮಾಡೋದಕ್ಕಿಂತ ಕಠಿಣ. ಶಿವ ಮೆಚ್ಚಿ ಹೌದಂಬೋ ಹಾಗೆ ಮನಿತನ ನಡೆಸಬೇಕಾದರೆ ಅಂಥಾ ಕನ್ಯೆಯನ್ನು ಹ್ಯಾಂಗೆ ಆರಿಸೋದು? ಅದಕ್ಕೆ ಅವನಬ್ಬೆ ಒಂದು ನಿಯಮ ಹೇಳಿ ಕಳಿಸಿದಾಳೆ."

"ಅದೇನು ನಿಯಮ?"

-ಎಂದು ಯಾಂತ್ರಿಕವಾಗಿ ಕೇಳಿದಳಾದರೂ ಕಣ್ಣು ಮಿಟುಕಿಸದೆ ಆ ಎಳೆಯನ ತೇಜಃಪುಂಜವಾದ ಮುಖ ಹಾಗೂ ತೂಗಾಡುವ ಬೆರಳನ್ನೇ ನೋಡುತ್ತಿದ್ದಳು ಚಿಕ್ಕಮ್ಮಣ್ಣಿ. ಚಂಡೀದಾಸ ನಿನ್ನಡಿಯ ಶಲ್ಯದಲ್ಲಿದ್ದ ಗಂಟು ತೋರಿಸಿ,

"ಇದು ಗಂಧಶಾಳೀ ಭತ್ತ. ಇಷ್ಟನ್ನೇ ಉಪಯೋಗಿಸಿ ನಿಮ್ಮ ಮೊಮ್ಮಗಳು ಅಡಿಗೆ ಮಾಡಿ ವರನಿಗೆ ಬಡಿಸುವುದು ಸಾಧ್ಯವಾದರೆ...."

"ಇದಿಷ್ಟರಲ್ಲೇ?"

"ಹೌದು ಇಷ್ಟರಲ್ಲೇ ಆಗಬೇಕು; ಅವನಿಗೆ ತೃಪ್ತಿಯೂ ಆಗಬೇಕು."

ಅಷ್ಟರಲ್ಲಿ ಇಬ್ಬರು ರೋಗಿಗಳು ಇವರಿದ್ದಲ್ಲಿಗೇ ಬರತೊಡಗಿದರು. ಈಗ ನಿನ್ನಡಿ ಚಿಕ್ಕಮ್ಮಣ್ಣಿಗೆ ಪುನಃ ಆರನೆ ಬೆರಳು ತೋರುವಂತೆ ನಮಸ್ಕರಿಸಿ ಹಿಂದೆ ಹೋಗಿ ಜನರನ್ನು ಸೇರಿಕೊಂಡ.

"ಈ ಬಗ್ಗೆ ಗೌರಿಯಲ್ಲಿ ಒಂದು ಮಾತು ಕೇಳುವುದು ಒಳ್ಳೆಯದಲ್ಲವೆ?"

"ಹೌದು ಅಡಿಗೆ ಮಾಡೋಳು ಅವಳಾದ್ದರಿಂದ ಕೇಳುವುದು ಉಚಿತ."

-ಎಂದು ಚಂಡೀದಾಸನೂ ಹೇಳಿದ. ಚಿಕ್ಕಮ್ಮಣ್ಣಿ ಕುತೂಹಲ ತಾಳದೆ ಮೆಲ್ಲಗೆ ಕೇಳಿದಳು:

"ಈತನ ತಂದೆ ತಾಯಿ ಯಾರಪ್ಪಾ?"

"ತಾಯಿ ಬೆಳ್ಳಿ; ತಂದೆ ಜಟ್ಟಿಗ; ಶಿವಪಾದನ ಶಿಷ್ಯ ತಾಯಿ!"

"ಇವನು ಅವರ ಸಾಕು ಮಗನ? ಸ್ವಂತ ಮಗನ?"

“ಸ್ವಂತ ಮಗ...”

ಚಿಕ್ಕಮ್ಮಣ್ಣಿಯ ಉತ್ಸಾಹ ಧಸಕ್ಕನೆ ಕುಸಿಯಿತು. ಆರ್ದ್ರನೇತ್ರಳಾಗಿ ಆದರೂ ನಂಬಿಕೆ ಕಳೆದುಕೊಳ್ಳದೆ,

“ನಿನ್ನಡಿ ಅಂದರೆ ಆತನ ಹೆಸರ ಅದು?”

“ಮುಂದಿನ ಶಿವಪಾದನಿಗೆ ಇಡುವ ಹೆಸರು ತಾಯಿ!”

ಚಿಕ್ಕಮ್ಮಣ್ಣಿ ಹೋದ ಮೇಲೆ ಚಂಡೀದಾಸ “ಹೋರಿ ಕಾಣುತ್ತಿಲ್ಲ” ಎನ್ನುತ್ತ ಹುಡುಕುವುದಕ್ಕೆ ಹೊರಗೆ ಬಂದಾಗ ಗೋಡೆ ಹಿಂಬದಿಯಲ್ಲಿ ಬೆಳೆದ ಎತ್ತರವಾದ ಹುಲ್ಲಿನಲ್ಲಿ ಹೋರಿ ನಿಂತಿತ್ತು. ಗೌರಿ ಎಳೆಯ ಹಸಿರು ಹುಲ್ಲನ್ನು ಆರಿಸಿ ಕಿತ್ತು ತಂದು ಅದು ತಿನ್ನುತ್ತಿದ್ದ ಬಲಿತ ಹುಲ್ಲನ್ನು ಕಿತ್ತೆಸೆದು ತಾನು ತಂದ ಎಳೇ ಹುಲ್ಲನ್ನು ತಿನ್ನಿಸುತ್ತಿದ್ದಳು. ಚಂಡೀದಾಸ ನೋಡಿ ಚಕಿತನಾದ.

ಹೋರಿಯೊಂದಿಗೆ ಏನೇನೋ ಮಾತಾಡುತ್ತ, ಹೆಚ್ಚು ತಿನ್ನಬೇಕೆಂದು ಬುದ್ಧಿ ಹೇಳುತ್ತ ಹುಲ್ಲು ತಿನ್ನಿಸುತ್ತಿದ್ದಳು. ಹೋರಿ ಕೂಡ ವಿಧೇಯ ಬಾಲಕನಂತೆ ಅವಳು ಹೇಳಿದ್ದಕ್ಕೆಲ್ಲ ಕತ್ತು ಹಾಕುತ್ತ ಕೊಟ್ಟಷ್ಟನ್ನೂ ತಿನ್ನುತ್ತಿತ್ತು. ಇಬ್ಬರ ಮಧ್ಯೆ ಆಗಲೇ ಪೂರ್ವ ಪರಿಚಯವೆಂಬಷ್ಟು ಸಲಿಗೆಯ ಸಂವಾದ ನಡೆದಿತ್ತು. ಚಂಡೀದಾಸ ನೋಡುತ್ತ ಬಹಳ ಹೊತ್ತು ಸುಮ್ಮನೆ ನಿಂತುಕೊಂಡ.

ಚಿಕ್ಕಮ್ಮಣ್ಣಿ ಮನೆಗೆ ಬಂದಾಗ ಉದ್ವಿಗ್ನಗೊಂಡಿದ್ದಳು. ಕೊರಳ ಸೆರೆ ತುಂಬಿ ಬಂದಿತ್ತು. ಆರ್ದ್ರವಾಗಿದ್ದ ಕಣ್ಣಂಚಿನಲ್ಲಿ ಕಣ್ಣೀರು ಸಂಗ್ರಹಗೊಂಡು ಎಣ್ಣೆಯಲ್ಲಿಯ ಸೊಡರಿನ ಹಾಗೆ ಕಣ್ಣು ಹೊಳೆಯತೊಡಗಿದ್ದವು. ಏನಾಯಿತೆಂದು ರವಿ ಆದಮೇಲೆ ಛಾಯಾದೇವಿ ಮತ್ತೆ ಮತ್ತೆ ಕೇಳಿದರೂ ಭಾವೋದ್ವೇಗವನ್ನು ನುಂಗಿಕೊಂಡು ತಡವಾಗಿ ನಿಧಾನವಾಗಿ ಹೇಳಿದಳು:

“ಹುಡುಗ ಕನ್ಯಾಪರೀಕ್ಷೆ ಮಾಡಬೇಕಂತೆ. ಪರೀಕ್ಷೆಯಲ್ಲಿ ಉತ್ತೀರ್ಣಳಾದರೆ ಮಾತ್ರ ಮದುವೆಯಂತೆ.”

-ಎಂದು ಹೇಳಿ ಬೆವರೊರಿಸಿಕೊಂಡಳು. ಹೋಗಿ ಬಂದು ಆಯಾಸವಾಗಿರಬೇಕೆಂದುಕೊಂಡು ರವಿ ಹೇಳಿದ:

“ಪರೀಕ್ಷೆ ಅಂದರೆ ನೀನ್ಯಾಕಜ್ಜಿ ಆತಂಕ ಪಡಬೇಕು? ಆಗೋದಿಲ್ಲ ಅಂದರಾಯ್ತು.”

ಚಿಕ್ಕಮ್ಮಣ್ಣಿ ತನಗಿದು ಕೇಳಿಸಲಿಲ್ಲವೆಂಬಂತೆ-

“ಪರೀಕ್ಷೆ ಅಂದರೆ ಅಂತಿಂಥದಲ್ಲ ಕಣಪ್ಪ. ಐದು ಬೊಗಸೆ ಗಂಧಶಾಳಿ ಭತ್ತ ಕೊಡ್ತಾನಂತೆ. ಅಷ್ಟರಲ್ಲೇ ಗೌರಿ ಅಡಿಗೆ ಮಾಡಿ ಅವನಿಗೆ ತೃಪ್ತಿಯಾಗುವಂತೆ ಬಡಿಸಬೇಕಂತೆ. ಅಂದರೆ ಆಗೋ ಮಾತ ಇದು?”

-ಎನ್ನುತ್ತ ರವಿಯನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು. ರವಿಗೆ ಗೊಂದಲವಾಯಿತು. ಸೇವಕರಾದಿಯಾಗಿ ಇಡೀ ಬಳಗ ಗೊಂದಲದಲ್ಲಿ ಅದ್ದಿಹೋಯಿತು. ಇದರ ಹಿಂದೇನೋ ಇರಬೇಕೆಂದು ರವಿ, ಛಾಯಾದೇವಿ ಇಬ್ಬರೂ ವಿಷಯ ತಿಳಿಯಲು ಕಾತರತೆಯಿಂದ ಏನು? ಯಾಕೆ? ಎಂಬಿತ್ಯಾದಿ ಹಲವಾರು ಪ್ರಶ್ನೆಗಳನ್ನು ಕೇಳಿದರು. ಚಿಕ್ಕಮ್ಮಣ್ಣಿ ದೃಢತೆಯನ್ನ ಒತ್ತಾಯದಿಂದ ತಂದುಕೊಳ್ಳಲು ಯತ್ನಿಸಿದಳಾದರೂ ಅವಳ ಮುಖದ ಮೇಲೆ ಯಾತನೆ ತಾಂಡವವಾಡುತ್ತಿದ್ದು ಮುತ್ತುಗಳಂಥ ಕಣ್ಣೀರು ಸುರಿಸುತ್ತಿದ್ದಳು. ಕೊನೆಗೆ ಮೂಲೆಯಲ್ಲಿದ್ದ ಜಯರಾಣಿ ಬಂದು ಚಿಕ್ಕಮ್ಮಣ್ಣಿಯನ್ನು ರವಿಯಿಂದ ಬಿಡಿಸಿ ತಾನು ತಬ್ಬಿಕೊಂಡು ಸಮಾಧಾನ ಮಾಡಲು ನೋಡಿದಳು. ಯಾರೆಷ್ಟು ಪ್ರಯತ್ನಿಸಿದರೂ ಅವಳು ಬಾಯಿಬಿಡಲಿಲ್ಲ. ಸರಿಪಡಿಸಲಾರದಷ್ಟು ಅವಳ ಮುಖ ಕೆಟ್ಟಿತ್ತು.

"ಅಷ್ಟರಲ್ಲಿ ಅಜ್ಜೀ ಅಜ್ಜೀ ಚಂಡೀದಾಸ ತಾತಾ ಬಂದಿದ್ದಾನೆ!" ಎಂದು ಹೇಳುತ್ತ ಗೌರಿ ಬಂದಳು. ಈ ದೃಶ್ಯದಲ್ಲಿ ಮುದ್ದು ಇಲ್ಲದ್ದನ್ನ ಈ ತನಕ ಯಾರೂ ಗಮನಿಸಿರಲಿಲ್ಲ. ತಕ್ಷಣ ಎಲ್ಲರೂ ಗೌರಿಯ ಕಡೆಗೆ ನೋಡಿದರು. ಕಣ್ಣು ಬೆಳಕನ್ನ ಮೆಲುಕಾಡಿಸುತ್ತಿವೆ! ಮುಖದಲ್ಲಿ ಕೋಮಲವಾದ ಕಾಂತಿ ಹೊಳೆಯುತ್ತಿದೆ. ಉಡಿಯಲ್ಲಿ ಏನನ್ನೋ ಜತನವಾಗಿ ಹಿಡಿದುಕೊಂಡು ಬಂದಿದ್ದಾಳೆ! ಎಲ್ಲರನ್ನು ಮುಗುಳುನಗೆಯಲ್ಲಿ ಮೀಯಿಸುತ್ತ "ಚಂಡೀದಾಸ ತಾತಾ ಬಂದಾನಜ್ಜೀ" ಎಂದು ಇನ್ನೊಮ್ಮೆ ಹೇಳಿದಳು. ಚಿಕ್ಕಮ್ಮಣ್ಣಿ ಉತ್ಸುಕತೆಯಿಂದ,

"ನೀನು ದೇವಾಲಯದಿಂದ ಬಂದೆಯಾ ಮುದ್ದು?"

ಎಂದಳು. ಮುದ್ದು ಉತ್ಸಾಹದಿಂದ ಹೇಳಿದಳು:

"ಹೌದು."

"ಅವರನ್ನು ಭೇಟಿಯಾಗಿ ಬಂದೆಯಾ?";

"ಹೌದು."

"ಉಡಿಯಲ್ಲಿ ಅದೇನು?"

"ಗಂಧಶಾಳೀ ಭತ್ತ! ಚಂಡೀದಾಸ ತಾತಾ ಕೊಟ್ಟ. ಇದಿಷ್ಟೇ ಭತ್ತದಲ್ಲಿ ವರನಿಗೆ ಅಡಿಗೆ ಮಾಡಿ ಹಾಕಬೇಕಂತೆ."

ರವಿ ಸುಮ್ಮನಿರಲಿಲ್ಲ. ಮುಂದೆ ಬಂದು ಕೊಂಚ ಕೋಪದಿಂದಲೇ ಕೇಳಿದ:

"ನಿನಗಿದು ಒಪ್ಪಿಗೆಯೇ ಮದ್ದು?"

"ಓಹೊ! ಆರು ಬೆರಳಿನ ಹುಡುಗನನ್ನ ಕನಸಿನಲ್ಲಿ ನಾಕುಬಾರಿ ಕಂಡಿದ್ದೇನಪ್ಪ! ಅವನ ಹೋರಿಯನ್ನ ಕೂಡ ನಾನು ಬಲ್ಲೆ. ಅಜ್ಜಿಗೆ ಹೇಳಿದರೆ 'ಅದೆಲ್ಲಿ ಹೋರಿಯ ಕಂಡೆ ಮಾರಾಯಳೆ?' ಅಂದಿದ್ದಳು.

ತಕ್ಷಣ ಚಿಕ್ಕಮ್ಮಣ್ಣಿಗೆ ಇವಳು ಹೋರಿಯ ಕನಸು ಹೇಳಿದ್ದು ನೆನಪಾಗಿ ಮೈತುಂಬ ನವಿರೆದ್ದವು. ತಾಳ್ಮೆ ಕಳೆದುಕೊಂಡ ರವಿ,

"ನೀನ್ಯಾಕೆ ಅವರನ್ನ ಮನೆಗೆ ಕರೀಲಿಲ್ಲ?"

"ಕನ್ಯಾರ್ಥಿಯಾಗಿ ಬಂದಿದ್ದೇವೆ, ದೇವಾಲಯದಲ್ಲೇ ಇರ್ತೇವೆ ಅಂದರಪ್ಪ."

"ಅವರ ಕರಾರು ನಿನಗೆ ಒಪ್ಪಿಗೆಯೊ?"

"ಒಪ್ಪಿಕೊಂಡೇ ಅವರು ಕೊಟ್ಟ ಭತ್ತ ತಂದಿದ್ದೇನೆ."

"ಇಷ್ಟೇ ಭತ್ತದಲ್ಲಿ ಅವರು ಹೇಳಿದಂತೆ ಮಾಡುತ್ತೀಯ ಮದ್ದು?"

“ಮಾಡ್ತೀನೋ, ಇಲ್ಲವೋ ನೀನೇ ನೋಡುತ್ತ ಕೂತಿರಣ್ಣ.”

“ಆಯ್ತು ಪರೀಕ್ಷೆಯಲ್ಲಿ ಗೆದ್ದೆ ಎಂದೇ ಇಟ್ಟುಕೊಳ್ಳೋಣ. ನೀನು ಅವರ ಆ ಹಟ್ಟಿಗೆ ಹೋಗಿ ಇರ್ತೀಯಾ?”

“ಓಹೋ!”

-ಎಂದು ಹೇಳಿ ಗೆಲುವಿನ ನಗೆ ಬೀರುತ್ತ ಅಡಿಗೆ ಮನೆಗೆ ನಡೆದಳು ಗೌರಿ. ಚಿಕ್ಕಮ್ಮಣ್ಣಿ ಕೂಡ ಕಣ್ಣಗಲ ಮಾಡಿಕೊಂಡು ಗೌರಿಯ ಕಡೆಗೇ ನೋಡುತ್ತ ಕುಸಿದಳು. ಸೂತ್ರಹರಿದ ಘಟನಾವಳಿಯ ಒಂದೆಳೆಯೂ ಅರ್ಥವಾಗದ ತಾಳ್ಮೆಗೆಟ್ಟು ರವಿ ದೇವಾಲಯಕ್ಕೆ ನಡೆದ.

ದೇವಾಲಯಕ್ಕೆ ಬಂದು ನೋಡಿದರೆ ಬಿಳಿಗಿರಿಯವರೇ ಸುಮಾರು ಹತ್ತೆಂಟು ಜನ ಒಬ್ಬ ತರುಣನ ಸುತ್ತ ಸೇರಿದ್ದಾರೆ; ತರುಣ ಒಬ್ಬೊಬ್ಬರದೇ ನಾಡೀ ಹಿಡಿದು ಪರೀಕ್ಷಿಸಿ ಮದ್ದುಕೊಡಲು ಚಂಡೀದಾಸನಿಗೆ ಸಲಹೆ ಕೊಡುತ್ತಿದ್ದಾನೆ! ತರುಣನ ಆಕಾರ ತಕ್ಷಣ ಇವನ ಮನಸ್ಸನ್ನು ಸೂಜಿಗಲ್ಲಿನಂತೆ ಸೆಳೆಯಿತು. ಸೊಂಟಕ್ಕೊಂದು ಬಿಳಿಯ ಬಟ್ಟೆ ಸುತ್ತಿಕೊಂಡು ಅಂಥದೇ ಇನ್ನೊಂದು ತುಂಡನ್ನು ತಲೆಗೆ ಸುತ್ತಿಕೊಂಡಿದ್ದ. ಅಜಾನುಬಾಹು, ಹಾಗೇ ಉನ್ನತಾಕಾರದ ತರುಣನ ಆಕೃತಿಗೆ ರವಿ ಮಾರುಹೋದ. ನೀಳವಾದ ಮೂಗು, ದೊಡ್ಡ ಕಣ್ಣು ಉಲ್ಲಾಸದಿಂದ ಅವನ ಮುಖ ಕಳೆಕಳೆಯಾಗಿತ್ತು. ತನ್ನ ವೈದ್ಯವಿದ್ಯೆಯ ಬಗ್ಗೆ ಅಪಾರವಾದ ವಿಶ್ವಾಸ ಹೊಂದಿದ್ದ. ರೋಗಿಯನ್ನು ನೋಡುವಾಗ ಮುಗುಳುನಗುತ್ತಿದ್ದ ಮತ್ತು ಆ ನಗೆಯಲ್ಲಿ ಪ್ರಸನ್ನತೆ ಇತ್ತು. ಯೌವನದ ಸಂಪನ್ನತೆಯಿಂದ ಕೂಡಿದ ಅವನ ಒಟ್ಟಾರೆ ನಿಲುವು, ನೋಟ, ನಾಡಿ ನೋಡುವ ರೀತಿ ಇವೆಲ್ಲ ನಾಗರಿಕರಿಗೆ ಅಪರಿಚಿತವಾದ ಒಂದು ಒರಟು ಪ್ರಾಣಿಗೆ ಸಮೀಪದವಾಗಿ ಕಾಣುತ್ತಿದ್ದವು.

ನಿನ್ನಡಿಯ ಪಕ್ಕದಲ್ಲಿ ಕೂತಿದ್ದ ಚಂಡೀದಾಸ ರವಿಯನ್ನು ಕರೆದು ಪಕ್ಕದಲ್ಲಿ ಕೂರಿಸಿಕೊಂಡು ಮೆಲ್ಲಗೆ ಹೇಳಿದ:

“ಇವನೇ ನಿನ್ನಡಿ, ಶಿವಪಾದನ ಶಿಷ್ಯ. ನಾನೂ ನಿಮ್ಮಪ್ಪನೂ ಶಿವಪಾದನ ಶಿಷ್ಯರೇ. ಆದರೆ ಇವನ ವಿದ್ಯೆ, ನಿಷ್ಠೆ, ತಪಸ್ಸಿನ ಮುಂದೆ ನಾವ್ಯಾರೂ ಅಲ್ಲ.”

ಅಷ್ಟೇ ಮೆಲ್ಲಗೆ ರವಿ ಕೇಳಿದ:

“ಅದು ಸರಿ ಚಂಡೀದಾಸರೇ, ಇವನು ವೈದ್ಯ ಅಂತ ಬಿಳಿಗಿರಿ ಜನಕ್ಕೆ ಹೇಗೆ ಗೊತ್ತಾಯಿತು.?”

“ಬಿಳಿಗಿರಿಯ ಕೆಲವು ಸಾಮಾನ್ಯ ಜನ ಅಮ್ಮನ ಭಕ್ತರು ಸ್ವಾಮೀ….”

ಆಮೇಲೆ ರವಿ ಇನ್ನಷ್ಟು ಚಂಡೀದಾಸನ ಹತ್ತಿರ ಸರಿದು ಪಿಸುದನಿಯಲ್ಲಿ ಕೇಳಿದ:

“ನಿಮ್ಮ ಗಂಧಶಾಳಿ ಭತ್ತದ ಕತೆಯೇನು? ಕನ್ಯೆಯನ್ನಾರಿಸಲಿಕ್ಕೆ ಈ ತನಕ ಇಂಥ ಪರೀಕ್ಷೆ ಯಾರೂ ಮಾಡಿಲ್ಲ, ಅಲ್ಲವೆ?”

“ನಿಜ ಯಾರೂ ಮಾಡಿಲ್ಲ. ಒಂದು ದಿನ ಶಿವಪಾದ ಇವನನ್ನು ಕರೆದು, ‘ಅಪಾರ ಚಿನ್ನವನ್ನ ಬೇಡುವ ಸಾಮ್ರಾಜ್ಯ ಬೇಕೋ? ಐದು ಬೊಗಸೆ ಭತ್ತದಲ್ಲೇ ನಡೆಸುವ ಮಿತವ್ಯಯದ ಜೀವನ ಬೇಕೊ?’ ಅಂತ ಕೇಳಿದ. ಅದಕ್ಕೆ ಇವನು ಸೇರುಭತ್ತದಲ್ಲಿ ನಡೆಸುವ ಮಿತವ್ಯಯದ ಜೀವನ ನನಗಿಷ್ಟ” ಅಂದ. ಹಾಗಿದ್ದರೆ ಐದು ಬೊಗಸೆ ಭತ್ತದಲ್ಲೇ ನಿನಗೆ ಸಂತೃಪ್ತಿಯಾಗುವಂಥ ಅಡಿಗೆ ಮಾಡಿ ಹಾಕುವ ಕನ್ಯೆಯನ್ನು ಮದುವೆಯಾಗು ಅಂದ. ಅಂಥ ಮಡದಿಯ ಹುಡುಕಾಟವಿದು.”

“ಅಂಥವಳು ಸಿಗದಿದ್ದರೆ?”

“ಈತನಿಗೆ ಮದುವೆಯಿಲ್ಲ.”

* * *

ಇತ್ತ ಗೌರಿ ಶುದ್ಧಕ್ಕೆ ಜಳಕವ ಮಾಡಿ, ಮಡಿಯುಟ್ಟು ಅಡಿಗೆ ಮಾಡಲು ಸುರುಮಾಡಿದ್ದಳು. ಚಂಡೀದಾಸ ಕೊಟ್ಟ ಭತ್ತವನ್ನು ಕುಟ್ಟಿ ತೌಡು ಮತ್ತು ಅಕ್ಕಿ ಬೇರ್ಪಡಿಸಿ ತೌಡನ್ನ ಅಕ್ಕಸಾಲಿಗೆ ಮಾರಿ ಬಂದ ದುಡ್ಡಿನಲ್ಲಿ ಅಡಿಗೆ ಪಾತ್ರೆ ಪರಿಯಾಣ ಕೊಂಡಳು. ಅಕ್ಕಿ ಕುದಿಯಲಿಟ್ಟು ಅನ್ನವಾದ ಮೇಲೆ ಅದರ ಗಂಜಿಗೆ ಹಿತ್ತಲಲ್ಲಿಯ ಮೆಣಸು ಸೊಪ್ಪು ತಂದು ಹಸಿರು ಸಾರು, ಪಲ್ಯ ಮಾಡಿದಳು. ನಾಲ್ಕು ಬಾಳೆಯೆಲೆ ತಂದು “ಅಣ್ಣಾ ಅವರನ್ನ ಕರೆದುಕೊಂಡು ಬಾ” ಎಂದಳು.

ಚೈತನ್ಯ ಉತ್ಸಾಹಗಳಿಂದ ಕಳಕಳಿಸುತ್ತಿದ್ದ ಗೌರಿಯನ್ನು ನೋಡಿ ಚಿಕ್ಕಮ್ಮಣ್ಣಿ ಮತ್ತು ಛಾಯಾದೇವಿಯವರ ಮುಖಗಳು ಅರಳಿದವು. ಅಜ್ಜಿ ಮುಂದೆ ಬಂದು ಸೊಗಸಾದ ಪಟ್ಟೆ ಸೀರೆಯುಡಿಸಿ ರವಿಕೆ ತೊಡಿಸಿದಳು. ಬಂಗಾರದ ಬಾಚಣಿಕೆಯಿಂದ ತಲೆ ಬಾಚಿ ಬಲಮುಡಿಕಟ್ಟಿ ಚೆಲುವ ಚೆಲ್ಲುವ ಪರಿಮಳದ ಹೂ ಮುಡಿಗಿಡಿದಳು. ಮುತ್ತಿನ ಬೈತಲೆ ಎಣ್ಣೆ ಓಲೆ ಎಸಳು ಬುಗುಡಿಯಿಟ್ಟು ಬಂಗಾರದಲ್ಲಿ ಸಿಂಗಾರ ಮಾಡಿದಳು. ನೊಸಲಿಗೆ ಚಿಕ್ಕೆ ಬೊಟ್ಟಿಟ್ಟು ಕಣ್ಣಿಗೆ ಕಾಡಿಗೆ ಗೆರೆಯೆಳೆದು ಎದುರು ಕನ್ನಡಿ ಹಿಡಿದಳು. ಗೌರಿ ಕನ್ನಡಿಯಲ್ಲಿ ಸೊಬಗ ನೋಡಿಕೊಂಡು ಮುಡಿದ ಹೂಗಳ ಮುಟ್ಟಿನೋಡಿಕೊಂಡು ಊಟಕ್ಕೆ ನೀಡಲು ಬಂದಾಗ ಅಡಿಗೆ ಮನೆಗೆ ಬೆಳಕೇ ಪ್ರವೇಶಿಸಿದಂತಾಯ್ತು.

ನಾಲ್ಕು ಬಾಳೆ ಎಲೆ ಹಾಕಿ, ಹಾಕಿದ ಎಲೆಗೆ ನೀರಿನ ಹನಿ ಚಿಮುಕಿಸುವಷ್ಟರಲ್ಲಿ ನಿನ್ನಡಿ ಒಬ್ಬನೇ ಬಂದು ಎಲೆ ಮುಂದೆ ಕೂತ. ಸೇವಕ, ಸೇವಕಿಯರು ನಿನ್ನಡಿಯನ್ನು ನೋಡಲು ಒಬ್ಬರನ್ನೊಬ್ಬರು ನೂಕಾಡಿ, ತಳ್ಳಿ ತುದಿಗಾಲಲ್ಲಿ ನಿಂತು ಮುಂದಿನವರ ಭುಜದ ಮ್ಯಾಲಿಂದ ಕಣ್ಣು ಹಾಯಿಸಿ ನೋಡುತ್ತ ನಿನ್ನಡಿ ಗೌರಿಯರ ಜೋಡಿಯನ್ನು ಕಣ್ಣಿನಿಂದಲೇ ತೂಗಿ ಮೆಚ್ಚುತ್ತಿದ್ದರು. ಇನ್ನೊಂದು ತುದಿಗೆ ಚಿಕ್ಕಮ್ಮಣ್ಣಿ ಮತ್ತು ಛಾಯಾದೇವಿಯವರು ಹೆಮ್ಮೆ ಹರ್ಷಗಳಿಂದ ಗೌರಿಯನ್ನು ನೋಡುತ್ತಿದ್ದರು. ರವಿ, ಕುರುಮುನಿ ಮತ್ತು ಚಂಡೀದಾಸರು ಹೊರಗಿದ್ದರು. ತನ್ನ ಸುತ್ತ ನಡೆಯುತ್ತಿದ್ದುದನ್ನು ನಿನ್ನಡಿ ಗಮನಿಸಿದಂತೆ ಕಾಣಲಿಲ್ಲ.

ಎಲೆ ಮುಂದೆ ಕೂತವರನ್ನು ಹೆಚ್ಚು ಹೊತ್ತು ಕಾಯಿಸಬಾರದೆಂದು ಗೌರಿ ಬಡಿಸತೊಡಗಿದಳು. ಮುತ್ತಿನ ಬಣ್ಣದ ಅನ್ನ, ಪಚ್ಚೆಬಣ್ಣದ ಸಾರು ಬಡಿಸಿದಳು. ಆಮೇಲಾಮೇಲೆ ಒಂದೊಂದು ಭಕ್ಷ್ಯವನ್ನು ಬಡಿಸುವಾಗಲೂ ಕಾತರತೆಯಿಂದ ಅತಿಥಿಯ ಮುಖದ ಕಡೆಗೆ ಕಣ್ಣು ಹಾಯಿಸುತ್ತಿದ್ದಳು. ತನ್ನ ಲೆಕ್ಕ ಎಲ್ಲೋ ತಪ್ಪಿದೆಯೆಂಬುದನ್ನು ಆಕೆ ತಿಳಿದಿದ್ದಳು. ಮತ್ತು ಕೊನೆಯ ಕ್ಷಣದಲ್ಲಾದರು ಅದು ಸರಿ ಹೋಗಲೆಂದು ಅದೇನೆಂದು ಅವಳಿಗೂ ಅಂದಾಜುಗಲಿಲ್ಲ. ನಿನ್ನಡಿ ಮಾತ್ರ ಇದ್ಯಾವುದನ್ನೂ ಗಮನಿಸದೆ ಆನಂದವನ್ನುಂಡಂತೆ ಘನವಾದ ಭೋಜನ ಪೂರೈಸಿ ಎದ್ದ! ಆದರೆ ಊಟ ನೀಡಿದ ಗೌರಿ ಮುಖ ಗಂಟು ಹಾಕಿದ್ದಳು.

ಗೌರಿಯ ಪರೀಕ್ಷೆಯಲ್ಲಿ ಅವಳ ವಿನಾ ಅವಳ ಬಳಗದ ಯಾರಿಗೂ ಆಸಕ್ತಿಯಿರಲಿಲ್ಲ. ಯಾಕಂತಿರೋ? ಹುಡುಗ ರಾಜನಲ್ಲ, ಶಿವಾಪುರ ರಾಜಧಾನಿಯಲ್ಲ, ಅದೊಂದು ಚಿಕ್ಕಹಟ್ಟಿ. ಇಷ್ಟಾಗಿ, ಇವರಾಗಿ ಕನ್ನೆಯನ್ನು ತೋರಿಸಿದವರೂ ಅಲ್ಲ. ನಮಗೆ ಒಪ್ಪಿಗೆಯಿಲ್ಲವೆಂದು ಸೌಜನ್ಯದಿಂದ ಹೇಳಿದರಾಯಿತೆಂದು ಅಂದುಕೊಂಡರು. ಚಿಕ್ಕಮ್ಮಣ್ಣಿಗೆ ಮಾತ್ರ ಇವನ ಮೂಲದ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲ ಇತ್ತು. ತಾಯಿ ಹೇಳಿದ್ದರಲ್ಲಿ ಛಾಯಾದೇವಿಗೆ ನಂಬಿಕೆಯಾಗಲಿಲ್ಲ. ಚಿಕ್ಕಮ್ಮಣ್ಣಿ ಮೆಲ್ಲಗೆ ಹೊರಗಿನ ಮೊಗಸಾಲೆಗೆ ಬಂದಳು. ಹಿಂದಿನಿಂದ ಛಾಯಾದೇವಿ, ಗೌರಿ-ಅವರೂ ಬಂದರು.

ಚಂಡೀದಾಸನೊಂದಿಗೆ ನಿನ್ನಡಿ ಸುಗ್ಗಿಕಾಲದ ಹಗಲಿನಂತೆ ಸಂತೃಪ್ತಿಯಿಂದ ನಗುತ್ತಿದ್ದ. ಚಂಡೀದಾಸ, ಕುರುಮುನಿ ಕೂಡ ಸಂಭ್ರಮದಲ್ಲಿದ್ದರು. ಚಿಕ್ಕಮ್ಮಣ್ಣಿಯನ್ನು ನೋಡಿ ನಿನ್ನಡಿ ಎದ್ದು ಬಂದು ಅವಳೆದುರು ಕೈಮುಗಿದು ನಿಂತುಕೊಂಡು,

"ಅಬ್ಬೆ, ನನಗೆ ಹೊಟ್ಟೆತುಂಬಿ ತೃಪ್ತಿ ಆಯ್ತಬೆ, ನಿನ್ನ ಕೂಸನ್ನ ಒಪ್ಪಿದೀನಿ."

-ಅಂದ. ಉಳಿದವರ ಯಾವ ಸ್ಪಂದನೆಗೂ ಅವಕಾಶ ಕೊಡದೆ ಗೌರಿ ಸೀದಾ ಮುಂದೆ ಬಂದು ಉದ್ವೇಗದ ದನಿಯಲ್ಲಿ,

"ಆದರೆ ನಾನು ಒಪ್ಪಲಿಲ್ಲ!" ಎಂದಳು.

ಗೌರಿಯ ಮಾತು ಕೇಳಿ ಎಲ್ಲರಿಗೂ ಆಶ್ಚರ್ಯವಾಗಿ ಅವಳ ಕಡೆಗೆ ನೋಡಿದರು.

ವಧುವನ್ನು ಒಪ್ಪಿದೆನೆಂದು ವರ, ವರನನ್ನು ಒಪ್ಪಲಿಲ್ಲವೆಂದು ವಧು ಅವರವರೇ ಹೇಳುತ್ತಿದ್ದಾರೆಯೇ ಶಿವಾಯಿ ಯಾರೂ ಇವರ ಅಭಿಪ್ರಾಯ ಕೇಳಿರಲಿಲ್ಲ. ಅದೆಲ್ಲ ಹಿರಿಯರ ಹಿರಿತನದಲ್ಲಿ ನಡೆಯಬೇಕಾದ ವ್ಯವಹಾರವಲ್ಲವೆ? ಇವರಿವರೇ ಸುರುಮಾಡಿದ್ದನ್ನ ಹಿರಿಯರು ಮಕ್ಕಳಾಟದ ಹಾಗೆ ಗಮನಿಸಿದರೇ ಹೊರತು ಗಂಭೀರವಾಗಿ ಪರಿಗಣಿಸಲೇ ಇಲ್ಲ.

ಮೊಗಸಾಲೆಯ ಅಂಚಿನಲ್ಲಿ ಹಿಂದೆ ಕೈಕಟ್ಟಿಕೊಂಡು ಹುಬ್ಬು ಗಂಟಿಕ್ಕಿ ಆಲೋಚಿಸುತ್ತ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದ ರವಿ ಏನೋ ಆಗಬಾರದ್ದು ಆಯಿತೆಂದು ಅವಸರದಲ್ಲಿ ತಂಗಿಯನ್ನು ನೋಡಲು ಒಳಗೆ ಬಂದ. ಚಿಕ್ಕಮ್ಮಣ್ಣಿಗೆ ಏನು ಎತ್ತ ತಿಳಿಯದೆ ಸಂದರ್ಭಸೂತ್ರ ಹರಿದು ತುಂಡಾದಂತೆನಿಸಿ "ಏನಂದೆ ಮುದ್ದು?" ಎಂದಳು. ತಿಳಿಯಾದ ಬೆಳಕಿನಿಂದ ಗೌರಿಯ ಕಣ್ಣು ಹೊಳೆಯುತ್ತಿದ್ದವು. ಅವಳ ಮುಖ ಪರಿಪಕ್ವವಾದ ಸದಸದ್ವಿವೇಕದಿಂದ ಕಾಂತಿಗೊಂಡಿತ್ತು. ಚಿಕ್ಕಮ್ಮಣ್ಣಿಯನ್ನು ಕುರಿತು ಹೇಳಿದಳು:

"ನಾನು ವರನನ್ನ ಒಪ್ಪಿಕೊಳ್ಳಲಿಲ್ಲವೆಂದು ಹೇಳಜ್ಜಿ."

ಚಂಡೀದಾಸ ಕುರುಮುನಿ ಇರಲಿ, ರವಿ, ಛಾಯಾದೇವಿಗೂ ಗೌರಿಯ ಧೈರ್ಯದ ಮಾತುಗಳಿಂದ ಆಘಾತವಾಯಿತು. ಮಗುವಿನಂತೆ ತೃಪ್ತಿಯಿಂದ ಹಸನ್ಮುಖಿಯಾಗಿದ್ದ ನಿನ್ನಡಿಯ ಮುಖ ನಿಸ್ತೇಜವಾಯಿತು. ಗೌರಿಯನ್ನೇ ನೋಡುತ್ತ ಅವಳ ಮಾತು ಕೇಳಿ ನಾಚಿಕೆಯಿಂದ ಅವನತಮುಖಿಯಾದ ನಿನ್ನಡಿ ಬಹಳ ಹೊತ್ತಿನ ತನಕ ಮುಖ ಮ್ಯಾಲೆತ್ತಲಿಲ್ಲ. ಉಳಿದವರೂ ಮಾತಾಡಲಿಲ್ಲ. ಎಲ್ಲರೂ ತನ್ನನ್ನೇ ನೋಡುತ್ತಿದ್ದಾರೆಂದು ಅನ್ನಿಸಿತು. ಮುಖ ಮ್ಯಾಲೆತ್ತಿದ್ದ! ಪಶ್ಚಾತ್ತಾಪದಿಂದ ಸುಟ್ಟ ಮುಖ ಮೋಡ ಮುಸುಕಿದ ಹುಣ್ಣಿಮೆ ಚಂದ್ರನಂತೆ ಬಾಡಿತ್ತು.

ಸರಿಯಾದ ಶಬ್ದಗಳಿಗಾಗಿ ತಡಕಾಡುತ್ತ ಆತುರಾತುರಾಗಿ "ಯಾಕ? ಯಾಕ?" ಅಂದ.

ಗೌರಿ ಸ್ಪಷ್ಟವಾಗಿ, ಆದರೆ ಗೌರವಪೂರ್ಣ ಸೌಜನ್ಯದಿಂದ ಹೇಳಿದಳು:

"ಸ್ವಾಮೀ, ನೀವು ಬಂದವರು ಮೂರು ಜನ. ಅವರನ್ನು ಬಿಟ್ಟು ನೀವೊಬ್ಬರೇ ಊಟಕ್ಕೆ ಕುಂತಿರಿ. ಇನ್ನೂ ಮೂರೆಲೆ ಯಾರಿಗಾಗಿ ಇವೆ? ಎಂದೂ ಚಿಂತಿಸಲಿಲ್ಲ. ನೀವೊಬ್ಬರೇ ಊಟಕ್ಕೆ ಕುಂತಿರಿ. ನೀಡಿದ ತಕ್ಷಣ ಊಟ ಮಾಡಿ ತೃಪ್ತಿಯಾಯಿತು; ಅಂದಿರಿ. ನಿಮ್ಮ ಮಡದಿಯಾಗಲಿದ್ದ ನನಗೆ ಏನಾದರೂ ಉಳಿದಿದೆಯೇ? ನೋಡಲಿಲ್ಲ. ಹೋರಿಗೆ ಮೇವು ಹಾಕಿಯಾಯಿತೇ ಅನ್ನಲಿಲ್ಲ. ನೀವೊಬ್ಬರೇ ಉಂಡು ತೃಪ್ತಿಯಾಯಿತೆಂದರೆ ಅದು ಮನೆತನವೆ? ಮನೆತನ ನಡೆಯೋದು ಇರೋದನ್ನೆಲ್ಲ ಒಬ್ಬರೇ ತಿನ್ನೋದರಿಂದಲ್ಲ; ಇರೋದನ್ನ ಇದ್ದವರೆಲ್ಲ ಹಂಚಿ ತಿನ್ನೋದರಿಂದ. ಹೋಗಿ ನಿಮ್ಮ ಅಬ್ಬೆಗೆ ಹೇಳಿ!"

ಕುರುಮುನಿ, ಚಂಡೀದಾಸರ ಮುಖಗಳು ವಿವರ್ಣವಾದವು. ನಾಚಿಕೆಯಿಂದ ನಿನ್ನಡಿ ಅವನತ ಮುಖನಾದ. ಸಂಸಾರ ನಿಭಾಯಿಸುವುದಕ್ಕೆ, ಬದುಕುವುದಕ್ಕೆ ಹೆಚ್ಚು ಉಪಯುಕ್ತವಾದ ಸೂತ್ರ ಇದೇ, ಅಬ್ಬೆ ಹೇಳಿದ್ದು ಸಾಲದು ಎಂದುಕೊಂಡ. ಈತನಕ ನಾವು ಅಂದುಕೊಂಡದ್ದು 'ಸಹನೌ ಭುನಕ್ತು' ಎಂದು. ಜತೆಗೂಡಿ ಊಟ ಮಡುವುದಷ್ಟೇ ಅಲ್ಲ; ಇದ್ದದ್ದನ್ನ ಎಲ್ಲರೂ ಹಂಚಿಕೊಂಡು ಉಂಬೋದು-ಹೆಚ್ಚಿನದೆಂದು ಹೇಳುತ್ತಿದ್ದಾಳೆ ಈ ಕೂಸು! "ಭಲೆ" ಅಂದು ಇನ್ನೇನು ಮೊಗಸಾಲೆಯಿಂದ ಒಳಗೆ ಹೋಗಲಿದ್ದ ಗೌರಿಯ ಮುಂದೆ ಹೋಗಿ ಅಡ್ಡಗಟ್ಟಿದ! ಚಕಿತರಾಗಿ ಎಲ್ಲರೂ ನೋಡುತ್ತಿದ್ದಾಗ ಅವಳ ಎದುರಿಗೆ ಮೊಳಕಾಲೂರಿ ಕೂತು, ತಪ್ಪು ಮಾಡಿದಂತೆ ಮೂರು ಸಲ ಕಿವಿ ಹಿಡಿದುಕೊಂಡು ಆಮೇಲೆ ಕೈಮುಗಿದು:

"ಕೂಸೇ ನೀ ಹೇಳಿದ್ದು ದೊಡ್ಡಮಾತು. ನಿನ್ನಂಥಾ ಜಾಣೆಯ ನಾ ಕಾಣೆ. ನನ್ನ ಸಣ್ಣತನವ ಹೊಟ್ಟೆಗೆ ಹಾಕ್ಕೊಂಡು, ದೊಡ್ಡ ಮನಸ್ಸು ಮಾಡಿ ನೀ ನನ್ನ ಮನೆ ತುಂಬಿದರೆ ಅದು ನನ್ನ ಭಾಗ್ಯ, ಶಿವಾಪುರದ ಭಾಗ್ಯ!"

-ಎಂದು ಹೇಳಿದ. ಅವನ ಈ ನಡೆಯನ್ನು ಯಾರೂ ಊಹಿಸಿರಲಿಲ್ಲ. ಚಿಕ್ಕಮ್ಮಣ್ಣಿ ಇರಲಿ, ಗೌರಿಗೂ ಆನಂದಾಶ್ಚರ್ಯಗಳಾಗಿ ಏನು ಹೇಳಬೇಕೆಂದು ತೋಚದೆ ನಾಚಿ, ಕೆನ್ನೆ ಕೆಂಪೇರಿ ಚಿಕ್ಕಮ್ಮಣ್ಣಿಯ ಹಿಂದೆ ಸರಿದಳು. ಈಗ ಗೌರಿ ತನ್ನ ಆಯ್ಕೆಯನ್ನು ಹೇಳಬೇಕು, ಅಥವಾ ಚಿಕ್ಕಮ್ಮಣ್ಣಿಯಾದರೂ ಅವಳ ಪರವಾಗಿ ಹೇಳಬೇಕು.

ಚಿಕ್ಕಮ್ಮಣ್ಣಿ ಸೌಜನ್ಯದಿಂದ

"ನಾವು ಮಾತಾಡಿಕೊಂಡು ನಾಳೆ ಬೆಳಿಗ್ಗೆ ಹೇಳಿದರಾಗದೆ?"

ಎಂದು ನಿನ್ನಡಿಗಂದಳು. ನಿನ್ನಡಿ "ಹಾಂಗೇ ಆಗಲೇಳು" ಎಂದು ಹೇಳಿ ಥಟ್ಟನೆದ್ದು ಹೊರಟ. ತಕ್ಷಣ ಗೌರಿ ಬಂದು "ಅಣ್ಣಾ, ಚಂಡೀದಾಸ ತಾತಾ, ಕುರುಮುನಿ ಇವರನ್ನು ಊಟಕ್ಕೆ ಕರೆದುಕೊಂಡು ನೀನೂ ಬಾ" ಅಂದಳು. ನಿನ್ನಡಿ ಪ್ರಸನ್ನನಾಗಿ "ಹೌಂದು! ಹೌಂದು!" ಎಂದು ತಲೆದೂಗಿದ.

ರವಿಕೀರ್ತಿ ಆಶ್ಚರ್ಯದ ಶಿಖರದ ತುದಿಗಿದ್ದವನು ಕೆಳಕ್ಕಿಳಿದಿರಲೇ ಇಲ್ಲ. ಗೌರಿ ಅಂದರೆ ಬಿಚ್ಚಿದ್ದ ತಲೆಗೂದಲು ಕಟ್ಟಲು ತಿಳಿಯದೆ ದಡ್ಡಿಯೆಂದು ಹಾಗೂ ಭಾವುಕ ಕನಸುಗಳಲ್ಲಿ ದಿನಗಳೆವ ಹಸುಳೆಯೆಂದು ತಿಳಿದಿದ್ದ. ಅವನ ತಿಳುವಳಿಕೆಯನ್ನು ಗೌರಿ ತನ್ನ ಜಾಣ್ಮೆ ವಿವೇಕಗಳಿಂದ ತಲೆಕೆಳಗು ಮಾಡಿದ್ದಳು. ರವಿ ಮಾತ್ರವಲ್ಲ ಎಲ್ಲರೂ ಅವಳ ಕಾರ್ಯ ನೈಪುಣ್ಯ, ಸಮಯಪ್ರಜ್ಞೆಗಳನ್ನು ಮೆಚ್ಚಿಕೊಂಡಿದ್ದರು. ನಿನ್ನಡಿಯ ಜೊತೆ ಜವಾಬ್ದಾರಿಯಿಂದ, ವಿವೇಕದಿಂದ ಮಾತಾಡಿದ್ದಳು. "ಸಹನೌ ಭನುಕ್ತು" ಎಂಬ ಆದರ್ಶಕ್ಕಿಂತ ಇದ್ದುದನ್ನು ಎಲ್ಲರೂ ಹಂಚಿಕೊಂಡು ತಿನ್ನಬೇಕೆಂಬ ಅವಳ ಮಾತು ಹೆಚ್ಚು ಉಚಿತ ಮತ್ತು ಯೋಗ್ಯವಾದುದಾಗಿತ್ತು. ಇಂಥ ಒಂದು ದರ್ಶನವನ್ನು ತನ್ನ ಪುಟ್ಟ ತಂಗಿ ಹೇಳಿದ್ದಕ್ಕೆ ಅವಳ ಬಗ್ಗೆ ಭಾರಿ ಅಭಿಮಾನ ಮೂಡಿತು. ಇಬ್ಬರದೂ ಅನುಪಮ ಜೋಡಿ ಎಂಬ ತೀರ್ಮಾನಕ್ಕೆ ರವಿ ಬಂದ.

ಗೌರಿಗೆ ನಿನ್ನಡಿ ಇಷ್ಟವಾದ. ಅವನನ್ನು ನೋಡಿದಾಗಿನಿಂದ ಚೈತನ್ಯ ಉತ್ಸಾಹಗಳಿಂದ ಕಂಗೊಳಿಸುತ್ತಿದ್ದವಳು ಅವನೊಬ್ಬನೇ ಊಟ ಮಾಡಿದ್ದಕ್ಕೆ ಬೇಸರವಾಯಿತಾದರೂ ಅವನು ಕಿವಿ ಹಿಡಿದುಕೊಂಡು ಕ್ಷಮೆ ಕೇಳಿಕೊಂಡಾದ ಮೇಲೆ ಆಗಲೇ ಅವಳ ಪ್ರೇಮಾಂಕುರವಾಗಿ ದುಂಡುದುಟಿಗಳಲ್ಲಿ ಮಂದಹಾಸ ಲಾಸ್ಯವಾಡಿತು. ಅಜ್ಜಿಯ ಹಿಂದೆ ಅಡಗಿ ನಿಂತಾಗಲೂ ಅವಳ ನೇತ್ರ ಅವನಲ್ಲಿಯೇ ನಟ್ಟಿದ್ದವು. ಕೋಮಲವೂ ಮಾಂಸಲವೂ ಆದ ಬಾಹು ಮತ್ತು ಮುಖಗಳ ಕಾಂತಿ ಅವಳಿಗೊಂದು ಅಪೂರ್ವ ಸೌಂದರ್ಯವನ್ನು ಕೊಟ್ಟಿದ್ದವು.

ಆದರೆ ಛಾಯಾದೇವಿಗಾಗಲಿ, ಬಳಗದವರಿಗಾಗಲಿ ಬೀಗತನ ಮನಸ್ಸಿಗೆ ಬರಲಿಲ್ಲ. ವರ ನಡೆನುಡಿಗಳಲ್ಲಿ ಒಡ್ಡ. ಇತರರಿಗೆ ಹಿತವಾಗುವಂತೆ ಮಾತಾಡುವುದು ಅವನಿಗೆ ತಿಳಿಯದು. ಅರಮನೆಯ ಶಿಷ್ಟಾಚಾರಗಳಂತೂ ಅವನಿಂದ ಬಲು ದೂರ. ಅವನ

ಮಾಂಸಖಂಡಗಳು ಕೂಡ ಯಾವುದೋ ಪ್ರಾಣಿಯ ಮಾಂಸಖಂಡಗಳಂತಿದ್ದವು. ಇನ್ನೇನಪ್ಪಾ ಅಂದರೆ ಸರಳ ಸ್ನೇಹಶೀಲ ಮನೋಭಾವ ಅವನ ಒಡ್ಡತನವನ್ನು ಕೊಂಚ ಮರೆಮಾಚಿತ್ತು; ಅಷ್ಟೆ. ಅಂತಸ್ತಿನಲ್ಲಿ ಸಮಾನನಲ್ಲ. ಇಂಥ ಒರಟನ ಜೊತೆ, ಬುಡಕಟ್ಟಿನ ಜನರೊಟ್ಟಿಗೆ ಗುಡ್ಡಗಾಡಿನ ದಟ್ಟ ಕಾಡಿನಲ್ಲಿ ಮುದ್ದು ವಾಸಿಸಬಲ್ಲಳೇ? ಆದರೆ ಗೌರಿಯೇ ನಿನ್ನಡಿಯನ್ನು ಒಪ್ಪಿದಾಳಲ್ಲ!

ಛಾಯಾದೇವಿ ಮತ್ತು ಚಿಕ್ಕಮ್ಮಣ್ಣಿ ರಾತ್ರಿ ಬಹಳ ಹೊತ್ತಿನತನಕ ಮಾತಾಡಿಕೊಂಡರು. ಇವನು ತರುಣಚಂದ್ರನೇ ಎಂದ ಚಿಕ್ಕಮ್ಮಣ್ಣಿಯ ವಾದವನ್ನು ಛಾಯಾದೇವಿ ಒಪ್ಪಲಿಲ್ಲ. ಕೊನೆಗೆ ಶಿಖರಸೂರ್ಯ ಬರುವತನಕ ಕಾಯುವುದೆಂದೂ ಅಥವಾ ರವಿಯನ್ನು ಶಿವಾಪುರಕ್ಕೆ ಕಳಿಸುವುದೆಂದೂ ಅಲ್ಲಿ ಅವನು ನಿಜ ತಿಳಿದು ಬರಲೆಂದೂ ತೀರ್ಮಾನಿಸಿದರು. ಆದರೆ ಅವರಿಬ್ಬರೂ ಗೌರಿಯನ್ನು ಶಿವಾಪುರಕ್ಕೆ ಕಳಿಸಿಕೊಡಲು ಒಪ್ಪಲಿಲ್ಲ. ಅವನು ತರುಣಚಂದ್ರನೇ ಆಗಿದ್ದಲ್ಲಿ ಇಲ್ಲಿಗೇ ಕರೆತರಬೇಕೆಂದು ಆಲೋಚಿಸಿದರು. ಚಿಕ್ಕಮ್ಮಣ್ಣಿ ಇಷ್ಟಕ್ಕೇ ನಿಲ್ಲಿಸಿರಲಿಲ್ಲ. ಚಂಡೀದಾಸನಿಗೆ ವಿಷಯದ ಗಾಂಭೀರ್ಯ ಮತ್ತು ಅಗತ್ಯಗಳನ್ನು ತಿಳಿಸಿ ನಿಜ ತಿಳಿಯಲು ಕೇಳಿಕೊಂಡಿದ್ದಳು. ಅವನೂ ತಿಳಿದು ಹೇಳುವುದಾಗಿ ಮಾತುಕೊಟ್ಟಿದ್ದ.

ಆದರೆ ಬೆಳಿಗ್ಗೆ ಸೂರ್ಯನಾರಾಯಣಸ್ವಾಮಿ ಮೂಡು ದಿಕ್ಕಿನಲ್ಲಿ ಮೂಡುವುದರೊಳಗೆ ನಿನ್ನಡಿ ತನ್ನ ಪರಿವಾರದೊಂದಿಗೆ ಮಾಯವಾಗಿದ್ದ. ದೇವಾಲಯದಿಂದ ಒಬ್ಬ ಸೇವಕ ಬಂದು "ಬಯಲ ಸೀಮೆಯಲ್ಲಿ ಗದ್ದೀಬೇನೆ ಹಬ್ಬಿರುವುದರಿಂದ ಬೆಳ್ಳಿ ಮೂಡುವ ಮುನ್ನವೇ ಅವರು ಪಯಣವಾದರೆಂದು, ವಿಷಯವೇನಾದರೂ ಇದ್ದರೆ ಶಿವಾಪುರಕ್ಕೆ ತಿಳಿಸುವುದೆಂದೂ ಹೇಳಿದ್ದಾರೆ" ಎಂದು ಸುದ್ದಿ ಮುಟ್ಟಿಸಿದ.

ಈ ವಿಷಯವಿನ್ನೂ ಬೆಳಗಿನ ಸವಿಗನಸಿನಲ್ಲಿದ್ದ ಗೌರಿಗೆ ತಿಳಿದಿರಲಿಲ್ಲ. ಅಷ್ಟರಲ್ಲಿ ಶಿಖರಸೂರ್ಯ ಸೈನ್ಯಸಮೇತ ಬಂದು ಕನಕಪುರಿಯನ್ನು ವಶಪಡಿಸಿಕೊಂಡ ಸುದ್ದಿ ಬಂತು!

ತಾನು ಏಳುವುದರೊಳಗೆ ನಿನ್ನಡಿ ತನ್ನ ಪರಿವಾರ ಸಮೇತ ಇನ್ನೊಂದು ಊರಿಗೆ ಹೋದ ಸುದ್ದಿ ಕೇಳಿ ಗೌರಿ ಕಂಗಾಲಾದಳು. ಕನ್ಯೆಯನ್ನು ಪರೀಕ್ಷೆ ಮಾಡಿದ ಮಾತ್ರಕ್ಕೆ ಮದುವೆಯಾಗುವುದಿಲ್ಲವಲ್ಲ. ಈ ಮಧ್ಯೆ ಇನ್ನೂ ಕೆಲವು ಆಚಾರ ವಿಚಾರಗಳು ಜವಾಬ್ದಾರಿಗಳ ಮಾತುಕತೆಗಳು ಇರುತ್ತವೆಂದು ಗೊತ್ತಿದ್ದರೂ ತಾನು ಅವನನ್ನ ಇಷ್ಟಪಟ್ಟ ವಿಷಯ ಅವನಿಗೆ ತಲುಪದೇ ಹೋಯಿತಲ್ಲಾ ಎಂದು ಮರುಗಿದಳು. ಹ್ಯಾಗೆ ತಿಳಿಸುವುದೆಂದೂ ಸಂಕಟಪಟ್ಟಳು. ಈ ವಿಷಯದಲ್ಲಿ ಅಣ್ಣ ಸಹಾಯ ಮಾಡಬಹುದು ಎಂದುಕೊಂಡಳು. ಆದರೆ ಮನೆಯಲ್ಲಿ ಯಾರ ಬಾಯೊಳಗೆಲ್ಲ ಶಿಖರಸೂರ್ಯ ಬಂದು ಸುದ್ದಿಯೇ ಓಡಾಡುತ್ತಿತ್ತು. ರವಿ ತಂದೆ ಬಂದ ಸುದ್ದಿ ಕೇಳಿ 'ಅವನೇ ಎಲ್ಲ ನಿರ್ಧಾರ ತಗೊಳ್ಳುತ್ತಾನೆ ಸುಮ್ಮನಿರು' ಎಂದು ಹೇಳಿದ. ಆದರೆ ತಂದೆಯ ಆಗಮನದ ಬಗ್ಗೆ ಉತ್ಸಾಹವಿದ್ದಂತೆ ರವಿಗೆ ತನ್ನ ಭವಿಷ್ಯದ ಬಗ್ಗೆ ಭಯ ಕೂಡ ಇತ್ತು. ವಾಸಂತಿಯ ಜೊತೆಗಿನ ಸಂಬಂಧದ ವಿಷಯ ಹೇಳಿ ಅವನನ್ನು ಹ್ಯಾಗೆ ಎದುರಿಸುವುದೆಂದು ಉಪಾಯಗಳನ್ನು ಯೋಚಿಸತೊಡಗಿದ್ದ. ಗೌರಿಗೆ ಮಾತ್ರ ತಂದೆ ಬಗ್ಗೆ ಕಿಂಚಿತ್ ಭಯವೂ ಇರಲಿಲ್ಲ. "ತಂದೆಯೇನಾದರೂ ನನ್ನ ಆಯ್ಕೆಯನ್ನು ವಿರೋಧಿಸಿದರೆ 'ನನ್ನ ಪಾಡು ನನಗೆ ನಿನ್ನ ಕರ್ಮ ನಿನಗೆ' ಅಂತ ಹೇಳಿ ಶಿವಾಪುರಕ್ಕೆ ನಾನು ಹೊರಡೋಳೇ" ಎಂದು ರವಿಯೆದುರು ಸಾರಿ ಹೇಳಿಬಿಟ್ಟಳು. ಇದೇ ಮಾತನ್ನು ಅಜ್ಜಿ ಮತ್ತು ತಾಯಿಗೂ ಹೇಳಿದಳು. ಛಾಯಾದೇವಿಗೂ ನಿನ್ನಡಿಯನ್ನು ಪ್ರತ್ಯಕ್ಷ ಕಂಡಮೇಲೆ ಅವ ತರುಣಚಂದ್ರ ಹೌದೋ ಅಲ್ಲವೋ ಅಂತ ಸಂಶಯವಿತ್ತು. ಆದರೆ ಗೌರಿಗೆ ಮಾತ್ರ ನಿನ್ನಡಿ ತನ್ನ ಸೋದರಮಾವನೇ ಎಂಬುದರಲ್ಲಿ ಸಂದೇಹವೇ ಇರಲಿಲ್ಲ. 'ಇದಕ್ಕೆ ನನ್ನ ಅಂತಃಕರಣವೇ ಪ್ರಮಾಣ. ಇಲ್ಲದಿದ್ದಲ್ಲಿ ನಾನವನನ್ನ ನೋಡದಿದ್ದರೂ ಆತ ಹೋರಿಯನ್ನೇರಿ ಕನಸಿನಲ್ಲಿ ಬರುವುದು ಸಾಧ್ಯವಿತ್ತೇ?" ಎಂದು ಚಿಕ್ಕಮ್ಮಣ್ಣಿಯ ಮುಂದೆ ವಾದಿಸಿದ್ದಳು. ಸಣ್ಣವಳ ಮಾತೇನೆಂದು ಅವಳು ಒಪ್ಪಿರಲಿಲ್ಲ. ರವಿಕೀರ್ತಿಗೆ ಇಷ್ಟು ಧೈರ್ಯ ಇರಲಿಲ್ಲ.

ಇತ್ತೀಚೆಗೆ ಹಣ್ಣು ಹಣ್ಣು ಮುದುಕನೊಬ್ಬ ಅವಳ ಕನಸಿನಲ್ಲಿ ಬಂದು "ನಿನ್ನ ಮನೆಗೊಂದು ದೆವ್ವಿನಂಥ ಹದ್ದು ಬರುತ್ತಿದೆ ಹುಷಾರಾಗಿರು" ಎಂದು ಹೇಳಿದಂತಾಯ್ತು.

“ದೆವ್ವಿನಂಥ ಹದ್ದು? ಅದು ಹ್ಯಾಗಿರುತ್ತದೆ?” ಅಂದಿದ್ದಳು.

“ಕಪ್ಪಗಿರುತ್ತದೆ! ನಕ್ಕರೂ ಅತ್ತರೂ ಕೋಪಗೊಂಡರೂ ಹಲ್ಲು ಕಿರಿಯುತ್ತದೆ!”

-ಅಂತ ಹೇಳಿ ಮಾಯವಾಗಿದ್ದ. ಎಚ್ಚರವಾಗಿದ್ದ ಅಜ್ಜಿ ಇವಳ ಕಡೆ ಬೆನ್ನು ಮಾಡಿ ಮಲಗಿದ್ದಳು. ಅವಳನ್ನು ತನ್ನ ಕಡೆಗೆ ತಿರುಗಿಸಿ ತಬ್ಬಿಕೊಂಡು ಮಲಗಿದ್ದಳು.

ಆ ಮುದುಕ ಯಾರು? ದೆವ್ವ ಹೆಂಗಿರುತ್ತದೆ? ಅಂದಾಜಾಗಲೇ ಇಲ್ಲ. ಅಜ್ಜಿಗೆ ಹೇಳಬೇಕೆಂದಳು. ಆಕೆ ಕನಸನ್ನ ಲಘುವಾಗಿ ಪರಿಗಣಿಸಿ ‘ಹೆದರಿದ್ದೀ ಅಂಗಾತ ಮಲಗಬೇಡ. ಎದೆ ಮೇಲೆ ಕೈ ಇಟ್ಟುಕೋಬೇಡ.’ ಅಂತ ಹೇಳುವುದು ಖಾತ್ರಿಯೆನಿಸಿ ಹೇಳಲಿಲ್ಲ. ಆದರೆ ಇನ್ನೊಮ್ಮೆ ಕನಸಿನಲ್ಲಿ ಮುದುಕನ ಕಂಡಾಗ ಅಥವಾ ಅವನು ಹದ್ದಿನ ಬಗ್ಗೆ ಹೇಳಿದಾಗ ಭಯವಾಗಿರಲಿಲ್ಲ. ಆದರೂ ಹುಷಾರಾಗಿರಬೇಕೆಂದುಕೊಂಡಳು. ಮುದುಕ ಎತ್ತರವಾಗಿದ್ದ. ಎದೆ ಮುಖದ ಮೂಳೆ ಕಾಣಿಸುತ್ತಿದ್ದವು. ಕಣ್ಣು ಹುದುಗಿ ತಗ್ಗು ಬಿದ್ದಿದ್ದವು. ಅವನ ಮುಖದ ಮೇಲೆ ಕನಿಷ್ಟ ಒಂದು ಸಾವಿರವಾದರೂ ಅಡ್ಡತಿಡ್ಡ ಗೆರೆ ಮೂಡಿದ್ದವು. ಆತ ಇನ್ನೊಮ್ಮೆ ಕನಸಿನಲ್ಲಿ ಬಂದಾಗ-

“ಆ ಹದ್ದು ಹೆಂಗಿರ್ತದೆ?”-ಅಂತ ಕೇಳಿದ್ದಳು.

“ಆಕಾಶದ ನೀಲಿಮದಲ್ಲಿ ಅಡಗಿ ಹೊಂಚಿರ್ತದೆ. ನೀನು ಮೈ ಮರೆತಾಗ ಸದ್ದಿಲ್ಲದೆ ಎಗರಿ ಕಚ್ಚಿಕೊಂಡು ಹೋಗುತ್ತದೆ. ಅದಕ್ಕೆ ಹೊರಕ್ಕೆ ಹೊರಟಾಗ ಕೈಯಲ್ಲೊಂದು ಕುಡುಗೋಲು ಹಿಡಿದಿರು. ಅದು ಎಗರುವುದಕ್ಕೆ ಬಂದಾಗ ಬಿರುಗಾಳಿ ಬೀಸುತ್ತದೆ. ಅದೇ ಗುರುತು. ತಕ್ಷಣ ಕುಡುಗೋಲು ಹಿಡಿದು ಸಿದ್ಧಳಾಗು”-ಎಂದು ಹೇಳಿದ್ದ.

ಮಾರನೇ ದಿನ ಗೌರಿ ಹೊರಗೆ ಹೊರಟಾಗ ಕುಡುಗೋಲು ಹಿಡಿದುಕೊಂಡಿದ್ದನ್ನ ನೋಡಿ ಚಿಕ್ಕಮ್ಮಣ್ಣಿ ಚಕಿತಳಾದಳು. “ಯಾಕೆ ಮುದ್ದು ಕುಡುಗೋಲು ಹಿಡಿದಿದ್ದೀಯಲ್ಲ? ಹುಲ್ಲು ಕೊಯ್ಯಬೇಕೆ? ಸೇವಕರಿಲ್ಲವೇ?” ಎಂದಳು.

“ಇಲ್ಲಜ್ಜಿ ಆಕಾಶದಲ್ಲಿ ಕೆಟ್ಟ ಹದ್ದು ಬಂದಿದೆಯಂತೆ. ಈ ಕ್ಷಿತಿಜದಿಂದ ಆ ಕ್ಷಿತಿಜದ ತನಕ ಅದಕ್ಕೆ ರೆಕ್ಕೆಗಳಿವೆಯಂತೆ. ಅದು ಮನುಷ್ಯನನ್ನ ಕಚ್ಚಿಕೊಂಡು ಹೋಗುತ್ತದಂತೆ; ಅದಕ್ಕೇ.”

-ಅಂದಳು. ಚಿಕ್ಕಮ್ಮಣ್ಣಿ ಇದನ್ನು ಕೇಳಿ ಬಹಳ ಹೊತ್ತು ನಕ್ಕಳು. ಮತ್ತು ಇದು ನೆನಪಾದಾಗಲೆಲ್ಲ ಹೇಳಿ ನಗುತ್ತಿದ್ದಳು.

ಇನ್ನೊಂದು ದಿನ ಶಿಖರಸೂರ್ಯನೇ ಅವಳ ಕನಸಿನಲ್ಲಿ-ಹೊರಗಿನಿಂದ ಬಂದು ಮನೆ ಹೊಕ್ಕ. ಇಷ್ಟು ವರ್ಷ ಗಮನಿಸದಿದ್ದವಳು ಆ ದಿನ ಕನಸಿನಲ್ಲಿ ಆತನಿಗೊಂದು ದಟ್ಟವಾದ ಕಪ್ಪು ನೆರಳು ಬಿದ್ದಿರುವುದನ್ನು ಕಂಡು ಬೆರಗಾದಳು. ಇನ್ನೂ ಆಶ್ಚರ್ಯವೆಂದರೆ ಆ ನೆರಳು ಹದ್ದಿನ ನೆರಳಿನಂತಿತ್ತು! ಅಪ್ಪ ಹದ್ದಿನ ಜೊತೆ ಮನೆ ಹೊಕ್ಕನ? ಮುದುಕ ಹೇಳಿದ ಹದ್ದು ಅಂದರೆ ಈ ನೆರಳು ಇದ್ದೀತ? ಇರಲಾರದೆಂದುಕೊಂಡಳು. ಹದ್ದು ಇನ್ನೊಂದು ಕಡೆಯಿಂದ ಹಾರಿ ಬರಬಹುದು. ತಾನು ಹುಷಾರಾಗಿರಬೇಕಲ್ಲದೇ ಮನೆಯವರನ್ನು ಎಚ್ಚರಿಸಬೇಕೆಂದುಕೊಂಡಳು. ಇದಾಗಿ ಎರಡು ದಿನಕ್ಕೆ, ರವಿ ಮತ್ತು ಬೊಂತೆಯ ಕನಕಪುರಿಗೆ ಬರಬೇಕೆಂದು ಕುದುರೆ ಗಾಡಿ ಬಂತು.

## ಕನಕಪುರಿಗೆ ಪುನರಾಗಮನ

## ನಲವತ್ತೆಂಟು

ಇತಿಹಾಸವನ್ನು ವಂಚಿಸಿ ಇಷ್ಟು ವರ್ಷ ಶಿಖರಸೂರ್ಯ ಎಲ್ಲಿಗೆ ಹೋಗಿದ್ದ? ಏನು ಮಾಡಿದ? ಕನಕಪುರಿಯನ್ನು ಗೆಲ್ಲುವುದಕ್ಕೆ ಸೈನ್ಯ ಸಂಪತ್ತನು ಹ್ಯಾಗೆ ಸಂಪಾದಿಸಿದ? ಇತಿಹಾಸಕ್ಕೆ ಅವನ ಇತ್ತೀಚಿನ ಬದುಕಿನ ಎರಡು ಕ್ಷಣಗಳು ಮಾತ್ರ ಗೊತ್ತಿವೆ.

ಒಂದು: ಆತ ಮಾಯವಾದದ್ದು, ಇನ್ನೊಂದು: ಕಳೆದವಾರ ಕನಕಪುರಿಯನ್ನು ವಶಪಡಿಸಿಕೊಂಡು ತಾನೇ ರಾಜನಾದದ್ದು ಈ ನಡುವಿನ ಅವನ ಬದುಕಿನ ವಿವರಗಳು ನಮಗೇ ತಿಳಿದಿಲ್ಲವೆಂದರೆ ಉಳಿದವರನ್ನ ಹ್ಯಾಗೆ ನಂಬುವುದು? ಹೋಗಲೆಂದರೆ ಸದರಿ ಅವಧಿಯಲ್ಲಿ ಏನು ನಡೆಯಿತೆಂದು ಸುಳ್ಳು ಹೇಳುವುದಕ್ಕಾದರೂ ಯಾರಿದ್ದಾರೆ? ಎಂದು ಅಂದುಕೊಳ್ಳುತ್ತಿರುವಾಗ ನಮಗೆ ದೊರೆತವನು ಸುಕ್ರ! ಅವನ ಕಥನಕ್ಕೆ ಆಮೇಲೆ ಬರೋಣ. ಶಿಖರಸೂರ್ಯ ಮರೆಯಾಗುವ ಮುನ್ನ ಒಂದು ತಿಂಗಳ ಕಾಲ ಹದ್ದಿನ ಕೊಳ್ಳದಲ್ಲಿ ವಿದ್ಯುಲ್ಲತೆಯ ಜೊತೆಗಿದ್ದ. ಅವಳಿಂದ ಸೇವೆ ಪಡೆದು ಸಂತೃಪ್ತನಾದ. ಆಮೇಲೊಂದು ದಿನ ಅವಳಿಗೂ ತಿಳಿಸದೆ ಮಾಯವಾದ. ಈಗ ಒಂದು ವಾರದ ಹಿಂದೆ ಬಲಾಢ್ಯಸೈನ್ಯದೊಂದಿಗೆ ಕನಕಪುರಿಯ ಹೊರಭಾಗದಲ್ಲಿ ಪ್ರತ್ಯಕ್ಷನಾದ! ನಮಗೆ ಗೊತ್ತಿರುವವರಲ್ಲಿ ಸುಕ್ರನೊಬ್ಬನೇ ಈ ಹಿಂದೆಯೂ ಈಗಲೂ ಆತನ ಜೊತೆಗಿದ್ದವನು. ಉಳಿದವರೆಲ್ಲ ಅಪರಿಚಿತರು.

ಶಿಖರಸೂರ್ಯ ಹೇಳದೇ ಕೇಳದೇ ಮಡದಿ ಮಕ್ಕಳು ಮತ್ತು ಮತ್ತು ಚಿಕ್ಕಮ್ಮಣ್ಣಿ ಸಮೇತ ಮಾಯವಾದದ್ದು ಕನಕಪುರಿಯವರಿಗೆ ಆಶ್ಚರ್ಯವಾದರೂ ಒಳಗೊಳಗೆ ಪೀಡೆ ತಂತಾನೇ ತೊಲಗಿತೆಂದು ಸಮಾಧಾನದ ಉಸಿರುಬಿಟ್ಟಿದ್ದರು. ದಾಯಾದಿ ಎಂದ ಮೇಲೆ ಒಂದಿಲ್ಲೊಂದು ದಿನ ತಲೆ ಎತ್ತುವವನೇ; ಅರಮನೆಯ ವ್ಯವಹಾರದಲ್ಲಿ ಮೂಗು ತೂರುವವನೇ! ಅವನಲ್ಲ, ಅವನ ಮಕ್ಕಳಾದರೂ ಚಿಕ್ಕಮ್ಮಣ್ಣಿಯ ನಾತೆಯಿಂದ ಪಾಲಿಗೆ ಬರುವವರೇ. ಅವರು ಬಾರದಿದ್ದರೆ ಬಿಳಿಗಿರಿಯವರಾದರೂ ಕಾಲು ಕೆದರುವವರೇ. ಆದರೀಗ ಅದ್ಯಾವುದೂ ಇಲ್ಲದೆ ಪೀಡೆ ತೊಲಗಿತ್ತಲ್ಲ ಎಂದು ನಿರುಮ್ಮಳ ನಿಟ್ಟುಸಿರು ಬಿಟ್ಟಿದ್ದರೆ - ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ಈಗ ಬಂದು ಮಹಾರಾಜನಾಗಿ ಬಿಟ್ಟನೇ!

ಶಿಖರಸೂರ್ಯ ಕನಕಪುರಿಯವರೊಂದಿಗೆ ಪ್ರಚಂಡ ಯುದ್ಧವನ್ನೇನೂ ಮಾಡಬೇಕಾಗಿ ಬರಲಿಲ್ಲ. ಹ್ಯಾಗೂ ಆತನಿಗೆ ಕನಕಪುರಿಯ ಬೇಹುಗಾರಿಕೆ, ಅಗಸಿ ಬಾಗಿಲು, ಕಿಂಡಿ, ಕಿಡಿಕಿ, ಸುರಂಗ ಮಾರ್ಗ, ಸೈನ್ಯ ಮತ್ತು ಪುರದ ತಳ ಬುಡ, ಆಯಕಟ್ಟಿನ ಜಾಗ, ರಾಜರಾಣಿ ಪ್ರಧಾನಿಯ ದೌರ್ಬಲ್ಯಗಳು, ಅವರ ಮರ್ಮಸ್ಥಳಗಳು, ಎಲ್ಲವೂ ಗೊತ್ತಿದ್ದವು. ಕಾಮೋನ್ಮತ ರಾಜ, ಅವಿವೇಕಿ ಪ್ರಧಾನಿ, ಧನಮದದ ವರ್ತಕರು ಇದ್ದಲ್ಲಿ ಅವ್ಯವಸ್ಥೆಯಲ್ಲದೇ ಇನ್ನೇನಿದ್ದೀತು? ಬೇರೆ ಮಹಾರಾಜರನ್ನ ಗೆಲ್ಲುವುದಿರಲಿ ಇದ್ದ ಮಾಂಡಳೀಕರನ್ನ ಅಂಕೆಯಲ್ಲಿಟ್ಟುಕೊಳ್ಳುವುದೇ ಅವರಿಗೆ ಕಠಿಣವಾಗಿತ್ತು. ಇಂಥವರ ಮೇಲೆ ಶಿಸ್ತಿನ, ಬಲಾಢ್ಯ ಸೈನ್ಯ ಬಂದು ಧಾಳಿ ಮಾಡಿದರೆ ಅದನ್ನು ಎದುರಿಸುವ ತಯಾರಿಯಾಗಲಿ, ಬಲವಾಗಲಿ ಕನಕಪುರಿಗಿರಲಿಲ್ಲ. ಕೆಲವರ ಕೈಕಾಲು ಮುರಿದದ್ದು ಬಿಟ್ಟರೆ ಒಂದು ಹನಿ ರಕ್ತ ಕೂಡ ಬೀಳದೆ ಕನಕಪುರಿ ಶಿಖರಸೂರ್ಯನ ವಶವಾಯಿತು. ಮಹಾರಾಣಿ ಮೊದಲುಗೊಂಡು ರಾಜ, ರಾಣಿ, ಪ್ರಧಾನಿ, ಮಂತ್ರಿ ಮಾಂಡಳಿಕ ಮನ್ನೆಯರೆಲ್ಲ ಗೃಹಬಂಧಿಗಳಾದರು.

ಕನಕಪುರಿಯ ಕಥನಕ್ಕೆ ಮುನ್ನ ಶಿಖರಸೂರ್ಯ ಕಣ್ಮರೆಯಾಗಿದ್ದ ಅವಧಿಯ ಅವನ ಸಾಧನೆಗಳನ್ನು ತಿಳಿಯುವುದಕ್ಕೆ ನಾವು ಮೊದಲೇ ಹೇಳಿದ ಹಾಗೆ ನಮಗಿರೋ ಆಧಾರ ವ್ಯಕ್ತಿ ಸುಕ್ರನೊಬ್ಬನೆ. ಅವನ ಕಥನವೋ! 'ನಂಬಿದರೆ ನಂಬಿ ಬಿಟ್ಟರೆ ಬಿಡಿ' ಅಥವಾ 'ಒಂದಾನೊಂದು ಕಾಲದಲ್ಲಿ ಹದ್ದಿನ ತಲೆಯ ಒಬ್ಬ ರಾಕ್ಷಸನಿದ್ದ' - ಮಾದರಿಯದು. ಈಗೀಗ ಜನಪದ ಪುರಾಣ ಕತೆಗಳಲ್ಲಿ ಕೂಡ ಇತಿಹಾಸ ಅಡಗಿರುತ್ತದೆಂದು ವಿದ್ವಾಂಸರು ಹೇಳಿರುವುದರಿಂದ ಅದನ್ನೇ ನಿಮ್ಮ ಮುಂದೆ ಬಿಚ್ಚಿಡುತ್ತಿದ್ದೇವೆ; ನಮ್ಮ ಶಬ್ದಗಳಲ್ಲಿ. ಆದರಿದು ಒಂದಾನೊಂದು ಕಾಲದಲ್ಲಿ ನಡೆದದ್ದಲ್ಲ ಎಂದು ನಿಮಗೆ ನೆನಪಿದ್ದರೆ ಸಾಕು:

ಶಿಖರಸೂರ್ಯ ಆ ದಿನ ಬೆಳಗಿನ ಬೆಳ್ಳಿ ಮೂಡುವ ಮುನ್ನ ಹದ್ದಿನ ಕೊಳ್ಳದ ಪಡುವನಕ್ಕೆ ಮುಖ ಮಾಡಿ ನಡೆದ. ಯಾವ ಸ್ಥಳಕ್ಕೆ ಯಾಕೆ ಹೋಗುತ್ತಿದ್ದೇನೆಂದು ಯೋಚಿಸಿರಲೇ ಇಲ್ಲ. ಆದರಿಷ್ಟೇ, ಊರಿದ್ದಲ್ಲಿ ತಂಗಲಿಲ್ಲ, ನೆರಳಿದ್ದಲ್ಲಿ ಕೂರಲಿಲ್ಲ. ಬರುಬರುತ್ತ ಊರುಕೇರಿ ಜನ ಪ್ರಾಣಿಗಳು ಕಡಿಮೆಯಾಗಿ ಸಂಜೆಯಾಗಿ ಹೊತ್ತು ಮುಳುಗಿ ಕತ್ತಲಾದಾಗ ಒಂದು ದೊಡ್ಡ ಮರದಡಿ ಕೂತ. ಹಸಿವೆಯಾಗಿತ್ತು. ಏನೂ ಇಲ್ಲವಾದ್ದರಿಂದ ಹಾಗೇ ಮರಕ್ಕೊರಗಿ ಮಲಗಿದ.

ಬೆಳಿಗ್ಗೆದ್ದು ಪುನಃ ಪಶ್ಚಿಮಕ್ಕೆ ನಡೆದ. ಹಸಿವೆಗೆ ತಿನ್ನಬಹುದಾದ ಎಲೆ ತಿಂದ. ತೊರೆ ಸಿಕ್ಕಲ್ಲಿ ನೀರು ಕುಡಿದು ನಡೆದ. ನದಿ ಎದುರಾದರೆ ಈಜಿ, ಗುಡ್ಡ ದಿನ್ನೆ ಸಿಕ್ಕರೆ ಹತ್ತಿ, ಕೊಳ್ಳ ಇಳಿಜಾರಿನಲ್ಲಿ ಇಳಿದು ನಡೆದ. ಇಷ್ಟಾಗಿ ಎಲ್ಲಿಗೆ ಹೊರಟಿದ್ದೇನೆಂದು ನಿಶ್ಚಯಿಸಿರಲಿಲ್ಲ. ಬಹುಶಃ ನಡೆಯುವುದಕ್ಕೆ ಅವಕಾಶವಿರುವ ತನಕ, ಕಾಲಲ್ಲಿ ಶಕ್ತಿ ಇರುವ ತನಕ ನಡೆಯುವುದೆಂದು ತೀರ್ಮಾನಿಸಿದ್ದಂತೆ ಇತ್ತು. ಇಂಥವನ ದಿನ ಗಂಟೆ ಸಮಯಗಳನ್ನು ಲೆಕ್ಕ ಹಾಕುವುದು ಹ್ಯಾಗೆ ಸಾಧ್ಯ? ಏಳು ರಾತ್ರಿ ಎಂಟು ಹಗಲು ನಡೆದ ಎಂದೂ ಹೇಳಿದರೂ ಆತನ ನಡಿಗೆ ಏಳು ರಾತ್ರಿಯ ನಡಿಗೆಯನ್ನು ಒಂದೇ ದಿನ ನಡೆದ, ಎಂಟು ಹಗಲಿನ ನಡಿಗೆಯನ್ನ ಒಂದೇ ಹಗಲು ನಡೆದ - ಎನ್ನುವಂಥಾದ್ದು. ಆದ್ದರಿಂದ ಶಕ್ತಿಯಿರುವಷ್ಟು, ಅವಕಾಶವಿರುವಷ್ಟು ನಡೆದ ಎಂದು ಹೇಳುವುದೇ ಉಚಿತ.

ನಡೆದು ನಡೆದು ನಡುಹಗಲು, ಸುಡುಬಿಸಿಲು, ಕಟ್ಟೇಕಾಂತದ ಸರೋವರವಿರುವ ಸ್ಥಳಕ್ಕೆ ಬಂದ. ಆಶ್ಚರ್ಯವೆಂದರೆ ಪ್ರಾಣಿ ಪಶುಗಳ ಅರ್ಭಟ, ಆಟಕೂಟಗಳಿಂದ ನಲುಗಬೇಕಾದ ಕಾಡಿನಲ್ಲಿ ದನಿಯೆಂಬುದೇ ಇರಲಿಲ್ಲ! ತಮ್ಮ ಕೀಚು ಕಿರುಚುಗಳಿಂದ ಕಾಡಿನ ಮೌನದ ಮ್ಯಾಲೆ ಚಿತ್ತಾರ ಗೀಚುವ ಒಂದು ಹಕ್ಕಿಪಕ್ಕಿಯ ದನಿಯೂ ಇರಲಿಲ್ಲ. ತರುಮರಗಳ ಒಂದೆಲೆಯೂ ಅಲುಗುತ್ತಿರಲಿಲ್ಲ. ಉಸಿರು ಬಿಗಿ ಹಿಡಿದು ಗಾಳಿ ನಿಂತಲ್ಲಿಂದ ಒಂದೂ ಹೆಜ್ಜೆ ಚಲಿಸುತ್ತಿರಲಿಲ್ಲ. ಯಾಕೆ ಹೀಗೆಂದು ಸುತ್ತ ಕಣ್ಣಾಡಿಸಿದರೆ ಎದುರಿಗೊಂದು ಎತ್ತರವಾದ ಬಂಡೆಯಿತ್ತು. ಬಂಡೆಯ ಶಿಖರವನ್ನು ಮೋಡಗಳು ಮುತ್ತಿದ್ದರಿಂದಾಗಿ ಅದರ ಎತ್ತರದ ಅಂದಾಜು ಆಗುತ್ತಿರಲಿಲ್ಲ. ಬಂಡೆಗಂಟಿದ್ದ ಇನ್ನೊಂದು ಚಿಕ್ಕ ಬಂಡೆಯ ಮ್ಯಾಲೆ ಮುತ್ತಿದ ಮೋಡಗಳು ಕೆಳಗಡೆ ಆನೆಗಾತ್ರದ ಗರುಡ ಇವನನ್ನೇ ನೋಡುತ್ತ ಕೂತಿತ್ತು! ಅದರ ಮೈಮ್ಯಾಲೆ ಮೋಡಗಳು ಕಿಂಡಿಗಳಿಂದ ತೂರಿ ಬಂದ ಬಿಸಿಲು ಬಿದ್ದು ಅದರ ಮೈ ಚಿನ್ನದ ಹಾಗೆ ಮಿರ ಮಿರನೇ ಮಿಂಚುತ್ತಿತ್ತು.

ಕೊಬ್ಬಿದ ಕತ್ತು, ಮುಖಕ್ಕೆ ಮೂರಡಿ ಉದ್ದದ ಆಯುಧದಂತೆ ಚಾಚಿದ ಕೊಕ್ಕು, ಗಂಧಕದ ಗಣಿಯಂತೆ ಉರಿಯುವ ಕಣ್ಣು... ! ಕೆಳಗಡೆ ಸರೋವರದ ನಡುಗುವ ನೀರಿನಲ್ಲಿ ಬಂಗಾರದ ಹದ್ದಿನ ಪ್ರತಿಬಿಂಬ ಮೂಡಿತ್ತು. ಅಲೆಗಳು ಹೆದರಿಕೊಂಡು ಮೆಲ್ಲನೆ ಆ ಪ್ರತಿಬಿಂಬವನ್ನು ಸ್ಪರ್ಶಿಸಿ ದೂರ ಸರಿದಾಗ, ಬಿಂಬದ ಕಾಂತಿಯನ್ನು ತಮ್ಮ ಜೊತೆಗೊಯ್ಯುವಂತೆ ಕಾಣುತ್ತಿದ್ದವು. ಸೂರ್ಯನ ಪ್ರತಿಬಿಂಬಕ್ಕಿಂತ ಹದ್ದಿನ ಬಿಂಬವೇ ಒಂದು ಕೈ ಹೆಚ್ಚಾಗಿ ಹೊಳೆಯುತ್ತಿತ್ತು. ಹದ್ದಿನ ಪ್ರತಾಪಕ್ಕೆ ಹೆದರಿ ಯಾವ ಪ್ರಾಣಿ ಪಕ್ಷಿಯೂ ಸರೋವರದ ಬಳಿ ಸುಳಿಯುತ್ತಿರಲಿಲ್ಲ.

ಇದು ಬರೆದ ಚಿತ್ರವೋ ಅಥವಾ ನಿಜವಾದ ಬಂಡೆ ಗಾತ್ರದ ಹದ್ದೋ?

– ತಿಳಿಯುತ್ತಿರಲಿಲ್ಲ. ಚಿತ್ರವೇ ಇರಬೇಕೆನಿಸಿತು. ಚಿತ್ರವಾದರೂ ಹರಿತವಾದ ದೃಷ್ಟಿಯಿಂದ ನೋಡುವವರನ್ನೇ ನೆತ್ತರು ಬರುವಂತೆ ಕಣ್ಣಿಂದಿರಿಯುವಂತೆ ಅದರ ದೃಷ್ಟಿ ಕ್ರೂರವಾಗಿತ್ತು. ಎಷ್ಟು ದೂರ ಸರಿದರೂ ಹದ್ದು ಇವನನ್ನೇ ಹೊಂಚಿ ನೋಡುತ್ತಿರುವಂತೆ, ಇವನ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಇವನ ಪಿಸುಮಾತುಗಳನ್ನು, ಇವನೊಳಗಿನ ಅನಿಸಿಕೆಗಳನ್ನ ಕೂಡ ಕೇಳಿಸಿಕೊಳ್ಳುತ್ತಿರುವಂತೆ ಕಂಡಿತು. ದೇವರಲ್ಲದೆ ಒಬ್ಬ ಮರ್ತ್ಯ ಮಾನವ ಇಂಥ ಚಿತ್ರ ಬರೆಯುವುದು ಸಾಧ್ಯವೇ ಇಲ್ಲ - ಎಂದುಕೊಳ್ಳುತ್ತಿರುವಂತೆ ಕಾಡಿನ ಬೆಂಕಿ ಚಲಿಸಿದಂತೆ 'ಚಿತ್ರದ ಹದ್ದು' ಬಂಡೆಯ ತುದಿಗೆ ನಡೆದು ಬಂದು ಹಾರಿ ಇವನ ಮ್ಯಾಲೆ ಎರಗುವ ತಯಾರಿಯಿಂದ ಕೂತುಕೊಂಡಿತು. ಶಿಖರಸೂರ್ಯನಿಗೀಗ ಅದು ತನ್ನನ್ನು ಹಿಡಿದುಕೊಂಡು ಹೋಗುವುದೆಂಬುದರಲ್ಲಿ ಅನುಮಾನವೇ ಉಳಿಯಲಿಲ್ಲ. ತಾನು ವಜ್ರದೇಹಿ ಎಂದು ನೆನಪಾದರೂ ಈ ಬಲಾಢ್ಯ ಹದ್ದಿನ ಮುಂದೆ ತನ್ನ ಆಟ ನಡೆಯದೆಂದು ಖಾತ್ರಿಯಾಗಿಬಿಟ್ಟಿತು.

ಓಡಿ ಮರದ ಮಧ್ಯೆ ಅಡಗಬೇಕೆಂದ. ಕಾಲು ಬೇರುಬಿಟ್ಟಂತೆ ನೆಲಕ್ಕಂಟಿ ಚಲಿಸದಾದವು. ಅಕ್ಕಪಕ್ಕ ಮರೆಮಾಡುವ ಮರಗಳಿವೆಯೇ ಎಂದು ನೋಡಿದ. ಹಕ್ಕಿಯನ್ನೇ ನೋಡುತ್ತ ಕಷ್ಟಪಟ್ಟು ಒಂದು ಹೆಜ್ಜೆ ಹಿಂದಿಟ್ಟ. ಹದ್ದು ಇನ್ನಷ್ಟು ಮುಂದೆ ಕತ್ತು ಚಾಚಿತು. “ಓಡು” ಅಂದರು ಯಾರೋ! ಯಾರೆಂದೂ ನೋಡುವುದಕ್ಕೂ ಭಯವಾಯಿತು. ಕ್ಷಣಾರ್ಧದಲ್ಲಿ ಹಿಂದಿರುಗಿದವನೇ ಓಡತೊಡಗಿದ. ಒಂದಿಷ್ಟು ಓಡಿಹೋಗಿ ಆಕ್ರಮಣದ ಅಂದಾಜುಮಾಡಲು ಹಿಂದುರಿಗಿ ನೋಡಿದ. ಹದ್ದು ಇರಲಿಲ್ಲ.

“ಹೆದರಿದೆಯಾ?”

ಎಂದಿತು ದನಿ.

ಹಿಂದಿರುಗಿ ಅಕ್ಕಪಕ್ಕ ನೋಡಿದ ಸ್ವಲ್ಪದೂರದಲ್ಲೇ ಮೆಳೆ ಇತ್ತು. ಒಳಗಡೆ ಸ್ವಲ್ಪ ಮಾತ್ರ ಬೆಳಕಿತ್ತು. ಏದುಸಿರು ಬಿಡುತ್ತ ಬಂಡೆಯ ಮೇಲೆ ಕೂತ. “ಹೆದರಿದೆಯಾ?” ಎಂದು ಇನ್ನೊಮ್ಮೆ ಅದೇ ದನಿ ಕೇಳಿತು. ನೋಡಿದರೆ ಇನ್ನೊಂದು ಬಂಡೆಯ ಮೇಲೆ ಇವನನ್ನೇ ನೋಡುತ್ತ ಒಬ್ಬ ಕರಿ ಹುಡುಗ ಕುಂತಿದ್ದ. ತಲೆ ಕತ್ತಿನ ಮೇಲೆ ದಟ್ಟವಾದ ಕಪ್ಪು ಕೂದಲಿದ್ದು ಕಿವಿಯಲ್ಲೂ ಅಂಗುಲ ಉದ್ದದ ಕೂದಲು ಬೆಳೆದು ನಿಮಿರಿ ನಿಂತಿತ್ತು. ಹೊಳಪುಳ್ಳ ಕಣ್ಣು ಹದ್ದಿನ ಕಣ್ಣಿನಂತೆ ತೀಕ್ಷ್ಣವಾಗಿದ್ದವು.

ನೀಳವಾದ ಮೂಗು ಮುಂದೆ ಚಾಚಿದ್ದರಿಂದ ಇಡೀ ಆಕೃತಿ ಹದ್ದೇ ಮನುಷ್ಯ ರೂಪದಲ್ಲಿ ಬಂದಂಗಿದ್ದ.

ಇವನನ್ನು ಎಲ್ಲೋ ನೋಡಿದ ಹಾಗಿದೆಯಲ್ಲಾ - ಎಂದುಕೊಂಡ. ಆಮೇಲೆ ಜ್ಞಾಪಕವಾಯಿತು. ಹಿಂದೆ ಒಂದೆರಡು ಸಾರಿ ಕನಸಿನಲ್ಲಿ ಕಾಣಿಸಿಕೊಂಡಿದ್ದ ಹುಡುಗ ಇವನೇ ಎಂದು. ಈಗ ದೊಡ್ಡವನಾಗಿದ್ದ. ನಿನ್ನೆ ಮೊನ್ನೆ ಎಳೆಯ ಗಡ್ಡ ಮೀಸೆ ಮೊಳಕೆಯೊಡೆದ ಕಿಶೋರ. ಜಡೆಗಟ್ಟಿದ ತಲೆಗೂದಲನ್ನು ನೆತ್ತಿಯ ಮ್ಯಾಲೆ ಕಟ್ಟಿಕೊಂಡಿದ್ದ. ಕರೀದೇಹ ಮಾತ್ರ ಕಡಿಮೆ ಬೆಳಕಿನಲ್ಲೂ ಉಕ್ಕಿನಂತೆ ಮಿರುಗುತ್ತಿತ್ತು. ಮಾತಾಡುವಾಗ, ನಗುವಾಗ ಕಾಣಿಸುವ ಮಿಂಚಿನಂಥ ಹಲ್ಲು ಭಯ ಹುಟ್ಟಿಸುತ್ತಿದ್ದವು. ಕಿವಿಯಲ್ಲಿಯ ಕೂದಲು ಮಾತ್ರ ಅಸ್ವಾಭಾವಿಕವೆಂಬಷ್ಟು ಬೆಳೆದು ಸೆಟೆದು ನಿಂತಿದ್ದವು.

ಶಿಖರಸೂರ್ಯ ಎದ್ದು ಸಮೀಪ ಹೋದ. ಹುಡುಗ ಕೈಯಲ್ಲಿ ಚೂರಿ ಹಿಡಿದುಕೊಂಡಿದ್ದ. ತದೇಕದೃಷ್ಟಿಯಿಂದ ಪರಸ್ಪರರನ್ನು ನೋಡುತ್ತಿದ್ದುದರಿಂದ ಆಕ್ರಮಣದ ಭಾವನೆ ಬಾರದಿರಲೆಂದು ಶಿಖರಸೂರ್ಯನೆ ಮುಂದಾಗಿ ಆ ಈ ಕಡೆ ನೋಡಿದ. ಹುಡುಗ ಮಾತ್ರ ಇವನ ಮ್ಯಾಲಿನ ದೃಷ್ಟಿಯನ್ನು ಕೀಳಲೇ ಇಲ್ಲ. ಶಿಖರಸೂರ್ಯ ಮೆಲ್ಲಗೆ ಸಮೀಪ ಹೋಗಿ ಥಟ್ಟನೇ ಅವನ ಕೈಯಲ್ಲಿದ್ದ ಚೂರಿಗೆ ಕೈ ಹಾಕಿ ಕಸಿದುಕೊಂಡ. ಹುಡುಗ ಗಟ್ಟಿಯಾಗಿ ಹಿಡಿದುಕೊಳ್ಳಲಿಕ್ಕೆ ಪ್ರಯತ್ನಿಸಲೂ ಇಲ್ಲ. ಪ್ರತಿಭಟಿಸಲೂ ಇಲ್ಲ. ಈಗ ಶಿಖರಸೂರ್ಯ ಹುಡುಗನಿಗೇ ಗುರಿ ಹಿಡಿದು ನಿಂತ. ಇವನಂದುಕೊಂಡಿದ್ದಂತೆ ಹುಡುಗನಲ್ಲಿ ಅಸಹಾಯಕ ಭಯದ ಭಾವನೆ ಮೂಡಲೇ ಇಲ್ಲ. ಕೋಪಗೊಂಡಂಗಿತ್ತು. ಶಿಖರಸೂರ್ಯ ಮಾತ್ರ ಇನ್ನೂ ಗುರಿ ಹಿಡಿದೇ ಇದ್ದ. ಈಗ ನೋಡಿದರೆ ಇವನ ಕೈಗಳೇ ನಡುಗುತ್ತಿದ್ದವು. ಈತ ಮೂರನೇ ಬಾರಿ ಭೇಟಿಯಾದ ಹುಡುಗನೆಂದು ಗುರುತು ಇತ್ತು. ಚೂರಿಯ ಕೈ ಕೆಳಗಿಳಿಸಿದ.

“ಭೂತಗಳಲ್ಲಿ ನಿನಗೆ ನಂಬಿಕೆಯಿದೆಯಾ?”

“ಇದೆ.”

“ಹದ್ದು ನಿನ್ನ ಮೇಲೆ ದಾಳಿ ಮಾಡಿದಾಗಲೇ ಗೊತ್ತಾಯಿತು - ನಿನಗೆ ಭೂತ ಪಿಶಾಚಿಗಳಲ್ಲಿ ನಂಬಿಕೆ ಇದೆ ಅಂತ. ನಂಬಿಕೆ ಇದ್ದರೆ ಬಿಡಬೇಡ. ಇಲ್ಲದಿದ್ದರೆ ಇಟ್ಕೋಬೇಡ. ತಾರ್ಕಿಕ ಅಂತ್ಯಕ್ಕೆ ತಲುಪುವುದು ಮುಖ್ಯವಯ್ಯ. ಮಧ್ಯೆ ಬಾವುಕನಾಗಬೇಡ. ತರ್ಕದ ಮೂಲಕವೇ ನಿನಗೂ ನಿನ್ನ ಕನಸಿಗೂ ಹೊಸ ಸಂಬಂಧ ಏರ್ಪಡಬೇಕು. ಭಾವನೆಗಳು, ಅನಿಸಿಕೆಗಳಿಗೆ ಒಳಗಾದರೆ ಗುರಿ

ತಲುಪಲಿಕ್ಕಾಗುವುದಿಲ್ಲ. ಒಮ್ಮೆ ಭಾವನೆಗಳ ಪ್ರವಾಹದಲ್ಲಿ ಸಿಕ್ಕರೆ ಅದರಿಂದ ಹೊರಬರುವುದು ಕಷ್ಟ. ಭ್ರಮಾರಾಜ್ಯಕ್ಕೆ ತಲುಪಬೇಕಾಗುತ್ತದೆ."

"ಕನಸಿನೊಂದಿಗೆ ಸಂವಹನ ಮಾಡಲು ಹೊಸ ಭಾಷೆಯೊಂದನ್ನು ಸೃಷ್ಟಿಸುವ ಅಗತ್ಯವಿದೆ ಅಂತ ಅನ್ನಿಸಲಿಲ್ಲವೆ ನಿನಗೆ? ಅಂಥ ಭಾಷೆಯನ್ನು ಸೃಷ್ಟಿಸಿದರೆ ಹದ್ದು ನಿನ್ನನ್ನು ಹೆದರಿಸಬೇಕಾದ ಅಗತ್ಯವೇ ಇರಲಿಲ್ಲ. ಅದು ಪ್ರತ್ಯಕ್ಷವಾಗಿ ನಿನ್ನನ್ನು ಮುಗಿಸಲು ಬಂದಿತ್ತಲ್ಲ? ಯಾಕೆ ಹೇಳು? ಯಾಕೆಂದರೆ ನಿನಗೂ ಕನಸಿತೂ ಸಂವಹನವೇ ಇಲ್ಲ ಅದಕ್ಕೆ. ?

"ಅಂದರೆ ಹದ್ದಿಗೂ ನನ್ನ ಕನಸಿಗೂ ಸಂಬಂಧವಿದೆ ಎಂದಾಯಿತು."

"ಅದೆಲ್ಲಿದೆ"?

"ಭಾಷೆಯಲ್ಲಿ! ಅನೇಕ ಸಲ ಅದರ ಭಾಷೆ ಕಿವಿಯ ಮೇಲೆ ಬೀಳುತ್ತದೆ. ಆದರೆ ನೀನು ಕೇಳಿಸಿಕೊಳ್ಳುವುದಿಲ್ಲ; ಅಷ್ಟೇ?

ಆತ ಹತ್ತಿರವಿದ್ದಾಗ ಸಂಶಯಗಳು ಕರಗಿ ಹೆಚ್ಚು ಬಲ ಬಂದಂತೆನಿಸಿತು. ದಾರಿ ನಿಚ್ಚಳವಾಗಿ ಕಾಣತೊಡಗಿತು. ತನ್ನನ್ನು ಈಗ ಯಾರೂ ತಡೆಯಲಾರರು. ಭಾವನೆಗಳು ತನ್ನೆದುರು ನಿಲ್ಲಲಾರವೆಂಬಷ್ಟು ಆತ್ಮ ವಿಶ್ವಾಸ ಉಕ್ಕಿ ಇದು ನಿರಾಯಾಸ ಗುರಿ ಮುಟ್ಟಿಸುತ್ತದೆಂದು ಅನಿಸಿತು. ಈ ವರೆಗೆ ಗೊತ್ತಿಲ್ಲದ ಆದರೆ ತನ್ನಲ್ಲೇ ಇದ್ದ ಅಸಾಧ್ಯ ಬಲವೊಂದು ತನ್ನ ದೇಹಕ್ಕೆ ನುಗ್ಗಿ ಬಂದಂತಾಯಿತು.

"ಆಯ್ತು; ನನಗೆ ಆ ಹದ್ದು ಬೇಕು."

"ಯಾಕೆ?"

"ಯಾಕೆಂದರೆ ಅದು ಶಕ್ತಿ ಮತ್ತು ಅಧಿಕಾರ ಕೊಡುತ್ತದೆ."

"ಹೊರಡು ಅವನೇ ನಾಗಾರ್ಜುನ!"

## ನಲವತ್ತೊಂಬತ್ತು

ಮಾರನೇ ಬೆಳಿಗ್ಗೆ ಬೆಳ್ಳಿ ಮೂಡಿ ಹಕ್ಕಿ ಸ್ವರ ಮಾಡುವ ಹೊತ್ತಿಗೆ ಬೆಟ್ಟ ಹತ್ತುವುದಕ್ಕೆ ಸುರು ಮಾಡಿದ. ಈಗ ಅವನ ಹೆಜ್ಜೆಗಳಲ್ಲಿ ದೃಢತೆ, ಆತ್ಮವಿಶ್ವಾಸ ಇತ್ತು. ಆ ಹಕ್ಕಿಯ ಬಗ್ಗೆ ಅಳುಕು ಇರಲಿಲ್ಲ. ಎಷ್ಟು ಹಗಲು ಎಷ್ಟು ರಾತ್ರಿ ಹತ್ತಿದ? ಏನೇನು ಕಷ್ಟಗಳನ್ನು ಎದುರಿಸಿದ? ಓದುಗರಿಗೆ ಇಷ್ಟನ್ನಂತೂ ಜ್ಞಾಪಿಸುತ್ತೇವೆ: ಆತ ವಜ್ರದೇಹಿ; ವೈದ್ಯ ಬಲ್ಲವನು. ಸಸ್ಯ ಹೃದಯ ಅರಿತವನು. ಹತುವ ದಾರಿ ಕಡಿದಾಗಿತ್ತು. ಹತ್ತುತ್ತ ಹೋದಂತೆ ಹೆಚ್ಚು ಇಕ್ಕಟ್ಟಿನದಾಗಿತ್ತು. ಮೊದಮೊದಲು ಸಹಾಯಕವಾದ ಮರಗಳಿದ್ದವು. ಬರುಬರುತ್ತ ಅವೂ ಕಡಿಮೆಯಾಗಿ ಬರೀ ಕಂಟಿಗಳು ಹತ್ತಿದವು. ಅವೂ ಕಡಿಮೆಯಾಗಿ ಆಮೇಲೆ ಬರೀ ಕರಿ ಬಂಡೆಗಳಿದ್ದವು. ಬಂಡೆಗಳಲ್ಲಿ ದಾರಿ ಇರಲಿಲ್ಲ. ಹತ್ತಿದ್ದೇ ದಾರಿ ಮಾಡಿಕೊಂಡು ಹತ್ತಿದ. ಒಂದೊಮ್ಮೆ ಹತ್ತಲು ಅನುಕೂಲವಾಗದಿದ್ದಲ್ಲಿ ದೂರ ದೂರ ಸರಿದು ಅಲ್ಲಿಂದ ಮೇಲೆ ಹತ್ತಬೇಕಾಗಿತ್ತು.

ಇನ್ನಷ್ಟು ಮೇಲೆ ಹತ್ತಿದಾಗ ಮೋಡಗಳಲ್ಲಿ ಬೆಟ್ಟ ಮುಚ್ಚಿಹೋಗಿತ್ತು. ಮೊದಮೊದಲು ಕಪ್ಪಗಿದ್ದ ಬೆಟ್ಟ ಅಡಿ ಅಂತರದಲ್ಲಾದರೂ ಕಾಣುತ್ತಿತ್ತು. ಬರಬರುತ್ತ ಅದೂ ಇಲ್ಲವಾಗಿ ಕುರುಡನಂತೆ ಕೈಯಾಡಿಸಿ ಕೈಯಿಡುತ್ತ ಕಾಲಾಡಿಸಿ ಕಾಲಿಡುತ್ತ ಎಲ್ಲವನ್ನೂ ಸ್ಪರ್ಶದಿಂದಲೇ ತಿಳಿಯುತ್ತ ಹತ್ತಿದ. ಮುಖದ ಮೇಲಿನ ಬೆವರು ಕೂಡ ತಕ್ಷಣ ಹಿಮವಾಗುತ್ತಿತ್ತು. ಯಾವುದನ್ನೂ ಗಣನೆಗೆ ತಕ್ಕೊಳ್ಳದೆ -

ಸಾಯುವುದು - ಇಲ್ಲ - ಹತ್ತುವುದು - ಇಲ್ಲಾ ಹತ್ತುತ್ತಲೇ ಸಾಯುವುದೆಂದು ಹತ್ತತೊಡಗಿದ. ಮ್ಯಾಲೆ ಮ್ಯಾಲೆ ಏರಿದಂತೆ ಮೋಡಗಳಿಂದಾಗಿ ನೀರು ಸದಾ ಜಿನುಗುತ್ತಿದ್ದುದರಿಂದ ಜಾರುಬಂಡೆಯಂಥ ಶಿಖರ ಏರುವುದೆಂದರೆ ಎಣ್ಣೆ ಸವರಿದ ಮಲ್ಲಗಂಬ ಏರಿದ ಅನುಭವವಾಗತೊಡಗಿತು. ಏರುತ್ತ ಏರುತ್ತ ಸಣ್ಣ ಹುಲ್ಲು ಕಡಿಮೆಯಾಗಿ ಬರೀ ತೋಯ್ದ ಬಂಡೆಯನ್ನೇ ಹಿಡಿದು ಏರಬೇಕಾಗಿತ್ತು. ಸದಾ ಮೈಮೆಲೆ ಸುರಿವ ಜೇಬರು ಮಳೆಯನ್ನೇ ಕುಡಿದು ಆಹಾರದ ಶಕ್ತಿ ಪಡೆಯಬೇಕಾಗಿತ್ತು. ರಾತ್ರಿ ತಂಗುದಾಣಗಳಿಲ್ಲ. ಬಂಡೆಗಡರಿ ಗಟ್ಟಿಯಾಗಿ ಹಿಡಿದುಕೊಂಡೇ ರಾತ್ರಿಯಲ್ಲ ನಿಂತಿರಬೇಕಿತ್ತು. ಕಿಂಚಿತ್ ಕೈ ಜಾರಿದರೂ ಪಾತಾಳಕ್ಕೆ ಪತನವಾಗಬೇಕು. ಇದನ್ನೆಲ್ಲ ಹ್ಯಾಗೆ ಸಹಿಸಿಕೊಂಡ? ನಮಗೆ ತಿಳಿಯದು. ತನ್ನ ಗುರಿಯ ಬಗ್ಗೆ, ಸಾಮರ್ಥ್ಯದ ಬಗ್ಗೆ ಒಮ್ಮೆಯಾದರೂ ಅನುಮಾನ ಸುಳಿಯಲಿಲ್ಲವೇ? ನಮಗೆ ತಿಳಿಯದು. ಸುಕ್ರ ನಮಗೆ ಹೇಳಿದ್ದು; ಆತ ಶಿಖರವನ್ನು ಹತ್ತಿದ!

ಮ್ಯಾಲೆ ಸುಮಾರು ನೂರಡಿ ವ್ಯಾಸದ ಬಯಲಿತ್ತು. ಪಶ್ಚಿಮಕ್ಕೊಂದು ಕೋಡುಗಲ್ಲು ಚಾಚಿತ್ತು. ಆರಡಿಯಲ್ಲಿ ಚಿಕ್ಕ ಹೊಂಡವಿತ್ತು. ಮ್ಯಾಲೆ ಹತ್ತಿ ಆಯಾಸದಿಂದ ಏದುಸಿರು ಬಿಡುತ್ತ ಕಲ್ಲು ಹಾಸಿನ ಮ್ಯಾಲೆ ಅಂಗಾತ ಬಿದ್ದುಕೊಂಡ. ಬಟ್ಟೆ ಹರಿದು ಚಿಂದಿಯಾಗಿ ಅಲ್ಲಿಷ್ಟು ಇಲ್ಲಿಷ್ಟು ಮೈಗಂಟಿತ್ತು. ಮೋಡಗಳು ದಟ್ಟವಾಗಿ ಆವರಿಸಿದ್ದುದರಿಂದ ಕೆಳಗಿನ ನೆಲ ಎಷ್ಟು ದೂರವಿದೆಯೆಂದು ತಿಳಿಯುತ್ತಿರಲಿಲ್ಲ. ಒಮ್ಮೊಮ್ಮೆ ಮೋಡಗಳು ನುಗ್ಗಿ ಎರಡಡಿಯಾಚೆ ಏನಿದೆಯೆಂದು ತಿಳಿಯುತ್ತಿರಲಿಲ್ಲ.

ಬಹಳ ಹೊತ್ತಿನ ನಂತರ ತಲೆಯ ಹಿಂಭಾಗದಲ್ಲಿ ಕೊಂಬುಗಲ್ಲಿನ ಮ್ಯಾಲೆ ಭಯಾನಕ ಗಾತ್ರದ ಆ ಗರುಡ ಕೂತದ್ದು ನೋಡಿ ಸಮಾಧಾನವಾಯಿತು. ದಣಿವು ಅಸಹಾಯಕತೆಗಳಿಂದ ಬಸವಳಿದು ಕಂಗಾಲಾಗಿ ಹೆಣದ ಹಾಗೆ ಬಿದ್ದುಕೊಂಡೇ ನಿದ್ದೆಯೋ ಮೂರ್ಛೆಯೋ ಕಣು ಮುಚ್ಚಿದ. ಗರುಡ ಮಾತ್ರ ಈತನನ್ನು ಗಮನಿಸಲೇ ಇಲ್ಲವೆಂಬಂತೆ ನಿರ್ಲಿಪ್ತವಾಗಿ ದಿಗಂತದಲ್ಲಿ ಕಣ್ಣು ನೆಟ್ಟು ಕೂತಿತ್ತು.

ಬೆಳಕು ಕತ್ತಲೆ ಇವೆರಡೇ ಗೊತ್ತಾಗುತ್ತಿದ್ದ ಆ ಲೋಕದಲ್ಲಿ ದಿನ ವಾರ ತಿಂಗಳಿರಲಿ ಸಮಯವೆಂಬುದೂ ತಿಳಿಯುತ್ತಿರಲಿಲ್ಲ. ದಿನದಿನಕ್ಕೆ ಶಕ್ತಿ ಕ್ಷೀಣವಾಗಿ ನೋಟ ಮಸಳಿಸಿತ್ತು. ಸಾಯುವುದು ಖಾತ್ರಿಯಾಗಿ ಆಗಾಗ ಅರಿವಿಗೆ ಬಂದಾಗ ಕ್ಷಣಗಣನೆ ಮಾಡುತ್ತ ಬಿದ್ದುಕೊಂಡ. ನೆನಪುಗಳು ಅಳಿಸಿಹೋದವು. ಕೈಕಾಲು ಮರಗಟ್ಟಿ ಅಲುಗಾಡುತ್ತಿರಲಿಲ್ಲ. ಅವುಗಳಿಗೆ ಛಳಿ ಕೂಡ ಹತ್ತದೆ ನಿಧನಿಧಾನವಾಗಿ ದೇಹ ಸಂವೇದನೆ ಕಳೆದುಕೊಳ್ಳುತ್ತಿರುವ ಅನುಭವವಾಯಿತು. ಕೊನೆಗೊಮ್ಮೆ ಬಾಯಿ ತೆರೆದು ಕತ್ತು ಹೊರಳಿತು.

ಎಚ್ಚರವಾಗಿ ಕಣ್ಣು ತೆರೆದಾಗ ನಿಚ್ಚಳ ಬೆಳಕಿತ್ತು. ಎಲ್ಲಿದ್ದೇನೆಂದು ತಿಳಿಯಲು ಸ್ವಲ್ಪ ಹೊತ್ತು ಹಿಡಿಯಿತು. ಹಗಲೋ ರಾತ್ರಿಯೋ ಅದು ಸರಿಯಾಗಿ ತಿಳಿಯುತ್ತಿರಲಿಲ್ಲ. ಮ್ಯಾಲೆ ಸೂರ್ಯನಾಗಲಿ, ಚಂದ್ರನಾಗಲಿ ಕಾಣಲಿಲ್ಲ. ಕೋಡುಗಲ್ಲಿನ ಮ್ಯಾಲೆ ಹಕ್ಕಿ ಸಹ ಕಾಣಲಿಲ್ಲ. ಬಾಯಾರಿಕೆಯಾಗಿತ್ತು. ಕತ್ತು ಹೊರಳಿಸಿ ಹೊಂಡದ ಕಡೆಗೆ ನೋಡಿದ. ಹೊಂಡದಲ್ಲೊಂದು ಹೆಣ ಬೆನ್ನುಮೇಲಾಗಿ ತೇಲುತ್ತಿರುವುದು ಕಂಡಿತು. ದೇಹದಲ್ಲಿನ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಎದ್ದು ಕೂತ. ಆಶ್ಚರ್ಯವೆಂದರೆ ಏಳಲು ಅಷ್ಟೊಂದು ಕಷ್ಟವೆನಿಸಲಿಲ್ಲ. ತೆವಳಿಕೊಂಡೇ ಹೊಂಡದ ಬಳಿಗೆ ಹೋದ. ದಂಡೆಯ ಬಂಡೆಯ ಮೇಲೆ ಕೂತುಕೊಂಡು ಬೊಗಸೆ ಒಡ್ಡಿ ಕೈ ಚಾಚಿದ. ನೀರು ಬೆಚ್ಚಗಿತ್ತು. ಅಂಬಲಿಯಂತೆ ಗಟ್ಟಿಯಾಗಿದ್ದುದರಿಂದ ಸರ್ರನೆ ಕೈ ಸೆಳೆದುಕೊಂಡು ನೋಡಿಕೊಂಡ. ಚಿನ್ನದ ಗಟ್ಟರಸ ಹಳದಿ ಪಾದರಸದಂತೆ ಕೈಗಂಟಿಕೊಂಡಿತ್ತು. ಹ್ಯಾಗೂ ಸಾಯಲಿದ್ದೇನೆ, ಹೀಗೆ ಸಾಯುತ್ತೇನೆಂದು ಒಂದು ಬೊಗಸೆ ಕುಡಿದು ಕತ್ತು ಚೆಲ್ಲಿ ಕೂತುಬಿಟ್ಟ!

ಹಾಗೆ ಎಷ್ಟೋ ಹೊತ್ತು ಕೂತಿದ್ದ ಎಂದು ತಿಳಿಯದು. ಅಷ್ಟರಲ್ಲಿ ರಸದಲ್ಲಿ ತೇಲುತ್ತಿದ್ದ ಹೆಣ ನೋಡುನೋಡುತ್ತಿರುವಂತೆ ಮಡುವಿನಲ್ಲಿ ಮಿಂದೇಳುವಂತೆ ಅಜಾನುಬಾಹು ಆಕೃತಿಯೊಂದು ಮಡುವಿನಲ್ಲಿ ಉದ್ಭವಿಸಿ ಧುತ್ತೆಂದು ಇವನೆಡೆಗೆ ಬಂದು ನಿಂತುಕೊಂಡಿತು! ಶಿಖರಸೂರ್ಯ ಚಕಿತಗೊಂಡು, ಕಣ್ಣಗಲಿಸಿ ನೋಡುತ್ತ ನಿಂತ. ಆ ದೊಡ್ಡ ಚಿನ್ನದ ರಸದಿಂದಾಗಿ ಆತ ಜೀವಂತ ಚಿನ್ನದ ಮೂರ್ತಿಯ ಹಾಗೆ ಕಂಡ. ಮೊದಲೆರಡು ಕ್ಷಣ ಭೂತವೋ ಪ್ರೇತವೋ ಅಂದುಕೊಂಡ. ಅವನ ನಗೆ ನೋಡಿ ಧೈರ್ಯ ತಗೊಂಡು ಭಯದಲ್ಲಿ ಇವನೂ ಮುಗುಳು ನಕ್ಕ. ಉದ್ದುದ್ದ ಕೂದಲು, ಗಡ್ಡ ಮೀಸೆಯ, ನೀಳ ಮೂಗಿನ ದೊಡ್ಡ ಗಾತ್ರದ ವ್ಯಕ್ತಿಯ ಕಣ್ಣು ಮಾತ್ರ ಉರಿವ ಕೆಂಡದ ಹಾಗೆ ಹೊಳೆಯುತ್ತಿದ್ದವು. ಆಶ್ಚರ್ಯವೆಂದರೆ ಅವನ ಕಿವಿಯಲ್ಲು ದಟ್ಟ ಪೊದೆಗೂದಲಿದ್ದವು! ಟೊಂಕದ ಒದ್ದೆ ಬಟ್ಟೆಯ ಮೇಲೆ

ಕೈ ಇಟ್ಟುಕೊಂಡು ಇವನನ್ನೇ ಹರಿತವಾದ ದೃಷ್ಟಿ ಮತ್ತು ನಗೆಯಿಂದ ಇರಿಯುತ್ತ ನಿಂತಿದ್ದ! ಭಯವೋ ಬೆರಗೋ ಆನಂದವೋ - ಶಿಖರಸೂರ್ಯ ಬೆಪ್ಪನಂತೆ ಬಾಯಿ ತೆರೆದು ನಿಂತ! ಮಾತೇ ಹೊರಡದಾಯಿತು.

ತಲೆ ಮತ್ತು ಮೈಮೇಲಿನ ಚಿನ್ನದ ನೀರನ್ನ ಬಸಿದೊಗೆದು ಚಿನ್ನದ ಬಣ್ಣದ ಮೃಣ್ಮಯ ಮೂರ್ತಿ ಮೈವೆತ್ತಿ ಬಂದಂತಿದ್ದ ಆ ವ್ಯಕ್ತಿ. ತುಸು ಹೊತ್ತಾದ ಬಳಿಕ ಅಂಟಿದ್ದ ಚಿನ್ನದ ರಸ ಬಸಿದು ಮೈ ಮುಖದ ತುಂಬ ವಯಸ್ಸಿನ ಅಡ್ಡ ತಿಡ್ಡ ಗೆರೆಗಳೂ ಮೂಡಿದವು. ಚರ್ಮ ಜೋತು ಬಿದ್ದು ನಿಮಿರಿನಿಂತ ಕಿವಿಗೂದಲು ಎತ್ತಿನ ಕೊಂಬಿನಂತೆ ಕಾಣುತ್ತಿದ್ದವು. ಶಿಖರಸೂರ್ಯ ಒಮ್ಮೆಲೆ ಬೆಳಕು ಹೊಳೆದು - "ನಾಗಾರ್ಜುನ ದೇವಾ!" ಎಂದು ಉತ್ಸಾಹ ಮತ್ತು ನಿಶ್ಶಕ್ತಿಯ ವಿಕಾರ ದನಿಯಲ್ಲಿ ಕೂಗಿದ. ಗುರುತು ಹಿಡಿದದ್ದಕ್ಕೆ ಮುಗುಳು ನಕ್ಕು ಚೂಪು ದೃಷ್ಟಿಯಿಂದ ಇವನನ್ನೇ ನೋಡುತ್ತ ನಾಗಾರ್ಜುನ ನೀರಿನಿಂದ ಮೇಲೆ ಬಂದು ಕೋಡುಗಲ್ಲಿನತ್ತ ನಡೆದ. ಶಿಖರಸೂರ್ಯನೂ ಹಿಂದಿನಿಂದ ನಡೆದ. ಹಿಂದಿರುಗಿ ನಿಂತು ನಾಗಾರ್ಜುನ ಕೇಳಿದ:

"ನೀನೂ ಶಿವಪಾದನ ಶಿಷ್ಯನಲ್ಲವೋ?

"ಹೌದು ಸ್ವಾಮಿ"

"ಬಾ ಗುರುವಂದನೆ ಮಾಡೋಣ"

– ಎಂದು ಹೇಳಿ ಕೋಡುಗಲ್ಲಿನಡು ಪದ್ಮಾಸನ ಹಾಕಿಕೊಂಡು ಧ್ಯಾನಸ್ಥನಾಗಿ ಕುಳಿತ. ಇವನೂ ಅವನನ್ನೇ ಅನುಸರಿಸಿದ. ಶಿಖರಸೂರ್ಯನ ಮನಸ್ಸು ಏಕಾಗ್ರಗೊಳ್ಳಲಿಲ್ಲ. ತನ್ನ ಪ್ರಾರ್ಥನೆ ಕೃತಕವಾಗಿರುವುದನ್ನು ಈತ ಗಮನಿಸುತ್ತಿರಬಹುದೇ ಎಂಬ ಸಂದೇಹ ಬಂತು. ಕೊನೆಗೆ ತನ್ನ ಪ್ರತಿಭೆಯನ್ನೆಲ್ಲ ಒಗ್ಗೂಡಿಸಿ ಭಕ್ತಿಯಿಂದ ಪ್ರಾರ್ಥಿಸುವಂತೆ ಅಭಿನಯಿಸುತ್ತ ಕೂತ.

ಸ್ವಲ್ಪ ಹೊತ್ತಾದ ಬಳಿಗೆ ನಾಗಾರ್ಜುನ ಕಣ್ಣು ತೆರೆದ. ಇವನೂ ತೆರೆದ. ಮುದುಕ ಬಹಳ ಖುಷಿಯಾಗಿದ್ದ. ಮಾತಿನ ಆಸೆಯಾಯ್ತು. ಸಂತೋಷಪಡಿಸೋಣವೆಂದು ಮನಸ್ಸು ಮಾಡಿದ. ಆದರೆ ಅಂಥ ಸೂಚನೆಯೂ ಅವನಿಂದಲೇ ಬರಲೆಂದು ಕಾದು ಕೂತ. ನಾಗಾರ್ಜುನ ಹೇಳಿದ:

"ನಿನ್ನನ್ನು ನೋಡಿ ಸಂತೋಷವಾಯಿತಯ್ಯಾ! ನಾನು ನಾಗಾರ್ಜುನ ಹೌದು".

"ನಾನು ಚಿನ್ನಮುತ್ತ, ಶಿವಾಪುರದಲ್ಲಿ ಜಯಸೂರ್ಯ, ಈಗ ಶಿಖರಸೂರ್ಯ. ನಾನೂ ಶಿವಪಾದನ ಶಿಷ್ಯನೇ..."

"ನಿನ್ನ ಎಲ್ಲಾ ವಿಷಯ ನನಗೆ ಗೊತ್ತು. ಬಂದ ಉದ್ದೇಶ ಹೇಳು".

"ಉದ್ದೇಶ ಇನ್ನೇನಿದ್ದಿತು ಗುರುವೆ? ಚಿನ್ನ, ಸೈನ್ಯ ಮಾಡುವ ವಿದ್ಯೆಗಾಗಿ ಬಂದೆ.

ಸ್ವಲ್ಪ ಹೊತ್ತು ನಾಗಾರ್ಜುನ ಮಾತಾಡಲಿಲ್ಲ. ಧ್ಯಾನ ಮಾಡುವಂತೆ ಕಣ್ಣು ಮುಚ್ಚಿ ಕೂತು, ಆಮೇಲೆ ಹೇಳಿದ:

"ನಿನ್ನನ್ನು ಕಂಡು ಮೆಚ್ಚುಗೆಯಂತೂ ಆಯಿತು. ಯಾಕಂತೀಯೊ? ಈ ಶಿಖರ ಏರಿದ ಎರಡನೆಯ ಸಾಧಕ ನೀನು! ನೀನು ಬಯಸಿದ ವಿದ್ಯೆ ಪಡೆವ ಎಲ್ಲ ಅರ್ಹತೆಗಳೂ ನಿನಗಿವೆ. ನಿನ್ನ ಛಲ, ಧೈರ್ಯ, ಆತ್ಮವಿಶ್ವಾಸಗಳನ್ನು ಹೊಗಳಲೇ ಬೇಕು. ಆದರೆ ಒಂದೆರಡು ಎಚ್ಚರಿಕೆಯ ಮಾತಿವೆ; ಕೇಳು: ನನಗೆ ಈ ವಿದ್ಯೆ ಬಂದದ್ದು ಶಿವಪಾದನ ಗವಿಯಿಂದಲೇ! ವಿದ್ಯೆಯ ಜೊತೆಗೆ ಶಿವಪಾದ ಶಾಪವನ್ನೂ ಕೊಟ್ಟ. ನೀನೂ ಅಷ್ಟೆ: ವಿದ್ಯೆಯ ಜೊತೆಗೆ ಆ ಶಾಪಕ್ಕೂ ವಾರಸುದಾರನಾಗಬೇಕು, ಆದಿತೋ?"

"ಸಿದ್ಧನಿದ್ದೇನೆ, ಅಪ್ಪಣೆಯಾಗಲಿ ಸ್ವಾಮಿ"

“ಭೇಷ್! ಶಾಪವೇನೆಂದು ಹೇಳುವ ಮುಂಚೆಯೇ ಒಪ್ಪಿಕೊಂಡೆಯಲ್ಲ! ನನ್ನ ಕೆಲಸ ಸುಲಭವಾಯಿತು. ಈಗೇನು ಮೊದಲು ಶಾಪ ಹೇಳಲ? ನೇರವಾಗಿ ವಿದ್ಯೆಯನ್ನೇ ಭೋದಿಸಲ?”

“ವಿದ್ಯೆಯನ್ನೇ ಹೇಳಿಕೊಡಿ ಸ್ವಾಮಿ”

“ಈ ವ್ಯವಹಾರದಲ್ಲಿ ಅವಸರ ಮಾಡಬೇಡಯ್ಯಾ. ಮನೆವಾಳ್ತೆಯಲ್ಲಾದರೆ ಕೊಟ್ಟವ ಕೋಡಂಗಿ, ಈಸಿಕೊಂಡವ ಈರಭದ್ರ. ಇಲ್ಲಿ ಕೊಟ್ಟವ ಈರಭದ್ರ, ಕೊಂಬವ ಕೋಡಂಗಿ! ಶಿವಪಾದನಿಂದ ವೈದ್ಯ ಕಲಿಯುತ್ತ ನೀನು ಹ್ಯಾಗೆ ವಿಷವಿದ್ಯೆ ಮತ್ತು ವಜ್ರದೇಹಿಯಾಗುವುದನ್ನ ಕದ್ದು ಕಲಿತೆಯೋ ನಾನು ಹಾಗೇ ಬಹಿರಂಗದಲ್ಲಿ ವೈದ್ಯ ವಿದಾರ್ಥಿಯಾಗಿ ಅಲ್ಲಿದ್ದ ಗ್ರಂಥಗಳನ್ನು ಕದ್ದು ಓದಿ ಚಿನ್ನ ಸೈನ್ಯದ ವಿದ್ಯೆ ಕಲಿತೆ. ನನ್ನ ಕಳ್ಳತನದ ವಿಷಯ ಗೊತ್ತಿದ್ದರೂ ಶಿವಪಾದ ನನಗೆ ತಾಕೀತು ಮಾಡಲಿಲ್ಲ. ಅವರವರ ಕರ್ಮಕ್ಕೆ ಯಾರೇನೂ ಮಾಡಲಾಗದೆಂದು ಸುಮ್ಮನಾದ. ಹಾಗಂತ ವಿದ್ಯೆಯನು ನಿರಾಕರಿಸಲೂ ಇಲ್ಲ. ಅದೇ ಅಮ್ಮನ ಗವಿಯ ವಿಶೇಷ.

ನಾನು ಕದ್ದು ಕಲಿತ ವಿದ್ಯೆಯನ್ನ ಹೆಮ್ಮೆಯಿಂದ ಎಲ್ಲೋ ಪ್ರದರ್ಶಿಸಿದೆ ನೋಡು ಶಿವಪಾದ ಮರದ ಬಳಿ ಬಾ ಅಂತ ಹೇಳಿಕಳಿಸಿದ, ಹೋದೆ.

“ನೀನು ಕೇಳಿದ್ದರೆ ಇದಕ್ಕಿಂತ ಸುಲಭವಾದ ವಿದ್ಯೆಯನ್ನು ಕೋಡುತ್ತಿದ್ದೆನಲ್ಲಪ್ಪ. ಧಾನ್ಯದಿಂದ ಚಿನ್ನ ಮಾಡಬೇಕಲ್ಲವೇ? ಬೇಡ, ನೀನು ಕೈಯಾರೆ ಮುಟ್ಟಿದ್ದೆಲ್ಲ ಚಿನ್ನದ ನೀರಾಗುತ್ತದೆ ಹೋಗು?”ಅಂದ.

ನಾನು ನಂಬಲಿಲ್ಲ – “ಇದು ನಿಜವೆ ಗುರುದೇವಾ” ಅಂದೆ.

“ಬೇಕಾದರೆ ಈಗಲೇ ಪರೀಕ್ಷೆ ಮಾಡಿ ನೋಡು. ಆದರೆ ಈ ಮರವನ್ನ ಮತ್ತು ನನ್ನನ್ನ ಮುಟ್ಟಬೇಡ” ಎಂದು ನಕ್ಕ

“ನಾನು ಓಡಿಹೋಗಿ ಒಂದು ಬಂಡೆಯನ್ನು ಮುಟ್ಟಿದ್ದೇ ತಡ ಕಣ್ಣೆದುರಲ್ಲೇ ಕರಗಿ ಚಿನ್ನದ ನೀರಾಗಿ ಮಡುಗಟ್ಟಿತಯ್ಯಾ! ಅದನ್ನು ಕಂಡುದೇ ಬಾಯಾರಿಕೆಯಾಗಿ ಕುಡಿದೆ. ಕುಡಿದಷ್ಟೂ ದಾಹ ಹೆಚ್ಚಾಯಿತು. ಇನ್ನಷ್ಟು ವಸ್ತುಗಳನ್ನ ಮುಟ್ಟಿದೆ. ಇನ್ನಷ್ಟು ಚಿನ್ನದ ನೀರು ಕುಡಿದು ಕುಡಿದು ಹೊಟ್ಟೆಯುಬ್ಬಿ ಕಾರಿಕೊಂಡೆ. ನೋಡಿದರೆ ಬಳಿಯಲ್ಲಿ ಶಿವಪಾದನೇ ಇಲ್ಲ! ಯಾವಾಗ ಮುಟ್ಟಿದ್ದೆಲ್ಲಾ ಚಿನ್ನದ ನೀರಾಗಿ, ಅನ್ನವೆಂದು ಮುಟ್ಟಿದ್ದೂ ಚಿನ್ನವಾಯಿತೋ ಆವಾಗ ಮಾತ್ರ ಓಡಿಹೋಗಿ ಗುರುವಿಗೆ ಕೈಮುಗಿದು “ಕಾಪಾಡು ನನ್ನಪ್ಪ” ಅಂದೆ. “ಕದ್ದು ಕಲಿತ ವಿದ್ಯೆಯನ್ನ ಅರ್ಹನಿಗೆ ದಾನ ಮಾಡುವ ತನಕ ನಿನಗೆ ಮುಕ್ತಿಯಿಲ್ಲ” ಅಂದ. “ಈಗ ಹೇಳು ವಿದ್ಯೆ ಹೇಳಿಕೋಡಲಾ?”

“ಈ ವಿದ್ಯೆಗೆ ಶಾಪವೇನೆಂದು ಹೇಳಲಿಲ್ಲ.”

“ಕೇಳು: ಇದು ಮಂತ್ರ ಹೇಳಿ ಧ್ಯಾನದಿಂದ ಚಿನ್ನ ಮಾಡುವ, ಮೇವಿನಿಂದ ಸೈನಿಕರನ್ನು ಮಾಡುವ ವಿದ್ಯೆ…”

ಕೇಳಿ ಶಿಖರಸೂರ್ಯ ಅಂಗಾಲಿನಿಂದ ನೆತ್ತಿಯತನಕ ಪುಳಕಗೊಂಡ

“ಆದರೆ ನೆನಪಿಡು: ಧಾನ್ಯವನ್ನ ಚಿನ್ನ ಮಾಡಿದಾಗಲೇ, ಮೇವಿನಿಂದ ಸೈನ್ಯ ಮಾಡಿದಾಗಲೇ ನಿನ್ನ ಮನುಷ್ಯತ್ವ ಹೋಯಿತು! ಅವನ್ನು ಮರಳಿ ಪಡೆಯಬೇಕೆಂದರೆ…”

“ಮೊದಲು ಮಂತ್ರ ಹೇಳಿಕೊಡಿ ಸ್ವಾಮಿ”

“ಯಾಕಯ್ಯ ಅಷ್ಟು ಅವಸರ ಮಾಡುತ್ತಿ? ಶಾಪದಿಂದ ಮುಕ್ತಿ ಪಡೆಯುತ್ತಿರುವ ನನಗೇ ಅವಸರವಿಲ್ಲ. ನಿನಗೆ ಅವಸರವೆ?”

“ಆಯ್ತು ಅದೇನಿದೆಯೋ ಬೇಗ ಹೇಳಿ ಸ್ವಾಮಿ.”

“ನಾ ಕೊಡುವ ಮಂತ್ರಕ್ಕೆ ಯಾರಾದರೂ ತಿರುಮಂತ್ರ ಹಾಕಿದರೆ - ಅದೇ ನಿನ್ನ ವಿದ್ಯೆಯ ಕೊನೆ! ಆ ಕ್ಷಣವೇ ನಿನ್ನೆಲ್ಲ ಸೃಷ್ಟಿ ಮೂಲರೂಪಕ್ಕೆ ತಿರುಗುತ್ತದೆ, ಹುಷಾರ!

ಆಮೇಲೆ ಗರುಡನ ಬೆಟ್ಟ ಹತ್ತಿಬಂದ ಯಾವನಿಗಾದರೂ ಆ ವಿದ್ಯೆಯನ್ನು ಬೋಧಿಸಿದಾಗಲೇ ನಿನಗೆ ಮುಕ್ತಿ. ಅಲ್ಲಿಯವರೆಗೆ ಹದ್ದಾಗಿ ಬೆಟ್ಟ ಕಾಯುವುದೇ ನಿನ್ನ ಗತಿ! ಇದೇ ಶಾಪ. ಗೊತ್ತಾಯಿತಲ್ಲ?”

ಶಿಖರಸೂರ್ಯ ಉತ್ಸಾಹದಿಂದ ಕತ್ತು ಹಾಕಿ ಗೊತ್ತಾಯಿತೆಂದ. ನಾಗಾರ್ಜುನ ತನ್ನೊರಡೂ ಹಸ್ತಗಳಿಂದ ಅಮ್ಮನ ಗವಿಯ ಗೌಪ್ಯ ಸಂಕೇತಗಳನ್ನು ರಚಿಸಿ ಶಿಖರಸೂರ್ಯನನ್ನ ಹತ್ತಿರ ಕೂರಿಸಿಕೊಂಡು ಬಲಗಿವಿಯಲ್ಲಿ ಮಂತ್ರ ಬೋಧಿಸಿ, –

“ಇದು ಧಾನ್ಯದಿಂದ ಚಿನ್ನ ಮಾಡುವ ಮಂತ್ರ, ಇದನ್ನು ಹೇಳಿ ಧಾನ್ಯದಲ್ಲಿ ಬಲಗೈ ಆಡಿಸು. ಅದು ಚಿನ್ನವಾಗುತ್ತದೆ. ಈ ಕಡೆ ಬಾ.”

ಎಂದು ಎಡಗಿವಿಯಲ್ಲಿ ಇನ್ನೊಂದು ಮಂತ್ರ ಹೇಳಿ, –

“ಈ ಮಂತ್ರ ಹೇಳಿ ಮೇವಿಗೆ ಎಡಗೈ ತಾಕಿಸಿದರೆ ಮೇವಿನಲ್ಲಿ ಎಷ್ಟು ದಂಟುಗಳೋ ಅಷ್ಟು ಜನ ಸೈನಿಕರು ಬರುತ್ತಾರೆ. ಇಷ್ಟಾದ ಮೇಲೆ ಇನ್ನೊಂದು ಮಾತು ಹೇಳಬೇಕೆನಿಸುತ್ತದೆ. ಇದು ಮಹಾತ್ವಾಕಾಂಕ್ಷೆ ಇದ್ದ ಸಾಮ್ರಾಟರ ಮಂತ್ರ. ಮಂತ್ರದ ಚಿನ್ನ ಎಂದಿದ್ದರೂ ಕೃತಕ ಚಿನ್ನವೇ. ನಕಲಿ ಚಿನ್ನದಿಂದ ಸಾಮ್ರಾಜ್ಯ ಗಳಿಸಬಹುದು. ಆದರೆ ಉಳಿಸಲಾಗದು! ಸಾಮ್ರಾಜ್ಯ ಉಳಿಯಬೇಕಾದರೆ ಅಸಲಿ ಚಿನ್ನವೇ ಬೇಕು. ಅದಕ್ಕಾಗಿ ಒಂದು ನಿಧಿ ತೋರಿಸುತ್ತೇನೆ.”

“ಬೇಗ ಹೇಳು ಗುರುವೇ.”

“ಮೂರು ವರ್ಷ ಆ ಗವಿಗೆ ಮಣ್ಣು ಹೊತ್ತೆಯಲ್ಲ, ಗವಿಯಡಿಯ ಮಡುವಿನಲ್ಲಿ ಚಿನ್ನ ಬೀಳುತ್ತಿದ್ದುದನ್ನು ನೋಡಲಿಲ್ಲವೆ?”

“ಹೌದು ಬೀಳುತ್ತಿತ್ತು!”

“ಮತ್ತೆ ಬುಡದಿಂದ ತುದಿಯವರೆಗೆ ಗವಿಯ ಅಖಂಡ ಬಂಡೆ ಚಿನ್ನದ್ದೆಂದು ಹೊಳೆಯಲಿಲ್ಲವೆ?”

ತನ್ನ ಪ್ರತಿಭೆಯನ್ನು ಅಣಕಿಸಿದ ನಾಗಾರ್ಜುನನ ಮಾತು ಕೇಳಿ ಶಿಖರಸೂರ್ಯನಿಗೆ ವಿದ್ಯುತ್ ಪ್ರವಾಹದಲ್ಲಿ ಕೊಚ್ಚಿ ಹೋದಂತೆನಿಸಿತು. ಕಣ್ಣಲ್ಲಿ ಪ್ರಕರವಾದ ಬೆಳಕು ಹೊಳೆಯಿತು. ಏನನ್ನೋ ಕೇಳಲು ಬಾಯಿ ತೆರೆಯುವುದರೊಳಗೆ ಮತ್ತೆ ನಾಗಾರ್ಜುನನೇ ಗುಡುಗಿದ:

“ನನಗೆ ಶಾಪವಿದ್ದುದರಿಂದ ಸೋತೆ. ನೀನು ಹೋಗು ಅದರ ಒಡೆಯನಾದರೆ ನೀನೆ ಇಂದ್ರ! ನೀನೇ ಚಂದ್ರ! ಹತ್ತು ಸಾಮ್ರಾಜ್ಯಗಳನ್ನು ಅಂಗೈಯಲ್ಲಿಟ್ಟುಕೊಂಡು ಆಳಬಹುದು.”

“ಆದರೆ….”

“ಇಲ್ಲಿ ನೋಡಿದ್ದನ್ನ ನೋಡಿದೆನೆನ್ನಬೇಡ. ಇಲ್ಲಿ ಕೇಳಿದ್ದನ್ನ ಕೇಳಿದೆನೆನ್ನಬೇಡ. ನೋಡಿದೆ ಕೇಳಿದೆನೆಂದರೆ ಅದೇ ನಿನ್ನ ಕೇಡು!”

ಎಂದು ಹೇಳಿ ಪ್ರತಿಕ್ರಿಯೆಗೆ ಕಾಯದೆ ಗರುಡನಾಗಿ ಪರಿವರ್ತನೆ ಹೊಂದಿ ಹಾರುತ್ತ ಆಗಸಕ್ಕೇರಿ ನೀಲಿಮದಲ್ಲಿ ಕರಗಿ ಹೋದ.

# ಐವತ್ತು

ಶಿಖರಸೂರ್ಯ ಆನಂದಸಾಗರದಲ್ಲಿ ತೇಲಾಡುತ್ತಿದ್ದ. ನಾಗಾರ್ಜುನ ಕಾಂತಿಯಿಂದ ಹೊಳೆವ ಬಿಳಿಯ ಹಕ್ಕಿಯಾಗಿ ಹಾರುತ್ತ ಆಗಸದ ನೀಲಿಮದಲ್ಲಿ ಲೀನವಾದುದನ್ನು ಹೃತ್ಪೂರ್ವಕ ಪ್ರೀತಿಯಿಂದ ನೋಡಿದ. ಬೀಳ್ಕೊಡುವಂತೆ ಭಕ್ತಿಯಿಂದ ಎರಡೂ ಕೈ ಜೋಡಿಸಿ ಎತ್ತಿ, ನೆತ್ತಿಯ ಮ್ಯಾಲಿಟ್ಟುಕೊಂಡು ನಮಸ್ಕರಿಸಿದ ಆಮೇಲೆ ಸಮಾಧಾನದಿಂದ ಶಿಖರದ ಮ್ಯಾಲಿಂದ ಇಳಿದ. ಇಳಿಯುವಾಗ ಏರುವಾಗಿನಂಥ ಕಷ್ಟವಾಗಲಿಲ್ಲ.

ಕೆಳಕ್ಕಿಳಿದು ಬಂದಾಗ ಶರತ್ಕಾಲದ ಛಳಿಯಿತ್ತು. ನೆಲದ ಮೇಲೆ ಮಂಜುಬಿದ್ದು ಒದ್ದೆಯಾಗಿತ್ತು. ಎಲ್ಲ ಕಡೆ ಹಸಿರು, ಹಸಿರಿನ ಮೇಲೆ ಸೂರ್ಯನ ಬಂಗಾರ ವರ್ಣದ ಬಿಸಿಲು ಬಿದ್ದು ಹೊಲಗದ್ದೆ, ಕಾಡುಗಳೆಲ್ಲ ಹಸಿರು ಹಳದಿ ಬೆರೆತ ಕಾಂತಿಯಿಂದ ಹೊಳೆಯುತ್ತಿದ್ದವು. ಹುಲ್ಲುಗರಿಕೆಯಿದ್ದಲ್ಲಿ ಮೊಲಗಳು ಓಡಾಡುತ್ತಿದ್ದವು. ಎಲ್ಲೆಲ್ಲೂ ಕಾಡುಹೂಗಳರಳಿ ಅವುಗಳ ಪರಿಮಳಗಳು ಘಮ್ಮಂತ ಮುಗು ತುಂಬಿ ಜೀವಿಗಳಲ್ಲಿ ಉತ್ಸಾಹ ಚಿಮ್ಮಿಸುತ್ತಿದ್ದವು. ಹೊಲಗದೆಗಳಲ್ಲಿ ಉತ್ಸಾಹದ ರೈತಾಪಿ ಜನ ಫಸಲು ಕುಯ್ಯುವುದರಲ್ಲಿ, ಕುಯ್ದುದನ್ನು ಗೂಡು ಹಾಕುವುದು, ತೆನೆ ಬಿಡಿಸುವುದು, ರಾಶಿ ಆಡುವುದೇ ಮುಂತಾದ ಚಟುವಟಿಕೆಗಳಲ್ಲಿ ತಲ್ಲೀನರಾಗಿದ್ದರು. ಹುಡುಗ ಹುಡುಗಿಯರು ಕೆಲಸ ಮಾಡುವ ನೆಪದಲ್ಲಿ ಆಸೆಬುರುಕತನದಿಂದ ಪರಸ್ಪರ ನೋಡುತ್ತ ಸಾಧ್ಯವಾದರೆ ಪರಸ್ಪರ ತಗಲುತ್ತ ನಗಾಡುತ್ತಿದ್ದರು. ಕೆಲವರಾಗಲೇ ಹಂತಿ ತಿರುಗಿಸುತ್ತ ದೂರದ ಪ್ರೇಮಿಗಳಿಗೆ ಹಾಡಿನ ಮೂಲಕ ಸಂದೇಶ ಕಳಿಸುತ್ತಿದ್ದರು. ಸುಗ್ಗಿಯ ಸಮೃದ್ಧಿಯನ್ನು ನೋಡಿ ಶಿಖರಸೂರ್ಯನ ಕನಸುಗಳು ಶ್ರೀಮಂತಿಕೆಯಿಂದ ಕೊಬ್ಬಿದವು.

ಅನತಿದೂರದಲ್ಲಿ ಒಬ್ಬ ರೈತನ ಸುಂದರವಾದ ತೋಟಕ್ಕೆ ಹೋದ. ಅಂಚಿನಲ್ಲಿ ಒಂದು ಗುಡಿಸಲ ಮನೆಯಿತ್ತು. ಅಂಗಳದಲ್ಲಿ ಎತ್ತರವಾದ ಬೆಲೆಯುಳ್ಳ ಕುದುರೆ ನಿಂತಿತ್ತು. ಶಿಖರಸೂರ್ಯ ಕುದುರೆಯನ್ನು ಮೆಚ್ಚಿಕೊಂಡು ಅದರ ಸುತ್ತ ಅಲೆದು ನೋಡಿದ. ಮುದ್ದಾಂ ಮೇಯಿಸಿದ ಘನಾಂದಾರಿ ಕುದುರೆ ಅದು. ಕರೀ ಮೈ ಮಿರ ಮಿರ ಮಿಂಚುತ್ತಿತ್ತು. ಕಣ್ಣುಗಳೆರಡೂ ಹರಿತವಾದ ಖಡ್ಗದಂತಿದ್ದವು. ಇವನು ಹೀಗೆ ಹಿಂದೆ ಮುಂದೆ ಸರಿದು ಮೆಚ್ಚುಗೆಯಿಂದ ಕುದುರೆಯನ್ನು ನೋಡುತ್ತಿದ್ದಾಗ ಎಲ್ಲಿಂದಲೋ ಪ್ರತ್ಯಕ್ಷವಾದ ನಾಯಿ ಬೊಗಳುತ್ತ ಓಡಿ ಬಂತು. ಅವನ ಮೇಲೆ ಹಾರಬೇಕೆಂಬಷ್ಟರಲ್ಲಿ ಅದರ ಮುಖ ಹಿಡಿದು ಬಾಯಿಂದ ಗುಬ್ಬಚ್ಚಿಯಂಥ ದನಿ ಮಾಡಿ ಅಚ್ಚೆ ಮಾಡಿದ. ನಾಯಿ ಅವನ ವಾಸನೆಗೆ ಮಂತ್ರಮುಗ್ಧವಾಗಿ ತನ್ನ ಹಳೆಯ ಯಜಮಾನನ ಗುರುತಿಸಿದಂತೆ ನಾಲಗೆ ಹಿರಿದು ಜೊಲ್ಲು ಸುರಿಸುತ್ತ ಬಾಲ ಅಲುಗಾಡಿಸತೊಡಗಿತು. ಶ್ವಾನಕೂಪದ ನಾಯಿಗಳನ್ನೇ ಪಳಗಿಸಿದವನಿಗೆ ಇದು ದೊಡ್ಡದಲ್ಲ.

ರೈತರು ಬೇರೊಂದು ಕಡೆಗೆ ಕೆಲಸದಲ್ಲಿ ತೊಡಗಿದ್ದುದರಿಂದ ಗುಡಿಸಲಲ್ಲಿ ನೋಡಿಕೊಳ್ಳುವವರು ಯಾರೂ ಇರಲಿಲ್ಲ. ಶಿಖರಸೂರ್ಯ ಗುಡಿಸಲೊಳಕ್ಕೆ ನುಗ್ಗಿದ. ಅಷ್ಟರಲ್ಲಿ ತುಂಬಿದ ಭಾರವಾದ ಬುಟ್ಟಿಯನ್ನು ಹೊತ್ತುಕೊಂಡು, ನಲವತ್ತು ವಯಸ್ಸಿನ ಹೆಂಗಸೊಬ್ಬಳು ಗುಡಿಸಲಿಗೆ ಬಂದಳು. ತಕ್ಷಣ ಈತ ಅಡಗಿದ. ಸಾದು ಬಣ್ಣದ ಆ ಹೆಂಗಸು ಕಷ್ಟಪಟ್ಟು ಬುಟ್ಟಿ ಇಳಿಸಿ, ನೀರು ತರಲು ಬರಿ ಬಿಂದಿಗೆ ತಗೊಂಡು ಹೊರಗೆ ಹೋದಳು. ಬುಟ್ಟಿಯಲ್ಲಿ ಮಾಡಿಟ್ಟ ಅಡಿಗೆ ಗಮಗಮ ನಾರುತ್ತಿತ್ತು. ಬಡಿಸಿಕೊಂಡು ಗಬಗಬ ತಿಂದ. ಸ್ವಲ್ಪ ಸಮಯದಲ್ಲಿ ನೀರು ತುಂಬಿಕೊಂಡು ಒಳಗೆ ಬಂದ ಹೆಂಗಸು ಇವನನ್ನು ನೋಡಿ ಕಿಟಾರನೆ "ಕೋತಿ" ಎಂದು ಬಾಯಿ ಬಾಯಿ ಬಡಿದುಕೊಳ್ಳತೊಡಗಿದಳು. ಇವನು ಅವಳ ಕಡೆಗೆ ನೋಡಲು ಇಲ್ಲ. ತಿನ್ನುವುದನ್ನು ನಿಲ್ಲಿಸಲೂ ಇಲ್ಲ. ನಾಯಿ ಮಾತ್ರ ಬಾಲ ಅಲ್ಲಾಡಿಸುತ್ತಲೇ ಇತ್ತು. ದೂರದಲ್ಲಿಯ ಜನಗಳನ್ನು ಕರೆತರೋಣವೆಂದು ಅವಳು ಓಡಿಹೋದಳು.

ಆ ಹೆಂಗಸ್ಯಾಕೆ ಹಾಕೆ ಕಿರುಚಿದಳೆಂದು ಶಿಖರಸೂರ್ಯ ತನ್ನ ತಾ ನೋಡಿಕೊಂಡರೆ ಆಶ್ಚರ್ಯವಾಯಿತು. ಹುಲುಸಾಗಿ ತಲೆಗೂದಲು ಕೆದರಿ ಕೆಲವು ಕಡೆ ಧೂಳು ಮೆತ್ತಿ ಜಡೆಗಟ್ಟಿತ್ತು. ಗಡ್ಡ ಮೀಸೆ ಹ್ಯಾಗೆಂದರೆ ಹಾಗೆ ಬೆಳೆದು ಅಲ್ಲಲ್ಲಿ ಮಣ್ಣು ಮೆತ್ತಿ ಚರಂಡಿಯಲ್ಲಿ ಉರುಳಾಡಿ ಬಂದಂತೆ ಕಾಣುತ್ತಿತ್ತು. ಮೈ ಗಲೀಜಾಗಿ ಬೆವರೊಣಗಿ ಅಂಟಂಟಾಗಿ ಗಬ್ಬೆದ್ದು ನಾರುತ್ತಿತ್ತು. ಸೊಂಟದ ಚಿಂದಿ ವಿನಾ

ಮೈಮೇಲೆ ಬಟ್ಟೆಯಿರಲಿಲ್ಲ. ಅಷ್ಟರಲ್ಲಿ ಇನ್ನಿಬ್ಬರು ಹೆಂಗಸರು ಬಂದು ಬಾಯಿ ಮಾಡುತ್ತಿದ್ದಂತೆ ಶಿಖರಸೂರ್ಯ ಅಂಗಳದಲ್ಲಿ ಕಟ್ಟಿದ್ದ ಕುದುರೆಯನ್ನ ಬಿಚ್ಚಿಕೊಂಡು ಹತ್ತಿ ಓಡಿಸಿದ.

ಮೊದಲು ಸುಕ್ರನನ್ನು ನೋಡಿ ಸಾಧ್ಯವಾದಷ್ಟು ಸೈನ್ಯ ಕೂಡಿಸಿಕೊಂಡು ನಾಳೆಯೇ ಬಂಡೆಯನೊಂದಿಗೆ ಕನಕಪುರಿಗೆ ಬರಬೇಕೆಂದು ತಿಳಿಸಿ ತಾನು ಕನಕಪುರಿ ಮಾರ್ಗದಲ್ಲಿ ದೌಡಾಯಿಸಿದ.

ಅವಸರವಸರದಲ್ಲಿ ಒಂದು ಕಡಿಮೆ ನಲವತ್ತರ ಎರಡು ಆಳ್ಪಡೆಗಳನ್ನು ಕೂಡಿಸಿಕೊಂಡು ಸುಕ್ರ ಬಂಡೆಯರು ಕನಕಪುರಿಗೆ ತಲುಪುವುದರೊಳಗೆ ಅಗತ್ಯವಿರುವಷ್ಟು ಚಿನ್ನ ಮತ್ತು ಮೂರು ಸಾವಿರ ಸೈನ್ಯದೊಂದಿಗೆ ಶಿಖರಸೂರ್ಯ ಇವರಿಗಾಗಿ ಕಾಯುತ್ತಿದ್ದ! ಮೂವರೂ ಕೂಡಿಕೊಂಡು ಆಕ್ರಮಣದ ಯೋಜನೆ, ಉಪಾಯ, ನಿರ್ವಹಣೆಗಳನ್ನು ತಯಾರಿಸಿ ರಾಜಧಾನಿಯ ಹೊರಗೆ ಸೈನ್ಯ ನಿಲ್ಲಿಸಿ ಸಂಧಿವಿಗ್ರಹಿಯಾಗಿ ಸುಕ್ರನನ್ನು, ಬೇಹುಗಾರಿಕೆಗಾಗಿ ಬಂಡೆಯನನ್ನು ಕಳಿಸಿ ತಾನು ಹೊರಗೇ ನಿಂತ.

## ಐವತ್ತೊಂದು

ಈ ಸಲದ ಚಳಿಗಾಲ ಹರಿತವಾಗಿತ್ತು. ದೊಡ್ಡ ಪಡೆ ತಗೊಂಡು ರಾಜನೊಬ್ಬ ತಮ್ಮ ಮೇಲೆ ಏರಿಬಂದಾನೆಂದು ಕನಕಪುರಿಯ ಯಾವ ಮುತ್ಸದ್ದಿ ರಾಜಕಾರಣಿಯೂ ಊಹಿಸಿರಲಿಲ್ಲ. ಯಾವ ದೇವರೂ ಕಾಲಜ್ಞಾನ ನುಡಿದಿರಲಿಲ್ಲ. ಚಳಿಯಿಂದಾಗಿ ರಸ್ತೆಗಳು ಬೆಳಗಿನ ನಾಕು ತಾಸು ಹೊತ್ತೇರುವ ತನಕ ಭಿಕೋ ಎನ್ನುತ್ತಿದ್ದವು. ಅಂಗಡಿ ಬಾಗಿಲು ಕೂಡ ತೆರೆಯುತ್ತಿರಲಿಲ್ಲ. ರಸ್ತೆ ಗುಡಿಸುವವರ ವಿನಾ ಬೇರೆ ಯಾರೂ ರಸ್ತೆಗಳಲ್ಲಿ ಕಾಣಿಸುತ್ತಿರಲಿಲ್ಲ ಆದರೆ ಪರಿಚಯವಿಲ್ಲದ, ಎತ್ತರ ಮತ್ತು ದಷ್ಟಪುಷ್ಟ ದೇಹಾಕೃತಿಯ, ಅಹಂಕಾರದ ನೋಟಗಳ ಕೆಲವರು ರಸ್ತೆಗಳಲ್ಲಿ ಮತ್ತು ಅರಮನೆ ಮತ್ತು ಮಂತ್ರಿ ಮನೆಯ ಆಸುಪಾಸು ಹಾದಾಡುತ್ತಿದ್ದರು. ಕಸಗುಡಿಸುವವರು ಅವರನ್ನ ಗಮನಿಸಿದ್ದರೂ ಇನ್ನೊಬ್ಬರ ಉಸಾಬರಿ ತಮಗ್ಯಾಕೆಂದು ಅವರೂ ನಿರ್ಲಿಪ್ತರಾಗಿದ್ದರು.

ಬಿಸಿಲು ಬಿರುಸಾದ ಮೇಲೆ ಒಂದೊಂದೇ ಅಂಗಡಿ ಬಾಗಿಲು ತೆರೆಯತೊಡಗಿದವು. ಹಣ್ಣು ತರಕಾರಿ ಮಾರುವ ರೈತರು ಪೇಟೆ ರಸ್ತೆಯಲ್ಲಿ ತಂತಮ್ಮ ವಸ್ತುಗಳನ್ನು ಹರಹಿ ಗಿರಾಕಿಗಳಿಗಾಗಿ ಕಾಯತೊಡಗಿದರು. ಕಂಬಳಿ ಮಾರುವವರಿಗೆ ಚಳಿ ಅನುಕೂಲವಾಗಿತ್ತು. ಬರಬರುತ್ತ ಕೌದಿ ಮಾರುವವರು, ಅಗ್ಗದ ಚಾಕು ಚೂರಿ ಮಾರುವವರು, ಕರಿದ ತಿಂಡಿ ಮಾರುವವರ ಚಟುವಟಿಕೆ ಹೆಚ್ಚಾದವು. ಲೈಂಗಿಕ ಶಕ್ತಿ ವೃದ್ಧಿಸುವ ವನಸ್ಪತಿಯ ಮಾತ್ರೆ ಮಾರುವವನ ಸುತ್ತ ಆಗಲೇ ಜನ ಸೇರಿದ್ದರು. ಅವನ ಸುತ್ತ ಧೂಳು, ದನಿ, ಗದ್ದಲವಿತ್ತು. ಬೀದಿನಾಯಿಗಳು ಬೊಗಳುತ್ತಿದ್ದವು.

ರಸ್ತೆಯಂಚಿನ ದೇವಾಲಯದ ಮುಂದೆ ಭಿಕ್ಷುಕರಾಗಲೇ ಸಾಲಾಗಿ ಕೂತು, ತಮ್ಮ ಕೊರತೆಗಳು ಮತ್ತು ಕೃತಕ ಗಾಯಗಳನ್ನು ಪ್ರದರ್ಶಿಸಿ, ದಾನಮಾಡಿದವರಿಗೆ ಪರಲೋಕದಲ್ಲಿ ಪುಣ್ಯ ಸಿಕ್ಕುವ ವಾಗ್ದಾನ ಮಾಡುತ್ತಿದ್ದರು. ಯಾರೊಬ್ಬರು ಭಕ್ತಾದಿಗಳು ಬಂದರೂ ಇವರು ದನಿದೋರಿ, ಒದರಿ ಇಲ್ಲವೇ ಅಂಗಲಾಚಿ ಇಲ್ಲವೆ ಹಲುಬಿ ತಮ್ಮ ದಯನೀಯ ಸ್ಥಿತಿಯನ್ನು ಪ್ರದರ್ಶಿಸಿ ಕರುಣೆ ಬರುವಂತೆ ಮಾಡುವುದರಲ್ಲಿ ಸ್ಪರ್ಧೆ ನಡೆಸಿದ್ದರು.

ಆದರೆ ಬೀದಿಗಳಲ್ಲಿ ಹಾದಾಡುವ ನಾಗರಿಕರಲ್ಲಿ ಹೊರಗೆ ಹೇಳಲಾರದ ಭೀತಿ ಕೊರೆಯುತ್ತಿದ್ದುದು ಸ್ಪಷ್ಟವಿತ್ತು. ಇವತ್ತಿನ ವ್ಯಾಪಾರ ಎಂದಿನಂತಿರಲಿಲ್ಲ. ಕೆಲವರು ಇಬ್ಬರೇ ಗುಂಪಾಗಿ ಏನೇನೋ ಮಾತಾಡಿಕೊಳ್ಳುತ್ತ ಇನ್ನೊಬ್ಬರು ಬಂದರೆ ತಕ್ಷಣ ಗುಂಪೊಡೆದು ಬೇರೆ ದಾರಿ ಹಿಡಿದು ಜಾರಿಕೊಳ್ಳುತ್ತಿದ್ದರು. ಏರಿ ಬಂದವರು ಕಂಚಿಯ ಸಾಮ್ರಾಟರೆಂದು, ಬಿಳಿಗಿರಿ ಮಹಾರಾಜರೆಂದು, ಮಾಳವದ ಚಕ್ರವರ್ತಿಗಳೆಂದು - ಗುಂಪಿನಿಂದ ಗುಂಪಿಗೆ ಹೆಸರು ಬದಲಾದರೂ ಅಂತೂ ಒಬ್ಬ ಬಲಾಢ್ಯ ಮಹಾರಾಜ ದೊಡ್ಡ ಪಡೆಯೊಂದಿಗೆ ಕನಕಪುರಿಯ ಮೇಲೆ ದಂಡೆತ್ತಿ ಬಂದಿರುವನೆಂದು ಮಾತಾಡುತ್ತ ಕಳವಳ ವ್ಯಕ್ತಪಡಿಸುತ್ತಿದ್ದರು. ರೋಗಿಷ್ಟ ರಾಜ, ನರಗಳಿಲ್ಲದ ಮಂತ್ರಿ, ಸೇನಾಪತಿಯಿಲ್ಲದ ಸೈನ್ಯದಿಂದ ಏನಾದೀತೆಂದು, ಅಧೋಗತಿಯಲ್ಲದೆ ಬೇರೆ ಗತಿ ಇಲ್ಲವೆಂದು ಮಾತಾಡಿಕೊಳ್ಳುತ್ತಿದ್ದರು. ಬದಗನನ್ನು

ಶ್ವಾನಕೂಪಕ್ಕೆ ತಳ್ಳಿದ್ದರಿಂದ ಹೀಗಾಯಿತೆಂದು ಕೆಲವರೆಂದರೆ ಶಿಖರಸೂರ್ಯನನ್ನು ಹೊರಹಾಕಿದ್ದೇ ಇದಕ್ಕೆ ಕಾರಣವೆಂದು ಕೆಲವರೆಂದರು. ದಂಡೆತ್ತಿ ಬಂದಿರುವಾತ ಶಿಖರಸೂರ್ಯನೆಂದು ಮಾತ್ರ ಇನ್ನೂ ಯಾರಿಗೂ ಗೊತ್ತಿರಲಿಲ್ಲ. ಮಹಾರಾಜ ಹಾಸಿಗೆ ಬಿಟ್ಟೇಳುವ ಸ್ಥಿತಿಯಲ್ಲಿಲ್ಲವೆಂದೂ ಈಗ ರಾಜ್ಯವನ್ನ ಉಳಿಸುವುದು ಮಹಾರಾಣಿಗೆ ಮಾತ್ರ ಸಾಧ್ಯವೆಂದೂ ಕೆಲವರು ಅಂದಾಡಿಕೊಂಡರು.

ದಂಡೆತ್ತಿ ಬಂದ ರಾಜನ ಸಂಧಿವಿಗ್ರಹಿ ಎರಡು ಸಲ ಮಹಾರಾಣಿಯನ್ನ ನೋಡಿ ಶರಣಾಗತಿಗೆ ಒಪ್ಪಿಸಿ ಹೋದನೆಂದು ಸುದ್ದಿಯಿತ್ತು. ಮಹಾರಾಣಿಯನ್ನು ನೋಡಲಿಕ್ಕೆ ನಿನ್ನೆ ರಾತ್ರಿ ಪ್ರಧಾನಿ ಹೋಗಿದ್ದನೆಂದೂ, ಮಹಾರಾಣಿ ಅವನ ಹೇಡಿ ಮುಖವನ್ನು ನೋಡಲು ತಿರಸ್ಕರಿಸಿದಳೆಂದು, ಭೇಟಿಯಾಗದ್ದಕ್ಕೆ ಮಂತ್ರಿ ಕೈ ಕೈ ಹಿಸುಕಿಕೊಂಡು ಶತಪಥ ತಿರುಗುತ್ತ ಚಿಂತಿಸುತ್ತಿರವನೆಂದೂ, ಅರಮನೆಯೊಂದಿಗೆ ಬಳಕೆಯಿದ್ದವರು ಆಡಿಕೊಂಡರು. ಬಾಣಕ್ಕಿಂತ ವೇಗವಾಗಿ ಸುದ್ದಿಗಳು, ಚಾಡಿಗಳು ಪಿಸುಮಾತುಗಳು ಹರಡಿದ್ದವು.

ಮಧ್ಯಾಹ್ನವಾಗುವುದಕ್ಕೆ ಪೂರ್ವತಯಾರಿಗೆಂಬಂತೆ ಸೂರ್ಯ ಪಶ್ಚಿಮಕ್ಕೆ ವಾಲಿದ್ದ. ಆಡುವ ಮಕ್ಕಳೂ ಇಲ್ಲದೆ ಬೀದಿಗಳು ನಿರ್ಜನವಾಗಿದ್ದವು. ದೇವಸ್ಥಾನದ ಬಳಿಯ ಭಿಕ್ಷುಕರನ್ನು ಕೂಡ ಓಡಿಸಿದ್ದರು. ಅಷ್ಟರಲ್ಲಿ ಅರಮನೆಯ ದಕ್ಷಿಣ ದ್ವಾರ ತೆರೆದು ದೇವಾಲಯಕ್ಕೆ ಮಹಾರಾಣಿ (ರಾಜಮಾತೆ) ಪ್ರವೇಶ ಮಾಡಿದಳು. ಆಕೆಯ ಬರವಿನ ಬಗ್ಗೆ ಮೊದಲೇ ಮಾಹಿತಿಯಿದ್ದ ಪುರೋಹಿತರು ಆಕೆಗೆ ಪೂರ್ಣಕುಂಭ ಸ್ವಾಗತ ನೀಡಲು ಮಂತ್ರೋಚ್ಚಾರಣೆ ಸುರುಮಾಡಿದೊಡನೆ ಬೇಡವೆಂದು ಮಹಾರಾಣಿ ಸನ್ನೆ ಮಾಡಿದಳು. ತಕ್ಷಣ ಅವರ ಬಾಯಿ ಮುಚ್ಚಿಕೊಂಡವು. ಮೌನದಿಂದಲೇ ಒಳಗೆ ಕರೆದೊಯ್ದರು. ಇಬ್ಬರು ಸೇವಕಿಯರು ಗರ್ಭಗುಡಿಯ ದ್ವಾರದಲ್ಲಿ ಬಾಡಿದ ಮಾಲೆಗಳಂತೆ ನಿಂತರು.

ಮಹಾರಾಣಿಯ ಆಜ್ಞೆಯಂತೆ ಬೆಳಗಿನಿಂದ ಬಗೆಬಗೆಯ ಪೂಜೆ ಪುನಸ್ಕಾರ ಯಜ್ಞ - ಯಾಗಾದಿಗಳನ್ನು ಮಾಡಿ ಮಾಡಿ ಆಶೀರ್ವಾದ ಪ್ರಸಾದ ವಿನಿಯೋಗವಷ್ಟೇ ಬಾಕಿ ಉಳಿದಿತ್ತು. ಮಹಾರಾಣಿ ಕುಬೇರನ ವಿಗ್ರಹದ ಮುಂದೆ ಕೂತು ನೀವೆಲ್ಲ ಹೊರಕ್ಕೆ ಹೋಗಿರೆಂದು ಸನ್ನೆ ಮಾಡಿದಳು. ಅವಸರದಿಂದ ಎಲ್ಲ ಪುರೋಹಿತರು ಹೋದಮೇಲೆ ಕೈ ಮುಗಿದು ಪ್ರಾರ್ಥಿಸುತ್ತ ಕೂತಳು.

ಯಜ್ಞ ಮಾಡಿದ ಹಿತಕರವಾದ ವಾಸನೆ ದೇವಾಲಯದ ತುಂಬ ಹರಡಿತ್ತು. ವಿಗ್ರಹದ ಸುತ್ತಮುತ್ತ ಹೂವಿನ ರಾಶಿ ಬಿದ್ದಿತ್ತು. ದೇವರ ಮುಂದಿನ ಯಜ್ಞಕುಂಡದಿಂದ ಇನ್ನೂ ಹೊಗೆ ಎದ್ದು ಸರ್ಪದಂತೆ ವಕ್ರವಾಗಿ ಸುತ್ತಿ ಮ್ಯಾಲೇರಿ ಮಾಯವಾಗುತ್ತಿತ್ತು.

ಮಹಾರಾಣಿಯ ಪ್ರಾರ್ಥನೆ ಮುಗಿದ ಮೇಲೆ ಮೊಳಕಾಲೂರಿ ಹಣೆ ನೆಲಕ್ಕೆ ತಾಗಿಸಿ ದೀರ್ಘಕಾಲ ನಮಸ್ಕರಿಸಿ ಎದ್ದಳು. ಅವಳು ಹಣೆ ಊರಿದಲ್ಲಿ ಕೆಂಪು ಕಣಗಿಲೆ ಹೂವು ಬಿದ್ದಿತು. ಅದು ರಕ್ತದ ಕಲೆಯಂತೆ ಕಂಡು ಥಟ್ಟನೇ ಎದ್ದು ಹೊರಟಳು. ಪಾಪಗಳು ಘನೀಭವಿಸಿ ಸುತ್ತ ಅಡರುತ್ತಿರುವಂತೆನಿಸಿತು. ಇವಳನ್ನೇ ನೋಡುತ್ತ ನಿಂತಿದ್ದ ಪುರೋಹಿತರು ಓಡಿಬಂದು ತೀರ್ಥಪ್ರಸಾದ ಕೊಡಬಂದರು. ಬೇಡವೆಂದು ಸನ್ನೆ ಮಾಡಿ ಹೊರ ನಡೆದಳು. ಮನಸ್ಸಿಗೆ ನೆಮ್ಮದಿ ಇರಲಿಲ್ಲ. ನವರಂಗದಲ್ಲಿ ಕಲಾತ್ಮಕವಾಗಿ ಕೆತ್ತಲಾದ ಒಂದುನೂರಾ ಎಂಟು ಎತ್ತರವಾದ ಕಂಬಗಳಿದ್ದವು. ಒಂದೊಂದು ಕಂಬದಲ್ಲೂ ತಾಂಡವ ನೃತ್ಯ ಮಾಡುವ ಶಿವನ ಅನೇಕ ಭಂಗಿಗಳ ವಿಗ್ರಹಗಳಿದ್ದವು.

ಮಹಾರಾಣಿ ಹೋದಮೇಲೆ ಪುರೋಹಿತರು ಆಶ್ಚರ್ಯಪಡುತ್ತ ನಿಂತರು. ಯಾಕೆಂದರೆ ಮಹಾರಾಣಿ ಹಿಂದೆ ಮಹಾರಾಜರು ಜೀವಂತವಾಗಿದ್ದಾಗ ಅವರೊಂದಿಗೆ ಒಂದೆರಡು ವಿಶೇಷ ಸಂದರ್ಭಗಳಲ್ಲಿ ದೇವಸ್ಥಾನಕ್ಕೆ ಬಂದವಳೇ ಹೊರತು ಒಬ್ಬಳೇ ಬಂದವಳೇ ಅಲ್ಲ ಅವರಿಗೆಲ್ಲ ಆಶ್ಚರ್ಯವಾಯಿತು. ಯಾಕೆನೆ ಆಕೆ ದೇವರಲ್ಲಿ ನಂಬಿಕೆ ಇಟ್ಟವಳಲ್ಲ. ತಾನಾಗಿ ದೇವಸ್ಥಾನಕ್ಕೆ ಬಂದವಳಲ್ಲ. ತೀರ್ಥಪ್ರಸಾದ ಕೊಂಡವಳಲ್ಲ. ಭಕ್ತಿ ಮಾಡಿದವಳಲ್ಲ. ಆದರೂ ಬಂದಿದ್ದಳಲ್ಲ! ಬಹುಶಃ ಈಗಿನ ಸಂದರ್ಭದಲ್ಲಿ ಮನೆತನದ ಪರವಾಗಿ ಪ್ರಾರ್ಥಿಸಲಿಕ್ಕಿರುವ ಹಿರಿಯ ವ್ಯಕ್ತಿ ಅವಳೇ ಆದ್ದರಿಂದ ಬಂದಿರಬಹುದೆಂದುಕೊಂಡರು. ಅವಳು ಹೋದ ಮೇಲೆ ಮಾತ್ರ ಎಲ್ಲ ಪುರೋಹಿತರು ಹಗುರ ಮನಸ್ಸಿನವರಾದರು.

# ಐವತ್ತೆರಡು

ಅದೇ ದಿನ ದೇವಸ್ಥಾನದಿಂದ ಬಂದೊಡನೆ ದಂಡೆತ್ತಿಬಂದವನು ಶಿಖರಸೂರ್ಯನೆಂಬ ಸುದ್ದಿ ಗೊತ್ತಾಗಿ ಮಹಾರಾಣಿ ಪ್ರಧಾನಿಯನ್ನ ಕರೆಕಳಿಸಿ - ಸಂದರ್ಭವನ್ನು ಹ್ಯಾಗೆ ನಿಭಾಯಿಸುವುದೆಂದು ಚರ್ಚಿಸಿದಳು. ಚಿತ್ತ ಕದಡಿ ಅತ್ತಿತ್ತ ಅಲೆದಾಡುತ್ತ, “ನಾನು ಅವನನ್ನ ನಂಬಲಾರೆ, ಅವನೊಬ್ಬ ಕುತಂತ್ರಿ. ಅವನು ಬದುಕಿರೋತನಕ ನಮಗೆ ಕುತ್ತು ತಪ್ಪಿದ್ದಲ್ಲ” ಎಂದು ಹೇಳಿ ಹಲ್ಲು ಕಚ್ಚಿ ಮುಷ್ಟಿ ಬಿಗಿದು ಪೀಠಕ್ಕೆ ಗುದ್ದಿ ಕುಕ್ಕರಿಸಿದಳು.

ಅವು ಮಳೆಯ ದಿನಗಳಲ್ಲವಾದರೂ ಸಂಜೆ ಒಂದು ಸರಳು ತುಂತುರು ಮಳೆ ಬಂದು ವಾತಾವರಣ ಧೂಳಿಲ್ಲದೆ ನಿಚ್ಚಳವಾಗಿತ್ತು. ಪ್ರಧಾನಿ ಸಾಧ್ಯವಾದಷ್ಟೂ ಕಣ್ಣಿಗೆ ಕಣ್ಣು ಕೊಟ್ಟು ನೋಡುತ್ತಿರಲಿಲ್ಲ. ಆಕೆ ಬೇರೆ ಕಡೆ ನೋಡುತ್ತಿದ್ದಾಗ ಮಾಹಾರಾಣಿಯನ್ನೇ ಟಕಮಕ ನೋಡುತ್ತ ಸನ್ನಿವೇಶದ ಗಂಭಿರತೆಗೆ ಭೀತನಾಗಿ ತಬ್ಬಿಬ್ಬಾಗಿದ್ದ ದಾಸಾನುದಾಸನಂತೆ ಹಲ್ಲು ಗಿಂಗುತ್ತ, ಆಕೆ ಮಾತಾಡಿದೊಡನೆ ಕಿವಿಗೊಟ್ಟು ಭಯಭಕ್ತಿಯಿಂದ ಕೇಳಿಸಿಕೊಳ್ಳುತ್ತ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಭಾರೀ ಆಸಕ್ತಿಯನ್ನು, ನಿಷ್ಠೆಯನ್ನು ಅಭಿನಯಿಸುತ್ತಿದ್ದ.

“ಹೇಳು ಪ್ರಧಾನಿ, ಅವನ ಸೈನ್ಯ ಎಷ್ಟಿದೆ?” ಎಂದೊಡನೆ,

ಎದ್ದು ನಿಂತು ಹೇಳಿದ:

“ಮೂರು ಸಾವಿರಕ್ಕೂ ಮೇಲ್ಪಟ್ಟು ಅವನ ಸೈನ್ಯವಿದೆ ಮಹಾರಾಣಿ. ಅವರಲ್ಲಿ ಸಾವಿರ ಸೈನಿಕರ ಕೈಯಲ್ಲಿ ಶಸ್ತ್ರಾಸ್ತ್ರಗಳಿವೆ. ವಿಷದ ಬಿಲ್ಲುಬಾಣದವರೇ ಒಂದು ಕಡಿಮೆ ನಲವತ್ತರ ಆರು ಪಡೆಗಳಿವೆಯಂತೆ. ಮುನ್ನೂರು ಮಾರಕಾಸ್ತ್ರಗಳಿವೆ. ಉಳಿದವರ ಕೈಯಲ್ಲಿ ಕೋಲು ದೊನ್ನೆಗಳಿವೆ.”

“ಕೂತುಕೋ.”

ಎಂದಳು ಮಹಾರಾಣಿ. ಪ್ರಧಾನಿ ಕೈ ಕೈ ಹೊಸೆಯುತ್ತ ಚಡಪಡಿಸುತ್ತ ಕೂತ. ಮತ್ತೆ ಕೇಳಿದಳು -

“ಈಗ ಹೇಳು, ನಮ್ಮ ಸೈನ್ಯದ ಸ್ಥಿತಿಗತಿ ಏನು?”

ಪ್ರಧಾನಿ ಮತ್ತೆ ಎದ್ದು ನಿಂತು, –

“ಕ್ಷಮಿಸಬೇಕು ಮಹಾರಾಣಿ, ಎಲ್ಲಾ ಮಾಂಡಳಿಕರ ಸೈನ್ಯ ಸೇರಿದರೂ ನಮ್ಮ ಸೈನ್ಯ ಒಂದೂವರೆ ಸಾವಿರವಾಗಲಾರದು. ಆಕ್ರಮಣದ ಅಂದಾಜು ನಮಗಾಗಲಿಲ್ಲ. ಬಂಟರು ತಂತಮ್ಮ ಊರು ಕೇರಿಗೆ ಹೋಗಿದ್ದಾರೆ. ಸಂಬಳವಿಲ್ಲದೆ ಬೇರೆಯವರ ಸೈನ್ಯ ಸೇರಿಕೊಂಡಿದ್ದಾರೆ. ಈಗಿದ್ದವರ ನಿಷ್ಠೆಯನ್ನು ಕೂಡ ನಂಬಲಾಗುತ್ತಿಲ್ಲ.”

“ಯಾಕೆ ? ಯಾಕೆ?”

“ಬದೆಗನನ್ನು ಹಿಂಸಿಸಿದ್ದು ನಾವಾಗಿ ಅಪಾಯವನ್ನ ಮೈಮ್ಯಾಲೆಳೆದುಕೊಂಡಂತಾಗಿದೆ ಮಹಾರಾಣಿ. ಹೆಚ್ಚಿನ ಬಂಟರು ಅವನ ಜಾತಿಯವರು. ಸುಕ್ರ ಬೇರೆ ಶಿಖರಸೂರ್ಯನ ದಂಡಿನಲ್ಲಿ ದೊಡ್ಡ ಬಂಟನಾಗಿದ್ದಾನೆ.”

– ಎಂದು ಹೇಳಿ ಕೂತ.

“ನಮ್ಮ ಗುಪ್ತಚಾರರು ಏನಾದರೂ ಹೇಳಿದ್ದಿದೆಯೊ?”

– ಎಂದಳು ಮಹಾರಾಣಿ. ಪ್ರಧಾನಿ ಪುನಃ ಎದ್ದು ನಿಂತು ನೋಡುತ್ತ ಹಸ್ತ ಹೊಸೆಯುತ್ತ ಹೇಳಿದ:

“ರಾಜಧಾನಿಯ ತುಂಬ ಶಿಖರಸೂರ್ಯನ ಗುಪ್ತಚಾರರೇ ತುಂಬಿದ್ದಾರೆ ಮಹಾರಾಣಿ, ನಮ್ಮ ಅನೇಕ ಗಣ್ಯರು ಅವನ ಭೇಟಿಗೆ ಕದ್ದು ಹೋಗುತ್ತಿದ್ದಾರೆ. ಭೇಟಿಯಾದವರಿಗೆಲ್ಲ ಮುಷ್ಟಿತುಂಬ ಚಿನ್ನ ಕೊಟ್ಟು ತನ್ನ ಕಡೆ ಒಲಿಸಿಕೊಳ್ಳುತ್ತಿದ್ದಾನೆ. ನಮಗೆ ನಿಷ್ಠರಾದವರಾರೋ, ವೈರಿಗಳ್ಯಾರೋ ತಿಳಿಯದಾಗಿದೆ.”

“ಈ ಸಭೆಗೆ ವರ್ತಕ ಸಂಘದ ಪ್ರತಿನಿಧಿಗಳನ್ನ ಕರೆಯಲಿಲ್ಲವೆ?”

“ಅವರಿಂದ ಬಂದ ಸುದ್ದಿಯಂತೂ ಇನ್ನೂ ಭಯಾನಕವಾಗಿದೆ. ವರ್ತಕ ಸಂಘದ ಬಹುತೇಕ ವರ್ತಕರು ಅವನ ಕಡೆಗೆ ವಾಲಿದ್ದಾರೆ. ವರ್ತಕ ಸಂಘದ ಪದಾಧಿಕಾರಿಗಳು ನನ್ನ ಕಡೆ ನೋಡಿ ಮುಖ ತಿರುಗಿಸಿಕೊಂಡು ಹೋದರು! ಹೇಳಿ ಕಳಿಸಿದರೆ ಮನೆಯಲ್ಲಿದ್ದೂ ಇಲ್ಲವೆಂದು ಹೇಳಿದರು. ಏನು ಮಾಡಲಿ ಮಹಾರಾಣಿ? ತಾವು ಅಪ್ಪಣೆ ಕೊಟ್ಟರೆ ಒಂದು ಮಾತು ಹೇಳೋಣ ಅಂತಿದ್ದೇನೆ.”

“ಹೇಳು.”

“ಶಿಖರಸೂರ್ಯ ಹೊರಗಿನವನಲ್ಲ, ನಡಾವಳಿಯಿಂದ ನಮಗೆ ಅಳಿಯನಾಗಬೇಕು. ಉಪಾಯದಿಂದ ಅವನೊಂದಿಗೆ ಒಪ್ಪಂದ ಮಾಡಿಕೊಂಡರೆ ನಮಗದು ಅವಮಾನದ ಸಂಗತಿಯೂ ಆಗಲಾರದು,- ಅಂತ ನನ್ನ ಅಭಿಪ್ರಾಯ.”

ಮಹಾರಾಣಿ ತಲೆ ಬಗ್ಗಿಸಿ ನೆಲ ನೋಡುತ್ತಿದ್ದ ಪ್ರಧಾನಿಯನ್ನ ಅವನ ಹೃದಯದಾಳಕ್ಕಿಳಿದು ನೋಡುವಂತೆ ಇರಿವ ಕಣ್ಣಿಂದ ನೋಡಿದಳು. ಧನಪಾಲ ತಕ್ಷಣ ಮುಖ ಕೆಳಗೆ ಹಾಕಿ ಹುಬ್ಬಿನ ಕಡೆಯಿಂದ ಅವಳನ್ನೇ ನೋಡಿದ. ಅವಳ ಮುಖ ಕೋಪದಿಂದ ಕೆಂಪೇರಿ ಕಣ್ಣು ಕೆಂಡವಾಗಿದ್ದವು. ಕೇಳಿದಳು:

“ಹೇಳಯ್ಯಾ ನಿನ್ನನ್ನಾದರೂ ನಂಬಬಹುದ?”

ಧನಪಾಲ ಈ ಪ್ರಶ್ನೆಯನ್ನ ನಿರೀಕ್ಷಿಸಿರಲಿಲ್ಲ. ಮುಖ ಮ್ಯಾಲೆತ್ತಿ

“ತಾವು ಈ ಸೇವಕನನ್ನ ನಂಬಬಹುದು ಮಹಾರಾಣಿ”

– ಅಂದ. ತನ್ನ ಮಾತಿನಲ್ಲಿ ನಂಬಿಕೆ ಬಂತೋ ಇಲ್ಲವೋ ಎಂದು ಮಳ ಮಳ ಅವಳ ಮುಖವನ್ನೇ ನೋಡಿದ. ಮಹಾರಾಣಿ ಅವನ ಮುಖ ನೋಡದೆ ಬೇರೆ ಕಡೆ ಹೊರಳಿ ಎರಡು ಹೆಜ್ಜೆಯಿಟ್ಟು,

“ನೀನು ಹೇಳುವುದು; ಈಗ ನಾನು ಮತ್ತು ರಾಜ ಇಬ್ಬರೇ ಒಂದು ಕಡೆ, ಉಳಿದವರೆಲ್ಲ ಸೂರ್ಯನ ಕಡೆಗಿದ್ದಾರೆ – ಅಂತಲ್ಲವ?”

“ತಮ್ಮೊಂದಿಗೆ ನಾನಿದ್ದೀನಲ್ಲ ಮಹಾರಾಣಿ.”

“ಹಾಗಿದ್ದರೆ ಹೇಳು. ನಮ್ಮ ಮೇಲೆ ನಂಬಿಕೆಯಿರುವ, ನಾನು ನಂಬಬಹುದಾದ ಹತ್ತು ಜನ ಬಂಟರು ಬೇಕು, ಕೊಡ್ತೀಯಾ?”

“ಕೊಡಬಹುದು ಮಹಾರಾಣಿ”

“ಬಹುದು ಅಲ್ಲವೋ, ಕೊಡಬಲ್ಲೆಯಾ? ಬೊಗಳು.”

– ಎಂದು ಮಹಾರಾಣಿ ಕಿರಿಚಿದಳು. ಇಡೀ ಅರಮನೆಯೇ ಕಿರಿಚಿದಂತಾಗಿ ದೂರದಲ್ಲಿದ್ದ ಸೇವಕರು ಯಾರಿಗೇನಾಯಿತೆಂದು ಬೆದರಿ ಓಡಿಬಂದು ಹಣಕಿದರು. ಮಹಾರಾಣಿ ಆಗಲೇ ಸಾವರಿಸಕೊಂಡು ಮೊದಲಿನಂತಾಗಿದ್ದಳು. ಧನಪಾಲ ಮಾತ್ರ ಜಲಜಲ ಬೆವರಿ ಗಡಗಡ ನಡುಗಿ ಮಹಾರಾಣಿಯನ್ನೊಮ್ಮೆ ಸೇವಕರನ್ನೊಮ್ಮೆ ನೋಡುತ್ತ –

“ಕೊ ಕೊ ಕೊಡ್ತೀನಿ ಮಹಾರಾಣೀ” ಅಂದ ಅವಸರದಿಂದ.

ಮಹಾರಾಣಿ ಅವನ ಮಾತಿಗೆ ಪ್ರತಿಕ್ರಿಯಿಸಲೇ ಇಲ್ಲ. ಆಗಲೇ ನಿರ್ಧರಿಸಿದಂತೆ ಹೇಳಿದಳು:

“ಹೋಗು ಶಿಖರಸೂರ್ಯ ನಾಳೆ ನಮ್ಮ ಅತಿಥಿಯಾಗಲಿ, ಅದ್ದೂರಿ ಸ್ವಾಗತಮಾಡಿ ಅರಮನೆಗೆ ಕರೆದುಕೊಂಡು ಬಾ. ಸಂಜೆ ವರ್ತಕ ಸಂಘದ ಪದಾಧಿಕಾರಿಗಳಿಗೂ, ಮಾಂಡಳಿಕ ಮನ್ನೆಯರಿಗೂ ಆಮಂತ್ರಣವಿರಲಿ, ಸಭಾಮಂಟಪದಲ್ಲಿ ಮನರಂಜನೆ ಕಾರ್ಯಕ್ರಮ ಏರ್ಪಡಿಸು” ಎಂದಳು. “ಅಪ್ಪಣೆ ಮಹಾರಾಣಿ” ಎಂದು ನಮಸ್ಕರಿಸಿ ಅವಸರದಿಂದ ನಡೆದ. ಬಾಗಿಲವರೆಗೆ ಬಂದಿದ್ದಾಗ ಮಹಾರಾಣಿ “ನಿಲ್ಲು” ಎಂದಳು. ನಿಂತ ಮೇಲೆ ತಾನೇ “ಏನಿಲ್ಲ ತೊಲಗು” ಎಂದಳು. ತೊಲಗಿದ.

ಶಿಖರಸೂರ್ಯನ ಕಾರ್ಯ ಆತ ಅಂದುಕೊಂಡಂತೇ ಸುಲಭವಾಗಿತ್ತು. ಕನಕಪುರಿಯ ಮಾಂಡಳಿಕ, ಮನ್ನೆಯರನ್ನ ವರ್ತಕ ಶ್ರೀಮಂತರನ್ನ ಭ್ರಷ್ಟಗೊಳಿಸುವುದು ಸಲಭದ ಕೆಲಸವಾಯಿತು. ನಿರೀಕ್ಷಿತ ಪ್ರತಿಭಟನೆಯಾಗಲಿ ಅಪನಂಬಿಕೆಯಾಗಲಿ ಎದುರಾಗಲೇ ಇಲ್ಲ. ಎಲ್ಲರೂ ರಾಜವಂಶದ ಋಣದಲ್ಲಿದ್ದವರಾದರೂ ಹಣ ಗಳಿಸುವುದಕ್ಕಾಗಿ ಮತ್ತು ಪುಕ್ಕಟೆ ಮನರಂಜನೆಗಾಗಿ ಅರಮನೆಯನ್ನು ಬಳಸಿಕೊಂಡವರೇ ಶಿವಾಯಿ ಇಕ್ಕಟ್ಟಿನ ಸಮಯದಲ್ಲಿ ಅದರ ಪರವಾಗಿ ನಿಲ್ಲುವಂಥವರಾರೂ ಇರಲಿಲ್ಲ. ಆಳ್ವಿಕೆಯಲ್ಲಿ ಅವರ ಪಾಲುಗಾರಿಕೆ ಇದ್ದರೂ ನಿಷ್ಠೆ ತೋರಬೇಕಾದಾಗ, ಜವಾಬ್ದಾರಿ ಹೊರಬೇಕಾದಾಗ ಹಿಂಜರಿದರು. ಅರ್ಥಕೌಶಲ ಇರುವತನಕ ಅರಮನೆಯ ಅಧಿಕಾರ ನಿರಾತಂಕವಾಗಿತ್ತು. ಆತ ಕೌಶಲ್ಯದಿಂದ ವರ್ತಕರಿಂದ ನಿಷ್ಠೆಯನ್ನು ಹೊರಗೆ ತೆಗೆಯುತ್ತಿದ್ದ. ಧನಪಾಲ ಬಂದ ಮೇಲೆ ಮಾತ್ರ ಹೇಳಕೇಳುವವರಾರೂ ಇಲ್ಲದೆ ಅರಮನೆಯ ಮಾನ ಅನಾಥವಾಯಿತು. ಸಂಬಳವಿಲ್ಲದೆ ಬಂಟರು ಸೈನ್ಯ ಬಿಟ್ಟು ಬೇರೆ ರಾಜ್ಯಗಳಿಗೆ ಹೋದರು. ಉಳಿದವರು ನಿಷ್ಠೆಯನ್ನ ಉಳಿಸಿಕೊಂಬ ಯಾವ ಕ್ರಮವನ್ನೂ ಧನಪಾಲ ತೆಗೆದುಕೊಳ್ಳಲಿಲ್ಲ. ಧನಪಾಲ ಮಂತ್ರಿಯಾದ ಮೇಲಂತೂ ಅವನ ಪಿತ್ತ ನೆತ್ತಿಗೇರಿತು. ಒಬ್ಬೊಬ್ಬರನ್ನು ಒಂದೊಂದು ಕಾರಣಕ್ಕೆ ದ್ವೇಷಿಸುತ್ತಿದ್ದ. ಅವರಲ್ಲಿ ಅನೇಕರು ಅರ್ಥಕೌಶಲನ ನಂತರ ಪ್ರಧಾನಿಯಾಗಲು, ಕೊನೇಪಕ್ಷ ಹೆಚ್ಚಿನ ಹುದ್ದೆಗೇರಲು ಬಯಸಿದವರಿದ್ದರು. ಧನಪಾಲ ಬಂದು ಯಾವಾಗ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸುರು ಮಾಡಿದನೋ ಆಗ ಮಾತ್ರ ಅವರು ನಿಷ್ಠೆಯನ್ನು ಮಾರಾಟ ಮಾಡತೊಡಗಿದರು. ರಾಜಕಾರಣದಲ್ಲಿ ಯಾರ ನಿಷ್ಠೆಯನ್ನೂ ಒಂದೇ ಸಲ ಕೊಳ್ಳಲಾಗುವುದಿಲ್ಲ. ಕೆಲಸಕ್ಕೊಮ್ಮೆ ಕೊಳ್ಳಬೇಕಾಗುತ್ತದೆ. ಇಂಥ ಸರಳ ಸತ್ಯವನ್ನೂ ಅವನು ಅರಿಯಲಿಲ್ಲ.

ಕೊತವಾಲನ ಸ್ಥಾನಮಾನಗಳನ್ನು ಕೆಳಗಿಳಿಸಿದ್ದರಿಂದ ರಾಜಧಾನಿಯನ್ನು ಪ್ರವೇಶಿಸುವ ಅಗಸೀಬಾಗಿಲು ವೈರಿಯ ವಶವಾಯಿತು. ಅನೇಕ ಮುಖ್ಯರಾದ ವರ್ತಕರನ್ನು ಎಲ್ಲರೆದುರು ಅವಮಾನಿಸಿದ್ದರಿಂದ ಅವರ ನಿಷ್ಠೆ ತುಂಬ ಅಗ್ಗವಾಗಿ ಶಿಖರಸೂರ್ಯನಿಗೆ ಲಭ್ಯವಾಯಿತು. ರಾಜಧಾನಿಯಲ್ಲಿ ಒಂದು ರಹಸ್ಯವೂ ಈಗ ರಹಸ್ಯವಾಗಿ ಉಳಿಯದಂತಾಯಿತು.

ಮಹಾರಾಣಿಯ ದುರ್ದೈವವೆಂದರೆ ಇದ್ಯಾವುದೂ ಅವಳ ಗಮನಕ್ಕೆ ಬಂದಿರಲೇ ಇಲ್ಲ. ಯಾಕೆಂದರೆ ಮಗನ ಮದುವೆಯನ್ನೇ ವಿರೋಧಿಸಿದಾಳಾಗಿ ರಾಜ, ಪ್ರಧಾನಿ ಇಬ್ಬರೂ ಹಗೆಗಳಾಗಿ ಆಕೆಯನ್ನು ಸೇಡಿನಿಂದ ಉದ್ದೇಶಪೂರ್ವಕ ಮರೆತರು. ಮಹತ್ವದ ಯಾವುದೇ ತೀರ್ಮಾನವನ್ನು ಆಕೆಯ ಗಮನಕ್ಕೆ ತರಲೇ ಇಲ್ಲ. ಮಗ ಆದಿತ್ಯಪ್ರಭನ ಆರೋಗ್ಯ ದಿನದಿಂದ ದಿನಕ್ಕೆ ಹದಗೆಡುತ್ತಿದ್ದರೂ ಅದನ್ನು ಮಹಾರಾಣಿಗೆ ತಿಳಿಸಿರಲಿಲ್ಲ.

ಇಂದಿನ ಸಂಜೆ ಭೋಜನಕ್ಕೆ ಬರಬೇಕೆಂದು ಪ್ರಧಾನಿ ಬಂದು ಆಮಂತ್ರಿಸಿದಾಗ ಮೊದಲು ಒಪ್ಪಿಕೊಂಡನಾದರೂ ಆಮೇಲೆ ಶಿಖರಸೂರ್ಯನಿಗೆ ಸಂದೇಹ ಬಂತು. ಸಲಹೆ ಕೇಳಿದಾಗ ಸುಕ್ರ, "ಒಪ್ಪಕೊಂಡಾದ ಮೇಲೆ ಹೋಗಲೇಬೇಕು. ಅಲ್ಲಿ ನಿನಗೆ ಎರಡು ಅಪಾಯಗಳಿವೆ ಒಡೆಯಾ. ಒಂದು : ಮಹಾರಾಣಿ ಈ ದಿನ ಹತ್ತು ಜನ ಬುಡಕಟ್ಟಿನ ಜಟ್ಟಿಗಳನ್ನು ಕರೆಸಿದ್ದಾಳಂತೆ. ಯಾರೇ ಬಂದರೂ ಅವರನ್ನು ನಾವು ನೋಡಿಕೊಳ್ತೇವೆ. ನಿನ್ನ ಹಿಂದೆ ಬೊಂತೆಯ ಇರ್ತಾನೆ. ಹತ್ತಿಪ್ಪತ್ತು ಅಡಿಗಳಲ್ಲಿ ನಾನು ಮತ್ತು ಬಂಡೆಯ ಇರ್ತೇವೆ. ಎಲ್ಲ ಆಯಕಟ್ಟಿನ ಸ್ಥಳಗಳಲ್ಲಿ ನಮ್ಮ ಸೈನಿಕರಿದ್ದಾರೆ. ಇನ್ನು ಎರಡನೆ ಅಪಾಯವೆಂದರೆ ರಾತ್ರಿ ಊಟದಲ್ಲಿ ವಿಷ ಹಾಕಿರುತ್ತಾರೆ ಅಂತ ಸುದ್ದಿ. ಅದನ್ನು ನೀನು ನೋಡಿಕೊಂಡರಾಯ್ತು, ಉಳಿದಂತೆ ನಮ್ಮ ತಯಾರಿಯಲ್ಲಿ ನಾವಿದ್ದೇವೆ" ಅಂದ.

ಶಿಖರಸೂರ್ಯ ಅರಮನೆಗೆ ಹೋಗುವುದಕ್ಕೆ ವಿಶೇಷ ಶೃಂಗಾರವಾದ. ಹಳೆಯ ಕೊಳೆ ಬಟ್ಟೆ ಕಳೆದು ಬಂದೀಕಟ್ಟೆಯ ಸರಪಳಿ ಅಂಚಿನ ಮಡಿ ಧೋತ್ರ ಉಟ್ಟ. ಗಿಣಿ ಬರೆದ ತಲೆವಸ್ತ್ರ ಸುತ್ತಿ ಸಳೆನೂಲು ಹೊದ್ದು ಒರೆ ಅರಪಳಿ ಹಾಕಿಕೊಂಡ. ಬಂಗಾರ ಕಟ್ಟಿನ ಚಾಕು, ಬೆಳ್ಳಿ ಕಟ್ಟಿನ ಚೂರಿ ಸೊಂಟದಲ್ಲಿ ಏರಿಸಕೊಂಡು ಚಂದ್ರಾಯುಧ ಹಿಡಿದುಕೊಂಡ. ಆಮೇಲೆ ಕಾಲಿಗೆ ಎಕ್ಕಡ ಹಾಕಿಕೊಂಡು ಪಂಚವಾದ್ಯ ಮೇಳದ ಹಿಂದಿನಿಂದ ಹೊರಟ. ಸುಕ್ರ ಬಂಡೆಯ ಅವನ ಹಿಂದಿನಿಂದ ಬರುತ್ತಿದ್ದರೆ ಅವರ ಮುಂದೆ ಬೊಂತೆಯ ಚಿನ್ನ ತುಂಬಿದ ತಟ್ಟೆಯ ಮೇಲೆ ಬಣ್ಣದ ಬಟ್ಟೆ ಹೊದಿಸಿ ಹಿಡಿದುಕೊಂಡು ಬರುತ್ತಿದ್ದ.

ಪ್ರಧಾನಿ, ರಾಜಗುರು, ಪುರೋಹಿತರು ಮತ್ತು ವೇದಾಂತಿಗಳು, ಮಹಾರಾಣಿಯಿದ್ದಲ್ಲಿಗೆ ಶಿಖರಸೂರ್ಯನನ್ನು ಕರೆದುಕೊಂಡು ಹೋದರು. ಮಹಾರಾಣಿಯನ್ನು ನೋಡಿದೊಡನೆ ಬೊಂತೆಯ (ತಟ್ಟೆಯ ಮ್ಯಾಲಿನ ಬಟ್ಟೆ ತೆಗೆದು) ಕಾಣಿಕೆಯನ್ನು ಆಕೆಯ ಮುಂದೆ ಇಟ್ಟು ವಿನಯದಿಂದ ಅಂಡೆತ್ತಿ ತಲೆಯ ನೆಲಕ್ಕೂರಿ ನಮಸ್ಕರಿಸಿ ಹಿಂದೆ ಸರಿದ. ಪರಸ್ಪರ ನಮಸ್ಕಾರದ ಶಾಸ್ತ್ರ ಮುಗಿದ ಮೇಲೆ ಕಾಣಿಕೆಗಳನ್ನು ನೋಡಿ ಮಹಾರಾಣಿಯ ಕಣ್ಣು ಅಗಲವಾದವು. ಆನಂದದಿಂದ ಮುಖ ಮ್ಯಾಲೆತ್ತಿ ನೋಡಿದಳು. ಶಿಖರಸೂರ್ಯ ಥೇಟ್ ಇಂದ್ರನಂತೆ ಕಾಣಿಸುತ್ತಿದ್ದಾನೆ! ಅವನ ಅಪಾರವಾದ ಸೈನ್ಯ, ಚಿನ್ನ, ಶ್ರೀಮಂತಿಕೆ ಕಂಡು ಬೆಕ್ಕಸ ಬೆರಗಾದ ಮಹಾರಾಣಿ ಒಂದೊಂದನ್ನೇ ಪ್ರೀತಿ ಆಸಕ್ತಿ ಆಶ್ಚರ್ಯಗಳಿಂದ ನೋಡುತ್ತಿದ್ದಾಳೆ! ಶಿಖರಸೂರ್ಯ ಮುಗುಳು ನಗುತ್ತ ಅವಳ ಮುಖವನ್ನೇ ನೋಡುತ್ತಿದ್ದ. ಮಹಾರಾಣಿ ತೋರುಬೆರಳುಗಳನ್ನು ತನ್ನ ಚೆಂದುಟಿಯ ಮ್ಯಾಲಿಟ್ಟುಕೊಂಡು ಬಹಳ ಹೊತ್ತು ಶಿಖರಸೂರ್ಯನನ್ನೇ ನೋಡುತ್ತ ಆಮೇಲೆ ಅವನ ಎರಡೂ ಕೈಹಿಡಿದುಕೊಂಡು "ರಾಜವೈದ್ಯನೇ!" ಎಂದು ಹೇಳುತ್ತ ಪಕ್ಕದ ಪೀಠದಲ್ಲಿ ಕೂರಿಸಿಕೊಂಡಳು. ಬೊಂತೆಯ ಸೂರ್ಯನ ಹಿಂದೆ ಕಲ್ಲಿನ ಕಂಬದಂತೆ ನಿಂತ. ಸುಕ್ರಬಂಡೆಯರು ಜಟ್ಟಿಗಳ ಶೋಧನೆ ಮಾಡುತ್ತಿದ್ದರು. ವೇದಾಂತಿ ಮತ್ತು ಪ್ರಧಾನಿಯೂ ಆಸನಗಳಲ್ಲಿ ಕೂತರು.

ಮಹಾರಾಣಿ ಕೂತಿದ್ದರೂ ಇನ್ನೂ ಶಿಖರಸೂರ್ಯನ ಕೈ ಬಿಟ್ಟಿರಲಿಲ್ಲ. ಅವಳೇ ಮಾತಿಗಾರಂಭಿಸಿದಳು:

"ಈಗ ಹೇಳು ವೈದ್ಯ ಮಿತ್ರಾ, ನಮ್ಮನ್ನು ಬಿಟ್ಟು ಇಲ್ಲಿಂದ ಎಲ್ಲಿಗೆ ಹೋದೆ? ಏನು ಮಾಡಿದೆ? ಛಾಯಾ, ಚಿಕ್ಕಮ್ಮಣ್ಣಿ, ಮಕ್ಕಳು ಹ್ಯಾಗಿದ್ದಾರೆ? ನಿನ್ನ ಅನುಭವ ಕೇಳಲು ಕಾತರಳಾಗಿದ್ದೇನೆ."

ಇಂಥ ಪ್ರಶ್ನೆಯಲ್ಲಿ ಅವಳಿಗೆ ಆಸಕ್ತಿ ಇರುವುದಿಲ್ಲವೆಂದು ಅರಿತಿದ್ದ ಶಿಖರಸೂರ್ಯ,

"ತಾವು ಹೇಳಿದಂತೆ ಬೇಕಾದಷ್ಟು ದೇಶಗಳನ್ನು ಸುತ್ತಿ ಬಂದೆ ನಿಜ. ಆದರೆ ಅಲ್ಲೆಲ್ಲೂ ತಮ್ಮಂಥ ಸುಂದರಿಯರು ಇರಲಿಲ್ಲ ಮಹಾರಾಣಿ!"

– ಎಂದ. ಪ್ರಶಂಸೆಯಿಂದ ಅವಳ ಮುಖ ಕೆಂಪೇರಿತು. ನಾಚಿಕೆಯಿಂದ,

"ನೀನು ನನ್ನ ವಂದಿಮಾಗಧನಾಗಿಬಿಟ್ಟೆ ವೈದ್ಯಮಿತ್ರನೇ, ನಿನ್ನಷ್ಟು ಚೆನ್ನಾಗಿ ನಮ್ಮ ಒಬ್ಬ ಕವಿಯೂ ನನ್ನನ್ನು ಹೊಗಳಲಿಲ್ಲ."

– ಎಂದಳು ಆನಂದದಿಂದ ಉಕ್ಕಿಬಂದ ನಗೆಯನ್ನು ನಿಯಂತ್ರಿಸಿಕೊಳ್ಳುತ್ತ.

“ನಿಜ ಹೇಳುವುದಕ್ಕೆ ನಿಮ್ಮ ಕವಿಗಳು ಹೆದರುತ್ತಾರೆ ಮಹಾರಾಣಿ”

“ಛೇ ಛೇ, ಇದನ್ನು ಕೇಳಿ ನಮ್ಮ ವೇದಾಂತಿಗಳೇನೆಂದಾರು ? ಅವರೂ ಉದ್ದಾಮ ಕವಿಗಳು!”

“ನಿಮ್ಮ ಬಗ್ಗೆ ಅವರಿನ್ನೂ ಕಾವ್ಯ ಬರೆದಿಲ್ಲವೆಂದರೆ ಆಶ್ಚರ್ಯವಲ್ಲವೆ ?”

– ಎಂದು ವೇದಾಂತಿಯ ಕಡೆಗೆ ಶಿಖರಸೂರ್ಯ ತುಂಟ ದೃಷ್ಟಿ ಬೀರಿದ. ವೇದಾಂತಿ ತಕ್ಷಣವೇ, “ನಾನು ಮಹಾಸ್ರಗ್ಧರಾದಲ್ಲಿ ಮಹಾರಾಣಿಯ ಬಗ್ಗೆ ಶತಕ ಬರೆದಿದ್ದೇನೆ!”

– ಎಂದು ಹೇಳಿದ. ಅವನ ಮಾತನ್ನು ಇಬ್ಬರೂ ನಂಬಲಿಲ್ಲ. ಅಷ್ಟರಲ್ಲಿ ಪ್ರಧಾನಿ ಬಂದು

“ಮಹಾರಾಣಿ ಕಾರ್ಯಕ್ರಮಕ್ಕೆ ಹೋಗೋಣವೆ?” ಅಂದ.

“ಹೌದಲ್ಲ” ಎಂದು ಮಹಾರಾಣಿ ಎದ್ದಳು. ಶಿಖರಸೂರ್ಯನೂ ಎದ್ದು ಹೊರಟ.

* * *

ಸಭಾಮಂಟಪದಲ್ಲಿ ನೃತ್ಯ ಕಾರ್ಯಕ್ರಮದ ಪೂರ್ವಭಾವಿ ತಯಾರಿಗಳೆಲ್ಲ ಮುಗಿದಿದ್ದವು. ಅರಮನೆಯ ತುಂಬ ದೀಪಗಳನ್ನು ಹಚ್ಚಿಟ್ಟಿದ್ದರು. ನದಿಯ ಮೇಲಿನಿಂದ ತಂಪುಗಾಳಿ ಬೀಸುತ್ತಿತ್ತು. ಸಭಾಂಗಣದಲ್ಲಿ ರಂಗಮಂದಿರದ ಎದುರಿನ ಆಜುಬಾಜು ಎರಡೂ ಗೋಡೆಗಳಿಗಂಟಿ ಮಾಂಡಳಿಕ ಮನ್ನೆಯರು ಮತ್ತು ಪ್ರಭಾವಿ ಮಂದಿಗಾಗಿ ಒರಗಿ ಕೂರುವ ಆಸನದ ವ್ಯವಸ್ಥೆ ಮಾಡಲಾಗಿತ್ತು.

ಊರಿನ ಪ್ರಮುಖರೆಲ್ಲ ಹಾಜರಿದ್ದು ತಂತಮ್ಮ ಆಸನಗಳಲ್ಲಿ ಆಸೀನರಾಗಿದ್ದರು. ರಂಗಮಂಚದ ಎದುರಿನ ಮಧ್ಯದ ಪೀಠದಲ್ಲಿ ಮಹಾರಾಣಿ, ಬಲಗಡೆ ಶಿಖರಸೂರ್ಯ ಪೀಠಸ್ಥರಾಗಿದ್ದರು. ಮಹಾರಾಣಿಯ ಎಡಗಡೆ ಅನತಿ ದೂರದಲ್ಲಿ ವೇದಾಂತಿ, ಪುರೋಹಿತ, ರಾಜಗುರು ಕೂತಿದ್ದರು. ಆಸನಗಳ ಮಧ್ಯದ ಸ್ಥಳದಲ್ಲಿ ಚಾಪೆಗಳ ಮೇಲೆ ಆಮಂತ್ರಿತ ಸಜ್ಜನರು ಪ್ರಜೆಗಳು ಕೂತಿದ್ದರು. ಇವರೇನು ಮಾತಾಡಿದರೂ ಮುಂದಿನವರಿಗೆ ಕೇಳಿಸುತ್ತಿರಲಿಲ್ಲ. ರಂಗಮಂಚದ ಬಳಿ ಸುಕ್ರ ಚಿಂತಾಕ್ರಾಂತನಾಗಿ ಟಕಮಟ ನೋಡುತ್ತಿದ್ದ. ಅಲ್ಲಿ ಬಂಡೆಯ ಇರಲಿಲ್ಲ. ತನ್ನ ಹಿಂದೆ ಬೊಂತೆಯನಿರುವುದನ್ನು ಖಾತ್ರಿ ಮಾಡಿಕೊಂಡು ಶಿಖರಸೂರ್ಯ ಮಹಾರಾಣಿಯ ಹೃದಯವನ್ನಿರಿದು ಒಳಕ್ಕೇನಿದೆ ಎಂದು ನೋಡಿದ. ಮಹರಾಣಿ ಅವನ ಕಣ್ಣು ತಪ್ಪಿಸಿ ಬೇರೆ ಕಡೆಗೆ ನೋಡುತ್ತಿದ್ದಳು. ಜಟ್ಟಿಗಳ ವಿಷಯಕ ಪ್ರಧಾನಿಗೆ ಗೊತ್ತಿರಲಿಲ್ಲ. ಅದನ್ನು ಮಹಾರಾಣಿ ತಾನೇ ವ್ಯವಸ್ಥೆ ಮಾಡಿಕೊಂಡಿದ್ದಳು. ವ್ಯವಸ್ಥೆ ಮಾಡಿದಾತ ಕಾಣದೆ ಚಡಪಡಿಸುತ್ತಿದ್ದಳು. ಈಗ ಸುಕ್ರನೂ ಮರೆಯಾಗಿದ್ದರಿಂದ ಶಿಖರಸೂರ್ಯನೂ ಆತಂಕದಲ್ಲಿದ್ದ.

ನಾಟ್ಯ ಸುರುವಾಗಿತ್ತು. ಊರ್ವಶಿ ಪುರೂರವರ ಸನ್ನಿವೇಶವನ್ನ ಅಭಿನಯಿಸುತ್ತಿದ್ದಾರೆಂದು ಆಮೇಲೆ ಗೊತ್ತಾಯಿತು. ಊರ್ವಶಿ ರಂಗದ ತುಂಬ ಓಡಾಡಿ ಭಯ ನಾಚಿಕೆಗಳನ್ನು ಅಭಿನಯಿಸುತ್ತಿದ್ದಳು. ಪುರೂರವ ಅವಳನ್ನು ಒಲಿಸಿಕೊಳ್ಳಲು ಅಂಗಲಾಚುತ್ತ ಪ್ರೇಮ ಮತ್ತು ಅದಕ್ಕೆ ಪೂರಕವಾದ ಸಂಚಾರಿ ಭಾವಗಳನ್ನು ಅಭಿನಯಿಸುತ್ತಿದ್ದ. ಪುರೂರವನ ನೃತ್ಯದಲ್ಲಿ ಯೌವನದ ಆಕರ್ಷಣೆಯ ಜೊತೆಗೆ ಅವನ ಭಂಗಿ ವಿನ್ಯಾಸಗಳಲ್ಲಿ ಪಾದರಸದಂಥ ಚಲನೆಯಿತ್ತು. ತಾಲು ಮಾನವನೆಂಬ ಅಭಿಮಾನವಿತ್ತು. ಕತ್ತಿನವರೆಗೆ ಗುಂಗುರು ಕೂದಲು, ಚಿಗುರು ಮೀಸೆಯ ಚೆಲುವನಾದ ಆ ನಟನ ಮೈಯಲ್ಲಿ ಒಂದು ಬಗೆಯ ಸ್ಥಳೀಯ ಒರಟುತನವಿತ್ತು. ಹಾಗೆಯೇ ಊರ್ವಶಿಯ ನೃತ್ಯದಲ್ಲಿ ದೇವತೆಗೆ ಸಹಜವಾದ ನಯ ನಾಜೂಕಿನ, ಯೌವನ ಸಹಜವಾದ ಒಯ್ಯಾರಗಳಿದ್ದವು.

ಇದ್ದಕ್ಕಿದ್ದಂತೆ ಸಂಗೀತ ಇಳಿಮುಖವಾಗಿ ಮೆದುವಾಗಿ ಕುತೂಹಲದಿಂದ ನೋಡುವವರ ನಾಡಿ ಬಡಿತ ಜೋರಾಗುವಂತಾಯಿತು. ಊರ್ವಶಿ ಕನಸಿನಲ್ಲಿ ತೇಲುತ್ತಿರುವಂತೆ ರಂಗದಂಚಿನಿಂದ ಮೆಲ್ಲಗೆ ಪುರೂರವನಿಂದ ದೂರ ಸರಿದಳು. ಪುರೂರವ ಎರಡೂ ಕೈಗಳನ್ನ

ಸೊಂಟದ ಮೇಲಿಟ್ಟುಕೊಂಡು ಕಾಯುತ್ತಿದ್ದಂತೆ ಸಂಗೀತ ಮೃದುವಾಗಿ ಮೆಲ್ಲಗೆ ಕೊಳಲು ಮತ್ತು ತಂತೀವಾದ್ಯ ಸೇರಿದೊಡನೆ ಪುರೂರವ ವಿರಹವನ್ನ ಅಭಿನಯಿಸಿದ. ಬೆಳದಿಂಗಳಲ್ಲಿ ಇಬ್ಬರೂ ಎದುರು ಬದುರು ಬಂದೊಡನೆ ಇವಳ ಮೇಲೆ ತನಗೆ ಅಧಿಕಾರವಿದೆಯೆಂಬಂತೆ ಅವಳ ಸೊಂಟವನ್ನು ಎಡಗೈಯಿಂದ ಭದ್ರವಾಗಿ ಹಿಡಿದು ತನ್ನಡೆಗೆ ಸೆಳೆದುಕೊಂಡ. ಇಬ್ಬರೂ ಪರಸ್ಪರ ಮುಖಗಳನ್ನು ಸಮೀಪ ತಂದಾಗ ಸಂಗೀತ ತಕ್ಷಣ ನಿಂತಿತು; ಇಡೀ ಸಭಾಂಗಣ ಸ್ತಬ್ಧವಾಯಿತು!

ಮಹಾರಾಣಿ ಶಿಖರಸೂರ್ಯನ ಭಾವನೆಗಳನ್ನರಿಯಲು ಅವನ ಕಡೆ ನೋಡಿದಳು. ಆತ ನೃತ್ಯ ನೋಡುತ್ತಿರಲಿಲ್ಲ. ಜಯಶಾಲಿಯಾದಂತೆ ವಿಜಯ ಮತ್ತು ವ್ಯಂಗ್ಯದ ಮಂದಹಾಸ ಬೀರುತ್ತ, ಹಸಿದ ಚಿರತೆ ಬೇಟೆಗೊಂಬ ಜಿಂಕೆಯನ್ನು ನೋಡುವಂತೆ ಕಣ್ಣಗಲಿಸ ಇವಳ ಕೆನ್ನೆಗೆ ಮೀಸೆ ಚುಚ್ಚುವಷ್ಟು ಸಮೀಪದಿಂದ ಇವಳನ್ನೇ ನೋಡುತ್ತಿದ್ದ. ಯಾಕಂತೀರೋ? ಮಹಾರಾಣಿಯ ಜಟ್ಟಿಗಳು ಬಂದಿರಲಿಲ್ಲ. ಬೊಂತೆಯ ಇವನ ಹಿಂದೆ ಇದ್ದ. ಸುಕ್ರ ಬಂಡೆಯರು ನಗುತ್ತ ನೃತ್ಯ ನೋಡುತ್ತಿದ್ದರು.

ಅವನ ವ್ಯಂಗ್ಯ ನಗು ನೇರವಾಗಿ ಅವಳ ಹೃದಯವನ್ನ ಇರಿದಂತಾಗಿ ಮುಖ ಗಂಟುಗಂಟಾಯಿತು. ನಕ್ಕಂತೆ ಸೋಗು ಮಾಡಿದರೂ ಒಳಗೊಳಗೆ ಅವಳ ಅಭಿಮಾನಕ್ಕೆ ಗಾಯವಾಗಿತ್ತು. ಕೃತಕ ನಗೆಯನ್ನ ಮುಂದುವರಿಸಲಾರದೆ, ಪಿಸುದನಿಯಲ್ಲಿ,

"ನೃತ್ಯ ಚೆನ್ನಾಗಿದೆ ಅಲ್ಲವೆ ವೈದ್ಯನೇ?"

– ಎಂದಳು. ಗುಟ್ಟಾಗಿ ಅವಳ ಕಿವಿಯಲ್ಲಿ ಏನೋ ಹೇಳುವಂತೆ "ನಿನ್ನಷ್ಟಲ್ಲ" ಎಂದ.

"ಎಲಾ ಇನವ ಸೊಕ್ಕೆ!"

ಎಂದುಕೊಳ್ಳುತ್ತ ಕೋಪದಿಂದ ಕಂಪಿಸಿದಳು ಮಹಾರಾಣಿ.

ರಸೋತ್ಕರ್ಷದ ಶಿಖರ ಅಭಿನಯಕ್ಕೆ ಅನುಕೂಲವಾಗುವಂತೆ ಈಗ ಸಂಗೀತ ವಾದ್ಯಗಳು ತೀವ್ರಗತಿಯಲ್ಲಿ ಚುರುಕಾಗಿ, ಪ್ರೇಕ್ಷಕರು ಉಸಿರು ಬಿಗಿಹಿಡಿದುಕೊಂಡು ಲಯದಲ್ಲಿ ಭಾಗಿಯಾಗುವಂತೆ ಮಾಡಿದವು. ಪುರೂರವ ರಂಗದ ಕೇಂದ್ರದಲ್ಲಿ ನಿಂತುಕೊಂಡು ಮೆಚ್ಚುಗೆಯಿಂದ ಮಂದಹಾಸದಿಂದ ಊರ್ವಶಿಯನ್ನೇ ನೋಡುತ್ತ ನಿಂತ. ಊರ್ವಶಿ ವಯ್ಯಾರ ಮಾಡುತ್ತ ಆಕಾಶದಿಂದ ಹಾರುತ್ತ ಅವನ ವಶವರ್ತಿಯಾಗುವಂತೆ ಬಂದು ತಬ್ಬಿಕೊಂಡಳು. ಆಮೇಲೆ ಇಬ್ಬರೂ ಮಾದಕ ಶೃಂಗಾರದಲ್ಲಿ ತನ್ಮಯರಾದಂತೆ ನರ್ತಿಸಿದರು.

ಶಿಖರಸೂರ್ಯ ಹಸಿದ ಕಣ್ಣುಗಳಿಂದ ಮಹಾರಾಣಿಯನ್ನು ನೋಡಿದ. ಅವಳು ಇವನನ್ನೇ ಕದ್ದು ದಿಗಿಲು ಮತ್ತು ಭಯಗಳಿಂದ ನೋಡುತ್ತಿದ್ದಳು. ಈತ ನೃತ್ಯವನ್ನು ನೋಡುತ್ತಿಲ್ಲವೆ? ಅವನ ಕಣ್ಣುಗಳಲ್ಲಿ ರಂಗದ ದೀಪಗಳು ಪ್ರತಿಬಿಂಬಿಸಿ ರಾಗೋಜ್ವಲವಾಗಿ ಹೊಳೆಯುತ್ತಿದ್ದವು.

ನೃತ್ಯಗತಿ ಇನ್ನಷ್ಟು ತೀವ್ರವಾಯತು. ಬಣ್ಣಗಳು ಹರಿದಾಡಿದಂತೆ ಇಬ್ಬರೂ ರಂಗದ ತುಂಬ ಕುಣಿದರು. ಸಂಗೀತ ಬೆಳುದಿಂಗಳ ವಾತಾವರಣವನ್ನ ಸೃಷ್ಟಿಸಿ ಅದರಲ್ಲಿ ತನ್ಮಯವಾದಂತೆ ಮೆತ್ತಗಾಗಿತ್ತು. ನಟನಟಿಯರ ಅವಯವಗಳು ಪ್ರತ್ಯೇಕವಾಗಿ ಕಾಣದಷ್ಟು, ಚಿತ್ರದ ಗೆರೆಗಳು ಚಲಿಸುವಂತೆ ಇಬ್ಬರೂ ಶೃಂಗಾರ ಬೆಳದಿಂಗಳಲ್ಲಿ ಈಜಾಡುತ್ತಿರುವಂತೆ, ಹಾರಾಡುತ್ತಿರುವಂತೆ, ತೇಲುತ್ತಿರುವಂತೆ ನರ್ತಿಸಿದರು. ಕೊನೆಗೆ ಊರ್ವಶಿ ಪುರೂರವನ ತೋಳಿನಲ್ಲಿ ಬಂದಿಯಾಗಿ ಅರ್ಪಿಸಿಕೊಂಡಳು. ಇಬ್ಬರೂ ಕೆನ್ನೆಗೆ ಕೆನ್ನೆ ತಾಗಿಸಿದಾಗ ಸಭೆ ದೀರ್ಘ ಕರತಾಡನ ಮಾಡಿ ಮೆಚ್ಚುಗೆ ಸೂಚಿಸಿತು. ಶಿಖರಸೂರ್ಯ ಮಹಾರಾಣಿಯ ಕಿವಿಯ ಬಳಿಗೆ ತುಟಿಗಳನ್ನು ತಂದು "ಸುಂದರವಾಗಿದೆಯಲ್ಲವೆ ಮಹಾರಾಣಿ?" ಅಂದ. ಅವನ ಒರಟು ಮೀಸೆ ಮುಳ್ಳಿನಂತೆ ಕೆನ್ನೆಗೆ ಚುಚ್ಚಿದವು. ಸಾಲದ್ದಕ್ಕೆ ಆಸನದ ಮೇಲಿನ ರಾಣಿಯ ಬಲಗೈ ಬೆರಳುಗಳಲ್ಲಿ ಬೆರಳು ಸೇರಿಸಿ ಹಿಸುಕಿ ಅವಳ ಮುಖವನ್ನೇ ನೋಡುತ್ತ ಕಣ್ಣು ಮಿಟುಕಿಸಿದ.

ಮಹಾರಾಣಿ ತಕ್ಷಣ ಕೈಬಿಡಿಸಿಕೊಂಡು ಎದ್ದು ನಿಂತಳು. ಕಲಾವಿದರನ್ನು ಗೌರವಿಸುವ ಕೆಲಸವನ್ನು ಪ್ರಧಾನಿಗೆ ವಹಿಸಿ,

“ವೈದ್ಯಮಿತ್ರನೇ ಬಾ” ಎಂದು ಮುಂದೆ ನಡೆದಳು. ಜಟ್ಟಿಗಳ ವಿಷಯ ಈತನಿಗೆ ಗೊತ್ತಾಗಿತ್ತೇ? ಜಟ್ಟಿಗಳ್ಯಾಕೆ ಬರಲಿಲ್ಲ? ಒಂದೂ ಅರ್ಥವಾಗದೆ ಮಹಾರಾಣಿ ಹೆದರಿ ಅವಸರದಿಂದ ನಡೆದಳು. ಅಷ್ಟೇ ಅವಸರದಿಂದ ಅವಳ ಹಿಂದೆ ಹಿಂದೆ ಇವನೂ ನಡೆದ. ಅವಳ ಬೆನ್ನಿನ ಮಾಟವನ್ನು, ಅದರ ಮ್ಯಾಲೆ ಜೋತುಬಿದ್ದ ಕಪ್ಪು, ಮೃದುವಾದ ಕೂದಲಿನ ತುರುಬನ್ನು ನೋಡುತ್ತಿದ್ದಂತೆ ಕೆಳಗೆ ನೋಡಿ “ಛೇ! ಈ ನಿತಂಬಗಳ ಲಯವಂತಿಕೆಯೊಂದೇ ಸಾಕು ನನಗೆ ಹುಚ್ಚುಹಿಡಿಸಲು!” ಅಂದುಕೊಂಡ.

ಅರಮನೆಯಲ್ಲಿ ಅನಿರೀಕ್ಷಿತ ಅವಸರದಲ್ಲಿ ಇಬ್ಬರೇ ಹೋಗುತ್ತಿದ್ದಾಗ ತಿರುವಿನಲ್ಲಿ ಒಂದು ಕೋಣೆಯಿತ್ತು. ಬೆಳಕಿರಲಿಲ್ಲ. ಹಿಂದಾಗಲಿ ಮುಂದಾಗಲಿ ಯಾರೂ ಇರಲಿಲ್ಲ. ಕ್ಷಣಾರ್ಧದಲ್ಲಿ ಶಿಖರಸೂರ್ಯ ಮಹಾರಾಣಿಯ ತೋಳು ಹಿಡಿದೆಳೆದುಕೊಂಡು ಕತ್ತಲ ಕೋಣೆಯೊಳಗಡೆ ನುಗ್ಗಿದ. ಏನು ಎತ್ತ ತಿಳಿಯದೆ ಮಹಾರಾಣಿ ಬಿಡಿಸಿಕೊಳ್ಳಲು ಹೆಣಗುತ್ತಿರುವಂತೆ ಸೆರಗು ಜಾರಿ ರವಿಕೆಯ ಗುಂಡಿ ಸಿಡಿದವು. ಚಿರತೆಯ ಸೇಡು ಪ್ರೀತಿ ಹಸಿವುಗಳಿಂದ ಅವಳನ್ನು ತಬ್ಬಿ ಎದೆಗೊತ್ತಿಕೊಂಡು ಮೃಗೀಯವಾಗಿ ಹಿಂಡಿ ಮುಖದ ತುಂಬ ಮುದ್ದಿಟ್ಟು ತುಟಿ ಹೀರಿದ. ಮಹಾರಾಣಿ ನಿಶ್ಶಕ್ತಿಯಿಂದ ಮುದ್ದೆಯಾಗಿ ಅವನ ತೋಳಿನಲ್ಲಿ ಬಿದ್ದು ಥರಥರ ನಡುಗಿದಳು. ಏದುಸಿರು ಬಿಡುತ್ತ ಪಿಸುದನಿಯಲ್ಲಿ

“ನಿನಗೇನು ಬೇಕು ?” ಎಂದಳು.

“ನೀನು!”

“ಈಗ ಬಿಟ್ಟು ಮಾನ ಉಳಿಸು, ಜನ ಬರ್ತಿದಾರೆ. ನಾಳೆ ಸೇರೋಣ.”

– ಎಂದಳು.

“ಎಲ್ಲಿ? ಯಾವಾಗ? ಈಗಲೇ ಹೇಳು” - ಅಂದ.

“ನಾಳೆ ಸಂಜೆ ನನ್ನ ಅಂತಃಪುರಕ್ಕೆ ಬಾ.”

“ನಮ್ಮಿಬ್ಬರ ಶಿವಾಯಿ ಇನ್ಯಾರೂ ಇರಕೂಡದು.”

“ಆಯ್ತು.”

– ಎಂದು ಹೇಳಿದೊಡನೆ ಮಹಾರಾಣಿ ಸೀರೆಯನ್ನು ಸರಿಪಡಿಸಿಕೊಂಡು ನಡೆದಳು. ಅವನ ಕೈಯಲ್ಲಿ ಅವಳ ಕಂಠೀಹಾರವಿತ್ತು.

ಅತಿಥಿಗಳನ್ನು ಕೂರಿಸಲು ಹೇಳಿ ಮಹಾರಾಣಿ ಅಂತಃಪುರಕ್ಕೆ ಹೋಗಿ ಕನ್ನಡಿಯ ಮುಂದೆ ನಿಂತಳು. ಉಡುಪು ಅಸ್ತವ್ಯಸ್ಥವಾಗಿತ್ತು. ತುರುಬು ಬಿಚ್ಚಿ ಕೂದಲು ಕೆದರಿ ಹಣೆ ಕನ್ನೆಗಳ ಮೇಲೆ ಸ್ವತಂತ್ರವಾಗಿ ಹಾರಾಡುತ್ತಿದ್ದವು. ಮಹಾರಾಣಿ ನಿರಾಸೆ ಅವಮಾನಗಳಿಂದ ಕತಕತ ಕುದಿಯುತ್ತಿದ್ದಳು. ಶಿಖರಸೂರ್ಯ ತಾನವನ ಸೂಳೆಯೆಂಬಂತೆ ಅನುಚಿತವಾಗಿ ವರ್ತಿಸಿದ್ದ. ಜಟ್ಟಿಗಳು ಕೈಕೊಟ್ಟಿದ್ದರು. ಶಿಕ್ಷಿಸಲಾಗಲಿ, ಎದುರಿಸಲಾಗಲಿ ಶಕ್ತಿ ಇರಲಿಲ್ಲ. ಯಾರೊಬ್ಬರೂ ತನ್ನೊಂದಿಗಿರಲಿಲ್ಲ. ಮಹಾರಾಜ ಹೋದ. ಅರ್ಥಕೌಶಲ ಹೋದ. ಮಗ ಹೀಗಾದ. ವರ್ತಕರನ್ನು ನಂಬುವಂತಿಲ್ಲ. ಪ್ರಧಾನಿಯನ್ನು ಅವಲಂಬಿಸುವಂತಿಲ್ಲ. ಅಸಹಾಯಕಳಾಗಿ ಕೊರಳಸೆರೆ ಬಿಗಿದು ಬಂತು. ಹಲ್ಲು ಕಚ್ಚುತ್ತ ಪಿಸುದನಿಯಲ್ಲಿ ಶಾಪಗಳನ್ನು ಉಗಿದಳು, ಚಿತ್ತ ಕೆಟ್ಟ ಹಕ್ಕಿಯ ಹಾಗೆ ಚಡಪಡಿಸುತ್ತ ಅತ್ತಿತ್ತ ಗುರಿಯಿಲ್ಲದೆ ಹರಿದಾಡಿದಳು. ನದಿಯ ಕಡೆಯಿಂದ ನಾವಿಕನೊಬ್ಬನ ಹಾಡು ಬರುತ್ತಿತ್ತು:

ಯಾಕಳುವಿಯೇ ರಾಣಿ ? ಯಾಕಳುವಿಯೆ ? ||ಪ||
ಅಂಗೈಯಾಗಿರುವಂಥ ಚಂದಿರನ ಕಳಕೊಂಡೆ
ಹುಡುಕುವಿಯೆ ಆಕಾಶದೊಳಗೆ |
ಬೆಳ್ದಿಂಗಳಿನ ಕೋಲು ಕೋಣೆಯಲಿ ಆಡಿದರೆ
ನೆನಪಾಗಿ ಓಡುವಿಕೆ ಹೊರಗೆ ||
ನೀ ಹೀಗೆ ಹುಡುಕಿದ್ದು ವ್ಯರ್ಥವಾಗದು ಹೆಣ್ಣೆ
ಬಂದೇ ಬರುವನು ಚಂದ್ರ ಬಳಗೆ |
ತಾಳ್ಮೆಗೆಡದಿರು ರಾಣಿ ಅಮವಾಸೆ ಕಳಿವನಕ
ಸಿಕ್ಕೆ ಸಿಗುವನು ಚಂದ್ರ ಕೈಗೆ ||

ಕನ್ನಡಿಯ ಮುಂದೆ ನಿಂತುಕೊಂಡೇ ಯೋಚಿಸಿದಳು: ಶಿಖರಸೂರ್ಯ ತನ್ನನ್ನು ಜೀವಂತ ಬಿಡಲಾರ. ಸಾವಿನಲ್ಲಿ ಶಾಂತಿ ಸಿಕ್ಕೀತೋ ಏನೋ! ಆ ಸಾವು ಈ ಕ್ಷಣವೇ ಸಿಕ್ಕರೆ! ಅಂದುಕೊಂಡಳು. ಅಷ್ಟರಲ್ಲಿ ಸೇವಕಿ ಬಂದು "ಪ್ರಧಾನಿ ಕಾಯುತ್ತಿದ್ದಾರೆ" ಎಂದಳು. ಬರಲಿರುವ ಯಾವುದೇ ಅಪಾಯವನ್ನು ಎದುರಿಸಲು ಸಿದ್ಧಳಾಗಿ, ಅವಸರದಲ್ಲಿ ಸೀರೆ ಬದಲಿಸಿ, ಕೂದಲು ಕಟ್ಟಿಕೊಂಡು ಊಟಕ್ಕೆ ಹೊರಟಳು.

ಅಂತಃಪುರದ ಹೊರಗೆ ನಿಂತಿದ್ದ ಪ್ರಧಾನಿ ನಮಸ್ಕಾರನ್ನಾಚರಿಸಿದ.

"ಆದಿತ್ಯಪ್ರಭ ಹ್ಯಾಗಿದ್ದಾನೆ?"

ಧನಪಾಲ ಮುಖ ಕೆಳಗೆ ಹಾಕಿ ಹೇಳಿದ:

"ಆರೋಗ್ಯದಲ್ಲಿ ಸುಧಾರಣೆ ಇಲ್ಲ, ಮಹಾರಾಣಿ."

ಮಹಾರಾಣಿ ಖೇದದಿಂದ ಅರ್ಧ ಸ್ವಗತಕ್ಕೆ ಇನ್ನರ್ಧ ಪ್ರಧಾನಿಗೆಂಬಂತೆ ಹೇಳಿದಳು:"ಯಾರಿಗೋ ಬಲೆ ಹಾಕ್ತೀವಿ, ಆ ಬಲೆಯಲ್ಲಿ ನಾವೇ ಬಿದ್ದಿರ್ತೀವಿ! ವಿಚಿತ್ರ ಅಲ್ಲವೆ ಧಲಪಾಲ?"

ಮಾತಿನರ್ಥ ಪ್ರಧಾನಿಗೆ ಸ್ಪಷ್ಟವಾಗಿ ಚುಚ್ಚಿ ಮುಖ ಬಿಳಿಚಿಕೊಂಡಿತು. ತೋರಿಸಿಕೊಳ್ಳದೆ "ತಾವು ನನ್ನನ್ನು ನಂಬಬಹುದು ಮಹಾರಾಣಿ" ಅಂದ. ಮಹಾರಾಣಿ ಇನ್ನೂ ಅದೇ ಯಾತನೆಯಲ್ಲಿ ತಲ್ಲೀನಳಾಗಿದ್ದಳು.

"ಕನಕಪುರಿಯ ಮಹಾರಾಣಿ! ಯಃಕಶ್ಚಿತ್ ಪ್ರಜೆಗೂ ಅವಳ ಮೇಲೆ ನಂಬಿಕೆಯಿಲ್ಲ! ಆಶ್ಚರ್ಯ ಅಲ್ಲವೆ?"

"ನಾವು ನಿಮ್ಮನ್ನೇ ಅವಲಂಬಿಸಿದವರು ಮಹಾರಾಣಿ."

"ಸರಿಯಾಗಿ ಹೇಳಿದೆ ನೀನು. 'ಅವಲಂಬಿಸಿದವರು' ನಂಬಿದವರಲ್ಲ ! ಆಯ್ತು ಬಾ ಅತಿಥಿಗಳು ಕಾದಿದ್ದಾರೆ."

– ಎಂದು ಹೇಳಿ ಮುಂದೆ ಹೊರಟಳು. ಧನಪಾಲನೂ ಅವಳ ಹಿಂದಿನಿಂದ ಹೊರಟ.

ಮಹಾರಾಣಿ ಉತ್ಸಾಹ ಮತ್ತು ಉಮೇದಿಗಳನ್ನು ಅಭಿನಯಿಸುತ್ತ ರೆಕ್ಕೆ ಬೀಸಿದ ಹಾಗೆ ಸೆರಗು ಹೊದೆಯುತ್ತ ಬಂದು ಸ್ವಾಗತಿಸಿದಳು. ಮಹಾರಾಣಿ ಇಷ್ಟು ಚೆಲುವೆಯಾಗಿ ಶಿಖರಸೂರ್ಯನಿಗೆಂದೂ ಕಂಡಿರಲಿಲ್ಲ. ಜಟ್ಟಿಗಳನ್ನು ಸುಲಭವಾಗಿ ನಿವಾರಿಸಿದ್ದರಿಂದ ಆ ವಿಷಯ

ಮರೆತು ಕಣ್ಣಗಲಿಸಿ ಆಸೆ ಮತ್ತು ಬೆರಗಿನ ಮಂದಹಾಸದಿಂದ ಅವಳನ್ನೇ ನೋಡುತ್ತಿದ್ದ. ಅಪರೂಪಕ್ಕೆ ಮಣೆಯ ಮೇಲೆ ಮಹಾರಾಣಿಯೂ ಕುಂತಳು. ಬಲಗಡೆ ಪ್ರಧಾನಿ, ಎದುರಿಗೆ ಶಿಖರಸೂರ್ಯ ಕುಂತಿದ್ದರು. ಮುಂದಿನ ಮಣೆಗಳ ಮಲೆ ಬಾಳೆಯೆಲೆ ಹಾಕಿ ನೀರು ಚಿಮುಕಿಸಿದರು. ಮೂವರೂ ಬಾಳೆಯೆಲೆ ಸ್ವಚ್ಛಮಾಡಿಕೊಂಡರು. ಸೇವಕಿಯರು ಒಂದೊಂದೇ ಪದಾರ್ಥಗಳನ್ನು ಬಡಿಸತೊಡಗಿದರು. ಶಿಖರಸೂರ್ಯ ಬಂದನೆಂದು ತಿಳಿದು ಕೆಲವು ಸೇವಕರು ಮಹಾರಾಣಿಗೆ ಕಾಣಿಸದಂತೆ ದೂರದ ಮೂಲೆಯಿಂದ ಹಣಿಕಿ ಹಾಕಿದರು. ಅವರಿಗೆ ಶಿಖರಸೂರ್ಯನ ಬೆನ್ನು ಮಾತ್ರ ಕಾಣಿಸಿತು. ಏನು ಬದಲಾದರೂ ಕಿವಿಯ ಕೂದಲು ಮಾತ್ರ ಹಾಗೇ ಇತ್ತು. ಊಟ ಬಡಿಸಲು ಅವಕಾಶವಿದ್ದ ಸೇವಕರಂತೂ ಒಂದೊಂದೇ ಪದಾರ್ಥ ನೀಡಿ ಶಿಖರಸೂರ್ಯನ ನೋಡಿ ಧನ್ಯರಾದಂತೆ ಒಳಗೆ ಬಂದು ಅವರು ಹಾಗಿದ್ದಾರೆ ಹೀಗಿದ್ದಾರೆ ಎಂದು ಉಬ್ಬುಬ್ಬಿ ಹೇಳುತ್ತಿದ್ದರು.

ಅತಿಥಿಗಳಿಗೆ ಊಟ ಬಡಿಸಿ ಮಹಾರಾಣಿಗೆ ಬಡಿಸಲು ಹೋದಾಗ "ಮೈ ಹುಷಾರಿಲ್ಲ ಹಾಲು ತಗೊಳ್ತೇನೆ, ಅತಿಥಿಗಳಿಗೆ ಬಡಿಸು" ಅಂದಳು. ಶಿಖರಸೂರ್ಯ ತಕ್ಷಣ ಹುಷಾರಾಗಿ ತನ್ನೊಳಗಿನ ಕೋಪ ಮತ್ತು ಕೌರ್ಯಗಳು ಗೊತ್ತಾಗದಂತೆ ಮಹಾರಾಣಿಯನ್ನು ನೋಡಿದ. ಈ ಕಡೆಗೆ ಧನಪಾಲನೂ ತಲೆ ತಗ್ಗಿಸಿ ಕಳ್ಳಗಣ್ಣಿನಿಂದ ನೋಡುತ್ತ ಮಹಾರಾಣಿಯ ಮುಖಚರ್ಯೆಯನ್ನು ಅನುಸರಿಸಿ ಇಲ್ಲ ನಗುತ್ತಿದ್ದ, ಇಲ್ಲ ಪ್ರಶ್ನಾರ್ಥಕ ಮುಖ ಮಾಡುತ್ತಿದ್ದ. ಮಹರಾಣಿ ನಿರ್ಲಿಪ್ತಳಾಗಿದ್ದಳು. ಪ್ರಧಾನಿ ಸುಮ್ಮನಿರಲಾರದೆ ಮಹಾರಾಣಿಯ ಆರೋಗ್ಯದ ಬಗ್ಗೆ ಅಪಾರ ಕಾಳಜಿ ಇದ್ದವನಂತೆ,

"ವೈದ್ಯರಿಗೆ ತೋರಿಸಿದ್ದೀರಾ ಮಹಾರಾಣಿ?" ಅಂದ.

"ಸಣ್ಣ ಜ್ವರ, ಉಪವಾಸವಿದ್ದರೆ ಸರಿಹೋಗುತ್ತದೆ."

– ಎಂದು ನಿರ್ಲಕ್ಷದಿಂದ ಹೇಳಿದಳು.

ಸೇವಕಿ ಬಂದು ಮೂವರ ಮುಂದೆ ಹಾಲಿನ ಗಿಂಡಿಗಳನ್ನಿಟ್ಟು ಹೋದಳು. ತಾನು ತಗೊಳ್ಳದೆ ಇವರು ಊಟ ಮಾಡುವುದಿಲ್ಲವೆಂದುಕೊಂಡು ಮಹಾರಾಣಿ ಗಿಂಡಿಯನ್ನೆತ್ತಿ ಕುಡಿಯಬೇಕೆಂದಾಗ ಶಿಖರಸೂರ್ಯ ತಕ್ಷಣ,

"ಕಂಚಿಯ ಮಹಾರಾಜರು ಇಲ್ಲಿಗೆ ಬಂದಿದ್ದರಂತೆ ಹೌದೆ ಮಹಾರಾಣಿ?"

– ಎಂದ. ಗಿಂಡಿ ಕೆಳಗಿಳಿಸಿ ಮಹಾರಾಣಿ ಉತ್ಸಾಹದಿಂದ ಹೇಳಿದಳು:

"ಹೌದು, ನಿನ್ನ ಬಗ್ಗೆ ತುಂಬ ವಿಚಾರಿಸಿಕೊಂಡರು ವೈದ್ಯನೆ. ರವಿಕೀರ್ತಿ ಮತ್ತು ಕಂಚಿಯ ಮಹಾರಾಜರು ಸಹಪಾಠಿಗಳಂತೆ. ನೀನು ಅವರನ್ನು ಕಂಡಿದ್ದೀಯಾ ವೈದ್ಯನೆ?

"ಹೌದು ಆಗವರು ಏನು ಹೇಳಿದರು ಗೊತ್ತೆ ಮಹಾರಾಣಿ ? ಕನಕಪುರಿಯ ಮಹಾರಾಣಿಯ ಬಗ್ಗೆ ಕವಿಗಳು ವರ್ಣನೆ ಮಾಡಿದ್ದನ್ನು ಕೇಳಿದ್ದೆ. ಆದರೆ ಅವರನ್ನು ಪ್ರತ್ಯಕ್ಷ ನೋಡಿದ ಮೇಲೆ ಅನ್ನಿಸಿತು: ಅವರು ವರ್ಣಿಸಿದ್ದು ಬಹಳ ಕಡಿಮೆ."

"ಎಂದು ಹೇಳಿದರೆ?"

"ಹೌದು ಮಹಾರಾಣಿ"

ಮಹಾರಾಣಿಯ ಮುಖದಲ್ಲಿ ಮಂದಹಾಸ ಮೂಡಿತು. ತನ್ನೊಂದು ಸುಳ್ಳಿಗೆ ಇಂಥ ಮಾಂತ್ರಿಕ ಶಕ್ತಿ ಇದೆಯೆಂದು ತಿಳಿದು ಸೂರ್ಯನಿಗೂ ಆಶ್ಚರ್ಯವಾಯಿತು. ಮಹಾರಾಣಿ ಮಾತ್ರ ಮೂಡಿನಿಂದ ಹೊರಬರಲು ಸ್ವಲ್ಪ ಸಮಯ ಹಿಡಿಯಿತು. ವಾಸ್ತವಕ್ಕೆ ಜರಿದಾದ ಖೇದಗೊಂಡಳು.

"ನನಗೂ ವಯಸ್ಸಾಯ್ತು ವೈದ್ಯನೇ. ಕಂಚಿಯ ಮಹಾರಾಜರು ತರುಣರು. ತರುಣರು ಪ್ರೇಮಿಗಳಾಗಿದ್ದಾಗ ಕವಿಗಳಾಗುತ್ತಾರೆ. ನೋಡಿದ್ದೆಲ್ಲ ಅಂಥವರಿಗೆ ಪರಿಮಳದ ಹೂ ಹಸಿರಾಗೇ ಕಾಣಿಸುತ್ತದೆ. ವಯಸ್ಸಾಯಿತೋ ನಮ್ಮ ನೆರಳೇ ನಮಗೆ ಬೆಂಬತ್ತಿದ ಸಾವಿನ ಹಾಗೆ ಕಾಣಿಸುತ್ತದೆ. ತಾರುಣ್ಯದಲ್ಲಿ ಸಾಯುವವರೇ ಪುಣ್ಯವಂತರು."

"ತುಂಬ ಖೇದದಲ್ಲಿದ್ದೀರಿ ಮಹಾರಾಣಿ" ಎಂದ ಶಿಖರಸೂರ್ಯ.

ಇನ್ನೂ ಖೇದದಿಂದ ಮಹಾರಾಣಿ ಹೇಳಿದಳು:

"ಬದುಕಿನ ಬಗ್ಗೆ ಹೊಸಪಾಠ ಕಲಿಯುತ್ತಿದ್ದೇನೆ ವೈದ್ಯನೇ. ಮನುಷ್ಯ ಮುಗ್ಧನಾಗಿದ್ದರೆ ಸುಖ ಸಂತೋಷದಲ್ಲಿರ್ತಾನೆ. ಯಾಕಂತೀಯೋ? ಯೋಚನೆ ಮಾಡೋದಿಲ್ಲ ನೋಡು, ಅದಕ್ಕೆ! ಬುದ್ಧಿವಂತನಾದನೋ - ದುಃಖದಲ್ಲಿರ್ತಾನೆ. ಜೀರ್ಣಶಕ್ತಿ ಇರೋತನಕ ಇವನಿಗೆ ತೊಂದರೆಯಿಲ್ಲ."

"ಅಂದರೆ ಸುಖ ಮತ್ತು ಬುದ್ಧಿವಂತಿಕೆ ಎರಡೂ ಪರಸ್ಪರ ವಿರೋಧಿಗಳು ಅಂತಿರೇನು ?" ಎಂದ ಧನಪಾಲ.

"ಹೌದು. ಜೀವನದಲ್ಲಿ ಸುಖವಾಗಿದ್ದಾನೆ ಪುಣ್ಯಾತ್ಮ - ಅಂತ ಹೇಳಬಾರದು. ನೋಡಿ ಅವನೆಷ್ಟು ಮುಗ್ಧನಾಗಿದ್ದಾನೆ - ಪುಣ್ಯಾತ್ಮ! ಅನ್ನಬೇಕು. ಅದು ಸರಿಯಾದ ಮಾತು."

ಇಲ್ಲೀತನಕ ಅವರ ಮಾತುಗಳನ್ನ ಆಸಕ್ತಿಯಿಂದ ಕೇಳುತ್ತಿದ್ದ ಶಿಖರಸೂರ್ಯ ಈಗ ಕೇಳಿದ:

"ಪ್ರಪಂಚದಲ್ಲಿ ದುಃಖ, ವಂಚನೆ, ದುರಂತ - ಇದು ಬಿಟ್ಟು ಇನ್ನೇನೂ ಇಲ್ಲವೆಂದಾದರೆ ನಾವೆಲ್ಲಾ ಸತ್ತುಬಿಡೋದೇ ಉತ್ತಮ. ಇಂಥ ಕಗ್ಗತ್ತಲೆ ತುಂಬಿದ ಪ್ರಪಂಚದಲ್ಲಿ ಬದುಕೋದಕ್ಕೆ ಆಸೆ ಪಡುವಂತೆ ಮಾಡೋದ್ಯಾವುದು ? ಅಥವಾ ಏನೂ ಇಲ್ಲ ಅಂತೀರಾ ಮಹಾರಾಣಿ?"

ವೈದ್ಯನನ್ನು ನೋಡಿ, ಮಹಾರಾಣಿ ಅಹಂಕಾರ ಜಾಗೃತವಾಯ್ತು. ಹೇಳಿದಳು:

"ಧೈರ್ಯ! ಧೈರ್ಯ ಬೇಕು ವೈದ್ಯನೆ, ಧೈರ್ಯವಿದ್ದರೆ ಇಂಥ ಕ್ರೂರ ಜಗತ್ತನ್ನು ಗೆಲ್ಲಬಹುದು. ಬುದ್ಧಿವಂತಿಕೆಯಿಂದ ಕ್ರೂರವಾದ ಜಗತ್ತನ್ನು ಎದುರಿಸಲು ಧೈರ್ಯವೊಂದೇ ಅಸ್ತ್ರ. ಬುದ್ಧಿವಂತಿಕೆ ಇಟ್ಟುಕೊಂಡೂ ನಗೋದಕ್ಕೆ ಸಾಧ್ಯವಾಗಬೇಕಾದರೆ ಧೈರ್ಯಬೇಕು."

ಯಾವುದೋ ಸತ್ಯವನ್ನು ಹೇಳಿದೆನೆಂಬ ಆತ್ಮವಿಶ್ವಾಸದಿಂದ ಅವಳ ಕಣ್ಣು ಉಜ್ವಲವಾಗಿ ಹೊಳೆದವು. ಪ್ರಧಾನಿ ಮಂತ್ರಮುಗ್ಧನಾಗಿ ಅವಳ ಕಡೆಗೆ ನೋಡುತ್ತಿದ್ದ. ಈಗ ಯಾರೂ ಮಾತಾಡಲಿಲ್ಲವಾದ್ದರಿಂದ ಅವಳೊಳಗಿನ ಪೊಳ್ಳುತನದ ಅರಿವಿದ್ದ ಶಿಖರಸೂರ್ಯನೊಬ್ಬನೇ ಒಳಗೊಳಗೆ ನಗುತ್ತಿದ್ದ. ಒಂದಿಲ್ಲೊಂದು ದಿನ ಈ ಹೆಂಗಸು ಯಾವುದೋ ನಾಯಿಯಿಂದ ಕಚ್ಚಿಸಿಕೊಂಡು ಸಾಯ್ತದೆ ಅಂದುಕೊಂಡ. ಮಹಾರಾಣಿಯ ಶಕ್ತಿಯ ಹೊಸ ಪರಿಚಯವಾದಂತೆ ಪ್ರಧಾನಿ ಚಕಿತನಾಗಿದ್ದ. ವಾತಾವರಣ ಸ್ತಬ್ಧಬಾಗಿದ್ದಂತೆ ಅನಿಸಿ ಅದಕ್ಕೆ ಚಾಲನೆ ಕೊಡಲು ಮಹಾರಾಣಿಯೇ ಮುಂದಾಗಿ "ಊಟ ಸುರು ಮಾಡಿ" ಎಂದು ಹೇಳಿ ಹಾಲಿನ ಗಿಂಡಿ ತಗೊಂಡು ಬಾಯಿಗೆ ಒಯ್ದಳು. ತಕ್ಷಣ ಶಿಖರಸೂರ್ಯ -

“ಇರಿ ಮಹಾರಾಣಿ, ತುಂಬ ಚೆನ್ನಾಗಿ ಮಾತಾಡುತ್ತಿದ್ದೀರಿ, ಲೋಕಸುಂದರಿಯ ಬಾಯಿಂದ ಇಂಥ ಅಪರೂಪದ ವೇದಾಂತ ಬರುತ್ತಿರುವಾಗ ಹಸಿವೆ ಹ್ಯಾಗಾದೀತು?”

ಮಹಾರಾಣಿಯ ಮುಖ ಮತ್ತೆ ವ್ಯಗ್ರವಾಯಿತು. ಎದೆ ಸೆರಗು ಹೊದ್ದು ಮುಂಗುರುಳನ್ನು ಸರಿಪಡಿಸಿಕೊಂಡು ಶಿಖರಸೂರ್ಯನ ಕಡೆಗೆ ಕ್ರೂರ ನೋಟ ಬೀರಿದಳು. ಅವಳ ಭಂಗಿಯನ್ನು ಮೌನವಾಗಿ ನೋಡಿ ಆಮೇಲೆ ತನ್ನ ಮುಂದಿನ ಊಟದೆಲೆಯ ಕಡೆಗೆ ನೋಡಿದ. ತನ್ನನ್ನು ಕೊಲೆ ಮಾಡಲು ಪೂರ್ತಿ ಪೂರ್ವಸಿದ್ಧತೆ ಮಾಡಿಕೊಂಡಿರುವಂತೆ ಕಂಡಿತು. ಅವಳ ಕಣ್ಣ ಸುತ್ತ ಇರುವ ಕಾಡಿಗೆ ಮತ್ತು ನೆರಳು ಸೇರಿ ಮಹಾರಾಣಿ ಭಯಾನಕ ರಾಕ್ಷಸಿಯಂತೆ ಕಂಡಳು. ತುಟಿ ಸಮೀಪದ ಗಿಂಡಿ ಕೆಳಗಿಟ್ಟು ಕೇಳಿದಳು.

“ಈ ನಿನ್ನ ಆಕ್ರಮಣದ ಬಗ್ಗೆ ಏನೆನ್ನಿಸುತ್ತದೆ ವೈದ್ಯನೆ ? ನೀನು ನಮ್ಮ ಬಳಗದನ. ಕನಕಪುರಿಯ ವಿದ್ಯಮಾನ ಗೊತ್ತಿದ್ದವ, ಕನಕಪುರಿ ಬೇಕೆಂದು ನೇರ ಬಂದು ಕೇಳಬಹುದಿತ್ತಲ್ಲ? ಹೀಗೆ ಏಕಾಏಕಿ ಆಕ್ರಮಿಸುವ ಅಗತ್ಯವಿತ್ತೆ?”

ಇವಳ ಮಾತಿನ ಹಿಂದೆ ರಹಸ್ಯೋದ್ದೇಶವೇನಾದರೂ ಇದೆಯಾ ? ಎಂದು ತೂಗಿ ನೋಡಿ ಹೇಳಿದ.

“ನಿಮ್ಮ ಗೂಢಾಚಾರರು, ಮುತ್ಸದ್ದಿಗಳು ಹೇಳಿರಬೇಕಲ್ಲ ಮಹಾರಾಣಿ?”

– ಎಂದು ತೀಕ್ಷ್ಣವಾಗಿ ಪ್ರಧಾನಿಯನ್ನು ನೋಡಿದ.

“ಹೇಳಲಿಲ್ಲ, ಅವರಿಗೆ ಹೊಳೆಯಲೂ ಇಲ್ಲ. ಅವರ ಬುದ್ಧಿವಂತಿಕೆಗಿಂತ ನಿನ್ನ ಚಾತುರ್ಯ ಹೆಚ್ಚಿನದು ಅನ್ನೋಣ.”

“ಅದೇನಿದೆಯೋ! ನಿಮ್ಮವರು ಸರಿಯಾಗಿ ಕರ್ತವ್ಯ ನಿರ್ವಹಿಸಲಿಲ್ಲ ಎನ್ನುವದಂತೂ ನಿಜ. ನಿಮ್ಮವರು ತಪ್ಪಿದರು ಅಂದರೆ ನಮ್ಮವರು ಸರಿಯಾಗಿ ಕೆಲಸ ಮಾಡಿದರು ಅಂತ ಅರ್ಥವಲ್ಲವೆ?”

– ಎಂದು ಅರ್ಥಪೂರ್ಣವಾಗಿ ನಗುತ್ತ ಕಣ್ಣಿಂದ ಅವಳನ್ನು ಎರಿದ. ಅವನ ನೋಟದ ಅರ್ಥವನ್ನು ಮಹಾರಾಣಿ ಗ್ರಹಿಸಿ ಅಸಹಾಯಕತೆ ಮತ್ತು ಭಯದಿಂದ ಇನ್ನೊಂದು ಕಡೆ ಮುಖ ತಿರಿಗಿಸಿದಳು.

ಈ ಮಧ್ಯೆ ಧನಪಾಲ ಊಟ ಸುರು ಮಾಡಲು ಕಾತರನಾಗಿ ಶಿಖರಸೂರ್ಯನ ಕಡೆಗೆ ನೋಡಿದ. - ಇವನಿಗೆ ಗೊತ್ತಾಗಿರಬಹುದೇ ಅಂತ ಅನುಮಾನ ಬಂತು. ತಾನು ಮುಗ್ಧನೆಂದು ತೋರಿಸಿಕೊಳ್ಳಲು ಅವರ ಸಂವಾದವನ್ನು ಆಸಕ್ತಿಯಿಂದ ಕೇಳುತ್ತಿರುವಂತೆ ಅಭಿನಯಿಸುತ್ತ “ಇನ್ನು ಊಟ ಸುರು ಮಾಡೋಣವಾ ಮಹಾರಾಣಿ?” ಅಂದ. ತಕ್ಷಣ ಶಿಖರಸೂರ್ಯ ತನ್ನ ಪೀಠದಿಂದೆದ್ದು ಪ್ರಧಾನಿಯ ಹಿಂದೆ ಬಂದು,

“ಪ್ರಧಾನಿಗಳೇ, ನೀವು ನನ್ನ ಪೀಠದಲ್ಲಿರಿ. ನಾನು ಮಹಾರಾಣಿಯವರ ಜೊತೆ ಕೊಂಚ ಅಂತರಂಗ ಮಾತಾಡಬೇಕು.”

– ಎಂದು ಅನಿರೀಕ್ಷಿತವಾಗಿ ಸಲಿಗೆಯಿಂದ ಪ್ರಧಾನಿಯ ಭುಜ ಹಿಡಿದೆಬ್ಬಿಸಿ ತನ್ನ ಪೀಠ ತೋರಿಸಿ ಪ್ರಧಾನಿಯ ಪೀಠದಲ್ಲಿ ಕೂತೇ ಬಿಟ್ಟ! ಮಹಾರಾಣಿಗೆ ಶಿಷ್ಟಾಚಾರದ ಬಗ್ಗೆ ಕೊಂಚ ಬೇಸರವಾದರೂ ಅನಿವಾರ್ಯವೆಂದು ಸುಮ್ಮನಿದ್ದು ಹಾಲಿನ ಗಿಂಡಿಯನ್ನು ತುಟಿಗಿಟ್ಟುಕೊಂಡು ಬಾಯಿಗೆ ಬಗ್ಗಿಸುತ್ತ ಕತ್ತು ಮ್ಯಾಲೆತ್ತಿದಳು. ಇನ್ನೇನು ಕುಡಿಯಬೇಕು - ಶಿಖರಸೂರ್ಯ ದೂರ ಬೀಳುವಂತೆ ಎಡಗೈಯಿಂದ ಗಿಂಡಿಯನ್ನ ತಳ್ಳಿದ! ಮಹಾರಾಣಿಯ ಮೈಮೇಲೆ ಅರ್ಧ ಹಾಲು ಬಿದ್ದುಹೋಯಿತು. ಮಹಾರಾಣಿ ಸೀರೆ ನೋಡಿಕೊಂಡು ಆಶ್ಚರ್ಯ ಆಘಾತಗಳಿಂದ ಶಿಖರಸೂರ್ಯನನ್ನು ನೋಡಿದಳು. ಆತ ಮುಖ ಕೆಳಗೆ ಹಾಕಿದ್ದ! ಪ್ರಧಾನಿ ಆಘಾತದಿಂದ ಎದ್ದು ನಿಂತ. ಮಹಾರಾಣಿ ಸೀರೆ ಮ್ಯಾಲಿನ ಹಾಲು ಕೊಡುವುತ್ತ ತಾಳ್ಮೆಗೆಟ್ಟು,

“ಇದು ಅತಿಯಾಯಿತು, ವೈದ್ಯನೇ!”

– ಎಂದಳು ಬೇಸರದಿಂದ. ಶಿಖರಸೂರ್ಯ ವಿನಯದಿಂದ ಕೈಮುಗಿದು

“ನನ್ನ ಅನುಚಿತ ವರ್ತನೆಗೆ ಕ್ಷಮೆಯಿರಲಿ, ತಮ್ಮ ಹಾಲಿನಲ್ಲಿ ವಿಷವಿದೆ ಮಹಾರಾಣಿ, ನನ್ನ ಹಾಲಿನಲ್ಲೂ ಇದೆ, ”

– ಅಂದ.

“ಏನೆಂದೆ?”

– ಎಂದು ಭೀತಿ ಗೊಂದಲ ಆಶ್ಚರ್ಯಗಳಿಂದ ಕಣ್ಣಗಲಿಸಿ ಎದ್ದು ನಿಂತಳು. ಶಿಖರಸೂರ್ಯನನ್ನು ನೋಡಿ, – ಅವನು ಪ್ರಧಾನಿಯ ಕಡೆಗೆ ನೋಡುತ್ತಿದ್ದುದನ್ನು ಗಮನಿಸಿದಳು. ಪ್ರಧಾನಿಯ ಕಣ್ಣು ತುಟಿ ಬಿಳಿಚಿ, ಗಡಗಡ ನಡುಗುತ್ತ ನಿಂತಿದ್ದ. ಹೆದರಿದ ಮಕ್ಕಳು ಕಿರಿಚಿ ಮಾತಾಡುವಂತೆ ಅಸಹಜ ದನಿಯಲ್ಲಿ ಮಹಾರಾಣಿ –

“ನಿಜ ಬೊಗಳು? ವಿಷ ಹಾಕಿದ್ದೀಯಾ?” ಎಂದಳು.

“ನಾನಲ್ಲ ಮಹಾರಾಣಿ….”

– ಎನ್ನುತ ಪ್ರಧಾನಿ ತಲೆ ಬಾಗಿದ.

“ಹಾಗಿದ್ದರೆ ಯಾರು ಹಾಕಿದ್ದು?”

“ನನಗೆ ಗೊತ್ತಿಲ್ಲ ಮಹಾರಾಣಿ.”

– ಎಂದು ಹೇಳುತ್ತ ಧನಪಾಲ ಹಾಗೇ ಕುಸಿದು,

“ನನಗೆ ಎದೆ ನೋವು, ನಾನು ಬರಲೆ ಮಹಾರಾಣಿ?”

– ಎಂದು ಹೇಳಿ ಅಪ್ಪಣೆಗಾಗಿ ಕಾಯದೆ ನಡೆದ. ಮಹಾರಾಣಿಗೀಗ ಖಾತ್ರಿಯಾಯಿತು, ಗಂಭೀರವಾಗಿ ಗುಡುಗಿದಳು, –

“ನಾನು ಹೇಳಿದ್ದು ಕೇಳಿಸಲಿಲ್ಲವೆ? ಉತ್ತರ ಬೊಗಳು, ವಿಷ ಹಾಕಿದವರ್ಯಾರು?”

“ನನಗೇನು ಗೊತ್ತು?”

– ಎಂದು ಇವನೂ ಸಿಡಿದ. ಮಹಾರಾಣಿ ಕೋಪದಿಂದ ನಡುಗಿದಳು.

“ಹಾಗಿದ್ದರೆ ಗೊತ್ತಾಗೋತನಕ ಬಿದ್ದುಕೊ.”

– ಎಂದು ಹುಬ್ಬುಗಂಟಿಕ್ಕಿ ಜುಗುಪ್ಸೆಯಿಂದ ನುಡಿದಳು, ಆಮೇಲೆ

“ಎಲ್ಲಿ ಅಡಿಗೆಯವರು?”

ಎಂದು ಕೂಗಿದಳು. ಅಡಿಗೆಯ ಸೇವಕ ಸೇವಕಿಯರು ಬಂದು ನಡುಗುತ್ತ ದೂರ ನಿಂತರು.

"ಇಂದಿನ ಅಡಿಗೆ ಮಾಡಿದವರಾರು?"

ಎಂದಳು ಮಹಾರಾಣಿ. ಮುದಿ ಸೇವಕನೊಬ್ಬ ಬಂದು ತಲೆಬಾಗಿ ನಿಂತುಕೊಂಡ. ಆತ ತನ್ನ ದುರ್ದೈವವನ್ನಾಗಲೇ ಕಂಡುಕೊಂಡಿದ್ದಂತೆ ಒಂದು ಬಗೆಯ ನಿಶ್ಚಿಂತೆಯಿಂದ, ಬಂದದ್ದನ್ನು ಎದುರಿಸಲು ಸಿದ್ಧನಾಗಿದ್ದ. ಮಹಾರಾಣಿ ಕಿರಿಚಿದಳು:

"ನಿಜ ಬೊಗಳು ಹಾಲಿನಲ್ಲಿ ವಿಷ ಹಾಕಲಿಕ್ಕೆ ಯಾರು ಹೇಳಿದ್ದು?"

"ನಾವ್ಯಾರೂ ವಿಷ ಹಾಕಿಲ್ಲ ಮಹಾರಾಣಿ."

ಶಿಖರಸೂರ್ಯ ಮಧ್ಯ ಪ್ರವೇಶಿಸಿ "ನಾನೊಂದು ಪ್ರಶ್ನೆ ಕೇಳಲೆ ಮಹಾರಾಣಿ?" ಅಂದ.

ನಿಲ್ಲುವುದಕ್ಕೆ ಶಕ್ತಿ ಸಾಲದೆ ಮಹಾರಾಣಿ ಹೋಗಿ ತನ್ನ ಪೀಠದಲ್ಲಿ ಕುಸಿದಳು. ಕೇಳು ಎಂಬಂತೆ ಕೈ ಸನ್ನೆ ಮಾಡಿದಳು. ಶಿಖರಸೂರ್ಯ ಕೇಳಿದ:

"ನೀವ್ಯಾರೂ ವಿಷ ಹಾಕಿಲ್ಲ ಅಲ್ಲವೆ ? ಹಾಗಿದ್ದರೆ ಈ ಹಾಲು ಕುಡಿ."

ಆ ಮುದುಕ ಗಡಗಡ ನಡುಗುತ್ತ

"ಬ್ಯಾಡಿ ಸ್ವಾಮಿ, ನಾನು ಬಡವ, ಮಕ್ಕಳೊಂದಿಗ"

– ಎನ್ನುತ್ತ ಹಿಂದೆ ಸರಿಯತೊಡಗಿದ. ಮಹಾರಾಣಿ ಥಟ್ಟನೆದ್ದು ಹಾಲಿನ ಗಿಂಡಿ ಹಿಡಿದುಕೊಂಡು

"ಕುಡಿದೆಯೋ ಸರಿ. ಇಲ್ಲದಿದ್ದರೆ ಇಲ್ಲಿಯೇ ನಿನ್ನನ್ನು ಮುಗಿಸುತ್ತೇನೆ. ಹೇಳು ವಿಷ ಹಾಕಲು ಹೇಳಿದವರಾರು?"

ಕೋಪದಿಂದ ಅವನ ಹೃದಯವನ್ನು ಪರಚುವಂತೆ ಹೇಳಿ ಶಿಖರಸೂರ್ಯನ ಸೊಂಟದಲ್ಲಿದ್ದ ಚಂದ್ರಾಯುಧವನ್ನು ಹಿರಿದು ಮುದುಕನ ಕತ್ತಿಗೆ ಗುರಿ ಹಿಡಿದಳು. ಮುದುಕ ನಡುಗುತ್ತ ಪ್ರಧಾನಿಯ ಕಡೆಗೆ ಕೈ ತೋರಿಸಿ ದೊಪ್ಪನೆ ನೆಲಕ್ಕೆ ಬಿದ್ದು ಎರಡೂ ಕೈಗಳಿಂದ ನೆಲ ಬಡಿಯುತ್ತ ತಪ್ಪಾಯಿತೆನ್ನುತ್ತ, ತನ್ನ ಕಿವಿ ತಾನೇ ಹಿಡಿದುಕೊಂಡು ಕೂತು ಎದ್ದು ಮಾಡತೊಡಗಿದ. ಮಧ್ಯೆ ಮಧ್ಯೆ ಎದೆ ಎದೆ ಬಡಿದುಕೊಂಡ. ಪ್ರಧಾನಿ ಜಾಣ ಮೂರ್ಛೆ ಹೋಗಿ ಪಾರಾಗಲು ಕಾಯುತ್ತಿದ್ದ. ಗರ ಬಡಿದಂತೆ ಮಹಾರಾಣಿ ಹಿಂದೆ ಸರಿದು ಪೀಠದ ಮ್ಯಾಲೆ ಕುಸಿದಳು. ಬಹಳ ಹೊತ್ತು ಯಾರೂ ಮಾತಾಡಲಿಲ್ಲ. ಸೇವಕ ಸೇವಕಿಯರು ಮಂದಿ ಪಾಕಾಚಾರಿಯ ಕಡೆಗೂ ಪ್ರಧಾನಿಯ ಕಡೆಗೂ ನೋಡುತ್ತ ಕಣ್ಸನ್ನೆಗಳಲ್ಲಿ ಆಶ್ಚರ್ಯಗಳನ್ನು ಹಂಚಿಕೊಳ್ಳುತ್ತಿದ್ದರು. ಶಿಖರಸೂರ್ಯ ದೂರದಲ್ಲಿ ನಿಂತಿದ್ದ ಸುಕ್ರ ಮತ್ತು ಬೊಂತೆಯರನ್ನು ನೋಡಿದ. ಬಂಟರು ಬಂದು ಪ್ರಧಾನಿಯನ್ನೂ, ಪಾಕಾಚಾರಿಯನ್ನೂ ಕರೆದೊಯ್ದರು. ಉಳಿದವರೆಲ್ಲ ಮಹಾರಾಣಿಯ ದುಃಖದಲ್ಲಿ ಮರುಗಿ ಕರಗಿದವರಂತೆ ಮಾಯವಾದರು.

ಈಗ ಮಹಾರಾಣಿ ಮತ್ತು ಶಿಖರಸೂರ್ಯ ಇಬ್ಬರೇ ಇದ್ದರು. ಹೊರಗೆ ಕಗ್ಗತ್ತಲಿತ್ತು. ಶಿಖರಸೂರ್ಯ ಮೆಲ್ಲಗೆ ಮಹಾರಾಣಿಯ ಬಳಿಗೆ ಹೋಗಿ ಕೂತು ಅವಳ ಕೈ ಹಿಡಿದು ಅದುಮಿ ಧೈರ್ಯ ಹೇಳಲು ನೋಡಿದ. ಮಹಾರಾಣಿ ನಿಟ್ಟುಸಿರು ಬಿಟ್ಟು ಶಿಖರಸೂರ್ಯನ ಕೈಯನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡಳು, ಜಲ ಜಲ ಕಣ್ಣೀರು ಸುರಿಸುತ್ತ –

"ಇಷ್ಟು ವರ್ಷಗಳಾದ ಮೇಲೆ ನನಗೊಂದು ಸತ್ಯ ಹೊಳೆಯಿತು. ವೈದ್ಯ ಮಿತ್ರಾ.... ಹೇಳಲೇ?"

“ಹೇಳಿ ಮಹಾರಾಣಿ”

“ನಾನು ಅಬಲೆ!”

ಎಂದು ಎರಡು ಹನಿ ಕಣ್ಣೀರುದುರಿಸಿ ಎದ್ದು ತಡವರಿಸುತ್ತ ಹೊರಟಳು. ಎರಡು ಹೆಜ್ಜೆ ನಡೆದಿರಬೇಕು, ಕಾಲು ಸೋತು ಕುಸಿದಳು. ತಕ್ಷಣ ಶಿಖರಸೂರ್ಯ ಹೋಗಿ ಅವಳ ಕೈ ಹಿಡಿದು ಎತ್ತಿದ. ಆಧಾರವಾಗಿ ಎಡಗೈ ಹಿಡಿದುಕೊಂಡು ಅಂತಃಪುರದತ್ತ ನಿಧಾನವಾಗಿ ನಡೆಸಿಕೊಂಡು ಹೋದ. ಮೆಲ್ಲಗೆ ಹಾಸಿಗೆಯಲ್ಲಿ ಒರಗಿಸಿ, ಮುದ್ದಿಟ್ಟು ಹಿರಿಯಸೇವಕಿಯರ ಕರೆದು, ಜಾಗ್ರತೆಯಾಗಿ ನೋಡಿಕೊಳ್ಳಲು ಹೇಳಿ ತನ್ನ ಬಿಡಾರಕ್ಕೆ ಹೋದ.

ತನ್ನ ಅರಮನೆಯಲ್ಲಿ ತಾನೆ ಬಂಧಿಯಾಗಿ ಸರ್ವಾಧಿಕಾರಿಯಂತೆ, ಎಲ್ಲವೂ ತನ್ನ ನಿಯಂತ್ರಣದಲ್ಲಿರುವಂತೆ ಅಭಿನಯಿಸುತ್ತಿದ್ದ ಮಹಾರಾಣಿಗೆ ಈಗ ಕಂಡು ಹಿಡಿದ ಸತ್ಯ ಜೀರ್ಣವಾಗುವುದು ಕಷ್ಟ. ಅವಳೆಂದೂ ಈ ಪರಿ ಅಸಹಾಯಕಳಾಗಿರಲಿಲ್ಲ. ಒಬ್ಬ ನಂಬಿಗಸ್ಥರಿಲ್ಲ. ನಿಷ್ಠೆಯನ್ನ ಕೊಳ್ಳೋದಕ್ಕೆ ಹಣವಿಲ್ಲ. ದಿವಂಗಿತ ರಾಜ, ರೋಗಿಷ್ಟ ಮಗ. ವಿಶ್ವಾಸದ್ರೋಹಿಯಾದ ಪ್ರಧಾನಿ! ಅರಮನೆಯಲ್ಲಿ ಯಾರನ್ನು ನಂಬುವುದು ? ಯಾರನ್ನು ಬಿಡುವುದು? ಯಾವಾಗ ವಿಷ ಹಾಕಿ ಕೊಲ್ಲುವರೆಂಬ ಖಾತ್ರಿಯಿಲ್ಲ! ಒಂದು ಕಾಲಕ್ಕೆ ಮಹಾರಾಣಿಯ ವಿನೋದಕ್ಕೆ ಗುರಿಯಾದದ್ದೇ ತನಗೆ ಗೌರವವೆಂದು ವರ್ತಕರನೇಕರು ಭಾವಿಸುತ್ತಿದ್ದರು. ಅದಕ್ಕಾಗಿ ಉದ್ದೇಶಪೂರ್ವಕ ದಡ್ಡರ ಹಾಗೆ ಅಭಿನಯಿಸಿ ಮಹಾರಾಣಿಯನ್ನು ನಗಿಸಲು ಪ್ರಯತ್ನಿಸುತ್ತಿದ್ದರು. ಈಗ ಒಬ್ಬ ವರ್ತಕನೂ ಅವಳ ಬಳಿಗೆ ಸುಳಿದಿರಲಿಲ್ಲ.

ಆದರೂ ಅವಳು ಅಂಗಾಲಿನಿಂದ ನೆತ್ತಿಯತನಕ ಮಹಾರಾಣಿಯೇ! ಗತ್ತಿನ ನಡಿಗೆ, ಮಾತಿನ ಶೈಲಿ, ಹಿಂಜರಿಕೆಯಿಲ್ಲದ ದರ್ಪ, ಪಂಡಿತರನ್ನ ತಬ್ಬಿಬ್ಬುಗೊಳಿಸುವ ವಿಚಾರ ಸರಣಿ - ಇವೆಲ್ಲ ಅವಳನ್ನು ಹುಟ್ಟಿನಿಂದ ಮಾತ್ರವಲ್ಲ ಗುಣದಿಂದಲೂ ಮಹಾರಾಣಿಯನ್ನಾಗಿ ಮಾಡಿದ್ದವು. ಕನಕಪುರಿಯನ್ನ ಆಕೆಯ ಹಾಗೆ ಪ್ರೀತಿಸಿದವರು ಇನ್ನೊಬ್ಬರಿಲ್ಲ. ಆದರೆ ಕನಕಪುರಿಯ ಬಗೆಗಿನ ಅವಳ ಅಭಿಮಾನವೇ ಈಗ ಮೈಲಿಗೆಗೊಂಡಿತ್ತು! ಮಹಾರಾಣಿಯೀಗ ಗತವೈಭವದ ಶವದ ಹಾಗೆ ಕಾಣುತ್ತಿದ್ದಳು.

## ಐವತ್ಮೂರು

ಶಿಖರಸೂರ್ಯ ಬೆಳಿಗ್ಗೆ ಎದ್ದು ಬಿಡಾರದಲ್ಲಿ ಕೂತಿದ್ದಾಗ ಹಕ್ಕಿಗಳ ಚಿಲಿಪಿಲಿ ಸುಪ್ರಭಾತದೊಂದಿಗೆ ಹರ್ಷದಾಗಯಕ ತಂಗಾಳಿ ಬೀಸಿ ಬಂತು. ನದಿಯ ನೀರು ಚಿಕ್ಕಪುಟ್ಟ ತೆರೆಗಳಿಂದ ಸಂಭ್ರಮ ಪಡುತ್ತಿತ್ತು. ನಿನ್ನೆಯ ಘಟನೆಗಳು ಒಂದೊಂದೇ ನೆನಪಿಗೆ ಬಂದು ಶಿಖರಸೂರ್ಯ ನಗುತ್ತ ಹೊರಗೆ ಕೂತಿದ್ದ ಬಂಡೆಯನನ್ನು ಒಳಗೆ ಕರೆದು ಕೇಳಿದ:

“ಸ್ವಯಂ ಪ್ರಧಾನಿ, ಆದಿತ್ಯಪ್ರಭನ ಮಾವ - ಮಹಾರಾಣಿಗೂ ನನಗೂ ವಿಷ ಹಾಕಿದ್ದನಲ್ಲ ಮಾರಾಯ! ಕನಕಪುರಿಯ ಮನಸ್ಸೇ ತಿಳಿಯುವುದಿಲ್ಲವಲ್ಲ. ಅಲ್ಲವೊ ಬಂಡೆಯ, ಮಹಾರಾಣಿ ನನಗೆ ವಿಷವುಣ್ಣಿಸಲಿದ್ದಾಳೆ ಅಂತಲ್ಲವ ನೀನು ಹೇಳಿದ್ದು?”

ಅಂದ. ಅದಕ್ಕೆ ಬಂಡೆಯ -

“ನಾನು ಅಂಗೇಳಿದ್ದು ನಿಜ ಒಡೆಯಾ. ಆದರೆ ಪ್ರಧಾನಿ ವಿಷ ಇಕ್ಕಿದ್ದಕ್ಕೂ ಕಾರಣ ಐತೆ” ಅಂದ.

ಶಿಖರಸೂರ್ಯ ಕುತೂಹಲದಿಂದ “ಅದೇನು ಕಾರಣ ಕಂಡುಹಿಡಿದೆಯೊ ಮರಾಯಾ?” ಅಂದ.

“ಮಹಾರಾಣಿ ನಿನ್ನನ್ನ ಮುಗಿಸಬೇಕಂತ ಜಟ್ಟಿಗಳನ್ನು ಕರೆಸಿದ್ದಳು. ಅವರೆಲ್ಲಾ ನಮ್ಮ ಕಡೆಯವರಾಗಿದ್ದರಿಂದ ನಮ್ಮ ಮಾತು ಕೇಳಿ ವಾಪಸಾದರು. ನಿಮ್ಮ ಮಹಾರಾಜ ಇಂದೋ ನಾಳೆಯೇ ಹರಾ ಅನ್ನೊದಕ್ಕೆ ಸಿದ್ಧವಾಗವ್ನೆ, ಅವನು ಹರಾ ಅಂದರೆ ಪಟ್ಟಕ್ಕೆ ಯಾರು? ಪ್ರಧಾನಿ ಮಗನೇ! ಆದರೆ ಅದಕ್ಕೆ ಅಡ್ಡಿ ಬರೋರಾರು? ನೀನು ಮತ್ತು ಮಹಾರಾಣಿ! ನಿಮ್ಮಿಬ್ಬರನ್ನೂ ಮುಗಿಸಿದರೆ - ಒಂದೇ ಕಲ್ಲಿಗೆ ಎರಡು ಹಕ್ಕಿ ಬೀಳಲಿ ಅಂದುಕೊಂಡ!”

ಈಗ ಮಾತ್ರ ಶಿಖರಸೂರ್ಯನಿಗೆ ನಗೆ ತಡೆದುಕೊಳ್ಳಲಾಗಲಿಲ್ಲ. ಅವನು ನಗುವುದನ್ನ ನೋಡಿ “ಒಡಯ ತನ್ನ ಮಾತನ್ನು ನಂಬಲಿಲ್ಲವೆಂದು ಬಂಡೆಯನಿಗೆ ನಾಚಿಕೆಯಾಯಿತು. ಮಳಮಳ ಒಡೆಯನ ಮುಖವನ್ನೇ ನೋಡುತ್ತ

“ನನ್ನ ಲೆಕ್ಕ ತಪ್ಪಂತೀಯಾ ಒಡೆಯಾ?” ಎಂದು ವಿವರಣೆ ನಿರೀಕ್ಷಿಸಿ ಕೇಳಿದ.

“ಇಲ್ಲಪ್ಪ. ನೀನು ಊಹಿಸಿದ್ದೇ ಸರಿ. ಇವತ್ತು ಮಹಾರಾಣಿಯ ಸಮಯ ಕೇಳಿ ತಿಳಿಸು” ಎಂದು ಪುನಃ ಮುಗುಮ್ಮಾಗಿ ನಕ್ಕ.

ಯಾಕಂತೀರೊ ? ಹಾಲಲ್ಲಿ ವಿಷ ಹಾಕಿಸಿದವನು ಪ್ರಧಾನಿಯಲ್ಲ, ಶಿಖರಸೂರ್ಯ! ಅರಮನೆಯ ಪಾಕಾಚಾರಿ ರಾಜವೈದ್ಯನ ಹಳೇ ಪರಿಚಯ. ಅವನಿಗೆ ಹಿಡಿತುಂಬ ಚಿನ್ನ ಕೊಟ್ಟು ತನ್ನ ಹಾಗೂ ಮಹಾರಾಣಿಯ ಗಿಂಡಿಗಳಲ್ಲಿ ವಿಷ ಹಾಕಿಸಿ, ಪ್ರಧಾನಿಯ ಕಡೆಗೆ ಕೈತೋರಿಸುವಂತೆ ತಯಾರು ಮಾಡಿದ್ದ!

ಅಷ್ಟರಲ್ಲಿ ಸುಕ್ರ ಬಂದು, “ಪಾಕಾಚಾರಿಯನ್ನು ಮುಗಿಸಿದೆವು ಒಡೆಯಾ!” ಎಂದು ಹೇಳಿ ಆಮೇಲೆ ಕೇಳಿದ:

“ಇಷ್ಟು ದಿನ ಇಂಥ ನರಿಗಳ ಮಧ್ಯ ಆ ಹೆಂಗಸು ಹೆಂಗೆ ಬದುಕಿದೆ ? ನೆನಪಾದರೆ ಕರುಳು ಚುರ್‌ಂತಿದೆ, ನನ್ನೊಡೆಯಾ.”

## ಐವತ್ನಾಲ್ಕು

ಮಹಾರಾಣಿ ಎಚ್ಚರಗೊಂಡಾಗ ನಾಕು ತಾಸು ಹೊತ್ತೇರಿತ್ತು. ನಿದ್ದೆಯಿಲ್ಲದೆ ಮುಖ ಊದಿಕೊಂಡಿತ್ತು. ಕಣ್ಣು ಕೆಂಪಗೆ ಉರಿಯುವ ಕೊಳ್ಳಿಗಳಾಗಿದ್ದವು. ಎದ್ದು ಕಂಬಳಿ ಹೊದ್ದುಕೊಂಡು ಹಾಸಿಗೆಯಲ್ಲಿ ಕೂತ ಕೂಡಲೇ ಸೇವಕಿ ಬಂದಳು. ಅವಳ ನೆರವಿನಿಂದ ಮಿಂದು ಬಂದಳು. ಹಣ್ಣಿನ ರಸ ಕುಡಿದು ಕೊಟ್ಟಿದ್ದನ್ನ ತಿಂದಳು. ಮಾತಾಡಲಿಲ್ಲ. ಕನ್ನಡಿಯನ್ನ ಕೂಡ ನೋಡಲಿಲ್ಲ. ಆಮೇಲೆ ಹಬ್ಬ ಹರಿದಿನ, ವಿಜಯೋತ್ಸವ ಇತ್ಯಾದಿ ದೊಡ್ಡ ಸಂದರ್ಭಗಳಲ್ಲಿನಂತೆ ಸಿಂಹಾಸನವನ್ನ ಸಿಂಗರಿಸಲು ಹೇಳಿ ಕಳಿಸಿ ಮೈತುಂಬ ಕಂಬಳಿ ಹೊದ್ದುಕೊಂಡು ಹೊತ್ತು ಹೊರಳುವ ತನಕ ಮಲಗಿಬಿಟ್ಟಳು. ಆಮೇಲೆ ಎದ್ದು ತಾನೇ ಶೃಂಗಾರಗೊಳ್ಳಲು ಸುರುಮಾಡಿದಳು!

ತಿದ್ದಿತೀಡಿ ಬೈತಲೆ ತೆಗೆದು ತಲೆ ಬಾಚಿಕೊಂಡಳು. ವಾರೆದುರುಬಿನ ಮ್ಯಾಲೆ ಮಲ್ಲಿಗೆ ಹೂ ಮಾಲೆ ಮುಡಿದಳು. ಹಣೆಗೆ ಚಂದ್ರ ತಿಲಕವಿಟ್ಟುಕೊಂಡು ಕಣ್ಣಿಗೆ ಕಾಡಿಗೆಯ ಗೆರೆಯೆಳೆದುಕೊಂಡಳು. ಅರವತ್ತು ಮೊಳದ ಪಟ್ಟೆಸೀರೆಯುಟ್ಟುಕೊಂಡು ಮುತ್ತಿನ ಬೈತಲೆ ಎಸಳು ಬುಗುಡಿ ಇಟ್ಟುಕೊಂಡಳು. ಝಗಮಗ ಹೊಳೆವ ಕಾಸಿನ ಸರ, ನವರತ್ನ ಹಾರಗಳನ್ನು ಓರಣವಾಗಿಟ್ಟುಕೊಂಡು ಕನ್ನಡಿಯಲ್ಲಿ ಮತ್ತೆ ಮತ್ತೆ ಹಿಂದೆಮುಂದೆ ತಿರುಗಿ ನೋಡಿಕೊಂಡಳು. ವಧುವಿನಂತೆ ಶೃಂಗಾರವಾಗಿ ಅರಮನೆಗೆ ನಡೆದಳು. ಅರಮನೆಯ ಕೋಣೆ ಕೋಣೆಗಳನ್ನ, ಮೂಲೆ ಮೂಲೆಗಳನ್ನ ನೋಡಿದಳು. ಅಲ್ಲಲ್ಲಿ ಇಟ್ಟಿದ್ದ ಪ್ರತಿಮೆಗಳನ್ನ ಕೈಯಾರೆ ಮುಟ್ಟಿ ಅವುಗಳ ಧೂಳು ಒರೆಸಿದಳು. ಅವುಗಳ ನಿಲುವು ಸೌಂದರ್ಯಗಳನ್ನ ಮೆಚ್ಚುಗೆಯಿಂದ ನೋಡಿದಳು. ಅಲ್ಲಲ್ಲಿ ನಿಂತಿದ್ದ ಬಂಟರನ್ನು ಪರದೇಶದವರೆಂಬಂತೆ ನೋಡಿದಳು. ಮಾತಾಡಿಸಲಿಲ್ಲ. ಅವರ ನಮಸ್ಕಾರಗಳನ್ನು ಸ್ವೀಕರಿಸಲೂ ಇಲ್ಲ.

ಗಜಶಾಲೆಗೆ ಹೋಗಿ ಪಟ್ಟದಾನೆಯ ಮುಂದೆ ಬಾಳೆಯಗೊನೆ ಸರಿಸಿ ಅದರ ಮೈ ಸವರಿದಳು. ಅದು ತಿನ್ನಲಿಲ್ಲ. ತನ್ನ ಸೊಂಡಿಲನ್ನ ಇವಳ ಭುಜದ ಮ್ಯಾಲಿಟ್ಟು ಕಣ್ಣು ಮುಚ್ಚಿತು. ಮಹಾರಾಣಿ ಅದರ ಸೊಂಡಿಲನ್ನ ಇವಳ ಭುಜದ ಮ್ಯಾಲಿಟ್ಟು ಕಣ್ಣು ಮುಚ್ಚಿತು.

ಮಹಾರಾಣಿ ಅದರ ಸೊಂಡಿಲನ್ನು ನೇವರಿಸಿ ಕಣ್ಣು ಒರೆಸಿದಾಗ ಅದರ ಕಣ್ಣೀರಿನಿಂದ ಕೈ ಒದ್ದೆಯಾದವು. ಮಹಾರಾಣಿ ಅದರ ಮೈ ಮೇಲೆ ಕೈಯಾಡಿಸಿ ಸ್ವಲ್ಪ ಹೊತ್ತು ನಿಂತಿದ್ದು ಆಮೇಲೆ ಬಾಳೆಹಣ್ಣು ಕಿತ್ತು ಸೊಂಡಿಲೆದುರು ಹಿಡಿದಳು. ಅದು ತಗೊಳ್ಳಲಿಲ್ಲ. ಮುಂದೆ ಹೊರಟಳು. ಅವಳ ಕಣ್ಣೂ ಒದ್ದೆಯಾಗಿದ್ದವು.

ಹೊರಗೆ ಬಂದಾಗ ದರ್ಶನ ಪಡೆಯಲು ಇಬ್ಬರು ವರ್ತಕರು ಬಂದಿರುವುದಾಗಿ ಬಂಟ ಬಂದ ಹೇಳಿದ. ಯಾರನ್ನೂ ನೋಡುವುದಿಲ್ಲವೆಂದು ಕೈಸನ್ನೆ ಮಾಡಿ ಸೀದಾ ಒಡ್ಡೋಗಲಕ್ಕೆ ನಡೆದಳು. ಒಂದುನೂರಾ ಎಂಟು ಕಂಬಗಳ, ಒಂದು ಸಾವಿರ ಪ್ರಜೆಗಳು ಕೂರುವಷ್ಟಿದ್ದ ಪ್ರಸಿದ್ಧ ಒಡ್ಡೋಲಗ ಅದು. ನೂರೆಂಟು ಕಂಬಗಳ ಮಧ್ಯೆ ಒಬ್ಬೊಬ್ಬ ಮುಖ್ಯರು ಕೂರುವದಕ್ಕೆ ಪೀಠಗಳಿದ್ದು ಪಡುವಣದ ಕೇಂದ್ರದಲ್ಲಿ ಚಿನ್ನದ ಸಿಂಹಾಸನವಿದೆ. ಅದರ ಮೇಲೆ ಕೂತವರು ಹಿಂದೆ ಒರಗುವಲ್ಲಿ ಗರಿಬಿಚ್ಚಿದ ನವಿಲು ನಿಂತಿದ್ದು ಅದಕ್ಕೆ ಸಾವಿರದೆಂಟು ಕಣ್ಣುಗಳು, ಒಂದೊಂದು ಕಣ್ಣಿನಲ್ಲಿ ಒಂದೊಂದು ರತ್ನಗಳಿವೆ. ಸಿಂಹಾಸನದ ನೆತ್ತಿಯ ಮ್ಯಾಲೆ ಎತ್ತರದಲ್ಲಿ ಕನಕಪುರಿಯ ಕುಲದೇವತೆ ತಕ್ಕಡಿ ತೂಗುವ ಗರುಡನ ಮೂರ್ತಿಯಿತ್ತು. ಸಿಂಹಾಸನದ ಹಿಂಭಾಗದಲ್ಲಿ ಕೆಳಗಡೆ ಮಂತ್ರಿ ಮಾನ್ಯರ ಪೀಠಗಳಿವೆ. ಬೇರೆ ದೇಶದ ಯಾರೇ ಬಂದರೂ ಈ ಪ್ರಸಿದ್ಧ ಒಡ್ಡೋಲಗವನ್ನು ನೋಡದೆ ಹೋಗುವುದಿಲ್ಲ.

ಮಹಾರಾಣಿ ಒಬ್ಬಳೇ ಒಳಕ್ಕೆ ಹೋದಾಗ ಅಲ್ಲಿದ್ದ ಇಬ್ಬರೂ ಬಂಟರಿಗೆ ಆಶ್ಚರ್ಯವಾಯಿತು. ತಕ್ಷಣ ವಿಶೇಷ ಗೌರವದ ನಮಸ್ಕಾರ ಮಾಡಿ ಬೆರಗಿನಲ್ಲಿ ನಿಂತರು. ಇಬ್ಬರೂ ಹಳಬರು. ಅವರನ್ನೂ ಸನ್ನೆಯಿಂದ ಹೊರಗೆ ಕಳಿಸಿ ಸೀದಾ ಹೋಗಿ ಸಿಂಹಾಸನದಲ್ಲಿ ಕೂತಳು. ಪ್ರಜೆಗಳೂ ಮಂತ್ರಿ ಮಾಂಡಳಿಕ ಮನ್ನೆಯರೂ ತಂತಮ್ಮ ಸ್ಥಾನಗಳಲ್ಲಿ ಕೂತಿರುವರೆಂಬಂತೆ ಮಂದಹಾಸ ಬೀರುತ್ತ ಸುತ್ತ ಕಣ್ಣಾಡಿಸಿದಳು.

ಹೀಗೆ ಎಷ್ಟು ಹೊತ್ತು ಕೂತಿದ್ದಳೋ - ಅಷ್ಟರಲ್ಲಿ ಒಬ್ಬ ಸೇವಕ ಒಳಗೆ ಬಂದು ನಮಸ್ಕಾರವನ್ನಾಚರಿಸಿ “ಬಂಡೆಯ ದರ್ಶನ ಕೇಳುತ್ತಿದ್ದಾನೆ. ಅಪ್ಪಣೆಯೆ ಮಹಾರಾಣಿ?” ಅಂದ. “ಬಿಡು” ಎಂಬಂತೆ ಸನ್ನೆ ಮಾಡಿದಳು. ಒಳಬಂದು ನೋಡಿದರೆ ಬಂಡೆಯನಿಗೆ ಆಘಾತವಾಯಿತು! ಎಂಟು ಕಾಲಿನ ಗದ್ದಿಗೆಯಲ್ಲಿ, ಮೊಳಕಾಲುಮಟ ಹೂವಿರುವಲ್ಲಿ, ಮುಗುಳು ಮಲ್ಲಿಗೆ ಪರಿಮಳದ ಸಂಪಿಗೆಯಲ್ಲಿ, ಬೆಡಗಿನ ನವಿಲುಗರಿಯ ಸಿಂಹಾಸನದಲ್ಲಿ ಮಹಾರಾಣಿ ಒಬ್ಬಳೇ ಓಲಗಗೊಂಡಿದ್ದಾಳೆ! ಒಬ್ಬ ಪ್ರಜೆಯಿಲ್ಲ. ಮಂತ್ರಿ ಮಾನ್ಯ ಮಾಂಡಳಿಕರಿಲ್ಲ, ಗಾಳಿ ಬೀಸುವ ಸೇವಕಿಯರಿಲ್ಲ. ಪರಾಕು ಹೇಳುವ ವಂದಿಮಾಗಧರಿಲ್ಲ. ದೊಡ್ಡ ಒಡ್ಡೋಲಗ ಸುಂದರವಾದ ಸಿಂಹಾಸನದಲ್ಲಿ ಒಬ್ಬಳೇ ಕೂತಿದ್ದಾಳೆ. ಅರಮನೆಯ ಬಗೆಗಿನ ಸೇಡು ಎಷ್ಟೇ ಇರಲಿ, ಬಂಡೆಯನಂಥ ಬಂಡೆಯನಿಗೂ ಕರುಳು ಕತ್ತರಿಸಿದಷ್ಟು ದುಃಖವಾಯಿತು. ಮಹಾರಾಣಿಯನ್ನು ನೋಡಿ, ತಕ್ಷಣ ಒಡ್ಡೋಲಗದ ಪದ್ಧತಿಯಂತೆ ನಿಂತಲ್ಲೇ ಬಾಗಿ ಪ್ರಣಾಮಗಳನ್ನಾಚರಿಸುತ್ತ, ಮಹಾರಾಣಿಯ ಪಾದಗಳ ತನಕ ಹೋದ.

ಸಿಂಹಾಸನದ ಮೇಲೆ ಸಿಂಹಿಣಿಯಂತೆ ಕೂತಿದ್ದಳು ಮಹಾರಾಣಿ! ನಿನ್ನೆ ನಡೆದ ದ್ರೋಹದ ಘಟನೆಯ ಕಿಂಚಿತ್ ನೆರಳು ಕೂಡ ಮುಖದಲ್ಲಿ ಕಾಣಲಿಲ್ಲ. ಬಂದವರನ್ನು ನುಂಗಲು ಬಾಯಿ ತೆರೆದು ನಿಂತ ಸಿಂಹಾಸನದ ಸಿಂಹಗಳನ್ನು ಸುಮ್ಮನಿರಿಸುವಂತೆ ಅವುಗಳ ಮೇಲೆ ಕೈಯಿಟ್ಟ ಆ ರಾಜಗಾಂಭೀರ್ಯ, ಭಯಬೇಡ ರಕ್ಷಣೆಗೆ ನಾನಿದ್ದೇನೆ ಎಂಬಂಥ ಅಭಯದ ನಿಲುವು, ಎತ್ತರದ ಬೆಟ್ಟದ ಮ್ಯಾಲೆ ನಿಂತು ಇತರೇ ಪ್ರಾಣಿಗಳನ್ನ ಸಿಂಹಾವಲೋಕನ ಮಾಡುವ ಆ ಕೃಪಾದೃಷ್ಟಿ, ಇವೆಲ್ಲ ಸೇರಿ - “ಇವಳಪ್ಪಾ ಮಹಾರಾಣಿ ಎಂದರೆ!” ಎಂದು ಸಾರಿ ಸಾರಿ ಹೇಳುವಂತಿತ್ತು ಅವಳ ಭಂಗಿ! ಪ್ರಜೆಗಳ್ಯಾರೂ ಇಲ್ಲವೆಂಬ ಕೊರತೆ ಕಾಣಿಸಲೇ ಇಲ್ಲ ಬಂಡೆಯನಿಗೆ. ಸೀದಾ ಹೋಗಿ, “ಮಹಾರಾಣಿಗೆ ಜಯವಾಗಲೆಂದು” ಹೇಳಿ ಅವಳ ಪಾದದ ಮುಂದೆ ಅಡ್ಡಬಿದ್ದ.

ಮಹಾರಾಣಿಯೇ ದಯಮಾಡಿ “ಏಳು” ಎಂದಳು. ಎದ್ದು ಕೈಮುಗಿದು ನಿಂತುಕೊಂಡ. ಮುಖದ ಮೇಲೆ ಆತನ ಬಗ್ಗೆ ಕಿಂಚಿತ್ತೂ ಅಸಮಾಧಾನವಾಗಲಿ, ಕೋಪವಾಗಲಿ ಇರಲಿಲ್ಲ. ಮಹಾರಾಣಿ ಪ್ರಸನ್ನಳಾಗಿ “ಏನು ಬಂದೆ?” ಎಂದಳು. ಒಳಗೊಳಗೇ ಕರಗಿಬಿಟ್ಟಿದ್ದ.

“ರಾಜವೈದ್ಯನಿಗೆ ಸಮಯ ಕೊಡಬೇಕಂತೆ ಮಹಾರಾಣಿ.”

“ಎಂದು ಸಂಜೆ ಅಂತಃಪುರಕ್ಕೆ ಬರಲಿ”

– ಎಂದು ಹೇಳಿ ತೊಲಗು ಎಂಬಂತೆ ಕೈಸನ್ನೆ ಮಾಡಿದಳು. ಬಂಡೆಯ ಅವಳನ್ನು ನೋಡುತ್ತಲೇ ಹಿಂದೆ ಹಿಂದೆ ಸರಿಯುತ್ತಲೇ ಮತ್ತೆ ಮತ್ತೆ ನಮಸ್ಕರಿಸುತ್ತಲೇ ಮಾಯವಾದ.

ಸೂರ್ಯಾಸ್ತವಾಗಿ ಆಕಾಶದ ಬೂದಿಬೆಳಕಾರಿ ಕತ್ತಲಾಗಿರುವಾಗ, ನರಮಾನವರ ಸಂಚಾರವಿಲ್ಲದೆ ಅರಮನೆಯಲ್ಲಿ ಭಯಾನಕ ಮೌನದ ಸ್ಮಶಾನ ವಾತಾವರಣ ಆವರಿಸಿರುವಾಗ, ಬೆದೆಯಿಂದ ಕುದಿವ ಮೈತುಂಬ ಪರಿಮಳವ ನಾರುತ್ತ, ಹಲವಾರು ವರ್ಷಗಳಿಂದ ಹಾರೈಸಿ ಕಾದ, ವಿಪರೀತ ಸುರತದ ಕನಸುಗಳಲ್ಲಿ ಅದ್ದಿದ ಕಣ್ಣುಳ್ಳವನಾಗಿ ಶಿಖರಸೂರ್ಯ ಬಂದ. ಅವನೊಂದಿಗೆ ಕಾಣಿಕೆಯ ತಟ್ಟೆ ಹಿಡಿದ ಒಬ್ಬ ಸೇವಕನೂ ಬಂದ.

ಅಂತಃಪುರದ ಪಡುಕೋಣೆಯಲ್ಲಿ ಪ್ರಶಾಂತವಾದ ಮಂದ ಬೆಳಕಿತ್ತು. ಇವನನ್ನು ನೋಡಿದ್ದೇ ಚೈತನ್ಯ ಉತ್ಸಾಹಗಳಿಂದ ಮಂದಹಾಸ ಬೀರುತ್ತ ಬಂದು, “ಆಹ ಸಖ! ಎಂಥ ಸುಖ!” ಎಂದು ಹೇಳಿ ದುಂಡುದೋಳಿನ, ಉಬ್ಬಿದೆದೆಯ ಮಹಾರಾಣಿ ಗುರುನಿತಂಬಗಳು ನರ್ತಿಸುವಂತೆ ನಡೆಯುತ್ತ ಬಾಗಿಲದವರೆಗೆ ಬಂದು ಶಿಖರಸೂರ್ಯನ ಕೈಹಿಡಿದು ಒಳಗೆ ಕರೆತಂದು ಪೀಠ ತೋರಿಸಿದಳು. ಆಮೇಲೆ ತಾನೂ ಪಕ್ಕದ ಸುಖಾಸನದಲ್ಲಿ ಬೆಡಗಿನಿಂದ ಆಸೀನಳಾದಳು. ಈ ಪರಿಯ ತೆರೆದ ತೋಳಿನ ಸ್ವಾಗತವನ್ನು ಆತ ನಿರೀಕ್ಷಿಸಿರಲಿಲ್ಲ. ಮೊದಲೆರಡು ಕ್ಷಣ ಆತ ನಂಬಲಿಲ್ಲ. ಆಮೇಲೆ ಅರಿವಿಗೆ ಬಂದು ಸೇವಕನಿಗೆ ಸನ್ನೆ ಮಾಡಿ ಕಾಣಿಕೆಯನ್ನು ಮಹಾರಾಣಿಯ ಪೀಠದ ಮುಂದೆ ಇಡಲು ಸೂಚಿಸಿದ. ಆತ ಕಾಣಿಕೆಯ ತಟ್ಟೆ ಇಟ್ಟು ಹಿಂದೆ ಹಿಂದೆ ಸರಿಯುತ್ತ ಮಾಯವಾದ.

“ಈಗ ಹ್ಯಾಗಿದ್ದೀರಿ ಮಹಾರಾಣಿ?”

– ಎನ್ನುತ್ತ ಅವಳ ಕೈ ಹಿಡಿದು, ತಕ್ಷಣ ಸಲಿಗೆ ಹೆಚ್ಚಾಯಿತೆಂದು ಧೋರಣೆ ಬದಲಿಸಿ ನಾಡಿ ನೋಡತೊಡಗಿದ.

“ನೀನು ವೈದ್ಯ. ನಾನು ಹ್ಯಾಗಿದ್ದೀನಿ ಅಂತ ನೀನು ಹೇಳಬೇಕು”.

ಇಷ್ಟು ಅವಕಾಶ ಸಿಕ್ಕುದೇ ತಡ ಇನ್ನೊಮ್ಮೆ ನಾಡಿ ನೋಡಿದ. ಕೆನ್ನೆ ತೀಡಿ ನೋಡಿದ. ಉದ್ವಿಗ್ನತೆಯಿಂದ ಅವನ ಕೈ ಬಿಸಿಯಾದುದನ್ನು ಮಹಾರಾಣಿ ಗಮನಿಸಿದಳು. ಅಷ್ಟರಲ್ಲಿ ಸೇವಕಿಯೊಬ್ಬಳು ಬಂದು ಮದ್ಯ ತುಂಬಿದ ಒಂದು ಗಿಂಡಿಯನ್ನು ಇಟ್ಟು ಹೊರಗೆ ನಡೆದಳು.

“ಒಂದೇ ಯಾಕೆ? ನೀವು ತಗೊಳ್ಳೋದಿಲ್ಲವೆ ಮಹಾರಾಣಿ?”

“ಅದೇ ಗಿಂಡಿಯನ್ನು ಕೊಡು, ಇಬ್ಬರೂ ಕುಡಿಯೋಣ”

– ಎಂದು ಹೇಳಿ ಗಿಂಡಿಯಲ್ಲಿಯ ಅರ್ಧ ಮದ್ಯವನ್ನು ಹೀರಿ,

“ಇದರಲ್ಲಿ ವಿಷವಿಲ್ಲವೆಂದು ತೋರಿಸಲು ಕುಡಿದೆ. ಇಕೊ ಇನ್ನು ನೀನು ಕುಡಿ.”

– ಎಂದು ಎಂಜಲದ ಗಿಂಡಿಯನ್ನು ಅವನ ಕೈಗಿಡುತ್ತ ಶಿಖರಸೂರ್ಯನ ಕಡೆಗೆ ಕೃಪಾಕಟಾಕ್ಷವ ಬೀರಿದಳು. ಮದ್ಯವನ್ನು ಇಷ್ಟಪಡದ ಶಿಖರಸೂರ್ಯ ಗಟಗಟ ಮದ್ಯ ಹೀರಿ ಕಣ್ಣುಗಳಿಂದ ಅವಳ ಸೌಂದರ್ಯವನ್ನು ಹೀರುತ್ತ “ಇಷ್ಟೇನಾ?” ಎಂದು ಕೇಳುವಷ್ಟರಲ್ಲಿ, ಅದೇ ಸೇವಕಿ ಇನ್ನೊಂದು ಗಿಂಡಿ ತುಂಬ ಮದ್ಯ, ಅದರೊಂದಿಗೆ ಕರಿದ ಮಾಂಸ, ಮೀನುಗಳನ್ನು ತಂದಿಟ್ಟಳು. ಬಿಗಿದ ಹೆದೆಯಂಥ ಎದೆಯಿಂದ ಇವನ ಹೃದಯದಲ್ಲಿ ಗಾಯ ಮಾಡುತ್ತ ಮಹಾರಾಣಿ ಕೇಳಿದಳು –

“ಈಗ ಅರಮನೆಯ ತುಂಬ ನಿನ್ನ ಬಂಟರೇ ಇದ್ದಾರಲ್ಲವೆ?”

“ಹೌದು. ವಿಷದ ಪ್ರಸಂಗ ನಡೆದಾಗಿನಿಂದ ನಿಮಗೆ ಹೇಳದೆ ನಾನೇ ಬದಲಾವಣೆ ಮಾಡಿದೆ. ಬೇಸರವೆ ಮಹಾರಾಣಿ?”

“ಇಲ್ಲ. ಹೋಗಿ ಒಳಗೆ ಯಾರನ್ನೂ ಬಿಡಬೇಡವೆಂದು ದ್ವಾರಪಾಲಕನಿಗೆ ಹೇಳಿ ಬಾಗಿಲು ಹಾಕಿಕೊಂಡು ಬಾ.”

– ಎಂದು ತುರುಬಿನ ಹೂಮಾಲೆಯನ್ನು ಅದೊಂದು ಬಗೆಯ ಬೆಡಗಿನ ಶೈಲಿಯಲ್ಲಿ ಮುಟ್ಟಿ ನೋಡಿಕೊಂಡಳು. ಶಿಖರಸೂರ್ಯನ ಮೈಯಲ್ಲಿ ಮಿಂಚಿನ ಹೊಳೆ ಹರಿಯಿತು. ಕ್ಷಣಾರ್ಧದಲ್ಲಿ ಅವಳು ಹೇಳಿದಂತೆ ಮಾಡಿ ಬಂದು –

“ಈಗ ಆಸುಪಾಸು ಯಾರೂ ಇಲ್ಲ – ಈ ನಿನ್ನ ಸೇವಕನೊಬ್ಬನನ್ನು ಬಿಟ್ಟು.”

ಎಂದು ಪಿಸುದನಿಯಲ್ಲಿ ಹೇಳಿ ತನ್ನ ಬಳಿಯಿದ್ದ ಅವಳ ಕಂಠೀಹಾರವನ್ನು ಅವಳ ಕೈಗಿಟ್ಟ.

“ಇದ್ಯಾವಾಗ ನಿನ್ನ ಕೈಗೆ ಬಂತು?”

“ನಿನ್ನೆಯ ಗುದಮುರಿಗೆಯಲ್ಲಿ ಸಿಕ್ಕಿತು.”

ಹಾರವನ್ನೇ ನೋಡುತ್ತ ಹಿಂದಿನ ದಿನಮಾನಗಳ ನೆನಪಾಗಿ ಮಹಾರಾಣಿಯ ಮುಖದ ಮೇಲೆ ಯಾತನೆ ಮೂಡಿತು.

“ಮಾಳವ ರಾಜ್ಯ ಗೆದ್ದಾಗ ಅರ್ಥಕೌಶಲ ಅಲ್ಲಿಂದ ತಂದದ್ದು ಇದು. ಆತ ಕನಕಪುರಿಯನ್ನ ತುಂಬ ಪ್ರೀತಿಸುತ್ತಿದ್ದ.”

“ನಾನೂ ನಿನ್ನನ್ನು ತುಂಬಾ ಪ್ರೀತಿಸುತ್ತೇನೆ ಮಹಾರಾಣಿ.”

ಮಹಾರಾಣಿಯ ಮುಖಭಾವದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ತನ್ನ ಎದುರಿಗಿದ್ದ ತಟ್ಟೆಯ ಮೇಲಿನ ಬಟ್ಟೆ ತೆಗೆದಳು. ಅದರ ತುಂಬ ಚಿನ್ನದ ಧಾನ್ಯವಿತ್ತು. ಆಶ್ಚರ್ಯವನ್ನನುಭವಿಸುತ್ತ “ಚಿನ್ನದ ಧಾನ್ಯ!” ಎಂದಳು. ಕೈ ಹಾಕಿ ಮುಷ್ಟಿ ತುಂಬ ಧಾನ್ಯ ತಗೊಂಡ ಪರೀಕ್ಷಿಸುವ ದೃಷ್ಟಿಯಿಂದ ನೋಡಿದಳು. ಅವಳಿಗೆ ಸಂತೋಷವಾಗಿರಲೇಬೇಕೆಂದು ಊಹಿಸಿ ವಿನಯದಿಂದೆಂಬಂತೆ “ಸಣ್ಣ ಕಾಣಿಕೆ!” ಅಂದ. ಅವನು ಅಂದುಕೊಂಡಂಥ ಸಂತೋಷವಾಗಲಿ, ಆಶ್ಚರ್ಯವಾಗಲಿ ಅವಳ ಮುಖದಲ್ಲಿ ಕಾಣಲಿಲ್ಲ. ಮಹಾರಾಣಿ ಶಿಖರಸೂರ್ಯನನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ, –

“ಧಾನ್ಯದಿಂದ ಚಿನ್ನ ಮಾಡಿದಂತೆ, ಚಿನ್ನದಂತೆ ಧಾನ್ಯ ಮಾಡುವ ವಿದ್ಯಯೂ ನಿನಗೆ ತಿಳಿದಿರಬೇಕಲ್ಲಾ?”

ರಾಣಿಯ ಅಸಾಧಾರಣ ಬುದ್ಧಿಶಕ್ತಿ ಮತ್ತು ತಿಳುವಳಿಕೆಯ ಬಗ್ಗೆ ಶಿಖರಸೂರ್ಯನಲ್ಲಿ ಈಗ ಭಯ ಸುರುವಾಯಿತು. ಯಾವುದು ತನಗಲ್ಲದೆ ಬೇರೆ ಯಾರಿಗೂ ತಿಳಿಯದೆಂದು ಭಾವಿಸಿದ್ದನೋ ಅದು ಇವಳಿಗೆ ಸಾಮಾನ್ಯ ಜ್ಞಾನದಂತೆ ತಿಳಿದಿದೆ! ಮುಖಭಂಗವಾಗಿ ಹೇಳಿದ:

“ಇಲ್ಲ. ಧಾನ್ಯದಿಂದ ಚಿನ್ನ ಮಾಡಬಲ್ಲೆ. ಚಿನ್ನದಿಂದ ಧಾನ್ಯ ಮಾಡಲಾರೆ ಮಹಾರಾಣಿ!”

“ಹಾಗಾದರೆ ಈ ವಿದ್ಯೆಯನ್ನ ನೀನು ಶಿವಪಾದನಿಂದ ಕಲಿಯಲಿಲ್ಲ, ಅಲ್ಲವೆ?”

ಪರಿಶ್ರಮದಿಂದ ಗಳಿಸಿದ ತನ್ನ ರಹಸ್ಯವಿದ್ಯೆ ಇಷ್ಟು ಅಗ್ಗವಾಗಿ ಚರ್ಚಿತವಾಗುವುದನ್ನ ಆತ ಸಹಿಸಲಿಲ್ಲ. ಮಾತು ಬದಲಿಸಲೆಂದು ಹೇಳಿದ:

“ಹೌದು, ನಿಮಗೆ ಶಿವಪಾದ ಗೊತ್ತೆ ಮಹಾರಾಣಿ?”

“ಹೆಸರು ಕೇಳಿದ್ದೇನೆ; ನೋಡಿಲ್ಲ, ಇತ್ತೀಚೆ ಅವನ ಬಗ್ಗೆ ಬಹಳ ಆಸಕ್ತಿ ಮೂಡಿತು ವೈದ್ಯನೇ. ಹತ್ತಿಯಿಂದ ಬಟ್ಟೆ ಮಾಡಿ, ಬಟ್ಟೆಯಿಂದ ಹತ್ತಿ ಮಾಡಲಾಗದ ಸಂಸ್ಕೃತಿ, ಧಾನ್ಯದಿಂದ ಚಿನ್ನ ಮಾಡಿ, ಚಿನ್ನದಿಂದ ಧಾನ್ಯ ಮಾಡಲಾರದ ಸಂಸ್ಕೃತಿ ವಿನಾಶದತ್ತ ಸರಿಯುತ್ತದೆ ಅಂದನಂತಲ್ಲ! ಎಂಥ ಮಾತಿದು!”

“ಇದೇನಂಥಾ ಮಹತ್ವದ ಮಾತೆಂದು ನನಗನ್ನಿಸಲಿಲ್ಲ. ಹತ್ತಿಯಿಂದ ಬಟ್ಟೆ ಮಾಡೋದು, ಧಾನ್ಯದಿಂದ ಚಿನ್ನ ಮಾಡೋದು ಪ್ರಗತಿಯ ಲಕ್ಷಣ. ಹತ್ತಿಯಿಂದ ಬಟ್ಟೆ, ಧಾನ್ಯದಿಂದ ಚಿನ್ನ ಮಾಡದಿದ್ದರೆ ಮನುಷ್ಯನಿಗೂ ಪ್ರಾಣಿಗೂ ಏನು ವ್ಯತ್ಯಾಸ ಉಳಿಯುತ್ತದೆ ಹೇಳಿ.”

“ಹಾಗಲ್ಲ ವೈದ್ಯಮಿತ್ರನೇ, ತಿನ್ನುವ ಧಾನ್ಯವನ್ನ ಚಿನ್ನ ಮಾಡಿ ಇಟ್ಟುಕೊಳ್ಳೋ ಬುದ್ಧಿ ಮನುಷ್ಯನಿಗ್ಯಾಕೆ ಬಂತು? ಅಪಾರ ಪರಿಶ್ರಮವನ್ನ ಸಣ್ಣ ಲೋಹದಲ್ಲಿ ಬಚ್ಚಿಟ್ಟು ಸಂಗ್ರಹಿಸುವುದು - ಸಂಗ್ರಹದಿಂದ ಬಲ, ಬಲದಿಂದ ಅಧಿಕಾರ - ಅದಕ್ಕಾಗಿ ಸ್ಪರ್ಧೆ - ಇದು ನಿಮ್ಮ ಪ್ರಗತಿಯ ನಕ್ಷೆ.

“ನೀನೆ ನೋಡು, ನಾವು ಕನಕಪುರಿಯವರು ಚಿನ್ನದ ಒಕ್ಕಲು. ನಮಗೆ ಚಿನ್ನ ಬೇಕು, ಅಧಿಕಾರ ಬೇಕು. ಚಿನ್ನದ ರಾಜ್ಯದಲ್ಲಿ ಇಬ್ಬರಿರುತ್ತಾರೆ: ಬಲ ಇದ್ದವರು ಮತ್ತು ದುರ್ಬಲರು. ಬಲ ಇದ್ದವರು ದುರ್ಬಲರನ್ನ ಆಳುತ್ತಾರೆ. ಅದಕ್ಕೇ ಚಿನ್ನ ಬೇಕು. ಅರ್ಥಕೌಶಲ ಹೇಳುತ್ತಿದ್ದುದನ್ನು ನೀನೂ ಕೇಳಿರಬೇಕು: ಚಿನ್ನ ಬಿಟ್ಟು ಉಳಿದೆಲ್ಲವೂ ಸೆಗಣಿ; ಆ ಸೆಗಣಿಗೇ ನಾವು ಸದ್ಗುಣ, ಮೌಲ್ಯ, ಗೌರವ, ಮಣ್ಣು ಮಸಿ ಅಂತೀವಿ - ಅಂತ! ಅಂದರೆ ನೀವು ಪ್ರತಿಪಾದಿಸುವ ಪ್ರಗತಿ ಸ್ವಾರ್ಥಪರವಾದದ್ದು. ಅದಕ್ಕೇ ಶಿವಾಪುರದಲ್ಲಿ ನೋಡು; ಅಲ್ಲಿರೋದು ಎರಡೇ; ಸರಿ ಮತ್ತು ತಪ್ಪು. ತಪ್ಪನ್ನು ಸರಿಪಡಿಸುತ್ತ, ಎರಡನ್ನು ರಾಜಿ ಮಾಡಿಸುತ್ತ ಮುಂದುವರಿಯುತ್ತಾರೆ. ಅಲ್ಲಿ ಕನಕಪುರಿಯಲ್ಲಿರುವಂಥ ಸ್ಪರ್ಧೆಯಾಗಲಿ, ರಾಜಕಾರಣವಾಗಲಿ ಇಲ್ಲ. ಇದು ಸರಿಯಾದ ವ್ಯವಸ್ಥೆ ಅಲ್ಲವೆ? ನೀವೋ ಎಷ್ಟು ಸಂಗ್ರಹಿಸಿದರೂ ಸಾಲದೆಂದು ಸದಾ ಅತೃಪ್ತಿಯಿಂದ ಪ್ರಗತಿ ಬದಲಾವಣೆಗಳತ್ತ ಧಾವಿಸುತ್ತಲೇ ಇರುತ್ತೀರಿ. ಅದಕ್ಕಾಗಿ ಯುದ್ಧ ಮಾಡುತ್ತಲೇ, ಸದಾ ಕೊಲ್ಲುತ್ತಲೇ ಇರುತ್ತೀರಿ. ಕೊನೆಗೊಮ್ಮೆ ಸ್ಪರ್ಧೆಗಾಗಿ ದೇವರಿಗೇ ಸೆಡ್ಡು ಹೊಡೆಯುತ್ತೀರಿ! ಮನುಷ್ಯ ಅಪೂರ್ಣನೆಂದು ಅದಕ್ಕೇ ಹೇಳುವದು.

ನಿನ್ನ ಪ್ರಗತಿ ಕೇವಲ ಲಂಬವಾಗಿ, ಎತ್ತರ ಬೆಳೆದರೆ ಸಾಲದು ವ್ಯದ್ಯನೇ. ಅಗಲ ಮತ್ತು ಆಳವಾಗಿಯೂ ಬೆಳೆಯಬೇಕು. ಸರ್ವಾಂಗೀಣ ಬೆಳವಣಿಗೆ ಅಂದರೆ ಅದೇನೇ. ಹಾಗೆ ನೀನು ಬೆಳೆದದ್ದೇ ಆದರೆ ನೆಲ ಬಿಟ್ಟು ಬೆಳೆದರೂ ನೆಲದ ಸಂಪರ್ಕ ಕಡಿಯುವುದಿಲ್ಲ. ವರ್ತುಳಾಕಾರದ ಬೆಳವಣಿಗೆ ಎಂದು ಶಿವಪಾದ ಹೇಳೋದು ಇದನ್ನೇ. ಅವನ ಪ್ರಕಾರ ಬೆಳವಣಿಗೆ ಅಂದರೆ ವರ್ತುಳ ದೊಡ್ಡದಾಗುತ್ತ ಹೋಗುವುದೇ - ಬೆಳವಣಿಗೆ! ಅಂದರೇನೇ ನಿನಗೆ ನಿಸರ್ಗದ ಮಾತು ಕೇಳಿಸುತ್ತದೆ”.

“ಒಂದು ಮಾತಿನಲ್ಲಿ ಹೇಳಿ ಮಹಾರಾಣಿ. ಶಿವಪಾದ ಹೇಳುವುದೇನು?”

ಮಹಾರಾಣಿ ಸ್ವಲ್ಪ ಹೊತ್ತು ಯೋಚಿಸುತ್ತ ಸುಮ್ಮನಾದಳು. ಆಮೇಲೆ ಮೆಲ್ಲನೆ “ಬಳಗವಾಗಿ ಬದುಕು”.

“ನಾವು ಬದುಕ್ತಿರೋದು ಹ್ಯಾಗೆ”

“ನೀವು ಸ್ವಾರ್ಥಿಗಳು. ದುರ್ಬಲರ ಮೇಲೆ ಸವಾರಿ ಮಾಡಿ ಬದುಕುತ್ತೀರಿ. ಕೆಲವರಿಗೆ ನೆಮ್ಮದಿಯನ್ನು ಬೋಧಿಸಿ ಪ್ರಾಣಿಗಳಾಗಿಸುತ್ತ, ನೀವು ಮಾತ್ರ ಮನುಷ್ಯರಾಗಿರುವ ಸುಖವನ್ನು ಅನುಭವಿಸುತ್ತ ಮುಂದುವರಿಯುವುದಿದೆಯಲ್ಲ, ಇದು ಶೋಷಣೆ. ಶಿವಪಾದ ಇದನ್ನೊಪ್ಪಲಾರ.”

– ಮಧ್ಯದ ಒದೆ ಮಹಾರಾಣಿಗೆ ಒಳ್ಳೆಯ ಮೂಡು ಕೊಟ್ಟಿದೆಯೆಂದು ಅನ್ನಿಸಿತು. ಸೋಲುವುದಕ್ಕೆ ಶಿಖರಸೂರ್ಯನೂ ತಯಾರಿರಲಿಲ್ಲ.

“ಶಿವಪಾದನನ್ನು ಮುಂದಿಟ್ಟುಕೊಂಡು ನೀವು ಮಾಡಿದ ಚಿಂತನೆಗಳ ಬಗ್ಗೆ ನನಗೆ ಗೌರವ ಭಾವನೆ ಇದೆ ಮಹಾರಾಣಿ. ಆದರೆ ಶಿವಪಾದ ಹೇಳುವುದು ಕಲ್ಪನೆಗಳನ್ನ, ಮೂಢನಂಬಿಕೆಗಳನ್ನ ಮತ್ತು ಭ್ರಮೆಗಳನ್ನ. ಮನುಷ್ಯ ಅಪೂರ್ಣನೆಂಬ ಭಾವನೆ ಇರುವುದರಿಂದಲೇ ಪೂರ್ಣತೆಗಾಗಿ ನಾವು ಸ್ಪರ್ಧಿಸುತ್ತೇವೆ ಎಂದೂ ವಾದಿಸಬಹುದಲ್ಲ? ನಮಗೂ ರಾಮರಾಜ್ಯ ಬೇಕು”.

“ಆದರೆ ರಾಮರಾಜ್ಯ ತರುವುದಕ್ಕಾಗಿ ನೀವು ರಾಮನ ಜೊತೆ ಸ್ಪರ್ಧೆ ಮಾಡುತ್ತೀರಿ. ರಾಮರಾಜ್ಯ ಖಂಡಿತ ನಿಮಗೆ ಮಾದರಿ ಅಲ್ಲ.”

“ಅದು ನಿಜ. ಹೋಗಲಿ ಮನುಷ್ಯನ ನೆಮ್ಮದಿಗೆ ಶಿವಪಾದ ಹೇಳುವುದೇನು? ‘ಆನಂದ ಸಮಾಧಿ!’. ತನ್ನ ಶಿಷ್ಯರಿಗೆ ಆನಂದ ಸಮಾಧಿಸ್ಥಿತಿಯನ್ನ ಬೋಧನೆ ಮಾಡ್ತಾನೆ. ಸಮಾಧಿಸ್ಥಿತಿ ಅಂದರೆ ಸಾವಲ್ಲವೆ ಮಹಾರಾಣಿ? ಇಂಥಾ ಶರಣರನ್ನ ಕಟ್ಟಿಕೊಂಡು ಯಾರಾದರೂ ಬದುಕಲಿಕ್ಕಾಗುತ್ತ? ಯಾರಿಗೆ ಆರೋಗ್ಯ, ಐಶ್ವರ್ಯ, ವೀರ್ಯ ಇರುವುದಿಲ್ಲವೋ ಅವರೆಲ್ಲಾ ಶರಣರಾಗ್ತಾರೆ; ಅಷ್ಟ. ನನಗೆ ನನ್ನ ದಿನನಿತ್ಯದ ಬದುಕಿಗೆ ಉಪಯೋಗವಾಗುವ ಮಾತು ಬೇಕು. ನಿತ್ಯದ ಜೀವನದಲ್ಲಿ ಇರುವ ಸಂತೋಷವನ್ನ ಹ್ಯಾಗೆ ಪಡೀಬೇಕು ಅಂತ ಹೇಳೋನು ಶರಣ. ಶಿವಪಾದನಂಥ ಶರಣ ಜೀವನದಲ್ಲಿರೋದಿಲ್ಲ ಮಹಾರಾಣಿ, ಇದ್ದಿದ್ದರೆ ನಮ್ಮ ಹಾಗೆ ಜಗಳಾಡಿಕೊಂಡು ಕಚ್ಚಾಡಿಕೊಂಡಿರುತ್ತಿದ್ದ. ಇವನು ಯಾತ್ರಿಕನಲ್ಲ ನಮ್ಮಂತೆ. ಹೋಗು ಬರೋರನ್ನ ನೋಡಿಕೊಂಡು ದಾರಿಯ ಪಕ್ಕದಲ್ಲಿ ನಿಂತಿರೋನು”.

ಮಹಾರಾಣಿಗೆ ಅವನ ವಾದ ಬೋರಾಯಿತು. ಈತ ವಾದದಲ್ಲಿ ಗೆಲ್ಲುವುದಕ್ಕಾಗಿ ನಿಲುವಿನಿಂದ ನಿಲುವಿಗೆ ಸುಲಭವಾಗಿ ಜಿಗಿಯುತ್ತಾನೆಂದು ಅರಿವಾಗಿ, ಎದ್ದು ಒಂದೆರಡು ಹೆಜ್ಜೆ ಅಲೆದಾಡಿ ಕಿಡಕಿಗೆ ಹೋದಳು. ನದಿಯ ಕಡೆಯಿಂದ ಸುವಾಸನೆಯ ತಂಗಾಳಿ ಬೀಡಿ ಮನಸ್ಸಿಗೆ ಮುದ ನೀಡಿತು. ಹಾರುವ ಮುಂಗುರುಳ ಜೊತೆಗೆ ಮಹಾರಾಣಿಯ ಸುಂದರವಾದ ಆಕೃತಿ ಕಂಡಿತು. ಮಹಾರಾಣಿ ಮಂದಹಾಸ ಬೀರುತ್ತ ಬಂದು ಪೀಠದ ಮೇಲೆ ಕುಂತು ಹಿಂದಕ್ಕೊರಗಿ ಸಮಾಧಾನದಿಂದ ಹೇಳಿದಳು:

“ಇಂದ್ರಿಯಾನುಭವವೇ ಎಲ್ಲಕ್ಕೂ ಪ್ರಮಾಣವೆಂಬುದನ್ನು ನಂಬಿದವರು ನೀವು. ಶಿವಪಾದನ ಲೋಕನಂಬಿಕೆ ಇದಕ್ಕೆ ವಿರುದ್ಧವಾದುದು. ಒಂದೊಂದು ವಿಷಯವನ್ನ ನಿಮ್ಮಂತೆಯೇ ಅವನೂ ವಿಶ್ಲೇಷಣೆ ಮಾಡುತ್ತಾನೆ. ಇಂದ್ರಿಯಾತೀತ ಅನುಭವದ ಪ್ರಮಾಣವನ್ನ ಅತ್ಯಂತ ಸಹಜವಾಗಿ, ಅದೇ ಹೆಚ್ಚು ನಿಜವೆಂಬಂತೆ ಮಾತಾಡುತ್ತಾನೆ. ಅಸ್ತಿತ್ವಕ್ಕೆ ಸಂಬಂಧಿಸಿದ ಮೂಲಭೂತ ಅನುಭವ ಇಂದ್ರಿಯಗಳ ಮೂಲಕ ಮಾತ್ರ ಬರುವುದೆಂಬ ನಿಮ್ಮ ವಾದವನ್ನ ಅವನು ತಿರಸ್ಕರಿಸಿ ಇಂದ್ರಿಯಾತೀತವಾದುದಕ್ಕೆ ಹೆಚ್ಚಿನ ಪ್ರಾಮಾಣ್ಯ ಮತ್ತು ಅಧಿಕೃತತೆ ತಂದುಕೊಡುತ್ತಾನೆ. ಅವನಿಗೆ ಆ ಅಧಿಕಾರವಿದೆ…. ಆನಂದ ಸಮಾಧಿಯೆಂದರೆ…. ನೀವು ಬಿಡಿಯಪ್ಪ. ನೀನೂ ಅಷ್ಟೆ. ಅರ್ಥಕೌಶಲನೂ ಅಷ್ಟೆ: ಮದ್ಯಸೇವನೆ ಮಾಡಿದರಾಯ್ತು: ಶಿವಪಾದನೇನು, ದೇವರೇನು – ಅಣಕಿಸಿ ಚೆಲ್ಲಿ ಹಾಕಬಲ್ಲಿರಿ.”

ಇಬ್ಬರೂ ತುಸುಹೊತ್ತು ಸುಮ್ಮನಾದರು. ಮಹಾರಾಣಿ ದಣಿದಿದ್ದಳು. ಭೂತಕಾಲದ ಸೇಡುಗಳನ್ನ ಚುಕ್ತಾ ಮಾಡಬೇಕೆಂಬ ಛಲ ಶಿಖರಸೂರ್ಯನಲ್ಲಿತ್ತು. ತನ್ನ ಕಾಡಿನಲ್ಲಿ ತಾನೇ ಅನಾಥಳಾದ ಹುಲಿಯ ನೋವು ಮಹಾರಾಣಿಯಲ್ಲಿತ್ತು. ನಿಜದಲ್ಲಿ ತಂತಮ್ಮ ಬಲಾಬಲಗಳ ಸೀಮೆ ಗುರುತಿಸಿಕೊಂಡು ನಿಂತಂತೆ ಇಬ್ಬರೂ ಎದುರುಬದುರಾಗಿದ್ದರು. ಆದರೆ ಗೆಲುವಿನ ಉನ್ಮಾದದಿಂದ ಹೊಳೆಯುತ್ತಿದ್ದ ಅವನ ಚಿರತೆ ಕಣ್ಣುಗಳನ್ನ ನೋಡಿದ್ದೆ ಈ ಮೃಗಕ್ಕೆ ತಾನು ಸೋತೆನೆನ್ನಿಸಿತು ಮಹಾರಾಣಿಗೆ. ಸಂವಾದ ಸಾಕೆನಿಸಿ ಮುಖಾಮುಖಿಯಾಗಿ ಹೇಳಿದಳು:

“ನಾನು ಸೋತೆ ವೈದ್ಯನೇ, ಇಬ್ಬರ ನೆನಪುಗಳಲ್ಲೂ ಕರಾಳ ಸಂಗತಿಗಳಿವೆ. ಅವನ್ನ ಮರೆತು ಬಿಡೋಣ. ನಿಜ ಹೇಳು: ನಿನ್ನೆ ದಿನ ಹಾಲು ಚೆಲ್ಲಿ ನೀನ್ಯಾಕೆ ನನ್ನನ್ನ ಉಳಿಸಿದೆ?”

“ಹಾಲಿನಲ್ಲಿ ವಿಷ ಇದ್ದದ್ದು ನಿಮಗೆ ಗೊತ್ತಿತ್ತೆ ಮಹಾರಾಣಿ?”

“ಇಲ್ಲ”.

“ನನಗೆ ಗೊತ್ತಾಗಿ ಉಳಿಸಿದೆ”.

“ನಮ್ಮಿಬ್ಬರ ಮಧ್ಯೆ ಇನ್ನು ಸುಳ್ಳು ಸುಳಿಯುವುದು ಬೇಡ – ಸೂರ್ಯ, ನಿಜ ಹೇಳು ಯಾಕೆ ಉಳಿಸಿದೆ?”

“ಹಾಗಿದ್ದರೆ ಕೇಳು: ನಿನ್ನನ್ನ ಹೃತ್ಪೂರ್ವಕ ಪ್ರೀತಿಸಿದವರು ಇಬ್ಬರೇ: ಅರ್ಥಕೌಶಲ ಮತ್ತು ನಾನು. ನಾನು ನಿನ್ನನ್ನು ಪ್ರೀತಿಸಿದ್ದು ಈಗಿನಿಂದಲ್ಲ; ಕನಕಪುರಿಗೆ ಬಂದು ಪ್ರಥಮಬಾರಿ ನಿನ್ನನ್ನ ಕಂಡಾಗಿನಿಂದಲೇ ಪ್ರೀತಿಸಿದೆ. ಅರ್ಥಕೌಶಲ್ಯ ಇದ್ದಾಗ ನಿನ್ನನ್ನ ಮುಟ್ಟಲಿಲ್ಲ. ಈಗ ಅನಿಸಿತು; ನಿನಗೆ ನನ್ನಂತ ಗಂಡಿನ ನೆರವು ಬೇಕೆಂದು, ಅಷ್ಟೆ”.

“ಇಷ್ಟು ವರ್ಷಗಳಾದ ಮೇಲೆ ನನಗೊಂದು ಸತ್ಯ ಗೊತ್ತಾಗಿದೆ. ಹೇಳಲೆ ವೈದ್ಯಮಿತ್ರಾ?”

“ಹೇಳು ಮಹಾರಾಣೀ.”

ಕಣ್ಣಲ್ಲಿ ಕಣ್ಣಿಟ್ಟು ಅವನನ್ನೇ ನೋಡುತ್ತ ಹೇಳಿದಳು:

“ಕನಕಪುರಿ ಅಂದರೆ ನಾನೇ! ಕನಕಪುರಿಯಾದ್ದರಿಂದ ನನಗೆ ಗಂಡನಿಲ್ಲ! ಮಹಾರಾಜನ ಮಡದಿಯಾಗಿರುತ್ತ ಅರ್ಥಕೌಶಲನ ಸೂಳೆಯಾಗಿದ್ದೆ. ಈಗ ನಿನಗೆ ಒಳಗಾಗಿದ್ದೇನೆ. ಇನ್ನೂ ಒಬ್ಬನನ್ನು ಬಯಸಿದ್ದೆ ನಾನು! ಗೊತ್ತ ನಿನಗೆ?”

“ಅವನ್ಯಾರು ಮಹಾರಾಣಿ?”

“ಶಿವಪಾದ!”

ಶಿಖರಸೂರ್ಯ ಆಘಾತ ಹೊಂದಿದ. ಅವಳ ಮಾತನ್ನ ನಂಬಲಿಲ್ಲ.

ಮಹಾರಾಣಿಯೇ ಮುಂದುವರಿಸಿದಳು:

“ನನಗೆ ಗೊತ್ತು ಆತ ಸಿಕ್ಕುವುದಿಲ್ಲವೆಂದು. ನಿನ್ನ ತರುವಾಯ ಕನಕಪುರಿಗೆ ಬರುವವನೂ ಒಬ್ಬ ಶಿವಪಾದನೇ! ನಾವದನ್ನ ತಪ್ಪಿಸಲಾರೆವು. ಅಲ್ಲಿಯ ತನಕ ಇಗೊ....”

ಎನ್ನುತ್ತ ಹಾಸಿಗೆಯ ದಿಂಬಿನ ಕೆಳಗಿನ ಕೀಲಿಕೈ ಗೊಂಚಲನ್ನು ತೆಗೆದು, ಅವನ ಕೈಗಿಟ್ಟು

“ತಗೊ. ಇನ್ನು ಕನಕಪುರಿ ನಿನ್ನದು.”

ಎಂದು ಹೇಳಿ ಹಾಸಿಗೆಯ ಬಳಿ ನಿಂತಳು. ಒಂದು ಕ್ಷಣ ಕೀಲಿಕೈ ಗೊಂಚಲು ತಗೊಂಡು ನೋಡಿ, ಅವಳ ಉಸಿರು ತಾಗುವಷ್ಟು ಸಮೀಪ ಹೋಗಿ,

“ನನ್ನ ಪ್ರೀತಿಗೇನು ಕಾಣಿಕೆ?” ಅಂದ.

ಅವನ ಮಾತು, ಮುಖ, ಅಂಗಚೇಷ್ಟೆಗಳಿಂದ ಮಹಾರಾಣಿ ಹೇಸಿಕೊಂಡಳು. ತಿರಸ್ಕಾರದಿಂದ ಕೇಳಿದಳು:

“ಈಗಲೂ ಹಕ್ಕಲದ ಈ ದೇಹವನ್ನ ಒಕ್ಕಬೇಕೆಂಬ ಅನಿಸುತ್ತದೆಯೆ?”

“ಹೌದು”.

“ಹಾಗಿದ್ದರೆ ತಗೊ”.

ಎಂದು ತೋಳು ತೆರೆದು ನಿಂತಳು. ನಿಯಂತ್ರಣ ತಪ್ಪಿದ ಶಿಖರಸೂರ್ಯನ ಹೃದಯ ರಾಗೋದ್ರೇಕದ ತಿದಿಯಾಗಿ, ಸುಖದ ಸರಬರಾಜಿಗೆ ಸಿದ್ಧನಾಗಿ ಅವಳನ್ನು ತಬ್ಬಿಕೊಂಡು ಸುಖಸುರತ ವಿಪರೀತದ ಮದದಲ್ಲಿ ಹಾಸಿಗೆಯ ಮೇಲೆ ಚೆಲ್ಲಿಕೊಂಡ.

ಕುದಿವ ಬೆದೆಗಳು ವಿದ್ಯುತ್ ಪಾತ್ರೆಯಲ್ಲಿ ಸೋರಿದ ಮೇಲೆ ಕಣ್ಣುತೆರೆದಾಗ ಅಂತಃಪುರದ ಅನೇಕ ಸೊಡರುಗಳು ಎಣ್ಣೆ ತೀರಿ ಆರಿದ್ದವು. ಮೂಲೆಯಲ್ಲಿದ್ದ ಒಂದೇ ಸೊಡರಿನ ಬೆಳಕಿನಲ್ಲಿ ನೋಡಿದಾಗ ಮಹಾರಾಣಿ ವಿಕಾರವಾಗಿ, ಬೆತ್ತಲಾಗಿ ಬಿದ್ದಿದ್ದಳು! ಮೈ ತಣ್ಣಗಾಗಿತ್ತು. ಸುಖದ ಉನ್ಮಾದದಲ್ಲಿಯೇ ಜೀವ ಹೋಗಿರಬೇಕು. ಶವದ ಬಾಯಿ ಆನಂದದಲ್ಲಿ ತೆರೆದುಕೊಂಡಿತ್ತು. ಕಣ್ಣು ತೆರೆದಿದ್ದವು! ಬಟ್ಟೆಯ ಚೆಂಡು ಮಾಡಿ ಕಟ್ಟಿಕೊಂಡಿದ್ದ ಮೊಲೆಗಳು ಎಲ್ಲೆಲ್ಲೋ ಬಿದ್ದಿದ್ದವು. ಬೊಕ್ಕೆ ಎಲುವಿನ ಅಸ್ಥಿಪಂಜರದಂತೆ ಕಾಣುತ್ತಿದ್ದಳು. ಹಾಗಿದ್ದರೆ ಈ ತನಕ ತಾನು ಹೆಣದ ಜೊತೆಗೆ…. ?

ಶಿಖರಸೂರ್ಯ ಕಿಟಾರನೆ ಕಿರಿಚಿ ಬೊಕ್ಕುಬೋರಲು ಮೂರ್ಛೆ ಬಿದ್ದ!

* * *

ಮಾರನೇ ಮುಂಜಾನೆ ಶಿಖರಸೂರ್ಯನಿಗೆ ಎಚ್ಚರವಾದಾಗ ಹೊತ್ತೇರಿತ್ತು. ಮೈ ಮುರಿಯುತ್ತ ಎದ್ದು ಸುತ್ತ ನೋಡಿದರೆ ಸುಕ್ರ, ಸೇವಕರು ಭಟರು ಕಿಸಿದ ಕಣ್ಣುಗಳಿಂದ ತನ್ನನ್ನೇ ನೋಡುತ್ತ ಕೂತಿದ್ದಾರೆ! ಥಟ್ಟನೆ ಮೈಮೇಲೆ ಬಟ್ಟೆ ಹೊದ್ದುಕೊಂಡು,

“ಸುಕ್ರ ಏನಿದೆಲ್ಲ?” ಅಂದ.

“ನೀನು ನಮಗೆ ಹೇಳದೆ ಕೇಳದೇ ಇಲ್ಲಿಗೆ ಬಂದು ಇಂಗೆ ಬಿದ್ದುಕೊಂಡೀದ್ದೀಯಲ್ಲ, ಯಾಕೆ ಅಂತ ಗೊತ್ತಾಗಲಿಲ್ಲ!”

“ಮಹಾರಾಣಿಯೆಲ್ಲಿ?”

“ಅವಳು ಮೊನ್ನೆಯೇ ಸತ್ತೋದಳಲ್ಲ ಒಡೆಯನೇ!”

ತಕ್ಷಣ ನಿನ್ನೆಯ ಬಂಡೆಯನ ಮಾತನ್ನು ನೆನೆದುಕೊಂಡು ಕೇಳಿದ:

“ನಿನ್ನೆ ಮಹಾರಾಣಿ ನನ್ನನ್ನ ಇಲ್ಲಿಗೆ ಬರಹೇಳಿದ್ದು …. ಬಂಡೆಯ ಎಲ್ಲಿ?”

“ಅವನು ನಿನ್ನೆ ಒಡ್ಡೋಲಗದಲ್ಲಿ ಮಹಾರಾಣಿಯ ಭೂತ ಕಂಡು ಹೆದರಿ ಜೊರಾ ಬಂದು ಮನಿಕ್ಕಂಡವನೆ!”

“ಭೂತ! ಹ್ಯಾಗೆ ಸತ್ತಳು?”

“ಪ್ರಧಾನಿ ವಿಷ ಹಾಕಲಿಲ್ಲವೆ ಒಡೆಯಾ?”

ವಿಷದಿಂದ ಪಾರುಮಾಡಿದ ದಿನ ಈತ ನೃತ್ಯಕಾರ್ಯಕ್ರಮದ ತುದಿಗೆ ಕತ್ತಲಕೋಣೆಯಲ್ಲಿ ಮಹಾರಾಣಿಯ ತುಟಿ ಹೀರಿದಾಗಲೇ ಅವಳು ವಿಷದಿಂದ ಕೂಡಿದ್ದಳು!

ವಿಷಕನ್ಯೆಯಂತೆ ಇವನೂ ವಿಷಪುರುಷನಾಗಿದ್ದನೆಂಬುದನ್ನು ಮರೆತಿದ್ದ! ನಿನ್ನೆ ರಾತ್ರಿ ತಾನು ಮಹಾರಾಣಿಯ ಭೂತದ ಜೊತೆಗಿದ್ದೆನೆಂದು ತಿಳಿದು ಮೈತುಂಬ ಮುಳ್ಳೆದ್ದು ಚಳಿಯಿಂದ ನಡುಗಿದ.

## ಐವತ್ತೈದು

ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವಾಗಿರಲಿಲ್ಲವಾದರೂ ಉಳಿದೆಲ್ಲ ವ್ಯಾವಹಾರಿಕ ಅರ್ಥಗಳಲ್ಲಿ ಕನಕಪುರಿ ಶಿಖರಸೂರ್ಯನ ರಾಜ್ಯವಾಗಿತ್ತು. ಮಹಾರಾಣಿಯ ಅಂತ್ಯ ಒಂದು ರೀತಿಯಲ್ಲಾದರೆ ಆದಿತ್ಯಪ್ರಭ ತನ್ನ ರೋಗದಿಂದ, ಧನಪಾಲ ಶ್ವಾನಕೂಪದ ನಾಯಿಗಳಿಂದ ಸತ್ತು ಏನೇನೂ ರಕ್ತಪಾತವಿಲ್ಲದೆ ಕನಕಪುರಿ ಕೈಗೆ ಸಿಕ್ಕಿತು. ಆತ ವೈದ್ಯನಾಗಿ ಕನಕಪುರಿಗೆ ಬಂದಾಗ ಚೂರಿಯಂತೆ ಕೊರೆವ ಅವನ ಕಣ್ಣು ನೋಡಿ ಆಳಿದ ಮಹಾರಾಜ ಹೆದರಿದ್ದ. ಇಚ್ಛೆಯ ಮುಚ್ಚಿ ಮಾತಾಡುವನೆಂದು, ಅವನಾಗಲೇ ಇದು ತನ್ನ ಅರಮನೆಯೆಂಬಂತೆ ನೋಡುವನೆಂದು ಹೇಳಿದ್ದ. ಆರ್ಥಕೌಶಲನಿಗೆ ಈ ಮಾತು ಅಂತ್ಯದಲ್ಲಿ ಖಾತ್ರಿಯಾಗಿತ್ತು. ಇಷ್ಟಾದರೂ ಶಿಖರಸೂರ್ಯ ತೃಪ್ತಿ ಹೊಂದಿದವನಲ್ಲ. ದಕ್ಕಿದ ರಾಜ್ಯಕ್ಕೆ ತಾನು ಅರ್ಹ ಅಧಿಕಾರಿಯೆಂದು ಸಿದ್ಧಮಾಡಿ ತೋರಿಸದಿದ್ದರೆ ಕನಕಪುರಿಯನ್ನು ಆಳುವದು ಕಷ್ಟವೆಂದು ಅವನಿಗೆ ಗೊತ್ತಿತ್ತು. ಮಹಾರಾಜನಾಗಿ ಮಾತ್ರವಲ್ಲ, ಚಕ್ರವರ್ತಿಯಾಗಿ ಆಳಿ ತೋರಿಸಬೇಕೆಂಬ ಛಲ ಮೂಡಿ ಸೀಮೋಲ್ಲಂಘನದ ಯೋಜನೆ ಹಾಕಿದ.

ಅಧಿಕಾರ ಗ್ರಹಿಸಿದೊಡನೆ ಕಪ್ಪ ಮತ್ತು ತೆರಿಗೆಯನ್ನಯ ಧಾನ್ಯ ರೂಪದಲ್ಲಿ ಕೊಡಬಹುದೆಂಬ ಕಾನೂನು ಜಾರಿಗೆ ತಂದ. ನಾವು ಆಕ್ರಮಿಸಬೇಕೇ ಹೊರತು ಆಕ್ರಮಣಕ್ಕೀಡಾಗಬಾರದೆಂಬುದು ಶಿಖರಸೂರ್ಯನ ಸಿದ್ಧಾಂತ. ವೈರಿಗಳ ನಾಶ ಮತ್ತು ಸ್ವರಕ್ಷಣೆಗಾಗಿ ಉತ್ತರದ ಚಾಳಕ್ಯಪುರಿಯ ಕಮ್ಮಾರರು ವಿಶೇಷವಾಗಿ ತಯಾರಿಸಿದ, ಸಿಡಿದರೆ ಅರ್ಧ ಕನಕಪುರಿ ನಾಶವಾಗುವಂಥ ಸಿಡಿತಲೆಗಳನ್ನು ತರಿಸಿದ್ದ. ಇನ್ನೇನು ಬೇಕು? ಆಮೇಲೆ ಒಂದು ವಾರ ಸುಕ್ರ, ಬಂಡೆಯ ಮತ್ತು ರವಿಕೀರ್ತಿಯೊಂದಿಗೆ ಕೂತು ಆಕ್ರಮಣದ ಯೋಜನೆಗಳನ್ನು ತಯಾರಿಸಿದ. ಅರಮನೆಯಲ್ಲಿ ಧಾನ್ಯದಿಂದ ಮಾಡಿದ ಹೇರಳ ಚಿನ್ನವಿತ್ತು. ಅಪಾರ ಸಂಖ್ಯೆಯ ಮೇವಿನ ಸೈನ್ಯವಿತ್ತು. ವಿಜಯದಶಮಿಯಂದು ಸೈನ್ಯ ಹೊರಟೇ ಬಿಟ್ಟಿತು.

ಮಹರ್ಷಿ ಟಾಲ್ ಸ್ಟಾಯ್ ಅವರು ಹೇಳಿದಂತೆ ಸಾಮಾನ್ಯವಾಗಿ ಸೈನಿಕರಿಗೆ ಭಾವನೆಗಳೇ ಇರುವುದಿಲ್ಲ. ಅವರು ಸದಾಕಾಲ ಆಟವಾಡುತ್ತಲೇ ಇರುವ, ಆದರೆ ಯಾಕಾಗಿ, ಯಾರಿಗಾಗಿ ಆಟ ಆಡುತ್ತಿದ್ದೇವೆಂಬ ಅರಿವಿಲ್ಲದ ಪ್ರಾಣಿಗಳು. ಆಟದ ಸಂತೋಷದ ಹೊರತು ಬೇರೆ ಭಾವನೆಗಳಿಗೆ ಅವರಲ್ಲಿ ಅವಕಾಶವೇ ಇರುವುದಿಲ್ಲ. ಸಾಮಾನ್ಯ ಸೈನಿಕರಕ ಪಾಡೇ ಹೀಗಾದರೆ ಇನ್ನು ಮೇವಿನ ದಂಟಿನಿಂದ ಹುಟ್ಟಿದ ಶಿಖರಸೂರ್ಯನ ಸೈನಿಕರು ಹ್ಯಾಗಿರಬೇಕೆಂದು ನೀವೇ ಊಹಿಸಿಕೊಳ್ಳಿರಿ.

ಎಷ್ಟೋ ಸಲ ಯಾರಿಗಾಗಿ ಕೊಲ್ಲುತ್ತಾರೋ ಆ ವ್ಯಕ್ತಿಯನ್ನವರು ನೋಡಿರುವುದೇ ಇಲ್ಲ. ಯಾಕಾಗಿ ಕೊಲ್ಲುತ್ತಿದ್ದಾರೆಂದೂ ಅವರು ಯೋಚಿಸುವುದಿಲ್ಲ. ಕೇಳಿದರೆ ವೈರಿಯನ್ನು ಕೊಂದೆವೆಂದು ಹೇಳುತ್ತಾರೆ. ವೈರಿ ಇವರಿಗೇನು ಕೇಡು ಮಾಡಿದ್ದ? ಇವರೊಂದಿಗೆ ಜಗಳವಾಡಿದ್ದನೆ? ವೈರಿ ಮತ್ತು ಈ ಕಡೆಯ ಸೈನಿಕ ಇವರಾದರೂ ಪರಸ್ಪರ ನೋಡಿದವರೋ? ಅದೂ ಇಲ್ಲ. ಆದರೂ ಇಬ್ಬರ ಮಧ್ಯೆ ವೈರವಿದೆಯೆಂದು ನಂಬುತ್ತಾರೆ; ಪರಸ್ಪರ ಕೊಲ್ಲುತ್ತಾರೆ. ಇವನು ವೈರಿ ಎಂದು ಮೇಳಿನವರು ಹೇಳಿದ್ದಾರೆ, ಆದ್ದರಿಂದ ಇವರೂ ಅದನ್ನು ನಂಬುತ್ತಾರೆ. ಕೊಲ್ಲುವುದರ ಅರ್ಥವಾದರೂ ಅವರಿಗೆ ತಿಳಿದಿದೆಯೊ? ಅದನ್ನೂ ಮೇಲಿನವರೇ ತಿಳಿದಿರುತ್ತಾರೆ ಅಥವಾ ತಿಳಿಯಬೇಕೆಂಬ ಸಾಮಾನ್ಯ ಕುತುಹಲವೂ ಇವರಿಗಿರುವುದಿಲ್ಲ. ಹೋಗಲಿ ಗೆದ್ದಾಗಲಾದರೂ ಇವರಿಗೆ ಸಂತೋಷವಾಗುತ್ತದೆಯೊ? ಸಂತೋಷ ಪಡೆಬೇಕೆಂದು ಕೂಡ ಮೇಲಿನ ಅಧಿಕಾರಿಗಳೇ ಹೇಳಬೇಕು.

ಇನ್ನಿವರ ಜೀವನದ ಬಗೆಗಿನ ತಿಳುವಳಿಕೆಯೋ - ದೇವರೇ ಕಾಪಾಡಬೇಕು. ಅಥವಾ ಊರಲ್ಲಿದ್ದವರ ಸಾಮಾಜಿಕ ಸಂಬಂಧಗಳು, ಕಲಹಗಳು, ಸಂಚು ಹೊಂಚುಗಳು, ಸರಿಪಡಿಸಿಕೊಳ್ಳಬೇಕಾದ ವ್ಯವಹಾರಗಳು - ಇವೆಲ್ಲ ಅವರಿಗೆ ಅರ್ಥವಾಗದ ಬಾಬುಗಳು. ಕಳ್ಳ

ಮತ್ತು ಸೈನಿಕನ ಹೆಂಡತಿ ಯಾವತ್ತೂ ವಿಧವೆ ಎಂಬೊಂದು ಗಾದೆಯಿದೆ. ಕಳ್ಳನಿಗೆ ಕೊನೇ ಪಕ್ಷ ಸ್ವಾರ್ಥವಿದೆ. ಸೈನಿಕನಿಗೆ ಅದೂ ಇಲ್ಲ. ಯಾಕಾಗಿ, ಯಾರಿಗಾಗಿ ಹೋರಾಡುತ್ತಿದ್ದೇನೆ ಎಂಬುದೇ ಗೊತ್ತಿಲ್ಲದವನಿಗೆ ಸ್ವಾರ್ಥವೇನು ಬಂತು?

ಒಂದು ಸಲ ಶಿಖರಸೂರ್ಯ ಮಗ ರವಿಕೀರ್ತಿಯೊಂದಿಗೆ ಯುದ್ಧದ ಬಗ್ಗೆ ಚರ್ಚಿಸುತ್ತಿದ್ದಾಗ ರವಿಕೀರ್ತಿ ಹೇಳಿದ್ದ:

"ಯುದ್ಧಗಳೆಲ್ಲ ಒಂದೇ ರೀತಿ ಇರುತ್ತವಲ್ಲಪ; ಒಬ್ಬರ ಮೇಲೆ ಇನ್ನೊಬ್ಬರು ದಾಳಿ ಮಾಡುವುದು. ಒಬ್ಬ ಕೊಲ್ಲುತ್ತಾನೆ; ಇನ್ನೊಬ್ಬ ಸಾಯುತ್ತಾನೆ. ಒಟ್ಟಿನಲ್ಲಿ ಯುದ್ಧವೆಂದರೆ ಕೊಲೆ. ಇಬ್ಬರೂ ಮನುಷ್ಯರೇ ಆದ್ದರಿಂದ ಆತ್ಮಹತ್ಯೆ ಎನ್ನುವುದೇ ಉತ್ತಮ".

ರವಿಕೀರ್ತಿಯ ಈ ಮಾತನ್ನ ಗಂಭೀರವಾಗಿ ಪರಿಗಣಿಸಿದವನಂತೆ ಶಿಖರಸೂರ್ಯ ಮುಖ ಗಂಟು ಹಾಕಿ ಯೋಚನೆ ಮಾಡುವವರಂತೆ ಹಿಂದಕ್ಕೆ ಕೈ ಕಟ್ಟಿಕೊಂಡು, ಹುಬ್ಬುಗಂಟಿಕ್ಕಿ ಆಲೋಚಿಸುತ್ತ, ಕೋಣೆಯ ಮೂಲೆಯಿಂದ ಮೂಲೆಗೆ ನಿಧಾನವಾಗಿ ಹೆಜ್ಜೆಹಾಕತೊಡಗಿದ. ಆಮೇಳೆ ನಿಧಾನವಾಗಿ –

"ಆತ್ಮಹತ್ಯೆ! ಆತ್ಮ ಅಂದರೇನೋ ಮರಿ? ಹ್ಯಾಗಿರುತ್ತಯ್ಯಾ ಅದು?"

"ಅದು ಪರಿಶುದ್ಧರ ಅನುಭವಕ್ಕೆ ಮಾತ್ರ ಬರುವಂಥದಪ್ಪ."

ಇನ್ನಷ್ಟು ಯೋಚನೆ ಮಾಡುವವರಂತೆ ಹುಬ್ಬು ಬಿಗಿದು,

"ಅದೇನೋ ಪರಿಧಡ್ಡರ ಅನುಭವ ಅಂದೆಯಲ್ಲ? ಯಾರಯ್ಯ ಪರಿಧಡ್ಡರು ಅಂದರೆ? ಶಿವಾಪುರದ ಅಮ್ಮನ ಭಜನೆ ಮಾಡ್ತಾರಲ್ಲ ಜನ, ಅವರ? ಅಥವಾ ಆ ಎಲುಬಿನ ಗೂಡು ಶಿವಪಾದನ? ಇಲ್ಲಾ ಪುಸ್ತಕ ಓದಿಕೊಂಡು ಚರ್ಚೆ ಮಾಡ್ತಾರಲ್ಲ ನಿನ್ನಂಥವರು, ಅವರ? ಯಾರಯ್ಯಾ ಪರಿಶುದ್ಧರು? ನನ್ನ ಬಲಿತ ಬುದ್ಧಿಗೂ ನಿನ್ನ ತರ್ಕ ನಿಲುಕುವುದಿಲ್ಲವಲ್ಲ ಮಾರಾಯಾ".

ಅಂದ. ತಂದೆ ತನ್ನ ಮಾತನ್ನ ಪಲ್ಲಟಿಸಿ ಹಾಸ್ಯ ಮಾಡುತ್ತಿದ್ದಾನೆಂದು ಖಾತ್ರಿಯಾಗಿ ರವಿ ವಾದ ಬೆಳೆಸಲಿಲ್ಲ. ಆದರೆ ಶಿಖರಸೂರ್ಯ ಬಿಡಲಿಲ್ಲ. ಈಗ ದನಿ ಬಿರುಸು ಮಾಡಿ, –

"ಮನುಷ್ಯರ ಬಗ್ಗೆ ಸರಿಯಾಗಿ ತಿಳಿದುಕೊ. ಕಂಚಿ ಕನಕಪುರಿ ಅಥವಾ ಇನ್ನೆಲ್ಲೋ ಇರಲಿ – ಒಟ್ಟಾರೆ ಜೀವಿಗಳಲ್ಲಿ ಎರಡು ವಿಧ: ಒಂದು ಮನುಷ್ಯ, ಇನ್ನೊಂದು ಮೃಗ. ಮನುಷ್ಯ ಮೃಗಗಳಿಗಿಂಗ ಕ್ರೂರಿ. ಯಾಕಂತೀಯೊ? ಆತ ಮೋಸ ಮಾಡಬಲ್ಲ; ಭವಿಷ್ಯದ ಬಗ್ಗೆ ಕನಸು ಕಾಣಬಲ್ಲ. ತನ್ನ ಕನಸನ್ನ ನನಸಾಗಿಸಲು ಮೋಸ ಮಾಡಬಲ್ಲ. ನನಗೂ ಕನಸಿದ್ದರೆ ಸರಿ. ಇಲ್ಲದಿದ್ದಲ್ಲಿ ನಮಗೆ ಯಾರೂ ಮೋಸ ಮಾಡದಿರಲಿ ಅಂತಾದರೂ ನಾವು ಎಚ್ಚರವಾಗಿರೋದು ಬ್ಯಾಡವಾ? ಹಾಗೆಯೇ ನಮಗೆ ಯಾರೂ ಮೋಸ ಮಾಡದಿರಲಿ ಅಂತ ಅವರ ಮೇಲೆ ನಾವೇ ದಾಳಿ ಮಾಡಿ ಗೆಲ್ಲೋದಕ್ಕೆ ಯುದ್ಧ ಮಾಡಬೇಕಯ್ಯಾ. ಅದು ಆತ್ಮಹತ್ಯೆಯಲ್ಲ, ಆತ್ಮರಕ್ಷಣೆ. ಕಂಚಿಗೆ ಹೋಗಿ ರಾಜವಿದ್ಯೆ ಕಲಿತು ಬಾ ಅಂದರೆ ನೀನು ಆತ್ಮವಿದ್ಯೆ ಕಲಿತು ಬಂದೆಯಲ್ಲಾ ಮಾರಾಯಾ!"

– ಎಂದು ಬೇಸರದಿಂದ ಹೇಳಿ ತಿರಸ್ಕಾರದಿಂದ ಭುಜ ಹಾರಿಸಿದ್ದ, ಆಮೇಲೆ –

"ಈಗೇನು, ಯುದ್ಧಕ್ಕೆ ಬರ್ತೀಯೋ? ಆತ್ಮ ಪರಮಾತ್ಮ ಅಂತ ಪದ ಹಾಡಿಕೊಂಡು ಕೂರ್ತೀಯೊ?"

ಅಂದ. ರವಿಕೀರ್ತಿ ಯುದ್ಧಕ್ಕೆ ಸಿದ್ಧನಾಗಿದ್ದ.

ಸದರಿ ಮೇವಿನ ಸೈನಿಕರ ಬಗ್ಗೆ ಇನ್ನೊಂದು ಮಾತನ್ನು ಈಗಲೇ ಹೇಳಿ ಬಿಡುತ್ತೇವೆ: ಅವರು ಮಂತ್ರದ ಗೊಂಬೆಗಳ ಹಾಗೆ. ಮಂತ್ರ ಹಾಕಿದವ ಏನು ಹೇಳುತ್ತಾನೋ, ಎಷ್ಟು ಹೇಳುತ್ತಾನೋ ಅದನ್ನು, ಅಷ್ಟನ್ನು ಮಾತ್ರ ಚಾಚೂ ತಪ್ಪದೆ ಮಾಡುವವರು. ಅದರಾಚೆ ಈಚೆ

ಒಂದಿ ಕಡ್ಡಿ ಕೂಡ ತೆಗೆದು ಗೊತ್ತಿರದವರು. ಊಟಕ್ಕೆ ಒಮ್ಮೊಮ್ಮೆ ಹುಲ್ಲು ತಿನ್ನಿರೆಂದು ಹೇಳಿದರೆ ಹುಲ್ಲನ್ನೇ ತಿಂದು ಬದುಕುವವರು. ಖರ್ಚು ವೆಚ್ಚಗಳಿಲ್ಲದ ಇಂಥ ಮಂತ್ರನಿಷ್ಠೆಯ ಸೈನಿಕರನ್ನು ಕಟ್ಟಿಕೊಂಡು ಸುಕ್ರ ಮತ್ತು ರವಿಕೀರ್ತಿ ಜೊತೆಗೂಡಿ ಮೂಡನ ರಾಜ್ಯಗಳ ಮೇಲೆ ಆಕ್ರಮಣ ಮಾಡಲು ತೆರಳಿದರೆ ಶಿಖರಸೂರ್ಯ ಮತ್ತು ಬಂಡೆಯರು ಬಡಗಣ ಸೀಮೆಗೆ ನುಗ್ಗಿದರು.

ರವಿಕೀರ್ತಿ ಹೇಳಿರುವಂತೆ ಯುದ್ಧಗಳೆಲ್ಲಾ ಒಂದೇ ರೀತಿ ಇರುವುದರಿಂದ ಅವನ್ನು ವರ್ಣಿಸುವುದರಲ್ಲಿ ನಮಗೆ ಆಸಕ್ತಿಯಿಲ್ಲ. ಕೊಲ್ಲುತ್ತಾರೆ, ಸಾಯುತ್ತಾರೆ, ಗೆಲ್ಲುತ್ತಾರೆ. ಸೋಲುತ್ತಾರೆ. ಅಥವಾ ಕೊಂದು ಗೆಲ್ಲುತ್ತಾರೆ, ಸೋತು ಸಾಯುತ್ತಾರೆ, ಎಂದು ಹೇಳಿ ಅದೆಲ್ಲಾ ಚೌಕಾಶಿಯಿಲ್ಲದೆ ಯುದ್ಧದ ಪರಿಣಾಮ ಫಲಿಗಳು ಏನೆಂದು, ಎಂತೆಂದು ಹೇಳಿಕೆಗಳ ಕೇಳಿಕೊಂಡು, ಪ್ರತ್ಯಕ್ಷಕ ನೋಡಿ ತಿಳಿದುಕೊಂಡು ಹೇಳುತ್ತೇವೆ, ಕೇಳಿರಿ:ಫಾಲ್ಗುಣ ಮಾಸದಿಂದ ದೀಪಾವಳಿಯವರೆಗೆ ಯುದ್ಧಮಾಡಿ ಮೂಡಣ ಬಡಗಣದ ಒಟ್ಟು ಒಂದು ಕಡಿಮೆ ಇಪ್ಪತ್ತು ದೇಶಗಳನ್ನೂ ಜಯಿಸಿ, ಗೆದ್ದವರನ್ನ ಮಾಂಡಳಿಕರನ್ನಾಗಿ ಮಾಡಿಕೊಂಡು, ಕನಕಪುರಿಯ ಕೀರ್ತಿ ಧ್ವಜವನ್ನು ಮೂಡಣ ಸಮುದ್ರದಿಂದ ಪಡುವಣ ಸಮುದ್ರದ ತನಕ ಹಾರಾಡಿಸಿ ವಾಪಸಾದರು.

ಹೋದಹೋದಲ್ಲಿ ಅಲ್ಲಿಯ ರಾಜ ಮಹಾರಾಜರುಗಳು ದಂತೆಯೇಳದಂತೆ ಒಬ್ಬೊಬ್ಬ ನಂಬಿಕಸ್ಥರನ್ನ ನಿಯಮಿಸಿ ಬೇಕಾದಷ್ಟು ಗಿಜಿ ಗಿಜಿ ಸೈನಿಕರನ್ನು ಸೃಷ್ಟಿಸಿ, ಕರ್ತವ್ಯದ ಬಗ್ಗೆ ತಾಕೀತು ಮಾಡಿ ನಿಯಮಿಸಿದರು. ಹೋದಹೋದಲ್ಲಿ ಕನಕಪುರಿಯ ಕುಲದೇವತೆ ತಕ್ಕಡಿ ತೂಗುವ ಗರುಡನ ಗುಡಿ ಗುಂಡಾರ ದೇವಾಲಯಗಳೆದ್ದವು.

ರಾಜ್ಯಗಳನ್ನು ಸೋಲಿಸಿ, ಸುಲಿದು, ಕೊಳ್ಳೆ ಹೊಡೆದು, ಹೇರಳ ಧನಕನಕ, ಅಪರೂಪದ ಕಾಣಿಕೆಗಳು ಬೆಲೆಬಾಳುವ ವಸ್ತು ಒಡವೆ, ಭೋಗಿಸಲು ಬೇಕಾದಷ್ಟು ಸೊಗಸುಗಳನ್ನು ತಂದಿದ್ದರು. ಅವನ್ನೆಲ್ಲ ಪ್ರದರ್ಶಿಸಿ ಮೆರವಣಿಗೆ ಮಾಡಿದರು. ಹಿಂದೆಂದೂ ಕಾಣದ ಇಂಥ ವೈಭವದಿಂದ ಕನಕಪುರಿ ಹತ್ತಿ ಹೆಂಡ ಕುಡಿದ ಕೋತಿಗಿಂತ ಎತ್ತರ ಹಾರಿ ಕುಣಿದಾಡವಂತಾಯಿತು. ಒಂದು ಕಡಿಮೆ ಇಪ್ಪತ್ತು ದೇಶಗಳನ್ನು ಗೆದ್ದು ಶಿಖರಸೂರ್ಯ ಕನಕಪುರಿಯ ವರ್ತಕರ ಭಾಗ್ಯದ ಬಾಗಿಲುಗಳನ್ನು ತೆರೆದುಬಿಟ್ಟಿದ್ದ. ಒಬ್ಬ ವರ್ತಕನೂ ಈಗ ಖಾಲಿ ಇರಲಿಲ್ಲ. ಪ್ರತಿಯೊಬ್ಬರೂ ಗೆದ್ದ ರಾಜ್ಯಗಳಿಗೆ ವಸ್ತುಗಳನ್ನು ವಿತರಿಸುವ, ಮಾರುವ ಕೆಲಸದಲ್ಲಿ ತೊಡಗಿದ್ದರು. ಕನಕಪುರಿಯ ಆಡಳಿತ ಮಂಡಳಿಯ ವರ್ತಕರು ಮತ್ತು ಹಿರಿಯ ನಾಯಕರು ಬಂದು ಬಹಳ ದಿನ ಸಿಂಹಾಸನ ಖಾಲಿ ಉಳಿಯಬಾರದೆಂದು ಹೇಳಿ ಪಟ್ಟಾಭಿಷೇಕದ ಪ್ರಸ್ತಾಪ ಮಾಡಿದರು. ಪುಷ್ಯ ಮಾಸದಲ್ಲಿ ಅದೂ ಜರುಗೆ "ಮಹಾಮಾರ್ತಾಂಡ ಮೂಡುಪಡುವ ಸಮುದ್ರಾಧೀಶ ಶಿಖರಸೂರ್ಯನ ಚಕ್ರಾಧೀಶನಾದ!" ಎಲ್ಲ ರಾಜ್ಯಗಳ ಎಲ್ಲ ಪ್ರಜೆಗಳ ನಾಲಗೆಗಳ ಮೇಲೆ ಶಿಖರಸೂರ್ಯನ ಹೆಸರು ನೂರಾರು ಬಿರುದಾವಳಿಗಳಿಂದ ಮೊಳಗಿತು. ಸುಕ್ರ ಪ್ರಧಾನಿಯಾದ. ಬಂಡೆಯ ಸೇನಾಧಿಪತಿಯಾದ. ರವಿಕೀರ್ತಿ ಯುವರಾಜನಾದ. ತರುಣ ವರ್ತಕರಿಂದ ಕೂಡಿದ ಆಡಳಿತ ಮಂಡಳಿ ಜಾರಿಗೆ ಬಂತು.

ಈ ಸಂದರ್ಭದಲ್ಲಿ ಕಂಚೀ ಮಹಾರಾಜನ ಪ್ರತಿನಿಧಿಯಾಗಿ ಅವನ ಪ್ರಧಾನಿಯೇ ಬಂದು ಪಟ್ಟಾಭಿಷೇಕದಲ್ಲಿ ಪಾಲ್ಗೊಂಡಿದ್ದ. ರವಿಕೀರ್ತಿಯೊಂದಗಿನ ತಮ್ಮ ಮಹಾರಾಜರ ಗೆಳೆತನವನ್ನು ಜ್ಞಾಪಿಸಿ ಸ್ನೇಹಹಸ್ತ ಚಾಚಿದ್ದ. ಸ್ನೇಹ ಗಟ್ಟಿಯಾಗಲು ರವಿಕೀರ್ತಿಗೆ ತನ್ನ ತಂಗಿಯನ್ನು ಕೊಟ್ಟು, ತಾನು ವರಿಯ ತಂಗಿ ಮುದ್ದು ಗೌರಿಯೊಂದಿಗೆ ಮದುವೆಯಾಗುವ ತನ್ನಿಚ್ಛೆಯನ್ನು ಹೇಳಿ ಕಳಿಸಿದ್ದ. ಈ ಅನಿರೀಕ್ಷಿತ ಪ್ರಸ್ತಾವದಿಂದ ಶಿಖರಸೂರ್ಯನಿಗೆ ಬಹಳ ಸಂತೋಷವಾಯಿತು. ಎಲ್ಲರನ್ನ ಹೆದರಿಸಿ ಸೋಲಿಸಿ ಅಂಕಿತದಲ್ಲಿಟ್ಟುಕೊಳ್ಳಬಹುದು. ಆದರೆ ಸಮಾನರಾದ ಸಂಬಂಧಿಕರು, ಸುಖದುಃಖ ಹಂಚಿಕೊಂಬ ಸ್ನೇಹಿತರೂ ಬೇಕಲ್ಲ. ಮಕ್ಕಳಿಗೆ ಇದಕ್ಕಿಂತ ಹೆಚ್ಚಿನ ಸಂಬಂಧ ಕೂಡಿ ಬರಲಾರದೆಂದು ಮನಸ್ಸಿನಲ್ಲೇ ಆನಂದಗಳನುಂಡ. ಅಂದೇ ರಾತ್ರಿ ಚಿಕ್ಕಮ್ಮಣ್ಣಿ ಛಾಯದೇವಿ ಇಬ್ಬರಿಗೂ ವಿಷಯ ಹೇಳಿದ. ಕೇಳಿಸಿಕೊಂಡ ಇಬ್ಬರ ಮುಖಗಳೂ ಕಪ್ಪಿಟ್ಟುದನ್ನು ತನ್ನ ಉಮೇದಿಯಲ್ಲಿ ಆತ ಗಮನಿಸಲಿಲ್ಲ.

ಪಟ್ಟಾಭೀಷೇಕವಾದ ಮೇಲೆ ಶಿಖರಸೂರ್ಯ ಕುಟುಂಬ ಕನಕಪುರಿಯ ಅರಮನೆಯಲ್ಲೇ ಉಳಿಯಿತು. ಶಿಖರಸೂರ್ಯನಂತೂ ಹೆಮ್ಮೆ ಆನಂದಗಳಿಂದ ಬೀಗಿ ಹೋಗಿದ್ದ. ರವಿಕೀರ್ತಿ ಕಂಚಿಯ ಮಹಾರಾಜನ ಸಹಪಾಠಿ ಮತ್ತು ಸ್ನೇಹಿತನೆಂದು ತಿಳಿದ ಮೇಲಂತೂ

ಅವನಿಗೆರಡು ಕೊಂಬು ಮೂಡಿದಂತಾಗಿತ್ತು. ಸ್ಥಾನಭ್ರಷ್ಟನಾಗಿ ಕನಕಪುರಿಯನ್ನ ಬಿಟ್ಟಾಗಿನಿಂದ ಹೆಂಡತಿ ಮಕ್ಕಳ ಯೋಗಕ್ಷೇಮವನ್ನು ಮರತೇ ಬಿಟ್ಟಿದ್ದವನು ಇವತ್ತು ಪ್ರಥಮ ಬಾರಿ ಅಂತಃಪುರಕ್ಕೆ ಹೋಗಿ ಅವರನ್ನು ವಿಚಾರಿಸಿಕೊಂಡ.

ಇಷ್ಟು ಸದರ ಸಿಕ್ಕದ್ದೇ ಆಯ್ತು, – ಚಿಕ್ಕಮ್ಮಣ್ಣಿ ಶಿವಾಪುರದ ನಿನ್ನಡಿ ಬೆಳಿಗಿರಿಗೆ ಬಂದಾಗಿನಿಂದ ಹಿಡಿದು ನಿನ್ನಡಿಯ ಆಕಾರ, ಸೌಂದರ್ಯ ಆರುಬೆರಳುಗಳನ್ನು ಅತಿಯೆಂಬಷ್ಟು ಹೊಗಳಿ ಗೌರಿಯನ್ನಾತ ಮದುವೆಯಾಗಲು ಅಪೇಕ್ಷೆ ಪಟ್ಟದ್ದನ್ನೂ ಹೇಳಿದಳು. ಕಳೆದ ತಿಂಗಳು ಬಿಳಿಗಿರಿಗೆ ಪುನಃ ಬಂದಿದ್ದನೆಂದೂ ಗೌರಿಯನ್ನ ಬಿಟ್ಟು ತಾನಿರಲಾರೆನೆಂದು ಹೇಳಿದ್ದನ್ನೂ ಜೊತೆಗೆ ಶಿಖರಸೂರ್ಯ ಸತ್ಯ ತಿಳಿಯಲು ಸಹಾಯ ಮಾಡಲೆಂದು ನಿನ್ನಡಿಯೇ ತನ್ನ ಕಳೆದುಹೋದ ಮಗ ತರುಣಚಂದ್ರನಿರಬಹುದೇ? ಎಂಬ ತನ್ನ ಸಂದೇಹವನ್ನೂ ಹೇಳಿ "ಇರಬಹುದು ಎನಿಸಿತಪ್ಪ" ಎಂದು ಪ್ರಶ್ನೋತ್ತರಗೆರಡನ್ನೂ ಅವಳೇ ಮಾತಾಡಿ ಹಗುರವಾದಳು.

ಶಿಖರಸೂರ್ಯ ಅವಳು ಹೇಳುವುದನ್ನೆಲ್ಲ ನಿರ್ಭಾವದಿಂದ ಕೇಳಿಸಿಕೊಂಡು ಹಾಹೂ ಅನ್ನದೆ ಎದ್ದು ಹೊರಗೆ ಹೋದ. ಅವನು ಏನೂ ಹೇಳಲಿಲ್ಲವಾದ್ದರಿಂದ ಸಕಾಲಕ್ಕಾಗಿ ಕಾಯಬೇಕಿತ್ತೆಂದು ಹಳಹಳಿಸಿದಳು. ಆ ರಾತ್ರಿಯೆಲ್ಲಾ ಅಜ್ಜಿ ಮೊಮ್ಮಗಳು ನಿದ್ದೆಯಿಲ್ಲದೆ ಮಗ್ಗಲು ಬದಲಿಸುತ್ತಲೇ ಕಳೆದರು.

ತಂದೆಯ ತಿರಸ್ಕಾರದಿಂದ ಗೌರಿ ಕನಕಪುರಿಯಲ್ಲೆ ಇನ್ನಷ್ಟು ಒಂಟಿಯಾದಳು. ಅಣ್ಣನೂ ಯಾರೊಂದಿಗೂ ಬೆರೆಯುತ್ತಿರಲಿಲ್ಲ. ನೋಡಲು ಹೋದಾಗೆಲ್ಲ ತನ್ನ ಕೋಣೆಯಲ್ಲಿ ಆ ಕಡೆಯಿಂದ ಈ ಕಡೆಗೆ ಉದ್ವೇಗದಿಂದ ಅಡ್ಡಾಡುತ್ತ, ದೊಡ್ಡ ಸನ್ನೆಗಳನ್ನು ಅಭಿನಯಿಸುತ್ತ ತಂತಾನೇ ಮಾತಾಡಿಕೊಳ್ಳುತ್ತಿರುವಂತೆ ಕಾಣುತ್ತಿತ್ತು. ಅಂತರಂಗದ ಭಾವನೆಗಳನ್ನು ಯಾರದೋ ಎದುರಿಗೆ ಮಂಡಿಸಲು ಸಮರ್ಥ ಮಾತುಗಳಿಗಾಗಿ ಆತ ತಡಕಾಡುವಂತಿತ್ತು. ಅವನ ಭಾವನೆಗಳು ಏನೆಂದು ಗೊತ್ತಿದ್ದುದರಿಂದ ಗೌರಿಗೆ ಅವನ ಬಗ್ಗೆ ಸಹಾನುಭೂತಿ ಇತ್ತು. ಆದರೆ ಅವನ ಸಮಸ್ಯೆಗೆ ತಾನಾಗಲಿ, ತನಗೆ ಅವನಾಗಲಿ ಸಹಾಯ ಮಾಡುವ ಸ್ಥಿತಿಯಲ್ಲಿ ಇಬ್ಬರೂ ಇರಲಿಲ್ಲ.

ಅರಮನೆಯ ಆಮೋದಗಳು ಆಟಗಳು ಗೌರಿಗಾಗುತ್ತಿರಲಿಲ್ಲ. ಬೆರೆತು ಮಾತಾಡುವುದಕ್ಕೆ ಸಖಿಯರಿರಲಿಲ್ಲ. ಅಮನೆಗೆ ಬರುತ್ತಿದ್ದ ವರ್ತಕರ ಹೆಂಡಂದಿರು, ಹುಡುಗಿಯರೋ ಕತ್ತಿನ ತುಂಬ ಬಂಗಾರ ಹೇರಿಕೊಂಡು ಅಣ್ಣನ ಕೋಣೆಯತ್ತ ನೋಡಿ ನೋಡಿ ಹಲ್ಲು ಕಿರಿದು ಹೋಗುತ್ತಿದ್ದರು. ಶ್ರೀಮಂತ ಹುಡುಗರೂ ತನ್ನೊಂದಿಗೆ ಮಾತಾಡಲು ಹಾರೈಸಿ ನಿರಾಶರಾಗಿ ಇಲ್ಲವೆ ಹೆದರಿ ಹೋಗುತ್ತಿದ್ದರು. ಅರಮನೆಯಲ್ಲಿ ಸದಾ ಸದ್ದು ಗದ್ದಲವಿರುತ್ತಿತ್ತು.

ಕಂಚೀರಾಜನ ಪ್ರಸ್ತಾಮವನ್ನ ತಾಯಿ ಎರಡು ಸಾರಿ ಮಾಡಿ ಅವನ ಬಗ್ಗೆ ಮಾತಾಡಲು ಹಾರೈಸಿದ್ದಳು. ಆದರೆ ತನ್ನ ನಿರಾಸಕ್ತಿಯನ್ನು ಗಮನಿಸಿ ಅಸಮಾಧಾನಗೊಂಡಿದ್ದಳು. ನಿನ್ನಡಿಯ ಹೆಸರು ತಗೊಂಡಾಗೆಲ್ಲ ತಾಯಿ ಸಿಡುಕುತ್ತಿದ್ದಳು. ಈಗೀಗಿಂತಲೂ ಅವಳ ಸಿಡುಕು ಕ್ರೌರ್ಯವಾಗಿ ನಿನ್ನಡಿಯ ಹೆಸರನ್ನೇ ಮನೆಯಿಂದ ನಿಷೇಧಿಸಿದಂತೆ ಮಾಡಿದ್ದಳು. ಇನ್ನು ಮದುವೆಯ ವಿಚಾರವಂತೂ ದೂರಾತಿದೂರ ಉಳಿಯಿತು.

ಮೊದಮೊದಲು ಗೌರಿ ಒಬ್ಬಳೇ ಮೂಲೆಯಲ್ಲಿ ಕುಳಿತು ನಿನ್ನಡಿ ಕಳೆದ ತಿಂಗಳು ತನ್ನನ್ನು ಕಾಡಿಗೆ ಕರೆದುಕೊಂಡು ಹೋಗಿ ಪ್ರೀತಿ ಮಾಡಿದ್ದನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತಿದ್ದಳು. ಹಾಗೆ ನೆನಪಿಸಿಕೊಂಡಾಗೆಲ್ಲ ಮುಖ ಕೆಂಪೇರಿ ನಾಚಿಕೊಳ್ಳುತ್ತಿದ್ದಳು. ಈಗ ಅದು ನೆನಪಾದಾಗ ಅಳು ಬರುತ್ತಿತ್ತು.

ಈ ಬಗ್ಗೆ ತಂದೆಯನ್ನೊಪ್ಪಿಸುವುದು ಚಿಕ್ಕಮ್ಮಣ್ಣಿಗೆ ಮಾತ್ರ ಸಾಧ್ಯವಿತ್ತು. ಮದುವೆ ತೀರ್ಮಾನ ಒಂದು ಕ್ಷಣದ ಕೆಲಸ. ಆದರೆ ಚಿಕ್ಕಮ್ಮಣ್ಣಿ ವಿಚಾರ ಮಾಡೋಣವೆಂದು ಹೇಳುವಂಥಾದ್ದೇನಿದೆ ಇದರಲ್ಲಿ? – ಎಂದು ನಿಡುಸುಯ್ಯುತ್ತಿದ್ದಳು. ಅಪ್ಪ ಸದಾಕಾಲ ಯಾವುದೋ ಲೆಕ್ಕಾಚಾರದಲ್ಲಿದ್ದಂತೆ ಏಕಕಾಲಕ್ಕೆ ಅನೇಕ ಯೋಜನೆಗಳನ್ನು ಆಲೋಚಿಸುತ್ತಿರುವಂತೆ ಹಣೆ ಗಂಟು ಹಾಕಿಕೊಂಡಿರುತ್ತಿದ್ದ. ಮಾತಿಗೆ ಬಾರದ ವಿಷಯಗಳನ್ನು ತಲೆಗೆ ಹಚ್ಚಿಕೊಂಡು ಆತ ಸಿಡುಕಿದಾಗಂತೂ ಗೌರಿಯ ದೇಹ ಕೋಪದಿಂದ

ಕಂಪಿಸುತ್ತಿತ್ತು. ಆಮ್ಯಾಲೆ ಛೇ, ತಾನ್ಯಾಕೆ ಹೀಗೆ ಮಾಡಿದೆನೆಂದು ಒಬ್ಬಳೇ ಮೂಲೆಗೊರಗಿ ಚಂಡೀದಾಸ ಕೊಟ್ಟ ಅಡಿಕೆ ಹಿಡಿದುಕೊಂಡು ಪಶ್ಚಾತ್ತಾಪ ಪಡುತ್ತಿದ್ದಳು. ಚಂಡೀದಾಸನಾದರೂ ಈಗ ಪ್ರತ್ಯಕ್ಷನಾಗಬಾರದೆ? ಎಂದು ಹಾರೈಸಿದಳು.

ಇದ್ದಕ್ಕಿದ್ದಂತೆ ಒಂದು ದಿನ ಛಾಯಾದೇವಿ ಮಕ್ಕಳಿಗೆ ಅರಮನೆಯ ಶಿಷ್ಟಾಚಾರ ಕಲಿಸತೊಡಗಿದಳು. ಇವರು ಯಾರು ಅಂಥ ಶಿಷ್ಟಾಚಾರ ಅರಿಯದವರಲ್ಲ. ಎಷ್ಟೆಂದರೂ ಬಿಳಿಗಿರಿ ಅರಮನೆಯಲ್ಲಿ ಇದ್ದು ಬಂದವರಲ್ಲವೆ? ಆದರೆ ಅದು ಒಬ್ಬ ಮಾಂಡಳಿಕ ರಾಜನ ಅರಮನೆ. ಇದು ಚಕ್ರವರ್ತಿಯ ಅರಮನೆ. ಇಲ್ಲಿ 'ಶಿಖರಸೂರ್ಯ ಮಹಾಪ್ರಭು' ಎಂದು ಸಂಬೋಧಿಸಬೇಕು. ಅವನು ಬಂದಾಗ ಎಲ್ಲರೂ ಅಂದರೆ ಚಿಕ್ಕಮ್ಮಣ್ಣಿ ಕೂಡ ಎದ್ದು ನಿಲ್ಲಬೇಕು. ಇತ್ಯಾದಿ ತಾಕೀತು ಮಾಡಿದಳು. ಇದು ಅಮ್ಮನ ಕಿತಾಪತಿ ಎಂದು ಗೌರಿ ಮತ್ತು ರವಿ ನಗಾಡಿ ಹಗುರಾಗಿ ತಗೊಂಡರು. ಒಂದು ಸಲ ಗೌರಿ ಶಿಖರಸೂರ್ಯನನ್ನ ಅಪ್ಪಾ ಎಂದು ಕರೆದಾಗ ಅವನು ಅಸಹ್ಯಗೊಂಡು "ಇದಕ್ಕೆ ಅರಮನೆಯ ಶಿಷ್ಟಾಚಾರ ಕಲಿಸಲಿಲ್ಲವೆ ಮಹಾರಾಣಿ?" ಎಂದು ಛಾಯಾದೇವಿಯ ಮೇಲೆ ಕೋಪಗೊಂಡ. ಅಂದೇ ಗೌರಿ ತಾನು ಇಲ್ಲಿಗೆ ಸಂಬಂಧಪಟ್ಟವಳಲ್ಲ ಎಂದು ಅರಮನೆಗೆ ಪರಕೀಯಳಾಗಿ ಬಿಟ್ಟಳು. ನಾನು ರಾಜಕುಮಾರಿಯಲ್ಲ "ಗೌರಿ" ಎಂದು ಅಣ್ಣನಿಗೆ ಹೇಳಿ ತಾನು ಮಾತ್ರ ಅವನಿಗೆ ಯುವರಾಜನೆನ್ನದೆ ಅಣ್ಣ ಎಂದೇ ಕರೆಯತೊಡಗಿದಳು.

ಇದರಿಂದಾಗಿ ಛಾಯಾದೇವಿ ವಿನಾಕಾರಣ ಮಗಳ ಮೇಲೆ ಸಿಟ್ಟಿಗೇಳುತ್ತಿದ್ದಳು. ಗೌರಿ ಎಂದು ಕರೆಯದೆ ತಿರಸ್ಕಾರದಿಂದ 'ಚಿಕ್ಕದು ಎಲ್ಲಿದೆ? ಅದು ಬಂತೆ? ಹೋಯ್ತೆ?' ಎನ್ನುತ್ತಿದ್ದಳು. ಯಾರು ತಪ್ಪು ಮಾಡಿದರೂ ತುದಿಯಲ್ಲಿ ಗೌರಿಯನ್ನೇ ಅಂದಾಡಲು ಸುರು ಮಾಡಿದಳು. ರವಿ ತಪ್ಪು ಮಾಡಿದರೂ "ಇದೊಂದು ಇದೆಯಲ್ಲ ಅರಮನೆಯಲ್ಲಿ. ಇದರಿಂದಾಗಿಯೇ ಇದೆಲ್ಲ ನಡೀತಿರೋದು" ಎಂದು ಎಲ್ಲದಕ್ಕೂ ಗೌರಿಯನ್ನೇ ಗುರಿ ಮಾಡುತ್ತಿದ್ದಳು. ಅವಮಾನ ಕುಚೋದ್ಯ ಮಾಡುವ ಒಂದು ಅವಕಾಶವನ್ನೂ ಬಿಡುತ್ತಿರಲಿಲ್ಲ. "ಶಿವಪುರದ ಕರಡಿಗೆ ನಮ್ಮ ಮನೆ ಕೋತಿ ಬೇಕಂತೆ. ನಾವು ಇದಕ್ಕೆ ಒಪ್ಪಿಗೆ ಕೊಡಬೇಕಂತೆ!" ಎಂದು ಗೌರಿಗೆ ಕೇಳಿಸುವಂತೆಯೇ ಅವಳನ್ನುದ್ದೇಶಿಸಿಯೇ ಮಾತಾಡುತ್ತಿದ್ದಳು.

ಈ ಸಲದ ಚಳಿಗಾಲ ಮುಗಿಯುತ್ತ ಬಂದಂತೆ ಚಳಿಯ ತೀವ್ರತೆ ಕಡಿಮೆಯಾಗಿತ್ತು. ರೈತರಿಗೆ ಈಗ ಸಮಯವೇ ಸಿಕ್ಕುವುದಿಲ್ಲ. ಆದರೆ ರಾಜಧಾನಿಯಲ್ಲಿರುವವರಿಗೆ ಚಳಿ ಕಾಸುವುದು ಮತ್ತು ಮನರಂಜನೆಗಳನ್ನ ನೋಡುವುದು ಬಿಟ್ಟರೆ ಬೇರೆ ಕೆಲಸವೇ ಇರುವುದಿಲ್ಲ. ಶಿಖರಸೂರ್ಯನಿಗೆ ಹಗಲು ರಾತ್ರಿ ಕೆಲಸವಾದ್ದರಿಂದ ಹೊರಗಡೆ ಹೋಗಿದ್ದ.

ನಿನ್ನೆಯಷ್ಟೆ ಗೌರಿ ಅಣ್ಣನೊಂದಿಗೆ ರಾಜಧಾನಿಯ ಹೊರಗಡೆ ಹೋಗಿದ್ದಳು. ರೈತಾಪಿ ಜನರಿಗಿದು ಸುಗ್ಗಿಯ ಕಾಲ. ಧಾನ್ಯ ತೂರುವ, ಕೇರುವ, ರಾಶಿ ಮಾಡುವ, ಸುಗ್ಗಿ ಒಕ್ಕುವ, ತರಕಾರಿ ಕಾಳು ಸಂಗ್ರಹಿಸುವ ಕೆಲಸಗಳಲ್ಲಿ ತೊಡಗಿರುವುದನ್ನು ನೋಡಿದ್ದಳು. ರೈತಾಪಿ ಹೆಂಗಸರು ಇವಳನ್ನು ನೋಡಿ "ರಾಜಕುಮಾರಿ" ಎಂದು ನಮಸ್ಕರಿಸಿ ಗೌರವ ಸೂಚಿಸಿದ್ದರು. ಅವರನ್ನೂ ಆ ವಾತಾವರಣವನ್ನೂ ನೋಡಿದ್ದೇ ತಡ ಗೌರಿಗೆ ನಿನ್ನಡಿಯ ನೆನಪಾಗಿ ಕಣ್ಣು ತುಂಬ ಬಂತು.

ಅದೇ ನೆನಪಿನಲ್ಲಿ ಮೂರನೇ ದಿನ ಮಧ್ಯಾಹ್ನ ಅಣ್ಣನ ಕೋಣೆಗೆ ಹೋದಳು. ಅವನು ತಾಡೋಲೆ ಗ್ರಂಥವೊಂದನ್ನು ಪರಿಶೀಲಿಸುತ್ತಿದ್ದ. ಕೆಳಗಡೆ ಅಂತಃ ಪುರಕ್ಕೆ ಹೋದಳು. ಛಾಯಾದೇವಿ ಪೀಠದಲ್ಲಿ ಕುಳಿತೇ ತೂಕಡಿಸುತ್ತಿದ್ದಳು, ಅಲ್ಲೇನೂ ವಿಶೇಷ ಕಾಣದೆ ಅರಮನೆಯ ಹಜಾರದಲ್ಲಿ ಅಜ್ಜಿಯ ದನಿ ಕೇಳಿ ಅಲ್ಲಿಗೆ ಬಂದಳು. ಅಲ್ಲಿ ನೋಡಿದರೆ ಅಷ್ಟೂ ದೊಡ್ಡ ಹಜಾರ ತುಂಬಿ ಹೊಸ ಧಾನ್ಯದ ಬೃಹತ್ ರಾಶಿ ಬಿದ್ದಿದೆ! ಚಕಿತಳಾಗಿ ಚಿಕ್ಕಮ್ಮಣ್ಣಿ ಇದ್ಯಾಕೆಂದು ಸೇವಕನನ್ನು ವಿಚಾರಿಸುವಲ್ಲಿಗೆ ಗೌರಿ ಹೋಗಿ ಅಜ್ಜಿಯ ಪಕ್ಕ ಸುಮ್ಮನೆ ನಿಂತಳು. ಸೇವಕ ಬೇರೆ ಕಡೆ ಹೋದ ಮೇಲೆ ಗೌರಿಯ ಬಾಡಿದ್ದ ಮುಖ ನೋಡಿ "ಯಾಕೆ ಕೂಸು ಹಿಂಗಿದ್ದೀಯಾ?" ಎಂದಳು.

"ಅಜ್ಜೀ ನಾನು ಹೋಗವೇಕು."

"ಎಲ್ಲಿಗೆ ಕಂದಾ?"

“ಶಿವಪುರಕ್ಕೆ.”

ಚಿಕ್ಕಮ್ಮಣ್ಣಿ ಮುಖ ತಿರುಗಿಸಿ ನಿಟ್ಟುಸಿರುಬಿಟ್ಟಳು. ಆಮೇಲೆ ಅಸಹಾಯಕಳಾಗಿ ಇವಳ ಕಡೆಗೆ ನೋಡಿದಳು. ಅಜ್ಜಿಯನ್ನು ನೋಡಿದ್ದೇ ಇವಳ ಕೊರಳ ಸೆರೆ ತುಂಬಿ ಬಂತು.

“ಹಾಗೆಲ್ಲ ನನ್ನನ್ನ ನೋಡಬೇಡ. ನನಗೆ ಅಳು ಬರುತ್ತದೆ.”

ಎಂದುಲಿಯುತ್ತ ಹೊರಗೋಡಿದಳು.

ಹೊರಗಡೆ ಕಾಲಿಡುತ್ತ ದೂರ ನೋಡಿದರೆ ಅರಮನೆಯಂಗಳದಲ್ಲಿ ಚಂಡೀದಾಸ ಬರುತ್ತಿದ್ದಾನೆ! ದೇವರನ್ನು ಕಂಡಂತೆ ಗೌರಿ “ಅಜ್ಜೀ, ತಾತ ಬಂದ!” ಎನ್ನುತ್ತ ಓಡಿಹೋಗಿ ಚಂಡೀದಾಸನನ್ನು ತಬ್ಬಿಕೊಂಡು ಕೈಹಿಡಿದು ಒಳಗೆ ಕರೆತಂದಳು.

ಏನು ಎತ್ತ ಎಲ್ಲಿಂದ ಏನೇನೊ ಕೇಳದೆ ಸೀದಾ ಪಾಠಶಾಲೆಗೆ ಕರೆದೊಯ್ದು ಕಾಲಧೂಳು ಕಳೆಯಲು ನೀರು ಕೊಟ್ಟು ಅದಾಗಿ ಅವನನ್ನು ಎಳೆತಂದು ಕೂರಿಸಿ ಎಲೆ ಹಾಕಿ, ನೀರು ಕೂಡ ತಾನೇ ಚಿಮುಕಿಸಿ ತೊಳೆದು ಪಾಕಶಾಲೆಯಲ್ಲಿ ಏನಿದೆಯೋ ಅದನ್ನು ತಂದು ಬಡಿಸಿ “ಉಣ್ಣು” ಎಂದು ಅವನ ಮುಂದೇ ಕೂತಳು. ಚಂಡೀದಾಸನೋ ಮೊದಲೇ ಗೌರಿ ಎಂದರೆ ಬೆಟ್ಟದಮ್ಮನ ಅವತಾರವೆಂದುಕೊಂಡವನು - ಈಗ ಪ್ರತ್ಯಕ್ಷ ಅನ್ನಪೂರ್ಣೆಯನ್ನೇ ಕಾಣುತ್ತ ಉತ್ಸಾಹದ ಪ್ರೀತಿಯ ಅಂತಃಕರಣದ ಆನಂದದ ಮುದ್ದು ಮುದ್ದಾದ ಮಾತುಗಳನ್ನು ಕೇಳಿ ಆಶ್ರುನಯನನಾಗಿ ಅವಳಿಂದ ಕಣ್ಣು ಕೀಳದೆ ತಿನ್ನುತ್ತಿದ್ದಾಗ ಸೇವಕರು ಸ್ವತಃ ರಾಜಕುಮಾರಿಯೇ ಬಂದುದರಿಂದ ಮುಂದೆ ಬಂದು ಸಹಾಯ ಮಾಡಲಾರದೆ ಸುಮ್ಮನಿರಲೂ ಆಗದೆ ನಿಂತುಕೊಂಡು ಚಡಪಡಿಸುತ್ತ ನೋಡುತ್ತಿರಲು, ಹಸಿದಾಗ ಕೂಸು ತಾಯಿಯ ಕೈಗೆ ತನ್ನ ತಾನು ಅರ್ಪಿಸಿಕೊಂಡು ಉಣ್ಣ ಎಂದೊಡನೆ ಗಬಗಬ ತಿಂದಿ ಎದ್ದ.

ಅಲ್ಲಿಂದ ಅವನನ್ನು ಅಣ್ಣನ ಕೋಣೆಯ ಕಡೆಗೆ ಕರೆದೊಯ್ಯುವಾಗ ಹಜಾರದಲ್ಲಿಯ ಬೃಹತ್ ಧಾನ್ಯ ರಾಶಿಯನ್ನು ಕಂಡಿ ಚಂಡೀದಾಸ ಬೆರಗಾಗಿ ನಿಂತ. ಗೌರಿಗೂ ಅದು ಆಶ್ಚರ್ಯಕರವೇ, ಕೇಳಿದಳು:

“ತಾತಾ, ನಾವು ಅರಮನೆಯಲ್ಲಿದ್ದವರಿಗೆ ವರ್ಷಕ್ಕೆ ಇಷ್ಟೊಂದು ಧಾನ್ಯ ಬೇಕಾ?” ಈಗ ನೀನು ನನಗೆ ಹಾಕಿದಂತೆ ಅವರಿಗೂ ಊಟ ಹಾಕಬೇಕಲ್ಲವ? ಅದಕ್ಕೇ ಇರಬೇಕು, ಆದರೂ ಇದು ಹೆಚ್ಚೇ.”

ಗೌರಿಗೆ ಈ ತರ್ಕ ಖಾತ್ರಿಯಾಗಲಿಲ್ಲ. ಹೇಳಿದವನು ಚಂಡೀದಾಸನಾದ್ದರಿಂದ ಇರಬಹುದೇನೋ ಎಂದುಕೊಂಡು ಸುಮ್ಮನಾದಳು.

ಈಗ ಚಿಕ್ಕಮ್ಮಣ್ಣಿ ತನ್ನ ಕೋಣೆಗೆ ಬಂದು ಚಂಡೀದಾಸನಿಗಾಗಿ ಕಾಯುತ್ತಿದ್ದಳು. ಚಿಕ್ಕಮ್ಮಣ್ಣಿಯ ಅಂತಃ ಪುರವೆಂದರೆ ಸರಳವಾದ ಏನೇನೋ ವೈಭವಗಳಿಲ್ಲದ ಒಂದು ಕೋಣೆ. ಬದಲಾದ ಸಂದರ್ಭದಲ್ಲಿ ಆಕೆ ಹಿಂದಿನ ಮಹಾರಾಣಿ ಇದ್ದಲ್ಲಿ ವಾಸಿಸಬಹುದಾಗಿತ್ತು. ಅಲ್ಲಿಗೆ ಹೋಗದೆ ಮೊದಲು ತಾನಿದ್ದ ಸಣ್ಣ ಕೋಣೆಯಲ್ಲೇ ಈಗಲೂ ಇದ್ದಳು. ಅಷ್ಟರಲ್ಲಿ ಚಂಡೀದಾಸ ಗೌರಿಯೊಂದಿಗೆ ಬಂದ. ನಮಸ್ಕಾರವನ್ನಾಚರಿಗೆ ತೋರಿಸಿದ ಪೀಠದಲ್ಲಿ ಕೂತ. ಎತ್ತರದ ಪೀಠದಲ್ಲಿ ಚಿಕ್ಕಮ್ಮಣ್ಣಿ ಕೂತು ಅವಳ ಹಿಂದೆ ಗೌರಿ ನಿಂತಳು.

ಕೋಣೆ ನಿರಾಡಂಬರವಾಗಿತ್ತು. ವಸ್ತುಗಳು ಕಡಿಮೆಯಿದ್ದುದರಿಂದ ಕೋಣೆ ಇದ್ದುದಕ್ಕಿಂತ ವಿಶಾಲವಾಗಿ ಕಾಣುತ್ತಿತ್ತು. ಪಡುವಣದ ಗೋಡೆಗೆರಡು ದೊಡ್ಡ ಕಿಡಕಿಗಳಿದ್ದು ಅಲಂಕರಿಸಿದ ನಸುಗೆಂಪು ಬಣ್ಣದ ಪರದೆಗಳಿದ್ದವು. ಇನ್ನೂ ಹೆಚ್ಚು ಬೆಳಕು ಬರಲೆಂದು ಪರದೆಗಳನ್ನು ಓರೆ ಮಾಡಿ ಕಟ್ಟಲಾಗಿತ್ತು. ಒಂದು ಬದಿಯಲ್ಲಿ ಮಂಚವಿತ್ತು. ಅದರ ಮೇಲೆ ಗಿಣಿ ಚಿತ್ರವಿರುವ ಬಟ್ಟೆಯನ್ನು ಹಾಸಲಾಗಿತ್ತು. ಅದರ ಪಕ್ಕದ ಗೋಡೆಯ ಮೇಲೆ ಓರಣವಾಗಿ ನಿಲುವುಗನ್ನಡಿಯನ್ನ ತೂಗು ಹಾಕಲಾಗಿತ್ತು. ಅದರ ಎಡ ಬಲ ಬದಿಗಳಲ್ಲಿ ಆಭರಣ ಮತ್ತು ಬಟ್ಟೆಯಿಡುವ ಎರಡು ಮರದ ಪೆಟ್ಟಿಗೆಗಳಿದ್ದವು. ಪಡುವಣ ಬಿಟ್ಟು ಉಳಿದ ಮೂರು ಗೋಡೆಗಳಲ್ಲಿ

ಚೌಕಟ್ಟುಳ್ಳ ಎರಡೆರಡು ಮಾಡಗಳಿದ್ದು, ಅವುಗಳಲ್ಲಿ ಹಿತ್ತಾಳೆಯ ದೀಪಗಳನ್ನಿಡಲಾಗಿತ್ತು. ಒಂದು ಮೂಲೆಯಲ್ಲಿ ದೀಪ ಹಿಡಿದ ಹಿತ್ತಾಳೆಯ ದೀಪದ ಮೊಲ್ಲೆ ನಿಂತಿದ್ದಳು. ಮುಗುಳು ನಗುತ್ತ "ಹ್ಯಾಗಿದ್ದೀಯಪ್ಪಾ?" ಎಂದಳು ಚಿಕ್ಕಮ್ಮಣ್ಣಿ.

"ನಿಮ್ಮ ಆಶೀರ್ವಾದ; ಹೀಗಿದ್ದೀನಿ ತಾಯಿ" ಎಂದ ಚಂಡೀದಾಸ ವಿನಯದಿಂದ. ಚಿಕ್ಕಮ್ಮಣ್ಣಿ ಆಗಲೇ ತಾಳ್ಮೆಗೆಟ್ಟಿದ್ದಳು. "ಮುದ್ದೂ, ನೀನು ಅಣ್ಣನನ್ನು ಕರೆದು ತಾ" ಎಂದು ಹೇಳಿ ಗೌರಿ ಹೊರಗಡೆ ಹೋಗುವತನಕ ಕಾಯ್ದು ಆಮೇಲೆ – ಮೆಲ್ಲಗೆ ಕೇಳಿದಳು:

"ನಿನ್ನಡಿಯ ಬಗ್ಗೆ ಶಿವಪಾದನಲ್ಲಿ ವಿಚಾರಿಸಿದೆನೇನಪ್ಪಾ?"

ಉತ್ಸುಕತೆ, ಕಾತರತೆಗಳಿಂದ ಕಾಯುತ್ತಿದ್ದಳೆಂದು ಅವಳ ಮಾತಿ ಧಾಟಿಯಲ್ಲೇ ವ್ಯಕ್ತವಾಗುತ್ತಿತ್ತು. ಇವನೂ ಚುರುಕಾಗಿ – ಸಮಾಧಾನ ಮಾಡುವ ದನಿಯಲ್ಲಿ –

"ಹೌದು ತಾಯಿ, ನಿಮ್ಮ ನಂಬಿಕೆಯೇ ನಿಜವಾಗಿದೆ."

"ಅಂದರೆ …. ಅವನು ನನ್ನ ಮಗ ತರುಣಚಂದ್ರನೇ?"

"ಹೌದು ತಾಯೀ ಹೌದು."

ತಕ್ಷಣ ಚಿಕ್ಕಮ್ಮಣ್ಣಿ ಎದ್ದು ಒಂದು ಹೆಜ್ಜೆ ಮುಂದೆ ಬಂದು ಚಂಡೀದಾಸನ ಬಲಗೈ ಹಿಡಿದು

"ನಿಜವೇ ನನ್ನಪ್ಪಾ?"

– ಎಂದು ಕೂಡಲೇ "ಇದನ್ನೇ ನಿಜವೆಂದು ದಯಮಾಡಿ ಹೇಳೆಂಬಂತೆ ಅಂಗಲಾಚಿದಳು. ತಾಯ ಹಂಬಲನೋಡಿ ಕೊರಳಸೆರೆ ತುಂಬಿ ಇವನೂ ಎದ್ದುನಿಂತು "ತಾಯಿಯೊಂದಿಗೆ ಆಟ ಆಡಲುಂಟೆ ಮಹಾರಾಣಿ? ಅಕ್ಷರಶಃ ನಿಜ, ಈ ಬಗ್ಗೆ ತಾವು ಸಮಾಧಾನದಿಂದ ಕೂತತೆ ಶಿವಪಾದ ಹೇಳಿದ್ದೆಲ್ಲವನ್ನು ಒಪ್ಪಿಸುತ್ತೇನೆ" ಎಂದ. ಚಿಕ್ಕಮ್ಮಣ್ಣಿಗೆ ತಾನು ಎದ್ದು ನಿಂತದ್ದು ಅಸಹಜವೆನ್ನಿಸಿ ಮತ್ತೆ ಪೀಠದಲ್ಲಿ ಕೂತು "ಹೇಳು ನನ್ನಪ್ಪಾ, ಶಿವಪಾದ ಏನು ಹೇಳಿದರು?"

"ನಿನ್ನಡಿ ಸುಮಾರು ಒಂದು ವರುಷದವನಾಗಿದ್ದಾಗ ಒಬ್ಬ ಕಾಡುಮುದುಕಿ ಬಂದು, ಮಗುವನ್ನ ಶಿವಪಾದನ ಪಾದದಲ್ಲಿಟ್ಟು "ಅನಾಥ ಶಿಶು ಕಾಡಿನಲ್ಲಿ ಸಿಕ್ಕಿತು, ಕಾಪಾಡಿರೆಂದು" ಒಪ್ಪಿಸಿ ಹೋದಳಂತೆ. ಇವನೂ ಒಪ್ಪಿಕೊಂಡ. ಆಮೇಲೆ ಮಗು ಅಮ್ಮನನ್ನು ಜ್ಞಾಪಿಸಿಕೊಂಡು ಅಳತೊಡಗಿದ. "ಅಲ್ಲವೆ? ಅಲ್ಲವೆ?" ಎಂದು ಚಿಕ್ಕಮ್ಮಣ್ಣಿ ಅಳುತ್ತ ಕಣ್ಣೀರು ಸುರಿಸುತ್ತ "ಮುಂದೆ?" ಅಂದಳು. ಕಾಡು ಮುದುಕಿಯನ್ನ ಪುನಃ ಕರೆಸಿ ಕೇಳಿದಾಗ, "ಕೊಲೆ ಮಾಡಲಿಕ್ಕೆಂದು ತಂದ ಕೂಸು ಸ್ವಾಮಿ. ಈತ ಕನಕಪುರಿಯ ರಾಜಕುಮಾರ, ಸವತಿ ಮತ್ಸರದಲ್ಲಿ ಇನ್ನೊಬ್ಬ ರಾಣಿಯ ಅಸೂಯೆಗೆ ಗುರಿಯಾಗಿ ಮಗುವಿಗೆ ಈ ಗತಿ ಬಂದಿದೆ. ನೀವೇನಾದರೂ ದಯಾಮಯ ಅಂತ ವಾಪಸ್ಸು ಕೊಟ್ಟರೆ – ನನ್ನ ಬುಡಕಟ್ಟೂ ನಾಶವಾಗುತ್ತದೆ, ಮಗುವೂ ಸಾಯುತ್ತದೆ. ಇನ್ನು ನಿಮ್ಮಿಷ್ಟ. ಕಾಪಾಡುವುದೇ ಆದರೆ ಗುಟ್ಟು ರಟ್ಟಾಗದಂತೆ ಕಾಪಾಡಬೇಕು." ಎಂದು ಹೇಳಿ ಹೋದಳು. ಮಗುವಿನ ಮುಖ ನೋಡಿಯೇ ನನ್ನ ಗುರುವಿಗೆ ಇವನು ಮುಂದೆ ಕನಕಪುರಿಯ ರಾಜನಾಗಬೇಕಾದವನು ಎಂದು ಗೊತ್ತಾಗಿ ಬೆಳ್ಳಿಗೆ ಕಾಪಾಡು ಎಂದು ಕೊಟ್ಟ. "ಅವನೇ ಈಗ ಇಷ್ಟು ದೊಡ್ಡವನಾಗಿದ್ದಾನೆ" ಎಂದು ಹೇಳಿದ. ಚಿಕ್ಕಮ್ಮಣ್ಣಿಯ ಮುಖವಾಗಲೇ ಕೆಂಪಗಾಗಿ ಮೂಗು ಅಸಹಜವೆಂಬಷ್ಟು ಉಬ್ಬಿ ಸದ್ದು ಮಾಡುತ್ತ ಉಸಿರಾಡುತ್ತಿದ್ದಳು. ವೈದ್ಯನಾದ ಇವನು ಅತಿಯಾದ ಹರ್ಷದಿಂದ ಹೀಗಾಗಿದೆಯೆಂದು ಅಂದುಕೊಳ್ಳುವಷ್ಟರಲ್ಲಿ ಮೂರ್ಛಾಗತಳಾಗಿ ನೆಲಕ್ಕುರುಳಿದಳು. ಚಂಡೀದಾಸ "ಯಾರಲ್ಲಿ, ಒಳಗೆ ಬನ್ನಿ" ಎಂದು ಜೋರಿನಿಂದ ಕೂಗಿದ. ಸೇವಕಿಯರು ಬಂದು ಚಿಕ್ಕಮ್ಮಣ್ಣಿಯನ್ನು ಮೆಲ್ಲಗೆ ಎತ್ತಿ ಮಂಚದ ಮೇಲೊರಗಿಸಿ ಗಾಳಿ ಬೀಸತೊಡಗಿದರು. ಅಷ್ಟರಲ್ಲಿ ಗೌರಿ ರವಿಕೀರ್ತಿಯರೂ ಬಂದು, ಸಹಾಯ ಮಾಡಿದರು.

ಚಂಡೀದಾಸ ನಾಡೀ ನೋಡಿ ದಯಮಾಡಿ ವಿಶ್ರಾಂತಿ ತಗೊಳ್ಳಲಿ -" ಎಂದು ಸೇವಕಿಯರಿಗೆ ಅಲ್ಲೇ ಇದ್ದು ಕಾಲೊತ್ತಲು ಬಿಟ್ಟು ಉಳಿದವರನ್ನು ಹೊರಗೆ ಕರೆತಂದ.

ಮೂವರು ರವಿಯ ಕೋಣೆಗೆ ಹೋದರು. ಅವರ ದುರ್ದೈವಕ್ಕೆ ಮಹಾಪ್ರಭುಗಳು - ಅಂದರೆ ಶಿಖರಸೂರ್ಯ ಬರುತ್ತಿರುವ ಸುದ್ದಿ ಬಂದು. ಈಗ ಅವಸರದಿಂದ ಇಬ್ಬರೂ ತಂತಮ್ಮ ಸಮಸ್ಯೆಗಳನ್ನು ಹೇಳಿ ತಮ್ಮ ಪರವಾಗಿ ತಂದೆಯಲ್ಲಿ ರಾಯಭಾರ ಮಾಡಬೇಕೆಂದು ಬೇಡಿಕೊಂಡರು.

ಚಂಡೀದಾಸನಿಗೆ ವಾಸಂತಿ ರವಿಕೀರ್ತಿಯವರ ವಿಚಾರ ಗೊತ್ತಿತ್ತು. ಈ ಸಲ ಕಂಚಿಯ ಕಡೆಗೆ ಹೋದಾವ ವಿಶ್ವರೂಪಾಚಾರ್ಯ ಭೇಟಿಯಾಗಿ ವಿಷಯ ತಿಳಿಸಿದ್ದ. ರವಿಕೀರ್ತಿ ಚಂಡೀದಾಸನ ಕೈ ಹಿಡಿದುಕೊಂಡು "ನೀವು ನನ್ನ ಸಹಾಯಕ್ಕೆ ಬರಲೇಬೇಕು. ವಾಸಂತಿಯ ಬಗ್ಗೆ ಹೇಳಿ, ನಾನು ಬೇರೆ ಯಾರನ್ನೂ ಪ್ರೀತಿಸಿಲ್ಲ. ಪ್ರೀತಿಸುವುದು ಸಾಧ್ಯವೂ ಇಲ್ಲ. ನಿಮ್ಮ ಬಗ್ಗೆ ಅಪ್ಪನಲ್ಲಿ ತುಂಬ ಪ್ರೀತಿ ಇದೆ. ಸಮಯ ಸಂದರ್ಭ ನೋಡಿಕೊಂಡು ಈ ಮದುವೆಗಾಗಿ ಕಾಯುತ್ತಿದ್ದೇನೆಂದು ನೀವು ಅಪ್ಪನಿಗೆ ತಿಳಿಸಬೇಕು" ಎಂದು ಕೇಳಿಕೊಂಡ. ಚಂಡೀದಾಷನಿಗೆ ರವಿ ಈ ವಿಷಯದಲ್ಲಿ ಬಹಳ ಆಳಕ್ಕಿಳಿದಿರುವ ವಿಚಾರ ಖಾತ್ರಿಯಾಗಿ ಸ್ತಬ್ಧನಾಗಿದ್ದ.

ಚಂಡೀದಾನ ಬರಲು ಹೇಳಿ ಕಳಿಸಿ ಶಿಖರಸೂರ್ಯನೊಬ್ಬನೇ ತನ್ನ ವಿಶಾಲವಾದ ಕೋಣೆಯಲ್ಲಿ ಕಾಯುತ್ತಿದ್ದ. ಅಷ್ಟರಲ್ಲಾಗಲೇ ಚಂಡೀದಾಸ ಬಾಗಿಲಿಗೆ ಬಂದಿದ್ದ. ಚಕ್ರವರ್ತಿಯ ಕೋಣೆಯ ವೈಭವವನ್ನ ಕಣ್ಣಗಲಿಸಿ ನೋಡುತ್ತ, ಮುಖದಲ್ಲಿ ಆನಂದಾಶ್ಚರ್ಯಗಳನ್ನ ಮುಕ್ಕಳಿಸುತ್ತ ಒಳಗೆ ಬಂದ. ಶ್ರೀಮಂತ ಪೀಠಗಳನ್ನುಳ್ಳ ಅತಿಥಿಗಳ ಕೋಣೆಯನ್ನ ದಾಟಿ, ಅದಕ್ಕಿಂತ ದೊಡ್ಡದಾದ ಇನ್ನಷ್ಟು ಶ್ರೀಮಂತ ಪೀಠೋಪಕರಣಗಳು, ಗೆದ್ದು ತಂದ ಬೆಲೆಯುಳ್ಳ ಕಲಾಕೃತಿಗಳಿದ್ದ ಅಭಾಗ್ಯತರ ಕೋಣೆಯಲ್ಲಿ ಹಾದು, ಇಂದ್ರನ ಚಿಕ್ಕ ಸದನದಂಥ ಕೋಣೆಗೆ ಬಂದ.

ಉನ್ನತ ವೈಭವದ, ಕಲ್ಪನೆಗೆ ಮೀರಿದ ಸುಂದರ ಕಲಾಕೃತಿಗಳಿದ್ದ ವಿಶಾಲವಾದ ಕೋಣೆಯನ್ನ ನೋಡಿ ದಿಗಿಲುಗೊಂಡು ಕಣ್ಣಗಲಿಸಿಕೊಂಡು ಚಂಡೀದಾನ ನಿಂತ. ಇವನ ದಿಗಿಲನ್ನು ಆನಂದಿಸುತ್ತ ಶಿಖರಸೂರ್ಯ ನಿಂತ. ಮೂಡಣ ಪಡುವಣ ಗೋಡೆಗಳಲ್ಲಿ ಎರಡೆರಡು ದೊಡ್ಡ ಕಿಡಿಕಿಗಳಿದ್ದು ಒಂದರಾಚೆ ಹೂ ಬಿಟ್ಟ ಗಿಡಮರಗಳೂ ಇನ್ನೊಂದರಾಚೆ ನೇತ್ರಾವತಿ ನದಿಯ ಸುಂದರ ದೃಶ್ಯಗಳೂ ಕಾಣುತ್ತಿದ್ದವು. ಎಲ್ಲ ಕಿಡಿಕಿಗಳಿಗೂ ನಸುಗೆಂಪು ಬಟ್ಟೆಯ ಪರದೆಗಳಿದ್ದು ಅವುಗಳಲ್ಲಿ ಹಸಿರು ಬಳ್ಳಿ, ಅದರ ತುಂಬ ಗಿಣಿ ಮುತ್ತಿಕೊಂಡ ಚಿತ್ರಗಳನ್ನು ಬಿಡಿಸಲಾಗಿತ್ತು. ಮರದ ಪೀಠಗಳಿಗೆ ಹೊಳೆಯುವ ಚಿನ್ನದ ಕಟ್ಟು ಕೂಡಸಲಾಗಿತ್ತು. ಚಕ್ರವರ್ತಿಯ ವಿಶೇಷ ಪೀಠ ತಕ್ಕಡಿ ಹಿಡಿದ ಗರುಡನ ಮೇಲೆ ರಾಜ ಕೂರುವ ಹಾಗೆ ಇತ್ತು. ಗರುಡನ ಕಣ್ಣುಗಳಲ್ಲಿ ನವರತ್ನಗಳನ್ನು ಕೂರಿಸಲಾಗಿದ್ದು ಬಂದವರು ಎಲ್ಲಿ ನಿಂತರೂ ಗರುಡ ನೇರವಾಗಿ ಅವರನ್ನೇ ನೋಡಿದಂತೆ ಕಾಣುತ್ತಿತ್ತು.

ಚಂಡೀದಾಸ ಬಂದೊಡನೆ ಅವನನ್ನು ಎದುರಿನ ಸಣ್ಣ ಪೀಠದಲ್ಲಿ ಕೂರಿಸಿ ಶಿಖರಸೂರ್ಯ ಯೋಚಿಸಿದ. ಹೊಲಸು, ತಲೆಗೂದಲು, ಅಸಡ್ಡಾಳ ಬಟ್ಟೆ ಬರೆಯ ಭಿಕ್ಷುಕ ನಂತಿದ್ದ ಇಂಥವನನ್ನ ಆಪ್ತವಲಯದಲ್ಲಿ ಕೂರಿಸಿಕೊಂಡು ಸೇವಕರೆದುರು ಮಾತಾಡುವುದೆ? ಅಲ್ಲದೆ ಈತ ಅರಮನೆಯ ಶಿಷ್ಟಾಚಾರಗಳನ್ನು ಲೆಕ್ಕಸದವನು. ಹಗುರು ಬಾಯವನು - ಎಂದು ಸಂಕೋಚಗೊಂಡು ಸೇವಕರನ್ನು ಕರೆದು

"ನಾನು ಹೇಳುವತನಕ ಹೊರಗೇ ನಿಂತಿರಿ. ಒಳಗೆ ಯಾರನ್ನೂ ಬಿಡಕೂಡದು" ಎಂದು ತಾಕೀತು ಮಾಡಿ ಸೇವಕರನ್ನು ಹೊರಗಟ್ಟಿ ಶಿಖರಸೂರ್ಯ ಬಂದು ಪೀಠದಲ್ಲಿ ಕೂತು,

"ಈಗ ಹೇಳು, ನಿನ್ನ ಜ್ಯೋತಿಷ್ಯ ಏನು ಹೇಳುತ್ತದೆ" ಎಂದು ನಗಾಡಿದ. ಶಿಖರಸೂರ್ಯನ ಗ್ರಹಗತಿಯಲ್ಲಾದ ಬದಲಾವಣೆಯ ಬಗ್ಗೆ ಚಂಡೀದಾಸ ದಿಗಿಲುಗೊಂಡಿದ್ದ.

“ನೀನು ಏನೇ ಹೇಳು, ಇದೆಲ್ಲ ನಾನು ಊಹಿಸಿದ್ದ ಹಾಗೇ ಆಗಿದೆ. ಕೇಳಿದ್ದರೆ ಮೊದಲೇ ಹೇಳಿರುತ್ತಿದ್ದೆ. ಆದರೆ ಈ ಶಾಸ್ತ್ರದಲ್ಲಿ ನಿನಗೆ ನಂಬಿಕೆ ಇಲ್ಲವಾದ್ದರಿಂದ ಹೇಳಲಿಲ್ಲ”.

“ನೀನು ಬಿಡು, ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ಪೈಕಿ.”

– ಎಂದು ಶಿಖರಸೂರ್ಯ ನಕ್ಕ. ಇವನೂ ನಕ್ಕ. ಆದರೆ ಶಿಖರಸೂರ್ಯನ ಸಾಧನೆಯ ಬಗ್ಗೆ ಅಪಾರ ಮಚ್ಚುಗೆಯಿತ್ತು.

“ನಿನ್ನ ಸಂಕಲ್ಪ, ಸಾಧನೆಗಳ ಮುಂದೆ ನಾವೆಲ್ಲ ತಲೆ ಬಾಗಲೇಬೇಕು. ಮಾರಾಯಾ”

“ಹೇಳು ನಿನ್ನ ಶಿವಪಾದ ಏನಂತಾನೆ ಇದಕ್ಕೆ?”

“ಈ ಮಧ್ಯೆ ಅವನ್ಯಾಕೆ ಬರಬೇಕು? ಬಿಡು ಬಿಡು. ನೀನು ಚಕ್ರವರ್ತಿಯಾದರೆ ಅವನಿಗೆ ಹೊಟ್ಟೆಕಿಚ್ಚಿಲ್ಲವಲ್ಲ. ಸುದ್ದಿ ತಿಳಿದರೆ ಅವನೂ ಹೃತ್ಪೂರ್ವಕ ಸಂತೋಷಪಟ್ಟಾನು.”

“ಹಾಗಾದರೆ ಪಟ್ಟಾಭಿಷೇಕದ ಕಾಲಕ್ಕೆ ಗದ್ದಿಗೆಯಿಂದ ಆಶೀರ್ವಾದವನ್ನಾದರೂ ಕಳಿಸಬಹುದಿತ್ತಲ್ಲ?”

“ಆಮಂತ್ರಣ ಕಳಿಸಿದ್ದೆಯಾ?”

“ಅವನ ಮಠದಲ್ಲಿ ಓದಿದ ಶಿಷ್ಯನಲ್ಲವೆ ನಾನು? ಪ್ರತ್ಯೇಕ ಆಮಂತ್ರಣ ಬೇಕೆ?”

– ಎಂದು ಮೊಂಡು ಹಟ ಮಾಡಿ ಹೇಳಿದ ಸೂರ್ಯ.

“ಹುಡುಗಾಟ ಆಡಬೇಸ. ಕಲ್ಲು ಮಣ್ಣಿನ ದೇವರಿಗೆಲ್ಲಾ ಆಮಂತ್ರಣ ಕಳಿಸಿದವನು ಶಿವಪಾದನಿಗೆ ಕಳಿಸದಿದ್ದರೆ ಹ್ಯಾಗಯ್ಯಾ? ಕಳಿಸಿದ್ದರೆ ಖಂಡಿತ ಬಂದಿರೋನು.”

ಕೊನೆಗೆ ಶಿಖರಸೂರ್ಯನೇ ಸಮಾಧಾನ ಮಾಡುತ್ತ ಹೇಳಿದ:

“ಆತ ಇಲ್ಲಿಗೆ ಬರುವುದು ನನಗೆ ಬೇಕಿರಲಿಲ್ಲ.”

“ಹಾಗಿದ್ದರೆ ಅವನ್ಯಾಕಿ ಈ ಕಡೆ ಸುಳಿದಾನು?”

“ಹೇಳು ಯಾವಾಗ ಬಂದೆ? ಎಲ್ಲಿಂದ ಬಂದೆ? ನೀನಿರೋ ಸ್ಥಳ ಗೊತ್ತಾಗಿದ್ದರೆ ಆಮಂತ್ರಣ ಕಳಿಸುತ್ತಿದ್ದೆ. ನೀನೋ ಅವಧೂತ.”

ಇಷ್ಟು ಹೇಳಿದ್ದೇ ಆಯ್ತು. ಈತನಕ ಅದು ಮಿಟ್ಟ ತನ್ನ ಸಂತೋಷ ಅಭಿಮಾನಗಳನ್ನೆಲ್ಲ ಹೊರಚೆಲ್ಲುತ್ತ ಎರಡು ಹಸ್ತಗಳನ್ನ ಚಾಚಿ ಹೇಳಿದ:

“ಆಮಂತ್ರಣವಿಲ್ಲದಿದ್ದರೂ ಬಂದು ನಿನ್ನ ಪಟ್ಟಾಭಿಷೇಕವನ್ನ ಕಣ್ಣಾರೆ ಕಂಡು ಸಂತೋಷಪಟ್ಟೆನಯ್ಯಾ. ದಯಮಾಡಿ ಕೋ ಮಾಡಿಕೋಬೇಡ: ವಿದ್ಯುಲ್ಲತೆಯನ್ನೂ ನಾನೇ ಕರೆತಂದಿದ್ದೆ….”

ತಕ್ಷಣ ಶಿಖರಸೂರ್ಯನ ಮುಖ ಕಪ್ಪಾಗಿ ಕಿವಿಗೂದಲು ನಿಮಿರಿದವು. ಇದು ಗೊತ್ತಾಗಿ ಅಷ್ಟೇ ವೇಗವಾಗಿ ಚಂಡೀದಾಸ ಮತ್ತೆ ಹೇಳಿದ:

“ನಿನ್ನ ವೈಭವವನ್ನು ನೋಡಲೇಬೇಕೆಂದು ಮಕ್ಕಳ ಹಾಗೆ ಹಟ ಮಾಡಿದಳಪ್ಪ. ದೂರದಿಂದಲೇ ನೋಡಿ ಆನಂದದ ಕಣ್ಣೀರು ಸುರಿಸಿ ನಲಿದಾಡಿದಳು. !”

“ಮಹಾರಾಣಿಯಿಂದೇನಾದರೂ ಬಿರುಮಾತು ಬಂದುವ?

“ಆಕೆ ಯಾರ ಕಣ್ಣಿಗೂ ಬೀಳಲಿಲ್ಲ ಮಾರಾಯಾ. ಬಂಡೆಯ ಪಟ್ಟಾಭಿಷೇಕದ ವೈಭವ ಸಡಗರ ತೋರಿಸಿ ವಾಪಸ್ಸು ಕಳಿಸಿದ.”

ಸೂರ್ಯನ ಮುಖ ಈಗ ಹಗುರಾಗಿ ಮೊದಲಿನ ಬಣ್ಣ ಬಂತು. ಮತ್ತೆ ಚಂಡೀದಾಸನೇ ಮುಂದುವರಿಸಿದ:

“…. ನಿನ್ನ ಮಕ್ಕಳು ರವಿಕೀರ್ತಿ, ಗೌರಿ - ಮಕ್ಕಳನ್ನು ನೋಡಿ ಎಷ್ಟು ದೊಡ್ಡವರಾಗಿದ್ದಾರೆಂದು ಪರಮಾನಂದಗೊಂಡಳು. ಗೌರಿಯ ಸೌಭಾಗ್ಯದ ವಿಷಯ ಕೇಳಿಯಂತೂ…. ?

ಎಂದು ಹೇಳಿ ಮುಂದಿನದನ್ನು ಹೇಳಲು ಅವಸರ ಮಾಡಬಾರದೆಂದು ತಡೆದು ಪ್ರತಿಕ್ರೀಯೆ ತಿಳಿಯಲು ಮುಖ ನೋಡಿದ.

“ಗೌರಿಯ ಸೌಭಾಗ್ಯವೆಂಥದಯ್ಯಾ? ಮಾತು ನುಂಗಬೇಡ. ಅದೇನು ಹೇಳು.”

“ನೀನಿಲ್ಲದಾಗ ನಿನ್ನಡಿ ಬಿಳಿಗಿರಿಗೆ ಬಂದ ಸಮಾಚಾರ ಗೊತ್ತಿಲ್ಲವೆ?”

“ಗೊತ್ತು. ಇನ್ನೊಮ್ಮೆ ವಿವರವಾಗಿ ಹೇಳು.”

– ಎಂದು ಆಶ್ಚರ್ಯ ನಟಿಸುತ್ತ ಕೇಳಿದ.,

ನಿನ್ನಡಿ ಕನ್ಯಾರ್ಥಿಯಾಗಿ ಹೊರಟದ್ದು, ತನ್ನ ವಿನಂತಿಯಿಂದಾಗಿ ಬಿಳಿಗಿರಿಗೂ ಬಂದದ್ದು, ಕನ್ಯೆಯ ಆಯ್ಕೆಗೆ ಶಿವಪಾದ ನಿಗದಿಪಡಿಸಿದ ಪರೀಕ್ಷೆ, ನಿನ್ನಡಿಯನ್ನೇ ತಬ್ಬಿಬ್ಬುಗೊಳಿಸಿದ ಗೌರಿಯ ಉತ್ತರಗಳನ್ನು ಹೇಳುವ ಹೊತ್ತಿವೆ ಸೂರ್ಯನ ಮುಖ ಕಪ್ಪಾಗಿ, ಕಿವಿಯ ಕೂದಲು ನಿಮಿರಿ ನಿಂತಿದ್ದವು. ಅಹಿತಕರ ಸುದ್ದಿ ಕಿವಿಯ ಮೇಲೆ ಬಿದ್ದಂತೆ ಮುಖ ಸಿಂಡರಿಸಿಕೊಂಡಿದ್ದ. ಚಂಡೀದಾನ ಮಾತನ್ನು ಇನ್ನಷ್ಟು ಮೃದುಗೊಳಿಸಿ ಸೌಜನ್ಯದಿಂದಲೇ ಹೇಳಿದ:

“ಆಗಬಾರಗದ್ದೇನೂ ಆಗಿಲ್ಲ ಮಿತ್ರಾ…. ಮನೆಯಲ್ಲಿ ಕನ್ಯೆ ಇದ್ದಾಗ ಕನ್ಯಾರ್ಥಿಯಾಗಿ ಬಂದವರಿಗೆ ತೋರಿಸಬೇಕಾದ್ದು ಪದ್ಧತಿ, ಅಲ್ಲವೊ? ಇಷ್ಟಾಗಿ ನಿನ್ನಡಿಯಾಗಲಿ, ಶಿವಪಾದನಾಗಲಿ ನಿನಗೆ ಅಪರಿಚಿತರಲ್ಲ. ಅಲ್ಲದೆ ಶಿವಪಾದನ ತಿಳುವಳಿಕೆಯಿಂದ ಇದೆಲ್ಲ ನಡೆಯಲಿಲ್ಲ. ಗೌರಿಯನ್ನು ತೋರಿಸಲು ನಾನೇ ಮುಂದಾಗಿ ಮನಸ್ಸು ಮಾಡಿದ್ದು. ಅದೇ ತಪ್ಪೆಂದಾದರೆ ನಾನು ಕ್ಷಮೆ ಕೋರುತ್ತೇನೆ”.

ಈಗ ಸೂರ್ಯ ಸ್ವಲ್ಪ ತಣ್ಣಗಾದ.

“ನೀನು ಮಾಡಿದ್ದು ತಪ್ಪು ಅಂತಲ್ಲ, ಮನೆಯಲ್ಲಿ ಹಿರಿಯರು ಅಂತ ಇರುತ್ತಾರಲ್ಲ. ಚಿಕ್ಕವರು ದೊಡ್ಡವರು ಹಾಕಿದ ಗೆರೆ ಮೀರಬಾರದಲ್ಲ! ಮುಂದೆ ಏನಾದರೂ ತಪ್ಪು ಎಡವಟ್ಟುಗಳಾದರೆ ಯಾರು ಜವಾಬ್ದಾರಿ?”

ಅವನ ಮಾತಿನಲ್ಲಿನ್ನೂ ಒಗರಿತ್ತು. ಜಗಳಗಂಟುತನಕ ಸಿಡುಕಿತ್ತು.

“ಇದ್ಯಾವುದೂ ಕದ್ದು ಮುಚ್ಚಿ ನಡೆದದ್ದಲ್ಲ ಮಾರಾಯ, ಚಿಕ್ಕಮ್ಮಣ್ಣಿಯ ನೇತೃತ್ವದಲ್ಲೇ ನಡೆದದ್ದು. ಈಗ ಹೇಳಪ್ಪ - ತಪ್ಪು, ಎಡವಟ್ಟುಗಳೇನಿವೆ ಇದರಲ್ಲಿ?”

ಸೂರ್ಯ ಹಿಂದಕ್ಕೆ ಕೈ ಕಟ್ಟಿಕೊಂಡು, ಹುಬ್ಬು ಗಂಟಿಕ್ಕಿ, ಕಣ್ಣುಗಳನ್ನು ಕಿರಿದುಗೊಳಿಸಿ ಮೂಲೆಯಿಂದ ಮೂಲೆಗೆ ಹೆಜ್ಜೆ ಹಾಕುತ್ತ ಆಲೋಚಿಸಿ,

"ಆಯಿತಲ್ಲ; ಇನ್ನಿದನ್ನ ಮರೆತುಬಿಡು."

ಎಂದು ಹೇಳಿ ಎರಡೂ ಕೈ ಹಸ್ತದಲ್ಲಿ ಹಸ್ತ ಸೇರಿಸಿ ಅದರ ಮೇಲೆ ಗದ್ದ ಊರಿ ಕೂತ. ಚಂಡೀದಾಸನಿಗೆ ನಿರಾಸೆಯಾಯಿತು.

"ಮರೆತುಬಿಡು ಅಂದರೆ? ಗೌರಿ ಮತ್ತು ನಿನ್ನಡಿ ಪರಸ್ಪರ ಒಪ್ಪಿದ್ದಾರಲ್ಲ? ಅದಕ್ಕೇನು ಹೇಳುತ್ತಿ?"

"ಅವರು ಒಪ್ಪಿಕೊಂಡಾಗಲೇ ಮದುವೆ ಆಗಿ ಹೋಗಿದ್ದರೆ ಏನಾಗುತ್ತಿತ್ತೋ ನಮಗೆ ಗೊತ್ತಿಲ್ಲ. ಸಧ್ಯ, ಮದುವೆ ಆಗಿಲ್ಲ. ಇನ್ನು ಮೇಲೆ ಆಗುವಂತಿಲ್ಲ. ಅದಕ್ಕೇ ಹೇಳಿದೆ; ಅಲ್ಲಿಗದನ್ನ ಮರೆತುಬಿಡು ಅಂತ, "

ಗೌರಿಯ ಭಾವನೆಗಳನ್ನು ತಿಳಿಹೇಳಲಿಕ್ಕೆ, ಅವಳ ಪರವಾಗಿ ವಾದ ಮಾಡಲಿಕ್ಕೆ ಚಂಡೀದಾಸ ಇನ್ನೂ ಸಿದ್ಧನಿದ್ದ. ನಿನ್ನಡಿ ಆಗಲೇ ಗೌರಿಯನ್ನು ತಮ್ಮ ಮದುವೆ ಪದ್ಧತಿಯಂತೆ ಕಾಡಿಗೆ ಕರೆದುಕೊಂಡು ಹೋದದ್ದನ್ನು ಹೇಳಬೇಕೆಂದಿದ್ದ. ಆದರೆ ಶಿಖರಸೂರ್ಯನ ಕಡ್ಡೀ ಮುರಿದು ತುಂಡು ಮಾಡಿದಂಥ ನಿಷ್ಠುರ ಮಾತುಗಳನ್ನ ಎದುರಿಸಲು ಸಿದ್ಧನಿರಲಿಲ್ಲ. ಗೌರಿಗೆ ನಿನ್ನಡಿಗಿಂತ ಉತ್ತಮ ವರ ಪ್ರಪಂಚದಲ್ಲೇ ಇಲ್ಲವೆಂದು ಒತ್ತುಕೊಟ್ಟು ಹೇಳಿದ. ಶಿಖರಸೂರ್ಯ ಇನ್ನೊಮ್ಮೆ ಇನ್ನಷ್ಟು ದೃಢವಾಗಿ ಹೇಳಿದ: "ಆಗೋದಿಲ್ಲ" ಎಂದು.

"ಯಾಕೆ ಅಂತ ಕೇಳಬೌದೋ?

"ಯಾಕೆಂದರೆ ಕೇಳು: ನಾವು ಒಂದು ಕಡಿಮೆ ಇಪ್ಪತ್ತು ರಾಜ್ಯಗಳ ಚಕ್ರವರ್ತಿಗಳು, ಅವನು ಒಂದು ಬುಡಕಟ್ಟಿನ ಹದಿನಾಲ್ಕು ಒಡೆಯ, ಗೌರಿ ಈಗ ಚಕ್ರವರ್ತಿಯ ಮಗಳು; ರಾಜಕುಮಾರಿಯ ನೆಂಟಸ್ತಿಕೆ ಸಮಾನರಲ್ಲಿರಬೇಕು. ಇಂತಿರುವಲ್ಲಿ ಬೆಟ್ಟ ಮತ್ತು ದಿನ್ನೆಗಳ ಮಧ್ಯೆ ನೆಂಟಸ್ತಿಕೆ ಸರಿಯಲ್ಲ. ನಿನಗಿಷ್ಟೂ ಅರ್ಥವಾಗುವುದಿಲ್ಲವೆ ವೈದ್ಯನೆ?"

ಶಿಖರಸೂರ್ಯನ ಈ ಹೊಸ ಮುಖದ ದರ್ಶನ ಅವನಿಗಾಗಿರಲಿಲ್ಲ. ಅಪರಿಚಿತನ ಜೊತೆ ಸಲಿಗೆಯಿಂದ ಮಾತಾಡಿ ಮುಖಭಂಗವಾದಂತೆ ಮುಖ ಸಣ್ಣದು ಮಾಡಿದ. ಅರ್ಧ ತನ್ನ ಬಗ್ಗೆ ಇನ್ನರ್ಧ ಶಿಖರಸೂರ್ಯನ ಬಗೆಗಿನ ಕೋಪದಿಂದ ಕೇಳಿದ:

"ಅಂದರೆ ನಾನೀಗ ಮಾತಾಡ್ತಿರೋದು ಮಹಾಪ್ರಭುಗಳ ಜೊತೆಗೆ, ಸ್ನೇಹಿತನ ಜೊತೆಗಲ್ಲ ಎಂದು ನಿನ್ನ ಮಾಥಿನ ಇಂಗಿತವೊ?"

"ನೀನು ನಿನ್ನ ಹಾಗೂ ನನ್ನ ಸ್ಥಾನಮಾನಗಳನ್ನು ಸರಿಯಾಗಿ ತಿಳಿದುಕೊಳ್ಳುವುದಾದಲ್ಲಿ ಖಂಡಿತ ಹೌದು."

ಇಬ್ಬರೂ ಪರಸ್ಪರ ಎದುರುಬದುರು ಬಂದು ನೇರ ದೃಷ್ಟಿಗಳ ಬದಲಾಯಿಸಿದರು. ಶಿಖರಸೂರ್ಯನ ಹಿನ್ನಲೆಯ ಬೆಳಕಿನಿಂದಾಗಿ ಕಿವಿಯ ಕೂದಲ ತುದಿಯಿಂದ ನೀಲಿ ಕಿಡಿ ಹಾರಿದಂತಾಯಿತು. ಗೌರಿಯ ನೆನಪಾಯಿತು. ಇದರಲ್ಲಿ ಗೌರಿಯ ತಪ್ಪೇನಿದೆ? ಇಲ್ಲಿಗೆ ತಂದೆಯನ್ನು ಒಪ್ಪಿಸೆಂದು ಅಂಗಲಾಚಿ ಕೇಳಿಕೊಂಡಳು. ಚಿಕ್ಕಮ್ಮಣ್ಣಿಗೂ ಈ ಸಂಬಂಧ ಇಷ್ಟ. ಇವನ ಅಹಂಕಾರದಲ್ಲಿ ಮಗಳ ಮನಸ್ಸು ಯಾಕೆ ನೋಯಬೇಕು? ಈಗ ನಿಜವನ್ನು ಹೇಳಲೇಬೇಕೆಂದು ಗಟ್ಟಿ ಮನಸ್ಸು ಮಾಡಿ ಹೇಳಿದ:

"ಸ್ವಾಮಿ, ನಾನು ಶಿವಾಪುರದ ಶಿವಪಾದನ ಶಿಷ್ಯನಾದ್ದರಿಂದ, ನಮ್ಮ ಪದ್ಧತಿಯಲ್ಲಿ ಬಹುವಚನವಿಲ್ಲವಾದ್ದರಿಂದ ಏಕವಚನದಲ್ಲೇ ಮಾತಾಡುತ್ತೇನೆ, ಕೇಳುವುದಾಗಬೇಕು: ನಿನ್ನಡಿ ಹುಟ್ಟಿನಲ್ಲಿ ಬುಡಕಟ್ಟಿನ ಒಡೆಯನಲ್ಲ. ನಿನಗೂ ಗೊತ್ತಿದೆ: ಕನಕಪುರಿಯ ಆಳಿದ ಮಹಾರಾಣಿಯೇ ಸವತಿ ಚಿಕ್ಕಮ್ಮಣ್ಣಿಯ ಮಗನಿಗೆ ರಾಜ್ಯ ದಕ್ಕಬಾರದೆಂದು ತರುಣಚಂದ್ರನನ್ನ ಕದ್ದು ಕೊಲೆ ಮಾಡಲು ಕಳಿಸಿದ್ದಳು.

ಶಿವಪಾದ ಆ ಹುಡುಗನನ್ನು ಕಾಪಾಡಿ ಬೆಳೆಸಿ ನಿನ್ನಡಿ ಮಾಡಿದ್ದಾನೆ. ಆ ತರುಣಚಂದ್ರನೇ ನಿನ್ನಡಿ, ಕನಕಪುರಿಯ ಪಟ್ಟಕ್ಕೆ ಹಕ್ಕಿನ ಅಧಿಕಾರಿ!"

"ಇದು ನೀನು ಹೇಳು ಕಟ್ಟುಕಥೆ".

"ಸ್ವಯಂ ಶಿವಪಾದನೇ ಹೇಳಿದ್ದನ್ನ ಹೇಳಿದೆ. ನಿನಗೇ ಗೊತ್ತಿದೆ ಶಿವಪಾದ ವೈರಿಗೂ ಸುಳ್ಳು ಹೇಳುವುದಿಲ್ಲ."

"ಅವನೂ ಸುಳ್ಳು ಹೇಳಬಹುದು."

"ಅದು ನಿನ್ನ ದುರ್ದೈವ. ನೀನು ಕೇಳು, ಬಿಡು ಇನ್ನೊಂದು ಮಾತನ್ನ ಹೇಳುತ್ತೇನೆ: ಸರಿಯಾಗಿ ಕೇಳು: ಕಂಚಿಯ ಮಹಾನ್ ಶಿಲ್ಪಿ ವಿಶ್ವರೂಪಾಚಾರ್ಯನ ಹೆಸರನ್ನು ನೀನೂ ಕೇಳಿರಬಹುದು. ಅವನ ಮಗಳು ವಾಸಂತಿಯನ್ನ ನಿನ್ನ ಮಗ ಇಷ್ಟಪಟ್ಟಿದ್ದಾನೆ. ಶಿವದೇವಾಲಯದಲ್ಲಿ ಮದುವೆ ಕೂಡ ಆಗಿದ್ದಾನೆ. ಗಂಡು ಮಗುವೂ ಇದೆ. ರವಿಕೀರ್ತಿ ವಾಸಂತಿಯರ ಜೋಡಿ, ಗೌರಿ ಮತ್ತು ನಿನ್ನಡಿಯ ಜೋಡಿ ಶಿವಸಂಕಲ್ಪ. ಈ ಜೋಡಿಗಳನ್ನ ಮುರಿಯಲು ಪ್ರಯತ್ನಪಟ್ಟೆಯೋ - ನೀನು ಕೆಟ್ಟೆ, ಬರ್ತೀನಿ!"

ಎಂದು ನಿಷ್ಠುರವಾಗಿ ಮೊಳಗುವ ನುಡಿಗಳ ಗುಡುಗಿ ರಭಸದಿಂದ ಹೊರಟ. ತಕ್ಷಣ ಸೂರ್ಯ ಖಡ್ಗಕ್ಕೆ ಕೈ ಹಾಕಿದವನು ಬಿಟ್ಟು, "ನಿಲ್ಲು" ಎಂದು ಹೇಳಿ ಚಂಡೀದಾಸನ ಮುಂದೆ ಬಂದು ಅಡ್ಡ ನಿಂತು,

"ಇದು ಚಿಕ್ಕಮ್ಮಣ್ಣಿಗೆ ಗೊತ್ತೊ?" ಅಂದ.

"ಹೌದು."

"ಯಾರು ಹೇಳಿದರು?"

"ನಾನೇ"

"ಯಾವ ದುರುದ್ದೇಶದಿಂದ ಹೇಳಿದೆ"

– ಎಂದು ಕಿರಿಚಿದ. ಆಶ್ಚರ್ಯವಾಗಿ ಚಂಡೀದಾಸ ಅವನ ಮುಖ ನೋಡಿ ಒಂದು ಹೆಜ್ಜೆ ಮುಂದೆ ಹೋಗಿ ಕಣ್ಣಲ್ಲಿ ಕಣ್ಣು ನೆಟ್ಟು:

"ಯಾವ ದುರುದ್ದೇಶವೂ ಇಲ್ಲ ಸ್ವಾಮಿ, ಚಿಕ್ಕಮ್ಮಣ್ಣಿಯೇ ನಿನ್ನಡಿಯನ್ನ ನೋಡಿದೊಡನೆ ಅವನ ಆರುಬೆರಳು, ನಿನ್ನ ಮಡದಿಯ ಹೋಲಿಕೆಯನ್ನ ನೋಡಿ ಅನುಮಾನಗೊಂಡು ಅವನ ಮೂಲಕ ಬಗ್ಗೆ ಶಿವಪಾದನನ್ನು ಕೇಳಲು ಹೇಳಿದ್ದಳು. ಕೇಳಿ ಬಂದು ಹೇಳಿದೆ; ಈಗ ನಿನಗೂ ಹೇಳಿದೆ. ಇದು ಸತ್ಯ, ಸತ್ಯ. ಇಗೋ ಹೊರಟೆ. ನನ್ನನ್ನ ತಡೆಯಬೇಡ."

ತಕ್ಷಣ ಶಿಖರಸೂರ್ಯ ಖಡ್ಗ ಹಿರಿದು ಒಂದು ಹೆಜ್ಜೆ ಹಿಂದೆ ಸರಿದು ಅದರ ತುದಿಯನ್ನು ಅವನೆದೆಗೆ ತಾಗಿಸಿ ನಿಂತು "ನಾನು ಹೇಳುವತನಕ ನೀನು ಇಲ್ಲಿಂದ ಕಾಲು ಕೀಳಕೂಡದು, " ಅಂದ.

"ಅಯ್ಯಾ ಚಿನ್ನಮುತ್ತನೇ, ನನ್ನನ್ನು ತಡೆಯಬಲ್ಲವರು ಈಗ ಇಬ್ಬರೇ. ಒಬ್ಬ ಶಿವಪಾದ ಇನ್ನೊಬ್ಬ ನಿನ್ನಡಿ. ಚಕ್ರವರ್ತಿಯಾಗುವ ಮೊದಲು ನಿನಗೂ ಆ ಅಧಿಕಾರವಿತ್ತು. ಈಗ ಕಳಕೊಂಡೆ."

ಎಂದು ಅವನ ಖಡ್ಗವನ್ನ ಎಡಗೈಯಿಂದ ಪಕ್ಕಕ್ಕೆ ಸರಿಸಿ ಹೊರಟುಹೋದ. ಒಂದೆರಡಲ್ಲ ಏಕಕಾಲದಲ್ಲಿ ಆದ ಅನೇಕ ಆಘಾತಗಳಿಂದ ತತ್ತರಿಸಿ, ಕಾಲು ಸೋತು ಶಿಖರಸೂರ್ಯ ಮೆಲ್ಲಗೆ ಹೋಗಿ ಪೀಠದ ಮೇಲೆ ಕುಸಿದ. ಪಡುವಣದಲ್ಲಿ ಸೂರ್ಯ ಅಸ್ತಮಿಸಿದ.

ನಾನು ಹೇಳುವತನಕ ಬರಬೇಡಿರೆಂದು ಸೇವಕರಿಗೆ ಹೇಳಿದ್ದರಿಂದ ಯಾರೂ ಒಳಗೆ ಬರಲಿಲ್ಲ. ನುಗ್ಗಿದ ಅಧೋಲೋಕದ ಕಗ್ಗತ್ತಲಲ್ಲಿ ಒಬ್ಬನೇ ಕೂತ.

ಅಂದೇ ಮಲಗುವ ಮುನ್ನ ಚಿಕ್ಕಮ್ಮಣ್ಣಿಯ ಆರೋಗ್ಯ ವಿಚಾರಿಸಿ ಮದ್ದು ಕೊಟ್ಟ. ಅಂದಿನಿಂದ ಅವಳು ಕೂತಕೂತಲ್ಲೇ ತೂಕಡಿಸಲಿಕ್ಕೆ ಸುರು ಮಾಡಿದಳು. ದೊಡ್ಡ ಆಘಾತದಿಂದ ಹೀಗಾಗಿದೆಯೆಂದು ಮಡದಿ ಮಕ್ಕಳಿಗೆ ಹೇಳಿ ನಂಬಿಸಿದ!

## ಐವತ್ತಾರು

ಶಿಖರಸೂರ್ಯ ಇಡೀ ಎರಡು ದಿನ ಯಾರೊಂದಿಗೂ ಮಾತಾಡಲಿಲ್ಲ. ಚಂಡೀದಾಸ ಹೋಗಿದ್ದ. ಹೋಗುವ ಮುನ್ನ ಶಿಖರಸೂರ್ಯನೊಂದಿಗಿನ ಭೇಟಿಯಲ್ಲಿ ಏನೇನು ನಡೆಯಿತೆಂದು ರವಿ ಮತ್ತು ಗೌರಿಗೆ ವಿವರವಾಗಿ ಹೇಳಿ ಹೋಗಿದ್ದ. ಅವರಿಬ್ಬರೂ ಸಂದರ್ಭವನ್ನು ಅಳತೆ ಮಾಡುತ್ತಿದ್ದರು. ರವಿಕೀರ್ತಿ ವಾಸಂತಿಯ ಬಗ್ಗೆ ತಂದೆಗೆ ಹೇಳಲು ಸದವಕಾಶಕ್ಕಾಗಿ ಕಾಯುತ್ತಿದ್ದ.

ರವಿಕೀರ್ತಿಯೂ ತನ್ನ ಪಾಲಿನ ಯುದ್ಧವನ್ನು ಹುರುಪಿನಿಂದ ಮಾಡಿ ಹೆಸರು ಗಳಿಸಿದ್ದ. ಯಾವುದೋ ಒಂದು ಸಂತೋಷದ ಗಳಿಗೆಯಲ್ಲಿ ಸಹಜವಾಗಿಯೇ ತನ್ನ ಬಗ್ಗೆ ಶಿಖರಸೂರ್ಯನಲ್ಲಿ ಅಭಿಮಾನ ಮೂಡಿ ತನ್ನಾಸೆಯನ್ನ ಈಡೇರಿಸುವನೆಂದು ರವಿ ನಂಬಿದ್ದ. ತನ್ನ ಪರವಾಗಿ ತಂದೆಗೆ ಹೇಳಲು ಚಿಕ್ಕಮ್ಮಣ್ಣಿ ಅಥವಾ ತಾಯಿಯ ಸಹಾಯ ಕೇಳಬಹುದಿತ್ತು. ಇದ್ದಾಗ ಶಿಖರಸೂರ್ಯನಿಗೆ ಹೆದರುತ್ತಿದ್ದಳು. ಗೌರಿಯ ಬಗ್ಗೆ ರವಿಗಿದ್ದದ್ದು ಸ್ನಿಗ್ಧವಾತ್ಸಲ್ಯ. ತಂದೆ ಬಿರುಸಾಗಿ ಮಾತಾಡಿದರೇ ತಂಗಿಯ ಮನಸ್ಸು ನೋಯುತ್ತದೆಂದು ಅವಳ ಬಗ್ಗೆಯೂ ಹಳಹಳಿಸಿದ ಹ್ಯಾಗೂ ತಂದೆಗೆ ವಿಷಯ ಗೊತ್ತಾಗಿದೆ ಅವನೇ ಕರೆಸಬಹುದೆದು ಕಾದ.

ಇತ್ತ ಚಂಡೀದಾಸ ಬಂದು ಹೋಗಾಗಿನಿಂದ ಶಿಖರಸೂರ್ಯ ವ್ಯಗ್ರನಾಗಿದ್ದ. ಚಂಡಿದಾಸ ಅವನಿಗೆ ಮಾಗಲಾಗದ ಗಾಯ ಮಾಡಿದ್ದ. 'ಚಿನ್ನಮುತ್ತಾ' ಎಂದು ಕರೆದನಾಗಿ ಅವನಿಗೂ ಇಡೀ ಶಿವಾಪುರಕ್ಕೂ ತಾನ್ಯಾರೆಂದು ಗೊತ್ತಾಗಿದೆ ಎಂದಾಯಿತು. ಸುಮಾರು ವರ್ಷಗಳಿಂದ ಜೋಪಾನವಾಗಿ ಬಚ್ಚಿಟ್ಟ ಸಂಗತಿ ಈ ಪರಿ ಅಗ್ಗವಾಗಿ ಬಹಿರಂಗವಾದೀತೆಂದು ಅವನು ಲೆಕ್ಕ ಹಾಕಿರಲಿಲ್ಲ. ಶಿವಪಾದನಿಗೆ ತಾನು ಹೆಸರು ಬದಲು ಮಾಡಿದ್ದು ಕೂಡ ಗೊತ್ತಿತ್ತು ಎಂದ ಹಾಗಾಯಿತು. ಆದರೂ ಆತ ತೋರಿಸಿಕೊಳ್ಳದೆ ತನ್ನನ್ನು ಗಮನಿಸುತ್ತಿದ್ದ ಎಂದಾಯಿತು.

ಎರಡನೇ ಸಂಗತಿ ಎಂದರೆ ರವಿ ಕಂಚಿಯಲ್ಲಿ ವಿಶ್ವರೂಪಾಚಾರ್ಯನ ಹುಡುಗಿಯನ್ನು ಪ್ರೀತಿಸಿದ್ದು, 'ಒಬ್ಬನ ಜೀವನ ನಿರ್ಣಾಯಕ ಹಂತಕ್ಕೆ ಬಂದಾಗ ಪ್ರೌಢವಾಗಿ ವಿವೇಕದಿಂದ ವರ್ತಿಸಬೇಕೇ ಶಿವಾಯಿ ಹುಡುಗಾಟವಾಡಬಾರದು. ವಿದ್ಯಾರ್ಜನೆಗಾಗಿ ಕಂಚಿಗೆ ಕಳಿಸಿದರೆ ವಿದ್ಯೆ ಗಳಿಸಬೇಕೋ? ಪ್ರೀತಿ ಗಳಿಸಬೇಕೋ? ಇಂಥ ಮೂರ್ಖತನಕ್ಕೆ ಏನಾದರೂ ಅರ್ಥವಿದೆಯೇ?' ಆದರೆ ಅಸಮಾಧಾನವನ್ನು ತೋರಿಸಿಕೊಳ್ಳಲೇ ಇಲ್ಲ.

ಒಂದು ದಿನ ರವಿ ಮಧ್ಯಾಃನ ಶಿಖರಸೂರ್ಯನಲ್ಲಿಗೆ ಬಂದು ವಾಸಂತಿಯ ವಿಷಯವನ್ನೆತ್ತಿ ವಿಶ್ವರೂಪಾಚಾರ್ಯರು, ಅವರಿಗಿದ್ದ ಪ್ರಭಾವವನ್ನು ಹೇಳಿ ವಾಸಂತಿಯ ಗುಣಶೀಲಗಳನ್ನು ಹೊಗಳಿ ತಾನು ಅವಳನ್ನು ಮದುವೆಯಾಗುವುದಾಗಿ ಹೇಳಿದ. ಮಗುವಾದ ಸಂಗತಿಯನ್ನು ಮಾತ್ರ ಹೇಳಲಿಲ್ಲ. ಮನಸ್ಸು ಮಾಡಿದರೆ ರವಿ ಕೂಡ ತನ್ನಷ್ಟೇ ಕಠಿಣವಾದ ನಿಲುವು ತಳೆಯಬಲ್ಲನೆಂದು ಗೊತ್ತಿದ್ದುದರಿಂದ ಶಿಖರಸೂರ್ಯ ಯಾವುದೇ ವಿಧದಲ್ಲಿ ಅವನ ಮನಸ್ಸು ವ್ಯಗ್ರವಾಗದಂತೆ ಜಾಣತನದಿಂದ ಸನ್ನಿವೇಶವನ್ನು ನಿಭಾಯಿಸಬೇಕೆಂದು ತೀರ್ಮಾನಿಸಿದ. ಕೋಪವನ್ನು ನಿಯಂತ್ರಿಸಿಕೊಂಡು ಹಿರಿತನದ ಹುಸಿಗೋಪವನ್ನು ಅಭಿನಯಿಸುತ್ತ,

“ಅಲ್ಲಯ್ಯಾ ಯುವರಾಜ, ಹೇಳೋರು ಕೇಳೋರು ನಿನಗ್ಯಾರೂ ಇಲ್ಲವಾ? ನಿನ್ನ ಮಿತ್ರ ಕಂಚಿಯ ಹಾಲಿ ಚಕ್ರವರ್ತಿ ಶ್ವೇತಕೇತು ಪರಾಕ್ರಮಶಾಲಿ, ನಿನ್ನ ಖಾಸಾಸ್ನೇಹಿತ. ಇಂತಿರುವಲ್ಲಿ ಇದನ್ನೆಲ್ಲ ಬಳಸಿಕೊಂಡು ನೀನೂ ಚಕ್ರವರ್ತಿಯಾಗುವುದು ಜಾಣತನವೋ? ಪ್ರೇಮ ಪ್ರೀಟತಿ ಅಂತ ಶಿಲ್ಪಿಯ ಶಾಲೆಯಲ್ಲಿ ಉಳಿ ಚಾಣ ಕಾಸಲು ತಿದಿ ಊದುವುದು ಜಾಣತನವೋ?”

- ಎಂದು ಹೇಳಿ ಕಪಟನಗೆಯಿಂದ ಮಗನ ಮುಖವನ್ನೇ ಅಧ್ಯಯನ ಮಾಡಿ, ಈ ಸಂಬಂಧದಲ್ಲಿ ತನಗೂ ಆಸಕ್ತಿಯಿದೆ ಎಂದು ತೋರಿಸಿಕೊಳ್ಳುವಂತೆ ವಾಸಂತಿಯ ಬಗ್ಗೆ, ಅವಳ ತಂದೆಯ ಬಗ್ಗೆ ಅನೇಕ ನಿರೀಕ್ಷಿತ, ಆದರೆ ರವಿಗೆ ಸಂತೋಷವಾಗುವಂಥ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡ ಮತ್ತು ಈ ಉತ್ತರಗಳಿಂದ ಸಂತುಷ್ಟನಾದಂತೆಯೂ ಅಭಿನಯಿಸಿದ. ಆಮೇಲೆ ತಂತಾನೇ ಗೊಣಗಿಕೊಂಡಂತೆ, ಆದರೆ ಮಗನಿಗೂ ಕೇಳಿಸುವಂತೆ, -

“ಆಯಿತಯ್ಯರಾಜನಿಗೆ ಒಬ್ಬಳೇ ಹೆಂಡತಿ ಅಂತಿಲ್ಲವಲ್ಲ. ಮೊದಲು ಹಿರಿಯರ ಮಾತಿಗೆ ಮನ್ನಣೆ ಕೊಟ್ಟು ಕಂಚೀ ರಾಜಕುಮಾರಿಯನ್ನು ಮದುವೆಯಾಗು. ಆಮೇಲೆ ಬೇಕಾದರೆ ಪ್ರೇಮವೋ, ರಾಗೋದ್ರೇಕವೋ ಇಲ್ಲಾ ನಿನ್ನ ಹಟಮಾರಿತನವೋ ನಿನಗಿಷ್ಟ ಬಂದಂತೆ ಅವಳನ್ನೂ ಕಟ್ಟಿಕೋ.”

- ಎಂದು ಹೇಳಿದ. ತಕ್ಷಣ ರವಿ “ಅದಾಗದಪ್ಪ”. ಎಂದು ಸಿಡಿದು ಕೂಡಲೇ ಮಾತು ಬಿರುಸಾಯಿತೆಂದು ಮೆತ್ತಗಿನ ದನಿಯಲ್ಲಿ-

“ಮಾತು ಕೊಟ್ಟಿದ್ದೇನೆ ನನಗೆ ವಾಸಂತಿ ಬೇಕು, ವಾಸಂತಿ ಮಾತ್ರ ಬೇಕು. ಇನ್ನೊಬ್ಬರಿಗೆ ನನ್ನ ಪ್ರೀತಿಯನ್ನು ಹಂಚಲಾರೆ. ದಯಮಾಡಿ ನನ್ನ ಇದೊಂದಾಸೆಗೆ ನೀನು ಒಪ್ಪಿಗೆ ಕೊಡಪ್ಪ. ಉಳಿದಂತೆ ನಿನ್ನ ಯಾವ ಆಸೆಗೂ ನಾನು ಅಡಚಣೆ ಮಾಡುವುದಿಲ್ಲ.”

- ಎಂದು ಕೈ ಮುಗಿದ. ಶಿಖರಸೂರ್ಯ ಉಕ್ಕಿಬಂದ ಕೋಪವನ್ನು ನಿಯಂತ್ರಿಸಿಕೊಂಡು ತಕ್ಷಣ ಮುಖದಲ್ಲಿ ಮುಗುಳು ನಗೆಯನ್ನು ಮೂಡಿಸಿಕೊಂಡು,

“ಆಯಿತಯ್ಯ, ಯುವರಾಜನ ಮಾತನ್ನು ಮನ್ನಿಸದಿದ್ದರಾಗುತ್ತೇನಯ್ಯಾ?”

ಎನ್ನುತ್ತ ಮಗನ ಭುಜದ ಮ್ಯಾಲೊಂದು ಮೆಚ್ಚುಗೆ ಏಟು ಕೊಟ್ಟು “ಸಂತೋಷವಾಯಿತೇನಯ್ಯಾ ಯುವರಾಜಾ?” ಅಂದ. ರವಿಯ ಕಣ್ಣು ಫಳ್ಳನೆ ಹೊಳೆದು ಮುಖ ಕೆಂಪೇರಿ, ಅಡರಿದ ಸಂತೋಷವನ್ನು ತಡೆಹಿಡಿಯಲಾರದೆ ತಂದೆಯ ಕಾಲುಮುಟ್ಟಿ ನಮಸ್ಕಾರ ಮಾಡಿದ. ಎದ್ದು ತಂದೆಯ ಮುಖ ನೋಡಿ ಹೊರಗೋಡಿದ.

ಈವರೆಗೆ ತನ್ನ ಕಣ್ಗಾರಿಕೆಯ ಜಗತ್ತು ತನ್ನ ನಿಯಂತ್ರಣದಲ್ಲಿದ್ದ ಬಗ್ಗೆ ಆತ್ಮ ವಿಶ್ವಾಸದಿಂದ ಇದ್ದ ಶಿಖರಸೂರ್ಯ ಈಗ ಎಲ್ಲವೂ ತನ್ನ ಕೈಮೀರಿ ಹೋಗುತ್ತಿದೆ ಎನ್ನಿಸಿ ಹತಾಶೆ ಕೋಪಗಳಿಂದ ಎರಡೂ ಮುಷ್ಟಿಗಳಿಂದ ಗೋಡೆಗೆ ಗುದ್ದಿ ಕಿಡಿಕಿಗೆ ಬೆನ್ನಾಣಿಸಿ ನಿಂತ. ಕಿಡಕಿಯಾಚೆ ನಿಚ್ಚಳವಾಗಿ ಹೊಳೆಯುವ ಇಳಿಹೊತ್ತಿನ ಬಿಸಿಲು ಹಿನ್ನೆಲೆಗಿತ್ತು. ಇವನ ನಿಮಿರಿದ ಕಿವಿಗೂದಲು ಉರಿಯುವ ಜ್ವಾಲೆಯಂತೆ ಕಂಡವು.

ಮಾರನೇ ದಿನ ಬೆಳಿಗ್ಗೆಯೇ ಶಿಖರಸೂರ್ಯ ನಾಲ್ಕು ಜನ ಮೇವಿನ ಸೈನಿಕರನ್ನ ಕರೆದು

“ಬೊಂತೆಯನ ಜೊತೆ ಕಂಚಿಗೆ ಹೋಗಿ, ಅವನು ತೋರಿಸಿದ ಮನೆಯಲ್ಲಿಯ ಎಲ್ಲರನ್ನು ಮುಗಿಸಬೇಕು. ಅದಾದ ಮೇಲೆ ಬೊಂತೆಯನನ್ನೂ ಮುಗಿಸಿ ಬರಬೇಕು. ಬೊಂತೆಯ ತಪ್ಪಿಸಿಕೊಳ್ಳದ ಹಾಗೆ ಹುಷಾರಿನಿಂದಿರಬೇಕು. ತಿಳಿಯಿತೋ?”

ಅವರು ತಿಳಿಯಿತೆಂದಾಗ ಬೊಂತೆಯನನ್ನ ಕರೆಯಿಸಿದ.

ಬೊಂತೆಯ ಬಂದು ಅಂಡೆತ್ತಿ ಪ್ರಣಾಮಗಳನ್ನು ಆಚರಿಸಿ ತಲೆ ಕೆಳಗೆ ಹಾಕಿ ನಿಂತ.

“ಬೊಂತೆಯ ಕಂಚಿಯಲ್ಲಿ ವಾಸಂತಿ ಅಂತ ಯುವರಾಜನ ಗೆಳತಿ ಇದ್ದಾಳಂತಲ್ಲ ಗೊತ್ತ?”

ಅಂದ, ಬೊಂತೆಯ ಗೊತ್ತು ಎಂಬಂತೆ ಕತ್ತು ಹಾಕಿದ. “ಇಲ್ಲೆ ಬಾ” ಎಂದು ಅವನನ್ನೂ ಮೇವಿನ ಸೈನಿಕರನ್ನು ಕರೆದು.

“ಇಲ್ಲಿ ನಿಂತಿದ್ದಾರಲ್ಲ, ಇವರಿಗೆ ಆ ಹುಡುಗಿಯ ಮನೆ ತೋರಿಸಿ ಬರಬೇಕು ಯಾರೆದುರಿಗೂ ಈ ವಿಷಯ ಬಿಡಕೂಡದು. ತಿಳಿಯಿತೋ?”

ಬೊಂತೆಯ ಗಾಬರಿಯಿಂದ ಕಣ್ಣಗಲಿಸಿ ಒಡೆಯನನ್ನೇ ನೋಡಿ ಆಗಲೆಂದು ಕತ್ತು ಹಾಕಿದ.

ಬೊಂತೆಯ ಬೇರೆಲ್ಲೂ ಹೋಗಲು ಅವಕಾಶ ಕೊಡದೆ ಹೇಳಿದ:

“ಎಲ್ಲರೂ ಈಗಲೇ ಹೊರಡತಕ್ಕದ್ದು!”

## ಐವತ್ತೇಳು

ಶಿಖರಸೂರ್ಯನ ಅಸಮಾಧಾನ ತಣ್ಣಗಾಗಿದೆಯೆಂದು ಅಣ್ಣ ತಂಗಿ ಇಬ್ಬರೂ ಸಡಗರಗೊಂಡರು. ರಾತ್ರಿ ಬಹಳ ಹೊತ್ತಿನ ತನಕ ಮಾತಾಡಿಕೊಂಡರು. ರವಿಕೀರ್ತಿ ಅಪ್ಪನೊಂದಿಗಿನ ಸಂಭಾಷಣೆಯನ್ನು ವಿವರವಾಗಿ ಎರಡು ಬಾರಿ ಹೇಳಿ, ಗೌರಿ ಕೇಳಿ ಆನಂದಗಳನ್ನಾಚರಿಸಿದರು. ತನ್ನೊಂದಿಗೂ ತಂದೆ ಹೀಗೆಯೇ ಅನುಕೂಲಕರನಾಗುವನೆಂದು ಗೌರಿ, ಗೌರಿಯ ಬಗೆಗೆ ರವಿಯೂ ಹಾರೈಸಿ, ಆಶಾಭರಿತರಾದರು. ಆ ದಿನ ರವಿ ವಾಸಂತಿಯನ್ನು ಕಲ್ಪಿಸಿಕೊಂಡು ಅವಳ ಚಿಂತೆಯಲ್ಲಿ ಬೆಳ್ಳಂಬೆಳಗು ಮಲಗಲಿಲ್ಲ. ಹ್ಯಾಗಿದ್ದಾಳೋ, ಹ್ಯಾಗಿದೆಯೋ ಏನು ಕತೆಯೋ… ಇಷ್ಟರಲ್ಲೇ ತಂದೆಯ ಅಪ್ಪಣೆ ಪಡೆದು ಒಂದುಸಲ ಹೋಗಿ ಬರಬೇಕೆಂದುಕೊಂಡ.

ಇದಾಗಿ ಎರಡು ವಾರಗಳಾದ ಮೇಲೆ ಒಂದು ಮುಂಜಾನೆ ಗೌರಿ ಶಿವದೇವಾಲಯಕ್ಕೆ ಹೋಗಿದ್ದಾಗ ಶಿವಾಪುರಕ್ಕೆ ವಾರಿ ಹೊರಟ ಇಬ್ಬರು ಯಾತ್ರಿಕರನ್ನು ಕಂಡಳು. ಅವಳ ಕನಸು ಕೆರಳಿ ಅಂದೇ ಸಂಜೆ ತಾನೇ ಮುಂದಾಗಿ ತಂದೆಯಲ್ಲಿಗೆ ಹೋದಳು.

ಪಟ್ಟಕ್ಕೆ ಬಂದಕೂಡಲೇ ತೆರಿಗೆ ಮತ್ತು ಕಪ್ಪಕಾಣಿಕೆಯನ್ನು ಕೂಡಾ ಧಾನ್ಯದ ರೂಪದಲ್ಲಿ ಕೊಡಬಹುದೆಂದು ಶಿಖರಸೂರ್ಯ ಸಾರಿದ್ದರಿಂದ ಆ ವರ್ಷ ಅರಮನೆ ಧಾನ್ಯದ ರಾಶಿಯಿಂದ ತುಂಬಿ ಹೋಗಿತ್ತು. ಹೊಸದಾಗಿ ಎರಡು ಬೃಹತ್ ಕಣಜಗಳನ್ನು ಕಟ್ಟಿದ್ದು ಅರಮನೆಯಲ್ಲಿದ್ದ ಧಾನ್ಯವನ್ನು ಕಣಜಗಳಿಗೆ ಸಾಗುಸುತ್ತ ತಂದೆ ಅಲ್ಲೇ ಖುದ್ದಾಗಿ ನಿಂತಿದ್ದ. ಅಲ್ಲಿ ಮರದ ಪೀಠಗಳನ್ನು ತೆಗೆದು ಖಾಲಿ ಮಾಡಿದ್ದರಿಂದ ಕೂತುಕೊಳ್ಳಲಿಕ್ಕೇನೂ ಇರಲಿಲ್ಲ. ಇಷ್ಟೊಂದು ಧಾನ್ಯ ಸಂಗ್ರಹದ ಕಾರಣಕೇಳಲು ಸಹಜವಾಗಿಯೇ ಅವಳಲ್ಲಿ ಕುತೂಹಲ ಕೆರಳುವುದೆಂದು ಗೊತ್ತಿದ್ದ ಶಿಖರಸೂರ್ಯ ಮಾತಾಡಲಿಕ್ಕೆ ಅವಕಾಶ ಕೊಡದೆ ಹೊರಕ್ಕೆ ನಡೆದ. ಗೌರಿಯೂ ಹಿಂದಿನಿಂದ ಹೊರಟಳು.

ತನ್ನ ಕೋಣೆಗೆ ಬಂದು ಪೀಠದಲ್ಲಿ ಕೂತು “ಬಾ ಮುದ್ದು” ಅಂದ. ಒಳಕ್ಕೆ ಹೋಗಿ ಅವಳೂ ಅವನ ಸಮೀಪ ಕೂತಳು. ಅವಳು ಕೇಳುವ ಮಾತು ಅಂದಾಜಾಗಿದ್ದುದರಿಂದ ಅವಳನ್ನೇ ನೋಡುತ್ತ ಕೂತ. ಗೌರಿಯೇ ಮಾತಿಗಾರಂಭಿಸಿದಳು.

"ಅಪ್ಪಾ ಶಿವಾಪೂರದ ನಿನ್ನಡಿ ಬಿಳಿಗಿರಿಗೆ ಬಂದು ಹೋದ ವಿಚಾರ ನಿನಗೆ ಗೊತ್ತಿದೆ. ನೀನು ಹೇಳಿದ ಕಂಚಿ ರಾಜಕುಮಾರನ ವಿಷಯ ನನಗೆ ಗೊತ್ತಿದೆ. ಎಲ್ಲವನ್ನು ವಿಚಾರ ಮಾಡಿ ಶಿವಾಪುರವೇ ನನಗೇ ಯೋಗ್ಯವಾದ ಸ್ಥಳವೆಂದು ತೀರ್ಮಾನಿಸಿದ್ದೇನೆ. ಬದುಕೋದಕ್ಕೆ ಕನಕಪುರಿ ಲಾಯಖ್ಖಾದ ಊರಲ್ಲ ಎಂದು ನೀನೇ ಹೇಳುತ್ತಿದ್ದೇ. ದಯವಿಟ್ಟು ನನ್ನನ್ನ ಅಲ್ಲಿಗೆ ಕಳಿಸಿಬಿಡಪ್ಪ."

'ನಮ್ಮ ಪುಟ್ಟ ಹುಡುಗಿ ಮುದ್ದುವಿಗೆ ಇಷ್ಟೋಂದು ಧೈರ್ಯ ಬಂತೆ!' ಎಂದು ಆಶ್ಚರ್ಯವಾದರೂ ಶಿಖರಸೂರ್ಯ ಅದನ್ನು ತೋರಿಸಿಕೊಳ್ಳಲಿಲ್ಲ. ಪ್ರೀತಿ ಮತ್ತು ಮೆಚ್ಚುಗೆಗಳನ್ನು ಅಭಿನಯಿಸುತ್ತ –

"ಹೌದಮ್ಮಾ, ಬೀಗ ಬೀಗರ ಮಾತು, ನಿಶ್ಚಯಕಾರ್ಯ, ಮದುವೆ – ಇದ್ಯಾವುದೂ ಇಲ್ಲದೆ ನೀನು ಶಿವಪುರಕ್ಕೆ ಹೋಗುತ್ತಿಯಾ? ಹೇಳೋರು ಕೇಳೋರು ನಿನಗ್ಯಾರೂ ಹಿರಿಯರಿಲ್ಲವೇ?"

"ಅದಕ್ಕೆ ನಿನ್ನನ್ನ ಕೇಳಿದೆನಲ್ಲಪ್ಪ."

"ಆದರೆ ನೀನಾಗಲೇ ಮನಸ್ಸಿನಲ್ಲಿ ಮದುವೆ ನಿಶ್ಚಯ ಮಾಡಿಬಿಟ್ಟಿದ್ದೀಯಲ್ಲಮ್ಮ. ತೀರ್ಮಾನ ತಗೊಳ್ಳೋದಕ್ಕೆ ನಮಗೇನುಳಿದಿದೆ. ?"

ಮುಗ್ಧತೆ ಕೂಡ ಕ್ರೂರವಾಗಿರಬಲ್ಲದು. ಮಕ್ಕಳು ವಿಷಬೇಡಿ ಹಟಹಿಡಿದರೆ ಹ್ಯಾಗೋ ಹಾಗಾಯಿತೆಂದು ಅಂದುಕೊಂಡ.

"ಅಪ್ಪಾ ನಾನು ಎಷ್ಟು ಸಲ ಶಿವಾಪುರ ಎಲ್ಲಿದೆ ಅಂತ ಕೇಳಿದರೂ ಆ ವಿಷಯ ಮಾತಾಡೋದಕ್ಕೆ ನಿನಗಿನ್ನೂ ವಯಸ್ಸು ಸಾಲದು ಅಂದೆ. ಅದನ್ನೆಲ್ಲ ಚಂಡಿದಾಸ ತಾತಾ ಹೇಳಿದ. ಶಿವಾಪುರ, ಶಿವನಪಾದ ಬಗ್ಗೆ ಅವನು ಹೇಳುವ ತತ್ವಗಳ ಬಗ್ಗೆ ಚಂಡೀದಾಸ ತಾತಾ ಹೇಳಿದಾಗಿನಿಂದ ನನ್ನಲ್ಲಿ ಆಸಕ್ತಿ ಮೂಡಿದೆ. ಅವನ ಮಾತು ಕೇಳಿದಾಗೆಲ್ಲ ನನಗೆ ಕನಕಪುರಿ ನರಕವಾಗಿ ಕಾಣುತ್ತಿದೆ. ?"

"ನೀನಗಾಗಲೇ ಸ್ವರ್ಗ ನರಕಗಳ ಪರಿಚಯವೂ ಆಗಿದೆಯೋ?"

– ಎಂದು ವ್ಯಂಗ್ಯವಾಗಿ ನಕ್ಕು ಹತಾಶೆಯಿಂದ ಸಿಟ್ಟಿಗೆದ್ದು ನುಡಿದ:

"ಶಿವಾಪುರದ ಬಗ್ಗೆ ನೀನೇನು ಬಲ್ಲೆಯೇ ದಡ್ಡಿ? ಚಂಡೀದಾಸನ ಬೊಗಳೆ ಕೇಳಿದಳಂತೆ, ಮನಸ್ಸನ್ನು ಮಾರಿಕೊಂಡೇ ಬಿಟ್ಟಳಂತೆ! ಸಾಲದ್ದಕ್ಕೆ ಇವಳಿಗೆ ಸ್ವರ್ಗ ನರಕಗಳ ಪ್ರಮಾಣ ಬೇರೆ; ಖುದ್ದಾಗಿ ಶಿವಾಪುರದಲ್ಲಿ ಇದ್ದು ಮೂರು ವರ್ಷ ಶಿವಪಾದನಿಗೆ ಮಣ್ಣು ಹೊತ್ತ ನಿನ್ನ ಹೆತ್ತ ತಂದೆಯ ಅನುಭವ ಮುಖ್ಯವೋ, ದಾಸಯ್ಯನ ಬೊಗಳೆ ಮುಖ್ಯವೋ? – ಅದನ್ನ ಮೊದಲು ಹೇಳು.

"ಶಿವಾಪುರ, ಶಿವಪಾದ ಮುಖ್ಯ ಅಂತ ಅನ್ನಿಸಿದ್ದರೆ ನಾನೇ ನಿನಗೆ ಹೇಳುತ್ತಿರಲಿಲ್ಲವೇ? ಅದು ಜೀವನ ವಿರೋಧಿಯಾದ ಪ್ರಭಾವವಾದ್ದರಿಂದ ನಿನಗೆ ಹೇಳಲಿಲ್ಲ, ಅಷ್ಟೇ. ಬೆವರು ಸುರಿಸಿ ಗಳಿಸಿದ ಹಣದಲ್ಲಿ ಬಡತನ, ದುಷ್ಟತನಗಳು ತಿಳಿಯದ ಹಾಗೆ ನಿನ್ನನ್ನ ಬೆಳೆಸಿದ್ದೇ ನನ್ನ ತಪ್ಪು. ಶಿವಾಪುರ, ಶಿವಪಾದಗಳು ಕನಕಪುರಿಯ ಬುದ್ದಿಜೀವಿಗಳ ಐಭೋಗಗಳು. ಜೀವನ ಅಂದರೇನೆಂದು ಗೊತ್ತಿಲ್ಲದ ವಿಲಾಸಿಗಳ ಮಾತಿನ ತುರಿಕೆಗಳು, ವಿಲಾಸದ ಬದುಕು ಬೋರಾಗಿ ಮಂತ್ರ ತಂತ್ರಾದಿ ರಹಸ್ಯಗಳು, ನಿಗೂಢಗಳ ಬಗ್ಗೆ ಮಾತಾಡಿಕೊಂಡು ಎಲ್ಲಾ ಗೊತ್ತಿದೆಯೆಂದು ತೋರಿಸಿಕೊಂಬ ಶ್ರೀಮಂತರ ದುಶ್ಚಟಗಳವು. ನಾನು ರಾಜ್ಯಭ್ರಷ್ಟನಾಗಿ ಕಷ್ಟಪಟ್ಟು ಗಳಿಸಿದ ಆನಂದಗಳ ಕನಕಪುರಿಯನ್ನ ನಿನಗೆ ಕೊಟ್ಟೆ. ನೀನು ಬಂದು ಶಿವಾಪುರದ ಕಾಲ್ಪನಿಕ ಸುಖದ ಮುಂದೆ ಇದೆಲ್ಲ ಕ್ಷುಲ್ಲಕ ಎಂದು ಹೇಳಿಬಿಟ್ಟೆಯಲ್ಲಮ್ಮ. !"

ದ್ರೋಹ ಮಾಡಿದಳೆಂಬಷ್ಟು ಸಿಟ್ಟು ಬಂತು ಶಿಖರಸೂರ್ಯನಿಗೆ. ಕಿವಿಗೂದಲು ನಿಮಿರಿದ್ದವು. ಬಿದ್ದು ಹೊರಳಾಡುವಂತೆ ಕೆನ್ನೆಗೆರಡೇಟು ಬಿಗಿದು ಬಿಡಬೇಕೆಂದುಕೊಂಡ. ಶಿವಾಪುರ ಶಿವಪಾದನಲ್ಲಿಯ ನಂಬಿಕೆಯಿಂದ ಮಗಳು ಕುರೂಪಿಯಾಗಿ ಕಂಡಳು. ಮುದ್ದು ಮಗಳಿಗೆ

ಸಂಬಂಧಪಟ್ಟುದೆಲ್ಲವೂ ಚಂದ ಆನಂದವೆಂದುಕೊಂಡಿದ್ದ ಶಿಖರಸೂರ್ಯನಿಗೆ ಗೌರಿ ಹೇಸಿಕೆ ಬರುವಷ್ಟುವಿಕಾರಿಯಾಗಿ ಕಂಡಳು. ಗೌರಿ ಸೋತ ದನಿಯಲ್ಲಿ ಹೇಳಿದಳು

"ಅಪ್ಪ ನೀನು ನಂಬುವುದಿಲ್ಲ. ಆದರೆ ನಾನು ದೇವರನ್ನು ನಂಬುತ್ತೇನೆ. ಕನಕಪುರಿನಾನು ಇಷ್ಟ ಪಡುವ ಸ್ಥಳವಲ್ಲನನ್ನನ್ನ ಶಿವಾಪುರಕ್ಕೆ ಕಳಿಸಿದರೆ ಅಮ್ಮನ ಸಾನ್ನಿಧ್ಯದಲ್ಲಿ ಧ್ಯಾನ ಮಾಡಿಕೊಂದಿರುತ್ತೇನೆ. ನಾನು ಧ್ಯಾನ ಮಾಡುವುದು ನಿನಗಾಗಿ ಮತ್ತು ಅಣ್ಣನಿಗಾಗಿ - "

"ಯಾರನ್ನ ಕುರಿತು ಧ್ಯಾನ ಮಾಡ್ತೀಯೇ ಹುಚ್ಚು ಹುಡುಗಿ? ನಿನ್ನ ಧ್ಯಾನ ಕೇಳಿಸಿಕೊಂಬುವರ್ಯಾರು ಇಲ್ಲಾಮ್ಮ. ನಿನ್ನ ಧ್ಯಾನ ಕೇಳಿ ಒಲಿದು ಬಂದು ವರಕೊಡುವಂಥ ದೇವರ್ಯಾರೂ ಇಲ್ಲ. ಅವೆಲ್ಲಾ ಜನಪದ ಕತೆಗಳಲ್ಲಿ ಬರುವ ದೇವರು: ದುಃಖಿಗಳನ್ನ ಅವಮಾನಿತರನ್ನ ಸಂತೈಸುವ ದೇವನ್ಯಾರೂ ಇಲ್ಲವಮ್ಮ. ಬರ ಬಿದ್ದರೆ, ಪ್ರವಾಹ ಬಂದರೆ ಸಾಯುವವರನ್ನು ಕಾಪಾಡುವ ದೇವರಿಲ್ಲವಮ್ಮ! ದಡ್ಡಿ ನಿನ್ನ ಆರೈಕೆಗೆ, ಗುಡಿ ಗುಂಡಾರ ಕಟ್ಟೋದಕ್ಕೆ ಹಣ ಖರ್ಚಾಗುತ್ತದೆ ಅಂತ ಗೊತ್ತೇನು? ಯುದ್ಧ ಮಾಡಿ ಜನರನ್ನ ಕೊಲ್ತಿವಲ್ಲ, ಅದಕ್ಕೆ ಹಣ ಬೇಕು ಗೊತ್ತೇನು?. ಸಿಡಿತಲೆ ಆಡಲಿಕ್ಕೆ, ಕೊಲ್ಲೊ ಕತ್ತಿ, ಬಾನ, ಚೂರಿ, ಮಾಡೋದಕ್ಕೆ ಹಣ ಬೇಕು, ಇದನ್ನೆಲ್ಲಾ ಯಾರು ಬೆಟ್ಟದಮ್ಮ ಕೊಡ್ತಾಳೇನು? ಹಣ ಇಲ್ಲದೆ ಶಿವ ಶಿವ ಪದ ಹಾಡಿದರೆ ಶಿವ ಹಣ್ಣದ ಮಳೆ ಸುರಿಸ್ತಾನೆಯೇ?"

ವಾದ ಮಾಡುವುದಕ್ಕೆ ಗಟ್ಟಿ ಮನಸ್ಸು ಮಾಡಿದ್ದಳೆಂದೋ, ತನಗೆ ತಾನು ಹೇಳಿಕೊಂಡ ಹಾಗೆ ಇಲ್ಲವೆ ವಾದಕ್ಕೊಂದು ಕೊನೆ ಹೇಳುವ ಹಾಗೆ ಹೇಳಿದಳು:

"ಇಂಥ ಜಗತ್ತಿನಲ್ಲಿ ಇರುವುದಕ್ಕೆ ಸಾಧ್ಯವಿಲ್ಲವೆಂದೇ ನಾನು ಶಿವಾಪುರ ಬೆಟ್ಟಕ್ಕೆ ಹೊರಟಿರೋದು. ನಿನ್ನ ಜಗತ್ತಿನಲ್ಲಿ ಎಲ್ಲಾ ಇದೆ. ಸಂತೋಷ ಮತ್ತು ದೇವರನ್ನು ಬಿಟ್ಟು. ನನಗೆ ಅವೇ ಎರಡೂ ಬೇಕು. ಇವೆರಡೂ ಇಲ್ಲದ ಜಗತ್ತಿಗಾಗಿ ನನಗೆ ಕರುಣೆ ಬರುತ್ತದೆ, ಮತ್ತು ದೇವರಲ್ಲಿ ಜಗತ್ತಿಗೆ ಎರಡನ್ನೂ ಕೊಡು ಅಂತ ಪ್ರಾರ್ಥನೆ ಮಾಡ್ತೀನಿ.

ನಿಜ ಹೇಳುತ್ತೇನೆ: ನೀನು ನಮಗಾಗಿ ತೆಗೆದುಕೊಂಡ ಶ್ರಮಕ್ಕೆ, ಬೆಲೆ ಕಟ್ಟಲು ಸಾಧ್ಯವೇ ಇಲ್ಲ, ಪ್ರತಿಯಾಗಿ ಏನನ್ನಾದರೂ ಕೊಡುವುದಕ್ಕೂ ಈ ಜನ್ಮದಲ್ಲಿ ಸಾಧ್ಯವಿಲ್ಲ. ದೇವರಲ್ಲಿ ನಂಬಿಕೆ ಬರುವಂತೆ ನಿನ್ನನ್ನು ಪರಿವರ್ತನೆ ಮಾಡುವುದೂ ಸಾಧ್ಯವಿಲ್ಲವೆಂದೂ ಗೊತ್ತು. ನಿನಗೆ ನೆಮ್ಮದಿ ಸಿಗಲೆಂದು ದೇವಲಲ್ಲಿ ಬೇಡಿಕೊಳ್ಳುತ್ತೇನೆ.."

ಎಂದು ಹೇಳಿ ಕೈ ಜೋಡಿಸಿ, ಸೂರ್ಯನ ಎಳೆಬಿಸಿಲ ಕಾಂತಿ ಬಿಂಬಿಸಿ ತುಪ್ಪದ ಸೊಡರಿನಂತೆ ಹೊಳೆಯುತ್ತಿದ್ದ ಕಂಗಳಿಂದ ಅವನನ್ನೇ ನೋಡುತ್ತಾ ಬಾಗಿ ಕಾಲುಮುಟ್ಟಿ ನಮಸ್ಕರಿಸಿ "ನನ್ನನ್ನು ಆಶೀರ್ವದಿಸು" ಎಂದಳು.

"ನೀನು ಹೇಳುವಂಥ ದೇವರು ಮತ್ತು ಸಂತೋಷ ಸಿಕ್ಕೋದು ಹುಚ್ಚರಿಗೆ, ಮೂರ್ಖರಿಗೆ ಮತ್ತು ನಟರಿಗೆ ಮಾತ್ರ ಸಾಧ್ಯ ಈ ಜಗತ್ತು ಏನಂತ ತಿಳುವಳಿಕೆ ಇರಬೇಕು. ಅದರೊಂದಿಗೆ ಕೊಡುಕೊಳ್ಳೋ ವ್ಯವಹರಿಸಿ ಒಪ್ಪಂದ ಮಾಡಿಕೋಬೇಕಮ್ಮಾ... ಹಟ ಹಿಡಿದರೆ ಹ್ಯಾಗೆ... ?

- ಎಂದು ನಮಸ್ಕರಿಸುತ್ತಿದ್ದ ಗೌರಿಯನ್ನು ಎಬ್ಬಿಸುತ್ತಿದ್ದಾಗ ಅನುಮಾನವಾಗಿ ಗಪ್ಪನೆ ನಾಡೀ ಹಿಡಿದಾಗ ಗೊತ್ತಾಯಿತು: ಮಗಳು ಗರ್ಭಿಣಿ ಎಂದು! ಅನಿರೀಕ್ಷಿತ ಅಘಾತವಾಗಿ ಕಿವಿಗೂದಲು ನಿಮಿರಿ, ಮೀಸೆ, ತಲೆಗೂದಲು ಕೆದರಿ ಮುಖ ವಿಕಾರವಾಯ್ತು. ಕೊಂದು ಬಿಡಬೇಕೆಂದು ಗಪ್ಪನೆ ಎರಡೂ ಕೈಗಳಿಂದ ಅವಳ ಕತ್ತು ಹಿಡಿದು ಹಿಸುಕಿ - ತಕ್ಷಣ ಈ ಕಡೆಗೆ ನೋಡಿದ: ಒಬ್ಬ ಸೇವಕಿಯ ಕಂಡು ಕೋಪವನ್ನು ನಿಯಂತ್ರಿಸಿಕೊಂಡು, "ಮಗಳೇ, ನಿನಗೆ ಶಿವಪಾದನ ಹುಚ್ಚು ಹಿಡಿದಿದೆ. ನೀನು ನಡೆ ಆಮೇಲೆ ಮಾತಾಡೋಣ" ಎಂದು ಹೊರಹೋಗುವಂತೆ ಸನ್ನೆ ಮಾಡಿದ. ಅವಳೂ ಹೋಗುತ್ತಲೂ ಗಟ್ಟಿಯಾಗಿ ಮುಷ್ಟಿ ಬಿಗಿದು, ಹಲ್ಲಿ ಕಚ್ಚಿ ಪೀಠದ ಮೇಲೆ ಗುದ್ದಿದ. ಅದು ಮುರಿದು ನೆಲಕ್ಕೊರಗಿತು.

ಅಂದಿನ ರಾತ್ರಿ ಉಳಿದೆಲ್ಲರ ಊಟ ಮುಗಿದ ಬಳಿಕ ಕುಟುಂಬದವರೆಲ್ಲ ಭಾವಾವೇಶಕ್ಕೆ ಒಳಗಾಗುವಂತೆ ಮಾಡಿದ. ಪ್ರತೀಕಾರದ ಉರಿಯುಗುಳುತ್ತ "ನಾನು ಯಾರನ್ನೂ ಮಣ್ಣು ಮುಕ್ಕಿಸಬಲ್ಲೆ! ದೇವರನ್ನ ಕೂಡಾ!" ಎಂದು ಏನೇನೋ ಮಾತಾಡುತ್ತ ಕೋಣೆಯಿಂದ ಮೊಗಸಾಲೆಗೂ ಮೊಗಸಾಲೆಯಿಂದ ಕೋಣೆಗೂ ದಾಪುಗಾಲು ಹಾಕಿ ಹೋಗಿಬರುತ್ತ, ತಕರಾರು ತೆಗೆಯುತ್ತ ಕುಟುಂಬದ ಎಲ್ಲರನ್ನು ಅನವಶ್ಯಕವಾಗಿ ಬಯ್ದ. ಸೇವಕಿಯರಿಗೆ ಪರಸ್ಪರ ವಿರುದ್ಧವಾದ ಆಜ್ಞೆಗಳನ್ನು ಒದರಿದ.

ಯಾರಿಗೂ ಹಾಕಿದೆಲ್ಲ ಎಂದು ತಿಳಿಯಲಿಲ್ಲ. ಗೌರಿಗೆ ಮಾತ್ರ ಇದೆಲ್ಲ ತನ್ನನ್ನೇ ಕುರಿತ ನಾಟಕವೆಂದು ಒಳಗೊಳಗೆ ಅಳುಕಾಗಿ ಹ್ಯಾಗೆ ಎದುರಿಸುವುದೆಂದು ಪೂರ್ವ ತಯಾರಿ ನಡೆಸಿದಳು.

ಆಮೇಲಿನ ಎರಡು ದಿನ ಮನೆಯ ಹೆಂಗಸರನ್ನೇ ಗಮನಿಸಿದ. ಹೆಂಗಸರಿಗೆ ಈ ವಿಷಯ ಗೊತ್ತಿರಲೇ ಬೇಕಲ್ಲ. ಅವರ್ಯಾಕೆ ತನ್ನ ಮುಂದೆ ಹೇಳುತ್ತಿಲ್ಲ? ತಾಯಿ, ಅಜ್ಜಿ ಇಬ್ಬರೂ ಗೌರಿಗೆ ಪ್ರೋತ್ಸಾಹ ಕೊಡುತ್ತಿರಬಹುದೇ? ಅಥವಾ ಅವರಿಗೇ ಇನ್ನೂ ಗೊತ್ತಿಲ್ಲದಿರಬಹುದು. ಗೊತ್ತಿಲ್ಲದಿದ್ದರೆ ಒಳ್ಳೆಯದೇ ಆಯಿತು. ಸನ್ನಿವೇಶ ಬಹಳ ನಾಜೂಕಿನದು. ಸ್ವಲ್ಪ ವಾಸನೆ ಬಂದರೂ ಚಕ್ರವರ್ತಿಯ ಮಗಳು ಹಾಗಂತೆ ಹೀಗಂತೆಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗ ಗೊತ್ತಿರೋದು ಗೌರಿಗೆ, ನನಗೆ. ಮೂರನೇಯವರಿಗೆ ತಿಳಿಯುವ ಮೊದಲೇ ಗೌರಿಗೆ ವಿಷವುಣ್ಣಿಸಿ ಬಿಳಿಗಿರಿಗಟ್ಟುವುದೇ ಸರಿಯಾದ ಉಪಾಯವೆಂದು ತೀರ್ಮಾಣಿಸಿದ.

# ಕಂಚಿ

## ಐವತ್ತೆಂಟು

ಇತ್ತ ಕಂಚಿಯಲ್ಲಿ ವಿಶ್ವರೂಪಾಚಾರ್ಯನ ಆರೋಗ್ಯ ದಿನೇ ದಿನೇ ಇಳಿಮುಖವಾಗುತ್ತಿತ್ತು. ಮೂಗಿನ ತುದಿಯಲ್ಲೇ ಮುಂಗೋಪ ಕೂತಿರುತ್ತಿತ್ತು. ಎದುರು ಮಾತನ್ನ ಸಹಿಸುತ್ತಿರಲಿಲ್ಲ. ವಿನಾಕಾರಣ ಕಿರಿಕಿರಿ ಮಾಡುತ್ತಿದ್ದ ಮಗಳು ತಪ್ಪು ಮಾಡಿ ಮೋಸ ಹೋದಳೆಂದು, ಇದಕ್ಕೆಲ್ಲ ತಾನು ಮೊದಲೇ ಹೇಳಿದಂತೆ ಕೇಳಲಿಲ್ಲವೆಂಬುದೇ ಕಾರಣವೆಂದು ಆತ ಹೇಳುವಂತಿತ್ತು. ಆದರೆ ಬಾಯಿಬಿಟ್ಟು ಹೇಳಲಾರ. ಮಾಯೆಯಿಂದ ಬೆಳೆಸಿದ ತಬ್ಬಲಿಮಗಳ ಮನಸ್ಸನ್ನ ನೋಯಿಸಲಾರ. ಅಜ್ಜಿ ಮಗಳ ಪರವಾಗಿ ಮಾತಾಡಿದಾಗೆಲ್ಲ ಸಲಿಗೆ ಕೊಟ್ಟು ಮಗಳನ್ನ ಮುದ್ದು ಮಾಡಿದರೆ ಆಗುಅ ಅಪಾಯದ ಬಗ್ಗೆ ಎಚ್ಚರಿಕೆ ಕೊಡುತ್ತಿದ್ದ. ಈಗ ಮಗಳು ಪಶ್ಚಾತ್ತಾಪ ಪಡುವಂತಾಯಿತೆಂದು ನೋಂದು "ಶಿವ ಶಿವಾ ಎಂಥಾ ಸ್ಥಿತಿಗೆ ತಂದೆಯಪ್ಪಾ" ಎಂದು ಪಲ್ಲವಿ ನುಡಿಯುತ್ತಿದ್ದ. ಮಗಳ ತೀರ್ಮಾನವನ್ನು ಅಣಕವಾಡಿ ನೋಯಿಸಿ ಮತ್ತೆ "ಮಗಳೇ ಮಗಳೇ, ನಿನ್ನನ್ನ ಶಿವನೇ ಕಾಪಾಡಬೇಕು ಎಂದು ಮರುಗುತ್ತಿದ್ದ. ಇಷ್ಟಾದರೂ ವಾಸಂತಿ ಮಾತ್ರ ಇನ್ನೂ ನಿರಾಶಳಾಗಿರಲಿಲ್ಲ. ಸಹನೆ ಇದ್ದರೆ ಪ್ರೀತಿ ಫಲ ನೀದುತ್ತದೆಂದೇ ನಂಬಿ - ಆ ನಂಬಿಕೆಯನ್ನ ತಂತಾನೇ ಹೇಳಿಕೊಂಡು ಆತ್ಮ ವಿಶ್ವಾಸ ಬೆಳೆಸಿಕೊಳ್ಳುತ್ತಿದ್ದಳು.

ಆಚಾರ್ಯ ತನ್ನ ಮಗಳನ್ನು ಎಳೆಯ ಮಡದಿಯಾಗಿ ಕಲ್ಪಿಸಿಕೊಳ್ಳಬಲ್ಲವನಾಗಿದ್ದನೇ ಶಿವಾಯಿ ಎಳೆಯ ತಾಯಿಯಾಗಿ ಅಲ್ಲ. ಯಾಕೆಂದರೆ ತಾಯ್ತನಕ್ಕೆ ಜವಾಬ್ದಾರಿ ಅಂತಿದೆ. ಅದನ್ನ ಸ್ವಯಂ ಮಗುವಾಗಿರುವ ವಾಸಂತಿ ಹ್ಯಾಗೆ ನಿಭಾಯಿಸಿಯಾಳು? ತಾನು ಮತ್ತು ತನ್ನ ತಾಯಿ ಎಷ್ಟು ದಿನದವರು? ನಾವಿಲ್ಲದಾಗ ಇವಳನ್ನು ನೀಡಿಕೊಂಬವರು ಯಾರು? ರವಿಯನ್ನು ಅವಲಂಬಿಸಲಿಕ್ಕಾಗುವುದಿಲ್ಲವೆಂಬ ಮಾತು ಅವನಿಗೆ ಹೆಚ್ಚು ನೋವಿನದಾಗಿತ್ತು. ತನ್ನ ಮಗಳು ತನ್ನ ಆಯ್ಕೆಯಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಲಿಲ್ಲ ಎನ್ನುವುದೇ ಮುದುಕನ ದುಃಖ ಮತ್ತು ಕಾಳಜಿಗೆ ಕಾರಣವಾಗಿತ್ತು. ಈಗೀಗಂತೂ ಮನೆ ಹಿಡಿದ ಶಿಲ್ಪಿ ಹೊರಗೆ ಬರುತ್ತಿರಲಿಲ್ಲ. ಕೆಲವೇ ದಿನಗಳಲ್ಲಿ ವೃದ್ಧನಾದ. ಶಿಷ್ಯರಿಗೆ ಹೇಳಿಕೊಡುವುದನ್ನೂ ನಿಲ್ಲಿಸಿದ್ದರಿಂದ ಸಾಮಾನ್ಯವಾಗಿ ಶಿಷ್ಯರಿಂದ ತುಂಬಿರುತ್ತಿದ್ದ ಅಂಗಳ ಈಗ ಬಿಕೋ ಎನ್ನುತ್ತಿತ್ತು. ಒಂದು ಸಲ ಮಹಾರಾಜರು ಹೇಳಿಕಳಿಸಿದರೂ ಅನಾರೋಗ್ಯವೆಂದು

ಹೋಗಲಿಲ್ಲ. ಸದಾಕಾಲ ಮನೆಯಲ್ಲಿ, ತನ್ನ ಹಾಸಿಕೆಯಲ್ಲೇ ಕುಂತಿರುತ್ತಿದ್ದ. ವಾಸಂತಿಯೇ ಅವನಿದ್ದಲ್ಲಿಗೆ ಹೋಗಿ ಊಟೋಪಚಾರ ನೋಡಿಕೊಳ್ಳುತ್ತಿದ್ದಳು. ಹುಟ್ಟಿದ ಕೂಸು ಬೆಳೆಯುತ್ತಲೇ ಇತ್ತು.

ರವಿಕೀರ್ತಿಯೋ ಅವಳಿಗೊಂದು ಘನವಾದ ನೆನಪನ್ನು ಕೊಟ್ಟು ಹೋಗಿದ್ದ. ಅದು ನೆನಪೋ, ಗಾಯವೋ ತಿಳಿಯದಂತಾಗಿತ್ತು. ಕೊನೆಗೆ "ಶಿವೇಚ್ಛೆ" ಅಂತಲೋ ಶಿವನೇ ಕಾಪಾಡಬೇಕು ಅಂತಲೊ ಮುದುಕ ತನ್ನ ಚಿಂತೆಗಳನ್ನು ಮುಗಿಸುತ್ತಿದ್ದ.

"ತೇನ ವಿನಾ ತೃಣಮಪಿ ನ ಚಲತಿ' ಎಂಬ ಮಾತಿನಲ್ಲಿ ಅವನಿಗೀಗ ಎಲ್ಲಿಲ್ಲದ ನಂಬಿಕೆ ಬಂದುಬಿಟ್ಟಿತು. ಇಲ್ಲದಿದ್ದರೆ ಎಲ್ಲಿಯ ರವಿ, ಎಲ್ಲಿಯ ವಾಸಂತಿ - ಇವರನ್ನ ಕೂಡಿಸಿದ್ದು ಯಾವುದು? ಉತ್ತರ ಸಿಕ್ಕದೆ ಇದ್ದಾಗ ಆ ಕೂಸು ಅತ್ತಿತ್ತು. - ಖಂಡಿತ ಅದು ಉತ್ತರವಲ್ಲ ಎಂದು ಹೇಳಿಕೊಂಡ.

ಮಗು ರವಿಕಿರಣ ಹುಟ್ಟಿದ ಮೇಲೂ ವಾಸಂತಿ ರವಿಕೀರ್ತಿಯ ಸುದ್ದಿಯ ನಿರೀಕ್ಷೆಯಲ್ಲಿ ಇಡೀ ತಿಂಗಳು ಕಳೆದಳು. ಹಾಗೆಯೇ ಇನ್ನೆರಡು ತಿಂಗಳೂ ಕಳೆದಳು. ಮತ್ತೂ ಒಂದು ತಿಂಗಳು ಕಳೆದರೂ ಏನೊಂದು ಸುದ್ದಿಯೂ ಬಾರದೆ ಹತಾಶಳಾಗಿ ಅಜ್ಜಿಯ ಎದೆಗೊರಗುತ್ತಿದ್ದಳು. ಹೊರಗೆ ಹೋಗುತ್ತಿರಲಿಲ್ಲ. ಉತ್ಸಾಹ ರಹಿತಳಾಗಿ ಮನೆಯ ಹಿತ್ತಲ ಬಾಗಿಲಿನಿಂದ ತಲಬಾಗಿಲಿಗೂ ಅಡ್ಡಡುತ್ತಿದ್ದಳು. ರಾತ್ರಿ ಮಲಗಿದಾಗ ಗುಟ್ಟಾಗಿ ಅಳುತ್ತಿದ್ದಳು ಮಗು ಅತ್ತಾಗ ಅದರ ದನಿಯಲ್ಲಿ ಅಜ್ಜಿಗೂ ತಂದೆಗೂ ಕೇಳಿಸಿದಂತೆ ಬಿಕ್ಕುತ್ತಿದ್ದಳು. ಇವಳ ಬಾಡಿದ ಮುಖ ನೋಡಿ ನೋಡಿ ಅಜ್ಜಿ ರವಿಕೀರ್ತಿಯ ಮೇಲಿನ ಕೋಪದಿಂದ ಮನಸ್ಸಿನಲ್ಲೇ ಬಯ್ಯುತ್ತ ಕಣ್ಣುಕೆಂಪಗೆ ಮಾಡಿಕೊಂಡಿರುತ್ತಿದ್ದಳು. ಇದೇ ದುಃಖದಲ್ಲಿ ಹಾಸಿಗೆ ಹಿಡಿದ ತಂದೆ ಮ್ಯಾಲೆದ್ದಿರಲಿಲ್ಲ. ತನ್ನ ಗೋಳು ಮನೆಯಲ್ಲಿ ಮಾತ್ರವಲ್ಲದೆ ನೆರೆಹೊರೆಗೂ ಗೊತ್ತಾಗಿ ಅವರೆಲ್ಲ ತನ್ನನ್ನು ನೋಡಿ ಮರುಗುತ್ತಿರುವಂತೆ ಇಲ್ಲವೇ ನಗುತ್ತಿರುವಂತೆ ಇವಳಿಗನ್ನಿಸಿ ದೇವಸ್ಥಾನಕ್ಕೆ ಹೋಗುವುದನ್ನೂ ನಿಲ್ಲಿಸಿದ್ದಳು. ನೆರೆಹೊರೆಯವರ ಮರುಕ ಇವಳ ಸ್ವಾಭಿಮಾನವನ್ನು ಕೆಣಕಿದಂತಾಗಿ ತೀವ್ರ ಸಂಕಟವನ್ನು ಅನುಭವಿಸಿದಳು.

ಒಂದು ಸಲ ತಂದೆಗೆ ಮದ್ದು ಕುಡಿಸಿ ಮಲಗಿಸಲು ಪ್ರಯತ್ನಿಸಿದಾಗ ಆತ ಮಲಗದೆ ಹಾಗೇ ಗೋದೆಗೊರಗಿ ಕೂತು ಮಗಳ ಕಡೆಗೆ ನೋಡಿ ಏನನ್ನೋ ಹೇಳಲು ಪ್ರಯತ್ನಿಸಿದಾಗ ತಟ್ಟನೆ ವಾಸಂತಿ ಮಧ್ಯೆ ಬಾಯಿ ಹಾಕಿ

"ತಪ್ಪಾಯಿತಪ್ಪ. ನಾನಿನ್ನು ಮೇಲೆ ಆತನ ಬಗ್ಗೆ ಯೋಚನೆ ಮಾಡುವುದಿಲ್ಲ. ಆತ ಬಂದ, ಗಾಯ ಮಾಡಿ ಹೋದ.... ಅಷ್ಟೇ!" ಎನ್ನುತ್ತಿದಂತೆ ಧ್ವನಿ ಗದ್ಗದಿಸಿ "ನಾನು ನೆಮ್ಮದಿಯಿಂದ ಇದ್ದೇನಪ್ಪ!"

ಎಂದು ತಂದೆಯ ಎದೆಗೊರಗಿ ಬಿಕ್ಕಿ ಬಿಕ್ಕಿ ಅತ್ತಳೂ. ಅಮೇಲೆ ತಾನೇ ದುಃಖವನ್ನು ನಿಯಂತ್ರಿಸಿಕೊಂಡು ಒಳಕ್ಕೆ ಹೋದಳು.

'ಆಡಾಡುತ್ತ ಆಗಬಾರದ್ದು ಆಗಿಹೋಯಿತು. ನಂಬಿಕೆಗೆ ಅನರ್ಹನಾದವನನ್ನ ದೂರಿ ಪ್ರಯೋಜನವೇನು? ಅವನನ್ನು ಮರೆತು ಎದುರಾದ ಸಮಸ್ಯೆಯನ್ನು ನಿಭಾಯಿಸುವುದು ಜಾಣತನ' - ಎನ್ನುವುದು ಅಜ್ಜಿಯ ಒಟ್ಟಾರೆ ಅಭಿಪ್ರಾಯವಾಗಿತ್ತು. 'ಇದ್ದೊಬ್ಬ ಮಗಳ ಬಾಳು ಹೀಗಾಯಿತಲ್ಲ! ತನ್ನ ಯಾವ ಜನ್ಮದ ಪಾಪ ಕ್ರೋಢೀಕೃತಗೊಂಡು ಹೀಗಾಯಿತೋ! ಮಗಳು ಮೊಮ್ಮಗಳ ನೆಮ್ಮದಿ ನೋಡಿ 'ಶಿವಾ' ಎಂದು ಉಸಿರೆಳೆಯಬೇಕೆಂದರೆ ಇಂಥಾ ಅಂತ್ಯ ತಂದೆಯಲ್ಲೋ ಶಿವನೇ' ಎಂದು ಮುದುಕ ಒಳಗೊಳಗೇ ಗೋಳಿಡುತ್ತಿದ್ದ. ಇವರಿಬ್ಬರನ್ನು ಸಮಾಧಾನ ಮಾಡಲು ವಾಸಂತಿ ಹರಸಾಹಸ ಮಾಡುತ್ತಿದ್ದಳು. ತನಗೆ ಪ್ರಿಯವಾಗಿದ್ದ, ಅಜ್ಜಿ ಮತ್ತು ತಂದೆ ಇಬ್ಬರೂ ಮೆಚ್ಚಿಕೊಂಡಿದ್ದ ಹಾಡನ್ನು ತೊಟ್ಟಿಲು ತೂಗುವಾಗ ಗುನುಗುತ್ತಿದ್ದಳು. ಗುನುಗಿನ ಅಂತ್ಯಕ್ಕೆ ಬಿಕ್ಕು ಬಂದು ದನಿ ಕೀರಲಾಗಿ ನಿಲ್ಲಿಸುತ್ತಿದ್ದಳು. ಕನ್ನಡಿಯಲ್ಲಿ ನಿಂತು ಕುಂಕುಮ ಹಚ್ಚಿಕೊಂಬಾಗ ಅಳು ಬರುತ್ತಿತ್ತು. ತನ್ನ ಚಹರೆಯಲ್ಲಾದ ಬದಲಾವಣೆಗಳನ್ನು ಗಮನಿಸಿ ಭೀತಳಾಗುತ್ತಿದ್ದಳು. ಬಿಳಿಚಿಕೊಂಡ ಮುಖ ನೋಡಿ ಕಿರಚಬೇಕೆನಿಸುತ್ತಿತ್ತು.

ಒಂದು ದಿನ "ಈ ವಿಷಯವನ್ನು ಇಷ್ಟು ತಲೆಗಂಟಿಸಿಕೊಂಡು ಪ್ರಯೋಜನವೇನು? ಬಂದದ್ದನ್ನು ಎದುರಿಸಬೇಕಷ್ಟೆ. ಈಗಿರುವಂತೆ ಮುದಿ ಅಜ್ಜಿಗೂ ತಂದೆಗೂ ಮ್ಯಾಲೆ ಈ ಮಗುವಿಗೂ ತಾನೊಬ್ಬಳೇ ಆಧಾರ ನೆರೆಹೊರೆ ಏನೆಂದರೂ ಮಗು ಬೆಳೆಯುತ್ತಿರುವುದೇನು ಸುಳ್ಳಲ್ಲ. ಈ ಮೂವರನ್ನೂ ಕಟ್ಟಿಕೊಂಡು ಬದುಕುವುದು - ಅಷ್ಟೇ. ಮಿಕ್ಕದ್ದು ಶಿವನಿಚ್ಛೆ" - ಎಂದುಕೊಂಡು ಪೂರ್ವದ ಸಹಜಸ್ಥಿತಿಗೆ ಹಿಂತಿರುಗಲು ಗಟ್ಟಿ ಮನಸ್ಸು ಮಾಡಿದಳು.

"ಏನೇ ಬರಲಿ, ಎದುರಿಸಿ ನಿಮ್ಮಿಬ್ಬರನ್ನೂ ನೋಡಿಕೊಳ್ಳುತ್ತೇನೆ; ಮಗುವನ್ನೂ ಸಾಕುತ್ತೇನೆ. ನೀವು ಮಾತ್ರ ನನ್ನ ಬಗ್ಗೆ ಕಾಳಜಿ ಮಾಡುವುದು ಬೇಡ"

- ಎಂದು ಹೇಳಿ ಆಹಾರ ನಿರಾಕರಿಸಿದ ತಂದೆಗೆ ಒತ್ತಾಯ ಮಾಡಿ ಉಣಬಡಿಸಿದಳು. ಅವಳ ಗೆಲುವಿನ ಕಳೆ ನೋಡಿ ಆಚಾರ್ಯ ಮುಗುಳು ನಕ್ಕು ತನ್ನ ನೆಮ್ಮದಿಯನ್ನು ಸೂಚಿಸಿದ.

ನನ್ನ ಪಾಡಿಗೆ ನಾನಿರಲು ನೆರೆಹೊರೆ ಅವಕಾಶ ಕೊಟ್ಟರೆ ಸರಿ: ಇಲ್ಲದಿದ್ದರೆ ಅವರನ್ನೂ ಬಿಡುವುದಿಲ್ಲ."

ಎಂದು ಅಜ್ಜಿಯ ಮುಂದೆ ಸಾರಿ ಹೇಳಿ ಧೈರ್ಯ ಪ್ರದರ್ಶಿಸಿದಳು.

ಆಚಾರ್ಯನ ಶಿಷ್ಯನೊಬ್ಬ ಸೇವೆ ಮಾಡಲು ಬರುತ್ತಿದ್ದ. ಅವನ ನೆರವಿನಿಂದ ತಾನೇ ಮನೆ ನಡೆಸಲು ಸಿದ್ಧತೆ ಮಾಡಿಕೊಂಡು ಒಂದು ದಿನ ಕಳೆದಿತ್ತು. ಮಾರನೇ ದಿನ ಮುಂಜಾನೆ ಕುಂಕುಮ ಹಚ್ಚಿಕೊಳ್ಳಲು ಕನ್ನಡಿಯ ಮುಂದೆ ನಿಂತಿದ್ದಾಗ, ಮನೆಯ ಮುಂದೆ ಕುದುರೆಗಾಡಿ ನಿಂತ ಸದ್ದಾಯಿತು. ಕಿವಿ ಚುರುಕಾದವು. "ಯಾರದು"? ಎಂದು ಒಳಗಿನಿಂದಲೇ ಕೂಗುತ್ತ 'ಕುದುರೆಗಾಡಿ' ಎಂದರೆ ಇನ್ಯಾರು? ನನ್ನ ರವಿಯೇ" ಅವಸರದಲ್ಲಿ ಕುಂಕುಮ ಹಚ್ಚಿಕೊಳ್ಳಬೇಕೆಂದಾಗ ಕೈ ಜಾರಿ ಕರಡಿಗೆ ಕೆಳಗುರುಳಿ ಬಿದ್ದು ಕುಂಕುಮವೆಲ್ಲ ನೆಲದ ಮೇಲೆ ಚೆಲ್ಲಾಪಿಲ್ಲಿಯಾಯಿತು. ಅಪಶಕುನವೆಂದು ಭಯವಾಗಿ ಮೈ ಗಡಗಡ ನಡುಗಿ ಬೆವರೊಡೆಯಿತು. ಕಾಲು ಸೋತು ನಿಲ್ಲಲಾಗದೆ ಕೆಳಗೆ ಕೂತಳು, ಕರೆಯದಿದ್ದರೂ ಬೆಂತೆಯ ಮತ್ತವನ ಜೊತೆಗೊಬ್ಬ ಸೈನಿಕ ಒಳಬಂದು ಮಿಗಸಾಲೆಯಲ್ಲಿ ನಿಂತು "ಆಚಾರ್ಯರು ಒಳಗಿದ್ದಾರೆಯೇ?"ಎಂದು ಆ ಸೈನಿಕ ಕೇಳಿದ ಮೊಗಸಾಲೆಗೆ ಹೋಗಬಹುದಾಗಿದ್ದವಳು, ಉತ್ತರಿಸುವಷ್ಟು ಶಕ್ತಿ ಇದ್ದವಳು ಮನೆಯಲ್ಲಿ ಅವಳೊಬ್ಬಳೇ ಆದ್ದರಿಂದ ಹೆದರಿಕೊಂಡೇ ಎದ್ದಳು. ಹೊರಗೆ ಹೋಗಬೇಕಿದ್ದವಳು ಅಪಶಕುನದ ಭಯದಿಂದ ಅಜ್ಜಿಯ ಬಳಿಗೆ ಹೋದಳು. ಹೊರಗೆ ಹೋಗಬೇಕಿದ್ದವಳು ಅಪಶಕುನದ ಭಯದಿಂದ ಅಜ್ಜಿಯ ಬಳಿಗೆ ಹೋದಳು. ಅಜ್ಜಿ ಹಾಸಿಗೆಯ ಮೇಲೆ ಮುಖದಲ್ಲಿ ಕಿಂಚಿತ್ತೂ ಕಾಂತಿಯಿಲ್ಲದೆ ಮಣ್ಣಲ್ಲಿ ಮಾಡಿದ ಗೊಂಬೆಯ ಥರ ಕುಂತಿದ್ದಳು. ಎದುರಿನ ಮಾಡದಲ್ಲಿ ಶಿವನ ವಿಗ್ರಹವಿತ್ತು. ಅದರಲ್ಲಿ ಕಣ್ಣು ಕೀಲಿಸಿ ಕೈಮುಗಿದು ಪ್ರಾರ್ಥಿಸುತ್ತಿದ್ದವಳು ಹೊರಗಡೆ ಸೈನಿಕನ ದನಿ ಕೇಳಿ ಯಾರು, ಏನು ಎಂದು ತಿಳಿಯಲು ಕುತೂಹಲಿಯಾದಳು.

"ಶಿವ ಕಾಪಾಡಲಿ, ಹೋಗು ಹೊರಗೆ ಯಾರೋ ಬಂದಿದ್ದಾರೆ. ಯಾಕೆಂದು ಕೇಳು"

- ಎಂದು ಮೊಮ್ಮಗಳನ್ನು ನಿಟ್ಟುಸಿರು ಬಿಡುತ್ತ ಕಳಿಸಿದಳು. ಯಾವುದೇ ಆಶಾಕಿರಣವಿಲ್ಲದ ಅವಳ ಮಾತಿನಲ್ಲಿ ಇನ್ನೇನು ಕಾದಿದೆಯೋ ಎಂಬ ಹತಾಶೆ ಬೇಕಾದಷ್ಟಿತ್ತು.

ಹೊರಬಂದು ಅಪರಿಚಿತ ವ್ಯಕ್ತಿಗಳನ್ನು ನೋಡಿ,-

"ಯಾರು ನೀವು?"

-ಎಂದಳು. ದಯಮಾಡಿ ಇನ್ನಷ್ಟು ಹಿಂಸೆ ಕೊಡಬೇಡಿ ಎಂಬಂತೆ ಅವಳ ದನಿಯಿತ್ತು. ಬೊಂತೆಯ ಎದೆ ತಟ್ಟಿ "ನಾನು ಬೊಂತೆಯ ರವಿಕೀರ್ತಿಯವರ ಬಂಟ" ಎಂದು ಹೇಳುವ ಸನ್ನೆಗಳನ್ನ ಅನೇಕ ಸಲ ಮಾಡಿದ. ಕೊನೆಗೆ ಮೇವಿನ ಸೈನಿಕ ಮುಂದೆ ಬಂದು-

"ವಾಸಂತಿ ಅಂದರೆ ನಿವೇನಾ?"

ಅಂದ. ಕಾತರದಿಂದ "ನಾನೇ" ಅಂದು ತುಸು ಹೊತ್ತು ಉದ್ವೇಗದಿಂದ ಮಾತನಾಡಲಿಲ್ಲ. ಸೈನಿಕ ಕಲಿತ ಮಾತು ಹೇಳಿದ:

"ನಾವು ಯುವರಾಜ ರವಿಕೀರ್ತಿಯವರ ಬಂಟರು..."

ಮುಂದೆ ಅವನನ್ನು ಮಾತಾಡಲಿಕ್ಕೆ ಬಿಡದೆ

"ಹ್ಯಾಗಿದ್ದಾರೆ? ಎಲ್ಲಿದ್ದಾರೆ?"

ಎಂದಳು. ಅದೇ ಸೈನಿಕ ನಿರ್ಭಾವದಿಂದ

"ಚನ್ನಾಗಿದ್ದಾರೆ, ಇದೇ ಊರಿಗೆ ಬಂದಿದ್ದಾರೆ. ಆಶ್ರಮದಲ್ಲಿದ್ದಾರೆ. ತಮ್ಮನ್ನು ಕರೆತರಲು ಗಾಡಿಕೊಟ್ಟು ನಮ್ಮನ್ನು ಅಟ್ಟಿದ್ದಾರೆ ತಾಯಿ."

- ಅಂದ. ನಿಶ್ಚಿಂತೆಯ ನಿತ್ತುಸಿರು ಬಿಟ್ಟು ಅಜ್ಜಿಗೂ ತಂದೆಗೂ ಹೇಳಲು ಒಳಗೋಡಿದಳು. ಸುದ್ದಿ ಕೇಳಿ ಆಚಾರ್ಯನಿಗೆ ಹಿಡಿಸಲಾರದಷ್ಟು ಹಿಗ್ಗಾಯಿತು. ಮಗಳ ಕೈ ಹಿಡಿದು ಮ್ಯಾಲೆದ್ದು ಹೊರಬಂದು "ಬಂದೆಯಪ್ಪಾ ರವೀ..." ಎಂದು ಉತ್ಸಾಹದಿಂದ ಹೊರಬಂದು ಕೇಳಿದ.

"ಬಂದಿದ್ದಾರೆ ಸ್ವಾಮೀ. ಈಗಷ್ಟೇ ರಾಜಕಾರ್ಯ ಮುಗಿಸಿಕೊಂಡು ಆಶ್ರಮಕ್ಕೆ ಬಂದರು. ನಿಮಗೇ ಗೊತ್ತಲ್ಲ, ನಿಮ್ಮ ಶ್ವೇತಕೇತು ಮಹಾರಾಜರೂ ನಮ್ಮ ಚಿಕ್ಕ ದಣಿಗಳೂ ಬಾಲ್ಯ ಸ್ನೇಹಿತರೂ . ಆಶ್ರಮದಲ್ಲಿ ಜೊತೆ ಓದಿದವರು..."

ಮುದುಕನಿಗೆ ಆನಂದವಾಗಿ ಎದೆ ಹಿಡಿದುಕೊಂಡು 'ಶಿವಾ ಶಿವಾ' ಎನ್ನುತ್ತ ಸುಯ್ದು ಆನಂದದಿಂದ ಬಿಕ್ಕಿ ಬಿಕ್ಕಿ ಅಳತೊಡಗಿದ. 'ಯಾಕೇ ಸ್ವಾಮಿ?' ಅಂದರೆ "ಹರ್ಷವಾಗಿದೆಯಪ್ಪಾ... ಅಂತಿಂಥ ಹರ್ಷವಲ್ಲ!....

- ಎನ್ನುವಾಗ ಕಣ್ಣೀರಿನ ಮೂಲಕ ನಗೆಯೂ ಬಂತು. ವಾಸಂತಿ ಯಾವಾಗಲೋ ಅಜ್ಜಿಯ ಹತ್ತಿರ ಓಡಿಹೋಗಿದ್ದಳು.

ಕೊನೆಗೆ ಮಗು ಸಮೇತ ವಾಸಂತಿ ಮತ್ತು ಆಚಾರ್ಯ ಗಾಡಿಯಲ್ಲಿ ಕೂತರು. ಆಗಲೇ ಮನೆ ಮುಂದಿನ ಮಲ್ಲಿಗೆ ಬಳ್ಳಿ ಬಾಡಿತು.

# ಕನಕಪುರಿ

## ಐವತ್ತೊಂಬತ್ತು

ಮೊದಲು ಕೂಡ ತಂದೆ ಮಗಳ ಮಧ್ಯೆ ಹೇಳಿಕೊಳ್ಳುವಂಥ ಸಲಿಗೆ ಇರಲಿಲ್ಲ. ಶಿಖರಸೂರ್ಯನಿಗೆ ರವಿಕೀರ್ತಿಯ ಬಗ್ಗೆ ಇದ್ದ ಪ್ರೀತಿ ಗೌರಿಯ ಬಗ್ಗೆ ಇರಲಿಲ್ಲ. ಮಗಳು ಎನ್ನುವುದಕ್ಕಿಂತ ಅವಳೊಂದು ಜವಾಬ್ದಾರಿ, ಇನ್ನೊಬ್ಬರ ಮನೆ ಬೆಳಗುವಂಥವಳು. ಒಬ್ಬ ಒಳ್ಳೆ ವರನ ಕತ್ತಿಗೆ ಕಟ್ಟಿದರೆ ತನ್ನ ಕರ್ತವ್ಯಕ್ಕೆ ಸೀಮೆ ಎಳೆದಿದ್ದ. ಈಗಲೂ ಅಷ್ಟಕ್ಕೆ ಬದ್ಧನಾಗಿದ್ದ. ಕಂಚೀ ದೊರೆ ಕೇಳಿದ್ದರಿಂದ ಇವಳನ್ಯಾಕೆ ಅವನಿಗೆ ಕಟ್ಟಬಾರದೆಂದು ಎಕ್ಕ ಹಾಕಿದ್ದ. ರವಿಯೆದುರು ಈ ವಿಷಯ ಪ್ರಸ್ತಾಪಿಸಿದ್ದ. ತಂಗಿಯ ಒಲವು ಗೊತ್ತಿದ ರವಿ ಈ ಬಗ್ಗೆ ತಂದೆಯನ್ನು ಪ್ರೋತ್ಸಾಹಿಸಲಿಲ್ಲ. ಯಾವುದಕ್ಕೂ ಮುದ್ದುವನ್ನು ಒಂದು ಮಾತಿ ಕೇಳಬಹುದಲ್ಲ! ಎಂದು ಹಾರಿಕೆಯ ಮಾತಾಡಿದ್ದ. ಮಕ್ಕಳಿಗೆ ಸಲಿಗೆ ಹೆಚ್ಚಾಯಿತೆಂದು ಅಜ್ಜಿಗೂ ಅಂದಿದ್ದ. ಈಗ ನೋಡಿದರೆ ಮಗಳ ಕಳಂಕದಿಂದಲೇ ಚಕ್ರವರ್ತಿ ಶಿಖರಸೂರ್ಯನ ಚರಿತ್ರೆ ಸುರುವಾಗಿದೆ. !

ಶಿಖರಸೂರ್ಯ ತಂತಾನೇ ಅಂದುಕೊಂಡ:

“ಒಂದು ಕಡೆ ದಿನಾ ಕಾಣಿಕೆ ತರುವ ಮಾಂದಳಿಕರು ಹೊಗಳಿ ಮಹಾಪ್ರಭುವಿನ ಅಹಂಕಾರ ಹೊತ್ತಿಸುವ ಘಟನೆಗಳು ನಡೆಯುತ್ತಿದ್ದರೆ ಇನ್ನೊಂದು ಕಡೆ ತಾನು ಬಯಸಿದ ಹುಡುಗಿಯ ಹಿಂದೆ ಮಗ ಓಡುತ್ತಿದ್ದಾನೆ! ಕನಕಪುರಿಯ ರಾಜಕುಮಾರಿ, ಚಕ್ರವರ್ತಿ ಶಿಖರಸೂರ್ಯನ ಕುಮಾರಿ ಶಿವಾಪುರದ ಬುಡಕಟ್ಟಿನ ಒಂದು ಸಾಮಾನ್ಯ ಕರಡಿಯನ್ನು ವರಿಸಿ ಗರ್ಭಿಣಿಯಾಗಿದ್ದಾಳೆ! ಇದು ಪವಾಡವಲ್ಲವೆ! ಜೋಗ್ತಿಯರು ಆಗಲೆ ಅವಳ ಬಗ್ಗೆ ಹಾಡು ಕಟ್ಟಿ ಊರಾಡಿ ಹೊಟ್ಟೆ ಹೊರೆಯುತ್ತಿರಬಹುದು. ನನ್ನ ಮಗಳ ಹೆಸರಿನಲ್ಲಿ ಗುಡಿಗುಂಡಾರಗಳಾಗಲೇ ಎದ್ದಿರಬಹುದು. ಮಗಳು ನನ್ನ ಪಟ್ಟವನ್ನು ಕಸಿದು ಶಿವಾಪುರದ ಆ ಕರಡಿಗೆ ಕೊಟ್ಟರೂ ಆಶ್ಚರ್ಯವಿಲ್ಲ ಅಥವಾ ಆ ಕರಡಿಯೇ ಮಗಳ ಮೂಲಕ ಕನಕಪುರಿಯನ್ನ ಪ್ರವೇಶಿಸುವ ಕನಸು ಕಂಡಿರಬಹುದು. ಇಲ್ಲ ಇಲ್ಲ ಇದು ಸಾಧ್ಯವಿಲ್ಲ. ಕನಕಪುರಿ ಸಿಂಹಾಸನವನ್ನು ನಾನು ಕೊಡಲಾರೆ, ಹೆಣ್ಣೆ! ನೀನು ಮತ್ತು ನಿನ್ನ ಪ್ರಿಯಕರ ಯಮಪುರಿಗೆ ಹೋಗಲೇಬೇಕು. ಅಲ್ಲಿ ನಿಮ್ಮ ರಾಜ್ಯ ಕಟ್ಟಿಕೊಂದು ಆಳಬಹುದು..”

ಇಂಥ ಅನೇಕ ಸಂಗತಿಗಳನ್ನ ಒಬ್ಬನೇ ಇದ್ದಾಗ ಅಂದಾಡಿಕೊಳ್ಳುವುದಿತ್ತು.

ನಿಜ ಹೇಳಬೇಕೆಂದರೆ ತಂದೆ ಮಕ್ಕಳ ಸಂಬಂಧ ಕೂಡ ತನಗೆ ಉಪಯೋಗವಾಗಬೇಕೆಂದು ಬಯಸಿದವನಾತ. ಆತ ಮದುವೆಯಾದದ್ದೇ ಆಶ್ಚರ್ಯ. ಯಾಕಂತೀರೋ? ಆತ ಭಾರೀ ಸ್ವತಂತ್ರ ಕುಳ. ಯಾರೇ ಆಗಲಿ ಅವನಾಸೆಯ ವಿರುದ್ಧ ಹೋಗುವುದನ್ನು ತಮ್ಮ ಬಿನ್ನಾಭಿಪ್ರಾಯದ ಹೊಲಸು ನೆರಳು ತನ್ನ ಮೇಲೆ ಚೆಲ್ಲುವುದನ್ನ ಆತ ಸಹಿಸುತ್ತಿರಲಿಲ್ಲ. ಭಾವನೆಗಳಂತೂ ಅವನ ವ್ಯಕ್ತಿತ್ವದ ಯಾವ ಮೂಲೆಯಲ್ಲಿ ಇರಲಿಲ್ಲ. ಅಲ್ಲದೆ ಎಂಥಾ ಪ್ರಬಲ ಹೆಂಗಸು ಅವನ ಪಕ್ಕದಲ್ಲಿ ನಿಂತರೂ ದಯನೀಯವಾಗಿ ಯಾತನಾ ಸ್ಥಿತಿಯಲ್ಲಿರುವಂತೆ ಕಾಣುತ್ತಿದ್ದಳು. ಸ್ವಯಂ ಅವನಿಗೇ ಅದು ಅಸಹ್ಯಕರವಾಗಿತ್ತು! ಅದಕ್ಕೆ ಅವನು ಯಾವುದೇ ಸಂದರ್ಭದಲ್ಲಿ ಯಾವುದೇ ಹೆಂಗಸಿಗೆ ಸಲಹೆಯನ್ನಾಗಲಿ ಅಭಿಪ್ರಾಯವನ್ನಾಗಲಿ ಕೇಳಿದವನಲ್ಲ, ಈಗ ಮಗಳು ಎದುರು ನಿಂತಿದ್ದಾಳೆ! ಇದಕ್ಕೆಲ್ಲಾ ತಾನು ಯೋಚನೆ ಅಮಡಿದ ಉಪಾಯವೇ ಸೈ! ಎಂದು ಮತ್ತೆ ಮತ್ತೆ ಖಾತ್ರಿ ಮಾಡಿಕೊಂಡ.

ಗೌರಿ ಮಾತ್ರ ಇದ್ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಸುಮ್ಮನಿದ್ದಳು. ತಾನು ತಂದೆಯ ಕಣ್ಣಿಗೆ ಬಿದ್ದರೆ ತಪ್ಪು, ತನ್ನ ವಿಷಯ ಯಾರಾದರೂ ಆಗನೆದುರಿಗೆ ಎತ್ತಿದರೆ ತಪ್ಪು, ತಾನು ಏನಾದರೂ ಅಂದರೆ ತಪ್ಪು, ಅನ್ನದಿದ್ದರೆ ತಪ್ಪು. ಕೊನೆಗೆ ತಂದೆ ತನ್ನನ್ನು ನೋಡದಿರುವ ತನ್ನೊಂದಿಗೆ ಮಾತಾಡದಿರುವ ಯಾವ ಸಂಗತಿಯಿಂದಲೂ ಆಕೆ ವಿಚಳಿತಲಾಗಲಿಲ್ಲ. ಆ ದಿನ ಅವಳ ಕತ್ತು ಹಿಸುಕಿ

ಕೊಲ್ಲುವುದಕ್ಕೆ ನೋಡಿದ. ಆಮೇಲೆ ಅವಮಾನಿಸಿದ.... ಸುದೈವಕ್ಕೆ ಇನ್ನೊಬ್ಬರೆದುರು ಆಡಿಕೊಂಡಿರಲಿಲ್ಲ. ಇವಳೂ ಯಾವುದೋ ಒಂದು ನಿರ್ಧಾರ ತಗೊಂಡು ಧೈರ್ಯವಾಗಿದ್ದಳು. ಜೊತೆಗೆ ಕನಸುಗಳಿದ್ದವು. ಬೆಳ್ದಿಂಗಳು ಬಂದಾಗ ಮಾತ್ರ ಕನಸುಗಳಿಂದ ಘಾಸಿಯಾಗುತ್ತಿದ್ದಳು. ಅವಳು ತನ್ನ ಕನಸುಗಳನ್ನು ತಾಳೋಲೆಗಳಲ್ಲಿ ಬರೆದಿಟ್ಟಿದ್ದಳು. ಅವುಗಳಲ್ಲಿ ಕೆಲವನ್ನು ನಾವು ಕದ್ದು ನೋಡಿ ಅವಳ ಅನುಮತಿ ಇಲ್ಲದೆ ತೋರಿಸುತ್ತಿದ್ದೇವೆ. ನೋಡಿರಿ:

(ಇಲ್ಲಿ ಬರುವ ಜೋಗಿ ಜಂಗಮ ಅಂದರೆ ನಿನ್ನಡಿ ಎಂದುತಿಳಿಯಬೇಕು. )

೧

ಕನಸಿನಲ್ಲಿ ಕಾಣಿಸಿಕೊಂಡ ಜೋಗಿ ಜಂಗಮ
ಏನೊಂದನೂ ನುಡಿದಾಡದೆ ಸೀದಾ ಪಾದವ ಬೆಳೆಸಿದ ದೇವರ ಕೋಣೆಗೆ
ಗಬಗಬ ನೈವೇದ್ಯ ತಿಂದು
ಬಾಯೊರೆಸಿಕೊಂಡ! ಭೇದಿಸಲಾಗದ ಕತ್ತಲೆಯಲ್ಲಿ
ಅದು ತನ್ನ ಉಡುಪು ಎಂಬಂತೆ
ಮಾಯವಾದ.

ಇನ್ನೊಂದು

೨

ಗರ್ಭಗುಡಿಯಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದೆ.
ಆಗೋ ಮೂಲೆಯಲ್ಲಿ ನಿಂತಿದ್ದ
ಜಿಂಕೆಗಾಗಿ ಹೋಂಚಿದ ಹುಲಿಯಂತೆ!
ಒಂದು ಹೆಜ್ಜೆ ಹಿಂದಿಟ್ಟರೂ ಮುಂದಿಟ್ಟರೂ
ಅವ್ವಯ್ಯಾ ಹುಲಿ ಹಾರಿ ಮೈಮ್ಯಾಲೇ ಬರುತ್ತದೆ!
ಥರಥರ ನಡುಗಿ
ಕಣ್ಣಿಗೆ ಕತ್ತಲೆ ಅಡರಿ ಕೈಯ ನೈವೇದ್ಯ ಜಾರಿ
ಜೋಕೆ ತಪ್ಪಿ ಕೆಳಗೆ ಭಿಳುವಷ್ಟರಲ್ಲಿ ಹಾರಿ ಬಂದು ಜಂಗಮ ಕೈ ಹಿಡಿದು ನಿಲ್ಲಿಸಿದ.
ಶಿವನಿಚ್ಛೆ ಎನ್ನುತ್ತ ನೈವೇದ್ಯವ ತಗೊಂಡು
ಬಿಲ್ವಪತ್ತಿಯೆಲೆ ಕೈಗಿಟ್ಟು
ಗರ್ಭಗುಡಿಯಲ್ಲಿ ಮಾಯವಾದ!

ಮತ್ತೊಂದು ರಾತ್ರಿ,

ಅಗೋ ಆ ಎದುರಿಗಿನ ಮರದಾಚೆ
ಯಾರೋ ಕಂದಿಲು ಹಿಡಿದು ನಿಂತಿದ್ದ,
ಗಾಬರಿಯಾದೆ.
ಬಾಗಿಲು ಬಡಿಯದೆ ನೇರ
ಕೋಣೆಯೊಳಗೇ ಬಂದ
ಆಗಲೇ ಗೊತ್ತಾಯಿತು;
ಬಂದವನು ಚಂದ್ರಮ,
ಅಲ್ಲಲ್ಲ ಜಂಗಮ!
ಹಿಗ್ಗಿನ ಬಾಗಿಲು ತೆರೆದು ಒಳನುಗ್ಗಿದವು ನೋಡು ಚುಕ್ಕೆಗಳು
ಒಂದೊಂದೇ ಕೋಲು ಬೆಳಕಾಗಿ ಕೆಳಕ್ಕೇ
ನನ್ನ ಮನೆಯೊಳಕ್ಕೇ
ಇಳಿದು,
ಬೆರಳಿಗೆ ಬೆರಳು ಹೆಣೆದು ಕುಣಿದಾಡಿದವು
ಶಬ್ದಗಳ ಚೆಲ್ಲಾಡಿ!
ಶಬ್ದಗಳೆಲ್ಲಾ ನಿಶ್ಯಬ್ಧಗಳಾಗಿ ಮನೆಯೆಲ್ಲ ಬೆಳಕಿನ ಬಯಲಾದಾಗ
ನೀನೆಲ್ಲಿದ್ದೆ ಜಂಗಮ?

ಇಂತಪ್ಪ ಕನಸುಗಳ ಕಾನ ಮಾಡುತ್ತ ನಿನ್ನಡಿಯ ವಿರಹದಲ್ಲಿ ಗೌರಾ ಇರಲಾಗಿ ಒಂದು ಮುಂಜಾನೆ ದೇವಾಲಯಕ್ಕೆ ಹೋಗಿದ್ದಳು. ದೇವಾಲಯದ ಪೌಳಿಯ ಒಂದು ಮೂಲೆಯಲ್ಲಿ ಬಡಕಲು ದೇಹದ, ಉದ್ದ ಮೂಗಿನ, ಬಿಟ್ಟ ಕೂದಲಿನ, ಕೈಯಲ್ಲಿ ಚೌಡಿಕೆ ಹಿಡಿದ, ಮುಖದ ತುಂಬ ಹಚ್ಚೆಯ ಹಸಿರು ಚಿತ್ರಗಳಿದ್ದ ಮುದುಕಿ ಕೂತಿದ್ದನ್ನು ಕಂಡಳು. ಆಕೆಯ ಪಕ್ಕದಲ್ಲಿ ಒಬ್ಬ ನಡು ಹರೆಯದ, ನಾಚಿಕೆಯಿಂದ ಮುಖ ಮುಚ್ಚುವಂತೆ ಸೀರೆಯುಟ್ಟ ಹೆಂಗಸು ಕೈಯಲ್ಲಿ ಏಕತಾರಿ ಹಿಡಿದು ಕೂತಿದ್ದಳು. ಇನ್ನೊಮ್ಮೆ ನೋಡಿದಾಗ ಅದು ಹೆಂಗಸಲ್ಲ, ಹೆಣ್ಣಿನಂತಿದ್ದ ಗಂಡಸೆಂದು ಗೊತ್ತಾಯಿತು.

ಅನ್ನದಾತೆಯೊಬ್ಬಳು ಸಿಕ್ಕಳೆಂದು ಇಬ್ಬರೂ ಖುಶಿಯಾದರು “ಬಾ ತಾಯಿ ಬಾ” ಎಂದು ಸ್ವಾಗತಿಸಿ ಹೆಣ್ಣಿಗ ಯುವಕ ಗೌರಿ ಕೂರಲು ಹರಿವಿದ್ದ ಸಾಮಾನುಗಳನ್ನು ಸರಿಸಿ ಜಾಗ ಮಾಡಿಕೊಟ್ಟ. ಅಪರಿಚಿತರ ಮುಂದೆ ಕೂರುವುದಕ್ಕೆ ಸಂಕೋಚವಾದರೂ ಗೌರಿ ಹೋಗಿ ಕೂತು ‘ನೀವುಯಾರು? ಎಲ್ಲಿ ಹೊರಟ್ಟಿದ್ದೀರಿ?’ ಎಂದಳು. ಹೆಣ್ಣಿಗ ಮುಂದಾಗಿ ಬಾಗಿ,

“ನಾವು ಅಮ್ಮನ ಜೋಗೇರು, ನಾನು ಗಂಗಿ ಇವಳು ಗುಣದಮ್ಮ”

“ಅಮ್ಮ ಅಂದರೆ ಯಾವ ಅಮ್ಮ”

“ಶಿವಾಪುರದಮ್ಮ”

ತಕ್ಷಣ ಗೌರಿಯ ಮೈಮೇಲೆ ಪುಳಕವೆದ್ದು ಕಣ್ಣುಗಳಲ್ಲಿ ಬೆಳಕಾಡಿತು. ಉತ್ಸಾಹದಿಂದ,

“ಶಿವಪಾದ…. ನಿನ್ನಡಿ ಆ ಶಿವಾಪುರದಮ್ಮನ?”

ಇವರಿಬ್ಬರಿಗೂ ಹೋದ ಜೀವ ಬಂದಷ್ಟು ಸಂತೋಷವಾಯಿತು. ಉತ್ಸಾಹದಿಂದ,

“ಹೌದೆಂದವ್ವಾ ಹೌಂದು! ಹೌಂದು!”.

-ಎಂದು ಏಕಕಾಲಕ್ಕೆ ದನಿಗೂಡಿಸಿದರು. ಒಪ್ಪೊತ್ತಿನ ಊಟದ ಖಾತ್ರಿಯಾಗಿ ಗೌರಿ ಕೇಳದೆಯೇ ತಮ್ಮ ವಿಷಯ ಹೇಳಿಕೊಂಡು ಕನಕಪುರಿಯ ಬಗೆಗಿನ ತಮ್ಮ ಅಸಮಾಧಾನವನ್ನೂ ತೋಡಿಕೊಂಡೇ ಬಿಟ್ಟರು. ಗುಣದಮ್ಮ ಹೇಳಿದಳು:

“ಇದೆಂಥಾ ಊರು ತಾಯಿ? ನಮ್ಮಂಥಾ ಯಾತ್ರಿಕರು ಇರೋದಕ್ಕೆ ಒಂದು ಧರ್ಮಶಾಲೆಯಿಲ್ಲ, ಒಂದು ಛತ್ರವಿಲ್ಲ, ದಾನವಿಲ್ಲ, ಧರ್ಮವಿಲ್ಲ, ರಾಜಧಾನಿಯಂತೆ! ತಗೊಂಡೇನು ಮಾದೋದು? ಅದೇ ಶಿವಾಪುರ ನೋಡು, ಯಾರ ಮನೆಗ್ಹೋದರೂ ಒಂದು ರೊಟ್ಟಿ ಕೊಡ್ತಾರ. ಇಲ್ಲೇನಿದೆ ಮಣ್ಣೂ? ಗುಡೀ ಹೊಕ್ಕರ ಪೂಜಾರಿ ಹೊರಗ ಹೋಗ್ರಿ ಅಂತಾನ! ಊರು ತುಂಬ ಬರೀ ಅಂಗಡಿ! ಅನ್ನಾ ಮಾರೋ ಅಂಗಡಿ! ನೀರು ಮಾರೋ ಅಂಗಡಿ! ಇಲ್ಲಿ ಮಂದಿ ಹೆಂಗ ಬದಕ್ತಾರ!”

ಅಷ್ಟರಲ್ಲಿ ಗೌರಿ ಮುಂದೆ ಬಂದು ಕೇಳಿದಳು:

“ನೀವು ಶಿವಾಪುರ ನೋಡಿರಿ?”

“ನೋಡದೇನ ತಂಗಿ? ವರ್ಷಾ ಹೋಗಿ ಶಿವಾಪುರ ಬೆಟ್ಟ ಹತ್ತತೀವಿ. ನಾಕೈದ ದಿನಾ ವಸ್ತಿ ಇದ್ದ ಬರ್ತಿವಿ. ಪುಣ್ಯ ಮಾಡಿರಬೇಕವಾ ಅಂತಾ ಜಾಗ ನೋಡಾಕ!”

ಮುದುಕಿ ಹೇಳಿದಳು:

“ಖರೇ ಹೇಳತೇನ ತಂಗೀ, ಶಿವಾಪುರ ಬೆಟ್ಟ ಅಂದರ ಏನಂದುಕೊಂಡೀಯೇ ನನ್ನ ಹಡೆದವ್ವಾ? ಅದು ಕೈಲಾಸ! ಎಷ್ಟೊಂದು ತರುಮರ ಅದಾವ! ಎಷ್ಟೊಂದು ಗಿಡಗಂಟಿ ಬಳ್ಳೀ! ಒಂದೊಂದು ಬೆಳೆಯೋದಕ್ಕೂ ಬೆಳೆದು ಬದುಕೋದಕ್ಕೂ ಪುಷ್ಕಳ ಜಾಗಾ ಐತಿ, ಹವಾ ಐತಿ ನೀರ ಐತಿ! ಇಷ್ಟಾದರೂ ಗಿಡಾ ಆಗಲಿ, ಬಳ್ಳಿ ಆಗಲಿ, ಒಂದರ್ಹಾಂಗ ಒಂದಿಲ್ಲ. ಒಂದೆಸಳು ಸೈತ ಒಂದರ್ಹಾಂಗ ಒಂದಿಲ್ಲ. ಮತ್ತ ನೋಡಿದರ ಎಲ್ಲಾ ಒಂದs ಥರಾ ಕಾಣಿಸ್ತಾವ! ಕೂಡಿ ಬದುಕೋದನ್ನ ನೋಡಬೇಕಂದರ ಶಿವಾಪುರ ನೋಡಬೇಕ ಎವ್ವಾ!”

ಇಬ್ಬರ ಮಧ್ಯೆ ಶಿವಾಪುರದ ವಿಷಯ ಹೇಳೋದಕ್ಕೆ ಸ್ಪರ್ಧೆ ನಡೆದ ಹಾಗಿತ್ತು. ತಕ್ಷಣ ಗಂಗ ಎತ್ತಿಕೊಂಡ,

“ನೀನು ಶಿವಪಾದನ್ನ ನೋಡೀ ಏನ ತಂಗಿ?”

“ಇಲ್ಲ” ಎಂದಳು ಗೌರಿ.

“ಅಹಾಹಾ ಅವ ಸಾಕ್ಷಾತ ಶಿವನ ಶಿವಪಾದ ಎವ್ವಾ!”

“ಅವನ ವಯಸ್ಸೆಷ್ಟು?”

ಮುದುಕಿ ಹೇಳುವುದಕ್ಕೆ ಮುಂದಾದಳು.

“ನಮ್ಮಂಥಾ ಪಾಮರ ಮಂದಿಗೆ ಶಿವಪಾದನ ವಯಸ್ಸು ಹೇಳಕಾದೀತೇನ ಎವ್ವಾ! ಹತ್ತು ಸಲ ನೋಡಿದರ ಹತ್ತ ನಮೂನಿ ಕಾಣಿಸ್ತಾನು! ಹುಡುಗ ಅಂದರ ಮುದುಕನ್ಹಾಂಗ ಕಾಣತಾನು! ಮುದುಕ ಅಂದರ ಕೂಸಿನ್ಹಾಂಗ ಕಾಣತಾನು! ಎವ್ವಾ ಎವ್ವಾಃ ಅವ ಸರ್ವದೇವತಾಮಯ!”

ಈಗ ಗಂಗ ಮುಂದಾದ –

“ಅವನ ಕಣ್ಣ ನೋಡಬೇಕಃ ಎವ್ವಾ. ಲಿಂಗವ ಉಜ್ಜಿ ಉಜ್ಜಿ ತೊಳೆದ ಇಟ್ಹಾಂಗ ಅವನ ಕಣ್ಣು! ಗುಡ್ಯಾಗೀನ ಗಂಟೀ ಬಾರಿಸಿದಾಂಗ ಅವನ ದನಿ. ಮರಣವ ಗೆದ್ದವನು. ಮೂರು ಕಾಲ ಬಲ್ಲವನು, ಬೆಟ್ಟದ ಗವೀ ಜೋಡೀ ಮಾತಾಡುವಾತ, ಗುಡುಗು ಮಿಂಚಿನ ಮಾತು ಅರಿದಾತ!...”

ಎಂದು ಹೇಳುತ್ತ ತನ್ನ ವರ್ಣನೆಯಲ್ಲಿ ತಾನೇ ತನ್ಮಯನಾಗಿ “ಎವ್ವಾ ಎವ್ವಾ ನನ್ನ ಶಿವಪಾದನೇ!” ಎನ್ನುತ್ತ ಕೆನ್ನೆ ಬಡಿದುಕೊಂಡು ನೆಲಮುಟ್ಟಿ ಶಿವಪಾದನಿಗೆ ನಮಸ್ಕಾರವನ್ನಾಚರಿಸಿದ.

ಉತ್ಸಾಹ ತೀರದ ಅವರ ಮಾತಿನಿಂದ ಗೌರಿ ಭಾರೀ ಪ್ರಭಾವಿತಳಾದಳು. ಅವರು ಹೇಳುವಷ್ಟನ್ನೆಲ್ಲಾ ಕೇಳಿ ಆದ ಮೇಲೆ ಈಗ ಖಾಲಿಯಿದ್ದ ವೈದ್ಯಶಾಲೆಯಲ್ಲಿ ಅವರಿಗೆ ಉಳಿಯುವ ಮತ್ತು ಊಟದ ವ್ಯವಸ್ಥೆ ಮಾಡಿದಳು.

ಅದಾಗಿ ಮಾರನೆಯ ಸಂಜೆ ಗೌರಿ ಸೇವಕರ ಸಹಾಯದಿಂದ ಆಹಾರವ ಕದ್ದು ಮನೆಯಿಂದ ಮಾಯವಾದದ್ದನ್ನು ರವಿಕೀರ್ತಿ ಕಂಡ. ದೂರದಿಂದಲೇ ಬೆಂಬತ್ತಿ ಹೋಗಿ ಆಕೆ ಎಲ್ಲಿಗೆ ಹೋಗುತ್ತಿರುವಳೆಂಬುದನ್ನ ಪತ್ತೆ ಹಚ್ಚಿದ. ಆಮೇಲೆ ಹೊತ್ತು ಕಳೆದರೂ ಆಕೆ ಬಾರದಿರುವುದನ್ನು ಕಂಡು ತಾನೂ ವೈದ್ಯಶಾಲೆಗೆ ಹೋದ. ನೋಡಿದರೆ, – ಮುದುಕಿಯೊಬ್ಬಳು ಚೌಡಿಕೆ ಬಾರಿಸುತ್ತ ಶಿವಾಪುರದಮ್ಮನ ಹಾಡು ಹೇಳುತ್ತಿದ್ದಾಳೆ! ಇನ್ನೊಂದು ಏಕತಾರಿಯ ಹೆಂಗಸು ಕುಣಿಯುತ್ತಿದೆ!

ರವಿಯನ್ನು ಕಂಡಕೂಡಲೇ ಶಿಶುಸದೃಶ ಮಂದಹಾಸದಿಂದ ಹಾಡುತ್ತಿದ್ದ ಮುದುಕಿ ತಕ್ಷಣ ಹಾಡು ನಿಲ್ಲಿಸಿದಳು. ಹೆಣ್ಣಿಗ ಕುಣಿತ ನಿಲ್ಲಿಸಿ ರವಿಯನ್ನೇ ನೋಡುತ್ತಿದ್ದ. ಇವರೆದುರಿಗೆ ಕೂತಿದ್ದ ಗೌರಿ ಅಣ್ಣನನ್ನು ನೋಡಿದ್ದೇ ತಪ್ಪು ಮಾಡಿದಂತೆ ಮುಖ ಸಪ್ಪೆ ಮಾಡಿಕೊಂಡು ನಿಂತಳು. ನೋಡುವುದಕ್ಕೆ ಭಿಕ್ಷುಕರಂತಿದ್ದ ತನ್ನ ಅತಿಥಿಗಳನ್ನ ಬೇರೆಯವರಿಗೆ ತೋರಿಸಲು ಅವಳು ಇಷ್ಟಪಡುತ್ತಿರಲಿಲ್ಲ. ಅವಳಿಗೆ ಅವರ ಬಗ್ಗೆ ಅಪಾರ ಗೌರವ ಭಾವನೆ ಇದ್ದಂತಿತ್ತು. ಯಾರಾದರೂ ಅವರನ್ನು ನೋಡಿ ನಕ್ಕರೂ ಅವಳ ಮನಸ್ಸು ನೋಯುತ್ತಿತ್ತು. ರವಿ ತನಗೆ ಗೊತ್ತಿಲ್ಲದೆ ಅಲ್ಲಿಗೆ ಬಂದದ್ದು ಅವಳಿಗಿಷ್ಟವಾಗಲಿಲ್ಲ. ರವಿ ಚಕಿತನಂತೆ ಕಂಡು ಬಂದುದರಿಂದ ಅವರನ್ನು ನೋಡಿ ನಗಾಡಬಹುದೆನಿಸಿ ನೇತ್ರಗಳಿಂದಲೇ ಅತಿಥಿಗಳಿಗೆ ಅವಮಾನ ಮಾಡಬೇಡ ಎಂದು ಕೇಳುವಂಥ ಭಾವ ಪ್ರದರ್ಶನ ಮಾಡಿದಳು.

ರವಿ ಸ್ವಲ್ಪ ಹೊತ್ತು ಸುಮ್ಮನಿದ್ದು ಅವರನ್ನೇ ನೋಡತೊಡಗಿದ. ಅತಿಥಿಗಳಿಬ್ಬರೂ ಕೆನ್ನೆ ಹಣೆಗಳಿಗೆ, ಮುಂಗೈ ಮೊಳಕೈಗಳಿಗೆ ಭಸ್ಮ ಬಳಿದುಕೊಂಡಿದ್ದರು. ಆ ಹೆಣ್ಣಿಗ ಸೀರೆಯುಟ್ಟಿದ್ದರೂ ಆತ ಹೆಣ್ಣಲ್ಲವೆಂದು ಗಡ್ಡ ಬೋಳಿಸಿದ ಒರಟಾದ ಗದ್ದದಿಂದ ತಿಳಿಯುತ್ತಿತ್ತು. ಪರೀಕ್ಷಕರ ನೇತಗಳಿಂದ ನೋಡುತ್ತಿದ್ದುದರಿಂದ ಹೆಣ್ಣಿಗ ನಾಚಿಕೊಂಡಂತೆ ಅಧೋನೇತ್ರನಾಗಿ ಆಗಾಗ ದಪ್ಪ ಹುಬ್ಬುಗಳ ಕೃತಿಮ ಸ್ತ್ರೀನೇತ್ರಗಳಿಂದ ನೋಡುತ್ತಿದ್ದುದರಿಂದ ಹೆಣ್ಣಿಗ ನಾಚಿಕೊಂಡಂತೆ ಅಧೋನೇತ್ರನಾಗಿ ಆಗಾಗ ದಪ್ಪ ಹುಬ್ಬುಗಳ ಕೃತ್ರಿಮ ಸ್ತ್ರೀನೇತ್ರಗಳಿಂದ ರವಿಯನ್ನು ನೋಡುತ್ತಿದ್ದ. ಮುದುಕಿ ಮಾತ್ರ ಕಿಡಕಿಯಾಚೆ ದೃಷ್ಟಿ ಹಾಯಿಸುತ್ತ ರವಿಯ ನೇತ್ರಗಳನ್ನು ನಿವಾರಿಸಿದಳು.

“ಇವರ್ಯಾರು? ಎಲ್ಲಿಯವರು?”

- ಎಂದು ರವಿ ಗೌರಿಯನ್ನು ಕೇಳಿದ.

ಇವರು ಶಿವಾಪುರದ ಆಮ್ಮನ ಜೋಗ್ತಿಯರು, ವರ್ಷಕ್ಕೊಮ್ಮೆ ಅಮ್ಮನ ಸನ್ನಿಧಿಗೆ ನಡೆದುಕೊಂಡೇ ಹೋಗಿ ಬರುತ್ತಾರೆ ಅಮ್ಮನ ಕಥೆಯನ್ನ ಸೊಗಸಾಗಿ ಹಾಡುತ್ತಾರೆ."

ಅಪ್ಪನಿಗೆ ಗೊತ್ತಿಲ್ಲದೆ ನಡೆದ ಕಾರ್ಯಕ್ರಮವಿದೆಂದು ರವಿಗೆ ಸ್ಪಷ್ಟವಾಯಿತು. ಗೌರಿಯಲ್ಲಿ ಮೂಡಿದ ವಯಸ್ಸಿಗೆ ಮೀರಿದ ಈ ಆಸಕ್ತಿಯಿಂದ ರವಿಗೆ ಆಶ್ಚರ್ಯವಾಯಿತು. ಹಾಗೆಯೇ ತಂದೆಗೆ ಗೊತ್ತಾಗದಂತೆ ಕದ್ದು ಅಮ್ಮನ ಕಥೆ ಕೇಳಿಸಿಕೊಳ್ಳುತ್ತಿದ್ದ ಅವಳ ಧೈರ್ಯವನ್ನು ಮೆಚ್ಚಿಕೊಂಡ. ರವಿ ಹಾಗೆ ಮೂಕವಿಸ್ಮಿತನಾದುದನ್ನು ನೋಡಿ ಮುದುಕಿ ಚೌಡಿಕೆಯನ್ನು ಮಿಡಿದು "ಹಾಡೋಣವ?" ಎಂದು ಕೇಳಿ ಉತ್ತರಕ್ಕೆ ಕಾಯದೆ,

"ಅಮ್ಮನ ಕತಿ ಕೇಳಿದರ ನಿನ್ನ ಏಳೇಳು ಜನ್ಮ ಪಾವನ ಆಗತಾವ; ಕುಂತು ಕೇಳು ಶಿವಾ."

ಎಂದು ಇನ್ನೊಮ್ಮೆ ಚೌಡಿಕೆ ಮಿಡಿದಳು. ರವಿಯ ಚಿತ್ತ ಬೇರೆ ಯೋಚನೆಗಳಲ್ಲಿ ತೊಡಗಿದ್ದರಿಂದ ಬೇಡವೆಂಬಂತೆ ಕೈ ಮಾಡಿದ. ತಕ್ಷಣ ಗೌರಿ ಮುಂದೆ ಬಂದು ಈಗ ಬೇವೆಂಬಂತೆ ಮುದುಕಿಗೆ ಕೈ ಅಲುಗಿ ತೋರಿಸಿದಳು. ಮುದುಕಿ ಬಿಡಲಿಲ್ಲ,-

'ಯಾಕ ಬ್ಯಾಡಂತಿ ಮಗಳ? ಯಜಮಾನಪ್ಪ ದೊಡ್ಡಮನಿಶ್ಯಾ ಅದಾನ? ಅಮ್ಮನಿಗೆ ಬೇಕಾದವನು: ಕೆಳಲಿ.'

- ಅಂದಳು. ಅವಸರದಲ್ಲಿದ್ದಂತೆ ರವಿ ಎದ್ದು,

"ಗಳಿಗೆ ಹೊತ್ತು ತಂಗಿಯ ಜೊತೆ ಮಾತಾಡುವುದಿದೆ. ಕರೆದೊಯ್ಯುತ್ತೇನೆ"

-ಎಂದು ಹೇಳಿ ಗೌರಿಯ ಕೈ ಹಿಡಿದುಕೊಂಡು ವೈದ್ಯಶಾಲೆಯ ಮಹಡಿಗೆ ಕರೆದೊಯ್ದು 'ಇವನು ಗೌರಿಯ ಅಣ್ಣನಿರಬೇಕು; ಮುಖಚರ್ಯೆ ಹಾಗೇ ಇದೆ' ಎಂದು ಜೋಗ್ತಿಯರಿಬ್ಬರೂ ಮಾತಾಡಿಕೊಂಡರು.

ಮಹಡಿಯ ಮೇಲೆ ಬಂದು ಕಿಡಕಿ ಬಾಗಿಲು ತೆಗೆದು, ಪೀಠದ ಮ್ಯಾಲಿನ ಧೂಳೊರೆಸಿ ತಂಗಿಯನ್ನಲ್ಲಿ ಕೂರಿಸಿ, ಎದುರಿನ ಪೀಠದಲ್ಲಿ ತಾನು ಕೂತು,

"ಏನು ಮಾಡ್ತಾ ಇದ್ದೀ ಮುದ್ದೂ?"

- ಅಂದ ತಂದೆಯ ಬಗೆಗಿನ ಭಯ, ತಂಗಿಯ ಬಗೆಗಿನ ಚಿಂತೆ ಅವನ ಕಣ್ಣು ಮುಖಗಳಲ್ಲಿ ಸ್ಪಷ್ಟಾವಾಗಿ ಮೂಡಿತ್ತು. ಚಿಂತೆ ಭಯಗಳ್ಯಾಕೆಂದರೆ ಶಿಖರಸೂರ್ಯ ಗೌರಿಯ ಬಗ್ಗೆ ತೋರಿಸಿದ್ದಕ್ಕಿಂತ ಹೆಚ್ಚು ಸಿಟ್ಟಾಗಿದ್ದ. ಅವಳು ಎಣಿಸಿದ್ದಕ್ಕಿಂತ ಹೆಚ್ಚು ಕ್ರೂರಿಯಾಗಿದ್ದ. ಇದು ತನಗೆ ಮಾತ್ರ ಗೊತ್ತಿತ್ತು; ಗೌರಿಗೆ ತಿಳಿದಿರಲಿಲ್ಲ.

"ನೀನು ಈ ಜೋಗೇರ ಹಾಡು ಕೇಳೋದು ಅಪ್ಪನಿಗೆ ಗೊತ್ತಾದರೆ ಏನಾದೀತು ಅಂತ ಯೋಚನೆ ಮಾಡಿದ್ದೀಯಾ?"

- ಅಂದ. ಗೌರಿ ಶಿವಾಪುರದ ವಿಷಯದಲ್ಲಿ ಯಾವುದೇ ಭಾವುಕ ಹೊಂದಾಣಿಕೆಗೆ ಸಿದ್ಧಳಿರಲಿಲ್ಲ.

“ಅಣ್ಣಾ, ನಿನ್ನೊಂದಿಗೆ ಮಾತಾಡೋಣ ಅಂತಲೇ ಇದ್ದೆ. ಈಗ ನೀನು ಒಬ್ಬನೇ ಸಿಕ್ಕಿದ್ದು ಒಳ್ಳೆಯದೇ ಆಯಿತು. ಈ ವಿಷಯದಲ್ಲಿ ಸಹಾಯ ಮಾಡುವುದಕ್ಕಾದರೆ ಮಾಡು. ಆಗದಿದ್ದರೆ ಬೇಡ. ನಾನಂತೂ ಶಿವಾಪುರಕ್ಕೆ ಹೋಗಲೇಬೇಕು. ಜೋಗೇರ ಜೊತೆಗೆ ನಾಳೆಯೇ ಹೋಗುತ್ತಿದ್ದೇನೆ. ನಾನು ಹೋದ ಮೇಲೆ ಅಪ್ಪನಿಗೆ ಹೇಳಿಕೊ. ಅಣ್ಣನಾಗಿ ನೀನು ಇಷ್ಟು ಸಹಾಯ ಮಾಡಬೇಕು. ಇಷ್ಟಾಗಿಯೂ ನನ್ನನ್ನ ಯಾರಾದರೂ ತಡೆದಿರೋ - ನನ್ನ ಜೀವ ನನ್ನ ಕೈಯಲ್ಲಿದೆ.”

ಮದ್ದಿನ ಶಕ್ತಿಯಿದ್ದ ಅವಳ ಮಾತು ಕೇಳಿ ರವಿಗೆ ಆಘಾತವಾಯಿತು. ಮಾತುಗಳಿಗಾಗಿ ತಡಕಾಡಿದ. ಗೌರಿ ತಂದೆಗಿಂತ ಹಟಮಾರಿ ಮಾತ್ರವಲ್ಲ, ತನ್ನ ಬಗ್ಗೆ ತಾನು ತಂದೆಗಿಂತ ಕ್ರೂರಿಯಾಗಬಲ್ಲಳೆಂದು ರವಿಗೆ ಗೊತ್ತಿತ್ತು. ನಿರುತ್ಸಾಹದ ದನಿಯಲ್ಲಿ “ಹೀಗೆಂದರೆ ಹ್ಯಾಗೆ ಮುದ್ದು?” - ಅಂದ. ಗೌರಿ ತನಗವನ ಮಾತು ಕೇಳಲೇ ಇಲ್ಲವೆಂಬಂತೆ ಎದ್ದು, ಹೊರಟೇಬಿಟ್ಟಳು. ತಕ್ಷಣ ರವಿ ಹೋಗಿ “ಮುದ್ದು ನನ್ನ ಮಾತು ಕೇಳು” ಎಂದು ಅಡ್ಡಗಟ್ಟಿ, ಎಳೆತನದ ನೆನಪಾಗುವಂತೆ ಗದ್ದ ಹಿಡಿದು ರಮಿಸುತ್ತ ಪುನಃ ಪೀಠಕ್ಕೆ ಕರೆತಂದು ಕೂರಿಸಿದ. ರವಿ ಅವಳ ಮುಂದೆ ಕೆಳಗೆ ಕೂತು, “ಮುದ್ದೂ ಹೇಳಿದ ಹಿತ ನುಡಿ ಕೇಳು....” ಅವನ ಮಾತಿನ್ನೂ ಬಾಯಲ್ಲೇ ಇತ್ತು. ಗೌರಿಯ ಕೊರಳ ಸೆರೆ ತುಂಬಿ ಬಂತು. ಮುತ್ತಿನಂಥ ಕಣ್ಣೀರು ಸುರಿಸುತ್ತ ಹೇಳಿದಳು:

“ಅಣ್ಣಾ ನನಗಿರೋನು ನೀನೊಬ್ಬನೇ ಅಣ್ಣ. ನಿನಗೊಬ್ಬನಿಗೇ ಹೇಳಿ ಹೋಗೋಣವೆಂದುಕೊಂಡಿದ್ದೆ. ನಿನಗೆ ಹೇಳಿದ್ದೇನೆ. ನಾಳೆ ನನ್ನ ಗಂಡನ ಮನೆ ಶಿವಾಪುರಕ್ಕೆ ಹೋಗುತ್ತಿದ್ದೇನೆ. ಅಣ್ಣ ತಂದೆ ತಾಯಿ ಅಜ್ಜಿ - ಎಲ್ಲಾ ನೀನೇ ಆಗಿ ಆಶೀರ್ವದಿಸು.

“ಆದರೆ ಮುದ್ದೂ ಇನ್ನೂ ಮಾದುವೆಯಾಗಬೇಕಲ್ಲವೇ?”

“ಅದನ್ನ ನಾನೇ ನೋಡಿಕೊಳ್ಳುತ್ತೇನೆ. ಬರಬೇಕೆಂದು ಶಿವಪಾದನ ಆಜ್ಞೆಯಾಗಿದೆ, ಹೊರಟಿದ್ದೇನೆ.”

“ಶಿವಪಾದ? ಅವನ್ಯಾವಾಗ ನಿನ್ನನ್ನ ಕಂಡ?”

“ನಿನ್ನೆ ಕನಸಿನಲ್ಲಿ”

“ಇಂಥಾ ವಿಷಯಗಳಲ್ಲಿ ಕನಸಗಳನ್ನ ನಂಬಲಿಕ್ಕಾಗುತ್ತದ ಮುದ್ದು?”

“ನಾನು ನಂಬುತ್ತೇನೆ. ಕಳಿಸದಿದ್ದರೆ ಸಾಯುತ್ತೇನೆ. ಇದೇ ಕೊನೇ ಮಾತು”

ಎಂದು ಹೇಳಿ ಮುಂದೆ ಮಾತಿಗೆ ಅವಕಾಶ ಕೊಡದೆ ದೃಢನಿರ್ಧಾರದಿಂದ ಎದ್ದು “ನನ್ನನ್ನು ಆಶೀರ್ವದಿಸು” ಎಂದು ಅಣ್ಣನ ಕಾಲುಮುಟ್ಟಿ ನಮಸ್ಕರಿಸಿದಳು. ಈಗ ಸಂವಾದದಿಂದ ಪ್ರಯೋಜನವಿಲ್ಲವೆಂದು ಸ್ಪಷ್ಟವಾಯಿತು.

ತಕ್ಷಣ ರವಿ ಭಾವುಕನಾಗಿ ಅವಳನ್ನೆಬ್ಬಿಸಿ ತಬ್ಬಿಕೊಂಡ. ಕಷ್ಟಪಟ್ಟು ಉಕ್ಕಿಬಂದ ಬಿಕ್ಕುಗಳನ್ನು ಹಲ್ಲಿಕಚ್ಚಿ ತಡೆದುಕೊಂಡ. ಆದರೆ ಕಣ್ಣೀರಿನ ಬಿಸಿಹನಿ ಬೆನ್ನಮೇಲೆ ಬಿದ್ದು ಗೌರಿ ಮುಖ ನೋಡಿದಳು. ಈಗ ಮಾತ್ರ ರವಿಯ ದುಃಖದ ಕಟ್ಟೆಯೊಡೆದು ಬಿಕ್ಕಿದ. ಗೌರಿ ಅವನ ಕಣ್ಣೀರು ಒರೆಸುತ್ತ ಕೇಳಿದಳು:

“ನನ್ನದೊಂದು ಮಾತು ನಡೆಸಿಕೊಡ್ತೀಯಾ ಅಣ್ಣಾ?”

“ಖಂಡಿತ ನಡೆಸಿಕೊಡ್ತೀನಿ; ಅದೇನು ಹೇಳು ಮುದ್ದು”

ಮಾತು ಕೋಡು."

"ಇಗೋ ಕೊಟ್ಟೆ."

ಎಂದು ಕೈಮೇಲೆ ಕೈ ಇತ್ತು ಭಾಷೆ ಕೊಟ್ಟಾದ ಮೇಲೆ ಇವತ್ತು ಅಪರೂಪಕ್ಕೆ ಧರಿಸಿದ್ದ ಚಿನ್ನದ ಸರವನ್ನ ಅವನ ಕೈಗಿಟ್ಟು, "ಇದನ್ನು ವಾಸಂತಿಗೆ ಕೋಡ್ತಿಯಾ?" ಎಂದಳು.

"ನನ್ನ ಪುಟ್ಟ ತಂಗೀ, ಮುದ್ದು ತಂಗೀ, ಏನವಸರ ನಾನಿನ್ನೂ ಇಲ್ಲಿರ್ತಿನಿ…. ಹೋಗುವಾಗ ಕೊಡು."

"ಇಲ್ಲ ಅವಳ ಬಗ್ಗೆ ನನಗೆ ಕೆಟ್ಟ ಕನಸಾಗಿದೆ. ನೀನು ಕೂಡಲೇ ಕಂಚಿಗೆ ಹೋಗಿ ಅವಳನ್ನು ನೋಡಲೇಬೇಕು, ಈ ಸರವನ್ನು ಕೊಡಲೇಬೇಕು. ನಾಳೆಯೇ ನೀನು ಹೊರಟರೆ ನನಗೆ ಆನಂದವೇ?"

"ಆಗಲೀ ಮುದ್ದು. ಇದನ್ನು ಕಂಡು ಅವಳೆಷ್ಟು ಸಂತೋಷ ಪಡ್ತಾಳೆ ಗೊತ್ತಾ?"

"ಆಯ್ತು, ಅವಳು ಹ್ಯಾಗೆ ಸಂತೋಷಪಟ್ಟಳೆಂದು ಇದನ್ನು ಕೊಟ್ಟು ಬಂದಾದ ಮೇಲೆ ಹೇಳು."

"ಖಂಡಿತ"

"ಅಣ್ಣಾ ನನಗಿರೋನು ನೀನೊಬ್ಬನೇ ಅಣ್ಣ, ನೀನು ವಾಸಂತಿಯ ಬಗ್ಗೆ ಯಾವಾಗಲೂ ಪ್ರೀತಿಯಿಂದಿರಬೇಕು. ಮಗುವನ್ನ ಕೂಡ ನೀವಿಬ್ಬರೂ ಚೆನ್ನಾಗಿ ನೋಡಿಕೋಬೇಕು."

"ಆಯಿತಮ್ಮ"

"ಮದುವೆಗೆ ಮುನ್ನ ಹುಟ್ಟಿದ ಕೂಸು ಅಂತ ದೂಷಿಸಬಾರದು"

"ಇಲ್ಲ ಮುದ್ದು, ನಾನು ಎಂದಿಗೂ ವಾಸಂತಿಯನ್ನು ಬಯ್ಯುವುದಿಲ್ಲ ಅವಳಿಗೆ ನೋವಾಗುವಂತೆ ನಡೆದುಕೊಳ್ಳುವುದಿಲ್ಲ. ನಮ್ಮ ಮಗುವನ್ನ ನಾವೀಬ್ಬರೂ ಚೆನ್ನಾಗಿ ನೋಡಿಕೊಳ್ತೀವೆ. ಆ ಮಗು ಹೆಣ್ಣಾಗಿದ್ದರೆ ಮುದ್ದು ಗೌರಿ ಅಂತ ಕರೀತೇನೆ. ನಿನಗೆ ಸಮಾಧಾನವಾಯ್ತೆ ಮುದ್ದು?"

- ಎಂದು ಗೌರಿಯ ಕೈತಗೊಂಡು ತನ್ನೆರಡೂ ಕಣ್ಣುಗಳಿಗೆ ಭಾವಪೂರ್ಣವಾಗಿ ಒತ್ತಿಕೊಂಡ. ಇಬ್ಬರ ಕಣ್ಣಲ್ಲಿಯೂ ಮತ್ತೆ ನೀರಾಡಿತು. ತಕ್ಷಣ ನೆನಪಾಗಿ ಕೇಳಿದ:

"ನನ್ನದೂ ಒಂದು ಮಾತಿದೆ. ನಡೆಸಿಕೊಡ್ತೀಯಾ ಮುದ್ದು?"

"ಖಂಡಿತ. ಅದೇನು ಹೇಳು"

"ನಿನ್ನೊಂದಿಗೆ ಬೊಂತೆಯನನ್ನು ಕಳಿಸಿಕೊಡ್ತೇನೆ. ನನ್ನ ಸಮಾಧಾನಕ್ಕಾಗಿ ಬೇಡ ಅನ್ನಬಾರದು. ಅವ ಬೇಡವೆಂದರೆ ನಾನೇ ಬರ್ತೇನೆ."

ಕನಕಪುರಿಯ ಯಾವುದೂ ತನ್ನೊಂದಿಗೆ ಇರಬಾರದೆಂದು ಗೌರಿ ನಿರ್ಧರಿಸಿದ್ದಳು. ಆದರೆ ಅಣ್ಣನ ಮಾತು ತೆಗೆದು ಹಾಕಲಾರದೆ,

"ಆಯ್ತು, ಬೊಂತೆಯನೇ ಇರಲಿ. ನೀನು ಬಂದರೆ ಅಪ್ಪ ಇಬ್ಬರನ್ನೂ ಬಿಡುವುದಿಲ್ಲ ಆದರೆ ವಿಷಯ ಮಾತ್ರ ಗುಟ್ಟಾಗಿರಬೇಕು."

ಎಂದಳು. "ಆಯ್ತು" ಎಂದು ಅವನೊಪ್ಪಿದ ಮೇಲೆ ಗೌರಿ ಅಣ್ಣನನ್ನು ತಬ್ಬಿಕೊಂಡು ಅಲ್ಲಬೆಲ್ಲ ಕೊಟ್ಟು ಹೊರಟಳು. ರವಿ ಬೊಂತೆಯನ ಕೇರಿಗೆ ಹೊರಟ.

* * *

ತಕ್ಷಣ ರವಿ ಅವಸರದಲ್ಲಿ ಕುದುರೆಯೇರಿ ಬೊಂತೆಯನ ಗುಡಿಸಲಿಗೆ ಓಡಿಸಿದ. ಅದು ಇಕ್ಕಟ್ಟಾದ ಕೊಳಗೇರಿ, ಜನಗಳಾಗಲೇ ಉಂಡು ಮಲಗಿದ್ದರು. ವಯಸ್ಸಾದ ಕೆಲವರು ಮಾತ್ರ ಗುಡಿಸಲ ಹೊರಗಿನ ಸಣ್ಣ ಕಟ್ಟೆಗಳ ಮೇಲೆ ಕೂತುಕೊಂಡು ಹರಟೆ ಹೊಡೆಯುತ್ತಿದ್ದರು. ಕುದುರೆ ಕಂಡು ರಾಜಕಾರ್ಯವೆಂದು ಭಾವಿಸಿ ಸೈನ್ಯದಲ್ಲಿದ್ದವರು ಚುರುಕಾದರು. ಬಂದವನು ಯುವರಾಜನೆಂದು ಒಬ್ಬ ವಯಸ್ಸಾದ ಸೈನಿಕನಿಗೆ ಗುರುತಾಗಿ ಭಯ ಉತ್ಸಾಹಗಳಿಂದ "ಯುವರಾಜ!" ಎಂದು ಜೋರಾಗಿ ಕಿರುಚಿ ಅಂಡೆತ್ತಿ ನಮಸ್ಕಾರವನ್ನಾಚರಿಸುವಷ್ಟರಲ್ಲಿ ರವಿ ಕೆಳಗಿಳಿದು "ಬೊಂತೆಯನ ಗುಡಿಸಲು ಯಾವುದು" ಅಂದ. ತಕ್ಷಣ ಮುದುಕ ಎದ್ದು ಪಕ್ಕದ ಗುಡಿಸಲು ತೋರಿಸಿ "ಅವನೂ ಇಂದು ಸಂಜೆಯಷ್ಟೇ ಬಂದ" ಎಂದು ಹೇಳಿ "ಏ ಬೊಂತಾ ಯುವರಾಜರು ಬಂದವರೆ ಬಾರ್ಲಾ" ಅಂದು ಬೊಂತೆಯನ ಗುಡಿಸಲು ಬಾಗಿಲು ಬಡಿದ. ತಕ್ಷಣ ಒಳಗಿನ ದೀಪವಾರಿದ್ದು ಬಾಗಿಲ ಕಿಂಡಿಯ ಮೂಲಕ ಗೊತ್ತಾಯಿತು. ಇದು ಇಬ್ಬರಿಗೂ ಅನಿರೀಕ್ಷಿತವಾಗಿತ್ತು. ರವಿಯಿನ್ನೂ ಆಶ್ಚರ್ಯದಲ್ಲಿದ್ದ. ಮುದುಕನಿಗೆ ಕೋಪ ಬಂತು. 'ಯುವರಾಜರು ಬಂದಾರೆಂದರೂ ಹಿಂಗ ಮಾಡ್ತಾನಲ್ಲ ಇವ!' ಎಂದು ಜೋರಾಗಿ ಬಾಗಿಲು ಬಡಿದು, -

"ಲೇ ಯಾರು ಬಂದಾರು ನೋಡಬಾರಲೇ ಮಂಗ್ಯಾ, ಯುವರಾಜರು ನಿನ್ನ ಕೇಳಿಕೊಂಡ ಬಂದರೆ ದೀಪ ಕಳೀತೀಯಲ್ಲ, ಬಾ ಹೊರಗೆ"

- ಎಂದು ಜೋರಿನಿಂದ, ಇಡೀ ಓಣಿ ಎಚ್ಚರವಾಗುವಂತೆ ಬಾಗಿಲು ಬಡಿದ. ಅವನ ಅರ್ಭಟ ಕೇಳಿ ಅಕ್ಕಪಕ್ಕದ ಗುಡಿಸಲಿನವರೂ ಬಂದು ನಮಸ್ಕಾರಗಳನ್ನಾಚರಿಸಿ ಬಂದ ಪ್ರತಿಯೊಬ್ಬರೂ ತಾವು ಸಹಾಯ ಮಾಡಲೆಂದೂ ಒಬ್ಬೊಬ್ಬರೂ ಬೊಂತೆಯನನ್ನು ಕೂಗಿ ಬಾಗಿಲು ಬಡಿದರು.

ದೀಪ ಹಚ್ಚದೆ ಬಾಗಿಲು ಮಾತ್ರ ತೆರೆಯಿತು. ಬಾಗಿಲೆದುರಿಗೇ ರವಿ ನಿಂತಿದ್ದ. ಬಿಟ್ಟ ಬಾಣದ ಹಾಗೆ ಕುಂಯ್ ಕುಂಯೆಂದು ನರಳುತ್ತ ಬೊಂತೆಯ ಬಂದು ರವಿಯ ಪಾದಗಳ ಮೇಲೆ ಬಿದ್ದು, ಉರುಳಾಡತೊಡಗಿದ. ಚುರುಕು ಸನ್ನೆಗಳ ಮೂಲಕ ಯಾವುದೋ ಅನಾಹುತ ಸುದ್ದಿಯನ್ನಾತ ತಿಳಿಸುತ್ತಿದ್ದ ಮತ್ತು ಅದರಲ್ಲಿ ತನ್ನದೇನೂ ತಪ್ಪಿಲ್ಲವೆಂಬಂತೆ ಕ್ಷಮಾಪಣೆ ಕೇಳುತ್ತಿದ್ದ. ಕೊನೆಗೆ ಸನ್ನೆಗಳ ಅರ್ಥವನ್ನು ರವಿಗ್ರಹಿಸಲಿಲ್ಲವಾದ್ದರಿಂದ ತನ್ನ ಹಣೆಗೆ ಪಟ ಪಟ ಹೊಡೆದುಕೊಂಡು ತಲೆಗೂದಲು ಕಿತ್ತುಗೊಂಡು, ತನ್ನ ಅಸಹಾಯಕತೆಗೆ ತಾನೇ ಮರುಗತೊಡಗಿದ. ಆದರೆ ಇದನ್ನೆಲ್ಲ ಕೇಳುವಷ್ಟು ತಾಳ್ಮೆಯಾಗಲಿ, ಸಮಯವಾಗಲಿ ರವಿಗಿರಲಿಲ್ಲ.

ತಕ್ಷಣ ರವಿ ಅವನನ್ನೆಬ್ಬಿಸಿ ಬಾಯಿ ಮುಚ್ಚಿಕೊಂಡಿರಲಿಕ್ಕೆ ಸನ್ನೆ ಮಾಡಿ ಎಲ್ಲರಿಂದ ಪ್ರತ್ಯೇಕವಾಗಿ ಏಕಾಂತಕ್ಕೆ ಕರೆದೊಯ್ದ. ಬೊಂತೆಯ ನಡುಗುತ್ತಿದ್ದದ್ದು ಕತ್ತಲೆಯಲ್ಲಿ ರವಿಗೆ ಗೊತ್ತಾಗುವಂತಿರಲಿಲ್ಲ. ಅವನ ಕಿವಿಯಲ್ಲಿ ಅವಸರದಿಂದ ಹೇಳಿದ:

"ಯಾರಿಗೂ ಹೇಳಕೂಡದು. ಮುದ್ದುಗೌರಿ ಶಿವಾಪುರಕ್ಕೆ ನಾಳೆ ಬೆಳಿಗ್ಗೆ ಹೋಗುತ್ತಿದ್ದಾಳೆ. ಅವಳೊಂದಿಗೆ ಇನ್ನಿಬ್ಬರು ಜೋಗ್ತಿಯರಿದ್ದಾರೆ. ಮೂವರು ಬೆಳ್ಳಿ ಮೂಡೋ ಹೊತ್ತಿಗೆ ವೈದ್ಯಶಾಲಿಯಿಂದ ಹೊರಡುತ್ತಾರೆ. ನೀನೂ ಗೌರಿಯೊಂದಿಗೆ ಶಿವಾಪುರಕ್ಕೆ ಹೋಗಬೇಕು. ದಾರಿಯಲ್ಲಿ ಅವಳ ಕೂದಲು ಕೊಂಕದ ಹಾಗೆ ರಕ್ಷಣೆ ಮಾಡಿಕೊಂಡಿರಬೇಕು. ಗೊತ್ತಾಯಿತ?"

ಹೋದ ಪ್ರಾಣ ಬಂದಷ್ಟು ನೆಮ್ಮದಿಯಾಯ್ತು ಬೊಂತೆಯನಿಗೆ. ಧೂಪ್ಪನೆ ರವಿಯ ಕಾಲಮೇಲೆ ಬಿದ್ದು ನಮಸ್ಕಾರವನ್ನಾಚರಿಸಿದ. ಹೇಳಿದ್ದಕ್ಕೆಲ್ಲ ಆಗಲೆಂದು ಕತ್ತು ಹಾಕಿದ. ರವಿಗಿನ್ನೂ ಖಾತ್ರಿಯಾಗಲಿಲ್ಲವೇನೋ ಎಂದು ಆಣೆ ಪ್ರಮಾಣ ಮಾಡಿದ ಸನ್ನೆ ಮಾಡಿದ. ತನ್ನ ಪ್ರಾಣವನ್ನ ಕೊಟ್ಟಾದರೂ ಗೌರಿಯನ್ನು ರಕ್ಷಿಸುವೆನುಂದು ನೆಲ ಬಡಿದು ಹೇಳಿದ. ರವಿಗೆ ನೆಮ್ಮದಿಯಾಯಿತು. ಮತ್ತೆ ಹೇಳಿದ:

"ಕಾಲ್ನಡಿಗೆಯಲ್ಲೇ ಹೋಗಬೇಕು…. ಗೊತ್ತಾಯಿತಾ?"

ಗೌರಿಯ ಜೊತೆಗೆ ಹೋಗು ಎಂದದ್ದೇ ಎಪ್ಪಾ ಕನಕಪುರಿಯ ದುಃಸ್ವಪ್ನದಿಂದ ಮುಕ್ತನಾದೆನೆಂದು ಕೈಲಾಸ ಹರಿದು ಮೈಮ್ಯಾಲೆ ಬಿದ್ದವನಂತೆ ಬೊಂತೆಯ ಹುರುಪುಗೊಂಡ. ರವಿಗಿನ್ನೂ ಅದು ತಿಳಿದಿಲ್ಲವೆಂದು ಮರುಗಿ ದಿಂಡುರುಳಿ ಹೋಗುವುದಕ್ಕೂ ಸಿದ್ಧನಿರುವವನಿಗೆ ಕಾಲ್ನಡಿಗೆಯೇನು ಮಹಾ! ಈಗಲೇ ಹೊರಡುತ್ತೇನೆಂದು ಸನ್ನೆ ಭಾಷೆಯಲ್ಲಿ ತಿಳಿಸಿದ.

ಗೌರಿ ಮನೆಯಲ್ಲಿ ಯಾರಿಗೂ ಹೇಳಲಿಲ್ಲ. ರವಿಯೂ ಬಾಯಿ ಬಿಡಲಿಲ್ಲ. ತನ್ನ ಬಟ್ಟೆಗಳಲ್ಲಿ ಉತ್ತಮವಾದುವನ್ನ ಆಯ್ದು ಗಂಗನಿಗಾಗಿ, ಒಳ್ಳೆಯ ಸೀರೆಯೊಂದನ್ನು ಗುಣದಮ್ಮನಿಗಾಗಿ ತೆಗೆದಿಟ್ಟಳು. ಸರಳವಾದ ನೂಲಿನ ಬಟ್ಟೆಗಳನ್ನು ತನಗಾಗಿ ಇಟ್ಟುಕೊಂಡು ಒಟ್ಟಾಗಿ ಒಂದು ಗಂಟು ಕಟ್ಟಿ ಮೂಲೆಯಲ್ಲಿಟ್ಟಳು. ಅಷ್ಟರಲ್ಲಿ ಸೇವಕಿ ತಂದುಕೊಟ್ಟ ಹಾಲು ಕುಡಿದು ಆಗಲೇ ನಿದ್ರಿಸುತ್ತಿದ್ದ ಆಜ್ಜಿಯ ಬಳಿ ಮಲಗಿಕೊಂಡಳು. ಗೌರಿ ಮಲಗಿದ ಮೇಲೆ ಶಿಖರಸೂರ್ಯ ಒಳಗಿಣಿಕಿ ಮಗಳ ಮುಖವನ್ನೊಮ್ಮೆ ನೋಡಿಹೋದ. ಸೇವಕಿ ಗೌರಿಗೆ ಕೊಟ್ಟ ಹಾಲಿನಲ್ಲಿ ಮಹಾರಾಜ ವಿಷ ಬೆರೆಸಿದ್ದ!

ಆ ದಿನ ರಾತ್ರಿ ರವಿಗೆ ನಿದ್ರೆ ಹತ್ತಲೇ ಇಲ್ಲ. ತಂಗಿ ಕೊಟ್ಟ ಸರವನ್ನು ಕೈಯಲ್ಲಿಟ್ಟುಕೊಂಡು ಮಲಗಿದ್ದಾಗ ವಾಸಂತಿಯ ನೆನಪಾಯಿತು. ಮುದ್ದುವಿನ ಕನಸಿನಲ್ಲಿ ಬಂದಿದ್ದಳಂತೆ ಬೇಗ ಕಂಚಿಗೆ ಹೋಗಲು ಹೇಳಿದ್ದಾಳೆ. ಹೋಗಬೇಕೆಂದು ನಿರ್ಧಾರ ಮಾಡಿದ. ಬೆಳಗಿನ ತಂಗಾಳಿಗೆ ಸ್ವಲ್ಪ ನಿದ್ದೆ ಹತ್ತಿತು.

## ಅರವತ್ತು

ಗೌರಿ ಮನೆಯಲ್ಲಿ ಹೇಳದೆ ಕೇಳದೆ ಯಾತ್ರಿಕರ ಜೊತೆ ಶಿವಾಪುರಕ್ಕೆ ಹೋದಳೆಂದು ಕೇಳಿ ಮಹಾರಾಜ ಆಘಾತದಿಂದ ಸ್ತಬ್ಧನಾದ! ಅಳುತ್ತಿದ್ದ ಚಿಕ್ಕಮ್ಮಣ್ಣಿಯನ್ನಾಗಲಿ, ಮಡದಿಯನ್ನಾಗಲಿ ಸಮಾಧಾನ ಮಾಡಲಿಲ್ಲ. ಚಿಂತೆ ಮಾಡುತ್ತಿದ್ದ ಮಗನ ಕಡೆಗೆ ನೀಡಲಿಲ್ಲ. ವ್ಯಾಕುಲರಾಗಿದ್ದ ಸೇವಕರ ಕಡೆಗೆ ನೋಡಲಿಲ್ಲ. ಸೀದಾ ತನ್ನ ಕೋಣೆಗೆ ಹೋಗಿ ಬಂಡೆಯನನ್ನು ಕರೆತರಲು ಸೇವಕನನ್ನಟ್ಟಿ ಉಳಿದವರಿಗೆ ಹೊರಗೆ ನಿಂತಿರಲು ಹೇಳಿ ಪೀಠದ ಮೇಲೆ ಕುಂತ ಬೆರಳು ಬೆರಳಿಗೆ ಹೆಣೆದು ಔಗಳ ಮ್ಯಾಲೆ ಗದ್ದಾ ಹೇರಿ ನಿರುತ್ಸಾಹಿಯಾಗಿ ಚಿಂತೆ ಮಾಡುತ್ತ ಕೂತ.

ಈಗವನ ಅಹಂಕಾರಗಳು ಬೃಹದಾಕಾರವಾಗಿ ಬೆಳೆದಿದ್ದವು. ಒಂದು ಕಡೆಮೆ ಇಪ್ಪತ್ತು ದೇಶಗಳಿಗೆ ಚಕ್ರವರ್ತಿಯೆಂಬ, ಚಿನ್ನವ ಸೃಷ್ಟಿಸಿದವನೆಂಬ, ವಜ್ರದೇಶಿಯಂಬ, ಅಜೇಯನೆಂಬ, ಆಗಾಧ ಪಂಡಿತನೆಂಬಿತ್ಯಾದಿ ಅಷ್ಟಮದಗಳು ಸೇರಿ ಅವನ ಅಹಂಕಾರವನ್ನ ದೇವರ ಅಹಂಕಾರಕ್ಕೆ ಕೊಂಚವೇ ಕಡಿಮೆಯೆಂಬಷ್ಟು ಬೆಳೆಸಿದ್ದವು. ಚಕ್ರವರ್ತಿಯಾಗಿ ಇನ್ನೊಬ್ಬ ಚಕ್ರವರ್ತಿಗೆ ಮಗಳನ್ನು ಕೊಡುತ್ತೇನೆ ಎಂಬ ಕೊಟ್ಟ ಭಾಷೆಯನ್ನು ಮಗಳು ಧಿಕ್ಕರಿಸಿದಳಲ್ಲಾ ಎಂಬ ಕೋಪ ದ್ವೇಷಗಳಿಂದ ಬೆಂಕಿಯಲ್ಲಿ ನಿಂತ ಹಾಗೆ ಚಡಪಡಿಸಿದ.

ಆ ದಿನ ಮಗಳು ಆಡಿದ ಮಾತುಗಳು ನೆನಪಾದವು. ತರ್ಕಬದ್ಧವಾಗಿ ಶಿವಾಪುರದ ಪರವಾದ ಮಂಡಿಸಿದ್ದಳು. ಆ ಬಗ್ಗೆ ದೃಡವಾದ ನಿಲುವು ತಳೆದಿದ್ದಳೂ ಮತ್ತು ಆ ನಿಲುವನ್ನಾಕೆ ನಂಬಿದ್ದಳು. ತನಗೂ ಅದನ್ನು ಖಾತ್ರಿ ಮಾಡಲು ಪ್ರಯತ್ನಿಸಿದ್ದಳು. "ನನ್ನ ದಾರಿಗೆ ಬಾ" ಇಲ್ಲದಿದ್ದರೆ ನನ್ನ ದಾರಿ ನನಗೆ ನಿನ್ನ ದಾರಿ ನಿನಗೆ" ಎಂದು ಸ್ಪಷ್ಟವಾಗಿ ಸೂಚಿಸಿದ್ದಳು. ಸ್ವಲ್ಪ ಕಾಲ ಸಂದರೆ ತಾನಾಗಿಯೇ ದಾರಿಗೆ ಬಂದಾಳೆಂಬ ನಂಬಿಕೆ ಹುಸಿ ಹೋಗಿತ್ತು. ಅಕ್ರಮ ಗರ್ಭಿಣಿಯಾಗಿದ್ದಳು. ಅವಳ ಭವಿಷ್ಯದ ಬಗೆಗಿನ ಇವನ ನಂಬಿಕೆಗಳೆಲ್ಲ ತಿರುವು

ಮುರುವಾಗಿದ್ದವು. ಅಲ್ಲದೆ ನನ್ನ ವಾದಕ್ಕೆ ನಿನ್ನದು ತರ್ಕಬದ್ಧವಾದ ಪ್ರತಿವಾದವಾಗಲಿಲ್ಲ. ಎಂದು ಹೇಳಿದಂತಿತ್ತು ಅವಳ ಕೊನೆಯ ಮಾತು. ತಾನು ಕೊಟ್ಟ ಸೌಲಭ್ಯಗಳು, ತನ್ನ ಶ್ರೀಮಂತಿಕೆ, ಅಂತಸ್ತು - ಇವೆಲ್ಲ ಶಿವಾಪುರದ ಮುಂದೆ ತುಚ್ಛವೆಂದು ತಿರಸ್ಕರಿಸಿ ಹೋಗಿದ್ದಳು. ಒಂದು ಕಡಿಮೆ ಇಪ್ಪತ್ತು ದೇಶಗಳ ಚಕ್ರವರ್ತಿ ತಂದೆಯ ಮುಖಕ್ಕೆ ಮಸಿ ಬಳಿದು, ಕಂಚಿಯ ಚಕ್ರವರ್ತಿಯ ಪಟ್ಟ ಮಹಿಷಿಯಾಗುವ ಅವಕಾಶವನ್ನು ಕಾಲಲ್ಲಿ ಒದ್ದು ಶಿವಾಪುರಕ್ಕೆ ಹೋದಳೆಂದು ಮುಖ ವಿಕಾರವಾಗಿ, ಕಿವಿಗೂದಲು ನಿಮಿರಿ ನಿಂತವು. ಕೋಪ ಶಿವಾಪುರದ ಮೇಲೆ ತಿರುಗಿತು. ನಾಗಾರ್ಜುನ ಅಣಕಿಸಿದಂತಾಯಿತು.

“ಬುಡದಿಂದ ಸುರುವಾಗಿ ಬೆಟ್ಟದ ಮ್ಯಾಲಿನ ಅಮ್ಮನ ಗವಿಯಿರುವವರೆಗಿನ ಬೃಹತ್ ಬಂಡೆ ಚಿನ್ನದಯ್ಯಾ! ಅದನ್ನ ವಶಪಡಿಸಿಕೊಂಡರೆ ಪ್ರಪಂಚದಲ್ಲಿ ನಿನ್ನ ಕೈ ಹಿಡಿಯೋನು ಯಾವನಿದ್ದಾನೆ? ಇಂದ್ರನಿಗೂ ನಿನ್ನಂಥ ಐಶ್ವರ್ಯವಿಲ್ಲಯ್ಯಾ!”

ಶಿಖರಸೂರ್ಯ ಪುಳಕಿತನಾಗಿದ್ದ ಶಿವಾಪುರವನ್ನು ನಾಶಮಾಡಿಯಾದರೂ ಗವಿಯನ್ನು ವಶಮಾಡಿಕೊಂಬ ಕನಸನ್ನ ಆಗಲೇ ಕಂಡಿದ್ದ. ಶಿವಾಪುರದ ನಾಶಕ್ಕೆ ಈಗ ಬೇಕಾದಷ್ಟು ಕಾರಣಗಳು ಒದಗಿ ಬಂದವು. ಕನಕಪುರಿ ಇಲ್ಲವೆ ಶಿವಾಪುರ - ಎರಡರಲ್ಲಿ ಒಂದೇ ಉಳಿಯಬೇಕೆಂದು ಮುಷ್ಟಿ ಬಿಗಿದು ತೀರ್ಮಾಣಿಸಿದ.

* * *

ಬಂಡೆಯ ಬಂದಾಗ ಶಿಖರಸೂರ್ಯನ ಕೋಣೆಯಲ್ಲಿ ಕತ್ತಲಿತ್ತು. ಸೇವಕರು ಹೊರಗೇ ನಿಂತುಕೊಂಡು ಒಳಗೆ ಮಹಾಪ್ರಭುಗಳಿರುವುದನ್ನು ಸನ್ನೆಯಿಂದ ತಿಳಿಸಿದರು. ಕರೆಸಿದ್ದರಿಂದ ಅಂತರಂಗ ಮಾತಾಡುವುದಿರಬೇಕೆಂದು ಬಂಡೆಯ ಒಳಗೆ ಕಾಲಿಟ್ಟ. ಮೂಲೆಯ ಪೀಠದಲ್ಲಿ ಒಬ್ಬನೇ ಕೂತು ಎದುರುಗಡೆಯೇ ನೋಡುತ್ತಿದ್ದ. ಬಂಡೆಯ ಬಂದು ನಮಸ್ಕಾರವನ್ನಾಚರಿಸಿದ. ಶಿಖರಸೂರ್ಯ ಕತ್ತಲುಗಿಸಿ ಅವನ ನಮಸ್ಕಾರವನ್ನು ಸ್ವೀಕರಿಸಿದ. ಬೆಳಕು ಸಾಲದೆಂದು ಬಂಡೆಯ ಕಿಡಕಿಯ ಬಾಗಿಲು ತೆಗೆಯಲು ಹೋದಾಗ ಬೇಡವೆಂಬಂತೆ ಕೈಸನ್ನೆ ಮಾಡಿದ. ತನ್ನ ಮುಖಭಾವಗಳು ಅನ್ಯರಿಗೆ ಕಾಣಬಾರದೆಂದು ಅಡಗಿರುವಂತಿತ್ತು ಅವನ ಭಂಗಿ. ಬಹಳ ಹೊತ್ತಾದ ಮೇಲೆ ಅವನ ನಿಜರೂಪ ಪ್ರತ್ಯಕ್ಷವಾಯಿತು. ಅಸ್ವಸ್ಥನಾಗಿದ್ದ, ನೋವನ್ನನುಭವಿಸುತ್ತಿರುವಂತೆ ಕಂಡ. ತಗ್ಗಿದ ದನಿಯಲ್ಲಿ ಕೇಳಿದ:

“ವಿಷಯ ಗೊತ್ತಾಯಿತೇನಯ್ಯ?”

“ಗೊತ್ತಾಯಿತು ಮಹಾಪ್ರಭು, ತಾವು ಅಪ್ಪಣೆ ಕೊಟ್ಟರೆ...”

“ಮೂರು ಜನ ಭಂಟರನ್ನು ಕಳಿಸು, ಸಾಕು.”

## ಅರವತ್ತೊಂದು

ಮಾರನೆಯ ದಿನ ಯಾತ್ರಿಕರ ತಂಡ, ಹುಲಿಕಟ್ಟಿಗೆ ಹೊರಟಿತು. ಈ ದಿನವೂ ಗೌರಿ ತನ್ನ ಬೇನೆಯ ಬಗ್ಗೆ ಯಾರಿಗೂ ಹೇಳಲಿಲ್ಲ. ಆದರೆ ಅವಳ ಮುಖ ಗೆಲುವಾಗಿಲ್ಲವೆಂಬುದನ್ನು ಗುಣದಮ್ಮ ಗಮನಿಸಿದಳು. ಮಧ್ಯಾಹ್ನ ದಾರಿ ಬದಿಯ ಗುಡಿಸಲಲ್ಲಿ ಊಟವಾದ ಮೇಲೆ ಗೌರಿ ಒಂದು ಕಡೆ ಅಡ್ಡಾಗಿದ್ದಳು. ಮತ್ತೆ ಮತ್ತೆ ಮಗ್ಗಲು ಬದಲಿಸುವುದನ್ನು ಗುಣದಮ್ಮ ನೋಡಿ ನೋವು ಅಸಹನೀಯವಾಗಿರಬಹುದೆಂದು ಮರುಗಿದಳು. ಮದ್ದು ತಗೊಳ್ಳಲು ಗೌರಿ ಒಪ್ಪುತ್ತಿರಲಿಲ್ಲ. ನೋವಿನ ಪ್ರಸ್ತಾಪ ಬಂದರೆ ಸಾಕು ತಕ್ಷಣ ಯಾವುದೋ ನೆಪದಲ್ಲಿ ಮರೆಸಿ ಪ್ರವಾಸ ಮುಂದುವರಿಸುತ್ತಿದ್ದಳು. ಈ ಹೊತ್ತು ಹೊಸದಾಗಿ ಸೇರಿದ ಯಾತ್ರಿಕರಿದ್ದರು. ಕನಕಪುರಿಯ ಹಳ್ಳಿಗಳ ಜನ ಆಹಾರದ ಬಗ್ಗೆ ಹಾಹಾಕಾರ ಮಾಡುತ್ತಿರುವುದನ್ನು ಹೇಳಿದರು. ಎಲ್ಲರೂ ಚಿತ್ತಗೊಟ್ಟು ಅದನ್ನೇ ಕೇಳಿದ್ದರಿಂದ ಸಮಯ ಹೋದದ್ದು, ಆ ದಾರಿ ಸವೆದದ್ದು ಗೊತ್ತಾಗಲೇ ಇಲ್ಲ. ಎಲ್ಲರೂ ಸಂಜೆ ಗೋಧೂಳಿ ಲಗ್ನದ ಸುಮಾರಿಗೆ ಹುಲಿಕಟ್ಟೆ ತಲುಪಿ ಮಂಟಪದಲ್ಲಿ ತಂಗಿದರು.

ಎಲ್ಲ ಹಟ್ಟಿಗಳಂತೆ ಇಲ್ಲಿಯೂ ಆತಿಥ್ಯ ಚನ್ನಾಗಿತ್ತು. ಒಂದೇ ಹೊಸ ಸುದ್ದಿಯೆಂದರೆ ರಾಜಕುಮಾರಿ ಕಳೆದುಹೋದ ಸಮಾಚಾರ ಇವರಿಗೆ ತಲುಪಿತ್ತು. ಬಂದರೆ ಅವಳನ್ನು ಇಲ್ಲಿಯೇ ಇಟ್ಟುಕೊಂಡಿರಲು ಗೌಡನಿಗೆ ಭಂಟರು ತಾಕೀತು ಮಾಡಿದ್ದರು. ಗುಣದಮ್ಮ ನಾಲ್ಕನೇಯ ಕತೆ ಹೇಳಿದಳು.

ಒಮ್ಮೆ ಪುಣ್ಯಕೋಟಿ ಮೇಯಲಿಕ್ಕೆ ಕಾಡಿಗೆ ಹೋಗಿದ್ದಳು. “ಹೊಸನಾತ! ಹೊಸನಾತ! ಅಂತ ಅರ್ಭಟ ಮಾಡುತ್ತ ಹುಲಿರಾಯ ಬಂದು ಅಡ್ಡಗಟ್ಟಿದ.

“ಕೊಲ್ಲಬ್ಯಾಡಪ್ಪ ಹುಲಿರಾಯ ಮನೆಯಲ್ಲಿ ಹಸಿದ ಕರು ಇದೆ.”

ಅಂದಳು ಪುಣ್ಯಕೋಟಿ. ಆಗ ಹುಲಿರಾಯ

“ಹಸಿದ ಕರುವಿಗೆ ಹುಲ್ಲಾದರೆ ನನಗೆ ನೀನು ಆಹಾರ!” ಅಂದು ಅವಳ ಮ್ಯಾಲೆ ಹಾರಿದ. ಪುಣ್ಯಕೋಟಿ ತಪ್ಪಿಸಿಕೊಂಡು ಬ್ರಹ್ಮ ದೇವರಲ್ಲಿಗೆ ಓಡಿ ಹೋಗಿ ‘ಬ್ರಮ್ಮರಾಯಾ, ಹುಲಿರಾಯನಿಂದ ಕಾಪಾಡು’ ಅಂದಳು.

“ನನ್ನಿಂದಾಗದಮ್ಮ, ಇಷ್ಣುವಿನ ಮನೆಗೆ ಹೋಗು” ಅಂದ ಬ್ರಮ್ಮರಾಯ”

ಪುಣ್ಯಕೋಟಿ ಇಷ್ಣುವಿನ ಮನೆಗೆ ಹೋಗಿ ವಿಷ್ಣುರಾಯಾ ಹುಲಿರಾಯನಿಂದ ಕಾಪಾಡು” ಅಂದಳು. ಆಗ ಇಷ್ಣುರಾಯನೇನೆಂದ?”

“ನನ್ನಿಂದಾಗದಮ್ಮ. ಶಿವನ ಮನೆಗೆ ಹೋಗು.”

“ಶಿವನೂ ನನ್ನಿಂದಾಗದಮ್ಮ, ಒಳಗೆ ಅಮ್ಮನ ಹತ್ತಿರ ಹೋಗು” ಅಂದ

ಪುಣ್ಯಕೋಟಿ ಅಮ್ಮನ ಹತ್ತಿರ ಹೋದಳು.

ಒಳಗೆ ಅಮ್ಮ ಈಗಷ್ಟೆ ಪೂಜೆಗೊಂಡು ಆಕಳಿಸುತಾ ಕುಂತಿದ್ದಳು.

ಪುಣ್ಯಕೋಟಿ ಬಂದು "ಅಮ್ಮಾ ಹುಲಿರಾಯನಿಂದ ಕಾಪಾಡು" ಅಂದಳು. ಅಮ್ಮನಿಗೆ ಎಲ್ಲಾ ತ್ರಿಕಾಲಜ್ಞಾನ ಆಯಿತು ನೋಡು" ಬರಲಿ, ನೀನು ಒಳಗೆ ನನ್ನ ಪೂಜೆ ಮನೆಯಲ್ಲಿ ಅಡಗಿರು" ಅಂದಳು. ಪುಣ್ಯಕೋಟಿ ಒಳಗೆ ಹೋದಳು

ಆಮ್ಯಾಲೆ ಹುಲಿರಾಯ ಬಂದ "ಅಮ್ಮಾ ಒಳಗೆ ಪುಣ್ಯಕೋಟಿ ಅಡಗಿರುವಳೋ?

"ಖರೆ ಹೇಳಬೇಕೊ? ಖೋಟ್ಟಿ ಹೇಳಬೇಕೊ?

"ಖರೆ ಹೇಳು"

"ಪುಣ್ಯಕೋಟಿ ಇಲ್ಲಿಗೆ ಬಂದಿಲ್ಲವಪ್ಪ."

ಅಂದಳು, ಹುಲಿರಾಯ ಪುಣ್ಯಕೋಟಿಯನ್ನ ಹುಡುಕುತ್ತ ಬೇರೆ ಕಡೆ ಹೋದ.

"ಈಗ ಬರೋಬರಿ ಹೇಳಿದರ ಬಚಾವಾಗ್ತಿ; ತಪ್ಪು ಹೇಳಿದರ ಸಾವಿರ ಹೋಳಾಗ್ತಿ. ತಾಯಿ ಖರೆ ಹೇಳಿದಳೊ? ಖೋಟ್ಟಿ ಹೇಳಿದಳೊ?"

"ತಾಯಿ ಖರೆ ಹೇಳಿದಳು."

"ಪುಣ್ಯಕೋಟಿ ಒಳಗ ಇದ್ದಳಪ್ಪ ತಾಯಿ ಖೊಟ್ಟಿ ಹೇಳಿದಂಗಾಗಲಿಲ್ಲವ?"

"ಹಾಂಗಲ್ಲ ನಿಲ್ಲು; ಒಳಗೆ ಪುಣ್ಯಕೋಟಿ ಅಡಗಿದ್ದಳು ನಿಜ. ಆದರೆ ಅವಳು ತಾಯಿ. ಆ ತಾಯಿ ಹೇಳಿದ್ದೇನು? 'ಹುಲಿರಾಯಾ ಮನೆಯಲ್ಲಿ ಹಸಿದ ಕರು ಇದೆ; ನನ್ನನ್ನ ಕೊಲ್ಲಬ್ಯಾಡಾ"

ಅಂದಳು, ಅಂದರ ನಾನು ತಾಯಿ. ಹಸಿವಿಗಾಗಿ ಒಬ್ಬ ತಾಯಿಹತ್ಯೆ ಸಲ್ಲದು ಅಂತ. ಅದಕ್ಕೆ ಹುಲಿರಾಯ ಅಂದ:

"ಹುಲ್ಲು" ನಿನ್ನ ಆಹಾರ, ನೀನು ನನ್ನ ಆಹಾರ! ಆಹಾರವೇ ನನ್ನನ್ನ ತಿನ್ನಬ್ಯಾಡ ಅಂದರೆ ನಾನು ಎಲ್ಲಿಗೆ ಹೋಗಲಿ?

"ಹಂಗಲ್ಲ ನಿಲ್ಲು. ನಾವು ದೇವರಿಗೆ ಯಾವ ಹೂವು ಕೋಡಬೇಕು? ಯಾವುದು ಫಲವಾಗುವುದಿಲ್ಲವೋ ಅದನ್ನ! ಕರು ದೊಡ್ಡದಾಗಿ ಹುಲ್ಲು ತಿನ್ನುವಂತಾದ ಮೇಲೆ ನಾನು ನಿನ್ನ ಆಹಾರ. ಅಲ್ಲೀತನಕ ಕರುವಿಗೆ ಹಾಲು ಕುಡಿಸುವುದು ತಾಯಿಯ ಜವಾಬ್ದಾರಿ. ನೀನು ತಿನ್ನಬೇಕಾದ್ದೂ ಆಹಾರವನ್ನ: ತಾಯಿಯನ್ನಲ್ಲ! ನಾನು ಕಂದಮ್ಮನ ತಾಯಿ. ಅವನು ಬೆಳೆಯುವತನಕ ನನ್ನನ್ನು ಬೀಡು."

"ಹಸಿದಾಗ ಇದನ್ನೆಲ್ಲ ತಿಳೀಲಿಕ್ಕಾಗುತ್ತದೇನು?"

"ತಿಳಿಯೋ ಹಾಗೆ ನಾನು ಹೇಳಿದೆನಲ್ಲ"

ಆಗಲೂ ಹುಲಿರಾಯ ಕೇಳಲಿಲ್ಲ. ಅದಕ್ಕೇ ತಾಯಿ ಬ್ರಮ್ಮದೇವರ ಬಳಿ ಮೊರೆ ಹೋದಳು. ಬ್ರಮ್ಮ ವಿಷ್ಣು, ಶಿವ ಮೂವರೂ ಹೊಣೆಗೇಡಿಗಳು. ತಾಯಿಯನ್ನು ತಿಳಿಯದಾರು, ಸತ್ಯ ತಿಳಿಯದವರು. ಆದರೆ ಅಮ್ಮನಿಗೆ ಗೊತ್ತಾಯಿತು. ಸತ್ಯ ಯಾವುದು? ಕರುವನ್ನ ಪೊರೆಯಲು ತಾಯಿಯ ಜೀವ ಬೇಕೆಂಬ ತಾಯಿಯ ಖೋಟ್ಟಿಯೇ ಸತ್ಯ. ತಾಯಿಯ ಜೀವವೇ ಸತ್ಯ.

ಹಾಗೆ ತಾಯಿ ಸತ್ಯ ಹೇಳಿದ್ದರಿಂದ ನಾವಿಲ್ಲಿದ್ದೀವಿ. ನೀವು ನನ್ನ ಮುಂದೆ ಇದ್ದೀರಿ.

ಇಲ್ಲೀಗಿ ಹರಹರ
ಇಲ್ಲೀಗಿ ಶಿವಶಿವ
ಇಲ್ಲಿಂದ ಶಿವಪಾದ ಶರಣೆನ್ನಿರೇ"

## ಅರವತ್ತೆರಡು

ಕತೆಯಿಂದ ಕತೆಗೆ ಹೆಚ್ಚಾಗುತ್ತಿದ್ದ ಗೌರಿಯ ಉದರಶೂಲೆ ಇವತ್ತು ಬೆಳಿಗ್ಗೆಯಿಂದಲೇ ಸುರುವಾಗಿತ್ತು. ಸೂರ್ಯೋದಯದ ಸುಮಾರಿಗೆ ಹೆಚ್ಚು ತೀವ್ರವಾಗಿ ಗೌರಿ ನ್ಯಾರೇ ಕೂಡ ಮಾಡದೇ ಬರೀ ಹೊಟ್ಟೆಯಲ್ಲೇ ಪಯಣ ಹೊರಟಳು. ಎಷ್ಟೇ ಪ್ರಯತ್ನಿಸಿದರೂ ಬೊಂತೆಯ ಮತ್ತು ಗುಣದಮ್ಮನಿಂದ ನೋವನ್ನು ಬಚ್ಚಿಡಲಾಗಲಿಲ್ಲ. ಬೊಂತೆಯ ಮೂಕವೇದನೆ ಪಡುತ್ತ ಅವನೂ ನ್ಯಾರೆ ಮಾಡಲಿಲ್ಲ. ಗುಣದಮ್ಮ ನ್ಯಾರೇ ಮಾಡಿದರೂ ಗೌರಿ ಏನೂ ತಿನ್ನದಿರುವ ಬಗ್ಗೆ ಚಡಪಡಿಸಿದಳು. 'ನೋವು ತಡೆದುಕೊಳ್ಳಲಿಕ್ಕಾದರೂ ಸ್ವಲ್ಪ ತಿನ್ನು ಮಗಳೇ' ಎಂದಳು. ಗೌರಿ ಕೇಳಲಿಲ್ಲ. ಮೈ ಬೆಚ್ಚಗಿದ್ದುದರಿಂದ ಇದೊಂದು ದಿನ ವಿಶ್ರಾಂತಿ ತಗೋ ಮಗಳೇ, ಆಮ್ಯಾಲೆ ಹೊರಡೋಣ ಎಂದಳು. ಬೇಡವೆಂದು ಗೌರಿಯೇ ಎದ್ದು ಮುಂದಾದಳು. ದಾರಿಗುಂಟ ಗೌರಿ ಮಾತ್ರ ಭಯಂಕರ ಮೌನದಲ್ಲಿ ಮುಳುಗಿಬಿಟ್ಟಳು. ನಗೆಯಿರಲಿ, ಮುಗುಳು ನಗೆ ಕೂಡ ಮರೆಯಾಗಿ ಅವಳ ಮುಖ ಕಪ್ಪಿಟ್ಟಿತ್ತು.

ಮದ್ಯಾಹ್ನದ ಬಿಸಿಲು ಹರಿತವಾಗಿತ್ತು. ದೊಡ್ಡ ಮರವೊಂದರ ನೆರಳಿನಲ್ಲಿ ಯಾತ್ರಿಕರು ಕಟ್ಟಿತಂದ ಬುತ್ತಿ ತಿಂದು ವಿಶ್ರಾಂತಿ ತಗೊಂಡರು. ಗೌರಿ ಒಂದೆರಡು ತುತ್ತು ತಿಂದಳಾದರೂ ಮೈಗೆ ಹತ್ತಲಿಲ್ಲ. ವಾಂತಿಯಾಗಿ ನೀರು ಕೂಡ ಕುಡಿಯದೆ ನೆರಳಲ್ಲಿ ಅಡ್ಡಾದಳು. ಹೊತ್ತು ಪಡುವಣಕ್ಕೆ ವಾಲಿ ನೆರಳು ಸರಿದು ಇವರು ಕೂತಲ್ಲಿ ಬಿಸಿಲು ಬರುತ್ತಲೂ ಯಾತ್ರಿಕರು ಒಬ್ಬೊಬ್ಬರೇ ದಾರಿ ಹಿಡಿದರು. ಹಳೆಯ ಯಾತ್ರಿಕರು ಮಾತ್ರ ಉಳಿದರು. ಗೌರಿಗೆ ನಿದ್ದೆಯಿರಬೇಕೆಂದು ಎಬ್ಬಿಸದೆ ಗಂಗ ಗುಣದಮ್ಮ ಹಾಗೇ ನಿಂತಿದ್ದಾಗ "ನಾನು ಕರೆತರುತ್ತೇನೆ ನೀವು ಹೊರಡಿರೆಂದು" ಬೊಂತೆಯ ಸನ್ನೆ ಮಾಡಿದ. ಮೆಲ್ಲನೆ ಅವರೂ ನಡೆದರು.

ಇನ್ನಷ್ಟು ಹೊತ್ತು ಕಳೆದ ಮೇಲೆ ಗೌರಿ ಮಗ್ಗಲು ಬದಲಿಸಿದಾಗ ಬೊಂತೆಯ ಗೌರಿಯನ್ನು ನೋಡಿದಾಗ ಕರುಳು ಚುರುಗುಟ್ಟಿದವು. ಕನಕಪುರಿ ದೇಶದ ರಾಜಕುಮಾರಿ ಬರಿ ನೆಲದ ಮೇಲೆ ಗೂಡುಗಾಲು ಹಚ್ಚಿಕೊಂಡು ಮುದ್ದೆಯಾಗಿ ಬಿದ್ದುಕೊಂಡಿದ್ದಳು. ಮುಂಗುರುಳು ಹೊಳಪಿಲ್ಲದ ಹಣೆ ಕೆನ್ನೆಯ ಮೇಲೆ ಹಾರಾಡುತ್ತಿದ್ದವು. ಬಿಕ್ಷುಕರ ಹುಡುಗಿಯಂತೆ ಸಣಕಲು ದೇಹ, ಹರಿದ ಬಟ್ಟೆ ಹಾಕಿಕೊಂಡಿದ್ದಳು. "ಎಂಥಾ ರಾಜಕುಮಾರಿಗೆ ಏನು ಗತಿ ತಂದೆಯಪ್ಪಾ ಶಿವನೇ!" ಎಂದು ಮನಸ್ಸಿನಲ್ಲೇ - ಅಂದುಕೊಂಡು ಕುಂಯ್ ಕುಂಯ್ ಎಂದು ನಾಯಿಕುನ್ನಿಯಂತೆ ಉಲಿಯುತ್ತ ಜಲ ಜಲ ಕಣ್ಣೀರು ಸುರಿಸಿದ. ಕೂರಲಾರದೆ ಎದ್ದು ಚಡಪಡಿಸಿ ಮತ್ತೆ ಕೂತ. ಗೌರಿ ಮೆಲ್ಲಗೆ ಎದ್ದಳು. ಯಾತ್ರಿಕರ್ಯಾರು ಇರಲಿಲ್ಲ. ಬೆಚ್ಚಿ ಅಗಲವಾಗಿ ಕಣ್ಣು ತೆರೆದು ನೋಡಿದಳು. ತಾನೆಲ್ಲಿದ್ದೇನೆಂದು ತಿಳಿಯಲಿಲ್ಲ. ಬೊಂತೆಯನ ಗುರುತು ಕೂಡ ಹಿಡಿಯಲಿಲ್ಲ. ಅಮೇಲೆ ಬುದ್ಧಿ ತಿಳಿದು ಬೊಂತೆಯನ ಗುರುತಾಗಿ "ನೀರು" ಎಂದಳು. ಕೂಡಲೇ ಬೊಂತೆಯ ತತ್ರಾಣಿ ತಂದುಕೊಟ್ಟ. ಹಿಡಿಯಲು ಆಗದಿದ್ದಾಗ ತಾನೇ ಅದರ ಬಾಯನ್ನು ಗೌರಿಯ ತುಟಿಗೆ ಹಿಡಿದ. ಗೌರಿಯ ಕೈ ಸ್ಪರ್ಶವಾಗಿ ಗಾಬರಿಯಾಯಿತು. ಕೈ ಸುಡುತ್ತಿತ್ತು! ಅವನಿಗ್ಯಾಕೋ ಇವಳಿಂದು ಸಾಯುತ್ತಾಳೆ ಅನ್ನಿಸಿತು. ಸಣ್ಣದೊರೆಗೆ ಕೊಟ್ಟ ಮಾತಿಗೆ ತಪ್ಪಿದೆನಲ್ಲೊ ಶಿವನೇ! ಎಂದು ಮುಖ ಓರೆ ಮಾಡಿ ಕಣ್ಣೀರುಗರೆದ.

ನೀರು ಕುಡಿದು ಗೌರಿ ಸ್ವಲ್ಪ ಹೊತ್ತು ಹಾಗೇ ಕೂತಳು. ಒನಿಕೆಯಿಂದ ಗುದ್ದಿದಂತೆ ಹೊಟ್ಟೆಗೆ ಹೊಡೆವ ನೋವಿನಿಂದಾಗಿ ದಣಿದು ಹೈರಾಣಾಗಿದ್ದಳು. 'ಶಾಂತವಾದ ವಿಸ್ಮೃತಿಗೆ ನನ್ನನ್ನು ತಳ್ಳು ಶಿವನೇ' ಎಂದು ಬೇಡಿಕೊಂಡಳು. ಅಂಥ ವಿಸ್ಮೃತಿ ಸಾವಿನಲ್ಲಿದ್ದರೆ ನನಗೆ ಅದನ್ನೇ ಕೊಡು ನನ್ನಪ್ಪಾ!' ಎಂದಳು. ಸಾವಿನ ಲೋಕದಿಂದ ತಿರುಗಿ ಬಂದವರ್ಯಾರು ಇಲ್ಲ. ಆ ಕಡೆಯಿಂದ ಒಂದು ಧ್ವನಿಯೂ ಕೇಳಲಿಲ್ಲ. ಸಾವಿನ ಲೋಕ ಅಷ್ಟೋಂದು ರಹಸ್ಯವೇ? ಅಥವಾ ಅದರಾಚೆ ಬರೀ ಖಾಲಿ ಕತ್ತಲೆ ಇದೆಯೇ? ತಿಳಿವಿಗೆ ನಿಲುಕದ ಖಾಲಿ ಶಾಂತಿ ಇದೆಯೇ? ಧರ್ಮಗಳು, ದೇವರ ಪೂಜೆ, ಯಜ್ಞ ಯಾಗಾದಿಗಳು ಇವೆಲ್ಲ ಹುಸಿಯೇ? ಇವೆಲ್ಲ ಆಚೆ ಇರುವ ಖಾಲಿಯನ್ನು ಅದು

ಕಾಣದ ಹಾಗೆ ಮುಚ್ಚಲಿಕ್ಕೆ ನಾವು ತಯಾರಿಸಿಕೊಂಡ ದುರ್ಬಲ ಮೋಸಗಳೆ? ಅಭಿನಯದ ಮಾದರಿಗಳೇ? ಅಯ್ಯೋ ಅಮ್ಮಾ ಎಂದು ಹೊಟ್ಟೆ ಹಿಸುಕಿಕೊಂಡಳು. ಹೊಟ್ಟೆ ನೋವು ಹಾಗೇ ಇತ್ತು. ಬೊಂತೆಯನ ಅಳುಮುಖ ನೋಡಿ ಮರುಗಿದಳು. "ನಿನ್ಯಾವ ಜನ್ಮದಲ್ಲಿ ನನಗೆ ಅಣ್ಣನೋ ತಮ್ಮನೋ ಆಗಿದ್ದೆಯೋ ನನ್ನಪ್ಪಾ! ನನಗಾಗಿ ನೀನೂ ಸಂಕಟ ಪಡುವ ಹಂಗಾಯ್ತೆ" ಎಂದು ಕ್ಷೀಣ ದನಿಯಲ್ಲಿ ನುಡಿದಳು. ಬೊಂತೆಯ ಈ ಮಾತು ಕೇಳಿ ಇನ್ನಷ್ಟು ಕಣ್ಣೀರು ಸುರಿಸುತ್ತ ತನ್ನ ಅಸಹಾಯಕತೆಗೆ ತಾನೇ ಮರುಗುತ್ತ ಕೂತ. "ಸ್ಪಷ್ಟವಾಗಿ ಇದು ಅಮ್ಮ ಮಾಡುತ್ತಿರುವ ನನ್ನ ಸತ್ವ ಪರೀಕ್ಷೆ. ಶಿವಾಪುರ ತಲುಪಲಾಗದಿದ್ದರೆ ಬೇಡ, ದಾರಿಯಲ್ಲೇ ಜೀವ ಹೋಗಲಿ" ಎಂದು ದೃಢ ಸಂಕಲ್ಪ ಮಾಡಿ "ಬೊಂತೆಯ ನಡಿ ಹೋಗೋಣ" ಎಂದು ಕಷ್ಟಪಟ್ಟು ಎದ್ದಳು.

ಮರದ ನೆರಳು ದಾಟಿ ದಾರಿ ಹಿಡಿದರು. ಭಾರೀ ಪ್ರಯತ್ನವಿಲ್ಲದೇ ನಡೆಯುವುದು ಸಾಧ್ಯವಿಲ್ಲವೆನಿಸಿತು. ಭುಜಗಳು ತುದಿಯಲ್ಲಿ ಕೆಳಗೆ ಬೀಳುವಂತೆ ಬಾಗಿದ್ದವು. ಎಡಗಾಲಿನ ಹೆಬ್ಬೆರಳು ಒಡೆದು ಗಾಯವಾಗಿ ಉರಿಯುತ್ತಿತ್ತು. ಆ ಪಾದವನ್ನು ಎತ್ತಿ ಎತ್ತಿ ಇಡುತ್ತಿದ್ದಳು. ಇಟ್ಟಾಗೊಮ್ಮೆ ನೆಲ ನಡುಗಿದಂತೆ ಭಾಸವಾಗುತ್ತಿತ್ತು. ಬಲಗಾಲನ್ನು ಎಳೆದೆಳೆದು ಹಾಕುತ್ತಿದ್ದಳು. ಬರಬರುತ್ತ ಕೆಸರಿನಲ್ಲಿ ಕಾಲಿಟ್ಟು ಎತ್ತಿದಂತೆ ನಡೆಯತೊಡಗಿದಳು. ಹೆಜ್ಜೆಗೊಮ್ಮೆ ಪಕ್ಕಕ್ಕೆ ವಾಲುತ್ತಿದ್ದಳು. ದೂರದ ಗುಡ್ಡ ಮೋಡಗಳ ಗುಂಪಿನಂತೆ ಕಾಣತೊಡಗಿತ್ತು. ಆಗಲೇ ಅವಳಿಗೆ ತಾನು ಸಾಯುವುದು ಖಾತ್ರಿಯಾಗಿ ದಾರಿಯಲ್ಲೇ ಕುಸಿದು ಬಿದ್ದಳು. ಬೊಂತೆಯ ಅವಳ ಸ್ಥಿತಿ ನೋಡುತ್ತ ಎದುರು ಕೂತು "ನನ್ನ ಬೆನ್ನ ಮೇಲೆ ಕೂರು ಕೂಸೇ" ಎಂದು ಕೈ ಮುಗಿದ. ಗೌರಿ ಶಿವಾಪುರದಮ್ಮನನ್ನು ನೆನೆಯುತ್ತ ಕಣ್ಣು ಮುಚ್ಚಿದಳು. ಬೊಂತೆಯ ಗಾಬರಿಯಾಗಿ ಹಾಹೂ ಎನ್ನುತ್ತ ಓಡಿಹೋಗಿ ಒಂದು ಕೂಗಳತೆ ದೂರದಲ್ಲಿ ಹೋಗುತ್ತಿದ್ದ ಗಂಗ, ಗುಣದಮ್ಮರನ್ನು ಕರೆದು ತಂದ. ನೋಡಿ ಗುಣದಮ್ಮ ನನ್ನ ಕಂದಾ ಎಂದು ಎದೆ ಬಡಿದುಕೊಂಡು ಅಳತೊಡಗಿದಳು. ಅಷ್ಟರಲ್ಲಿ ಹಟ್ಟಿ ಕಡೆಗೆ ಹೋಗುತ್ತಿದ್ದ ಒಂದು ಗಾಡಿ ಬಂತು. ಅದರಲ್ಲಿ ಅವಳನ್ನು ಮಲಗಿಸಿಕೊಂಡು ಮುಂದಿನ ಹಟ್ಟಿ ತಲುಪಿದರು.

ಆ ದಿನ ಹಟ್ಟಿಯ ಹಿರಿಯನ ಬೀಡಿನಲ್ಲಿ ಗೌರಿಯನ್ನು ಮಲಗಿಸಿದರು. ಅಳಲೇಕಾಯಿ ವೈದ್ಯನೊಬ್ಬ ಬಂದು ನಾಡಿ ನೋಡಿ ಇದು ತನ್ನ ತಿಳಿವಿಗೆ ಬಾರದ ರೋಗವೆಂದು ಕೈ ಚೆಲ್ಲಿದ. ಆದರೆ ತಣ್ಣೀರ ಪಟ್ಟಿಯನ್ನು ಹಣೆಯ ಮೇಲಿಡುವುದರಿಂದ ಅಪಾಯವೇನೂ ಇಲ್ಲವೆಂದು ಹೇಳಿ ಹೋದ.

ಗೌರಿಯ ಸ್ಥಿತಿ ಚಿಂತಾಜನಕವಾಗಿತ್ತು. ಮುಖ ಹೀರಿ ಕಣ್ಣು ಕೆಂಜಾದಂತಾಗಿದ್ದವು. ಜ್ವರದಿಂದ ಮೈ ಸುಡುತ್ತಿತ್ತು. ಎಲ್ಲ ಯಾತ್ರಿಕರೂ ಅಳು ಮುಖ ಮಾಡಿಕೊಂಡು ನಿಂತಿದ್ದರು. ಗೌರಿ ಜೀವಂತ ಉಳಿದಾಳೆಂಬ ಆಸೆ ಯಾರಿಗೂ ಇರಲಿಲ್ಲ. ಈ ಕೂಸನ್ನು ಕಾಪಾಡಲೆಂದು ಹಟ್ಟಿಯವರೂ ಅಮ್ಮನಲ್ಲಿ ಬೇಡಿಕೊಂಡರು. ರಾತ್ರಿ ಬೊಂತೆಯ ಗುಣದಮ್ಮ ಊಟ ಮಾಡಲೇ ಇಲ್ಲ. ಅಂದಿನ ಕತೆಗೆ ಯಾರೂ ಒತ್ತಾಯ ಮಾಡಲಿಲ್ಲ. ಯಾತ್ರಿಕರು ಊಟ ಮಾಡಿ ಮಂಟಪಕ್ಕೆ ಮಲಗಲಿಕ್ಕೆ ಹೋದರು. ಬೀಡಿನ ಹೊರಗಿನ ಕಟ್ಟೆಯ ಮೇಲೆ ಗಂಗ ಕೂತ. ಕಣ್ಣೀರು ಸುರಿಸುತ್ತ ಬೊಂತೆಯ ನಿಂತ. ಹಣೆಯ ಮೇಲಿನ ನೀರಿನ ಪಟ್ಟಿಯನ್ನು ಬದಲು ಮಾಡುತ್ತ ಗುಣದಮ್ಮ ಗೌರಿಯ ಪಕ್ಕದಲ್ಲೇ ಕೂತಳು.

ಅಮ್ಮನನ್ನು ತೋರಿಸುತ್ತೇನೆ ಬಾ ಎಂದು ಕೂಸನ್ನು ಜೊತೆ ಕರೆತಂದು ಈಗ ಬರಿಗೈಯಲ್ಲಿ ಶಿವಾಪುರಕ್ಕೆ ಹೋಗುವ ಪ್ರಸಂಗ ಬಂತೆಂದು ಗುಣದಮ್ಮ ಬಹಳ ನೊಂದಳು. ತಾಯೀ ಬೇಕಾದರೆ ನನ್ನ ಜೀವ ತಗೊಂಡು ಈ ಕೂಸಿನ ಜೀವ ಉಳಿಸೆಂದು ಪ್ರಾರ್ಥಿಸಿದಳು.

ಮಧ್ಯರಾತ್ರಿಯ ಸುಮಾರಿಗೆ ಗೌರಿಗೆ ನರಳುವುದು ನಿಂತಿತು. ಗುಣದಮ್ಮ ಗಾಬರಿಯಾಗಿ ಪಟ್ಟಿಯನ್ನು ಬದಲಿಸಿ ಮುಟ್ಟಿ ನೋಡಿದಳು. ಮೈಯಿನ್ನೂ ಸುಡುತ್ತಿತ್ತು. ಗೌರಿ ನಿದ್ರಿಸುತ್ತಿದ್ದಳು. ಮೆಲ್ಲನೆದ್ದು ಹೊರ ಬಂದಳು. ಹೊರಗೆ ಹಾಲು ಚೆಲ್ಲಿದಂಥ ಬೆಳ್ದಿಂಗಳಿತ್ತು. ಇನ್ನೂ ಎಚ್ಚರವಿದ್ದ ಗಂಗ ಬೊಂತೆಯರಿಗೆ ನಾಳೆ ಹೊರಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರೊಂದಿಗೆ ಮಾತಾಡುತ್ತ ಕೂತಳು.

ಈಗವಳಿಗೆ ಗೌರಿಯೇ ಕನಕಪುರಿಯ ರಾಜಕುಮಾರಿ ಎಂದು ಗೊತ್ತಾಗಿತ್ತು. ಅವಳ ಅಣ್ಣ, ಸೇವಕರು, ಅವಳು ಕದ್ದು ತಂದು ಊಟ ಹಾಕಿದ್ದು - ಕನಕಪುರಿಯ ರಾಜಭಟರು ಇವಳನ್ನು ಹುಡುಕಿಕೊಂಡು ಬಂದದ್ದು - ಇದನ್ನೆಲ್ಲ ಜ್ಞಾಪಿಸಿಕೊಂಡಳು. ಹಿರಿಯರಿಗೆ ಹೇಳದೆ ಕೇಳದೆ ಇವಳನ್ನು ಕರೆದು ತಂದದ್ದು ಒಂದಾದರೆ ಈಗವಳು ಸತ್ತರೆ ಆ ಅಪರಾಧವೂ ತನ್ನ ಮೇಲೆ ಬರುವುದೆಂದು ಭಯದಿಂದ ಬಿಳಿಚಿಕೊಂಡಳು. ಕೊನೆಗೆ ಇದೆಲ್ಲ ತಾಯಿಯ ಮಾಯೆ, ಅವಳೇ ಕಾಪಾಡಲೆಂದು ಬೇಡಿಕೊಳ್ಳುತ್ತ ಹಾಗೇ ತೂಕಡಿಸುತ್ತ ಅಲ್ಲೆ ನಿದ್ದೆ ಹೋದಳು.

ಬೀಡಿನ ಮೊಗಸಾಲೆಯಲ್ಲಿ ಗೌರಿ ಒಬ್ಬಳೇ ಮಲಗಿದ್ದಳು. ಬೆಳ್ಳಿ ಮೂಡುವ ಹೊತ್ತು ಬೆಳಗಿನ ತಂಗಾಳಿ ಬೀಸಿ ಗೌರಿಗೆ ಎಚ್ಚರವಾಯಿತು. ಬಾಯಾರಿಕೆಯಾಗಿತ್ತು. ನೀರಿಗಾಗಿ "ಗುಣದಮ್ಮಾ" ಎಂದು ಪಕ್ಕದಲ್ಲಿ ಮಲಗಿದ್ದ ಗುಣದಮ್ಮನಿಗಾಗಿ ಕೈಯಾಡಿಸಿದಳು. ಬಿಳಿಯ ಕಂಬಳಿ ಹೊದ್ದುಕೊಂಡು ಮಲಗಿರುವಳೆಂದು 'ಗುಣದಮ್ಮ' ಎಂದು ಅಲುಗಾಡಿಸಲು ನೋಡಿದಳು. ಬೆಟ್ಟದಂತೆ ಗಾತ್ರ ಮತ್ತು ಸ್ಪರ್ಶದಲ್ಲಿ ಗಟ್ಟಿ ಹತ್ತಿದ್ದರಿಂದ ಇದೇನೆಂದು ಚಕಿತಳಾಗಿ ಮೆಲ್ಲಗೆ ಎದ್ದು ನೋಡಿದಳು. ಮೊದಮೊದಲು ಏನೆಂದು ಗುರುತಾಗಲಿಲ್ಲ. ಗಾಬರಿಯಾಗಿ ಕೂಗುವುದಕ್ಕೂ ಶಕ್ತಿ ಬರಲಿಲ್ಲ. ತೆವಳುತ್ತ ಹೋಗಿ ಕಂಬಕ್ಕೆ ಕಟ್ಟಿದ್ದ ಉರಿಯುವ ಪಂಜನ್ನು ಕಿತ್ತುಕೊಂಡು ಬಂದು ನೋಡಿದಳು. ಬೆಳ್ಳಗೆ ಶುಭ್ರವಾದ ಎತ್ತಿನಂಥ ಆಕೃತಿ ಕಂಡಿತು. ತಕ್ಷಣ ಇನ್ನಷ್ಟು ಹತ್ತಿರ ಬಂದು ನೋಡಿದಳು. ಅದೂ ಕತ್ತೆತ್ತಿ ನೋಡಿದಾಗ ಆನೆಗಾತ್ರದ ಹೋರಿ ತನ್ನ ಹಾಸಿಗೆಯಲ್ಲಿ ಮುಖ ಚಾಚಿ ಮಲಗಿದ್ದದ್ದು ಈಗ ಕತ್ತೆತ್ತಿ ಕಿವಿ ಆಡಿಸಿತು! ತಕ್ಷಣ ಆನಂದ ತಡೆಯಲಾರದೆ "ಭೈರಾಃ" ಎಂದು ಕಿರಿಚಿ ಪಂಚನ್ನು ಕಂಬಕ್ಕಂಟಿಸಿ ಬಂದು ಭೈರನ ಕತ್ತು ತಬ್ಬಿಕೊಂಡಳು. "ಗಂಗ, ಗುಣದಮ್ಮ ಬೊಂತೆಯಾ.... ಬರ್ರ್ಯೊ, ಭೈರ ಬಂದಿದ್ದಾನೆ ಬನ್ರೊ" ಎಂದು ಕಿರಿಚಿ ಮತ್ತೆ ಮತ್ತೆ ಭೈರನನ್ನ ತಬ್ಬಿಕೊಂಡಳು.

ಗೌರಿಯ ಗಾಬರಿಯ ದನಿ ಕೇಳಿ ಬೊಂತೆಯ ಒಳ ಬಂದ. ನೋಡಿದರೆ ಗೌರಿ ಎತ್ತಿನ ಕತ್ತು ತಬ್ಬಿ ಭೈರಾ ಭೈರಾ ಎಂದಳುತ್ತಿದ್ದಾಳೆ! ಅಷ್ಟರಲ್ಲಿ ಗುಣದಮ್ಮ ಗಂಗರೂ ಬಂದರೂ. ಉಕ್ಕಿಬಂದ ಆನಂದ ತಡೆಯಲಾರದೆ ಅಥವಾ ತನ್ನ ಸಂಕಟ ದೂರವಾಯಿತೆಂಬಂತೆ "ಗುಣದಮ್ಮ ಭೈರ ಬಂದಿದ್ದಾನೆ!" ಎಂದಳು. ಅವರಿನ್ನೂ ಗಾಬರಿಯಲ್ಲಿ ಆನೆ ಗಾತ್ರದ ಹೋರಿಯನ್ನೇ ನೋಡುತ್ತಿದ್ದರೆ, ಗೌರಿ "ಇವನು ನಮ್ಮ ಭೈರ! ಶಿವಾಪುರದ ಭೈರ!" ಅಂದಳು. ಗುಣದಮ್ಮನಿಗೆ ಆಗ ಗುರುತು ಹತ್ತಿತು!

"ಆಯ್ ಶಿವನ! ಇದು ನಿನ್ನಡಿಯ ಹೋರಿ! ಭೈರ!"

ಎಂದು ಹತ್ತಿರಬಂದು ಎರಡೂ ಕೈಗಳಿಂದ ಭೈರನನ್ನು ಮುಟ್ಟಿ ಅದರ ಬಾಲವನ್ನು ಕಣ್ಣಿಗೊತ್ತಿಕೊಂಡಳು. ಆಮೇಲೆ ಉಳಿದವರು ಗುರುತಿಸುವುದು ತಡವಾಗಲಿಲ್ಲ. ಅವರೂ ಗುಣದಮ್ಮನನ್ನು ಅನುಸರಿಸಿ ಭೈರನ ಬಾಲ ಕಣ್ಣಿಗೊತ್ತಿಕೊಂಡು ಧನ್ಯರಾದರು.

ಭೈರ ಇದ್ದಾನೆಂದರೆ ನಿನ್ನಡಿಯೂ ಬಂದಿರಬೇಕಲ್ಲಾ ಎಂದು ಹುಡುಕುವಾಗ - ಮೊಗಸಾಲೆಯ ಬಾಗಿಲೊಳಗೆ ಮನೆ ಹಿರಿಯ, ಮತ್ತವನ ಮಡದಿ ಮಕ್ಕಳು ನೆಮ್ಮದಿಯಿಂದ ನಗುತ್ತ ನಿಂತಿದ್ದರು. ಹಿರಿಯನಿಂದ ವಿಷಯ ತಿಳಿಯಿತು: ನಿನ್ನೆ ಮಧ್ಯೆ ರಾತ್ರಿ ಕಳೆದ ಮೇಲೆ ನಿನ್ನಡಿ, ಚಂಡೀದಾಸರು ಬಂದರೆಂದೂ ಗೌರಿಯ ಜಡ್ಡಿನ ವಿಷಯ ಗೊತ್ತಾಗಿ ಆಗಲೇ ನಾಡೀ ನೋಡಿದರೆಂದೂ, ಈಗ ಎರಡು ಗಳಿಗೆ ಹಿಂದಯಷ್ಟೇ ಮದ್ದು ತರೋದಕ್ಕೆ ಕಾಡಿಗೆ ಹೋಗಿರುವರೆಂದೂ ಗೊತ್ತಾಯಿತು. ಇದನ್ನು ಕೇಳಿ ಗೌರಿ ಆನಂದದಿಂದ ಜಲ ಜಲ ಕಣ್ಣೀರುಗರೆದಳು.

ಅದಾಗಿ ಗೌರಿ ಕಣ್ಣು ಮುಚ್ಚಿ ಮುಖ ಕಿವುಚಿ 'ಅಯ್ಯೋ ಇದು ಮತ್ತೇ ಸುರುವಾಯಿತೇಂದು' ಹೊಟ್ಟೆ ಹಿಸುಕಿಕೊಂಡಳು. ಅಷ್ಟರಲ್ಲಿ ಚಂಡೀದಾಸ ಸೊಪ್ಪು ಹಿಡಿದುಕೊಂಡು ಕಾಡಿನಿಂದ ಬಂದ. ಹೊಳೆವ ಕಣ್ಣಿನಿಂದ ಗೌರಿಯನ್ನೇ ನೋಡುತ್ತ ಅವಳ ಮುಂದೆ ಕೂತ. ದನಿ ಗುರುತಾಗಿ ನೋಡಿದರೆ ಚಂಡೀದಾಸ! 'ತಾತಾ' ಎನ್ನುತ್ತ ಮಗು ತಾತಾನ ಹತ್ತಿರ ಧಾವಿಸುವಂತೆ ಅವನನ್ನು ತಬ್ಬಿಕೊಂಡಳು. ಚಂಡೀದಾಸ "ಹೇಳದೆ ಕೇಳದೆ ಹೀಗೆ ಬಂದು ಬಿಡೋದಾ?" ಎಂದು ಹೇಳಿ ತಕ್ಷಣ ಅವಳ ಮೈ ಬಿಸಿಯಾದುದನ್ನು ಗಮನಿಸಿ "ಈಗ ಹೇಳು, ನೋವು ಸುರುವಾಯಿತೆ" ಅಂದ.

“ಹೌದು” ಎಂಬಂತೆ ಕತ್ತು ಹಾಕಿ, ಹೊಟ್ಟೆ ತೆರೆದು ನೋವಿದ್ದಷ್ಟು ಭಾಗವನ್ನು ಬೆರಳಿನಿಂದ ಗೆರೆ ಬರೆದು ತೋರಿಸುತ್ತ,

“ಕನಕಪುರಿ ಬಿಟ್ಟಾಗಿನಿಂದ ದಿನಾ ನೋಯುತ್ತಿದೆ. ನಾನು ಸಾಯ್ತಿನಿ ತಾತಾ”

ಎಂದು ಬಿಕ್ಕಿ ಬಿಕ್ಕಿ ಪುನಃ ತಬ್ಬಿಕೊಂಡು ಅಳತೊಡಗಿದಳು.

“ಅದಕ್ಕೆ ನಿನ್ನಡಿ ಮತ್ತು ನಾನು ಬಂದಿರೋದು. ಇನ್ನು ಬಿಟ್ಟು ಅನ್ನು”

ಅಂದ ಅವಳ ತಲೆ ನೇವರಿಸುತ್ತ, ಆದರೂ ಅವಳು ಅಳುತ್ತಿರಲು

“ಬಿಟ್ಟು ಅನ್ನು” ಎಂದು ಒತ್ತಾಯ ಮಾಡಿದ.

ಗೌರಿ ಬಿಕ್ಕುತ್ತಲೇ “ಬಿಟ್ಟು” ಅಂದಳು. ಗೌಡ್ತಿಯನ್ನು ಕರೆದು, ತಂದಿದ್ದ ಸೊಪ್ಪನ್ನು ಅವಳ ಕೈಗಿಟ್ಟ:

“ನೀನು ಮುದ್ದುವಿಗೆ ಒಂದೆರಡು ಚೊಂಬು ಸ್ನಾನ ಮಾಡಿಸಿ ಈ ಸೊಪ್ಪಿನ ರಸವನ್ನು ಅವಳ ಹೊಟ್ಟೆ ಬೆನ್ನಿಗೆ ಸವರಬೇಕು. ಅದು ಆರಿದ ಮೇಲೆ ಸೂರ್ಯೋದಯವಾಗುವಾಗ ಮಂಟಪದ ಹಿಂದಿನ ಹಾಸುಗಲ್ಲಿಗೆ ಕರೆದುಕೊಂಡು ಬರಬೇಕು. ಹೊಟ್ಟೆಗೇನೂ ತಗೊಳ್ಳುವುದು ಬೇಡ. ನಾವಲ್ಲಿ ಕಾಯುತ್ತೇವೆ.”

- ಎಂದು ಹೇಳಿ ಹೋದ.

ನಿನ್ನಡಿಯಾಗಲೆ ಮಿಂದು ಬಂದು ಹಟ್ಟಿಯ ಹೊರಗಿನ ಹಾಸುಗಲ್ಲಿನ ಮ್ಯಾಲೆ ಸೂರ್ಯಮಂಡಲ ಬರೆದು ಕಾಯುತ್ತಿದ್ದ. ಗೌರಿ ಚಂಡೀದಾಸರು ಬಂದೊಡನೆ ರೋಗಿ ನಿಲ್ಲುವ ಸ್ಥಳದಲ್ಲಿ ಅವಳನ್ನು ಮೂಡಣ ಮುಖವಾಗಿ ನಿಲ್ಲಿಸಿ, ಸಸ್ಯದೇವತೆಗಳು, ಮತ್ತವನ ಪರಿವಾರ ಸಮೇತ ಸರ್ಯನಾರಾಯಣ ಸ್ವಾಮಿಯನ್ನು ಆವಾಹಿಸಿದ. ಆಮೇಲೆ ಅವಳ ಹಿಂದೆ ಬಿದ್ದ ನೆರಳಿನ ಉದರ ಭಾಗ ಮೂಡಿದಲ್ಲಿ ಬಣ್ಣದಿಂದ ಗುರುತು ಮಾಡಿ, ಪಡುವಣಕ್ಕೆ ಮುಖಮಾಡಿ ನಿಲ್ಲಿಸುವಂತೆ ಚಂಡೀದಾಸನಿಗೆ ಹೇಳಿದ. ಚಂಡೀದಾಸ ಗೌರಿಯನ್ನು ತಿರುಗಿಸಿ ಹಿಂದಿನ ನೆರಳೀಗೂ ಈಗಿನದ್ದಕ್ಕೂ ತಾಳೆಯಾಗುವಂತೆ ಹಿಂದೆ ಮುಂದೆ ಎಡ ಬಲ ಸರಿಸಿ ನಿಲ್ಲಿಸಿದ. ನಿನ್ನಡಿ ಈಗ ಮತ್ತೊಮ್ಮೆ ಬಣ್ಣದಲ್ಲಿ ಗುರುತು ಮಾಡಿ ಮೊದಲಿನಂತೆ ಮತ್ತೆ ಮೂಡಣ ಮುಖವಾಗಿ ನಿಲ್ಲಿಸುವಂತೆ ಹೇಳಿದ.

ಈಗ ಚಂಡೀದಾಸ ಸೂರ್ಯನಮಸ್ಕಾರ ಹಾಕಲು ಸುರುಮಾಡಿದ. ನಿನ್ನಡಿ ಮಂತ್ರೋಚ್ಚಾರಣೆ ಮಾಡುತ್ತ ಬಣ್ಣದ ಗುರುತು ಮಾಡಿದಲ್ಲಿ ಗರಿಕೆಯಿಂದ ಕೊರೆಯುತ್ತ ಮತ್ತೆ ಮತ್ತೆ ಗೆರೆಯೆಳೆದ. ಇದು ನೂರಹತ್ತು ಸೂರ್ಯ ನಮಸ್ಕಾರಗಳು ಮುಗಿಯುವ ತನಕ ನಡೆಯಿತು. ಅಮೇಲೆ ನಿನ್ನಡಿ ಮತ್ತು ಚಂಡೀದಾಸ ಇಬ್ಬರೂ ಸೂರ್ಯನಿಗೂ ಸಸ್ಯದೇವತೆಗಳಿಗೂ ಕೃತಜ್ಞತೆ ಹೇಳಿ ವಿಸರ್ಜಿಸಿದರು.

ನಂಬುವುದೂ ಬಿಡುವುದೂ ನಿಮಗೆ ಬಿಟ್ಟದ್ದು. ವಿಷಗಳಲ್ಲಿ ಬೇಕಾದಷ್ಟು ವಿಧಗಳಿವೆ. ಕೆಲವು ವಿಷಗಳು ತಜ್ಞರಿಗೆ ಕೂಡ ತಮ್ಮ ಸ್ವರೂಪ, ವ್ಯಾಪ್ತಿ ಹಾಗೂ ಉದ್ದೇಶದ ಗುಟ್ಟು ಬಿಟ್ಟುಕೊಡುವುದಿಲ್ಲ. ಅಂಥವನ್ನು ಪತ್ತೆ ಮಾಡಿ ತೆಗೆದು ಹಾಕಲು ಶಿವಾಪುರದ ವೈದ್ಯಪ್ರಸ್ಥಾನ ಕಂಡುಕೊಂಡ ಶಸ್ತ್ರಚಿಕಿತ್ಸೆಯ ಪೂರ್ವೀ ಪದ್ಧತಿ ಇದು. ಸೂರ್ಯನ ಹರಿತವಾದ ಬಿಸಿಲಲ್ಲಿ ವಿಷಪ್ರಾಶನ ಮಾಡಿದ ರೋಗಿಯ ಮೈಗೆ ನಿರ್ದಿಷ್ಟ ಸೊಪ್ಪಿನ ರಸ ಸವರಿ ನಿಲ್ಲಿಸಬೇಕು. ಆಗ ಸೂರ್ಯನ ಕಿರಣಗಳು (ಇಂದಿನ ಕ್ಷ ಕಿರಣದಂತೆ) ದೇಹದಲ್ಲಿ ಪ್ರವೇಶಿಸಿ ವಿಷದ ವ್ಯಾಪ್ತಿಯನ್ನು ದಟ್ಟ ಛಾಯೆಯ ಮೂಲಕ ತೋರಿಸುತ್ತವೆ. ಸೂಕ್ಷ್ಮವಾಗಿ ಕಾಣಿಸುವ ಅದರ ಸೀಮೆಯನ್ನು ಬಣ್ಣದಿಂದ ಗುರುತಿಸುತ್ತಾರೆ. ಆಮೇಲೆ ಮಂತ್ರೋಪಚಾರಣೆ ಮಾಡುತ್ತ ಗರಿಕೆಯ ತುದಿಯಿಂದ ಆ ಛಾಯೆಯನ್ನು ಕತ್ತರಿಸುತ್ತಾರೆ. ಒಳಗಿನ ವಿಷ ಮಲದ ಮೂಲಕ ಹೊರಹೋಗುತ್ತದೆ. ಇದು ಏಕಾಗ್ರತೆ ಮತ್ತು ಪರಿಶ್ರಮದಿಂದ ಸಾಧಿಸುವ ವೈದ್ಯಸಿದ್ಧಿ. ಅದು ಶಿವಪಾದನಿಗೆ, ಅವನಿಂದ ನಿನ್ನಡಿಗೆ

ಸಿದ್ಧಿಸಿತ್ತು. ಕಲಿತದ್ದನ್ನು ಪ್ರಯೋಗಿಸುವ ಅವಕಾಶ ಇಲ್ಲಿತನಕ ಬಂದಿರಲಿಲ್ಲ. ಅದು ಯಶಸ್ವಿಯಾಯಿತೆಂದು ನಿನ್ನಡಿ ಸಂತೋಷಪಟ್ಟ. ವೈದ್ಯಕ್ರಿಯೆ ಮುಗಿದ ಮೇಲೆ ಗೌರಿಗೆ ಆಯಾಸವಾಗಿತ್ತು. ಮಂಟಪದಲ್ಲಿ ಮಲಗಿಸಿದರು. ಗುಣದವ್ವ ಜೊತೆಗಿದ್ದಳು. ಅದೇನೇ ಇರಲಿ ಅಂದಿನಿಂದ ಗೌರಿಯ ಉದರಶೂಲೆಯಂತೂ ಇಲ್ಲವಾಯಿತು.

ಗೌರಿಗೆ ಆ ದಿನ ವಿಶ್ರಾಂತಿ ಬೇಕಿತ್ತು. ಗೌರಿಯ ಜೊತೆ ನಿನ್ನಡಿ, ಚಂಡೀದಾಸ, ಬೊಂತೆಯರೂ ಉಳಿದರು. ಉಳಿದ ಯಾತ್ರಿಕರು ಶಿವಾಪುರಕ್ಕೆ ಪಯಣ ಮಾಡಿದರು.

ನಿನ್ನಡಿಯನ್ನು ನೋಡಿ ಹಟ್ಟಿಯವರಿಗಾದ ಹರುಷ ಅಷ್ಟಿಷ್ಟಲ್ಲ. ಗೌರಿಯ ಆರೈಕೆಗಾಗಿ ಇದ್ದ ತೋಟದ ಮನೆಯಲ್ಲೇ ಇವರನ್ನುಳಿಸಿಕೊಂಡು ಹೊಸ ಯಾತ್ರಿಕರಿಗೆ ಮಂಟಪ ಬಿಟ್ಟುಕೊಟ್ಟರು . ಶಿವಾಪುರಕ್ಕೆ ಹೋದ ಕೂಡಲೇ ಗೌರಿ ಮತ್ತು ನಿನ್ನಡಿ ಕೂಡಿದ ಹಬ್ಬದ ಕಾರ್ಯ ನಡೆಯಬೇಕೆಂಬುದು ಶಿವಪಾದನ ಇಚ್ಛೆಯಾಗಿರುವುದರಿಂದ ಅದನ್ನು ಅಮ್ಮನ ಪರ್ವದ ದಿನವೇ ನೆರವೇರಿಸಲು ಐವರೂ ಮಾತಾಡಿಕೊಂಡರು. ಈ ವ್ಯವಸ್ಥೆಗೆ ಗೌರಿಯ ಒಪ್ಪಿಗೆ ಪಡೆದು ಮದ್ದು ಕೊಟ್ಟು ಮಲಗಿಸಿ ನಿನ್ನಡಿ ಮತ್ತು ಚಂಡೀದಾಸರು ಹೊರಬಂದರು.

ದಟ್ಟ ಬೆಳ್ದಿಂಗಳ ಮಾಯೆ ತೋಟವನ್ನು ಆವರಿಸಿತ್ತು. ದನಗಳ ಬಳಿ - ಮೆಲುಕಾಡಿಸುತ್ತ ನಿಂತಿದ್ದ ಭೈರನ ಬೆನ್ನ ಮೇಲೆ ನಿನ್ನಡಿ ಕೈಯಾಡಿಸಿ ಬಂದ ಮೇಲೆ ಇಬ್ಬರೂ ಕಣದಲ್ಲಿ ಮೇಟಿಯ ಬಳಿ ಕೂತರು.

ಗೌರಿಯ ಉದರಶೂಲೆ ವಿಷಪ್ರಾಶನದಿಂದ ಆದುದು, ಅವಳಿಗ್ಯಾರು ವಿಷ ಕೊಟ್ಟಿರಬಹುದೆಂದು ಇಬ್ಬರ ಚರ್ಚೆಯ ವಿಷಯವಾಗಿತ್ತು. ಇದು ಸುಮಾರು ಒಂಬತ್ತು ಹತ್ತು ದಿನಗಳ ಹಿಂದೆ ತಗೊಂಡ ವಿಷ. ಆವಾಗ ಅವಳು ಕನಕಪುರಿಯಲ್ಲೇ ಇದ್ದಳು. ಅಲ್ಲಿ ಅವಳ ಶತ್ರು ಇರುವುದು ಸಾಧ್ಯವೇ ಇಲ್ಲ ಎಂದು ನಿನ್ನಡಿ ಅಂದರೆ - ಶಿವಾಪುರಕ್ಕೆ ಹೋಗುವ ಇವಳ ಹಟ ನೋಡಿ ಶಿಖರಸೂರ್ಯನೇ ಕೊಟ್ಟಿರಬೇಕೆಂದು ಚಂಡೀದಾಸ ಹೇಳಿದ. ಈ ಸಲದ ಪರ್ವಕ್ಕೆ ಕನಕಪುರಿಯ ಜನರು ವಲಸೆ ಬರುವುದನ್ನ ಚರ್ಚಿಸಿದರು. ಕನಕಪುರಿಯ ಗಡಿಯಲ್ಲಿ ಗಡ್ಡೀಬೇನೆ ಹರಡುವ ಲಕ್ಷಣಗಳು ಕಂಡು ಬಂದುದನ್ನು ಮಾತಾಡಿದರು. ಸದರಿ ಕೃತಕ ಬರಗಾಲಕ್ಕೆ ಚೆನ್ನದ ಹಪಾಪಿತನವೇ ಕಾರಣವೆಂದು, ಶಿವಾಪುರದಲ್ಲಿ ಕೊನೆಪಕ್ಷ ದಿನಕ್ಕೆರಡು ಬಾರಿ ಅಂಬಲಿಯಾದರೂ ಸಿಗುತ್ತದೆಂದು ಕನಕಪುರಿಯ ನಿರ್ಗತಿಕರು, ಭಿಕ್ಷುಕರು ವಲಸೆ ಬರತೊಡಗಿದ್ದರು. ದಿನಕ್ಕೆ ಇಬ್ಬರು ಮೂವರು ಬಂದರೂ ಶಿವಾಪುರದಂಥ ಊರಿಗದು ಭಾರವೇ. ಯಾಕೆನೆ ಶಿವಾಪುರ ಕೃಷಿಯನ್ನೇ ನೆಚ್ಚಿದ ಊರು. ಅವರವರ ಹೊಲ ತೋಟಗದ್ದೆಗಳನ್ನು ಅವರವರೇ ನೋಡಿಕೊಂಡು ಬೇಕಾದಷ್ಟನ್ನು ಬೆಳೆದು ಉಳಿದುದನ್ನು ಧರ್ಮಕರ್ಮಕ್ಕೆ ಅಂತ ಇಟ್ಟುಕೊಂಡು ಬಾಳುತ್ತ ಬಂದವರು. ಬೇರೆ ಕಡೆ ಅನ್ನದ ಆಧಾರವಾಗುವತನಕ ಇದ್ದವರೇ ಈಗಾಗಲೇ ನೂರಾರು ಜನರಾಗಿದ್ದರು, “ನಮ್ಮಲ್ಲಿ ಕಡೇ ಧಾನ್ಯ ಇರೋತನಕ ಅತಿಥಿಗಳಿಗೆ ನಿತ್ಯ ದಾಸೋಹ ನಡೆಯಲಿ. ಧಾನ್ಯ ಮುಗಿದ ಮೇಲೆ ತಾಯಿ ನೋಡಿಕೊಳ್ತಾಳೆ” ಎಂದು ಶಿವಪಾದ ಅಪ್ಪಣೆ ಕೊಟ್ಟಿದ್ದ. ದಾಸೊಹವಾಗಲೇ ಸುರುವಾಗಿ ತಿಂಗಳಾಗಿತ್ತು. ಸುತ್ತಲಿನ ಹಟ್ಟಿಯವರಿಗೆ ಈ ಸುದ್ದಿ ಗೊತ್ತಾಗಿ ತಂತಮ್ಮಲ್ಲಿದ್ದ ಹೆಚ್ಚಿನ ಧಾನ್ಯವನ್ನು ಉದಾರವಾಗಿ ತಂದು ಶಿವಾಪುರದ ಮಂಟಪದಲ್ಲಿ ಸುರುವಿ ಹೋಗಿದ್ದರು.

ಇದನ್ನೆಲ್ಲ ಚರ್ಚಿಸಿ ಇನ್ನು ಮಲಗಬೇಕೆಂದು ಏಳುವಾಗ ನಿನ್ನಡಿಯ ಬಟ್ಟೆಯನ್ನು ಯಾರೋ ಹಿಡಿದು ಎಳೆದಂತಾಯಿತು. ಏನೆಂದು ನೋಡಿದರೆ - ಇವರಿಗೆ ಗೊತ್ತಾಗದಂತೆ ಯಾವಾಗಲೋ ಬಂದ ಗೌರಿ ನಿನ್ನಡಿಯ ಬಟ್ಟೆಯ ಚುಂಗನ್ನು ತನ್ನ ಬೆರಳಿಗೆ ಸುತ್ತಿಕೊಂಡು ನಿದ್ದೆ ಹೋಗಿದ್ದಳು. ಇಬ್ಬರೂ ಪರಸ್ಪರ ಮುಖ ನೋಡಿ ನಕ್ಕರು. ನಿನ್ನಡಿ “ಗೌರೀ” ಅಂದ. ಗೌರಿ ಎಚ್ಚರವಾಗಿ ಎದ್ದು ಕೂತಳು. ಚುಂಗು ಕಟ್ಟಿಕೊಂಡ ಬೆರಳು ತೋರಿಸಿ “ಇದೇನು”? ಅಂದ. “ನೀನು ನನ್ನನ್ನ ಬಿಟ್ಟು ಹೋಗುತ್ತಿ ಅಂತ ಅನುಮಾನ ಬಂದು ಕಟ್ಟಿಕೊಂಡಿದ್ದೆ” ಅಂದು ಬೆರಳಿನ ಗಂಟು ಬಿಚ್ಚಿಕೊಂಡಳು. ಇಬ್ಬರೂ ನಕ್ಕರು.

ಮಾರನೇ ಬೆಳಿಗ್ಗೆ ಭೈರನ ಮೇಲೆ ಗೌರಿಯನ್ನು ಕೂರಿಸಿಕೊಂಡು ಉಳಿದ ನಾಲ್ವರೂ ನಡೆಯುತ್ತ ಶಿವಾಪುರಕ್ಕೆ ಹೊರಟರು. ಇಡೀ ಹಟ್ಟಿ ಅವರೊಂದಿಗೆ ಹೊರಟಿತು.

ಆಗ ಗೌರಿ ಬೆಳ್ದಿಂಗಳಲ್ಲಿ ಅದ್ದಿ ತೆಗೆದ ಸುಂದರ ಗೊಂಬೆಯಂತೆ ಕಂಡಳು ನಿನ್ನಡಿಗೆ.

## ಅರವತ್ಮೂರು

ಇವರು ಶಿವಾಪುರ ತಲುಪಿದಾಗ ಗೋಧೂಳಿ ಲಗ್ನದ ಸಮಯವಾಗಿತ್ತು. ಊರಿಗೂರೇ ಇವರನ್ನು ಸ್ವಾಗತಿಸಲು ನಿಂತಿತ್ತು. ಭೈರನ ಮೇಲೆ ಬಂದ ಗೌರಿಯಂತೂ ನಂದಿಯನ್ನೇರಿ ಬಂದ ಪಾರ್ವತಿಯಂತೇ ಕಂಡು ಗಂಡು ಹೆಣ್ಣು ಭಾವುಕರಾಗಿ ಕೈಮುಗಿದು ಆನಂದಭಾಷ್ಪ ಸುರಿಸಿದರು. ಬೆಳ್ಳಿಯ ಸಡಗರವನ್ನಂತೂ ಹೇಳತೀರದು. ಗೌರಿಗೆ ಸಾವಿರ ಸಲ ಲಟಿಕೆ ಮುರಿದಳು. ಸಾವಿರ ಸಲ ದೃಷ್ಟಿ ನಿವಾಳಿಸಿದಳು. ಅಂದು ಸಂಜೆಯೇ ನಿನ್ನಡಿ ಗೌರಿಯನ್ನು ಜಟ್ಟಿಗನ ಸಮಾಧಿಗೆ ಕರೆದೊಯ್ದು. ಇಬ್ಬರೂ ಜಟ್ಟಿಗನಿಗೆ ನಮಸ್ಕರಿಸಿ ಬಂದರು. “ಸೊಸೆಯನ್ನು ನೋಡಲು ನೀನಿರಬೇಕಿತ್ತೋ ನನ್ನ ಜಟ್ಟಿಗ” ಎಂದು ಬೆಳ್ಳಿ ಅತ್ತಳು.

ಬೆಳ್ಳಿ ಮೂಡುವ ಮೊದಲೇ ಬೆಳ್ಳಿ ಮತ್ತು ನಿನ್ನಡಿ ಮಿಂದು ಹೆತ್ತಯ್ಯ ಮುತ್ತಯ್ಯರ ನೆನೆದು, ಜಟ್ಟಿಗನ ಗೋರಿಗೆ ನಮಿಸಿ, ಬೆಟ್ಟಕ್ಕೆ ಹೋದರು. ಹೇಳಿದ ಸಮಯಕ್ಕೆ ಮುತ್ತೈದೆಯರೊಂದಿಗೆ ಗೌರಿಗೆ ಅರಿಷಿಣ ನೀರೆರೆದು ಮುಡಿಯುಡಿಸಿ ಬೆಟ್ಟ ಏರಿದರು. ಸಕಾಲದಲ್ಲಿ ಶಿವಪಾದನ ನೇತೃತ್ವದಲ್ಲಿ ಅಮ್ಮನ ಸಾಕ್ಷಿಕದಲ್ಲಿ ಗೌರಿಯನ್ನ ನಿನ್ನಡಿಗೆ ಧಾರೆಯೆರೆದುಕೊಟ್ಟರು. ಸುತ್ತಲಿನ ಒಂದು ಕಡಿಮೆ ನಲವತ್ತು ಹಟ್ಟಿಯ ಜನ ಸೇರಿದ್ದರು. ನಿನ್ನಡಿಗೆ ಇನ್ನೊಂದು ಆಶ್ಚರ್ಯ ಕಾದಿತ್ತು. ಈ ವಾರ ನಿರೀಕ್ಷೆ ಮೀರಿ ಕನಕಪುರಿ ಕಡೆಯ ಜನರು ವಲಸೆ ಬಂದುದರಿಂದ ಸಂಗ್ರಹವಾದ ಧಾನ್ಯ ಸಾಲದೇ ಬರಬಹುದೆಂದು ಹೆದರಿದ್ದ. ಆದರೆ ವಲಸೆಯ ಜನರನ್ನು ಗಮನಿಸಿಯೇ ಸೀಮೇಯ ಜನ ಮೂರು ಮೂರು ಬಂಡಿ ಧಾನ್ಯ ತುಂಬಿಸಿಕೊಂಡು ಬಂದು ಸುರುವಿದ್ದರು. ಅವರವರೇ ಕೆಲಸ ಹಂಚಿಕೊಂಡು ಬೆಟ್ಟದ ತುಂಬ ಸೇರಿದ ಜನಕ್ಕೆ ಭಾರಿ ಭೋಜನದ ವ್ಯವಸ್ಥೆ ಮಾಡಿದ್ದರು. ಬೆಟ್ಟ ಏರಲಾರದ ವೃದ್ಧರಿಗೂ ಬಾಣಂತಿಯರಿಗೂ ಶಿವಾಪುರದ ಮಂಟಪದ ಬಳಿ ಇನ್ನೊಂದು ಚಪ್ಪರ ಕಟ್ಟಿ ವ್ಯವಸ್ಥೆ ಮಾಡಿದ್ದರು.

ಎಲ್ಲಿ ನೋಡಿದಲ್ಲಿ ಮೇಲೆ ಬೆಟ್ಟದ ತುಂಬ, ಕೆಳಗೆ ಊರು ಕೇರಿ ಮಡುವಿನ ಸುತ್ತ ಮುತ್ತ ಹಾಡುವ, ಕುಣಿಯುವ, ಕುಡಿನೋಟದಲ್ಲಿ ಮಾತಾಡಿಕೊಂಬ ಬೇಟಬೇಟೆಯ ಹುಡುಗಿಯರಿಂದ, ಚೇಷ್ಟೆ ಮಾಡುವ ಮುದುಕ ಮುದುಕಿಯರಿಂದ ಇಡೀ ಪ್ರದೇಶ ದಿಮಿದಿಮಿ ದಿಮಿ ಎನ್ನುವಂತೆ ಜನ ಹಬ್ಬವನ್ನು ಆಚರಿಸಿದರು. ಪ್ರಾಣಿಗಳ ಕೂಗುಗಳನ್ನು ಅನುಕರಿಸುವ, ಅಣಕಿಸುವ, ಥರಾವರಿ ದೈಹಿಕ ಚಮತ್ಕಾರಗಳನ್ನು ತೋರಿಸುವ ಸೋಬಾನೆ ಲಾವಣಿ ಹಾಡುವ, ಹಲಗೆ ಕರಡಿ ಡೊಳ್ಳು ಬಾರಿಸುವ ವಿವಿಧ ವೇಷ ಪ್ರದರ್ಶನಗಳಿಗಂತೂ ಲೆಕ್ಕವಿರಲಿಲ್ಲ.

ಗೌರಿ, ಶಿವಪಾದರು ಪರಸ್ಪರ ನೋಡಿದ ತಕ್ಷಣದಿಂದಲೇ ಕಳೆದು ಹೋದ ತಾತ, ಮೊಮ್ಮಗಳು - ಪುನಃ ಭೇಟಿಯಾದವರಂತೆ ಹಚ್ಚಿಕೊಂಡರು. ಗವಿಯ ಒಳಗೂ ಜನ, ಹೊರಗು ಜನ ... ಜನರನ್ನೂ ನೋಡಿದಷ್ಟೂ ಶಿವಪಾದನಿಗೆ ಸಂತೋಷ ಹೆಚ್ಚಿತು.

ಇಳಿ ಹೊತ್ತಿನಲ್ಲಿ ಗೌರಿಯನ್ನು ಹತ್ತಿರ ಕೂರಿಸಿಕೊಂಡು ಪ್ರೀತಿಯಿಂದ ಅನೇಕ ವಿಷಯಗಳನ್ನು ಹೇಳಿ, ಕೇಳಿದ. ಆಕೆ ಮೆಲ್ಲಗೆ ಆತನ ಕಿವಿಯಲ್ಲಿ “ತಾತ ನನಗೆ ಒಂಬತ್ತನೇ ಕತೆ ಹೇಳು” ಎಂದಳು. ಅಲ್ಲೇ ಕೂತಿದ್ದ ಬೊಂತೆಯ ಏನನ್ನೋ ಹೇಳಲು ಬಹಳ ಒದ್ದಾಡುತ್ತಿದ್ದ. ಕೈ ಸನ್ನೆ ಬಾಯಿ ಸನ್ನೆ ಮಾಡಿ ಏನನ್ನೋ ಕೇಳಲು ತವಕಿಸುತ್ತಿದ್ದ, ಅವನನ್ನು ನೋಡಿ ಶಿವಪಾದ ಮುಗುಳುನಗುತ್ತಿದ್ದ. ಗೌರಿ ತಾನೇ ಮುಂದಾಗಿ “ಅವನು ಬೊಂತೆಯ, ಬಾಯಿ ಇಲ್ಲ ತಾತ” ಅಂದಳು. “ಅಲ್ಲ ಅವನು ಮಹಾನುಭಾವ. ಈಗ ಮಾತಾಡುತ್ತಾನೆ ನೋಡು” ಎಂದ ಶಿವಪಾದ.

ಬೊಂತೆಯ ತಲೆ ಚಚ್ಚಿಕೊಂಡು ತಲೆಗೂದಲು ಕಿತ್ತುಕೊಳ್ಳುತ್ತ "ತಾ…. ತಾ… ತಾತಾ ಶಿವಾಪುರ ಎಲ್ಲಿ?" ಅಂದ.

ಗೌರಿಗೆ ಮೈತುಂಬ ಸಳ ಸಳ ಪುಳಕವೆದ್ದು ತೆರೆದ ಬಾಯಿ ತೆರದಂತೇ ಕಣ್ಣಗಲಿಸಿ ಶಿವಪಾದನನ್ನೇ ನೋಡುತ್ತ ಬರೆದ ಚಿತ್ರದ ಹಾಗೆ ಕೂತುಬಿಟ್ಟಳು. ಶಿವಪಾದ ಅವಳ ಭುಜ ತಟ್ಟಿ "ಕೇಳಿದೆಯಾ ಕೂಸೇ?" ಅಂದ.

"ನಿನಗೆ ಹೇಳುವ ಕಥೆಯೇ ಅವನಿಗೆ ಉತ್ತರ. ತೋರಿಸುತ್ತೇನೆ ಇಬ್ಬರೂ ಬನ್ನಿ"

- ಎಂದು ಎದ್ದು ಗೌರಿಯ ಭುಜದ ಮೇಲೆ ಬಲಗೈಯನ್ನು ಊರಿ ಮಾತಾಡುತ್ತ ನಿಧಾನವಾಗಿ ನಡೆದ. ಶಿವಪಾದ ಹೇಳಿದ:

"ಇವನು ತಾ ಮಾಡಿದ ಕರ್ಮಕ್ಕೆ ಪಶ್ಚಾತ್ತಾಪ ಪಟ್ಟು ನಿನ್ನ ಮತ್ತು ನಿನ್ನಡಿಯ ಸೇವೆ ಮಾಡಿಕೊಂಡಿರಲು ಬಂದಿದ್ದಾನೆ"

ಗೌರಿಗೆ ಶಿವಪಾದ ಹೇಇದ ಮಾತಿನ ತಲೆ ಬುಡ ಅರ್ಥವಾಗಲಿಲ್ಲ. ಆದರೆ ಬೊಂತೆಯನಿಗೆ ಬಾಯಿ ಬಂದ ಪವಾಡ ತನ್ನೆದುರಿನಲ್ಲಿಯೇ ನಡೆದಿತ್ತು. ಈಗ ಅವಳಿಗೆ ಶಿವಪಾದನ ಎದುರು ಮಾತಾಡುವುದಕ್ಕೆ ಭಯವಾಯಿತು. ಶಿವಪಾದ ಹೇಳಿದ:

"ಹೊಂಡದಲ್ಲಿ ಮುಖ ನೋಡಿಕೊಂಡು ಪ್ರತಿಬಿಂಬವನ್ನೇ ಪ್ರಿತಿಸಿದ ರಾಜಕುಮಾರನ ಕತೆ ಗೊತ್ತಲ್ಲ? ಹಾಗೆಯೇ ತನ್ನ ಹೆಣ ತಿಂಬ ರಾಜನ ಕತೆಯೂ ಗೊತ್ತು. ಇದೂ ಹಾಗೆಯೇ, ಆತ್ಮರತಿಯ ಕತೆ."

ಇಷ್ಟು ಹೇಳುವುದರಲ್ಲಿ ಮೂವರೂ ಬೆಟ್ಟದ ಅಂಚಿಗೆ ಬಂದಿದ್ದರು. ಶಿವಪಾದ ಕೆಳಗೆ ನೋಡಿರಿ ಅಂದ. ಗೌರಿ ನೋಡಿದಳು. ಬೊಂತೆಯನೂ ನೋಡಿದ. ಕೆಳಗೆ ಸುಂದರವಾದ ಚಂದ್ರಾವತಿ ಮಡು ಕಾಣುತ್ತಿತ್ತು.

"ಮಡು ಇದೆ" ಎಂದಳು ಗೌರಿ.

"ಅದರಲ್ಲಿ ಏನೇನು ಮೂಡಿದೆ? ನೀನೆಲ್ಲಿ ಮೂಡಿರುವಿ, ನೋಡಿಕೊ."

ನೋಡಿದಳು. ಆಕಾಶ ಮೂಡಿತ್ತು. ಮೋಡಗಳು, ಹಾರಾಡುವ ಹಕ್ಕಿಗಳು, ದಂಡೆಯ ಹಸಿರು ತರುಮರ ಬಳ್ಳಿ ಪ್ರಾಣಿಗಳು, ಹುಡುಗ ಹುಡುಗಿ, ವೃದ್ಧ ವೃದ್ಧೆಯರು, ಇರುವೆ ಮೊದಲು ಆನೆ ಕಡೆಯಾಗಿ ಬೇಕಾದಷ್ಟು ಜೀವರಾಶಿ ಮೂಡಿತ್ತು. ತಕ್ಷಣ ಬೊಂತೆಯನೂ ಬಾಯಿ ಕೂಡಿಸಿದ: "ನೀನು, ಅಕ್ಕ, ನಾನು ಮೂವರೂ ಮೂಡಿದ್ದೀವಿ: - ಈಗ ಶಿವಪಾದ ಹೇಳಿದ:

"ನೋಡು ಮಗನೇ, ಇದೇ ಶಿವಾಪುರ. ಕನ್ನಡಿ ನೋಡಿಕೊಂಡೆಯಾ? ಒಬ್ಬನೇ ಇರ್ತಿಯಾ - ಒಂಟಿಯಾಗಿ, ಹೆಣವಾಗಿ! ಮಡುವಿನಲ್ಲಿ ನೋಡಿಕೊಂಡಿಯೋ? ನೀನೂ ಮೂಡುತ್ತಿ, ನಿನ್ನೆಲ್ಲ ಬಳಗದ ಜೊತೆಗೆ! ಇದೇ ಶಿವಾಪುರ! ಬಳಗವಾಗಿ ಬದುಕು ಎನ್ನುತ್ತದೆ ಶಿವಾಪುರ. ಬಳಗವೆಂದರೆ ಯಾರು? ನಿನಗೆ ಎರಡನೆಯ ಸಲ ಭೇಟಿಯಾದವರೆಲ್ಲ ನಿನ್ನ ಬಳಗ!"

ಒಮ್ಮೆ ಒಬ್ಬ ಶಿವಪಾದ ಕೇಳಿದ:

"ತಾಯೀ ನಿನಗ್ಯಾವ ಮಾರ್ಗ ಇಷ್ಟ? ಜ್ಞಾನ ಮಾರ್ಗವೇ? ಕರ್ಮ ಮಾರ್ಗವೇ ಭಕ್ತಿ ಮಾರ್ಗವೇ?"

ತಾಯಿ ಹೇಳಿದಳು: "ಕರ್ಮಕ್ಕೆ, ಜ್ಞಾನಕ್ಕೆ ಸಂಬಂಧಗಳು ಬೇಕಿಲ್ಲ.

ಭಕ್ತಿ ಮಾರ್ಗವಾದರೆ ಕೊನೇಪಕ್ಷ ಒಂಬತ್ತು ಸಂಬಂಧಗಳಿಂದ ದೇವರನ್ನು ಪ್ರೀತಿಸಬಹುದು.

ಸಂಬಂಧಗಳೇ ಭಕ್ತಿ, ಭಕ್ತಿಯನ್ನು ಗೌರವಿಸು."

* * *

ಶಿವಪಾದ ಬೆಳಿಗ್ಗೆ ತನ್ನ ಮೈಗೊಂದು ಧೋತ್ರ ಸುತ್ತಿಕೊಂಡು ಮ್ಯಾಲೊಂದು ಹೊದ್ದುಕೊಂಡು, ಪ್ರವಾಸ ಮಾಡುವಾಗ ಹಿಡಿಯುವ ಉದ್ದಕೋಲನ್ನು ಹಿಡಿದುಕೊಂಡು ಅಮ್ಮನ ಮುಂದೆ ಬಂದ. ಕೋಲನ್ನು ಬದಿಗಿಟ್ಟು ದೀರ್ಘದಂಡ ನಮಸ್ಕಾರವನ್ನಾಚರಿಸಿ,-

"ತಾಯೀ, ಶಿವಪುರವನ್ನು ನಡೆಸುವಾತ ಬಂದಿದ್ದಾನೆ. ಅವನಲ್ಲಿ ವಿದ್ಯೆ ವಿವೇಕ ಎರಡೂ ಇವೆ. ಅವೂ ತಪ್ಪಿದಾಗ ಅವನಿಗೆ ದರಿ ತೋರಿಸಲು ನೀನಿರುವೆ. ಹಿಂದಿನ ಎಲ್ಲ ಶಿವಪಾದರಿಗೆ ಮಾಡಿದಂತೆ ನನಗೂ ಪ್ರತ್ಯಕ್ಷವಾಗಿ ಅಪ್ಪನೆ ಕೊಡು"

ಎಂದು ನಿತ್ಯದಂತೆ ಹೇಳಿ ಹೊರಗೆ ಬರುವುದಷ್ಟೇ ತಡ ಚಂಡೀದಾಸ ಓಡಿಬಂದು ಶಿವಪಾದನಿಗೆ ಹಿಡಿದುಕೊಳ್ಳಲಿಕ್ಕೆ ಭುಜಕೊಟ್ಟ. ಹೋಗಿ ಹೊನ್ನೆ ಮರದಡಿಯ ಕಲ್ಲಿನ ಕಟ್ಟೆಯ ಮೇಲೆ ಕೂರಿಸಿದ. ಬೆಟ್ಟದ ಮ್ಯಾಲೆ ಸೂರ್ಯನಾರಾಯಣಸ್ವಾಮಿಯ ಪ್ರಥಮ ಕಿರಣಗಳು ಇದ್ದು ಹಸಿರಿನ ಮ್ಯಾಲೆ ಬಂಗಾರದ ಓಕುಳಿ ಎರಚಿದ ಹಾಗೆ ಹೊಳೆಯುತ್ತಿತ್ತು. ಬೆಳಗಿನ ಛಳಿಯಿತ್ತು. ಇಡೀ ರಾತ್ರಿ ಭಕ್ತಾದಿಗಳು ಹಾಡು ಕುಣಿತ ಕೇಕೆಗಳಿಂದ ಧಿಮಿಧಿಮಿಸುತ್ತಿದ್ದ ಬೆಟ್ಟ ಈಗ ನಿಶ್ಯಬ್ಧವಾಗಿತ್ತು. ಹೊನ್ನೆಮರ ಸಾಮಾನ್ಯವಾದುದಲ್ಲ. ಕಾಡನ್ನೆಲ್ಲ ವ್ಯಾಪಿಸಿದಂತೆ ಅಡ್ಡಾದಿಡ್ಡಿಯಾಗಿ ಬೆಳೆದು ಆ ಸುತ್ತಿನ ಮರಗಳಿಗಿಂತ ದಪ್ಪವಾದ ಮತ್ತು ಎತ್ತರವಾಗಿದ್ದ ಮರ ಅದು. ಅದರ ನಿಲುವಿನಲ್ಲಿ ಕೂಡ ಒಂದು ಘನತೆ ಕಾಣುತ್ತಿತ್ತು. ನಿನ್ನೆ ಇಲ್ಲಿಗೆ ಬಂದಿದ್ದ ಮಕ್ಕಳು ಅದರ ಬೊಡ್ಡೆಯ ತೊಗಟೆಯನ್ನು ಪರಚಿ ಗೆರೆ ಕೊರೆದ ಕಲೆಗಳಿದ್ದವು. ತೊಂದರೆ ಕೊಡದೆ, ಇನ್ನೊಬ್ಬರಿಂದ ಏನನ್ನೂ ಆಶಿಸದೆ, ತನ್ನ ನೆಮ್ಮದಿಗೂ ಭಂಗ ತಂದುಕೊಳ್ಳದೆ ಸುಮ್ಮನೆ ಕಾಡಿನ ಕಾವಲುಗರನಂತೆ ಆ ಮರ ನಿಂತಿತ್ತು. ನಿನ್ನೆಯ ಸಂಭ್ರಮದ ಅಮಲೇರಿದಂತೆ ತುರುಮರಗಳೂ ನಿಶ್ಯಬ್ದವಾಗಿ ನಿಂತಿದ್ದವು. ತಂಪುಗಾಳಿ ಬೀಸಿ ತರುಮರಗಳನ್ನು ಮಾತ್ರವಲ್ಲ ಶಿವಪಾದನ, ಚಂಡೀದಾಸನ ಕೂದಲನ್ನೂ ನೇವರಿಸಿ ಸಂತೋಷವನ್ನುಂಟು ಮಾಡಿತು.

ಜಟ್ಟಿಗ ತಮ್ಮೊಂದಿಗಿಲ್ಲವೆಂಬ ಕೊರತೆಯ ವಿನಾ ಉಳಿದಂತೆ ಪರ್ವ ಸೊಗಸಾಗಿಯೇ ನಡೆಯಿತು. ಕೊಟ್ಟಿಗೆಯ ಕೋಳಿ ಕೂಗುವ ಮೊದಲೇ ನಿನ್ನಡಿ ಮಿಂದು ತಾಯಿಯನ್ನು ಕರೆದುಕೊಂಡು ಜಟ್ಟಿಗನ ಗೋರಿಯ ಬಳಿಗೆ ಹೋಗಿ ಸೊಡರು ಹಚ್ಚಿ, ಬಾಗಿಲಲ್ಲಿ ಬೆಳಕಿನ ಮರ ನೆಟ್ಟರು. ಮೂರು ಕುಡುತೆ ತುಂಬ ಹೂ, ಮೂರು ಬಳ್ಳಿ ಬೆಳ್ತಿಗೆ ಅಕ್ಕಿ ಹಸಿರು ವೀಳ್ಯ ಕಲ್ಲುಸುಣ್ಣ, ಕಪಿಲೆ ಹಾಲು, ಐದು ತೆಂಗಿನಕಾಯಿ ಒಡ್ಡಿ ಮಂತ್ರ ಜಪಿಸಿದ. ಇಬ್ಬರೂ ಶಿವಶಿವ ಪದ ಹಾಡಿ ಸಾವಿರ ಶರಣು ಕೊಟ್ಟು ಪ್ರಾರ್ಥಿಸಿದ ಮ್ಯಾಲೆ ಹಟ್ಟಿಯ ಜನರೂ ಬಂದು ಎದುರಲ್ಲಿ ನಿಂದು ಭಕ್ತಿಯ ನೈವೇದ್ಯ ಕಾಣಿಕೆ ನೀಡಿ ವಂದನೆ ಸಲ್ಲಿಸಿದರು.

ಪರ್ವದ ಮೂರು ದಿನ ನಿನ್ನಡಿ ಒಂದು ಕಣ್ಣನ್ನು ಅಬ್ಬೆಯ ಮೇಲೆ ಇಟ್ಟಿದ್ದ.

ಮೂರನೆಯ ರಾತ್ರಿ ಅವಳನ್ನು ಸಂತೋಷಪಡಿಸಲು ಕುಣಿದ, ಹಾಡಿದ, ಅವಳನ್ನೆಳೆದುಕೊಂಡು ಎದುರು ಬದುರು ಒಂದೆರಡು ಹೆಜ್ಜೆ ಕೂಡ ಹಾಕಿಸಿ, ಕುಣಿದು ಇಡೀ ಸೀಮೆಯ ಜನ ಹೋ ಎಂದು ಚಪ್ಪಾಳೆ ತಟ್ಟಿ ಸಂತೋಷಿಸುವಂತೆ ಮಾಡಿದ. ಬೆಳ್ಳಿ ಕೂಡ ಮಗನೊಂದಿಗೆ ನಾಲ್ಕು ಹೆಜ್ಜೆ ಹಾಕುವಾಗ ನಕ್ಕಳಾದರೂ ಜಟ್ಟಿಗನ ನೆನಪಾಗಿ ಕಣ್ಣು ಒದ್ದೆ ಮಾಡಿಕೊಂಡಳು. ತಕ್ಷಣ ನಿನ್ನಡಿ ಅವಳನ್ನು ತಬ್ಬಿಕೊಂಡು, ಕಣ್ಣೀರೊರಸಿ ಸಮಾಧಾನ ಮಾಡುತ್ತಿದ್ದಂತೆ ಶಿವಪಾದನೇ ಅವರಿಬ್ಬರ ಕೈ ಹಿಡಿದು ಮರದಡಿ ಕರೆದುಕೊಂಡು ಹೋದ. ಕುರುಮುನಿ ಚಂಡೀದಾಸರು ಶಿವಪಾದನ ಒಂದೊಂದು ಕಾಲು ಒತ್ತತೊಡಗಿದರು. ಗೌರಿ ಬೆಳ್ಳಿಯ ಕಣ್ಣೀರೊರೆಸಿ ಕೂರಿಸಿಕೊಂಡಳು. ಶಿವಪಾದ ಮಳಮಳ ನಿನ್ನಡಿಯ ಮುಖವನ್ನೇ ನೋಡುತ್ತ ಹಿತವೆನ್ನಿಸಿ,

"ಅಯ್ಯಾ ನಿನ್ನಡಿ, ನಿನ್ನ ಕೊಳಲು ಕೇಳಿ ವರ್ಷಗಳಾದುವಣ್ಣಾ, ನಿನ್ನ ತಾಯಿಗೆ ಸಂತೋಷವಾಗುವಂತೆ ಒಂದು ರಾಗ ನುಡಿಸಬಹುದಲ್ಲ!"

-ಎಂದ. ತಕ್ಷಣ ನಿನ್ನಡಿ,

"ನನ್ನ ಕೊಳಲು ಎಲ್ಲಿದೆ ಗೂತ್ತಿಲವಲ್ಲ ನನ್ನಯ್ಯಾ!"

ಅಂದ. "ಇವನಿಗೆಂಥ ಕೊಳಲು ಗೊತ್ತಿದ್ದೀತು ನನ್ನಯ್ಯಾ?" ಎಂದು ಬೆಳ್ಳಿ ಬಾಯಿ ಬಿಡುವಷ್ಟರಲ್ಲಿ ಗೌರಿ ಬುದಿಂಗನೇ ಎದ್ದು "ನನಗ್ಗೊತ್ತು ತರ್ತೀನಿರು" ಎಂದು ಹೇಳಿ ಸರಸರ ಗವಿಯೊಳಕ್ಕೆ ಹೋದಳು!

ಬೆಳ್ಳಿ, ಚಂಡೀದಾಸ, ಕುರುಮುನಿ ನಿನ್ನಡಿಯನ್ನು ಬಲ್ಲ ಎಲ್ಲರಿಗೂ ಆಶ್ಚರ್ಯವಾಯಿತು. ಶಿವಪಾದ ಇವರನ್ನ ಮತ್ತು ನಿನ್ನಡಿಯನ್ನು ನೋಡುತ್ತ ನಿಗೂಢ ನಗೆ ನಗುತ್ತಿದ್ದ. ಕೊಳಲು ನಿನ್ನಡಿಗೇನು ಗೊತ್ತು? ಅವನು ನುಡಿಸಿದ್ದನ್ನಾಗಲಿ, ಅಭ್ಯಾಸ ಮಾಡಿದ್ದನ್ನಾಗಲಿ ಯಾರೂ ಕೇಳಿಲ್ಲ. ನೋಡಿಲ್ಲ. ಶಿವಪಾದನಿಗೆ ಮರೆವು ಸುರುವಾಯಿತೆ? ನಿನ್ನಡಿ ನನ್ನ ಕೊಳಲು ಎಲ್ಲಿಟ್ಟೆ? ಅನ್ನುವುದು, ತರ್ತೀನಿ ಅಂತ ಗೌರಿ ಗವಿಯೊಳಕ್ಕೆ ಹೋಗುವುದು ಇವರೇನೋ ಚೇಷ್ಟೆ ಮಾಡುತ್ತಿರಬಹುದೇ? ಕೇಳುವುದಕ್ಕೆ ಯಾರಿಗೂ ಬಾಯಿ ಬರದೇ ಇದ್ದಾಗ ಕುರುಮುನಿ ಒತ್ತುವುದನ್ನು ಮರೆತು ಕುಂತಿದ್ದವನು ಮೆಲ್ಲಗೆ ಒತ್ತುತ್ತ ಕೇಳೇ ಬಿಡೋಣವೆಂದು "ತಂದೆ" ಅಂದ. ಅಷ್ಟರಲ್ಲಿ "ಇಕೋ ತಗೋ" ಎಂದು ಗೌರಿ ಮಾರುದ್ದ ಕೊಳಲಿನೊಂದಿಗೆ ಬಂದೇ ಬಿಟ್ಟಳು!

ತನ್ನ ಸೀರೆ ಸೆರಗಿನಿಂದ ಅದರ ಧೂಳು ಕಳೆದು ಹಸನಾಯಿತೆಂದಾಗ ನಿನ್ನಡಿಯ ಕೈಗಿತ್ತಳು. ನಿನ್ನಡಿ ಕೊಳಲು ಹಿಡಿದುಕೊಂಡು ಅನುಮಾನಿಸುತ್ತಾದ್ದಾಗ ಗೌರಿ ಸಲುಗೆಯಿಂದ ನುಡಿಸು ಎಂದು ಸಂಜ್ಞೆಮಾಡಿ ಕೊಳಲನ್ನು ಅವನ ತುಟಿಗಿಟ್ಟಳು. ನಿನ್ನಡಿ ಅದನ್ನು ಓರೆಯಾಗಿ ಹಿಡಿದು ಎದುರು ಬದುರಾಗುವಂತೆ ಅದರ ಮೇಲೆ ಎರಡೂ ಕೈ ಬೆರಳಿಟ್ಟು ಸ್ವರಗಳ ಹೊರಡಿಸಿದ ನೋಡು - ಕೆಲವರು ಅನುಮಾನದಿಂದ, ಕೆಲವರು ಆಶ್ಚರ್ಯದಿಂದ ಸ್ತಬ್ಧರಾದರು.

ಅಲಾಪ ಮಾಡುವಾಗ ಕೂತವರು ಕೂತಲ್ಲೇ ನಿಂತವರು ನಿಂತಲ್ಲೇ ಕೊಳಲಿನ ಮಾಧುರ್ಯದ ಮಾಯೆಗೆ ಒಳಗಾದರು. ಒಂದು ಹದ ಒದಗಿದಾಗ ನಿನ್ನಡಿ ರಾಗ ಸುರುಮಾಡಿದ.

ಕೈಲಾಸದ ಸುಖದ ತೂಬು ತೆಗೆದುಬಿಟ್ಟಂತೆ ನಿನ್ನಡಿಯ ರಾಗದ ಬೆಳ್ದಿಂಗಳ ಹಾಲಹೊಳೆ ಭೂಮಿಗಿಳಿಯತೊಡಗಿತು. 'ಹಾ'! ಎಂದು ಶಿವಪಾದ ಕಣ್ಣು ಮುಚ್ಚಿದ. ಗೌರಿ ನಿನ್ನಡಿಗೆ ಗೊತ್ತಾಗದಂತೆ ಹಾಗೇ ಅವನ ಬೆನ್ನಿಗೊರಗಿ ಲೋಕಾಂತರಗೊಂಡಳು. ಕುರುಮುನಿ ಚಂಡೀದಾಸರು ತೇಲುಗಣ್ಣಾದರು. ಬೆಳ್ಳಿ ಕಣ್ಣಗಲ ಮಾಡಿಕೊಂಡು ಪವಾಡ ಕಂಡ ಶಿಶುವಿನಂತೆ ಮೈ ಮರೆತಳು.

ಬೆಟ್ಟದ ಚರಾಚರವೆಲ್ಲ ಬೆರಗಿನಲ್ಲಿ ತೇಲುಗಣ್ಣಾಗಿ, ಲೋಕೊತ್ತರ ಸುಖದಲ್ಲಿ ತನ್ಮಯವಾಯಿತು. ಅಂತರಾಳದ ಅಜ್ಞಾತವನ್ನ ಮಿಡಿದಂತೆ ಜನ ಸುಖದ ನೋವನುಭವಿಸಿದರು. ಸಮಯ ಸರಿದುದು ಯಾರಿಗೂ ತಿಳಿಯಲಿಲ್ಲ.

ಹಕ್ಕಿ ಉಲಿದು ಬೆಳಗಿನ ತಂಗಾಳಿ ಬೀಸಿದಾಗಲೇ ನಿನ್ನಡಿ ಕೊಳಲು ನಿಲ್ಲಿಸಿದ. ಎಲ್ಲರೂ ಎಚ್ಚರಗೊಂಡರು. ಲೌಕಿಕ ಅರಿವಿಗೆ ಬಂದವರು ಬಿಡುಗಡೆಗೊಂಡಂತೆ ಕೊಂಚ ಕೈಕಾಲು ಆಡಿಸುತ್ತಿರಲು ನಿನ್ನಡಿ ಇನ್ನೊಂದು ಲಘುವಾದ ಆಲಾಪ ಎತ್ತಿಕೊಂಡ. ಜನರ ನಾಡೀ ಬಡಿತಕ್ಕೆ ತನ್ನ ಲಯವನ್ನು ಹೊಂದಾಣಿಕೆ ಮಾಡಿಕೊಳ್ಳುತ್ತಿರುವಂತೆ ಕಂಡಿತು. ಎರಡೂ ಸರಿಹೋಯಿತೆಂಬಾಗ "ಬಾರೆ ನನ್ನ ಮಲ್ಲಿಗೆ" ಎಂಬ ಜನಪದ ಹಾಡೊಂದನ್ನು ಎತ್ತಿಕೊಂಡ.

ಜನ ಹೋ ಎಂದು ಕೂಗಿ ಹುಡುಗ ಹುಡಿಗಿಯರೆದ್ದು ಹಾಡಿನ ಲಯಾನುಸಾರ ಮೈ ಕೈಕಾಲುಗಳ ಚಲನೆಗಳನ್ನು ಹೊಂದಾಣಿಕೆ ಮಾಡಿಕೊಳ್ಳುತ್ತ, ಅದೊಮ್ಮೆ ಸರಿಹೋಯಿತೆಂಬಾಗ ಪ್ರಾಯ, ಉತ್ಸಹವುಕ್ಕಿ ಕುಣಿಯತೊಡಗಿದರು! ಅದಾಗದವರು ಮೈ ಕೈ ಒಲೆಯುತ್ತ ತಾಳ ಕಟ್ಟುತ್ತ ಹಾಡು ಕುಣಿತಗಳಲ್ಲಿ ಭಾಗಿಯಾದರು.

ಮಾಗಿದ ತಿಂಗಳ ಬೆಳಕಿನಲ್ಲಿ ದಂತದ ಪುತ್ಥಳಿಯಂತೆ ಸಂಮೋಹಗೊಂಡು ನಿಂತಿದ್ದ ಗೌರಿಯ ಎದುರಿಗೇ ಹೋಗಿ "ಬಾರೆ ನನ್ನ ಮಲ್ಲಿಗೆ" ಎಂಬ ಪಲ್ಲವಿಯನ್ನು ಮತ್ತೆ ಮತ್ತೆ ನುಡಿಸಿ ಗೌರಿಗೆ ಸವಾಲೆಸುಯುವಂತೆ ಎರಡು ಹೆಜ್ಜೆ ಹಾಕಿದ. ತಕ್ಷಣವೇ ಗೌರಿ ಸೊಂಟಕ್ಕೆ ಸೆರಗು ಸಿಕ್ಕಿಸಿಕೊಂಡು ಚಂಗನೆ ನೆಗೆದು ನಿನ್ನಡಿಯ ಸುತ್ತ ನವಿಲಿನಂತೆ ಕುಣಿದಳು. ಹುಡುಗ ಹುಡುಗಿಯರಾಗಲೆ ಕೊಳಲಿಗೆ ತಂತಮ್ಮ ಸ್ವರ ಕೂಡಿಸಿ ಹಾಡತೊಡಗಿದ್ದರು. ಬೆಳ್ಳಿ ಗೌರಿಯನ್ನೆಳೆದುಕೊಂಡು ಮುಖದ ತುಂಬ ಮುದ್ದಿಟ್ಟು, ದೃಷ್ಟಿ ತೆಗೆದು ತಾನೂ ಸೇರಿಕೊಂಡಳು. ಶಿವಪಾದ ಕೂಡ ಕುರುಮಿನಿ ಚಂಡೀದಾಸರ ಕೈ ಹಿಡಿದು ನಿನ್ನಡಿಯ ಮುಂದೆ ಎರಡು ಹೆಜ್ಜೆ ಹಾಕಿದಾಗ ಇಡೀ ಸಮುದಾಯ ಕುಣಿತ ಬಿಟ್ಟು ಹೋ ಎಂದು ಕೇಕೆ ಹಾಕಿ ಚಪ್ಪಾಳೆ ತಟ್ಟಿತು!

* * *

ಮುಂಜಾನೆ ಸಮಯ ಭಕ್ತಾದಿಗಳು ಪ್ರಸಾದ ಕಟ್ಟಿಕೊಂಡು ಶಿವಪಾದನ ಪಾದ ಪಡೆದುಕೊಂಡು ತಂತಮ್ಮ ಹಟ್ಟಿಗಳ ಹಾದಿಯ ಹಿಡಿಯುತ್ತಿದ್ದರು. ಹೊರಟ ಭಕ್ತರಿಗೆ ಆಶೀರ್ವಾದ ಮಾಡುತ್ತ ಎಳೆಬಿಸಿಲು ಕಾಸುತ್ತ ಶಿವಪಾದ ಕೂತಿದ್ದ. ಚಂಡಿದಾಸ ಪಾದ ಒತ್ತುತ್ತಿದ್ದ. ಬರುಹೋಗುವ ಭಕ್ತರು ಒಂದೆರಡು ಸಾರಿ ಶಿವಪಾದನ ಇನ್ನೊಂದು ಪಾದವನ್ನು ಒತ್ತಿ ನಮಸ್ಕರಿಸಿ ಹೋಗುತ್ತಿದ್ದರು. ಹತ್ತಿರದಲ್ಲೇ ಭೈರ ಮೆಲುಕಾಡಿಸುತ್ತ ಮಲಗಿದ್ದ. ಶಿವಪಾದನ ಪಾದ ಪಡೆದ ಮೇಲೆ ಭಕ್ತರು ಭೈರನ ಬಾಲದ ತುದಿಯನ್ನೂ ಕಣ್ಣಿಗೊತ್ತಿಕೊಂಡು ಹೋಗುತ್ತಿದ್ದರು. ಅಷ್ಟರಲ್ಲಿ ನಿನ್ನಡಿ ಮತ್ತು ಗೌರಿ ಬಂದರು. ನಿನ್ನಡಿ ಗವಿಯೊಳಕ್ಕೆ ಹೋದ. ಗೌರಿ ನೇರವಾಗಿ ಶಿವಪಾದನಿದ್ದಲಿಗೇ ಬಂದು ತಾನು ತಂದಿದ್ದ ಪಾತ್ರೆಯ ಮುಚ್ಚಳ ತೆರೆದು ಶಿವಪಾದನಿಗೆ ಬಾಯಿಗೆ ಹಿಡಿದಳು. ಶಿವಪಾದ ನಿಧಾನವಾಗಿ ಹಾಲು ಕುಡಿದ. ಅವನು ಕುಡಿದಷ್ಟೂ ಹೊತ್ತು ಪಕ್ಕದಲ್ಲೇ ತಾಳ್ಮೆಯಿಂದ ನಿಂತಿದ್ದು, ಅಮೇಲೆ ನೀರು ಮುಕ್ಕಳಿಸಿ ವಸ್ತ್ರದಿಂದ ಬಾಯೊರೆಸಿಕೊಂಡಾದ ಮೇಲೆ ಚಂಡೀದಾಸನೊಂದಿಗೆ ಶಿವಪಾದನ ಇನ್ನೊಂದು ಕಾಲು ಒತ್ತುತ್ತ ಕೂತಳು. ಚಂಡೀದಾಸ ಅವಳನ್ನೇ ನೋಡುತ್ತ, ಇದೆಲ್ಲ ನಿತ್ಯದ ಕಾರ್ಯಕ್ರಮದಂತೆ ಜರುಗಿದ್ದರಿಂದ ಈ ಅಪರಿಚಿತ ಸ್ಥಳಕ್ಕೆ 'ಎಲ್ಲಿದೆ ಶಿವಾಪುರ?' ಅಂತ ಬಂದ ಹುಡುಗಿ ಮೂರೇ ದಿನಗಳಲ್ಲಿ ಈ ಪರಿ ಹೊಂದಾಣಿಕೆ ಮಾಡಿಕೊಂಡದ್ದು ಚಂಡೀದಾಸನಿಗೆ ಪವಾಡವಾಗಿ ಕಂಡಿತು. ಕನಕಪುರಿಯಲ್ಲಿ ತನಗೊಂದು ಬಳಗ ಇದೆಯೆಂಬುದನ್ನೇ ಅವಳು ಮರೆತಹಾಗಿತ್ತು. ಶಿವಪಾದನನ್ನು ನೋಡಿದರೆ ಆತ ತೃಪ್ತಿಯಿಂದ ಮುಗುಳುನಗುತ್ತಿದ್ದ. ಆ ಕಾಲನ್ನ ಎಲ್ಲಿ ಮತ್ತು ಹ್ಯಾಗೆ ತಿಕ್ಕಿದರೆ ಶಿವಪಾದನಿಗೆ ಹಿತವಾಗುತ್ತದೆಂದು ಗೌರಿ ಮೊದಲೇ ತಿಳಿದವಳಂತೆ ತಿಕ್ಕುತ್ತಿದ್ದಳು. ಹಿತವನ್ನನುಭವಿಸಿದ ತೃಪ್ತಿ ಶಿವಪಾದನ ಮುಖದಲ್ಲಿತ್ತು. ಆಮೇಲೆ ಶಿವಪಾದ ಚಂಡೀದಾಸನಿಂದ ಎಡಗಾಲು ಬಿಡಿಸಿಕೊಂಡು ಇದಕ್ಕೂ ತಿಕ್ಕು ಮಗಳೇ ಎಂದು ಅವಳಿಗೆ ಕೊಟ್ಟ ಮುದುಕ ಕಣ್ಣು ಮುಚ್ಚಿಕೊಂಡು ಅವಳು ತಿಕ್ಕುವುದರಿಂದಾಗುತ್ತಿರುವ ಹಿತವನ್ನು ಅನುಭವಿಸಿದ. ಚಂಡೀದಾಸ ಇನ್ನಷ್ಟು ಚಕಿತನಾಗಿ ಇಬ್ಬರನ್ನೂ ನೋಡುತ್ತ ಕೂತ.

ಅಷ್ಟರಲ್ಲಿ ಇದ್ದಕ್ಕಿದ್ದಂತೆ ಕಾಡಿನೊಳಗಿಂದ ಬುಡಕಟ್ಟಿನ ಹಣ್ಣು ಹಣ್ಣು ಮುದುಕಿಯೊಬ್ಬಳು ತಕರಾರಿನ ದನಿಯಲ್ಲಿ ಒದರಾಡುತ್ತ ಬಂದಳು. ಒಂದು ಕಾಲಕ್ಕೆ ಸುಂದರಿಯಾಗಿರಬಹುದಾದ ಬಿಳಿ ಮುದುಕಿಯ ಹನೆ, ಕೆನ್ನೆ, ಗದ್ದ ಮತ್ತು ಕೈಗಳ ಮೇಲೆ ಹಚ್ಚೆಯ ಹಸಿರು ಚಿತ್ರಗಳಿದ್ದವು. ವಯಸ್ಸಾದುದರಿಂದ ಮುಖದಲ್ಲಿ ಕನಿಷ್ಠ ಒಂದು ಸಾವಿರ ಅಡ್ಡತಿಡ್ಡ ಗೆರೆಗಳು ಮೂಡಿದ್ದವು. ಸೂರ್ಯನ ಕಡೆಗೆ ಬೆನ್ನಾಗಿದ್ದ ಅವಳ ಮುಖದ ಗೆರೆಗಳು ಜೇಡರ ಬಲೆಯಂತೆ ಪಸರಿಸಿ, ಕಣ್ಣು ಆಳದಲ್ಲಿ ಕೂತುಕೊಂಡು ಹೊಂಚುವ ಜೇಡನ ಹಾಗೆ ಕಾಣುತ್ತಿದ್ದವು. ಬಿರುಗಾಳಿಯಂತೆ ಎದುರು ಕೂತವರ ಹೃದಯಗಳನ್ನು ಸವರಿಕೊಂಡೇ ಬಂದವಳು ಇನ್ನೇನು ಮದ್ದಿನಂತೆ ಸಿಡಿಯುತ್ತಾಳೆ ಎನ್ನುವಷ್ಟರಲ್ಲಿ ಗೌರಿಯನ್ನು ನೋಡಿದವಳೇ,

"ಆಯ್ ಶಿವನೆ! ಎನ್ನಂದ ಐತೆಲ್ಲ ಮುದುಕಪ್ಪ ನಿನ್ನ ಸೊಸಿ! ಗೊಂಬೆ ದಂತದ ಗೊಂಬೆ ಆಗ್ಯಾಳಲ್ಲಪ್ಪ!"

ಎಂದು ಹೇಳುತ್ತ ಗೌರಿಯ ಬಳಿ ಬಂದು ಎರಡೂ ಕೆನ್ನೆ ಸವರಿ ಲಟಿಕೆ ಮುರಿದು ದೃಷ್ಟಿ ತೆಗೆದಳು. ಶಿವಪಾದನ ಕಣ್ಣಲ್ಲಿ ಫಳ್ಳನೆ ಬೆಳಕಾಡಿತು. ಗೌರಿ ಕಣ್ಣು ಪಿಳುಕಿಸದೆ ಅವಳನ್ನೇ ತದೇಕ ಧ್ಯಾನದಿಂದ ನೋಡುತ್ತ ಈ ಮುದುಕಿಯನ್ನೆಲ್ಲೋ ನೋಡಿದ್ದೇನಲ್ಲ ಎಂದು ನೆನಪಿಸಿಕೊಳ್ಳುತ್ತ ಕೂತಳು. ಎರಡೂ ಕೈಗಳಲ್ಲಿ ಗೌರಿಯ ಮುಖ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ.

“ಹಟ ಹಿಡಿದು ಗಂಡನನ್ನು ಕರಕಂಬಂದು ತಿರುಗಿ ಹುಟ್ಟಿ ಬಂದೆಯಲ್ಲೇ ನನ್ನ ಮುದ್ದು ಗೌರೀ. ಆನಂದದಿಂದ ನೂರು ವರ್ಸ ಬಾಳು ನನ್ನ ಕೂಸೇ!”

ಎಂದು ಗೌರಿಯ ನೆತ್ತಿಗೆ ಮುದ್ದಿಟ್ಟು ಆಶೀರ್ವದಿಸಿ ಎದ್ದಳು. ಅಮೇಲೆ ತನ್ನೆರಡೂ ಕೈಗಳನ್ನ ಸೊಂಟದ ಮ್ಯಾಲಿಟ್ಟುಕೊಂಡು ಕಣ್ಣುಗಳಲ್ಲಿ ವಿಚಿತ್ರವಾದ ಬೆಳಕನ್ನು ಝಳಪಿಸುತ್ತ ನಡುಗುವ ದನಿಯಲ್ಲಿ ಜಗಳಗಂಟಿಯ ವಾಕ್ಯ ಸರಣಿಯನ್ನು ಹರಿಬಿಟ್ಟಳು ನೋಡು -

“ಏನಪ್ಪ ಮುದುಕಪ್ಪಾ, ಕಾಲೋತ್ತೋರು ಸಿಕ್ಕರೆ ಮೈಮರೆತು ಕೂತೇ ಬಿಡೋದೇನಪ್ಪ? ಹೇಳೋರು ಕೇಳೋರು ನಿನಗ್ಯಾರಿಲ್ಲವ? ಬಂದ ಕೆಲಸ ಮುಗಿದ ಮ್ಯಾಲೆ ಜಾಗ ಖಾಲಿ ಮಾಡಬೇಕಪ. ಏಳೇಳು ಎದ್ದೇಳು.”

ಎಂದು ಬುಡಕಟ್ಟು ಬಾಷೆಯ ಬಿರುಸು ಶೈಲಿಯಲ್ಲಿ ಹೇಳುತ್ತ ಕಾಡಿನಲ್ಲಿ ಕಣ್ಮರೆಯಾದಳು. ಗೌರಿ ಆಘಾತ ಆನಂದಗಳಿಂದ ಇನ್ನೂ ಕಣ್ಣು ಪಿಳುಕಿಸಿರಲಿಲ್ಲ. ಚಂಡೀದಾಸ

“ಈಯಮ್ಮ ಗೊಲ್ಲರಟ್ಟಿ ಗೌಡ್ತಿ ಅಲ್ಲವ” ಎಂದ

ಶಿವಪಾದ ಮುಗುಳು ನಗುತ್ತ

“ಈ ಮುದುಕಿ ಯಾರು ಮುದ್ದೂ?” ಅಂದ.

ಗೌರಿ “ಅಮ ಗುಣದಮ್ಮಾ” ಎನ್ನುತ್ತ ಎದ್ದು ಮುದುಕಿ ಹೋದ ದಿಕ್ಕಿಗೆ ಅವಸರದಿಂದ ಓಡಿದಳು. ತಾಯಿ ಮಾಯವಾದದನ್ನು ಕಂಡು, “ನೀನೇ ನನ್ನ ಸೇವೆ ಮಾಡಿದೆಯಲ್ಲೇ ತಾಯೀ ಗುಣದಮ್ಮಾ!” ಎಂದು ಕೈ ಮುಗಿದುಕೊಂಡೇ ಪಶ್ಚಾತ್ತಾಪದಿಂದ ಕುಸಿದಳು. ಚಂಡೀದಾಸ ಬೆರಗಾಗಿ “ಹೌದೆ ನನ್ನಯ್ಯ?” ಅಂದ. ಧನ್ಯತಾ ಭಾವದಿಂದ ಶಿವಪಾದನ ಕಣ್ಣಲ್ಲಿ ನೀರಾಡುತ್ತಿತ್ತು. ಮೈಪುಳಕಗೊಂಡು ಜನ ಜಲ ಬೆವರಿದ್ದ. ಹೌದೆಂಬಂತೆ ಕತ್ತು ಹಾಕಿ ಮುದುಕಿ ಹೋದ ದಿಕ್ಕನ್ನೇ ನೋಡುತ್ತ ಸಂತೃಪ್ತಿಯಿಂದ ಮೈಮರೆತು ಕೂತಿದ್ದವನು ಕೊನೆಗೆ ಚಂಡೀದಾಸನಿಗೆ ಹೇಳಿದ:

“ಹೌದು ಮಗನೇ ತಾಯಿ ಹನ್ನೊಂದು ದಿನ ಮುದ್ದು ಗೌರಿಯ ಬೆನ್ನಿಗೆ ನಿಂತು, ಕಾಪಾಡಿಕೊಂಡು ಬಂದು ಶಿವಾಪುರಕ್ಕೆ ತಲುಪಿಸಿದಳು. ನನಗೂ ತಾಯಿ ಪ್ರತ್ಯಕ್ಷಳಾಗಿ ಕೃಪೆ ಮಾಡಿದಳಪ್ಪ! ಅನೇಕ ದಿನಗಳಿಂದ ಕೇಳುತ್ತಿದ್ದ ವರವನ್ನು ಇವತ್ತು ದಯಪಾಲಿಸಿದಳು ಹೋಗು ನಿನ್ನಡಿಗೆ ಹೇಳು, ಬರುವ ಸೋಮವಾರ ಬೆಳಗಿನ ಬ್ರಾಹ್ಮೀ ಮಹೂರ್ತದಲ್ಲಿ ನಾನು ನಿರ್ವಾಣ ಹೊಂದುತ್ತೇನೆ.”

## ಅರವತ್ತನಾಲ್ಕು

ಅಂದಿನಿಂದ ಶಿವಪಾದ ಶಿಸುಸಹಜ ಆನಂದದಿಂದ ಅರಳಿದ. ತಾಯಿಯಿಂದಿಗೆ ಸುದೀರ್ಘ ಸಂವಾದ ಮಾಡಿ ಬಂದಂತೆ ಅವನ ನಿರ್ಮಲ ಮುಖದಲ್ಲಿ ತೃಪ್ತಿಯ ಕಾಂತಿ ಹೊಳೆಯಿತು. ಅವನ ಕಣ್ಣುಗಳಲ್ಲಿ ತಿಳಿಯಾದ ಬೆಳಕು ಹೊಳೆದು ಕಣ್ಣಂಚಿನಲ್ಲಿ ಆನಂದಭಾಷ್ಪ ತುಳುಕಿದವು.

ಕ್ಷಣಕಾಲ ಬಿಡುವಿಲ್ಲದಂತೆ ಸಂದರ್ಶನದಲ್ಲಿ ತೊಡಗಿದ್ದರೂ ಪ್ರೆಶ್ನೆ ಕೇಳಿದ ಯಾರನ್ನೂ ಶಿವಪಾದ ನಿರಾಸೆಗೊಳಿಸಲಿಲ್ಲ. ಒಂದು ದಿನ ಮಲಗುವ ಮುನ್ನ ಕಳ್ಳ ಹೆಜ್ಜೆ ಇಡುತ್ತ ಚಂಡೀದಾಸ ಬಂದ. ಶಿವಪಾದನೇ ಮುಂದಾಗಿ “ಇನ್ನೂ ಮಲಗಲಿಲ್ಲವೇ ಮಗನೇ?”

“ಪ್ರಶ್ನೆ ಇತ್ತು”

“ಕೇಳು”

“ಗೌರಿ ನಿನಗೆ ಮೊದಲಿನಿಂದಲೂ ಗೊತ್ತ ಶಿವಪಾದವೆ?”

“ಹೌದು ಕಳೆದ ಜನ್ಮದಿಂದಲೂ ಗೊತ್ತು”

ಶಿವಪಾದನ ನೆನಪು ಮತ್ತು ಅನುಭವ ಅಪಾರವೆಂದು ಚಂಡೀದಾಸನಿಗೂ ಗೊತ್ತಿತ್ತು. ಅಲ್ಲದೆ ಶಿವಪಾದನೆಂದೂ ಸುಳ್ಳು ಹೇಳುವುದಿಲ್ಲವೆನ್ನುವುದೂ ಗೊತ್ತು. ಆದರೆ ಜನ್ಮಾಂತರದ ಉತ್ತರವನ್ನು ಚಂಡೀದಾಸ ನಿರೀಕ್ಷಿಸಿರಲಿಲ್ಲ. ಮುಂದೆ ಬಂದು ಶಿವಪಾದನ ಪಾದ ತಗೊಂಡು ಮೆಲ್ಲಗೆ ಹಿತಕರವಾಗಿ ತಿಕ್ಕುತ್ತ ಕೇಳಿದ:

“ಮೊನ್ನೆ ರಾತ್ರಿ ನೀನೇ ನೋಡಿದೆಯಲ್ಲ ಶಿವಪಾದವೇ ಗವಿಯಲ್ಲಿ ಕೊಳಲಿದ್ದುದು ನಮಗ್ಯಾರಿಗೂ ಗೊತ್ತಿರಲಿಲ್ಲ. ಗೌರಿ ಗವಿಯಲ್ಲಿದ್ದ ಕೊಳಲನ್ನು ತಂದು ಕೊಟ್ಟುದೇ ಆಯ್ತು. ನಿನ್ನಡಿ ಎಷ್ಟು ಅದ್ಭುತವಾಗಿ ಕೊಳಲು ನುಡಿಸಿದ! ನಿನ್ನಡಿ ಕೊಳಲು ಯಾವಾಗ ಕಲಿತ? ಅವನನ್ನು ಕೇಳಿದರೆ ನನಗೆ ಗೊತ್ತಿಲ್ಲ ಅಂತಾನೆ!”

“ನಿನಗೆ ಚಂದ್ರಮುತ್ತನ ವಿಷಯ ಗೊತ್ತೋ?”

“ಅದೇ ಕಲಾವಿದ ಚಂದಮುತ್ತಾ... ಯಕ್ಷಿಗಾಗಿ ಪ್ರಾಣಾರ್ಪಣೆ ಮಾಡಿದವ?”

“ಹೌದು ಅವನೇ ಇಂದಿನ ನಿನ್ನಡಿ. ಕಳೆದ ಜನ್ಮದಲ್ಲಿ ಚಂದಮುತ್ತನಾಗಿದ್ದ. ಗೌರಿ ಅವನ ಯಕ್ಷಿಯಾಗಿದ್ದಳು. ನಿನ್ನಡಿ ನುಡಿಸಿದನಲ್ಲ ಆ ಕೊಳಲು ಕೂಡ ಚಂದಮುತ್ತನದೇ. ನಾನೆ ತಂದು ಗವಿಯಲ್ಲಿಟ್ಟಿದ್ದೆ. ಅದೆಲ್ಲಿ ಇದೆ ಅಂತಲೇ ನನಗೆ ಮರೆವಾಗಿತ್ತು. ಗೌರಿಗೆ ಸಿಕ್ಕಿತು ನೋಡು. ಹುಣ್ಣಿಮೆ ಬೆಳ್ದಿಂಗಳಲ್ಲಿ ಇಬ್ಬರ ಜನ್ಮಾಂತರದ ನೆನಪು ಕೆರಳಿ ಒಂದಾದರು. ಇದೇ ಚೆನ್ನಮುತ್ತನೇ ಹಿಂದೆ ಚಕೋರಿ ಚಂದಮುತ್ತರಿಗೆ ತೊಂದರೆ ಕೊಟ್ಟ. ಈ ಜನ್ಮದಲ್ಲಿ ಅವನೇ ಅವಳ ತಂದೆಯಾಗಿ ವಿಷವಿಕ್ಕಿದ. ಈ ಸಲ ಕಾಪಾಡಿದವನೂ ಚಂದಮುತ್ತನೇ, ಅಂದರೆ ನಿನ್ನಡಿಯೇ.”

“ಚಂದಮುತ್ತ ಪರಿಪೂರ್ಣತೆಗೆ ಸಂದನೆಂದು ಕೇಳಿದ್ದೆನು, ಅಂಥವನು ಮತ್ತೆ ಹುಟ್ಟಿ ಬಂದನೇ?”

“ಯಕ್ಷಿರೂಪದ ಸಂಗೀತವನ್ನು ಮುಕ್ತಗೊಳಿಸಿದ್ದು ಸಾಧನೆಯಾದರೂ ಅಕಾಲ ಮರಣದಿಂದ ಅವನ ಪೂರ್ಣತೆಯ ಹಂಬಲ ಅಪೂರ್ಣವಾಗುಳಿಯಿತು. ಈ ಜನ್ಮದಲ್ಲಿ ರಾಜರ್ಷಿಯಾಗಿ ಅದನ್ನ ಸಾಧಿಸಬೇಕೆಂದು ಇಬ್ಬರೂ ಬಂದಿದ್ದಾರೆ. ತೃಪ್ತಿಯಾಯಿತೆ ಮಗನೆ?”

“ಆಯ್ತು ನನ್ನಯ್ಯ”

“ನಾನೂ ನಿನಗೊಂದು ಮಾತು ಹೇಳಲಿಕ್ಕಿದೆ.”

“ಅಪ್ಪಣೆ ಕೊಡು ಶಿವಪಾದವೇ.”

“ನೀನಿನ್ನು ಊರುರು ಅಲೆದಾಡುವುದು ಬಿಟ್ಟು ಶಿವಾಪುರಕ್ಕೆ ಅಂಟಿಕೋ. ಮೂವರು ಸೇರೆ ಮುರಿದದ್ದನ್ನ ಕಟ್ಟಬೇಕು.

“ಆಯ್ತು ನನ್ನಯ್ಯ”

ಆಮೇಲೆ ‘ಮುರಿದದ್ದನ್ನು ಕಟ್ಟಬೇಕು’ ಅಂದನಲ್ಲ ಯಾಕೆ? ಎಂದು ಯೋಚಿಸಿ ಕೇಳಬೇಕೆಂಬಷ್ಟರಲ್ಲಿ ಶಿವಪಾದ ನಿದ್ದೆ ಮಾಡುತ್ತಿದ್ದ.

ಮಾರನೇ ದಿನ ಗೌರಿ ಕೇಳಿದಳು:

“ಮಾನವ ಜನ್ಮ ದೊಡ್ಡದೆಂದು ಆದ್ಯರು ಹೇಳಿದ್ದಾರಲ್ಲ ಯಾಕೆ?”

“ಯಾಕಂತಿಯೋ? ಮನುಷ್ಯ ಅಪೂರ್ಣ ದೇವರ ಮುಂದೆ ಅದೇ ಅವನ ಬಲ. ಅದಕ್ಕೆ ಅವನಿಗೆ ಅಹಂಕಾರವಿದೆ. ಅಪೂರ್ಣನಾದ್ದರಿಂದಲೇ ಮನುಷ್ಯನಿಗೆ ಹುಟ್ಟು, ಬೆಳವಣಿಗೆ, ಸಾವುಗಳಿವೆ. ಅದೇ ಅವನ ಚಲನಶೀಲತೆಯ ಗುಟ್ಟು. ಅದಕ್ಕೆ ಅವನು ಜಂಗಮ. ದೇವರು ಜಂಗಮರಲ್ಲ. ಇಪ್ಪತ್ತೈದು ವರ್ಷಗಳಾದ ಮೇಲೆ ಅವರಿಗೆ ಬೆಳವಣಿಗೆ ಇಲ್ಲ. ಸಾವಂತೂ ಮೊದಲೇ ಇಲ್ಲ. ಮನುಷ್ಯ ಕೇಳದ ಹೊರತು ಅವನಿಗೆ ಏನು ಕೊಡಬೇಕೆಂದೂ ಹೊಳೆಯದಷ್ಟು ದಡ್ಡರವರು.

ಅದಕ್ಕೆ ಹೇಳುವುದಮ್ಮಾ, ಮನುಷ್ಯ ಜೀವನಕ್ಕೆ ಸಮಾನವಾದದ್ದು ಯಾವುದು ಇಲ್ಲ;- ದೇವತ್ವ ಕೂಡ!

ತಾಯಿ ಹಾಗಲ್ಲ ನೋಡು. ತಾಯಿ ಆದಿಮಾಯೆ. ಆದ್ದರಿಂದ ಸದಾ ಚಲನಶೀಲೆ. ಅವಳಿಗೆ ನಿತ್ಯವೂ ಹೆರಿಗೆ. ದಿನಾ ಹೆರಬೇಕು, ದಿನಾ ಬೆಳಸಬೇಕು; ಅವಳು ಜಂಗಮರ ಜಂಗಮ. ಮಕ್ಕಳು ಕೇಳೋತನಕ ಅವಳು ಸುಮ್ಮನಿರುವುದಿಲ್ಲ. ಅವಳೇ ತಿಳಿದು ಕೊಟ್ಟು ಬಿಡುತ್ತಾಳೆ. ತಾಯಿಗೂ ಮಕ್ಕಳಿಗೂ ಇರೋದು ಆಮೆ ಮತ್ತು ಮರಿಯ ಸಂಬಂಧ.”

“ಅಂದರೆ?”

“ಮರಿ ಆಮೆಗೆ ತಾನು ಹಸಿದಿದ್ದೇನೆ ಎಂದು ಹೇಳಲು ಬರುವುದಿಲ್ಲ. ಹಸಿದೊಡನೆ ತಾಯಿಆಮೆಯ ಕಡೆಗೆ ನೋಡುತ್ತದೆ. ತಾಯಿ ಆಮೆಗೆ ಅದು ಗೊತ್ತಾಗಿ “ಅಯ್ಯೋ ನನ್ನ ಮಗು ಹಸಿಯಿತಲ್ಲಾ!” ಎಂದು ಕರುಣೆಯಿದ, ಅಕ್ಕರೆಯಿಂದ, ಅಂತಃಕರಣದಿಂದ ಮರಿಯ ಕಡೆಗೆ ನೋಡುತ್ತದೆ. ಆ ಕ್ಷಣವೆ ಮರಿಯ ಹೊಟ್ಟೆ ತುಂಬುತ್ತದೆ; ಅಷ್ಟೆ !”

“ಅಂದರೆ … ಪ್ರತ್ಯಕ್ಷ ಮೂಲೆಯೊಡುವುದಿಲ್ಲ ಅಂತಲ ನೀನು ಹೇಳೋದು?”

“ಹೌದು!”

“ಅದು ಹೇಗೆ ಸಾಧ್ಯ?”

“ನನ್ನ ಮುಂದೇ ಕೂತಿದ್ದೀಯಲ್ಲಮ್ಮಾ ತಾಯಿ! ನನಗೆ ಇದೇ ಹದದ, ಇಂಥದೇ ರುಚಿಯ, ಇಷ್ಟೇ ಪ್ರಮಾಣದಲ್ಲಿ ಕಾಯ್ದಾರಿದ ಹಾಲು ಬೇಕೆಂದು ನಿನಗೆ ಯಾರು ಹೇಳಿದರು?”

“ಯಾರು ಹೇಳಲಿಲ್ಲ.”

“ಮತ್ತೆ ಹ್ಯಾಗೆ ತಂದೆ?”

ಗೌರಿ ತಾನ್ಯಾಕೆ ಅಂಥ ಹಾಲು ತಂದುಕೊಟ್ಟೆ? ಎಂದು ಯೋಚನೆ ಮಾಡಿ ಮಾಡಿ ನಿರುತ್ತರಳಾಗಿ ಶಿವಪಾದನ ಕಡೆಗೆ ನೋಡಿದಳು. ಶಿವಪಾದನೂ ನಗುತ್ತ ಇವಳನ್ನೇ ನೋಡುತ್ತಿದ್ದ.

"ನನಗೆ ಗೊತ್ತಿಲ್ಲ" ಅಂದಳು ಗೌರಿ.

"ಇದೆ ಆಮೆ ಮತ್ತು ಮರಿಯ ಸಂಬಂಧ. ನನಗೆ ಈಗ ಆರು ತಿಂಗಳಿಂದ ಇಲ್ಲದ ಹಸಿವೆ ಈ ದಿನ ಆಯಿತು. ನನಗೆ ಅಂಥ ಹಾಲು ಬೇಕಾಯಿತು. ನಾನು ಹೇಳಲಿಲ್ಲ. ಆದರೂ ನೀನು ಕೇಳಿಸಿಕೊಂಡು ಹಾಲನ್ನು ತಂದುಕೊಟ್ಟೆ. ತಾಯಿ ಮಕ್ಕಳ ಆಸೆ ಪೂರೈಸೋದು ಹೀಗೇನೇ..."

ಇನ್ನೂ ಇಂಥ ಅನೇಕ ವಿಷಯ ಹೇಳಿಕೊಡುವ ತಾತ ನಿರ್ವಾಣವಾಗುವನಲ್ಲ ಎಂದು ಗೌರಿ ಮೌನಿಯಾದಳು. ಕೊನೆಗೆ ತಾತ ತನ್ನ ಮುಖವನ್ನೇ ನೋಡುತ್ತಿರುವುದನ್ನು ಗಮನಿಸಿ ಅಳುವುಕ್ಕಿ ಬಿಕ್ಕುತ್ತ ಕೇಳಿದಳು:

"ನಿರ್ವಾಣವೆಂದರೆ ಎನ್ ತಾತಾ?"

"ನಿರ್ವಾಣವೆಣ್ಣುವುದು ಪರಮಾನಂದದ ಸ್ಥಿತಿ. ತಾಯಿ ಕರುಣಿಸಿದ್ದಾಳೆ. ನಾನು ಆ ಸ್ಥಿತಿಗೆ ಹೋಗಬೇಕೆಂದರೆ ನೀನು ಅಳುತ್ತೀಯಲ್ಲ ಕೂಸು?"

"ನಾನು ಬಂದು ವಾರ ಕೂಡ ಕಳೆದಿಲ್ಲ: ಆಗಲೇ ನಿರ್ವಾಣವಾಗಬೇಕಂತೀಯಲ್ಲ, ಅದಕ್ಕೇ"

"ಕೂಸು, ನಾನು ಒಂದು ವರ್ಷದ ಹಿಂದೆಯೇ ನಿರ್ವಾಣವಾಗಬೇಕೆಂದಿದ್ದೆ. ತಾಯಿ ನಿನ್ನ ಮತ್ತು ನಿನ್ನಡಿಯನ್ನ ಕೂಡಿಸಿ ಬಾ ಅಂದಳು. ಮಂಗಲವಾಯ್ತು. ಹೊರಟೆ. ಅಂದರೆ ನಿನಗಾಗಿ ನಾನು ಒಂದು ವರ್ಷ ಕಾಲ ತಡಮಾಡಿದೆ. ಸಾಲದೆ?"

ಈ ಮಾತನ್ನು ಹೇಳುತ್ತಿರುವಂತೆ ನಿನ್ನಡಿ ಬಂದ. ಶಿವಪಾದ ಕೈ ಸನ್ನೆ ಮಾಡಿ ಕೂರಲು ಸೂಚಿಸಿದ. ನಿನ್ನಡಿ ಕೂತು ಶಿವಪಾದನ ಪಾದದ ಮೇಲೆ ಕೈಯಿಟ್ಟು ಮೆಲ್ಲಗೆ ಕೈಯಾಡಿಸುತ್ತ ಗೌರಿಯ ಕಡೆಗೆ ನೋಡಿದ. ಜವಾಬ್ದಾರಿಗಳಿಂದ ದಣಿದಿದ್ದರು ಇನ್ನು ಉತ್ಸಾಹ ಚಿಮ್ಮುತ್ತಿತ್ತು. ಗೌರಿ ಅಳುತ್ತಿರುವುದನ್ನು ಗಮನಿಸಿ;

"ನೀನು ಹೀಗೆ ಅಳುತ್ತ ಕೂತರೆ ಬಂದ ಅತಿಥಿಗಳನ್ನು ನೋಡೋರ್ಯಾರು ಗೌರಿ?" ಅಂದ.

ಮಾಡಿದ ತಪ್ಪಿನ ಅರಿವಾಗಿ ಗೌರಿಯ ಮುಖ ನಾಚಿಕೆಯಿಂದ ಕಪ್ಪಾಯಿತು. ಉಕ್ಕಿ ಬರುತ್ತಿದ್ದ ಕಣ್ಣೀರನ್ನು ನಿಯಂತ್ರಿಸಿಕೊಂಡು ಇನ್ನೊಂದೇ ಮಾತು:

"ನೀರ್ವಾಣವಾದ ಮೇಲೆ ನೀನು ಏನಾಗುತ್ತಿ ತಾತಾ?" ಎಂದಳು.

"ಇಲ್ಲಿರುವ ಎಲ್ಲ ನೆನಪುಗಳಲ್ಲಿ ಸೇರಿಕೊಳುತ್ತೇನೆ. ನಾನಿನ್ನು ಮೆಲೆ ಅಮ್ಮನ ಗವಿಯಾಗುತ್ತೇನೆ. ಬೆಟ್ಟವಾಗುತ್ತೇನೆ. ಚಂದ್ರಾವತಿಯಲ್ಲಿ ಚಿಗುರಿ ಹೂ ಬಿಡುತ್ತೇನೆ. ಗಾಳಿಯಾಗಿ ನಿನ್ನ ಮುಂಗುರುಳು ನೇವರಿಸಿ ಬೆಳಗುತ್ತೇನೆ. ಶಿವಾಪುರವಾಗುತ್ತೇನೆ. ಶಿವಾಪುರದ ಮಕ್ಕಳಾಡುವ ಚೆನ್ನಾಟಕ್ಕೆ ಮಣ್ಣಾಗುತ್ತೇನೆ."

"ನೀನು ಏನಾಗಬೇಕೂಂತ ನನಗೊಂದಾಸೆಯಿದೆ."

“ಅದೂ ಈಡೇರುತ್ತದೆ”.

“ಅದೇನೆಂದು ನಾನಿನ್ನೂ ಹೇಳಲಿಲ್ಲ.”

“ಆಮೆ ಮತ್ತು ಮರಿ ಸಂಬಂಧ ಗೊತ್ತಲ್ಲ? ನಿನ್ನಾಸೆ ಅಮ್ಮನಿಗೆ ಅರ್ಥವಾಗಿ ಆಶೀರ್ವಾದ ಮಾಡಿಬಿಟ್ಟಳು!”

ಗೌರಿಯ ಕಣ್ಣಲ್ಲಿ ಫಳ್ಳನೆ ಬೆಳಕು ಮಿಂಚಿ ಭಯಭಕ್ತಿ ಪ್ರೀತಿಯಿಂದ ಶಿವಪಾದನ ಪಾದ ಪಡಕೊಂಡು ಪಾದಧೂಳಿಯನ್ನು ತಲೆಗೆ ಹಚ್ಚಿಕೊಂಡು ಅತಿಥಿಗಳನ್ನು ನೋಡಲು ಹೊರಟಳು.

ನಿನ್ನಡಿ ಕೇಳದಿದ್ದರೂ ತಾನೊಂದು ಮಾತನ್ನು ಹೇಳುವ ಅಗತ್ಯವಿದೆ ಎನ್ನಿಸಿ ಶಿವಪಾದ ಹೇಳಿದ:

“ಮಗನೇ ಶಿವಪುರವನ್ನ ನಾವ್ಯಾಕೆ ಕಟ್ಟಿದಿವಿ? ಅದು ಶಾಶ್ವತವಾಗಿ ಇರಲಿ ಅಂತಲ? ಆಕಾರಗೊಂಡುದಕ್ಕೆಲ್ಲಾ ಅಳಿವಿರುವಾಗ ಶಿವಪುರವಷ್ಟೇ ಶಾಶ್ವತವಾಗಿ ಹೆಂಗುಳಿದೀತು? ನಾವೆಲ್ಲ ಶಿವಾಪುರ ಶಿವಾಪುರ ಅಂತ ಬಡಕೊಂಡದ್ದು ಒಂದು ದಿನ ಅದೂ ಮಣ್ಣಾಗೋದೇ! ಸ್ವತಃ ಅಮ್ಮನೇ ತನ್ನ ಹೆಸರು ತಾನೇ ಬದಲಿಸಿಕೊಂಡು ಇನ್ನೊಂದಾಗ್ತಾಳಂತೆ! ಇನ್ನು ಶಿವಾಪುರವ ಬಿಟ್ಟಾಳೆಯೇ?

ಆದರೂ ಶಿವಾಪುರ ಕಟ್ಟತೀವಿ ಯಾಕ್ಹೇಳು?

ಯಾಕಂದರ ಅವ್ವ ಹೇಳತಾಳ: “ಮಕ್ಕಳ್ರಾ ಶಿವಾಪುರ ಕಟ್ಟಿರಿ” ಅಂತ. ಆಕೀನs ಹೇಳದ ಮ್ಯಾಲ ನಮ್ಮದೇನು?

ನಾವಷ್ಟೇ ದೊಡ್ಡವರಾದರೂ ತಾಯಿಗೆ ಮಕ್ಕಳೇ! ಮಕ್ಕಳಿಗೆ ಆಟ ಮಾತ್ರ ಗೊತ್ತು. ಹಿಂದೆ ಮುಂದೆ ಮತ್ತೊಂದು ಗೊತ್ತಿಲ್ಲ. ಹಾಂಗ ಆಟ ಆಡಿಕೋಂತ ಕಟ್ಟತೀವಿ. ಕಟ್ಟಿದ ಮ್ಯಾಲ ಮುರಿದು ಬೀಳತೈತಿ. ತಪ್ಪ ತಿದ್ದಿಕೊಂಡ ಮತ್ತ ಕಟ್ಟತೀವಿ.

ಹಿಂಗs ಕಟ್ಟುತ್ತಾ, ತಿದ್ದಿಕೊಳ್ಳುತ್ತಾ, ಕೈಲಾಸ ಕಟ್ಟುತ್ತಿದ್ದೇವಂತೆ ನಂಬುತ್ತಾ ಕಟ್ಟತೀವಿ, ಬೀಳತೈತಿ, ಕಟ್ಟತೀವಿ.

ಕಟ್ಟೋದು ನಮ್ಮ ಕರ್ಮ. ಅದಕ್ಕs ನಮಗ ದಣಿವಿಲ್ಲ. ಮಕ್ಕಳಾಟ ಎಷ್ಟು ನೋಡಿದರೂ ಅವ್ವಗ ದಣಿವಿಲ್ಲ.

ಮಗನೇ,-

ಇದು ತಾಯಿಯ ಪೀಠ

ರಾಜ್ಯಗಳನ್ನಲ್ಲ, ಹೃದಯಗಳನ್ನು ಗೆದ್ದುಕೋ.

ಗವಿಯಲ್ಲಿ ಬೇಕಾದಷ್ಟು ಉಪಯುಕ್ತವಾದ ನೆನಪುಗಳಿವೆ, ಉಪಯೋಗಿಸಿಕೊ.

ಚಿನ್ನದ ಆರಾಧಕರಿಗೆ, ಪಿತೃಸಂಸ್ಕೃತಿಯವರಿಗೆ ಪ್ರೀತಿ ಗೊತ್ತಿರುವುದಿಲ್ಲ.

ಶಿವಾಪುರ ಗಟ್ಟಿ ಇದ್ದರ ಇರಲಿ, ಕನಕಪುರಿ ಬಿದ್ದರೂ ಕಟ್ಟು, ಜಗತ್ತೆಲ್ಲಾ ಶಿವಾಪುರ ಅಂತ ಕಟ್ಟಬೇಕಪಾ ಮಗನs ಅಂತಾಳ ತಾಯಿ. ಅದು ನಂದಲ್ಲ, ಅದನ್ಯಾಕ ಕಟ್ಟಬೇಕಂತ ವಿಚಾರ ಮಾಡಬಾರದು.

ಎಲ್ಲಿ ಏನು ಕಟ್ಟಿದರೂ ಶಿವಾಪುರವೆಂದು ಕಟ್ಟು.

ಕಟ್ಟು! ಕಟ್ಟಿದ್ದೆಲ್ಲಾ ಶಿವಾಪುರವೆಂದು ಕಟ್ಟು."

* * *

ಯಾರಿಗೂ ಹೇಳಿ ಕಳಸಿದಿದ್ದರೂ ನಿರ್ವಾಣ ಹೊಂದುವ ಸುದ್ದಿ ಸುತ್ತ ಹರಡಿ ಒಂದು ಕಡಿಮೆ ನಲವತ್ತು ಹಟ್ಟಿಗಳ ಭಕ್ತಾದಿಗಳು, ಗುಡ್ಡರು ಬಂದು ಶಿವಪಾದನ ಪಾದ ಪಡಕೊಂಡರು. ದೂರದ ಛಪ್ಪನ್ನೈವತ್ತಾರು ದೇಶಗಳಲ್ಲಿದ್ದ ಅವನ ಶಿಷ್ಯರು, ತಪಸ್ವಿಗಳು ತಾಂತ್ರಿಕ ಸಿದ್ಧರು, ಸಂತರು, ಪಂಡಿತರು, ರಾಜರು, ಮಾಂಡಳಿಕ ಮನ್ನೆಯರು ಗಣ್ಯಾತಿಗಣ್ಯರು ಬಂದು ದರ್ಶನಾಶೀರ್ವಾದ ಪಡೆದರು. ಬಂದವರೆಷ್ಟೋ ಮಂದಿ ಆಶೀರ್ವಾದ ಪಡೆದು ಹೋದರೂ ನಿರ್ವಾಣವಾಗುವ ದಿನ ಬೆಟ್ಟ ತುಂಬಿ ತುಳುಕುವಷ್ಟು ಜನ ಗವಿಯ ಮುಂದೆ ಸೇರಿದ್ದರು.

ಅತಿಥಿಗಳ ಆತಿಥ್ಯದ ಜವಾಬ್ದಾರಿ ಬೆಳ್ಳಿ ಗೌರಿಯರ ನೇತೃತ್ವದ ಶಿವಾಪುರದ ಮಹಿಳೆಯರ ಮೇಲಿತ್ತು. ರಾಜ ಮಹಾರಜರು ಬುಡಕಟ್ಟಿನವರು ಅವರಿವರೆನ್ನದೆ ಎಲ್ಲರನ್ನು ಸಮನಾದ ಆದರ ಔದಾರ್ಯಗಳಿಂದ ಸತ್ಕರಿಸಿದರು. ಗೌರಿಯಂತೂ ಅಹ್ಲಾದಕರ ಮಂದಹಾಸ ಬೀರುತ್ತ, ಹಗುರ ಹೆಜ್ಜೆ ಹಾಕುತ್ತ ಗೌರವಪೂರ್ವಕ ಅನ್ನ ನೀಡುತ್ತ ನಡೆದರೆ ಸಾಕ್ಷಾತ್ ಅನ್ನಪೂರ್ಣೆಯಂತೆ ಕಂಗೊಳಿಸುತ್ತಿದ್ದಳು. ಮಾತಿಲ್ಲದೆ ಸೂಕ್ಷ್ಮ ಭಾವನೆಗಳನ್ನ ತಿಳಿಸುವ ವಿಶಿಷ್ಟ ಶಕ್ತಿ ಅವಳ ಮುಖದಲ್ಲಿತ್ತು. ಅವಳ ದೊಡ್ಡ ಕಣ್ಣುಗಳಲ್ಲಿಯೂ ನೋಡಿದವರಲ್ಲಿ ಆತ್ಮೀಯತೆ ಮತ್ತು ಗೌರವ ಭಾವನೆಯನ್ನು ಹೆಚ್ಚಿಸುವ ಗುಣವಿತ್ತು. ಊಟ ಮಾಡಿದವರು ಗೌರಿಯನ್ನು ಎಲ್ಲಿ ಕಂಡರೂ ತಕ್ಷಣ ಸರಿದು ಅವಳು ದಾಟಿ ಹೋಗುವತನಕ ನಿಂತು ಗೌರವ ಸೂಚಿಸುತ್ತಿದ್ದರು. ಇದನ್ನು ಕಂಡಾಗಂತೂ ಬೆಳ್ಳಿ ಅಭಿಮಾನದಿಂದ "ಎಷ್ಟಂದರೂ ನನ್ನ ಸೊಸೆ ರಾಜಕುಮಾರಿ ಅಲ್ಲವೆ?" ಎಂದು ಹೆಮ್ಮೆ ಪಡುತ್ತಿದ್ದಳು.

ಶಿವನ ಸೋಮವಾರ ಬ್ರಾಹ್ಮೀ ಮುಹೂರ್ತ ಬಂತೆಂದಾಗ ಕುರುಮುನಿ ಚಂಡೀದಾಸರು ದಾರಿ ಮಾಡಿಕೊಡುತ್ತ ಗವಿಯೊಳಗಿಂದ ಮುಂದೆ ಮುಂದೆ ಬಂದರು. ಹಿಂದಿನಿಂದ ನಿನ್ನಡಿಯ ಭುಜದ ಮೇಲೆ ಕೈಯೂರಿಕೊಂಡು ಶಿವಪಾದ ಹೊರಗೆ ಬಂದ. ಕೂಡಲೇ ಭಕ್ತರು ಅಂಥ ಬೆಳಗಿನ ಹೊತ್ತಿನಲ್ಲೂ ಬೆಟ್ಟ ನಡುಗುವ ಹಾಗೆ "ಅಮ್ಮ ನಿನ್ನ ಪಾದಕ್ಕುಧೋ" ಎಂದು "ಶಿವಪಾದಾ ಚಾಂಗಭಲಾ" ಎಂದು ಘೋಷವಾಕ್ಯಗಳನ್ನು ಮೊಳಗಿಸಿದರು. ಶಿವಪಾದ ಹೊಳೆಯುವ ಕಂಗಳಿಂದ ಜನರನ್ನು ನೋಡುತ್ತ ಆನಂದತುಂದಿಲನಾಗಿ ಬಲಗೈ ಎತ್ತಿ ಆಶಿರ್ವಾದ ಮಾಡಿದ. ಅಡ್ಡ ಬೀಳುವ, ಪಾದ ಮುಟ್ಟುವ ಜನಗಳ ದಟ್ಟಣೆಯಿಂದ ಬರುವುದು ಕಷ್ಟವಾದರೂ ಕುರುಮುನಿ ನಿಷ್ಠುರವಾಗಿ ದಾರಿ ಮಾಡಿಕೊಟ್ಟುದರಿಂದ ಮರದ ಕಟ್ಟೆಗೆ ಬಂದು ಹತ್ತಿ ನಿಂತ. ಆಶೀರ್ವಾದ ಮಾಡುವಂತೆ ಎರಡೂ ಕೈ ಮ್ಯಾಲೆತ್ತಿ ತುಟಿ ಅಲುಗಿದೊಡನೆ ಜನಸಾಗರ ನಿಶ್ಯಬ್ದವಾಯಿತು.

ಶಿವಪಾದ ಶಾಂತವಾಗಿ ಸ್ಫುಟವಾಗಿ ಕರುಣೆಯಿಂದ ಹೇಳಿದ:

ತಾಯಿಯೇ ಅಂತಿಮ ಸತ್ಯ.

ಎಷ್ಟು ಜನ ತಾಯಂದಿರೋ ಅಷ್ಟು ಸತ್ಯಗಳು

ಎಲ್ಲಾ ಸತ್ಯಗಳನ್ನು ಗೌರವಿಸುವ ನಿನ್ನ ತಾಯಿಯನ್ನು ಆರಾಧಿಸು.

ಎಷ್ಟು ಜೀವರಾಶಿಗಳೋ

ಅಷ್ಟೊಂದು ತಾಯಂದಿರು.

ಎಂಬತ್ತನಾಲ್ಕು ಲಕ್ಷ ತಾಯಂದಿರನ್ನು ಗೌರವಿಸುವ ನಿನ್ನ ತಾಯಿಯನ್ನು ಆರಾಧಿಸು.

ಇನ್ನೊಬ್ಬರ ನಂಬಿಕೆಗಳನ್ನು ಗೌರವಿಸು

ಮೂವತ್ತಮೂರು ಕೋಟಿ ನಂಬಿಕೆಗಳನ್ನು ಸಾಕಿದ ಸೀಮೆಯಿದು.

ತಾಯಿಗೆ ಭಕ್ತಿ ಇಷ್ಟ.

ನವವಿಧ ಭಕ್ತಿಯಿಂದ ತಾಯಿಯನ್ನು ಆರಾಧಿಸು.

ಇಷ್ಟು ಹೇಳಿ ಸುತ್ತಲೂ ಎತ್ತಿದ ಕೈಗಳಿಂದ ಹರಸಿ ಹಾಗೆಯೇ ಗವಿಯ ಕಡೆಗೆ ತಿರುಗಿದ. ನಿನ್ನಡಿ ತಕ್ಷಣ ನಿಂತು ಕೈ ಊರಲು ಹೆಗಲು ಕೊಟ್ಟ. ಕುರುಮುನಿ, ಚಂಡೀದಾಸರು ದಾರಿ ಮಾಡುತ್ತ ಪಾದ ಪಡಕೊಳ್ಳುವ ಜನರನ್ನು ನಿಯಂತ್ರಿಸುತ್ತ ಮುಂದೆ ಮುಂದೆ ನಡೆದರು. ನಿನ್ನಡಿಯ ಮೇಲೆ ಕೈಯೂರಿಕೊಂಡು ಶಿವಪಾದ ಗವಿಯೊಳಕ್ಕೆ ಹೋದ. ಜನ ಘೋಷವಾಕ್ಯಗಳ ಘೋಷಿಸುತ್ತಲೇ ಇದ್ದರು.

ಗವಿಯೊಳಕ್ಕೆ ಪ್ರವೇಶಿಸಿದೊಡನೆ ಚಂಡೀದಾಸ ಕಲ್ಲು ಸರಿಸಿ ಗವಿಯ ಬಾಗಿಲು ಮುಚ್ಚಿದ. ಒಳಗಿನ ಅಂತರಂಗದ ಮೆಟ್ಟಿಲುಗಳನ್ನು ನಿನ್ನಡಿಯೇ ಮುಂದಾಗಿ ಹತ್ತಿ ಬಾಗಿಲಂತಿದ್ದ ಕಲ್ಲು ಸರಿಸಿದ. ಆಮೇಲೆ ಶಿವಪಾದನನ್ನು ಕರೆ ತರಲು ಕೆಳಗಿಳಿಯಬೇಕೆಂದಾಗ ಶಿವಪಾದನಾಗಲೇ ಮೆಲ್ಲಗೆ ಹತ್ತಿ ಬಾಗಿಲ ಬಳಿ ಬಂದಿದ್ದ!

ಅಂತರಂಗದಲ್ಲಿ ತುಪ್ಪದ ಸೊಡರಿತ್ತು. ಶಿವಪಾದ ನಿಧಾನವಾಗಿ ನಡೆಯುತ್ತ ಪೀಠದ ಬಳಿ ಬಂದು ತಾಯಿಗೂ ಪೀಠಕ್ಕೂ ನಮಿಸಿ ಪ್ರಾರ್ಥನೆ ಸಲ್ಲಿಸಿದ ಮೇಲೆ -

“ಮಗನೇ, ನೀನಿನ್ನು ಹೊರಡು. ಇಲ್ಲಿಂದ ಮೂರನೇ ಹುಣ್ಣಿಮೆಯ ಶಿವ ಸೋಮವಾರ ಗೋಧೂಳಿ ಲಗ್ನದಲ್ಲಿ ಅಬ್ಬೆ ಸಮೇತ ಇಲ್ಲಿಗೆ ಬಾ. ಅಲ್ಲಿಯತನಕ ಅಂತರಂಗದ ಬಾಗಿಲು ಭದ್ರವಾಗಿರಲಿ”, - ಅಂದ.

ನಿನ್ನಡಿ ಜಲ ಜಲ ಕಣ್ಣೀರು ಸುರಿಸುತ್ತಿದ್ದ. ಕರ್ತವ್ಯ ಪ್ರಜ್ಞೆಯಿಂದ ತುಟಿ ಕಚ್ಚಿ ಬಿಕ್ಕು ತಡೆ ಹಿಡಿದುಕೊಂಡು ‘ತಂದೇs’ ಎಂದು ಶಿರಸಾಷ್ಟಾಂಗ ನಮಸ್ಕಾರವನ್ನಾಚರಿಸಿದ. ಶಿವಪಾದ ಶಿಶುಸದೃಶ ತೃಪ್ತಿಯಿಂದ ಬೆನ್ನು ತಟ್ಟಿ ಪ್ರೀತಿಯಿಂದ ಕಣ್ಣೀರೊರೆಸಿ, ನೆತ್ತಿಯ ಮೂಸಿ ಆಶೀರ್ವದಿಸಿ ಆಜ್ಞೆಯೆಂಬಂತೆ “ಇನ್ನು ಹೊರಡು ಕಂದಾ” ಎಂದ. ಸಮಯ ಮೀರಬಾರದೆಂದು ನಿನ್ನಡಿಯೂ ಜಾಗೃತೆಯಾಗಿ ಹೊರಬಂದು ಕಲ್ಲು ಸರಿಸಿ ಬಾಗಿಲು ಭದ್ರಮಾಡಿ ಕೆಳಗೆ ಬಂದ.

* * *

ಶಿವಪಾದ ಹೇಳಿದಂತೆ ಮೂರನೇ ಹುಣ್ಣಿಮೆಯ ಶಿವಸೋಮವಾರ ಶಿವಪಾದ ಹೇಳಿದಂತೆ ನಿನ್ನಡಿ ಮತ್ತು ಬೆಳ್ಳಿ ಮಿಂದು ಒದ್ದೆ ಬಟ್ಟೆಯಲ್ಲೇ ಬೆಟ್ಟ ಏರಿ ಶಿವಪಾದ ಹೇಳಿದ ಸಮಯಕ್ಕೆ ಸರಿಯಾಗಿ ಗವಿಗೆ ಬಂದರು. ಮರದ ಮರೆಯಲ್ಲಿ ಅವಿತಿದ್ದರಿಂದ ಶಿಖರಸೂರ್ಯ ಕಾಣಲಿಲ್ಲ. ನೇರವಾಗಿ ಗವಿಯೊಳಕ್ಕೇ ಹೋದರು. ಬೆಳ್ಳಿ ಒಳಗೆ ಬಂದು ನಮಸ್ಕಾರವನ್ನಾಚರಿಸಿ ತಾಯಿಯ ಮೂರ್ತಿಯ ಮುಂದೆ ಕಣ್ಣುಮುಚ್ಚಿ ಧ್ಯಾನಸ್ಥಳಾದಳು. ನಿನ್ನಡಿ ಅಂತರಂಗಕ್ಕೆ ಏರಿ ಹೋದ.

ಪ್ರಶಾಂತವಾದ ಅದರ ಕಿರಣಗಳ ದಿವ್ಯ ಕಾಂತಿಯಲ್ಲಿ ನಿನ್ನಡಿಯ ಅಂದರೆ ಈಗಿನ ಶಿವಪಾದನ ಕಣ್ಣುಗಳ ಅಪೂರ್ವ ಕಾಂತಿಯಿಂದ ಹೊಳೆದವು. ಶಿಶುಸದೃಶ ಮುಖ ಉಲ್ಲಾಸದ ತೃಪ್ತಿಯಿಂದಿತ್ತು.

# ಅರವತ್ತೈದು

ಇತ್ತ ಕನಕಪುರಿಯಲ್ಲಿ ಶಿಖರಸೂರ್ಯ ತೀವ್ರ ಚಡಪಡಿಕೆಯಲ್ಲಿದ್ದ. ಚಿಕ್ಕಮ್ಮಣ್ಣಿಗೆ ಮಾತ್ರ ಹೇಳಿ ಕಂಚಿಗೆ ಹೋಗಿದ್ದ ರವಿ ತಿಂಗಳಾದರೂ ನಾಪತ್ತೆಯಾಗಿದ್ದ. ರವಿಯನ್ನು ಹುಡುಕಲು ಹೋದ ಸುಕ್ರ ಕಂಚಿಯಿಂದ ಆತಂಕದ ಕಾಗದ ತಂದಿದ್ದ: ವಾಸಂತಿ, ಅವಳ ಮಗು ಮತ್ತು ಆಚಾರ್ಯರು ಅಮಾನುಷವಾಗಿ ಕೊಲೆಯಾದ ಸುದ್ದಿ ಕೇಳಿ ರವಿಕೀರ್ತಿಗೆ ಆಘಾತವಾಗಿ ಕಾಡಿನಲ್ಲಿ ಕಣ್ಮರೆಯಾದನೆಂದೂ ಸೈನಿಕರನ್ನಟ್ಟಿ ಹುಡುಕಿಸಿದರೂ ಸಿಕ್ಕಿಲ್ಲವೆಂದೂ ಕಂಚಿಯ ದೊರೆ ಕನಕಪುರಿಯ ಮಹಾರಾಜನಿಗೆ ಕಾಗದ ಬರೆದಿದ್ದ. ನಿಮಗೆ ಸಿಕ್ಕರೆ ನಮಗೂ ಸುದ್ದಿ ಕಳಿಸಿರೆಂದು ಹೇಳಿ ನಡೆದ ದುರ್ದೈವದ ಸಂಗತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದ!

ಶಿಖರಸೂರ್ಯ ಇದನ್ನು ನಿರೀಕ್ಷಿಸಿರಲಿಲ್ಲ. ದಿನಗಳೆದಂತೆ ವಾಸಂತಿಯ ನೆನಪು ಮಸಳಿಸಿ, ಮನಸ್ಸಿನ ಗಾಯಾಗಳು ಮಾಗಿ, ಮಗ ದಾರಿಗೆ ಬಂದೇ ಬರುವನೆಂದು ತನಗೆ ತಾನೇ ಹೇಳಿಕೊಂಡು ಸುಮ್ಮನಾದ. ಆದರೆ ಈಚೀಚೆ ಮಗನ ಬಗ್ಗೆ ಛಾಯಾದೇವಿಯ ಹಂಬಲ ಹೆಚ್ಚಾಗಿತ್ತು. ಗಂಡನನ್ನು ಕೇಳುವದಕ್ಕೆ ಭಯ. ಶಿಖರಸೂರ್ಯನಿಲ್ಲದಾಗ 'ಸುದ್ದಿಯೇನಾದರೂ ಗೊತ್ತಾಯಿತೇನಪ್ಪ' ಎಂದು ಸೇವಕರನ್ನು ಕದ್ದು ಕೇಳುತ್ತಿದ್ದಳು. ತಾಯಿಯ ಮುಂದೆಯೂ ಸಂಕಟ ತೋಡಿಕೊಳ್ಳಲಾಗುತ್ತಿರಲಿಲ್ಲ. ಎಚ್ಚರಾದರೆ ರವಿಯ ನೆನಪಾಗಿ 'ಮಗ ಬಂದನೇ ಮಗಳೇ', ಎಂದು ಕೇಳಿ ಉತ್ತರಿಸುವುದರೊಳಗಾಗಿ ಚಿಕ್ಕಮ್ಮಣ್ಣಿ ತೂಕಡಿಸುತ್ತಿದ್ದಳು. ಇನ್ನು ಗೌರಿಯ ಬಗ್ಗೆಯೇನಾದರೂ ತಿಳಿಯೋಣವೆಂದರೆ ಪುಣ್ಯಾತ್ಮ ಅವಳ ಹೆಸರು ತಗೊಂಡ ಕೂಡಲೇ ಮುಖ ಬಿರುಸು ಮಾಡಿ ಕಿವಿಗೂದಲು ನಿಮಿರಿಸಿ, ನೋಟಗಳಲ್ಲಿ ಚೂರಿ ಹಿಡಿದು ಇರುಯುತ್ತಿದ್ದ. ಆದರೆ ವಿಷಯವನ್ನು ಚಿಕ್ಕಮ್ಮಣ್ಣಿಗಾಗಲಿ, ಛಾಯಾದೇವಿಗಾಗಲಿ ತಿಳಿಸಿರಲಿಲ್ಲ. ಆಗಲೂ ಗೌರಿಯ ಬಗ್ಗೆ ಅವರು ಕೇಳಿದರೆ -

"ಬೇಹುಗಾರರು ಶಿವಾಪುರಕ್ಕೆ ಹೋಗಿದ್ದಾರೆ. ಇಂದು ನಾಳೆ ಸುದ್ದಿ ತರುತ್ತಾರೆ. ಆದರೆ ಹೇಳ ಕೇಳದೆ ಮನೆಬಿಟ್ಟು ಹೋದ ಹೆಣ್ಣನ್ನು ನಾನು ಮನೆ ಸೇರಿಸಿಕೊಳ್ಳಲಾರೆ."

- ಎಂದು ತನ್ನ ಹಳೆಯ ಮಾತನ್ನೇ ಪುನಃ ಹೇಳುತ್ತಿದ್ದ.

ಆದರೆ ಶಿಖರಸೂರ್ಯನಿಗೆ ಗೌರಿಯ ಬಗ್ಗೆ ಮಾಹಿತಿ ಇತ್ತು. ಗುಣದವ್ವನನ್ನು ಅಟ್ಟಿಸಿಕೊಂಡು ಹೋದ ನಂಬಿಕೆಯ ಬೇಹುಗಾರರೇ ಸುದ್ದಿ ತಂದಿದ್ದರು. ಶಿವಾಪುರಕ್ಕೆ ಹೋಗುವ ದಾರಿಯಲ್ಲೇ ಗೌರಿ ಹೊಟ್ಟೆ ನೋವೆಂದು ಚಡಪಡಿಸಿ ಸತ್ತಳೆಂದೂ, ಆದರೆ ಆಕೆ ರಾಜಕುಮಾರಿ ಎಂದು ಯಾರಿಗೂ ಗೊತ್ತಾಗಲಿಲ್ಲವೆಂದೂ ಹೇಳಿದ್ದರು. ಇದನ್ನು ಕೇಳಿ ಒಳಗೊಳಗೆ ಅವನೂ ಮರುಗಿದ. ಕೋಪದ ಪ್ರತಾಪದಲ್ಲಿ, ಹಿಂದೆ ಮುಂದೆ ನೋಡದೆ ಮಗಳಿಗೆ ವಿಷವಿಟ್ಟುದು ಒಳ್ಳೆಯದಾಗಲಿಲ್ಲವೆಂದುಕೊಂಡ. ನಿಜ ಗೊತ್ತಾದರೆ ಮಗ, ಅಜ್ಜಿ, ಮಡದಿಯಿರಲಿ, ಕನಕಪುರಿಯ ಯಾವನೊಬ್ಬ ಪ್ರಜೆಯೂ ತನ್ನ ಬಗ್ಗೆ ಹೇಸಿಕೆ ಪಟ್ಟುಕೊಳ್ಳದಿರಲಾರನೆಂದು ನಾಚಿಕೆಯಿಂದ ಪಶ್ಚಾತಾಪ ಪಟ್ಟ. ಆದರೆ ನಿನ್ನಡಿಯೇ ತರುಣಚಂದ್ರನೆಂದು ನೆನಪಾಗಿ ಮತ್ತೆ ಕೋಪಾವಿಷ್ಟನಾಗಿ ದವಡೆಯ ತುಂಬ ವಿಷ ತುಂಬಿಕೊಂಡು ಹೆಡೆಯಾಡಿಸುತ್ತಿದ್ದ. ಒಂದಂತು ನಿಜ. ನಿನ್ನಡಿ ನಾಶವಾಗುವತನಕ ತನಗಾಗಲಿ, ರವಿಗಾಗಲೆ ನೆಮ್ಮದಿಯಿಲ್ಲವೆಂದು ಖಾತ್ರಿ ಮಾಡಿಕೊಂಡಿದ್ದ. ಅಂಥ ವೈರಿಯನ್ನು ವರಿಸಿದ್ದು ಗೌರಿಯ ದೊಡ್ಡ ತಪ್ಪು. ಇದೂ ಚಿಕ್ಕಮ್ಮಣ್ಣಿಯದೇ ಕಿತಾಪತಿಯೆಂದು ಅವಳ ಮೇಲೂ ಹರಿಹಾಯುತ್ತಿದ್ದ. ಆದರೆ ತಾನೇ ಹಾಕಿದ ಮದ್ದಿನಿಂದ ಆ ವೃದ್ಧೆ ಸದಾಕಾಲ ತೂಕಡಿಸುತ್ತಿದ್ದಳಾಗಿ ಬಚಾವಾಗಿದ್ದಳು.

ಕೌಟುಂಬಿಕ ಸಮಸ್ಯೆ ಒಂದು ತೂಕವಾದರೆ ಕನಕಪುರಿಯೇ ಇನ್ನೊಂದು ತೂಕದ ಸಮಸ್ಯೆಯಾಗಿತ್ತು. ಧಾನ್ಯದ ಅಭಾವದಿಂದ ನಗರ ತತ್ತರಿಸಿ ಹೋಗಿತ್ತು. ಚಿನ್ನ ಕೊಡುತ್ತೇವೆಂದರೂ ಧಾನ್ಯ ಕೊಡುವವರಿರಲಿಲ್ಲ. ದೂರದ ದೇಶಗಳಿಂದ ಧಾನ್ಯವನ್ನು ಆಮದು ಮಾಡಿ ನಿಯಂತ್ರಣದಲ್ಲಿ ಹಂಚಲಾಗುತ್ತಿತ್ತು. ಇದರಿಂದ ವರ್ತಕರ ಸ್ವಾಭಿಮಾನ ಕೆರಳಿ ಕೆಂಡವಾಗಿದ್ದರು. ವರ್ತಕರ ಮಾತಿನಲ್ಲಿಯೇ ಹೇಳುವದಾದರೆ - "ಚಿನ್ನದ ತೂಕದಲ್ಲಿ ಧಾನ್ಯ ಸಿಗದಾಗಿತ್ತು!" ಸದಾ ಗಿಜಿಗುಟ್ಟುವ ಜನರಿಂದ ತುಂಬಿರುತ್ತಿದ್ದ ಕನಕಪುರಿಯ ಪ್ರಸಿದ್ಧ

ಪೇಟೆ ಈಗ ಭಿಕೋ ಎನ್ನುತ್ತಿತ್ತು, ಇದರಿಂದಂತೂ ವರ್ತಕಜರ ಆತ್ಮಸ್ಥೈರ್ಯ ಕುಸಿದು ಕೆಲವರು ಅಕ್ಕಪಕ್ಕದ ರಾಜಧಾನಿಗಳಿಗೆ ನುಗ್ಗಿ ವ್ಯವಹಾರ ಕುದುರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೆ ಇವರಿಗಿಂತ ಮುನ್ನ ಅಲ್ಲಿಗೆ ನಕಲಿ ಚಿನ್ನದ ಕತೆಗಳು ಹರಡಿ ಕನಕಪುರಿಯವರು ಎಂದು ಹೇಳಿದೊಡನೆ ಅನುಮಾನದಿಂದ ನೋಡುತ್ತಿದ್ದರು. ಒಂದು ರಾಜ್ಯದಲ್ಲಂತೂ ಕನಕಪುರಿಯ ವರ್ತಕರೆಂದು ಹೇಳಿದ್ದೇ ತಡ ಸದರಿ ಇಬ್ಬರೂ ವರ್ತಕರನ್ನು ಸೆರೆಮನೆಗಟ್ಟಿದ್ದರು. ಹೀಗಾಗಿ ಕನಕಪುರಿಯವರು ಆತ್ಮ ವಿಶ್ವಾಸ ಕಳೆದುಕೊಂಡದ್ದರಿಂದ ಇನ್ನೊಂದು ಕಡೆ ವ್ಯವಹರಿಸಲು ಸಂಕೋಚ ಪಡುತ್ತಿದ್ದರು ಇಲ್ಲವೆ ಹೆದರುತ್ತಿದ್ದರು. ಏನೇನು ಮಾಡಲು ಸಾಧ್ಯವಾಗದೆ ಶಿಖರಸೂರ್ಯನಿಗೆ ಶಾಪಹಾಕುತ್ತ ಕೈಕೈ ಹೊಸೆಯುತ್ತ, ಅಂಗಡಿಗಳಲ್ಲಿ ಕೂತಿದ್ದರು.

ಇದು ಪೇಟೆಯ ಮಾತಾದರೆ ಊರ ಹೊರಗಿನ ಹೊರಕೇರಿ ಹೊಲಗೇರಿಗಳಲ್ಲಿ ಗಡ್ಡೀಬೇನೆ ಹಬ್ಬತೊಡಗಿತ್ತು. ಜನದಟ್ಟಣೆಯ ಹೊರಕೇರಿಯಲ್ಲಿ, ಆಗಲೇ ಆರೇಳೂ ಹೆಣ ಬಿದ್ದಿದ್ದವು. ಅದು ಭಯಂಕರ ಸಾಂಕ್ರಾಮಿಕ ರೋಗವೆಂದು ಶಿಖರಸೂರ್ಯನಂಥ ವೈದ್ಯಗೆ ಹೇಳಿಕೊಡಬೇಕಾಗಿದ್ದರಲಿಲ್ಲ. ಆದರೆ ಧಾನ್ಯದ ಅಭಾವ ಅದಕ್ಕಿಂತ ಭಯಾನಕವೆನ್ನುವುದೈ ನಿಜ!

ಇನ್ನು ಜನಗಳಾಡಿದ ಒಂದು ಮಾತೂ ಇವನ ಕಿವಿ ಹೊಕ್ಕು ಮಿಡಿಯಲಿಲ್ಲ. ಮಿಡಿಯುವದಕ್ಕೆ ಶಿಖರಸೂರ್ಯ ಬಿಡಲಿಲ್ಲ. ಸಧ್ಯ ತನ್ನ ಆಯುಧಾಗಾರದಲ್ಲಿ ವರ್ತಕರನ್ನು ಎದುರಿಸುವ ಆಯುಧಗಳಿರಲಿಲ್ಲ. ಅವನ್ನು ಸೃಷ್ಟಿಸಬೇಕಾಗಿತ್ತು. ಯಾಕೆಂದರೆ ಈ ರಾಜ್ಯವೇ ಅವರದು. ಆದರೆ ಇಷ್ಟು ಗೊತ್ತಿದ್ದೂ ಅವನು ಅಸಹಾಯಕನಾಗಿದ್ದ. ಬರುವ ಸುಗ್ಗಿಯತನಕ ಹ್ಯಾಗೋ ನಿಭಾಯಿಸಿಕೊಂಡು ಹೋಗಬೇಕೆಂದು ಎಲ್ಲರಿಗೂ ಬುದ್ಧಿ ಹೇಳುತ್ತಿದ್ದ.

ಅಷ್ಟರಲ್ಲಿ ಶಿವಾಪುರದಲ್ಲಿ ಧಾನ್ಯದ ಹೇರಳ ಸಂಗ್ರಹವಿದೆಯೆಂಬ ಸುದ್ದಿ ಬಂತು ನೋಡು, ಶಿಖರಸೂರ್ಯನ ಕಿವಿ ಚುರುಕಾದವು. ಕ್ಷಿಪ್ರವಾಗಿ ಶಿವಾಪುರವನ್ನು ವಶಕ್ಕೆ ತಕ್ಕೊಳ್ಳುವ ಯೋಜನೆ ತಯಾರಿಸಿದ. ಸಿಡಿತಲೆ ಎಳೆಯುವ ಎರಡು ಗಾಡಿಗಳು, ಸಿಡಿತಲೆ ಸಿಡಿಸುವ ಎಂಟು ಜನ ಯೋಧರನ್ನು ಕರೆದು ಸಜ್ಜಾಗಿರಬೇಕೆಂದು ಆಜ್ಞೆಮಾಡಿದ.

ಶಿವಾಪುರವೇನು ದೊಡ್ಡ ರಾಜ್ಯವಲ್ಲ. ಎದುರಿಸುವಂಥ ಪಡೆಯಿಲ್ಲ, ಕೋಟೆ ಕೊತ್ತಳಗಳಿಲ್ಲ. ನೇರ ಹೋಗಿ ಧಾನ್ಯ ತಗೊಂಡು ಬೆಟ್ಟವ ವಶಪಡಿಸಿಕೊಂಡು ಬರುವುದೆಷ್ಟೋ ಅಷ್ಟೇ ಎಂಬಷ್ಟು ಸರಳ ಸಮಸ್ಯೆಯಾದರೂ ಇಷ್ಟೆಲ್ಲಾ ಪೂರ್ವತಯಾರಿ ಮತ್ತೂ ಒಂದು ಯೋಜನೆ ಬೇಕೇ? ಎನಿಸಬಹುದು. ಆದರೆ ಅದು ಜನಸಾಮಾನ್ಯರ ನಂಬಿಕೆಯ ಪ್ರದೇಶ. ಬಂಟರ ಸಹಾಯವಿಲ್ಲದೆ ತಾನೊಬ್ಬನೇ ಹೋಗಿ ಪ್ರಯೋಜನವಿಲ್ಲ. ದೋಚಿದ ಧಾನ್ಯವನ್ನ ತರಬೇಕಾದರೂ ಜನ ಬೇಕಲ್ಲ? ಇದು ಜನತೆಗೆ ಹೇಳುವ ಉತ್ತರವಾದರೂ ಅವನ ಮನದಿಂಗಿತದ ಮಹತ್ವಾಕಾಂಕ್ಷೆ ಇನ್ನೂ ಆಳವಾಗಿತ್ತು. ಶಿವಾಪುರದ ಮಡುವಿನ ಬುಡದಿಂದ ಬೆಟ್ಟದ ತುದಿಯವರೆಗಿನ ಒಂದೇ ಅಖಂಡ ಬಂಡೆ ಅಸಲಿ ಚಿನ್ನದ ಗಟ್ಟಿಯಾಗಿತ್ತು! ಅದು ನನ್ನದಾದರೆ ನನಗೆ ಸರಿಸಾಟಿ ಯಾರು? ಆವಾಗ ಇಂದ್ರ ಚಂದ್ರರಿಗೂ ಬಿಡಿಗಾಸಿನ ಬೆಲೆ ಇರೋದಿಲ್ಲ! ಅದನ್ನ ದೋಚಬೇಕಾದರೆ ಜನರ ಮನಸ್ಸನ್ನು ಪ್ರಭಾವಗೊಳಿಸುವ, ಒಪ್ಪಿಸುವ ರಾಜಕೀಯ ಬಲಬೇಕಿತ್ತು!

ನಮ್ಮ ಭಂಟರೋ ಶಿವಾಪುರ, ಶಿವಪಾದ, ಅಮ್ಮ ಎಂದರೆ ಅಡ್ಡ ಬೀಳುವಂಥವರು. ಇಂಥವರನ್ನು ಕಟ್ಟಿಕೊಂಡು ಶಿವಾಪುರದೆದುರು ಯುದ್ಧ ಮಾಡಲಾದೀತೆ? ಬಂಡೆಯ, ಸುಕ್ರರು ಮಾತ್ರವಲ್ಲ ಯಾವನೇ ಮನುಷ್ಯನನ್ನು ಒಯ್ಯಬಾರದೆಂದೂ, ಮೇವಿನ ಸೈನಿಕರನ್ನು, ಅದರಲ್ಲೂ ಗೊತ್ತಿಲ್ಲದ ಸ್ಥಳದ ಮೇವಿನಿಂದ ತಯಾರಿಸಲಾದ ಸೈನಿಕರನ್ನು ಯುದ್ಧದಲ್ಲಿ ತೊಡಗಿಸಬೇಕೆಂದೂ ನಿರ್ಧರಿಸಿದ. ಮತ್ತು ತಾನೂ ಶಿವಾಪುರದ ಮೇಲೆ ಯುದ್ಧಕ್ಕೆ ಹೋಗುತ್ತಿರುವ ಸಂಗತಿಯನ್ನು ಗೌಪ್ಯವಾಗಿಡಬೇಕೆಂದೂ ಸುಕ್ರನಿಗೆ ಹೇಳಿ, ಸಿಡಿತಲೆ ಎಳೆಯುವ ಎರಡು ಗಾಡಿ, ಹಾಗೂ ತನಗಾಗಿ ಇನ್ನೊಂದು ಗಾಡಿ ಹಾಗೂ ಎಂಟು ಜನ ಬಂಟರನ್ನು ಜೊತೆ ಕರೆದುಕೊಂಡು ಶಿವಾಪುರಕ್ಕೆ ಪಯಣವಾದ.

ಊರು ಪ್ರವೇಶಿಸುವ ಮುನ್ನ ಅಗಸಿಯಲ್ಲಿ ಗಾಡೀ ನಿಲ್ಲಿಸಿ ಒಂದು ಸಲ ಇಡೀ ರಸ್ತೆಯನ್ನೆ, ಆಜೂ ಬಾಜೂ ಇದ್ದ ಮನೆ ಗೊಡುಗಳನ್ನ, ರಸ್ತೆಯಂಚಿನ ಮಂಟಪವನ್ನ, ಬೀದಿಯ ಎಡಭಾಗದಲ್ಲಿ ಎದ್ದು ಕಾಣುವ ಬೆಳ್ಳಿಯ ಮನೆಯನ್ನ ನೋಡಿದ. ಈಗ ಬೆಳ್ಳಿಯೇ ಹೊರಗಡೆ

ಬಂದು ನಿಂತರೆ - ಅವಳೆದುರು ತನ್ನ ವೈಭವವನ್ನು ಮೆರೆಯಬಹುದೆಂಬ ಆಸೆ ಮೂಡಿತು. "ಇಂದಿಲ್ಲಾ ನಾಳೆ ನನ್ನ ಬಳಿಗೆ ಬರಲೇಬೇಕಲ್ಲ" ಎಂದುಕೊಳ್ಳುತ್ತ ಆಮೇಲೆ ಬೆಟ್ಟದ ಕಡೆಗೆ ದೃಷ್ಟಿಯನ್ನು ಚಲಿಸಿದ. ದೃಷ್ಟಿ ತುದಿ ತಲುಪುವ ಮುನ್ನವೇ ಗೋಮಾಳದ ದಿನ್ನೆಯ ಮೇಲೊಂದು ಹೊಸ ದೇವಸ್ಥಾನ ಎದ್ದುದನ್ನು ನೋಡಿ ಇದಾವ ದೇವರು ಬಂತೋ ಎಂದು ಶಿವಾಪುರದ ಮೂಢನಂಬಿಕೆಗೆ ಕರುಣೆಗೊಂಡು, ಆಮೇಲೆ ಬೆಟ್ಟವ ನೋಡಿದ! ಕಣ್ಣು ಫಳ್ಳನೆ ಮಿಂಚಿದವು! ಚಿನ್ನದ ಬೆಟ್ಟ! ಇದೊಂದು ವಶವಾದರೆ…. ಎಂದುಕೊಳ್ಳುತ್ತ, ಅದು ವಶವಾದ ಮೇಲೆ ತನಗೆ ಸಿಕ್ಕುವ ವೈಭವವನ್ನ ಕಲ್ಪಿಸಿಕೊಂಡು ಪುಳಕಿತನಾದ!

ಊರಿನ ಜನರಾಗಲೇ ಕುದುರೆಗಾಡಿಯ ಸುತ್ತ ನೆರೆದಿದ್ದರು. ಮಕ್ಕಳು ಹೆಂಗಸರು ಭೀತಿ ಬೆರಗುಗಳಿಂದ ರಾಜನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದರು. ಜನಗಳೇನು ರಾಜನನ್ನು ಕಾಣದವರಲ್ಲ. ಆದರೆ ಇವನ ವೈಭವ ತುಂಡರಸರ ವೈಭವಕ್ಕಿಂತ ಎಷ್ಟೋ ಪಾಲು ಹೆಚ್ಚಾಗಿತ್ತು. ಇವನ ಆಕಾರ, ವ್ಯಕ್ತಿತ್ವವು ಹಾಗಿತ್ತು. ಆದರೆ ಈ ಹಿಂದೆ ನಮ್ಮಲ್ಲಿದ್ದ ಜನಸೂರ್ಯನೇ ಇವನು! ಎಂದು ಯಾರಿಗೊಬ್ಬರಿಗೂ ಹೊಳೆಯಲಿಲ್ಲ. ಯಾರಿವನು? ರಾಜನೋ? ದೇವರೋ? ಎಂದು ಜನ ತಂತಮ್ಮಲ್ಲೇ ಕದ್ದಾಡಿಕೊಳ್ಳುತ್ತಿದ್ದರು.

ಈ ಊರನ್ನು ಮೊದಲಿನಿಂದ ಬಲ್ಲನೆಂದು ತೋರಿಸಿಕೊಳ್ಳಲು - ಅಂದರೆ ಆಗಲಾದರೂ ಜನ ತನ್ನನ್ನು ಗುರುತಿಸಿ
ಬೆರಗುಗೊಂಡಾರೆಂದು, -

"ಅಮ್ಮನ ಜಾತ್ರೆ ಯಾವಾಗ್ರಯ್ಯಾ?"

ಅಂದ. ಈ ಮಾತು ಅರ್ಥವಾಗಿ ಅನೇಕರು ಉತ್ತರಿಸಲು ಮುಂದೆ ಬಂದರು. ಒಬ್ಬೊಬ್ಬರು ಒಂದೊಂದು ಉತ್ತರ ಕೊಟ್ಟರೂ ಎಲ್ಲ ಉತ್ತರಗಳ ಸಾರಾಂಶ ಒಂದೇ ಆಗಿತ್ತು: ಜಾತ್ರೆ ಎಂದೋ ಮುಗಿದು ಹೋಗಿದೆ!

ಶಿಖರಸೂರ್ಯನಿಗೆ ನಿರಾಸೆಯಾಯ್ತು. ತಕ್ಷಣ ಕುದುರೆಗಳನ್ನ ಚಲಿಸುವಂತೆ ಮಾಡಿ ಊರ ಹೊರಗಿನ ಮುರಿಗೆಪ್ಪನ ತೋಟಕ್ಕೆ ಹೋದ!

ಅಲ್ಲಿ ಇಳಿದುಕೊಳ್ಳುವ ವ್ಯವಸ್ಥೆ ಮಾಡಿ ನಿನ್ನಡಿಯ ಕರೆತರಲು ಜನ ಕಳಿಸಿ ಬೆಟ್ಟಕ್ಕೆ ಹೋದ. ಮ್ಯಾಲೆ ಆಕಾಶದ ನೀಲಿ ಮಡುಗಟ್ಟಿದ ಸರೋವರದ ಹಾಗೆ, ಕೆಂದೇರಿದ ಸೂರ್ಯ ಅದರಲ್ಲಿ ಅರಳಿದ ಕಮಲದ ಹಾಗೆ ಕಾನುತ್ತಿದ್ದ. ಸಂಜೆಯ ನಸುಗೆಂಪು ವರ್ಣವನ್ನ ಮೋಡಗಳ ಮ್ಯಾಲೆ ಚೆಲ್ಲಿ ಅಲ್ಲಿ ಸ್ವರ್ಗ ಪ್ರತಿಬಿಂಬಿಸಿದಂತೆ ಕಾಣುತ್ತಿತ್ತು. ಕೆಳಗೆ ಶಿವಾಪುರದ ಬದುಕು ಸ್ತಬ್ಧವಾಗಿರುವಂತೆ ಮೌನ ಆವರಿಸಿತ್ತು.

ಬೆಟ್ಟ ಹತ್ತಿ ಹೊನ್ನೆಮರದಡಿಯ ಕಟ್ಟೆಯ ಮೇಲೆ ಕೂತ. ಆ ಮರದಡಿ ಕೂತಾಗ ಯಾರೋ ಗುಡ್ಡದಳತೆಯ ವ್ಯಕ್ತಿಯೊಬ್ಬನ ಮುಂದೆ ಕೂತಂತೆ ಅನುಭವವಾಯಿತು. ಆ ಗಾತ್ರದ ವ್ಯಕ್ತಿ ನಿಜವಾಗಿ ಅಕ್ಕಪಕ್ಕ ಕೂತರೆ…. ಎಷ್ಟು ಭಯಾನಕ ಅಂದುಕೊಂಡು ಆಮೇಲೆ ಶಿವಪಾದ ನಿಲ್ಲುತ್ತಿದ್ದ ಸ್ಥಳಕ್ಕೆ ಹೋಗಿ ನಿಂತುಕೊಂಡ. ಪರಿಮಳಯುಕ್ತವಾದ ಗಾಳಿಯ ಸೇವನೆಯಿಂದ ಶ್ವಾಸಕೋಶಗಳಿಗೆ ಚೈತನ್ಯವೊದಗಿ ಸಂತೋಷವಾಯಿತು. ಕೊಳ್ಳ, ಘಟಪ್ರಭಾ ನದಿ, ಬೆಟ್ಟ, ನಾಚಿಕೆಯಿಂದ ಮರಗಳಲ್ಲಿ ಮುಖ ಮುಚ್ಚಿಕೊಂಡ ಶಿವಾಪುರ - ಇವೆಲ್ಲ ಮನಪಸಂದಾಗಿ ಶೋಭಿಸಿದವು. ವಿಭಿನ್ನ ಸೌಂದರ್ಯದ ಈ ನೋಟದಿಂದ ಶಿಖರಸೂರ್ಯನಲ್ಲಿ ಮಾತ್ಸರ್ಯ ಉಂಟಾಯಿತು. ತನ್ನಲ್ಲಿಗೆ ಒಬ್ಬ ಚಕ್ರವರ್ತಿ ಬಂದಿರುವನೆಂದಾಗಲಿ, ತನ್ನನ್ನು ಇದಕ್ಕಿಂತ ನೂರುಪಟ್ಟು ಆಕರ್ಷಣೀಯ ಸ್ಥಳವನ್ನಾಗಿ ಮಾಡಬಲ್ಲ ದೊರೆ ಬಂದಿರುವನೆಂದಾಗಲೆ ಬಡ ಶಿವಾಪುರಕ್ಕೆ ಗೊತ್ತೇ ಇರಲಿಲ್ಲ!

ಕೆಳಗಿನ ಕೊಳ್ಳ, ಗದ್ದೆಗಳು, ಕಾಡಿನ ಹಸಿರು ಎಲ್ಲವನ್ನು ನೋಡುತ್ತಿದ್ದಂತೆ ಶಿವಪಾದ ಹೇಳುತ್ತಿದ್ದುದು ನೆನಪಾಯಿತು:

“ಕನಕಪುರಿಯವನನ್ನ ಕೇಳು: ‘ನನ್ನಂಥಾ ಬಡವನೇ ಜಗತ್ತಿನಲ್ಲಿಲ್ಲ’ ಅಂತಾನೆ”.

“ಶಿವಪುರದವನನ್ನ ಕೇಳು: ಈ ಹಸಿರು, ಬೆಟ್ಟ, ನದಿ, ಕೊಳ್ಳ, ಆಕಾಶ, ಭೂಮಿ ಎಲ್ಲವೂ ನಮ್ಮದೆ! ನಮ್ಮಂಥಾ ಶ್ರೀಮಂತರು ಯಾರಿದ್ದಾರಪ್ಪಾ?”

ಈ ಮಾತು ಈಗ ನಿಜ ಅನ್ನಿಸಿತು. ‘ಇದೆಲ್ಲಾ ನನ್ನದೇ!’ ಎಂದು ಹೆಮ್ಮೆಯಿಂದ ಕೊಳ್ಳವನ್ನ, ಬೆಟ್ಟದಿಂದ ಇಳಿವ ಘಟಪ್ರಭಾ, ಅದು ಬೀಳುವಲ್ಲಿ ಉಂಟಾದ ಚಂದ್ರಾವತಿ ಮಡು, ಅದರ ಸುತ್ತ ಥರಾವರಿ ಮರಗಳು, ನಿರ್ಭಯದಿಂದ ನೀರು ಕುಡಿಯಲಯ ಬರುವ ಮೃಗಗಳು, ದಂಡೆಯನ್ನು ಬಿಡಲಾರದೆ ಅಲ್ಲೇ ಮಲಗಿ ಕಾಲ ಕಳೆಯುವ ಸೋಂಬೇರಿ ಪ್ರಾಣಿಗಳು, ಮಡುವಿನಲ್ಲಿರುವ ಚಿನ್ನದ ಹರಳುಗಳು, ಮಂಟಪವೊಂದೇ ಎತ್ತರವಾಗಿರುವ ಪುಟ್ಟ ಶಿವಾಪುರ, ಕಡುವಾದ ಹಸಿರು ಘನೀಭೂತವಾದಂತಿದ್ದ ಕಾಡು, ಇದೆಲ್ಲಾ ನನ್ನದೇ! ಹಿಂದೆ ಇಲ್ಲಿದ್ದಾಗ ಯಾವುದೂ ಚಂದ ಕಂಡಿರಲಿಲ್ಲ. ಈಗ ಎಲ್ಲವೂ ಚಂದ ಕಂಡಿತು. ಶಿವಾಪುರದ ಸೌಂದರ್ಯವನ್ನು ಹಡಿದ ಕಣ್ಣುಗಳಿಂದ ಹೀರುವಂತೆ ನೋಡಿದ. ಈಗ ಬೆಳ್ಳಿಯ ನೆನಪಾಯಿತು. ಅವಳ ಭುಜದ ಮೇಲೆ ಎಡಗೈ ಇಟ್ಟು ಜೊತೆಯಲ್ಲಿ ಕೆಳಗಿನ ಶಿವಾಪುರವ ನೋಡುವಂತಾಗಿದ್ದರೆ!

‘ಸೂರ್ಯನ ಕಿರಣಗಳಲ್ಲಿ ಮಿನಿಗುತ್ತಿರುವ ಚಿನ್ನದ ಘಟ್ಟಿ ಈ ಬೆಟ್ಟ, ಈಗ ನನ್ನ ಪದತಲದಲ್ಲಿದೆ! ಎಲಗೇ ಬೆಡಗಿನ ಬೆಳ್ಳಿ, ಈ ಬೆಟ್ಟದ ಮ್ಯಾಲೊಂದು ರಾಜಧಾನಿಯ ನಿರ್ಮಿಸುತ್ತೇನೆ ನಿನಗಾಗಿ! ಭವ್ಯ, ಅದ್ಭುತ ಸೌಧಗಳ ನಗರಿಗೆ ನೀನೇ ಮಹಾರಾಣಿ. ಐವತ್ತಾರು ದೇಶಗಳ ಚಕ್ರವರ್ತಿನಿ! ಐವತ್ತಾರು ದೇಶಗಳಿಗೆ ಕೃಪೆ ಮಾಡುವ ಸ್ಥಳದಲ್ಲಿ ನಿನ್ನ ಕೂರಿಸುತ್ತೇನೆಯೇ ಬೆಳ್ಳಿ!’

‘ಎಷ್ಟು ವರ್ಷಗಳಿಂದ ಇದು ಹೀಗೇ ಇದೆಯಲ್ಲ!’ ಎಂದು ಶಿವಾಪುರದ ಪ್ರಾಚೀನ ಸೌಂದರ್ಯಕ್ಕೆ ಮಾರುಹೋದ! ಎಷ್ಟೊಂದು ಕಾಲ ಸರಿದು, ಏನೆಲ್ಲ ಬದಲಾವಣೆಗಳನ್ನ ಕಂಡಿವೆ ಕನಕಪುರಿಯಂಥ ಸ್ಥಳಗಳು! ಕಾಲದ ಒಂದೊಂದು ಹೆಜ್ಜೆ ಗುರುತುಗಳನ್ನೂ ಲೆಕ್ಕ ಹಾಕಿ ಹೇಳಬಹುದಾದಂತೆ ಕನಕಪುರಿಯ ಲಕ್ಷಣಗಳಿಗೆ. ಆದರೆ ಈ ಶಿವಾಪುರ ಹಾಗಲ್ಲ, ಕಾಲ ಇಲ್ಲೂ ಇದೆ - ಅಖಂಡವಾಗಿ, ತಾನಿಟ್ಟ ಎಲ್ಲಾ ಹೆಜ್ಜೆಗಳ ಜೀವಂತ ಮೊತ್ತವಾಗಿ! ನಾನು ಕಟ್ಟಲಿರುವ ರಾಜಧಾನಿ ನಿರ್ಮಾಣವಾದ ಮೇಲೆ ಈ ಭಾಗ ಹ್ಯಾಗೆ ಕಾಣುವುದೆಂಬ ಕಲ್ಪನೆಯಿಂದ ಪುಳಕಿತನಾದ.

ಇಷ್ಟು ದಿನ ಕನಸಾಗಿದ್ದ ಶಿವಾಪುರ ಈಗ ನನ್ನ ವಶದಲ್ಲಿದೆ. ಮನಸ್ಸು ಮಾಡಿದರೆ ನಾನಿದನ್ನ ಬೂದಿ ಮಾಡಬಹುದು. ಬೇಕಾದರೆ ಇಂದ್ರ ನಗರಿಯಾಗಿ ಪರಿವರ್ತಿಸಬಹುದು. ಎರಡೂ ನನ್ನ ಕೈಯಲ್ಲಿವೆ!

ತಾನು ಮತ್ತು ಬೆಳ್ಳಿ ಎದುರಾಗುವುದನ್ನ ಕಲ್ಪಿಸಿಕೊಂಡ. ‘ಕಳೆದ ಬಾರಿ ಅವಳು ತಿರಸ್ಕರಿಸಿದ್ದರೆ ಅದು ಸಹಜವೆ. ಆಗಿನ್ನೂ ಜಟ್ಟಿಗನಿದ್ದ. ತಾನೊಬ್ಬ ಭಿಕಾರಿಯಾಗಿದ್ದ. ಈಗ ನಾನು ಚಕ್ರವರ್ತಿ! ಒಂದು ಕಡಿಮೆ ಇಪ್ಪತ್ತು ದೇಶಗಳ ರಾಜ ಮಹಾರಾಜರುಗಳೇ ನನ್ನ ಆಜ್ಞೆಗಾಗಿ ಕಾದಿರುವಾಗ ನಿನ್ನಡಿ ಬೆಳ್ಳಿಗಳ್ಯಾರು? ಎಷ್ಟರವರು?’

ಕೆಳಗಿನ ಶಿವಪುರದ ಪ್ರಾಣಿಗಳಂತಿರುವ ಜನಗಳನ್ನು ಜ್ಞಾಪಿಸಿಕೊಂಡು ಖಿನ್ನನಾದ. ನಾನವರಿಗೆ ನಾಗರಿಕತೆ ಕಲಿಸಬೇಕು. ಕಾಡಿಗಿಂತ ಹೆಚ್ಚು ಮಹತ್ವಾಕಾಂಕ್ಷೆಯ, ಹೆಚ್ಚು ಸುಖ ಸೌಲಭ್ಯಗಳುಳ್ಳ, ಹೆಚ್ಚು ಆನಂದವನ್ನ ನೀಡುವ ಜೀವನ ಪದ್ಧತಿಯಿದೆ. ಬರೀ ಪ್ರಾಣಿಗಳಂತೆ ಬದುಕುವುದರಲ್ಲೇ ಮನುಷ್ಯನ ಸುಖ ನಿಲ್ಲುವುದಿಲ್ಲ, ಅದರಾಚೆಗೂ ಇದೆಯೆಂಬುದನ್ನು ಇವರಿಗೆ ತೋರಿಸುತ್ತೇನೆ. ನಿಮ್ಮ ನೆಮ್ಮದಿ ಪ್ರಾಣಿಗಳಿಗಿರುವ ನೆಮ್ಮದಿ ಕಣ್ರಯ್ಯಾ! ಬುದ್ಧಿವಂತರ ನೆಮ್ಮದಿಯಲ್ಲ. ಬುದ್ಧಿವಂತರಾಗಿದ್ದರೆ ಈ ರೀತಿ ಪ್ರಾಣಿಗಳಂತೆ ನೀವು ಇರುತ್ತಿರಲಿಲ್ಲ - ಎಂಬುದನ್ನ ಖಾತ್ರಿ ಮಾಡಿಕೊಡುತ್ತೇನೆ.

“ನಾನು ಅವರಿಗೆ ಚಿನ್ನದ ಹೊಸ ದೇವರನ್ನು ತೋರಿಸುತ್ತೇನೆ. ಅವರ ಗವಿಯಲ್ಲೇ ಇರುವ ಹಡೆಯುವ ಕಲ್ಲಿನ ದೇವರಿಗೆ ಬದಲು, ಹೊಳೆಯುವ, ಹೊಟ್ಟೆ ತುಂಬಿಸುವ ಚಿನ್ನದ ದೇವರನ್ನ ತೋರಿಸುತ್ತೇನೆ. ಮಂಕು ಮರುಳು ಮಾಡುವ ಕತೆ ಹಾಡುಗಳಿಂದಲ್ಲ. ನೇರವಾಗಿ ಕಣ್ಣಿಗೆ ರಾಚುವಂತೆ ಸತ್ಯ ತೋರಿಸುವುದರಿಂದ ಅವರನ್ನು ತಿದ್ದುತ್ತೇನೆ. ಹೊಚ್ಚ ಹೊಸ ಭವ್ಯ ಭವಿಷ್ಯವನ್ನು ತೋರಿಸುತ್ತೇನೆ, ನಾನೇ ನಿಮ್ಮ ಭವಿಷ್ಯ ಅಂತ ಹೇಳ್ತೇನೆ”.

“ಗೊಡ್ಡು ಅಮ್ಮನನ್ನು ಬಿಟ್ಟು ಇನ್ನೊಂದನ್ನು ಕಾಣದ ಈ ಊರಿಗೆ ಕನಕಪುರಿಯ ವ್ಯವಹಾರ ಪ್ರತಿಭೆಯನ್ನ ಕಸಿ ಮಾಡಿ ಬೆಟ್ಟದಗುಂಟ ದೊಡ್ಡ ರಾಜಧಾನಿಯನ್ನು ಕಟ್ಟುತ್ತೇನೆ! ಇನ್ನು ಮುಂದೆ ಇದು ಅಮ್ಮನ ದರಿದ್ರ ಶಿವಪುರವಾಗಿ ಉಳಿಯುವುದಿಲ್ಲ. ಸೂರ್ಯಪುರವಾಗಿ ಐವತ್ತಾರು ದೇಶಗಳ ಬೃಹನ್ನಗರವಾಗಿ ಬೆಳೆಯುತ್ತದೆ”

- ಎಂದು ಅಂದುಕೊಳ್ಳುವಷ್ಟರಲ್ಲಿ ಯಾರೋ ಬಂದಂತೆನಿಸಿ ತಕ್ಷಣ ಹೊನ್ನೆ ಮರದ ಮರೆಗೆ ನಿಂತು ಬಂದವರು ಯಾರು ಎಂದು ಹಣಿಕಿದ. ಒಬ್ಬ ಹೆಂಗಸು, ಅವಳ ಹಿಂದಿನಿಂದ ಒಬ್ಬ ತರುಣ ಇದ್ದ. ಹೆಂಗಸು ಬೆನ್ನ ಮೇಲೆ ಹಸಿಕೂದಲು ಬಿಟ್ಟಿದ್ದಳು. ಮಿಂದು ಒದ್ದೆ ಬಟ್ಟೆಯಲ್ಲೇ ಬಂದಿದ್ದರಿಂದ ಬಟ್ಟೆ ಮೈಗುಂಟ ದೇಹದ ಸಣ್ಣ ದೊಡ್ಡ ಉಬ್ಬುಗಳನ್ನು ಆಕರ್ಷವಾಗಿ ತೋರಿಸುತ್ತಿತ್ತು. ಇನ್ನೂ ಮುಂದೆ ಬಂದಾಗ ನೋಡಿದರೆ ಬೆಳ್ಳಿ! ಶಿಖರಸೂರ್ಯನ ಹೃದಯದ ಬಡಿತ ಹೆಚ್ಚಾಗಿ, ಮುಖಕ್ಕೆ ನೆತ್ತರೇರಿ ಒಂದು ಕ್ಷಣ ಕಣ್ಣು ಮುಚ್ಚಿ ಸುಧಾರಿಸಿಕೊಂಡ. ಅಷ್ಟರಲ್ಲಿ ತರುಣನೂ ಹತ್ತಿರ ಬಂದ. ಸೊಂಟದ ಬಟ್ಟೆ ಬಿಟ್ಟರೆ ಉಳಿದಂತೆ ಅವನೂ ಮಿಂದು ಬಂದುದರಿಂದ ಒದ್ದೆ ಕೂದಲು ಕತ್ತು, ಭುಜಗಳ ಮ್ಯಾಲೆ ಹರಡಿ ಅವನ ಆಕೃತಿಗೊಂದು ಅನುಪಮ ಸೌಂದರ್ಯ ಕೊಟ್ಟಿತ್ತು. ಆಗಂತುಕರಿಬ್ಬರೂ ಆ ಕಡೆ ಈ ಕಡೆ ನೋಡದೆ ನೇರವಾಗಿ ಗವಿಯೊಳಕ್ಕೆ ಹೋದರು. ಈಗಿವರು ಬಂದದ್ದು ಶಿವಪಾದ ನಿರ್ವಾಣವಾದ ನಂತರದ ಮೂರನೇ ಹುಣ್ಣಿಮೆಯ ಶಿವಸೋಮವಾರದಂದು.

## ಅರವತ್ತಾರು

ನಿನ್ನಡಿ ಮತ್ತು ಬೆಳ್ಳಿ ಮಿಂದು ಒದ್ದೆ ಬಟ್ಟೆಯಲ್ಲೇ ಬೆಟ್ಟ ಏರಿ ಶಿವಪಾದ ಹೇಳಿದ ಸಮಯಕ್ಕೆ ಸರಿಯಾಗಿ ಗವಿಗೆ ಬಂದರು. ಮರದ ಮರೆಯಲ್ಲಿ ಅವಿತಿದ್ದರಿಂದ ಶಿಖರಸೂರ್ಯ ಕಾಣಲಿಲ್ಲ. ನೇರವಾಗಿ ಗವಿಯೊಳಕ್ಕೇ ಹೋದರು. ಬೆಳ್ಳಿ ಒಳಗೆ ಬಂದು ನಮಸ್ಕಾರವನ್ನಾಚರಿಸಿ ಅಮ್ಮನ ಮೂರ್ತಿಯ ಮುಂದೆ ಕಣ್ಣು ಮುಚ್ಚಿ ಧ್ಯಾನಸ್ಥಳಾದಳು.

ನಿನ್ನಡಿ ಮೆಲ್ಲಗೆ ಮೆಟ್ಟಲೇರಿ ಅಂತರಂಗದ ಕದ ಸರಿಸಿದ. ಒಳಗೆ ಸಾವಿರ ಹುಣ್ಣಿಮೆಯ - ಬೆಳ್ದಿಂಗಳಿತ್ತು! ನೋಡಿದರೆ ಶಿವಪಾದ ಕೂತ ಸ್ಥಳದಲ್ಲಿ, ಅದೇ ಭಂಗಿಯಲ್ಲಿ ಶಿವಪಾದನೇ ಕೂತಂತೆ ಅವನ ಅಸ್ಥಿ ಪಂಜರ ಕೂತಿತ್ತು. ಲಿಂಗಪೂಜೆಯಲ್ಲಿ ಲಿಂಗನ ಹಿಡಿಯುವಂತೆ ಎಡ ಅಂಗೈಯಲ್ಲಿ ಪ್ರಶಾಂತವಾದ ಸಾವಿರ ಚಂದ್ರ ಪ್ರಭೆಯುಳ್ಳ ಜ್ಯೋತಿಯ ಹಿಡಿದಿದ್ದ. ನೋಡಿ ಸಳ ಸಳ ರೋಮಾಂಚವೆದ್ದು ಜಲ ಜಲ ಬೆವರಿ ಬಿಟ್ಟ. ಊಹಿಸಲಾಗದ ಅನಿರೀಕ್ಷಿತ ಪ್ರಕಾಶದ ಹೊಳೆಯಲ್ಲಿ ಮುಳುಗಿ ಏನು ಮಾಡಬೇಕೆಂದು ತಿಳಿಯದೆ ಚೀರಬೇಕೆಂದಾಗ ಅಸ್ಥಿಪಂಜರದ ಕಡೆಯಿಂದ ಶಿವಪಾದನ ದನಿ ಕೇಳಿಸಿತು.

“ಜ್ಯೋತಿಗೆ ಕೈ ಒಡ್ಡು ಮಗನೇ”.

ನಿನ್ನಡಿ ಮೆಲ್ಲಗೆ ಹೋಗಿ ನಮಸ್ಕಾರವನ್ನಾಚರಿಸಿ ಭಯಭಕ್ತಿಯಿಂದ ಕೈಯೊಡ್ಡಿದ, ಜ್ಯೋತಿ ಮೆಲ್ಲಗೆ ಇವನ ಅಂಗೈಗಿಳಿದು ಅಲ್ಲೇ ಇಂಗಿತು. ಜ್ಯೋತಿಯ ಸ್ಪರ್ಶ ಸುಖದಿಂದ ಗಡಗಡ ನಡುಗಿ “ತಂದೇ! ತಂದೇ!” ಎಂದು ಶಿವಪಾದನ ಸ್ಮರಿಸುತ್ತ ಅವನ ಅಸ್ಥಿಪಾದಂಗಳ ಮೇಲೆ ಕಣ್ಣೀರು ಸುರಿಸಿ, ನಮಸ್ಕರಿಸಿ ಕೆಳಗಿಳಿದು ಬಂದ. ಅವನೀಗ ಶಿವಪಾದನಾಗಿದ್ದ!

ದಿವ್ಯ ಕಾಂತಿಯಿಂದ ಹೊಳೆವ ನಿನ್ನಡಿಯ ಮುಖ ನೋಡಿ ಬೆಳ್ಳಿ ಆನಂದ, ಮೆಚ್ಚುಗೆ ಅಭಿಮಾನಗಳಿಂದ ಚಕಿತಳಾಗಿ ಕಣ್ಣಗಲ ಮಾಡಿಕೊಂಡು ನಿಂತಳು.

ಶಿಖರಸೂರ್ಯ ಗವಿಯ ಹೊರಗೆ ಬಹಳ ಹೊತ್ತು ಕಾದು ನಿಂತಿದ್ದರೂ "ಹೊರಗೆ ಯಾರೂ ಬರಲಿಲ್ಲವಲ್ಲ!" ಅಂದುಕೊಂಡ: ಬೆಳ್ಳಿ ಹ್ಯಾಗಿದ್ದಳೋ ಹಾಗೇ ಇದ್ದಾಳೆ. ಮುಖದಲ್ಲಿ ಮೊದಲಿನ ತುಂಟತನವಿಲ್ಲ. ನಡಿಗೆಯಲ್ಲಿ ಜವಾಬ್ದಾರಿಯ ಭಾರಿ, ಗಾಂಭೀರ್ಯಗಳಿವೆ. ಬಣ್ಣ ಮಾಸಿಲ್ಲ. ಸೌಂದರ್ಯ ಬಾಡಿಲ್ಲ. ಬದಲಾಗಿ ಇನ್ನಷ್ಟು ಸುಂದರಿಯಾಗಿ ಕಂಡಳು.

ಭೇಟಿಯಾದರೆ ಏನೆಂದುಕೊಳಬಹುದು? ಅಥವಾ ಏನು ಮಾಡಬಹುದು? ಕೋಪವಂತೂ ಇನ್ನೂ ಇದೆ. ಆಗಲೇ ನೋಡಿದಾಗಲೂ ಅವಳ ಕಣ್ಣಲ್ಲಿ ಪ್ರಖರವಾದ ಬೆಳಕಿತ್ತು. ಏನಿದ್ದರೂ ಈ ಸಲದ ಭೇಟಿ ಆನಂದದಾಯಕವಂತೂ ಆಗಿರುವುದಿಲ್ಲವೆಂದು ಖಾತ್ರಿಯಾಯ್ತು. ಇನ್ನಷ್ಟು ಸಮೀಪದಿಂದ ನೋಡಬಹುದೆಂದು ಒಳಗೆ ಹೋದ. ಬಾಗಿಲ ಬಳಿಯ ಕಲ್ಲಿನ ಮರೆಯಲ್ಲಿ ಅವರನ್ನೇ ನೋಡುತ್ತ ನಿಂತ.

ಮಗನ ಮುಂದೆ ನಿಂತ ಬೆಳ್ಳಿ ಕಣ್ಣಲ್ಲಿ ಆನಂದಬಾಷ್ಪ ಸುರಿಸುತ್ತ ನಿಂತಿದ್ದಳು. ಏನನ್ನೋ ನೆನೆದು ಹತ್ತಿರ ಬಂದು ಕಣ್ಣೀರೊರೆಸಿ "ಅಬ್ಬೇ!" ಅಂದ ನಿನ್ನಡಿ. ಬೆಳ್ಳಿ ಮೆಲ್ಲಗೆ ಮಗನ ಮುಖ ನೋಡಿದಳು. ಅವನ ಮುಖದ ಕಾಂತಿ ಚಂದ್ರನಂತೆ ಪ್ರಶಾಂತವಾಗಿತ್ತು. ನೋಡಿ ದೃಷ್ಟಿ ತೆಗೆದು ಹಾಗೇ ನಿಂತಳು. ಅಮ್ಮನಿಗೆ ನಮಸ್ಕಾರವನ್ನಾಚರಿಸಿ ಮಗನನ್ನು ಕರೆದುಕೊಂಡು ಹೊರಗೆ ನಡೆದಳು. ಹೊರಕ್ಕೆ ಬಂದೊಡನೆ ಯಾರೋ ಹಿಂದೆ ತಳ್ಳಿದ ಹಾಗೆ ಬೆಳ್ಳಿ ಗಕ್ಕನೆ ನಿಂತಳು. ಎದುರಿಗೆ ಅಪರಿಚಿತ ಬೃಹದಾಕೃತಿಯೊಂದು ಕಾಣಿಸಿಕೊಂಡಿತು. ಅಗಲ ಭುಜದ, ದೃಢವಾದ ಎತ್ತರ ದೇಹದ, ಹಕ್ಕಿಯ ಚುಂಚಿನಂಥ ಚೂಪು ಮೂಗಿನ, ಹದ್ದಿನ ಹೋಲಿಕೆ ಕೊಡುವಂತೆ ಎರಡೂ ಕಿವಿಗಳಲ್ಲಿ ಬೆಳೆದ ಹುಲುಸುಗೂದಲಿನ ಈತನನ್ನ ನೋಡಿದ್ದೇ ಒಂದು ಕ್ಷಣ ಮೊಳಕಾಲು ಸೋತಂತಾಗಿ ಮುಖದ ಮ್ಯಾಲಿನ ಕಳೆ ಬಾಡಿತು. ಮಾರನೇ ಕ್ಷಣವೇ ಜಯಸೂರ್ಯನ ನೆನಪಾಗಿ ಕಣ್ಣಲ್ಲಿ ಕೆಂಪು ಬೆಳಕಾಡಿ ಕಳೆಕಳೆಯಾದಳು. ಮೈಯಿಡೀ ಶಕ್ತಿ ಸಂಚಾರವಾಗಿ, ಅವಯವಗಳು ಬಿಸಿಯೇರಿ ಬಿಗಿದುಕೊಂಡವು. ಮೂಗಿನ ಹೊಳ್ಳೆಗಳಿಂದ ಅವಳಿಗೇ ಕೇಳಿಸುವಂತೆ ಸದ್ದು ಮಾಡುತ್ತ ಉಸಿರಾಡತೊಡಗಿದಳು. ಶಿವಪಾದನ ಮಾತು ನೆನಪಾಗಿ ತಣ್ಣಗಾದಳು.

ಶಿಖರಸೂರ್ಯ ಅಂದುಕೊಂಡ: ಬೆಳ್ಳಿಯ ಕಣ್ಣೆಷ್ಟು ಚೆನ್ನ! ರತ್ನದ ಹರಳುಗಳಂತೆ ಏಕಕಾಲಕ್ಕೆ ಅನೇಕ ಭಾವನೆಗಳಿಂದ ಹೊಳೆಯುತ್ತಿವೆ! ಚೈತ್ರ ಮಾಸದ ಸೂಸಗಾಳಿಯಂತೆ ಅವಳ ದೃಷ್ಟಿ ಎದುರು ಬಂದವರ ಹೃದಯಗಳನ್ನು ಸವರಿಕೊಂಡೇ ಮುಂದುವರಿಯುತ್ತದೆ. ವಯಸ್ಸಾಗಿದೆ, ಸುಖದ ಬೆಳಕಿಲ್ಲ ಮುಖದ ಮ್ಯಾಲೆ, ಆದರೂ ಹಿಂದೆಂದಿಗಿಂತ ಚೆಲುವೆಯಾಗಿ ಕಾಣಿಸುತ್ತಿದ್ದಾಳೆ"!

- ಎಂದುಕೊಳ್ಳುತ್ತ ಬಟ್ಟೆಯಲ್ಲಿ ಹುದುಗಿ ಕಾಣದ ಅವಳ ಅಂಗಾಂಗಳ ವಕ್ರರೇಖೆಗಳನ್ನು ಕಲ್ಪಿಸಿಕೊಂಡ. ಅವಳೂ ತನ್ನನ್ನು ಹೀಗೆಯೇ ಗಮನಿಸುತ್ತಿರಬೇಕು ಅಂದುಕೊಂಡ.

ನನ್ನವಳಿವಳು. ಆದರೆ ಹೆದರಿದ್ದಾಳೆ. ನನಗಲ್ಲ, ತನಗೆ ತಾನೇ ಹೆದರಿದ್ದಾಳೆ. ಹುಚ್ಚು ಹುಡುಗಿ! ಮುಗುಳು ನಕ್ಕು ಮನಸ್ಸಿನಲ್ಲೇ ಹೇಳಿಕೊಂಡ "ನನ್ನನ್ನು ಸೋಲಿಸಬಲ್ಲ ಒಬ್ಬಳೇ ಹೆಣ್ಣು ಇವಳು!"

ಬೆಳ್ಳಿ ಅಂದುಕೊಂಡಳು:

ಭಯಂಕರ ಕೊಳಕ, ಬಲಶಾಲಿ, ಆದರೆ ಸಾವಿನಂಥವ! ಭಯವಾಯಿತಾದರೂ ಆತ್ಮವಿಶ್ವಾಸದಿಂದ ಭಯವನ್ನು ಹೊರ ತಳ್ಳಿ ಉಕ್ಕಿ ಬಂದ ತಿರಸ್ಕಾರವನ್ನ ನಿಯಂತ್ರಿಸಿಕೊಂಡಳು. ಮಗನೂ ಹೆದರಿರಬಹುದೆಂದು ನಿನ್ನಡಿಯ ಕಡೆಗೆ ನೋಡಿದಳು. ಆತ ನಿರ್ಭಾವುಕನಾಗಿ ಕೊನೇಪಕ್ಷ ಒಬ್ಬ ಅಪರಿಚಿತನನ್ನು ನೋಡಿದ ಬೆರಗನ್ನು ಕೂಡ ಪ್ರದರ್ಶಿಸದೆ ನಿಂತಿದ್ದ. ಮಗನ ಭುಜ ತಟ್ಟಿ 'ಬಾ' ಎಂದು ಮುಂದೆ ನಡೆದಳು. ನಿನ್ನಡಿಯೂ ನಡೆದ.

ಅವರು ಹೋದಮೇಲೆ ಶಿಖರಸೂರ್ಯ ಅಂದುಕೊಂಡ: ಬೆಳ್ಳಿಯ ಗಂಡಸುತನ ಗುಂಡುಗಳನ್ನೂ ಮೀರಬಲ್ಲದು. ಅವಳ ಹೆಣ್ಣತನವೂ ಹಾಗೆಯೇ, ಯಾವುದೇ ಕೋಮಲೆಯನ್ನು ಮೀರಬಲ್ಲದು!- ಎಂದುಕೊಳ್ಳುತ್ತ ಗವಿಯನ್ನು ಪ್ರವೇಶಿಸಿದ.

ಶಿವಪಾದ ಇರಲಿಲ್ಲವಾದರೂ ಅವನ ನೆನಪು ನೆರಳಿನ ಹಾಗೆ ಗವಿಯ ತುಂಬ ಅಡ್ಡಾಡಿತು. ಹಿಂದಿನ ಶಿವಪಾದರ ಅಸ್ಥಿಪಂಜರಗಳಿಂದಾಗಿ ಗವಿ ಅವರೆಲ್ಲರ ಆತ್ಮಗಳು ಅಲೆದಾಡುವ ಗೋರಸ್ಥಾನದಂತೆ ಹಿಂದೆ ಕಂಡಿತ್ತು. ಒಮ್ಮೊಮ್ಮೆ ಅವರ ನೆರಳುಗಳೇ ಅಲೆದಾಡುವಂತೆ, ಅಟ್ಟದ ಮೇಲಿಂದ ಪಿಸುನುಡಿದಂತೆ ಕೇಳಿಸಿ ತಕ್ಷಣ ಎಚ್ಚತ್ತು ಸುತ್ತಲೂ ನೋಡಿದ್ದ. ಅಟ್ಟಕ್ಕೆ ಹೋಗಲು ಹಚ್ಚಿದ್ದ ಏಣಿ ಅಸ್ವಾಭಾವಿಕವಾಗಿ ಬಾಗಿದ್ದರಿಂದ ಅದರ ಬಾಗು, ಅದರ ತುದಿಗಿದ್ದ ಅಂತರಂಗ, ಅದರಲ್ಲಿದ್ದಿರಬಹುದಾದ ಅಸ್ಥಿಪಂಜರ - ಇವೆಲ್ಲ ಕನಸಿನಲ್ಲಿಯ ವಸ್ತುಗಳಂತೆ ಕಂಡವು. ತಕ್ಷಣವೆ ಭಯದಿಂದಲ್ಲ ಅಥವಾ ಯಾಕೋ ಏನೋ ಇಲ್ಲೊಂದು ಮಾತಾಡುವ ಮಾನವ ಜೀವ ಇದ್ದಿದ್ದರೆ ಎಷ್ಟು ಚಲೋ ಇತ್ತಲ್ಲ ಅನ್ನಿಸಿತು. ಮುಖ ಮುಟ್ಟಿ ನೋಡಿಕೊಂಡು ತಾನಾದರೂ ಜೀವಂತವಾಗಿದ್ದೇನಲ್ಲಾ - ಅಂದುಕೊಂಡ.

ಶಿವಪಾದನೊಂದಿಗೆ ತಾನು ಇಲ್ಲಿದ್ದ ದಿನಗಳು ನೆನಪಾದವು. ಶಿವಪಾದ ಚಿಕ್ಕವನಾಗಿದ್ದಾಗ ಹೆಂಗಿದ್ದನೋ! ಆದರೆ ಅವನ ಸ್ಥಳದಲ್ಲಿ ಅಮ್ಮನನ್ನು ಚಿತ್ರಿಸಿಕೊಳ್ಳುವುದು ಸುಲಭ. ಅಮ್ಮ ಎಂದರೆ ಮೈತುಂಬ ಕುಂಕುಮ, ಭಂಡಾರ ಮೆತ್ತಿದ ಆಳೆತ್ತರದ ಬಂಡೆ. ತೊಡೆಯ ಮಧ್ಯೆ ತಲೆಕೆಳಗಾಗಿ ಒಂದು ಕೂಸು ಬೀಳುತ್ತಿರುವಂತಿದೆ. ಅಮ್ಮನ ವಿಶೇಷವೆಂದರೆ ಅಗಲವಾಗಿ ತೆರೆದ ಎರಡು ದೊಡ್ಡ ಕಣ್ಣುಗಳು!

ಆ ಕಣ್ಣುಗಳ ಬಗ್ಗೆ ಮೊದಮೊದಲು ತನಗೆ ಯಾವ ಭಾವನೆಗಳೂ ಬರಲಿಲ್ಲ. ಅವುಗಳಲ್ಲಿ ಉಳಿದವರಿಗೆ ಕಂಡ ಭಯಾನಕತೆಯಾಗಲಿ, ಶಿವಪಾದನಿಗೆ ಕಂಡ ಕರುಣೆಯಾಗಲಿ ಯಾವುದೂ ಇವನ ಅನುಭವಕ್ಕೆ ಬರಲಿಲ್ಲ. ಒಂದೇ ಕಡೆಗೆ ಒಂದನ್ನೇ ಒಂದೇ ಭಾವದಿಂದ ನೋಡುವ ಆ ಕಣ್ಣುಗಳನ್ನು ತನ್ನ ಬಗ್ಗೆ ಅಸಮಾಧಾನ, ಕೋಪ ಇದ್ದಂತೆ ಅನ್ನಿಸಿತು.

ಈ ಗವಿ ತನಗೆಂದೂ ಇಷ್ಟವಾಗಿರಲಿಲ್ಲ. ಇದರ ವಿವರಗಳ ಬಗ್ಗೆ ಸರಿಯಾದ ತಿಳುವಳಿಕೆಯೂ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ಬೆಟ್ಟ ಗವಿಗಳ ಹಾಗೆ ಇದೊಂದು ಸಹಜ ಗವಿ ಅಂತಲೂ ಅನ್ನಿಸಿರಲಿಲ್ಲ. ಒಮ್ಮೊಮ್ಮೆ ಮಾತ್ರ ಈ ಗವಿಯನ್ನು ಪ್ರವೇಶಿಸಿದಾಗ ಯಾರದ್ದೋ ದುಃಸ್ವಪ್ನದಲ್ಲಿ ಪ್ರವೇಶ ಮಾಡಿದ ಹಾಗೆ ಅನ್ನಿಸುತ್ತಿತ್ತು. ಆದರೆ ಇವತ್ತು ಹಾಗಾಗಲಿಲ್ಲ. ಈವರೆಗೆ ತಾನು ಕನಸಿಸಿದ ನಿಧಿಯೆಲ್ಲವೂ ಗಟ್ಟಿಯಾಗಿ ಅಖಂಡ ಬಂಡೆಯ ರೂಪದಲ್ಲಿ ನಿಂತಂತೆ ಕಂಡಿತು. ಅನೇಕ ಕಡೆಗಳಲ್ಲಿ ಕೈಯಾಡಿಸಿ ಆನಂದಪಟ್ಟ. ನಾಗಾರ್ಜುನ ಯಾವಾಗ ಗಮನಿಸಿದ್ದನೋ - ಅನೇಕ ಕಡೆ ಅಡ್ಡಾಡುವುದರ ಕೈಗಳು ತಗಲಿ ತಗಲಿ ಸವೆದು ಒಳಗಿನ ಚಿನ್ನ ಹೊಳೆದು ಕಾಣುತ್ತಿತ್ತು. ತಾನು ಇದನ್ನೂ ಗಮನಿಸಿರಲಿಲ್ಲ. ಈಗ ತಾನು ಈವರೆಗೆ ಬಯಸಿದ ಎರಡು ಅಮೂಲ್ಯ ನಿಧಿಗಳು ತನ್ನ ಅಂಗೈಯಲ್ಲಿವೆ ಅನ್ನಿಸಿತು: ಗವಿ ಮತ್ತು ಬೆಳ್ಳಿ!

## ಅರವತ್ತೇಳು

ಬೆಟ್ಟ ಇಳಿದು ಮನೆ ತಲುಪುವುದರೊಳಗೆ ನಿನ್ನಡಿಗೆ ಕನಕಪುರಿಯ ದೊರೆ ಬಂದು ಮುರಿಗೆಪ್ಪನ ತೋಟದ ಗೂಡಿನಲ್ಲಿ ಬಿಡಾರ ಹೂಡಿದ ಸಂಗತಿಯನ್ನು ಜನ ತಿಳಿಸಿದರು. ಕೇಳಿಸಿಕೊಂಡು ನಿನ್ನಡಿ ಶಿವಪಾದನ ನಿರ್ವಾಣದ ವಿಷಯ ತಡವಾಗಿ ತಿಳಿದು ಗೌರವ ಸಲ್ಲಿಸಲಿಕ್ಕೆ ಬಂದಿದ್ದಾನೆಂದು ಸುಮ್ಮನಾದ. ಆದರೆ ಬೆಳ್ಳಿ ಮಾತ್ರ ಎಲ್ಲವೂ ಒಂದು ನೆಮ್ಮದಿಯ ನಿಲುಗಡೆಗೆ ಬಂದಾಗ ಇವನು ಬಂದನಲ್ಲ! ಎಂದು ಅಸಮಾಧಾನ ಹೊಂದಿದಳು. ಅದನ್ನು ತೋರಗೊಡದೆ ಅವಸರ ಮಾಡಿ ಮಗನಿಗಿಂತ ಮುಂದೆ ಮನೆ ಸೇರಿದಳು.

ಮನೆಯೊಳಗೆ ಗೌರಿ ಕೆಂಜಗದಂತೆ ಮುಖ ಮಾಡಿಕೊಂಡು ನಿಂತಿದ್ದಳು. "ಮುದ್ದುವಿಗೆ ಯಾರೇನಂದರು? ಇಲ್ಲಾ ಅವರಪ್ಪ ಬಂದಿದ್ದನೆ?" ಎಂದು ಬೆಳ್ಳಿಗೆ ಹೊಯ್ಕಾಯಿತು. ಅನುಕಂಪೆಯಿಂದ ಹತ್ತಿರ ಹೋಗಿ ಬೆನ್ನು ನೇವರಿಸುತ್ತ,

“ಯಾಕೆ ಮುದ್ದೂ ಹಿಂಗಿದ್ದೀಯಾ? ಯಾರಾದರೂ ಬಂದಿದ್ದರೇನು”? ಅಂದಳು.

“ನನ್ನಪ್ಪ - ಕನಕಪುರಿಯ ಮಹಾರಾಜ ಬಂದಿದ್ದಾನಂತೆ! ಶಿವಪಾದ ಹೋಗಿ ಮಡಿ ಹಾಸಿ ಕರಕೊಂಬಂದು ಮರ್ಯಾದೆ ಮಾಡಬೇಕಂತೆ”.

ಇವಳಿಗೂ ವಿಷಯ ಗೊತ್ತಾಗಿದೆಯೆಂದು ಬೆಳ್ಳಿಗೆ ತಿಳಿಯಿತಾದರೂ ಗೌರಿ ಈ ಪರಿ ಕೋಪಗೊಂಡಾಳೆಂದು ನಿರೀಕ್ಷಿಸಿರಲಿಲ್ಲ. ಅಷ್ಟರಲ್ಲಿ “ಹಾಗಂತ ಯಾರು ಹೇಳಿದ್ದು ಮುದ್ದೂ?” ಎಂದು ಕೇಳುತ್ತ ನಿನ್ನಡಿ ಬಚ್ಚಲು ಮನೆಯಿಂದ ಒಳಗೆ ಬಂದ.

“ಮುರಿಗೆಪ್ಪ ಬಂದು ಹೇಳಿ ಹೋದ”

- ಎಂದು ಹೇಳಿ ಸಿಡುಕಿನ ಮುಖವನ್ನ ತೋರಬಾರದೆಂದು ಪಡಸಾಲೆಗೆ ಹೋದಳು. ತಾಯಿ ಮಗ ಇಬ್ಬರೂ ಪರಸ್ಪರ ಮುಖ ನೋಡಿಕೊಂಡರು. ಆದರೂ ಶಿಖರಸೂರ್ಯನನ್ನು ಭೇಟಿಯಾಗುವುದರಲ್ಲಿ ತಪ್ಪಿಲ್ಲ ಎನ್ನಸಿತು ನಿನ್ನಡಿಗೆ. ಅವನೂ ಇಲ್ಲಿ ಕಲಿತವನೆ. ಶಿವಪಾದನಿಗೆ ಗೌರವ ಸಲ್ಲಿಸಲು ಬಂದ್ದಾನು. ನಾನು ಚಿಕ್ಕವನಾದುರಿಂದ ಹೋಗಿ ಮಹಾರಾಜನಿಗೆ ಗೌರವ ಸಲ್ಲಿಸುವುದು ಶಿಷ್ಟಾಚಾರ. “ಹೋಗಿ ಬರಲೆ ಅಬ್ಬೆ?” ಅಂದ.

ಸ್ವಲ್ಪ ಹೊತ್ತು ಬೆಳ್ಳಿ ಮಾತಾಡಲಿಲ್ಲ. ಆಮೇಲೆ ತನ್ನ ಪಾಡಿಗೆ ತಾನು ಗಡಂಚಿಯ ಮ್ಯಾಲಿನ ಸಂಚಿ ತಗೊಂಡು, ಅದರೊಳಗಿನ ಅಡಿಕೆ ಹೋಳೊಂದನ್ನು ಬಾಯಿಗೆ ಒಕ್ಕೊಂಡಿ, ವೀಳ್ಯದೆಲೆಯ ಶಿರ ಬಿಡಿಸಿ ಸುಣ್ಣವ ಲೇಪಿಸಿ, ಮಡಿಚಿ ಬಾಯಿಗಿಟ್ಟುಕೊಂಡು ಕೂತಾಗ ನಿನ್ನಡಿ,

“ಬಂದ ರಾಜರಿಗೆ ಅವಮರ್ಯಾದೆ ಆಗಬಾರದು. ಹೋಗಿ ಮಾತಾಡಿಸಿ ಬರಲೇನಬೆ?”

ಅಂದ. ಬೆಳ್ಳಿ ಎದ್ದು ಕೊಟ್ಟಿಗೆಗೆ ಹೋಗಿ, ಚಿಮ್ಮುವ ಉಗುಳನ್ನು ನಿರ್ದೇಶಿಸುವಂತೆ ತುಟಿಯ ಮ್ಯಾಲೆರಡು ಬೆರಳಿಟ್ಟುಕೊಂಡು ಪಿಚಕ್ ಎಂದು ಉಗಿದಳು. ಆಮೇಲೆ ತನ್ನ ಅಸಮಾಧನವನ್ನು ನಿಯಂತ್ರಿಸಿಕೊಂಡೇ ಹೇಳಿದಳು:

“ಶಿವಪಾನದ ತಿಥಿ ಅಂತ ಬಂದಿದ್ದಾನು. ಬೂದಿ ಪಡಕೊಂಡು ಹೋದಾನು”

“ಆದರೂ ಮಹಾರಾಜ ಅಂದರೆ....”

“ಅಯ್ತಪ್ಪ, ನಿನ್ನ ಮಡದಿಗೂ ಒಂದು ಮಾತು ಹೇಳು”

ಇದನ್ನೆಲ್ಲ ಕೇಳಿಸಿಕೊಳ್ಳುತ್ತ ಗೌರಿ ಆಗಲೇ ಮಡಸಾಲೆಯ ಬಾಗಿಲಿಗೆ ಬಂದು ಕದಕ್ಕೊರಗಿ ನಿಂತಿದ್ದಳು. ನಿನ್ನಡಿ ಅವಳ ಕಡೆಗೆ ನೋಡಿದ:

“ಹೋಗೋದಾದರೆ ಹೋಗು; ಆದರ ಅವ ನಮ್ಮ ಮನೆಗೆ ಬರಕೂಡದು”

ಎಂದು ಹೇಳಿ ಸರನೆ ಒಳಕ್ಕೆ ಹೋದಳು. ಬೆಳ್ಳಿಗೆ ತನ್ನ ಮುದ್ದು ಸೊಸೆಯ ಕೋಪ ತಾಪದ ಪ್ರಥಮ ಪರಿಚಯವಾಗಿ ಹೊಯ್ಕಾಯಿತು. “ಬಲ್ ನನ್ ಸೊಸೆ ಮುದ್ದೇ!” ಎಂದು ಮನಸ್ಸಿನಲ್ಲೇ ಮೆಚ್ಚಿಕೊಂಡು ಕತ್ತು ಹಾಕಿದಳು. “ಆಯಿತು, ಈ ಬಗ್ಗೆ ಹಿರಿಯರೊಂದಿಗಾದರೂ ಚರ್ಚಿಸಬೇಕಲ್ಲ” ಎಂದುಕೊಂಡು ನಿನ್ನಡಿ ಹೊರಟ. ಬೆಳ್ಳಿ ಅಂದುಕೊಂಡಳು: ಮಾರಾಜನಾಗಿ ಕನಕಪುರಿ ಆಳಬೇಕಾದವ ಹೋಗಿ

ನಕಲಿ ಮಾರಾಜನಿಗೆ ಮುಜುರೆ ಮಾಡಿ ಬರ್ತೀನಿ ಅಂತಾನಲ್ಲ! "ಮಾತಾಯೇ ನಿನ್ನ ಲೀಲೆ ತಿಳೀದಮ್ಮಾ!" ಎಂದು ಹೇಳಿ ಸಪ್ಪಳಾಗುವಂತೆ ಚಪ್ಪಾಳೆ ತಟ್ಟಿ ಬೆಟ್ಟದ ಕಡೆಗೆ ಕೈ ಮುಗಿದಳು.

## ಅರವತ್ತೆಂಟು

ಊರು ಉಂಡು ಮಲಗುವುದರೊಳಗೆ ಹಿಂದ ಜನಸೂರ್ಯನಾಗಿದ್ದವನೇ ಈಗ ರಾಜನಾಗಿ ಬಂದ ಸುದ್ದಿ ಬಾಯಿಂದ ಬಾಯಿಗೆ ಹಬ್ಬಿ ಶಿವಾಪುರದ ಎಲ್ಲ ಜನರಿಗೆ ತಲುಪಿಯಾಗಿತ್ತು. ಮಂಟಪದ ಬಳಿ ಜನ ಸೇರಿ ರಾಜನ ದ್ರೋಹ, ತಾಯ್ಗುಂಡತನಗಳ ಬಗ್ಗೆ ಬಾಯಿಗೊಂದೊಂದು ಅಂದು ತಲೆಗೊಂಡು ಶಾಪ ಹಾಕಿದರು. ಅನೇಕರ ಮಾತುಗಳಲ್ಲಿ ಮಗಳನ್ನು ಮದುವೆಯಾದ ಸೇಡು ಇತ್ಯಾದಿ ವಿಷಯಗಳಿದ್ದರೂ ಮುಖ್ಯವಾಗಿ ಇದು ಬೆಟ್ಟ ಮತ್ತು ಕನಕಪುರಿ ಎದುರುಬದುರಾದ ಸಂಗತಿಯೆಂಬಂತೆ ಚಿತ್ರಿಸುವ ಮಾತುಗಳೇ ಹೆಚ್ಚಿಗಿದ್ದವು.

ಮೂರು ತಾಸು ರಾತ್ರಿಯಾದರೂ ಊರು ಈ ದಿನ ಮಲಗಿರಲಿಲ್ಲ. ಶಕೆ ಹೆಚ್ಚಿದ್ದರಿಂದ ಒಂದೆರಡು ಹನಿ ಮಳೆ ಹನಿಯಬಹುದೆಂದೂ ಜನ ಹಾರೈಸುತ್ತಿದ್ದರು. ಮಂಟಪದ ಬಳಿಯಿದ್ದ ಪಂಜಿನ ಬೆಳಕಲ್ಲದೇ ಮನೆಗಳ ಚಿಕ್ಕ ಪುಟ್ಟ ಕಿಟಕಿಗಳಿಂದ ಹೊರಚೆಲ್ಲುತ್ತಿದ್ದ ಬೆಳಕಿನಿಂದಲೂ ಮಂಟಪದ ಅಸ್ಪಷ್ಟ ಆಕೃತಿ ಕಾಣುತ್ತಿತ್ತು. ಈ ಮಧ್ಯೆ ಚಂಡೀದಾಸ ಕನಕಪುರಿ ದಿವಾಳಿಯೆದ್ದ ಸ್ಥಿಯನ್ನು ವರ್ಣನೆ ಮಾಡುತ್ತಿದ್ದ. ಧಾನ್ಯದ ಅಭಾವದಿಂದ ಎಲ್ಲೆಲ್ಲಿಂದಲೋ ತಂದ ಧಾನ್ಯವನ್ನು ವರ್ತಕರು ಬಚ್ಚಿಟ್ಟು ತಿಂದುಕೊಂಡಿದ್ದರೆ, ಇಲ್ಲದವರು ಅವರ ಮನೆಗಳಿಗೆ ಕನ್ನ ಹಾಕಿ ಚಿನ್ನ ಬಿಟ್ಟು ಧಾನ್ಯ ಕುದಿಯುವ, ಅಕಸ್ಮಾತ್ ಸಿಕ್ಕುಬಿದ್ದರೆ ಚಿನ್ನ ಕೊಟ್ಟು ಪಾರಾಗುವ ದೃಶ್ಯವನ್ನಾತ ಹೃದಯಂಗಮವಾಗಿ ವರ್ಣನೆ ಮಾಡುತ್ತಿದ್ದ. ಊರು ಮತ್ತು ಅರಮನೆ ತುಂಬ ಸೈನಿಕರೇ ತುಂಬಿರುವದನ್ನು ಹೇಳಿ ಜನ ಯಾವಾಗೆಂದರೆ ಆವಾಗ ದಂಗೆ ಏಳುವ ಸ್ಥಿತಿಯಲ್ಲಿದ್ದಾರೆಂದೂ ಹೇಳುತ್ತಿದ್ದ. ಹೇಳುತ್ತ ಆಕಾಶದ ಕಡೆ ನೋಡಿ "ಅರೆ!" ಅಂದಾಗ ಎಲ್ಲರೂ ಆಕಡೆ ನೋಡಿದರು. ತೆಂಕು ದಿಕ್ಕಿನಲ್ಲಿ ಉಲ್ಕೆಯೊಂದು ಉದುರಿ ಬಿಟ್ಟ ಬಾಣದ ಹಾಗೆ ಕೆಳಗೆ ಬಿತ್ತು. ಎಲ್ಲರೂ ಉಸಿರು ಬಿಗಿಹಿಡಿದು ನೋಡಿದರು. ಅದು ಬಿದ್ದಾಗ ತಮಗೆ ಗೊತ್ತಿಲ್ಲದಂತೆ ತುಟಿಯ ಮೇಲೆ ಬೆರಳಿಟ್ಟುಕೊಂಡು "ಹಾ!" ಎಂದರು. ಅನೇಕರು ಸಣ್ಣ ದನಿಯಲ್ಲಿ ಹೇಳಿದರೂ ಏಕಕಾಲದಲ್ಲಿ ಹೇಳಿದ್ದರಿಂದ ಅದೊಂದು ದೊಡ್ಡ ಉದ್ಗಾರವಾಗಿ ಕೇಳಿಸಿತು. ಬೆಟ್ಟದ ಮೇಲಿದ್ದ ಮೋಡ ಈಗ ಮೇಲೇರಿ ಅಸ್ಪಷ್ಟವಾಗಿ ಮೂಡಿದ್ದ ಚಂದ್ರನನ್ನಾವರಿಸಿ ದೊಡ್ಡ ಉದ್ಗಾರವಾಗಿ ಕೇಳಿಸಿತು. ಬೆಟ್ಟದ ಮೇಲಿದ್ದ ಮೋಡ ಈಗ ಮೇಲೇರಿ ಅಸ್ಪಷ್ಟವಾಗಿ ಮೂಡಿದ್ದ ಚಂದ್ರನನ್ನಾವರಿಸಿ ದೊಡ್ಡ ಗಿಡುಗನ ಹಾಗೆ ಕೂತುಕೊಂಡಿತ್ತು. ಎಲ್ಲರೂ ತಂತಮ್ಮ ಕರಿ ವಿಚಾರಗಳಿಂದ, ತಮ ತಮಗೆ ತಿಳಿದಂತೆ ಉಲ್ಕಯೆ ಫಲಾಫಲಗಳನ್ನು ಊಹಿಸುತ್ತ ಪರಿಣಾಮ ಸರಿಕಾಣದೆ ಭೀತರಾದರು.

ಅಂದು ಮಗ ಶಿವಪಾದನಾದುದರಿಂದ ಬೆಳ್ಳಿ ಒಬ್ಬಳೇ ಊರ ಹೊರಗಿನ ಕಪಲಿ ದಿನ್ನಯೆ ಮೇಲಿನ ಜಟ್ಟಿಗನ ಪಾದ ಪಡೆಯಲು ಗುಡಿಗೆ ಬಂದಿದ್ದಳು. ಮಳೆಯ ಸಂಭವವಿದ್ದುದರಿಂದ ಮೋಡಗಳಲ್ಲಿದ್ದ ಚಂದ್ರ ಅಸ್ಪಷ್ಟವಾಗಿದ್ದ. ಆಕಾಶದಲ್ಲಿ ಅಷ್ಟಾಗಿ ಚಿಕ್ಕೆಗಳು ಕಾಣಿಸುತ್ತಿರಲಿಲ್ಲ. ಕಾಣುವ ಒಂದೆರಡು ಚಿಕ್ಕೆಗಳೂ ಮಸಕಾಗಿದ್ದವು. ದೂರದಿಂದ ಹುಲ್ಲಿನ ವಾಸನೆ ಬರುತ್ತಿತ್ತು. ನದಿಯ ಕಡೆಯಿಂದ ತಂಪು ಬೆರೆತ ಗಾಳಿ ಬೀಸಿ ಕೆನ್ನೆ ತೀಡಿ ಅವಳ ಮುಂಗುರುಳನ್ನು ಊದಿ ಹಣೆಯ ಮೇಲೆ ಹಾರಿಸಿತಲ್ಲದೆ ಸೆರಗನ್ನೂ ಓರೆ ಮಾಡಿತು. ಮರದೆಲೆಗಳ ಮರ್ಮರ ಬಿಟ್ಟು ಉಳಿದಂತೆ ರಾತ್ರಿ ನಿಶ್ಯಬ್ದವಾಗಿತ್ತು. ಸಾಮಾನ್ಯವಾಗಿ ಅವಳು ಗುಡಿಗೆ ಬಂದಾಗ ಜಟ್ಟಿಗ ನೆರಳಾಗಿ ಮೂಡಿ ಬಳಿ ಸುಳಿಯುತ್ತಿದ್ದ. ಇವತ್ತು ಬರಲಿಲ್ಲ. ಅವಳಿಗದು ನೆನಪೂ ಆಗಲಿಲ್ಲ.

ಶಿಖರಸೂರ್ಯ ಬಂದಾಗಿನಿಂದ ಅಸಮಾಧಾನದಿಂದ ಚಡಪಡಿಸಿ ಏನೂ ಮಾಡಲಾರದ್ದಕ್ಕೆ ತನ್ನನ್ನು ತಾನೇ ಹಿಂಸಿಸಿಕೊಂಡಿದ್ದಳು. ಶಿಖರಸೂರ್ಯನ ಪಾಶವೀಶಕ್ತಿಯ ಎದುರು ತಾವ್ಯಾರೂ ನಿಲ್ಲುವುದು ಶಕ್ಯವಿಲ್ಲೆನಿಸಿ ನಿರಾಸೆಯಿಂದ ಕಂಗಾಲಾಗಿದ್ದಳು. ಇಷ್ಟು ವರ್ಷಗಳ ತನಕ ಜಟ್ಟಿಗನ ನೆನಪನ್ನು ಕಾಪಾಡಿಕೊಂಡಂತೆ, ಶಿಖರಸೂರ್ಯನ ದ್ರೋಹದ ಸೇಡನ್ನೂ ಕಾಪಾಡಿಕೊಂಡು ಬಂದಿದ್ದಳು. ಆದರೆ ಆತ ಪುನಃ ಸಿಕ್ಕಾನೆಂಬುದನ್ನ ಅವಳು ಕನಸು ಮನಸಿನಲ್ಲಿಯೂ ಯೋಚಿಸಿರಲಿಲ್ಲ. ಈಗ ಸಿಕ್ಕಿದ್ದಾನೆ ತಮ್ಮೆಲ್ಲರ ಒಟ್ಟಾರೆ

ಶಕ್ತಿಯ ನೂರು ಪಟ್ಟು ಬಲಾಢ್ಯನಾಗಿ! ತನ್ನ ಅಸಹಾಯಕತೆ ನೆನೆದು ಗುಡಿಯ ಕಡೆ ಮುಖ ಮಾಡಿ "ಏನ್ ಮಾಡಲೋ ನನ್ನ ಜಟ್ಟಿಗಾ!" ಎಂದು ಕಣ್ಣೀರಿಂದ ಕೆನ್ನೆ ತೊಯ್ಸಿಕೊಂಡಳು.

ಈವರೆಗೆ ಜಟ್ಟಿಗ ಕರೆದಾಗ ನೆನಪಿಗೆ ಬರುತ್ತಿದ್ದ. ಕಲ್ಪನೆಯ ಮಾತಾಡಿ ಜೊತೆ ಕೂಡುತ್ತಿದ್ದ. ಮಗನ ಬಗ್ಗೆ ಹೇಳಲು ಪ್ರೋತ್ಸಾಹಿಸುತ್ತದ್ದ. ಅವನ ಚೇಷ್ಟೆಗಳನ್ನು ವರ್ಣಿಸಿದರೆ ಸಂತೋಷಪಡುತ್ತಿದ್ದ. ತಪ್ಪಿ ಕೂಡ ಜಯಸೂರ್ಯನ ನೆನಪು ತೆಗೆಯುತ್ತಿರಲಿಲ್ಲ. ಅದಕ್ಕೇ ಇರಬೇಕು: ಈ ದಿನ ಜಟ್ಟಿಗನೂ ಅವಳ ನೆನಪಿಗೆ ಸುಳಿದಿರಲಿಲ್ಲ. ಸಾಯಬೇಕೆನ್ನಿಸಿತು. ತಾಯೀ ನನ್ನನ್ನ ನಿಂತ ನೆಲದಲ್ಲೇ ಯಾಕೆ ಮುಚ್ಚಬಾರದು?

ಈಗ ಹೊಂಗೆ ಮರದ ಮರ್ಮರ ಹೆಚ್ಚಾಯಿತು. ಜಟ್ಟಿಗ ಮೊದಲ ಬಾರಿ ಬಂದು ಮೆಲ್ಲಗೆ ದನಿ ಮಾಡಿ ಕರೆದ ನೆನಪಾಯಿತು. ಪ್ರೇಮಾಂಕುರದ ಮೊದಲ ದಿನ ಸಪ್ಪಳಾಗದ ಹಾಗೆ ಇದೇ ಮರದ ಬಳಿ ಕರೆತಂದು ಇದೇ ಹೊತ್ತಿನಲ್ಲಿ ಮುಖದ ತುಂಬೆ ಮುದ್ದಾಡಿ ಮುಖವನೆಂಜಲು ಮಾಡಿದ್ದ. ತಾನೆಷ್ಟು ಪೆದ್ದಿಯಾಗಿದ್ದಳೆಂದರೆ ಒರೆಸಿಕೊಳ್ಳುತ್ತ ಪುನಃ ತನ್ನನ್ನು ಅವನ ಬಾಯಿಗೊಡ್ಡುತ್ತ ನಿಂತಿದ್ದಳು. ಆಗಲೂ ರಾತ್ರಿಯ ಶ್ರೀಮಂತಿಕೆ ಹೀಗೆ ಇತ್ತು. ಆದರೆ ಬಾನ ತುಂಬ ಚಿಕ್ಕೆಗಳಿದ್ದವು. ಹಾಗೆ ಒರೆಸಿಕೊಂಡಷ್ಟೂ ಅವನು ಕೆನ್ನೆ ತುಟಿಗಳನ್ನು ಕಚ್ಚಿ ನೆಕ್ಕುತ್ತಿದ್ದ. ಕೊನೆಗವನು ತುಟಿ ಹೀರುತ್ತ ಕೈಯಾಡಿಸಿದಾಗ ಥರಥರ ನಡುಗಿದ್ದಳು. ಅವನು ನಗುತ್ತ ತನ್ನ ಚಿಗುರುಮೀಸೆ ಕೊರೆವ ಗಡ್ಡಗಳಿಂದ ಕೆನ್ನೆ ತುರಿಸಿದ್ದ. ತಕ್ಷಣ ಚಿರತೆಯ ಕಂಡಂತಾಗಿ ಬೇಡಬೇಡವೆಂದರೂ ಜಯಸೂರ್ಯನ ನೆನಪಾಯಿತು. ಅವನ ದ್ರೋಹದ ನೆನಪಾಯಿತು. ಉಳಿದದ್ದೆಲ್ಲ ಮಾಯವಾಗಿ ಸೇಡು ಹೆಡೆ ತೆರೆದು ಮನಸ್ಸಿನ ತುಂಬ ಅಡತೊಡಗಿತು. ಮರದಲ್ಲಿ ಗಾಳಿ ಇನ್ನಷ್ಟು ಜೋರಾಗಿ ಬೀಸಿತು. ಪಡುವಣದಲ್ಲಿ ಮಿಂಚಾಡಿ ಬೆಳಕು ಚಿಮ್ಮಿ ಆಕಾಶ ಹಲ್ಲು ಕಿರಿದು ಮರೆಯಾಯಿತು. ಕೊಳ್ಳದಲ್ಲಿ ಗುಡುಗಿನ ಪ್ರತಿಧ್ವನಿ ಕೇಳಿಸಿತು. ಮಗ, ಸೊಸೆ ಕಾಯುತ್ತಿರಬಹುದೆನ್ನಿಸಿ ಹೊರಟಳು. ಅಷ್ಟರಲ್ಲಿ ಯಾರೋ ಬಂದ ಹಾಗೆ ಹೆಜ್ಜೆ ಸಪ್ಪಳ ಕೇಳಿಸಿತು.

ತಕ್ಷಣ ನಿಂತು ಆಸುಪಾಸು ಹಿಂದೆ ಮುಂದೆ ನೋಡಿದಳು. ಹೆಜ್ಜೆ ಸದ್ದು ಕೇಳಿಸಲಿಲ್ಲ. ಭ್ರಮೆಯಿಂರಬಹುದೇ? ಮಿಕ ಬಂದಿರಬಹುದೇ? ಮತ್ತೆ ಒಂದೆರಡು ಕಳ್ಳ ಹೆಜ್ಜೆ ಸದ್ದು ಕೇಳಿಸಿ ಚಿರತೆಯೇ ಇರಬಹುದೆಂದುಕೊಂಡು ಕಣ್ಣಿನಿಂದ ಕತ್ತಲನ್ನು, ಕಿವಿಯಿಂದ ಗಾಳಿಯನ್ನು ಭೇದಿಸುತ್ತ ನಿಂತಳು. ಹೆಜ್ಜೆಯ ಸದ್ದು ಅನುಮಾನದಲ್ಲಿ ನಿಂತುಕೊಂಡಿತು. ಯಾರೋ ಗಂಡಸು ಕೆಮ್ಮಿದ. ಅದು ಜಯಸೂರ್ಯನ ಧ್ವನಿ! "ಈ ಮಿಕವನ್ನು ನಾನು ಎರಡನೆಯ ಸಲ ಕ್ಷಮಿಸಲಾರೆ!"

ಬೆಳ್ಳಿ ಅಲುಗಲಿಲ್ಲ. ಮೈಯಂತೆ ಮೈಯೆಲ್ಲ ಬೆಂಕಿ ಹೊತ್ತಿ ದೀಪ ಕಂಬದ ಹಾಗೆ ಉರಿಯತೊಡಗಿದಳು. ಹೃದಯ ಜೋರಾಗಿ ಎದೆಗೂಡನ್ನು ಒದೆಯುತ್ತಿರುವ ಹಾಗನ್ನಿಸಿತು. ಅಷ್ಟರಲ್ಲಿ ಮೋಡಗಳನ್ನು ಹರಿದು ಮಿಂಚು ಹೊಳೆದು ಹೊಂಗೆ ಮರದಡಿಯ ಬೆಳ್ಳಿಯನ್ನೂ ಅವಳೆದುರು ಬೇಟೆಗಾಗಿ ಹೊಂಚಿನಿಂತ ಶಿಖರಸೂರ್ಯನನ್ನೂ ತೋರಿಸಿತು. ಇಬ್ಬರೂ ಮಾತಾಡಲಿಲ್ಲ. ಆಮೇಲೆ ಶಿಖರಸೂರ್ಯನೇ ಆಶ್ಚರ್ಯ ಮತ್ತು ಆನಂದಗಳನ್ನು ಬೆರೆಸಿ "ಬೆಳ್ಳಿ!" ಅಂದ. ಮರದೆಲೆಯ ಮರ್ಮರ ಹೆಚ್ಚಾಯಿತು. ಶಿಖರಸೂರ್ಯ ಸಮೀಪ ಬಂದು ಹೇಳಿದ: "ಗುಡಿಯನ್ನು ನೋಡಿಕೊಂಡು ಹೋಗೋಣ ಅಂತ ಬಂದೆ".

ಅವಳ ಹಗೆ ಎಲ್ಲಿ ಹೋಯಿತೋ, ಹೆಸರಿಸಲಾಗದ ಭಯ ಆವರಿಸಿತು. ಬೆಳ್ಳಿಗೆ ಅವನ ದನಿ ಕೇಳಿಸಿತೇ ವಿನಾ ಮಾತು ಕೇಳಿಸಲಿಲ್ಲ. ಸುದೀರ್ಘ ನಿಟ್ಟುಸಿರು ಬಿಟ್ಟು 'ನಾನ್ಯಾಕೆ ನಿಂತುಕೋಬೇಕು?' ಅಂದುಕೊಂಡು ತಾನು ಹೆದರಿಲ್ಲವೆಂದು, ನಿನ್ನ ಬಗ್ಗೆ ನನ್ನಲ್ಲಿ ತಿರಸ್ಕಾರವೆಂದು ತೋರಿಸಲು ಹೊರಟಳು. ಶಿಖರಸೂರ್ಯ ಕೈಚಾಚಿ ಅಡ್ಡಗಟ್ಟಿದ. ಅವಳ ಉಸಿರಾಟದ ಬಿರುಸು ಅವನಿಗೂ ಕೇಳಿಸಿತು. ಕಣ್ಣು ಕಿಸಿದು ನೆರಳಿನಂತಿದ್ದ ಅವನ ಮುಖ ನೋಡುತ್ತ ಹಾಗೇ ನಿಂತಳು. ನರ ನರಗಳಲ್ಲಿ ಕೋಪ ಕುದಿಯುತ್ತ ಮೈಗೆ ಆ ಕುದಿತ ಕೇಳಿಸುವಂತೆ ಹರಿದಾಡಿತು.

"ನನ್ನನ್ನು ನೀನಿನ್ನೂ ಕ್ಷಮಿಸಿಲ್ಲವೇ ಬೆಳ್ಳಿ?"

ಹಾಗೇ ಬಹಳ ಹೊತ್ತು ನಿಂತುದರಿಂದ ಇರಬೇಕು ಚಳಿ ಅವಳನ್ನಾವರಿಸಿತು. ಧೈರ್ಯ ಮಾಡಿ ಹೆಜ್ಜೆ ಮುಂದಿಟ್ಟಳು.

"ನಿಂತಕೊ ಬೆಳ್ಳಿ, ನನ್ನ ಕಂಡರೆ ಭಯವೆ?"

ಈಗ ಬಾಯಿಬಿಡಲೇ ಬೇಕಾಯಿತು.

"ಭಯ ಯಾಕೆ ಬರಬೇಕು? ನೀನೇನು ಹುಲಿಯ? ಚಿರತೆಯೆ?

"ಭಯವಾಗದಿದ್ದರೆ ಒಂದು ಗಳಿಗೆ ನಿಂತುಕೊಂಡು ಮಾತಾಡಬಹುದಲ್ಲ?"

"ಯಾಕೆ ಮಾತಾಡಬೇಕು? ಯಾರೊಂದಿಗೆ ಮಾತಾಡಬೇಕು? ನೀನೇನು ಹತ್ತಿದವನ? ಹೊಂದಿದವನ? ಬಂಧುವ? ಬಳಗವ?"

"ನಿನ್ನ ಮನೆಯಲ್ಲಿ ಒಂದು ಕಾಲಕ್ಕೆ ಅತಿಥಿಯಾಗಿದ್ದವನು ಅಂತಾದರೂ ಮಾತಾಡಬಹುದಲ್ಲಾ?"

"ಹೌದು ಆಸರೆ ಕೊಟ್ಟವನನ್ನ ಕೊಂದು. ಅವನ ಮಡದಿಯನ್ನೇ ಹೊಲೆ ಮಾಡಲಿಕ್ಕೆ ಬಂದವನಲ್ಲಾ! ಅದಕ್ಕೆ ಮಾತಾಡಿಸಬೇಕೇನಪ್ಪಾ?"

"ಹಳೆಯದನ್ನ ಮರೆಯೋದೇ ಇಲ್ಲವ ನೀನು?"

ಎಂದು ಅವಳಿಗೆ ಗೊತ್ತಾಗದಂತೆ ಕೊಂಚ ಸಮೀಪವಾದ. ಅವಳ ಕೋಪ ಅವನ ಬಗೆಗಿನ ಹೇಸಿಕೆಯಾಗಿ ಹೇಳಿದಳು:

"ಚಿಕ್ಕವಳಾಗಿದ್ದಾಗ ಒಂದು ಚಿರತೆ ನನಗ ಗುಂಟು ಬಿದ್ದಿತ್ತು. ಹೋದ ಬಂದಲ್ಲಿ ಹೊಂಚಿ ಕೂತಿರುತ್ತಿತ್ತು. ಅದಕ್ಕೇ ನಾನೂ ಜಟ್ಟಿಗನ ಜತೆಗೇ ಇರುತ್ತಿದ್ದೆ. ಒಂದು ದಿನ ಮಧ್ಯಾಹ್ನ ಅದು ಇರಲಿಕ್ಕಿಲ್ಲ ಅಂತ ಒಬ್ಬಳೇ ಬಂದರೆ ಮಳೆಯೊಳಗೆ ಹೊಂಚಿ ಕುಂತಿದೆ! ಬ್ಯಾರೇ ದಾರೀನೇ ಇರಲಿಲ್ಲ. ಕೈಯಲ್ಲಿ ಕೊಡಲು ಹಿಡಕಂಡಿದ್ದೆ. ಅದರ ಕಡೆ ಬೀಸಿ ಎಸೆದ ನೋಡು ನಾನಂಥ ಗುರಿಕಾರುತ್ತೀಯೇನಲ್ಲ. ಅದರ ದೈವವೋ, ನ್ನನ ದೈವವೋ, ಕೊಡಲು ಅದರ ಮಕ್ಕಕ್ಕೆ ತಾಗಿ ಮಿಕ ಸತ್ತೇ ಹೋಯಿತು. ಇಷ್ಟು ದಿನ ನನ್ನನ್ನ ಅಟ್ಟಾಡಿದಿದ ಚಿರತೆಯನ್ನು ಕೊಂಡು ಹಾಕಿದೆ ಅಂತ ಸಂತೋಷ ಆಯ್ತು ನಿಜ. ಅಲ್ಲಿಗೆ ಮುಗೀತಲ್ಲ! ಅದರ ಅದರ ಚರ್ಮ ಗೂಡಿನಾಗ ಹಾಂಗ ಐತಿ. ನೋಡಿದಾಗೊಮ್ಮೆ ನೆನಪಾಗತೈತಿ. ಏನ ಮಾಡಲಿ? ಹೊರಗ ಬಂದರೂ ಆ ನೆನಪು ಚುಚ್ಚೋ ಹಾಂಗ ಹೆಜ್ಜೆ ಇಟ್ಟಾಗೊಮವಮಿ ಚುಚ್ಚತೈತಿ ಚಪ್ಪಲಿ ಬಿಸಾಕಿಧಾಂಗ ಕೆಟ್ಟ ನೆನಪನ್ನ ಬಿಸಾಡಲಿಕ್ಕಾದೀತೇನಪ?"

"ಕಠೋರಳಾಗಬೇಡ ಬೆಳ್ಳಿ; ಕೈ ಮುಗಿಯುತ್ತೇನೆ. ನನ್ನನ್ನ ಅರ್ಥ ಮಾಡಿಕೊ. ನಾನು ಸಂತನಲ್ಲ ನಿಜ. ಆದರೆ ನಿನ್ನ ಸೌಂದರ್ಯವೇ ನನ್ನನ್ನ ರಾಕ್ಷಸನನ್ನಾಗಿ ಪರಿವರ್ತನೆ ಮಾಡಿತು. ನನ್ನಲ್ಲಿಯ ಎಲ್ಲ ಒಳ್ಳೆಯತನ ಮತ್ತು ಕೆಡುಕನ್ನ ಹೊರತರುವ ಶಕ್ತಿ ಇದ್ದವಳು ನೀನೊಬ್ಬಳೇ. ಆದರೆ ಜಟ್ಟಿಗನಿಗೆ ಎಲ್ಲಾ ಕೊಟ್ಟು ಬಿಟ್ಟಿದ್ದೀ ಅಂತ ಗೊತ್ತು. ಆದರೆ ನನಗೇನೂ ಕೊಡಲಿಲ್ಲ. ಸುಖ ಇರಲಿ, ಮನಶಾಂತಿ ಕೂಡ ಕೊಡಲಿಲ್ಲ. ಹುಚ್ಚು ನಿರಾಸೆಗಳನ್ನು ಮಾತ್ರ ಕೊಟ್ಟೆ."

ಎನ್ನುತ ಬಿಕ್ಕಿದವನಂತೆ ಕೊಂಚ ಆರ್ದ್ರತೆಯನ್ನು ಅಭಿನಯಿಸಿ ಮತ್ತೆ ಹೇಳಿದ:

"ನಿನ್ನ ಹಿತಕ್ಕಾಗಿಯೇ ಹೇಳುತ್ತಿದ್ದೇನೆ ಬೆಳ್ಳಿ, ಮಹಾರಾಣಿಯಾಗಿ ಮೆರೆಯಬೇಕಾದ ಸೌಂದರ್ಯವತಿ ನೀನು! ಚಕ್ರವರ್ತಿಯಾದ ತಕ್ಷಣ ನಾನು ಯಾರನ್ನ ಜ್ಞಾಪಿಸಿಕೊಂಡೆ ಗೊತ್ತೆ? ನನ್ನನ್ನು! ಆದರೆ ಈ ಕಗ್ಗಾಡಿನಲ್ಲಿ ಕಾಡುಪ್ರಾಣಿಯ ಹಾಗೆ ಬದುಕುತ್ತಿರೋದನ್ನ ನೋಡಿ ಎಷ್ಟು ಮರುಗ್ತೀನಿ ಗೊತ್ತೆ?"

ಅವನ ಆಸೆಯಿಂದ ಬೆಳ್ಳಿ ಇನ್ನಷ್ಟು ಹೇಸಿಕೊಂಡಳು.

"ಭಲೇ ಭಲೇ! ಎಂಥ ಅವಕಾಶ ಕಳಕೊಂಡ್ನೆಲ್ಲಪೊ!" ಎಂದು ಕೊಂಚ ಆಶ್ಚರ್ಯವನ್ನಭಿನಯಿಸಿ ತಕ್ಷಣ ಸಿಡಿದಳು: -

"ಯೋ ಸರಿಯಾಗಿ ಕೇಳಿಕೋ. ಎಲ್ಲಿದ್ದರೂ ಎಂದಿದ್ದರೂ ಜಟ್ಟಿಗನೇ ನನ್ನ ಒಡೆಯ, ನನ್ನ ಮಾಲೀಕ, ನನ್ನ ಗಂಡ! ಅವನನ್ನ ಕೂಡಿದಾಗ ನಿನ್ನಂಥ ಮಗನನ್ನ ಪಡೀಬೇಕಂತ ಕನಸು ಕಂಡಿದ್ದೆ. ನಿನ್ನಂಥಾ ಸ್ವಭಾವದವನಲ್ಲ. ನಿನ್ನಂಥ ರೂಪದವನು. ನನ್ನ ಜಟ್ಟಿಗನಿಗೆ ನನ್ನೆಲ್ಲ ಪ್ರೀತಿಯನ್ನ ಧಾರೆ ಎರೆದು ಈಗ ನಿನ್ನನ್ನ ಮಗನಾಗಿ ಕಾಣೋವಷ್ಟು ಪ್ರೀತಿ ಮಾತ್ರ ಉಳಿದೈತಿ ಕಣ್ಣಾ! ಹಾಂಗೇ ನಿನಗೂ ಅನಿಸಿದರೆ ಬರೋಬ್ಬರಿ. ಅನ್ನಿಸದಿದ್ದರೂ ನನಗೆ ಬ್ಯಾಸರಿಲ್ಲಪ. ಯಾಕೆಂದರೆ ಕೆಟ್ಟ ಮಗ ಹುಟ್ಟಬಹುದು. ಕೆಟ್ಟ ತಾಯಿ ಇರಬಾರದಲ್ಲ? ಹೊರಡು".

ಈ ಮಾತಿನ ವ್ಯಂಗ ಅವನ ಹೃದಯಕ್ಕೆ ನಟ್ಟಿತಾದರೂ ಮನಸ್ಸಿನಲ್ಲಿ ಗೊಂದಲವಾಯಿತು. ಇದು ಇವಳು ಉದ್ದೇಶಪೂರ್ವಕ ಮಾಡಿದ ಅವಮಾನವೆಂದು ಖಾತ್ರಿಯಾಗಿ ನೆತ್ತರು ಕಾವೇರಿ ಮುಖಕ್ಕಡರಿತು. ಆದರೂ ಸೋಲುವುದಕ್ಕೆ ಮನಸ್ಸಿರಲಿಲ್ಲ. ಈಗ ಸೋತರೂ ಗೆದ್ದರೂ ಇದೇ ಕೊನೇ ಅವಕಾಶವೆಂದು ಅವನಿಗೆ ಗೊತ್ತಿತ್ತು. ಅಸಂಗತ ಹರಟೆಗಳೆಂಬಂತೆ ಮುಖಸ್ತುತಿ ಮಾಡುತ್ತ ಅವಳ ಮೈ ಮರೆಸುವುದಕ್ಕೆ ಸುರು ಮಾಡಿದ:

"ನಾನಿಲ್ಲಿಗೆ ಬಂದಾಗ ಪುಟ್ಟ ಹುಡುಗಿ ನೀನು. ವೀಳ್ಯ ತಿಂದು ಬಾಯ ಒಂದು ಬದಿಗಿಟ್ಟುಕೊಂಡು ಕೆಂಪು ಉಗುಳು ಸೊಸುವ ಮುಗುಳು ನಗೆ ನಗುತ್ತ ಮುಖ ಮ್ಯಾಲೆತ್ತಿ ಮಾತಾಡುತ್ತಿದ್ದೆ. ಚೆಲ್ಲು ಚೆಲ್ಲಾಗಿ ಈಗಷ್ಟೆ ಹೆಂಗಸಾಗಿ ಅರಳುವ ಹುಡುಗಿಯಾಗಿದ್ದೆ. ಚೆಲುವೆ, ಮುಗ್ಧೇ, ಮೃದುವಾಗಿ ಗಂಡಸರನ್ನು ಆಕರ್ಷಿಸುವ ಈ ಮೂರು ಗುಣಗಳ ಬೆರಕೆಯಾಗಿದ್ದೆ. ಈಗಲೂ ನೀನು ಯಾವುದೇ ಗಂಡಸನ್ನು ಹುಚ್ಚು ಹಿಡಿಸಿ ಕೊಲ್ಲಬಲ್ಲೆ. ಈ ವಯಸ್ಸಿನಲ್ಲೂ ನೀನಿಂತ ಸುಂದರಿಯಾದರೆ ನನಗಿನಗನು ಉಳಿಗಾಲವುಂಟೆ ಬೆಳ್ಳಿ?".

ಎಂದು ಹೊಗಳಿ ನೋಡಿದ. ಅಷ್ಟು ಸಮೀಪ ನಿಂತಿದ್ದರೂ ಕೋಪದ ನಿಡುಸುಯ್ಲಿನಿಂದ ಬೆಳ್ಳಿಯ ಎದೆ ಉಬ್ಬಿ ಕೆಳಗಿಳಿಯುವುದು ಕಾಣಲಿಲ್ಲ.

"ನನ್ನ ಹೃದಯವನ್ನ ನೀನೊಮ್ಮೆ ಕದ್ದ ಮೇಲೆ ಅದನ್ನ ಯಾರ್ಯಾರಿಗೋ ಕೊಡಲು ಪ್ರಯತ್ನಿಸಿದೆ. ಆದರೆ ನೀನದನ್ನು ಶಾಶ್ವತವಾಗಿ ಕದ್ದು ಬಿಟ್ಟಿದ್ದು ಗೊತ್ತಾಗಿ ಅಂಥ ಪ್ರಯತ್ನವನ್ನು ಬಿಟ್ಟೆ...."

ಎಂದು ಇನ್ನೊಂದು ಸುಳ್ಳು ಬಿಟ್ಟ.

ತಕ್ಷಣ ಬೆಳ್ಳಿ 'ಮಗ ಕಾಯುತ್ತಾನೆ' ಎಂದು ಹೇಳಿ ಹೊರಡಲು ಹೆಜ್ಜೆ ಇಟ್ಟಳು. ಕಣ್ಣಲ್ಲಿ ಅಶ್ಲೀಲವಾದ ಜೊಲ್ಲು ಸುರಿಸುತ್ತ "ನಿನ್ನ ಮಗ ನನಗೂ ಮಗ ಅಲ್ಲವೆ?" ಅಂದ. ಅವನಲ್ಲಿ ಪುನಃ ದುಷ್ಟತನದ ಪ್ರವಾಹ ಹರಿದು ಇಡೀ ದೇಹವನ್ನು ಉತ್ಸಾಹಗೊಳಿಸಿತು. ಇವನಿಗೆ ಭ್ರಮೆಯೋ, ಹುಚ್ಚೋ - ಇನ್ನಷ್ಟು ದೃಢ ನಿರ್ಧಾರದಿಂದ ಬೆಳ್ಳಿ ಹೇಳಿದಳು.

"ಯೋ ದೊಡ್ಡ ಮನುಷ್ಯ ನನ್ನ ಮಗ ಯಾರು ಗೊತ್ತ? ನಿನ್ನಡಿ ಯಾರು ಗೊತ್ತ? ನೀನು ಕದ್ದು ಕೂತಿದ್ದೀಯಲ್ಲ ಕನಕಪುರಿಯ ಸಿಂಹಾಸನ? - ಅದರ ಹಕ್ಕಿನ ಅಧಿಕಾರಿ - ತರುಣ ಚಂದ್ರ! ಅವನಿಗದು ತಿಳಿದಿಲ್ಲ ಅಂದುಕೋಬ್ಯಾಡ. ನೀನು ಕೂತು ಮೈಲಿಗೆ ಆಯ್ತು ನೋಡು, ನನಗೆ ಆ ಸಂಹಾಸನ ಬೇಡ ಅಂತ ಉಗಿದು ಬಿಟ್ಟವನು. ಅವನ ಎಂಜಲದ ಮೇಲೆ ನೀನು ಕೂತಿದ್ದು. ಅವನ ಮಡದಿ ಅಂದರೆ ನನ್ನ ಸೊಸೆ ಯಾರು ಗೊತ್ತೊ? ವಿಷ ಹಾಕಿದ್ದೆಯಲ್ಲ, ನಿನ್ನ ಮಗಳು ಗೌರಿಗೆ - ಆ ಗೌರಿ ನ್ನನ ಸೊಸೆ! ಗರ್ಭ ಕಳಚಿ ಬೀಳಲಿ ಅಂತ ವಿಷ ಹಾಕಿದ್ದೆಯಲ್ಲ, ಅದೂ ಕಳಚಲಿಲ್ಲ. ಹುಟ್ಟು ಬರಲಿದ್ದಾಳೆ ಕಲ್ಯಾಣಿ! ತಿಳಿಯಿತೇನಪ್ಪ. ನಿನ್ನ ಯೋಗ್ಯತೆ?

- ಎಂದು ಅಣಗಿಸುತ್ತ ವಯ್ಯಾರದಿಂದ ಕೈ ತಿರುವುತ್ತ ಮುಂದುವರಿಸಿದಳು, -

“ಬಂದು ದೊಡ್ಡ ಮನುಷ್ಯ! ನನ್ನ ಮಗ ಅಂತ ! ಇನ್ನೊಂದು ಬಾರಿ ಈ ಮಾತಾಡು ಒದರಿದರೆ..... ಹುಷಾರ್?”

- ಎಂದು ತೋರುಬೆರಳು ತೋರುತ್ತ ತಾಕೀತು ಮಾಡಿ ಹೊರಟಳು. ಶಿಖರಸೂರ್ಯ ತೀವ್ರ ಆಘಾತದಿಂದ ತತ್ತರಿಸಿ ಹೋದ. ಮಗಳು ಜೀವಂತವಿದ್ದದ್ದು, ಅದು ತನಗೂ ತನ್ನ ಬೇಹುಗಾರರಿಗೂ ತಿಳಿಯದೇ ಇದ್ದದ್ದು, ನಿನ್ನಡಿಯ ಮೂಲಕ ಎಲ್ಲರಿಗೂ ಗೊತ್ತಾದದ್ದು - ಈ ಹಡಬೆ ತನ್ನ ಪ್ರೀತಿಯನ್ನ ನಿರಾಕರಿಸಿದ್ದರು - ಇದೆಲ್ಲವೂ ಸೇರಿ - ಇದೇ ತನ್ನ ಮತ್ತು ಬೆಳ್ಳಿಯ ಕೊನೇ ಭೇಟಿಯೆಂದು, ಅದು ಕೂಡ ಅವಮಾನಕರವಾದ ಸೋಲಿನಲ್ಲಿ ಮುಗಿಯಿತೆಂದು ಖಾತ್ರಿಯಾಯ್ತು. ತಕ್ಷಣ ಅವನಲ್ಲಿ ದುಷ್ಟತನದ ಘೋರವೂ ವಿಕಾರವೂ ಆದ ಭಾವನೆಗಳುಕ್ಕಿ ಅವನ ಹೃದಯ ಭೀಕರ ಪೈಶಾಚಿಕ ಭಾವನೆಗಳಿಂದ ತಳಮಳಗೊಂಡಿತು. ಕಿವಿಯ ಕೂದಲು ಜಾಲಿಯ ಮುಳ್ಳಿನಂತೆ ಸೆಟೆದವು. ಹಲ್ಲು ಮಸೆದಂತೆ ಅವಡುಗಚ್ಚಿ ಕಚ್ಚಿಯಾದರೂ ಇವಳನ್ನು ಕೊಲ್ಲಬೇಕೆಂದು ನಿರ್ಧರಿಸಿ ರಾಕ್ಷಸ ಹೆಜ್ಜೆಗಳನ್ನಿಡುತ್ತ ಹೋಗಿ ಬೆಳ್ಳಿಯನ್ನು ಅಡ್ಡಗಟ್ಟಿ ಎಡಗೈ ಹಿಡಿದು ಕ್ಷಣಕಾಲ ಆಸೆಯಿಂಧ ನೋಡುವಂತೆ ಕಣ್ಣಿಂದ ಅವಳ ಮುಖ ನೆಕ್ಕುತ್ತ ನಿಂತ. ಈ ಕ್ಷಣವನ್ನೇ ಕಾಯುತ್ತಿರುವಂತೆ ಬೆಳ್ಳಿಯ ಮೈಯಂತ ಮೈಯೆಲ್ಲ ಕೋಪದ ವಿದ್ಯುತ್ ಸಂಚಾರವಾಗಿ, ಕೆನ್ನೆ ಕಣ್ಣುಗಳಿಗೆ ನೆತ್ತರೇರಿ ಕಣ್ಣಿಗೆ ಹೊಸದಾಗಿ ನುಗ್ಗಿದ ಭಯಾನಕವಾದ ಬೆಳಕನ್ನು ಝಳಪಿಸುತ್ತ “ಬಿ ಕೈ” ಎಂದಳು. ದೃಢ ನಿರ್ಧಾರದಿಂದ, ನಿಧಾನವಾಗಿ ಅಕ್ಷರ ಕಚ್ಚಿ ಹೇಳಿದ:

“ನಮ್ಮ ಈವರೆಗಿನ ಎಲ್ಲಾ ಕತೆಗೆ ಕೊನೆ ಮಾಡುವುದಕ್ಕೆ ಕೊನೆಯದಾಗಿ - ಅಂತಿಮವಾಗಿ ಹೇಳುತ್ತಿದ್ದೇನೆ ಹೆಣ್ಣೇ ಒಂದು ಮುದ್ದು ಕೊಡು, ಬಿಡುತ್ತೇನೆ.”

ಬೆಳ್ಳಿಯ ಮೈಮೇಲೆ ಆವೇಶವಾದಂತೆ ವಿಚಿತ್ರವಾಗಿ ನಡುಗಿದಳು. ಬಲಹಸ್ತ ಕಂಪಿಸಿತು. ಜೋರಾಗಿ ಬೆರಳು ಮಡಿಚಿ ಉಕ್ಕುತ್ತಿದ್ದ ವಿದ್ಯುತ್ ಪ್ರವಾಹ ತಡೆದು ತುಸು ಹೊತ್ತು, ಶಕ್ತಿಯ ಸಂಗ್ರಹಿಸಿದಳು. ತಾನೇನು ಮಾಡುತ್ತಿದ್ದೇನೆಂದು ಅರಿಯದೆ ಬಲ ಹಸ್ತ ಅಗಲಿಸಿ ಫಟಾರೆಂದು ಅವನ ಎಸಗೆನ್ನೆಗೆ ಏಟು ಹಾಕಿದಳು ನೋಡು! ಏಟು ಅವಳದೋ, ಗವಿಯ ಅಮ್ಮನದೋ, ಗುಡಿಯ ಜಟ್ಟಿಗನದೋ, ಮಗ ನಿನ್ನಡಿಯದೋ, ಶಿವಾಪುರದ ಜನಗಳದ್ದೋ - ಇಡೀ ಕೊಳ್ಳದ ತುಂಬ ಪ್ರತಿಧ್ವನಿಸಿತು! ಬಲಾಢ್ಯವಾದ ಅನಿರೀಕ್ಷಿತ ಏಟಿನ ರಭಸಕ್ಕೆ ಶಿಖರಸೂರ್ಯ ತತ್ತರಿಸಿ ಸುಮಾರು ಮೂರು ಮಾರು ದೂರ ಎತ್ತಿ ಒಗೆದಂತೆ ಹಾರಿ ಕಮರಿಗೆ ಬಿದ್ದ! ಕೆಳಗಿನ ಬಂಡೆಗೆ ತಲೆ ತಾಗಿ ಕಣ್ಣಿಗೆ ಕತ್ತಲೆ ಕವಿದು ಎಲ್ಲಿದ್ದೇನೆಂಬುದೇ ಮರೆವಾಗಿ ಕಣ್ಣು ಮುಚ್ಚಿದ.

ಭಯಂಕರ ಆವೇಶದ ರಭಸದಲ್ಲೇ ಬೆಳ್ಳಿ ಬೆರಗಾಗಿ ನಿಂತಿರುವಾಗ “ಅಬ್ಬೇ” ಎಂದು ಕರೆದದ್ದು ಕೇಳಿಸಿತು. ಮನೆಯಲ್ಲಿ ತಾಯಿಯ ಕಾಣದೆ ಬಂದ ನಿನ್ನಡಿ ದೃಶ್ಯದ ಕೊನೆಯ ಅಬ್ಬೆಯ ಆವೇಶವನ್ನು ನೋಡಿದ್ದ. ಮೆಲ್ಲನೆ ಹೋಗಿ ಭುಜ ಹಿಡಿದುಕೊಂಡ. ಅಬ್ಬೆಯ ಮೈ ಬಿಸಿಯೇರಿ ಕಂಪಿಸುತ್ತಿದ್ದಳು. ಮಂದವಾದ ತಿಂಗಳ ಬೆಳಕಿನಲ್ಲಿ ಅವಳ ಮುಖದ ಒಂದೊಂದು ಗೆರೆಯೂ ಹರಿತವಾದ ಆಯುಧದ ಮೊನೆಯಂತೆ ಕಂಡವು. ಮಗ ಕೂಸಿನ ಬೆರಗಿನಲ್ಲಿ ನೋಡುತ್ತ ತಾಯ ತಲೆ ನೇವರಿಸಿ ಪ್ರಾರ್ಥಿಸುವ ದನಿಯಲ್ಲಿ “ಅಬ್ಬೇ ಶಾಂತಳಾಗು. ನಾನು ನಿನ್ನ ಮಗ ನಿನ್ನಡಿ!” ಅಂದ. ಅಷ್ಟು ಸಾಕಾಯಿತು ತಾಯಿಗೆ. ಏರಿದ ಆವೇಶ ಇಳಿದು ತಿಳಿಯಾಗಿ ಈಗಷ್ಟೇ ಒಳಪ್ರವೇಶಿಸಿದ ಶಕ್ತಿಯನ್ನೆಲ್ಲ ಮಮತೆಯಾಗಿ ಪರಿವರ್ತಿಸಿ ಮಗನಿಗದನ್ನು ಹಸ್ತಾಂತರಿಸಲೆಂಬಂತೆ “ಮಗನೇ!” ಎಂದು ತಬ್ಬಿಕೊಂಡಳು.

# ಅರವತ್ತೊಂಬತ್ತು

ನಿನ್ನೆ ರಾತ್ರಿಯ ಮಳೆ ರಭಸದಿಂದ ಸುರುವಾದರೂ ಹೆಚ್ಚು ಸುರಿಯಲಿಲ್ಲ. ಕಾಡಿನ ನಾನಾ ಸಸ್ಯಗಳನ್ನು ತೊಯ್ಸಿ ಅವುಗಳ ವಾಸನೆ ಕಾಡಿನ ತುಂಬ ಇಡುಗುವಂತೆ ಮಾಡಿ ಹಿಂದೆ ಸರಿದಿತ್ತು. ಬೆಳ್ಳಿ ಮೂಡಿದಾಗ ಮೋಡಗಳಿಂದ ಜಾರಿದ ಕುಡುಗೋಲುಚಂದ್ರ ಪಡುವಣದ ಆಕಾಶದಲ್ಲಿ ಒದ್ದೆಯಾಗಿ ಕಾಣಿಸಿಕೊಂಡಿದ್ದ. ಶಿಖರಸೂರ್ಯನಿಗೆ ನಿದ್ದೆ ಬರಲೇ ಇಲ್ಲ. ಕೊಂಡದ ಮುಂದೆ ಕಾಲು ಚಾಚಿ ಕುಂತವನು ಎದ್ದಿರಲಿಲ್ಲ. ಮುಖ ಬಾತು ಉಬ್ಬಿದ ಎಡಗೆನ್ನೆಯನ್ನು ಮುಟ್ಟಿಕೊಳ್ಳಲೂ ಸಾಧ್ಯವಾಗದಷ್ಟು ನೋಯುತ್ತಿತ್ತು. ತಲೆಯಲ್ಲಿ ಮೊಟ್ಟೆಗಾತ್ರದ ಉಬ್ಬು ಕಾಣಿಸಿಕೊಂಡಿತ್ತು. ಕಣ್ಣು ಕೆಂಡದಂತೆ ಹೊಳೆಯುತ್ತಿದ್ದವು.

ಮಾನಸಿಕ ಆಘಾತ ಇನ್ನೂ ಜೋರಾಗಿತ್ತು. ಬೆಳ್ಳಿ ಕೊಟ್ಟ ಏಟಿನಿಂದ ಮೂರು ಮಾರು ಹಾರಿ ಬಿದ್ದಿದ್ದನಲ್ಲ - ಸಾಮಾನ್ಯ ಹೆಣ್ಣಿಗೆ ಈ ಶಕ್ತಿ ಎಲ್ಲಿಂದ ಬಂತು? ಹ್ಯಾಗೆ ಬಂತು? ತಿಳಿಯದಾಗಿತ್ತು. ಸಹಜವಾಗಿಯೇ ಶಿವಾಪುರದ ಜನ ಅಭೂತಪೂರ್ವ ಸ್ವಾಗತ ನೀಡಿ ಕೃತಾರ್ಥರಾಗುವರೆಂದು ಕನಸು ಕಂಡವನಿಗೆ..... "ಈಗುಳಿದಿರೋದು ಒಂದೇ ದಾರಿ!" ಎಂದು ದನಿ ಕೇಳಿಸಿತು. ನೋಡಿದರೆ ಕರಿ ಹುಡುಗ ಬಂದು ಬೆಂಕಿಯ ಮುಂದೆ ಕೂತ. ಶಿಖರಸೂರ್ಯ ಬೇಸರದಲ್ಲಿ "ಇಷ್ಟು ಹೊತ್ತು ಎಲ್ಲಿ ಹಾಳಾಗಿ ಹೋಗಿದ್ದೆಯೋ ಮಾರಾಯಾ?" ಅಂದ. ಹುಡುಗ ಉತ್ತರಿಸಲಿಲ್ಲ. ಬೆಳ್ಳಿಯ ಭಯಂಕರ ಶಕ್ತಿಯಿಂದ ಅವನಿಗೂ ಅಘಾತವಾಗಿತ್ತು. ಪುನಃ "ಈಗುಳಿದಿರೋದು ಒಂದೇ ದಾರಿ" ಅಂದ ಕಾಲು ಕಾಯಿಸುತ್ತ.

"ಅದೇನು ದಾರಿಯೋ! ಒಂದು ಕಡಿಮೆ ಇಪ್ಪತ್ತು ರಾಜ್ಯಗಳನ್ನ ಗೆದ್ದವನಿಗೆ ಒಂದು ಚಿಕ್ಕ ಹಟ್ಟಿ ಸವಾಲಾಗಿದೆ ಅಂದರೆ ನಂಬುವ ಮಾತೇ ಇದು? ಮಾಂಡಳಿಕ ರಾಜರು ಚಪ್ಪಾಳೆ ತಟ್ಟಿ ನಗುವಂತಾಯಿತಲ್ಲ ನನ್ನ ಗತಿ!"

ಈಗಲೂ ಹುಡುಗ ಮಾತಾಡಲಿಲ್ಲ. ಇವನೇ ಮುಂದುವರಿಸಿದ.

"ಅಧಿಕಾರ ಗಳಿಸಿ ಚಕ್ರವರ್ತಿಯಾದೆ. ಅರಮನೆ ತುಂಬ ಚಿನ್ನ ಗಳಿಸಿದೆ. ನನ್ನ ಗಳಿಕೆಯೆಲ್ಲ ಹುಸಿ ಎಂದಳು ಮಗಳು! ಸುಖದ ಮಾದಕ ಮಧು ಪಾತ್ರೆಯಂಥ ಹೆಂಗಸಿನ ಒಡೆಯನಾಗಬೇಕೆಂದೆ - ಅವಳೋ ವಿಷಪೂರಿತ ರಾಸಾಯನಿಕವಾಗಿದ್ದಾಳೆ!"

ಹುಡುಗ ಪಕ್ಕದಲ್ಲಿದ್ದ ಮರದ ತುಂಡೊಂದನ್ನು ಬೆಂಕಿಗೆ ಹಾಕಿ ಮತ್ತೆ ಕೂತು ಹೇಳಿದ:

"ಈ ಜನರ ಆದ್ಯತೆಗಳು ಬೇರೆ, ಸಂಸ್ಕೃತಿ ಬೇರೆ, . ಅವರ ವಿಭಿನ್ನ ಬದುಕಿನ ಶೈಲಿಯ ಬಗ್ಗೆ ಆಶ್ಚರ್ಯವಾಗುವದು ಸಹಜ. ಹಾಗಂತ ಅರ್ಥವಾಗದವರನ್ನು ಆಳಬಾರದು ಅಂತಿಲ್ಲವಲ್ಲ?"

ಶಿಖರಸೂರ್ಯ ಆತನ ಮಾತನ್ನು ಕೇಳಿಸಿಕೊಳ್ಳಲೇ ಇಲ್ಲ; ತಂತಾನೇ ಮಾತಾಡಿಕೊಂಡಂತೆ ಮುಂದುವರಿಸಿದ:

"ನಾವು ತಿಳಿಯುತ್ತೇವೆ: ಸೂರ್ಯ ಮೂಡಿ ಈ ಜಗತ್ತನ್ನು ಬೆಳಕಿನಿಂದ ತುಂಬುತ್ತಾನೆ. ಆಮೇಲೆ ಭೂಮಿಯ ಚಟುವಟಿಕೆ ಸುರುವಾಗುತ್ತದೆ ಅಂತ. ಇವರು ಹೇಳ್ತಾರೆ. ಗವಿಯಲ್ಲಿರೋ ಅಮ್ಮ ಸೂರ್ಯನನ್ನು ಬೆಳಗುತ್ತಾಳೆ ಅಂತ! ನಮ್ಮದು ನಮಗೆ ನಿಜ. ಅವರದೂ ಅವರಿಗೆ ನಿಜ - ಮೂಢನಂಬಿಕಾಯಾದರೂ! ಆದರೆ ಅವರ ಮೂಢನಂಬಿಕೆಗಿರುವ ಬಲ ನಮ್ಮ ನಿಜಕ್ಕಿಲ್ಲ, ಯಾಕೆ? ಗವಿಯ ಕಡೆ ನೋಡಿ ಅಗೋ ಅಮ್ಮ ಅಂತಾರೆ. ಕೈ ಮುಗಿಯುತ್ತಾರೆ. ಬೇಕಾದರೆ ಹೋಗಿ ಮುಟಿ ಬರುತ್ತಾರೆ. ಅಮ್ಮನೊಂದಿಗೆ ಮಾತಾಡಿ ಬರುತ್ತಾರೆ! ನಾವು ನಮ್ಮ ನಿಜವನ್ನ ಮುಟ್ಟುವದೂ ಇಲ್ಲ. ಅದರೊಂದಿಗೆ ಮಾತಾಡುವುದು ಇಲ್ಲ. ನಮ್ಮ ತಾರ್ಕಿಕ ಶಕ್ತಿಯನ್ನು ತೃಪ್ತಿಪಡಿಸಿಕೊಂಡು ಸಮಾಧಾನ ಪಡುತ್ತೇವೆ."

ಶಿಖರಸೂರ್ಯ ವಿಷಣ್ಣನಾಗಿದ್ದ. ಹುಡುಗ ಉತ್ಸಾಹದಿಂದ ಹೇಳಿದ:

"ಅಮ್ಮನ ಹೆಸರಿನಲ್ಲಿರುವ ಅಜ್ಞಾತವನ್ನವರು ಪ್ರೀತಿಸುತ್ತಾರೆ. ತಮ್ಮ ಪ್ರೀತಿ ಮತ್ತು ತಮ್ಮೆಲ್ಲ ಭಾವನೆಗಳನ್ನು ಅದು ವಿವರಿಸುತ್ತದೆ ಅಂತಾರೆ. ಇದೇ ಅವರ ದುರ್ಬಲ ಸ್ಥಳ. ನೀನೂ ಒಂದು ಅಜ್ಞಾತವನ್ನು ಸೃಷ್ಟಿ ಮಾಡು."

ಶಿಖರಸೂರ್ಯ ಚುರುಕು ದೃಷ್ಟಿಯಿಂದ ಹುಡುಗನನ್ನು ನೋಡಿದ. ಅವನ ಕುತೂಹಲ ಕೆರಳಿದ್ದಕ್ಕೆ ಹುಡುಗ ಉತ್ಸಾಹಗೊಂಡು ಮುಗುಳುನಗುತ್ತಿದ್ದ. ಶಿಖರಸೂರ್ಯ ಸ್ವಲ್ಪಹೊತ್ತು ಹಾಗೇ ನೋಡುತ್ತಿದ್ದ. "ಅಂದರೆ?" ಅಂದ.

"ನೀನೂ ನಿನ್ನ ದೇವರನ್ನು ತೋರಿಸು ಗುರು. ಇದೆಯಲ್ಲ - ಒಂದು ಕಾಲಲ್ಲಿ ತಕ್ಕಡಿ ಇನ್ನೊಂದರಲ್ಲಿ ಚೂರಿ ಹಿಡಿದ ಹದ್ದು! ಅದನ್ನೇ ದೇವರೆಂದು ಹೇಳು. ಲೋಕವೆಲ್ಲಾ ಹಣವಂತರಾಗಲಿ ಅಂತದೆ ಈ ದೇವರು! ಆಗದ ದರಿದ್ರರನ್ನ ಕೊಂಡು ಭೂಮಿಯ ದಾರಿದ್ರವನ್ನ ನಾಶ ಮಾಡಿರಯ್ಯ ಅಂತದೆ. "ದಾರಿದ್ರ್ಯದ ವಿರುದ್ಧ ನಮ್ಮ ಯುದ್ಧ!" ಅಂತ ಚೆನ್ನದ ಧಾನ್ಯ ಚೆಲ್ಲಿ ನೋಡು. ಆಯ್ದುಕೊಳ್ಳದವ ಇದ್ದರೆ ನನಗೆ ತೋರಿಸು."

ಹುಡುಗನ ದನಿಯಲ್ಲಿ ಆತ್ಮ ವಿಶ್ವಾಸ ಮತ್ತು ಉತ್ಸಾಹವಿತ್ತು. ಕೊಂಚ ಅನುಮಾನದಿಂದ ಶಿಖರಸೂರ್ಯ ಕೇಳಿದ:

"ಆದರೆ ಶಿವಪಾದ ಅವರಿಗೆ ಬೇಕಾದಷ್ಟು ಅಸ್ತ್ರ ಕೊಟ್ಟಿದ್ದಾನಯ್ಯಾ! ಮೌಲ್ಯ ಅಂತವೆ, ಸಂಸ್ಕೃತಿ ಅಂತಿವೆ. ಅಮ್ಮ ಬಂದಳು ಅಂತ ಗಡಗಡ ನಡುಗುತ್ತವೆ, ಹಾಡಿ ಕುಣಿಯುತ್ತವೆ…."

"ಅದನ್ನೆಲ್ಲಾ ನನಗೆ ಬಿಡು ಗುರು. ಅವರು ಒಂದು ಹೇಳಿದರೆ ನಾನು ಹತ್ತು ಕತೆ ಹೇಳಾಕಿಲ್ಲವ?"

"ಕಥೆ ಹೇಳೋದಕ್ಕಲ್ಲಯ್ಯಾ, ತಾರ್ಕಿಕ ಜಗತ್ತನ್ನ ಹೊರಗಿಸಲಿಕ್ಕೆ ಅವರು ಹುಟ್ಟಿಸಿದ ಉಪಯಗಳಿವು. ಇಂಥ ಉಪಾಯಗಳನ್ನ ಗುಡ್ಡೆ ಹಾಕಿ ಅದನ್ನೇ ಪುರಾಣ ಅಂತವೆ! ಪುರಾಣ ಅಂದಕೂಡಲೆ ಹೆದರತೀವಿ ಅಂತ ಗೊತ್ತಿದೆ ಅವಕ್ಕೆ."

"ನೀನು ಹೇಳಿದ್ದು ಅರ್ಥವಾಯಿತು ಗುರು. ಶಿವಾಪುರ ಅಂದರೆ ಏನು ಅಂತ ಗೊತ್ತಾಯಿತು: ಅದೊಂದು ಕಗ್ಗಾಡು; ಮಾತಾಡುವ ಪ್ರಾಣಿಗಳಿಂದ ತುಂಬಿದ ಕಗ್ಗಾಡು! ಹಗಲು ಕೂಡ ಸೂರ್ಯನ ಬಿಸಿಲು ಬೀಳದ ಕಗ್ಗಾಡು. ಆ ಕಗ್ಗಾಡಿನಲ್ಲಿ ಸೂರ್ಯನ ಕಿರಣಗಳು ಪ್ರವೇಶಿಸುವಂತೆ ಮಾಡಿ ಕತ್ತಲನ್ನು ಓಡಿಸುವುದು ನಮ್ಮ ಧರ್ಮದ ಉದ್ದೇಶ. ಕತ್ತಲೆಯ ಕಗ್ಗಾಡಿನಲ್ಲಿ ಬೆಳಕಿನ ಹೊಸ ಧರ್ಮ ಸಾಮ್ರಾಜ್ಯ ಸ್ಥಾಪನೆಯೇ ನಮ್ಮ ಗುತಿ! ಇದೇ ಧರ್ಮಯುದ್ಧ! ಈ ಯುದ್ಧದಲ್ಲಿ ನಿನ್ನಡಿಯ ಬಲಿಯಾದರೂ ಸೈ, ನೀನು ಗೆಲ್ಲಲೇಬೇಕು".

"ಆದರೆ ಶಿವಾಪುರದ ಜನ ಅಸಾಧ್ಯರಯ್ಯಾ! ಅವರ ಮನಸ್ಸು ಹೀಗೇ ಇಷ್ಟೇ - ಅಂತ ಹೇಳಲಿಕ್ಕಾಗದು."

"ನಿನಗೆ ಅಪ್ರಿಯವಾದ ಒಂದು ಸತ್ಯ ಇದೆ. ಹೆದರದೆ ಹೇಳು ಅಂದೆ ಹೇಳುತ್ತೇನೆ."

"ಅದೇನಿದೆಯೋ ಬೊಗಳಯ್ಯಾ".

"ಇಂದಿಲ್ಲ ನಾಳೆ, ಎಂದಾದರೊಂದು ದಿನ "ನೀನು ಕೂತ ಜಾಗ ಖಾಲಿ ಮಾಡು" ಅಂತ ನಿನಗೆ ಹೇಳೋನು ಒಬ್ಬನೇ - ತರುಣಚಂದ್ರ ಅರ್ಥಾತ್ ನಿನ್ನಡಿ! ಹೌದಾ?"

"ಹೌದು" ಎಂದ ಶಿಖರಸೂರ್ಯ ಮೆತ್ತಗಾಗಿ.

“ಇಲ್ಲಿಯ ಬೆಟ್ಟಕ್ಕೂ ಅಲ್ಲಿಯ ಕನಕಪುರಿಗೂ ಅವನೇ ಹಕ್ಕಿನ ಅಧಿಕಾರಿ! ನೀನಲ್ಲಿ! - ಹೌದಾ?”

“ಹೌದು!”

“ಹಾಗಿದ್ದರೆ ಅವನನ್ನ ಮುಗಿಸಲಿಕ್ಕೆ ನಿನಗಿರುವ ಅವಕಾಶವೂ ಇದೊಂದೇ! ಅಂತಿಮ ಅವಕಾಶ! ಹೌದಾ?”

“ಭಲೆ!”

- ಅಂದ ಶಿಖರಸೂರ್ಯ, ಹುಡುಗನ ಮಾತು ಖಾತ್ರಿಯಾಗಿ ಅವನ ಕಣ್ಣಲ್ಲಿ ಝಗ್ಗನೆ ಬೆಳಕಾಡಿ ಮುಖ ಕಳೆಕಳೆಯಾಯಿತು.

“ಅಯ್ಯಾ ಮಿತ್ರಾ, ಈ ಯುದ್ಧದ ಮುಂದಾಳು ಈಗಿನಿಂದ ನೀನೇ ಕಣಯ್ಯಾ! ತರುಣಚಂದ್ರನ ಕಥೆ ಮುಗಿಸಲೇಬೇಕು. ಹೇಳು ಏನು ಮಾಡೋಣ?”

“ವೈರಿಯ ಮರ್ಮಸ್ಥಳವನ್ನ ಸರಿಯಾಗಿ ಗುರುತಿಸಬೇಕು. ಆಮೇಲೆ ಇರಿಯಬೇಕು. ಏನಂತಿ?”

“ಭಲೆ!”

“ನಿನ್ನ ಪ್ರಥಮ ವೈರಿ - ಶಿವಾಪುರದ ಜನತೆ! ಅವರ ಜೀವ ಜೀವಾಳ ಎಲ್ಲಿದೆ ಗೊತ್ತ? ನಿನ್ನಡಿಯೆಂಬ ಗಿಣಿಯ ಹೃದಯದಲ್ಲಿ! ಗಿಣಿಯನ್ನ ಬಂಧಿಸಿ, ಪಂಜರದಲ್ಲಿಟ್ಟು ಅದರ ಒಂದೊಂದೇ ರೆಕ್ಕೆ ಪುಕ್ಕಗಳನ್ನ ಕಿತ್ತೆಸೆಯುತ್ತ ಆ ಜನರಿಗೆ ತೋರುಸುತ್ತ ಹೇಳಬೇಕು: -

“ಬೆಟ್ಟ ಕೊಟ್ಟರೆ ಗಿಣಿಯನ್ನು ಜೀವಂತ ಬಿಡ್ತೀನಿ! ಇಲ್ಲವೋ? ಗಿಣಿಯನ್ನ ಕೊಲ್ತೀನಿ!”

“ಭಲೇ ಮಿತ್ರಾ!”

“ಬೆಟ್ಟ ಸಿಕ್ಕ ಮೇಲೆ ಗಿಣಿಯನ್ನು ಮುಗಿಸಬೇಕು. ಆಗ ನೋಡು ಗುರು - ಇಲ್ಲಿ ಶಿವಾಪುರ, ಅಲ್ಲಿ ಕನಕಪುರಿ - ಎರಡಕ್ಕೂ ನೀನೆ ಅಖಂಡ ದೊರೆ!”

“ಆದರೆ ಅವನು ಸಿಕ್ಕಬೇಕಲ್ಲ?”

“ಅವಸರ ಮಾಡಬೇಡ. ನಿಶ್ಚಿಂತನಾಗಿರು. ಅವನು ಶಿವಾಪುರ ಸೀಮೆಗೆ ಅಧಿಕಾರಿ, ನಿನಗೆ ಗೌರವ ಸೂಚಿಸಲಿಕ್ಕಾದರೂ ನೀನಿದ್ದಲ್ಲಿಗೆ ಬಂದೇ ಬರ್ತಾನೆ. ಅದೇ ಸಂದರ್ಭ - ಬೆಲ್ಲದ ಮಾತಿನಲ್ಲಿ ಬೆಟ್ಟವ ಕೊಡೆಂದು ಕೇಳು. ಕೊಟ್ಟನೋ? ಬಚಾವಾದ. ಇಲ್ಲವೋ - ಛಕ್ಕಂತ ಹಿಡಿದು ಪಂಜರದಲ್ಲಿಡು, ”

ಶಿಖರಸೂರ್ಯ ಇದೇ ವಿಚಾರವನ್ನ ಮೆಲುಕಾಡಿಸುತ್ತ, ಇಡೀ ದಿನ ಮಾಡಬೇಕಾದ ಕೆಲಸ ಕಾರ್ಯಗಳ ಯೋಜನೆ ಹಾಕುತ್ತ ಕೂತ. ಹುಡುಗ ಯಾವಾಗಲೋ ಮಾಯವಾಗಿದ್ದ.

# ಎಪ್ಪತ್ತು

ನಿರೀಕ್ಷೆಯಂತೆ ಆ ದಿನ ಮುಂಜಾನೆ ನಿನ್ನಡಿ ಬರಲಿಲ್ಲ. ಬೆಟ್ಟಕ್ಕೆ ಹೋಗಿ ಬೆಳಗಿನ ಹನಿಪೂಜೆ, ಮದ್ಯಾಹ್ನದ ಮಹಾಪೂಜೆ ಮುಗಿಸಿ ಬರುವಾಗ ಇಳಿಹೊತ್ತಾಗಿತ್ತು. ದಾರಿಯಲ್ಲಿ ಸಿಕ್ಕ ಚಂಡೀದಾಸನೊಂದಿಗೆ ಮುರಿಗೆಪ್ಪನ ತೋಟಕ್ಕೆ ಬಂಡೀಮಾರ್ಗದಿಂದ ಬಂದಾಗ ಬೆಟ್ಟಕ್ಕೆ ಹೋಗಿದ್ದ ಶಿಖರಸೂರ್ಯ ಇನ್ನೂ ಬಂದಿರಲಿಲ್ಲ. ಮುಳುಗುವ ಸೂರ್ಯನ ಮಾಗಿದ ಬಿಸಿಲಿನಿಂದ ಮುರಿಗೆಪ್ಪನ ತೋಟ, ಅದರ ಸುತ್ತಮುತ್ತಲಿನ ತರುಮರುಗಳು ಚಿನ್ನದ ಮಿರುಗಿನಿಂದ ಹೊಳೆಯುತ್ತಿದ್ದವು. ಹಕ್ಕಿಗಳ ಚಿಲಿಪಿಲಿಯೊಂದಿಗೆ ಆಗಾಗ ದೂರದಿಂದ ಕೇಳಿಸುವ ದೊಡ್ಡ ಹಕ್ಕಿಗಳ ಇನಿದನಿ ಸೇರಿ ಅನೇಗ ಗದ್ದೆಗಳಿರುವ ಆ ಬಯಲಿಗೆ ಲಘುವಾದ ಸಂಗೀತ ನೀಡಿ ಆ ಪ್ರದೇಶದ ಚಂದವನ್ನ ಹೆಚ್ಚಿಸಿದ್ದವು. ಅದನ್ನು ಗ್ರಹಿಸಿ ತಾನ್ಯಾವುದೋ ಅಪರಿಚಿತ ಸುಂದರ ಸ್ಥಳಕ್ಕೆ ಅಥವಾ ಮರೆತ ಸ್ಥಳಕ್ಕೆ ಬಂದಂತೆನಿಸಿ ನಿನ್ನಡಿಗೆ ಹಾಯೆನ್ನಿಸಿತು.

ಕೊಟ್ಟಿಗೆಯಲ್ಲಿ ದನದ ಬದಲು ಎಂಟು ಕುದುರೆ ಕಟ್ಟಿದ್ದರು. ಕುದುರೆ ಗಾಗಿ ಅಲ್ಲೇ ಇತ್ತು. ಅದರ ಜೊತೆಗೆ ಸಿಡಿತಲೆ ಯಂತ್ರ ಹೇರಿದ ಇನ್ನೆರಡು ಗಾಡಿಗಳು ನಿಂತಿದ್ದವು. ಯಾವುದೋ ಯುದ್ಧದಿಂದ ಹಿಂದಿರುಗುವಾಗ ಇಲ್ಲಿಗೆ ಬಂದಿರಬಹುದು ಅಂದುಕೊಂಡ.

ಮುರಿಗೆಪ್ಪ ಕುದುರೆಗಾಡಿಯ ನೊಗದ ಮೇಲೆ ಕೂತಿದ್ದವನು ನಿನ್ನಡಿ, ಚಂಡೀದಾಸರನ್ನು ನೋಡಿದ ಕೂಡಲೇ ಜಿಗಿದು "ಬಾ ತಮ್ಮಾ" ಎನ್ನುತ್ತ ನಿನ್ನಡಿಯ ಕೈಹಿಡಿದು ಕರಕೊಂಬಂದ. ಪ್ರೀತಿಯಿಂದ ಮೊಗಸಾಲೆಯಲ್ಲಿದ್ದ ಗಡಂಚಿಯ ಮ್ಯಾಲೆ ತಟ್ಟು ಹಾಸಿ ಕೂರಿಸಿದ. ನಿನ್ನಡಿ ಹೇಳಿದ:

"ಮಾರಾಜನೆಲ್ಲಿ ಚಿಗಪ್ಪ?"

"ಬೆಟ್ಟದ ಕಡೆ ಹೋಗ್ಯಾನ. ಇನ್ನೇನು ಬಂದಾನು".

ಚಂಡೀದಾಸ ಮನೆ ತುಂಬ ಹುಡುಕು ನೋಟ ಹರಿಸಿ "ನಿನ್ನ ಬಳಗ ಎಲ್ಲೂ ಕಾಣದಲ್ಲಪ್ಪ?" ಅಂದ.

"ಅವರನ್ನ ಬ್ಯಾರೆ ಕಡೆ ಅಟ್ಟಿದೀನಿ."

"ಅಂದರೆ?"

"ಮೂರು ದಿನಾ ನಿನ್ನ ಮನೆಯೊಳಗಿರುತ್ತೀನಿ. ತೊಗೊ ಬಾಡಿಗಿ" ಅಂದು ಬೊಗಸಿತುಂಬ ಬಂಗಾರ ಕೊಟ್ಟನಪ್ಪ! ಮಾರಾಜ ಕೇಳಿದಮ್ಯಾಲೆ ಬ್ಯಾಡ ಅಂತ ಯಾವ ಬಾಯಿಂದ ಹೇಳಲಿ? ಒಂದೆರಡು ದಿನ ಮನಿ ಬಿಟ್ಟುಕೊಟ್ಟು ಮನೀಮಂದೆಲ್ಲಾ ಊರೊಳಗಿನ ಮನ್ಯಾಗಿದ್ದೀವಿ" ಅಂದ.

ಚಂಡೀದಾಸನಿಗೆ ತಕ್ಷಣ ಶಿವಪಾದನ ಮಾತು ನೆನಪಾಯ್ತು: "ಚಿನ್ನದ ವಿಚಾರವ? ಹಂಗಾದರ ನಿನಗ ದ್ರೋಹ ಮಾಡದವರು ಯಾರೂ ಇಲ್ಲ ಬಿಡು!" ಶಿವಪಾದ ಈ ಮಾತನ್ನ ನಗಾಡುತ್ತ ಹೇಳಿದ್ದನ್ನು ಜ್ಞಾಪಿಸಿಕೊಂಡು ಇವನೂ ಮುಗುಳುನಕ್ಕ. ಕುತೂಹಲ ಕೆರಳಿ,

"ಬೊಗಸಿ ಚಿನ್ನವ? ಎಲ್ಲಿ ತೋರಿಸು?" ಅಂದ.

ಮುರಿಗೆಪ್ಪ ಒಳಕ್ಕೆ ಹೋಗಿ ಚಿನ್ನ ಇಟ್ಟಿದ್ದ ತಟ್ಟೆಯನ್ನ ತಂದು ಚಂಡೀದಾಸನಿಗೆ ಕೊಟ್ಟ. ಚಂಡೀದಾಸ ಅದನ್ನು ಹಿಡಿದು ಪರೀಕ್ಷಿಸಿ ನಿನ್ನಡಿಯ ಮುಂದೆ ಹಿಡಿದ.

"ಇದು ಎಲ್ಲಿಯ ಚಿನ್ನ, ಹೇಳಪ್ಪ ಶಿವಪಾದನ ಶಿಷ್ಯ ನೀನು!"

ಎಂದು ಸವಾಲೆಸೆದಂತೆ ಕೇಳಿದ. ಇವನು ಹಿಂಗ್ಯಾಕೆ ಕೇಳಿದನೆಂದು ನಿನ್ನಡಿಗೆ ಅರ್ಥವಾಗಲಿಲ್ಲ. "ಏನೂ ನೆನಪಾಗವೊಲ್ದು" ಅಂದ ನಿನ್ನಡಿ.

"ಇದು ಗೋಧಿ ಚಿನ್ನ!"

ನಿನ್ನಡಿ ಮತ್ತೆ ನೋಡಿ "ಹೌದು ಇವೆಲ್ಲ ಆಭರಣದ ಕಾಳು."

ಎಂದು ಹೇಳಿ ಗುರುತು ಹಿಡಿದಿದ್ದಕ್ಕೆ ಭೇಷ್ ಪಡೆದವನಂತೆ ಸಮಾಧಾನ ಹೊಂದಿದ. ಚಂಡೀದಾಸ ಅಷ್ಟಕ್ಕೇ ಬಿಡಲಿಲ್ಲ -

"ಇದು ಮುರಿಗೆಪ್ಪನ ಹೊಲದ ಗೋಧೀ ಚಿನ್ನ!"

ಎಂದು ಹೇಳಿ ಎದ್ದು ನಿಂತು,

"ಮುರಿಗೆಪ್ಪ, ನಿನ್ನ ಗೋಧೀ ಚೀಲ ಎಲ್ಲಿಟ್ಟಿದ್ದ? ತೋರಿಸು"

ಅಂದ. 'ಒಳಗಿದೆ' ಎಂದು ಒಳಕ್ಕೆ ಹೋದ. ಹೋದವನು ಅಲ್ಲಿಂದಲೇ "ಶಿವಪಾದಾಃ" ಎಂದು ಕಿಟಾರನೆ ಕಿರಿಚಿದ. ಏನಾಯಿತೋ ಎಂದು ಇಬ್ಬರೂ ಹೆದರಿ ಒಳಕ್ಕೋಡಿ ಹೋಗಿ ನೋಡಿದರೆ ಮುರಿಗೆಪ್ಪನ ಬಾಯಿಂದ ಮಾತೇ ಇಲ್ಲ! ತೆರೆದ ಬಾಯಿ ತೆರೆದಂತೇ ನಿಂತು ಅರ್ಧ ತೆರೆದ ಗೋಧೀ ಚೀಲದ ಕಡೆಗೆ ಕೈ ಮಾಡಿ ತೋರಿಸಿದ. ನೋಡಿದರೆ ಇಡೀ ಚೀಲದ ತುಂಬ ಚಿನ್ನದ ಗೋಧಿಯಿದೆ! ಆಘಾತದಿಂದ ನಿನ್ನಡಿ ಸುಮ್ಮನಾದರೆ ಚಂಡೀದಾನ ತನ್ನ ಕೋಪವನ್ನ ನಿಯಂತ್ರಿಸಲು ಪ್ರತ್ನಿಸುತ್ತಿದ್ದ. ಕನಕಪುರಿ ಮಹಾರಾಜನ ಬಲ ದೌರ್ಬಲ್ಯಗಳ ಗುಟ್ಟು ಇಡಿಯಾಗಿ ಬಯಲಾಗಿತ್ತು. ಅವನ ಅರಮನೆಯಲ್ಲಿ ಸಂಗ್ರಹಿಸಿದ್ದ ಧಾನ್ಯ ಪ್ರಮಾಣ ನೋಡಿದಾಗಲೇ ಚಂಡೀದಾಸನಿಗೆ ಅನುಮಾನ ಬಂದಿತ್ತು. ಕನಕಪುರಿಯ ಆ ಮೇಲಿನ ಕತೆಗಳು ಇದನ್ನೇ ಸಮರ್ಥಿಸಿದ್ದವು. ಮಂತ್ರದಾಡದಿಂದ ಇಷ್ಟೆಲ್ಲ ಮೆರೆವವನು ಅದನ್ನು ಉಪಯೋಗಿಸುವಾಗ ನಿಷ್ಕಾಳಜಿಯಿಂದ ಇರಬಾರದಲ್ಲ! ಬಹುಶಃ ತಾಯಿ ಕೊಟ್ಟ ಮುದ್ದತು ಮುಗಿಯಿತೇನೋ! ತನ್ನ ನಿಷ್ಕಾಳಜಿಗೆ ಅವನು ತೆರುವ ಬೆಲೆ ನೆನೆದು ನಕ್ಕು -

"ಇಂಥ ಮಾಟಗಾರನಿಗೆ ಮಹಾರಾಜ ಅಂತ ನಮಸ್ಕಾರ ಮಾಡು ಅಂತೀಯಲ್ಲ ಮಾರಾಯಾ, ಇವನಿಗಿನ್ನ ನಮ್ಮ ಕುರುಮುನಿಯೇ ವಾಸಿ. ಬರುತ್ತೀನೆ"

ಎಂದು ಪ್ರತಿಕ್ರಿಯೆಗಾಗಿ ಕಾಯದೆ ಚಂಡೀದಾಸ ಹೊರಟು ಬಿಟ್ಟ. ನಿನ್ನಡಿಯಿನ್ನೂ ವಾಸ್ತವಕ್ಕೆ ಬಂದಿರಲೇ ಇಲ್ಲ. ಮುರಿಗೆಪ್ಪ ಓಡಿ ಬಂದು.

"ಈ ಚಿನ್ನದಿಂದ ಮತ್ತೆ ಗೋಧೀ ಮಾಡೊದಕ್ಕೆ ಬರತ್ಯೆತೇನಣ್ಣಾ?" ಅಂದ.

ಚಂಡೀದಾಸ "ಇದಕ್ಕೆ ಉತ್ತರ ಹೇಳಬಲ್ಲವನು ಕುರುಮುನಿ ಒಬ್ಬನೇ. ಅವನನ್ನೇ ಕೇಳೋಣ, ಬಾ" ಎಂದು ಹೊರಟ. ಅವನ ಹಿಂದಿನಿಂದ ಮುರಿಗೆಪ್ಪನೂ ಹೋದ.

ಅವರು ಮರೆಯಾಗಿ ಸ್ವಲ್ಪ ಹೊತ್ತಿನಲ್ಲಿಯೇ ಕುದುರೆಯ ಖುರಪುಟ ಕೇಳಿಸಿತು. ನೋಡಿದರೆ ಶಿಖರಸೂರ್ಯನಾಗಲೇ ಒಳಬಂದು ಕುದುರೆಯಿಂದಿಳಿಯುತ್ತಿದ್ದ. ಸಿಟ್ಟು ಮಾಡಿದ ಬಾಲಕನಂತೆ ಕೂತಿದ್ದ ನಿನ್ನಡಿಯ ಗಡಂಚಿಯ ಎದುರಿನಲ್ಲೇ ಇನ್ನೊಂದು ಗಡಂಚಿಯನ್ನೆಳೆದುಕೊಂಡು ಕೂತು ನಿನ್ನಡಿಯನ್ನು ನೋಡಿದ, ಆಶ್ಚರ್ಯವಾಯಿತು.

ನಿನ್ನಡಿ ಛಾಯಾದೇವಿಯನ್ನು ಬಹುವಾಗಿ ಹೋಲುತ್ತಿದ್ದ. ಛಾಯಾದೇವಿಯ ಕಣ್ಣು ಕೊಂಚ ಆತಂಕ ಮತ್ತು ದಿಗಿಲಿನಲ್ಲಿರುವ ಕಣ್ಣು. ಹುಷಾರಾಗಿರಲು ಪೂರ್ವ ತಯಾರಿಗೆಂಬಂತೆ ಸಂಕೋಚಗೊಂಡ ಕಣ್ಣು. ಇವನ ಕಣ್ಣು ಅಗಲವಾಗಿ ದುಂಡಗೆ ಹೊಳೆಯುತ್ತಿವೆ. ಆದರೂ ಛಾಯಾದೇವಿಯ ಚೆಲುವಿಕೆಗಿಂತ ಇನ್ನೇನೋ ಒಂದು ವಿಶೇಷ ಆಕರ್ಷಣೆ ಇವನಲ್ಲಿದೆ ಎನ್ನಿಸಿತು. ಬಹುಶಃ ಇವನ ಕಣ್ಣಿನ ಕಾಂತಿಯ ಎದುರಿಗೆ ಯಾರಿದ್ದರೂ ಅವರಲ್ಲಿ ಉತ್ಸಾಹ ಲವಲವಿಕೆ ಲಾಸ್ಯವಾಡುವಂತೆ ಮಾಡಬಲ್ಲ ಅಪಾರ ಪ್ರೀತಿ ಈ ಕಣ್ಣುಗಳಲ್ಲಿದೆ. ಆ ದಪ್ಪವಾದ ಕೂದಲ್ಲು ಮ್ಯಾಲೆತ್ತಿ ತಲೆಯ ಹಿಂಭಾಗದಲ್ಲಿ ಗಟ್ಟಿಯಾಗಿ ಕಟ್ಟಿದ್ದರೂ ಕೆಲವು ಕಳ್ಳ ಕೂದಲು ಮುಖ ಮತ್ತು ಕತ್ತಿನ ಸುತ್ತ ಹರಡಿಕೊಂಡಿದ್ದವು. ಛಾಯಾದೇವಿ ನಿನ್ನಡಿಯ ತಾಯಿಯಂತೆ ಕಾಣುತ್ತಿದ್ದಳೇ ವಿನಾ ಅಕ್ಕನಂತಲ್ಲ.

ಬಹಳ ಹೊತ್ತು ಇಬ್ಬರ ರೂಪಗಳನ್ನು ನೆನೆಯುತ್ತಿದ್ದ ಶಿಖರಸೂರ್ಯನಿಗೆ ಆಸೆ, ಆಸಕ್ತಿಗಳಿಂದ ತನ್ನನ್ನೇ ನೋಡುತ್ತಿರುವ ನಿನ್ನಡಿಯನ್ನ ನೋಡಿ ಬೇಸರವೇ ಆಯಿತು. ಯಾಕಂತೀರೋ? ತನ್ನನ್ನ ನೋಡಿ ಹುಡುಗ ಏಳಲಿಲ್ಲ; ಬಾಗಿ ನಮಸ್ಕಾರವನ್ನಾಚರಿಸಲಿಲ್ಲ. ಬಹಿರಂಗವಾಗಿ ಮುಖ ಮುರಿದೂ ನೋಡಿದ; ನಿನ್ನಡಿಗದು ಅರ್ಥವಾಗಲಿಲ್ಲ.

"ಏನಾಯ್ಯಾ ನಾನು ಯಾರು ಗೊತ್ತಾಯಿತ?"

"ಗೊತ್ತಾಗದೇನು? ಮಹಾರಾಜನೆಂದು ಗುರುತು ಸಿಕ್ಕಿದ್ದರಿಂದಲೇ ಏನು ಬಂದೀ? - ಕೇಳಿಕೊಂಡು ಹೋಗೋಣ ಅಂತ ಬಂದೆ".

"ಮತ್ತೇ, ಗುರುತೇ ಸಿಗದವರಂತೆ ಮುಖ ಮಾಡಿಕೊಂಡು ಕೂತಿದ್ದೀಯಲ್ಲ ಮಾರಾಯಾ! ನಾನೀಗ ಚಕ್ರವರ್ತಿಯಾಗಿರಬಹುದು; ಆದರೆ ಈ ಸ್ಥಳದಲ್ಲಿ ಓದಿದವನಯ್ಯಾ ನಾನು. ನಿನಗೇನಾದರೂ ಸಹಾಯ ಬೇಕಿದ್ದರೆ ಹೇಳು. ಒಂದು ಕಡಿಮೆ ಇಪ್ಪತ್ತು ರಾಜ್ಯಗಳನ್ನು ಗೆದ್ದಾಗ ಅನೇಕ ಮಾಂಡಳಿಕರು ಕೇಳಿದರು: "ನೆರೆಯ ಶಿವಾಪುರ ಸೀಮೆಯೊಂದನ್ನ ಯಾಕೆ ಬಿಟ್ಟಿರಿ?" ಅಂತ. ಅದೇ ರಹಸ್ಯ. ಅಲ್ಲಿರೋನು ನನ್ನ ಎಳೇ ಮಿತ್ರ: ಅವನ ಮೇಲೆ ಯುದ್ಧವೆ? ಛೇ! - ಎಂದು ನಾನೇ ಬಿಟ್ಟೆ. ಮಾಂಡಳೀಕನಾಗೋದೊ ಬಿಡೋದೂ ನಿನ್ನಿಷ್ಟ. ಆದರೆ ಹಳೇ ಸಂಬಂಧವಂತೂ ಹಾಗೇ ಇರುತ್ತೊ? ನನ್ನ ಎಳೇ ಮಿತ್ರ ಕೊಳ್ಳುವುದಕ್ಕ ಎಹಣವಿಲ್ಲದ ದರಿದ್ರರಿಂದ ಕೂಡಿ ಸಣ್ಣ ಸೀಮೆಯನ್ನ ಆಳಿಕೊಂಡಿದ್ದಾನೆ. ಅವನಿಗೆ ಕೊಂಚ ಸಹಾಯ ಮಾಡೋಣ ಅಂತ ಬಂದೆ ಕಣಯ್ಯಾ!"

ಶಿಖರಸೂರ್ಯನ ಅಂದರೆ ಜಯಸೂರ್ಯನ ಮಾತಿ ಧಾಟಿ, ಶ್ರೀಮಂತಿಕೆಯ ಸೊಕ್ಕು, ಎದುರಿನವರನ್ನ ಮೂಗಿನ ತುದಿಯಿಂದ ನೋಡುವ ಧಿಮಾಕುಗಳನ್ನ ನೋಡಿ ನಿನ್ನಡಿಗೆ ಬಯಲಾಟದ ರಾವಳನ ನೆನಪಾಯಿತು. ಅದ್ಯಾಕೆ ಈತ ಇಷ್ಟೊಂದು ಅಭಿನಯ ಮಾಡುತ್ತಿದ್ದಾನೆಂದು ಹೊಯ್ಕಾಯಿತು. ಆತ ಹೇಳಿದ - ಹಣ ಮತ್ತು ಕೊಳ್ಳೋದು - ಎಂಬ ಮಾತಿನರ್ಥ ಕೇಳಿದ:

"ಹಣದಿಂದ ಕೊಳ್ಳೋದ? ಏನ್ನ ಕೊಳ್ಳಬೇಕಾಗಿತ್ತು".

"ಸುಖ, ಸೌಲಭ್ಯಗಳನ್ನ! ಆನಂಧಗಳನ್ನ!" ಶಿಖರಸೂರ್ಯನಂದ.

"ನಮಗೀಗ ಏನೂ ಕೊರತೆ ಇಲ್ಲವಲ್ಲ! ಸುಖಿಗಳಾಗಿದ್ದೇವೆ…."

"ಏನಯ್ಯಾ, ಇಂಥ ಜೀವನಕ್ಕೂ ಸುಖ ಅಂತೀರಲ್ರಯ್ಯಾ!"

ಈಗ ನಿಜವಾಗಿ ನಿನ್ನಡಿ ಗೊಂದಲದ ಮಡುವಿನಲ್ಲಿ ಬಿದ್ದ -

"ಆಯಿತಯ್ಯ ಇದು ಸುಖ ಅಥವಾ ದುಃಖ ಅಂತ ಹೇಳೋರು ಯಾರು? ನಾವ? ನೀನ?"

"ನೀವೆ"

"ನಾವೇ ಹೇಳ್ತಿದ್ದೀವಲ್ಲ ಸುಖದಿಂದ ಇದ್ದೀವಿ ಅಂತ."

ಶಿಖರಸೂರ್ಯನಿಗೆ ಈ ಮಾತಿನಿಂದ ಸಂತೋಷವೇ ಆಯ್ತು. ಮನಸಾರೆ ಗಹಗಹಿಸಿ ನಕ್ಕು ನಿನ್ನಡಿಗೆ ಹೇಳಿದ:

"ನಿನ್ನಂಥಾ ಸುಖಪುರುಷನನ್ನೇ ನೋಡಲಿಲ್ಲವಯ್ಯಾ ನಾನು! ನಿನ್ನ ಶ್ರೀಮಂತಿಕೆಯ ಮುಂದೆ ಕನಕಪುರಿ ದರಿದ್ರವಾಗಿ ಕಾಣುತ್ತಯ್ಯಾ! ಪುಟ್ಟ ಸೀಮೆಯ ರಾಜ್ಯ, ಶಿವಾಪುರವೆಂಬ ಹಟ್ಟಿಯಂಥ ಪುಟ್ಟ ಊರೇ ರಾಜಧಾನಿ, ಬೆಟ್ಟದ ಗವಿಯೇ ಅರಮನೆ, ನೀನು ಹೇಳಿದ್ದೇ ಕಾನೂನು! ಎಂದೆಂದಿಗೂ ಸದಾ ಬಾಗಿ ನಿಲ್ಲುವ, ಅತೃಪ್ತರಾಗದ, ದಂಗೆಯೇಳದ ಹುಡುಗರು, ಸದಾ ಹಲ್ಲು ಕಿರಿಯುತ್ತ ಹಸ್ತ ಹೊಸೆಯುವ ಗುಲಾಮ ಭಕ್ತರು, ಹುರಿದು ಮುಕ್ಕಿತೆಂದರೂ ಆನಂದ ಪಡುವ ಪ್ರಜೆಗಳು .... ಆಹಾಹಾ ಶಿವಾಪುರವೇ!"

ಈತ ಭ್ರಮೆಗಳೊಂದಿಗೆ ಆಟವಾಡುತ್ತ ತನ್ನ ಬೆಲೆ ತಾನೆ ಹೆಚ್ಚಿಸಿಕೊಳ್ಳುತ್ತ ಕೊಬ್ಬುತ್ತಿದ್ದಾನಲ್ಲಾ! ಎನ್ನಿಸಿತು ನಿನ್ನಡಿಗೆ. ತಕ್ಷಣ ತಾನೇ ಮುಂದಾಗಿ ತಿದ್ದಿದ:

"ಇದು ರಾಜ್ಯವಲ್ಲ. ಅಮ್ಮನ ಬೆಟ್ಟ. ಶಿವಪಾದನ ಪೀಠ. ಶಿವಪಾದನಿಗೆ ಪರಿಪೂರ್ಣತೆ ಯಾವುದೆಂದು ತಿಳಿದಿತ್ತು. ಆದರೆ ಮನುಷ್ಯ ಅಪೂರ್ಣ ಅಂತಲೂ ಗೊತ್ತಿತ್ತು. ಪರಿಪೂರ್ಣ ಸತ್ಯಕ್ಕೆ ಸಂಬಂಧಗಳ ಪ್ರಮಾಣ ಬೇಕೆಂದು ಹೇಳಿದ ಪ್ರಸ್ಥಾನವಿದು. ಅಂಥದರ ಬಗ್ಗೆ ಲಘುವಾಗಿ ಮಾತಾಡಬಾರದಲ್ಲವೆ?"

ಎಂದು ತೋರುಬೆರಳು ತೋರಿ ತಾಕೀತು ಮಾಡುವಂತೆ ಅಲುಗಿ ಕೆಳಗಿಳಿಸಿದ. ಅವನ ಪ್ರತಿಭಟನೆಯ ಧ್ವನಿ ಮತ್ತು ಭಂಗಿಯಿಂದ ಬಂದ ಕೋಪವನ್ನು ನಿಯಂತ್ರಿಸಿಕೊಂಡು ವಿಷಯಾಂತರ ಮಾಡಲು ಹೇಳಿದ.

"ನೆಪ್ಪಿರಲಿ ತರುಣ ಮಿತ್ರಾ, ನಾನೂ ಶಿವಾಪುರದ ಒಕ್ಕಲು. ಆ ಅಭಿಮಾನದಿಂದಲೇ ಇಲ್ಲಿಗೆ ಬಂದಿರೋದು. ಗೊತ್ತಾಯ್ತಾ?"

"ಅದಿಲ್ಲದೆ ನಾನಾದರೂ ಈ ಪರಿ ಮಾತಾಡ್ಲಿಕ್ಕಾಗುತ್ತಿತ್ತ ರಾಜನೇ?"

"ಹಾಗೆ ಬಾ" ಅಂದು ಅವನ ಏಕವಚನಕ್ಕೆ ಅಸಮಾಧಾನಗೊಂಡರೂ ಮಹಾರಾಜನೊಬ್ಬ ಮಾಂಡಳಿಕರೊಂದಿಗೆ ಅಂತರಂಗ ಮಾತಾಡುವ ಔದಾರ್ಯದ ಗತ್ತಿನಲ್ಲಿ ಹೇಳಿದ:

"ವಸ್ತುಗಳಿಗೆ ನಿಜವಾದ ಬೆಲೆ ಇರೋದು ನಿನ್ನ ಶಿವಾಪುರದಲ್ಲಯ್ಯಾ. ಈಗಲೂ ಇಲ್ಲಿ ಚಿನ್ನ ಅಂದರೆ ಒಂದು ಲೋಹ ಮಾತ್ರ. ಎಂಥಾ ಭಾಗ್ಯವಂತರು ನೀವು! ಅದೇ ಕನಕಪುರಿಯಲ್ಲಿ ನೋಡು: ಒಂದು ಚಿನ್ನದ ಹಣಕ್ಕೆ ಒಂದು ಚೀಲ ಭತ್ತ! ಐವತ್ತಾರು ದೇಶಗಳಿಗೆ ಕನಸಿನ ಪುರವಾದ ಕನಕಪುರಿ ನನಗೆ ನರಕವಯ್ಯಾ! ಹುಟ್ಟಿನಿಂದ ನಾನು ಕಂಡ ಕನಸು ನನ್ನೆದುರು ಸಿಕ್ಕಿದೆಯಣ್ಣಾ! ಈವರೆಗೆ ಎಲ್ಲೆಲ್ಲೋ ಇದೆ

ಅಂತ ಹಾರೈಸಿ ಹುಡುಕಿದೆ - ಇಲ್ಲಿರೋದು ತಿಳಿಯದೆ! ಈಗ ಅದು ನನ್ನ ಅಂಗೈಯಲ್ಲೇ ಇದೆ! ಶಿವಾಪುರವೇ ನನ್ನ ಕನಸು! ಶಿವಾಪುರವೇ ನನ್ನ ಚಿನ್ನ! ಚಿನ್ನವೇ ನನ್ನ ಶಿವಾಪುರ! ಶಿವಾಪುರವೇ ನನ್ನ ಹೊಸ ರಾಜಧಾನಿ!"

ಇವನೇನು ಕನವರಿಸುತ್ತಿದ್ದಾನೆಂದು ತಿಳಿಯದೆ ನಿನ್ನಡಿ ಕಕ್ಕಾಬಿಕ್ಕಿಯಾಗಿ

"ನಿನ್ನ ಮಾತು ನನಗೆ ತಿಳಿಯದಲ್ಲ, ರಾಜನೆ!" ಅಂದ.

"ತಿಳಿಯಲಾರದ್ದು ಇದರಲ್ಲೇನಿದೆ ಹುಡುಗಾ? ನೀನು ಒಂದು ಕಡಿಮೆ ನಲವತ್ತು ಹಟ್ಟಿಗಳ ಈ ಶಿವಾಪುರ ಸೀಮೆಗೆ ಒಡೆಯನಲ್ಲವೋ? ಅದರಲ್ಲಿರೋ ಈ ಅಮ್ಮನ ಬೆಟ್ಟವೊಂದನ್ನು ನನಗೆ ಕೊಡು. ಉಳಿದಂತೆ ನೀನೇ ರಾಜ! ನಿನ್ನ ಮೇಲೆ ಯುದ್ಧಮಾಡಿ ಗೆದ್ದುಕೋಬಹುದು. ಅದು ಬೇರೆ ಕಡೆಗೆ. ಶಿವಾಪುರದ ಬೆಟ್ಟವನ್ನಲ್ಲ. ಇಲ್ಲಿರೋನು ನನ್ನ ತರುಣ ಮಿತ್ರ ನಿನ್ನಡಿ! ಒಂದು ಕಾಲಕ್ಕೆ ನಾನು ಓದಿದ ವಿದ್ಯಾಪೀಠವಿದು. ಅದರ ಮೇಲೆ ಯುದ್ಧವೇ ಛೇ! ಅದಕ್ಕೇ ಒಬ್ಬ ಭಂಟನನ್ನೂ ತರಲಿಲ್ಲ ನಾನು! ನನಗೂ ನಿನಗೂ ಮುಖಾಮುಖಿ ಮಾತುಕತೆಯಾದರೆ ಆಯ್ತು. ಪುಗಸಟ್ಟೆ ಕೇಳಿದೆ ಅಂದುಕೋಬೇಡ. ಕೇಳಿದ ಬೆಲೆ ಕೊಡ್ತೀನಪ್ಪ. ಕನಕಪುರಿಯ ಚಕ್ರವರ್ತಿ ನಾನು! ಒಂದು ಕಡಿಮೆ ಇಪ್ಪತ್ತು ರಾಜ್ಯಗಳ ಚಕ್ರವರ್ತಿ! ಇಷ್ಟು ಅಂತ ಬೆಲೆ ಹೇಳು. ಅಷ್ಟೂ ಚಿನ್ನದ ಹಣ ಕೊಡ್ತೀನಿ, ಆಯ್ತ?

ನಿನ್ನಡಿ ನಿರ್ಭಾವುಕನಾಗಿ ಸಮಾಧಾನದಿಂದ ಹೇಳಿದ:

"ರಾಜನೇ ನಾನು ಇಲ್ಲಿಗೆ ಬಂದದ್ದು ಕನಕಪುರಿ ರಾಜ ಬಂದಿದ್ದಾನೆ, ಮಾತಾಡಿಸಿಕೊಂಡು ಹೋಗೋಣ ಅಂತ. ಬೆಟ್ಟದ ಮಾರಾಟಕ್ಕಲ್ಲ."

- ಎಂದು ಎದ್ದು ಹೊರಡಲು ಸಿದ್ಧನಾದ. ಈಗ ಮಾತ್ರ ಮಹಾರಾಜ ಕತಕತ ಕುದಿಯತೊಡಗಿದ. ತನ್ನ ಮಾತು ಕೇಳಿಸಿಕೊಳ್ಳದೆ ತನ್ನ ಅಪ್ಪಣೆ ಇಲ್ಲದೆ ಹೊರಟುದಕ್ಕೆ ಭಾರೀ ಕೋಪ ಬಂತು. "ನಿಂತುಕೊಳ್ಳಯ್ಯ?" - ಅಂದ ಜೋರಾಗಿ. ಆಗಲೇ ಎರಡು ಹೆಜ್ಜೆಯಿಟ್ಟಿದ್ದ ನಿನ್ನಡಿ ನಿಂತ. ಶಿಖರಸೂರ್ಯ ಗುಡುಗಿದ.

"ಹೇಳಕೇಳದೆ ಹೊರಟರಾಯ್ತೇನಯ್ಯಾ ದೊಡ್ಡ ಮನುಷ್ಯ...?'

ಅಷ್ಟೇ ನಿಷ್ಠುರವಾಗಿ ನಿನ್ನಡಿ ಹೇಳಿದ:

"ಬೆಟ್ಟ ನನ್ನೊಬ್ಬನದಲ್ಲ. ಒಂದು ಕಡಿಮೆ ನಾಲವತ್ತು ಹಟ್ಟಿಗಳ ಭಕ್ತರಿಗೆ ಸೇರಿದ್ದು. ನೀನು ಕೊಡುವ ಬೆಲೆಗೆ ಬೆಟ್ಟವನ್ನು ಕೊಡುವದೂ ಬಿಡುವದೂ ಅವರ ತೀರ್ಮಾನಕ್ಕೆ ಬಿಟ್ಟಿದ್ದು".

- ಎಂದೊಂದು ಹೆಜ್ಜೆ ಇಟ್ಟ. ಮತ್ತೆ ಶಿಖರಸೂರ್ಯ "ನಿಲ್ಲು" ಎಂದು ಕಿರಿಚಿದ. ನಿನ್ನಡಿ ನಿಂತ.

"ಬೆಟ್ಟವನ್ನ ನನಗೆ ಕೊಡೋದರಿಂದ ನಿಮ್ಮ ಹಟ್ಟಿಗಳಿಗೆ ಏನೇನು ಲಾಭವಿದೆ ಅಂತ ಅವರಿಗೆ ತಿಳಿಸಿ ಹೇಳು. ಈ ಬೆಟ್ಟ ನನ್ನ ಸಾಮ್ರಾಜ್ಯದ ರಾಜಧಾನಿ ಆಗುತ್ತದೆ. ದೇಶ ವಿದೇಶಗಳ ಪ್ರವಾಸಿಗಳ, ವರ್ತಕರ, ಹಾಗೂ ಪ್ರಭಾವಶಾಲಿಗಳ ಕೇಂದ್ರವಾಗುತ್ತದೆಂದು ಹೇಳು. ಪ್ರತಿಯೊಬ್ಬರಿಗೆ ಕೆಲಸ, ಕೈತುಂಬ ಹಣ ಸಿಗುತ್ತದೆಂದು ಹೇಳು. ಕನಕಪುರಿಗಿಂತ ಹೆಚ್ಚಿನ ವಿಲಾಸ ಜೀವನದ ಸೌಭಾಗ್ಯ ನಿಮಗಾಗಿ ಕಾದಿದೆ ಎಂದು ಹೇಳು. ಅವರನ್ನೆಲ್ಲ ಇಲ್ಲಿಗೇ ಕರೆದುಕೊಂಡು ಬಾ. ನಾನೇ ಹೇಳುತ್ತೇನೆ. ಇಷ್ಟಕ್ಕೆಲ್ಲಾ ನಿನಗೇನು ಲಾಭ? ಅಂತ ಅನುಮಾನ ಬೇಡ. ಶಾಸ್ತ್ರಕ್ಕೆ ಮಾಂಡಳಿಕನಾಗಿರುತ್ತ ಕನಕಪುರಿಯನ್ನ ನೀನೇ ಆಳಯ್ಯ!

“ಇನ್ನೊಂದು ಮಾತು. ಅಮ್ಮ ಇರುವ ಬೆಟ್ಟ ಕೊಡೋದು ಹ್ಯಾಗೆ? ಅಂತ ತಕರಾರು ತೆಗೆದಾರು. ನನ್ನ ಔದಾರ್ಯದ ಬಗ್ಗೆ ಅನುಮಾದ ಬೇಡವೋ - ಅಮ್ಮನಿಗೆ ಬೇರೆ ಕಡೆಗೆ ಕಂಬಕ್ಕೊಂದು ಶಿಲ್ಪವಿರುವ ಸಾವಿರ ಕಂಬಗಳ ದೇವಾಲಯ ಕಟ್ಟಿಸಿ ಕೊಡ್ತೀನಿ. ಅರ್ಥವಾಯಿತೋ?”

ಎಂದ ಮಾತಿಗೆ ನಿನ್ನಡಿ ವ್ಯಂಗವಾಗಿ ಕತ್ತು ಹಾಕಿ ಹೊರಟ. ತಕ್ಷಣ ಶಿಖರಸೂರ್ಯ ಕಿರಿಚಿದ:

“ಇದನ್ನೂ ಹೇಳು: ಕೊಡದಿದ್ದಲ್ಲಿ ಬಲದಿಂದ ಪಡೆಯುವ ಶಕ್ತಿ, ಈ ಮಹಾರಾಜನಿಗಿದೆ.”

ತಕ್ಷಣ ನಿನ್ನಡಿ ತಿರುಗಿ ನಿಂತು - ಶಾಂತಚಿತ್ತದಿಂದ ಹೇಳಿದ:

“ಇಲ್ಲಿಯವರೆಗೆ ಯಾವ ರಾಜಮಹಾರಾಜನೂ ಒಂದು ಕಡಿಮೆ ನಲವತ್ತು ಹಟ್ಟಿಗಳಿಗೆ ಸೇರಿದ ಈ ಶಿವಾಪುರ ಸೀಮೆ ತನ್ನದೆಂತು ಹೇಳಿಕೊಂಡಿಲ್ಲ. ಕಪ್ಪು ಕಾಣಿಕೆ ಪೊಗದಿ ಕೇಳಿಲ್ಲ. ಈ ಬೆಟ್ಟ ಆತ್ಮ ರಕ್ಷಣೆ ಮಾಡಿಕೊಳ್ಳೋದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ”. ಕೇಳಿಲ್ಲ. ಈ ಬೆಟ್ಟ ಆತ್ಮ ರಕ್ಷಣೆ ಮಾಡಿಕೊಳ್ಳೋದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ”.

ಇಷ್ಟು ಹೇಳಿ ನಿನ್ನಡಿ ತಿರುಗಿ ಹೊರಟ.

ಅವನ ಸೊಕ್ಕಿನ ಮಾತು ಕೇಳಿ ಶಿಖರಸೂರ್ಯನಿಗೆ ರುದ್ರಗೋಪ ಬಂತು ನೋಡು ವಾರೆಗಣ್ಣು ಕಿಸಿದು ಭಂಟರ ಕಡೆಗೆ ನೋಡಿ ಸನ್ನೆ ಮಾಡಿದ.

ತಕ್ಷಣ ಭಂಟರು ನಿನ್ನಡಿಯನ್ನ ಬಂಧಿಸಿ ಕೈ ಬಾಯಿ ಕಟ್ಟಿ ಒಳಗಿನ ದೇವರ ಕೋಣೆಯಲ್ಲಿ ಚೆಲ್ಲಿ ಬೀಗ ಜಡಿದರು.

## ಎಪ್ಪತ್ತೊಂದು

ಆ ದಿನ ಮಧ್ಯರಾತ್ರಿಯಿಂದಲೇ, ಚಂದ್ರಾವತಿ ಮಡುವಿನಲ್ಲಿ ಸಿದ್ಧರು, ಸಾಧಕರು, ಸನ್ಯಾಸಿಗಳು, ಯೋಗಿ ಋಷಿಮುನಿಗಳು ಮೀಯತೊಡಗಿದ್ದರು. ಇವು ಹಬ್ಬ ಆಚರಣೆಯ ದಿನಗಳಲ್ಲ. ಯಾರೂ ಹೇಳಿ ಕಳಿಸಿರಲಿಲ್ಲ. ಆದರೂ ಇವರೆಲ್ಲ ಹ್ಯಾಗೆ ಬಂದರು? ಯಾಕೆ ಬಂದರು? ಇದೆಲ್ಲಾ ನಮಗೆ ತಿಳಿಯದ ಸಂಗತಿ. ಇವರಿಗೆ ಯಾರಿಗೂ ಅಪಾಯದ ಅಂದಾಜು ಕೂಡ ಆದಂತಿರಲಿಲ್ಲ. ನೋಡಿದರೆ ಬೇಜವಬ್ದಾರಿಗಳೋ ಅಥವಾ ಬದುಕಿನ ಅಸಂಗತವನ್ನು ಅರಿತವರೋ - ಅಂತೂ ಜಾತ್ರಗೆ ಬಂದ ಸಖೀ ಜನರಂತೆ ನೆರೆದಿದ್ದರು.

ಇವರದೊಂದು ತೂಕವಾದರೆ ಕುರುಮುನಿ ಮಹಾರಾಜನದೇ ಇನ್ನೊಂದು ತೂಕ. ಶಿವಾಪುರದಲ್ಲಿ ಪ್ರತ್ಯಕ್ಷನಾದಾಗೊಮ್ಮೆ ಒಂದೊಂದು ವೇಷದಲ್ಲಿ ಬರುತ್ತಿದ್ದ. ಈ ಸಲದ ಅವನ ವೇಷ ಇನ್ನೂ ಹಾಸ್ಯಾಸ್ಪದವಾಗಿತ್ತು. ನಾಲ್ಕಡಿ ಎತ್ತರದ ದೇಹಕ್ಕೆ ಮಹಾರಾಜನಂತೆ ಹಸಿರು ಮೇಲಂಗಿ ಧರಿಸಿ ತಲೆಗೆ ದೊಡ್ಡ ಬುಟ್ಟಿಯಂಥ ಜರಿ ರುಮಾಲು ಸುತ್ತಿದ್ದ. ಬೆಕ್ಕಿನ ಕಣ್ಣಿನಂತೆ ತನ್ನ ಹಸಿರುಗಣ್ಣಿಗೆ ಕಾಡಿಗೆ ಹಚ್ಚಿಕೊಂಡಿದ್ದ. ಬೇರೆ ಸಾಧಕರು ಮಂತ್ರೋಚ್ಚಾರಣೆ ಮಾಡುತ್ತ ಮೀಯುತ್ತಿದ್ದರೆ ಈತ ಮಡುವಿನ ಬಳಿ ಕೂತು ತನ್ನ ಕಾಲಗೇ ಬೆಂಕಿ ಹೊತ್ತಿಸಿಕೊಂಡು ಕಾಸಿಕೊಳ್ಳುತ್ತ ಜನಪದ ಪ್ರಣಯ ಗೀತೆಗಳನ್ನು ಗುನುಗುತ್ತಿದ್ದ. ವಯಸ್ಸಾದವರಿಗೆ ಕೂಡ “ಮಗು” ಎಂದೇ ಕರೆದು ಮಾತಾಡಿಸುತ್ತಿದ್ದ. ಅನೇಕ ಯುವ ಸಾಧಕರು ಅವನ ಸೇವೆ ಮಾಡುವದಕ್ಕೆ ನಾ ಮುಂದು ತಾ ಮುಂದೆಂದು ಉತ್ಸಾಹ ತೋರಿಸುತ್ತಿದ್ದರು. ಇವನ ವಿಷಯ ಗೊತ್ತಿದ್ದ ಕಲವರು ಬೇಕೆಂದೇ ಬಂದು “ಮಹಾರಾಜ ಚಿಲುಮೆ ಸೇದಲಿಕ್ಕೆ ಬೆಂಕಿ ಬೇಕು” ಎಂದು ಕೇಳುತ್ತಿದ್ದರು. ಈತ “ತಗೊ” ಎಂದು ತನ್ನ ತೋರು ಬೆರಳನ್ನ ಸೆಟೆಸಿ ನಿಲ್ಲಿಸಿದರೆ ಅದರ ತುದಿಗೆ ಉರಿ ಕಾಣಿಸುಕೊಳ್ಳುತ್ತಿತ್ತು! ಇಂಥ ಅನೇಕ ಚಮತ್ಕಾರಗಳನ್ನಾತ ಮಾಡುತ್ತಿದ್ದ. ಆತನ ಮಾತುಗಾರಿಕಿಯೂ ರೋಚಕವೇ.

ಮಿಂದ ಅನೇಕರು ಬೆಟ್ಟಕ್ಕೆ ಹೊರಟರೆ ಇನ್ನು ಕೆಲವರು ಇವನ ಸುತ್ತ ಮಾತಿಗಾಗಿ ಕೂತರು. ಇನ್ನಿವನ ಮಾತುಗಾರಿಕೆ ಸುರುವಾಯಿತು ನೋಡು - ಶಿಖರಸೂರ್ಯ ಬಂದಾಗಿನಿಂದ ಕನಕಪುರಿಯಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ವರ್ಣನೆ ಮಾಡುತ್ತಿದ್ದ. ಕೂತಿದ್ದ ವೃದ್ಧಸನ್ಯಾಸಿಯೊಬ್ಬ,

“ಅದೆಲ್ಲಾ ಬರೋಬರಿ ಮಾರಾಜನೇ, ಈ ಜಯಸೂರ್ಯ ಮಹಾರಾಜ ಶಿವಾಪುರಕ್ಕೆ ಯಾಕೆ ಬಂದ?

“ಈ ಮೂರ್ಖರಾಜ ಶಿವಪುರಕ್ಕೆ ಬಂದಿದ್ದಾನಲ್ಲ, ಯಾಕೆ ಗೊತ್ತೊ? ಬೆಟ್ಟದ ಅಮ್ಮನ ಜಾಗಾ ಖಾಲಿ ಮಾಡಿಸಿ ಆ ಸ್ಥಳದಲ್ಲಿ ತಾನು ಕೂತುಕೋಬೇಕು ಅಂತ ಆಸೆ ಅವನಿಗೆ….”

ಚಿಲುಮೆ ಸೇದುತ್ತ ಕೂತಿದ್ದ ಇನ್ನೊಬ್ಬ ಸನ್ಯಾಸಿ ಸಡುವೆ ಬಾಯಿ ಹಾಕಿದ.

“ಅಮ್ಮನನ್ನ? ನಮ್ಮ ಆತ್ಮದಳೊಗಿನ ಅಮ್ಮನನ್ನ ಕಿತ್ತು ಹಾಕೋದು ಸಾಧ್ಯವೆ ಮಹಾರಾಜ?”

ಕುರುಮುನಿ ಹೇಳಿದ:

“ಮಗು, ಆತ ನಿನ್ನ ಆತ್ಮದಳೊಗಿನ ಅಮ್ಮನನ್ನ ಕಿತ್ತು ಹಾಕೋದಿಲ್ಲಪ್ಪ…. ನಿನ್ನ ಆತ್ಮವನ್ನೇ ಕೊಂಡು ಬಿಡ್ತಾನವನು! ಆವಾಗೇನು ಮಾಡ್ತಿ? ನಿನಗಿನ್ನೂ ಈ ಕತೆ ಗೊತ್ತಿಲ್ಲ. ಕನಕಪುರಿಯ ರಾಜ ಬಂದು ಯಾವುದೋ ಹಳ್ಳಿಯ ಪೂಜಾರಿಗೆ ಅದೇನೋ ರಸ ಕುಡಿಸಿದನಂತಪ್ಪ, ನಮ್ಮ ಗೊಳಬಾರಸ ಇರುತ್ತಲ್ಲ ಹಾಗಿತ್ತಂತೆ ಅದು, ಪೂಜಾರಿ ಕುಡಿದ…. ಕುಡಿದ…. ಕೂಡಲೇ ಹದ್ದಾಗಿ ಹಾರಬೇಕಂತ ಆಸೆ ಆಯ್ತು! ನೋಡಿಕೊಂಡರೆ ಅವನ ಕೈಗಾಗಲೇ ಹದ್ದಿನ ರೆಕ್ಕೆ ಪುಕ್ಕ ಮೂಡಿವೆ! ಮೂಗು ಹದ್ದಿನ ಚುಂದಿನ ಹಾಗೆ ಬಿರುಸಾಗಿದೆ!

ಆದರೂ ಯಾಕೋ ಏನೋ ಹಾರಲಿಕ್ಕೆ ಬರವೊಲ್ದು! ರೆಕ್ಕೆ ಪುಕ್ಕ ಎಷ್ಟು ಬೀಸಿದರೂ ಹಾರಲಿಕ್ಕಾಗವೊಲ್ದು! ಕೊನೆಗೆ ರಾಜನ ಬಂಟರು ಅವನನ್ನ ಬೆಟ್ಟದ ಮ್ಯಾಲೆ ನಿಲ್ಲಿಸಿ “ಹಾರಲೇ ಪೂಜಾರಿ!” ಅಂತ ತಳ್ಳಿದರು. ರೆಕ್ಕೆ ಮೂಡಿದ ಪೂಜಾರಿ ಕೈ ಬೀಸಿದ. ಕಾಲು ಬಡಿದ! ಏನು ಮಾಡಿದರೂ ಹಾರಲಿಕ್ಕಾಗದೆ ಕೆಳಗೆ ಬಿದ್ದು ಸತ್ತ! ರಾಜನ ಭಟರು ಓಡಿ ಹೋಗಿ ಅವನ ಹೆಣ ತಂದು ಕುದಿಸಿ ತಿಂದರಪ! ಮಾರನೇ ಬೆಳಿಗ್ಗೆ ಬಾಳೇ ಎಲೆಯಲ್ಲಿ ತಮ್ಮ ಹೇಲು ತಂದು “ನಿಮ್ಮ ಪೂಜಾರಿ ಏನಾಗಿದ್ದಾನೆ ನೋಡಿರಿ!” ಅಂದರು. ಸಾಕೇನಪ್ಪ?!

ಈ ಮಾತಿಗೆ ಯಾರೂ ನಗಲಿಲ್ಲ. ಕುರುಮುನಿಗೆ ನಿರಾಸೆಯಾಯಿತು. “ಯಾಕ್ರೆಪಾ ಯಾರೂ ನಗಲಿಲ್ಲ?” ಅಂದ. ಕತೆಯ ಸತ್ಯ ಅವರಿಗರ್ಥವಾಗಿತ್ತು. ವಿಷಾದದಿಂದ “ನೀ ಹೇಳಿದ್ದು ಖರೆ ಐತಿ ಮಹಾರಾಜ!” ಎಂದು ಹೇಳಿ ಮೌನಿಗಳಾಗಿ ಗವಿಯ ಕಡೆಗೆ ನಡೆದರು.

ಇತ್ತ ಶಿಖರಸೂರ್ಯನಿಗೆ ಬೇರೆ ಸಮಸ್ಯೆ ಎದುರಾಗಿತ್ತು. ಮಾನವ ಭಂಟರನ್ನ ಕರೆತಂದರೆ ಅವರು ಶಿವಾಪುರವನ್ನಾಗಲಿ, ಅಮ್ಮನ ಪ್ರಭಾವಳಿಯನ್ನಾಗಲಿ ಎದುರಿಸದೆ ಸುಲಭವಾಗಿ ಒಳಗಾಗುವರೆಂದು ಅನುಮಾನವಿತ್ತು. ಅಲ್ಲದೆ ತನ್ನ ಮೇಲೇ ತಿರುಗಿ ಬೀಳಬಹುದೆಂದೂ ಅನುಮಾನವಿದ್ದುದರಿಂದ ಮೇವಿನ ಸೈನಿಕರನ್ನೇ ನಚ್ಚಿಕೊಂಡು ಬಂದಿದ್ದಲ ಆದರಿಲ್ಲಿ ಕೆಳಗಿನಿಂದ ಬೆಟ್ಟದ ಮೇಲಿನ ಗವಿಗೆ ಸಿಡಿತಲೆ ಸಿಡಿಸುವುದಾಗಲಿ, ಗುರಿಯಿಡುವುದಾಗಲೆ ಸಾಧ್ಯವಿರಲಿಲ್ಲವಾದ್ದರಿಂದ ಸಿಡಿತಲೆ ಗಾಡಿಯನ್ನು ಬೆಟ್ಟದ ಮೇಲಕ್ಕಿ ಏರಿಸಬೇಕಾಗಿತ್ತು. ಆದರೆ ಬೆಟ್ಟದ ಕಾಲು ದಾರಿಯೇ ಬೇರೆ. ಬಂಡೀ ಮಾರ್ಗ ಸುತ್ತು ಬಳಸಿ ಏರುವಂತಾದ್ದು. ಅದಕ್ಕೆ ಮಾಗಫ ಬಲ್ಲವರೇ ಆಗಬೇಕು. ಆದ್ದರಿಂದ ಊರಿನ ಸುಮಾರು ಒಂದು ಕಡಿಮೆ ಇಪ್ಪತ್ತು ತರುಣರನ್ನು ಸೇರಿಸಿ ಪ್ರತಿಯೊಬ್ಬರಿಗೆ ಬೊಗಸೆ ತುಂಬ ಚಿನ್ನ ಕೊಟ್ಟು ಹೇಳೀದ:

“ಚಿನ್ನದ ಅಪೇಕ್ಷೆ ಇದ್ದವರೆಲ್ಲಾ ನನ್ನ ಸೋದರ ಸೋದರಿಯರು. ಅವರಿದ್ದಲ್ಲಿ ನಾನಿದ್ದೇನೆ. ಅವರಿರುವ ಸೀಮೆಯೇ ನನ್ನ ಸೀಮೆ. ಅವರಿರುವ ದೇಶವೇ ನನ್ನ ದೇಶ; ನನಗೆ ನನ್ನ ಸ್ವಂತ ಊರು ಯಾವುದಿದೆ? ಚಿನ್ನವಿರುವ ಪ್ರದೇಶವೇ ನನ್ನ ಪ್ರದೇಶ. ಅದೇ ನನಗನ ರಾಜ್ಯ. ನನ್ನ ಊರು, ನನ್ನ ಕನಸು, ಭವಿಷ್ಯ, ದೇವರು!

ಹಳೇ ಗೊಡ್ಡುಗಳು ತಮ್ಮ ರಕ್ಷಣೆಗೆ ಏನೇನೋ ಕಟ್ಟಿಕೊಂಡಿದ್ದಾವೆ; ಧರ್ಮ ದೇವರು, ಸಮಾಜ, ಭಕ್ತಿ ಇತ್ಯಾದಿ ಇನ್ನೂ ಏನೇನೊ. ಅವನ್ನೆಲ್ಲಾ ನಾವು ಮನಸ್ಸಿಗೆ ಹಚ್ಚಿಕೋಬಾರದು.

“ಬದಲಾವಣೆಗೆ ಈ ಊರಿನ ಗುಗ್ಗುಗಳು ಹೆದರುತ್ತಾರೆ. ಅವರಿಗೆ ಅದೇ ಶಿವಾಪುರ ಬೇಕು. ಅದೇ ಬೆಳೆ ಬಿತ್ತುವ, ಬೆಳೆಯುವ, ಅದೇ ಸುಗ್ಗಿ ಒಕ್ಕುವ, ಅದೇ ರೈತ, ಅದೇ ಶಿವಪಾದ…. ಇದು ಜೀವನ ಅಲ್ಲ ಅಂತ ನೀವು ಹೇಳಿಕೊಡಬೇಕು. ನೀವು ಯುವಕರು. ಗೊಡ್ಡು ಪುರಾನ ಹೇಳುತ್ತ ಕೇಳುತ್ತ ದರಿದ್ರರಾಗೋದು ನಮಗೆ ಬೇಡ ಅಂತ ಹೇಳುವ ಕಾಲ ಬಂದಿದೆ.

ನಿಮಗಾಗಿ ಸ್ನೇಹಿತರೇ, ನಿಮಗಾಗಿ ಹೊಸಗಾಳಿ ಬೀಸುತ್ತಿದೆ. ಹೊಸ ಮಳೆ ಬೀಳಲಿದೆ. ಕುಯ್ಲಿಗಾಗಿ ಹೊಸ ಬೆಳೆ ಬರಲಿದೆ. ಬನ್ನಿ ಮುಂದೆ ಬನ್ನಿ!”

- ಎಂದು ಹುರಿದುಂಬಿಸಿ, ಅವರನ್ನು ಸಿಡಿತಲೆಯಿದ್ದ ಗಾಡಿಯನ್ನು ತಳ್ಳುವ, ಎತ್ತುವ ಬೆಟ್ಟಕೊಯ್ಯುವ ಕೆಲಸಕ್ಕೆ ನಿಯಮಿಸಿದ.

ಮುಂದೆ ನಾಲ್ಕು ಕುದುರೆ ಹೂಡಿದ್ದರು ಎಳೆಯಲಾಗದ ಗಾಡಿಯನ್ನು ಸದರಿ ಹುಡುಗರು ಹೆಗಲು ಹಚ್ಚಿ ಮ್ಯಾಲೆ ತಳ್ಳುತ್ತಿದ್ದರು. ಕುದುರೆಗಳು ಜಗ್ಗಲಾರದೆ ಏಟು ತಿಂದು ಅವುಗಳ ಬಾಯಲ್ಲಿ ನೊರೆ ಬರುತ್ತಿತ್ತು. ಮೈಯಿಂದ ಬೆವರು ಸುರಿಯುತ್ತಿತ್ತು. ಹುಡುಗರು ಮಾತ್ರ ಉತ್ಸಾಹದಿಂದ ಇದ್ದರು. ಹುಡುಗರಿಗೆ ತಾವೇನು ಒಯ್ಯುತ್ತಿದ್ದೇವೆ, ಯಾಕೆ ಒಯ್ಯುತ್ತಿದ್ದೇವೆಂಬ ಅರಿವಿಲ್ಲವೆಂದು ಭಾವಿಸಿ ಒಬ್ಬ ಅವರ ಬಳಿಗೆ ಹೋಗಿ ವಿವರಿಸಿ ನೋಡಿದ. ಕೆಲಸಕ್ಕೆ ಹಿಂಜರಿದರಾದರೂ ಯಾರೊಬ್ಬರೂ ತಗೊಂಡ ಚಿನ್ನವನ್ನ ಹಿಂದಿರುಗಿಸಲು ಮನಸ್ಸು ಮಾಡಲಿಲ್ಲ. !

ಇತ್ತ ಶಿವಪುರದವರಿಗೆ ಇನ್ನೊಂದು ಭಾರೀ ಆಶ್ಚರ್ಯ ಕಾದಿತ್ತು. ಸುಮಾರು ಒಂದು ನೂರು ಜನ ಶಿಸ್ತಿನ ಸೈನಿಕರು ಶಿವಾಪುರದಲ್ಲಿದ್ದ ಒಂದೇ ರಸ್ತೆಯಲ್ಲಿ ಮುರಿಗೆಪ್ಪನ ತೋಟದಿಂದ ಮಂಟಪದವರೆಗೆ, ಮಂಟಪದಿಂದ ಪುನಃ ತೋಟದವರೆಗೆ ಸಾಲಾಗಿ ಕೈ ಬೀಸುತ್ತ, ನೆಲಕ್ಕೆ ಕಾಲು ಅಪ್ಪಳಿಸುತ್ತ ನಡೆದಾಡತೊಡಗಿದರು. ಬರೀ ನಡೆದಾಡುವುದೇ ಶಿವಾಯಿ ಆಜೂ ಬಾಜೂ ಯಾರನ್ನೂ ನೋಡುತ್ತಿರಲಿಲ್ಲ. ಅವರಲ್ಲಿಯ ಯಾರೊಬ್ಬರ ಮುಖದಲ್ಲೂ ಭಾವನೆಗಳಿರಲಿಲ್ಲ. ಪ್ರತಿಯೊಬ್ಬರೂ ನೇರವಾಗಿ ಸೆಟೆದು ಸರಳ ರೇಖೆಯಾಗಿ ಅಳೆದಿಟ್ಟಂತೆ ಹೆಜ್ಜೆಯಿಡುತ್ತಿದ್ದರು. ತಮ್ಮ ನಡಿಗೆಯಲ್ಲಾಗಲಿ, ಕ್ರಿಯೆಯಲ್ಲಾಗಲಿ ಅವರಿಗೆ ಯಾವುದೇ ಅನುಮಾನಗಳಿರಲಿಲ್ಲ. ಯಾರೊಬ್ಬರೂ ಮಾತಾಡುತ್ತಿರಲಿಲ್ಲ, ನಗುತ್ತಿರಲಿಲ್ಲ.

ನಿನ್ನಡಿ ಆಟಕ್ಕಾಗಿ ಮೇವಿನಿಂದ ತಯಾರಿಸಿದ ಇಂಥ ಸೈನಿಕರನ್ನು ನೋಡಿದವರಾದ್ದರಿಂದ ಜನ ಹೆಚ್ಚಿಗೆ ತಲೆ ಕೆಡಿಸಿಕೊಳ್ಳಲಿಲ್ಲ. ಆ ಸೈನಿಕರನ್ನು ನೋಡಿ ಬಿದ್ದೂ ಬಿದ್ದೂ ನಕ್ಕವನೆಂದರೆ ಕುರುಮುನಿ ಮಾತ್ರ.

ಸದರೀ ಸೈನಿಕರು ನಾಲ್ಕು ತಾಸು ಹೊತ್ತೇರುವ ತನಕ ಕವಾಯತು ಮಾಡಿ ನ್ಯಾರೇ ಸಮಯಕ್ಕೆ ದಾಸೋಹದ ಮನೆಗೆ ನುಗ್ಗಿದರು. ಅಲ್ಲಿದ್ದ ಯಾರನ್ನೂ ದಾದು ಮಾಡದೆ ವಲಸೆ ಬಂದ ಅತಿಥಿಗಳು, ಸಾಧು ಸನ್ಯಾಸಿಗಳಿಗಾಗಿ ಮಾಡಿಟ್ಟ ಅಡಿಗೆಯನ್ನೆಲ್ಲ ಬಡಿಸಿಕೊಂಡು ತಿಂದರು. ಎಂಜಲೆಲೆಗಳನ್ನು ಕಾನಿನಿಂದೊದ್ದು ಚೆಲ್ಲಾಡಿದರು. ಪ್ರತಿಭಟಿಸಿದ ಹಿರಿಯರನ್ನು ಪಕ್ಕಕ್ಕೆ ತಳ್ಳಿ ತಮ್ಮ ಪಾಡಿಗೆ ತಾವು ತಿಂದು ಉಂಡು ಉಳಿದದ್ದನ್ನ ಚೆಲ್ಲಾಡಿ ಹೊರ ನಡೆದರು!

ಹೊರಬಂದ ಸೈನಿಕನೊಬ್ಬ ನೀರು ತರುವ ಹೆಂಗಸಿನತ್ತ ಗುರಿ ಹಿಡಿದು ಧೋತ್ರ ಎತ್ತಿ ನಿಂತುಕೊಂಡೇ ಉಚ್ಚೆಹೊಯ್ದ. ಊರ ಹಿರಿಯನೊಬ್ಬ ಅದನ್ನು ನೋಡಿದವನೇ ಆ ಸೈನಿಕನನ್ನು ಜಾಡಿಸಿ ಒದ್ದ. ಸೈನಿಕ ಅಷ್ಟು ದೂರ ಹೋಗಿ ಅವನೊಂದು ಕಡೆಗೆ ಅವನ ಭಲ್ಲೆ ಒಂದು ಕಡೆಗಾಗಿ ಬಿದ್ದ. ತಕ್ಷಣ ಎದ್ದು ತನ್ನ ಬಲ್ಲೆಯನ್ನ ತಗೊಂಡು ಇವನ ಕಡೆಗೆ ಗುರಿ ಮಾಡಿ ಹಿಡಿದ. ಇರಿಯುವಷ್ಟರಲ್ಲಿ ಇನ್ನೊಬ್ಬ ಹುಡುಗ ಅವನ ಭಲ್ಲೆ ಹಿಡಿದೆಳೆದು ಅಷ್ಟು ದೂರ ಎಸೆದು ಇವನೂ ಅವನನ್ನು ಒದ್ದ. ಹಾ ಎನ್ನುವುದರೊಳಗಾಗಿ ಜನ ಸೇರಿ ಸೈನಿಕರೆದುರು ನಿಂತರು. ಕೆಂಜಗ ಮುಖ ಮಾಡಿಕೊಂಡ ಇನ್ನೊಬ್ಬ ಸೈನಿಕ ದೃಢವಾಗಿ ನಿಂತು ತನ್ನ ಸಂಗಡಿಗರ ಶಕ್ತಿ ಎಷ್ಟೆಂದು ಗ್ರಹಿಸಿ ಅವರೊಂದಿಗೆ ಎದುರಿಗೆ ನಿಂತಿರುವ ಜನಜಂಗುಳಿಯ ಎದುರು ತಾವು ನಿಲ್ಲಲಾರೆವೆಂದು ಅನ್ನಿಸಿ, ಹಿಂದಿರುಗುವಷ್ಟರಲ್ಲಿ ಕಿವಿಗಡಚಿಕ್ಕುವಂತೆ ಸದ್ದು ಕೇಳಿಸಿತು. ಇಡೀ ಊರು, ಕೊಳ್ಳ, ಬೆಟ್ಟ, ಸ್ತಬ್ಧವಾದವು. ಆ ಕೊಳ್ಳದಲ್ಲಿ ಐದಾರು ಸಲ ಅದರ ಪ್ರತಿಧ್ವನಿ ಕೇಳಿಸಿತು. ಜನ ಎಲ್ಲಿ ಏನಾಯಿತೆಂದು ತಿಳಿಯದೆ ಅತ್ತ ಇತ್ತ ಗಾಬರಿಯಿಂದ ಕಣ್ಣಗಲಿಸಿ ನೋಡತೊಡಗಿದರು. ಸಿಡಿತಲೆಯಿದ್ದ ಇನ್ನೊಂದು ಗಾಡಿಯಿಂದೊಬ್ಬ ಬೆಟ್ಟ ಗುರಿಯಾಗಿ ಸಿಡಿತಲೆ ಹಾರಿಸಿದ್ದ! ಅದು ಹಾರಿದಲ್ಲಿಂದ ಅದು ಬಿದ್ದಲ್ಲಿ ಹೊಗೆಮಂಡಲ ರಚನೆಗೊಂಡು ಸೂರ್ಯನ ಬೆಳಕನ್ನ ಕಡಿಮೆ ಮಾಡಿತು. ಅದನ್ನು ನೋಡಿ ಅಲ್ಲಿದ್ದ ಎಲ್ಲರ ಮುಖಗಳು ಪ್ರಕಾಶಗೊಂಡವು. ಮದ್ದಿನ ವಾಸನೆ ಹಬ್ಬುತ್ತಿತ್ತು. ಗಾಳಿ ಇರಲಿಲ್ಲವಾದ್ದರಿಂದ ಹೊಗೆ ಚಲಿಸದೇ ಅಲ್ಲೇ ಸುತ್ತಾಡತೊಡಗಿತು.

ಜನ ಸೇರಿ ರಾಜನನ್ನು ದ್ರೋಹಿ ಎಂದು ಬೈದು ಅವನ ಬಲಿಯಾಗಬೇಕೆಂದರು. ಅಷ್ಟರಲ್ಲಿ ಬಕ್ಕತಲೆಯ, ನೆತ್ತರು ಸೋರುತ್ತಿದ್ದ ಒಬ್ಬನನ್ನು ಇಬ್ಬರು ತೋಳು ಹಿಡಿದು ಕರೆದು ತಂದರು. ಸಿಡಿತಲೆ ಗುಂಡು ಮಂಟಪಕ್ಕೆ ಬರುತ್ತಿದ್ದವನ ತೋಳಿನಲ್ಲಿ ಹೊಕ್ಕು ಅವನ ತೋಳು ತುಂಡಾಗಿ ಜೋತಾಡುತ್ತಿತ್ತು. ಅಲ್ಲಿಂದ ಒಂದೇ ಸಮ ರಕ್ತ ಸುರಿದು ಬಟ್ಟೆ ಒದ್ದೆಯಾಗಿತ್ತು. ಸೈನಿಕರಿನ್ನೂ ಸುಮ್ಮನೆ ನಿಂತುಕೊಂಡು ಓಡುವುದೋ ಎದುರಿಸುವುದೋ - ಅಂತ ಚಿಂತೆಮಾಡುತ್ತ ನಿಂತಿದ್ದಾಗ _ ಶಿಖರಸೂರ್ಯನ ಕುದುರೆಗಾಡಿ ಅಲ್ಲಿಗೇ ಬಂತು! ಜನ ನುಗ್ಗಿ ತೋಳು ಕಳೆದುಕೊಂಡವನನ್ನು ತೋರಿಸಿ "ದ್ರೋಹಿ, ಪಾಪಿ" ಎಂದು ಜರಿದರು. ಕೈಕಳೆದುಕೊಂಡವನನ್ನು ನೋಡಿ ಶಿಖರಸೂರ್ಯನ ಮುಖಚರ್ಯೆಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಅವನಲ್ಲಿ ಆತಂಕವಾಗಲಿ, ಮರುಕವಾಗಲಿ ಮೂಡಲಿಲ್ಲ. ಮುಗುಳುನಗೆ ನಗುತ್ತ ತನ್ನ ಗಿಡುಗನೋಟದಿಂದ ಎಲ್ಲರನ್ನು ಕೃತಕ ಪ್ರೀತಿಯಿಂದ ನೋಡಿದ. ಗಾಯಾಳುವಿಗೆ ಕೂಡಲೇ ಬೊಗಸೆ ತುಂಬ ಚಿನ್ನದ ಧಾನ್ಯ ಕೊಡಲು ಗಾಡಿಯ ಸಾರಥಿಗೆ ಹೇಳಿದ. ಸಾರಥಿ ಕೊಡಹೋದಾಗ ಅವನು "ಕಳೆದ ಕೈ ಕೊಡ್ತಿಯಾ?" ಎಂದು ಕೇಳಿದ. ತಕ್ಷಣ ಶಿಖರಸೂರ್ಯ ಎರಡೂ ಕೈಗಳಿಂದ ಗಾಡಿಯಲ್ಲಿದ್ದ ಚೀಲದಿಂದ ಬೊಗಸೆ ತುಂಬ ಚಿನ್ನದ ಧಾನ್ಯ ತಗೊಂಡು ಕೈ ಕಳೆದುಕೊಂಡವನ ಮೇಲೆ ನಿಧಾನವಾಗಿ ಸುರಿದ! ಇಡೀ ಜನಜಂಗುಳಿ ಬೆರಗಿನಿಂದ ನಿಶ್ಯಬ್ದವಾಗಯಿತು. ಇನ್ನೊಂದು ಬೊಗಸೆ ತಗೊಂಡು ಜನರ ಮೇಲೆ ಎಸೆದು ಕುರುಮುನಿಯ ಕಡೆಗೆ ನೋಡಿದ. ಅವನ ಮೇಲೂ ಒಂದು ಬೊಗಸೆ ಎಸೆದ. ಆಯ್ದುಕೊಳ್ಳಲು ನೂಕುನುಗ್ಗಲು ಹೆಚ್ಚಾಯಿತು. ಮಹಾರಾಜ ಗೆದ್ದನೆಂದು ಹೆಮ್ಮೆಯಿಂದ ಬೀಗಿದ. ಆರಿಸಿಕೊಳ್ಳುತ್ತ ಇಲ್ಲೇ ಬಿದ್ದಿರಲೆಂದು ಇನ್ನಷ್ಟು ಎಸೆದು ಕುರುಮುನಿಯನ್ನ ನೋಡಿ ವಿಜಯದ ನಗೆ ನಗುತ್ತ ಗಾಡಿಯನ್ನು ತಿರುಗಿಸಲು ಸೂಚಿಸಿದ.

ಶಿಖರಸೂರ್ಯನ ಆರ್ಭಟದಿಂದ ಹಿರಿಯರು ಹತಾಶರಾದರು. ಬೆಟ್ಟಕ್ಕೆ ಹೋದ ನಿನ್ನಡಿ ಇನ್ನೂ ಬಂದಿಲ್ಲವೆಂದು, ಕರೆದು ತರಲು ಹೋದ ಹುಡುಗ ಒಬ್ಬನೇ ಹಿಂದಿರುಗಿದನೆಂದು ತಿಳಿದೊಡನೆ ಜನ ಕಂಗಾಲಾದರು. ಶಿಖರಸೂರ್ಯ ಧಾನ್ಯದ ಚಿನ್ನವನ್ನ ತನ್ನ ತಲೆಯ ಮೇಲೆ ತೂರಿದಾಗಂತೂ ಕುರುಮುನಿ ಅವಮಾನದಿಂದ ಚಡಪಡಿಸಿದ. ಯಃಕಶ್ಚಿತ್ ರಾಜ, ಮಹಾರಾಜನಾದ ತನ್ನನ್ನ ಅವಮಾನಿಸಿದನೆಂದು - ಅಲ್ಲಿ ನಿಲ್ಲಲಾಗದೆ ಬೆಳ್ಳಿಯ ಮನೆಯ ಕಡೆಗೆ ರಭಸದಿಂದ ಹೊರಟ.

ನಿನ್ನೆ ಕಂಡ ಕನಸಿನ ಭಯದಲ್ಲಿಯೇ ಗೌರಿ ಒಲೆಯ ಮುಂದೆ ಕೂತಿದ್ದಳು. ಬೆಟ್ಟದ ಬಳಿ ಭಯಾನಕವಾದ ಗುಂಡು ಹಾರಿದ ಸದ್ದು ಕೇಳಿಸಿತ್ತು. ಎಲ್ಲಿ ಹೋದರೂ ಗೌರಿಗೆ ತಪ್ಪಿದರೆ ಅಬ್ಬೆಗೆ ಹೇಳಿ ಹೋಗುವ ನಿನ್ನಡಿ ನಿನ್ನೆ ಹೇಳದೆ ಕೇಳದೆ ಬೆಟ್ಟಕ್ಕೆ ಹೋಗಿದ್ದ. ಹೋದವನ ಹೊತ್ತೇರಿ ಊರು ಚಡಪಡಿಸುತ್ತಿದ್ದರೂ ಬಂದಿರಲಿಲ್ಲ. ಕನಸನ್ನು ಜ್ಞಾಪಿಸಿಕೊಂಡಷ್ಟೂ ಭಯವಾಗುತ್ತಿತ್ತು. ಸುಮ್ಮನೆ ಕೂರಲಾರದ ಗೌರಿ ಏನನ್ನೋ ನಿರ್ಧರಿಸಿ ಎದ್ದು, ಮಿಂದು ಮಡಿಯುಟ್ಟು, ಕುಂಕುಮ ಇಟ್ಟುಕೊಂಡು ಹೊರಗೆ ರಂಗೋಲಿ ಗೆರೆ ಎಳೆದು ಬಂದಳು. ಸಮಾಧಾನವಾಗಲಿಲ್ಲ.

ಬೆಳ್ಳಿ ಆಗಲೇ ಎಚ್ಚತ್ತಿದ್ದಳಾದರೂ ಮ್ಯಾಲೆ ಎದ್ದಿರಲಿಲ್ಲ. ಚಿರತೆಯ ಚರ್ಮ ತೂಗು ಹಾಕಿದ ಗೋಡೆಗೆ ಒರಗಿ ಯೋಚನೆ ಮಾಡುತ್ತ ಕೂತಿದ್ದಳು. ಮೊನ್ನೆ ರಾತ್ರಿಯ ಭಾವೋದ್ವೇಗ ಇನ್ನೂ ತಣ್ಣಗಾಗಿರಲಿಲ್ಲ. ತನ್ನೊಂದು ಏಟಿಗೆ ಶಿಖರಸೂರ್ಯ ಮೂರು ಮಾರು ದೂರ ಹಾರಿಬಿದ್ದನಲ್ಲ! ಅಷ್ಟೊಂದು ಶಕ್ತಿ ತನ್ನಲ್ಲಿದೆಯೆ? ಎಂದು ಆಶ್ಚರ್ಯ ಪಡುತ್ತಿದ್ದಳು. ಹಾಗಿದ್ದಲ್ಲಿ ಇನ್ನೊಂದೇಟು ಹಾಕಬಹುದಿತ್ತೆಂದೂ ಅಂದುಕೊಳ್ಳುತ್ತಿದ್ದಳು.

ಎದ್ದು ಪಾದರಸಚಂತೆ ಒಳಗೂ ಗೊರಗೂ ಓಡಾಡುತ್ತ ಅದು ಇದು ಕೆಲಸ ಮಾಡುತ್ತಿದ್ದ ಅಬ್ಬೆ, ಈ ದಿನ ಎದ್ದು ಹಾಸಿಗೆಯಲ್ಲಿ ಸುಮ್ಮನೇ ಕುಂತಿದ್ದಳಾಗಿ ಗೌರಿಗೂ ಆಶ್ಚರ್ಯವಾಗಿತ್ತು: "ಅಬ್ಬೇ" ಎಂದು ಹೋಗಿ ಬೆನ್ನಿನ ಮೇಲೆ ಕೈಯೂರಿದಳು. ಮೈ ಬಿಸಿಯಾಗಿತ್ತು. ಕಷಾಯ ಕುದಿಸಿ ತರುತ್ತೇನೆಂದು ಎದ್ದಳು.

"ನನಗೇನಾಗಿಲ್ಲ ಬಾ ಕೂಸು."

- ಎಂದು ಬೆಳ್ಳಿ ಹೇಳುತ್ತ ನೋಡಿದರೆ ಇವಳೂ ನಿದ್ದೆಗೆಟ್ಟು ಮುಖ ದಪ್ಪ ಮಾಡಿಕೊಂಡಿದ್ದಾಳೆ. ರಾತ್ರಿಯಿಡೀ ನಿನ್ನಡಿ ಬಂದಿರಲಿಲ್ಲ. ಎಲ್ಲಿದ್ದಾನೆಂದು ಸುದ್ದಿ ತಿಳಿದಿರಲಿಲ್ಲ. ಯಾರನ್ನಾದರೂ ಬೆಟ್ಟಕ್ಕೆ ಅಟ್ಟೋಣವೆಂದರೆ ಜನ ಇಲ್ಲ. ಇವಳ ಮುಖಚರ್ಯೆ ನೋಡಿದರೆ ಏನೋ ತೀರ್ಮಾನಿಸಿ, ಎಲ್ಲಿಗೋ ಹೊರಟಂತಿದೆಯೆಂಬ ಆತಂಕದಿಂದ ಕೇಳಿದಳು:

"ಇಷ್ಟು ಬೇಗ ಎಲ್ಲಿಗಾದರೂ ಹೋಗಬೇಕಿತ್ತೇ ಕೂಸು?"

"ಹೇಳುತ್ತೇನೆ, ನೀನು ಬೇಡ ಅನ್ನಬಾರದು."

- ಎಂದಳು ಗೌರಿ. ಮನೆಯಲ್ಲಿ ನಿನ್ನಡಿ ಇಲ್ಲ. ಇವಳೂ ಹಟಮಾರಿ, ಕೆರಳಿಸಬಾರದೆಂದು -

"ಅದೇನು ನನಗಃಟು ಹೇಳು ನನ್ನವ್ವಾ" ಎಂದಳು.

ಗೌರಿ ಅಳುಮುಖ ಮಾಡಿ

"ನಿನ್ನೆ ಕೆಟ್ಟ ಕನಸಾಯ್ತು. ಅಣ್ಣನಿಗೆ ಏನಾದರೂ ಆದರೆ ನನಗೆ ಸಂಕಟವಾಗ್ತದೆ".

- ಎಂದು ಹೇಳಿ ಬೆಳ್ಳಿಯ ಭುಜದಲ್ಲಿ ಮುಖ ಹುದುಗಿಸಿ ಅಳತೊಡಗಿದಳು. ಬಂದಾಗಿನಿಂದ ಅಣ್ಣನಿಗಾಗಿ ಹಲುಬುವುದನ್ನ ಕೇಳಿಸಿಕೊಂಡಿದ್ದ ಬೆಳ್ಳಿಗೆ ಕರುಣೆ ಬಂತು. ತಲೆ ನೇವರಿಸುತ್ತ,

"ಈಗೇನು ಮಾಡಬೇಕಂತೀ ಮಗಳೇ?" ಅಂದಳು.

"ಅಣ್ಣ ಹ್ಯಾಗಿದ್ದಾನೆ ಅಂತ ಅಪ್ಪನ್ನ ಕೇಳಿ ಬರುತ್ತೀನೆ".

ಅವನೋ ದನ. ಇಲ್ಲಿಗೆ ಬಂದಾಗಿನಿಂದ ಮಗಳನ್ನು ನೋಡಬೇಕಂತ ಅನ್ನಿಸದೇ ಇದ್ದವನಿಗೆ ಇವಳ ದುಃಖ ಅರ್ಥವಾದೀತೆ? ಸಮಾಧಾನಕ್ಕಾಗಿ ಹೋಗಿ ಬರಲೆಂದು ಅಂದುಕೊಂಡರೂ ಆತ ಅಂತಃಕರಣದವನಲ್ಲವೆಂದು ನೆನಪಾಯಿತು. ಮಗಳಿಗೆ ಅಪಾಯ ತಂದರೂ ತಂದನೇ! ಚಂಡಾಲ ನನ್ನ ಮೇಲಿನ ಸೇಡನ್ನ ಕೂಸಿನ ಮೇಲೆ ತೀರಿಸಿಕೊಳ್ಳಲಿಕ್ಕೂ ಹೇಸದವ. ಅಂಥ ದುಷ್ಟನ ಬಳಿಗೆ ಗೌರಿ

ಒಬ್ಬಳನ್ನೇ ಕಳಿಸಲಿಕ್ಕೆ ಹಿಂಜರಿಕೆಯಾಯಿತು. ಕೂಡಲೇ ಎದ್ದು ಹೊರಬಂದು ನೋಡಿದರೆ ಹೇಳಿ ಕಳಿಸಿದ ಹಾಗೆ ಕುರುಮುನಿ ಅಬ್ಬೆಯ ಕಡೆಗೇ ಧಾವಿಸಿ ಬಂದ. ಬಂದವನೇ,

"ಅಬ್ಬೆ ನಿನಗಾದರೂ ಬುದ್ಧಿ ಬ್ಯಾಡವಾ? ಮಾರಾಜನಾದ ನಾನೇ ಬಾಗಬೇಕಾಗಿ ಬಂತಲ್ಲ - ಇದು ಯೋಗ್ಯವ?"

"ನೀನ್ಯಾಕಪ್ಪ ಬಾಗಬೇಕು?"

- ಎಂದಳು ಬೆಳ್ಳಿ.

"ಯಾಕಂದರ ಶಿವಪಾದನ ಅಪ್ಪಣೆ ಇಲ್ಲ. ಅವನಪ್ಪಣೆ ಸಿಗದ ಶಿವಾಯಿ ನಾನು ನನ್ನ ವಿದ್ದಯೆ ತೋರಸೋ ಹಂಗಿಲ್ಲ! ನಿನ್ನಡಿ ಊರಲ್ಲಿಲ್ಲ, ಮಂಡಪದಲ್ಲಿಲ್ಲ. ಹೋಗಲಿ ಮನೆಯಲ್ಲಿದ್ದಾನ?"

"ಬೆಟ್ಟಕ್ಕೆ ಹೋಗ್ಯಾನಲ್ಲಪ್ಪ...."

"ಬೆಟ್ಟದಲ್ಲಿಲ್ಲವ್ವ!"

ಬೆಳ್ಳಿ, ಗೌರಿಯರಿಬ್ಬರೂ ಕಂಗಾಲಾದರು. ಬೆಳ್ಳಿ ಚಿಂತೆಯಿಂದ ಹೇಳಿದಳು:

"ಅಯ್ ಶಿವನ! ಮತ್ತೆಲ್ಲಿ ಹೋದ? ನಿನ್ನೆ ಅಮ್ಮನ್ನ ನೋಡಿಕೊಂಡ ಬರ್ತೀನಿ ಅಂತ ಹೋದವನು ಹಾಂಗs ಮರಾಜನ ಹತ್ತರ ಹೋದನಂತ!"

"ಬೆಟ್ಟದಾಗಿಲ್ಲಬೆ"

ಇದನ್ನೆಲ್ಲ ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದ ಗೌರಿ ಮುಂದೆ ಬಂದು

"ಎಲ್ಲಿದಾನಂತ ನನಗೊತ್ತು. ಕರಕೊಂಬರ್ತಿನಿರು".

- ಎಂದು ಹೊರಟೇ ಬಿಟ್ಟಳು. ತುಂಬು ಗರ್ಭಿಣಿ; ಹೀಗೆ ಹೊರಟರೆ ಹ್ಯಾಗೆಂದು ಆತಂಕವಾಗಿ ಹಿಂದಿನಿಂದ ಬೆಳ್ಳಿಯೂ ಹೊರಡಲು ಎದ್ದಳು. ಗೌರಿ ಹೊಸ್ತಿಲು ದಾಟಿ ತಿರುಗಿ ನಿಂತು ಬೆಳ್ಳಿಯ ಕಡೆಗೆ ತೋರು ಬೆರಳಾಡಿದುತ್ತ ಮಕ್ಕಳಿಗೆ ತಾಕೀತು ಮಾಡುವಂತೆ -

"ಅಬ್ಬೆ ನೀನಿಲ್ಲೇ ಇರು. ಮಾರಾಜ, ಬಾ ನನ್ನ ಜೊತೆ"

- ಎಂದು ಮುಂದೆ ನಡೆದಳು. ಕುರುಮುನಿಯೂ ಹಿಂದಿನಿಂದ ನಡೆದ.

ಗೌರಿ ಮತ್ತು ಕುರುಮುನಿ ಮುರಿಗೆಪ್ಪನ ತೋಟಕ್ಕೆ ಬಂದಾಗ ಸೂರ್ಯನಾಗಲೇ ಬೆಟ್ಟದ ನೆತ್ತಿಯನ್ನು ಬಂಗಾರದ ಬಿಸಿಲಿನಿಂದ ಬೆಳಗುತ್ತಿದ್ದ. ಬೆಳಗಿನ ಸಣ್ಣ ಮಳೆಯಿಂದಾಗಿ ನೆಲ ಇನ್ನೂ ಒದ್ದೆಯಾಗಿ ತರುಮರ ಬೆಳೆಗಳು ಮಿಂದ ಹೆಂಗಸಿನ ಮುಗ್ಧತೆಯಿಂದ ಶೋಭಿಸುತ್ತಿದ್ದವು. ಆಗಷ್ಟೆ ಊರಲ್ಲಿ ನಡೆದ ಗಲಭೆಗಳಿಂದ ಹಕ್ಕಿಗಳ ಚಿಲಿಪಿಲಿ ಕೂಡ ಇರಲಿಲ್ಲ. ಮಂಟಪದ ಬಳಿಯೇ ಹೆಚ್ಚು ಜನ ಸೇರಿದ್ದರಾಗಿ ದಾರಿಯಲ್ಲಿ ಜನಗಳು ಕಾಣಿಸಲಿಲ್ಲ.

ಮುರಿಗೆಪ್ಪನ ತೋಟದ ಮುಖ್ಯ ಬಾಗಿಲಲ್ಲೇ ಕಾವಲು ಭಂಟರು ಇವರನ್ನು ತಡೆದರು. ಅವರಿಗೆ ಯಾರಿಗೂ ಇವರ ಪರಿಚಯವಿರಲಿಲ್ಲವಾಗಿ ಮಾತಾಡಿಸಲೂ ಇಲ್ಲ. ಸುಮ್ಮನೆ "ಬರಬೇಡಿ ತಿರುಗಿ ಹೋಗಿರೆಂದು ಸನ್ನೆ ಮಾಡಿ ಮತ್ತೆ ಮೊದಲಿನಂತೆ ನಿಂತುಕೊಂಡರು. ಸುದೈವಕ್ಕೆ ಅದೇ ಸಮಯಕ್ಕೆ ಮುರಿಗೆಪ್ಪ ಹೊರಬಂದು ಇವರನ್ನು ತೋಟದೊಳಕ್ಕೆ ಕರೆದುಕೊಂಡು ಹೋದ. ಆದರೆ ಮಹಾರಾಜನಿದ್ದ ಮನೆಯೊಳಕ್ಕೆ ಬಿಡಲೇ ಇಲ್ಲ. ಒಬ್ಬ ಶಸ್ತ್ರಸಜ್ಜಿತ ಸೈನಿಕ ಬಂದು ಅಡ್ಡಗಟ್ಟಿದ. "ರಾಜನ ಸ್ವಂತ ಮಗಳು ದರ್ಶನಕ್ಕ ಬಂದಾಳ, ಬಿಡಪ್ಪಾ" ಎಂದು ಮುರಿಗೆಪ್ಪ ಕೊಂಚ ಅಧಿಕಾರವಾಣಿಯಿಂದ ಹೇಳಿದ. ಕೇಳಿಸಿಕೊಂಡು ಆ ಸೈನಿಕ ತನ್ನ ಪಾಡಿಗೆ ತಾನು ಸುಮ್ಮನಿದ್ದ. ಕುರುಮುನಿಗೆ ಅಲ್ಲಿಯ ಕೃತಕ ಗಂಭೀರ ವಾತಾವರಣ ನೋಡಿ ನಗಾಡುವ ಮನಸ್ಸಾಯ್ತು. ಆದರೆ ಸಿಟ್ಟು ಮಾಡಿದ ಕೂಸಿನಂತೆ ಮುಖ ಉಬ್ಬಿಸಿಕೊಂಡಿದ್ದ ಗೌರಿಯನ್ನು ನೋಡಿ ಭಯವಾಯಿತು. ಆದರೂ ಸುಮ್ಮನಿರದೆ ಮೆಲ್ಲಗೆ "ಒಳಗ ನಿನ್ನಡಿ ಇದ್ದಾನ ಮಗು?" ಎಂದು ಮುರಿಗೆಪ್ಪನನ್ನ ಕೇಳಿದ. ಅವನು "ಬೆಟ್ಟಕ್ಕ ಹೋಗ್ಯಾನಂತಪ ಮಾರಾಜ" ಅಂದ. ಅಷ್ಟರಲ್ಲಿ ಶಿಖರಸೂರ್ಯ ಹೊರಬಂದು ಮೊಗಸಾಲೆಯ ಗಡಂಚಿಯ ಮೇಲಿ ಕೂತು ಒಂದು ಸಲ ಬಂದವರಿಬ್ಬರನ್ನೂ ನೋಡಿದ. ಕುರುಮುನಿಯ ಗುರುತೇ ಇಲ್ಲವೆಂಬಂತೆ ಅವನನ್ನು ನಿವಾರಿಸಿ ಗೌರಿಯನ್ನ ಮಾತ್ರ ನೋಡಿ, "ಸರಿ, ಗೌರಿ ಬದುಕಿದ್ದು, ನಿನ್ನಡಿ ಅವಳ ವಿಷ ತೆಗೆದು ಬದುಕಿಸಿದ್ದು ನಿಜ ಎಂದಾಯಿತು". ಇನ್ನೇನು ಅಪ್ಪ "ಮುದ್ದೂ" ಕೂಗುತ್ತಾನೆಂದುಕೊಂಡ ಮಗಳ ಕಿವಿಯ ಮೇಲೆ,

"ಬಂದವರು ಯಾರು ಮುರಿಗೆಪ್ಪ?"

ಎಂದ ರಾಜನ ತಿರಸ್ಕಾರದ ದನಿ ಕೇಳಿಸಿತು.

"ನಿನ್ನ ಮಗಳು ಮತ್ತು ಕುರುಮುನಿ ಮಹಾರಾಜ ನಿನ್ನ ದರ್ಶನಕ್ಕೆ ಬಂದಾರ ಸ್ವಾಮೀ!"

ಅಂದ ಮುರಿಗೆಪ್ಪ.

"ನನ್ನ ಮಗಳು ಸತ್ತು ತಿಂಗಳಾದುವಯ್ಯಾ, ಇವಳ್ಯಾವಳೋ ನಕಲಿ ರಾಜಕುಮಾರಿ, ತಳ್ಳಿರಯ್ಯಾ ಹೊರಕ್ಕೆ!"

ಎಂದು ಬಿರುಸಾಗಿ ನುಡಿದ. ಗೌರಿಗೆ ಅವಮಾನದಿಂದ ಆಘಾತವಾಗಿ ಮೈ ತುಂಬ ಬೆಂಕಿ ಹೊತ್ತಿಸಿಕೊಂಡಂತೆ ಚಡಪಡಿಸಿದಳು. ಅವಮಾನದಿಂದ ಕುರುಮುನಿಯ ಮುಖ ಕಪ್ಪಗಾಯ್ತು. ಇವನು ಮನುಷ್ಯನೇ ಅಲ್ಲವೆಂಬ ತೀರ್ಮಾನಕ್ಕೆ ಮುರಿಗೆಪ್ಪ ಬಂದು,

"ಏನಪ್ಪಾ ರಾಜಾ, ತಂದೆಯಾದವನು ಮಗಳಿಗೆ ಆಡೋ ಮಾತುಗಳ ಇವು?" ಅಂದ.

"ನಿನ್ನಿಂದಲೂ ಬುದ್ಧಿಮಾತು ಕೇಳಬೇಕಾಯಿತು ನಾನು?"

ಎಂದು ಹೇಳುತ್ತ ಕಣ್ಣಿಂದ ಭಂಟನಿಗೆ ಅಸಮಾಧಾನದ ಸನ್ನೆ ಮಾಡಿದ. ಭಂಟ ಬಂದು ಮುರಿಗೆಪ್ಪನ ಬೆನ್ನಿನ ಮೇಲೆ ತಾನು ಹಿಡಿದ ಭಾರವಾದ ಕೋಲಿನಿಂದ ಜೋರಾಗಿ ಏಟು ಹಾಕಿದ. ಮುರಿಗೆಪ್ಪ "ಅಯ್ಯೋ ಎವ್ವಾಃ" ಅಂದು ಬೊಕ್ಕು ಬೋರಲು ನೆಲಕ್ಕೆ ಬಿದ್ದ. ನೆಲಗಲ್ಲಿಗೆ ಮೂಗು ತಾಗಿ ಬಳ ಬಳ ರಕ್ತ ಸುರಿಯತೊಡಗಿತು.

ಗೌರಿಯ ಕೋಪ ನೆತ್ತಿಗೇರಿತು ನೋಡು, - ಕೆಂಪು ಕಣ್ಣು ಕಿಸಿದು, ಸೀರೆಯ ಸೆರಗು ಸೊಂಟದಲ್ಲಿ ಸಿಕ್ಕಿಸಿಕೊಂಡು, ಏಟು ಹಾಕಿದ ಸೈನಿಕನ ಕೋಲು ಕಸಿದು, ಆಮೇಲೆ ಆ ಸೈನಿಕನ ಎದೆಗೆ ಜೋರಾಗಿ ಒದ್ದಳಪ್ಪ! ಅಷ್ಟು ದೂರ ಬಿದ್ದ. ಅವನ ಜುಟ್ಟು ಹಿಡಿದು ಎಳೆಯುತ್ತ ಶಿಖರಸೂರ್ಯನೇ ಗೌರಿಯ ರೌದ್ರಾವತಾರ ನೋಡಿ ಆಘಾತ ಹೊಂದಿ ಚಿತ್ರದ ಗೊಂಬೆಯಂತೆ ನಿಂತ. ಎಳೆದು ತಂದಿದ್ದ ಭಂಟನನ್ನ ಕಸದ ಮೂಟೆ ಎಸೆಯುವಂತೆ ತಂದೆಯ ಪಾದದ ಮೇಲೆ ಚೆಲ್ಲಿ ಹೇಳಿದಳು:

“ಹೇಳು ನಿನ್ನ ರಾಜನಿಗೆ, ಶಿವಾಪುರದಲ್ಲಿ ಅವನಾಗಲೆ, ಅವನ ಭಂಟರಾಗಲಿ, ಯಾರೊಬ್ಬರ ಮೇಲೆ ಕೈ ಮಾಡಿದರೆ - ಇಕಾ ಇಲ್ಲಿದೆಯಲ್ಲ - ?”

ಎನ್ನುತ್ತ ಅಲ್ಲೇ ನೇತುಹಾಕಿದ್ದ ಕುಡುಗೋಲು ಸೆಳೆದುಕೊಂಡು ತೋರಿಸುತ್ತ, “ಕುಡಗೋಲಿಂದ ನಿಮ್ಮ ಬೇಟೆಯಾಡುತ್ತೇನೆ ಹುಷಾರ್”, ಎಂದು ಹೇಳಿ ಈಗ ನೇರವಾಗಿ ತಂದೆಯನ್ನೇ ನೋಡುತ್ತ ಕೇಳದಳು.

“ಈಗೇನು ನನ್ನ ಗಂಡನನ್ನ ಬಿಟ್ಟುಕೊಡ್ತಿಯೋ? …. ಇಲ್ಲಾ….”

ಕೋಪವುಕ್ಕಿ ಬಂತು ರಾಜನಿಗೆ, ಹೇಸಿಕೆಯಿಂದೆಂಬಂತೆ -

“ನಿನ್ನ ಗಂಡನ ವಿಷಯ ನನಗೇನೇ ಗೊತ್ತೇ ದರಿದ್ರವೆ?” ಅಂದ.

“ನಿನಗೆ ಕರುಳಿಲ್ಲ. ತಿಳಿಯೋದಿಲ್ಲ. ನನಗಿವೆ ತಿಳೀತದೆ. ನನ್ನ ಗಂಡ ಇಲ್ಲಿದ್ದಾನೆ. ಬಿಡ್ತೀಯೋ ಬಿಡಿಸಿಕೊಳ್ಳಬೇಕೋ”

ಇದೂ ಆ ಬೆಳ್ಳಿಯ ಹಾಗೆ ಹೊಡೆಯುತ್ತೊ ಏನು ಕತೆಯೊ! ಎಂದು ಹೆದರಿ

“ಯಾರಿದ್ದೀರಯ್ಯಾ ಇಲ್ಲಿ? ತಳ್ಳಿರಯ್ಯಾ ಈ ನಾಯೀನ್ನ!”

ಎಂದು ಮಹಾರಾಜ ಕಿರಿಚಿದ. ಬಂಟರು ಹೆದರಿಕೊಂಡು ಅವಳ ಹತ್ತಿರ ಬರುತ್ತಿದ್ದಂತೆ ಈಕೆ ಒಳಹೋಗಿ ಆವೇಶದಿಂದ ಧಡ್ ಧಡ್ ಸಪ್ಪಳಾಗುವಂತೆ ಬಾಗಿಲನ್ನೊದ್ದಳು. ದಢಾರೆಂದು ಬಾಗಿಲು ಮುರಿದು ಬಿದ್ದು ಬಿಟ್ಟಿತು. ಒಳಕ್ಕೆ ನುಗ್ಗಿದಳು.

ಅವಮಾನದಿಂದ ಮಹಾರಾಜ, ಸೈನಿಕರು ಮತ್ತು ಮುರಿಗೆಪ್ಪನನ್ನು ನೋಡುತ್ತಿದ್ದ. ಸೈನಿಕರು, ಮುರಿಗೆಪ್ಪ ಗಡ ಗಡ ನಡಗುತ್ತಿದ್ದರು. ಸಾಮಾನ್ಯವಾಗಿ ಇಂಥ ಘಟನೆಗಳಿಂದ ಮನರಂಜನೆ ಪಡೆವ ಕುರುಮುನಿಯೂ ನಡಗುತ್ತಿದ್ದ. ಯಾಕೆನೆ ಗೌರಿ ಅವನರಿಯದವಳಲ್ಲ. ಅವಳ ಮೇಲಿನ ತಾಯಿಯ ಕೃಪೆಯ ಅರಿವೂ ಇತ್ತು.

ಆದರೆ ಈ ದಿನ ಪ್ರತ್ಯಕ್ಷ ತಾಯಿಯೇ ಗೌರಿಯಲ್ಲಿ ಆವೇಶವಾಗಿದ್ದಳು! ಅವಳ ಬಗೆಗಿನ ಅವನ ಮಮತೆ ಭಕ್ತಿಯಾಗಿ ಪರಿವರ್ತನೆ ಹೊಂದಿತು. ಎಲ್ಲರ ಕಣ್ಣು ದೇವರಕೋಣೇಯ ಕಡೆಗೆ ನೆಟ್ಟಿರಲು ಗೌರಿ, ಗಂಡನ ಕೈ ಹಿಡಿದುಕೊಂಡು ಸರಸರನೆ ಇವರ ಮುಂದೆಯೇ ದಾಟಿ ನಡೆದಳು. ಮಹಾರಾಜ ಆವಾಕ್ಕಾಗಿ ಅವರನ್ನೇ ನೋಡುತ್ತಿದ್ದಾಗ ಗೌರಿ ತಿರುಗಿ ನಿಂತು ತಂದೆಗೆ ತಾಕೀತು ಮಾಡುವಂತೆ ಹೇಳಿದಳು:

“ಇನ್ನೆರಡು ತಾಸಿನೊಳಗೆ ಈ ಜಾಗ ಖಾಲಿ ಮಾಡಿದೆಯೊ ನಿನ್ನ ಹಡಗು ನಿನಗೆ ದಕ್ಕೀತು. ತಡ ಮಾಡಿದೆಯೋ ನಿನ್ನ ಹಡಗು ಮುಳುಗೀತು. ನೆಪ್ಪಿರಲಿ.”

- ಎಂದು ಹೇಳಿ ತಂದೆಯ ಎದೆಗೊದ್ದ ಹಾಗೆ ಬಲಗಾಲಿನಿಂದ ನೆಲ ಒದ್ದು ರಭಸದಿಂದ ಬಿರಿಬಿರಿ ನಡೆದಳಪ್ಪ! ಕುರುಮುನಿ ಚಕಿತನಾಗಿ ತಂದೆ ಮಗಳ ಮುಖಗಳನ್ನು ಟಕಮಕ ನೋಡಿ ಅವಸರದಿಂದ ಗೌರಿ ನಿನ್ನಡಿಯರ ಹಿಂದೆ ಓಡಿದ. ತಕ್ಷಣ ಶಿಖರಸೂರ್ಯ ಕ್ರಿಯಾಶೀಲನಾದ.

* * *

ಮುಂದಿನ ಕತೆ ಅನುಮಾನಾಸ್ಪದ ತಿರುವು ತಗೊಂಡಿದೆ. ಈವರೆಗಿನ ಪೂರ್ವತಯಾರಿ ಮತ್ತು ಪ್ರದರ್ಶನ ನೋಡಿದರೆ ಶಿಖರಸೂರ್ಯ ವಿಜಯಶಾಲಿಯಾಗಲೇಬೇಕು - ಅದೊಂದು ಯುದ್ಧವೆನ್ನುವುದಾದರೆ ! ಆದರಿದು ಯುದ್ಧವಲ್ಲ, ಅವನಿಗೊಬ್ಬ ಎದುರಾಳಿಯಿಲ್ಲ, ಎದುರಾಳಿಯ ಸೈನ್ಯವಿಲ್ಲ, ಎದುರಿಗಿದ್ದದ್ದು ಅಸಂಘಟಿತ, ಅರಕ್ಷಿತ ಜನಜಂಗಳಿ, ದೊಂಬಿ! ಗೆಯ್ಮೆ ಕಾಲದಲ್ಲಿ ಹಿಡಿದ ಕುಡುಗೋಲೇ ಅವರು ಹಿಡಿದ ದೊಡ್ಡ ಆಯುಧ. ಈಗ ಅದನ್ನೂ ಹಿಡಿದಿರಲಿಲ್ಲ. ಇಂಥವರ ಎದುರು ಒಬ್ಬ ಭಂಟ ಬಂದರೂ ಗೆಲ್ಲಲೇಬೇಕು. ಆದರೆ ಈ ಕದನದಲ್ಲಿ ಶಿಖರಸೂರ್ಯ ಸೋತ! ಅಷ್ಟೇ ಅಲ್ಲ. ಹಸಿದ ತೋಳುಗಳ ಹಿಂಡು ಅಟ್ಟಿಸಿಕೊಂಡು ಬಂದಂತೆ ಸತ್ತೆನೋ ಕೆಟ್ಟೆನೋ ಎಂದು ಓಡಿದ ! ಶಿಖರಸೂರ್ಯನಿಗೆ ಯಾಕೆ ಸೋಲಾಯಿತು? ಹ್ಯಾಗೆ ಸೋಲಾಯಿತು? ನಮಗೆ ತಿಳಿಯುತ್ತಿಲ್ಲ.

ನಾವು ಪ್ರತ್ಯಕ್ಷ ಕಂಡುದಿಷ್ಟು:

ಅಂದು ಮಧ್ಯಾಹ್ನ ಹೊತ್ತಿಗೇ ಶಿವಾಪುರದ ಹುಡುಗರು ಸಿಡಿತಲೆಯ ಗಾಡಿಯನ್ನು ಬೆಟ್ಟದ ತುದಿಗೆ ತಂದು ನಿಲ್ಲಿಸಿಯಾಗಿತ್ತು. ಸಂಜೆ ಶಿಖರಸೂರ್ಯ ತನ್ನ ನೂರಾಳ್ಪಡೆಯೊಂದಿಗೆ ಹೊತ್ತಿಸಿದ ಪಂಜು ಹಿಡಿದುಕೊಂಡು, ಸಿಡಿತಲೆ ಸಿಡಿಸುವ ತಯಾರಿಯೊಂದಿಗೆ ಬೆಟ್ಟ ಏರತೊಡಗಿದ. ಅವನು ಹಾಗೆ ಪಂಜು ಹಿಡಿದುಕೊಂಡು ತನ್ನವರೊಂದಿಗೆ ಬೆಟ್ಟ ಏರುವ ಭಯಂಕರ ದೃಶ್ಯವನ್ನ ಶಿವಾಪುರಚ ಜನ ಅವಾಕ್ಕಾಗಿ, ಬಾಯಿ ತೆರೆದುಕೊಂಡು ಮುಗಿಚ ಕೈ ಹೊತ್ತು ಅಮ್ಮನಿಗೆ ಮೌನ ಪ್ರಾರ್ಥನೆ ಸಲ್ಲಿಸುತ್ತ ನೋಡುತ್ತಿದ್ದರು. ಮಹಾರಾಜ ಇನ್ನೇನು ಬೆಟ್ಟ ಹತ್ತಿ ಬಿಡುವಷ್ಟು ಸಮೀತ ಬಂದಿದ್ದಾಗ ಇವನ ಇನ್ನಷ್ಟು ಸೈನಿಕರೇ ಬೆಟ್ಟದ ತುಟ್ಟ ತುದಿಯಲ್ಲಿ ಸಿಡಿತಲೆ ಗಾಡಿಯನ್ನು ನಿಲ್ಲಿಸಿ ಕೆಳಕ್ಕೆ ಉರುಳಿಸಲು ಸಿದ್ಧರಾಗಿ ನಿಂತಿದ್ದರು! ಅವರ ಜೊತೆ ನಿನ್ನಡಿ ಕುರುಮುನಿ ನಿಂತಿದ್ದರು! ಶಿಖರಸೂರ್ಯನಿಗೆ ಆಘಾತವಾಯ್ತು! ಸುಮಾರು ಜನ ತರುಣರು ಮತ್ತು ತನ್ನ ಸೈನಿಕರು ಆರೇಳುಗಂಟೆ ಕಷ್ಟಪಟ್ಟು ಗಾಡಿಯನ್ನು ತಳ್ಳಿಕೊಂಡು, ಅಕ್ಷರಶಃ ಹೊತ್ತುಕೊಂಡು ಬೆಟ್ಟಕ್ಕೆ ತಂದಿದ್ದರು. ಈಗ ಅವರೇ ನಿನ್ನಡಿಯ ಮುಂದೆ ನಿಂತು ಗಾಡಿಯನ್ನು ಕೆಳಕ್ಕೆ ತಳ್ಳಲು ಸಿದ್ಧರಾಗಿದ್ದಾರೆ ಅಂದರೆ ಹ್ಯಾಗೆ ನಂಬುವುದು? ಇಲ್ಲೇನೋ ಮೋಸವಾಗಿದೆಯೆಂದು ಅನುಮಾನ ಬಂತು. ಆದರೆ ಸೈನಿಕರು ನಮ್ಮವರೇ! ಒಬ್ಬರೂ ಮಾತಾಡಲೊಲ್ಲರು. ಶಿಖರಸೂರ್ಯ ಕೂಗಿ -

“ಲೋ ಅಯೋಗ್ಯರಾ, ನಿಮ್ಮನ್ನ ಸೃಷ್ಟಿ ಮಾಡಿದವ ಹೆಚ್ಚೋ? ಲಂಚ ಕೊಟ್ಟು ಕೊಂಡವ ಹೆಚ್ಚೊ?”

ಎಂದು ಗದರಿ ನೋಡಿದ.

“ನಮ್ಮನ್ನು ಸೃಷ್ಟಿಸಿದವ ಹೆಚ್ಚು”

ಎಂದು ಹೇಳಿ ಕುರುಮುನಿಯ ಕಡೆಗೆ ನೋಡಿ ಗಾಡಿಯನ್ನು ಇನ್ನಷ್ಟು ಅಂಚಿಗೆ ತಂದರು!

ಅಂದರೆ ಇವರು ನಾನು ಸೃಷ್ಟಿಸಿದವರಲ್ಲವೆ? ಅಥವಾ ಭಂಟರನ್ನು ಸೃಷ್ಟಿ ಮಾಡುವ ವಿದ್ಯೆ ನಿನ್ನಡಿಗೂ ಗೊತ್ತಿದೆಯೊ? ಅದು ಸಾಧ್ಯವೆಂದು ಅಂದುಕೊಳ್ಳುವುದಕ್ಕೂ ಅವಕಾಶ ಕೊಡದೆ ಕುರುಮುನಿ ಸನ್ನೇ ಮಾಡಿದ್ದೇ ಆಯ್ತು. ಅವನ ಸೈನಿಕರು ಗಾಡಿಯನ್ನು ಕೆಳಗೆ ತಳ್ಳಿಯೇ ಬಿಟ್ಟರು! ಅದು ಗುಡು ಗುಡು ಉರುಳುತ್ತ ಬಂಡೆಗಳಿಗೆ, ತರುಮರಗಳಿಗೆ ತಾಗಿ ಮುರಿದು, ತಾಗಿದಾಗೊಮ್ಮೆ ಇನ್ನಷ್ಟು ಸದ್ದು ಮಾಡುತ್ತ ಶಿಖರಸೂರ್ಯನ ಕಡೆಗೇ ಬಂದಾಗ ಅವನು ಮತ್ತು ಅವನ ಜನ ಗಾಬರಿಯಾಗಿ ಭಾಗಮ್ ಭಾಗವಾದರು! ಜೊತೆಗೇ ಶಿಖರಸೂರ್ಯನ ಮಹತ್ವಕಾಂಕ್ಷೆಯೂ ಪತನವಾಯಿತು. !ಉರುಳುತ್ತಿರುವ ಗಾಡಿ, ಅದರೊಳಗಿದ್ದ ಸಿಡಿಗಂಡು, ಹಾರಿಸುವ ಕೊಳಾಯಿಗಳೆಲ್ಲಾ ಚೆಲ್ಲಾಪಿಲ್ಲಿಯಾದವು. ತಿರುಗಿ ನೋಡಿದರೆ ನಿನ್ನಡಿ, ಕುರುಮುನಿಯೊಂದಿಗೆ ಶಿವಾಪುರದ ಹಿರಿಯರು, ಸಿದ್ಧರು ಸಾಧು ಸನ್ಯಾಸಿಗಳು ಮಂತ್ರತಾಂತ್ರಿಕರು ತಾವೂ ಪಂಜು ಹಿಡಿದು ಶಿವಾಪುರದಮ್ಮನ ಘೋಷಣೆಗಳನ್ನು ಒದರುತ್ತ ಕೆಳಗಿಳಿಯತೊಡಗಿದರು!

ತನ್ನ ಕಡೆಗೆ ನುಗ್ಗುತ್ತಿದ್ದ ದೊಂಬಿಯನ್ನು ಎದುರಿಸುವುದು ಅಸಾಧ್ಯವೆನ್ನಿಸಿ ಶಿಖರಸೂರ್ಯ ಹಿಂದೆ ನೋಡಿದ. ತನ್ನೊಂದಿಗೆ ಬಂದಿದ್ದ ನೂರಾಳ್ಪಡೆಯ ಒಬ್ಬ ಸೈನಿಕನೂ ಇರಲಿಲ್ಲ! ಗಾಬರಿಯಾಗಿ, ಎದೆ ದಸ್ಸೆಂದು ಒಡೆದಂತಾಗಿ ಕೆಳಗೋಡಿದ!

ಓಡಿ ಓಡಿ ಬೆಟ್ಟದ ತಳಕ್ಕೆ ಬಂದಾಗ ಎರಡು ಕುದುರೆ ಹಿಡಿದುಕೊಂಡು ಸುಕ್ರ ನಿಂತಿದ್ದ. "ಬೇಗ ಬಾ ಒಡೆಯಾ, ಈ ಕಡೆಯಿಂದಲೂ ಜನ ಬರ್ತಿದ್ದಾರೆ!" ಎಂದು ಅವಸರದಿಂದ ರಾಜನ ಕೈಗೊಂದು ಕುದುರೆ ಕೊಟ್ಟು ತಾನೂ ಹತ್ತಿದ. ಲಗುಬರೆಯಿಂದ ಇಬ್ಬರೂ ಕುದುರೆಗಳನ್ನ ಓಡಿಸಿದರು.

***

ಶಿಖರಸೂರ್ಯ ಹೇಳಿದಂತೆ, ಇದು ಮೂಢನಂಬಿಕೆಯ ವಿರುದ್ಧ ಮಾಡಿದ ಧರ್ಮಯುದ್ಧವಂತೂ ಅಲ್ಲ. ಮೇವಿನ ಸೈನಿಕರನ್ನು ಸೃಷ್ಟಿ ಮಾಡಿದವನು ಶಿಖರಸೂರ್ಯ. ಮಂತ್ರದ ಸೈನಿಕರು ಸೃಷ್ಟಿಸಿದವನ ಆಜ್ಞೆಗಳನ್ನು ಪಾಲಿಸಲಿಲ್ಲವಲ್ಲ? ಕುರುಮುನಿಯ ಆಜ್ಞೆಗಳನ್ನು ಪಾಲಿಸಿದರಲ್ಲ, ಯಾಕೆ? ಆಜ್ಞೆ ಪಾಲಿಸಿದ ಈ ಬಂಟರು ಯಾರ ಸೃಷ್ಟಿ? ನಿನ್ನಡಿಯಂತೂ ಆಗಿರಲಾರ. ಯಾಕೆನೆ, ಆತ ದೊರೆತ ಸದರಿ ವಿದ್ಯೆಯನ್ನು ತಾನೇ ತಾನಾಗಿ ಮುಂದೆ ಬಂದು ತಿನ್ನುವ ಅನ್ನವನ್ನು ಚಿನ್ನವಾಗಿಸುವ, ದನಗಳು ತಿನ್ನುವ ಆಹಾರವನ್ನು ಸೈನ್ಯವಾಗಿಸುವ ಈ ವಿದ್ಯೆ ತನಗೆ ಬೇಡವೆಂದು ಖುದ್ದಾಗಿ ಶಿವಪಾದನಿಗೆ ಹಿಂದಿರುಗಿಸಿದ್ದ. ಇಂಥ ವಾಮ ವಿದ್ಯೆಗಳನ್ನು ಆಸೆಬುರುಕುತನದಿಂದ ಕರಗತ ಮಾಡಿಕೊಂಡಿರುವಾತ ಕುರುಮುನಿ. ಆದರೆ ವಾಚಾಳಿಯಾದ ಆತ ಯಾರೆದುರಿಗೂ ಬಾಯಿ ಬಿಡದೆ ತನ್ನ ವಿದ್ಯೆಯ ಪರಿಣಾಮ ನೋಡಿ ಒಳಗೊಳಗೇ ನಗುತ್ತಿದ್ದ.

ಇನ್ನೂ ಒಂದು ಭಯ ಇದೆ. ಶಿಖರಸೂರ್ಯನೊಂದಿಗೆ ಬೆಟ್ಟ ಹತ್ತಿ ಬಂದ ನೂರಾಳ್ಪಡೆಯ ಸೈನಿಕರಲ್ಲ ಏನಾದರು? ಅವನು ಹಿಂದಿರುವಾಗ ಅವರೆಲ್ಲ ಮಾಯವಾಗಿದ್ದರೆಂದು ಜನಪದ ಲಾವಣಿ ಹೇಳುತ್ತದೆ. ಮಾಯವಾದರೆಂದರೆ ಏನರ್ಥ? ಈ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕರೆ ನಮ್ಮ ಮುಂದಿನ ಚರಿತ್ರೆಗೆ ಸಕಾರಣವಾದ ತಿರುವು ಸಿಗುತ್ತದೆ. ಇಲ್ಲದಿದ್ದರೆ ಗೊಂದಲದಲ್ಲಿ ಮುಗಿಯಬೇಕಾಗುತ್ತದೆ. ಯಾಕಂತಿರೊ? ಧಾನ್ಯದಿಂದ ಚಿನ್ನ, ಮೇವಿನಿಂದ ಸೈನ್ಯ ಮಾಡುವ ವಿದ್ಯೆ ಹೇಳಿಕೊಟ್ಟ ನಾಗಾರ್ಜುನನೇ ಶಿಖರಸೂರ್ಯನಿಗೆ ಇನ್ನೂ ಒಂದು ಮಾತು ಹೇಳಿ ತಾಕೀತು ಮಾಡಿದ್ದ: "ನಿನ್ನ ಮೇವಿನ ಸೈನ್ಯಕ್ಕೆ ಮತ್ತು ಚಿನ್ನದ ಧಾನ್ಯಕ್ಕೆ ಯಾರಾದರೂ ತಿರುಮಂತ್ರ ಹಾಕಿದರೋ - ಆ ಕ್ಷಣವೇ - ನಿನ್ನೆಲ್ಲ ಸೃಷ್ಟಿ ಮೂಲರೂಪಕ್ಕೆ ತಿರುಗುತ್ತದೆ. ! ಹುಷಾರ್" ಶಿಖರಸೂರ್ಯನ ಹೃದಯ ಡಬ ಡಬ ಅಂತ ಹೊಡಕೊಂಡದ್ದು ಈ ಕಾರಣಕ್ಕೆ! ಅವನು ಬೆಟ್ಟದಿಂದ ಇಳಿಯುವಾಗಿ ಒಬ್ಬ ಸೈನಿಕನೂ ಇರಲಿಲ್ಲ! ಅದನ್ನಾತ ಗಮನಿಸಿಯೇ ಸುಕ್ರನ ಸಲಹೆಯನ್ನು ಒಪ್ಪಿ ಕುದುರೆ ಹತ್ತು ಓಡಿಸಿದ! ಅಲ್ಲಿಂದ ಪಾರಾದ ಮೇಲೂ ಆತನ ಮನಸ್ಸಿನಲ್ಲಿ ಚಿಂತೆ ಕೊರೆಯುತ್ತಿತ್ತು: "ಕನಕಪುರಿಯಲ್ಲೂ ಹೀಗೇ ಆಗಿದ್ದರೇನು ಗತಿ?" ಅವನ ದುರ್ದೈವಕ್ಕೆ ಅದು ಹಾಗೇ ಆಗಿತ್ತು!

* * *

ಅದಕ್ಕೇ ನಾವಿದನ್ನು ಶಿಖರಸೂರ್ಯ ಹೇಳಿದಂತೆ ಧರ್ಮಯುದ್ಧವೆನ್ನುವುದಿಲ್ಲ, ಇಬ್ಬರು ಮಂತ್ರವಾದಿಗಳ ಜಗಳ ಎಂದು ಹೇಳಬಹುದು. ಅದೇನೇ ಇರಲಿ, ಮಂತ್ರವಾದಿಗಳನ್ನು ನಂಬುವುದೂ ಬಿಡುವುದೂ ನಿಮ್ಮಿಷ್ಟ. ನಾವದನ್ನು ಆಧಾರವಾಗಿ ತಗೊಳ್ಳುವುದೂ ಇಲ್ಲ. ಚರ್ಮದ ತುಂಡುಗಳನ್ನೇ ನಾಣ್ಯದಂತೆ ಚಲಾವಣೆ ಮಾಡಬಹುದಾದರೆ ನಕಲಿ ಚಿನ್ನದ ನಾಣ್ಯವನ್ನೇಕೆ ಮಾಡಬಾರದು? "ಮೇವಿನ ಸೈನಿಕರನ್ನ ಯತ್ರಮಾನವರೆಂದು ಯಾಕೆ ತಿಳಿಯಬಾರದು? ಅದು ಆಯಾ ರಾಜನ ಸಾಮರ್ಥ್ಯ ಮತ್ತು ಪ್ರಭಾವಗಳನ್ನು ಅವಲಂಬಿಸಿರುತ್ತದೆಂದು ಇಂದಿನ ರಾಜಕೀಯವೇ ತೋರಿಸುತ್ತಿದೆ - ಅದೇನೇ ಇರಲಿ, ಇಂದಿನ ರಾಜಕಾರಣಕ್ಕೆ ಇದೊಂದು ಉತ್ತಮ ರೂಪಕವೆಂಬುದಂತೂ ನಿಜ.

* * *

ಅಪಾಯವಿಲ್ಲ ಎನ್ನುವವರೆಗೂ ಕುದುರೆ ಓಡಿಸಿ ಕೊನೆಗೊಂದು ನದಿಯ ದಂಡೆಯಲ್ಲಿ ನಿಲ್ಲಿಸಿ ತುಸುಹೊತ್ತು ಇಬ್ಬರೂ ಸುಧಾರಿಸಿಕೊಂಡರು. ಆಗಲೇ ಬೆಳಕು ಒಡೆದಿತ್ತು. ಪ್ರಧಾನಿ ಸುಕ್ರ - ರವಿಕೀರ್ತಿ ಅಪಾಯದ ಅಂಚಿನಲ್ಲಿರುವ ಸಂಗತಿಯನ್ನು ಶಿಖರಸೂರ್ಯನಿಗೆ ಹೇಳಿದ. "ಯಾರೊಬ್ಬರನ್ನೂ ಗುರುತಿಸುವುದಿಲ್ಲ. ಚಿಕ್ಕಮ್ಮಣ್ಣಿ ಮತ್ತು ತನ್ನ ತಾಯಿಯನ್ನು ಕೂಡ ಗುರುತಿಸಲಿಲ್ಲ ಒಡೆಯಾ! ಬಾಯಿ ತೆಗೆದಾಗೊಮ್ಮೆ "ವಾಸಂತೀ..... ಅಂತಾನೆ! ಇದ್ದಕ್ಕಿದ್ದಂತೆ ಲೆಕ್ಕ ಹಾಕುವ ಹಾಗೆ ಕೈ ಬೆರಳು ಮಡಿಸುತ್ತ "ನಮ್ಮಪ್ಪ ಚಕ್ರವರ್ತಿ. ನಮ್ಮದು ಚಕ್ರವರ್ತಿಗಳ ಮನೆತನ ವಾಸಂತೀ. ನೀವು ರಾಜಮನೆತನದವರಲ್ಲ... ಅಂತ ಬಡಬಡಿಸುತ್ತ ಯಾರನ್ನೋ ನೋಡಿ ಆಚಾರ್ಯರೇ ಅಂತ ಹಿಡಿದುಕೊಳ್ಳಲು ಓಡುತ್ತಾನೆ. ಸೇವಕರೆಲ್ಲ ಅವನನ್ನ ನೋಡಿ ಗೋಳೋ ಎಂದು ಅತ್ತರು ಒಡೆಯಾ".

ಎಲ್ಲ ಎಲ್ಲದಕ್ಕೂ ಒಂದು ಅಂತ್ಯ ಸಮೀಪಿಸುತ್ತಿದೆ ಅನ್ನಿಸಿತು. ಎಲ್ಲ ಅಸ್ತವ್ಯಸ್ತಕ್ಕೆ, ಎಲ್ಲ ಹತಾಶೆ, ಕಳವಳಗಳಿಗೆ, ಎಲ್ಲ ನುಚ್ಚು ನೂರುಗಳಿಗೆ ಯಾವದೂ ಸರಿಯಿಲ್ಲ ಅಥವಾ ಎಲ್ಲವೂ ತಪ್ಪು ಎನ್ನುವಂತಿದ್ದ ಎಲ್ಲದಕ್ಕೆ "ತಾರ್ಕಿಕವಾದ ಅಥವಾ ತರ್ಕ ಮೀರಿದ - ಅಂತೂ ಒಂದು ಕೊನೆ ಬರುತ್ತಿದೆ" ಅನ್ನಿಸಿತು. ಈ ವಿಚಾರವನ್ನ ಎದುರಿಸಲಾರದೆ ಅವಸರದಿಂದ ಶಿಖರಸೂರ್ಯ ಕೇಳಿದ:

"ಹೇಳು ಈಗೆಲ್ಲಿದ್ದಾನವನು?"

"ಹದ್ದಿನಕೊಳ್ಳದ ಕಡೆಗೆ ಕುದುರೆ ಓಡಿಸಿದನು ಒಡೆಯಾ. ಸೊರಗಿ ಕಡ್ಡಿಯಾಗಿದ್ದಾನೆ. ಅದೆಲ್ಲಿಂದ ಶಕ್ತಿ ಬಂತೋ ನಾಲ್ಕಾರು ಜಟ್ಟಿಗಳಿಗೂ ಜಗ್ಗಲಿಲ್ಲ. ಕೊಸರಿಕೊಂಡು ಓಡಿದ. ಅವನನ್ನು ಹಿಡಿದಿಡಲು ನಮಗಾಗಲೇ ಇಲ್ಲ.":

ತಕ್ಷಣ ಮಹಾರಾಜ ಎದ್ದು "ಏಳು" ಎಂದು ಹೇಳಿದವನೇ ಕುದುರೆ ಹತ್ತಿ ಓಡಿಸಿದ. ಹಿಂದಿನಿಂದ ಸುಕ್ರನೂ ಓಡಿಸಿದ.

ಇಬ್ಬರೂ ಹದ್ದಿನಕೊಳ್ಳದ ಅರಮನೆಗೆ ಬಂದಾಗ ನಾಕು ತಾಸು ಹೊತ್ತೇರಿತ್ತು. ಅರಮನೆಯ ಮುಂದೆ ಜನ ಸೇರಿದ್ದು. ನೋಡಿದ್ದೇ ಶಿಖರಸೂರ್ಯ ಎದೆ ಡವ ಡವ ಹೊಡೆದುಕೊಳ್ಳಲಾರಂಭಿಸಿತು. ಕುದುರೆ ಇಳಿದಾಗ ದೃಢವಾಗಿ ನಿಲ್ಲಲೂ ಸಾಧ್ಯವಾಗಷ್ಟು ಕಾಲು ಸೋತು ಬಂದವು. ಇವರನ್ನು ನೋಡಿ ಜನ ಇಬ್ಭಾಗವಾಗಿ ಹತ್ತಿರ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟರು. ನಿಧಾನವಾಗಿ ನಡೆದು ಹೋಗಿ ನೋಡಿದರೆ ರವಿಕೀರ್ತಿ ಮತ್ತು ವಿದ್ಯುಲ್ಲತೆಯರ ಹೆಣಗಳನ್ನು ಆಜೂ ಬಾಜೂ ಮಲಗಿಸಿದ್ದರು! ವಿದ್ಯುಲ್ಲತೆಯ ಕೂದಲು ಕೆದರಿ ಹೆಣ ಒದ್ದೆ ಬಟ್ಟೆಯಲ್ಲಿತ್ತು. ಸತ್ತಿಲ್ಲ; ಮಲಗಿದ್ದಾಳೆ ಎನ್ನುವಂತಿತ್ತು ಶವ! ರವಿಕೀರ್ತಿಯ ಮೈಮೇಲೆ ಬಟ್ಟೆಯಿರಲಿಲ್ಲ. ಸೊಂಟದ ಮೇಲೊಂದು ಬಟ್ಟೆ ಚೆಲ್ಲಿದ್ದರು. ಮುಖ ಹಸಿರೇರಿತ್ತು. ಜಡೆಗಟ್ಟಿದ ಗಡ್ಡ ಕೂದಲು ಕೆದರಿತ್ತು. ದೇಹ ಕಡ್ಡಿಯಷ್ಟು ಕ್ಷೀಣವಾಗಿತ್ತು. ಎರಡೂ ಹೆಣಗಳ ಮಧ್ಯೆ ವಿದ್ಯುಲ್ಲತೆಯ ತಾಯಿ ಇನ್ನೊಂದು ಹೆಣದ ಹಾಗೆ ಕೂತಿದ್ದಳು. ಕಣ್ಣೀರು ಬತ್ತಿದ ಕಣ್ಣುಗಳಲ್ಲಿ ಬೆಳಕೆಂಬುದೇ ಇರಲಿಲ್ಲ. ಮುಖದ ಬಣ್ಣಕ್ಕೂ ಮಣ್ಣಿಗೂ ವ್ಯತ್ಯಾಸವಿರಲಿಲ್ಲವಾಗಿ ಮಣ್ಣಿನ ಮೂರ್ತಿಯಂತೆ ಕಾಣುತ್ತಿದ್ದಳು. ತಲೆಯ ಕೂದಲು ಜಡೆಗಟ್ಟಿ ಮುಖದಲ್ಲಿ ಚಿಕ್ಕ ಮೀಸೆ ಗಡ್ಡ ಬೆಳೆದಿದ್ದವು. ಎದೆ ಮೇಲೆ ಬಟ್ಟೆ ಇಲ್ಲದೆ ಅಡಿಕೆ ಗಾತ್ರದ ಮೊಲೆ ಜೋತುಬಿದ್ದಿದ್ದವು.

ಶಿಖರಸೂರ್ಯನನ್ನ ನೋಡಿ ಅರಿವಿಗೆ ಬಂದಳು. ಏನೂ ಉಳಿದಿಲ್ಲವೆಂಬಂತೆ ಎರಡೂ ಹಸ್ತಗಳನ್ನ ಅಲುಗುತ್ತ "ಓದರು ಒಂಟೋದರು!..." ಎಂದೊರಲುತ್ತ ಕೂತಳು. ಶಿಖರಸೂರ್ಯ ಬಾಯಿಂದ ಮಾತುಗಳೇ ಹೊರಡಲಿಲ್ಲ. ನೋಡ ನೋಡುತ್ತ ಹಾಗೇ ಕಟ್ಟೆಯ ಮೇಲೆ ಕುಸಿದು ಕೂತ. ಯಾರನ್ನೂ ಕಣ್ಣೆತ್ತಿ ನೋಡಲಿಲ್ಲ. ಒಂದೆರಡು ಸಣ್ಣ ಪುಟ್ಟ ಹಕ್ಕಿಗಳ ಸಣ್ಣ ಚಿಲಿಪಿಲಿ ಬಿಟ್ಟು ಉಳಿದಂತೆ ಸ್ಮಶಾನ ಮೌನ ಆವರಿಸಿತ್ತು. ಅವನನ್ನು ಮಾತಾಡಿಸುವ, ಸಮಾಧಾನ ಹೇಳುವ ಧೈರ್ಯ ಯಾರಿಗೂ ಆಗಲಿಲ್ಲ. ಮಹಾರಾಜನನ್ನ ಕಂಡು ಅನೇಕರಿಗೆ ದುಃಖ ಉಕ್ಕಿ ಬಂದರೂ ಮುಖ ಓರೆ ಮಾಡಿ ಕಣ್ಣೀರೊರೆಸಿಕೊಂಡರು. ಹೀಗೇ ತುಸು ಹೊತ್ತು ಕಳೆದ ಬಳಿಕ ಸುಕ್ರ ಮಹಾರಾಜನ ಬಳಿಗೆ ಹೋಗಿ "ಸಂಸ್ಕಾರ ಕಾರ್ಯ...." ಎಂದೇನೋ ಹೇಳ ಹೋಗಿ ಇನ್ನರ್ಧ ಮಾತು ನುಂಗಿ ಮಹಾರಾಜನ ಆಜ್ಞೆಗಾಗಿ ಕಾಯುತ್ತ ಕೂತ.

ಎಷ್ಟು ಹೊತ್ತು ಕಾದರೂ ಮಹಾರಾಜನ ಆಜ್ಞೆ ಬರಲೇ ಇಲ್ಲ;. ಆಮೇಲೆ ಬಂದರಾಯಿತೆಂದು ಎದ್ದ. ಹೊರಡುವಷ್ಟರಲ್ಲಿ ರಾಜ,

“ಸಂಸ್ಕಾರ ಕಾರ್ಯ ಜರುಗಲಿ” ಎಂದ.

“ಕನಕಪುರಿಯಿಂದ....”

“ಯಾರೂ ಬೇಡ. ಸುರುವಾಗಲಿ.”

ಎಂದ ಕೂಡಲೇ ಸುಕ್ರ ಸಂಸ್ಕಾರದ ಕಾರ್ಯಕ್ಕೆ ಜನಗಳನ್ನು ಕಳಿಸಿ ಮುದುಕಿಯ ಹತ್ತಿರ ಹೋಗಿ ಕೂತ.

ಮುದುಕಿ ಕೊಂಚ ಸುಧಾರಿಸಿಕೊಂಡಿದ್ದಳು. ಮುಖದಲ್ಲಿ ಜೀವ ಬಂದಿತ್ತು. ಸುಕ್ರ ಮೆಲ್ಲಗೆ, “ಏನಮ್ಮಾ ಇದೆಲ್ಲ? ಎಂಗಾಯ್ತು?” ಯಾಕಾಯ್ತು?” ಅಂದ. ಮುದುಕಿ ಇದಕ್ಕಾಗಿಯೇ ಕಾಯುತ್ತಿದ್ದಳೆಂಬಂತೆ ದೊಡ್ಡ ಹಾವ ಭಾವಗಳನ್ನು ಮಾಡುತ್ತ ಕೇಳಿದವರಿಗೆ ಮಗಳ ಮೇಲೆ ಕರುಣೆ ಬರುವಂತೆ, ಆದರೆ ಇದರಲ್ಲಿ ಮಗಳ ತಪ್ಪಿಲ್ಲವೆಂದು ಸ್ಪಷ್ಟವಾಗುವಂತೆ ಹೇಳಿದಳು:

“ಏನು ಹೇಳ್ಲಿ ನನ್ನಪ್ಪಾ. ದೊರೆಮಗ ಬೆಳಗ್ಗೆ ಒಬ್ಬನೇ ಬಂದ. ಮೈಮ್ಯಾಲೆ ಹರಕಂಗಿ ಹಾಕಿದ್ದ. ತುಂಡು ಬಟ್ಟೆ ಉಟ್ಟಿದ್ದ. ಗಡ್ಡ ಕೂದಲು ಒಂದಾಗಿ ಸೊರಗಿ ಕಡ್ಡಿ ಆಗಿದ್ದ. ಬಾಯಾರಿಕೆ ಅಂದ. ಇವನ್ಯಾರೋ ಹುಚ್ಚ ಬಂದ ಅಂತ ಹೆದರಿಕೊಂಡಿಬಿ. ಮಹಡಿಯಲ್ಲಿದ್ದ ಮಗಳು ಮಾತ್ರ ಇವನೇ ನ್ನ ಮಗ ರವಿಕೀರ್ತಿ ಇರಬಹುದೇ ಅಂತ ಸಂಶಯದಿಂದ ಕರೆಯ ಹೇಳಿದಳು.

ಮಗಳು ಮೂರು ಮೂರು ಮಾಳಿಗೆಯಿಂದಿಳಿದು ಬಂದು “ಬಾಯಾರಿಕೆಗೆ ಕಪಿಲೆಯ ಹಾಲು ತಗಂಬಾ” ಎಂದು ಹೇಳಿದಳು. “ಅವನು ಮೋರೆ ನಾನು, ನನ್ನ ಮೋರೆ ಆತ ನೋಡದ ಹಾಗೆ ನಡುಚಾವಡಿಯಲ್ಲಿ ಅಡ್ಡಗಂಬಳಿ ಹಿಡಿಯಿರಿ” ಎಂದಳು. ಆ ನುಡಿ ಕೇಳಿ ಹೆಣ್ಣಾಳ್ಗಳು ಕರಿಕಂಬಳಿಯ ಚಾವಡಿಗೆ ಅಡ್ಡ ಹಿಡಿದು ಆಚೆ ಬದಿಯಲ್ಲಿ ರವಿಕೀರ್ತಿಯ ನಿಲ್ಲಿಸಿ ಈಚೆ ಬದಿಗೆ ವಿದ್ಯುಲ್ಲತೆ ನಿಂತು “ಮ್ಯಾಲೆ ನೋಡಬೇಡಿ. ಕಂಬಳಿಯಾಚೆ ಕೊಡುವ ಹಾಲನ್ನು ಕೊಂಡು ಬಾಯಾಸರೆ ತೀರಿಸಿಕೊಳ್ಳಿರಿ” ಎಂದಳು. ಕೆಳಗೆ ನೋಡುತ್ತ ಹಾಲು ಕೊಂಬಾಗ ವಿದ್ಯುಲ್ಲತೆಯ ಹೂವಿನಂಥ ಪಾದಗಳ ಉಂಗುಟದ ಅಂದವ ಕಂಡು “ಆಹಾ ನನ್ನ ವಾಸಂತಿ!” ಅಂತ ಬೋಧೆ ತಪ್ಪಿ ಬಿದ್ದುಬಿಟ್ಟರು! ತಕ್ಷಣ ಅಡ್ಡ ಕಂಬಳಿ ಬಿಸಾಕಿ ನೋಡಿ, ಮಗ ರವಿಕೀರ್ತಿಯೇ ಹೌದೆಂದು ಖಾತ್ರಿಯಾಗಿ - ಮಗಳು ಜಯವುಳ್ಳ ದೇವರ ನೆನೆದು ಸೀರೆಸೆರಗಿನಿಂದ ಗಾಳಿ ಬೀಸಿ ಬೋಧಗೊಳಿಸಲು ಪ್ರಯತ್ನಸಿದಳು. ಮಗ ಬೋಧಗೊಂಡು ನಿಧಾನ ಕಣ್ಣು ತೆರೆದ. “ಗುರುತು ಸಿಕ್ಕಿತ ಮಗನೆ?” ಅಂದಳು. ಮಗ ಮಗಳನ್ನ ನೋಡಿ ನಕ್ಕರು. ಇವಳೂ ನಕ್ಕಳು. ಅದೇನು ದೆವ್ವ ಮೈ ಸೇರಿತೋ “ವಾಸಂತೀ ವಾಸಂತೀ” ಅಂತ ಹೇಳಿದವರೇ ಅವಳ ಮೇಲೆ ಹಾರಿ ಸೀರೆ ಸೆಳೆದರು! ಇವಳು ಕಿರಿಚಿ ಓಡಿದಳು. ಬೆನ್ನು ಹತ್ತಿದರು. ಸೀರೆ ಸೆಳೆದು ಮೊಗಸಾಲೆಯಲ್ಲಿ ಚೆಲ್ಲಿದರು. ಅಡ್ಡ ಬಂದ ಆಳನ್ನ ಒದ್ದು ತಳ್ಳಿದರು. ಮಗಳು ದನ ಒದರಿದ ಹಾಗೆ ಒದರಿದಳು, ಕಿರಿಚೆದಳು, ಕೂಗಿದ್ದಳು, ಬಾಯಿ ಬಾಯಿ ಬಡಕೊಂಡಳು, ಕೇಳಲಿಲ್ಲ. ಗಟ್ಟಿಯಾಗಿ ಹಿಡಿದುಕೊಂಡು ರಗತ ಬರೋ ಹಾಂಗೆ ತಲ್ಲ ತುಟಿ ಕಚ್ಚಿ ಹಾಂಗೇ ಉರುಳಿ ಬಿದ್ದ. ಇವಳೆದ್ದು ಕಿರುಚುತ್ತ ಓಡಿಹೋಗಿ ಬಾವಿ ಹಾರಿದಳೋ ಮಗಳು ಬಾವೀ ಹಾರಿದಳು..”

ಎಂದು ಹೇಳುತ್ತ ಮುದುಕಿ ಎದೆ ಎದೆ ಬಡಿದುಕೊಂಡು ಅಳತೊಡಗಿದಳು. ಯಾರೂ ಅವಳನ್ನು ಸಮಾಧಾನ ಮಾಡಲಿಲ್ಲ.

ಸಂಸ್ಕಾರದ ಸಮಯದಲ್ಲಿ ಇವರೇ ನಾಲ್ಕಾರು ಜನಗಳನ್ನ ಬಿಟ್ಟರೆ ಇನ್ಯಾರೂ ಇರಲಿಲ್ಲ. ಕನಕಪುರಿಗೆ ಸುದ್ದಿ ಹೋಗಿತ್ತು. ಯಾರೂ ಬರಲಿಲ್ಲ. ಮಗನಿಗೆ ಚಿತೆ ಇಟ್ಟಮೇಲೆ ಮಾತ್ರ ಮಹಾರಾಜ “ಮಗನೇ” ಎಂದು ಆಕಾಶದ ಕಡೆ ಮುಖ ಮಾಡಿ ಒಂದು ಸಲ ಅರಚಿ ಮೊಳಕಾಲ ಮೇಲಿ ಕುಸಿದ, ಅಷ್ಟೆ!

ಆಮೇಲೆ ಬಿಳಿಗಿರಿಯ ಇಂದ್ರ ನಿವಾಸದ ಅಟ್ಟದ ಕೋಣೆಯೇರಿ ಬಾಗಿಲಿಕ್ಕಿಕೊಂಡವನು ಮೂರು ಹಗಲು ಎರಡು ರಾತ್ರಿ ಹೊರ ಬರಲಿಲ್ಲ.

ಸುಕ್ರನಿಗೆ ಕನಕಪುರಿಯ ಕಾಳಜಿಯಾಗಿತ್ತು. ಮಹಾರಾಜನ ಕೋಣೆಯ ಹೊರಗಡೆ ನಿಂತು "ಕನಕಪುರಿಗೆ ಹೋಗಿ ನೋಡಿಕೊಂಡು ಬರಲಾ ಒಡೆಯಾ?" ಎಂದು ಕೇಳಿದ. ಒಳಗಡೆಯಿಂದ ಉತ್ತರ ಬರಲಿಲ್ಲ. ಎರಡು ದಿನ ಎರಡೆರಡು ಬಾರಿ ಕೇಳಿದ. ಉತ್ತರ ಬರಲಿಲ್ಲ. ಮೂರನೇ ದಿನದ ಕೊನೆಗೆ "ನಾನೂ ಬರ್ತೆನಿ, ನಡೆ" ಎಂದು ಮಹಾರಾಜನ ದನಿ ಕೇಳಿಸಿತು.

ಇಬ್ಬರೂ ಕನಕಪುರಿಗೆ ಬಂದರು ಅಲ್ಲೇನಿದೆ?

# ಮತ್ತೆ ಕನಕಪುರಿ

## ಎಪ್ಪತ್ತೆರಡು

ಕಾರ್ಯಕಾರಣಗಳಿಲ್ಲದೆ ಇತಿಹಾಸ ಸ್ವತಂತ್ರವಾಗಿ ಚಲಿಸುವುದೇ ಇಲ್ಲ. ಯಾವುದೋ ಕಾರಣ ನೆಪವಾಗಿ ಕ್ರಿಯೆ ಜರಗುತ್ತದೆ. ಅದರ ಪರಿಣಾಮ ಬೆಂಬತ್ತಿ ಬರುತ್ತದೆ. ಒಂದು ಕಾರಣ ಮರಿ ಹಾಕಿ ಇನ್ನೊಂದು ಪರಿಣಾಮ ಹುಟ್ಟುತ್ತದೆ. ಹೀಗೇ ಕಾರಣಗಳು ಹುಟ್ಟುತ್ತವೆ. ಹಿಂದಿನಿಂದ ಪರಿಣಾಮಗಳು... ಹೀಗೆ ತಾನೇ ನೇಯ್ದ ಜಾಲದಿಂದ ಇತಿಹಾಸಕ್ಕೆ ಮುಕ್ತಿಯೇ ಇಲ್ಲ. ಅದಕ್ಕೇ ಪುನರಾವರ್ತಿಸುತ್ತ ಮುಂದುವರಿಯುತ್ತದೆ. ಇದನ್ನು ಪ್ರತಿ ಎಂದು ಕರೆದು ಬೆಲೆಗಟ್ಟಲಿಕ್ಕೂ ಅದು ನಾಚುವುದಿಲ್ಲ. ಬಡವರ ಗುಡಿಸಲುಗಳನ್ನು ಕೆಡವಿ ಆ ಸ್ಥಳದಲ್ಲೊಂದು ದೊಡ್ಡ ಅರಮನೆ ಕಟ್ಟಿ ಅದನ್ನು ಪ್ರಗತಿ ಎಂದು ಕರೆಯುವಷ್ಟು ಹೊಣೆಗೇಡಿತನ ಇತಿಹಾಸವನ್ನು ಬಿಟ್ಟು ಇನ್ನೆಲ್ಲಿ ಸಿಕ್ಕೀತು?

ಪ್ರಸ್ತುತ ಕನಕಪುರಿಯ ವಿಷಯ ನೋಡುವಾ;

ಈಗೊಂದು ತಿಂಗಳ ಹಿಂದೆಯೇ ಕನಕಪುರಿಯ ಹೊರ ಅಂಚಿನಲ್ಲಿ ದೊಡ್ಡ ರೋಗ ಸುರುವಾಗಿದ್ದನ್ನ ಚಂಡೀದಾಸ ವರ್ತಕರ ಗಮನಕ್ಕೆ ತಂದಿದ್ದ. ಸ್ವಯಂ ಮಹಾರಾಜನೇ ವೈದ್ಯನಾಗಿರುವಾಗ ಅವನಿಗೆ ಈ ವಿಷಯ ತಿಳಿಯದಿದ್ದೀತೆ? ಎಂದು ವರ್ತಕರು ಯಾಮಾರಿದರು. ದೊಡ್ಡರೋಗ ದಲಿತರ ಕೇರಿ ಹಾಗೂ ಹೊರಕೇರಿಗಳಲ್ಲಿ ಕಾಣಿಸಿಕೊಂಡುದರಿಂದ ಅದರ ಭಯಾನಕತೆ ಅರಮನೆಗೆ ಕೂಡಲೇ ತಿಳಿದಿರಲಿಕ್ಕಿಲ್ಲ. ಆದರೆ ಹೊರಕೇರಿಯಲ್ಲಿ ಯಾವಾಗ ಒಂದೇ ದಿನ ಎಂಟು ಹೆಣಗಳು ಬಿದ್ದವೋ ಆಗ ಮಾತ್ರ ವರ್ತಕರು ಗಾಬರಿಯಾದರು.

ವರ್ತಕ ಸಂಘದ ಸದಸ್ಯರು ತುರ್ತಾಗಿ ಸಭೆ ಸೇರಿ ಮಹಾರಾಜನನ್ನು ನೋಡಲು ಅರಮನೆಗೆ ಹೋದರು. ಅರಮನೆಯಲ್ಲಿ ಮಹಾರಾಜನಿರಲಿಲ್ಲ. ಪ್ರಧಾನಿ ಸುಕ್ರನ ಕೇಳಿದರೆ ಅವನು ಹತಾಶನಾಗಿ ಬೆಟ್ಟದಯ್ಯನ ನೆನೆದು ಮಹಾರಾಜರು ಬರಲಿ ಎಂದು ಸಮಾಧಾನ ಮಾಡಿ ಕಳಿಸಿದ.

"ದೊಡ್ಡ ರೋಗದಿಂದ ಕನಕಪುರಿಯನ್ನ ಪಾರು ಮಾಡಬೇಕಿದೆ. ಆದರೆ ಈ ಬಗ್ಗೆ ತೀರ್ಮಾನ ತಗೋಬೇಕಾದವರು ಮಹಾರಾಜರು; ತಾವೇನಿದ್ದರೂ ಹೇಳಿದಂತೆ ಕೇಳುವವರು ಮಾತ್ರ" ಎಂಬ ಸತ್ಯ ಈಗ ಎಲ್ಲರಿಗೂ ಗೊತ್ತಾಯಿತು. ರೋಗದ ಭಯದಿಂದ ಪ್ರೇರಿತರಾಗಿ ಅನೇಕರು ಅಸಂಬದ್ಧ ಉಪಾಯಗಳನ್ನು ಸೂಚಿಸಿದರಾದರೂ ಅದಾಗಲೇ ಎದುರಿಸಲಾರದಷ್ಟು ಅಪಾಯಕಾರಿಯಾಗಿ ಹಬ್ಬಿದೆಯೆಂದು ಅಂದುಕೊಂಡು ಮನೆಗಳಿಗೆ ಹೋದರು.

ಕನಕಪುರಿಯ ವ್ಯವಹಾರವೂ ಅಪಾಯದಂಚಿಗೆ ಬಂದು ನಿಂತಿತ್ತು. ಚಿನ್ನದ ಬೆಲೆ ಎಷ್ಟು ಕನಿಷ್ಟಕ್ಕೆ ಹೋಗಿತ್ತೆಂದರೆ ಹಿಡಿ ಧಾನ್ಯಕ್ಕೆ ಹಿಡಿ ಚಿನ್ನ ಕೊಡುತ್ತೇವೆಂದರೂ ಮಾರುವವರಿರಲಿಲ್ಲ. ತರಕಾರಿಗೆ ಸಮ ತೂಕದಲ್ಲಿ ಚಿನ್ನ ಕೊಡುತ್ತೇವೆಂದರೂ ತರಕಾರಿ ಸಿಗುತ್ತಿರಲಿಲ್ಲ.

ಆಳುಗಳನ್ನು ಕೊಳ್ಳುವವರು, ಜೀತಕ್ಕೆ ಇಟ್ಟುಕೊಂಬವರು ಒಬ್ಬರೂ ಸಿಗುತ್ತಿರಲಿಲ್ಲ. ಯಾಕೆಂದರೆ ಯಾವ ಆಳು ಯಾವಾಗ ತಿರುಗಿ ಬಿದ್ದಾನೆಂದು ನಂಬಿಕೆಯಿರಲಿಲ್ಲ. ಆಳುಗಳು ಕೆಲಸ ಇಲ್ಲದೆ ಒದ್ದಾಡುತ್ತಿದ್ದರು.

ಬಡವರು ದೊಂಬಿ ಏಳುವ ಎಲ್ಲ ಲಕ್ಷಣಗಳು ವಾತಾವರಣದಲ್ಲಿದ್ದವು. ಈ ಬಗ್ಗೆ ವರ್ತಕರು ಮಹಾರಾಜನೊಂದಿಗೆ ಚರ್ಚಿಸಬಯಸಿದರೂ ಮಹಾರಾಜನು ಸಿಕ್ಕಿರಲಿಲ್ಲ. ರೈತರು ತರಕಾರಿ ಹಣ್ಣು ಮುಂತಾದ ವಸ್ತುಗಳನ್ನು ಸಂತೆಗೆ ತರಲು ಹಿಂಜರಿದಿದ್ದರಿಂದ ಸಂತೆ ಬೆಕೋ ಎನ್ನುತ್ತಿತ್ತು. ಉಳಿದಂತೆ ಚಾಕು ಚೂರಿ ಮಾರಾಟದ ವ್ಯಾಪಾರಿಗಳನ್ನು ಕೇಳುವವರಿರಲಿಲ್ಲ! ಹಸಿದ ಬಡವರ ತಂಡವೊಂದು ಕನಕಪುರಿ ಗುರಿಯಾಗಿ ಹೊರಟಿದೆ ಎಂದು ಸುದ್ದಿ ಬಂದಿತ್ತು. ಅದಿನ್ನೂ ಬಂದಿರಲಿಲ್ಲ.

ಕನಕಪುರಿ ವ್ಯವಹಾರದಲ್ಲಿ ನಂಬಿಕೆಯಿಲ್ಲದ ವರ್ತಕರು ಯಾವುದಕ್ಕೂ ಇನ್ನೊಂದು ಕಡೆಗೆ ಬೇರೂರುವುದು ಒಳ್ಳೆಯದೆಂದು ವಲಸೆ ಹಾಗೊವುದು ಸುರುವಾಗಿತ್ತು. ಬೇರೆ ರಾಜಧಾನಿಗಳಲ್ಲಿ ಅವಕಾಶ ಸಿಕ್ಕುವಂತಿದ್ದರೆ ಕೂಡಲೇ ಹೊರಟು ಬಿಡುತ್ತಿದ್ದರು. ಅಂಥವರು ಸಾಮಾನ್ಯವಾಗಿ ರಾತ್ರಿ ಹೊತ್ತು ಹೋಗುವುದೇ ಹೆಚ್ಚು. ವಲಸೆ ಹೋಗುವುದು ಅವಮಾನಕರವೆಂದು ಹೋಗುವಾಗ ಸರಿಕರಿಗೆ ಹೇಳುತ್ತಿರಲಿಲ್ಲ. ನೆರೆಹೊರೆಯವರಿಗೆ ಮಾತ್ರ "ನೀವಿರುವಷ್ಟು ದಿನ ನಮ್ಮ ಮನೆ ಕಡೆಗೂ ಒಂದು ಕಣ್ಣೀಡಿ. ಮುಂದೆ ಸಾಧ್ಯವಾದರೆ ಭೇಟಿಯಾಗೋಣ" ಎಂದು ಹೇಳಿ ಹೋಗುತ್ತಿದ್ದರು.

"ಇಷ್ಟು ದಿನ ವೈಭವದಿಂದ ಮೆರೆದ ಕನಕಪುರಿಗೆ ಈ ಗತಿ ಬಂತೆ? ಎಂಬ ಮಾತನ್ನು ವರ್ತಕರು ಬೇರೆ ಬೇರೆ ದನಿಗಳಲ್ಲಿ ನಿಟ್ಟುಸಿರಿನೊಂದಿಗೆ ಹೇಳುತ್ತಿದ್ದರು. ಹಾಗೆ ಹೇಳಿದಾಗೊಮ್ಮೆ "ವಿಧಿಯ ಆಟ!" ಎಂದು ಆಕಾಶದ ಕಡೆಗೆ ನೋಡಿ, ತಮ್ಮ ಅಸಹಾಯಕ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದರು.

ಪರಿಸ್ಥಿತಿ ಇಂತಿರುವಲ್ಲಿ ಶಿಖರಸೂರ್ಯ ಶಿವಾಪುರದ ಅಸಲಿ ಚಿನ್ನ ಮತ್ತು ಧಾನ್ಯಗಳಿಂದ ತನ್ನ ರಾಜ್ಯದ ಅರ್ಥಿಕತೆಯನ್ನು ತಹಬಂದಿಗೆ ತರಬಹುದೆಂದುಕೊಂಡಿದ್ದ. ಮಹಾರಾಜ ಶಿವಾಪುರದಲ್ಲಿದ್ದ ಕೊನೆಯ ದಿನ ಏನಾಯಿತೆಂದು ನಿಮಗೇ ಗೊತ್ತಿದೆ. ಅವನ ಇಡೀ ಸೈನ್ಯ ಬಲವೆಲ್ಲ ಕಸವಾಗಿ, ಕಾಲ್ಕೆಳಗೆ ಬಿದ್ದು, ಮೌಲ್ಯ ವ್ಯವಸ್ಥೆ ಕುಸಿದು ಚಿನ್ನವೆಂದುದೆಲ್ಲ ಧಾನ್ಯವಾಗಿ ಸೈನ್ಯವೆಂದುದು ಕಸವಾಗಿ ಪರಿವರ್ತನೆ ಹೊಂದಿತ್ತು!

ಮಾರನೇ ಬೆಳಿಗ್ಗೆ ಕನಕಪುರಿ ಎಚ್ಚತ್ತು ಕಣ್ಣುಜ್ಜಿಕೊಂಡು ಹೊರಗಡೆ ಬಂದು ನೋಡಿದರೆ ಏನಿದೆ? ಕಾವಲು ಬಂಟರಿಲ್ಲ! ಸೈನಿಕರಿಲ್ಲ! ರಸ್ತೆಗಳ ತುಂಬ ಚೆಲ್ಲಾಪಿಲ್ಲಿಯಾದ ಕಸ, ಹುಲ್ಲು ಮೇವು ತಿಪ್ಪೆ ರಾಶಿಯಾಗಿ ಬಿದ್ದಿದೆ! ರಸ್ತೆಗಳ ಮೌನಕ್ಕೆ ಹೆದರಿ ಬಾಯಿ ಕಳೆದುಕೊಂಡಂತೆ ಕನಕಪುರಿ ನಿಶ್ಯಬ್ದವಾಗಿದೆ!

ಯಾವಾಗ ಮನೆ ಅಂಗಡಿಗಳಲ್ಲಿ ಇಟ್ಟಿದ್ದ ಚಿನ್ನ ಬೆಳಗಾಗುವುದರೊಳಗೆ ಧಾನ್ಯವಾದುದು ಕಣ್ಣಿಗೆ ಬಿತ್ತೋ - ವರ್ತಕರ ಎದೆ ಒಡೆದವು! ನಿಜವಾಗಿಯೂ ಧಾನ್ಯವಾಯಿತೇ? ಎಂದು ಅಂಗೈಯಲ್ಲಿಟ್ಟುಕೊಂಡು ನೋಡಿದರು. ಹತಾಶೆಯಿಂದ ಸುರಿದು ನೋಡಿದರು. ಅದು ಧಾನ್ಯವೇ ಎಂದು ಖಾತ್ರಿಯಾದೊಡನೆ "ಮೋಸ! ಮೋಸ!" ಎಂದು ಕಿರಿಚಿ ನಾಲ್ಕು ಜನ ವರ್ತಕರು ನಿಂತಲ್ಲೇ ಕುಸಿದು ದೈವಾಧೀನರಾದರು. ಇಬ್ಬರು ಬೊಗಸೆ ತುಂಬ ಧಾನ್ಯ ಹಿಡಿದುಕೊಂಡು ರಸ್ತೆಗೆ ಬಂದು "ಘಾತವಾಯ್ತೋ!" ಎಂದು ಕಿರಿಚಿ ಸತ್ತರು. ಇನ್ನು ಕೆಲವರು ಎದೆ ಎದೆ ಬಡಿದುಕೊಳ್ಳುತ್ತ ಅರಮನೆಯ ಕಡೆಗೆ ಮಣ್ಣು ತೂರಿ ಮಹಾರಾಜನಿಗೆ ಶಾಪ ಹಾಕಿದರು. ಒಂದು ಅಂಗಡಿಯ ಮುಂದೊಬ್ಬ ಭಿಕ್ಷುಕ ಬಂದಾಗ ವರ್ತಕ, ಅವನನ್ನು ಅಂಗಡಿಯೊಳಕ್ಕೆ ಬರಮಾಡಿಕೊಂಡು, ಕಾಲು ಮುಟ್ಟಿ ನಮಸ್ಕಾರ ಮಾಡಿ ತಾನು ಹೊರಗೆ ಹೋದ!

ಕೆಲವೇ ಧೈರ್ಯವಂತ ವರ್ತಕರು ರೂಢಿಗತ ಅಭ್ಯಾಸ ಬಿಡಲಾರದೆ ಅಂಗಡಿಗಳ ಬಾಗಿಲು ತೆರೆದು ಶೂನ್ಯ ದೃಷ್ಟಿಯಿಂದ ರಸ್ತೆಗಳನ್ನು ನೋಡುತ್ತ ಕುಳಿತುಕೊಂಡಿದ್ದರು. ಯಾರೊಬ್ಬರು ಕಾಣಿಸಿಕೊಂಡರೂ ಓಡಿ ಹೋಗಿ ಅವರನ್ನು ನಿಲ್ಲಿಸಿ ಏನಾಯಿತೆಂದು ತಿಳಿಯಲು ಕಾತರರಾಗಿದ್ದರು. ದುರ್ದೈವಕ್ಕೆ ಯಾರು ಬಂದರೂ ಇವರಿಗಿಂತ ಮುಂಚೆಯೇ ಏನಯಿತೆಂದು ಇವರನ್ನೇ ಕೇಳುತ್ತಿದ್ದರು.

ಗಿರಾಕಿಗಳನ್ನು ಸೌಜನ್ಯದಿಂದ ಕೂಗುವ ವ್ಯಾಪಾರಿಗಳ ದನಿ ಕೇಳಿಸುತ್ತಿರಲಿಲ್ಲ. ಕೂಗುವುದಕ್ಕೆ ಯಾರಾದರೂ ಹಾದಾಡಿದರಲ್ಲವೆ? ಎಲ್ಲರೂ ಕಣ್ಣಗಲಿಸಿಕೊಂಡಿ ಕಾಯುತ್ತಿದ್ದರು. ಬೀದಿ ಓಣಿ ಪೇಟೆಗಳಲ್ಲಿ ನರಪಿಳ್ಳೆಯ ಸಂಚಾರವಿರಲಿಲ್ಲ. ಬೀದಿ ಮಾರಾಟಗಾರರು, ಕಲಬೆರಕೆ ಮಾರಾಡಗಾರರೂ ಇರಲಿಲ್ಲ. ರಸ್ತೆಗಳಲ್ಲಿ ಹುಲ್ಲು ಕಸ, ಸೆಗಣಿ ಲದ್ದಿ ಎರಚಾಡಿದಂತೆ ಬಿದ್ದಿತ್ತು.

ಊರಲ್ಲಿದ್ದ ಹಸಿದ ಬಡವರನ್ನು ತಡೆಯುವುದು ಕಷ್ಟವಾಗಿತ್ತು. ಜನ ದಂಗೆ ಏಳಲಿಲ್ಲ. ಅರಮನೆಯಲ್ಲಿ ಈಗ ಹೇರಳವಾಗಿರುವ ಧಾನ್ಯ ಸಂಗ್ರಹದಿಂದ ತಾವೂ ಒಂದಷ್ಟು ಧಾನ್ಯ ತಂದು ಮನೆ ಗುಡಿಸಲುಗಳಲ್ಲಿ ತುಂಬಿಕೊಂಡರೇ ವಿನಾ ಇವರ್ಯಾರೂ ರಾಜನ ವಿರುದ್ಧ ದಂಗೆ ಎದ್ದವರಲ್ಲ. ಇವನಿಗಿಂತ ಉತ್ತಮ ರಾಜ ಬರಲೆಂದು ಇನ್ನೊಂದು ಒಳ್ಳೆಯ ವ್ಯವಸ್ಥೆ ಬರಲೆಂದು ಅಂದವರಲ್ಲ. ನಮಗೆ ಈಗ ಊಟ ಮಾಡಲಿಕ್ಕೆ ಒಂದಷ್ಟು ಧಾನ್ಯ ಬೇಕು; ಅದು ಸಿಕ್ಕರಾಯಿತೆಂದು ಅಂದುಕೊಂಡು ಅರಮನೆಗೆ ನುಗ್ಗಿದರು. ಉಡಿತುಂಬ ಧಾನ್ಯ ಸಿಕ್ಕದ್ದೇ ತೃಪ್ತರಾಗಿ ಮತ್ತೆ ಮತ್ತೆ ಬಂದು ತಗೊಂಡು ಹೋದರು.

ಮಹಾರಾಜರಿಲ್ಲವೆಂದು, ಕೊಲೆಯಾಗಿರುವರೆಂದು, ಹಿಂದಿನ ಮಹಾರಾಣಿಯ ಭೂತ ಅವರನ್ನ ಕೊಂಡು ಹಾಕಿತೆಂದು ಕತೆಗಳು, ಕಿಂವದಂತಿಗಳು ಹಬ್ಬಿದವು. ವೃದ್ಧ ವಿಧವೆಯೊಬ್ಬಳು ಬಟ್ಟೆಯಲ್ಲಿ ಹೆಣವ ಸುತ್ತಿಕೊಂಡು ಆಕಾಶದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಮಧ್ಯರಾತ್ರಿ ಚಲಿಸುವಳೆಂದು, ಯಾರು ಬೇಕಾದರೂ ಈ ದೃಶ್ಯ ನೋಡಬಹುದೆಂದು ಸುದ್ದಿ ಹಬ್ಬಿತು. ಇವುಗಳ ಪರ ವಿರೋಧವಾಗಿ ಯಾರೂ ದನಿ ಎತ್ತಲಿಲ್ಲ. ಸಂಜೆಯಾಗುವುದರೊಳಗೆ ಕನಕಪುರಿ ಹುಯಿಲು ಗಡಿಬಿಡಿಗಳಿಂದ ತುಂಬಿ ಹೋಯ್ತು.

ಸೈನ್ಯದ ಬಗ್ಗೆ ಮೊದಲು ಗೊಂದಲವಿತ್ತು. ರಾತ್ರಿ ಮಲಗುವ ಮುನ್ನ ಇದ್ದ ಸೈನ್ಯ ಬೆಳಿಗ್ಗೆ ಮಾಯವಾಗುವುದೆಂದರೇನು? ಆಜ್ಞೆ ಕೊಡುವ ಅಧಿಕಾರಿಗಳೇ ಮಾಯವಾಗಿದ್ದಾರೆ! ಅವರೇನಾದರು? ಎಲ್ಲಿ ಹೋದರು? ಈ ಪ್ರಶ್ನೆಗಳಿಗೆ ಉತ್ತರಿಸುವವರು ಯಾರೂ ಇರಲಿಲ್ಲ.

ಬಂಡೆಯನೊಬ್ಬ ಅಳಿದುಳಿದ ನಲವತ್ತು ಬಂಟರನ್ನ ಕಟ್ಟಿಕೊಂಡಿದ್ದ ಅಷ್ಟು ಜನರಿಂದ ಏನಾದೀತು? ಊರು ನೋಡಿಕೊಳ್ಳಬೇಕೆ? ಅರಮನೆ ಕಾಯಬೇಕೆ? ಅರಮನೆಯಲ್ಲಿ ರಾಜನಿಲ್ಲ. ಮಂತ್ರಿಯಿಲ್ಲ. ಊರಲ್ಲಿ ವರ್ತಕ ಸಂಗವಿಲ್ಲ. ಹೇಳುವವರಿಲ್ಲ. ಕೇಳುವವರಿಲ್ಲ.

ಹುಚ್ಚು ಹತ್ತಿದ ಮಗ ತನ್ನ ಗುರುತು ಹಿಡಿಯದಿದ್ದ ದಿನವೇ ಛಾಯಾದೇವಿ ದೈವಾಧೀನಳಾಗಿದ್ದಳು. ದೊಡ್ಡ ರೋಗಕ್ಕೆ ಹೆದರಿ ಅವಳ ಚಿತೆಗೆ ಜನಗಳಾಗಲಿ ಬಂಧುಗಳಾಗಲಿ ಯಾರೂ ಬರಲಿಲ್ಲ. ಇನ್ನುಳಿದವಳು ಚಿಕ್ಕಮ್ಮಣ್ಣಿ. ಅರಮನೆಯೆಲ್ಲ ಖಾಲಿಯಾದರೂ ಪರಿಚಿತರು ಅರಮನೆ ಬಿಟ್ಟರೂ ಊರು ಬಿಟ್ಟು ಬಾ ಎಂದು ಬಿಳಿಗಿರಿಯ ನೆಂಟರು ಗೋಗರೆದರೂ ಹೋಗಲಿಲ್ಲ. ಅವಳು ಇಲ್ಲಿದ್ದರೂ ಸದಾಕಾಲ ತೂಕಡಿಸುತ್ತಿದ್ದಳಾಗಿ ಲೆಕ್ಕಕ್ಕಿರಲಿಲ್ಲ.

ಮಹಾರಾಜನಿಲ್ಲವೆಂದು ಯಾವಾಗ ಗುಲ್ಲೆದ್ದಿತೋ ಮಣ್ಣು ಮುಕ್ಕಿದ್ದ ಕಳ್ಳಕಾಕರು, ಪುಂಡುಪೋಕರಿಗಳು, ಮಾಂಡಳಿಕರು, ಕೇಡಿಗಳು ಚಿಗುರಿಕೊಂಡರು. ನೋಡಿದವರ ಕಣ್ಣು ಕುಕ್ಕುವಂಥ ಮೆರಗಿನ ಕನಕಪುರಿ, ಪ್ರತಿಯೊಂದು ಕಾಸಿಗೂ ಒಬ್ಬ ಕಳ್ಳನಿರುತ್ತಾನೆಂದು ನಂಬಿದ್ದ ಕನಕಪುರಿ ಅನಾಥವಾದಾಗ ಇನ್ನೇನಾದೀತು? ಕಳ್ಳಕಾಕರ ದಾಳಿ ಸುರುವಾದವು.

ಬಂಡೆಯ ಒಬ್ಬನೇ ಹತಾಶನಾಗಿ ಅರಮನೆಯ ಮುಂಗೋಣೆಯಲ್ಲಿ ತಲೆಯ ಮೇಲೆ ಕೈ ಹೊತ್ತು ಕೂತು ಬಿಟ್ಟ. ಅಲ್ಲಿಗೂ ಒಬ್ಬ ವರ್ತಕ ಓಡಿಬಂದು –

“ಸ್ವಾಮೀ ದಂಡನಾಯಕರೇ ಕೊನೇ ಪಕ್ಷ ಓಡಿ ಹೋಗುವುದಕ್ಕಾದರೂ ದಯಮಾಡಿ ನಮಗೆ ರಕ್ಷಣೆ ಕೊಡಿ.

- ಎಂದು ಕೈ ಮುಗಿಯುತ್ತಿದ್ದ.

ಯಾರು ಯಾರ ಮನೆ ಅಥವಾ ಅಂಗಡಿಗಳಿಗೆ ನುಗ್ಗಿದರು, ಏನನ್ನು ಒಯ್ದರೆಂದು ಹೇಳಕೇಳವವರು ಯಾರೂ ಇರಲಿಲ್ಲ. ಅರಮನೆಯಲ್ಲಿ ಧಾನ್ಯವಿದೆ ಎಂದು ಕೇಳಿ ಓಡಿ ಬಂದ ಜನರನ್ನು ತಡೆದು ಅನೇಕ ಬಂಟರು ತಾವೇ ಚೀಲಗಳಲ್ಲಿ ಧಾನ್ಯ ತುಂಬಿಕೊಂಡು ಕೂಲಿಗಳಂತೆ ಹೊತ್ತುಕೊಂಡು ಓಡಿಹೋಗುವ ದೃಶ್ಯ ಹಾಸ್ಯಾಸ್ಪದ ಮತ್ತು ಕರುಣಾಜನಕವಾಗಿತ್ತು. ಬೇಲಿಯೇ ಎದ್ದು ಹೊಲ ಮೇಯ್ದಂತೆ ಕನಕಪುರಿಯ ಭಂಟರೇ ಅರಮನೆಯ ಧಾನ್ಯ ಲೂಟಿ ಮಾಡಿಕೊಂಡು ಓಡಿ ಹೋಗುವಾಗ ಸಾಮಾನ್ಯ ಪ್ರಜೆಗಳು “ಏ ಕಳ್ಳರನ್ನ ಹಿಡೀರಯ್ಯಾ” ಎಂದು ಕೂಗಿದ್ದೇ ಆಯ್ತು ಬಂಟರು ಸತ್ತೆವೋ ಕೆಟ್ಟೆವೋ ಎಂದು ಶಿವಮಂದಿರ ದಾಟಿ ಓಡಿದರು!

ಪೇಟೆಯ ಪರಿಸ್ಥಿತಿ ಇನ್ನೂ ಭಯಾನಕವಾಗಿತ್ತು. ಅರಮನೆಯಾದರೆ ಕಾವಲುಗಾರರು ಅಡಗಿರಬಹುದೆಂಬ ಭಯವಾದರೂ ಇರುತ್ತಿತ್ತು. ಇಲ್ಲಿ ಅದೂ ಇರಲಿಲ್ಲ. ಈ ಸಂದರ್ಭದಲ್ಲಿ ವರ್ತಕರು ಲೂಟಿ ಮಾಡುವವರನ್ನು ಜೀವಭಯದಿಂದ ಎದುರು ಹಾಕಿಕೊಳ್ಳಲೇ ಇಲ್ಲ. ರಕ್ಷಿಸುವ ಭಂಟರೇ ಕಾಲಕಸವಾಗಿ ನೆಲ ಕಚ್ಚಿರುವಾಗ ವರ್ತಕರಾದವರು ಪ್ರತಿಭಟಿಸುವುದು ಸಾಧ್ಯವೆ? ದರೋಡೆಕೋರರು, ಬಂಟರು, ಕಳ್ಳಕಾಕರು ಅಂಗಡಿ ಮನೆಯೊಳಗೆ ನುಗ್ಗಿದರೆ ವರ್ತಕರು ಎದುರು ಕೂಡ ಸುಳಿಯಲಿಲ್ಲ. ಹೆಂಗಸರು ಮಕ್ಕಳನ್ನು ಹೊರಗಡೆ ಕೂಡು ಹಾಕಿ ಇಡೀ ಮನೆ ಅಥವಾ ಅಂಗಡಿಯನ್ನ ಅವರ ವಶಕ್ಕೊಪ್ಪಿಸಿದರು. ಪ್ರತಿರೋಧ ಬಾರದೆ ಇದ್ದುದರಿಂದ ಪ್ರೋತ್ಸಾಹಗೊಂಡ ಲೂಟಿಕಾರರು ತಾವು ದೋಚಿದ ಅಂಗಡಿ ಮನೆಗಳಿಗೆ ಬೆಂಕಿಯಿಟ್ಟು ಹೋದರು. ದಟ್ಟವಾಗಿ ಹಬ್ಬಿದ್ದ ಊರಿಗೆ ಒಂದು ಕೊಳ್ಳಿ ಸಾಕಲ್ಲ. ಕನಕಪುರಿ ಉರಿಯತೊಡಗಿತು.

ಈಗ ಲೆಕ್ಕವಿಲ್ಲದಷ್ಟು ಅಸಂಗತ ಮತ್ತು ಕರುಳಿರಿಯುವ ಸಂಗತಿಗಳು ನಡೆದವು. ತಲೆ ಬೋಳಿಸಿಕೊಂಡ, ಅಸ್ತವ್ಯಸ್ಥ ಮೇಲಂತಿಯ, ಕೆಳಗೆ ನೂಕುನುಗ್ಗಲಿಗೆ ಸಿಕ್ಕು ಹರಿದ ಧೋತ್ರವುಟ್ಟ ಜೊಂಡು ಮೀಸೆಯ ವರ್ತಕ ಮುದುಕ ಹತಾಶೆಯಲಕ್ಲಿ ಲೂಟಿಯಾದ ತನ್ನ ಅಂಗಡಿಯ ಅಷ್ಟೂ ಬಾಗಿಲುಗಳನ್ನು ತೆರೆದು ಮೂಕರೋದನ ಮಾಡುತ್ತಿದ್ದ. ಆಕಾಶದ ಕಡೆಗೆ ಕೈಮಾಡಿ ಎಲ್ಲ ಹೋಯಿತೆಂಬಂತೆ ಹಸ್ತಗಳನ್ನು ತಿರುವುತ್ತಿದಿದ. ತಂತಾನೇ ವಾದ ಮಾಡುತ್ತಿದ್ದ.

ದಿನ ನಿತ್ಯ ಅಸಂಖ್ಯಾತ ಜನ ಸಾಯುತ್ತಿದ್ದರು. ಅವರಲ್ಲಿ ದೊಡ್ಡ ರೋಗದಿಂದ ಸತ್ತವರ್‍ಯಾರೊ! ಕೊಲೆಯಾಗಿ ಸತ್ತವರು ಯಾರೋ! ಸಂಧರ್ಭ ಇಂತಿರುವಲ್ಲಿ ಶೀಕರಸೂರ್ಯ ಮಹಾರಾಜರ ಸವಾರಿ ಕನಕಪುರಿಗೆ ಚಿತ್ತೈಸಿತು!

## ಎಪ್ಪತ್ತಮೂರು

ಶಿಖರಸೂರ್ಯ ಮತ್ತು ಸುಕ್ರರು ಕನಕಪುರಿಗೆ ಬಂದಾಗ ಸೂರ್ಯ ರೋಗಿಯಂತೆ ಬಿಳಿಚಿಕೊಂಡು ಪಡುವಣಕ್ಕೆ ಹೊರಳಿದ್ದ. ಸದಾ ಗಿಜಿ ಗಿಜಿ ಅನ್ನುತ್ತಿದ್ದ ಊರು ಜನಗಳಿಲ್ಲದೆ ಹಾಳು ಸುರಿಯುತ್ತಿತ್ತು. ಗಿರಾಕಿಗಳ ಗಡಿ ಬಿಡಿ, ಮಕ್ಕಳ ಕಿರುಚಾಟ, ಯಾವುದೂ ಇರಲಿಲ್ಲ. ನಯಿಗಳು ಕೂಡ ಬೊಗಳುವುದನ್ನು ಮರೆತು ಮುಪ್ಪಾದಂತೆ ಮುದುಡಿಕೊಂಡು ಅಂಗಡಿ ಮುಂಗಟ್ಟುಗಳ ಮುಂದೆ ಬಿದ್ದುಕೊಂಡಿದ್ದವು.

ಚೆಲ್ಲಾಪಿಲ್ಲಿಯಾಗಿ ಬಿದ್ದ ಒಣ ಮೇವು, ಹುಲ್ಲು ದಂಟಿನ ಕಸದ ರಾಶಿಯನ್ನು ತುಳಿಯುತ್ತ ಕುದುರೆಗಳು ಅರಮನೆಯ ಕಡೆಗೆ ನಡೆದವು. ಅರೆಬೆಂದ ಮನೆಗಳು, ಹಾದಿ ಬೀದಿಯ ಹೆಣಗಳು ಗಬ್ಬೆದ್ದು ನಾರುತ್ತಿದ್ದವು. ಹೆಣಗಳಂತೆ ಎದುರು ಬಂದ ಒಬ್ಬಿಬ್ಬರು ಅಲೆದಾಡುತ್ತ ದಾಟಿ ಹೋದರು. ಒಂದು ಹಣ್ಣು ಮುದುಕಿ ಶವದ ಬಳಿ ಕುಳಿತು ವಿಕಾರವಾಗಿ ಚೀರುತ್ತದ್ದ ಕೂಸಿನ ಹತ್ತಿರ ಹೋಗಿ ಎತ್ತಿಕೊಂಡಳು. ಕಣ್ಣೀರೊರೆಸಿ ಸಮಾಧಾನ ಮಾಡಲು ಪ್ರಯತ್ನಿಸಿದಳು. ಮಗು ಹಸಿದಿತ್ತು. ಅಳು ನಿಲ್ಲಿಸಲೇ ಇಲ್ಲ. ಮುದುಕಿ ಪ್ರಯತ್ನವನ್ನೂ ಬಿಡಲಿಲ್ಲ.

ಮಗುವನ್ನ ರಮಿಸುತ್ತ ಆ ಈ ಕಡೆಗೆ ತಿರುಗಿದಾಗ ಶಿಖರಸೂರ್ಯನಿಗೆ ಗುರುತು ಸಿಕ್ಕಿತು - ಆ ಮುದುಕಿ ಚಿಕ್ಕಮ್ಮಣ್ಣಿ! ತಕ್ಷಣ ಶಿಖರಸೂರ್ಯ ಕುದುರೆಯನ್ನ ಅರಮನೆಯೊಳಕ್ಕೆ ಓಡಿಸಿದ!

ಅರಮನೆ ಬಿಕೋ ಎನ್ನುತ್ತಿತ್ತು. ಸದಾ ಹೋಗಿಬರುವ ಜನಗಳಿಂದ, ಬರಿಗೈಯಲ್ಲಿ ಮಹಾಪ್ರಭುಗಳನ್ನು ನೋಡಬಾರದೆಂದು ಹಣ್ಣು ತರಕಾರಿಗಳನ್ನಾದರೂ ತರುತ್ತಿದ್ದ ಬುಡಕಟ್ಟು ನಾಯಕರಿಂದ, ಲಾಭದಾಯಕ ಆಸೆಗಳಿಂದ ಹೊಳೆಯುವ ಕಣ್ಣುಗಳಿಂದ ಬರುತ್ತಿದ್ದ ವರ್ತಕ ಶ್ರೇಷ್ಠರಿಂದ, ಅರಮನೆಯ ವೈಭವವನ್ನು ಕಣ್ತಣಿಯುವಂತೆ ನೋಡಿ ನಲುಯುತ್ತಿದ್ದ ಹಟ್ಟಿ ಹಳ್ಳಿಗಳ ಸಾಮಾನ್ಯರಿಂದ ತುಂಗಿರುತ್ತಿದ್ದ ಅರಮನೆಯ ಅಂಗಳ ಈಗ ನಿರ್ಜನವಾಗಿತ್ತು. ಇವರು ಬಂದಾಗ ಮಹಾರಾಜರ ಕುದುರೆ ಹಿಡಿದುಕೊಳ್ಳಲು ತಡವಾಗಿ ಒಬ್ಬ ಸೇವಕ ಬಂದ. ಶಿಖರಸೂರ್ಯ ಒಳಗೆ ಯಾರನ್ನೂ ಬಿಡಬೇಡವೆಂದು ಸೇವಕನಿಗೆ ಹೇಳಿ ತನ್ನ ಕೋಣೆಯಲ್ಲಿ ಮರೆಯಾದ.

ಸುಕ್ರ ಗರಬಡಿದಂತೆ ಕಣ್ಣಗಲ ಮಾಡಿಕೊಂಡು ಕುದುರೆಬಿಟ್ಟು ಅರಮನೆಯ ಕಟ್ಟೆಯ ಮೇಲೆ ಕುಸಿದ. ಏನಾಯಿತೆಂದು ಯಾರನ್ನಾದರೂ ಕೇಳೋಣವೆಂದರೂ ಒಬ್ಬ ಬಂಟ ಸುಳಿಯಲಿಲ್ಲ. ಎರಡೂ ಕೈ ತಿರುವುತ್ತ ಸನ್ನೆ ಭಾಷೆಯಲ್ಲಿ ತಂತಾನೇ ಮಾತಾಡಿಕೊಳ್ಳುತ್ತ ಎರಡೂ ಕೈಗಳಿಂದ "ಏನೇನಿಲ್ಲ! ಯಾರು ಇಲ್ಲ! ಎಲ್ಲಾ ಹೋಯ್ತು" ಎಂಬಂತೆ ಆಡಿಸುತ್ತ ಕೂತ.

ಮಹಾರಾಜ ಬಂದ ಸುದ್ದಿ ತಿಳಿದೊಡನೆ ರಾಜಧಾನಿಯಲ್ಲಿ ಏನೇನು ನಡೆಯುತ್ತಿದೆ ಎಂದು ಹೇಳಲು, ಕೇಳಲು ಒಬ್ಬರಾದ ಮೇಲೆ ಒಬ್ಬರು ಅಳಿದುಳಿದ ವರ್ತಕರು ಬಂದರು. ಒಳಗೆ ಬಿಡಬಾರದೆಂಬ ಮಹಾರಾಜರ ಆಜ್ಞೆ ಕೇಳಿ ನಿರಾಸೆಯಿಂದ ವಾಪಸಾದರು. ಕೆಲವರು ತಾವು ತಂದ ಸಮಾಚಾರ ಭಾರೀ ಅಪಾಯಕಾರಿ, ಭಯಾನಕ ಎಂದು ತಿಳಿಸಿ ಹೇಳಿದರೂ ಸೇವಕ ಒಳಗೆ ಬಿಡಲಿಲ್ಲ. ಅಂತವರು ಇನ್ನಷ್ಟು ನಿರಾಸೆಯಿಂದ ನೆಲವೊದ್ದು ಸೇವಕನನ್ನು ದುರುಗುಟ್ಟಿ ನೋಡುತ್ತ ಹೋದರು.

ಬಹಳ ಹೊತ್ತಾದ ಮೇಲೆ ಮಹಾರಾಣಿ ಛಾಯಾದೇವಿಯ ಸಾನಿನ ಬಗ್ಗೆ ಹೇಳಬೇಕಾದ್ದು ಬಹಳಷ್ಟಿದೆ ಅಂತ ಅನ್ನಿಸಿ ಒಬ್ಬ ಸೇವಕ ಧೈರ್ಯ ಮಾಡಬೇಕೆಂದ. ಅಷ್ಟರಲ್ಲಿ ವರ್ತಕರು ಬಂದುದರಿಂದ ಅನುಕೂಲವಾಯಿತೆಂದು ಅದೇ ನೆಪದಲ್ಲಿ ಮೆಲ್ಲಗೆ ಒಳಗೆ ಪ್ರವೇಶಿಸಿದ. ಮಹಾರಾಜರು ಎಲ್ಲಿದ್ದಾರೆಂದು ಗೊತ್ತಾಗಲಿಲ್ಲ. ಕಿಟಕಿಯ ಬಾಗಿಲು ಮುಚ್ಚಿದ್ದುದರಿಂದ ಹೊರಗಿನ ಬೆಳಕು ಅಷ್ಟಗಿ ಪ್ರವೇಶಿಸುತ್ತಿರಲಿಲ್ಲ. ಒಳಗೆ ಗಾಳಿಯೂ ಇರಲಿಲ್ಲ. ಸ್ವಲ್ಪ ಹೊತ್ತು ಹಾಗೇ ನಿಂತ ಮೇಲೆ ಗೊತ್ತಾಯಿತು: ಪೀಠದಲ್ಲಿ ಮಹಾರಾಜರು ಕೂತು ಹಾಗೇ ಒರಗಿದ್ದರು! ಹಗಲುಹೊತ್ತಿನಲ್ಲಿ ಮಹಾಪ್ರಭುವೆಂದೂ ಹೀಗೆ ಕೈ ಕಟ್ಟಿಕೊಂಡು ಕೂತವರಲ್ಲ. ಚಲನಶೀಲನಾಗಿ ಅದು ಇದರಲ್ಲಿ ತೊಡಗಿ ಅವರಿವರನ್ನು ಬಯ್ಯುತ್ತ ಇಲ್ಲವೆ ತಕರಾರು ತೆಗೆಯುತ್ತ ಪಾದರಸದಂತೆ ಅತ್ತಿತ್ತ ಹರಿದಾಡುತ್ತಿದ್ದ ಮಹಾಪ್ರಭು ಹೀಗೆ ಕೈ ಕಟ್ಟಿಕೊಂಡು ಕತ್ತಲಲ್ಲಿ ಕೂತಿದ್ದನ್ನ ನೋಡಿ ಸೇವಕನ ಕಣ್ಣು ಒದ್ದೆಯಾದವು.

ಸೇವಕ ಮೆಲ್ಲಗೆ ಹೋಗಿ ಕಿಟಕಿ ಬಾಗಿಲು ತೆರೆದ. ಕಣ್ಣ ಮೇಲೆ ಬೆಳಕು ಬಿದ್ದು ಎಚ್ಚರಾಯ್ತು. ಕಣ್ಣು ತೆರೆದ. ಎದುರಿಗೆ ಕಿಟಕಿಯಲ್ಲಿ ಸ್ವಚ್ಛವಾದ ನೀಲಿ ಕಂಡಿತು. "ಈ ಆಕಾಸ ಅರ್ಥವಾಗೋದೇ ಇಲ್ಲ!" ಎಂದು ತಂತಾನೇ ಗೊಣಗುತ್ತ ಆಕಳಿಸಿದ. ಆಮೇಲೆ ಎದ್ದು ಕೈ ಹಿಂದೆ ಕಟ್ಟಿಕೊಂಡು ಕೋಣೆಯಲ್ಲಿ ಮೂಲೆಯಿಂದ ಮೂಲೆಗೆ ಅಡ್ಡಾಡತೊಡಗಿದ. ಸೇವಕ ಮೆಲ್ಲಗೆ ಹೇಳಿದ:

"ಮಹಾಪ್ರಭು ಮಹಾರಾಣಿಯವರು….."

"ಹುಚ್ಚುಮಗನ ಆಕಾರ ನೋಡಿ ಹೌಹಾರಿ ಸತ್ತಳು. ಅದೇ ತಾನೆ? ಹೊರಡು"

ವರ್ತಕರು ದರ್ಶನಕ್ಕೆ ಬಂದಿದ್ದಾರೆ"

"ಕಾದಿರಲಿಕ್ಕೆ ಹೇಳು"

ಎಂದು ಹೇಳಿ ತಕ್ಷಣ "ಬೇಡ ಈಗಲೇ ಬರುತ್ತೀನಿರು" ಎಂದು ಹೇಳಿದ.

ಸೇವಕ ಹೋದ ಮೇಲೆ ಕೋಣೆಯ ಇನ್ನೊಂದು ಬಾಗಿಲಿನಿಂದ ಹೊರಬಂದ. ಯಾರೂ ಇರಲಿಲ್ಲ. ನೇರ ದೇವಾಲಯಕ್ಕೆ ಹೋದ.
"ದೇವಸ್ಥಾನದಲ್ಲಿ ತಾನು ಭೇಟಿಯಾಗಬೇಕಾದವರು ಯಾರಿದ್ದಾರೆ? ದೇವರಂತೂ ಇಲ್ಲ!"
"ದೇವರಿಲ್ಲವೆಮದರೆ ಉಳಿದವರು ಯಾರು?"
"ನಾನೇ!"
ಎಂದುಕೊಂಡು ಮತ್ತೆ ಅರಮನೆಯ ತನ್ನ ಕೋಣೆಗೇ ಬಂದ. ಸೇವಕ ಪುನಃ ಬಂದು,
"ವರ್ತಕರು ಕಾಯುತ್ತಿದ್ದಾರೆ ಪ್ರಭು"

- ಎಂದು ಮತ್ತೆ ನೆನಪು ಮಾಡಿಕೊಟ್ಟ.

'ಊರು ಕೊಳ್ಳೆ ಹೋದ ಮೇಲೆ ತಾನೇನಾದರೂ ಮಾಡುವುದು ಉಳಿದಿದೆಯೆ? ಏನಿಲ್ಲ'ವೆಂದು ತಾನೇ ಉತ್ತರಿಸಿಕೊಂಡ. ತನ್ನ ಆಜ್ಞೆಗಳನ್ನು ಕೇಳುವವರು ಯಾರಿದ್ದಾರೆ? "ಕೇಳಿ ಯಾರನ್ನ ಮತ್ತು ಏನ್ನ ಕಾಪಾಡಬೇಕಾದ್ದಿದೆ? ಆಜ್ಞೆ ಕೊಡೋದಕ್ಕೆ ಮಹಾರಾಜನೆಲ್ಲಿದ್ದಾನೆ? ರಾಜನಿದ್ದಿದ್ದರೆ ಪುಡುಗೋಶಿ ಪುಂಡು ಪೋಕರಿಗಳು ಬಂದು ಅರಮನೆ ಲೂಟಿ ಮಾಡುತ್ತಿದ್ದರೆ?"

"ಮಹಾರಾಜನಿಲ್ಲ ಅಂತ ಹೇಳು"

- ಎಂದು ಹೇಳಿ ಸುಮ್ಮನಾದ. ಸೇವಕ ಮಳಮಳ ಶಿಖರಸೂರ್ಯನನ್ನೇ ನೋಡಿ ಹೆದರಿ ಅವಸರದಿಂದ ಮರೆಯಾದ.

ಶಿಖರಸೂರ್ಯ ಕನಕಪುರಿಯ ಹೃದಯ ದೇವತೆಯೆಂದು ತನ್ನನ್ನು ತಾನೇ ನಂಬಿದವನು. ವರ್ತಕರ ಮೇಲೆ ಚಿನ್ನದ ಮಳೆಗರೆದವನೆಂದೇ ವರ್ತಕರು ಹೊಗಳಿದ್ದರು. ಹಾಗೆ ಹೊಗಳಿದಾಗ ಇವನೂ ಹೌದೆಂಬಂತೆ, ಪವಾಡ ಮೆರೆದ ದೇವರಂತೆ ಅಭಿನಯಿಸಿದ್ದ ಪ್ರಜೆಗಳ ಚಟುವಟಿಕೆ, ನಡಾವಳಿಗಳ ಮೇಲೆ ಮಾತ್ರವಲ್ಲ; ಅವರ ಮನಸ್ಸಿನ ಭಾವನೆಗಳನ್ನು ಕೂಡಾ ನಿಯಂತ್ರಿಸುವ ದೈವದಂತೆ ಅಭಿನಯಿಸಿದ್ದೂ ಇದೆ. ಇಂಥ ಭಾವನೆ, ಹೊಗಳಿಕೆಗಳಿಗೆ ಅವನು ಒಗ್ಗಿಕೊಂಡಿದ್ದ ಮತ್ತು ಅವುಗಳಿಂದ ತೃಪ್ತನಾಗಿದ್ದ.

ಅದೆಲ್ಲವನ್ನು ಈಗ ಕಸಿದುಕೊಂಡು ತನ್ನನ್ನು ಬರಿಗೈ ಭಿಕ್ಷುಕನನ್ನಾಗಿ ಮಾಡಿದ್ದನ್ನು ಮಾನಸಿಕವಾಗಿ ಇನ್ನೂ ನಂಬಲಾರದವನಾಗಿ ನಿಂತಿದ್ದ. ಸಂಬಂಧಿಕರು ಸತ್ತಿದ್ದರು. ಮಗ, ಹೆಂಡತಿ, ಪ್ರೇಯಸಿ - ಒಬ್ಬರಾದ ಮೇಲೊಬ್ಬರು ಹೋಗಿದ್ದರು. ವರ್ತಕರು ನಾಶವಾಗಿದ್ದರು, ಇಲ್ಲವೆ ವಲಸೆ ಹೋಗಿದ್ದರು. ಜನ ಕಂಗಾಲಾಗಿ ಬೀದಿಗೆ ಬಿದ್ದು ಅರಮನೆಯನ್ನೇ ದೋಚಿದ್ದರು. ಸೇವಕರು ಸಿಕ್ಕದ್ದನ್ನು ತಗೊಂಡು ಪರಾರಿಯಾಗಿದ್ದರು. ಜೀವಮಾನದಲ್ಲೇ ಮೊಟ್ಟ ಮೊದಲ ಸಲ ಭಯವಾಯಿತು. ತಾನು ಈ ನಗರಕ್ಕೆ ಸಂಬಂಧಪಟ್ಟವನಲ್ಲ ಎನ್ನಿಸಿತು. ಇಂಥ ನಗರಕ್ಕೆ ತಾನು ವಾರಸುದಾರನೆಂಬುದೂ ಹುಸಿ. ತಾನಿದನ್ನು ಕೆಲವು ದಿನ ಆಳಿದನೆಂಬುದು ಹುಸಿ.

ಊರ ತುಂಬ ಭೂತಗಳು, ನೆರಳೆದ್ದು ಬಂದಂಥ ಭೂತಗಳು! ಬೆಂಕಿಯೇ ಆಕಾರಗೊಂಡಂಥ ಭೂತಗಳು. ಸೇಡಿಗಾಗಿ ಕಾದ ಭೂತಗಳು ಅಸ್ಥಿಪಂಜರಗಳ ಭೂತಗಳು!

ಎಲ್ಲವೂ ಎಲ್ಲರೂ ತನ್ನಿಂದ ದೂರವಾಗಿ ದುರ್ಬಲನಾಗಿ ಏಕಾಂಗಿಯಾಗಿರುವಂತೆ ಅನ್ನಿಸಿತು. ಕಣ್ಣು ಮುಚ್ಚಿ ಪೀಠದಲ್ಲಿ ಕುಸಿದ.

# ಎಪ್ಪತ್ತನಾಲ್ಕು

ಇಂತೀಪರಿ ಗಡ್ಡೀಬೇನೆಯಿಂದ ಕನಕಪುರಿ ಸರ್ವನಾಶವಾಗುವ ಸ್ಥಿತಿಗೆ ತಲುಪಿರುವ ಸಂಗತಿಯ ತಿಳಿದು ನಿನ್ನಡಿಗೆ ಖೇದವಾಯಿತು. ಎಲ್ಲಿಯೋ ಯಾವುದೋ ರೋಗ ಹಬ್ಬುತ್ತಿದೆ ಅಂದಾಗ ಶಿವಾಪುರದ ವೈದ್ಯರು ಸುಮ್ಮನಿರಬಾರದಲ್ಲ, ಕೈಲಾದಷ್ಟು ಸೇವೆ ಮಾಡೋಣವೆಂದು ನಿನ್ನಡಿಯು ಚಂಡೀದಾಸ, ಕುರುಮುನಿಯೊಂದಿಗೆ ಕನಕಪುರಿಗೆ ಬಂದ.

ಅಂಗಡಿ ಮುಗ್ಗಟ್ಟು ಮನೆಗಳೆಷ್ಟೊ ಸುಟ್ಟು ಬಿದ್ದಿದ್ದವು. ಅರೆಸುಟ್ಟ ಮನೆಗಳು, ಪೂರ್ತಿ ಸುಟ್ಟವುಗಳು, ಇನ್ನೂ ಹೊಗೆಯಾಡುತ್ತಿರುವ ಮನೆಗಳು…. ದಾರಿ ತುಂಬ ಎಲ್ಲೆಂದರಲ್ಲಿ ಹೆಣಗಳು! ಅರೆಬೆಂದ ಹೆಣಗಳು, ಹಸಿ ಹೆಣಗಳು, ಹೊಸ್ತಿಲ ಮೇಲೆ ಬಿದ್ದ ಹೆಣಗಳು, ತಿಪ್ಪೆ ಗುಂಡಿಗಳಲ್ಲಿ ಹೆಣಗಳು, ಅಂತ್ಯ ಕ್ರಿಯೆಗೆ ದಿಕ್ಕಿಲ್ಲದ ಹೆಣಗಳು! ಜನಗಳ್ಯಾರೋ ಹೆಣಗಳ್ಯಾರೋ - ಹದ್ದು ಕಾಗೆಗಳು ಹೆಣಗಳ ಮ್ಯಾಲೆ ಎಗರುತ್ತ ಒಮ್ಮೊಮ್ಮೆ ಆ ಕಡೆ ಬಂದವರ ಮ್ಯಾಲೂ ಎಗರುತ್ತಿದ್ದವು! ಊರು ಸ್ಮಶಾನಕ್ಕಿಂತ ಕಡೆಯಾಗಿತ್ತು. ಗಾಳಿ ಧೂಳುಗಳಲ್ಲಿ ಬೆಂದ, ಬೇಯದ ಹೆಣಗಳ ದುರ್ನಾತ ತುಂಬಿಕೊಂಡಿತ್ತು.

ನೋಡಿ ನೋಡಿ ಮೂವರೂ ಒಂದು ಮನೆಯ ಕಟ್ಟೆಯ ಮೇಲೆ ಕುಂತರು. ಮೂವರ ಬಾಯಿಂದಲೂ ಮಾತು ಬರಲಿಲ್ಲ. ತುಸು ಹೊತ್ತು ಹೀಗೇ ಕೂತಿದ್ದು ಆಮೇಲೆ ಮೆಲ್ಲಗೆ ನಿನ್ನಡಿ ಎದ್ದು ಕಟ್ಟೆಯ ಮೇಲಿದ್ದ ಗೋಣಿ ತಟ್ಟನ್ನು ತಗೊಂಡು ಹೊರಟ. “ಎಲ್ಲಿಗೆ?” ಅಂದ ಕುರುಮುನಿ. ಈಗಲೂ ನಿನ್ನಡಿ ಮಾತಾಡಲಿಲ್ಲ. ಅಲ್ಲೇ ಬಿದ್ದಿದ್ದ ಒಂದು ಹೆಣವನ್ನು ಗೋಣೀ ತಟ್ಟಿನಲ್ಲಿ ಸುತ್ತಿ ಕೂಟದ ಬಯಲಕಿನ ಮಧ್ಯೆ ಇಟ್ಟ.

“ಏನ್ ಮಾಡ್ತೀಯಪ್ಪ?” ಅಂದ ಚಂಡೀದಾಸ.

“ಮೊದಲು ಹೆಣ ಸುಡೋಣ. ದೊಡ್ಡ ರೋಗ ಆಗಲೇ ಜನಗಳನ್ನ ನುಂಗಿ ಹಾಕಿದ!” ವರ್ತಕರಾಗಲೇ ಊರು ಬಿಟ್ಟಿದ್ದರು. “ಏನೇ ಆದರೂ ಕನಕಪುರಿಯ ಬಿಡಲಾರೆವೆಂದ ವೃದ್ಧರು, ದುರ್ಬಲರು, ಕುರುಡರು, ಕುಂಟರು, ಅನಾಥರು ಮಾತ್ರ ಊರೊಳಗೆ ಉಳಿದಿದ್ದರು. ಅರಮನೆಯಲ್ಲಿ ಧಾನ್ಯ ಸಿಕ್ಕ ಮೇಲೆ ಅನೇಕ ಬಡವರು ಗುಳೆ ಏಳುವುದನ್ನು ಬಿಟ್ಟು - “ಬೇರೆ ಊರುಗಳಿಗೆ ಹೋದರೆ ಇಷ್ಟಾದರೂ ಧಾನ್ಯ ಸಿಕ್ಕುವುದೆಂಗ ಭರವಸೆ ಏನು? ಬಂದದ್ದು ಬರಲಿ, ಕೊಲ್ಲೋ ದೇವರಿಗೆ ಯಾವ ಸ್ಥಳವಾದರೇನು? - ಎಂದುಕೊಂಡು ಅವರೆಲ್ಲ ಇಲ್ಲೇ ಉಳಿದರು. ಆದರೆ ಎಗರುವ ಹದ್ದುಗಳಿಗೆ, ದರೋಡೆಕೋರರಿಗೆ ಹೆದರಿ ರಸ್ತೆಗೆ ಬರುವ ಧೈರ್ಯ ಯಾರಿಗೂ ಇರಲಿಲ್ಲ.

ಇದನ್ನೆಲ್ಲ ನಿವಾರಿಸಿಕೊಂಡು ಅಂತೂ ಹೊತ್ತು ಮುಳುಗುವ ಸಮಯಕ್ಕೆ ಮೂವರೂ ಸೇರಿ ಇಪ್ಪತ್ತು ಹೆಣಗಳನ್ನು ಸುಟ್ಟರು. ಮನೆಗಳಲ್ಲಿ ಜೀವಂತ ಇದ್ದವರು ಕದ್ದು ಮನೆಗಳ ಕಿಂಡಿಗಳಿಂದ ನೋಡಿದರೇ ವಿನಾ ಯಾರೂ ಹೊರಗೆ ಬರಲಿಲ್ಲ. ಇವರಿಗಿದು ಗೊತ್ತಿದ್ದರೂ ಅವರ ಸಹಾಯವನ್ನು ನಿರೀಕ್ಷಿಸಲಿಲ್ಲ.

ಆಮೇಲೆ ಮಲಗಲು ಸ್ಥಳ ಹುಡುಕಿಕೊಂಡು ಊರ ಹೊರಗೆ ಹೋದರು. ಹೆಣ, ಕಟ್ಟಿಗೆ ಹೊತ್ತು ಮೂವರಿಗೂ ದಣಿವಾಗಿತ್ತು. ಊರ ಹೊರಗಿನ ಶ್ವಾನಕೂಪ ನೋಡಿ ಸಮಾಧಾನವಾಯಿತು. ನಾಳೆ ಬೆಳಿಗ್ಗೆ ಯಾರು ಯಾರು ಏನೇನು ಮಾಡುವುದೆಂದು ಮಾತಾಡಿಕೊಂಡು ಮಲಗಿದರು.

ಮಾರನೇ ಬೆಳಿಗ್ಗೆ ಶ್ವಾನಕೂಪವೇ ಇದ್ದುದರಲ್ಲಿ ಪ್ರಶಸ್ತವಾದ ಸ್ಥಳವೆಂದು ತೀರ್ಮಾನಿಸಿ ಕುರುಮುನಿ ಅಲ್ಲಿ ಮ್ಯಾಲೆ ಸೊಪ್ಪು ಸದೆ ಹೊದಿಸಿ, ಚಪ್ಪರ ಹಾಕಿ ಜನರಿಗೆ ಗಂಜೀ ವ್ಯವಸ್ಥೆ ಮಾಡುವುದೆಂದು ಚಂಡೀದಾಸ ಕಾಡಿಗೆ ಹೋಗಿ ಮದ್ದು ತಂದು ಬಂದವರಿಗೆ - ರೋಗಿಗಳಿಗೆ, ರೋಗ ಬಾರದವರಿಗೂ ಮದ್ದು ಕೊಡುವುದೆಂದು, ನಿನ್ನಡಿ ಊರೊಳಗಿನ ಹೆಣಗಳನ್ನು ಸುಡುವುದೆಂದು ಕೆಲಸ ಹಂಚಿಕೊಂಡು ನಡೆದರು.

ನಿನ್ನಡಿ ಬಂದು ನಿನ್ನೆ ಸುಟ್ಟ ಸ್ಥಳದಲ್ಲಿಯೇ ಹೆಣಗಳನ್ನು ತಂದು ಇಡತೊಡಗಿದ. ನಿನ್ನೆ ಕೂಡಿಟ್ಟ ಕಟ್ಟಿಗೆಯೇ ಇನ್ನೂ ಉಳಿದಿತ್ತು. ನಿನ್ನೆ ಸಮೀಪದ ಶವಗಳನ್ನು ಮಾತ್ರ ಸುಟ್ಟಿದ್ದರು. ಇವತ್ತು ಸ್ವಲ್ಪ ದೂರದ ಹೆಣಗಳನ್ನು ತರಬೇಕಾಗಿತ್ತು. ಕೊಳೆಯುವ ಹೆಣಗಳು ಹೆಚ್ಚು ಅಪಾಯಕಾರಿಯಾದುದರಿಂದ ಅವನ್ನೇ ಮೊದಲು ಸುಡಬೇಕಾಗಿತ್ತು. ಆದರೆ ಹಿಡಿದೆತ್ತಿದರೆ ಕೆಲವು ಹೆಣಗಳ ಅಂಗಾಂಗಗಳು ಕೈಗೇ ಬರುತ್ತಿದ್ದುದರಿಂದ ಜೋಪಾನವಾಗಿ ಎತ್ತಬೇಕಾಗಿತ್ತು. ತರುವಾಗ ಕೂಡ ಕತ್ತರಿಸಿ ಬೀಳದಂತೆ, ತಟ್ಟಿನಲ್ಲಿ ಸುತ್ತಿ ಕಟ್ಟಿ ತರಬೇಕಾಗಿತ್ತು. ನಿನ್ನಡಿ ಆ ಕಡೆ ಈ ಕಡೆ ನೋಡದೆ ತದೇಕ ಧ್ಯಾನದಿಂದ ಈ ಕೆಲಸ ಮಾಡುತ್ತಿದ್ದ.

ಅನತಿ ದೂರದ ಅರೆಬೆಂದ ಅಂಗಡಿಯ ಕಟ್ಟೆಯ ಮೇಲೆ, ದೊಗಳೆ ಅಂಗಿಯ ದಡಿಧೋತ್ರ ಉಟ್ಟಿದ್ದ ಚಿಕ್ಕ ತಲೆ, ಬಿಳಿಯ ಜೊಂಡು ಮೀಸೆಯ ಒಬ್ಬ ಮುದುಕ ಕೂತಿದ್ದ. ಮೈಮ್ಯಾಲೆ ಹೊಸ ಬಟ್ಟೆ ಇದ್ದುದರಿಂದ ಸಿಂಗಾರಗೊಂಡ ಹೆಣ ಇರಬೇಕೆಂದು ನಿನ್ನಡಿ ಸುಮ್ಮನಾದ. ನಿನ್ನಡಿ ಹೆಣ ಕೂಡಿಸುತ್ತಿರುವುದನ್ನು ನೋಡಿ ಕುತೂಹಲ ತಾಳದೆ ಆ ಮುದುಕ ಎದ್ದು ಬಂದ. ಸೊಂಟದ ಮೇಲೆ ಕೈ ಇಟ್ಟುಕೊಂಡು ಇವನ ಮುಖವನ್ನೇ ನೋಡುತ್ತ ತುಸು ಹೊತ್ತು ನಿಂತ. ವಿಶ್ವಾಸ ಮೂಡಿತೆಂದು ತೋರುತ್ತದೆ ಇನ್ನಷ್ಟು ಸಮೀಪ ಬಂದು ನಿಂತ. ಅಷ್ಟರಲ್ಲಿ ನಿನ್ನಡಿ ಹೆಗಲ ಮೇಲೆ ಹೊತ್ತು ತರುತ್ತಿದ್ದ ಹೆಣದ ಕೈ ಕಳಚಿತು, ಮತ್ತೆ ಬಂದರಾಯಿತೆಂದು ನಿನ್ನಡಿ ಹಾಗೇ ಮುಂದುವರೆದ. ಮುದುಕ ಆ ಕೈ ತಗೊಂಡು ನಿನ್ನಡಿಯ ನಿಂದಿನಿಂದ ಹೋದ.

ಒಟ್ಟಿದ ಕಟ್ಟಿಗೆಯ ಮೇಲೆ ನಿನ್ನಡಿಗಿಂತ ಮೊದಲು ಆ ಕೈ ಇಟ್ಟ. ಹೆಣ ಇಟ್ಟು ನಿನ್ನಡಿ ಇನ್ನೊಂದು ಹೆಣ ತರಲು ಹೊರಟಾಗ ಇವನನ್ನು ನೋಡಿ, ಹೇಳಿದ:

“ದೊಡ್ಡ ರೋಗದ ಆರ್ಭಟ ಹೆಚ್ಚಾಗಿದೆ. ಮೊದಲು ಇಲ್ಲಿಂದ ಜಾಗ ಖಾಲಿ ಮಾಡು. ರೋಗ ಇದ್ದರೂ ಇಲ್ಲದಿದ್ದರೂ ಶ್ವಾನಕೊಪಕ್ಕೆ ಹೋಗು. ಅಲ್ಲಿ ಮದ್ದು ಕೊಡ್ತಾರ, ತಗೊ. ಇನ್ನೂ ಯಾರಾದರೂ ಇದ್ದರೆ ಅವರನ್ನೂ ಕರೆದುಕೊಂಡು ಹೋಗು”.

ಈ ಹುಡುಗ ಕೋಪದಲ್ಲಿ ಮಾತಾಡಿದನೋ, ಕಾಳಜಿಯಿಂದ ಮಾತಾಡಿದನೋ? ತಿಳಿಯಲಿಲ್ಲ. ಶ್ವಾನಕೊಪದಲ್ಲಿ ಮದ್ದು ಕೊಡ್ತಾರೆ ಅಂದನಲ್ಲ. ಮಾತು ಕೊಂಚ ಒರಟು. ಪ್ರೀತಿಯಿಂದಲೇ ಹೇಳಿರಬೇಕೆಂದುಕೊಂಡು ಇವನ ಕೆಲಸವನ್ನೇ ನೋಡುತ್ತ ಹಾಗೇ ನಿಂತ. ನಿನ್ನಡಿ ಮತ್ತೆ “ದೊಡ್ಡ ರೋಗ, ನಿರ್ಲಕ್ಷ ಮಾಡಬಾರದು ಅಜ್ಜಾ! ಹೊರಡು” ಎಂದು ಮುದುಕನನ್ನು ಕಳಿಸಿದ.

ಅಂತೂ ನಿನ್ನಡಿ ಒಂದು ವಾರದಲ್ಲಿ ಕಷ್ಟಪಟ್ಟ ಮುಖ್ಯ ರಸ್ತೆಗಳ ಹೆಣಗಳನ್ನು ಸುಟ್ಟಿದ್ದ. ಹೊರಕೇರಿಯಿನ್ನೂ ಬಾಕಿ ಇತ್ತು. ಕುರುಮುನಿ ಗಂಜಿ ಮಾಡಿ ಹಾಕುತ್ತಿದ್ದ. ಬಿಡುವಾದಾಗ ಒಬ್ಬ ಅಲ್ಲೇ ಉಳಿದು ಇನ್ನೊಬ್ಬ ನಿನ್ನಡಿಯ ಸಹಾಯಕ್ಕೆ ಬರುತ್ತಿದ್ದ. ಚಂಡೀದಾಸ ನೂರಾರು ರೋಗಿಗಳಿಗೆ ಮದ್ದು ಕೊಟ್ಟು ವಾಸಿ ಮಾಡಿದ್ದ. ಕೆಲವರಿಗೆ ರೋಗ ಬಾರದ ಹಾಗೆ ಮುಂಜಾಗ್ರತೆಯ ಮದ್ದು ಕೊಟ್ಟಿದ್ದ. ಅವರಲ್ಲಿಯ ಅನೇಕರು ಸೇರಿ ಶ್ವಾನಕೊಪದ ಮೇಲೆ ಸೊಪ್ಪು ಸದೆ ಹೊದಿಸಿ ದೊಡ್ಡ ಚಪ್ಪರ ಹಾಕಿ, ರೋಗಿಗಳಿಗೆ ಅಲ್ಲೇ ವಾಸಕ್ಕೆ ಅನುಕೂಲ ಮಾಡಿ ತಾವೂ ಅಲ್ಲೇ ಉಳಿದಿದ್ದರು. ಅಲ್ಲದೆ ಅದನ್ನೇ ದಾಸೋಹದ ಮನೆಯನ್ನಾಗಿಯೂ ಪರಿವರ್ತಿಸಿಕೊಂಡಿದ್ದರು. ಗುಣ ಹೊಂದಿದವರು ಬಹಳಷ್ಟು ಜನ ಹೊರಕೇರಿಯ ಹೆಣಗಳನ್ನು ಸುಡಲು ತಾವಾಗಿ ಮುಂದೆ ಬಂದರು. ಅವರಲ್ಲಿಯ ಅನೇಕರು ತಮ್ಮಲ್ಲಿಯ ಧಾನ್ಯ ತಂದು ಇಲ್ಲಿಯ ತನಕ ಗಂಜಿಯ ವ್ಯವಸ್ಥೆ ನೋಡಿಕೊಂಡಿದ್ದರು.

ಈಗ ಮಾತ್ರ ರೋಗಿಗಳೊ, ಗುಣವಾದ ಆರೋಗ್ಯವಂತರೂ ಹೆಚ್ಚಾಗಿ ಧಾನ್ಯದ ಕೊರತೆ ಕಂಡು ಬಂತು. ಅರಮನೆಯಲ್ಲಿ ಪುಷ್ಕಳ ಧಾನ್ಯ ಸಂಗ್ರಹ ಇದೆ. ಕೇಳಿದರೆ ಮಹಾರಾಜರು ಇಲ್ಲ ಅನ್ನಲಿಕ್ಕಿಲ್ಲವೆಂದು ಅರಮನೆಗೆ ಹೊರಟರು.

ಹೊರಗೆ ಇಷ್ಟೆಲ್ಲ ನಡೆಯುತ್ತಿದ್ದರೂ ಶಿಖರಸೂರ್ಯ ಮಾತ್ರ ಅರಮನೆಯ ತನ್ನ ಕೋಣೆ ಬಿಟ್ಟು ಹೊರಗೆ ಬರಲೇ ಇಲ್ಲ. ಬಾಗಿಲು ಕಿಟಕಿ ಮುಚ್ಚಿಕೊಂಡು ದಿನಕ್ಕೆರಡು ಬಾರಿ, ಅದೂ ಸೇವಕರ ಹೊರತು ಇನ್ಯಾರೂ ಇಲ್ಲವೆಂದು ಖಾತ್ರಿಯಾದರೆ ಮಾತ್ರ ಬಾಗಿಲು ತೆರೆದು ಅವರ ಸೇವೆಗೆ ಅವಕಾಶ ಮಾಡಿಕೊಡುತ್ತಿದ್ದ. ಅದು ಮುಗಿದು ತನ್ನ ಕೋಣೆಯನ್ನೊಮ್ಮೆ ಸೇರಿಕೊಂಡರಾಯ್ತು - ಏನು ಮಾಡಿದರೂ

ಬಾಗಿಲು ತೆರೆಯುತ್ತಿರಲಿಲ್ಲ. ಮೌನಿಯಾಗಿದ್ದ; ಒಳಗೊಳಗೇ ಒಂಟಿ ಸಲಗನಂತೆ ಅಲೆದಾಡುತ್ತಿದ್ದ. ಗೋಡೆ ಗುದ್ದಿ ತನ್ನ ಅಸಹಾಯಕತೆಯನ್ನ ಅಭಿವ್ಯಕ್ತಿಸುತ್ತಿದ್ದ. ನಿದ್ದೆ ಕೂಡ ಬಾರದೆ ಚಡಪಡಿಸುತ್ತಿದ್ದ. ಅಳಿದುಳಿದ ಒಂದು ಕಡಿಮೆ ಇಪ್ಪತ್ತು ಜನ ಭಂಟರನ್ನು ಇಟ್ಟುಕೊಂಡು ಅರಮನೆ ಕಾಯುತ್ತ ಸುಕ್ರ ಬಂಡೆಯರಿದ್ದರು.

ದರ್ಶನದಿಂದ ದರ್ಶನಕ್ಕೆ ಶಿಖರಸೂರ್ಯನ ಚೇರಾಪಟ್ಟೆ ಬದಲಾಗುತ್ತಿರುವುದನ್ನು ಸೇವಕರು ಗಮನಿಸಿದ್ದರು. ಮುಖ ಕಪ್ಪಾಗಿತ್ತು. ಮೂಗು ಇಳಿಬಿದ್ದು ತುಟಿಯ ಮ್ಯಾಲೊರಗಿತ್ತು. ಹುಬ್ಬು ಜೋತು ಬಿದ್ದು ಒಳಸೇರಿದ ಕಣ್ಣು ನಂದಲಿರುವ ಕಿಡಿಯಂತೆ ಕಾಣುತ್ತಿದ್ದವು. ಕಿವಿಯ ಮತ್ತು ತಲೆಯ ಕೂದಲು ಗಡ್ಡಗಳೆಲ್ಲ ಧೂಳು ಅಡರಿ ಜಡೆಗಟ್ಟಿದ್ದವು. ಸೇವಕರಿದ್ದಾಗ ಅವರಿಂದ ಸ್ವತಂತ್ರನಾಗಿ ಏಕಾಂತಕ್ಕೆ ಹೋಗಲು ಅವಸರ ಮಾಡುತ್ತಿದ್ದ. ಈಗೀಗ ಇವರು ಅನಗತ್ಯವಾಗಿ ತನ್ನ ಬಳಿ ಹೆಚ್ಚು ಸಮಯ ಕಳೆಯುತ್ತಾರೆಂದು ಸೇವಕರನ್ನು ಅನುಮಾನದಿಂದ ನೋಡಲಿಕ್ಕೆ ಸುರು ಮಾಡಿದ್ದ.

ಹಗಲು ರಾತ್ರಿಗಳು ದರ್ಶನಕ್ಕೆ ದೊಡ್ಡವಾಗುತ್ತಿದ್ದವು. "ನನ್ನಿಂದ ಅನಿಸಿಕೆಗಳು ನಾಶವಾಗಿ ಆಕಳಿಸುವುದೊಂದೇ ಕೆಲಸವಾಗಿದೆ!" ಎಂದುಕೊಂಡ. ದೀಪದೆದುರು ಕೈ ಚಾಚಿ ನೋಡಿಕೊಂಡ. ಭವಿಷ್ಯ ಸೂಚಿಸಬಲ್ಲ ಒಂದು ಗೆರೆಯೂ ಅಂಗೈಯಲ್ಲಿರಲಿಲ್ಲ. ಹೃದಯ ಖಾಲಿ, ಮನಸ್ಸು ಖಾಲಿ, ಮ್ಯಾಲೆ ಆಕಾಶವಿದೆ, ಒಂದು ಚಿಕ್ಕೆಯಿಲ್ಲ. ಕೆಳಗೆ ಭೂಮಿಯಿದೆ, ಒಂದು ಬೆಳಕಿನ ಕಿರಣವಿಲ್ಲ. ಎಲ್ಲ ಖಾಲಿ ಕತ್ತಲು. ಓಡಿಹೋಗಬೇಕೆಂದುಕೊಂಡ. ಎಲ್ಲಿಗೆ? ಗರುಡನ ಬೆಟ್ಟವೊಂದೇ ತನ್ನನ್ನು ಸ್ವೀಕರಿಸುವ, ನೆಮ್ಮದಿಯಿಂದ ಇರಗೊಡುವ ಸ್ಥಳ! ಆದರೆ ಈಗ ಗರುಡನ ಬೆಟ್ಟ ಹತ್ತುವ ಶಕ್ತಿ ತನ್ನಲ್ಲಿಲ್ಲ ಎನ್ನಿಸಿತು.

ಹೊರಗಿನ ಕತ್ತಲೆ ಸಾವಿನಷ್ಟೇ ತಂಪಾಗಿತ್ತು. ಹಿಂದೆ ಹೀಗೇ ರಾತ್ರಿ ಸಮಯ ಕೂತಿದ್ದ. ಆದರೆ ಅಂದಿನ ಆಗಸದಲ್ಲಿ ಚಿಕ್ಕೆ ತಾರೆಗಳಿದ್ದವು, ಚಂದ್ರನಿದ್ದ, ತನಗಾಗ ಪ್ರಾಯವಿತ್ತು, ಉತ್ಸಾಹವಿತ್ತು, ಆಸೆಯಿತ್ತು, ಶಕ್ತಿಯಿತ್ತು, ಮೂರ್ಖತನ ಇತ್ತು. ಸೊಕ್ಕು ಇತ್ತು. ಈಗ ಚಲಿಸದ ಸಮಯ ಒಂದನ್ನು ಬಿಟ್ಟು ಏನೇನು ಇರಲಿಲ್ಲ. ಬೆಳಗಾದರೂ ಬಹಳ ಹೊತ್ತು ಪ್ರಾತರ್ವಿಧಿಗೆ ಏಳದೆ ಹಾಗೇ ಅಲ್ಲೇ ಒರಗಿದ್ದ. ಸೇವಕರಾಗಲೇ ನಾಕೈದು ಸಲ ಬಂದು ಹೋಗಿದ್ದರು. ಮುಂಜಾನೆ ಹೋಗಿ ಮಧ್ಯಾಹ್ನವಾಗಿ, ಮಧ್ಯಾಹ್ನ ಕಳೆದು ಇಳಿಹೊತ್ತಾದರೂ ಹಾಗೇ ಒರಗಿದ್ದ.

ಹೊರಗೆ ಜನಜಂಗುಳಿಯ ಸದ್ದು ಕೇಳಿ ಮಹಾರಾಜ ಚುರುಕಾದ. ಕಿವಿಗೂದಲು ನಿಮಿರಿ ಕಣ್ಣಗಲಿಸಿದ. ಚಂಚಲ ದೃಷ್ಟಿಯಿಂದ ಬಾಗಿಲು ಕಿಟಕಿಗಳನ್ನ ನೋಡಿದ. ಭದ್ರವಾಗಿದ್ದವು. ಕಿಟಕಿಯ ಕಿಂಡಿಯ ಮೂಲಕ ಹೊರಗೆ ನೋಡಿದ. ಜನಜಂಗುಳಿ ದೂರ ನಿಂತುದರಿಂದ ಕಾಣಿಸಲಿಲ್ಲ. ಅಷ್ಟರಲ್ಲಿ ಕಿಂಡಿಯಲ್ಲಿ ಬಂಟನೊಬ್ಬನ ಅರ್ಧ ಮುಖ ಕಂಡಿತು. ಆತ ಕಿಟಕಿಯ ಬಳಿಯೇ ಬಾಯಿ ತಂದು –

"ಮಹಾಪ್ರಭು, ಜನ ಬಂದು ಕಾಳು ಕೇಳುತ್ತಿದ್ದಾರೆ. ಅರಮನೆಯಲ್ಲಿ ಬೇಕಾದಷ್ಟು ಬಿದ್ದಿದೆ. ಕೊಡಲೆ ಮಹಾಪ್ರಭು?"

– ಎಂದು ಕೇಳಿದ. ಶಿಖರಸೂರ್ಯ ಅಸಹನೆಯಿಂದ,

"ಯಾರಪ್ಪನ ಮನೆ ಕಾಳು ಕೊಡ್ತೀಯೋ ಬೋಸಡೀ ಮಗನೇ? ಕೊಡೋದಿಲ್ಲ ಅಂತ ಹೇಳಿ ಕಳಿಸು"

– ಎಂದು ಒಳಗಿನಿಂದಲೇ ಗುಡುಗಿದ. ಬಂಟ ನಡುಗುತ್ತ ದೂಸರಾ ಮಾತಿಲ್ಲದೆ ಓಡಿಹೋದ.

ಧಾನ್ಯ ಕೊಡುವುದಿಲ್ಲವೆಂಬ ರಾಜನ ಮಾತಿಗೆ ಜನ ಕನಲಿ ಕಂಗೆಟ್ಟರು. "ಕೊಲೆಗಡುಕ, ನೀಚ" ಎಂದೊಂದು ದನಿ ಕೇಳಿಸಿತು. "ಬೆಳಗಿನಿಂದ ಎದ್ದಿಲ್ಲ ಅಂದೆ – ಸತ್ತ ಅಂತ ಅಂದುಕೊಂಡಿದ್ದೆವಲ್ಲ!" ಅಂತ ಇನ್ನೊಬ್ಬನಂದ. "ಮಲೆಯಾಳ ಮಾಂತ್ರಿಕನನ್ನ ಹೊರದಬ್ಬಿರಯ್ಯಾ" ಎಂದು ಇನ್ನೊಬ್ಬ. ಮಹಾರಾಜ ಕೋಪಾವೇಶದಿಂದ ಜೋರಾಗಿ ಪೀಠದ ಮೇಲೆ ಗುದ್ದಿದ. ಎದುರಿಗೆ ಹಿಂದೆ

ಚಿನ್ನವಾಗಿದ್ದು ಈಗ ಧಾನ್ಯವಾಗಿ ತುಂಬಿದ ತಟ್ಟೆಯಿತ್ತು. ರಭಸದಿಂದ ಒದ್ದ. ಅದು ಎದುರಿನ ಗೋಡೆಗೆ ಅಪ್ಪಳಿಸಿ ಧಾನ್ಯವೆಲ್ಲ ಕೋಣೆಯ ತುಂಬ ಚೆಲ್ಲಾಡಿ ಬಿತ್ತು. ತಕ್ಷಣ ಇದು ಜನಕ್ಕೆ ಗೊತ್ತಾಯಿತೇ?" ಎಂದು ಆತಂಕಪಟ್ಟು ಕಿಡಿಕಿಗೆ ಹೋಗಿ ನೋಡಿದ ಜನ ಕಾಣಿಸಲಿಲ್ಲ. ಆದರೆ "ಜಾಗಟೆ ಬಾರಿಸುತ್ತಿದ್ದಾನೇನಯ್ಯಾ ನಿನ್ನ ರಾಜ?" - ಎಂದು ಮತ್ತೊಂದು ದನಿ ಕೇಳಿಸಿ ಅವಮಾನಿತನಾಗಿ ಮುಖ ಕಿವುಚಿದ.

ಆ ದನಿಯ ಮೂಲಕ ಅವರಿರುವ ದೂರವನ್ನು ಅಂದಾಜು ಮಾಡಿ ಮೆಲ್ಲಗೆ ಕಿಡಿಕಿ ಬಾಗಿಲು ತೆರೆದು ನೋಡಿದ. ಜನ ಚದುರಿರಲಿಲ್ಲ. ಬಂಟನನ್ನು ಸುತ್ತುಗಟ್ಟಿ ನಿಂತು ಚರ್ಚಿಸುತ್ತಿದ್ದರು. ಮಂಕಿ ಕವಿದ ಮುಖದವರು ರೋಗ ಹಸಿವೆಗಳಿಂದ ಕೃಶರಾದವರು, ಸುಸ್ತಾದವರು, ಕೆಲವರು ನಿಲ್ಲಲೂ ಶಕ್ತಿ ಸಾಲದೆ ಅಲ್ಲೇ ಕೂತು ಏನೇನೋ ಪ್ರಶ್ನೆಗಳನ್ನು ಕೇಳಿ ಬಂಟನ ಗೊಂದಲವನ್ನು ಹೆಚ್ಚಿಸುತ್ತಿದ್ದರು. ಒಬ್ಬ ರೈತ "ತಿನ್ನೋ ಅನ್ನವನ್ನ ಚಿನ್ನ ಮಾಡಿಟ್ಟರಲ್ಲಪ್ಪ ನಿನ್ನ ರಾಜರು! ಈಗ ಹಸಿದಿದ್ದೇವೆ ಅಂದರೂ ಹಿಡಿ ಕಾಳು ಕೊಡೋದಿಲ್ಲ ಅಂತಾರಲ್ಲಾ! ಎಂಥಾ ಪುಣ್ಯವಂತರಿರಬೇಕು!" ಎಂದು ಹಂಗಿಸಿದ. "ನಾವು ಉಪವಾಸ ಸಾಯ್ತಿದ್ದರೆ ಅರಮನೆಯಲ್ಲಿ ಧಾನ್ಯ ಕೊಳೀತಿದ್ದರೂ ಕೊಡೋದಿಲ್ಲ ಅಂತಾರಲ್ಲಪ್ಪ ನಿಮ್ಮ ರಾಜರು!" ಎಂದ ಒಬ್ಬ ರೋಗಿ ಮುದುಕ. ಇನ್ನೊಬ್ಬ "ಪ್ರಜೆಗಳು ಅಂದರೆ ರಾಜನಿಗೆ ಮಕ್ಕಳಲ್ಲೇನಪ್ಪ? ಅಷ್ಟೊಂದು ಧಾನ್ಯ ಇಟ್ಟುಕೊಂಡು ಮಕ್ಕಳಿಗೇ ಇಲ್ಲ ಅಂತಾನಲ್ಲಪ್ಪ. ನಿನ್ನ ರಾಜ!" ಅಂದರೆ ಒಬ್ಬ ಹುಡುಗ "ಸ್ವಂತ ಮಕ್ಕಳನ್ನೇ ನೋಡಲಿಲ್ಲ ಅವನು! ಇನ್ನು ನಮ್ಮನ್ನ ಮಕ್ಕಳ ಹಾಗೆ ನೋಡಿಕೊಳ್ತಾನೋ! ಎಂದು ವ್ಯಂಗಮಾಡಿದ.

ಹೀಗೆ ಒಬ್ಬೊಬ್ಬರು ತಲೆಗೊಂದು ಮಾತಾಡುತ್ತಿರಬೇಕಾದರೆ ಅನತಿ ದೂರದಲ್ಲಿ ದೊಡ್ಡ ರುಮಾಲು ಸುತ್ತಿಕೊಂಡ, ದೊಗಳೆ ಅಂಗಿಯ ಜೊಂಡು ಮೀಸೆಯ ಮುದುಕ ತನ್ನ ಕೈ ಎತ್ತಿ ಒಬ್ಬ ಹುಡುಗನನ್ನು ತೋರಿಸಿ ಜೋರು ದನಿಯಲ್ಲಿ ಏನನ್ನೋ ಪ್ರತಿಪಾದಿಸುತ್ತಿದ್ದ. ಆಗಾಗ ತಕರಾರಿನ ದನಿಯಲ್ಲಿ ಮಾಂತ್ರಿಕ, ಮಾಟಗಾರ, ವಾಮಾಚಾರಿ.... ಅಂತ ಏನೇನೋ ಅಂದು ಮಹಾರಾಜನಿದ್ದ ಕೋಣೆಯ ಕಡೆಗೆ ತೋರು ಬೆರಳು ತೋರಿಸುತ್ತಿದ್ದ. ಇದ್ಯಾವುದರ ಪರಿವೆಯಿಲ್ಲದೆ ಹುಡು ತುದಿಗಾಲ ಮೇಲೆ ನಿಂತು ಅರಮನೆಯನ್ನು ನೋಡುತ್ತಿದ್ದ. ಶಿಖರಸೂರ್ಯ ಕಿಡಕಿಯ ಬಾಗಿಲನ್ನ ಇನ್ನಷ್ಟು ತೆರೆದು ನೋಡಿದ. ವಿಶಾಲ ಭುಜಗಳ ಮ್ಯಾಲೆ ಚೆಲ್ಲಿಕೊಂಡ ಒಂದು ಧೋತ್ರ ಹಾಗೂ ಸೊಂಟಕ್ಕೆ ಸುತ್ತಿಕೊಂಡ ಇನ್ನೊಂದು ಧೋತ್ರ ಬಿಟ್ಟು ಹುಡುಗನ ಮೈ ಮೇಲೆ ಬೇರೆ ಬಟ್ಟೆ ಇರಲಿಲ್ಲ. ಇವನನ್ನು ಎಲ್ಲಿ ಕಂಡಿದ್ದೇನೆ? ಹೌದು ಈತ ನಿನ್ನಡಿ! ಇಲ್ಲಿಗೂ ಬಂದನೇ ಚಂಡಾಲ! ಇತ್ತೀಚೆಗೆ ಕೆಲ ವರ್ತಕರು ಇವನನ್ನ ಭೇಟಿಗಾಗಿ ನೀನೇ ಬಂದು ನಿನ್ನ ಹಕ್ಕಿನ ಕನಕಪುರಿಯನ್ನಾಳಬೇಕೆಂದು ಕೇಳಿಕೊಂಡಿದ್ದ ಸುದ್ದಿಯೂ ನೆನಪಾಗ ಅಂಗಾಲಿನಿಂದ ನೆತ್ತಿಯತನಕ ಉರಿದುರಿದು ಉರಿದ. ಯಾರನ್ನ ಕೇಳಿ ಇಲ್ಲಿಗೆ ಬಂದ? ಯಾಕೆ ಬಂದ? ಎಂದು ತಂತಾನೇ ಕೇಳಿಕೊಂಡು ನಾನೀಗ ರಾಜನೇ ಅಲ್ಲವೆಂದು ಮನಗಂಡು ಖಿನ್ನನಾದ. ಮಾಂಡಳಿಕರು ಕಳ್ಳಕಾಕರು ಬಂದು ಕನಕಪುರಿಯನ್ನ ಲೂಟಿ ಮಾಡಿಕೊಂಡ ಹೋಗುತ್ತಿದ್ದಾರೆಂದರೆ ತಾನೆಂಥ ಕನಕಪುರಿ ರಾಜ! ಅಷ್ಟರಲ್ಲಿ ಕಿಡಕಿಯ ಬಳಿ ಯಾರೋ ಸುಳಿದಂತಾಯಿತು. ಹಿಂದೆ ಸರಿದು ಕಾಣದ ಹಾಗೆ ನಿಂತುಕೊಂಡ. ಹಾಗೆ ಹೆದರಿ ನಿಂತುದಕ್ಕೆ ನಾಚಿಕೆಯೆನ್ನಿಸಿತು.

ಯಾವುದೇ ಬೆಲೆಯುಳ್ಳ ವಸ್ತುವನ್ನ ಕಂಡರೂ ಅದರಲ್ಲಿ ತನ್ನ ಭಾಗವಿದೆಯೆಂದು ನಂಬುವ, ಯಾವುದೇ ಪ್ರದೇಶ ಕಂಡರೂ ಅದು ತನ್ನ ರಾಜ್ಯಕ್ಕೆ ಸೇರಿದ್ದೆಂಬಂತೆ ನೋಡುವ, ಗೆದ್ದ ರಾಜ್ಯವೊಂದರ ದೇವಸ್ಥಾನಕ್ಕೆ ಹೋಗಿದ್ದಾಗ ಅಲ್ಲಿದ್ದ ದೇವರು ಅಪ್ಪಟ ಚಿನ್ನದ್ದೆಂದು ಪೂಜಾರಿ ಹೆಮ್ಮೆಯಿಂದ ಹೇಳಿದಾಗ, ಅದರಲ್ಲಿ ತನ್ನ ಭಾಗವೆಷ್ಟೆಂದು ಕೇಳಿದ್ದ ಶಿಖರಸೂರ್ಯನಿಗೆ - ದೇವರು ಅಥವಾ ಮನುಷ್ಯ ಎರಡೂ ಆಗಬಲ್ಲ ಶಕ್ತಿ ಇದ್ದ ಶಿಖರಸೂರ್ಯನಿಗೆ ಇಂಥ ಭಯ, ನಾಚಿಕೆ ಸಹಜವೆ? ಈಗಲೂ ಆತ ಮನಸ್ಸು ಮಾಡಿದ್ದರೆ ಇದ್ದಷ್ಟು ಸೈನಿಕರಿಂದಲೇ ಹಾಳು ಕನಕಪುರಿಯನ್ನ ನಿಭಾಯಿಸಬಹುದಿತ್ತು; ಕಟ್ಟಬಹುದಿತ್ತು. ಹುಟ್ಟಿನಿಂದಲೇ ಮಹತ್ವಾಕಾಂಕ್ಷೆಯಾಗಿದ್ದವನು ಹೀಗೆ ಹೆಂಗಾಧ? ಆತ ಹೇಡಿಯಲ್ಲ, ವೈರಿಗಳಲ್ಲಿ ಹೊಕ್ಕರೆ ಒಬ್ಬನೇ ನೂರಾರು ಜನರನ್ನು ಕೊಲ್ಲಬಲ್ಲ ವಜ್ರದೇಹಿ - ಈ ಮನಸ್ಥಿತಿಗೆ ಹ್ಯಾಗೆ ಬಂದ? ಇದು ನಮ್ಮ ತಿಳುವಳಿಕೆಗೆ ನಿಲುಕುವಂಥ ಮಾತಲ್ಲ. ಬಹುಶಃ ತನ್ನ ಕೈಯಲ್ಲಿಯ ಸೈನ್ಯಶಕ್ತಿ ಮತ್ತು ಚಿನ್ನಶಕ್ತಿ ಏಕಕಾಲಕ್ಕೆ ಮಾಯವಾಗಿ ಆಘಾತ ಹೊಂದಿರಬಹುದು. ಮಗಳು ದೂರವಾದಳೆಂಬುದಿರಲಿ, ಮಗ ಮತ್ತು ಪ್ರೇಯಸಿ ಒಂದೇ ದಿನ ದಿವಂಗತರಾಗಿದ್ದುದು ಅವನನ್ನ ದುರ್ಬಲಗೊಳಿಸಿರಬಹುದು ಅಥವಾ ನಿನ್ನಡಿಯೇ ಅವನ ಪಶ್ಚಾತ್ತಾಪವನ್ನ ಒಳಗೊಳಗೇ ಕೆರಳಿಸಿರಬಹುದು ಅಥವಾ ಅವನು ನಿಜವಾಗಿ ದುಷ್ಟನೇ ಇರಬಹುದು.

ದೊಡ್ಡರೋಗ ತಹಬಂದಿಗೆ ಬಂದಿತ್ತು. ಹೋಗುವುದಕ್ಕೆ ಸಾಧ್ಯವಿದ್ದರೆಲ್ಲ ವಲಸೆ ಹೋಗಿದ್ದರು. ಇದ್ದವರಲ್ಲಿ ಬಹುಪಾಲು ಜನ ಈಗ ಅರಮನೆಯ ಮುಂದೆ ಸೇರಿದ್ದರು. ಇವರೆಲ್ಲ ಅನ್ನ ಮತ್ತು ಮದ್ದಿಗಾಗಿ ನಿನ್ನಡಿಯ ಆಸರೆಗೆ ಹೋದವರು. ಆರೋಗ್ಯವನ್ನ ಮರಳಿ ಪಡೆದವರು. ಹೆಣಗಳನ್ನು ಸುಡುವುದಕ್ಕೆ ಊರನ್ನ ಸ್ವಚ್ಛವಾಗಿಡಲಿಕ್ಕೆ ಸಹಾಯ ಮಾಡಲು ಮುಂದೆ ಬಂದವರು. ಹಳೆಯದನ್ನ ಮರೆತು ಹೊಸ ಕನಕಪುರಿಯನ್ನ ಕಟ್ಟುವುದಕ್ಕೆ ತಯಾರಾದವರು. ನಿನ್ನಡಿ ಒಬ್ಬ ಸಂತ ವೈದ್ಯನೆಂದು ಬಲ್ಲವರೇ ವಿನಾ ಚಿಕ್ಕಮ್ಮಣ್ಣಿಯ ಮಗನೆಂದಾಗಲೆ, ಕನಕಪುರ ಸಿಂಹಾಸನದ ಹಕ್ಕುದಾರನೆಂದಾಗಲಿ ಬಹಳ ಜನ ತಿಳಿದವರಲ್ಲ. ಸುಕ್ರನಿಗೆ ಕೂಡ ಚಿಕ್ಕಮ್ಮಣ್ಣಿಯ ಮಗ ತರುಣಚಂದ್ರ ಶಿವಾಪುರದಲ್ಲಿದ್ದಾನೆಂದು ತಿಳಿದಿತ್ತು. ನಿನ್ನಡಿ ಕೂಡ ಅಂಥ ಯಾವ ಹಕ್ಕುಗಳನ್ನು ಕೇಳಿರಲಿಲ್ಲ. ಕನಕಪುರಿಯ ಪತನ ತನ್ನದೇ ಸೃಷ್ಟಿ ಎಂದು ಒಪ್ಪಿಕೊಳ್ಳಲು ಶಿಖರಸೂರ್ಯ ಸಿದ್ಧನಿರಲಿಲ್ಲ. ಈಗಲೂ ನಿನ್ನಡಿಯ ವಾಮವಿದ್ಯೆಯ ಕುತಂತ್ರವೇ ಕಾರಣವೆಂದು ಅವನನ್ನು ಅವಾಚ್ಯ ಶಬ್ದಗಳಿಂದ ಬಯ್ಯುತ್ತ ಸಮಾಧಾನ ತಂದುಕೊಳ್ಳುತ್ತಿದ್ದ. ನನ್ನ ಶೋಕದಲ್ಲಿ ಭಾಗಿಯಾಗಲು ಹತ್ತಿರದವರಿಲ್ಲ, ಹೊಂದಿದವರಿಲ್ಲ, ಬಂಧು ಬಳಗವಿಲ್ಲ. ನನ್ನಿಂದ ಶ್ರೀಮಂತನಾದ ಒಬ್ಬ ವರ್ತಕನಿಲ್ಲ, ಉಪಕೃತನಾದ ಒಬ್ಬ ಪ್ರಜೆಯಿಲ್ಲ! ಅಯ್ಯೋ ನನ್ನ ಜೀವನವೇ! - ಎಂದೊಂದು ಕ್ಷಣ ಅಪರೂಪಕ್ಕೆ ಹಳಹಳಿಸುತ್ತಿರುವಲ್ಲಿ ಬಾಗಿಲು ಬಡಿದ ಸದ್ದಾಯಿತು.

ಮೆಲ್ಲಗೆ ಹೋಗಿ ಕಿಡಕಿಯ ಹತ್ತಿರ ನಿಂತ.

“ನಾನು ಒಡೆಯಾ ಸುಕ್ರ ಬಂದಿದ್ದೀನಿ.”

- ಅಂತ ಹೊರಗಿನಿಂದ ಬಂದ ದನಿ ಗುರುತಾಗಿ ಮೆಲ್ಲಗೆ ಹೋಗಿ ಬಾಗಿಲು ತೆರೆದ. ಸುಕ್ರ ಒಳಬಂದು ನಮಸ್ಕಾರವನ್ನಾಚರಿಸಿ ಆಜ್ಞೆಗಾಗಿ ಕಾದಂತೆ ಮುಖ ಕೆಳಗೆ ಹಾಕಿ ನಿಂತ.

“ಈ ಜನ ಯಾರು ಸುಕ್ರ”?

“ಯಾರ್ಯಾರೋ ಬಂದವರೆ ನನ್ನೊಡೆಯಾ. ಹೊಟ್ಟೆಗೆ ಕೂಳಿಲ್ಲ. ಕಾಳು ಬೇಕು. ಅರಮನೆಯಲ್ಲಿ ಬೇಕಾದಷ್ಟಿದೆ. ಕೊಡಲಾ ಒಡೆಯಾ?”

- ಎಂದು ತಾನು ಪ್ರಧಾನಿ ಎಂಬುದನ್ನೂ ಮರೆತು ವಿನಯದಿಂದ ಕೇಳಿದ. ಇವನೂ ಜನಗಳ ಪರವಾಗಿ ಮಾತಾಡುವಂತಾಯಿತೇ ಎಂದು ಮಹಾರಾಜ ಶಿಖರಸೂರ್ಯನಿಗೆ ನಿರಾಸೆಯಾಯಿತು. ಅದನ್ನು ಹೊರಗೆ ತೋರಿಸದೆ, -

“ಹೌದೋ, ಆ ಜೊಂಡುಮೀಸೆಯ ಮುದುಕ ಏನೋ ಹೇಳುತ್ತಿದ್ದಾನಲ್ಲಾ, ಏನದು”?

“ತೆವಲಿಗೆ ಏನೇನೋ ಏಳ್ತವ್ನೆ ಒಡೆಯಾ”

- ಎಂದು ಮುದುಕನ ಬಗೆಗಿನ ತಿರಸ್ಕಾರದಿಂದ ಅದು ಗಮನಿಸಬೇಕಾದ ಸಂಗತಿಯಿಲ್ಲವೆಂಬಂತೆ ಸುಕ್ರ ಹೇಳಿದ: ಶಿಖರಸೂರ್ಯ ಸಿಡಿದ.

“ಮೂರ್ಖಾ ಅದೇನು ಬೊಗಳುತ್ತಿದ್ದಾನೆ ಅಂತ ಹೇಳು.”

ಸುಕ್ರ ಗಾಬರಿಯಾದ. ಇನ್ನಷ್ಟುಮ ಕಂಪಿಸುವ ದನಿಯಲ್ಲಿ ಮಹಾರಾಜನ ಕಿವಿಯಲ್ಲಿ ಹೇಳುವಂತೆ ಬಾಗಿ ಹೇಳಿದ:

“ಆ ಹುಡುಗ ನಿನ್ನ ಅಳಿಯ ಅಂದ.”

“ಅದಕ್ಕೆ?”

“ಅದು ನಿಜವ ಒಡೆಯಾ?”

ಅವನ ಪ್ರಶ್ನೆಯನ್ನ ನಿವಾರಿಸಲು ಕೇಳಿದ:

“ಸುಕ್ರ ನಿನ್ನ ಹತ್ತಿರ ಬಂಟರೆಷ್ಟು ಜನ ಇದ್ದಾರೆ?”

“ಎಲ್ಲಾ ಸೇರಿ ಒಂದು ಕಡಿಮೆ ಇಪ್ಪತ್ತಿರಬಹುದು.”

“ಇಲ್ಲಿ ಎಷ್ಟು ಜನ ಇದ್ದಾರೆ?”

ಹತ್ತು ಮಂದಿ. ಉಳಿದವರು ಕಳ್ಳರನ್ನಟ್ಟಿಸಿಕೊಂಡು ಹೋಗಿದ್ದಾರೆ ಒಡೆಯಾ”

“ಸುಕ್ರ, ಆ ಹುಡುಗ ಇದ್ದಾನಲ್ಲಾ, ಅವನೇ ಕಣೋ ಕನಕಪುರಿಯನ್ನ ಹಾಳು ಮಾಡಿದವನು.”

“ಒಡೆಯಾ?”

- ಎಂದು ಸುಕ್ರ ನಂಬದೆ ಆಶ್ಚರ್ಯದಿಂದ ಅಂದ.

“ಬೆಟ್ಟದಯ್ಯನ ಆಣೆಗೂ ಅವನೇ ಕಣೋ ಕನಕಪುರಿಗೆ ಬೆಂಕಿ ಇಟ್ಟವನು!”

- ಎಂದು ಉದ್ವೇಗದಿಂದ ಹೇಳಿ ದಡಾರನೆ ಬಾಗಿಲು ತೆಗೆದು ಹೊರಕ್ಕೆ ಬಂದು ಜನರಿದುರಿಗೆ ರಾಜಠೀವಿಯಿಂದ ನಿಂತ. ತನ್ನ ದರ್ಶನಕ್ಕೆ ಹ್ಯಾಗೆ ಸ್ಪಂದಿಸುವರೆಂದು ಸುತ್ತ ನೋಡಿದ. ಜನರೆಲ್ಲರೂ ಸದ್ದು ಮಾಡದೆ ಇನವ ಕಡೆ ನೋಡಿದರು. ಒಬ್ಬಿಬ್ಬರು ಕೈ ಎತ್ತಿ ನಮಸ್ಕಾರ ಮಾಡಿದರು. ಆಮೇಲೆ ಮರಮರ ಸಣ್ಣ ದನಿಯಲ್ಲಿ ತಕರಾರು ತೆಗೆದಂತೆ ಮಾತಾಡಲು ಸುರುಮಾಡಿದರು.

ಶಿಖರಸೂರ್ಯ ತಕ್ಷಣ ಚುರುಕಾಗಿ ಜನಗಳ ಮ್ಯಾಲೇರಿ ಹೋಗುವಂತೆ ನಾಲ್ಕು ಹೆಜ್ಜೆ ಮುಂದೆ ಬಂದು,

“ಎಲ್ಲಿ ಆ ಮಂತ್ರಮಾಟದ ಭಂಡ ವೈದ್ಯ?”

- ಎಂದು ಕೇಳಿದ.

“ಅವನ್ಯಾಕೆ ಬೇಕು?”

- ಎಂದು ಮೀಸೆ ಮುದುಕ ಕೇಳುತ್ತ ಜನಗಳ ಮಧ್ಯದಲ್ಲಿದ್ದವನು ಮುಂದೆ ಬರುತ್ತಿರಬೇಕಾದರೆ ಇಬ್ಬರು ಬಂಟರು ನುಗ್ಗಿ ಜನಗಳ ಮಧ್ಯೇ ಇದ್ದ ನಿನ್ನಡಿಯನ್ನು ತೋಲು ಹಿಡಿದು ಮುಂದೆ ತಂದು ನಿಲ್ಲಿಸಿದರು. ಈಗ ಎಲ್ಲರ ಕಣ್ಣು ನಿನ್ನಡಿಯ ಕಡೆಗೊಮ್ಮೆ, ಕಹಾರಾಜನ ಕಡೆಗೊಮ್ಮೆ ಹರಿದಾಡಿದವು. ನಿನ್ನಡಿ ವಿಧೇಯ ಭಂಗಿಯಲ್ಲಿ ನಿಂತುಕೊಂಡ. ಈಗ ಎಂಟು ದಿನಗಳಿಂದ ಹೆಣಗಳ ಹೊತ್ತು, ಕಣ್ಣು ತುಂಬ ನಿದ್ದೆ ಕೂಡ ಇಲ್ಲದೆ ಮುಖ ಬಡಕಲಾಗಿ ಹತಾಶೆಯಿಂದ ಜೋತು ಬಿದ್ದಿತ್ತು. ಕೂದಲು ಕೆದರಿತ್ತು. ಹೆಣಗಳನ್ನು ಹೊತ್ತು ಧೋತ್ರ ಕೊಳೆಯಾಗಿತ್ತು. ಕೆಸರು ಮೆತ್ತಿದ್ದ ದಪ್ಪ ಕಾಲ್ಮರಿ ಮೆಟ್ಟಿದ್ದ. ಆದರೆ ಆತನ ಬಗ್ಗೆ ಮಹಾರಾಜ ಹಗುರವಾಗಿ ಮಾತಾಡಿದನೆಂದು ಜನ

ಅಸಮಾಧಾನಪಟ್ಟುಕೊಂಡರು. ಆತ ಅನ್ನಾಹಾರ ನಿದ್ದೆ ನೀರು ಬಿಟ್ಟು ಹೆಣಗಳ ಹೊತ್ತು ಸುಟ್ಟದನ್ನ ಎಲ್ಲರೂ ನೋಡಿದ್ದರಲ್ಲದೆ ಸಂಜೆ ಮತ್ತೆ ಕುರುಮುನಿ ಚಂಡೀದಾಸರೊಂದಿಗೆ ಸೇರಿ ಮದ್ದು ಕೊಡುತ್ತಿದ್ದ. ಗುಣ ಹೊಂದಿದವರು ಸ್ವಯಂಸ್ಫೂರ್ತಿಯಿಂದ ಅವನ ಸೇವಾ ಬಳಗ ಸೇರಿಕೊಂಡಿದ್ದರು. ಆತ ಶಿವಾಪುರದ ಶಿವಪಾದನೆಂಬುದನ್ನು ಖಚಿತವಾಗಿ ಬಲ್ಲ ಒಬ್ಬಿಬ್ಬರು ಆ ಗುಂಪಿನಲ್ಲಿದ್ದರು.

ನಿನ್ನಡಿಯನ್ನು ನೋಡಿದ್ದೇ ಶಿಖರಸೂರ್ಯನಲ್ಲಿ ಹಿಂದಿನ ಎಲ್ಲ ಕೋಪತಾಪ ಸಿಟ್ಟು ಸೆಡುವು ಸೇಡುಗಳು ಒಟ್ಟಾಗಿ ಮುಖ ಹೀರಿ ಒಗೆದಂತೆ ಕಪ್ಪಗಾಯ್ತು. ಮಸೆದ ಆಯುಧದಂತೆ ಕಣ್ಣು ಹೊಳೆದವು. ಇವನೇ ನನ್ನ ಚಿನ್ನಕ್ಕೆ, ಸೈನ್ಯಕ್ಕೆ ತಿರುಮಂತ್ರ ಹಾಕಿಚವನೆಂದು ಖಚಿತವಾಗಿತ್ತು. ಕಿವಿಗೊದಲು ನಿಮಿರಿದವು. ಆವೇಶ ಬಂದವನಂತೆ ಜೋರು ದನಿಯಲ್ಲಿ ಕಿರಿಚಿದ:

"ಬಂಟರೇ ಇಗೋ ಈ ಭಂಡ ವೈದ್ಯ ಇದ್ದಾನಲ್ಲಾ ಇವನು - ಇವನೇ ಮದ್ದು ಮಾಟದ ಮಾಂತ್ರಿಕ. ಕನಕಪುರಿಯ ಚಿನ್ನವನ್ನ ಧಾನ್ಯವಾಗಿ ಪರಿವರ್ತಿಸಿದವನು. ?"

ಇವನೇನು ಮಾತಾಡುತ್ತಿದ್ದಾನೆಂದು ನಿನ್ನಡಿಗೆ ಕೂಡಲೇ ತಿಳಿಯಲಿಲ್ಲ. ಈಗ ಅಲ್ಲಿಂದ ಕದಲುವುದೂ ಸಾಧ್ಯವಿರಲಿಲ್ಲ. ವಿನಯದಿಂದ ಕೈ ಮುಗಿದು ದೈನ್ಯದಿಂದ ರಾಜನ ಕಡೆಗೆ ನೋಡಿ "ಗಂಜಿ ಕಾಡಲು ದಯಮಾಡಿ ಕೊಂಚ ಧಾನ್ಯವನ್ನು ಕೊಡುವುದಾಗಬೇಕು ರಾಜಾ" ಅಂದ. ಮಹಾರಾಜ ನಿನ್ನಡಿಯ ಕಡೆಗೆ ನೋಡಲೇ ಇಲ್ಲ. ಎರಡು ಮೆಟ್ಟಲಿಳಿದು ಬಂದು ಬಂಟರಿಗೆ ಎಡಗೈಯಿಂದ ನಿನ್ನಡಿಯನ್ನು ತೋರಿಸುತ್ತ

"ಮೊದಲು ಈ ಮಾಟಗಾರ, ದೇಶದ್ರೋಹಿಯನ್ನು ಬಲಿ ಕೊಡಿರಯ್ಯಾ?"

- ಎಂದು ಹರಿತವಾದ ದನಿಯಲಕ್ಲಿ ಕಿರಿಚಿದ.

ಅಷ್ಟರಲ್ಲಿ ಜೊಂಡು ಮೀಸೆಯ ಮುದುಕ ಮುಂದೆ ಬಂದು,

"ಮಾಟ ಮಂತ್ರಕ್ಕೂ ಇವನಿಗೂ ಏನು ಸಂಬಂಧ?"

- ಎಂದು ಕೇಳಿದ. ಅನೇಕರ ತರ್ಕ ಮತ್ತು ವಿವೇಕಗಳಿಗೆ ಈ ಮಾತು ಸರಿ ಅನ್ನಿಸಿತು. ಆದರೆ ಮಹಾರಾಜನ ಕಟ್ಟಾ ಅಭಿಮಾನಿಗಳೂ ಕೆಲವರಿದ್ದರು. ಅವರಿಗೆ ನಿನ್ನಡಿಯ ಬಗ್ಗೆ ತಿಳಿವಳಿಕೆ ಇರಲಿಲ್ಲವಾಗಿ ಮಹಾರಾಜನ ಮಾತಿಗೆ "ಹೌದೆ?" ಎಂದು ಅನುಮಾನ ವ್ಯಕ್ತಪಡಿಸಿ "ಮಹಾರಾಜರ ಮಾತುಗಳನ್ನ ಕೇಳ್ರೆಪ್ಪಾ" ಎಂದ ಅವರಲ್ಲೊಬ್ಬ. ಮಹಾರಾಜ ಈಗ ಹುರುಪಾದ, -

"ಹೆಣಗಳನ್ನು ಸುಡೋದು ಯಾವುದೋ ವಾಮಾಚಾರದ ಸಿದ್ಧಿಗಾಗಿ ಕಣ್ರಪ್ಪ - ಮೊದಲವನ ಬಲಿ ಕೊಡಿ!"

ಅಂದ. ಜನರಲ್ಲಿ ವಟವಟ ಮರ್ಮರ ಸುರುವಾಯಿತು. ಅಷ್ಟರಲ್ಲಿ ಮುದುಕ ಕೈ ಎತ್ತಿ -

"ಹೆಣ ಸುಡೋದಿರಲಿ, ನಮಗೆಲ್ಲ ಮದ್ದು ಕೊಟ್ಟು ಗುಣಪಡಿಸಿದನಲ್ಲ, ಅದ್ಯಾವ ಸಿದ್ಧಿಗಾಗಿ?"

- ಅಂದ. ಅಷ್ಟರಲ್ಲಿ ಮಹಾರಾಜನ ಪರವಾಗಿದ್ದವರಿಗೂ ಅಕ್ಕಪಕ್ಕದವರ ವಿವೇಕದ ಮಾತು ಸರಿಯೆನಿಸಿ ನಿಲುವು ಬದಲಿಸಿದ್ದರು. ಒಬ್ಬ ಧೈರ್ಯ ಮಾಡಿ, "ಈಗೇನು ಕಾಳು ಕೊಡುತ್ತೀರೊ? ಅವನನ್ನ ನಿಂದಿಸುತ್ತ ನಿಲ್ಲುತ್ತೀರೊ?" ಅಂದ. ಇನ್ನೊಬ್ಬ "ಕಾಳು ಬೇಕು ಕಾಳು" ಮತ್ತೊಬ್ಬ "ಏನೇನೋ ಖ್ಯಾತೆ ತೆಗೆಯಬೇಡ ಧಾನ್ಯ ಕೊಡಪ್ಪಾ ನೀನು!" ಅಂದ.

“ಧಾನ್ಯ ತಗೀಯಪ್ಪಾ, ಮಾಟಮಂತ್ರ ಆಮೇಲೆ ನೋಡೋಣ”

“ಎಲ್ಲಾ ನೀನೊಬ್ಬನೇ ತಿಂತೀಯೇನಪ್ಪ? ನಮಗೂ ಒಂದೆರಡು ಕಾಳು ಕೊಡು”

“ಲೋ ತಗೀಯಲೊ”

ಹೀಗೆ ತಲೆಗೊಂದು ಮಾತಾಡುತ್ತ ಮೆಲ್ಲಗೆ ಜನ ನೂಕು ನುಗ್ಗಲಲ್ಲಿ ಇಂಚಿಂಚು ಮುಂದೆ ಸರಿಯುತ್ತಿದ್ದರು. ಜನರ ಮುಂದೆ ಭಲ್ಲೆ ಹಿಡಿದ ಭಂಟರಿದ್ದರು. ಅವರ ಮುಂದೆ ನಿಂತಿದ್ದವರು ಹಿಂದಿನಿಂದ ತಳ್ಳುತ್ತಿರುವವರನ್ನು ಭಾರೀ ಪ್ರಯತ್ನದಿಂದ ಹಿಂದಕ್ಕೆ ತಡೆ ಹಿಡಿದಿದ್ದರು. ಅಷ್ಟರಲ್ಲಿ ಶಿಖರಸೂರ್ಯ ನಿರ್ಭಾವದಿಂದ ನಿಂತಿದ್ದ ನಿನ್ನಡಿಯನ್ನ ನೋಡಿ ತಾಳ್ಮೆ ಕಳೆದುಕೊಂಡು ವೀರಾವೇಶದಿಂದ -

“ಬೆಟ್ಟದಯ್ಯನಿಗೆ ಈ ರಾಜದ್ರೋಹಿಯನ್ನು ಬಲಿ ಕೊಡ್ರೋ, ಇದು ರಾಜಾಜ್ಞೆ!”

- ಎಂದು ಒದರಿದ. ಗುಂಪು ಈಗ ತಳ್ಳಾಟದಿಂದ ಹಿಂದೆ ಮುಂದೆ ವಾಲುತ್ತ ಕಷ್ಟಪಟ್ಟು ನಿಂತಿತ್ತು. ಮತ್ತೆ ಮಹಾರಾಜ “ಲೇ ಸುಕ್ರ ರಾಜಾಜ್ಞೆ ಕೇಳಲಿಲ್ಲವೇನೋ?” ಎಂದು ಕಿರಿಚಿದ್ದು ಅವಿಶ್ರಾಂತ ಗುಂಪಿನ ಸಹನೆಗೆ ವಿಚಿತ್ರವಾದ ಚಲನೆ ನೀಡಿತು. ತಕ್ಷಣ ಜೊಂಡು ಮೀಸೆಯ ವರ್ತಕ ಮುದುಕ ಮುಂದೆ ಬಂದು ನಿನ್ನಡಿಯ ಎಸಬಲದ ಬಂಟರನ್ನು ಸರಿಸಿ ಅವನ ನೆವರಿಬೆ ನಿಂತ ನೋಡು - ಚಡಪಡಿಸುತ್ತಿದ್ದ ಗುಂಪಿಗೆ ಅಸಮಾಧಾನವಾಯಿತು. ಭಲ್ಲೆಗಳನ್ನು ಕೋಲಿನ ಹಾಗೆ ಅಡ್ಡ ಚಾಚಿ ಜನರ ಪ್ರಬಲವಾದ ಅಲೆಯನ್ನು ನಿತಂತ್ರಿಸಲು ಬಂಟರು ಪ್ರಯತ್ನಿಸುತ್ತಿದ್ದರು. ಜನಗಳ್ಯಾಕೆ ನೂಕು ನುಗ್ಗಲು ಮಾಡುತ್ತಿರುವರೆಂದು ಚಕಿತನಾದ ನಿನ್ನಡಿ ಸುತ್ತಲೂ ನೋಡಿದ. ಅಷ್ಟರಲ್ಲಿ ಬಂಟನೊಬ್ಬ ಜೊಂಡುಮೀಸೆಯ ಮುದುಕನನ್ನು ತಳ್ಳಿ ಕೆಳಕ್ಕೆ ಚೆಲ್ಲಿದ. ಜನಗಳ ನೂಕು ನುಗ್ಗಲು ಹೆಚ್ಚಾಗಿ ಕೆಲವರು “ಹಾ!” ಎಂದು “ಎಲಾ ಶಿವನೇ!” ಎಂದು ಉದ್ಗಾ ತೆಗೆದರು. ಮುದುಕನ ಬಾಯಿಂದ “ಅಯ್ಯೋ” ಎಂದು ಗೋಳಿನ ದನಿ ಕೇಳಿಸಿತು.

ಈಗ ದೊಂಬಿಯನ್ನು ನಿಯಂತ್ರಿಸುವುದೇ ಅಸಾಧ್ಯವಾಯಿತು. ನಿನ್ನಡಿ ಕಷ್ಟಪಟ್ಟು ಜನಗಳನ್ನು ತಳ್ಳಿ ಮುದುಕನನ್ನು ಎಬ್ಬಿಸಿ ಹಾಗೇ ತಮ್ಮಕೊಂಡಿದ್ದ. ಜನರ ರಭಸ ಮುದುಕನನ್ನು ತಳ್ಳಿದ ಭಂಟನ ಕಡೆಗೆ ತಿರುಗಿತು.

ಮುದುಕ ಕಷ್ಟಪಟ್ಟು ಎದ್ದು ನಿಂಉ ಕರ್ಕಶ ದನಿಯಲ್ಲಿ ಎಲ್ಲರನ್ನು ಕುರಿತು ತುಂಡು ವಾಕ್ಯಗಳಲ್ಲಿ ಮಾತಾಡಿದ. ಅವನ ಮಾತು ಮೊದಮೊದಲು ತಿಳಿಯಲಿಲ್ಲ. ಒಂದು ವಾರದಿಂದ ಜನರು ನಿನ್ನಡಿಯನ್ನ ಕಂಡವರಾದುದರಿಂದ ಬಹುಬೇಗ ಅವನು ನಿನ್ನಡಿಯ ಬಗ್ಗೆ ಮಾತಾಡುತ್ತಿರುವನೆಂದು ತಿಳಿದುಕೊಂಡರು. ಅವನ ಮಾತಿನ ಕರ್ತೃ ಯಾರೆಂದು ಗೊತ್ತಾದ ಮೇಲೆ ಮುದುಕನ ಮಾತಿನ ತರ್ಕಸರಣಿಯನ್ನು ಒಪ್ಪಿಕೊಂಡರು.

ಆತ ಹೇಳಿದ್ದಿಷ್ಟು:

“ಹತ್ತು ದಿನಗಳಿಂದ ನಾರುವ ಹೆಣಗಳ ಹೊತ್ತು ತಂದು ಸುಟ್ಟ. ಎಲ್ಲೆಂಲ್ಲಿಂದಲೋ ಧಾನ್ಯ ತಂದು ದಾಸೋಹ ನಡೆಸಿದ. ಮದ್ದುಕೊಟ್ಟು ಸಾವಿರ ಮಂದಿಗೆ ಜೀವಾ ಕೊಟ್ಟ, ಅನ್ನಕೊಟ್ಟ. ಆವಾಗ ಯಾರಾದರೂ ಕನಕಪುರಿಯವರು ಸಹಾಯಕ್ಕೆ ಬಂದರ? ರಾಜ ಬಂದನ? ಬಂಟರು ಬಂದರ? ಸ್ವಯಂಸ್ಫೂರ್ತಿಯಿಂದ ನಾವೂ ನೀವೂ ಮೂರು ದಿನಗಳ ಹಿಂದೆಷ್ಟೇ ಅವನ ಜೊತೆ ಸೇರಿಕೊಂಡಿವೆ. ಅಷ್ಟೆ!

ಹೋಗಲಿ ಕನಕಪುರಿಯ ಹೆಣ ಸುಡಲು ನೀ ಯಾರ? ನಿನಗೇನು ಅಧಿಕಾರ ಇದೆ? - ಅಂತಾದರೂ ಬಂಟರು ಕೇಳಬೇಕಿತ್ತಲ್ಲ? ಕೇಳೋದಿರಲಿ, ಅವನ ಹತ್ತಿರ ಸುಳಿಯಲಿಲ್ಲ. ಅಷ್ಟೇ ಅಲ್ಲ ಇದೇ ಬಂಟರು ತಮ್ಮ ಹೆಂಡಿರು ಮಕ್ಕಳನ್ನು ಮದ್ದಿಗಾಗಿ ಅವನ ಚಪ್ಪರಕ್ಕೆ ಕಳಿಸಿದರು. ಆವಾಗ ಮಹಾರಾಜನಿಗೆ ಇವನೊಬ್ಬ ಮಾಟಗಾರ ಅಂತ ಯಾಕನ್ನಿಸಲಿಲ್ಲ? ಈಗ ದೊಡ್ಡ ರೋಗ ಹದ್ದು ಬಸ್ತಿಗೆ ಬಂದಿದೆ.

ಜನರಿಗೆ ಗಂಜಿಗೆ ಧಾನ್ಯ ಕಡಿಮೆ ಬಿದ್ದಿದೆ. ಅರಮನೆಯೊಳಗೆ ಕೊಳೆಯುತ್ತಿರುವ ಧಾನ್ಯರಾಶಿಯ ಅಲ್ಪ ಭಾಗವನ್ನು ಜನತೆಗೆ ಕೊಡಿ ರಾಜರೇ ಅಂದರೆ ಅವನು ದೇಶದ್ರೋಹಿ, ರಾಜದ್ರೋಹಿ ಆದನ?"

ಮುದುಕನ ಮಾತು ಇನ್ನೂ ಮುಗಿದಿರಲಿಲ್ಲ. ಮಾತು ಯಾರನ್ನು ಗುರಿಯಿಟ್ಟಿದೆಯೆಂದು ಶಿಖರಸೂರ್ಯನಿಗೆ ತಿಳಿದು ಹೋಯಿತು. ಸುಲಭವಾಗಿ ಆವೇಶಕ್ಕೆ ಒಳಗಾಗುವ ಜನ ಸುಲಭವಾಗಿ ಕೋಪಕ್ಕೂ ಒಳಗಾಗುತ್ತಾರೆ. ಇವರಿಗೆ ಕನಕಪುರಿಯ ಎಲ್ಲ ತಪ್ಪುಗಳನ್ನು ಹೊರುವಂಥ ಒಂದು ಬಲಿ ಕೊಟ್ಟರೆ ಎಲ್ಲವೂ ತಣ್ಣಗಾಗುತ್ತದೆಂದು ಲೆಕ್ಕ ಹಾಕಿ ಮಹಾರಾಜ ನಿನ್ನಡಿಯ ಕಡೆಗೆ ಬೆರಳು ಮಾಡಿ "ಬೆಟ್ಟದಯ್ಯನಿಗೆ ಬಲಿ ಕೊಡ್ರೋ ಆ ದುಷ್ಟನನ್ನ!" ಎಂದು ವಿಕಾರವಾಗಿ ಚೀರಿದ. ಸುಕ್ರ ವಿಚಿತ್ರ ಆವೇಶಕ್ಕೆ ಒಳಗಾಗಿ ನಿನ್ನಡಿಗೆ ಗುರಿ ಹಿಡಿದು ಭಲ್ಲೆಯ ಎಸೆದ. ತಕ್ಷಣ ವರ್ತಕ ಮುದುಕ ಅಡ್ಡ ಬಂದು ಅವನ ಬೆನ್ನಿಗೇ ಭಲ್ಲೆ ತಾಗಿ ಅಲ್ಲೇ ಬಿದ್ದುಬಿಟ್ಟ.

ಜನ ಹೋ ಎಂದು ಕಿರಿಚಿ ಒಂದು ಕ್ಷಣ ನಿಶ್ಯಬ್ದರಾದರು, ಮರುಕ್ಷಣವೇ ನೂಕುನುಗ್ಗಲು ಸುರುವಾಯಿತು. ದೊಂಬಿಯ ಕೋಪಾಟೋಪಗಳನ್ನು ನಿಯಂತ್ರಿಸುವುದೇ ಅಸಾಧ್ಯವಾಯಿತು. ಇಬ್ಬರು ಓಡಿಹೋಗಲಿದ್ದ ಒಬ್ಬ ಬಂಟನ ಜುಟ್ಟು ಹಿಡಿದೆಳೆದು ಕೆಳಗೆ ಹಾಕಿ ಕಚಪಚ ತುಳಿದರು. ಇನ್ನೊಬ್ಬ ಅವನ ಕತ್ತಿನ ಮೇಲೆ ಕಲ್ಲಿ ಹಾಕಿ ಭಯ, ಬೆರಗಿನಲ್ಲಿ ಭಯಂಕರವಾಗಿ ಕೂಗಿದ. ಮುದುಕನ ಬೆನ್ನಲ್ಲೀ ನೆತ್ತರು ಸೋರಿ ದೊಗಳೆ ಅಂಗಿ ನೆತ್ತರಲ್ಲಿ ತೊಯ್ದು, ಅದರಿಂದಲೂ ಸೋರತೊಡಗಿತು. ಮುದುಕನ ದೇಹವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಹರಿಯುವ ನೆತ್ತರನ್ನು ತಡೆಯುವ ಪ್ರಯತ್ನದಲ್ಲಿ ನಿನ್ನಡಿ ತೊಡಗಿದ.

ರೊಚ್ಚಿಗೆದ್ದ ಜನ ಕೈಗೆ ಏನು ಸಿಕ್ಕರೆ ಅದನ್ನು ತಗೊಂಡು ಬಂಟರು ಮತ್ತು ಮಹಾರಾಜನ ಕಡೆಗೆ ಎಸೆಯುತ್ತ ಮುನ್ನುಗ್ಗಿದರು. ಬಂಟರು ಓಡಿಹೋದರು. ಶಿಖರಸೂರ್ಯ ಸಮಯ ಸಂದರ್ಭ ಅರಿತು ತಕ್ಷಣ ಕಾಲಿಗೆ ಬುದ್ಧಿ ಹೇಳಿ ಮೆಟ್ಟಲೇರಿ ಮೇಲಿನ ಕೋಣೆಯ ಬಳಿ ನಿಂತುಕೊಂಡ.

ಇನ್ನು ಬಂಟರನ್ನಾಗಲಿ ಮಹಾರಾಜನನ್ನಾಗಲಿ ಯಾರೂ ಕಾಪಾಡಲಾರರೆಂದು ಜನರೇ ತೀರ್ಮಾನಿಸಿ ನುಗ್ಗಿದರು. ಒಬ್ಬ ಬಂಟನನ್ನ ಭಲ್ಲೆ ಸಮೇತ ಎಳೆದು ಕೆಳಕ್ಕೆ ಹಾಕಿ, ಅವನದೇ ಭಲ್ಲೆಯಿಂದಿರಿದು ಕೊಂದ.

ಅಷ್ಟರಲ್ಲಿ ಜನ ಸುಕ್ರನ ಬೆನ್ನು ಹತ್ತಿದರು. ಸುಕ್ರ ಹೆದರಿ ಓಡಿದ. ಕೊನೆಗೆ ಅಂತಃಪುರದ ಮೆಟ್ಟಲೇರಿ ಕೆಳಕ್ಕೆ ಹಾರಿ ಬಿದ್ದ. ಜನ ಅಲ್ಲಿಗೂ ನುಗ್ಗಿ ಅವನನ್ನ ಹಿಡಿದು ಮೈ ನೀಲಿಗಟ್ಟುವತನಕ ಹೊಡೆದರು. ಅವನು ಸತ್ತದ್ದು ಖಾತ್ರಿಯಾದ ಮೇಲೆಕೆಲವರು ಅವನ ಕಾಲು ಹಹಿಡಿದೆಳೆಯುತ್ತ ಜನ ಸಂಚಾರವಿಲ್ಲದ್ದಲ್ಲಿ ಚೆಲ್ಲಿ ಬಂದರು. ಇನ್ನು ಕೆಲವರು ಅರಮನೆಯ ಧಾನ್ಯವನ್ನು ಚೀಲದಲ್ಲಿ ತುಂಬಿ ದಾಸೋಹಕ್ಕೆ ಸಾಗಿಸುವ ಕಾರ್ಯದಲ್ಲಿ ತೊಡಗಿದರು. ಉಳಿದ ಜನ ರಾಜನ ಕೋಣೆಯ ಕಡೆಗೆ ಧಾವಿಸಿದರು.

ಆದರೆ ಆಗಲೇ ತನ್ನ ಕೋಣೆಯ ಬಾಗಿಲಲ್ಲಿ ನಿಂತಿದ್ದ ಮಹಾರಾಜನಿಗೆ ದೊಂಬಿಯವರು ಎಸೆದ ಚಪ್ಪಲಿಯೊಂದು ಕಣ್ಣಿಗೆ ತಾಗಿ ಮಹಾರಾಜ ಕಣ್ಣು ಹಿಡಿದುಕೊಂಡಿ ಓಡಿಹೋಗಿ ಕೋಣೆಯ ಬಾಗಿಲಿಕ್ಕಿಕೊಂಡ. ಜನ ಬಾಗಿಲು ಬಡಿಯತೊಡಗಿದರು. ಉಳಿದವರು ಅವಮಾನಕರ ಶಬ್ದಗಳಿಂದ ಮಹಾರಾಜನನ್ನ ನಿಂದಿಸತೊಡಗಿದರು.

ಬೇಟೆಗಾರರು ತಪ್ಪಿಸಿಕೊಂಡ ಮಿಕವ ಹುಡುಕುವಂತೆ ಅವನ ಕೋಣೆಯ ಹಿಂದೆ ಮುಂದೆ ಸಂದಿಗೊಂದಿಗಳ ತಳ ಬುಡ ಸೋಸಿ ಪ್ರವೇಶಕ್ಕಾಗಿ ತಡಕಾಡತೊಡಗಿದರು. ಮಹಾರಾಜ ಕೇಳಿ ಕೆರಳುವಂಥ ಅಶ್ಲೀಲ ಪದಗಳಿಂದ ಒದರಿ ಕರೆದರು. ರಾಜನ ಕೋಣೆಯ ಮೊಗಸಾಲೆಯ ಪೀಠೋಪಕರಣ ಶೃಂಗಾರ ವಸ್ತುಗಳನ್ನು ಮುರಿದೆಸೆದು ಪರದೆಯ ಬಟ್ಟೆಗಳನ್ನು ಹರಿದು ಹಾಕಿದರು. ಇನ್ನೇನು ಸೂರ್ಯ ಮುಳುಗಬೇಕು - ಅಷ್ಟೊತ್ತಿನಲ್ಲಿ ನೋಡಿದರೆ - ಮಹಾರಾಜ ಒಡ್ಡೋಲಗದ ಮೇಲಿನ ಗೋಪುರದ ಕಳಸವನ್ನ ತಬ್ಬಿಕೊಂಡು ನಿಂತುದನ್ನು ಜನ ನೋಡಿ ಬೆರಗಾದರು! ಅಷ್ಟು ಎತ್ತರದ ಗೋಪುರವನ್ನು ಹಗ್ಗ ಅಥವಾ ಏಣಿಯ ನೆರವಿಲ್ಲದೆ ಹ್ಯಾಗೆ ಹತ್ತಿದನೆಂದು ಜನಕ್ಕೆ ಆಶ್ಚರ್ಯವಾಯಿತು. ಆಶ್ಚರ್ಯದಲ್ಲಿ ಸ್ವಲ್ಪ ಹೊತ್ತು ವೈರ ಮರೆತು ನೋಡಿದರು.

ಅಷ್ಟರಲ್ಲಿ ಜನಗಳ ಪೈಕಿ ಒಬ್ಬ, -

"ನೋಡಿದಿರಾ? ಶಿಖರಸೂರ್ಯನೆಂಬ ತನ್ನ ಹೆಸರನ್ನ ಸಾರ್ಥಕ ಮಾಡಿಕೊಂಡ ನಮ್ಮ ರಾಜ!"

- ಎಂದು ಕೂಗಿ ವ್ಯಂಗವಾಡಿದ. ಜನ ಹೋ ಎಂದು ರಾಜನ ಕಡೆಗೆ ಕೈ ಮಾಡಿ ನಕ್ಕರು. ಕೋತಿ ಎಂದು ಮತ್ತಷ್ಟು ನಕ್ಕರು. ಎಷ್ಟು ಜೋರಿನಿಂದ ಎಸೆದರೂ ಅಷ್ಟು ಎತ್ತರಕ್ಕೆ ಕಲ್ಲಿ ತಲುಪುವಂತಿರಲಿಲ್ಲ. ಆದ್ದರಿಂದ ಜನ ಈಗ ಅವನು ಹ್ಯಾಗೆ ಇಳಿಯುವನೆಂದು ನೋಡಲು ಕಾತರರಾದರು!

ಜನರ ಭಯದಲ್ಲಿ ಎತ್ತರದ ಅರಿವಿಲ್ಲದೆ ಹ್ಯಾಗೋ ಹತ್ತಿದ. ಆದರೆ ಹ್ಯಾಗೋ ಇಳಿಯುವುದು ಸಾಧ್ಯವಿಲ್ಲವೆಂದು ಮಹಾರಾಜನಿಗೆ ಗೊತ್ತಾಯಿತು. ಅಲ್ಲದೆ ಅಲ್ಲಿಂದ ಕೊಂಚ ಕೈ ಜಾರಿದರೂ ಪಾತಾಳಕ್ಕೆ ಬೀಳುವುದು ಖಚಿತವಿತ್ತು. ಕೆಳಗೆ ನೋಡಿದ! ಜನ ನಾಯಿ ಗಾತ್ರದ ಜೀವಿಗಳಂತೆ ಕಂಡರು. ಇಂಥ ಅಪಾಯಕಾರಿ ಗೋಪುರವನ್ನ ಹ್ಯಾಗೆ ಹತ್ತಿ ಬಂದನೆಂದು ಸ್ವಯಂ ಮಹಾರಾಜನಿಗೇ ಆಶ್ಚರ್ಯ ಮತ್ತು ಭಯವಾಯಿತು. ಕೆಳಗೆ ಜಮಾಯಿಸಿದ ಜನಗಳನ್ನು ನೋಡಿ ಇನ್ನಷ್ಟು ಭಯವಾಯಿತು. ಜೊತೆಗೆ ನಾಚಿಕೆ ಕೂಡಾ. ಮುಳುಗುತ್ತಿರುವ ಸೂರ್ಯನ ಕಂಡು ಮತ್ತೂ ಭಯವಾಯಿತು.

ಎರಡೂ ಕಾಲೂರಿ ನಿಲ್ಲುವುದಕ್ಕೆ ಸ್ಥಳಸಾಲದೆ, ಎರಡೂ ಕೈಗಳಿಂದ ಕಳಸವನ್ನ ತಬ್ಬಿಕೊಂಡೇ ನಿಂತಿರಬೇಕಿತ್ತು. ಒಂದು ಕಾಲು ಸೋತರೆ ಇನ್ನೊಂದರ ಮೇಲೆ ಭಾರಹಾಕಿ ನಿಲ್ಲಬೇಕಾಗಿತ್ತು.

ಅಷ್ಟರಲ್ಲಿ

"ಈಗ ಉಳಿದಿರೋದು ಒಂದೇ ದಾರಿ!"

- ಎಂದು ದನಿ ಕೇಳಿಸಿತು. ದನಿಯ ಗುರುತ ಸಿಕ್ಕಿತು, ಕರಿ ಹುಡುಗ! ಇವನೆಲ್ಲಿದ್ದಾನೆಂದು ನೋಡಿದರೆ ತನ್ನಂತೆಯೇ ಶಿಖರದ ಇನ್ನೊಂದು ಬದಿಗೆ ಅದರ ತುದಿ ತಬ್ಬಿ ನಿಂತಿದ್ದಾನೆ! ಆದರೆ ತನ್ನಂತೆ ಆತ ಕಷ್ಟಪಡುತ್ತಿರಲಿಲ್ಲ. ಸಾಲದ್ದಕ್ಕೆ ನಗುತ್ತಿದ್ದಾನೆ! ಅವನ ನಿರಾತಂಕ ತೃಪ್ತಿಯ ನಗೆ ನೋಡಿ ರುದ್ರಗೋಪ ಬಂತು. ಆದರೆ ಪ್ರಸ್ತುತದಲ್ಲಿ ಕೋಪವೂ ವ್ಯರ್ಥವೆಂದು ಅರಿವಾಗಿ, ಪಾರುಮಾಡೆಂದು ಅಂಗಲಾಚುವಂತೆ ಅವನನ್ನೇ ನೋಡಿದ. ಉಕ್ಕಿಬಂದ ನಗೆಯನ್ನು ತಡೆದುಕೊಂಡು ಹುಡುಗ ಹೇಳಿದ:

"ಮಹಾರಾಜನಾಗಿ ದರ್ಪದಿಂದ ಆಳಿದವನು ಹೀಗೆ ಜೀವಭಯದಲ್ಲಿ ಗೋಪುರದ ಕಳಸ ತಬ್ಬಿಕೊಂಡು, ಪ್ರಜೆಗಳೆದುರಿಗೆ ಹಾಸ್ಯಾಸ್ಪದನಾಗಿ ನಿಲ್ಲುವುದು ನಾಚಿಕೆಯ ವಿಷಯ. ನಿನ್ನನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುವವರು ಯಾರೂ ಇಲ್ಲ. ಕೆಳಗಿನ ಜಂಗುಳಿಯ ಎಲ್ಲರೂ ಹೋದ ಮೇಲೆ ಕೂಡ ಗೋಪುರದಿಂದ ಕೆಳಗಿಳಿಯುವುದು ಸಾಧ್ಯವಿಲ್ಲ. ಈಗ ಇರುವುದೊಂದೇ ದಾರಿ: ಕೈ ಬಿಟ್ಟು ಕೆಳಕ್ಕೆ ಹಾರುವುದು!"

ಹತಾಶೆಯಿಂದ ಕಂಗಾಲಾಗಿ ಕೇಳಿದ:

"ನಿಜ ಹೇಳು, ಯಾರು ನೀನು?"

"ನಿನ್ನ ಗುರು ನಾಗಾರ್ಜುನ!"

- ಎಂದು ಹುಡುಗ ಗಹಗಹಿಸಿ ನಕ್ಕು ಉಕ್ಕಿಬಂದ ಸಂತೋಷದಿಂದ ಹೇಳಿದ: ಈಗ ನಿನಗೂ ನನ್ನ ಹಾಗೆ ಗರುಡನ ಬೆಟ್ಟವೇ ಆಸರೆ. ನೀನು ಗಳಿಸಿದ ಚಿನ್ನದ ವಿದ್ಯೆಯನ್ನ ಅರ್ಹನಿಗೆ ದಾನ ಮಾಡಿದಾಗಲೇ, ಅವನೂ ಹದ್ದಾಗಿ ಬೆಟ್ಟದಾಸರೆಗೆ ಬಂದಾಗಲೇ ನಿನಗೆ ಮುಕ್ತಿ!"

ಕೋಪ, ನಿರಾಸೆ, ಆಘಾತಗಳನ್ನು ತಡೆದುಕೊಳ್ಳಲಾರದೆ ಮಹಾರಾಜ ಕಣ್ಣು ಮುಚ್ಚಿ ಕೈ ಬಿಟ್ಟು ಕಳಸವನ್ನೊದ್ದು ಹಾರಿಯೇ ಬಿಟ್ಟ! ಜನ ಹೋ ಎಂದು ಕಿರಿಚಿದರು. ಎರಡೂ ಕೈ ಕಾಲು ಚಾಚಿ ಬೀಳುವಾಗ ಕೆಳಗಿನವರಿಗೆ ನಿಧಾನ ಹಾರುವ ಹದ್ದಿನಂತೆ ಕಂಡ!

ಇನ್ನೇನು ಕಲ್ಲಿನ ನೆಲಗಟ್ಟಿಗೆ ತಲೆ ಅಪ್ಪಳಿಸಿ ಸಾಯುವೆನೆಂದು ಹೆದರಿದ್ದವನಿಗೆ ತೇಲಿದಂತೆ ಅನುಭವವಾಯಿತು. ಕಣ್ತೆರೆದು ನೋಡಿದರೆ - ಹದ್ದಿನಂತೆ ಹಾರುತ್ತಿದ್ದಾನೆ! ಕೈಗಳಿಗೆ ಮೂಡಿದ ರೆಕ್ಕೆಯನ್ನು ಬೀಸುತ್ತ ಹದ್ದಾಗಿ ರೂಪಾಂತರಗೊಂಡಿದ್ದಾನೆ! ಸಂತೋಷ ಆಶ್ಚರ್ಯಗಳಿಂದ ಹದ್ದುತನವನ್ನ ಅನುಭವಿಸುತ್ತಿದ್ದಾಗ ನಾಗಾರ್ಜುನ ಹೇಳಿದ ಹಾಗಾಯಿತು:

ಅಂತ್ಯ ಕಾಲದಲ್ಲಿ ನೀನೂ ನನ್ನ ಹಾಗೆ ಹದ್ದಾಗಿ ಇದೇ ಗರುಡನ ಬೆಟ್ಟದಲ್ಲಿ ಒಂಟಿಯಾಗಿ ವಾಸವಾಗಿರುತ್ತೀಯಣ್ಣ! ಕಲಿತ "ಧಾನ್ಯಚಿನ್ನದವಿದ್ಯೆ"ಯನ್ನು ಇನ್ನೊಬ್ಬರಿಗೆ ಬೋಧಿಸದ ಹೊರತು ನಿನಗೆ ಬಿಡುಗಡೆಯಿಲ್ಲ!"

ನಾಗಾರ್ಜುನನ ಮಾತುಗಳನ್ನ ನೆನೆದು ಖೇದವಾಯಿತು. ರೆಕ್ಕೆ ಬೀಸುತ್ತ ಪಡುವಣದ ಗರುಡನ ಗಿರಿಯ ಕಡೆಗೆ ಮುಖ ಮಾಡಿ ಹಾರುತ್ತ ಹಾರುತ್ತಾ ಕನಕಪುರಿಯಾಚೆಗಿನ ಇನ್ನೊಂದು ಅಂತರಿಕ್ಷದಲ್ಲಿ ಮಾಯವಾದ!

* * *

ಇದೇನಿದು ಚರಿತ್ರೆಯೆಂದು ಸುರುವಾದದ್ದು ಜನಪದ ಕತೆಯಾಗಿ ಮುಗಿಯಿತಲ್ಲ ಎಂದು ನಿಮಗೆ ಆಶ್ಚರ್ಯವಾಗಬಹುದಲ್ಲವೆ? ಚರಿತ್ರೆಯೂ ಒಂದು ಕಥಾನಕವೆಂದು, ಜನಪದ ಕಥೆ ಕೂಡ ಚರಿತ್ರೆಯನ್ನು ಬಚ್ಚಿಟ್ಟ ರೂಪಕವೆಂದು ಹೇಳುವ ಪಂಡಿತರಿದ್ದಾರೆಂಬುದು ನಿಮಗೆ ತಿಳಿದಿರಲಿ. ಶಿಖರಸೂರ್ಯ/ಜನಸೂರ್ಯ/ಚಿನ್ನಮುತ್ತನ ಅಂತ್ಯ ಹೇಗಾಯಿತೆಂದು ನಿಖರವಾಗಿ ನಮಗೂ ತಿಳಿದಿಲ್ಲ. ಆ ಬಗ್ಗೆ ಬರವಣಿಗೆಯ ದಾಖಲೆಗಳಿಲ್ಲ. ನಮಗೆ ಸಿಕ್ಕಿರೋದು ಬರೀ ಚಾಡಿಗಳು, ಇಲ್ಲಗೆ ಜನಪದ ಕಥಾನಕಗಳು. ಆತ್ಮಹತ್ಯೆ ಮಾಡಿಕೊಂಡನೆಂದು ಚಾಡಿಗಳು ಕಥಾನಕಗಳು ಹೇಳುತ್ತವೆ. ಎರಡೂ ಸುಳ್ಳು ಎಂದು ತಾರ್ಕಿಕರು ಬುದ್ಧಿಜೀವಿಗಳು ವಾದಿಡಿದರೆ ಶಿಖರಸೂರ್ಯನಂಥವರು ಈಗಲೂ ಇಲ್ಲವೆ? ಎಂದು ಕಥಾನಕರು ವಾದಿಸುತ್ತಾರೆ. ಧಾನ್ಯದಿಂದ ಚಿನ್ನ ಮಾಡಿ ಶೋಷಿಸುವವರಿರೋತನಕ ನಮ್ಮ ಕಥಾನಕ ಪ್ರಸ್ತುತವೇ ಎಂದು ಜಾನಪದ ಶಾಸ್ತ್ರಿಗಳು ಹೇಳುತ್ತಾರೆ. ಅವರಿವರ ಮಾತು ವಾದಗಳಿರಲಿ, ಇಂಥವರನ್ನ ನಾವೇ ಪ್ರತ್ಯಕ್ಷವಾಗಿ ಕಾಣುತ್ತಿದ್ದೇವಲ್ಲ! ಆದ್ದರಿಂದ ಶಿಖರಸೂರ್ಯ ಮುಂದಿನ ಶಿಷ್ಯ/ಗಿರಾಕಿಗಾಗಿ ಕಾಯುತ್ತ ಗರುಡನಗಿರಿಯಲ್ಲಿ ಈಗಲೂ ಇದ್ದಾನೆಂದು ನಂಬುವುದೇ ಸೂಕ್ತವೆಂದು ಅಂತ್ಯಗೊಳಿಸುವಷ್ಟರಲ್ಲಿ -

ದೂರದ ಅರೆಬೆಂದ ಅಂಗಡಿಯ ಮುಂಭಾಗದ ಕಟ್ಟೆಯ ಮೇಲೆ ಒಬ್ಬ ಮುದುಕಿ ಕಂಭಕ್ಕೆ ಆಧಾರವಾಗಿ ಸತ್ತವರಂತೆ ಕುಂತಿದ್ದಳು. ನಿನ್ನಡಿ, ಕುರುಮುನಿ, ಚಂಡೀದಾಸರು ಕೂಟದ ಬಯಲಿನಲ್ಲಿ ಸೌದೆ ಕಟ್ಟಿಗೆಯ ರಾಶಿಯ ಮೇಲೆ ಹೆಣಗಳನ್ನು ಜೋಡಿಸುತ್ತಿದ್ದರು. ಹೆಣಗಳ ಕೂಡಿಸುತ್ತಿರುವುದನ್ನು ಕಂಡು ಅವಳೂ ಇವರಿದ್ದಲ್ಲಿಗೇ ಮೆಲ್ಲಗೆ ಬರತೊಡಗಿದಳು. ಆ ಮುದುಕಿಯನ್ನು ತೋರಿಸಿ, - ಕುರುಮುನಿ ಹೇಳಿದ -

"ಅದೇನು ಮುದುಕಿಯಪ್ಪ! ದಿನಾ ಒಂದೊಂದು ಕೂಸನ್ನ ಹಿಡಕೊಂಬಂದು ನನ್ನ ಕೂಸು ಉಪವಾಸ ಇದೆ ಅಂಬಲಿ ಕೊಡಿಯಪ್ಪಾ ಅಂತ ಬರ್ತದೆ. ಈ ದಿನ ಯಾಕೋ ಅವಳ ಕೈಯಲ್ಲಿ ಕೂಸಿಲ್ಲ!"

ಮುದುಕಿ ಇವರಿದ್ದಲ್ಲಗೇ ಬಂದು ಇವರ ಸಾಮರ್ಥ್ಯದ ಅಂದಾಜು ಮಾಡುವಂತೆ, ನೋಡುತ್ತ ನಿಂತಳು. ಇನ್ನಷ್ಟು ಸಮೀಪ ಬಂದು,

“ತಾಯಿ ನಾನು, ಒಂಚೂರು ರೊಟ್ಟಿ ಇದೆಯ ನನ್ನಪ್ಪ?”

- ಎಂದು ಕೈ ಒಡ್ಡಿ ಅಂಗಲಾಚಿದಳು. ಚಂಡೀದಾಸ

“ಚಪ್ಪರಕ್ಕೆ ಹೋಗು ತಾಯೀ! ಅಲ್ಲಿ ಊಟ ಇದೆ”. ಎಂದು ತಲೆಯೆತ್ತಿ ಮುದುಕಿಯನ್ನೇ ನೋಡಿದ. “ಈಕೆ ಚಿಕ್ಕಮ್ಮಣ್ಣಿಯೆ?” ಎಂದು ಅನುಮಾನವಾಯಿತು.

“ಅಯ್ಯಾ ನಿನ್ನಡಿ ನೀನೇ ಈ ಅಮ್ಮನನ್ನ ಕರೆದುಕೊಂಡು ಹೋಗಿ ಊಟ ಮಾಡಿಸು. ಹೋಗು”

- ಎಂದು ಹೇಳಿ “ಇಲ್ಲಿಯ ಕೆಲಸ ನಾವು ನೋಡಿಕೊಳ್ತೀವಿ; ನೀನು ಹೋಗು, ತಾಯಿ ಹಸಿದಿದ್ದಾಳೆ”

- ಎಂದ. ನಿನ್ನಡಿ ಇನ್ನೊಂದಾಡದೆ “ಬಾರ ಬೇ” ಎಂದು ಹೇಳಿ ನಿಲ್ಲಲಾರದೆ ಕುಸಿಯುತ್ತಿದ್ದ ಅವಳ ತೋಳಿಗೆ ಕೈಹಾಕಿ ಮೆಲ್ಲಗೆ ಕರೆದುಕೊಂಡು ಹೊರಟ. ಚಂಡೀದಾಸ ನಿಂತಿರಲಾರದೆ ಮುದುಕಿಯ ಬಳಿ ಬಂದು ಇನ್ನೊಮ್ಮೆ ಅವಳನ್ನು ನೋಡಿ, -

“ಗುರುತು ಸಿಕ್ಕಿತ ಮಹಾರಾಣಿ? ನಾನು ಚಂಡೀದಾಸ!”

ಎಂದು ತನ್ನೆದೆ ತಟ್ಟಿಕೊಂಡು ಹೇಳಿ ಅವಳೆದುರು ನಿಂತ. ನಿನ್ನಡಿ ಹೊಯ್ಕಿನಿಂದ ಚಂಡೀದಾಸನನ್ನೇ ಆಸೆಯ ಕಣ್ಣಿನಿಂದ ನೋಡುತ್ತ “ನನ್ನ ಅಬ್ಬೆಯೆ?” ಅಂದ. ಚಂಡೀದಾಸ ಉತ್ತರಿಸದೆ ಮುದುಕಿಯನ್ನೇ ನೋಡುತ್ತ, -

“ಈತ ನಿನ್ನ ಮಗ ತರುಣಚಂದ್ರ!”

- ಅಂದ. ನಿನ್ನಡಿ ದುಃಖ ಸಂತೋಷಗಳ ಆವೇಶದಲ್ಲಿ “ಅಬ್ಬೇ!” ಎಂದು ಮುದುಕಿಯನ್ನ ತಬ್ಬಿಕೊಂಡ. ಇದ್ಯಾವುದನ್ನೂ ತಿಳಿಯುವ ಸ್ಥಿತಿಯಲ್ಲಿ ಚಿಕ್ಕಮ್ಮಣ್ಣಿ ಇರಲಿಲ್ಲ. ಮುಂದೆ ಮುಂದೆ ಹೆಜ್ಜೆ ಊರಿಯೂ ಊರದಂತೆ ಮಗನ ಮೇಲೆ ಭಾರ ಹಾಕಿ ನಡೆಯುತ್ತ,-

“ತಾಯಿ ನಾನು, ಏನೂ ತಿಂದಿಲ್ಲ. ಒಂಚೂರು ರೊಟ್ಟಿಯೋ ಅಂಬಲಿಯೋ ಕೊಡು ನನ್ನಪ್ಪ”.

- ಎಂದಳು ಭಿಕ್ಷುಕಿಯ ಸ್ವರದಲ್ಲಿ. ಗೆಳೆಯರಿಬ್ಬರೂ ಜಲಜಲ ಕಣ್ಣೀರು ಹರಿಸಿದರು. ಕೂಡಲೇ ನಿನ್ನಡಿ ಚಿಕ್ಕಮ್ಮಣ್ಣಿಯನ್ನು ಮಗುವಿನಂತೆ ಎತ್ತಿಕೊಂಡು ದಾಸೋಹದ ಚಪ್ಪರದ ಕಡೆಗೆ ನಡೆದ. ಮಗನ ತೋಳಿನಲ್ಲಿದ್ದ ತಾಯಿ ಕಣ್ಣು ತೆರೆದು “ತಾಯಿ ನಾನು….” ಎಂದು ಹೇಳಿ, ನಿನ್ನಡಿಯ ಮುಖ ನೋಡಿ ಮಾತಾಡದೆ ನೆಮ್ಮದಿಯಿಂದ ಮುಗುಳುನಕ್ಕಳು!

ಇಲ್ಲೀಗಿ ಹರಹರ
ಇಲ್ಲೀಗಿ ಶಿವಶಿವ
ಇಲ್ಲಿಂದ ಶಿವಲಿಂಗ ಶರಣೆನ್ನಿರೋ!!

***